REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೬
VOL. 36

3—1—1957

ಸಂಚಿಕೆ ೧೮
NO. 18

ಸುಖದ ನೆಲೆ

ನಿಮ್ಮ ಅತ್ಯಂತ ಪ್ರೀತಿಯ ವಸ್ತುವೇನು? — ಪ್ರಾಣ!

ಆದರೆ ಸುಖಕ್ಕಾಗಿ ಆತ್ಮಾನುಸಂಧಾನ ನಡೆಸಬೇಕಾಗುತ್ತದೆ

ಮಾನವನು ತನ್ನ ಸುಖಕ್ಕಾಗಿ ವಿಜ್ಞಾನದ ಸಹಾಯವನ್ನ ಪಡೆದಿರುವನು. ಹೊಸ ಹೊಸ ಶೋಧನೆಗಳಿಂದ ಹೆಚ್ಚಿನ ಸುಖಕ್ಕಾಗಿ ಪ್ರಯತ್ನಪಡುವನು ಪ್ರತಿಯೋರ್ವನೂ ತನ್ನ ಸುಖಕ್ಕಾಗಿ ಇತರರನ್ನು ಬಲಿಕೊಡಲು ಹಿಂಜರಿಯುವುದಿಲ್ಲ. ಆದರೆ ಈ ಸೌಖ್ಯವು ನೆಲೆಸಿರುವುದೆಲ್ಲಿ? ಇದರ ಶೋಧನೆಯನ್ನು ಮಾಡಲು ಸಾಧ್ಯನೇ? ಸುಖವಿರುವುದು ರಾಜ ಮಂದಿರಗಳಲ್ಲಿಯೋ, ಅಥವಾ ಗುಡಿಸಲಿನಲ್ಲಿಯೋ?, ಸ್ತ್ರೀಯರ ಸೌಂದರ್ಯದಲ್ಲಿಯೋ, ಮಕ್ಕಳ ಪ್ರೀತಿಯಲ್ಲಿಯೋ, ಅಥವಾ ಬೆಳ್ಳಿ ಭಂಗಾರಗಳಲ್ಲಿಯೋ?

ಬಾಲ್ಯದಲ್ಲಿ ಮಗುವಿನ ಸುಖವು ತಾಯಿಯು ಬಗಲಿನಲ್ಲಿ ಇರುವುದರಿಂದ 'ಸಂಟಾಗುವುದು ಇದಕ್ಕಿಂತ ಹೆಚ್ಚಿನ ಸುಖವು ಮಗುವಿಗೆ ಬೇರೆ ಇಲ್ಲ. ಅದು ತಾಯಿ ಸೆರಗಿನಲ್ಲಿ ಬಚ್ಚಿಟ್ಟುಕೊಂಡು ಕಣ್ಣಾಮುಚ್ಚಾಲೆ ಆಡುವುದು. ಪುಸ್ತಕಗಳಿಂದಲೂ ದ್ರವ್ಯದಿಂದಲೂ ಕೂಸಿಗೆ ಪ್ರಯೋಜನವಿಲ್ಲ. ಅದೇ ಮಗುವಿಗೆ ಒಂದು ವರ್ಷ ವ್ಯಾಯವಾದೊಡನೆ ಸುಖದ ಸ್ಥಾನವು ಬದಲಾಗುವುದು. ಆಗ ಮಗುವು ತಾಯಿಗಿಂತ ಹೆಚ್ಚಾಗಿ ಆಟದ ಸಾಮಾನುಗಳನ್ನು ಪ್ರೀತಿಸುವುದು ಸ್ವಲ್ಪ ಸಮಯದ ನಂತರ ಮಗುವಿಗೆ ಆಟಕೆಗಳ ನೇಲಣ ಪ್ರೇಮವು ಕಡಿಮೆಯಾಗುವುದು. ಅದು ಸ್ವಲ್ಪ ದೊಡ್ಡದಾದೊಡನೆ ಪುಸ್ತಕಗಳಂದ ಅದರಲ್ಲೂ ಮುಖ್ಯವಾಗಿ ಕಥಾ ಪುಸ್ತಕಗಳಿಂದ ಆನಂದ ಉಂಟಾಗುವುದು

ವಿದ್ಯಾರ್ಥಿಯು ಪ್ರೌಢನಾಗಿ, ವಿಶ್ವವಿದ್ಯಾಲಯವನ್ನು ಪ್ರವೇಶಿಸುವಾಗ ಅವನ ಅಭಿರುಚಿಯನ್ನು ಅನೇಕ ಶಾಸ್ತ್ರೀಯ ಪುಸ್ತಕಗಳಲ್ಲಿ, ಹಾಗೂ ಪದವಿಗಳನ್ನ ಪಡೆಯುವುದರಲ್ಲಿ ತೊಡಗಿಸುವನು. ಇದರಿಂದ ಅವನಿಗೆ ಸುಖ ಸಿಗುವುದು. ಹೀಗೆ ದೊಡ್ಡ ಪದವಿಗಳನ್ನು ಪಡೆದ ಬಳಿಕ ಉದ್ಯೋಗದ ಪ್ರಶ್ನೆ. ಉತ್ತಮ ಉದ್ಯೋಗ ದೊರಕಿದಾಗ ತರುಣನ ಆಸೆಯು ಧನ ಸಂಪಾದನೆಯ ಕಡೆಗೆ ಹೊರಳುವುದು ದ್ರವ್ಯವನ್ನು ಗಳಿಸಿದ ಮೇಲೆ ಅವನ ಗುರಿಯು ಇನ್ನೊಂದು ವಸ್ತುವಿನ ಮೇಲೆ ಇರುವುದು. ಅದು ಇಲ್ಲದೆ ಜೀವನದಲ್ಲಿ ಸುಖವೇ ಇಲ್ಲ ಎಂಬ ಅಭಿಪ್ರಾಯ ಪಡುವನು. ಆ ವಸ್ತುವೇ ಪ್ರೀತಿ. ಅವನು ಕನ್ಯೆಯನ್ನು ಲಗ್ನವಾಗಲು ತನ್ನ ಸಂಪತ್ತನ್ನು ವಿನಿಯೋಗಿಸಲು ಹಿಂಜರಿಯನು ಆಗ ಅವನಿಗೆ ತಾಯಿ, ಆಟದ ಸಾಮಾನು, ಕಥಾ ಪುಸ್ತಕಗಳಿಂದ ಸುಖ ಸಿಗದು. ತರುಣನು ಪತ್ನಿಯೊಡನೆ ಸುಖವಾಗಿ ಕೆಲ ಕಾಲ ಇದ್ದ ಮೇಲೆ ಅವನ ಅಭಿಲಾಷೆಯು ತನ್ನ ಮುದ್ದು ಮಗುವಿನ ಮೇಲೆ ಕೇಂದ್ರಿತವಾಗುತ್ತದು. ನಮ್ಮ ದೇಶದಲ್ಲಿ ಜನರು ಪುತ್ರ ಪ್ರಾಪ್ತಿಗಾಗಿಯೇ ಅನೇಕ ತರದ ಯಂತ್ರ, ಮಂತ್ರ, ವೈದ್ಯಕೀಯ ಚಿಕಿತ್ಸೆಗಳ ಮರೆ ಹೊಗುವುದುಂಟು.

ಪುತ್ರ ಪ್ರಾಪ್ತಿಯಾದಾಗ ತರುಣನು ಆನಂದ ಪರವಶನಾಗುವನು. ಇದು ಸುಖದ ತರನೇ ಸ್ಥಾನವಾಗಿರುತ್ತದು ಸ್ವಲ್ಪ ಸಮಯದ ಮೇಲೆ ಕೂಸು ದೊಡ್ಡದಾದಂತೆ ಅವನ ಪ್ರೇಮವು ಕಡಿಮೆಯಾಗುವುದು. ಹೀಗೆ ಅವನ ಅಭಿಲಾಷೆಯು ಮೇಲಿಂದ ಮೇಲೆ ಬದಲಾಗುತ್ತಾ ಹೋಗುವುದು ಆದರೆ ಈ ರೀತಿಯಲ್ಲಿಯೂ ಆತರ ಯಾವುದೇ ಪ್ರಾಪಂಚಿಕ ವಸ್ತುಗಳಿಂದ ನಿಜವಾದ ಸುಖ ಸಿಗುವುದೋ? ಎಂಬುದನ್ನು ನೋಡೋಣ.

ಸುಖವೆಂಬುದು ಸೂರ್ಯ ಪ್ರಕಾಶದಂತಿವೆ. ಅದು ಒಮ್ಮೆ ಭರತಖಂಡದ ಮೇಲೂ, ಇನ್ನೊಮ್ಮೆ ಅಮೇರಿಕದ ಮೇಲೂ, ಮತ್ತೊಮ್ಮೆ ಜಪಾನಿನ ಮೇಲೂ ಹೀಗೆ ಸ್ಥಳಾಂತರ ಮಾಡುತ್ತಾ ಹೋಗುವುದು. ಆದರೆ ಯಾವ ದೇಶದ ಮೇಲೂ ಸೂರ್ಯ ಪ್ರಕಾಶವು ಸ್ಥಿರವಾಗಿರುವುದಿಲ್ಲ ಸೂರ್ಯನ ಪ್ರಕಾಶವು ಒಂದುಕಡೆ ಸ್ಥಿರವಾಗಿ ಇರಲೇಬೇಕಲ್ಲವೇ. ಅಲ್ಲಿಲ್ಲಿ? ಸೂರ್ಯನೇ ತನ್ನ ಪ್ರಕಾಶದ ಕೇಂದ್ರ ಅಥವಾ ನಿಜವಾದ ಸ್ಥಾನ. ಇದರಂತೆಯೇ ಸುಖದ ನೆಲೆ ಯಾವುದೆಂದು ತಿಳಿಯಲು ಪ್ರಯತ್ನಿಸೋಣ.

ಪುತ್ರ ಪ್ರಾಪ್ತಿಯಾದ ಗೃಹಸ್ಥನೊಬ್ಬನ ಉದಾಹರಣೆ ತೆಗೆದುಕೊಳ್ಳೋಣ. ಈ ಗೃಹಸ್ಥನು ತನ್ನ ಆಫೀಸಿನಲ್ಲಿ ಕುಳಿತಿರುವಾಗ ಒಮ್ಮಿಂದೊಮ್ಮೆ ಟೆಲಿಫೋನಿನ ಗಂಟೆಯ ಸ್ವರವು ಕೇಳಲ್ಪಟ್ಟಿತು. ಕೂಡಲೇ ಫೋನಿನಹತ್ತಿರ ಹೋಗಿ ಮಾತನಾಡತೊಡಗಿದನು. ಆಪೆಂಥಾದ ಸುಖದಾಯಕ ವಾರ್ತೆ ಇರಬಹುದು! ಅವನು ಬಿಕ್ಕಿಬಿಕ್ಕಿ ಅಳತೊಡಗಿದನು ಅವನ ಗಲ್ಲಗಳ ಬೆಳುಪೇರಿದವು. ಬುದ್ಧಿಯು ಭ್ರಮೆಗೊಂಡಿತು. ಅವಸರವಸರವಾಗಿ ತನ್ನ ಬಟ್ಟೆಗಳನ್ನು ಧರಿಸಕೊಂಡು ಮುಖ್ಯಾಧಿಕಾರಿಯು ಅಪ್ಪಣೆ ಪಡೆಯದೆ, ತನ್ನ ಸ್ನೇಹಿತರೊಡನೆ ವಿಷಯವನ್ನೂ ಹೇಳದೆ, ಪಿಶಾಚ ಹಿಡಿದವನಂತೆ ಹೊರಗೆ ಓಡಿದನು. ಇದನ್ನು ನೋಡಿ ಅವನ ಮಿತ್ರರು ಆಶ್ಚರ್ಯ ಚಕಿತರಾದರು. ಪೇಟೆಯಲ್ಲಿ ಕೂಗುತ್ತಿರುವಾಗ ಟಪ್ಪಾಲಿನವನು ಅವನಿಗೆ ಒಂದು ಪತ್ರವನ್ನು ಕೊಟ್ಟನು. ಪ್ರಾಪಂಚಿಕ ದೃಷ್ಟಿಯಿಂದ ನೋಡುವುದಾದರೆ ಇದು ಸಂತೋಷದ ವಾರ್ತೆಯಾಗಿತ್ತು. ಲಾಟರಿಯಲ್ಲಿ ಹತ್ತು ಸಾವಿರ ರೂಪಾಯಿಗಳು ಅತನ ಪಾಲಿಗೆ ಬಂದಿದ್ದವು. ವಸ್ತುತಃ ಅವನಿಗೆ ಇದರಿಂದ ಸಂತೋಷವಾಗಬೇಕಿತ್ತು. ಆದರೆ ಟೆಲಿಫೋನಿನಲ್ಲಿ ಕೇಳಿದ ವಿಷಯವು ಅವನ ಮನದಲ್ಲಿ ಕುದಿಯುತ್ತಿತ್ತು. ದಾರಿಯಲ್ಲಿ ಸಿಕ್ಕಿದ ಸ್ನೇಹಿತರೊಡನೆಯೂ ಅವನು ಮಾತನಾಡಲಿಲ್ಲ. ಕೊನೆಗೆ ಅವನು ತನ್ನ ಮನೆಯ ಬಳಿಗೆ ಬರುವಾಗ ನೋಡುವುದೇನು? ಅಲ್ಲಿ ವಿಶೇಷ ಗದ್ದಲವಾಗುತ್ತಿತ್ತು. ಆಕಾಶದವರೆಗೆ ಹೊಗೆಯ ಮೋಡಗಳು ಮುಸುಕಿದ್ದುವು. ಅವನ ವನೆಗೆ ಬೆಂಕಿತಾಗಿತ್ತು ಅವನ ತಾಯಿಯೂ. ಹೆಂಡತಿಯೂ, ಸ್ನೇಹಿತರೂ, ಶೋಕಿಸುತಿದ್ದರು. ಅವನ ದೃಷ್ಟಿಗೆ ಮನೆಯು ವರ್ಕ್ಕರು ಕಾಣಿಸಿದರು ಆದರೆ ವಂದು ಮಗುವು ಕಾಣಲಿಲ್ಲ. ಅವನು ಹೆಂಡತಿಯೊಡನೆ ಕೂಸುಎಲ್ಲಿ? ಎಂದ ವಿಚಾರಿಸಲು ಅವಳು ವಿಶೇಷವಾಗಿ ಅಳತೊಡಗಿದಳು ಇದರಿಂದ ಕೂಸು ಬೆಂಕಿಯಲ್ಲಿ ಸಿಕ್ಕಿರುವುದೆಂದು ತಿಳಿದನು. ಕೆಲಸವಾಕೆ ಮಗುವನ್ನು ತೊಟ್ಟಿಲಲ್ಲಿ ಮಲಗಿಸಿದ್ದಳು. ಮನೆಗೆ ಬೆಂಕಿಹತ್ತಿದ್ದನ್ನು ನೋಡಿ ಭಯದಿಂದ ಹೊರಗೆ ಓಡಿಬರುವಾಗ ಕೂಸನ್ನು ಮರೆತೇ ಬಿಟ್ಟೆವ್ವಸು. ಆವರೆಲ್ಲರೂ "ನಮ್ಮ ಕೂಸನ್ನು ರಕ್ಷಿಸಿ ನಿಮಗೆ ಸರ್ವವನ್ನೂ ಕೊಡುವೆವು. ಮಗುವನ್ನು ಬೆಂಕಿಯಿಂದ ಹೊರಗೆ ತೆಗೆಯಿರಿ" ಎಂದು ಬೊಬ್ಬಿಡತೊಡಗಿದನು. ಅವರಿಗೆ ಸರ್ವ ಸಂಪತ್ತಿಗಿಂತಲೂ ಮಗುವು ಅಧಿಕವಾಗಿತ್ತು. ಆದರೆ ಮಗುವೇ ಸುಖದ ಉತ್ಪತ್ತಿ ಸ್ಥಾನ ವಾಗಿರಲಿಲ್ಲ.

ಮಗುವಿನ ರಕ್ಷಣೆಗಾಗಿ ಅವರೆ ಸರ್ವ ಸಂಪತ್ತನ್ನು ತ್ಯಜಿಸಲು ಸಿದ್ಧರಿದ್ದರೂ, ಇದಕ್ಕಿಂತ ಅಧಿಕ ಪ್ರಿಯವಾದ ಇನ್ನೊಂದು ವಸ್ತುವಿಗಾಗಿ ಅವರು ಕೂಸನ್ನು ತ್ಯಜಿಸಲು ಸಿದ್ಧರಿರಲಿಲ್ಲವೇ? ಇದು ಯಾವುದು? ಸ್ವಲ್ಪ ವಿಚಾರಿಸಿ ನೋಡುವ. ಇತರರಿಗೆ ಮಗುವನ್ನು ರಕ್ಷಿಸಿರೆಂದು ತಂದೆತಾಯಿಗಳು ಹೇಳಿದರೆ ವಿನಹ ತಾವೇ ಬೆಂಕಿಯಲ್ಲಿ ಪ್ರವೇಶಿಸಲಿಲ್ಲ. ಇದರಿಂದ ಕೂಸಿಗಿಂತ ತನ್ನ ಜೀವವೇ ಅಧಿಕವಾಗಿತ್ತು ಅದೇ ಅತೀ ಪ್ರಿಯವಾಗಿತ್ತು ಎಂದು ಎಣಿಸಬಹುದು. ಕೂಸಿಗೋಸ್ಕರ ಬೆಂಕಿಯಲ್ಲಿ ಹಾರಿ ಆತ್ಮನಾಶ ಮಾಡಿಕೊಳ್ಳುವುದು ಅವರಿಗೆ ಇಷ್ಟವಿರಲಿಲ್ಲ. ಆತ್ಮಕ್ಕೋಸ್ಕರ ಅವರು ಮಗುವನ್ನೂ ಆಹುತಿಕೊಡಲು ಸಿದ್ಧರಿದ್ದರು.

ಇದರಿಂದ ಕೂಸು ಸುಖದ ಉತ್ಪತ್ತಿ ಸ್ಥಾನವಲ್ಲವೆಂದು ತಿಳಿಯಬಹುದು. ಕೂಸು ಅಂದವಾಗಿಯೂ, ಪ್ರೀತಿಪಾತ್ರವಾಗಿಯೂ ಏಕೆ ತೋರುವುದು? ನಮ್ಮ

(ಅನಂತರ ಪುಟ ನೋಡಿರಿ)

ಅಧಿಕಾಧಿಕವಾಗುತ್ತಿರುವ
ನಿಮ್ಮ ವಿಶ್ವಾಸ
ನಮ್ಮ ರಜತ ಮಹೋತ್ಸವದ ವರ್ಷ
ಹಿಂದೆ (31—10—1935)
ರೂಪಾಯಿ- 76 ಲಕ್ಷ
ಒಟ್ಟು ವ್ಯವಹಾರ ಮೊಬಲಗು
ಇಂದು:— (31—10—1956)
ರೂಪಾಯಿ- ಒಂದು ಕೋಟಿಗೂ ಮಿಕ್ಕಿದೆ.
ದಿ ವಿಜಯ ಬ್ಯಾಂಕ್ ಲಿಮಿಟೆಡ್
ಪ್ರಧಾನ ಕಛೇರಿ: ಮಂಗಳೂರು—3.
THE VIJAYA BANK LTD.

ಪ್ರಕೃತಿಯ ಐಶ್ವರ್ಯ

ಹಿಮಾಚ್ಛಾದಿತ ಉತ್ತರ ಧ್ರುವ ಪ್ರದೇಶದಲ್ಲಿ ಫಲಪುಷ್ಪಗಳು!!!

ಧ್ರುವ ಪ್ರದೇಶದ (ಪೋಲಾರ್) 'ಎಕ್ಸ್‌ಪ್ರೆಸ್' ರೈಲುಗಾಡಿಯು ಜಿಬಿನ್ಸ್ ನಿರ್ಮಾಣದ ಬಳಿ ಜಾರಿಬಂದು ನಿಲ್ಲುತ್ತದೆ. ಗಾಡಿಯಿಂದ ಇಳಿದು ಹೊರಬಂದು ನೋಡಿದೆಲ್ಲಿ, ಪ್ರಯಾಣಿಕರಿಗೆ ತಾವು ಉತ್ತರ ಧ್ರುವ ವರ್ತುಲವನ್ನು ದಾಟಿ ಬಂದಿರುವ ವಾಸ್ತವ ವಿಷಯವನ್ನು ಒಂದು ಕ್ಷಣ ಕಾಲ ನಂಬಲಾರದಿರುವಷ್ಟು ಸೋಜಿಗ ನೆನಿಸುತ್ತದೆ. ಶಾಶ್ವತ ಕಾಲ ಬೆಳೆದು ಬಾಳುವ ಸಸ್ಯಗಳು ಇಲ್ಲಿ ವಿಕಸಿಸುತ್ತಿವೆ. ಏಕೆಂದರೆ ಅವು ಇಷ್ಟಿಯ ವಾಯುಗುಣಕ್ಕೆ ಜಯಪ್ರದವಾಗಿ ಪಳಗಿಸಲ್ಪಟ್ಟಿವೆ.

ಜಿಬಿನ್ ಪಾಚಿ ಬಯಲಿನ ಪ್ರದೇಶದಲ್ಲಿ, ಭೂಮಧ್ಯರೇಖೆಗೆ ಆರವತ್ತೆಂಟು ಡಿಗ್ರೀ (ಅಂಶ) ಗಳಷ್ಟು ಉತ್ತರದಲ್ಲಿ, ಅಖಿಲ-ಒಕ್ಕೂಟದ ಸಸ್ಯವರ್ಧಕ ಸಂಸ್ಥೆಯ ಧ್ರುವಪ್ರಾಂತ ಶಾಖೆಯ ದೊಡ್ಡ ಸ್ವಯಾಜಿತ ಕೃಷಿ ಕ್ಷೇತ್ರವು ನೆಲೆಗೊಂಡಿದೆ. ಇದು ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆಯೇ ಕೋಲಾ ಪರ್ಯಾಯ ದ್ವೀಪದ ಮೇಲೆ ಸಂಘಟಿಸಲ್ಪಟ್ಟ ಮೊದಲನೆಯ ವೈಜ್ಞಾನಿಕ ಸಂಸ್ಥೆಯಾಗಿದೆ, ಮತ್ತು ಅಂದಿನಿಂದಲೂ ಅದು ವಿಸ್ತೃತವಾದ ಸಂಶೋಧನೆಯನ್ನೂ, ಪ್ರಾಯೋಗಿಕ ಕಾರ್ಯವನ್ನೂ ಮಾಡಿದೆ. ಘನೀಭೂತ ಹಿಮವನ್ನು ನಿರೋಧಿಸುವ, ಬೇಗನೆ ಉನ್ನತವಾದ ಉತ್ಪಾದನೆಯನ್ನು ನೀಡುವ ಬೆಗೆಬೆಗೆಯ ಆಲೂಗಡ್ಡೆ (ಬಟಾಟೆ) ಗಳನ್ನೂ, ಕೋಸು ಗಡ್ಡೆಗಳನ್ನೂ, ಕೆಂಪು ಬಣ್ಣದ ಸಿಹಿ ಮೂಲಂಗಿ (ಗಜ್ಜರಿ)ಗಳನ್ನೂ, 'ಟರ್ನಿಪ್' ಗಡ್ಡೆಗಳನ್ನೂ, ಮೂಲಂಗಿ ಗಡ್ಡೆಗಳನ್ನೂ, ಸಿಹಿಯಾದ "ಸ್ವೀಡ್ಸ್" ಮೂಲಂಗಿ ಗಡ್ಡೆಗಳನ್ನೂ, "ಟೊಮ್ಯಾಟೋ" ಹಣ್ಣುಗಳನ್ನೂ, ನೆ ೀವಿಗಾಗಿ ಉಪಯೋಗವಾಗುವ ಹುಲ್ಲುಗಳನ್ನೂ ಮತ್ತು ಧಾನ್ಯಗಳನ್ನೂ (ಸೀರಿಯಲ್ಸ್) ಬೆಳೆಸಲು ಈ ಪ್ರಾಯೋಗಿಕ ಕೇಂದ್ರವು ಯಶಸ್ವೀ ಪ್ರಯತ್ನಗಳನ್ನು ಮಾಡಿ ಸಾಧಿಸಿದೆ. ಜಾಗಿನಿಂದಲೂ ಮತ್ತು ಮರಳಿನಿಂದಲೂ ತುಂಬಿರುವ ಭೂಮಿಗಳಲ್ಲಿ ಬೇಸಾಯವನ್ನು ಮಾಡುವುದರ ಸಲುವಾಗಿ ಈ ಕೇಂದ್ರವು ಒಂದು ವಿಧಾನವನ್ನು ಅಭಿವೃದ್ಧಿಗೊಳಿಸಿದೆ. ಡಿಕ್ಸನ್ ದ್ವೀಪ, ಇಗಾರ್ಕಾ, ಸಾಖಾಲಿನ್, ಯಾಕೂತಿಯಾ, ಮತ್ತು ಸುದೂರ ಉತ್ತರದಲ್ಲಿರುವ ಇತರ ಪ್ರದೇಶಗಳಲ್ಲಿ ತಾಜಾ ತರಕಾರಿಗಳನ್ನು ಬೆಳೆಯುವುದಕ್ಕೆ ಈ ಕೇಂದ್ರದ ಅನುಭವವು ಅಲ್ಲಿನ ನಿವೇಸಿಗಳಿಗೆ ಸಹಾಯವನ್ನು ನೀಡುತ್ತದೆ. ಕೋಲಾ ಪರ್ಯಾಯ ದ್ವೀಪದಲ್ಲಿರುವ ಸಸ್ಯಶೋಷಕ ಕವನಗಳಲ್ಲಿ (ನರ್ಸರಿ ಗಾರ್ಡನ್ಸ್) ರುವ ರಾಜ್ಯ ಚಾಲಿತ ಮತ್ತು ಸಹಕಾರೀ ಸಾಮುದಾಯಿಕ ಕೃಷಿ ಕ್ಷೇತ್ರಗಳು ದ್ವೀಪ ಪ್ರಾಸ್ಪೆಯನ್ನೂ (ಕೈರಾಂಟ್ಸ್), "ರಾಸ್‌ಬೆರೀ" ಹಣ್ಣುಗಳನ್ನೂ, ನೆಲಮುಳ್ಳಿ (ಸ್ಟ್ರಾಬೆರ್ರಿ) ಮುಂತಾದ ಹಣ್ಣುಗಳನ್ನೂ ಬೆಳೆಯುತ್ತವೆ.

ಉತ್ತರ ಧ್ರುವ ಪ್ರಾಂತದ ಈ ಅಮೂಲ್ಯವಾದ ಕೊಡುಗೆಗಳನ್ನು ಕಂಡರೆ, ಹಿಂದೆ ಹಲವರು ಉತ್ಸಾಹಿ ಜನರು ಉತ್ತರದ ಭೂಮಿಯಲ್ಲಿ ಫಲವನ್ನು ಪಡೆಯಲು ತಾವು ನಡೆಸಿದ ಸ್ವಯತ್ನಗಳಲ್ಲಿ ವನ್ಯ ಪ್ರಕೃತಿಯೊಡನೆ ತಮ್ಮ ವಿಸಮ ಹೋರಾಟವನ್ನು ಪ್ರಾರಂಭಿಸಿದ ವೇಳೆಯು ಅನೈಚ್ಛಿಕವಾಗಿ ನೆನಪಿಗೆ ಬರುತ್ತದೆ.

.....ತೆಳ್ಳನೆಯ ಮನುಷ್ಯನೊಬ್ಬಾತನು ನಿಂತಿದ್ದನು. ತನ್ನ ಅಂಗೈಯಲ್ಲಿ ಒಂದು ಹಿಡಿ ಮಣ್ಣನ್ನೆತ್ತಿಕೊಂಡು, ತನ್ನ ಸೂಕ್ಷ್ಮ-ಸ್ಪರ್ಶಜ್ಞಾನ ವಾಹಕ ಶಕ್ತಿಯ ಬಳಲಿದ ಬೆರಳುಗಳಿಂದ ಅದನ್ನು ಆತನು ಮುಟ್ಟಿ ನೋಡುತ್ತಿದ್ದನು. ಪಾಚಿಬಯಲಿನಿಂದ ಆತನು ಸಸ್ಯಗಳನ್ನು ತನ್ನ ಸಣ್ಣ ಮನೆಗೆ—ಅದು ಆಳವಾದ ಇಸಾಂದ್ರಾ ಸರೋವರದ ಅಂಚಿನಲ್ಲಿದ್ದಿತು—ತೆಗೆದುಕೊಂಡು ಬರುತ್ತಿದ್ದನು. ತಾನು ದೂರದಿಂದ ತಂದ ಬೀಜಗಳನ್ನೂ ಮತ್ತು ನೊಳಕೆಗಳನ್ನೆ ಆತನು ಪಣ್ಣ ಕುಂತಗಳಲ್ಲಿ ನೆಡುತ್ತಿದ್ದನು. ನಿದ್ದೆಯಿಲ್ಲದೆ ಕೆಂಪಾಗಿದ್ದ ಕಣ್ಣುಗಳಿಂದ ಆತನು ಅವುಗಳ ಬೆಳೆವಣಿಗೆಯನ್ನು ನಿರೀಕ್ಷಿಸುತ್ತಿದ್ದನು. ತನ್ನ ಗೆಳೆಯರ ಶುಭೇಚ್ಛೆಗಳನ್ನೂ ಮತ್ತು ಸಂದೇಹವಾದಿಗಳ ಕುಚೋದ್ಯೆಗಳನ್ನೂ ಪಡೆದಿದ್ದನು ಆತನು ಇಲ್ಲಿಗೆ ಬಂದ ಕಾರ್ಯಾರ್ಥದ ವಿಷಯದಲ್ಲಿ ಆತನ ಹೆಸರು ಜೋಹಾನ್ ಗಾನೆಸ್ಸೆನಿಜ್ ಎಯಿಚೆಫೆಲ್ಡ್. ಆ ಕಾಲದಲ್ಲಿ ಆತನು ಸಾಮಾನ್ಯ ಸೋವಿಯತ್ ಕೃಷಿ ಶಾಸ್ತ್ರಜ್ಞರಲ್ಲೊಬ್ಬನಾಗಿದ್ದನು ಇಂದು ಆತನು ಇಸ್ತ್ರೋನಿಯದ ವಿಜ್ಞಾನಶಾಸ್ತ್ರ ಪರಿಷತ್ತಿನ ಅಧ್ಯಕ್ಷನಾಗಿದ್ದಾನೆ. ಆತನು ಉತ್ತರ ಧ್ರುವ ವಲಯದಲ್ಲಿ ಸಸಿಗಳನ್ನು ಪರೀಕ್ಷಿಸುವ, ಬೆಳೆಸುವ ಪ್ರಯತ್ನದೊಂದಿಗೆ ತನ್ನ ಕೆಲಸವನ್ನು ಪ್ರಾರಂಭಿಸಿದನು.

ಉತ್ತರ ಧ್ರುವ ವರ್ತುಲ ದಾಟಿಗೆ ಸಸಿಗಳನ್ನೂ, ತರಕಾರಿಗಳನ್ನೂ ಬೆಳೆಸುವುದೆಂದರೆ, ಆ ಮಾತು ಪ್ರೇಕ್ಷಕನಿಗೆ ವಿನೋದವನ್ನೂ, ವಿಜ್ಞಾನಿಗೆ ಕಹಿ ಅನುಭವವನ್ನೂ ಉಂಟುಮಾಡುವಂತಹುದಾಗಿದ್ದಿತು ಏಕೆಂದರೆ. ಇಂದಿನ ಅತ್ಯುತ್ತಮವಾದ, ಪಿಬಿನಿಯ ಕುರುರೀ ಮೂಲಂಗಿಯು ನೊಳಕೆ ಬರುತ್ತಿದೆಯಾದರೂ ಅದು ಮೊದಲಿನ ಹಲವು ವರ್ಷಗಳಲ್ಲಿ ತೀರಾ ವಿಫಲವಾಗಿದ್ದಿತು ಬಹ್ವಂಶದ ಬೆಳೆಗಳು ಪಕ್ವಕ್ಕೆ ಬರುತ್ತಿರಲಿಲ್ಲ. ಸುವಿಖ್ಯಾತವಾದ "ಸ್ಕೈಥಿಯನ್", "ಜೈಲಿಟ್", "ಇಮಾನ್ದ್ರಾ" ಜಾತಿಗಳಿಗೆ ಸೇರಿದ ಫಲಪ್ರದವಾದ ಆಲೂ ಬಟಾಟೆ) ಗಡ್ಡೆಗಳೂ, "ಖಿಬಿನಿ ಆರೆಯುದ್ದಂ"ತಹ ಕೆಂಪು ಸಿಹಿ ಮೂಲಂಗಿ (ಗಜ್ಜರಿ) ಗಡ್ಡೆಗಳೂ, "ಸೇವೆರ್ನಿಪಾಂ" ನಂತಹ 'ಟರ್ನಿಪ್' ಗಡ್ಡೆಗಳೂ, ಮತ್ತು ಇತರ ಬೆಳೆಗಳೂ—ಸೋವಿಯತ್ ಒಕ್ಕೂಟದ ಉತ್ತರ ಪ್ರಾಂತಗಳಲ್ಲಿ ಈ ಬೆಳೆಗಳು ಇಂದು ಪ್ರಧಾನ ಫಸಲುಗಳಾಗಿವೆ. ಇವೆಲ್ಲವುಗಳನ್ನೂ ವಿಕಾಸಗೊಳಿಸುವುದರಲ್ಲಿ ಅಪರಿಮಿತವಾದ ಶ್ರಮವು ವೆಚ್ಚವಾಗಿದೆ.

ವರ್ಷಗಳು ಉರುಳಿದುವು. ಭೂಮಧ್ಯರೇಖೆಗೆ ಅಡ್ಡಡಿಗ್ರಿ ಉತ್ತರದಲ್ಲಿರುವ ಪ್ರಾಯೋಗಿ ಕೇಂದ್ರವು ಧ್ರುವಶ್ರೇತ್ರದವ್ಯವ ಸಾಯದ ಪ್ರಾಥಮಿಕ ಕ್ಷೇತ್ರವಿಂದ, ಇಡೀ ಕೋಲಾ ಪರ್ಯಾಯ ದ್ವೀಪದಲ್ಲಿಯೂ ಮತ್ತು ದೂರದ ಉತ್ತರದ ಇತರ ಪ್ರಾಂತಗಳಲ್ಲಿಯೂ ಬೆಳೆಗಳನ್ನು ವಿಕಾಸಗೊಳಿಸುವುದರ ಸಲುವಾಗಿ ಶಕ್ತಿಯುತವಾದ ಕೇಂದ್ರವಾಗಿ ಬಡಲಾಯಿಸಲ್ಪಟ್ಟಿತು. ಉತ್ತರ ಧ್ರುವ ವರ್ತುಲದಾಚೆಗಿರುವ ಪ್ರದೇಶದಲ್ಲಿ ಸಸ್ಯಗಳನ್ನು ಬೆಳೆಸುವ ವರ ನಿಶ್ಚಿತ್ಸರ್ಥ ಶ್ರಮವೂ ಮತ್ತು ಮಹತ್ಪಾಧನೆಗಳೂ ಉನ್ನತವಾದುವೆಂದು ಅಂದಾಜು ಮಾಡಲಾಗಿದೆ. ಸೋವಿಯತ್ ಒಕ್ಕೂಟದ ವೈವಸಾಯ ಪ್ರದರ್ಶನದಲ್ಲಿ ಅವರು ಮೂರು ಸಲ ಭಾಗವನ್ನು ವಹಿಸಿದ್ದರು. ಅಲ್ಲಿಂದ ಕರೇಲಿಯಾ, ಕೋಮಿ ಸ್ವಾಯತ್ತ ಸೋವಿಯತ್ ಸಮಾಜವಾದೀ ಪ್ರಜಾತಂತ್ರ, ಡಿಕ್ಸನ್ ದ್ವೀಪ ಮತ್ತು ಯಾಕುತಿಯಾ ಈ ಪ್ರಾಂತಗಳಲ್ಲಿರುವ, ರಾಜ್ಯಕ್ಕೆ ಸೇರಿದ ಮತ್ತು ಸಹಕಾರದ ಸಾಮೂಹಿಕ ಕೃಷಿ-ಕ್ಷೇತ್ರಗಳಿಗೆ ಪ್ರತಿವರ್ಷವೂ ಬೀಟ್ ಗಡ್ಡೆಯ, ಕೆಂಪು ಸಿಹಿ ಮೂಲಂಗಿ (ಗಜ್ಜರಿ) ಗಡ್ಡೆಯು, ಕೇಸು ಗಡ್ಡೆಯು, ಸೌತೆ ಕಾಯಿಯ ಮತ್ತು ಇತರ ಬೆಳೆಗಳ ಅತ್ಯುತ್ತಮವಾದ ಬೀಜಗಳನ್ನು ಕಳಿಸಲ್ಪಡುತ್ತವೆ.

ಬೇಸಾಯದ ಮುಖ್ಯವಿದಸದ ಸೈಗಳನ್ನು ಬಗೆಹರಿಸಲ್ಪಡಲಕ್ಕಾಗಿ ಪ್ರಾಯೋಗಿಕ ಕೇಂದ್ರದ ಸದಸ್ಯರು ನಡೆಸುವ ಕಾರ್ಯದಲ್ಲಿ ಅವರು ಸಂಶೋಧನೆಯನ್ನು ಕ್ರಿಯಾತ್ಮಕ ಕಾರ್ಯದೊಡನೆ ಜತೆಗೂಡಿಸುತ್ತಾರೆ. ಅವರು ಭವಿಷ್ಯದೊಳಹೊಕ್ಕು ಕೇಳಿಸುತ್ತಾರೆ, ತಮ್ಮ ಕಾರ್ಯಾನುಸರಣೆಯ ಪರಿಣಾಮಗಳನ್ನು ಪುಸ್ತಕಗಳಲ್ಲಿ ಸಂಗ್ರಹಿಸಿಡುತ್ತಾರೆ, ಮತ್ತು ತಮ್ಮ ಅನುಭವವನ್ನು ಉತ್ತರ ಧ್ರುವ ಪ್ರಾಂತಗಳಲ್ಲಿರುವ ಕೃಷಿ ಶಾಸ್ತ್ರಜ್ಞರಿಗೂ ಮತ್ತು ಕೃಷಿಗಳ ನಾಯಕರಿಗೂ ಮತ್ತು ಆಗಾಗ್ಗೆ ಕ್ಷೇತ್ರಗಳಿಗೆ ಭೇಟಿ ಕೊಡುವ ಕೃಷಿ-ವೇಲ್ವಿಜಾರಕರಿಗೂ ಮತ್ತು ಎಳೆಯವಯಸ್ಸಿನ ಮಿಚುರಿನ್ ಪ್ರಕೃತಿ-ಪ್ರೇಮಿಗಳಿಗೂ ತಿಳಿಸುತ್ತಾರೆ.

ಸಸ್ಯ ಪ್ರಜನನ ಸಂಶೋಧನೆಯು ನಿರಂತರವಾಗಿ ನಡೆಯುತ್ತಿರುತ್ತದೆ. ಇಲ್ಲಿ ಟೊಮಾಟೋಗಳ ವಿಘ್ನ ಜಾಲಿಗಳನ್ನು ನಿವಾರಣ ತಳಿಗಳ. ಮತ್ತು ಅಂತರ್ವೈಶಿಷ್ಟ್ಯಗಳನ್ನು ಕಸಿ ಮಾಡಲು ಸಂಶೋಧನ ಕಾರ್ಯಗಳೂ, ಸೌತೆ ಕಾಯಿಗಳ ರುಚಿಯ ಗುಣಗಳಲ್ಲಿನ ಸುಧಾರಣೆಯೂ ಬೆಳೆ ಳ ಆರಿಸಿದ ನಮೂನೆಗಳ ವಿಕಾಸ ಕಾರ್ಯವೂ ನಡೆಯುತ್ತವೆ. ಉತ್ತರ ಧ್ರುವ ಪ್ರದೇಶದ ಶರದೃತುವಿನ ಹೊಂಬಿಸಿಲಿನ ದಿನಗಳಲ್ಲಿ, ಚಳಿಗಾಲದ ಚಿಕ್ಕರಿಗೋಧಿಯೂ (ರೈ), ಜವೆಗೋಧಿಯೂ (ಬಾರ್ಲಿ), ಮತ್ತು ತೋಕೆ ಗೋಧಿಯೂ (ಓಟ್ಸ್), ಸೌತೆಕಾಯಿಗಳೂ, ಮತ್ತು 'ಟೊಮ್ಯಾಟೋ'ಗಳೂ ಖಿಬಿನಿಯ ಕ್ಷೇತ್ರಗಳಲ್ಲಿ ಪಕ್ವವೈಬರುತ್ತವೆ. ಕಪ್ಪು ಮತ್ತು ಕೆಂಪು ದ್ವೀಪದ ದ್ರಾಕ್ಷಿಯ ಹೊಸರುಗಳೂ, ಗೂಸ್‌ಬೆರ್ರಿ ಹಣ್ಣು, 'ರಾಸ್‌ಬೆರ್ರಿ' ಹಣ್ಣು, ಇವುಗಳ ಗಿಡಗಳೂ ಕಾಯಿಬಿಟ್ಟು, ಭಾರವನ್ನು ಹೊತ್ತರೆತ್ತವೆ. ಹರಿದ. ಹಬ್ಬುವ ಸೇಬಿನ ಮರಗಳೂ ಮತ್ತು ಎಳೆಯು 'ಜೆರ್ರಿ' ಮರಪೊ ಹಣ್ಣುಬಿಡುತ್ತವೆ.

ಈ ರೀತಿಯಾಗಿ, ಮಹಾ ಪ್ರಕೃತಿ ಶಾಸ್ತ್ರಜ್ಞ ಮಿಚುರಿನ್‌ರವರ ಸಿದ್ಧಾಂತಗಳನ್ನೆ ಅನುಸರಿಸುತ್ತಿರುವ ವಿಜ್ಞಾನಿಗಳ ಮತ್ತು ಕೃಷಿಕರ ಪ್ರಯತ್ನಗಳು ಉತ್ತರ ಪ್ರದೇಶಗಳ ಬೇಸಾಯದ ಮಹತ್ವಪೂರ್ಣವಾದ ಸಮಸ್ಯೆಗಳ ಪರಿಹಾರಕ್ಕೆ ಮಾರ್ಗದರ್ಶಕವಾಗಿವೆ. ಉತ್ತರ ಪ್ರಾಂತಗಳ ವೈವಸಾಯದ ಗಡಿಗಳು ಈಗ ಅಳತೆಮೀರಿ ಬೆಳೆದಿವೆ.

ಶಾಶ್ವತವಾದ ಘನೀಭೂತ ಹಿಮಾವೃತ ಕಿರೀಟವನ್ನು ಧರಿಸಿರುವ ಭವ್ಯವಾದ ವುವ್ರಾವ್ಸ್ ಥೋರ್ ಪರ್ವತದಡಿಯಲ್ಲಿರುವ ಕಿರೋವ್‌ಸ್ಕ್ ಪಟ್ಟಣದ ಚಿತ್ರಮಯ ಉಪನಗರದಲ್ಲಿ, ಸೋವಿಯತ್ ಒಕ್ಕೂಟದ ವಿಜ್ಞಾನ ಶಾಸ್ತ್ರಪರಿಷತ್ತಿನ ಕೋಲಾ ಶಾಖೆಗೆ ಸೇರಿದ, ಪ್ರಪಂಚದ ಅತ್ಯಂತ ಉತ್ತರದ ಧ್ರುವ ಪ್ರಾಂತೀಯ ಪರ್ವತದಲ್ಲಿನ (ಆಲ್ಪೈನ್) ಸಸ್ಯವಿಜ್ಞಾನ ಶಾಸ್ತ್ರೀಯ ವನವು ಕಟ್ಟಿಕೊಂಡಿದೆ. ಅದರ ಅಸ್ತಿತ್ವದ ೨೫ ವರ್ಷಗಳಲ್ಲಿ ಅದರ ಸಸ್ಯರಾಶಿಯು ೩,೦೦೦ ಕ್ಕಿಂತಲೂ ಹೆಚ್ಚು ವಿವಿಧ ರೀತಿಯ ಸಸಿಗಳನ್ನು—ಅವುಗಳ

(ಉಳಿದ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿ.,

[ಸ್ಥಾಪನೆ: ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಅಧಿಕೃತ ಬಂಡವಾಳ	...	ರೂ. 56,00,000
ಚಲಾವಣೆ ಬಂಡವಾಳ	...	ರೂ. 32,23,787
ವರ್ಗಣಿ (ಪಾಲು) ಬಂಡವಾಳ	...	ರೂ. 32,11,000
ತೆತ್ತ ಬಂಡವಾಳ	...	ರೂ. 27,45,000
ಕ್ಷೇಮನಿಧಿ	...	ರೂ. 15,00,000

ತಾ. 30-9-1956ರಲ್ಲಿ ನಮ್ಮ ಚಲಾವಣೆ ನಿಧಿ 10 ಕೋಟಿಗೂ ಮಿಗಿದೆ

(ನವೋದಿತ ರಾಜ್ಯಗಳಲ್ಲಿ) ನಮ್ಮ ಶಾಖೆಗಳು

(ವಿಶಾಲ) ಮೈಸೂರು	59
ಆಂಧ್ರ ಪ್ರದೇಶ	14
ಕೇರಳ	13
ಜೊಂಬಾಯಿ	8
ಮದ್ರಾಸು	2

ಟಿ. ಎ. ಪೈ ಬಿ ಕಾಂ.(ಜೊಂಬಾಯಿ) ಎಂ. ಎಲ್. ಎ., ಟಿ. ಎಂ ಎ ಪೈ, ಎಂ.ಎ., ಬಿ ಎಸ್
ಜನರಲ್ ಮೆನೇಜರ್. ಮೆನೇಜಿಂಗ್ ಡೈರೆಕ್ಟರ್.

The Canara Industrial & Banking Syndicate Ltd.

ಗ್ರಾಮಗಳ ಪುನರುಜ್ಜೀವನ

'ಹಳ್ಳಿಯೇ ನನ್ನ ಜಗತ್ತು' ಎಂದಿದ್ದಾರೆ ಮಹಾತ್ಮಾ ಗಾಂಧಿ-ನಮ್ಮ ಧುರೀಣರ ಗಮನ ಮಾತ್ರ ಅತ್ತ ಸಾಕಷ್ಟು ಬಿದ್ದುದಿಲ್ಲ.

ಪರಮಾತ್ಮನ ಸೃಷ್ಟಿಯಲ್ಲಿ ಭೂ ನಿರ್ಮಾಣವೆ ಮೊತ್ತ ಮೊದಲಿನದೆಂಬುದು ಸರ್ವಜ್ಞರ ಅರಿವು. ಜಗತ್ತಿನ ಭೂವಲಯದಲ್ಲಿ ಪೇಟೆ, ಹಳ್ಳಿಗಳೆಂದು ಎರಡು ವಿಭಾಗ. ಪೇಟೆಯು ಮಾನವನ ಕೃತಕ ನಿರ್ಮಾಣ. ಹಳ್ಳಿಯು ನಿಸರ್ಗ ದೇವತೆಯ ಸಹಜ ಸೃಷ್ಟಿ.

ಹಳ್ಳಿ ಪೇಟೆಗಳ ಜನಜೀವನದಲ್ಲೂ ಬಹಳ ತೇರನಾದ ವೈವಿಧ್ಯ ಕಂಡುಬರುತ್ತವೆ. ಪೇಟೆಯ ಜೀವನವು ಕೃತಕವಾಗಿ ಬಾಹ್ಯ ಗೋಚರಕ್ಕೆ ಮೇಲ್ನೋಟಕ್ಕೆ ಸುಖಸೃಷ್ಟಿಯ ಸುರಲೋಕವೆಂಬುದು ದೂರದೃಷ್ಟಿಗೆ ರಪ್ಯವಾಗಿ ಕಂಡರೆ ಹಳ್ಳಿ ಜೀವನವು ಆಂತರಿಕ, ದೈಹಿಕ ಸಂಪೋಷಭೋಗದ ನೈಜ ನೆಲೆಬೀಡು. ಸಂತಸದ ತವರೂರು ಎಂಬುದು ಅನುಭವಸಿದ್ಧವಾದುದು. ಆರೋಗ್ಯದ ಸುಖ ಸವಿಯುಂಡು ಬಾಳುವ ಆನಂದದ ಆಗರವೇ ಹಳ್ಳಿಗಾಡು. ಹಳ್ಳಿಯು ಪ್ರಕೃತಿ ಸಂಪತ್ತಿನ ಅಕ್ಷಯ ಪಾತ್ರವೆಂಬರೆ, ಪೇಟೆಯು ಕೃತ್ರಿಮತೆಯ ಕಾಮಧೇನು. ಹಾಗೆಂದಮೇಲೆ ಪೇಟೆಯಲ್ಲಿ ಸಾರ್ವತ್ರಿಕ ಸುಖಜೀವನವು ದುರ್ಲಭ. ಯಾಕೆಂದರೆ ಕಾಮಧೇನುವು ಕೈವಶವಿದ್ದವರಿಗೆನೇ ಇಚ್ಛಿಸಿದುದನ್ನು ಕೊಡಬಲ್ಲದು; ಅಂದರೆ ಪೇಟೆಯಲ್ಲಿ ಕೈತುಂಬ ಹಣವಿದ್ದರೆನೇ ಸುಖಜೀವನ ಮಾಡಬಹುದು. ಆದಕಾರಣವೇ ಹಳ್ಳಿಯು ಬಡಜೀವಿಗಳ ಜೀವನದ ರಕ್ಷೆಗಾಗಿ ನೈಸರ್ಗಿಕ ನಿರ್ಮಿತವಾದ ಅಕ್ಷಯ ಭೂ ಸಂಪತ್ತು. ಅಲ್ಲಿ ಬೇಕಾದ ನಿಸರ್ಗ ಸಂಪತ್ತು ಪದಾರ್ಥಗಳು ಸರ್ವಸಾಮಾನ್ಯರಿಗೂ ಮುಂಗಡವಾಗಿ ಕಾದಿಡಲ್ಪಟ್ಟಿವೆ. ಅದನ್ನು ಪಡೆಯುವ ಸಾಮರ್ಥ್ಯ, ಬುದ್ಧಿ ಚಾತುರ್ಯತೆ. ಕಾರ್ಯದಕ್ಷತೆ ಮಾತ್ರ ಮಾನವನ ಪಾಲಿಗೆ ಸಂದು ಸಿಂದಿದೆ. ಅಂತೆಯೇ ಹಳ್ಳಿಗಳಲ್ಲಿ ಎಲ್ಲರೂ ಕಾರ್ಯಪ್ರವರ್ತಕರಾಗಿರುತ್ತಾರೆ. ದಿನವಿಡೀ ದುಡಿದು ದೇಹದಾರ್ಢ್ಯತೆಯಿಂದ ಆರೋಗ್ಯವಂತರಾಗಿ ದೈಹಿಕ ಸುಖವನ್ನನುಭವಿಸುತ್ತಾರೆ. ಆರೋಗ್ಯ ಒಂದಿದ್ದರೆ ಇನ್ನಾನಧನ, ಧವಲತ್ತೇಕೆ?

ಇಷ್ಟೆಂದ ಮಾತ್ರಕ್ಕೆ ಪೇಟೆಯು ಆಚಾರ, ಅನುಕೂಲ, ಸಂಪತ್ತು, ಸವಲತ್ತನ್ನು ಕಡೆಗಣಿಸುವೆವೆಂದು ತಿಳಿಯತಕ್ಕಾಗಲ್ಲ. ಹಳ್ಳಿಗೂ ಪೇಟೆಗೂ ನಿಕಟಸಂಬಂಧವಿದೆ. ಎರಡಕ್ಕೂ ಹೊಂದಿಕೆಯಿದೆ. ಆದರೂ ಸ್ವಾನುಭೂತಿಯ ಹುರಸ್ಕಾರವು ಪ್ರಕೃತಿ ಮಾತೆಯ ನೆಲೆ ನಾಡಾದ ಹಳ್ಳಿಗನೇ ಸಲ್ಲತಕ್ಕುದು. "ಹಳ್ಳಿಯ ಪೇಟೆಯು ಉಸಿರೆಂದು" ಬಲ್ಲವರು ಅಭಿಪ್ರಾಯ ಪಡುತ್ತಾರೆ. ಹೇಗೆ ಉಸಿರಿಲ್ಲದ ದೇಹವು ಯಾರಿಗೂ ಬೇಡವಾಗಿ ಸ್ಮಶಾನ ಪಾಲಾಗುವುದೋ ಅಂತಾದೀತು ಪೇಟೆಯಗತಿ "ಅರಸನ ಹೆಣ ನಾದರೂ ಆಡಿನ ಬೆಲೆ ದೊರೆಯುದು" ಎಂಬಂತೆ ಹಳ್ಳಿಯ ಹೊಂದಿಕೆ ಇನವ ಪೇಟೆ. ಹಳ್ಳಿಯೇ ಪೇಟೆಯು ಜೀವಾಳ. ಹಾಗೂ ದೇಶದ ಆಧಾರ. ಆದ್ದರಿಂದಲೇ ಮಹಾತ್ಮಾ ಗಾಂಧೀಜೀಯವರು 'ಹಳ್ಳಿಯೇ ನನ್ನ ಜಗತ್ತೆಂದು" ಆಗಾಗ ಹೇಳುತ್ತಿದ್ದರು. ದೇಶದ ಉನ್ನತಿ ಮತ್ತು ಅವನತಿ ಅಲ್ಲಿಯ ಪ್ರಾಕೃತಿಕ ಸಂಪತ್ತನ್ನು ಆಧರಿಸಿಕೊಂಡಿದೆ ಎಂದರೂ ಹೆಚ್ಚಲ್ಲ. ಹಳ್ಳಿಗಳಲ್ಲಿ ದೊರೆಯಬಹುದಾದ ಸಂಪತ್ತು. ಪ್ರಕೃತಿ ಮಾತೆಯ ಕೊಡುಗೆಯಾಗಿದೆ. ಜಗತ್ತಿನ ಆರ್ಥಿಕ ಅಭಿವೃದ್ಧಿಗೆ ಹಳ್ಳಿಗಳೇ ಹೊಂದಿಕೆಯಾಗಿವೆ. ಉದಾಹರಣೆಗಾಗಿ ಭೂಗರ್ಭದಲ್ಲಿ ದೊರೆಯುವ ನಿವಿಧ ಖನಿಜಗಳು ಆಯಾಯ ದೇಶದ ಆರ್ಥಿಕ ಅಭಿವೃದ್ಧಿಗೆ ಬಹು ಪ್ರಯೋಜನವಾಗಿವೆ. ಈ ಖನಿಜಗಳು ಕಬ್ಬಾಗಿ ಹಳ್ಳಿಯ ಗುಡ್ಡ ಬೆಟ್ಟಗಳಲ್ಲಿ, ನುರು ಭೂಮಿ, ಮೈದಾನುಗಳಲ್ಲಿ ದೊರೆಯುವ ಅಮೂಲ್ಯ ವಸ್ತುಗಳು. ಹಳ್ಳಿ ಭೂಮಿಯಲ್ಲಿ ಬೆಳೆಯುವ ದವಸಧಾನ್ಯಗಳು, ಆಹಾರಧಾನ್ಯಗಳೂ ಪ್ರಕೃತಿದತ್ತವಾಗಿವೆ. ಫಲವತ್ತಾದ ಬಯಲು ಭೂಮಿಯಲ್ಲಿ ಹಳ್ಳಿಯ ಬಡ ರೈತರು ಕೃಷಿ ಮಾಡಿ ದೇಶದ ಜನತೆಗೆ ಬೇಕಾದ ಆಹಾರವಸ್ತುಗಳನ್ನೂ ದಗಿಸಿ ಕೊಡಲು ಶ್ರಮಿಸುತ್ತಾರೆ. ಆಪಾರವಿಲ್ಲವೆ ಯಾವ ಜೀವಿಯೂ ಬದುಕಲಾರರು. ಎಂದಾಗ ಹಳ್ಳಿಗಳ ಖ್ಯಾತಿಯು ಖ್ಯಾತಿ ಎಸ್ಟೆಂಬುದು ವ್ಯಕ್ತವಾಗುವುದು. ಅನೇಕ ತರಕಾರಿಗಳು, ತೆಂಗು, ಕಂಗು, ಮಾವು, ಬಾಳೆ, ಹಲಸು ಮುಂತಾದ ಕಚ್ಚಾ ಫಲವಸ್ತುಗಳು ಹಳ್ಳಿಗಳಲ್ಲೇ ದೊರೆಯುತ್ತವೆ. ಹೆಚ್ಚಿನ ಉತ್ಪಾದನೆ ವುಳ್ಳ ವಿಸ್ತಾರವಾದ ಅರಣ್ಯಗಳು ನಮ್ಮ ಹಳ್ಳಿಗಳಲ್ಲಿವೆ. ವ್ಯವಸಾಯ ಉತ್ಪತ್ತಿಗಳ ಮೂಲಕ ದಿನವಿಡೀ ದುಡಿಯುತ್ತಿರುವ ಹಳ್ಳಿಗರು ದೇಹದಾರ್ಢ್ಯಂತ ಬೇಕಾದ ಆಹಾರವನ್ನೊದಗಿಸಿ ನಾಡಿಗೆ ಪರೋಕ್ಷವಾದ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ನಮ್ಮ ದೇಶವಲ್ಲಿ ಹೆಚ್ಚಿನ ಜನರು ಗ್ರಾಮವಾಸಿಗಳು, ಸೇ ಡಾ ಅಂಂರಷ್ಟು ಕೃಷಿಕರುರವರು. ಭಾರತವಲ್ಲಿ ವ್ಯವಸಾಯೋತ್ಪತ್ತಿಯು ರಾಷ್ಟ್ರೀಯ ಆದಾಯಕ್ಕೆ ಬಹು ಸ್ಥಾನವುಳ್ಳತೆಯಲ್ಲಿದ್ದಾಗಿದೆ. ಇಂದು ಹಳ್ಳಿ ಕಡೆಗಳಲ್ಲಿ ಹೆಚ್ಚಿನ ಬಲಿತ ವರ್ಗವು ವ್ಯವಸಾಯ ಕ್ಷೇತ್ರದಿಂದ ಅತ್ಯಪ್ರಸ್ತಾರಾಗಿ ಅಪಡ್ಡೆಯಿಂದ ಬರೀ ತಮ್ಮ ಉದರ ಪೋಷಣೆಗೆ ಬೇಕಾದಷ್ಟರ ಮಟ್ಟಿನ ಕೂಲಿಯನ್ನೊ, ಕೈಗಾರಿಕೆಯನ್ನೊ ಮಾಡಿ ಜೀವನ ನಡೆಸುತ್ತಿದ್ದಾರೆ. ಕಾರಣ ಕೃಷಿಕರಿಗೆ ಬೇಕಾದ ಸಹಕಾರ, ಸೌಲಭ್ಯಗಳು ದೊರೆಯದಿದ್ದುದಾಗಿದೆ. ಹಳ್ಳಿಗಳಲ್ಲಿ ಸಾಗುವಳಿಮಾಡುವ ಹೆಚ್ಚಿನ ಜನತೆ ಆರ್ಥಿಕ ಅಡಚಣೆಯಿಂದ ಪೇಜಾಡುವ ಬಡ ಜೀವಿಗಳಾಗಿದ್ದಾರೆ. ಕೃಷಿಯು ಬಡ ರೈತರು ಬೆವರಿಳಿಸಿ ದುಡಿಯುವವರು ಮಾತ್ರ; ಅವರು ಉತ್ಪಾದಿಸಿದ ಆಹಾರ ಧಾನ್ಯಗಳಿಂದ ಹೆಚ್ಚಿನ ಲಾಭ ಪಡೆಯುವವರೇ ಬೇರೆ. ಇದಕ್ಕೆ ಕಾರಣ ನೆಲದೊಡೆಯ. ಉತ್ಪಾದನೆಯು ಹೆಚ್ಚಿನಂದಿನ್ನು ಗೇಣಿ ರಾಗಿ ಪಲ್ಲಿಸಬೇಕಾದ ಪರಿಸ್ಥಿತಿಯೇ ಆಗಿದೆ. ಇದುಂದಾಗಿ ಬಡ ರೈತರು ಯಾವ ರೂಪದಿಂದಲೂ ಪಲೆಯೆತ್ತುವಂತಿಲ್ಲ. ಬಡ ರೈತರ ಈ ಎಲ್ಲಾ ಸಂಕಷ್ಟಗಳು ಪೂರ್ಣ ವೈದ್ಯವಾಗಬೇಕಿದ್ದರೆ ಸರಕಾರದ ಮುಂದಾಳುಗಳಾದ ಕೃಷಿ ಇಲಾಖಾಧಿಕಾರಿಗಳು ಪ್ರತಿ ಹಳ್ಳಿಗಳಲ್ಲಾ ಸಂಚರಿಸಿ ಅಲ್ಲಿ ರೈತರಿಗಿರುವ ತೊಡಕು ತೊಂದರೆಗಳನ್ನು ಪೆನ್ನಾಗಿ ಶರಿಶೀಲಿಸಿ ಅದನ್ನು ನಿವಾರಿಸಲು ಸಾಕಷ್ಟು ಕಾರ್ಯಾಚರಣೆ ಕೈಗೊಳ್ಳಬೇಕು. ಇದಲ್ಲದೆ ಬರೀ "ಉದ್ಧಾರ ಉದ್ಧಾರ"ವೆಂದು ಉದ್ಘಟಿಸುವುದರಿಂದ ಯಾವ ಪ್ರಯೋಜನವೂ ಫಲಿಸದು. ಕೃಷಿಕರಿಗೆ ಸಾಗುವಳಿಗೆ ಬೇಕಾದಷ್ಟು ಸರಕಾರವು ಸಹಾಯ ಧನವನ್ನು ಯೋಗ್ಯ ಮರುಪಾವತಿಯ ನಿಯಮದಲ್ಲಿ ನೀಡಬೇಕು. ಬೀಜ ಗೊಬ್ಬರ ಇನ್ನಿತರ ಸಾಮಾಗ್ರಿಗಳನ್ನು ಕಡಿಮೆ ದರದಲ್ಲಿ ಒದಗಿಸಿಕೊಡಬೇಕು. ನೀರಾವರಿ ಯೋಜನೆಗಳಿಂದ ಹೆಚ್ಚಿನ ಪ್ರಯೋಜನ ದೊರೆಯುವಂತೆ ಹಳ್ಳಿಗಳಲ್ಲಿ ರೈತರ ಕೇಳಿಕೆಯಂತೆ ಬೇಕಾದ ಕೆರೆ, ಬಾವಿಗಳನ್ನು ತೋಡಿಸಿ, ಹರಿಯುವ ನದಿಗಳಿಗೆ ಅಣೆಕಟ್ಟುಗಳನ್ನು ಹಾಕಿ ರೈತರು ಕೃಷಿಯಿಂದ ತೃಪ್ತಿ ಪಡೆಯುವಂತೆ ಅಭಿವೃದ್ಧಿಪಡಿಸಬೇಕು ಬಡ ರೈತರ ಮಕ್ಕಳಿಗೆ ಯೋಗ್ಯ ವಿದ್ಯಾಭ್ಯಾಸ ದೊರೆಯುವಂತೆ ಅಲ್ಲಲ್ಲಿ ಶಾಲೆ ವಾಚನಾಲಯ ಗಳು ಇರಬೇಕು. ಗುಡಿ ಕೈಗಾರಿಕೆ, ಜಾನುವಾರು ಸಾಕಣೆಯೇ ಕಾರ್ಯಗಳಿಗೆ ಸಹಾಯ ಧನ ಸಿಗಬೇಕು. ಬಡ ಜೀವಿಗಳನ್ನು ಸುಲಿದು ಅವರ ಮೇಲೆ ಸರ್ವಾಂಗೀಣ ಅಧಿಕಾರ ಚಲಾಯಿಸುವ ಭಂಡವಾಳಿಗರ ಮೇಲೆ ಸರಕಾರವು ಯೋಗ್ಯ ನಿಯಂತ್ರಣವನ್ನಿಡಬೇಕು.

ಅಧಿಕಾರಿ ವರ್ಗದವರು ಬರೀ ಪೇಟೆ ಪಟ್ಟಣಗಳನ್ನೇ ಸುತ್ತಾಡಿ ಭಾಷಣಗಳ ಸುರಿಮಳೆಯಿಂದ ಜನರನ್ನು ಮರುಳುಗೊಳಿಸುವುದರಿಂದ ದೇಶದ ಉದ್ಧಾರವೆಂದೂ ಆಗಲಾರದು. ರಾಜಕೀಯ ರಂಗಕ್ಕಿಳಿದು ದೇಶ ಸೇವೆಗಾಗಿ ಮುಡಿಯುವವರು ಹಳ್ಳಿಗಳೆಡೆ ಹೆಚ್ಚಿನ ಲಕ್ಷವಿಟ್ಟು ಅಲ್ಲಿಯ ಸಾಮಾಜಿಕ, ಆರ್ಥಿಕ ವಿಷಮತೆಯನ್ನು ಸುಧಾರಿಸಲು ಯತ್ನಿಸಬೇಕು. ಹಳ್ಳಿಯ ಪ್ರಕೃತಿ ಸಂಪತ್ತನ್ನು ಪೂರ್ಣ ಫಲರೂಪವಾಗಿ ಪಡೆದು ದೇಶದ ಉನ್ನತಿಗಾಗಿ ಯತ್ನಿಸಬೇಕು. ಎರಡನೇ ಪಂಚವಾರ್ಷಿಕ ಯೋಜನೆಯಿಂದ ಹಳ್ಳಿಗಳಿಗೆ ಹೆಚ್ಚಿನ ಸೌಲಭ್ಯ ದೊರೆಯುವಂತಾಗಬೇಕು. ಭಾರತದ ಆರ್ಥಿಕಾಭಿವೃದ್ಧಿಗೆ ಹಳ್ಳಿಗಳೇ ಮೂಲಕ್ಷೇತ್ರವಾಗಿವೆ. ಹಳ್ಳಿಯ ಬಡ ರೈತರ ಸುಧಾರಣೆಯಾಗದೆ ರಾಷ್ಟ್ರೋನ್ನತಿಯು ಕನಸು ನಿದ್ದೆಯಲ್ಲಿದ್ದಾಗಲೇ ಸಾಧ್ಯ ಅದು ಕಾರ್ಯತಃ ಕೈಗೂಡದು. ರೈತರಿಗೆ ಸಹಕಾರಿಯಾಗಿ ಭೂಉಧ್ಧಾರಣೆಯು ಶಾಸನವು ಜಾರಿಯಾದರೆಬಡಜೀವಿಗಳಿಗೆಷವಂದುಡಿತಕ್ಕೆ ಪ್ರತಿಫಲ ಸಿಕ್ಕಿ ಸ್ವಯೋಜನವಾಗುವುದು; ಸನಾದದಲ್ಲಿ ಸನಾನತೆ ಉಂಟಾಗುವುದು. ಕೃಷಿಕರೆಲ್ಲರೂ ನಿರಂತರ ನ್ಯಾಯ ಮತ್ತು ಉದ್ಯೋಗ ಶೀಲರಾಗಲು ಪ್ರೇರಕವಾಗುವುದು. ಬಡತನವು ಕೊನೆಗೊಳ್ಳುವುದು ಹಳ್ಳಿಯ ಬಡ ಸುಧಾರಿತ ಸುಖ ಸಾನಸ್ಯಾಭ್ಯದಲ್ಲಿ ಲೋಲಲಾಡುವದು ದೇಶದ ಬಹುಮುಖ ಉನ್ನತಿಯಾಗುವುದು. ನಿರುದ್ಯೋಗವು ನಾಶವಾಗುವುದು. ಹಳ್ಳಿಗಳ ಅಭಿವೃದ್ಧಿಯಾದಾಗಲೇ ಭಾರತವು ಆದರ್ಶ ರಾಷ್ಟ್ರವಾಗುವುದು. ಸಮತಾವಾದವು ನೆಲೆಗೊಳ್ಳುವುದು ಈ ತೆರನಾಗಿ ಹಳ್ಳಿಗಳ ಸರ್ವಾಂಗೀಣ ಸುಧಾಣಿ, ಹಳ್ಳಿಯ ವ್ಯವಸಾಯೋತ್ಪನ್ನ ವೃದ್ಧಿಯಾದಾಗಲೇ ಭಾರತದ ಉದ್ಧಾರವಾಗುವುದು. ಸರಕಾರದ ಧ್ಯೇಯವು ಪರಿಪೂರ್ಣವಾಗುವುದು. ದೇಶಸೇವಕರು ಧೃಢ ನಿಶ್ಚಯವು ಕೈಗೂಡುವುದು. ಅಂತಾ ಲೆಂದೇ ನನ್ನ ಹಾರ್ದಿಕ ಆಶಯ.

-ಶ್ರೀ ಕಡಂದಲೆ ಜಯರಾಮ ಶೆಟ್ಟಿ.

ಝಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಪೀತ, ಅಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ½ ರಾತಲಿಗೆ ರೂ. 1/13

ಪೆ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕೆಂಪೆನ್ಸಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ,
ಮದ್ರಾಸ್—3.

ಗೋವಿಜಯ

(ಗೋವಿನ ಕಥೆ)

ಶ್ರೀ ಮುಳ್ಳುಸ್ವಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮವ್ವಕ್ಕೆ ತಾನೇ ಕತೆ, ಹಾಡು, ಅರ್ಥ ಸಂಭಾವನೆ, ವಿಷಯ ಜ್ಞಾನವೆ ಹಾಗು ರಾರೀರಿಕ ಶಿಕ್ಷಣ ಮೊದಲಾದುವನ್ನು ಏಕ ಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಾದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0—8—0

ಸುಖದ ನೆಲೆ

(ನಿನ್ನೆ ಮುಟ್ಟಿದಿಂದ)

ಆತ್ಮವೆಂಬ ಸೂರ್ಯನ ಪ್ರಕಾಶವು ಮಗುವಿನ ಮೇಲೆ ಬೀಳುವುದರಿಂದ ಮಗುವು ನಮಗೆ ಪ್ರಿಯವಾಗುವುದು. ನಾವು ಮಗುವನ್ನು ಸ್ನೇಹಿಸುವುದು ನಮ್ಮ ಆತ್ಮತೃಪ್ತಿಯ ಸಾಧನೆಗಳು, ಪತಿಪತ್ನಿಯರಲ್ಲಿಯ ಪ್ರಬಲ ಪ್ರೇಮವು ಪರಸ್ಪರರಲ್ಲಿ ಉಂಟಾದ ಕಲಹದಿಂದ ಶಿಥಿಲವಾದರೆ ಅವರಿಬ್ಬರೂ ಅಗಲುವರು; ಧನವು ಕೆಲಸಕ್ಕೆ ಬರದಿದ್ದಾಗ ತ್ಯಜಿಸಲ್ಪಡುವುದು. ನೀರೋ ಎಂಬ ರಾಜನು ತನ್ನ ರಾಜಧಾನಿಯಾದ ರೋಮ್ ಎಂಬ ಸುಂದರವಾದ ಪಟ್ಟಣವು ಸುಡುವುದನ್ನು ನೋಡುವ ಇಚ್ಛೆಯಿಂದ ಪಟ್ಟಣಕ್ಕೆ ಬೆಂಕಿ ಹಚ್ಚಿಸಿ, ಅವನು ವಿನೋದದಿಂದ ಗುಡ್ಡವನ್ನೇರಿ ವೀಣೆಯನ್ನು ನುಡಿಸಿದನಂತೆ. ಹೀಗೆ ತನ್ನ ಆತ್ಮತೃಪ್ತಿಗಾಗಿ ಭಾಗ್ಯದಿಂದ ತುಂಬಿ ತುಳುಕುವ ನಗರವನ್ನೇ ದಹಿಸಿದ ಅರಸನು ಎಂತಹಸಿರ ಬೇಡ? ಹೀಗೆಯೇ ಅಕ್ಬರ್ ಬೀರಬಲರ ವಿವಾದದಲ್ಲಿ ನಮಗೆ ಅತೀ ಪ್ರಿಯವಾದುದು ಪ್ರಾಣವೆಂದು ತೋರಿಸಲು ಬೀರಬಲನು ಹೂಡಿದ ಉಪಾಯವು ಎಲ್ಲರಿಗೂ ತಿಳಿದಿದೆ. ಜನರಿಂದಲೂ, ವಸ್ತುಗಳಿಂದಲೂ ನಮಗೆ ಎಂದಿನವರೆಗೆ ಪ್ರಯೋಜನ ನಿರವನೋ ಅವರಿಗೆ ಅವು ನಮಗೆ ಪ್ರಿಯವಾಗುವವು. ನಮಗೆ ತೊಂದರೆಗಳು ಸಂಭವಿಸಿದಾಗ ನಾವು ಎಲ್ಲವನ್ನೂ ತ್ಯಜಿಸಲು ಸಿದ್ಧರಾಗುವೆವು.

ಇದರಿಂದ ನಾವು ಸುಖದ ಉತ್ಪತ್ತಿಯು ಪ್ರಾಣದಲ್ಲಿದೆಯೇ? ಸುಖವು ನಮ್ಮ ದೇಹದಲ್ಲಿ ಎಲ್ಲಿದೆ? ಕಾಲುಗಳಲ್ಲಿರುವುದಾದರೆ ಅವುಗಳು ನಮಗೆ ಪ್ರಿಯವಾಗಬೇಕಿತ್ತು. ಆದರೆ ಕೈಗಳು ನಮಗೆ ಹೆಚ್ಚು ಪ್ರಿಯವಾಗಿವೆ. ಆದರೂ ಕೈಗಳು ಸೌಖ್ಯದ ನೂಲವಲ್ಲ. ಆದರೆ [ಸುಖವು ನಾಸಿಕದಲ್ಲಿ ಯಾ ಕಣ್ಣಿನಲ್ಲಿದೆಯೇ? [ಇವು ಪ್ರಿಯವಾದರೂ ಸುಖದ ಸದನಗಳಲ್ಲ. ನಾವು ದೇಹವನ್ನು ತ್ಯಜಿಸುತ್ತೇವೆ. ಪ್ರತಿ ಕ್ಷಣಕ್ಕೂ ನಮ್ಮ ದೇಹದಲ್ಲಿ ಬದಲಾವಣೆಗಳಾಗುತ್ತವೆ. ಇನ್ನೆರಿಂದ ಬುದ್ಧಿಯಲ್ಲಿ ಸುಖವಿದೆ ಎಂದು ಯಾಕೆ ತಿಳಿಯಬಾರದು? ಬುದ್ಧಿವಂತರಾಗದಿದ್ದರೂ ಜನರು ಜೀವಿಸಲು ಆಶಿಸುವರು. ಇದರಿಂದ ಪ್ರಾಣವೇ ಸುಖದ ಉತ್ಪತ್ತಿ ಸ್ಥಾನವೆನ್ನೋಣವೇ? ನಮ್ಮ ವೇದಾಂತಗಳು ಅದನ್ನೊಪ್ಪುವುದಿಲ್ಲ. ಹಾಗಾದರೆ ಸುಖವೆಲ್ಲಿದೆ?!?

ಪಾಶ್ಚಿಮಾತ್ಯ ದೇಶಗಳಲ್ಲಿ "ಪ್ರಾಣ ಬಿಟ್ಟನು" ಎಂಬ ಶಬ್ದ (He gave up the ghost) ಬಳಕೆಯಲ್ಲಿದೆ. ಭರತ ಖಂಡದಲ್ಲಿ "ದೇಹವನ್ನು ತ್ಯಜಿಸಿದನು" ಎನ್ನುವರು. ಇದರಲ್ಲಿಯೂ ಭೇದವು ಕಂಡುಬರುವುದು. ಏರೋಪ್ಯರು ದೇಹವನ್ನೇ ಆತ್ಮದಂತೆಯೂ, ಆತ್ಮವನ್ನು ದೇಹಕ್ಕೆ ಸಂಬಂಧಿಸಿದ ವಸ್ತುವೆಂತಲೂ ತಿಳಿಯುವರು ಭರತಖಂಡದಲ್ಲಿ ಆತ್ಮವು ಅವಿನಾಶಿ ಎಂದೂ, ದೇಹವು ನಾಶವಾಗುವುದು ಎಂದೂ ತಿಳಿಯುವರು ಇವರಿಂದ—ಮನುಷ್ಯನಿಗೆ ಪ್ರಾಣಕ್ಕಿಂತಲೂ ಅಧಿಕವಾದ ವಸ್ತು ಒಂದಿದೆ ಎಂದು ತಿಳಿಯುವೆವು. ಇದೇ ಆತ್ಮನ ಪ್ರಾಣದಿಂದ ಆತ್ಮಕ್ಕೆ ಪ್ರಯೋಜನವಾಗದಿದ್ದುದರಿಂದ ಆತ್ಮವು ಪ್ರಾಣವನ್ನು ತ್ಯಜಿಸಿಬಿಟ್ಟಿತು. ಅದಕಾರಣ ಆತ್ಮನೇ ಆನಂದದ ಆವಾಸವಾಗಿರಬೇಕು. ನಮ್ಮ ಸುಖದ ಮೂಲವು ಅದೇ ಆಗಿರಬೇಕು. ಬುದ್ಧಿಗಿಂತ ಪ್ರಾಣವು ಅಧಿಕವಾಗಿದೆ. ಕಾರಣ ಪ್ರಾಣವು ಬುದ್ಧಿಗಿಂತಲೂ ಆತ್ಮಕ್ಕೆ ಸಮೀಪವಿದೆ. ಹೀಗೆಯೇ ದೇಹದ ಪ್ರತಿಯೊಂದು ಅವಯವಕ್ಕಿಂತ ಬುದ್ಧಿ ಅಧಿಕವಾಗಿದೆ ಪ್ರತಿಯೋರ್ವನೂ ತನ್ನ ಮಗನನ್ನು ಇತರರ ಮಕ್ಕಳಿಗಿಂತ ಸುಂದರನೆಂದು, ಬುದ್ಧಿವಂತನೆಂದೂ ಭಾವಿಸಲು ಇದೇ ಕಾರಣ. ಯಾರೇ ಆದರೂ ತಾನ್ಸ ಬರೆದ ಲೇಖನವನ್ನು ಕಾಳಿದಾಸ, ಯಾ ಷಾಕ್ಸ್‌ಪಿಯರನು ಬರೆದ ಲೇಖನಕ್ಕಿಂತ ಉತ್ತಮವೆಂದು ತಿಳಿಯುವನು. ಯಾಕೆಂದರೆ ತಾನು ಬರೆದ ಲೇಖನದ ಮೇಲೆ ತನ್ನ ಪ್ರಕಾಶವು ಬಿದ್ದಿರುವುದು. ಆದ್ದರಿಂದ ಸುಖದ ಸ್ಥಾನವು ತನ್ನಲ್ಲಿಯೇ ಇದೆ ಎಂದು ತಿಳಿದವರು ಹೇಳುವರು. ಹೀಗಿರುವಾಗ ಸುಖಕ್ಕಾಗಿ ನಾವು ಬೇರೆ ಕಡೆಗಳಲ್ಲಿ ಹುಡುಕುವುದು ಎಷ್ಟು ಹಾಸ್ಯಾಸ್ಪದವಾಗಿದೆ.

ಒಮ್ಮೆ ತನ್ನ ಪ್ರಿಯಳ ಸಲುವಾಗಿ ಒಬ್ಬ ರಾಮನನು ಚಿಂತಾಪರವಶನಾಗಿದ್ದನು. ಅವನ ದೇಹವು ಕ್ಷೀಣವಾಗಿತ್ತು. ರಕ್ತ ಮಾಂಸಗಳು ಒಣಗಿ ಹೋಗಿದ್ದವು. ಮೂಳೆಗಳೆಲ್ಲಾ ಎದ್ದು ತೋರುತ್ತಿದ್ದುವು. ಅಲ್ಲಿಯ ಅರಸನಿಗೆ ಇದನ್ನು ನೋಡಿ ಅವನ ಪ್ರಿಯೆಯನ್ನು ನೋಡುವ ಮನಸ್ಸಾಯಿತು. ಆ ಹೆಂಗಸನ್ನು ಕರೆತರಿಸಿದನು. ಆದರೆ ಅವಳು ನೋಡಲಸಾಧ್ಯವಾದಷ್ಟು ಕುರೂಪಿಯಾಗಿದ್ದಳು. ರಾಜನು ಅವನೊಡನೆ ಈ ವಿಷಯ ಕೇಳಲು ಅವನು "ರಾಜನೇ, ಪ್ರೀತಿಯು ಮನುಷ್ಯರನ್ನು ಕುರುಡರನ್ನಾಗಿ ಮಾಡುವುದು. ನಿನಗೆ ಕಣ್ಣುಗಳಿಲ್ಲ. ನಿನ್ನ ದೃಷ್ಟಿಯಿಂದ ಅವಳನ್ನು ನೋಡಿದರೆ ಅಷ್ಟು ಸುಂದರಿಯರು ಪ್ರಪಂಚದಲ್ಲೇ ಇಲ್ಲ" ಎಂದನು. ಈ ಜಗತ್ತಿನಲ್ಲಿ ಇದನ್ನು ಮೋಕ್ಷವೆನ್ನುವರು. ನಮ್ಮನ್ನು ನೋಟಗಳಿಂದ ಎಲ್ಲಾ ವಸ್ತುಗಳನ್ನು ನಮ್ಮೆಡೆಗೆ ಆಕರ್ಷಿಸಿ ಕೊಳ್ಳುವೆವು. ನಮ್ಮ ಪ್ರಕಾಶವೇ ಅವುಗಳ ಮೇಲೆ ಬೀಳುವುದರಿಂದ ನಾವು ಅವುಗಳಲ್ಲಿ ಮೋಹಗೊಳ್ಳುವೆವು. ಗ್ರೀಸ್‌ನ "ಎಕೊ" ಎಂಬವಳು ತನ್ನ ಪತಿ ಬಿಂಬಕ್ಕೇನೇ ಮೋಹಿತಳಾದಳು ಎಂಬ ಕಥೆ ಇದೆ. ನಮ್ಮೆಳ್ಳ ಪ್ರಿಯ ವಸ್ತುಗಳು ಆಂತರಾತ್ಮದ ಪ್ರತಿಬಿಂಬಗಳಾಗಿವೆ. ಅವು ನಮ್ಮ ಛಾಯೆಗಳಾಗಿವೆ. ಹೀಗಿರುವಾಗ ನಮ್ಮ ನೆಲೆಯನ್ನು ಬೆನ್ನಟ್ಟುವುದು ಮೂಢತನವಲ್ಲವೇ?

ಒಂದು ಮಗುವು ಅಂಬೆಗಾಲಿಕ್ಕಿ ನೆಲದ ಮೇಲೆ ಹೋಗುವಾಗ ತನ್ನ ನೆರಳು ಕಾಣಿಸಿತು. ನೆರಳಿನ ತಲೆಯನ್ನು ಹಿಡಿಯಲು ಮುಂದೆ ಸಾಗಿತು. ಆಗ ನೆರಳು ಸಹಾ ಮುಂದೆ ಜರಿಯಿತು. ಮಗು ಪ್ರಯತ್ನವಾಡಿ ಬೇಸತ್ತು. ಅತ್ತು ಹೊರಳಾಡ ತೊಡಗಿತು. ಕೊನೆಗೆ ತಾಯಿಯು ಅಲ್ಲಿಗೆ ಬಂದಳು. ಮಗುವಿನ ವಿಫಲ ಪ್ರಯತ್ನವನ್ನು ನೋಡಿ ಮುಗುಳು ನಗೆಯೊಡನೆ ಅದರ ತಲೆಯ ಮೇಲೆಯೇ ಅದರ ಕೈಯನ್ನು ಇಟ್ಟಳು. ಆಗ ನೆರಳನಲ್ಲಿರುವ ತಲೆಹಿಡಿಯಲ್ಪಟ್ಟಿತು. ಸ್ವರ್ಗವೂ ನರಕವೂ ನಮ್ಮಲ್ಲಿಯೇ ಇವೆ. ಆದ್ದರಿಂದ ನಿಶ್ಚಯವಾಗಿ ಈ ಮಾತನ್ನು ನೆನಪಿಡಬೇಕಾಗಿದೆ. ನಾವು ಯಾವ ವಸ್ತುವನ್ನು ಕೊಂದಬೇಕಾದರೂ, ವಸ್ತುವಿನ ನಿಜವನ್ನು ತಿಳಿಯಬೇಕಾದರೂ, ನೆರಳನ್ನು ಹುಡುಕಬಾರದು. ನಮ್ಮ ಅಂತರಾತ್ಮವನ್ನೇ ಪ್ರವೇಶಿಸಬೇಕು. ಆಗ ಎಲ್ಲ ಪ್ರಿಯವಸ್ತುಗಳು ನಮ್ಮ ನೆರಳು ಅಥವಾ ಪ್ರತಿಬಿಂಬಗಳೆಂದು ತಿಳಿಯುವೆವು. ಒಬ್ಬ ಬಡ ಸ್ತ್ರೀಯು ರಾತ್ರಿ ಮನೆಯಲ್ಲಿ ಸೂಜಿಯನ್ನು ಕಳಕೊಂಡಳು ಅವಳಲ್ಲಿ ದೀಪವಿರಲಿಲ್ಲ. ಅವಳು ಮನೆಯ ಹೊರಗಿನ ರಸ್ತೆಗೆ ಬಂದು ಅಲ್ಲಿ ದೀಪವಿದ್ದಲ್ಲಿ ಸೂಜಿ ಹುಡುಕತೊಡಗಿದಳು. ಇದೆಂತಹ ಮೂರ್ಖತನ. ನಮ್ಮ ಜೀವನ ಸ್ವರ್ಗ ಸುಖವಿದೆ. ಅದನ್ನು ಬಿಟ್ಟು ಬಾಹ್ಯ ವಿಷಯ ವಾಸನೆಗಳಲ್ಲಿ ಸುಖವನ್ನು ಹುಡುಕುವೆವು. ನಾವೇ ಪರಬ್ರಹ್ಮ ಸ್ವರೂಪದಿಂದು ತಿಳಿದರೆ ನಮ್ಮ ಯಾವತ್ತೂ ಭವ ಬಂಧನವು ದೂರವಾಗುವುದು.

ಕೊನೆಯದಾಗಿ ಇದೊಂದು ಶ್ಲೋಕಾರ್ಥದೊಂದಿಗೆ ಲೇಖನವು ಮುಕ್ತಾಯಗೊಳಿಸುವೆ.

"ನೈಕ್ಷಗಳು ನನ್ನ ಬಂಧುಗಳು. ಕಿರು ನನ್ನ ಮೈಯೊಳಗಿನ ಮಾಂಸವು. ಪಶುಗಳು ನನ್ನ ಚರ್ಮವು ಸೂರ್ಯನು ನನ್ನ ಮುಷ್ಟವು. ನಾನು ಜನನ ಮರಣ ರಹಿತನು". ಓಂ. ಶಿವೋಹಮ್.

(ಸ್ವಾಮಿ ರಾಮತೀರ್ಥರ ಉಪನ್ಯಾಸದಿಂದ ಪ್ರೇರಿತ)

—ಶ್ರೀ "ರಾಧೇಯ", ಸಿದ್ದಾಪುರ.

ಸೂಚನೆ

'ನವಯುಗ'ದ ಚಂದಾ ಹಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇದರ ಯಾವುದೇ ಶಾಖೆಯಲ್ಲಿ ಯಾವದೊಂದು ತರದ ಖರ್ಚೂ ಇಲ್ಲದೆ (ನವಯುಗ ವಾರಪತ್ರಿಕೆಯ ಖಾತೆಗೆ) ಪಾವತಿ ಮಾಡಬಹುದು.

ಮೆನೇಜರ್.

ನವಯುಗ, ಉಡುಪಿ.

ಆರ್ಥಿಕ ಸಮಸ್ಯೆಗಳು

ನಿಮ್ಮ ಎಲ್ಲಾ ಆರ್ಥಿಕ ಸಮಸ್ಯೆಗಳಿಗೆ, ದೇಶ ವಿದೇಶ ವ್ಯಾಪಾರ ಅನುಕೂಲತೆಗಳಿಗೆ, ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟುಗಳಿಗೆ, ಉಳಿತಾಯದ ಹಲವು ಯೋಜನೆಗಳಿಗೆ, ನಮ್ಮ ಯಾವದೇ ಶಾಖೆಯಲ್ಲಿ ವಿಚಾರಿಸಿರಿ.

ನಿಮ್ಮ ಸೇವೆಯೇ ನಮ್ಮ ಗುರಿ.

ಕೆನರಾ ಬ್ಯಾಂಕ್ ಲಿಮಿಟೆಡ್

CANARA BANK LIMITED

ESTD: 1906

ಒಟ್ಟು ಸಾಧನ ಸಂಪತ್ತು ರೂ. 17 ಕೋಟಿಗೂ ಮಿಕ್ಕಿದೆ

ಗವರ್ನಮೆಂಟ್ ಆಫ್ ಮೈಸೂರು

ಇಲೆಕ್ಟ್ರಿಕಲ್ ಶಾಖೆ

ಪ್ರಕಟಣೆ

ದ. ಕ. ಜಿಲ್ಲೆ ಮತ್ತು ಕೊಳ್ಳೆಗಾಲ ಪ್ರದೇಶಗಳಲ್ಲಿ ಇಲೆಕ್ಟ್ರಿಸಿಟಿಯನ್ನು ಉಪಯೋಗಿಸುವ ಜನತೆಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಇಲೆಕ್ಟ್ರಿಸಿಟಿ ಉಪಯೋಗದ ಬಗ್ಗೆ ವಯರಿಂಗ್ ಇತ್ಯಾದಿ ಕಾರ್ಯವನ್ನು ಲ್ಯಾಸೆನ್ಸು ಪಡೆದ ಇಲೆಕ್ಟ್ರಿಕಲ್ ಕಂಟ್ರಾಕ್ಟರರಿಂದಲೆ ಮಾಡಿಸತಕ್ಕದ್ದು. ಇಲ್ಲವಾದರೆ ಇಲೆಕ್ಟ್ರಿಕಲ್ ಇಲಾಖೆಯ ನೆರವು ದೊರೆಯಲಾರದು. ಲ್ಯಾಸೆನ್ಸು ಪಡೆಯಲು ಇಲೆಕ್ಟ್ರಿಕಲ್ ಕಂಟ್ರಾಕ್ಟರರು ಮತ್ತು ವಯರ್‌ಮೆನರು ಮೈಸೂರು ರಾಜ್ಯದಲ್ಲಿರುವ ಕ್ರಮ ನಿಯಮಗಳಿಗನುಸಾರವಾಗಿ ಕೂಡಲೇ ಲ್ಯಾಸೆನ್ಸು ಪಡೆಕೊಳ್ಳತಕ್ಕದ್ದು. ಇಲೆಕ್ಟ್ರಿಕಲ್ ಸುಪರ್‌ವೈಜರರು ಲ್ಯಾಸೆನ್ಸ್ ಬಗ್ಗೆ ವಯರ್‌ಮೆನರು ಪರ್ಮಿಟ್ ಬಗ್ಗೆ ಬೇಕಾಗುವ ಮಾಹಿತಿಯನ್ನು ಸಾಕಷ್ಟು ಅಂಚೆ ಚೀಟನ್ನು 'ಆಫೀಸ್ ಆಫ್ ದಿ ಸೆಕ್ರೆಟರಿ' ಲ್ಯಾಸೆನ್ಸ್ ಇಶ್ಯೂಯಿಂಗ್ ಕಮಿಟಿ, ಬೆಂಗಳೂರು, ಇವರಿಗೆ ಕಳುಹಿಸಿ ಪಡೆಯಬಹುದು. ಇಲೆಕ್ಟ್ರಿಕಲ್ ಕಂಟ್ರಾಕ್ಟರರು ಲ್ಯಾಸೆನ್ಸಿನ ಬಗ್ಗೆ ಮಾಡುವ ಅರ್ಜಿದ್ವಿಪ್ರತಿಯಲ್ಲಿ ಒಂದನ್ನು ಸೆಕ್ರೆಟರಿ, ಲ್ಯಾಸೆನ್ಸು ಇಶ್ಯೂಯಿಂಗ್ ಕಮಿಟಿ, ಇಲೆಕ್ಟ್ರಿಕಲ್ ಲೆಜೋರೆಟರಿ, ಬೆಂಗಳೂರು ಅವರಿಗೂ ಇನ್ನೊಂದನ್ನು ಸೆಕ್ರೆಟರಿ, ಲ್ಯಾಸೆನ್ಸ್‌ಡ್ ಇಲೆಕ್ಟ್ರಿಕಲ್ ಕಂಟ್ರಾಕ್ಟರ್ಸ್ ಎಸೋಸಿಯೇಶನ್, ಎವೆನ್ಯೂ ರೋಡ್, ಬೆಂಗಳೂರು-2, ಅವರಿಗೂ ಕಳುಹಿಸತಕ್ಕದ್ದು.

ಪಿ. ಸಿ. ರೆಡ್ಡಿ.

ಅಧ್ಯಕ್ಷರ ಪರವಾಗಿ,

ಲೈಸೆನ್ಸು ಇಶ್ಯೂಯಿಂಗ್ ಕಮಿಟಿ.

ಇನ್ನೂ ಚಂದಾಹಣವನ್ನು

ಕಳುಹಿಸದವರು ದಯಮಾಡಿ ಕೂಡಲೇ ಕಳುಹಿಸಿಕೊಡುವಂತೆ ಇನ್ನೊಮ್ಮೆ ಕೇಳಿಕೊಳ್ಳುತ್ತೇವೆ. ಅಂತೂ ಸಕಾಲದಲ್ಲಿ ಚಂದಾ ಪಾವತಿಯಾಗದಿದ್ದರೆ ನಾವು ಅನಿವಾರ್ಯವಾಗಿ ತಲುಪಿಸುವ ವಿ. ಪಿ. ಪಿ. ಯನ್ನಾದರೂ ಪಡೆಕೊಳ್ಳುವಂತೆ ವಿಜ್ಞಾಪಿಸುತ್ತೇವೆ.

ಮೆನೇಜರ್, ನವಯುಗ.

ಹಾಸ್ಯದ ಪ್ರಭಾವ

ನಾಯಿತುಂಬ ಸಕ್ಕರೆ ಟೊಟ್ಟಿತುಂಬ ಸಕ್ಕರೆ!!

ನಮ್ಮ ನಗೆಮಾತಿನಲ್ಲಿ ಶುಚಿ ಮಾತ್ರ ಅತ್ಯವಶ್ಯ

ರಸವಿಲ್ಲದುದು ರಸಕ್ಕೆ ಸವಾಸ'—ಎಂ ಪ್ರಾಜ್ಞರ ಮಾತಿನ ಮಾಣಿಕ್ಯಗಳ ಂದು. ಕಾವ್ಯದಲ್ಲಾಗಲಿ, ಕಾದಂಬರಿ ಲ್ಲಾಗಲಿ, ವಾಗ್ಝರಿಯಲ್ಲಾಗಲಿ. ರಸ ದಿದ್ದರೆ ಅದು ನಿಷ್ಪ್ರಯೋಜನವೇ ರಸವು ಸಾಹಿತ್ಯದ ಉಸಿರಿನ ಉಸಿ ಜೀವದ ಜೀವಾಳ! ಪರಿಸ್ಥಿತಿ ಹೀಗಿರು ನವರಸಗಳಲ್ಲೆಲ್ಲಾ ಅತ್ಯಂತ ಹೆಚ್ಚು ಚರಣೆಯನ್ನು ಪಡೆದಿರುವ 'ಹಾಸ್ಯ ದ ಮೇಲೆ ಒಂದು ಪಕ್ಷಿ ನೋಟವ ಹಾಯಿಸಿದುದಾದರೆ ಅದು ಅಪ್ರಸ್ತು ಸಲಾರದು.

ಾಸ್ಯಕ್ಕೆ ಅದ್ಭುತವಾದ—ಅನ್ಯಾದೃಶ ಶಕ್ತಿಯಿದೆ. ಅರಸಿಕನನ್ನೂ ತನ್ನೆ ಸೆಳೆದುಕೊಳ್ಳುವ ಮಾಯಾ ಮಹಿ ಅದರಲ್ಲಿ ಅಡಕವಾಗಿದೆ. ಸಿಗ್ಗು ಮು ಲ್ಲಿಯೂ ಹಾಸ್ಯದ ಬುಗ್ಗೆಯು ನಗು ನಂದಾದೀಪವನ್ನು ಉರಿಸಬಲ್ಲುದು; ಸಂಕಷ್ಟಗಳ ನಡುವೆ ತೊಳಲಿ ಬಳ ಳಲುತ್ತಿರುವ ವ್ಯಕ್ತಿಯ ಹೃದಯ ನರೂ ಅದು ಸಂತೋಷವನ್ನು ಬರಿಸ ುದು. ಎಂತಹ ಶೋಕಾಕುಲವನಾದ ಹಾಸ್ಯದ ಮಾತುಗಳನ್ನು ಕೇಳಿದೊ ಯೇ ತನ್ನ ದುಃಖವನ್ನು ಮರೆತು ೋಷದಲ್ಲಿ ಸಹಭಾಗಿಯಾಗುತ್ತಾನೆ. ೃಯು ಆನಂದಕ್ಕೂ ಆನಂದವು ಜೀವ ಕ್ಕೆ ಕಾರಣವಾಗಿದೆ. ಹೃದಯದಲ್ಲಿ ಸ ಹುರುಪನ್ನು ಹುಟ್ಟಿಸಿ ಮಾನವ ಮೃತ್ಯುವಿನಿಂದ ಅನ್ಯಾತ್ಯದ ಕಡೆ ದೊಯ್ಯುವ ಉಪ್ಪಲ ಶಕ್ತಿಯೂ ಲ್ಲಿದೆ. ಹಾಸ್ಯದ ಸಂಪರ್ಕದಲ್ಲಿರುವ ಾವು ನೋವುಗಳ ಸುಳಿವು ಸೆಳ ದೂ ಹಟ್ಟುವುದಿಲ್ಲ. ಅವನು ಸದಾ ಮ್ಮುಖನಾಗಿಯೇ ಇರುತ್ತಾನೆ. ಬಾಳ ೀಗೆಯಿಂದ ಬಳಲಿ ಬೆಂಡಾದ ಬಡ ಜೀಗೆ ಹಾಸ್ಯವು ಒಂದು ಭೇಷಜದಂತಿ ದರಿಂದಲೇ 'ಬಾಯಿತುಂಬಾ ನಕ್ಕರೆ ಟ್ಟಿತುಂಬಾ ಸಕ್ಕರೆ' ಎಂಬ ಮಾತೂ ಟ್ಟಿಕೊಂಡಿರಬೇಕು.

ಾಸ್ಯವು ಬಹಳ ಪೂರ್ವಕಾಲದಿಂದ ವಿಶೇಷವಾದ ಪ್ರಾಧಾನ್ಯವನ್ನು ಪ ಪರಿಪೂರ್ಣವಾಗಿ ಪೋಷಿಸಲ್ಪಟ್ಟಿ ದೆ. ಅರಸರೂ ತಮ್ಮ ಆಸ್ಥಾನದಲ್ಲಿ 'ವಿದೂಷಕನನ್ನೇ ಇಟ್ಟುಕೊಳ್ಳುತ್ತಿ ು. ಇವನು ದೊರೆಯನ್ನೂ ಪುರಜನ ನ ನಗೆಯ ನದಿಯಲ್ಲಿ ತೇಲಾಡಿಸಿ ತಿದ್ದನು ಕೃಷ್ಣದೇವರಾಯನ ಕಾ ದ್ದೆ ತೆನ್ನಾಲಿ ರಾಮಕೃಷ್ಣನೂ ಅಕ್ಬ ರನ ಸ್ಥಾನದಲ್ಲಿದ್ದ ಬೀರಬಲನೂ ಹೇಗೆ ದ್ದ ಹೊಳೆಯದ್ದೇ ಹರಿಸಿರುವರೆಂ ನ್ನು ನಾವೆಲ್ಲರೂ ತಿಳಿದಿರುವೆವಷ್ಟೆ? ಸರಾತನ ಕವಿಗಳೂ ಹಾಸ್ಯರಸಕ್ಕೆ ಹುಟ್ಟಿನ ಪೋಷಣೆಯನ್ನಿತ್ತಿದ್ದಾರೆ. ಕು ವಾರ ವ್ಯಾಸನಂತೂ ಅದರ ಉಕ್ಕಂದವನ್ನೇ ಕಾಣಿಸಿದ್ದಾನೆ. ಅವನ ಉತ್ತರನ ಚಿತ್ರಣದಲ್ಲಿ ಈ ಹಾಸ್ಯರಸವು ಹೊನಲಾಗಿ ಹರಿದು ಬಂದಿರುವುದನ್ನು ಸಹೃದಯರು ಸುಲಭವಾಗಿ ಗುರುತಿಸಿಕೊಳ್ಳಬಹುದು. 'ಬದುಕಿದೆನೆಂದು ನಿಟ್ಟೂಟೆದಲಿ ಹಾಯ್ದನು ಬಟ್ಟೆ ಮುಂಡೆಯಲಿ' ಎಂದು ಅತನು ಉತ್ತರನ ಹೇಡಿತನವನ್ನು ರೂಪಿಸಿದುದರ ಅರಿವಾದಾಗ ಉಕ್ಕೇರುವ ನಗೆಯನ್ನು ತಡೆಯುವುದುಅಸಾಧ್ಯವಾಗುತ್ತದೆ.ಕೆಲವೊಮ್ಮೆ ಅದನ್ನು ಮೌನವಾಗಿ ಓದುತ್ತಾ ಹೋದಂತೆ ನವಗರಿವಿಲ್ಲದೆಯೇ ನಗೆಯು ಹೊರ ಹೊಮ್ಮುವುದರಿಂದ ಇತರರಿಗೆ ಈತನೇಕೆ ನಗುತ್ತಿರುವನು ಎಂದು ಆಶ್ಚರ್ಯವಾಗುವ ಸಂದರ್ಭವೂ ಬರುತ್ತದೆ. ಕುಮಾರ ವ್ಯಾಸನ ಭಾರತವು ನೊಗೆದಷ್ಟೂ ಬತ್ತದ ಹಾಸ್ಯರಸ ಸಾಗರವೇ ಆಗಿದೆ ಎಂದರೂ ಹೆಚ್ಚಾಗಲಾರದು.

ಆಧುನಿಕ ಕವಿತೆಗಳಲ್ಲಿ ಅಲ್ಲೊಂದೆಡೆ ಇಲ್ಲೊಂದೆಡೆ ಹಾಸ್ಯದ ಚಿಗುರು ಕಂಡು ಬರುವುದಾದರೂ ಅವುಗಳಲ್ಲಿ ಆದಕ್ಕೆ ಹೆ ಚ್ಚಿನ ಮಹತ್ವ ಇನ್ನೂ ದೊರೆತಿಲ್ಲ. ಅವು ವೀರರಸ ಹಾಗೂ ಕರುಣಾರಸಗಳಿಂದಲೇ ಹೆಚ್ಚಾಗಿ ಪರಿಸುಸ್ಪವಾಗಿರುತ್ತವೆ.

ಕನ್ನಡದಲ್ಲಿ ಹಾಸ್ಯರಸ ಪ್ರಧಾನವಾದ ನಾಟಕಗಳೂ ಕೆರು ಬರೆಹಗಳೂ ಕಾದಂ ಬರಿಗಳೂ ಸಾಕಷ್ಟು ತುಂಬಿಕೊಂಡಿವೆಯೆ ನ್ನಲು ನಾವು ಹೆಮ್ಮೆ ಪಡಬೇಕು. ನಮ್ಮ ಲ್ಲಿ ನಗು ಬರೆಹಗಳಿಗಾಗಿಯೇ ವಿಶೇಷಾ ಗಿಟ್ಟು ಪತ್ರಿಕೆಗಳೂ ಇವೆಯೆಂಬುದು ಸಂ ತೋಷಕರ ಸಂಗತಿ. ದಾಶರಥಿ ದೀಕ್ಷಿತ್, ಬಳಿಕ್ಕಾರಿ ಬೀಚಿ, ನಾಡಿಗೇರ ಕೃಷ್ಣರಾಯ ನೊದಲಾದವರು ಹಾಸ್ಯ ಕೃತಿಗಳನ್ನು ಬ ರೆದು ಸುಪ್ರಸಿದ್ಧರಾದ ಕನ್ನಡ ದೇವಿಯ ಆರಾಧಕರು. ಅವರ ಲಘು ಬರೆಹಗಳು ಆಗಾಗ ನಾಡಿನ ಪತ್ರಿಕೆಗಳಲ್ಲಿ ಕಾಣಿಸಿ ಕೊಂಡು ಜನರ ಮನೋರಂಜನೆಯನ್ನುಂಟು ಮಾಡುತ್ತಿವೆ—ಎಂಬುದು ಹಾ ಸ್ಯಪ್ರಿಯರು ಅರಿತಿರಬಹುದಾದ ವಿಚಾರ.

ಹಾಸ್ಯದ ಪ್ರಭಾವ ಜೀವನದ ಮೂಲೆ ಮೂಲೆಗಳಲ್ಲೂ ಪಸರಿಸಿರುವುದು ಕಂಡು ಬರುತ್ತದೆ. ನಾಲ್ಕು ಜನ ಗೆಳೆಯರು ಒಂ ದೆಡೆ ಕಲೆತರೆ ಅಥವಾ ಬಂಧುಬಳಗದವ ರು ಮದುವೆ ಮುಂಜಿಗಳಲ್ಲಿ ಒಂದಾದರೆ ಅಲ್ಲಿ ಬಹುಬೇಗನೆ ಪೋಷಿಸಲ್ಪಡುವ ರಸ ವೆಂದರೆ ಹಾಸ್ಯರಸ ಹಾಸ್ಯವಿದ್ದರೇನೇ ಆ ಕೂಟದಲ್ಲಿ ಉತ್ಸಾಹ-ಉಲ್ಲಾಸ ಎಲ್ಲಾ ಇರುತ್ತದೆ. ಇಲ್ಲದಿದ್ದರೆ ಅದು ನೀರಸವಾ ಗಿ ಪರಿಣಮಿಸುತ್ತದೆ.

ಕನ್ನಡ ನಾಡಿನ ಯಕ್ಷಗಾನದಲ್ಲಾದ ರೂ ಹಾಸ್ಯಕ್ಕೆ' ಪ್ರಾಧಾನ್ಯವಧಿಕ. ಬಯ ಲಾಟಗಳಲ್ಲಂತೂ ಸಾವಿರ ರೂಪಾಯಿಗ ಳ ಸಂಬಳವನ್ನೇ ತೆತ್ತು ಒಬ್ಬ ಹಾಸ್ಯಗಾ ರನನ್ನು ಇಟ್ಟುಕೊಳ್ಳುತ್ತಾರೆ. ಹಾಸ್ಯಗಾ ರ ಜುರುಕಿನವನಾದರೆ ಆಟವೂ ಒಳ್ಳೆಯ ದಾಗುತ್ತದೆ; ಪ್ರೇಕ್ಷಕರ ಸಂಖ್ಯೆಯೂ ಹೆಚ್ಚುತ್ತದೆ. ಹಾಸ್ಯಗಾರನೆಂದರೆ ಅಯ ಸ್ಕಾಂತದಂತೆ. ಅವನು ಲಕ್ಷಗಟ್ಟಿಯಲ್ಲಿ ಜನರನ್ನು ಆಕರ್ಷಿಸಬಲ್ಲ. ರಾವಣನ ಅಟ್ಟಹಾಸಕ್ಕೂ ನಿದ್ದೆಯಿಂದ ಏಳದ ವ್ಯಕ್ತಿ ಹಾಸ್ಯಗಾರನು "ಸ್ಟೇಜಿ"ಗೆ ಬಂದ ನೆಂಬಾಗ ಧಿಗ್ಗನೆ ಎದ್ದು ಕುಳಿತುಕೊಳ್ಳುತ್ತಾನೆ. ಇದು ಹಾಸ್ಯದ ವೈಶಿಷ್ಟ್ಯ. ಹಾಸ್ಯಗಾನ ಇಂತಹ ಚಮತ್ಕಾರಕ್ಕಾಗಿಯೇ ಅವನಿಗೆ ಸಮಾಜದಲ್ಲಿ ಪುರಸ್ಕಾರ.

ಜೋಡಾಟಗಳಲ್ಲಿಯೂ ಯಕ್ಷಗಾನ ಕೂಟ (ತಾಳಮದ್ದಳೆ) ಗಳಲ್ಲಿಯೂ ಹಾ ಸ್ಯದ ಮಹಿಕ್ಷ ಒದೆದು ಕಾಣುತ್ತದೆ. ಹೆಚ್ಚೇಕೆ? ಆಧುನಿಕ ಚಲಚ್ಚಿತ್ರ ಪ್ರದರ್ಶ ನಗಳಲ್ಲಿಯೂ ಹಾಸ್ಯಕ್ಕೆ ವಿಶಿಷ್ಟವಾದ ಸ್ಥಾನ ವಿದ್ದೇ ಇದೆ. ಎಲ್ಲೆಲ್ಲಿಯೂ ಹಾಸ್ಯ ವು ಮಾನ್ಯ. ಅದು ಇಲ್ಲವಾದರೆ ಜಗತ್ತೇ ಶೂನ್ಯ.

ಹುಟ್ಟು ಹಾಸ್ಯಗಾರನ ಜೀವನವು ನಿ ಜವಾಗಿಯೂ ವಿಚಿತ್ರವಾದುದು. ಅವನು ಪ್ರಾಯಶಃ ಎಂದೆಂದೂ ದುಃಖಿತ ವದನನಾಗಿಯೇ ಇರುತ್ತಾನೆ. ಸಾಮಾನ್ಯನು ಗಂಭೀರವಾಗಿ ಹೇಳುವ ವಿಚಾರವೇ ಅವನ ಬಾಯಿಯಲ್ಲಿ ಹಾಸ್ಯವಾಗಿ ಪರಿಣಮಿಸುತ್ತದೆ. ಅವನು ಒಂದು ಮಾತನ್ನಾಡಿದರೆ ಸಾಕು—ನಗೆ ತನ್ನಿಂದ ತಾನೇ ನಾಟ್ಯವಾಡತ್ತದೆ. ಬೆಲ್ಲಕ್ಕೆ ಇರುವೆಗಳು ಮುತ್ತುವಂತೆ ಹಾಸ್ಯಗಾರನನ್ನು ಜನರು ಸುತ್ತುತ್ತಾರೆ. ಅವನ ಮೂಲಕ ಎಲ್ಲಿ ಯಾವಾಗ ಹೇಗೆ ಹಾಸ್ಯದ ಉದ್ಭವವಾಗುತ್ತದೆಯೆಂದು ಊಹಿಸುವುದೇ ಕಷ್ಟ.

ಹಾಸ್ಯವನ್ನು ಹಲವು ವಿಧಾನಗಳಿಂದ ಹುಟ್ಟಿಸಬಹುದು. ಆದರೆ ಮುಖ್ಯವಾದ ವಿಧಾನಗಳು ಎರಡು:. ಒಂದು ವಿಕೃತಿ ಇನ್ನೊಂದು ಸಕೃತಿ. ಅಕೃತಿಯಲ್ಲಿ ರುಚಿ ಯಷ್ಟು ಶುಚಿಯಿರುವುದಿಲ್ಲ. ಹಾಸ್ಯವು ಅಪಹಾಸ್ಯವಾಗಿ ಪರಿಣಮಿಸುತ್ತದೆ. ಒಬ್ಬ ವ್ಯಕ್ತಿಯ ಮನನೋಯುವ ಮಾತುಗಳನ್ನು ಆಡಿ ನಾವು ಹಾಸ್ಯದ ಸರಿಯನ್ನೇ ಸುರಿಸಬಹುದು. ಆದರೆ ಆ ಕಾರ್ಯಕ್ಕೆ "ಹಾಸ್ಯ"ವೆಂಬ ಪವಿತ್ರ ಹೆಸರನ್ನು ಇಡಲೇ ಬಾರದು. ಮಾತಾಡುವವರಲ್ಲಿ ಒಬ್ಬನಿಗೆ ದುಃಖವೂ ಇನ್ನೊಬ್ಬನಿಗೆ ಆನಂದವೂ ಉಂಟಾಗುವುದಿದ್ದರೆ ಅದು ಹಾಸ್ಯವಲ್ಲ. ಹಾಸ್ಯದಲ್ಲಿ ಇತ್ತಂಡದವರಿಗೂ ಸಂತೋಷ, ಶಾಂತಿ, ನೆಮ್ಮದಿ ಎಲ್ಲವೂ ದೊರಕಬೇಕು.

ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರ ಹೆಸರನ್ನು ಜೋಡಿಸಿ ಹಾಸ್ಯವನ್ನುಂಟುಮಾಡುವುದೂ ಇದೆ. ದೇವರ ಹೆಸರಿನಲ್ಲಿ ಅನ್ಯಾಯ ನಡೆಯು ವಂತೆ ಇದು ಹಾಸ್ಯದ ಹೆಸರಿನಲ್ಲಿ ನಡೆಯು ವ ದುಷ್ಕೃತ್ಯ. ಅದರ ಅಮಲು ಅರ್ಥಕ್ಕೇ ಇದಿರಾಗಿ ಲಾಂಛನವಿದೆ. ಈ ಸಂದರ್ಭದಲ್ಲಿ ಹಾಸ್ಯದ ಲಾಸ್ಯವನ್ನು ಕಾಣಿಸಲು ನಾವು ದಾಸ್ಯಪ್ರವೃತ್ತಿಗಿಳಿದೆವು ಎಂದು ಹೇಳದೆ ನಿರ್ವಾಹವಿಲ್ಲ.

ಕೇವಲ ಕಿಳ್ಕುಪ್ಪದ ಅಥವಾ ಅಶ್ಲೀಲ ಬೆರೆತ ಹಾಸ್ಯ ನಮಗೆ ಬೇಡ. ಹಾಸ್ಯವನ್ನು ಉಪಯೋಗಿಸುವಾಗ ತುಂಬಾ ಜಾಗೃತರಾಗಿರಬೇಕು. ಏಕೆಂದರೆ ರಸ ವಿರಸವಾದರೆ ಅದು ಬಾಳನ್ನೇ ಕೊಯ್ಯುವ ಗರಗಸವೂ ಆಗಬಹುದು. 'ಬಂಡು' ಶಬ್ದಗಳಿಂದ ಕೂಡಿದ ಹಾಸ್ಯವು ಖಂಡಿತವಾಗಿಯೂ ಖಂಡನೀಯ. ಅದು ನಮ್ಮ ಸಂಸ್ಕೃತಿಯೆಂಬ ನೃಕ್ಷಕ್ಕೇ ಬೀಳುವ ಕೊಡಲಿಯೇಟು ಎಂದರೂ ಅಧಿಕವಾಗಲಾರದು.

ಅಶ್ಲೀಲ ಯುಕ್ತ ಹಾಸ್ಯ ಬಯಲಾಟಗಳಲ್ಲಿಯೂ ಹರಿಕಥೆಗಳಲ್ಲಿಯೂ ಹೆಜ್ಜಾಗಿ ಕಂಡುಬರುತ್ತದೆ. ಅವರು ದುಡ್ಡಿನ ವ್ಯಾ

(ಅನೇಜುಟ ನೋಡಿರಿ)

ಗಂಟೆಗಟ್ಟಲೆ ಸಂತೋಷವನ್ನು ಕೊಡುವ ತಾತಾರವರ ಸುವಾಸನೆಯ ಸಾಬೂನು

ಜೈ ಸಾಬೂನಿನ ವೆಲ್ವೆಟ್‌ನಂತಹ ನುಣುಪಾದ ನೊರೆಮತ್ತು ಮೋಹಕ ಸುವಾಸನೆಯು ನೀವು ಇಡೀದಿವಸ ಉತ್ಸಾಹವಂತರಾಗಿ ಸುವಾಸನೆಯನ್ನು ಬೀರುವಂತೆ ಮಾಡುತ್ತದೆ. ಜೈ, ಸಾಮಾನ್ಯಬೆಲೆಯ ಮೇಲ್ತರ. ಗತಿಯ ಸಾಬೂನು. ಅದನ್ನು ಉಪ ಯೋಗಿಸಿ ನಿಮ್ಮ ಜೀವನವನ್ನು ಆನಂದಮಯಗೊಳಿಸಿರಿ.

ಜೈ

ಟಾಯಿಲೆಟ್ ಸಾಬೂನು

TATA PRODUCT

ಇಂಡಿಯದ ಬಂಡವಾಳದಿಂದ, ಇಂಡಿಯದ ಸಂಪಾಲಳತ್ವದಲ್ಲಿ, ಇಂಡಿಯಾವದ್ಧಿಯೇ ತಯಾರಿಸಿದುದು

ತಾತಾ ಆಯಿಲ್ ಮಿಲ್ಸ್ ಕಂಪನಿ ಲಿಮಿಟೆಡ್

NAVAYUGA

Popular Kannada Weekly

Founder:—

A. B. SHETTY, *M. L. A.*

Former Minister for Public Health, Govt. of Madras.

At Present Minister for Health Govt. of Mysore.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೬	ಉಡುಪಿ ೩೦-೧-೧೯೫೬	ಸಂಚಿಕೆ ೧೪

ನಮಗೊಂದು ಬಂದರ

ಮೈಸೂರಿನ ಶಾಸನಾಂಗದ ಅಧಿವೇಶನ ಕಾಲದಲ್ಲಿ ಪ್ರಶ್ನೆಯೊಂದನ್ನು ಉತ್ತರಿಸುತ್ತಾ ಮಂತ್ರಿ ಶ್ರೀ ವೀರಣ್ಣ ಗೌಡರು ಎರಡನೇ ಯೋಜನೆಯ ಕಾಲದಲ್ಲಿ ಪಡು ಕರಾವಳಿಯ ಮಂಗಳೂರು ಅಥವಾ ಮಲ್ಪೆಯನ್ನು ಪ್ರಬುದ್ಧ ಬಂದರಾಗಿ ಅಭಿವೃದ್ಧಿಗೊಳಿಸಲು ಸರಕಾರ ಸಂಕಲ್ಪಿಸಿದೆ ಎಂದು ವ್ಯಕ್ತಪಡಿಸಿದರು. ಕನ್ನಡ ಪ್ರದೇಶಗಳೆಲ್ಲ ಒಟ್ಟಾದ ಕೆಲವೇ ದಿನಗಳಲ್ಲಿ ನವಮಂಗಳೂರು ಬಂದರ ಬೇಕೇ ಬೇಕು ಎಂಬಂತಹ ಜಾಗೃತ ಮನೋಭಾವ ಹುಟ್ಟಿಕೊಂಡುದು ತುಂಬ ತೃಪ್ತಿಕರವಾದ ವಿಷಯ. ಹಿಂದಿನ ಮೈಸೂರು ರಾಜ್ಯದ ಮಂತ್ರಿಗಳು ಕೇಂದ್ರ ಸರಕಾರವನ್ನು ಬಂದರ ಬೇಕೆಂದು ಒತ್ತಾಯಿಸುತ್ತಿದ್ದರೆ ಇಂದು ಮಂಗಳೂರೋ, ಮಲ್ಪೆಯೋ ಎಂಬಂತಹ ದ್ವಂದ್ವ ಭಾವಸ್ಥಿತಿ ಎಡೆಯೇ ಸಿಗುತ್ತಿರಲಿಲ್ಲ— ಬಂದರದ ರಚನೆ ಪಶ್ಚಿಮ ಕರಾವಳಿಯ ಪ್ರಬುದ್ಧ ಬಂದರ ಸಮಿತಿಯ ವರದಿಯ ಬೆನ್ನ ಹಿಂದೆನಡೆದೇ ಹೋಗುತ್ತಿತ್ತೆಂದು ನಮ್ಮ ಅಭಿಪ್ರಾಯ. ಅಪೇನೇ ಇರಲಿ, ಈಗಲಾದರೂ ಬಂದರದ ರಚನೆಯ ಬಗ್ಗೆ ಹೊಸ ಮೈಸೂರು ಸರಕಾರವು ಆಸಕ್ತಿಯನ್ನು ತೋರಿಸುವುದೆಂಬುದು ಶುಭಕರ. ಆದರೆ, ಬಂದರವಾಗಿ ಯಾವ ಪಟ್ಟಣವನ್ನು ಅಭಿವೃದ್ಧಿಗೊಳಿಸಬೇಕೆಂಬ ಬಗ್ಗೆ ಇನ್ನೂ ಜಿಜ್ಞಾಸೆಯೇ ನಡೆದಿದೆ: ಮಂಗಳೂರೋ, ಮಲ್ಪೆಯೋ ಎಂಬ ಪ್ರಶ್ನೆಗೆ ಉತ್ತರವನ್ನು ಸರಕಾರವಿನ್ನೂ ಕಂಡುಕೊಂಡಿಲ್ಲ. ಭಟ್ಕಳ ಮತ್ತು ಕಾರವಾರಗಳು ಉಳಿದ ಸ್ಪರ್ಧಿಗಳಾಗಿದ್ದರೂ ಸಹ ಅವುಗಳ ಪರವಾದ ವಾದವು ಈಗ ಹಿನ್ನೆಲೆಗೆ ಸರಿದು ನಿಂತಿರುವಂತೆ ಕಾಣುತ್ತದೆ. ಸರಕಾರದವರು ಮಲ್ಪೆ ಮತ್ತು ಮಂಗಳೂರುಗಳಲ್ಲಿ ಯಾವುದನ್ನು ಆರಿಸುವರೆಂಬುದು ಎಂದು ಗೊತ್ತಾದೀತೋ ತಿಳಿಯದು—ಹಾಗಿದ್ದರೂ ಆದರು ತುಂಬ ದೂರದರ್ಶಿತ್ವದಿಂದ ನಿರ್ಣಯ ಕೈಗೊಳ್ಳಬೇಕೆಂಬುದು ಮಾತ್ರ ಸತ್ಯ. ಮಂಗಳೂರಿನ ಬಗ್ಗೆ ರಾಜಕೀಯವಾದ ಒತ್ತಾಯವಿರುವಂತೆಯೆ ವಾಣಿಜ್ಯ ದೃಷ್ಟಿಯಲ್ಲಿ ಮಂಗಳೂರೇ ಬಂದರವಾಗಲು ಯೋಗ್ಯವೆಂಬ ಅಭಿಪ್ರಾಯವೂ ಅನೇಕರಲ್ಲಿದೆ. ಮಲ್ಪೆಯ ಬಗ್ಗೆ ಇರುವ ಪ್ರಬಲವಾದಗಳಲ್ಲಿ ಅದು ನಿಸರ್ಗ ಸಹಜವಾದ ಬಂದರವೆಂಬುದು ಉಳಿದೆಲ್ಲ ಅನಾನುಕೂಲತೆಗಳನ್ನೂ ಬದಿಗೆ ಸರಿಸುವಂತಿದೆ. ಇಂದು ಮಲ್ಪೆಯು ಹಳ್ಳಿಯಂತಿದೆ, ನಿಜ. ಅಲ್ಲಿ ಮಂಗಳೂರಿನ ಬಂದರದಂತೆ ನ್ಯಾಯಾರದ ಚಟುವಟಿಕೆಗಳ ಸಂಭ್ರಮ ಕಾಣಿಸುತ್ತಿಲ್ಲವೆನ್ನುವುದೂ ನಿಜ. ಆದರೆ ಇದೊಂದೇ ಮಲ್ಪೆಯ ಹಿಕ್ಕನ್ನು ನಿರಾಕರಿಸುವುದಕ್ಕೆ ಯೋಗ್ಯ ಕಾರಣವಾಗಲಾರದು. ಮುಂಬಯಿ ಬಂದರವನ್ನೇ ನೋಡಿರಿ—ಅದು ಐವತ್ತು ವರ್ಷಗಳ ಹಿಂದೆ ಹೇಗಿತ್ತು? ಅದಕ್ಕೂ ಹಿಂದಿನ ಐವತ್ತು ವರ್ಷಗಳಲ್ಲಿ ಹೇಗಿತ್ತು? ವಿಮಾನುಗಾರರ ಪುಟ್ಟ ಕೇಂದ್ರವಾಗಿದ್ದಂತಹ ನುಂಬಯಿಯ ಬಂದರದ, ಮತ್ತು ಬಂದರ ರಚನೆಯ ಹಿಂದೆಯೇ ಪ್ರಾಬಲ್ಯಕ್ಕೆ ಬರುವ ವ್ಯಾಪಾರದ ದೆಸೆಯಿಂದ, ಭಾರತದ ಹೆಬ್ಬಾಗಿಲೆ ನಿಸಿಕೊಂಡಿದೆ ಆದುದರಿಂದ ಮಲ್ಪೆಯು ಇಂದು ವಿಮಾನುಗಾರರ ಹಳ್ಳಿಯಾಗಿದೆಎಂಬ ಕಾರಣಕ್ಕಾಗಿ ಆದರ ನಿಸರ್ಗ ಸಹಜವಾದ ಅನುಕೂಲತೆಗಳನ್ನು ಕಡೆಗಣಿಸಿ ಮಂಗಳೂರಿನಲ್ಲಿ ಕೃತಕ ಧಕ್ಕೆಯನ್ನು ಕಟ್ಟಿಸುವುದಲ್ಲದೆ ಲಕ್ಷಾಂತರ ರೂಪಾಯಿಗಳ ಆವರ್ತ ವೆಚ್ಚವನ್ನು ಸಹ ಪ್ರತಿ ವರ್ಷ ಸಹಿಸುವುದಕ್ಕೆ ಅವಕಾಶ ಕೊಡುವುದು ಮೂರ್ಖತನ. ಗೋವೆಯ ಸಹಜ ಬಂದರದ ಉಪಯೋಗವು ಭಾರತೀಯರಿಗೆ ನಿಂತಂದಿನಿಂದ ಉತ್ತರ ಕನಾ೯ಟಕದ ವ್ಯಾಪಾರಸ್ಥರು ೩೦೦ ಮೈಲು ದೂರದ ಮುಂಬಯಿ ಬಂದರದ ಆಶ್ರಯವನ್ನು ಪಡೆಯಲು ಹಿಂಜರಿಯುತ್ತಿಲ್ಲವಾದರೆ, ಮಂಗಳೂರು ಮತ್ತು ಮಲ್ಪೆಗಳ ನಡುವಿನ ೩೬ ಮೈಲುಗಳ ಅಂತರವು ಯಾವುದೇ ರೀತಿಯಲ್ಲಿ ವ್ಯಾಪಾರಕ್ಕೆ ವ್ಯತ್ಯಯವನ್ನುಂಟು ಮಾಡಲಾರದು. ಸಹ್ಯ ಕರಾವಳಿಯ ಎಲ್ಲ ನದಿಗಳಗೂ ಬಲವಾದ ಸಂಕವನ್ನು ಈಗಾಗಲೇ ರಚಿಸಲಾಗುತ್ತಿದೆ; ಇವುಗಳಲ್ಲಿ ಲಾರಿಗಳೂ ಟ್ರಕ್ಕುಗಳೂ ಓಡಾಡತೊಡಗುವ ದಿನವು ಈಗಾಗಲೇ ನಮ್ಮ ಕಣ್ಣ ಮುಂದೆ ಕುಣಿಯುತ್ತಿದೆ. ಇದು ಮಂಗಳೂರು ಮತ್ತು ಉಡುಪಿಯ (ಮಲ್ಪೆ) ಅಂತರವನ್ನು ತೀರ ತಗ್ಗಿಸಲು ಸಹಾಯಕವಾಗುವುದರಲ್ಲಿ ಸಂದೇಹವೇ ಇಲ್ಲ. ಅಂತಿರುವಾಗ ಮಂಗಳೂರನ್ನು ರೈಲು ಮೂಲಕ ಉಡುಪಿ-ಮಲ್ಪೆಗಳಿಗೆ ಜೋಡಿಸಿದುದೇ ಆದರೆ ಒಂದೇ ದೊಡ್ಡ ನಗರದ ಎರಡು ಪ್ರಮುಖ ಕೇಂದ್ರಗಳಾಗಿ ಈಗಿನ ಇವೆರಡು ಪ್ರತಿಸ್ಪರ್ಧಿ ನಗರಗಳು ಹೆಸರಿಯಬಲ್ಲವು! ಮುಂಬಯಿ ನಗರದ ಈಗಿನ ಬೆಳವಣಿಗೆ ಮತ್ತು ವಿಸ್ತಾರಗಳನ್ನು ಕಣ್ಣಮುಂದಿಟ್ಟುಕೊಂಡ ಪಕ್ಷದಲ್ಲಿ ನಮ್ಮ ಮೇಲಿನ ಮಾತು ಅತಿಶಯೋಕ್ತಿ ಎಂದು ತೋರಲಾರದು. ಇವತ್ತಲ್ಲದಿದ್ದರೆ ಇನ್ನೈವತ್ತು ವರ್ಷಗಳ ಮೇಲಾದರೂ ಇಂತಹ ಸಂಭ್ರಮದ ವಾತಾವರಣ ಉಂಟಾದೀತು. ಈ ರೀತಿಯ ದೂರದರ್ಶಿತ್ವನೇ ಎಲ್ಲ ಯೋಜನಾಬದ್ಧ ಅಭಿವೃದ್ಧಿ ಕಾರ್ಯಕ್ರಮಗಳ ತಿರುಳು; ನಮ್ಮ ಸರಕಾರಿ ಧುರೀಣರಲ್ಲಿ ನಾವು ಇಂತಹ ಮುನ್ನೋಟವನ್ನು ಕಾಣುವ ಅಪೇಕ್ಷೆಯುಳ್ಳವರಾಗಿದ್ದೇನೆ. ಕಾಲಾಂತರದಲ್ಲಿ ಒಂದೇ ನಗರದ ಎರಡು ಮುಖಗಳಾಗಲಿರುವ ಮಲ್ಪೆ—ಮಂಗಳೂರುಗಳಲ್ಲಿ ಯಾವ ಸ್ಥಳವನ್ನು ಪ್ರಬುದ್ಧ ಬಂದರಕ್ಕೆ ಯೋಗ್ಯವಾದ ಧಕ್ಕೆ, ಮತ್ತು ಹಡಗುಗಳ ಆಗಮನ-ನಿರ್ಗಮನ ಮಾರ್ಗವಾಗಿ ಬೆಳೆಸಬೇಕು ಎಂಬುದೇ ಈಗ ನಿಜವಾಗಿ ನಮ್ಮ ಮುಂದಿರುವ ಸಮಸ್ಯೆ. ನಿರ್ವಿಕಾರಚಿತ್ತದಿಂದ ನೋಡಿದುದಾದಲ್ಲಿ, ಮಲ್ಪೆಯ ನೈಸರ್ಗಿಕ ಸೌಕರ್ಯಗಳ ಸದುಪಯೋಗವನ್ನು ಪಡೆದುಕೊಂಡು ಅಲ್ಲಿಯೇ ಹಡಗು ತಂಗುವಿಕೆಗೆ ಆಧುನಿಕ ಅನುಕೂಲತೆಗಳನ್ನು ಕಲ್ಪಿಸಿಕೊಡುವುದು ಶ್ರೇಯಸ್ಕರವೆಂದು ಕಾಣದಿರದು. ಹೀಗೆ ಮಾಡಿದರೆ ಈಗಾಗಲೇ ಸಾಕಷ್ಟು ವ್ಯಾಪಾರ ಚಟುವಟಿಕೆಯನ್ನು ಹೊಂದಿರುವ ಮಂಗಳೂರು ಯಾವ ದೃಷ್ಟಿಯಲ್ಲೂ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಳ್ಳದೆ, ತನ್ನ ಚಟುವಟಿಕೆಯ ಕ್ಷೇತ್ರವನ್ನು ವಿಸ್ತರಿಸಿಕೊಂಡಂತೆ ಆಗುತ್ತದೆ. ಇದನ್ನು ಬಿಟ್ಟು, ಕೃತಕ ವಿಧಾನಗಳನ್ನೆ ಮೆಟ್ಟಿಕೊಂಡು ಮಂಗಳೂರನೆ ಬಂದರ ಕಟ್ಟಿಸಲು ಪ್ರಶಸ್ತವಾದ ಸ್ಥಳವೆಂದು ಆರಿಸಿದರೆ ಪ್ರತಿ ವರ್ಷವೂ ಲಕ್ಷಾಂತರ ರೂಪಾಯಿಗಳು ಬಂದರದ ದುರಸ್ತಿಗೆ ಹೋಲಾಗುವುದಲ್ಲದೆ, ಮಂಗಳೂರು ನಗರದ ಉತ್ತರಕ್ಕೆರುವ ಉಡುಪಿ ಕಡೆಯ ಭಾಗವು ಕೆಚ್ಚಿನ ವ್ಯಾಪಾರಾ ಚಟುವಟಿಕೆಗಳಿಂದ ಕೂಡಿ ಅಭಿವೃದ್ಧಿಗೊಳ್ಳುವ ಸಂಭವವು ಮಲ್ಪೆಯ ಲ್ಲಿ ಬಂದರವಾದರೆ ಹೇಗೋ ಆದಕ್ಕಿಂತು ತುಂಬ ವಿರಳವಾಗುವ ಭಯವಿದೆ. ಕರ್ನಾಟಕದಲ್ಲಿ ಎಲ್ಲೆಡೆಯಲ್ಲೂ ಉದ್ಯಮಶೀಲತೆಯು ವ್ಯಕ್ತವಾಗಬೇಕೆಂದೂ ನಾಡಿನ ಮೂಲೆ ಮೂಲೆಯೂ ಸಮೃದ್ಧಗೊಳ್ಳಬೇಕೆಂದೂ ನಾವೆಲ್ಲ ಒತ್ತಾಯಿಸುತ್ತಿರುವಾಗ, ಮಂಗಳೂರಿನಲ್ಲಿ ಕೃತಕ ಬಂದರಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಅನಾವಶ್ಯಕವಾಗಿ ವ್ಯಯಿಸುವ ಮೂರ್ಖತನವನ್ನೆಲ್ಲದೆ, ಮಲ್ಪೆಯಿಂದ ಹಿಡಿದು ಮಂಗಳ್ಯೆಯ ವರೆಗಿನ ಪ್ರದೇಶದ ಸಾರ್ವಾಂಗಿಕ ಅಭಿವೃದ್ಧಿಯ ಅವಕಾಶವನ್ನೂ ಕಳೆದುಕೊಳ್ಳುವ ಅಪಡ್ಡೆಗೆ ಗುರಿಯಾದುದಾದರೆ ಇದಕ್ಕೆ ಕಾರಣವಾದ ನಿರ್ಣಯವನ್ನು ದೂರದರ್ಶಿ ನಿರ್ಧಾರವೆಂದು ಹೇಳುವುದಕ್ಕೆ ಸಾಧ್ಯನೇ ಇಲ್ಲ. ಮಂಗಳೂರು ಈಗಾಗಲೇ ಬೆಳೆದು ಬಂದಿರುವುದರಿಂದ ಅದು ತನ್ನ ಸ್ಥಾನಮಾನವನ್ನು ಕಳೆದುಕೊಳ್ಳದೆಯೇ ನೆರೆಯ ಇನ್ನೊಂದು ಭಾಗದ ಅಭಿವೃದ್ಧಿಗೆ ಆಸ್ಪದ ಮಾಡಿಕೊಡುವ ಸ್ಥಿತಿಯಲ್ಲಿ ಈಗ ಇದೆ. ಬಂದರದ ರಚನೆಯು ಪ್ರಶ್ನೆಯನ್ನು ಈ ದೃಷ್ಟಿಯಿಂದ ಧುರೀಣರು ಪುನರ್ವಿಮರ್ಶಿಸಿಕೊಳ್ಳಬೇಕಾಗಿದೆ. ಒಂದೇ ನಗರದ ಎರಡು ಪ್ರಮುಖ ಕೇಂದ್ರಗಳಾಗುವ ಸಾಧ್ಯತೆಯ ವಿಚಾರವನ್ನು ನಾವು ಮೊದಲು ಪ್ರಸ್ತಾಪಿಸಿದ್ದೇವೆ, ನಿಜ. ಆದರೆ ಅದು ಮಲ್ಪೆಯಲ್ಲಿ ಧಕ್ಕೆ ಮತ್ತು ಹಡಗು ತಂಗುವಿಕೆಯ ಸೌಕರ್ಯಗಳ ಮೇಲೆ ಹೆಚ್ಚಾಗಿ ಹೊಂದಿಕೊಂಡಿದೆ; ಮಲ್ಪೆಯನ್ನು ಕಡೆಗಣಿಸಿ ಮಂಗಳೂರನ್ನೆ ಎತ್ತಿ ಹಿಡಿದರೆ, ಸುರತ್ಕಲ್ಲನ್ನು ದಾಟಿ ಮುಲ್ಕಿಯವರೆಗಲ್ಲದೆ, ಅದರಿಂದೀಚೆಗೆ ಮಂಗಳೂರಿನ ಬಂದರದ ಚಟುವಟಿಕೆ ವ್ಯಾಪಿಸದು. ಬಂದರದ ಚಟುವಟಿಕೆ ಹೆಚ್ಚಲು ಆತ್ಯಗತ್ಯವಾದ ಉಡುಪಿ—ಮಂಗಳೂರು, ಮಲ್ಪೆ—ಭದ್ರಾವತಿಯಂತಹ ರೈಲ್ವೆ ಮಾರ್ಗಗಳ ರಚನೆಯು ವಿಸಯವೂ ಕಾರ್ಯಗತವಾಗಲಾರದು. ಇಂತಾದರೆ ಪುಣ್ಯಾಮ ಗೊತ್ತಿದ್ದಪ್ಪೆ: ಫಲವನ

ಪಂಚಶೀಲ

ಲೋಕ ಶಾಂತಿಯ ಸಂಕೇತ

"ಫೆಸ್ಟಣೆ ಈಗ ಇರುವ ಕಡೆ ಮಿಲಿಟರಿ ಒಪ್ಪಂದಗಳಿಂದಾಗಲೀ, ಬಲಾಬಲಗಳನ್ನು ಸರಿಹೊಂದಿಸುವುದರಿಂದಾಗಲೀ, ಬಿಕ್ಕಟ್ಟನ್ನು ಸಡಲಿಸಿ, ಶಾಂತಿ ಹಾಗೂ ತಾಟಸ್ಥ್ಯವನ್ನು ಪುನಃ ಸ್ಥಾಪಿಸಲು ಸಾಧ್ಯವಿಲ್ಲ.

ಈಗ ವಿಶ್ವ ವಿಚ್ಛಿತ್ತಿನಾಗಿರುವ ಸಂಚಶೀಲ ತತ್ವಗಳನ್ನು ಅಂಗೀಕರಿಸಿ ಅನುಸರಿಸುವುದರಿಂದ ಮಾತ್ರವೇ ಅಂತರ ರಾಷ್ಟ್ರೀಯ ಶಾಂತಿ ಮತ್ತು ತಾಟಸ್ಥ್ಯದಲ್ಲಿ ಕೊಸಶಕ ಆರಂಭವಾಗುವುದೆಂದು ನಮ್ಮ ಅಭಿಪ್ರಾಯ; ನಮ್ಮ ಪ್ರತಿಯೊಂದು ಹೊಸ ಅನುಭವವೂ ಈ ಅಭಿಪ್ರಾಯವನ್ನೇ ದೃಢಗೊಳಿಸುತ್ತಿದೆ." —

—ಜನವರಿ ಲಾಲ್ ನೆಹರು.

ಇತ್ತೀಚಿನ ತಿಂಗಳುಗಳಲ್ಲಿ, ಈಜಿಪ್ಟ್ ಮತ್ತು ಹಂಗೇರಿಯಲ್ಲಿ ಏರ್ಪಟ್ಟ ಎರಡು ಬಿಕ್ಕಟ್ಟುಗಳು ವಿಶ್ವದ ಗಮನವನ್ನು ಪಂಚಶೀಲ ವಿಶ್ವಶಾಂತಿ ಸಂದೇಶದ ಕಡೆಗೆ ಸೆಳೆದಿವೆ. ಈ ಸಂದೇಶವು ವಿಶ್ವದ ಎಲ್ಲಾ ಮನುಷ್ಯ ಸ್ವಭಾವಗಳಲ್ಲಿಯೂ ವಾಂಛಿತವಾಗಿ, ಎರಡು ವರ್ಷದ ಹಿಂದೆ ಆದರ ಕಡೆಗಿದ್ದ ಗಮನಕ್ಕಿಂತ ಹೆಚ್ಚಿನ ಗಮನವನ್ನು ಈಗ ಅದು ಸೆಳೆಯುತ್ತಿದೆ.

ಈ ಫಲ ಸಮುಚ್ಚಯವು ಪ್ರಥಮತಃ 1940ರಲ್ಲಿ, ಡಾ॥ ಸುಕರ್ಣೋರವರು (ಈಗ ಇಂಡೋನೇಷಿಯಾ ರಿಪಬ್ಲಿಕ್‌ನ ಅಧ್ಯಕ್ಷರು) ರಾಜಕೀಯ ಬಲಯದಲ್ಲಿ ಅವನ್ನು ಬೆಳಕಿಗೆ ತಂದರು. ಸ್ವತಂತ್ರ ಇಂಡೋನೇಷಿಯಾವನ್ನು ಅವೇ ತತ್ವಗಳ ತಳಹದಿಯ ಮೇಲೆ ಸ್ಥಾಪಿಸಬೇಕೆಂದು ಅವರು ಘೋಷಿಸಿದರು. 1954ರ ಎಪ್ರಿಲ್‌ನಲ್ಲಿ ಟಿಬೆಟ್ಟಿನ ಮೇಲೆ ಚೀನಾ ಭಾರತ ಒಪ್ಪಂದಕ್ಕೆ ನೆಹರು ಮತ್ತು ಚೌ ಎನ್-ಲೈ ಸಹಿ ಹಾಕಿದಾಗ ಅದರಲ್ಲಿ ಪಂಚಶೀಲ ತತ್ವಗಳು ಅಡಕವಾಗಿದ್ದವು. ಅಂದಿನಿಂದ ಈ ತತ್ವಗಳು ಅಂತರ ರಾಷ್ಟ್ರೀಯ ಮಹತ್ವವನ್ನು ಪಡೆದುಕೊಂಡಿವೆ.

ಈ ತತ್ವಗಳು ಅಂತರ ರಾಷ್ಟ್ರೀಯ ಸಂಬಂಧಗಳಲ್ಲಿ ಅನುಸರಿಸಲ್ಪಡಬೇಕಾದ ಮಾರ್ಗದರ್ಶಿ ಸೂತ್ರಗಳಾಗಿವೆ. ಅವು ಹೀಗಿವೆ:

1. ಪರಸ್ಪರ ಪ್ರಾದೇಶಿಕ ಸಮಗ್ರತೆ ಮತ್ತು ಸಾರ್ವಭೌಮತ್ವಗಳಿಗೆ ಗೌರವ.
2. ಪರಸ್ಪರ ಅನಾಕ್ರಮಣ.
3. ಪರಸ್ಪರ ಆಂತರಿಕ ವ್ಯವಹಾರಗಳಲ್ಲಿ ಅನಧಿಕೃತ ಹಸ್ತಕ್ಷೇಪ ಮಾಡದಿರುವುದು.
4. ಸಮಾನತೆ ಮತ್ತು ಪರಸ್ಪರ ಲಾಭ.
5. ಶಾಂತಿಯುತ ಸಹಬಾಳ್ವೆ.

ಈ ತತ್ವಗಳು ಅಂತರ ರಾಷ್ಟ್ರೀಯ ಸಂಬಂಧಗಳಲ್ಲಿ ಅನುಸರಿಸಲ್ಪಡಬೇಕಾದ ಮಾರ್ಗದರ್ಶಿ ಸೂತ್ರಗಳಾಗಿವೆ. ಅವು ಹೀಗಿವೆ:

1. ಪರಸ್ಪರ ಪ್ರಾದೇಶಿಕ ಸಮಗ್ರತೆ ಮತ್ತು ಸಾರ್ವಭೌಮತ್ವಗಳಿಗೆ ಗೌರವ.
2. ಪರಸ್ಪರ ಅನಾಕ್ರಮಣ.
3. ಪರಸ್ಪರ ಆಂತರಿಕ ವ್ಯವಹಾರಗಳಲ್ಲಿ ಅನಧಿಕೃತ ಹಸ್ತಕ್ಷೇಪ ಮಾಡದಿರುವುದು.
4. ಸಮಾನತೆ ಮತ್ತು ಪರಸ್ಪರ ಲಾಭ.
5. ಶಾಂತಿಯುತ ಸಹಬಾಳ್ವೆ.

ಈ ತತ್ವಗಳು ಅಂತರ ರಾಷ್ಟ್ರೀಯ ಸಂಬಂಧಗಳಲ್ಲಿ ಅನುಸರಿಸಲ್ಪಡಬೇಕಾದ ಮಾರ್ಗದರ್ಶಿ ಸೂತ್ರಗಳಾಗಿವೆ. ಅವು ಹೀಗಿವೆ:

1. ಪರಸ್ಪರ ಪ್ರಾದೇಶಿಕ ಸಮಗ್ರತೆ ಮತ್ತು ಸಾರ್ವಭೌಮತ್ವಗಳಿಗೆ ಗೌರವ.
2. ಪರಸ್ಪರ ಅನಾಕ್ರಮಣ.
3. ಪರಸ್ಪರ ಆಂತರಿಕ ವ್ಯವಹಾರಗಳಲ್ಲಿ ಅನಧಿಕೃತ ಹಸ್ತಕ್ಷೇಪ ಮಾಡದಿರುವುದು.
4. ಸಮಾನತೆ ಮತ್ತು ಪರಸ್ಪರ ಲಾಭ.
5. ಶಾಂತಿಯುತ ಸಹಬಾಳ್ವೆ.

ತ್ತಾದ ಪ್ರದೇಶವೊಂದು ತಕ್ಕ ಪ್ರೋತ್ಸಾಹವಿಲ್ಲದೆ, ಅಭಿವೃದ್ಧಿಗೆ ಅವಕಾಶವಿಲ್ಲದೆ, ಹಿಂದುಳಿಯುತ್ತದೆ. ಇಂತಹ ಅಪಾಯಕ್ಕೆ ಧುರೀಣರು ಆಸ್ಪದ ಕೊಡಬಾರದೆಂಬುದೇ ನಮ್ಮ ವಿನಂತಿಯಾಗಿದೆ. ಮಂಗಳೂರು ತನ್ನೂರ ದೊಡ್ಡದಾಗಿ, ಉಳಿದ ಪ್ರದೇಶವೂ ದೊಡ್ಡದಾಗುವ ಉದಾತ್ತ ಧ್ಯೇಯವನ್ನಿಟ್ಟುಕೊಳ್ಳಬೇಕೆಂದು ಸಹ ನಾವು ಹೇಳಲು ಇಚ್ಛಿಸುತ್ತೇವೆ. ಶಾಸನಾಂಗದ ಸದಸ್ಯರಾದ ಶ್ರೀ ಬಿ. ಎ. ಸೈಗಳು ಮುಂಗಡ ಪತ್ರದ ಮೇಲಿನ ತಮ್ಮ ಭಾಷಣದಲ್ಲಿ ಹೇಳಿರುವಂತೆ ನಮ್ಮಲ್ಲಿ ಅಭಿವೃದ್ಧಿಹೊಂದಿದ ಪ್ರದೇಶಗಳಿಗಿಲ್ಲದ ಧಾರಾಳ್ಯತೆಯನ್ನು ತಗ್ಗಿಸಲೆ ಉಳಿದ ಪ್ರದೇಶಗಳೂ ಅಷ್ಟೇ ಅಭಿವೃದ್ಧಿಯನ್ನಾದರೂ ಹೊಂದುವಂತೆ ಮಾಡುವುದು ನಮ್ಮ ಆದರ್ಶ ವಿಧಾನವಾಗಿರಬೇಕು. ಮಲ್ಪೆಯಲ್ಲಿ ಧಕ್ಕೆ ಮತ್ತಿತರ ಬಂದರದ ಅನುಕೂಲತೆಗಳನ್ನು ಕಲ್ಪಿಸಿ ಕೊಡಬೇಕೆಂಬ ಆಗ್ರಹದ ಕೇಳಿಕೆಯು ಇಂತಹ ಉದಾತ್ತ ಬುದ್ಧಿಯಿಂದ ಪ್ರೇರಿತವಾಗಿದೆಯೆಂಬುದು ಸ್ಪಷ್ಟ.

ಅಂತರರಾಷ್ಟ್ರೀಯ ನಿಯಮವೆಂದಿಸಿದ ಪ್ರಸಿದ್ಧ 5 ತತ್ವಗಳನ್ನು ಅದು ವಿಧಿಸುತ್ತವೆ. ಅವುಗಳಾವುವೆಂದರೆ! (1) ಪರಸ್ಪರ ಪ್ರಾದೇಶಿಕ ಸಮಗ್ರತೆ ಮತ್ತು ಪ್ರಭುತ್ವದ ಭಗೆಗೆ ಪರಸ್ಪರ ಗೌರವ (2) ಅನಾಕ್ರಮಣ ಶೀಲತೆ; (3) ಪರಸ್ಪರ ಒಳಾಡಳಿತ ವಿಷಯಗಳಲ್ಲಿ ಪ್ರವೇಶಿಸದಿರುವುದು. (4) ಸಮಾನತೆ ಹಾಗೂ ಪರಸ್ಪರ ಉಪಯುಕ್ತತೆ ಮತ್ತು (5) ಶಾಂತಿಯುತ ಸಹಬಾಳ್ವೆ.

'ಪಂಚ' ಎಂಬುದು ಸಂಸ್ಕೃತ ಪದ ಅದರ ಅರ್ಥ 'ಐದು' ಎಂದು 'ಶೀಲ' ಎಂದರೆ ಹವ್ಯಾಸ, ರೂಢಿ, ಜೀವನ ಅಥವಾ ನಡತೆಯಲ್ಲಿ ಅನುಸರಿಸುವ ಹಾದಿ, ನೈತಿಕ ನಡವಳಿಕೆ ಮತ್ತು ಪಂಚಶೀಲವೆಂದರೆ, ಕಟ್ಟುನಿಟ್ಟು ಐದು ತತ್ವಗಳು ಅಥವಾ 'ನಡವಳಿಕೆಯ ನಿಯಮಗಳು' ಎಂದರ್ಥವಾಗುವುದು. ಭಾರತದ ಪ್ರಧಾನಿ ಮಂತ್ರಿಗಳಾದ ಶ್ರೀ. ಜವಾಹರಲಾಲ್ ನೆಹರೂರವರು, ಅಧುನಿಕ ಅರ್ಥದಲ್ಲಿ ಅವುಗಳನ್ನು ಉಪಯೋಗಿಸಿರುವರು; ಅದಲ್ಲಿ ಎರಡು ದೃಷ್ಟಿಯಿದೆ. ಪಂಚಶೀಲವು ಒಂದು ಕಡೆ ಅಂತರರಾಷ್ಟ್ರೀಯ ಶಾಂತಿ ಮತ್ತು ಸೌಹಾರ್ದವನ್ನು ಅಚ್ಚಳಿಯದಂತೆ ಇರಿಸುವ ನಿಯಮಗಳೂ ಆಗಿದೆ, ಇನ್ನೊಂದು ಕಡೆ ಒಳದೇಶದ ಸಮಸ್ಯೆಗಳಿಗೆ ಅನ್ವಯಿಸಬಹುದಾದ ನಡವಳಿಕೆಗಳ ನಿಯಮಗಳೂ ಆಗಿವೆ.

ಬೆಬೆಟನ ಮೇಲೆ ಚೀನಾ-ಭಾರತ ಒಪ್ಪಂದವಾದ ಮೇಲೆ, ಪಂಚಶೀಲವು ಬಹು ದೂರ ಪ್ರಸಾರವಾಗಿದೆ. ಅಧಿಕ ಸಂಖ್ಯೆಯಲ್ಲಿ ರಾಷ್ಟ್ರಗಳು ಈ ಪಂಚಶೀಲ ತತ್ವಗಳನ್ನು ಅನುಷ್ಠಾನಕ್ಕೆ ತರುತ್ತಿವೆ ಅಥವಾ ಅನುಸರಿಸುತ್ತಿವೆ.

ಈ ಒಪ್ಪಂದವಾದ ಒಂದು ವರ್ಷದೊಳಗಾಗಿ, ಭಾರತ ಚೀನಾಗಳಲ್ಲದೆ, ನೇಪಾಳ, ಬರ್ಮಾ, ಲಾವೋಸ್, ಕಾಂಬೋಡಿಯಾ, ವಿಯೆಟ್‌ನಾಂ ಮತ್ತು ಯುಗೋಸ್ಲಾವಿಯಾಗಳು ಪಂಚಶೀಲ ತತ್ವಗಳನ್ನು ಪುರಸ್ಕರಿಸಿವೆ 1955ರ ಏಪ್ರಿಲ್ ನಲ್ಲಿ ನಡೆದ ಬಾಂಡುಂಗ್ ಪರಿಷತ್ತಿನಲ್ಲಿ ವಿಶ್ವದ ಒಟ್ಟು ಸಂಖ್ಯೆಯ 3/5 ಭಾಗದಿಂದ ಏಷ್ಯಾ ಮತ್ತು ಆಫ್ರಿಕಾಗಳ 29 ರಾಷ್ಟ್ರಗಳು ಇನ್ನೂ 5 ತತ್ವಗಳನ್ನು ಸೇರಿಸಿ ವಿಶ್ವದ ಪಂಚಶೀಲ ತತ್ವಗಳನ್ನು ಘೋಷಿಸಲಾಯಿತು, ಅದಾದ ನಂತರ ಸಾದಿ ಅರೇಬಿಯಾದ ದೊರೆ ಮತ್ತು ಇಥಿಯೋಪಿಯಾದ ಚಕ್ರವರ್ತಿಯವರು ಭಾರತದ ಪ್ರಧಾನ ಮಂತ್ರಿಗಳೊಂದಿಗೆ ಸಂಯುಕ್ತ ಘೋಷಣೆಯೊಂದನ್ನು ಹೊರಡಿಸಿ ಪಂಚಶೀಲಕ್ಕೆ ಮತ್ತನ್ನು ಇಂಬುಗೊಟ್ಟರು.

1955ರ ಜೂನ್ 3ರಲ್ಲಿ ಮಾರ್ಷಲ್ ಬುಲ್ಗಾನಿನ್ ಮತ್ತು ಭಾರತದ ಪ್ರಧಾನ ಮಂತ್ರಿಗಳು ಕೊಟ್ಟ ಸಂಯುಕ್ತ ಹೇಳಿಕೆಯಲ್ಲಿ, ಮೂರನೆಯ ತತ್ವವನ್ನು ಹೆಚ್ಚು ವಿಸ್ತರಿಸಲಾಗಿದೆ. ಆಗ ಅದು "ಪರಸ್ಪರ ರಾಷ್ಟ್ರಗಳು ಒಳಾಡಳಿತ ವಿಷಯಗಳಲ್ಲಿ ಆರ್ಥಿಕ, ರಾಜಕೀಯ ಅಥವಾ ಇನ್ನಾವುದೇ ಕಾರಣಗಳಿಂದಾಗಿ ಪ್ರವೇಶಿಸಕೂಡದು."

1955ರ ಜೂನ್ 27ರಲ್ಲಿ ಭಾರತದ ಪ್ರಧಾನ ಮಂತ್ರಿಗಳು ಮತ್ತು ಸೋವಿಂಡಿನ ಪ್ರಧಾನ ಮಂತ್ರಿಗಳು ಸಂಯುಕ್ತ ಹೇಳಿಕೆಯೊಂದನ್ನು ಕೊಡುವುದರ ಮೂಲಕ ವಿಸ್ತೃತ ಪಂಚಶೀಲ ತತ್ವವನ್ನು ಸೋವಿಂಡ್ ಅಂಗೀಕರಿಸಿದೆ.

ತರುವಾಯ ರಾಷ್ಟ್ರಗಳಿಂದಲೂ ಪಂಚಶೀಲಕ್ಕೆ ಬೆಂಬಲ ದೊರೆತಿದೆ. 1955ರ ಮಾರ್ಚ್ 19ರಂದು ಸರ್ ಅಂಥೋನಿ ಈಡನ್‌ರವರು ಭಾರತದ ಪಾರ್ಲಿಮೆಂಟಿನ ಸದ್ಯರನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ, ಇಂದಿನ ವಿಶ್ವದಲ್ಲಿ ಸಹ ಬಾಳ್ವೆಯ ಪಥವಲ್ಲಿ ಪಂಚಶೀಲ ತತ್ವಗಳ ಪಾತ್ರವನ್ನು ಶ್ಲಾಘಿಸಿರುವರು.

ಆಸ್ಟ್ರೇಲಿಯಾ ವಿದೇಶಾಂಗ ಶಾಖೆಯ ಮಂತ್ರಿಗಳಾದ ಮಿಃ ಕೇಸಿಯವರು 1955ರ ಅಕ್ಟೋಬರ್ ತಿಂಗಳು ಪಂಚಶೀಲವನ್ನು ಸ್ವಾಗತಿಸಿ, ಅದನ್ನು ಪೂರ್ಣ ನಂಬಿಕೆಯಿಂದ ಅನುಸರಿಸಬೇಕೆಂದು ತಿಳಿಸಿದರು. 1955ರ ಸಪ್ಟೆಂಬರ್ 27ರಂದು ಭಾರತ,ಅಮೇರಿಕ ಸೊಸೈಟಿಯನ್ನು ದ್ದೇಶಿಸಿ ಭಾಷಣಮಾಡುತ್ತಾ, ಭಾರತದಲ್ಲಿ ಅಮೇರಿಕದಾ ಬುಧಾರಿಗಳಾಗಿದ್ದ ವಿ. ಜಾನ್ ಪರ್ಕಿನ್ಸ್ ರವರು ಅಮೇರಿಕವು ಯಾವತ್ತೂ ಪಂಚಶೀಲ ತತ್ವಗಳನ್ನು ತತ್ವಶಃ ಪರಿಪಾಲಿಸುತ್ತಿರುವುದಾಗಿ ಹೇಳಿರು'

ಪಂಚಶೀಲ ಎಂಬ ಶಬ್ದ ಇತ್ತೀಚೆಗೆ ನಿವಾದುದು. ಈ ಹಿಂದೆ ಅವನ್ನು ವಿವಿಧ ಪ ಬಂಧಗಳಲ್ಲಿ ಬಳಸಲಾಗಿತ್ತು. ಜನರೆ ಪರಸ್ಪರ ಒಗೆಗೆ ಅನುಸರಿಸಲು ನಮ್ಮ ಹಿರಿಯರು ನಿರ್ಧರಿಸಿದ್ದ ಪಂಚ ಶೀಲಗಳ ಮಹತ್ವವನ್ನು ನಾವು ಬುದ್ಧ ಜಯಂತಿಯನ್ನು ಆಚರಿಸುವ ಸಂದರ್ಭದಲ್ಲಿ ನೆನಪಿಗೆ ತಂದುಕೊಂಡೆವು. ಆಗ ಅವರು ಸದ್ವರ್ತನೆ, ಸದ್ಗುಣ, ಉತ್ತಮ ಆಲೋಚನೆ ನೀತಿ—ಮತ್ತು ಅನುಕಂಪಗಳ ಮೌಲ್ಯವನ್ನು ಒತ್ತಿ ಹೇಳಿದ್ದರು. ಅದೇ ತತ್ವಗಳನ್ನು ನಾವು ಅಂತರ ವ್ಯಕ್ತಿ ವಿಷಯಗಳಲ್ಲಾಗಲಿ, ಅಂತರ ರಾಷ್ಟ್ರಗಳ ವಿಷಯದಲ್ಲಿಯಾಗಲಿ ಅನುಸರಿಸದೆ ಹೊರತು ಪರಸ್ಪರ ದೃಷ್ಟಿ, ಅನುಕಂಪ, ಪ್ರೇಮಗಳನ್ನು ಆರಿಯದೆ ಹೋರತು ಈ ಪಂಚತತ್ವಗಳಿಂದ ಹೆಚ್ಚು ಉಪಯೋಗವಾಗಲಾರದು.

ಈ 2½ ವರ್ಷಗಳ ಅಲ್ಪ ಕಾಲಾವಧಿಯಲ್ಲಿ ಪಂಚಶೀಲವು ಅಧಿಕ ಪ್ರಮಾಣದಲ್ಲಿ ಮನ್ನಣೆಯನ್ನು ಗಳಿಸಿದೆ. ವಿಶ್ವದ ಎಲ್ಲಾ ಭಾಗಗಳಲ್ಲಿಯೂ ಜನಸಾಮಾನ್ಯರು ಶಾಂತಿಗಾಗಿ ಪರಿತಪಿಸುತ್ತಿರುವರು, ಯುದ್ಧ ನಿಲ್ಲಲು ಪಂಚಶೀಲವಲ್ಲದೆ ಬೇರೆ ಮಾರ್ಗವಿಲ್ಲವೆಂಬುದನ್ನು ಜನಸಾಮಾನ್ಯರು ಅರಿತಿದ್ದಾರೆ. ಭಾರತದ ಪ್ರಧಾನ ಮಂತ್ರಿಗಳು ತಮ್ಮದೇ ಆದ ವಿಶಿಷ್ಟ ನೀತಿಯಲ್ಲಿ ಳೆಯಿರುವಂತೆ ಇಂದು ಜಲಜನಕ ಬಾಂಬ್ ಮತ್ತು ಪಂಚಶೀಲ ಇವುಗಳಿಂದರಲ್ಲಿ ಯಾವುದಾದರೊಂದನ್ನು ಆರಿಸಿಕೊಳ್ಳಬೇಕಾಗಿದೆ.

ಕೊಡಗು— ಕಳೆದ ತಾ. 22 ಮತ್ತು 23ರಲ್ಲಿ ಜರಗಿದ ಅಖಿಲ ಕೊಡಗು ಆಫ್ರೋಸಿಯಾ ಕೆರೆ ಸಮ್ಮೇಳನದ ಅಂಗವಾಗಿ ಏರ್ಪಡಿಸಲಾದ "ಕನ್ನಡ ನಾಡಿನ ವಿವಿಧ ಪತ್ರಿಕೆಗಳ ಪ್ರದರ್ಶನ"ವನ್ನು ಮೈಸೂರಿನ ಫಿಲೋಮಿನಾ ಕಾಲೇಜಿನ ಪ್ರಿನ್ಸಿಪಾಲ್ ರೆ| ಫಾ| ಆಡಿಯೋರವರು ಉದ್ಘಾಟಿಸಿದರು. ಶ್ರೀ ಶ್ರೀಪತಿರಾವ್ ಫಲಿಮಾರ್ಕರರು ಆರಂಭವಲ್ಲಿ ಪ್ರದರ್ಶನದ ಉದ್ದೇಶಗಳನ್ನು ವಿವರಿಸಿ ಕೊನೆಯಲ್ಲಿ ಸಭಾ ಕಂಡಿಸಿದ ಸರ್ವರಿಗೂ ಕೃತಜ್ಞತೆಯನ್ನು ಸೂಚಿಸಿದರು.

ಅಮೇರಿಕದ ಪ್ರಸಿದ್ಧ ವಿಜ್ಞಾನಿ, ಹಾರ್ವರ್ಡ್ ವಿಶ್ವವಿದ್ಯಾಲಯದ ಕುಲಪತಿ
ಡಾ. ಜೇಮ್ಸ್ ಬಿ. ಕೊನೇಂಟರ



ಆಧುನಿಕ ವಿಜ್ಞಾನವು ಮನುಷ್ಯ ಜೀವನದ ಮೇಲೆ ಉಂಟುಮಾಡಿರುವ ಕ್ರಾಂತಿಕಾರಕ ಪರಿಣಾಮಗಳನ್ನು ಸರಿತೂಗಿಸಿ ವಾಣಿಜ್ಯ, ಸರಕಾರ, ನೀತಿ, ಧರ್ಮ ಮುಂತಾದ ಬದುಕಿನ ವಿವಿಧ ರಂಗಗಳಲ್ಲಿ ವಿಜ್ಞಾನವು ಬೀರಿರುವ ಪ್ರಭಾವವನ್ನು ಡಾ. ಕೊನೇಂಟ್ ಇಲ್ಲಿ ತಮ್ಮ ಸರಳ ಮತ್ತು ಓಜಸ್ಸಿನ ಶೈಲಿಯಲ್ಲಿ ಬಣ್ಣಿಸಿದ್ದಾರೆ. ಇಂದಿನ ವಿಜ್ಞಾನಿಯು ಕೇವಲ ಒಬ್ಬ ಕಲ್ಪನಾಪ್ರಿಯ ತಾತ್ವಿಕನಲ್ಲ, ವಿಶ್ವದ ಗೌಪ್ಯವನ್ನು ತೆರೆದು ತೋರಿಸಬಲ್ಲ ಮಂತ್ರವಾದಿಯೂ ಆಗಿದ್ದಾನೆ. ಆತನು ಇತರ ವ್ಯಾಪಾರಿಕ ಕ್ಷೇತ್ರಗಳಲ್ಲಿ ದುಡಿಯುವ ಜನರಷ್ಟೇ ಪ್ರಾತಾಣಿಕನಾಗಿಯೂ ಕಷ್ಟಸಹಿಷ್ಣುವಾಗಿಯೂ ದುಡಿಯಬೇಕಾದ ವ್ಯವಹಾರಜ್ಞ. ತತ್ವಶಾಸ್ತ್ರ ಮತ್ತು ಮತವಿಚಾರಗಳಲ್ಲಿರುವ ಶಂಕೆ, ಮತ್ತು ನ್ಯೂನತೆ ಇಂದಿನ ವಿಜ್ಞಾನಿಯನ್ನೂ ಆವರಿಸಿವೆ. ಇಂದಿನ ಪ್ರಪಂಚದಲ್ಲಿ ವಿಜ್ಞಾನದ ಪಾತ್ರವೇನೆಂದು ವಿಮರ್ಶಿಸುವ ಗ್ರಂಥಗಳಲ್ಲಿ ಡಾ. ಕೊನೇಂಟರ ಈ ಗ್ರಂಥವಸ್ಸು ವಿಚಾರ ಪ್ರಚೋದಕವಾಗಿದೆ ಎಂಬುದು ಬೇರೊಂದಿಲ್ಲ.

ಇದನ್ನು ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜಿನಲ್ಲಿ ಭೌತ ಶಾಸ್ತ್ರದ ಪ್ರಾಧ್ಯಾಪಕರಾದ ಬುಡುಪಿ ಲಕ್ಷ್ಮೀನಾರಾಯಣಾಚಾರ್ಯ ಎಂ. ಎ., ಎಲ್. ಟಿ. ಅವರು ಅನುವಾದಿಸಿವ್ವಾರೆ. ಅವರು ಕನ್ನಡದಲ್ಲಿ ಹಲವು ವೈಜ್ಞಾನಿಕ ವಿಷಯದ ಲೇಖನಗಳನ್ನು ಬರೆದಿವ್ವಾರೆ. ಅವರು ಅನುವಾದಿಸಿದ (ಶ್ರೀ ಕು. ಶಿ. ಹರಿದಾಸ ಭಟ್ಟರೊಡನೆ) ಡಾ. ಕರೆಲರ 'ಅವ್ಯಕ್ತ ಮಾನವ' (Man, the Unknown) ಕನ್ನಡದಲ್ಲಿ ವಿಶೇಷ ಮನ್ನಣೆ ಗಳನ್ನು ಪಡೆದಿದೆ.

ಪ್ರಸ್ತುತ ಅನುವಾದದಲ್ಲಿ ಶ್ರೀಯುತರ ಗಂಭೀರ ಆದರೂ ಸರಳ ಮತ್ತು ವೈಜ್ಞಾನಿಕ ಶೈಲಿಯ ಪರಿಚಯವನ್ನು ಪಡಬಿಕೊಳ್ಳಬಹುದು.

ಉತ್ತಮ ಕಾಗದದಲ್ಲಿ ಏಚ್ಚಾಗಿರುವ ಈ ಪುಸ್ತಕದ ಬೆಲೆ ಬರೇ ರೂ.1-8-0 ಮಾತ್ರ

ಪ್ರತಿಗಳಿಗೆ ಬರೆಯಿರಿ:—

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.

ಉಡುಪಿ

ಲೋಕಲ್ ಕೋಪರೇಟಿವ್ ಯೂನಿಯನ್ ಮಹಾ ಸಭೆಯು— ತಾ. 26ರಲ್ಲು ನಡೆಲ್ ಶ್ರೀ ಪಿ. ವಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಯೂನಿಯನ್ನಿನ ಮಾಜಿ ಅಧ್ಯಕ್ಷ ಶ್ರೀ ಕೆ. ಜೆ. ಬಲ್ಲಾಳರ ಆಕಾಲ ನಿಧನದ ಬಗ್ಗೆ ಸಂತಾಪಸೂಚಕ ನಿರ್ಣಯ ಸಮಾರಂಭದಲ್ಲಿ ಮಂಜೂರಾಯಿತು. ಬಳಿಕ ಯೂನಿಯನ್ ಕಾರ್ಯದರ್ಶಿ ಶ್ರೀ ಪಿ. ಶಿತಲ ಸೆಟ್ಟಿಯವರು ಯೂನಿಯನ್ನಿನ ಗತವರ್ಷದ ರಿಪೋರ್ಟನ್ನು ಓದಿದರು. ಶ್ರೀ ಕುರ್ಕಾಲ ಗಣಪಯ್ಯ ಸೆಟ್ಟಿಯವರ ಸೂಚನೆ, ಶ್ರೀ ಜಿ. ಶಿವರಾಯರ ಅನುಮೋದನೆಗಳಾಗಿ ಶ್ರೀ ಪಿ. ವಿ. ಆಚಾರ್ಯರು ಸರ್ವಾನುಮತಿಂದ ಡಿ. ಕೆ. ಸೆಂಟ್ರಲ್ ಕೋಪರೇಟಿವ್ ಬ್ಯಾಂಕಿನ ಡೈರೆಕ್ಟರರ ಪಂಥಕ್ಕೆ ಈ ಯೂನಿಯನ್ ಪ್ರತಿನಿಧಿಯಾಗಿ ಆರಿಸಲ್ಪಟ್ಟರು.

ಮುನಿಸಿಪಲ್ ಕೌನ್ಸಿಲು ಸಭೆಯು— ಕಳೆದ ತಾ. 29ರಲ್ಲು ವೈಸ್ ಚೇರ್‌ಮೇನ್ ಶ್ರೀ ಪಿ. ವಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಕೌನ್ಸಿಲಿನ ಪತ್ರ ವ್ಯವಹಾರಗಳು ತೆರಿಗೆದಾರರಿಗೆ ಕನ್ನಡದಲ್ಲಿರಬೇಕೆಂಬ ಆಗ್ರಹವು ಸಂಬಂಧಿಸಿದಂತೆ ಶ್ರೀ ವಿ. ವಾಸುದೇವ ರಾಯರ ನಿರ್ಣಯವು ಸಂಜೂರಾಯಿತು. ಕಛ್ಚಾಡ ರಸ್ತೆಗೆ ವಿದೇರಿ ಬಗ್ಗೆ, ಕೊಡಬೇಕಾದ ಪ್ಲಾನುಗಳು ಕೌನ್ಸಿಲಿನ ನಿಯಮಗಳಿಗೆ ಸರಿಹೋಲುವಂತಹ ರೀತಿಯಲ್ಲಿ ಯಾರು ಮಾಡಿಕೊಟ್ಟರೂ ಅವುಗಳನ್ನು ಕಮಿಶನರರು ಮುನ್ಸಿಪಲ್ ಕೌನ್ಸಿಲಿನ ಶ್ರೀ ಬಿ. ವಾಸುದೇವ ರಾಯರ ಇನ್ನೊಂದು ನಿರ್ಣಯ ಡಾ. ಪಿ. ಜಿ. ಆಚಾರ್ಯರ ಸೂಚನೆಯಂತೆ ಎರಡು ತಿಂಗಳು ಹಿಂದೆ ಹಾಕಲ್ಪಟ್ಟಿತು. ಈ ಅವಧಿಯಲ್ಲಿ ಬೆಂಗಳೂರು ಕೌನ್ಸಿಲಿನ ಲ್ಯಾಸೆನ್ಸು ನಿಯಮಗಳಲ್ಲಿ ಹೆಚ್ಚು ಕಡಿಮೆ ಮಾಡುವ ಕುರಿತು ಪರಿಶೀಲಿಸಬೇಕೆಂದು ತೀರ್ಮಾನಿಸಲಾಯಿತು.

ಅಜ್ಜರಕಾಡು ಗಾಂಧಿ ಮೈದಾನದಲ್ಲಿ ಹೊರ ತಸೇವಕ ಸಮಾಜದ ಕಡೆಯಿಂದ ಕಟ್ಟಲಾಗುವ ಎಮ್. ವಿಠಲ ಕಾಮತ್ ಮೆಮೋರಿಯಲ್ ಬಿಲ್ಡಿಂಗ್"ನ್ನು ದಾನವಾಗಿ ಸ್ವೀಕರಿಸಲು ಕೌನ್ಸಿಲಿನ ಒಪ್ಪಿಗೆ ದೊರೆಯಿತು. ಕೌನ್ಸಿಲಿನ ಹೆಸರಲ್ಲಿರುವ ಸರಕಾರೀ ಸೆಕ್ಯೂರಿಟಿಗಳನ್ನು ವರ್ಗಾಯಿಸುವುದು. ಹಾಗೂ ಇತರ ಸಧಾನಗಳಲ್ಲಿ ಪರಾಧೀನಪಡಿಸುವುದು ಇತ್ಯಾದಿ ಕಾರ್ಯಗಳನ್ನು ಸಾಧಿಸಲು ಕಮಿಶನರ್ ಶ್ರೀ ಎ. ಎಸ್. ಡಿ. ಸೋಜರಿಗೆ ಅಧಿಕಾರ ಕೊಡಲಾಯಿತು.

ಜನವರಿ ತಾ. 1— ಜನರಲ್ ಇನ್ವೆಸ್ಟ್‌ಮೆಂಟ್ ಎಂಡ್ ಕಮರ್ಶಿಯಲ್ ಕೋಪರೇಶನ್ ಪ್ರೈವೇಟ್ ಲಿಮಿಟೆಡ್ ಕಡೆಯಿಂದ ತಾ. 1ರಂದು ಹೊಸ ವರ್ಷ ಆರಂಭ ಆಚರಣೆಯು ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಡಾ ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ನಿವೃತ್ತ ಡಿಸ್ಟ್ರಿಕ್ಟ್ ಜಜ್ಜರಾದ ಶ್ರೀ ಬಿ. ಎಲ್. ಎನ್. ಪೈಗಳನ್ನು ಹೊಸ ವರ್ಷಾರಂಭದಲ್ಲಿ ಉಡುಪಿಯ ಗಣನೀಯ ವ್ಯಕ್ತಿಗಳಾಗಿ ಗೌರವಿಸಲಾಯಿತು.

ಕೊಪರೇಶನಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ. ರಮೇಶ ಪೈಗಳು ಸ್ವಾಗತಭಾಷಣ ಮಾಡಿದರು. ಡಾ. ಟಿ. ಮಾಧವ ಪೈ ಮತ್ತು ಶ್ರೀ ಎ ಲಕ್ಷ್ಮೀನಾರಾಯಣ ರಾಯರು ಹೊಸ ವರ್ಷವು ಸರ್ವರಿಗೂ ಹರ್ಷದಾಯಕವಾಗಬೆಂದು ಆಪೇಕ್ಷಿಸಿದರು. ಮುಖ್ಯ ಅತಿಥಿ ಮತ್ತು ಅಧ್ಯಕ್ಷರ ವಾತುಗಳಾದ ಬಳಿಕ ಶ್ರೀ ಟಿ ರಮೇಶ ಪೈಗಳು ಧನ್ಯವಾದಗಳನ್ನಿತ್ತರು. ಆರಂಭದಲ್ಲಿ ಟೀ ಪಾರ್ಟಿಯೂ ಕೊನೆಯಲ್ಲಿ ಸಿನಿಮಾ ನೋಪವೂ ಇತ್ತು.

ಪರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕರ್ಮನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ. ಬೆಲೆ: ೦—೪—೦

ನವಯುಗ ಪ್ರೆಸ್, ಉಡುಪಿ.

ಎಲ್ಲೆಲ್ಲಿ ಏನೇನು?

ಕಾಸರಗೋಡು — ಕಾಸರಗೋಡು ಕರ್ನಾಟಕ ಏಕೀಕರಣ ಸಮಿತಿಯ ಅಧ್ಯಕ್ಷ ಶ್ರೀ ಎಮ್. ಉಮೇಶ ರಾಯರ ನೇತೃತ್ವದಲ್ಲಿ ಶ್ರೀಗಳಾದ ಟಿ. ನಾರಾಯಣ ಭಟ್ಟ, ಎ. ರಾಮಯ್ಯ ನಾಯಕ್, ಎಮ್. ಎಸ್. ಮೊಗ್ರಾಲ್, ಎ ಕೆ. ಶೆಣೈ, ಬಿ. ವೇಣಪ್ಪಳ್ಳ, ಬಿ. ಬಿ. ಆಡ್ಯಂತಾಯ ಮೊದಲಾದ ವರ ಶಿಷ್ಟ ಮಂಡಳಿಯು ಬೆಂಗಳೂರಿಗೆ ಹೋಗಿ ಕಳೆದ ತಾ. 31ರಲ್ಲು ರಾತ್ರಿ ಮೈಸೂರು ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರನ್ನು ಭೇಟಿಮಾಡಿ ಉತ್ತರ ಕಾಸರಗೋಡನ್ನು ಕರ್ನಾಟಕಕ್ಕೆ ಸೇರಿಸುವಂತೆ ಪ್ರಯತ್ನಿಸಬೇಕೆಂದು ವಿನಂತಿಸಿದರು. ಕಾಸರಗೋಡಿನ ಕುರಿತು ಕೇರಳ ಸರಕಾರದೊಡನೆ ಪತ್ರವ್ಯವಹಾರ ನಡೆಸುವುದಾಗಿಯೂ ಪ್ರಾದೇಶಿಕ ಸಮಿತಿಯ ಸೂಚಿಸಿದ ಸಂಧಾನ ಯತ್ನ ನಡೆಸುವುದಾಗಿಯೂ ಮುಖ್ಯ ಮಂತ್ರಿಗಳು ಆಶ್ವಾಸನೆಯಿತ್ತರು. ಈ ಸಂದರ್ಭದಲ್ಲಿ ಕೇರಳದಲ್ಲಿ ಜನ ಸಾಂದ್ರತೆ ಹೆಚ್ಚಿರುವುದರಿಂದ ಅಲ್ಲಿಂದು ಒಂದು ಲಕ್ಷ ಕನ್ನಿಂಬರ್‌ಗಳು ನಲ ಸೆಬರುವಂತೆ ಮೈಸೂರು ಸರಕಾರ ಒಪ್ಪಬಹುದೆಂದೂ ಶ್ರೀ ನಿಜಲಿಂಗಪ್ಪನವರು ಹೇಳಿದರು. ಶಾಂತ ಹಾಗೂ ಘಟನಾತ್ಮಕ ವಿಧಾನಗಳಿಂದಲೇ ಚಳವಳಿ ನಡೆಸಬೇಕೆಂದೂ, ಇತರ ವಿಧಾನಗಳಿಗೆ ಕೈಯಿಕ್ಕಬಾರದೆಂದೂ ಕೂಡ ಉಪದೇಶನಿತ್ತರು.

ಸಬ್ ಕೋರ್ಟು— ಕಾಸರಗೋಡಿನಲ್ಲಿ ಕೂಡಲೇ ಒಂದು ಸಬ್ ಕೋರ್ಟು ತೆರೆಯಬೇಕಾದ ಆನಿವಾರ್ಯತೆಯನ್ನು ಕೇರಳ ಸರಕಾರದ ಗಮನಕ್ಕೆ ತರುವ ಬಗ್ಗೆ ಕಾಸರಗೋಡು ವಕೀಲ ಸಂಘದ ಒಂದು ಶಿಷ್ಟ ಮಂಡಳವು ಈಚೆಗೆ ಎರ್ನಾಕುಲಂ ಮತ್ತು ತಿರುವನಂತಪುರಕ್ಕೆ ತೆರಳಿ ಅಲ್ಲಿಯ ಮುಖ್ಯ ನ್ಯಾಯಾಧೀಶರನ್ನೂ, ಸರಕಾರದ ಮುಖ್ಯ ಕಾರ್ಯದರ್ಶಿಯರನ್ನೂ, ರಾಜ್ಯಪಾಲರನ್ನೂ ಭೇಟಿಯಾಗಿ ಮಾತುಕತೆ ನಡೆಸಿರುವುದಾಗಿ ತಿಳಿದುಬರುತ್ತದೆ. ಶಿಷ್ಟಮಂಡಲದವರು ಕಾಸರಗೋಡಿನಲ್ಲಿ ಒಂದು ಕಲಾಶಾಲೆಯನ್ನು ತೆರೆದು ಈ ವಿಷಯವನ್ನು ದ್ವಿಭಾಷಾ ಡಿವಿಜನ್ನಾಗಿ ಪರಿಗಣಿಸಬೇಕೆಂಬ ನಿವೇದನೆಯನ್ನು ಕೊಡಿರುವರು. ಮನವಿಗಳನ್ನು ಪರಿಶೀಲಿಸುವುದಾಗಿ ಆಶ್ವಾಸನೆ ದೊರೆತಿರುವುದಾಗಿ ಹೇಳಲಾಗಿದೆ.

ಹೆಸ್ರು— ಸ್ಥಳೀಯ ಬ್ಲೋಕ್ ಡೆವಲಪ್‌ಮೆಂಟ್ ಆಫೀಸರರಾಗಿದ್ದ ಶ್ರೀ ಎಮ್. ಆರ್. ನಾರಾಯಣರವರಿಗೆ ಕಡಬಕ್ಕೆ ವರ್ಗವಾಗಿದ್ದು ಶ್ರೀ ಎಚ್. ನಾರಾಯಣ ಕಾಮತರು ಅವರ ಸ್ಥಳದಲ್ಲಿ ನೇಮಕಹೊಂದಿದ್ದು ತಾ. 28ರಲ್ಲು ಚಾರ್ಜು ನಹಿಸಿದ್ದರು.

ಮೂಡುಬಿದ್ರೆ— ಸ್ಥಳೀಯ ಜೈನ್ ಹೈಸ್ಕೂಲಿನ ವರ್ಧಂತ್ಯುತ್ಸವವು ಮಂಗಳೂರು ತ. ಬೆಂ ತಾಲೀಜಿನ ಪ್ರೊಫೆಸರ್ ಶ್ರೀ ಶ್ರೀ ಬಿ. ವಿ. ರಮಣನವರ ಅಧ್ಯಕ್ಷತೆಯಲ್ಲಿ ತಾ. 13ರಲ್ಲು ಜರಗಿತು. ಮುಖ್ಯೋಪಾಧ್ಯಾಯರಾದ ಶ್ರೀ ಎ. ಸೋಮಪ್ಪ ರೈಗಳು ಶಾಲಾ ವರದಿಯನ್ನೊದಿದರು. ಹಿ. ಪ್ರಾ. ಪದ್ಮನಾಭ ಉಡುಪರು ಸ್ವಾಗತವನ್ನು ಮಾಡಿದರು. ಶಾಲೆಯು ಪ್ರಗತಿಪಥದಲ್ಲಿ ಮುನ್ನಡೆಯುತ್ತಿರುವುದನ್ನು ಪರಿಶೀಲಿಸಿ ಸಭಾಧ್ಯಕ್ಷರು ಮುಖ್ಯೋಪಾಧ್ಯಾಯರನ್ನು ಅಧ್ಯಾಪಕ ವೃಂದವನ್ನು ಅಭಿನಂದಿಸಿದರು. ಜನಮನ ರಂಜನ ಕಾರ್ಯಕ್ರಮಗಳಾಗಿ ಸಮಾರಂಭ ಕೊನೆಗೊಂಡಿತು.

ವಿಠಲ— ಭಾರತ ಕೇಂದ್ರ ಅಡಿಕೆ ಪರಿಶೋಧನಾ ಕ್ಷೇತ್ರಕ್ಕೆ ತಾ. 26ರಲ್ಲು ಕೊಸ ತಾಗಿ ಕಾರ್ಯದರ್ಶಿಗಳಾಗಿ ನೇಮಕವಾದ ಶ್ರೀ ವರದ ರಾಜನ್, ಆಪರು ಅಡಿಕೆ ಮಾರ್ಕೆಟಿಂಗ್ ಆಫೀಸರ್ ಶ್ರೀ ರಾಮಣ್ಣನವರು ಸಂಪರ್ಕನಿತ್ತರು. ಮುಖ್ಯ ರಸ್ತೆಯಿಂದ ಈ ಕ್ಷೇತ್ರಕ್ಕೆ ಹೋಗುವ ರಸ್ತೆ ಮತ್ತು ಹೊಳೆಗೆ ಸಂಕ ಇವುಗಳಿಗೆ ನಾಲ್ವತ್ತು ಸಾವಿರರೂಪಾಯಿ ಮಂಜೂರಾಗಿದೆಯೆಂದೂ ಶೀಘ್ರವೇ ಈ ಕಾರ್ಯನಡೆಯುವುದಾಗಿಯೂ ಹೇಳಿದರು. ಈ ಕ್ಷೇತ್ರಕ್ಕೆ ಓರ್ವ ಸಾಲಿಂಟಿಂಡೆಂಟನ ನೇಮಕವಾಗುವುದೆಂದೂ ಅಡಿಕೆ ಬೆಳೆಗೆ ಬರುವ ಎಲ್ಲಾ ರೋಗಗಳಿಗೆ ಪರಿಶೀಲನೆ ನಡೆಯುವುದಾಗಿಯೂ ಹೇಳಿದರು.

ಕುಕ್ಕೆ ಕಟ್ಟೆ:—ಸ್ಥಳೀಯ ಎಯಿಡೆಡ್ ಎಲಿಮೆಂಟರಿ ಶಾಲೆಯಲ್ಲಿ ತಾ 28ರಲ್ಲು ಸಾರ್ವಜನಿಕ ಸಭೆಯು ಶ್ರೀ ಕೆ. ಕಾರಪ್ಪ ಸೆಟ್ಟಿ ರವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾಕಟ್ಟಡ ವಿಸ್ತರಣಕ್ಕಾಗಿ ಕಟ್ಟಡದ ರಜಿನಾ ಸಮಿತಿಯೊಂದು ರಚಿಸಲ್ಪಟ್ಟು ಶ್ರೀಗಳಾದ ಟಿ. ಎ. ಪೈ ಎಮ್. ಎಲ್. ಎ, ಅಧ್ಯಕ್ಷ; ಕೆ. ಕಾಳಪ್ಪ ಸೆಟ್ಟಿ ಉಪಾಧ್ಯಕ್ಷ; ಕೆ. ಗುರುರಾಜ ಭಟ್ಟ, ಕಾರ್ಯದರ್ಶಿ; ಕೆ. ಶಿವರಾಮಸೆಟ್ಟಿ, ಖಜಾಂಚಿ; ಎ ಜೆ. ಆಲ್ಫೆ ಅಡಿಟರ್. ಸುತ್ತು ಕೆ. ಗೋಪಾಲ ಸೆಟ್ಟಿರು ಸಮಿತಿಯ ಸದಸ್ಯರಾಗಿ ಆರಿಸಲ್ಪಟ್ಟರು.

ಅಂಬಲಪಾಡಿ— ಆಖಿಲ ಭಾರತೀಯ ಸಂಸ್ಕೃತಭಾಷಾ ಪ್ರಚಾರ ಸಮಿತಿಯ ಪರೀಕ್ಷೆಗಳು ಫೆಬ್ರವರಿ ತಾ16 ಮತ್ತು 17ರಲ್ಲಿ ಜರಗಲಿರುವುದು. ಉಡುಪಿ ಪ್ರದೇಶದ ಪ್ರಾರಂಭಿಣಿಯಿಂದ ವಿಕಾರದ ವರೆಗಿನ ಪರೀಕ್ಷಾ ಉಮೇದ್ವಾರಿಗಳು ತಮ್ಮ ಅವೇದನಾಪತ್ರಗಳನ್ನು ನಿಶ್ಚಿತ ಶುಲ್ಕದೊಂದಿಗೆ ಇದೇ ತಾ 15 ರೊಳಗೆ ,,ಗೀತಾಭವನ, ಅಂಬಲಪಾಡಿ ಉಡುಪಿ'' ಗೆ ಕಳುಹಿಸಿ ಜೇಕೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಕುಂಬಳೆ—ಇದೇ ತಾ. 10ರಿಂದ ತೆರೆಯಲಾದ ಕಾಸರಗೋಡು ಸಬ್‌ಕೋರ್ಟು ಕ್ಷೇತ್ರವನ್ನು ಕಾಸರಗೋಡು ಮುನ್ಸಿಫ್‌ಕೋರ್ಟು ಕ್ಷೇತ್ರ, ಹೊಸದುರ್ಗ ಮುನ್ಸಿಫ್‌ಕೋರ್ಟು ಕ್ಷೇತ್ರವೆಂದು ಸಾರಲಾಗಿದೆ.

ಬೆಳ್ಳಾರೆ— ಸುಳ್ಯದಿಂದ ಬೆಳ್ಳಾರೆಗೆ ವರ್ಗಾಯಿಸಲಾದ ಲೋಕಲ್‌ಫಂಡ್ ಆಸ್ಪತ್ರೆಯನ್ನು ತಾ 30ರಲ್ಲಿ ಜಿಲ್ಲಾ ಬೋರ್ಡು ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರು ಉದ್ಘಾಟಿಸಿದರು. ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಹನವರು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಮೆಡಿಕಲ್ ಆಫೀಸರ್ ಡಾ. ಎ. ಶಿವಪ್ಪಯ್ಯನವರು ಆರೋಗ್ಯ ರಕ್ಷಣೆ ಮತ್ತು ರೋಗ ನಿವಾರಣೆ ಕುರಿತು ಭಾಷಣನಿತ್ತರು.

ಬೆಳ್ತಂ— ಬೆಳ್ತಂ ಆದ್ಯಾಪಕ ಕೇಂದ್ರದ ವಾರ್ಷಿಕೋತ್ಸವವು ತಾ. 22ರಲ್ಲಿ ಜಿಲ್ಲಾ ಬೋರ್ಡು ಸದಸ್ಯ ಶ್ರೀ ಎಮ್. ಎಮ್. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ. ನಾರಾಯಣ ಭಟ್ಟರು ಧ್ವಜಾರೋಹಣಮಾಡಿದರು ಶ್ರೀ ರಾಮರಾಯ ಹಾಲಂಬಿಯವರ ನೇತೃತ್ವದಲ್ಲಿ ಕ್ರೀಡೋತ್ಸವ ಜರಗಿತು.

ಸುರತ್ಕಲ್— ಸ್ಥಳೀಯ ವಿದ್ಯಾಪಾಯನೀ ಪ್ಯಾಸ್ಕೂಲಿನ ವರ್ಧಂತಿ ಸಮಾರಂಭವು ತಾ. 21ರಲ್ಲಿ ಪ್ರ. ಕ. ಜಿಲ್ಲಾ ಸೆಶನ್ಸ್ ಜಡ್ಜ್ ಶ್ರೀ ಎಮ್. ನಿರಾಕೃಷ್ಣ ಕಿಣಿಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹಳೆವಿದ್ಯಾರ್ಥಿ ಶ್ರೀ ಬಿ. ಗೋಪಾಲಕೃಷ್ಣ ರಾಯರು ಸ್ವಾಗತವನ್ನು ಮಾಡಿದರು. ಮುಖ್ಯೋಪಾಧ್ಯಾಯರು ವರದಿಯನ್ನೊದಿದರು, ಶಾಲಾ ಮೆನೆಜರ್ ಶ್ರೀ ಬಿ. ವಿ. ಕೃಷ್ಣಯ್ಯನವರು ಶಾಲಾ ಏಳಿಗೆಗಾಗಿ ತುಂಡಾ ಶ್ರಮವನ್ನೂಸಿದ ದಿವಂಗತ ಎಚ್. ರಾಮರಾಯರ ತೈಲಚಿತ್ರ ಅನಾವರಣಮಾಡುವಂತೆ ಅಧ್ಯಕ್ಷರನ್ನು ಕೇಳಿಕೊಂಡರು. ದಿವಂಗತರ ಸಹೋದರ ಶ್ರೀ ಎಚ್. ವಾಮೇಂದರ ರಾಯರು ಈ ತೈಲಚಿತ್ರವನ್ನು ಶಾಲೆಗೆ ಅರ್ಪಿಸಿದುವಾಗಿದೆ. ತಾ. 23ರಂದು ಸಂಜೆ ಶಾಲಾ ಹಳೇ ವಿದ್ಯಾರ್ಥಿಗಳ ದಿನಾಚರಣೆಯೂ ಪ. ಕ. ಜಿಲ್ಲಾ ಬೋರ್ಡು ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು.

ಹಾಸ್ಯದ ಪ್ರಭಾವ

(ಜನೇ ಪುಟದಿಂದ)

ಮೋಕೆಕ್ಕೆ ಬಿದ್ದು ಜಡ್ಡಹಾದಿ ಹಿಡಿದು ಬಿಡುತ್ತಾರೆ. ಹಾಸ್ಯದ ಹೆಸರಿನಲ್ಲಿ ನಡೆಯುವ ಈ ಅನ್ಯಾಯವನ್ನು ತಡೆಯದಿದ್ದರೆ ನಿಶ್ಚಯವಾಗಿಯೂ ಕಲೆಯು ಕೊಲೆಯಾಗದೆ ಉಳಿಯದು. ಈ ಕುರಿತು ಜನತೆ ತುಂಬಾ ಎಚ್ಚರದಿಂದಿರಬೇಕು.

ನಿರ್ಣಯಗಳು— ವಿದ್ಯಾ ಕ್ರಮವನ್ನು ಪುನಃ ರಚಿಸುವತನಕ ಪ. ಕ. ಜಿಲ್ಲೆಯಲ್ಲಿ ಮದ್ರಾಸು ಸರಕಾರದವರು ಜಾರಿಗೆತಂದಿರುವ ವಿದ್ಯಾಕ್ರಮವನ್ನು ಅನುಸರಿಸಿ ಎಲ್ಲಾ ಅನುಕೂಲತೆಗಳನ್ನು ಒದಗಿಸಬೇಕೆನ್ನುವ, ಮುಂದೆ ಮೈಸೂರು ರಾಜ್ಯದಲ್ಲಿ ವಿದ್ಯಾಕ್ರಮವನ್ನು ಏಕೀಕರಿಸುವುದಕ್ಕೆ ವಿದ್ಯಾ ತಜ್ಞರ, ಅಧಿಕಾರಿಸ್ಥರ, ರಾಜ್ಯದ, ಜಿಲ್ಲೆಯ ಅಧ್ಯಾಪಕರುಗಳ ಸಂಸ್ಥೆಗಳ ಪ್ರತಿನಿಧಿಗಳನ್ನು ಸೇರಿಸಿ ವಿಚಾರ ವಿನಿಮಯ ನಡಿಸಿ ಪ್ರಾಪ್ತವಧಿ ಸಂಬಂಧಕ್ರಮ, ಸರ್ವಾಸಿನ ಭಾಧ್ಯತೆ ನಿಯಮಗುಗಳು ಇತ್ಯಾದಿಗಳನ್ನು ಕೂಡಲೇ ರೂಪೀಕರಿಸ ಬೇಕೆನ್ನುವ, ಅಖಿಲಭಾರತ ವಿದ್ಯಾಧೆದರೇಶಕನಿಸನ ವರ ಕೇಳಿಕೆಯಮೇರಿಗಿನ ಸಂಬಳದ ಕ್ರಮವನ್ನು ಮೈಸೂರು ರಾಜ್ಯದಲ್ಲಿ ಜಾರಿಗೆತರುವ ತನಕ, ಮೈಸೂರು ರಾಜ್ಯಕ್ಕೆ ಈಗ ಸೇರಿಕೊಂಡ ರಾಜ್ಯಗಳ ಭಾಗಗಳಲ್ಲಿ ಅತೀಹೆಚ್ಚು ಸಿಗುತ್ತಿರುವ ಭಾಗದವರಿಗೆ ಸಿಕ್ಕುವಷ್ಟು ಸಂಬಳ ಕೊಡುತ್ತಿರ ಬೇಕೆಂದೆನ್ನುವ, ಕಳವರ್ಷ ಕುಂದಾಪುರ ಸಮ್ಮೇಳನದಲ್ಲಿ ಅಂಗೀಕರಿಸಿದ ಭಾರತ ಘಟನೆಯ 171ನೇ ನಿಬಂಧನೆಯನ್ನು ತಿದ್ದುಪಡಿಮಾಡಿ ಉಪಾಧ್ಯಾಯರ ಶಾಸನಸಭಾಕ್ಷೇತ್ರದಲ್ಲಿ ಮತಕೊಡುವ ಹಕ್ಕುಸ್ವತ್ತನ್ನು ಪ್ರಾಥಮಿಕ ಶಾಲಾಧ್ಯಾಪಕರಿಗೂ ಅನ್ವಯಿಸ ಬೇಕೆಂಬ ನಿರ್ಣಯ ಗಳಾದುವು.

ಬೆಂಗಳೂರು

ನಿಯೊ ಮೈಸೂರ ಕೆಫೆ — ನ್ಯಾಶಲಳರಾದ ಶ್ರೀ ಕೆ. ಗುರುರಾಜಾಚಾರ್ಯರು ಇದೇ ತಾ. 20ರಲ್ಲಿ ಪ. ಕ. ಜಿಲ್ಲೆಯ ಯಕ್ಷಗಾನ ನಿಯೋಗದ ಸದಸ್ಯರಿಗೆ ಸತ್ಕಾರಕೂಟವನ್ನು ತಮ್ಮ ಭವನದಲ್ಲಿ ಶ್ರೀ ಕೆ. ಎಸ್. ಹೆಗ್ಡೆ ಎಮ್. ಏ. ಅವರ ಅಧ್ಯಕ್ಷತೆಯಲ್ಲಿ ಜರಗಿಸಿದರು. ಈ ಸಮಾರಂಭಕ್ಕೆ ಪ. ಕ. ಜಿಲ್ಲೆಯ ಶ್ರೀಗಳಾದ ಬಿ. ವಿ. ಬಾಳಿಗ, ಎಸ್. ನರಸಪ್ಪಯ್ಯ, ವೈ. ಮಂಜಯ್ಯ ಸೆಟ್ಟಿ, ಕೆ. ಕೆ. ಶೆಟ್ಟಿ, ಬಿ. ಮಾಧವಾಚಾರ್ಯ, ಡಾ. ನಾಗಪ್ಪ ಆಳ್ವ, ಬಿ. ಆರ್. ಕಕ್ಕೇರಿ, ಡಾ. ಯು. ಪಿ. ಮಲ್ಯ, ಕೆ. ಆರ್. ಆಚಾರ್ ಮೊದಲಾದವರು ಚಿತ್ತೈಸಿದ್ದರು. ನಿಯೋಗದ ಪರವಾಗಿ ಶ್ರೀ ಕೆ. ಬಾಲಕೃಷ್ಣ ರಾಯರು ಮಾತನಾಡಿ ಬಳಿಕ ಅಧ್ಯಕ್ಷರಿಗೆಸನ್ಮಾನಪತ್ರವನ್ನು ಅರ್ಪಿಸಿದರು. ತದನಂತರ ರ ,ಶರಶೇತು ಬಂಧನ,' ಎಂಬ ಕಥಾ ಭಾಗದ ತಾಳಮದ್ದಳೆ ನಡೆಯಿತು. ಇದರಲ್ಲಿ ಶ್ರೀಗಳಾದ ಮಹಾಬಲ ನೋಂಡ್ಕ, ಪಿ ಈಶ್ವರಪ್ಪಯ್ಯ, ಬಾಲಕೃಷ್ಣರಾವ್, ಡಿ. ಸಿತಾರಾಮಯ್ಯ, ಜಿ. ಗೋಪಾಲಕೃಷ್ಣ ಭಟ್, ಎಸ್. ಕೃಷ್ಣಾಜುಲ್ಲಿಯವರು ಪ್ರಮುಖ ಪಾತ್ರ ವಹಿಸಿದ್ದರು. ನಂತರ ಆತಿಥ್ಯ ಅಭ್ಯಾಗತರ ವಂದನೆ ಗೈಯಾದುವು.



ಕುಮಾರಿ ಬಿಲ್ಲಿಗಳು

(Govt. Regd.)

ಹೆಂಗಸರ ಹಿತಪ್ರಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಅಶ್ಲೀಲ ಹಾಸ್ಯವನ್ನು ದೂಷ್ಯವೆಂದೇ ಎಣಿಸಬೇಕಲ್ಲದೆ ಪೋಷ್ಯವೆಂದು ಎಂದಿಗೂ ಗಣಿಸ ಬಾರದು.

ಹಾಸ್ಯಕ್ಕೂ ಯುಕ್ತಾಯುಕ್ತ ಸಂದರ್ಭಗಳನ್ನು ವಿವೇಚಿಸಿ ಕೊಳ್ಳುವುದು ಅಗತ್ಯ. ಇನ್ನೊಬ್ಬನ ದಾರುಣವಾದ ಪರಿಸ್ಥಿಯಲ್ಲೂ ನಾವು ನಮ್ಮ ಸುಖಕ್ಕಾಗಿ ಹಾಸ್ಯವನ್ನು ತರಬಾರದು. ಒಬ್ಬನ ಗಡ್ಡ ಉರಿಯುತ್ತಿರುವಾಗಲೂ ಅದನ್ನು ನಂದಿಸುವುದನ್ನು ಬಿಟ್ಟು ಅದೇ ಕಿಚ್ಚಿನಿಂದ ''ನಾನು ಬೀಡಿ ಹೊತ್ತಿಸಿಕೊಳ್ಳುತ್ತೇನೆ. ಎಂದು ಹಾಸ್ಯಕ್ಕೆ ಪ್ರಾರಂಭ ಮಾಡುವುದಾದರೆ ಅದು ಬೆಕ್ಕಿಗೆ ಅಟ; ಇಲಿಗೆ ಪ್ರಾಣಸಂಕಟ ಎಂಬ ಗಾದೆಯಂತಾಗಬಹುದು. ಆ ರೀತಿಯ ಹಾಸ್ಯವೆ ನಿಷೇದನೀಯ.

ಚಮತ್ಕಾರದ ಮಾತುಗಳಿಂದ ಉಂಟುಮಾಡುವ ಹಾಸ್ಯ ಇತ್ತೀಚೆಗೆ ಹೆಚ್ಚು ಜನಪ್ರೀತವಾಗುತ್ತಿದೆ. ನಮ್ಮ ಹಾಸ್ಯವು ಕೇವಲ ನಗುವಿಗೆ ಮಾತ್ರ ಕಾರಣ ವಾಗಿರದೆ ತಿಳಿವನ್ನು ಬೆಳಗುವುದಕ್ಕೂ ಸಹಾಯಕವಾಗಿರಬೇಕು. ಹೇಳುವ ಮಾತು ವ್ಯಂಗ್ಯಾರ್ಥ ಯುಕ್ತವಾಗಿದ್ದು ಒಳನೋಟಕ್ಕೆ ಬೇರೆಯೇ ಅರ್ಥವನ್ನು ಕೊಡುತ್ತಿರಬೇಕು. ಆಲೋಚಿಸಿದಂತೆ ನಮ್ಮ ನೈತಿಕ ಬೆಳವಣಿಗೆಗೂ ಅನುಕೂಲವಾಗಿರುವ ತತ್ವ ಅದರಲ್ಲಿ ಜಡಕವಾಗಿರಬೇಕು—ಆಗ ಮಾತ್ರ ಅದು ಸಕ್ರಮವಾದ ಹಾಸ್ಯವೆಂದಾದೀತು.

ಕಾರಂತರು ಬರೆದ ಆ ಬೂವಿನಿಂದ ಬಂದಾವು ಕೈ'' ಎಂಬ ಪುಸ್ತಕದಲ್ಲಿ ಈ ರೀತಿಯ ಉತ್ತಮ ಹಾಸ್ಯವಿದೆ. ಅವರ ಮಾತುಗಳು ಒಮ್ಮೆ ನಗೆಯನ್ನು ತೇಲಿಸುವುದು ಮಾತ್ರವಲ್ಲದೆ ನಮ್ಮ ವಿಚಾರಶಕ್ತಿಯನ್ನೂ ಹೊಡೆದೆಬ್ಬಿಸುತ್ತವೆ. ನಮ್ಮ ಜನರ ರೀತಿ ನೀತಿಗಳಲ್ಲಿರುವ ಕುಂದು ಕೊರತೆಗಳನ್ನು ಅವರ ಮಾರ್ಮಿಕ ಮಾತುಗಳು ನಮಗೆ ಮನವಟ್ಟಾಗಿಸುವವು. ಕೆಲವು ಪತ್ರಿಕೆಗಳಲ್ಲಿ 'ಅಲ್ಲಲ್ಲಿ ಇಷ್ಟಿಷ್ಟು' 'ತರ್ಕರಂಗ' ಮೊದಲಾದ ಕೀರ್ತಿಕೆಗಳ ಕೆಳಗೆ ಬರೆಯುವ ವಿಚಾರಗಳೂ ಅಂತೆಯೇ ಇದ್ದು ಮನೋರಂಜನೆಯೊಂದಿಗೆ ಜ್ಞಾನ ರಂಜನೆಯನ್ನೂ ಉಂಟುಮಾಡಲು ಸಮರ್ಥವಾಗಿರುತ್ತವೆ.

ಹಾಸ್ಯದ ಶಕ್ತಿ ಅದ್ಭುತ ಶಕ್ತು. ಅಪಾರ ಯೋಗ್ಯ ರೀತಿಯಲ್ಲಿ ಬಳಸಿಕೊಂಡರೆ ಅದರಿಂದ ದೊರೆಯಬಹುದಾದ ಪ್ರಯೋಜನವೂ ಅನಂತ. ಹಾಸ್ಯವು ತಮ್ಮ ಜೀವನಕ್ಕೊದಗಿ ಪೂರಕವಾಗಿದೆ. 'ನಗೆಯಿಲ್ಲದ ಬಗೆ ಹೊಗೆ ತುಂಬಿದ ಮನೆಯಂತೆ' ಎಂಬುದನ್ನಾದರೂ ಜ್ಞಾಪಕದಲ್ಲಿಟ್ಟು ಕೊಂಡು ನಾವು ಹಾಸ್ಯಕ್ಕೆ ತುಂಬಾ ಪ್ರೋತ್ಸಾಹ ಕೊಡಬೇಕಾಗಿದೆ. ಅಗತ್ಯ ಸಮಯದಲ್ಲಿ 'ನಗೆ ಬರಿಕೆಗಾರರೂ' ನಗೆ ಪತ್ರಿಕೆಗಳೂ ಇನ್ನೂ ಕಜ್ಜಾಯಗಬೇಕು; ಸಕ್ರಮವಾದ ಹಾಸ್ಯ ಇನ್ನೂ ಬೆಳೆಯ ಬೇಕು.

ಮಾನವ ಸಂಕ್ಲೃತಿಗೆ ಧಕ್ಕೆ ತರುವ ನೀಚಮಟ್ಟದ ಹಾಸ್ಯವನ್ನು ಬಿಟ್ಟು ಉಚ್ಚ ಮಟ್ಟದ ಹಾಸ್ಯವನ್ನೇ ಬೆಳೆಸಿಕೊಂಡರೆ ಅದರ ಉಜ್ವಲ ಉದ್ದೇಶವು ಸಾರ್ಥಕವಾಗುವುದರೊಂದಿಗೆ ನಮ್ಮ ನಾಡು ನುಡಿಯೂ ಬೆಳಗುವುದರಲ್ಲಿ ಸಂದೇಹವಿಲ್ಲ.

—ಶ್ರೀ ರಮಾನಂದ ಬನಾರಿ.
ದೇಲಂಪಾಡಿ.

ಜನಮತ

ನ್ಯಾಯವಾದ ಜನಾಭಿಪ್ರಾಯಕ್ಕೆ ಸೂಕ್ತ ಪ್ರಸಿದ್ಧಿಯನ್ನು ಕೊಡಲು ಈ ವಿಭಾಗವನ್ನು ಉಪಯೋಗಿಸಲಾಗುತ್ತದೆ. ಸಾರ್ವಜನಿಕರು ಪತ್ರಮುಖೇನ ನಮ್ಮೊಡನೆ ಸಹಕರಿಸಬೇಕಾಗಿ ಬಿನ್ನಹ.
ಸಂ. ನ.

ಮೆಲುನಡೆಯ ಖಂಡನೆ

(ನವಯುಗ'ದ 18-12-56ರ ಸಂಚಿಕೆಯ ಸಂಪಾದಕೀಯ (ವ್ಯವಸಾಯೋತ್ಪನ್ನದ ಕುರಿತು) ದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯವು ಚಿನ್ನಾಗಿನೆ. ನವಯುಗವೆನ್ನುವಂತೆ ನಾವಿಂದು ಸುಮಿಷಪ್ಪ-ನಡೆಯುತ್ತಿಲ್ಲ, ಎಂಬುದಕ್ಕೆ ಅವರಲ್ಲಿತ್ತ 'ಭಟ್ಟರ ಪಂಚಿನ ಉಸಾಹಗಡಿಕೆಯೇ ಸಾಕು. ನಮ್ಮ ದೇಶ ಬಡದೇಶ. ನಮ್ಮಲ್ಲಿರುವ ಕೃಷಿಕರಲ್ಲಿ ಹೆಚ್ಚಿನವರೂ ಬಡವರೇ ನಮಗೆ ಸಾಖರಸಟ್ಟುಲೆಯಲ್ಲಿ ಪಣ ಸುರಿದು ಎಣ್ಣೆ ಪಂಪುಗಳನ್ನಿರಿಸಲು ಸಾಧ್ಯವಾಗಲಾರದು.—ಎಂಬಾಗ ಕೇವಲ ಐವತ್ತು—ನೂರು ರೂಪ್ಯಾಯಲ್ಲಿ ಪಂಪನ್ನು ತಯಾರಿಸುವ ಶ್ರೀ ಪುರಕ್ಕಿಣಿ ಜಿ. ವಿ. ಭಟ್ಟರ ನವೀನ ಶೋಧನೆಯಿಂದ ಅವಶ್ಯವು ಕ್ರಯೋಜನವಿಲ್ಲ! ನಾವು ಅದನ್ನು ಎನ್ನು ಬೇಗ ಸಾಧ್ಯಸ್ಥೋ ಆಷ್ಟು ಶೀಘ್ರವಲ್ಲಿ ನಮಗಾದು ದೊರಕುವಂತೆ ಮಾಡ ಬೇಕಾದಲ್ಲಿ-ಪಂಪಿನ ಶೋಧಕರೂ ಸರ್ಕಾರವೂ ಅವಗಾಹನೆಗೆ ಬರಲು! ಕೃಷಿ ಇಲಾಖೆಯ ಆಸಕ್ತಿ ತನ್ನದೇ ಜೀಗಾಗಲು ಕಾರಣವಲ್ಲದೆ ಬೇರಲ್ಲ.

ಯಾವ ಇಲಾಖೆಗಳೇ ಆಗಲಿ, ಈ ರೀತಿ ವಿಭಾಗವಾಗಿ ಕೆಲಸಮಾಡಿದರೆ ಸಂಬಾದಕೀಯದಲ್ಲಿ ನ್ನುವಂತೆ ಯೋಜನೆಗಳು ಕಾರ್ಯರೂಪಕ್ಕೆತ್ತಿಳಿಯುವಾಗ ಪಂಚ ವರ್ಷಗಳು ದಾಟಿ ಹೋಗುವುದರಲ್ಲಿ ಸಂಶಯವಿಲ್ಲ.

ಯಾವ ಕೆಲಸವೇ ಆದರೂ ನಾವು, "ನಮ್ಮದು" ಎಂಬ ಭಾವನೆಯಿಂದ ಮುಡಿದರೇನೇ ಯಶಸ್ವಿಯಾಗಬಲ್ಲುದು. ಕೃಷಿಕರಾದ ನಾವು ಆದರಲ್ಲಿ ಗಮನವಿಟ್ಟು, ನುಂದುವರಿಯಬೇಕಾದುದು ಅತ್ಯಾ. ಹೆಚ್ಚು ಜೆಳೆಜೆಳೆ ಸಲು "ಭಟ್ಟರ ಪಂಪಿ"ನಂತಹ ಪಂಪುಗಳು ನಮಗೆಲ್ಲರಿಗೂ-ಬಡವರಿಗೂ ಅನುಕೂಲ. ಆದ್ದರಿಂದ ಆ ರೀತಿಯ ಉದ್ದೇಮಗಳಿಗೆ ನಾವು ಮನಃಪೂರ್ತಿ ಬೆಂಬಲವನ್ನಿಯಬೇಕಾದುದು ನಮ್ಮ ಪ್ರಥಮ ಕರ್ತವ್ಯ. ನಮ್ಮ ದೇಶವನ್ನು ಸಟ್ಟಿ ಫೈಂಗಿಂಗ್ ಕಂಗೊಳಿಸಿ ನಾವು ಸಂಪೂರ್ಣ ಸ್ವಾವಲಂಬಿಗಳಾಗಲು ಆದು ಅನುಕೂಲ. "ಭಟ್ಟರ ಪಂಪು" ಎಲ್ಲಾ ಕೃಷಿಕರಿಗೂ ಕೈದೀಪಿಗೆಯಂತಿದೆ!

ಇಂತಹ ಉತ್ತಮ ವಿಚಾರಗಳನ್ನು ತಿಳಿಯಪಡಿಸಿ ಜನತೆಯ ಜ್ಞಾನವನ್ನು ನೃದ್ಧಿಪಡಿಸುವುದರಲ್ಲಿ 'ನವಯುಗ'ವೂ ಒಂದಾಗಿದೆ. ಅಲ್ಪ ಸುಟಿಗಳಲ್ಲಿ ಹೆಚ್ಚಿನ ಅನುಭವ್ಯ ವಿಷಯಗಳ ನ್ನೆದು ಕೊಡುತ್ತಿದೆ. ಮುಂದೆಕ್ಕೂ ಇವೇರೀತಿ ಮುಂದುವರಿದು ಇನ್ನೂ ಹೆಚ್ಚಿನ ಜನಮನ್ನಣೆ ಗೆಯನ್ನು ಗಳಿಸಲಿ!

—ಶ್ರೀ ಕೀ. ವ. ಕೇಶವ, ವೇಲಂಜಾಡಿ.

ಮಂಗಳೂರು

ಕೇಂದ್ರದ ಮಂತ್ರಿ ಶ್ರೀ ಕೆ. ಡಿ. ಮಾಲವೀಯರು—ಕೇಂದ್ರ ಸರಕಾರದ

ನೈಸರ್ಗಿಕ ಸಂಪತ್ತಿನ ರಾಜೆಯ ಮಂತ್ರಿ ಶ್ರೀ ಕೆ. ಡಿ. ಮಾಲವೀಯರು ತಾ. 26ರಂದು ಸಂಜೆ ಮೈಲುಗಾಡಿಯಲ್ಲಿ ಮಂಗಳೂರಿಗೆ ಆಗಮಿಸಿದಾಗ ಜಿಲ್ಲಾ ಕಲೆಕ್ಟರ್ ಮೊದಲಾದವರು ಅವರನ್ನು ರೈಲ್ವೆ ನಿಲ್ದಾಣದಲ್ಲಿ ಸ್ವಾಗತಿಸಿದರು. ಬಳಿಕ ಅವರು ಜಾಪಟೆಗುಡ್ಡೆಯಲ್ಲಿರುವ ಡಿ. ಕೆ. ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಭಾಷಣಮಾಡಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ರಾದ ಯು. ಪಿ. ಮಲ್ಯರು ಮಂತ್ರಿಗಳನ್ನು ಸ್ವಾಗತಿಸಿದರು ಮಂತ್ರಿಗಳು ತಮ್ಮ ಭಾಷಣದಲ್ಲಿ, ದೇಶದ ಆಭ್ಯುದಯಕ್ಕಾಗಿ ಸರಕಾರವು ಹಲವಾರು ಯೋಜನೆಗಳನ್ನು ಕೈಗೊಂಡಿದೆ. ಇವುಗಳನ್ನು ಕಾರ್ಯಗತ ಗೊಳಿಸುವಾಗ ಎದುರಿಸಬೇಕಾದ ಸಮಸ್ಯೆಗಳನ್ನು ಕಾಂಗ್ರೆಸಿಗರು ಆಳ್ಕಸಿ ಜನತೆಗೆ ವಿವರಿಸಿ ಅವರ ಸಹಕಾರ ದೊರಬಲವು ಸರಕಾರಕ್ಕೆ ಜೊನೆಯುವಂತೆ ಮಾಡುವ ಹೊಣೆಗಾರಿಕೆಯು ಕಾಂಗ್ರೆಸ್ ಕಾರ್ಯಕರ್ತರಲ್ಲಿದೆ ಎಂದರು.

ಡ. ಕ. ಜಿಲ್ಲೆಯ ಕುರಿತು ಮಾತನಾಡುತ್ತಾ, ಈ ಜಿಲ್ಲೆಯಲ್ಲಿ ತುಂಬಾ ನೈಸರ್ಗಿಕ ಖನಿಜ ಸಂಪತ್ತು ಇದೆ ಎಂಬುವನ್ನು ಶ್ರೀಯು. ಶ್ರೀನಿವಾಸ ಮಲ್ಯರು ತಮ್ಮ ಆಸನಾ ಷನೆಗೆ ತಂದಿರುತ್ತಾರೆ. ಅಲ್ಲಿನ ನೈಸರ್ಗಿಕ ಸಂಪತ್ತಿನ ಪರಿಶೀಲನೆ ನಡೆಸುಪ, ಯೋಜನೆಯನ್ನು, ಕಬ್ಬಿಣದ ಅದಿರಿನ ಕುರಿತೂ ಪರಿಶೀಲನೆ ನಡೆಸಲಾಗುವುದು. ಖನಿಜ ಸಂಪತ್ತು ಎಲ್ಲಿದೆ ಎಂದು ಕಂಡು ಹಿಡಿದು ಅವನ್ನು ಉಪಯೋಗಕ್ಕೆ ತಂದುಕೊಳ್ಳುವಂತೆ ಇತರರಿಗೆ ಪ್ರಚೋದನೆಯನ್ನು ನೀಡುವುದೇ ತಮ್ಮ ಕೆಲಸವೆಂದರು. ಶ್ರೀ ಕೆ. ಸದಾನಂದ ಹೆಗ್ಡೆ, ಎಮ್. ಪಿ. ಅವರು ಧನ್ಯವಾದವರ್ಪಣ ಮಾಡಿದರು.

ಡ. ಕ. ಜಿಲ್ಲಾ ಕಾಂಗ್ರೆಸ್ ಚುನಾವಣಾ ಪ್ರಚಾರಕರು—ಜಿಲ್ಲಾ ಕಾಂಗ್ರೆಸ್ ಕಮಿಟಿಯು ಕಡೆಯಿಂದ ಕಾಂಗ್ರೆಸ್ ಚುನಾವಣಾ ಪ್ರಚಾರ ನಡೆಸಲು ಈ ಕೆಳಗಿನವರು ನೇಮಿಸಲ್ಪಟ್ಟಿರುವರು. ಶ್ರೀಗಳಾದ ಆರ್. ಕೆ. ಸಂಜೀವ ರಾವ್, ಬೈಂದೂರು; ಎಸ್. ಎಸ್. ವೆಂಕಟ್ರಮಣಯ್ಯ, ಕುಂದಾಪುರ; ಕೆ ಶಿವರಾಮ ಶೆಟ್ಟಿ, ಬ್ರಹ್ಮಾವರ; ಶೀನ ಶೆಟ್ಟಿ, ಉಡುಪಿ; ಮಾಧವ ಜೀ ಹರಿದಾಸ್, ಕಾಸರಗೋಡು; ಮುದ್ರಾಡಿ ಕೃಷ್ಣಯ್ಯ ಶೆಟ್ಟಿ ಮತ್ತು ಸೀತಾರಾಮ ಮೊಗೆರಾಯ, ಕಾರ್ಕಳ; ಪಿ. ಸಿ. ಸಾರ್ಯನಾರಾಯಣ ರಾವ್, ಸುರತ್ಕಲ್; ಆಗರಿ ಲಕ್ಷ್ಮಪ್ಪ ರೈ, ಪಾಣೆಮಂಗಳೂರು; ಬಿ. ಪರಿಶ್ಚಂದ್ರಾಚಾರ್, ಮಂಗಳೂರು ಉತ್ತರ; ಬಿ. ಲಕ್ಷ್ಮಣೇಶ ವಿಮಾರ್ಧಿ, ಮಂಗಳೂರು ದಕ್ಷಿಣ; ಶ್ರೀನಿವಾಸ, ಬೆಳ್ತಂಗಡಿ; ರಾಮ ಉಜ್ರೆ ಮತ್ತು ವಿಜಯ ಕುಮಾರ್, ಪುತ್ತೂರು.

ತೈಲ ಚಿತ್ರಅನಾವರಣ—ಶ್ರೀ ಶೃಂಗೇರಿ ಜನದ್ಗುರುಸಿರಿವಾದ ಶ್ರೀ ಮದಭಿನವ ವಿದ್ಯಾತೀರ್ಥ ಮಹಾ ಸ್ವಾಮಿಗಳವರ ತೈಲ ಚಿತ್ರವನ್ನು ತಾ. 26ರಲ್ಲು ಸ್ಥಳೀಯ ಶ್ರೀ ಸುಬ್ರಹ್ಮಣ್ಯ ಸಭಾ ಸದನದಲ್ಲಿ ಶ್ರೀ ಎಮ್. ಎಸ್. ರೈತಿಯವರು ಅನಾವರಣಮಾಡಿದರು. ನಿವೃತ್ತ ಇಲೆಕ್ಟ್ರಿಕಲ್ ಇನ್ಸ್‌ಪೆಕ್ಟರ್ ಶ್ರೀ ಕೆ. ವಿ. ಕಾರಂತರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಬಿ. ಭುಜಂಗೇಶಯರು ಸ್ವಾಗತ ಭಾಷಣಮಾಡಿದರು. ಶೃಂಗೇರಿಯ ವಿದ್ವಾನ್ ಶ್ರೀ ಎ. ಎಸ್. ರಾಮಶಾಸ್ತ್ರಿ ವಿಶ್ಯಿಗಳವರಿಂದ ಹರಿಕಥಾ ಕಾಲಕ್ಷೇಪವಾಯಿತು.

ನಾರ್ಷಿಕೋತ್ಸವ— ಮಂಗಳೂರಿನ ಪ್ರಾವೇಶಿಕ ಹಿಂದೀ ಪ್ರಚಾರ ಸಮಿತಿಯ ವಾರ್ಷಿಕೋತ್ಸವವು ತಾ. 25ರಲ್ಲು ಜಿಲ್ಲಾ ಕಲೆಕ್ಟರ್ ಶ್ರೀ ಎಚ್ ನರಸಿಂಹಸವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಯು ಕೇಶವ ರಾಯರು ಸ್ವಾಗತ ಭಾಷಣಗೈದಾಡಿದರು. ಶ್ರೀ ಶ್ರೀಧರ ಭಟ್ಟರು ಸಂದೇಶಗಳನ್ನೆನ್ನಿದರು. ಶ್ರೀಮತಿ ನಿರುಪಮಾ ಆನರು ಬಹುಮಾನ ವಿತರಣೆ ಮಾಡಿದರು. ಹಿಂದಿಯನ್ನು ಸರ್ವರೂ ಕಲಿಯಬೇಕೆಂದು ಅಧ್ಯಕ್ಷರು ಹೇಳಿದರು. ಅಂದು ಮಧ್ಯಾಹ್ನ ಶ್ರೀ ನತ್ವಾಕರ ಕಾಮತರ ಅಧ್ಯಕ್ಷತೆಯಲ್ಲಿ ಜಿಲ್ಲಾ ಹಿಂದೀ ಪ್ರಚಾರ ಸಮ್ಮೇಳನ ಜರಗಿತು.

ಡ. ಕ. ಜಿಲ್ಲಾ ರೈತ ಸಮ್ಮೇಳನವು — ತಾ. 24ರಲ್ಲು ಸಂಜೆ ಕೇಂದ್ರ ಮೈದಾನ ನಲ್ಲಿ ಶ್ರೀ ಬಿ. ಶ್ರೀನಿವಾಸ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎ. ಕೃಷ್ಣ ಶೆಟ್ಟಿರು ಸ್ವಾಗತ ಭಾಷಣಮಾಡಿದರು. ಕರ್ನಾಟಕ ಪ್ರಾಂತೀಯ ಕನ್ಯೂಮರ್ಸ್ ಫೆಡರೇಷನ್ ಕಾರ್ಯದರ್ಶಿ ಶ್ರೀ ಎನ್. ಎಲ್. ಉಪಾಧ್ಯಾಯರು ಸಮ್ಮೇಳನವನ್ನು ಉದ್ಘಾಟಿಸಿದರು. ಸ್ವಂತ ಸಾಗುವಳಿ ಮತ್ತು ಗೇಣಿದಾರಿಕೆಯ ಬಗ್ಗೆ ಒಳ್ಳೆ ಲೆಬ್ಬಿಸುವುದೆನ್ನು ನಿರೀಕ್ಷಧಿಸಿ ಬೇಕೆಂದು ಮೈಸೂರು ಸರಕಾರವನ್ನು ಕೇಳಿಕೊಳ್ಳುವ, ನ್ಯಾಯನೇಮಕಾಂಶವನ್ನು ಮುಬ್ಬಿ ಎರಡುಬೆಳೆಗಳ ಕಾಲಂಶಕ್ಕಿಳಿಸುವಂತೆ ಕೇಳಿಕೊಳ್ಳುವ ಇತ್ಯಾದಿ ನಿರ್ಣಯಗಳಾಗಿದ್ದವು.

ಕಾರ್ಯಕಾರೀ ಸಮಿತಿ ಸಭೆ—ಕೋಡಿಯಾಲಬೈಲ್ ಜಿಮ್ಕಾನಾ ಯುವಕ ಲೀಗಿನ ಕಾರ್ಯಕಾರೀ ಸಮಿತಿ ಸಭೆಯು ತಾ. 16ರಲ್ಲು ಶ್ರೀ ಎಮ್. ಸುರೇಂದ್ರನವರ ಅಧ್ಯಕ್ಷತೆಯಲ್ಲಿ ಜರಗಿತು. ಲೀಗಿನ ಆಶ್ರಯದಲ್ಲಿ ನಡೆಯುತ್ತಿರುವ ವಾಚನಾಲಯಕ್ಕೆ ಧರ್ಮಾರ್ಥ ಪತ್ರಿಕೆ ಕಳುಹಿಸುತ್ತಿರುವ ನವಯುಗ ಮೊದಲಾದ ಪತ್ರಿಕೆಗಳ ಸಂಪಾದಕರಿಗೆ ಧನ್ಯವಾದಗಳನ್ನರ್ಪಿಸಲಾಯಿತು.

ಯುವಕ ಕಾಂಗ್ರೆಸ್ ವಾರ್ಷಿಕೋತ್ಸವವು — ತಾ. 13 1—57ರಲ್ಲು ಮೈಸೂರಿನ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಪತ್ರಿಕಾ ಪರಿಷತ್ತು— ಈಚೆಗೆ ಜರಗಿದ ಮೈಸೂರು ವಿಭಾಜನೆ ಜಿಲ್ಲೆಗಳ ಕಲೆಕ್ಟರರ ಪರಿಷತ್ತಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ಕಂದಾಯ ವಸೂಲಿ ಕ್ರಮವು ಉತ್ತಮವೆಂದು ಪರಿಗಣಿಸಲ್ಪಟ್ಟಿದೆಯೆಂದು ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಹಸವರು ತಮ್ಮ ಪತ್ರಿಕಾ ಪರಿಷತ್ತಿನಲ್ಲಿ ಹೇಳಿದರು. ಮೈಸೂರಿನ ಈಗಿನ ಆರ್ಥಿಕ ಸರಿಸ್ಥಿತಿಯನ್ನಯ ದಕ್ಷಿಣ ಕನ್ನಡದ ಆಭಿವೃದ್ಧಿ ಕಾರ್ಯಗಳಿಗೆ ವಿಶಾಲವಾದ ಹಣದಲ್ಲಿ ಸ್ವಲ್ಪ ಕಡಿತವಾಗಬಹುದು ದೆಂದೂ ಅವರೆ ಈಗ ಮಂಜೂರಾದ ಕೆಲಸಗಳನ್ನು ಸಂಪೂರ್ಣ ನೆರವೇಸಲಾಗುವುದೆಂದೂ ಅವರು ತಿಳಿಸಿದರು. ಡ. ಕ. ಜಿಲ್ಲೆಗೆ ಸಂಬಂಧವಪಟ್ಟ ದ್ವಿತೀಯ ಪಂಚವಾರ್ಷಿಕಯೋಜನಾ ಕಾರ್ಯಕ್ರಮಗಳನ್ನು ಸರಕಾರಕ್ಕೆ ಮುಂಜಾರತಿ ಬಗ್ಗೆ ಕಳುಹಿಸಲಾಗಿದೆಯೆಂದೂ ಅವರು ಮುಂಜಾರತಿ ಸವ್ಯದಲ್ಲೇ ಆಗಬಹುದೆಂದೂ ಹೇಳಿದರು.

ರೋಟರಿಕ್ಲಬ್ಬಿನಲ್ಲಿ ಭಾಷಣ-ತಾ೨೭ ರಲ್ಲು ರಾತ್ರಿ ಶ್ರೀ ಪಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿರಗಿದ ಮಂಗಳೂರು ರೋಟರಿಕ್ಲಬ್ಬಿನಲ್ಲಿ, ಆಮೇರಿಕದಲ್ಲಿ ಲೋಹಶಾಸ್ತ್ರ ತಜ್ಞರಾಗಿರುವ---ಈಗ ಭಾರತಕ್ಕೆ ಬಂದಿರುವ ಡಾ| ಜೆ. ಕೆ. ಭಟ್ಟರು "ಆಮೇರಿಕಾದಲ್ಲಿ ವ್ಯವಹಾರೋದ್ಯಮ" ಎಂಬೀ ವಿಷಯದಲ್ಲಿ ಭಾಷಣೀಯಿತ್ತಾ, ಆಮೇರಿಕಾದಲ್ಲಿ ವ್ಯಾಪಾರ ಉದ್ದಿಮೆಗಳನ್ನು ನಡೆಸುವ ವಿಧಾನಗಳನ್ನು ಭಾರತದಲ್ಲಿ ಯಶಸ್ವಿಯಾಗಿ ಅನುಕರಿಸ ಬಹುದಾಗಿದೆ ಎಂದು ಹೇಳಿದರು.

ಡ ಕ ಜಿಲ್ಲಾ ಶೈಕ್ಷಣಿಕ ಸಮ್ಮೇಳನವು-- ತಾ. 30ರಲ್ಲು 'ಸೈಂಟ್' ಎಲೋಸಿಯಸ್ ಕಾಲೇಜಿನ ಪ್ರಿನ್ಸಿಪಾಲರಾದ ರೆ| ಫಾ| ಎ. ಸಾಲ್ಡಾನರ ಅಧ್ಯಕ್ಷತೆಯಲ್ಲಿ ಜರಗಿತು ಸ್ವಾಗತ ಸಮಿತಿ ಉಪಾಧ್ಯಕ್ಷ ರೆ| ಫಾ| ಜೇಮ್ಸ್ ಕೊಯೆಲ್ಹೋರವರು ಸ್ವಾಗತ ಭಾಷಣ ಮಾಡಿದ ಬಳಿಕ ಶಿಕ್ಷಣ ಸಂಘದ ಕಾರ್ಯದರ್ಶಿ ಶ್ರೀ ಪಿ. ಎಸ್. ವೆಂಕಟ್ರಾಯ ಪೈಯರು ನರದಿಯನ್ನೂ ಪ್ರತಿನಿಧಿಗಳ ಸಭೆಯಲ್ಲಿ ಪಾಸಾದ ನಿರ್ಣಯಗಳನ್ನೂ ಓದಿದರು. ಸಮ್ಮೇಳನವ ಅಧ್ಯಕ್ಷರು ತಮ್ಮ ಭಾಷಣದಲ್ಲಿ "ಉಪಾಧ್ಯಾಯರು ಮಕ್ಕಳಿಗೆ ಬರೆ ಲೌಕಿಕ ವಿದ್ಯೆ ಮಾತ್ರ ಕೊಡದೆ ಉತ್ತಮ ಮಾನವತೆಯನ್ನು ರೂಪಿಸುವ ನೀತಿಯುಕ್ತವಾದ ವಿದ್ಯೆಯನ್ನು ಕೊಡಬೇಕು ಈ ದಿಸೆಯಲ್ಲಿ ಉಪಾಧ್ಯಾಯರ ಹೊಣೆಗಾರಿಕೆಯು ಮಹತ್ತಾದ್ದಿದೆ. ಮಾನಸಿಕ ಜೀವನಕ್ಕೆಯೊಂದಿಗೇನೇ ಶಾರೀರಿಕ ಜೀವನಕ್ಕೆಗೂ ತಕ್ಕ ಶ್ರದ್ಧೆ ಇರಬೇಕು. ಧಾರ್ಮಿಕ ನೀತಿಯಲ್ಲೂ, ವಿದ್ಯಾರ್ಥಿಗಳಿಗೆ ಸರಿಯಾದ ಶಿಕ್ಷಣ ಜೊತೆಯಬೇಕು. ಎಂದು ಹೇಳಿದರು. ಸಭೆಗೆ ಆತಿಥಿಯಾಗಿ ಬಂದಿದ್ದ ಜೇಗಾಮಿನ ಟ್ಯೂಟೋರಿಯಲ್ ಹೈಸ್ಕೂಲಿನ ಮುಖ್ಯೋಪಾಧ್ಯಾಪಕ ಶ್ರೀ ಕೆ. ಜಿ. ಭಟ್ಟರಯನರು ಕೂಡಾ ಭಾಷಣವನ್ನಿತ್ತರು.

98 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂದಲೆ ರಾಮಸ್ವಾಮಿ ಅಯ್ಯಂಗಾರವರ ರಕ್ತವರ್ಧಕ ಔಷಧಗಳು

ಟ್ರೇಡ್ ಮಾರ್ಕ್



ಸಂತಾನ ಸಿಂಧೂರ | **ಮದನ ವಿಲಾಸ**
(ಸ್ತ್ರೀಯರಿಗೆ: ಪ್ಯಾಕೆಟ್) | (ಪುರುಷರಿಗೆ: ಗುಳಿಗೆ)

ಈ ಔಷಧವು ಬಹಿಷ್ಠೆ ಸಂಬಂಧದ ಹೊಟ್ಟೆ ನೋವನ್ನು ನಿವಾರ್ಮಾಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ ಬಂಜೆತನವನ್ನು ಕೊನೆಗುಟ್ಟಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಆತ್ಯುಷ್ಣ ಶಮನಮಾಡಿ, ಸ್ವಪ್ನ ಸುತ್ತು ವೀರ್ಯ ಸ್ಖಲನಗಳನ್ನು ತಡೆಗಟ್ಟಿ, ವೀರ್ಯಾಣುಗಳನ್ನು ಪಂ|| A.R. ಅಯ್ಯರ್, ವೈದ್ಯರು, ನಪುಂಸಕತೆಯನ್ನು ಸಾನಾವರೇಷ ಮಾಡುತ್ತವೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ ತಾಯ್ತಂದೆಗಳಾಗಿದ್ದಾವೆ.
ಹೊಕ್ಕ ಕ್ಯಾಟಲಾಗು, ಬಿಸಳದ ಬೆಲೆ ಇತ್ಯಾದಿಗಳಿಗೆ ತಿ ಅಡಿ ಸ್ಟಾಂಪು ಕಳಿಸಿರಿ
ಎ. ರಾಮಸುಬ್ಬಣ್ಣಿ ಅಯ್ಯರ್ ಸನ್ & ಕಂ., (ನೆ. ಯು.)
648 ಸಂತಾನ ನಿಧಿಧೂರ ಸಿವನ (ಪೋಸ್ಟ್ ಬೀಕ್ಸ್ ೨) ಮೈಸೂರು S. I.

ನಿಮ್ಮ ಆರ್ಥಿಕ ಸಮಸ್ಯೆಗಳಿಗೆ ಸಲಹೆಗಳು ಬೇಕೆಂದಿದ್ದಾಗ, ಅವುಗಳನ್ನು ಕೊಡಲು ಸದಾ ಸಿದ್ಧರಿದ್ದೇನೆ!

ಮೈಸೂರು, ಮದರಾಸು, ಆಂಧ್ರ ಪ್ರದೇಶ, ಕೇರಳ ನುತ್ತು ಮುಂಬಯಿ ಸಂಸ್ಥಾನಗಳಲ್ಲಿ ಒಟ್ಟು 46 ಶಾಖೆಗಳಿವೆ. ಸಕಲ ವಿಧದ ಬೇಂಕಿಂಗ್ ವಹಿವಾಟುಗಳನ್ನು ಕೈಗೊಳ್ಳುತ್ತೇವೆ. ಗ್ರಾಹಕಿಗಳ ತೃಪ್ತಿಯೇ ನಮ್ಮ ಧ್ಯೇಯ!

50 ವರುಷಗಳಲ್ಲಿ ನಾವು ಗಳಿಸಿದ ನಮ್ಮ ಅತ್ಯಮೂಲ್ಯ ಬೇಂಕಿಂಗ್ ಅನುಭವದ ಪ್ರಯೋಜನವನ್ನು ಇಂದಿನಿಂದಲೇ ಪಡೆಯಿರಿ!!

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

[ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)
THE CANARA BANKING CORPORATION LIMITED

ಸ್ವೀಕಾರ—ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ನಮ್ಮ ದೇಶ, ಭಾರತ:

(ಭಾರತದ ಹೊಸ ಭೂವಿನರಣೆ)

ಯಂ. ವಾಸುದೇವಾಚಾರ್ ಎಂ. ಎ. ಎಲ್. ಟಿ. ಪ್ರಕಾಶಕರು: ಮಂಗಳೂರು ಪ್ರೀಡಿಂಗ್ ಎಸೋಸಿಯೇಶನ್ (ಪ್ರೈವೇಟ್) ಲಿಮಿಟೆಡ್-ಮಂಗಳೂರು. ಪುಟ 207+81+48 ಭೂಸಚಿತ್ರಗಳು+27 ಹಾಫ್‌ಟೋನ್ ಚಿತ್ರಗಳು.

ಇದೊಂದು ಹೊಸ ದೃಷ್ಟಿಕೋನದಿಂದ ಬರೆಯಲಾದ ಭೂವಿವರಣೆ. ಲೇಖಕರು ಭೂವಿವರಣೆಯಲ್ಲಿ ಪಾರಂಗತರಾದಯಂವಾಸುದೇವ ರಾಯರು ಸಾಧಾರಣವಾಗಿ ಭೂವಿವರ ಗ್ರಂಥಗಳಲ್ಲಿ ಕಾಣಸಿಗುವ ಭಾತಿಕ, ಪ್ರಾಕೃತಿಕ ಸ್ವರೂಪದ ವಿವರಗಳು ಮಾತ್ರವೇ ಇಲ್ಲದೆ ಭಾರತದ ಆರ್ಥಿಕ ಸ್ವರೂಪವನ್ನು ಕೂಲಂಕಷವಾಗಿ ವಿವೆಚಿಸಿರುವುದು ಗ್ರಂಥದ ವೈಶಿಷ್ಟ್ಯ. ಭಾತಿಕ ಲಕ್ಷಣಗಳ ಪಟ್ಟಿಗೆ ಪಾಕಿಸ್ತಾನವನ್ನು ಸೇರಿಸಿಕೊಂಡೇ ಈ ಗ್ರಂಥದ ಭಾರತವು ಇರುತ್ತದೆ ಎಂಬುದರಿಂದ ಎರಡನ್ನೂ ಬಹುಬೃಗಿ ಸ್ವೀಕರಿಸುವುದೇ ಸಾಧುವಾಪ ಮಾರ್ಗವೆಂದು ಲೇಖಕರ ವಾದ. ಅಂಕಿಸಂಖ್ಯೆಗಳನ್ನು, ಪಠಗಳನ್ನೂ, ನಕ್ಷೆಗಳನ್ನೂ ಬಹಳ ಅಭ್ಯಾಸಪೂರ್ಣವಾಗಿ ತಯಾರಿಸಿದ್ದುಸುಂದರವಾಗಿ ಮುದ್ರಿಸುವುದು ಭೂಗೋಲದ ಗ್ರಂಥದ ಜೀವಾಳ ವೆಂಬುದನ್ನು ಈ ಗ್ರಂಥದ ಬರವಣಿಗೆ ಮತ್ತು ಮುದ್ರಣವು ತೋರಿಸಿಕೊಡುತ್ತಿದೆ. ಆರ್ಟ್ ಚಿತ್ರಗಳ ಆಯ್ಕೆಯು ಪಾತ್ರ ಇದಿ ಭಾರತಕ್ಕೆ ಸಂಬಂಧಿಸಿರದೆ ದಕ್ಷಿಣ ಭಾರತಕ್ಕೆ ಪಾತ್ರ ಸಂಬಂಧಿಸಿರುವುದು ಸ್ವಲ್ಪ ನೋಜಿವ ನ್ನುಂಟುಮಾಡಿದೀರಮ

ಗ್ರಂಥದ ಅರ್ಥದಪ್ಪು ಆರ್ಥಿಕ ಭೂವಿನರಣೆಗೆ ಮಹತ್ವವನ್ನು ಕೊಟ್ಟಿರುವುದುಅರ್ಥಪೂರ್ಣವಾಗಿದೆ.ನಮ್ಮನಾಡಿನಸಾಧನಸಂಪತ್ತನ್ನು ಯೋಜನಾತ್ಮಕವಾಗಿ ಬಳಸುವ ತಂತ್ರವನ್ನು ನಾವು ರೂಢಿಸಿಕೊಳ್ಳುತ್ತಿರುವ ವೇಳೆ ಅದನ್ನು ಅರ್ಥವತ್ತಾಗಿ ಗ್ರಹಿಸಬೇಕಾದರೆ ಸಂಪತ್ತಿನ ಒಂದು ಸಮಗ್ರ ಚಿತ್ರ ವಾಸ್ತವ ಚಿತ್ರ ನಮ್ಮ ಮುಂದಿರಬೇಕಾದ್ದು ಅತ್ಯಗತ್ಯ. ಈ ಗ್ರಂಥದಲ್ಲಿ ಅದನ್ನು ನೆಲದ ಉಪಯೋಗ ಮತ್ತು ಜನರ ಉದ್ಯೋಗಗಳು, ಕೃಷಿ ಕ್ರಮಗಳು ನುತ್ತು ಮುಖ್ಯ ತೊಡಕುಗಳು, ನೀರಾವರಿ ಪದ್ಧತಿಗಳು, ಆಹಾರ ಮತ್ತು ಮೇವಿನ ಬೆಳೆಗಳು, ಆಹಾರ ಸಂಪತ್ತು ಮತ್ತು ಜನಸಂಖ್ಯೆ, ತೋಟದ ಬೆಳೆಗಳು, ನೀರು ನುತ್ತು ಇತರ ನುತ್ಪತ್ತಿ, ಪಶುಪಾಲನೆ, ಖನಿಜಗಾರಿಕೆ, ಉದ್ಯೋಗಗಳು,ಯಂತ್ರೋದ್ಯಮಗಳ ಬೆಳವಣಿಗೆಯೂ, ಭೂಸಂಪತ್ತು, ಯೋಪ ಕೈಗಾರಿಕೆಗಳು, ನಗರಗಳು, ಸಾರಿಗೆ ಮತ್ತು ವಾರಿಗೆ ಪ್ರಬುದ್ಧ ಬಂದರುಗಳ, ಭಾರತದ ವಿಶೇಷ ವ್ಯಾಪಾರ, ಜನಸಂಖ್ಯಾಭಿವೃದ್ಧಿ ಮತ್ತು ಜೀವದ ನಾಧನ ಸಂಪತ್ತುಗಳು-ಎಂಬುದಾಗಿ ವಿವರವಾಗಿ ವಿವಿಧ ಪರಿಚ್ಛೇದಗಳಲ್ಲಿ ಚಿತ್ರಿಸಲಾಗಿದೆ.

ಅತಿ ಕ್ಲಿಷ್ಟವೂ ಅಲ್ಲ ಅತಿ ಸುಲಭವೂ ಅಲ್ಲದ ಪರಿಮಾರ್ಜಿತ ಶೈಲಿಯಲ್ಲಿ, ಭಾಷಾಪುದ್ಧಿಯನ್ನು ಕಾಪಾಡಿಕೊಂಡು ವೈಜ್ಞಾನಿಕ ವಿಷಯಗಳ ಮೇಲೆ ಬರೆಯುವುದು ಸುಲಭವಲ್ಲ. ಆದರೂ ಶ್ರೀ ಎಂ ವಾಸುದೇವ ರಾಯರು ತಮ್ಮ ಆಸುಖವನ್ನು ಹಸ್ತಗಳಿಂದ. ಪ್ರಮುಖ ಪೂರ್ವಕ ಅಭ್ಯಾಸದಿಂದ ಹೊಸ ಭೂವಿನರಣೆಯನ್ನು ಮಂಗಳೂರಿನ ಆತ್ಮತ್ಯವು ಮುದ್ರಣಾಲಯಕ್ಕೆ ಸುತ್ತಾಸ್ಯವಾಗಿದೆ. ಇದಕ್ಕೆ ಮದರಾಸು ವಿಶ್ವವಿದ್ಯಾನಿಲಯದ ಪಾರಿತೋಷಿಕವೂ ದೊರಕಿನೆ. ಇನ್ನು ಕನ್ನಡಿಗರಿದನ್ನು ಕೊಂಡೊಯುವುದೊಂದೇ ಉಳಿಯಿತು.

ಮಹಾಪುರುಷ:

ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ಜೀವನ ದರ್ಶನ)

ಲೇಖಕರು:— ಮಿರ್ಜಿ ಅಣ್ಣಾರಾಯ ಪ್ರಕಾರಕರು:-ವಿವೇಕಾಭ್ಯುದಯ ಕಾರ್ಯಾಲಯ, ನೇರಳಕಟ್ಟೆ, ಮಂಗಳೂರು ಪುಟ ಯಿಪ ಬೆಲೆ: ಏರೂಪಾಯಿ.

ಧರ್ಮದರ್ಶಿ ಶ್ರೀ ಮಂಜಯ್ಯ ಹೆಗ್ಗಡೆಯವರು ಪಾರ್ಥಿವ ಶರೀರದೊಡನೆ ನನ್ನೊಂದಿಗೆ ಇಲ್ಲವಾಗಿ ಅವರ ಜೀವನ ದರ್ಶನವನ್ನು ಮುಂದಿನ ತಲೆಮಾರಿಗೆ ನಾಡಾಡಿಸಿಕೊಡುವ ಒಂದು ಜೀವನ ಚರಿತ್ರೆ ಅತ್ಯಾವಶ್ಯಕವಾಗಿತ್ತು. ಶ್ರೀ ಧರ್ಮಸ್ಥಳದ ಕ್ಷೇತ್ರಪಾಲಕಿ ಅಧಿದೇವತೆಯೂದ ಮಂಜುನಾಥ ಸ್ವಾಮಿ ನುತ್ತಾ ತನ ಬಂಟ ಅಣ್ಣಸ್ವಸಿಂದ ಎಷ್ಟೋ ಕಾಲದಿಂದ ಜನಜನಿತವಾಗಿದ್ದರೂ, ಶ್ರೀ ಮಂಜಯ್ಯ ಹೆಗ್ಗಡೆ ಯವರಿಗೆ ಮೊದಲು ಸನಾರ್ಥರಾವ ಚೆಂದಯ್ಯರೆಂಥವರು ಧರ್ಮದರ್ಶಿ ಸ್ಥಾನದಲ್ಲಿದ್ದು ಮಾರ್ಗದರ್ಶನ ಮಾಡಿದ್ದರೂ, ಧರ್ಮಸ್ಥಳವನ್ನು ಭಾರತದ ಭೂಪಟದಲ್ಲಿ ರೂಪಿಸಿದ ಶ್ರೇಯಸ್ಸು ಕಾರಣಪುರುಷ ಮಂಜಯ್ಯ ಹೆಗ್ಗಡೆಯವರಿಗೇ ಸಲ್ಲಬೇಕು. ಭಕ್ತರ ಮನಸಿತಗಳನ್ನು ಪರಿಸುವ 'ಮಂಜುನಾಥ ಸ್ವಾಮಿಯ ಬಾಯಿಯಾಗಿ, ಧರ್ಮಸಮಸ್ಯೆಯದೆ ಪ್ರಮುಖ ಪುರಸ್ಕರ್ತನಾಗಿ, ಸಾಮಾಜಸೇವೆಯ ವಿವಿಧ ರಂಗಗಳಲ್ಲಿ ಪ್ರೇರಕನಿಸಿ, ಪ್ರಾಚೀನವಾದುದನ್ನು ಅತ್ಯತನವಾದುದೊಡನೆ ಮೇಳವಿಸಿ, ಎಲ್ಲ ಬಗೆಯ ಜನರ ಪ್ರೀತ್ಯಾದರಣೆಗೆ ಪಾತ್ರರಾಗಿ, ಸಾಹಿತಿಯಾಗಿ, ಶಿಕ್ಷಣತಜ್ಞನಾಗಿ, ಕಲೆಗಾರನಾಗಿ, ಆತ್ಯಂತ ಸರಳ ತನದಿಂದ ತುಂಬುಜೀವನವನ್ನು ನಡೆಸಿ, ಮಾನವತ್ವರಿವರ್ಧ ಧುಮ್ಮಳ್ಳದ ಮಾತಾಡುವ ಮಂಜುನಾಥನಾಗಿ ಬಾಳಿದ ಶ್ರೀ ಮಂಜಯ್ಯ ಹೆಗ್ಗಡೆಯವರ ಕೃತಾರ್ಥ ಜೀವನವನ್ನು ಶ್ರೀ ಮಿರ್ಜಿ ಅಣ್ಣಾರಾಯರು ಆತೀವ ಭಾವಕತೆ, ಪರಿಪಕ್ವತೆ ಮತ್ತು ಆಲ್ಲಲ್ಲಿ ತತ್ವಯತೆಯಿಂದ ಚಿತ್ರಿಸಿದ್ದಾರೆ ಶ್ರೀ ಹೆಗ್ಗಡೆಯವರ ಜೀವನದ ಮುಖ್ಯ ಘಟ್ಟಗಳನ್ನು — ಅವಿಲ ಭಾರತಯಾತ್ರೆ, ಮಂಜುನಾಥನಲ್ಲಿ, ಮಸ್ತ್ ಕಾಭಿಷೇಕ, ಧರ್ಮಸಮ್ಮೇಳನ — ಚಾರಿತ್ರಿಕ ದೃಷ್ಟಿಯಿಂದ, ಕಾಲಾನು ಕ್ರಮವಾಗಿ ವಿವರಿಸಿದೆ ಕಾವೆಂಬರಿನು ತಂತ್ರದ ಬಳಕೆಯಿಂದ ಪ್ರಭಾವಶಾಲಿ ಸಂವರ್ಧ ಮತ್ತು ಸನ್ನಿವೇಶದಲ್ಲಿ ವರ್ಣಿಸಿರುವುದು ಈ ಜೀವನ ಚಿತ್ರದ ವೈಶಿಷ್ಟ್ಯ. ಹೆಗ್ಗಡೆಯವರು ಜೈನಧರ್ಮಾನುಯಾಯಿಗಳಾಗಿದ್ದು ಶ್ರಾವಕರಾದರೂ ನಿರ್ಗ್ರಂಥಿಗಳಷ್ಟೇ ದೊಡ್ಡ ಸಾಧಕರೆಂಬುದಕ್ಕೆ ಜೈನಯತಿಗಳೊಬ್ಬರ ಮಾತನ್ನು ಲೇಖಕರು ಉದಾಹರಿಸಿರುವುದು: 'ಮೈಮೇಲಿನ ಬಟ್ಟೆಗಳನ್ನು ಕಳಚಿದರೂತ್ಯಕ್ತೆ ಯಿತ್ತ ಬರುತ್ತದೆಂದು ಭಾವಿಸಲಾಗದು. ಜೈನ ಮುನಿಗಳು ನಿರ್ಗ್ರಂಥರಾಗುವುದು ಹೃದಯದಿಂದ. ಅಂಥ ನಿರ್ಗ್ರಂಥ ವೃತ್ತಿಯವರು ಹೆಗ್ಗಡೆಯವರು.....” ಎಷ್ಟುಸಂಪತ್ತಿದ್ದರೂಅದರ ಯೋಚನೆಯನ್ನು ಪಾಡಿದೆ ಕೆಲಸ ನೀರನ್ನು ಕೆರೆಗೆ ಚೆಲ್ಲಿದ ವಿಶಾಲ ಹೃದಯ ಹೆಗ್ಗಡೆಯವರ ಐರಿಪ್ತ ಜೀವನವು ಎಲ್ಲರಿಗೂ ಆದರ್ಶವೇ. ರಾಜಕೀಯಸ್ತರೂ ಬೇಕು, ಧಾರ್ಮಿಕ-ಸಾಮಾಜಿಕ ನೇತಾರರೂ ಬೇಕು, ಬಡಗಿ ಮೇಸ್ತ್ರಿಗಳೂ ಬೇಕು, ಯಂತ್ರಿಕರೂ ಬೇಕು-ಎಲ್ಲರೂ ಎಲ್ಲವೂ ಬೇಕು ಆವರವರ ಯೋಗಕ್ಷೇಮವು ವಿಜಾರಿಸಿ ನಾಲ್ಕು ಮಾತು ಸೃದಯಿಕವಾಗಿ ಆಡಬೇಕು-ಏನು ಕೆಲಸವೇ ಇರಲಿ ಇತರರ ಯೋಗಕ್ಷೇಮವನೇ ತನ್ನ ಯೋಗಕ್ಷೇಮವೆಂದು ಆರಿತು ನಡೆದ ಸುಜ್ಞಜೀವಿಯ ಚಿತ್ರವೊಂದು ನಮಗಿಲ್ಲಿ ಸೊರೆಯುತ್ತದೆ.

ಮಿರ್ಜಿಯವರು ಧರ್ಮಸ್ಥಳಕ್ಕೆ ಆಗಿಂದಾಗ ಬರುತ್ತಿದ್ದ, ಹೆಗ್ಗಡೆಯವರ ಮೆಚ್ಚಿಗೆಗೆ ಪಾತ್ರರಾಗಿದ್ದ ಒಬ್ಬ ಸಾಹಿತಿ ಭಕ್ತರು. ಭಕ್ತ ಪ್ರಭೆಯಿಂದಲೇ ಈ ಚರಿತ್ರೆಯನ್ನವರು ಲಿಪಿ ಸ್ಥಾರೆ. ಹೆಗ್ಗಡೆಯವರ ಸಾನ್ನಿಧ್ಯವು ನುಹಾ ಭಾಗ್ಯವೆಂದಿಸಿದ ಭಾವುಕರು ಸಜ್ಜನಿಯವರು. ಒಂದೆರಡು ಕಡೆ ಪರಿಷ್ಕಾನುಕ್ಕೋಸ್ಕರವಾಗಿಯೇ ಎಂಬಂತೆ ನಾಲ್ಕು ಮಾತು ಹೆಚ್ಚಾಗಿ ಬಿದ್ದಿದ್ದರೆ ಅದರಿಂದ ಕುಂದಿಲ್ಲ: ಹೆಗ್ಗಡೆಯವರ ದೃಷ್ಟಿಯಲ್ಲಿ ಇಂಥ ಸ್ಮಾರಕ ನಿರ್ಮಾಣಕ್ಕೆ ಇದ್ದಿ ಹೇರಳ ನಿರ್ಗಶನಗಳಿವೆ. ಒಟ್ಟಿನಲ್ಲಿ ಈ ಜೀವನಚಿತ್ರವು ರೋಚಕವಾಗಿದ್ದು ಜನಪ್ರಿಯವಾಗುವುದರಲ್ಲಿ ಸಂದೇಹವಿಲ್ಲ.

—ಕು. ಶಿ. ಹರಿದಾಸ ಭಟ್ಟ.

ಭಾರತೀಯ ಬಿರುಗೂದಲು

ಜಗತ್ತಿನ ಮಾರು ಕಟ್ಟಿಗಳಿಗೆ ಬಿರುಗೂದಲು ಆಪೂರ್ವ ವರಾಹ ಕೇಶವನ್ನು (ಬ್ರಿಸಲ್) ರಫ್ತು ಮಾಡುವ ವಿಚಾರದಲ್ಲಿ ಭಾರತವು ಅಗ್ರಸ್ಥಾನದಲ್ಲಿದೆ ಸುಮಾರು ಒಂದು ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವ ಪರಿಂದ ೭ ಲಕ್ಷ ರಾತಲು ಗಳಷ್ಟು ಬಿರುಗೂದಲನ್ನು ಪ್ರತಿ ವರ್ಷ ವೂ ಉತ್ಪಾದಿಸಲಾಗುತ್ತಿದೆ. ಪ್ರತಿ ವರ್ಷ ವೂ ಸುಮಾರು ೪ ಲಕ್ಷ ರಾತಲುಗಳ ಬಿರುಗೂದಲನ್ನು ಮುಖ್ಯವಾಗಿ ಬ್ರಿಟನ್ ಹಾಗೂ ಅಮೇರಿಕಾಗಳಿಗೆ ರಫ್ತು ಮಾಡಲಾಗುತ್ತಿದೆ.

ಬಿರುಗೂದಲನ್ನು ಮುಖ್ಯವಾಗಿ ಹಂದಿಗಳು ಮತ್ತು ಕಾಡು ಹಂದಿಗಳ ಪೀಲೆ ಬೆಳೆದಿರುವ ಕೇಶದಿಂದ ಪಡೆಯಲಾಗುವುದು. ಈ ಬಿರುಗೂದಲನ್ನು ಆಪೂರ್ವ ವರಾಹಕೇಶವನ್ನು ವಿವಿಧರೀತಿಯ ಬ್ರಷ್‌ಗಳ ತಯಾರಿಕೆಯಲ್ಲಿ ಬಳಸಲಾಗುವುದು. ಭಾರತದಲ್ಲಿ ಅತಿ ಸೃದುವಾದ ಬಿರುಗೂದಲಿನಿಂದ ಹಿಡಿದು ಅತಿ ಗಡುಸಾದ ಬಿರುಗೂದಲಿನವರೆಗೂ ಎಲ್ಲ ಗುಣದ ಬಿರುಗೂದಲೂ ದೊರೆಯುವುದು.

ಬಿರುಗೂದಲುಗಳ ವರ್ಗೀಕರಣ ನಿಯಮಾವಳಿಗೆ ಅನುಸಾರವಾಗಿ ವರ್ಗೀಕೃತವಾಗಿರುವ ಬಿರುಗೂದಲನ್ನು ಮಾತ್ರ ರಫ್ತು ಮಾಡಬಹುದಾಗಿದೆ. ವರ್ಗೀಕೃತವಲ್ಲದ ಬಿರುಗೂದಲನ್ನು ಭಾರತದ ಹೊರಗೆ ರಫ್ತು ಮಾಡುವುದನ್ನು ನಿಷೇಧಿಸಲಾಗಿದೆ. ಬಿರುಗೂದಲಿನ ಸಂಕೂರ್ಣ ವಿವರಗಳನ್ನೊಳಗೊಂಡ "ಲೇಬಲ್" ಚೀಟಿಯು ಪ್ರತಿ "ಪ್ಯಾಕೆಟ್"ನೊಂದಿಗೆ ಇರಬೇಕು. ವ್ಯವಸಾಯ ಮಂತ್ರಿ ಶಾಖೆಯ ನೂರಾರು ಜನರೂ ಪರೀಕ್ಷೆಯ ವಿಭಾಗದ ಅಧಿಕಾರಿಯೊಬ್ಬರು ಬಿರುಗೂದಲಿನ ಪ್ರತಿ ಪೆಟ್ಟಿಗೆಯನ್ನೂ ಪರೀಕ್ಷಿಸುವರು. ಭಾರತದಲ್ಲಿ ಬಿರುಗೂದಲಿನ ೧೧೯ 'ಆಗ' ಮಾರ್ಕ್' ಫ್ಯಾಕ್ಟರಿಗಳಿವೆ. ಹೀಗೆ ಕಷ್ಟಾಯದ ವರ್ಗೀಕರಣ ಪದ್ಧತಿಯನ್ನು ಅನುಷ್ಠಾನಕ್ಕೆ ತಂದಾಗಿನಿಂದಲೂ ವಿದೇಶಗಳಲ್ಲಿ ಭಾರತೀಯ ಬಿರುಗೂದಲಿನ ಗುಣವು ಬಹುಮಟ್ಟಿಗೆ ಹೆಚ್ಚಿದೆ. ವ್ಯಾಪಾರದಲ್ಲಿ ಪ್ರಾಮಾಣಿಕತೆ ಉಳಿಸಿಕೊಳ್ಳಲೂ ಪೇಟೆಯ ಗುತ್ತಿಗೆಯನ್ನು ಹಿಡಿದುಕೊಳ್ಳಲೂ ಇದು ಪಹಾಯವಿತ್ತಿದೆ.

ಲಂಡನ್ನಿನಲ್ಲಿ ನಡೆಯುವ ಬಹಿರಂಗ ಹರಾಜುಗಳ ಮೂಲಕವೂ ವಿದೇಶೀ ವ್ಯಾಪಾರಸ್ಥರ ಮೂಲಕವೂ ಭಾರತೀಯ ಬಿರುಗೂದಲಿನ ಮಾತಾಟವನ್ನು ನಡೆಸಲಾಗುತ್ತಿದೆ.



ಮಕ್ಕಳ ಮಗ್ಗಿಪುಸ್ತಕ
ನವಯುಗಪ್ರೆಸ್, ಉಡುಪಿ.

೭೦ ವರ್ಷಗಳಿಂದಲೂ ಪ್ರಸಿದ್ಧ ಇದೆ. | ಮತೀರಿಯಾ | ಇನ್ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ | ಎಲ್ಲ ಕೆಮಿಸ್ಟರಲ್ಲಿ ಗೌರ್ನಮೆಂಟರಲ್ಲಿ ದೊರೆಯುತ್ತವೆ

ಬಾಟ್ಲಿವಾಲಾ ಎಗ್ಯೂಮಿಕ್ಶರ್
ಮತ್ತು ಗುಳಿಗೆಗಳು

ಸೋಲ ಮ್ಯಾನುಫ್ಯಾಕ್ಚರರು:
ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್ ಮತ್ತು ಕಂ. ಲಿ.,
ಬಾಟ್ಲಿವಾಲಾ ಬಿಲ್ಡಿಂಗ್, ೨೨ ಬಿ, ಪೋರ್ತುಗೀಜ ಚರ್ಚ್‌ಸ್ಟ್ರೀಟ್, ಪಾಪೆರ್, ಮುಂಬಯಿ ೨೮.
Tele add "CAWASHABAD"

ರಾಮತೀರ್ಥ
ಬ್ರಾಹ್ಮೀ ತೈಲ



ಸ್ಪೆಶ್ಯಲ್ ನಂ ೧] [ನೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಪುತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. ೩—೪—೦
ಸಣ್ಣ ಬಾಟ್ಲಿಗೆ ರೂ. ೨—೦—೦

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ. ೧೪

ಪ್ರಕೃತಿಯ ಐಶ್ವರ್ಯ

(೨ನೇ ಪುಟದಿಂದ)

ನ್ನು ಪ್ರಪಂಚದ ಪ್ರತಿಯೊಂದು ಮೂಲೆಯಿಂದಲೂ ಇಲ್ಲಿಗೆ ಕರಲಾಯಿತು—ಪರೀಕ್ಷಿಸಿದ್ದಾರೆ ಈ ಸಸಿಗಳ ಪೈಕಿ ಕಲವಂತೂ ಉತ್ತರ ಪ್ರದೇಶದ ತೀಕ್ಷ್ಣವಾದ ಹವೆಯ ಪರಿಸ್ಥಿತಿಗಳನ್ನು ತಾಳಲಾರದಾದವು. ಆದರೆ ಅವುಗಳ ಪೈಕಿ ಗಣನೀಯವಾದ ಭಾಗವು ಆ ಹವಾಗುಣಕ್ಕೆ ಪಳಗಿಸಲ್ಪಟ್ಟಿದೆ. ಉದಾಹರಣೆಗೆ ಹೇಳುವುದಾದರೆ, ಇಲ್ಲಿ ಹಿಂಗೇರಿ ದೇಶದ ಪಾಟಲ ಗಿಡವಿದೆ; ಆದು ಆಕಾರದಲ್ಲಿ ಜಿಕ್ಕದಾಗಿದ್ದು, ತನ್ನ ಪೊಳಪಾದ ರಸವತ್ತಾದ ಹುಪ್ಪಗಳ ಚ್ಚಗಳನ್ನು ಸೂರ್ಯನಕಡೆಗೆ ತಿರುಗಿಸಿಕೊಂಡು ಹೆರಡಿಕೊಂಡಿರುತ್ತದೆ. ಅನತಿದೂರದಲ್ಲಿಯೇ ರಸವತ್ತಾದ ನರುಗೆಂಪು ಬಣ್ಣಕ್ಕೆ ಹೆರುಪಡೆದಿರುವ ಜವಾನೀ ಗುಲಾಬಿಯು ಗಿಡವಿದೆ—ಅದು ಮೊದಲನೆಯ ಹಿಮಪಾತದವರೆಗೆ ಅರಳುತ್ತಿರುತ್ತದೆ. ಉತ್ತರ ಧ್ರುವ ಪ್ರದೇಶದ ತೀವ್ರತಮ ವಾತಾವರಣ ಪರಿಸ್ಥಿತಿಗಳಲ್ಲಿ ಈ ಹೊಸ ಅಗಂತುಕ ಸಸಿಯು, ದೀರ್ಘಕಾಲದ ಶ್ರೇಣೀಬದ್ಧವಾದ ಪರಸ್ಪರ ತಳಿಗಳ ತರುವಾಯ ಮಾತ್ರವೇ, ಈ ಹವಾಗುಣಕ್ಕೆ ಪಳಗಿಸಲ್ಪಟ್ಟಿತು. ಆದರೆ ಅವಿಘೇಯ ಸ್ವಭಾವವನ್ನು ವಿಜ್ಞಾನಿಗಳು ಹೆದಕ್ಕೆ ತಂದರು. ಈಗ ಈ ಸಸಿಯು ಉತ್ತರ ಧ್ರುವ ಪ್ರದೇಶದ ಕಬ್ಬಾಗಿಲಿನಲ್ಲಿಯೇ ಸರಿ ಸುಮಾರು ಆದರ ಸಮೂಪದಲ್ಲಿಯೇ ವಾಸದ ಹಕ್ಕನ್ನು ಪಡೆದಿದೆ.

ವಸಂತಕಾಲವ ಪ್ರಾರಂಭವಾಗಿಯೆಂದ ಪರದ್ಯಾನಿನ ಚಿಂತ್ಯವನ್ನು ಆಮೂಪಿಸುವ ಕಾಲದವರೆಗೆ ಈ ಸಸ್ಯ ವಿಜ್ಞಾನ ಶಾಸ್ತ್ರೀಯ ವನದ ಪಾತಿಗಳ ಸಾಲುಗಳಲ್ಲಿಯೂ ಮತ್ತು ಕಾವು ಮನೆಗಳಲ್ಲಿಯೂ ಉತ್ಸಾಹವು ವಿಂಜಿಸುತ್ತದೆ. ನೂರಾರು ಜನ ಪ್ರವಾಸಿಕರೂ, ವಿದ್ಯಾರ್ಥಿಗಳೂ, ಶಾಲೆಗಳ ಮಕ್ಕಳೂ ದೇಶದಲ್ಲೆಲ್ಲೆಡೆಯಿಂದಲೂ ಸೋವಿಯೆಟ್ ಒಕ್ಕೂಟದ ಈ ಅದ್ಭುತವಾದ ಸ್ಥಳಕ್ಕೆ ಭೇಟಿಕೊಡುತ್ತಾರೆ.

ಮೂಲ್ಕಿ ಬ್ಯಾಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಗರ್ಬಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.	
24 ತಿಂಗಳಿಗೆ	4%
12 ,,	3½%
6 ,,	3¼%
3 ,,	3%
ಸೇವಿಂಗ್ಸ್ ಬ್ಯಾಂಕ್ ಲೆಕ್ಕ	2%
ಕರೆಂಟ್ ಎಕೌಂಟು	¼%

THE MOOLKY BANK, LTD-MULKI

"ನವಯುಗ" ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ, ಕಾಗದದ ಒಂದೇ ಮಗ್ಗುಲಿನಲ್ಲಿರ ಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

ನಮ್ಮ ಜಿಲ್ಲೆಯಲ್ಲಿ ಕಬ್ಬಿಣ

ಕೊಸಂಜ್ಯೋದಿಸುದ ಹೊಸ ದಿನಗಳಲ್ಲಿ "ಭಟ್ಕಳ ಪುಂಪಿ"ನ ಹೊಸ ಸುದ್ದಿ ಕೇಳದ ಜನಕ್ಕೇಗಾಗಲೇ ಇನ್ನೊಂದು ಸುದ್ದಿಯನ್ನು ಕೇಳುವ ಸುಯೋಗವೊಂದೊದಗತೆಂದರೆ— ಆಶ್ಚರ್ಯಪಡಬೇಡಿರಿ. ಇದೇನೂ ಮಾನಸ ಸಾಹಸದ ಸುದ್ದಿಯಲ್ಲ. "ಹಿತ್ತಲ ಗಿಡ ಮದ್ದಲ್ಲ" ಎಂಬ ಆಣ್ಣಾಯ ನಿಷ್ಪ್ರಯೋಜಕವಾಗಿ ಆಲ್ಪಕೆಯುಳ್ಳ ಕೇವಲ ಹೊಲಿ ಹಾಪುಗಳ ವಾಸಸ್ಥಾನವಾಗಿದ್ದು, ಇದೀಗ ಆರ್ಥಿಕ ಹಾಗು ಔದ್ಯೋಗಿಕ ಕ್ಷೇತ್ರಕ್ಕೆ ಯತ್ಕಿಂಚಿತ್ಸೇವೆ ಸಲ್ಲಿಸುವೆನೆಂದು ನೊರೆಯುತ್ತಿರುವ ಅಸಾಧಾರಣ ಸಾಹಸ—ಪಾರೆಯೊಂದರ ಸುದ್ದಿ.

ಕುಂದಾಪುರ ತಾಲೂಕಿನ ಸುಮಾರು ಈಶಾನ್ಯ ಭಾಗದಲ್ಲಿ ಹುಟ್ಟಿದ ಶ್ರೇಣಿಗೆ ಅನತಿ ದೂರದ ಸರಕಾರಿ ಸುರಕ್ಷಿತ ಕ್ಷೇತ್ರದಲ್ಲಿ "ಮೂಡಗಲ್ಲು ಪಾರೆ" ಎಂಬ ಹೆಸರಿನ ಪಾರೆಯೊಂದು ಇದೆ. ಇದರ ಮೇಲೆ ಮರಗಿಡಗಳೂ ಬೆಳೆಯದೆ, ಒಂದು ತುಂಡುಗಲ್ಲು ಕೆತ್ತಲಾಗದೆ, ಪಕ್ಕದ ನೆಲದಿಂದ ನೂರಾರು ಅಡಿ ಎತ್ತರಿ, ಎಂಟೋ ಹತ್ತೋ ಮೈಲಿಯುದ್ದ ಹಾಗೂ ಮೈಲರ ಡು ಮೈಲಿಯಗಲಕ್ಕೆ ಇದು ಬೆಳೆದಿದೆ ಕಿನಾರೆಯಲ್ಲೇ ಹುಟ್ಟಿದ ಹುಡುಗನೊಬ್ಬನು ಭದ್ರಾವತಿಯಲ್ಲಿ ಹೋಟೆಲು ಕೆಲಸ ಕ್ಕಿದ್ದಾನೆ. ಅವನ ಕಣ್ಣು ಬಹುಶಃ ಕಬ್ಬಿಣದ ಕಾರ್ಖಾನೆಯತ್ತ ಹೆರಳಿ, ಕಲ್ಲಿನ ಕಾರ್ಯಕಲಾಪಗಳ ಜತೆಗೆ ಕಬ್ಬಿಣದ ಅದುರುಗಳಿಡೆಗೂ ದೃಷ್ಟಿ ಹರಿಯಿತೊ- ಹುಟ್ಟಮೂಡಿನ ಕಗ್ಗಲ್ಲು ಪಾರೆಯ ನೆನಪು ಆಗ ಮಾಡಿತೊ. ಈ ವರ್ಷ ಊರಿಗೆ ಬಂದವನು ಒಂದು ಮೂಡಗಲ್ಲು ಪಾರೆಯ ತುಂಡೊಂನ್ನು ಹೊತ್ತುಕೊಂಡು ಹೋಗುವ ಸಾಹಸ ಮಾಡಿದ್ದೇ ಈ ಸುದ್ದಿಗೆ ಕಾರಣ.

ಕಂಡೊ ಕಾಣದೆಯೊ ಕಸವಾಗಿ ಪರಿಗಣಿಸಿದ ಒಂದು ವಸ್ತುವೇ ಸಂದರ್ಭದಲ್ಲಿ ಮಹಾಫಲಕಾರಿಯಾಗುತ್ತದೆ. ಈ ಕಲ್ಲಿನ ತುಂತಂತೂ ಕಸಕ್ಕಿಂತಲೂ ಕಡೆಮೆ ವಸ್ತು! ಆದರೂ ಆ ಹುಡುಗ ಆಕಲ್ಲನ್ನು ಭದ್ರಾವತಿಯ ಕಬ್ಬಿಣದ ಕಾರ್ಖಾನೆಯಲ್ಲಿ ತೋರಿಸಿ ಪರೀಕ್ಷಿಲಿಸಿದಾಗ ಸರಾಸರಿ ೪೫% ಕಬ್ಬಿಣ ಸಿಗುತ್ತದೆಂತ ಹೇಳಿದರಂತೆ. ಭದ್ರಾವತಿಯಲ್ಲಿ ಉಪಯೋಗಿಸುವ ಅದುರುಗಳು ೪೦% ಮಾತ್ರವೇ ಕಬ್ಬಿಣ ಕೊಡುತ್ತಿದೆ! ಮೂಡುಗಲ್ಲು ಪಾರೆಯಲ್ಲಿ ಇನ್ನೂ ಹೆಚ್ಚಿಗೆ ಕಬ್ಬಿಣ ಸಿಗುವ ಭಂಭವದ ಕುರಿತು ಆಸೆ ಇದೆ. ಇದಕ್ಕಾಗಿ ಈಗ ಒಂದು ತುಂಡಿಗೆ ಒಂದು ತುಂಡಿನ್ನು ಕಳುಹಿಸಬೇಕೆಂದು ಆ ಹುಡುಗನು ಬರೆದಿದ್ದಾನೆ. ಅದನ್ನಿಂದೊ ನಾಳೆಯೋ ಅವನ ಮನೆಯವರು ಕಳುಹಿಸಬಹುದು ಹುಡುಗನ ಊಹೆಯು ನಿಜವಾದರೆ ಇದು ಸೋದರ ವರ್ಗದಂತಿರುವ ಅಲೂರು, ಕಮಲ ಶಿಲೆ ಪಾರೆಗಳಂತೆ ಪರಿಶೀಲನಾಯೋಗ್ಯವೆಂದು ಭಾವಿ ಬಹುದು.

ಬಹು ಕಾಲದಿಂದ ಕಣ್ಣು ಮುಚ್ಚಾಲೆಯಾಡುತ್ತಿರುವ ಕಂಡಾವಳಿ ರೈಲಿನ ವಾರ್ತೆಯು ಪರಿಸುಸ್ಪಗೊಂಡು ಕಾರ್ಯರೂಪದಲ್ಲಿ ರೈಲುಪಾರಿಯು ಕನಸು ಪರಿಣತಿಗೊಳಿಲಿಕ್ಕೆ ಈ ನೂತನ ಕಬ್ಬಿಣದ ಅದುರುಗಳುಳ್ಳ ಶಿಲೆಯ ಆಕರ್ಷಣೆಯು ಕಾರಣವಾಗಬಹುದೆಂದು ನಂಬೋಣ. ಇದಲ್ಲದೆ ಸಮೀಪದ ಘಟ್ಟದಲ್ಲಿ ವಿಪುಲವಾಗಿ ಬೆಳೆದಿರುವ ಬೆತ್ತ ಮತ್ತು ಬೀಳಲುಗಳನ್ನು ಸದುಪಯೋಗಪಡಿಸಿ ಸುಸಂಘಟಿತ ಕೈಗಾರಿಕೆಯಾಗಿ ಈ ಉನ್ಮಮವನ್ನು ಬೆಳೆಸಿದರೆ ನಮ್ಮ ಸಂಪತ್ತಿನ ಪ್ರಯೋಜನವನ್ನು ನಾವು ಧಾರಾಳವಾಗಿ ಪಡೆಯಬಹುದೇಕು. ಇತ್ತ ಧರೀಣರಾದರೂ ದಯಮಾಡಿ ಗಮನಿಸಬೇಕು.

ಮೊನ್ನೆಯಷ್ಟೆ ಮಂಗಳೂರಿಗೆ ಆಗಮಿಸಿದ ಕೇಂದ್ರದ ಮಂತ್ರಿ ಶ್ರೀ ಕೆ. ಡಿ. ಮಾಲೀಯವರು ಮಂಗಳೂರಿನ ತೆಂಕಲಿಗೆ ಕಾರಾವಳಿಯಲ್ಲಿ (ಮುಖ್ಯತಃ ಕೇರಳದ ಕರಾಳ ಅಯ, ಎಣ್ಣೆಮೈಸಂಗ್ರಹವಿದೆಯೋ ಏನೆಂದು ಪರೀಕ್ಷಿಲಿಸಲು ತಜ್ಞರನ್ನು ಕೇಳಿಕೊಳ್ಳಲಾಗುವುದೆಂದು ನುಡಿದಿದ್ದಾರೆ. ನಮ್ಮ ಮುಖಂಡರು ಇದೇ ಸಂದರ್ಭದಲ್ಲಿ ಕುಂದಾಪುರದ ಮೂಡುಗಲ್ಲಿನಲ್ಲಿ ಕಬ್ಬಿಣದ ಅಂಶವಿರುವ ಸುದ್ದಿಯನ್ನು ಕೆವಿಗೆ ಹಾಕಿದಲೂಬಹುದು. ಹಾಕಿಲ್ಲವಾದರೆ ತಡವಾಗದೆ ಸರಕಾರದ ಗಮನವನ್ನು ಇತ್ತ ಸೆಳೆಯುವುದು ಜಿಲ್ಲೆಯ ಅಭಿವೃದ್ಧಿಯ ದೃಷ್ಟಿಯಿಂದ ಅತ್ಯಂತ ಅವಶ್ಯ ಮತ್ತು ಸೂಕ್ತ.

(ಬರೆದು ಬಂದುದು.)

ಆಫ್ರಿಕದಲ್ಲಿರುವ ಸೈಜೀರಿಯ ಪ್ರದೇಶದಲ್ಲಿ ಭೂಗರ್ಭ ಸಂಶೋಧನೆಯನ್ನು ನಡೆಸಿ ಎಣ್ಣೆಯ ನಿಕ್ಷೇಪವನ್ನು ಕಂಡುಕೊಳ್ಳಲು ಬ್ರಿಟಿಷರ ತಜ್ಞರು ನೆರವಾಗುತ್ತಿದ್ದಾರೆ. ಅವರು ಸೈಜೀರಿಯದ ನಿವಾಸಿಗಳಿಗೆ ತರಬೇತಿಯನ್ನು ಕೊಡುವ ಚಿತ್ರವಿದು. ಭಾರತದಲ್ಲಿ ರಷ್ಯ ಮತ್ತಿತರ ದೇಶಗಳ ತಜ್ಞರಿಂದಲೂ ವಿಶ್ವ ವಿದ್ಯಾಲಯಗಳಿಂದಲೂ ಸಂಶೋಧನೆಗೆ ನೆರವು ಸಿಗುತ್ತದೆ.

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No. 466 N/50 date 12-12-1950 of the Director of public Instruction Madras.

REFUSE IMITATIONS

ನಮ್ಮ ಟ್ರೇಡ್-ಮೋಕಿನ ಅನುಕರಣೆಯನ್ನು ಮೋದುವ ಇತರ ನಕಲಿ ಬೀಡಿಗಳನ್ನು ತಿರಸ್ಕರಿಸಿರಿ.

ALL INDIA REGISTERED TRADE MARK No. 149136.



ಮಾರ್ಗದರ್ಶನ

ಸಣ್ಣವರಿಗೆ ಸಲ್ಲದುದನ್ನು ದೊಡ್ಡವರೂ ತಿರಸ್ಕರಿಸಲಿ!

ಇದೇ ಆದರ್ಶ ಸಮಾಜ ರಚನೆಗೆ ಸಹಾಯಕವಾದ ನಡತೆ

ಒಂದು ಕುಟುಂಬವಾಗಲಿ ಅಥವಾ ರಾಷ್ಟ್ರವಾಗಲಿ ಅದರ ಜನರು ಎಷ್ಟರ ಮಟ್ಟಿಗೆ ಬುದ್ಧಿಶಾಲಿಗಳೂ ದೃಢಕಾಯರೂ ಕ್ರಿಯಾಶೀಲರೂ ಆಗಿರುತ್ತಾರೋ ಅಷ್ಟಕ್ಕೆ ಅದು ನೆಮ್ಮದಿಯಿಂದ ಬಾಳುತ್ತದೆ ಮತ್ತು ಕೀರ್ತಿ ಪಡೆಯುತ್ತದೆ ಎಂದು ನಾವೆಲ್ಲ ಬಲ್ಲೆವು; ಹಾಗೆಯೇ ಆಗಬೇಕೆಂದೂ ಬಯಸುವೆವು. ಆದರೆ ಅಂಥ ವಿಷಯಗಳಲ್ಲಿ ಪರಿಪೂರ್ಣತೆಯನ್ನು ಬಯಸಿದಾಗಿಲ್ಲ ಪಡೆಯ ಬಹುದಿಲ್ಲ. ಆ ಸಾಧನೆಯು ಬಾಲ್ಯದಿಂದಲೇ ತೊಡಗಬೇಕು. ಅದಕ್ಕೆ ತಕ್ಕ ಮಾರ್ಗದರ್ಶನವೂ ಅನುಕೂಲ ಅವಕಾಶಗಳೂ ಬೇಕು. ದುರ್ದೈವದಿಂದ ಅಂಥ ವ್ಯವಸ್ಥೆಯಿಲ್ಲದೆ ಹಿಂದುಳಿದ ಇಂದಿನ ಪ್ರಜೆಗಳಾದ ನಾವು ನಮ್ಮ ಭವಿಷ್ಯದ ಸಮಾಜ ನಿರ್ಮಾಣಗೊಳ್ಳುವುದರ ಕುರಿತು ವಿಶೇಷ ಲಕ್ಷ್ಯವನ್ನು ಹೂರೈಸಬೇಕಾಗಿದೆ.

ಇಂದಿನ ಹೆಚ್ಚಿನ ಮಕ್ಕಳ ನಡತೆಯನ್ನು ವಿಮರ್ಶಾತ್ಮಕ ದೃಷ್ಟಿಯಿಂದ ನೋಡಿದುದಾದರೆ, ಏರಳವಾಗಿರುವ ವಿದ್ಯಾವಂತರ ಕುಟುಂಬಗಳನ್ನುಳಿದು ಸಾಮಾನ್ಯ ಜನರ ಹೆಚ್ಚಿನ ಮಕ್ಕಳು ದುಡಿದು ಸಂಪಾದಿಸುವ ಶಕ್ತಿಯನ್ನು ಕೊಂಡುವ ಮೊದಲೇ, ಜೀವನದ ಸಾಮಾನ್ಯ ಪರಿಚಯವಾಗುವ ಮೊದಲೇ– ತಮ್ಮ ಹಿರಿಯರು ಕಲಿತದ್ದಕ್ಕಿಂತ ಕಡಿಮೆ ವಯಸ್ಸಿನಲ್ಲೇ ವಿಲಾಸ ದುರಾಭ್ಯಾಸಗಳ ಕಡೆಗೆ ಆಕರ್ಷಿತರಾಗುತ್ತಿರುವುದು ಕಂಡು ಬರುತ್ತಿದೆ. ಪ್ರಾಥಮಿಕ ಶಾಲೆಯಿಂದ ಹೊರಬಿದ್ದ ಅಲ್ಪಕಾಲದಲ್ಲೇ ಇವರ ಹತ್ತಿರ ಉಳಿಯುವುದೆಂದರೆ ಅಕ್ಷರವ ಗುರುತು ಮಾತ್ರ. ಉಳಿದ ಒಳತಿನ ಅಂಶವನ್ನು ಹೊರಗಿನ ವಾತಾವರಣವು ತುಂಗಿಬಿಡುತ್ತದೆ. ಅಂತೂ ಶಕ್ಯವನ್ನೇ ಹೇಳಬೇಕಾದರೆ ಇಂದು ನಾವೆದುರಿಸುತ್ತಿರುವ ಪರಿಸ್ಥಿತಿಗಿಂತಲೂ ಬಿಗುವಾದ ಪರಿಸ್ಥಿತಿಯನ್ನೇ ಬರಮಾಡಿಕೊಳ್ಳುವ ಲಕ್ಷಣ ವಿದೆನ್ನಬೇಕಾಗುತ್ತದೆ.

ವಿದ್ಯಾಭ್ಯಾಸ ವಿಷಯದಲ್ಲಿ– ಸಾಕ್ಷರತೆಯ ಪ್ರಚಾರದಲ್ಲಿ ಮೊದಲಿಗಿಂತ ನಾವೆಷ್ಟೋ ಪ್ರಗತಿಯನ್ನು ಸಾಧಿಸಿದ್ದೇವೆನ್ನುವಾಗ, ವಿದ್ಯೆಯೇ ನಮ್ಮ ಬಾಳ ಹಾದಿಗೆ ಬೆಳಕು ತೋರುವ ಸಾಧನವಾಗಿರುವಾಗ, ಹೀಗೆ ಹೇಳುವುದು ಅನೇಕರಿಗೆ ಆಶ್ಚರ್ಯವನ್ನುಂಟುಮಾಡಬಹುದು. ಆದರೆ ನವ ನಾಗರಿಕತೆಯ ಹೆಸರಿನಲ್ಲಿ ಬೆಳೆಯುತ್ತಿರುವ ಈ ದುರಾಭ್ಯಾಸಗಳು ಸಾಕ್ಷರತೆಯ ಪ್ರಚಾರಕ್ಕಿಂತಲೂ ವೇಗವಾಗಿ ಸಮಾಜದಲ್ಲಿ ವ್ಯಾಪಿಸಿವೆಯೆಂಬುದು ಎಲ್ಲರಿಗೂ ತಿಳಿದ ಸಂಗತಿ. ಅಂತಹ ವಿಷಯಗಳಲ್ಲಿ ಅಕ್ಷರಸ್ಥರಾದವರೇ ಒಂದಷ್ಟು ಮುಂದುವರಿದಿದ್ದಾರೆಂದರೂ ಹೆಚ್ಚಾಗದು ಎನ್ನುವಾಗ ಎಲ್ಲರೂ ಬರಹ ಕಲಿತೊಡನೆ ನಮ್ಮ ಪ್ರಗತಿ ಶೀಘ್ರವಾಗುವುದೆನ್ನುವ ಮಾತಿನಲ್ಲಿ ಪೂರ್ಣ ಭರವಸೆಯನ್ನಿಡುವುದೆಂತು?

ಈಚೆಗೆ "ಭಾರತದರ್ಶನ" ಕಾರ್ಯಕ್ರಮದಂತೆ ಮದ್ರಾಸಿನ ನೂರಾರು ವೈತರು ದೇಶದ ನಮ್ಮ ಪ್ರೇಕ್ಷಣೀಯ ಸ್ಥಳಗಳನ್ನು ಸರಕಾರೀ ವೆಚ್ಚದಲ್ಲಿ ಸಂದರ್ಶಿಸಿದರು. ಹೊಸದಿಲ್ಲಿಯಲ್ಲಿ ಅವರು ರಾಷ್ಟ್ರಾಧ್ಯಕ್ಷೆರೊಡನೆ ಮಾತನಾಡುತ್ತಿರುವುದನ್ನು ಚಿತ್ರವು ತೋರಿಸುತ್ತದೆ.

ನಮ್ಮ ನೆಮ್ಮದಿಗಾಗಿ ಮಿತವ್ಯಯದ ಮಂತ್ರವನ್ನು ಪ್ರತಿಯೋರ್ವನೂ ಅರಿತು ಆಚರಿಸಬೇಕೆಂಬುದು ತಮಗೆಲ್ಲ ತಿಳಿದಿದ್ದರೂ ನಮ್ಮ ನವ ನಾಗರಿಕತೆಯಲ್ಲಿ ಖರ್ಚಿನ ಕ್ಷೇತ್ರ ವಿಸ್ತರಿಸುವುದೇ ಹೊರತು ಕಡಿಮೆಯಾಗಲು ಅವಕಾಶವೇ ಇಲ್ಲ; ಮಾತ್ರವಲ್ಲ ಮೂಲ ಅವಶ್ಯಕತೆಗೆ ಅವಶ್ಯವಾದ ದೈಹಿಕ ಸರಿಶ್ರಮವು ಆ "ನಾಗರಿಕತೆ"ಗೆ ಹಿಡಿಸುವುದಿಲ್ಲ.

ಇಂದು ನಮ್ಮ ಪ್ರಗತಿಗೆ ವಿರೋಧವಾಗಿ ನಿಂತಿರುವ ಶಕ್ತಿಗಳಲ್ಲಿ ಈ ವ್ಯಾಧಿಯೊಂದು ಬಲವಾದದ್ದು. ಇದಕ್ಕೆ ತಕ್ಕ ಚಿಕಿತ್ಸೆ ನಡೆಯದೆ ಹೋದರೆ ನಮ್ಮ ಪ್ರಗತಿಯು ಕನಸಾಗಬಹುದು; ನಮ್ಮ ಕೆಲವು ಹಿರಿಯರು ನಮ್ಮನ್ನೇ ಅನುಸರಿಸಿ ನಮಗಿಂತಲೂ ಅಲಸಿ ವಿಲಾಸಿಗಳಾಗಿ ಬರಿದ್ರರಾದಾರು!

ಚಾ- ಬೀಡಿ ಇತ್ಯಾದಿ ಅತಿಯಾಗಿ ಸೇವಿಸಿ ಅದೇ ಅಂಗಡಿ-ಪೇಟೆಯಲ್ಲಿ ಅಲೆದಾಡುವುದು ಹೊಲಸು ಕೂಟಗಳನ್ನೇರ್ಪಡಿಸುವುದು—ಇತ್ಯಾದಿ ದುರಾಭ್ಯಾಸಗಳಿಗಿಂತಲೂ ಕಿರಿಯರ ಮೇಲೆ ಗಾಢವಾದ ದುಷ್ಪರಿಣಾಮವನ್ನೆಸಗುವ ವಿಷಯವಿನ್ನೊಂದಿದೆ. ಈ ದುರಾಭ್ಯಾಸ ವಿಸ್ತರಣೆಗೆ ಇಂದಿನ ಹೆಚ್ಚಿನ ಸಾಹಿತ್ಯ, ಚಲಚ್ಚಿತ್ರಗಳು ಪೋಷಕವಾಗಿವೆ. ಇಂದಿನ ಈ ವಾತಾವರಣದಲ್ಲಿ ವೈಷಯಿಕ ವಿಚಾರವು ಎಳೆಯರ ಮನಸ್ಸನ್ನು ಎಷ್ಟು ಬೇಗನೆ ಹೊಕ್ಕುತ್ತದೋ ಅಷ್ಟೇ ಶೀಘ್ರವಾಗಿ ಅದು ಅವರ ಬಾಳ್ವೆಗೆ ಅಂಧಕಾರವನ್ನೊಡ್ಡುತ್ತದೆ; ಅವರ ದೈಹಿಕ, ಮಾನಸಿಕ ಬೆಳವಣಿಗೆಯನ್ನು ತಡೆಯುತ್ತದೆ. ಅನೇಕರನ್ನು ದುಃಖ್ಯೂಳಪಡಿಸುತ್ತದೆ; ಭಾರತದ ಭಾಗ್ಯಕ್ಕೆ ಅಪಾರ ಹಾನಿಯನ್ನುಂಟು ಮಾಡುತ್ತದೆ ಈ ಕ್ರಿಯೆಯು ಹಿರಿಯರ ಗಮನಕ್ಕೆ ಬಾರದೆಯೇ ನಡೆಯುತ್ತದೆ. ಇಂಥದೇ ಕಾರಣಗಳಿಂದ ರೋಗ ಪೀಡಿತರಾದವರು, ದುರ್ಬಲರಾದವರು ನಮ್ಮಲ್ಲಿ ಅನೇಕರಿರಬಹುದೆಂದು ಹೇಳಿದರೆ ತಪ್ಪಾಗದು. ಏಕೆಂದರೆ ಅನೇಕ ವಿದ್ಯಾರ್ಥಿಗಳು ಹಾಗೂ ವಿದ್ಯೆಯುಳ್ಳವರು, ಇಂಥ ದುರಭ್ಯಾಸಕ್ಕೆ ಬಲಿಯಾಗಿ ದುಃಖಿಸಿಕೊಳ್ಳಿಗಾದದ್ದನ್ನು ತಿಳಿದ ಪಂಡಿತರೊಬ್ಬರು "ನಮ್ಮನಾಡಿನ ತರುಣರು ಈ ರೀತಿ ಹಾಳಾಗುತ್ತಿರುವುದು ಶೋಚನೀಯ" ಎಂದು ವಿಷಾದದಿಂದ ಬರೆದಿದ್ದಾರೆ.

ನಾವು ನಮ್ಮ ಕಿರಿಯರ ಮುಂದೆ ವೈಷಯಿಕ ಪ್ರಸ್ತಾಪಬಾರದಂತೆ ಜಾಗ್ರತೆ ವಹಿಸುತ್ತೇವೆ. ಹಿಂದಿನ ಕಾಲದಂತಾಗಿದ್ದರೆ ಇದು ಸೂಕ್ತವಾಗುತಿತ್ತು. ಆದರೆ ಇಂದಿಗೆ ಬಹುಮಟ್ಟಿಗೆ ಇದು ಹಳಿಯದ್ದು. ಒಳಗಿಟ್ಟು ಚೀಲ ಹೊಲಿದಂತೆಯೇ ಎನಿಸುತ್ತದೆ. ಇಂದಿನ ಪರಿಸ್ಥಿತಿಯಂತೆ ಅವರ ಮನದಿರವನ್ನಳೆದು ಅವಶ್ಯ ಕಂಡರೆ, ಎಳೆಯ ವಯಸ್ಸಿನಲ್ಲಿ ಮನಸ್ಸಿನಲ್ಲಿ ಅಂಥ ವಿಚಾರಗಳಿಗೆಡೆ ಕೊಡುವುದರಿಂದಾಗುವ ದುಷ್ಪರಿಣಾಮವ ಭೀಕರ ಸ್ವರೂಪವನ್ನವರಿಗೆ ಪರಿಚಯ ಮಾಡಿಕೊಡುವುದೇ ಸೂಕ್ತವೆಂದು ಕಾಣುತ್ತದೆ. ವಯಸ್ಸಿಗೆ ಮುಂಚಿತವಾಗಿ ಅಂಥ ಚಿಂತೆಗೊಳಗಾಗುವುದೆಂದರೆ ಮನಸಿಗೆ ಮಾರಿಯನ್ನು ಬರಮಾಡಿಕೊಂಡಂತೆ. ಬಾಳುವ ಮೋಹಿನೋಳಗೆ ಗೆದ್ದಲು ಪ್ರವೇಶಕ್ಕೆಡೆಗೊಟ್ಟಂತೆ ಎಂಬ ಸತ್ಯದ ಅರಿವು ಎಳೆಯರಿಗಾದುದಾದರೆ, ಅವರು ಸರಿಯಾದ ಮಾರ್ಗದಲ್ಲಿ ನಡೆಯದಿರಲಿಕ್ಕಿಲ್ಲ.

ಇಂಥ ವಿಷಯಗಳಲ್ಲಿ ಮಾರ್ಗದರ್ಶನವನ್ನು ಹೆಚ್ಚಿನ ಸಾಹಿತಿಗಳಿಂದ ನಿರೀಕ್ಷಿಸುವುದು ಸಾಧ್ಯವಿಲ್ಲದಾಗಿದೆ. ಅವರ ಕಲಾ ಕೌಶಲ್ಯವು ದುರಾಚಾರದಿಂದ ದೊರೆಯುವ ಸುಖವನ್ನು ವರ್ಣಿಸುವುದರಲ್ಲೇ ಮುಳುಗುತ್ತದೇನೋ! ಇಂಥಲ್ಲಿ ಆ ನಿಷಯ ಬೇರೆ. ಕಿರಿಯರಲ್ಲಿ ನಿಯಮ ಮತ್ತು ಸಂಯಮಗಳು ಆಚರಣೆಯಲ್ಲಿ ಬರುವಂತೆ ಬಳಿಕ ಮಟ್ಟಿಗೆ ಹಿರಿಯರೇ ಮಾಡಬೇಕಾಗಿತ್ತದೆ. ಹಾಗೆ ಮಾಡದೆ ನಿರ್ವಾಹವಿಲ್ಲ. ಅದಕ್ಕೆ ನಮ್ಮ ನಡತೆಯನ್ನೂ ಪುನರ್ವಿಮರ್ಶಿಸಿಕೊಳ್ಳುವುದವಶ್ಯ. ಆದಷ್ಟು ವಿಷಯಗಳಿಗೆ ರಸಿಕತನದಿಂದ ದೂರವಿದ್ದರೇ ನಾವು ಸಫಲರಾಗಬೇಕು. ಮಕ್ಕಳು ಓದಬಾರದೆನ್ನುವ ಸಾಹಿತ್ಯವನ್ನು ನಾವು ಓದುವುದನ್ನಾದರೂ ತೊಂದರೆ! ಆದರಿಂದಾಗುವ ನಷ್ಟವೆಷ್ಟೆನ್ನಬೇಕು?

ನಾವು ಜೀವನದಲ್ಲಿ ಯಶಸ್ಸನ್ನೇ ಕಂಡಿದ್ದೇವೆ ಆದರೆ ನಮಗೆ ಪುನರುಚ್ಚರಿಸಿ ಹಿತಬೋಧೆಗಿಂತ ಸಿನೇಮಾ ಗಾಯನಗಳಲ್ಲೇ ಪ್ರೇಮ ಹೆಚ್ಚು; ಅವರ ತಾರೆ ಮೂಡುತ್ತಿಗಳ ಚಿತ್ರಕ್ಕಿಂತ ಸಿನೇಮಾ ತಾರೆಗಳ ಚಿತ್ರಗಳೇ ನಮಗೆ ಪ್ರಿಯವು ಕೆಲವರಿಗಂತೂ ಅವರೇ ಆರಾಧ್ಯ ದೇವತೆಗಳು! ಅವರ ಚಿತ್ರಗಳು ಬಾರದೆ, ಬರೆ ಅವಶ್ಯಕ ಆದರ್ಶವನ್ನು ಎತ್ತಿ ಹಿಡಿದು ಮಸ್ತಕ ಪತ್ರಿಕೆಗಳು ನಮಗೆ ನೀರಸ ನಮ್ಮ ಈ ಮನೋಭಾವನೆಯಿಂದಾಗಿ ಆದರ್ಶಕ್ಕೆ ಅಧಾರವಾಗಿರುವ ಇವು ಕಡಿಮೆ ಉಳಿಯುವುದೇ ಕಷ್ಟವಾಗಿದೆ. ಮತ್ತೂ ನಾವು ಬುದ್ಧಿವಂತರು! ವಿವೇಕಿಗಳು!!

ನಮ್ಮ ಈ ಬಗೆಯ ರಸಿಕತೆಯ ಮನೋಭಾವವು ನಮ್ಮನ್ನಾವ ಗುರಿಗೆ ಕೊಯ್ಯುವುದು, ನಮ್ಮ ಪವಿತ್ರತೆಯನ್ನು ಆದಿಂತು ಕಳಂಕದ ಕೆಸರಿನಲ್ಲಿ ಮುಳುಗಿಸಿ ಬಿಡುವುದೆಂಬುದರ ಕುರಿತು ನಾವು ಒಂದಷ್ಟು ಯೋಚಿಸಬೇಕು. ಮನಸ್ಸನ್ನು ಕೆಡಿಸಿ ತೋಟೆಯಲ್ಲಿಡ್ಡಾದು ಸುಲಭವಲ್ಲವಾದರೂ ಸಾಧಿಸಿದರೆ ಸಾಧ್ಯವಾಗದೆ. ಮೇನು ಅಲ್ಲ. ಶ್ರೇಷ್ಠತೆಯ ಸಾಧನೆಗೂ ಅದೆ ಹಾದಿ. ಪರಮಾತ್ಮನು ಕೊಟ್ಟ ಸಂಯಮ ಶಕ್ತಿಯನ್ನು ಬಳಸಿಕೊಂಡು ನಿಮ್ಮ ಮನವನ್ನು ಪಾಲಿಸುವುದುಂದರೇ ನಾವು ಜೀವನದಲ್ಲಿ ಸಾರ್ಥಕ್ಯವನ್ನು ಕಾಣಬಹುದು. ಆದಷ್ಟು ನಟ್ಟಿಗೆ ನಮ್ಮನ್ನು ತಿದ್ದಿಕೊಂಡು ಕಿರಿಯರನ್ನು ಇನ್ನೂ ಉತ್ತಮ ಹಾದಿಯಲ್ಲಿ ನಡೆಯುವಂತೆ ಮಾಡೋಣ.

ಶ್ರೀ ವಿ. ಬಿ. ಅಮ್ಮೂರಿ

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ.ಎಮ್.

ಮಕ್ಕಳ, ಹಿರಿಯರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟಿ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

ಕರ್ಮವೀರ

ಸಂಪುಟ ೩೬ VOL. 36

10—1—1957

ಸಂಚಿಕೆ ೧೯ NO. 19

ನೆರೆಹೊರೆ

ಪಾಕಿಸ್ತಾನಿ ಪ್ರಭೃತಿಗಳ ವ್ಯರ್ಥ ಪ್ರಲಾಪ

ಮಹಮ್ಮದಾಲಿ ಜಿನ್ನಾರವರ ನೇತೃತ್ವದಲ್ಲಿ ಭಾರತದ ವಿಭಜನೆಗೆ ಕಾರಣವಾಗಿ, ಮುಸ್ಲಿಂ ಜಾತೀಯತಾ ಸಂಸ್ಥೆಯೊಂದು ತನ್ನದೇ ಆದ ಪ್ರತ್ಯೇಕ ಜಾತೀಯತಾ ರಾಷ್ಟ್ರವನ್ನು ಪಡೆಯಿತು. ವಿಭಜನಾನಂತರ ಕೇವಲ ಮೂರೇ ವರ್ಷಗಳಲ್ಲಿ ಸ್ವತಂತ್ರ ಗಣರಾಜ್ಯವನ್ನು ಸ್ಥಾಪಿಸಿ, ಭಾರತ ತನ್ನ ಅಂತಾರಾಷ್ಟ್ರೀಯ ಸ್ಥಾನಮಾನಗಳನ್ನು ಕಾಯ್ದುಕೊಂಡು, ಪ್ರಸಂಚದ ಪ್ರಮುಖ ಪ್ರಜಾರಾಜ್ಯಗಳೊಡನೆ ಸಮಾನಸ್ಕಂಧವಾಯಿತು. ಆದರೆ ಗಣರಾಜ್ಯದ ಘೋಷಣೆಗೆ ಪಂಕಿಸ್ತಾನಕ್ಕೆ ಏಳೆಂಟು ವರ್ಷಗಳು ಬೇಕಾದುವು. ಪ್ರಜಾರಾಜ್ಯ ದಿನಾಚರಣೆಯ ಸಮಾರಂಭದಲ್ಲಿ ಭಾಗಿಯಾಗಲು, ಪಾಕಿಸ್ತಾನದ ಆಮಂತ್ರಣದ ಮೇರೆಗೆ ಭಾರತದ ವಿಶೇಷ ಪ್ರತಿನಿಧಿ ಮೆಹರ್‌ಚಂದ್ ಖನ್ನಾರವರು ಕರಾಚಿಗೆ ತೆರಳಿ. ಭಾರತದ ರಾಷ್ಟ್ರಾಧ್ಯಕ್ಷರ ಮತ್ತು ಪ್ರಧಾನಿಯವರ ಶುಭಸಂದೇಶವ ನ್ನೋದುವಾಗ ಸಭೆಯಲ್ಲಿ ಗುಲ್ಲೆದ್ದಿತು. ಅಂದರೆ ಭಾರತದ ಮೇಲೆ ತನ್ನ ಕಪಿಮನಸ್ಸಿನ ದ್ಯೋತಕವಾಗಿ ಈ ಗಲಭೆ ನಡೆದು ದೆಂದು ಬೇರೆ ಹೇಳಬೇಕಾಗಿಲ್ಲವಷ್ಟೆ!

ಪಾಕಿಸ್ತಾನದಲ್ಲಿ ಯಾವುದೇ ಸರಕಾರ ಬರಲಿ, ಅದರ ಮುಖ್ಯ ಧೋರಣೆ—ಭಾರತದ ಟೀಕೆಯೆಂದರೆ ನಿನೇನೋ ತಪ್ಪಿಲ್ಲ. ಪಾಕಿಸ್ತಾನ ಸರಕಾರವು ಭಾರತದ ಮೇಲೆ ಹೊರಿಸಿದ ಅಪಾದನೆಗಳು ಅಸಂಖ್ಯಾತ. ಹಿಂದಿನ ಪಾಕ್ ಪ್ರಧಾನಿ ಮಿ| ಲಿಯಾಕತ್ ಅಲಿಖಾನರು ಕಾಶ್ಮೀರದ ಮೇಲೆ ಭಾರತದ ಆಕ್ರಮಣ ನಡೆಯಬಹುದೆಂಬ ಸಂದೇಹದಿಂದ ತಮ್ಮ ಸೈನ್ಯವನ್ನು ಕಾಶ್ಮೀರದಲ್ಲಿ ನಿಲ್ಲಿಸಿದರು. ಅದಕ್ಕೆ ಪ್ರತಿಯಾಗಿ ನೆಹರೂ ಸರಕಾರ ತಮ್ಮ ಸೇನೆಯನ್ನು ಕಳುಹಿಸಿ ಸಮರ್ಪಕ ಉತ್ತರವನ್ನಿತ್ತಿತು. ಹಿಂದಿನಿಂದಲೂ ಭಾರತ ಪಾಕಿಸ್ತಾನ ವೈಮನಸ್ಸಿಗೆ ಕಾರಣವಾದ ಕಾಶ್ಮೀರ ಸಮಸ್ಯೆಯಿಂದು ಪೆಡಂಭೂತವಾಗಿ ಪರಿಣಮಿಸಿದೆ. ಅಲ್ಲದೆ ಈ ವಾರ ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಮಂಡಳದಲ್ಲಿ ನಾಲ್ಕು ವರ್ಷಗಳ ಬಳಿಕ ಪುನಃ ಚರ್ಚೆ ಸಲ್ಪಡುತ್ತದೆ! ಇದಕ್ಕೆ ಪಾಕಿಸ್ತಾನದ ಉಪದ್ವ್ಯಾಪನೇ ಕಾರಣ!

ಕಾಶ್ಮೀರವು ತನ್ನದೇ ಆದ ಘಟನೆಯೊಂದನ್ನು ಸಿದ್ಧಪಡಿಸಿ, ಭಾರತದೊಡನೆ ತನ್ನ ಸೇರ್ಪಡೆಯನ್ನು ಸಾರಿತು. ಅಲ್ಲದೇ ಹಿಂದಿನ ಪ್ರಧಾನಿ ಶೇಕ್ ಅಬ್ದುಲ್ಲಾ ಮತ್ತು ಮಿರ್ಜಾ ಅಫಜಲ್ ಬೇಗರು ಹಿಂದೆ ದೆಹಲಿಯಲ್ಲಿ ಏಕಹಕಾರಿ ಒಡಂಬಡಿಕೆಯು ತಳಕಡಿಯಲ್ಲಿ ಈ ಘಟನೆ ನಿರ್ಮಾಣ ಹೊಂದಿದೆ ರಾಜ್ಯ ಘಟನೆಯ ಬಗ್ಗೆ ಪಾಕ್ ರಾಷ್ಟ್ರೀಯರು ಸಹಾನುಭೂತಿ ತೋರಿಸಿದರೂ, ತದ್ಮುಖಾಜಕೀಯ ಉದ್ದೇಶ ಸಾಧನೆಗಾಗಿ ಪಾಕ್ ಸರಕಾರಿ ನೇತೃಗಳ ವಿರೋಧ ಕಂಡು ಬರುತ್ತಿದೆ ಯೆಂಬ ಕಾಶ್ಮೀರದ ಪ್ರಧಾನಿ ಮಿ| ಬಕ್ಷಿ ಗುಲಾಂ ಮಹಮ್ಮದರ ಮಾತಿನಲ್ಲಿ ಸತ್ಯಾಂಶ ಹುದುಗಿದೆ. ಪಾಕ್ ಅಕ್ರಮಿತ ಕಾಶ್ಮೀರದ ಜನತೆಯ ಬಗ್ಗೆ ತಮ್ಮ ಸಹಾನುಭೂತಿ ವ್ಯಕ್ತಪಡಿಸಿದರು ಮಿ| ಬಕ್ಷಿ ಕಾಶ್ಮೀರವು ಶೆಚ್ಚಿನ ಜನಸಂಖ್ಯೆ ಮುಸಲ್ಮಾನರಾದುದಂದಿಂ, ಕಾಶ್ಮೀರವು ಪಾಕಿಸ್ತಾನದ ಅಂಗವೆಂದು ಬೊಬ್ಬಿಡುತಿದ್ದಾರೆ ಪಾಕ್ ನಾಯಕರು ಆದರೆ ಕಾಶ್ಮೀರದ ಜನತೆ ತನ್ನ ಹೆಲವು ಪೂರ್ವೈಕೆಗಳಿಗೆ ಭಾರತವನ್ನೇ ಸೊಂದಿಕೊಂಡಿರುವುದೆನ್ನು ಪಾಕ್ ನಾಯಕರು ಮನಗಂಡಿರಲಾರದೇ? ಕಾಶ್ಮೀರವು ಪಾಕಿಸ್ತಾನದ ಅಂಗವಾದರೆ, ಪಾಕಿಸ್ತಾನವು ಭಾರತದ ಅಂಗವಲ್ಲವೇ? ಭಾರತದ ಮೂಲಭೂತ ಏಕ್ಯತೆಗೆ ವಿರುದ್ಧವಾಗಿ ಭಾರತದ ವಿಭಜನೆ ಹಾಗೂ ಪಾಕಿಸ್ತಾನದ ರಚನೆ—ಇವು ಅಸ್ವಿತ್ವಕ್ಕೆ ಬಂದುದಿಲ್ಲವೇ- ಆದರೆ ಇಂಥ ಪ್ರಶ್ನೆಗಳಿಂದು ಅಪ್ರಸ್ತುತ.

ಭಾರತವು ಪಾಕಿಸ್ತಾನದ ಸ್ವಾಯತ್ತೆಗೆ ಧಕ್ಕೆಯೊಡ್ಡುತ್ತಿದೆ; ಒಂದಲ್ಲ ಒಂದು ದಿನ ಭಾರತವು ತನ್ನ ಮೇಲೆ ಆಕ್ರಮಣ ನಡೆಸಬಹುದೆಂದು ಪಾಕ್ ಪ್ರಧಾನಿ ಮಿ| ಸುಹ್ರವರ್ದಿಯವರು ಆಪಾದಿಸಿದ್ದಾರೆ. ಆದರೆ ಹಿಂದೆ ಚಾದ್‌ಬೆಟ್‌ನಲ್ಲಿ ಪಾಕ್ ಸರಕಾರವು ಆಕ್ರಮಣಕಾರಿಯನ್ನಿಟ್ಟುದು ಸರ್ವವಿದಿತವಾಗಿದೆಯಲ್ಲದೇ, ಐದು ತಿಂಗಳ ಅವಧಿಯೊಳಗಾಗಿ ತಾನು ಭಾರತದ ಸರಹದ್ದಿನ ಮೇಲೆ ನೂರಕ್ಕಿಂತಲೂ ಹೆಚ್ಚು ಬಾರಿ ಆಕ್ರಮಣ ನಡೆಸಿರುದು ಪಾಕಿಸ್ತಾನಕ್ಕೆ ತಿಳಿದಿದೆಯಲ್ಲವೇ? ಹಿಂದಿನ ವಿದೇಶ ಮಂತ್ರಿ ಮಿ| ಹಮಿದುಲ್ ಹಕ್ ಚೌಧುರಿಯವರು ಭಾರತದ ನಾಯಕರ ಸ್ವಶಾಕ್ರಮಣದ ಉತ್ಸಾಸೆಗೆ ಮಿತಿಯೇ ಇಲ್ಲವೆಂದು - ಗಿಲ್ಜಿತ್ ಮತ್ತು ಜೆತ್ಕಾಲ್‌ಗಳು ಭಾರತದ ಬಾಗಿನಾದ ಕಾಶ್ಮೀರದ ಅವಿಭಾಜ್ಯ ಅಂಗಗಳು; ಆದುದರಿಂದ ಅವು ಭಾರತದ ಭಾಗಗಳೆಂಬುದು ನಿಸ್ಸಂದೇಹ" ಎಂಬುವಾಗಿ ಕಾಶ್ಮೀರದ ನಾಯಕರು ಪ್ರಕಟನೆಯನ್ನು ಹೊರಡಿಸಿದಾಗ—ಭಾರತದ ಧೋರಣೆಯನ್ನು ಟೀಕಿಸಿದ್ದರು. ಭಾರತ ಸರಹದ್ದುಗಳಲ್ಲಿ ಪಾಕಿಸ್ತಾನದ ಆಕ್ರಮಣದಿಂದ, ಸ್ಥಳಾಕ್ರಮಣದ ಅತ್ಯಾಸೆಯಿರುವುದು ಯಾರಿಗೆಂದು ವಿಶದವಾಗುತ್ತದೆ.

ಇದಲ್ಲದೆ ಭಾರತದ ಅಂತಾರಾಷ್ಟ್ರೀಯ ವ್ಯಾತಿಗೆ ಮಸಿಬಳಿಯುವ ಸಾಧ್ಯವಾದ ಸರ್ವ ವಿಧದ ಕಾರ್ಯಕ್ರಮಗಳನ್ನೆಲ್ಲಾ ಪಾಕ್ ನಾಯಕರು ಖಂಡಿತವಾಗಿಯೂ ಆಚರಣೆಗೆ ತರಲು ಸಿದ್ಧರಿದ್ದಾರೆ. ಇದಕ್ಕೆ ನಿದರ್ಶನ ಸುಹ್ರವರ್ದಿಯ ಹಿಂದಿನ ಗೋವಾ ಮತ್ತು ಲಿಸ್ಬನ್ ಸಂದರ್ಶನ. ಭಾರತದ ನಿಜಾರದಲ್ಲಿದ್ದ ವೈಮನಸ್ಯವನ್ನು ಇನ್ನೂ ಹೆಚ್ಚುಗೊಳಿಸಲು ಸುಹ್ರವರ್ದಿಯವರು ಪ್ರಯತ್ನ ನಡೆಸಿಯೇ ಇರುತ್ತಾರೆ. ಈಗ ಸುಹ್ರವರ್ದಿಗೆ ಗೋವೆಯೊಂದು ಆಶ್ರಯ ಸ್ಥಾನವಾಗಿದೆ. ಪಾಕಿಸ್ತಾನದ ವ್ಯಾಪಾರಿ ನಿಯೋಗವೊಂದು ಗೋವೆಗೆ ಎಲ್ಲ ಆರ್ಥಿಕ ಸೌಲಭ್ಯಗಳನ್ನೊದಗಿಸಿಕೊಡಲು ಸರಕಾರದ ಅತೀರ್ವಾದೊಡನೆ ಹೊರಟಿರುತ್ತದೆ.

ದಶಂಬರ್ ತಿಂಗಳು ಇಸ್ಲಾಮಿಯಾ ಕಾಲೇಜಿನಲ್ಲಿ ಭಾಷಣ ಮಾಡುತ್ತ, ಸುಹ್ರವರ್ದಿಯವರು ಭಾರತದಿಂದ ತನ್ನ ರಾಷ್ಟ್ರದ ಸ್ವಾತಂತ್ರ್ಯಕ್ಕೆ ಅಪಾಯ ಬರಬಹುದಾದುದರಿಂದ ಪಾಕಿಸ್ತಾನಕ್ಕೆ, ಈ ವಿಚಾರದಲ್ಲಿ ಎಷ್ಟರತನಕ ಭಾರತದ ಮೇಲೆ ಸಂದೇಹವಿದೆಯೋ, ಅಷ್ಟರವರೆಗೆ ಅದು ಏದೇಶೀ ಸೇನಾ ಸಹಾಯವನ್ನು ಪಡೆದೇ ತೀರುವುದೆಂದು ಹೇಳಿಕೆಯಿತ್ತಿದ್ದಾರೆ. ದಶಂಬರ್ ನಾಲ್ಕರಂದು ಭಾರತ ಪ್ರಧಾನಿ ಶ್ರೀ ನೆಹರೂರವರು ರಾಜ್ಯ ಸಭೆಯಲ್ಲಿ ಕೂಟ್ಟ ಹೇಳಿಕೆಯ ಮೇರೆಗೆ, ಗಲಭೆಗೆ ಪೀಠಿಕೆ ಹಾಕಲೆತ್ತಿಸುವವರಾರೆಂದು ಸ್ಪಷ್ಟವಾಗುತ್ತದೆ. ಭಾರತವು ಪಾಕಿಸ್ತಾನದ ಮೇಲೆ ಆಕ್ರಮಣ ನಡೆಸುವುದೆಂಬ ಶಂಕೆಯಿಂದ ಅಮೇರಿಕದ ಸೇನಾ ಸಹಾಯವನ್ನು ಭಾರತದ ವಿರುದ್ಧ ಕಾರ್ಯಾಚರಣೆಗೆ ತೊಡಗಿಸುವ ಉದ್ದೇಶವು ಸುಹ್ರವರ್ದಿಗಿದೆಯೆಂದು ವಿಶದೀಕರಿಸಿದ್ದಾರೆ. ಭಾರತ ಪ್ರಧಾನಿ- ಪಾಕಿಸ್ತಾನಕ್ಕೆ ಆಕ್ರಮಣ ಭಯವಿದ್ದಲ್ಲಿ, ಅನಾಕ್ರಮಣದ ಯೋಜನೆಯನ್ನು ಭಾರತವು ಈ ಮೊದಲೇ ತಿಳಿಯಪಡಿಸಿದಾಗ ಅದು (ಪಾಕಿಸ್ತಾನ) ಸ್ವೀಕರಿಸಬಹುದಿತ್ತು. ಆದರೆ ಪಾಕಿಸ್ತಾನವು ಈ ಯೋಜನೆಯನ್ನು ಸ್ವೀಕರಿಸಲಿಲ್ಲ. ಈಗ, ನಮ್ಮ ಮೇಲೆ ಆಕ್ರಮಣ ನಡೆದ ವಿನಹ ನಾವು ಇನ್ನರ ಮೇಲೆ ಸೇನಾ ಕಾರ್ಯಾಚರಣೆ ಕೈಗೊಳ್ಳುವಂತಿಲ್ಲವೆಂದು ಭಾರತ ಪ್ರಧಾನಿ ಇನ್ನೊಮ್ಮೆ ವಿವರೀಕರಿಸಿದ್ದಾರೆ. ಸುಹ್ರವರ್ದಿಯ ಈ ರೀತಿಯ ಭೀತಿ, ಗಲಭೆಯೆಬ್ಬಿಸುವ ಪೂರ್ವಾಲೋಚನೆಯಿಂದಲಿದೆ? ಪಾಕಿಸ್ತಾನ ಏನನ್ನೇ ನಂಬಲಿ, ಪಂಚಶೀಲದ ಜನಕ ರಾಷ್ಟ್ರ ಭಾರತವು ತನ್ನ ಧ್ಯೇಯಗಳನ್ನು ಸಾಧಿಸಿಯೇ ತೀರುವುದು. ಪಾಕ್ ನಾಯಕರ ಈ ರೀತಿಯ ವೃಥ ಅಸಪ್ರಚಾರದಲ್ಲಿ ಏನೇನೂ ಹುರುಳಿಲ್ಲ. ಕಾಂಗ್ರೆಸಿನ ಚುನಾವಣಾ ಘೋಷಣೆಯಲ್ಲಿ ಪಾಕಿಸ್ತಾನದ ಬಗ್ಗೆ ಹೇಳಲಾದ ಮಾತುಗಳು ಇದನ್ನೆ ಸ್ಪಷ್ಟಪಡಿಸುತ್ತವೆ.

"ಮುಸ್ಲಿಂ ರಾಷ್ಟ್ರಗಳ ಬಂಧು" ವೆಂದು ಭಾರತ ಪ್ರಧಾನಿಯವರನ್ನು ಅರಬ್

(ನೇ ಪುಟ ನೋಡಿರಿ)

ಅಧಿಕಾಧಿಕವಾಗುತ್ತಿರುವ
ನಿಮ್ಮ ವಿಶ್ವಾಸ

ನಮ್ಮ ರಜತ ಮಹೋತ್ಸವದ ವರ್ಷ

ಹಿಂದೆ (31—10—1955)
ರೂಪಾಯಿ:- 76 ಲಕ್ಷ

ಒಟ್ಟು ಚಲಾವಣೆ ಮೊಬಲಗು

ಇಂದು:- (31—10—1956)
ರೂಪಾಯಿ:- ಒಂದು ಕೋಟಿ ಗೂ ಮಿಕ್ಕಿದೆ.

ದಿ ವಿಜಯ ಬೇಂಕ್ ಲಿಮಿಟೆಡ್
ಪ್ರಧಾನ ಕಛೇರಿ: ಮಂಗಳೂರು—3.
THE VIJAYA BANK LTD.

ವಿಜ್ಞಾನದ ವಿಸ್ಮಯ

ಮಿನುಗಿ ಮಾಯವಾಗುವ ಮಿಂಚಿನಿಂದ ಬೆನ್ನುಗಟ್ಟಿಲೆ ಗೊಬ್ಬರವನ್ನು ಪಡೆಯಬಹುದು!

ಸಾರಜನಕ (ನೈಟ್ರೊಜನ್) ಅನಿಲವು ಗ್ರೀಕ್ ಭಾಷೆಯಲ್ಲಿ 'ಜೋಟ್' ಎಂದು ಕರೆಯಲ್ಪಡುತ್ತದೆ. ಅದರ ಸರಿಯಾದ ಶಬ್ದಾರ್ಥವು "ಜೀವರಹಿತ" ವೆಂದಾಗುತ್ತದೆ. ವಾಸ್ತವಿಕವಾಗಿಯೂ ಅದು ಜೀವರಹಿತವಾಗಿಯೇ ಇರುತ್ತದೆ. ಏಕೆಂದರೆ ಈ ಅನಿಲವು ಉರಿಯದು, ಬೆಂಕಿ ಸಾರಜನಕವಿರುವ ವಾತಾವರಣದಲ್ಲಿ ಪ್ರಾಣಿಗಳನ್ನಾಗಲೀ ಅಥವಾ ಸಸ್ಯಗಳನ್ನಾಗಲೀ ಇಟ್ಟರೆ ಅವು ನಾಶವಾಗುತ್ತವೆ. ಆದರೂ ಸಹ, ವಸ್ತು ಸ್ಥಿತಿ ಹೀಗಿದ್ದರೂ, ಸಾರಜನಕವಿಲ್ಲದಿದ್ದರೆ ನಮ್ಮ ಭೂಗ್ರಹದ ಮೇಲೆ ಜೀವನವೇ ಅಸಾಧ್ಯವಾಗಿ ಬಿಟ್ಟಿರುತ್ತಿತ್ತು. ಎಲ್ಲಾ ಜೀವಂತ ಜೀವಕಣಗಳಿಗೂ ಆಧಾರಭೂತವಾದ ನಿರ್ಮಾಣ ವಸ್ತುಗಳಾಗಿರುವ ಸಸಾರ ಜನಕ ಪದಾರ್ಥಗಳಲ್ಲಿ (ಪ್ರೊಟೀನ್ಸ್) ಈ ಮೂಲಾಣುವು ಅತ್ಯವಶ್ಯಕವಾದ, ಬಿಡಲಾಗದಂತಹ ಅಂಗಭಾಗವಾಗಿರುತ್ತದೆ.

ಮನುಷ್ಯನಿಗೂ ಮತ್ತು ಪ್ರಾಣಿಗಳೂ ಸಾರಜನಕವು ಇತರ ಪ್ರಾಣಿಗಳ ಮಾಂಸದಿಂದಾಗಲೀ ಅಥವಾ ಸಸ್ಯಗಳಿಂದಲಾಗಲೀ ದೊರೆಯುತ್ತದೆ. ಭೂಮಿಯಲ್ಲಿರುವ ದ್ರವ್ಯ ಸಾರಜನಕ ಲವಣಗಳನ್ನು ಸಸಿಗಳು ಹೀರಿಕೊಳ್ಳುತ್ತವೆ. ಆದರೂ ಸಹ ಭೂಮಿಯಲ್ಲಿ ಈ ಲವಣಗಳ ಮೊತ್ತವು ಸ್ವಲ್ಪ ವಾತ್ರವೇ ಇರುತ್ತದೆ ವ್ಯವಸಾಯದ ಭೂಮಿಯ (ಸಬ್ಸೈಲ್ ಸಾಯಿಲ್) ಬೇಸಾಯ ಯೋಗ್ಯವಾದ ಇಡೀ ಪದರವು ಹೆಕ್ಟಾರೊಂದಕ್ಕೆ (೨½ ಎಕರೆ) ಸುಮಾರು ಒಂದು ಟನ್ನಿನಷ್ಟು ಸಾರಜನಕವನ್ನೂ ಮತ್ತು ಕಪ್ಪು ಭೂಮಿಯು (ಚೆರ್ನೋಜೆಂ ಸಾಯಿಲ್) ಪ್ರತಿ ಹೆಕ್ಟಾರಿಗೆ ಮೂರು ಟನ್ನುಗಳಷ್ಟು ಸಾರಜನಕವನ್ನೂ ಹೊಂದಿರುತ್ತವೆ. ಸಾಮಾನ್ಯವಾಗಿ ಈ ಪರಿಮಾಣಗಳು ಕಡಮೆಯಾಗುತ್ತಿರುವ ಪ್ರವೃತ್ತಿಯೇ ಕಂಡುಬರುತ್ತದೆ.

ಭೂಮಿಯಲ್ಲಿ ಸಾರಜನಕ ಕೊರತೆಯಿದ್ದಲ್ಲಿ, ಅದು ಉತ್ಪತ್ತಿಗಳೆಲ್ಲಿಯೂ ಇಳಿತಾಯವನ್ನು ಉಂಟುಮಾಡುತ್ತದೆ. ಇದಕ್ಕೆ ವಿಪರೀತವಾಗಿ, ಕರಗುವಂತಹ ಸಸಾರಜನಕ ಲವಣಗಳನ್ನು ಭೂಮಿಯಲ್ಲಿ ಸೇರಿಸುವುದರಿಂದ, ಅದು ಉತ್ಪತ್ತಿಗಳನ್ನು ಹೆಚ್ಚಿಸಲು ಸಹಾಯಕವಾಗುತ್ತವೆ. ಆದರೆ, ನಮಗೆ ಗೊತ್ತಿರುವಂತೆ, ಘನರೂಪದ ಸಾರಜನಕ ನಿಕ್ಷೇಪಗಳು ಹೇರಳವಾಗಿ ಇರುವ ಸ್ಥಳವು ಒಂದೇ ಒಂದು ಇದೆ-ದಕ್ಷಿಣ ಆಮೆರಿಕದಲ್ಲಿನ ಚಿಲಿ ದೇಶದ ಉಣ ಮರುಭೂಮಿಗಳಲ್ಲಿರುವ ಸೆಟ್ಟಲ್ಪಿಪ್ಟಿನ (ಸಾಲ್ಟ್ ಪೀಟರ್) ನಿಕ್ಷೇಪಗಳು ನಿಜ, ವಿಶಿಷ್ಟ ಔದ್ಯೋಗಿಕ ಉದ್ಯಮಗಳಲ್ಲಿ ಗಾಳಿಯಲ್ಲಿರುವ ಸಾರಜನಕವನ್ನು ಘನೀಕರಿಸಿ ಸಂಯುಕ್ತಗೊಳಿಸುವುದರಿಂದ, ಕೃತಕ ವಿಧಾನಗಳಿಂದ ಸಾರಜನಕ ಮಿಶ್ರಿತವಾದ ಗೊಬ್ಬರಗಳನ್ನು ಉತ್ಪಾದಿಸುವುದು ಸಾಧ್ಯವಾಗುತ್ತದೆ. ಆದರೆ ಅದು ತುಂಬಾ ಖರ್ಚಿನ ವಿಧಾನ. ಹಾಗಿದ್ದೂ ಕೂಡ, ಈ ಪದ್ಧತಿಯು ವಿಸ್ತಾರವಾಗಿ ಬಳಕೆಯಲ್ಲಿದೆ.

ಸಾರಜನಕವನ್ನು ಭೂಮಿಯಲ್ಲಿ ಸೇರಿಸಿ ಅದನ್ನು ಸಮೃದ್ಧಗೊಳಿಸಲು ಬೇರೆ ಯಾವ ಮಾರ್ಗವೂ ಇಲ್ಲವೆ? ಈ ಕಾರ್ಯ ಭಾರದಲ್ಲಿ ಪ್ರಕೃತಿಯ ಭೂತಶಕ್ತಿಗಳು (ಎಲಿಮೆಂಟಲ್ ಫೋರ್ಸೆಸ್) ನಮಗೆ ಸಹಾಯವನ್ನು ನೀಡುವಂತೆ ನಾವು ಮಾಡಬಲ್ಲೆವೆ? ಮಿಂಚಿನ ಪ್ರತಿಯೊಂದು ಕೊಡೆತದಿಂದಲೂ (ಸ್ಟ್ರೋಕ್) ಅರಿ ರಿಂದ ೧೫೫೦ ಕಿಲೋಗ್ರಾಮುಗಳಷ್ಟು ಸಸಾರಜನಕವನ್ನು ಸಂಯುಕ್ತವು (ನೈಟ್ರಿಕ್ ಆಕ್ಸೈಡ್) ಉತ್ಪತ್ತಿಯಾಗುತ್ತದೆಯೆಂದು ಕರಡು ಪೆಕ್ಕಾಚಾರಗಳು ತೋರಿಸುತ್ತವೆ. ಈ 'ನೈಟ್ರಿಕ್ ಆಕ್ಸೈಡ್' ಮಳೆಯೊಡನೆ ಬೆರೆತು ಭೂಮಿಯೊಳಕ್ಕೆ ಪ್ರವೇಶಿಸುತ್ತದೆ. ಪ್ರತಿ ವರ್ಷವೂ ಪೃಥ್ವಿಯ ಮೇಲ್ಮೈಯ ಮೇಲೆ ಪ್ರತಿಯೊಂದು ಚದರ ಕಿಲೋಮೀಟರ್ ಕ್ಷೇತ್ರದ ಮೇಲೆಯೂ ಒಂದು ಅಥವ ಎರಡು ಮಿಂಚಿನ ಹೊಡೆತಗಳು ಬೀಳುತ್ತಿರುತ್ತವೆ. ಅಂದರೆ, ಮಳೆಯೊಡನೆ ಆದರಿಂದ ಸರಾಸರಿ ೧೬ ಕಿಲೋಗ್ರಾಮುಗಳನ್ನು ಸಾರಜನಕವನ್ನು (ನೈಟ್ರಿಕ್ ಆಸಿಡ್) ಪ್ರತಿಯೊಂದು ಹೆಕ್ಟಾರು ಭೂಮಿಯೊಳಕ್ಕೆ ಒಯ್ಯಲ್ಪಡುತ್ತದೆಯೆಂದು ಇದರ ಅರ್ಥ.

ವ್ಯವಸಾಯದ ಪ್ರದೇಶಗಳಲ್ಲಿ ಯಾವುದಾದರೊಂದು ಸಾಧನವನ್ನಮೂಲಕ ಗುಡುಗು-ಮಳೆಗಳನ್ನು ಪ್ರಜುರುಕುಗೊಳಿಸಿ, ಆ ಮೂಲಕ ಗಾಳಿಯಲ್ಲಿನ ಸಾರಜನಕವನ್ನು ಹೀರಿಕೊಂಡು, ಅದರಿಂದ ಸಸಾರಜನಕ ಗೊಬ್ಬರಗಳನ್ನು, ಅವುಗಳ ಬಳಕೆಯ ಸ್ಥಾನದಲ್ಲಿಯೇ ಮಿಂಚಿನ ಮೂಲಕ ಉತ್ಪಾದಿಸುವಂತೆ ಮಾಡಲು ಆಗುವುದಿಲ್ಲವೆ?

ಹೀಗೆ ಮಾಡಲು ಸಾಧ್ಯವಿದೆಯೆಂಬುದನ್ನು ಕಂಡುಹಿಡಿಯಲಾಗಿದೆ. ಸೋವಿಯತ್ ಕೃಷಿ ಶಾಸ್ತ್ರಜ್ಞರೂ ಮಣ್ಣು ವಾತಾವರಣ ಶಾಸ್ತ್ರಜ್ಞರೂ ಆದ ಎಸ್. ಎ. ಜಬಲ್ಕೋವ್‌ರವರು, ವಾತಾವರಣದ ವಿದ್ಯುಚ್ಛಕ್ತಿಯಿಂದ ಉತ್ಪಾದಿಸಲಾದ ಜೀವನದ ವ್ಯಯದಿಂದ ಆಮ್ಲೀಕರಿಸಲ್ಪಟ್ಟ ಸಾರಜನಕದೊಂದಿಗೆ ಭೂಮಿಯನ್ನು ಸಮೃದ್ಧಗೊಳಿಸಿ ಫಲವತ್ತಾಗಿ ಮಾಡಲು ವಿಭಿನ್ನ ವಾಸ್ತವಿಕ ಮಾರ್ಗಗಳನ್ನು ಸೂಚಿಸಿದರು.

ಗುಡುಗು ಮಳೆಗಳು, ಮಿಂಚಿನ ಹೊಡೆತಗಳೊಡನೆಯಷ್ಟೇ ಅಲ್ಲದೆ ನೀರವ ವಿಸರ್ಜನೆಗಳೊಂದಿಗೂ ಕೂಡ ಬರುತ್ತವೆಯೆಂಬುದು ಸುವಿದಿತವಾದ ವಿಷಯವಾಗಿದೆ.

ಮಿಂಚಿನ ವಿಸರ್ಜನೆಗಳು ಮಹತ್ತರವಾದ ಜೀವನಶಕ್ತಿಗಳಿಂದಲೂ, ಮಿಂಚಿನ ಮಾರ್ಗದಲ್ಲಿ ೩೦೦೦ ದಿಂದ ೧೫,೦೦೦ ಸೆಂಟಿಗ್ರೇಡ್ ಅಂಶಗಳಷ್ಟಕ್ಕೇರುವ (ಡಿಗ್ರಿ) ಉನ್ನತ ಉಷ್ಣೋಗ್ರತೆಯಿಂದಲೂ ಕೂಡಿರುತ್ತವೆ. ವಿಸರ್ಜನೆಯ ಅಲ್ಪಾವಧಿಯು ೦.೨೦ರಿಂದ ೦.೦೦೫ ಸೆಕೆಂಡುಗಳಷ್ಟು ಕಾಲದ ವರೆಗೆ ನಡೆಯುತ್ತಿರುವುದೂ ಇದರ ವಿಶಿಷ್ಟ ಲಕ್ಷಣವಾಗಿದೆ. ಈ ಪರಿಸ್ಥಿತಿಗಳೇ—ಗಾಳಿಯಲ್ಲಿನ ಆಮ್ಲಜನಕದ ಮತ್ತು ಸಾರಜನಕದ ಮಿಶ್ರಣವನ್ನು ಅತ್ಯನ್ನತ ಉಷ್ಣೋಗ್ರತೆಗಳ ವರೆಗೆ ಕಾಯಿಸಿ, ಹಾಗೆ ಕಾದ ಅನಿಲಗಳನ್ನು ತ್ವರೆಯಾಗಿ ಶೀತಲಗೊಳಿಸುವುದರಿಂದ ಉಂಟಾಗುವ ಪರಿಸ್ಥಿತಿಗಳೇ—ಸಾರಜನಕವನ್ನು ಸಂಯುಕ್ತವು ರೂಪುಗೊಳ್ಳುವುದಕ್ಕೆ ಅವಶ್ಯಕವೆಂದು ಅನುಕೂಲವಾಗಿರುತ್ತವೆ.

ಮಿಂಚಿನ ಹೊಡೆತಕ್ಕೆ ಮುಂಚಿತವಾಗಿ ಬರುವ ನೀರವ ವಿಸರ್ಜನೆಗಳು ವಾತಾವರಣದಲ್ಲಿರುವ ವಿದ್ಯುಚ್ಛಕ್ತಿಯ, ಹೆಚ್ಚು ಕಡಮೆ ದೀರ್ಘವಾದ ವಿಸರ್ಜನೆಗಳಾಗಿರುತ್ತವೆ. ಮಿಂಚನ್ನು ಸೆಳೆಯುವುದಕ್ಕಾಗಿ ಎತ್ತರದ ಸ್ಥಾನಗಳಲ್ಲಿ ಜೋಡಿಸಲ್ಪಟ್ಟಿರುವ ವಿದ್ಯುಲ್ಲತಾ—ನಿರೋಧಕಗಳ (ಲೈಟ್ನಿಂಗ್ ಅರೆಸ್ಟರ್ಸ್), ಮರಗಳ ಇತ್ಯಾದಿಗಳ ತುದಿಗಳಂತಹ ಎತ್ತರವಾದ, ಚೂಪಾದ ವಸ್ತುಗಳಿಂದ ಈ ವಿಸರ್ಜನೆಗಳು ಹೊರಬರುತ್ತವೆ.

ಭೂಮಿ ಮತ್ತು ಗುಡುಗಿನ ಮೇಘಗಳ ನಡುವಣ ವಿದ್ಯುತ್‌ಕ್ಷೇತ್ರದ ಉದ್ರಿಕ್ತ ಸ್ಥಿತಿಯನ್ನು ನೀರವ ವಿಸರ್ಜನೆಗಳು ಬಲಹೀನಗೊಳಿಸುತ್ತವೆ, ಮತ್ತು ಮಿಂಚಿನ ನಿಸರ್ಜನೆಗಳು ರೂಪುಗೊಳ್ಳುವುದನ್ನು ತಪ್ಪಿಸುತ್ತವೆ. ನೀರವ ವಿಸರ್ಜನೆಗಳು ಸಸಾರಜನಕಾಮ್ಲ ಸಂಯುಕ್ತವು ರೂಪುಗೊಳ್ಳುವುದಕ್ಕೆ ಮಾರ್ಗವನ್ನುಂಟು ಮಾಡಲಾರವು.

ಆದುದರಿಂದ, ವಾತಾವರಣದಿಂದುಂಟಾಗುವ ವಿದ್ಯುತ್ತಿನ ಖರ್ಚಿನಿಂದ, ಉತ್ಪತ್ತಿಗಳನ್ನು ಹೆಚ್ಚಿಸುವುದರ ಸಲುವಾಗಿ, ನೀರವ ವಿಸರ್ಜನೆಗಳಿಗೂ ಮತ್ತು ವಿದ್ಯುಲ್ಲತೆಗಳಿಗೂ ನಡುವೆ ವಿದ್ಯುಚ್ಛಕ್ತಿಯ ವ್ಯಯವು ಪುನಃ ಪ್ರಸರಿಸುವಂತೆ ಮಾಡಬೇಕು.

ಆದರೆ ಇದನ್ನು ಮಾಡುವುದು ಹೇಗೆ ಸಾಧ್ಯವಾಗಬಹುದು?

ಆಟದ 'ಬಲೂನ್' (ಆಕಾಶಬುಟ್ಟಿಯಂತಹ, ಹಾರುವ ರಬ್ಬರ್ ಬುಗ್ಗೆ) ಗಿಂತಲೂ ಸ್ವಲ್ಪ ದೊಡ್ಡದಾಗಿರುವ ಒಂದು ರಬ್ಬರ್ ಜೆಂಡನ್ನು ಕಲ್ಪಿಸಿಕೊಳ್ಳಿರಿ. ಅದನ್ನು ಕೆಳಗಡೆ ದಾರದಿಂದ ಕಟ್ಟಿದೆ, ಸುಮಾರು ಹತ್ತು ಮೈಕ್ರೋನ್‌ಗಳಷ್ಟು ವ್ಯಾಸವುಳ್ಳ ಅತಿ ಸೂಕ್ಷ್ಮವಾದ ಲೋಹ ತಂತುವಿನಿಂದ ಕಟ್ಟಲಾಗುತ್ತದೆ. ಈ ಸೂಕ್ಷ್ಮ ತಂತುವು ಒಂದು ಕೆಲೋ ವೊಲ್ಟುಗಳಷ್ಟು (ಐದು ಫರ್ಲಾಂಗು) ಉದ್ದವಿದ್ದರೂ ಅನು ಒಂದು ಗ್ರಾಮಿಗಿಂತಲೂ ಕಡಮೆ ತೂಕವಿರುತ್ತದೆ. ಗುಡುಗಿನ ಮೇಘಗಳು ಸಮೀಪಿಸಿದಾಗ, ಈ ಬುಗ್ಗೆಯು ಗಾಳಿಯಲ್ಲಿ ಮೇಲುವೇಲಕ್ಕೇರುತ್ತದೆ. ಆದರೆ ಲೋಹತಂತುವು- ತನ್ನ ಸುರುಳಿಯನ್ನು ಬಿಚ್ಚಿಕೊಳ್ಳುತ್ತದೆ. ಆದು ಗುಡುಗಿನ ಮೇಘದೊಳಕ್ಕೇರಿ ಹೊಕ್ಕಾಗ, ಅಥವಾ ಆದನ್ನು ಸಮೀಪಿಸಿದಾಗ ಕೂಡ ಈ ಬುಗ್ಗೆಯು ಬೃಹದಾಕಾರದ 'ಲೆಯೆಡೆನ್' ಜಾಡಿಯ ಎರಡು ವಿದ್ಯುತ್ ಧ್ರುವಗಳನ್ನು ತನ್ನ ಲೋಹ ತಂತುವಿನೊಡನೆ, ಹಾಗೆ ಇರುವಂತೆಯೇ ಕೂಡಿಸಿ, ಸಂಸರ್ಕವನ್ನುಂಟು ಮಾಡುತ್ತದೆ. ವಿದ್ಯುತ್ ಪ್ರವಾಹವು ಈ ತಂತುವಿನಿಂದ ಹರಿಯುತ್ತದೆ ತಕ್ಷಣವೇ ಆ ತಂತಿಯು ಲೋಹದ ಆವಿಯು ಸ್ತೂಪವಾಗಿ ರೂಪುಗೊಳ್ಳುತ್ತದೆ. ಶಕ್ತಿಯುತವಾದ ವಿದ್ಯುಲ್ಲತೆಯು ವಿಸರ್ಜನೆಯು ಈ ಅಯನೀಕರಿಸಲ್ಪಟ್ಟ (ಆಯೊನೈಸ್ಡ್) ಸ್ತೂಪದ ಮುಖಾಂತರ—ವಿದ್ಯುತ್ಪ್ರವಾಹದಲ್ಲಿ ಹರಿಯುವಂತೆ—ಕೆಳಕ್ಕೆ ನುಗ್ಗುತ್ತಾ ಪ್ರವಹಿಸುತ್ತದೆ.

ಭೂಮಿಯು ಮೇಲ್ಮೈಯ ಮೇಲೆ ಗುಡುಗು ಮೇಘಗಳ ಎತ್ತರವು ಎಂದೂ ಒಂದೆರಡು ಕಿಲೋಮೀಟರುಗಳಿಗಿಂತಲೂ ಹೆಚ್ಚಾಗದಿರುವುದರಿಂದ, ತಂತಿಯ ತೂಕವೂ ವ್ಯತ್ಯಾಸ ಕೆಲವೂ ತುಂಬಾ ಹೆಚ್ಚಾಗಿಯೇನೂ ಇರದೇಕಾಗಿಲ್ಲ ವಾತಾವರಣ ವಿದ್ಯುಚ್ಛಕ್ತಿಯ ಸಹಾಯದಿಂದ ಭೂಮಿಯನ್ನು ಫಲವತ್ತಾಗಿ

(೧೦ನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.,

ಸ್ಥಾಪನೆ: ೧೯೫೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಅಧಿಕೃತ ಬಂಡವಾಳ	...	ರೂ. 56,00,000
ಚಲಾವಣೆ ಬಂಡವಾಳ	...	ರೂ. 32,23,787
ವರ್ಗಣಿ (ಪಾಲು) ಬಂಡವಾಳ	...	ರೂ. 32,11,000
ತೆತ್ತ ಬಂಡವಾಳ	...	ರೂ. 27,45,000
ಕ್ಷೇಮನಿಧಿ	...	ರೂ. 15,00,000

ತಾ. 30-9-1956ರಲ್ಲಿ ನಮ್ಮ ಚಲಾವಣೆ ನಿಧಿ 10 ಕೋಟಿಗೂ ಮಿಕ್ಕಿದೆ

(ನವೋದಿತ ರಾಜ್ಯಗಳಲ್ಲಿ) ನಮ್ಮ ಶಾಖೆಗಳು

(ವಿಶಾಲ) ನವಮೈಸೂರು	59
ಆಂಧ್ರ ಪ್ರದೇಶ	14
ಕೇರಳ	13
ಬೊಂಬಾಯಿ	8
ಮದ್ರಾಸು	2

ಟಿ. ವಿ. ಪೈ, ಬಿ. ಕಾಂ. (ಬೊಂಬಾಯಿ) ಎಂ. ಎಲ್. ಎ., ಜನರಲ್ ಮೆನೇಜರ್.

ಟಿ. ಎಂ. ಎ. ಪೈ, ಎಂ. ಬಿ. ಬಿ. ಎಸ್., ಮೆನೇಜಿಂಗ್ ಡೈರೆಕ್ಟರ್.

The Canara Industrial & Banking Syndicate Ltd.



ಸತ್ವಪೂರ್ಣ ಸಾಹಿತ್ಯ

ಮನುಷ್ಯನ ಜ್ಞಾನರಾಶಿಯ ಲಿಪಿಬದ್ಧ ಸ್ವರೂಪವೇ ಗ್ರಂಥ

ಮಾನವತೆಯ ಮೇಲ್ಮೈಯಲ್ಲಿ ಸಾಹಿತ್ಯಕ್ಕೆ ಮಹತ್ತ್ವವಾದ ಸ್ಥಾನವಿದೆ. ಮನುಷ್ಯನು ಪ್ರಾಥಮಿಕ ವೃತ್ತಿಯಲ್ಲಿ ವಿಜಯವನ್ನು ಹೊಂದಲಿಕ್ಕೆ ಪ್ರಯತ್ನವನ್ನು ಮಾಡಿದಾಗಲೇ ಉನ್ನತಿಯತ್ತ ಮುಂದಾಳಾಗುತ್ತಾನೆ. ಈ ಉನ್ನತಿಯ ಯಾತ್ರೆಯಲ್ಲಿ ಮನುಷ್ಯನ ಬುದ್ಧಿಯೇ ಆಧಾರವಾಗಿರುತ್ತದೆ. ಈ ಬುದ್ಧಿಯು ವ್ಯಾಪಕ ರೂಪವು ಅವನ ವಾಣಿಯು ಕ್ಷಮತೆಯಿಂದಲೇ ಪ್ರಕಟನಾಗುತ್ತದೆ. ಮನುಷ್ಯನು ಬುದ್ಧಿ ವಿಹೀನನಾಗಿರುತ್ತಿದ್ದರೆ, ಯಾವ ವಿಚಾರದಲ್ಲಿ ಅವನು ಪ್ರಾಣಿಗಿಂತ ಭಿನ್ನನಾಗುತ್ತಿದ್ದ! ಅಲ್ಲದೆ ಅವನಲ್ಲಿ ಬುದ್ಧಿಯಿದ್ದಾಗ್ಯೂ ಮಾತು ಅಥವಾ ವಾಕ್ಯದ ಕ್ಷಮತೆಯೇ ಇಲ್ಲದಿದ್ದರೆ ಅವನು ಏನು ಮಾಡಬಲ್ಲ? ಕೇವಲ ವಾಕ್ಸಾನುರ್ಧ್ಯದ ಮೇಲೆಯೇ ಮನುಷ್ಯನ ವಿಕಾಸದ ಆಧಾರ ಶಿಲೆಯು ಅವಲಂಬಿತವಾಗಿದೆ. ತನ್ನ ವಿಚಾರವನ್ನು—ಕಲ್ಪನೆಯನ್ನು—ಹೃದಯದ ಭಾವನೆಯನ್ನು ಶಬ್ದದ ಮೂಲಕ ಪ್ರಕಟಿಸುತ್ತಾನೆ. ಈ ಪ್ರಕಾರ ಅದನ್ನು ಕೇವಲ ಸ್ಥಾಯಿಯಾಗಿ ಉಳಿದೆ ಅದರ ವ್ಯಾಪಕ ರೂಪವನ್ನು ಪ್ರಸಾರ ಮಾಡುವುದರಲ್ಲಿ ಸಮರ್ಥವಾಗುತ್ತೆ. ಇದನ್ನೇ ನಾವು ಸಾಹಿತ್ಯವೆನ್ನುತ್ತೇವೆ. ಇದೇ ಅದರ ಮೂಲ ಸ್ರೋತವಾಗಿದೆ

ಭಾಷೆಯ ಹರಿವಾಹವೇ ಸಾಹಿತ್ಯದಲ್ಲಿರುವುದು. ಮನುಷ್ಯನು ತನ್ನ ಅಂತರಿಕ ವಿಚಾರವನ್ನು ವಾಣಿಯ ಮೂಲಕ ಪ್ರಕಟಿಸುತ್ತಾನೆ. ಇದರ ಮುಖಾಂತರವೇ ತನ್ನ ಹುರುಪುರ ಸಂಬಂಧವನ್ನು ಸ್ಥಾಪಿಸುತ್ತಾನೆ. ವಾಣಿಯೇ ಮನುಷ್ಯನ ಪರಸ್ಪರ ವ್ಯವಹಾರದ ಮಾಧ್ಯಮವಾಗಿದೆ. ತನ್ನ ಕಡೆಯ ನೈಸರ್ಗಿಕ ವಿಶೇಷತೆಯೇ ವಾಣಿಯ ಉಪಯೋಗ. ಶಬ್ದದ ಮೂಲಕನೇ ಮನುಷ್ಯನ ಚೇತನ ಸ್ವರೂಪವು ಪ್ರಕಟವಾಗುತ್ತದೆ. ಮನಸ್ಸಿನಲ್ಲಿ ಏಳುತ್ತಿರುವ ಭಾವ ಹಾಗೂ ವಿಚಾರಗಳನ್ನು ಶಬ್ದದ ಮುಖಾಂತರ ಪ್ರಕಟಿಸುತ್ತಿರುವುದು ಅವನ ಸ್ವಾಭಾವಿಕ ಗುಣವಾಗಿದೆ. ಅದಕ್ಕೆ ಕಟ್ಟುಬಿದ್ದು ಇಚ್ಛಾಪೂರ್ತಿಗಾಗಿ ವಾಣಿಯು ಮೂಲಕ ತನ್ನ ಅವಶ್ಯಕತೆಯನ್ನು ಇನ್ನೊಬ್ಬನ ಮುಂದೆ ಹೇಳಲೇಬೇಕಾಗುತ್ತದೆ. ಒಂದು ವೇಳೆ ಪ್ರಕೃತಿಯು ಮೂಲಕ ಬಾಧ್ಯನಾಗಿಲ್ಲದಿರುತ್ತಿದ್ದರೆ ವಾಣಿಯುಕ್ತವಾಗಿದ್ದರೂ ಕೂಡಾ ಮನುಷ್ಯನು ಭಾಷಾ ಶಾಸ್ತ್ರನಾಗಿರುತ್ತಿದ್ದ ಈ ಕಾರಣದಿಂದಲೇ ಪ್ರಪಂಚನ ಭಾಷಾ ವಿಭಿನ್ನತೆ ಹಾಗೂ ಅದರ ಪರಸ್ಪರ ನೈಜ ವ್ಯವು ಉಂಟಾಗುತ್ತದೆ. ಯಾವ ಜಾತಿಯವರು ಪ್ರಕೃತಿಯಿಂದ ಹಾ ಇತರ ಕಾರಣದಿಂದ ಪ್ರೇರಣೆಹೊಂದಿ ಭಾಷೆಯು ಉಪಯೋಗದ ಅಧಿಕ ವ್ಯವಹಾರವನ್ನು ಮಾಡಿದ್ದಾರೋ ಅವರು ಅನ್ಯ ಜಾತಿಯ ಅಪೇಕ್ಷಾ, ಅಧಿಕ ಸಮ್ಮುನತರಾಗಿದ್ದಾರೆ.

ತನ್ನ ಮನೋಗತ ವಿಚಾರವನ್ನು ಇನ್ನೊಬ್ಬನ ವರೆಗೆ ತಲುಪಿಸಲಿಕ್ಕಾಗಿಯೇ ಮನುಷ್ಯನ ಭಾಷಾ ಪ್ರಯೋಗವು ಅರಂಭವಾಗುತ್ತದೆ. ಈ ಜೀವ್ಯೆಯಲ್ಲಿ ಅವನಿಗೆ ಯಾವ ಆನಂದ ಸಿಗುತ್ತದೆಯೋ, ಆ ಆನಂದದ ಪೂರ್ತಿಗಾಗಿ ಅವನು ತನಗಾಗಿಯೂ ಕೂಡಾ ಈ ನ್ಯಾಪಾರವನ್ನು ಮಾಡ ತೊಡಗುತ್ತಾನೆ. ಈ ಪ್ರಕಾರದ ಕ್ರಿಯತ್ನದ ಫಲವೇ, ಸಾಹಿತ್ಯವಾಗಿದೆ. ಮನುಷ್ಯನ ಈ ಇಚ್ಛೆಯೇ ಸಾಹಿತ್ಯದ ಮೂಲೆಯಲ್ಲಿ ಕೆಲಸ ಮಾಡುತ್ತವೆ ಇನ್ನೊಬ್ಬನು ತನ್ನ ಅನುಕೂಲ ಆಚರಣೆಯನ್ನು ಮಾಡಲಿ ಯಾ ಇಚ್ಛಾಪೂರ್ತಿಯನ್ನು ನೋಡಲಿ ಎಂಬ ಉದ್ದೇಶದಿಂದಲೇ ಮನುಷ್ಯನು ತನ್ನ ವಿಚಾರವನ್ನು ಇನ್ನೊಬ್ಬನಲ್ಲಿ ಪ್ರಕಟಿಸುತ್ತಾನೆ. ಈ ಪ್ರಕಾರದ ವ್ಯಾವಾರಕ್ಕಾಗಿ ಸಾಧ್ಯತ್ವ ವ್ಯವಹಾರವು ಸುವಿಧಾ ಜನಕವಾಗಿಲ್ಲವೋ ಆಗ ಮನುಷ್ಯನು ಲೇಖನ ವ್ಯವಹಾರವನ್ನು ಅವಿಷ್ಕಾರ ಮಾಡಿದನು. ಮುಖದಿಂದ ಉಚ್ಚಾರಿತವಾದ ಶಬ್ದದ ಸ್ಥಾಯಿತ್ವವು ಬಹಳ ಸ್ವಲ್ಪವಾಗಿದೆ. ಅದರ ಪರಿಧಿಯು ಕೇಳುವವನಲ್ಲಿ ವರೆಗೆ ಮಾತ್ರವಿರುತ್ತದೆ. ಆದರೆ ಅದನ್ನು ಲಿಪಿಬದ್ಧವಾಗಿ ಮಾಡಿದಾಗ ಅದಕ್ಕೆ ಅವಸರತ್ವವು (ಅಕ್ಷರತ್ವ) ಪ್ರಾಪ್ತವಾಗುತ್ತದೆ. ಅದು ಸ್ಥಾಯಿ ರೂಪದಲ್ಲಿ ಪ್ರಕಟವಾಗಿ ಲಿಪಿ ಬದ್ಧವಾಗುತ್ತದೆ. ಆಗ ಸಾಹಿತ್ಯಕ್ಕೆ ಅಡಿಗಲ್ಲಾಗುತ್ತದೆ

ಶಬ್ದದ ಮೂಲಕವೇ ಇನ್ನೊಬ್ಬನೊಡನೆ ಮನುಷ್ಯನ ವ್ಯವಹಾರವು ಸಲ್ಲುತ್ತದೆ ಮನುಷ್ಯನು ಸ್ವಭಾವತಃ ಏಕಾಂತ ಸೇವಿಯಾಗಿರದೆ ಜನಪ್ರೇಮಿ ಹಾಗೂ ಸಮಾಜೋಚ್ಚುಕನಾಗಿದ್ದಾನೆ ಅವನು ಒಬ್ಬಂಟಿಗನಾಗಿರುವುದಿಲ್ಲ. ಮಾನ್ಯವಲ್ಲ ಇರುವುದಕ್ಕೆ ಇಚ್ಛೆ ಇರುವುದೂ ಇಲ್ಲ. ತನ್ನೊಡನೆ ಒಳ್ಳೆಯ ವ್ಯವಹಾರವನ್ನು ಮಾಡಬೇಕು, ತನ್ನ ದೃಷ್ಟಿ ಕೋನವನ್ನು ತಿಳಿಯಬೇಕು, ತನ್ನೊಡನೆ ಸಹಾನುಭೂತಿ ತೋರಬೇಕು ಎಂಬುದಾಗಿ ಮನುಷ್ಯನು ಇನ್ನೊಬ್ಬನೊಡನೆ ತನ್ನ ಸುಖ-ದುಃಖದ ವಿಷಯದಲ್ಲಿ ಆಶಿಯನ್ನು ಇಟ್ಟುಕೊಳ್ಳುತ್ತಾನೆ. ಇದೇ ಭಾವನೆಯಿಂದ ಪ್ರೇರಿತನಾಗಿ ಅವನು ಶಬ್ದೋನ್ಮುಖನಾಗುತ್ತಾನೆ. ತನ್ನ ಆತಂರಿಕ ರೂಪವನ್ನೇ ಶಬ್ದದ ಮೂಲಕ ಪ್ರಕಟಿಸುತ್ತಾನೆ. ಹೀಗೆ ಮಾಡುವುದಕ್ಕೆ ಅವನಿಗೆ ಅವನ ಸಾಮಾಜಿಕ ವೃತ್ತಿಯೇ ಪ್ರೇರೇಪಿಸುತ್ತದೆ. ಇದೇ ಅವನ ಸ್ವಭಾವಜನ್ಯವಾದ ಗುಣ. ಈ ಕೃತಿಯಲ್ಲಿ ಅತನಿಗಾಗುವ ಯಾವ ಅನಂದಾನು ಭವವಿದೆ ಅದೇ ಸಾಹಿತ್ಯದ ಜನನ. ಮನುಷ್ಯನಿಗೆ ತನ್ನ ಇಚ್ಛೆಗಳ ಅಭಿವ್ಯಕ್ತಿಯನ್ನಾದರೋ ಬಾಧ್ಯವಾಗಿ ನೂಡಲೇ ಬೇಕಾಗುತ್ತದೆ. ಆದರೆ ಈ ಅಭಿವ್ಯಕ್ತಿಯ ಪರಿಣಾಮ ಮನುಷ್ಯನ ಕಲಾತ್ಮಕ ರೂಪದಲ್ಲಿ ಪ್ರಕಟವಾಗುತ್ತದೆ.

ಮನುಷ್ಯನ ಜಿಜ್ಞಾಸೆಗೆ ಅಂತ್ಯವಿಲ್ಲ. ಅವನು ತನ್ನದನ್ನು ಇನ್ನೊಬ್ಬನೆದುರು ಪ್ರಕಟಿಸುತ್ತಲೇ ಇರುತ್ತಾನೆ. ಇನ್ನೊಬ್ಬನ ಸುಖ-ದುಃಖವನ್ನು ತಿಳಿಯುವುದು, ತನ್ನ ಸುಖ-ದುಃಖವನ್ನು ಇನ್ನೊಬ್ಬನಿಗೆ ಸೂಚಿಸುವುದು ಅವನ ಪ್ರವೃತ್ತಿಯಾಗಿದೆ. ತನ್ನ ಅನುಭವವನ್ನು ಇನ್ನೊಬ್ಬನಿಗೆ ತಿಳಿಸುವುದು ಹಾಗೂ ಇನ್ನೊಬ್ಬನ ಸ್ವಾನುಭವವನ್ನು ತಾನು ತಿಳಿಯಲಿಚ್ಛಿಸುವುದೂ ಮನುಷ್ಯನ ಸಾಧಾರಣ ಗುಣವಾಗಿದೆ. ಈ ಗುಣದ ಕಲಾತ್ಮಕ ರೂಪವು ಭಾಷೆಯಲ್ಲಿ ಪ್ರಕಟವಾದಾಗ ಸಾಹಿತ್ಯದ ಸೃಷ್ಟಿಯಾಗುತ್ತದೆ. ಭಾಷೆಯಿಲ್ಲದೆಯೇ ಸಾಹಿತ್ಯವಿಲ್ಲ; ಅಭಿವ್ಯಕ್ತಿಯಿಲ್ಲದೆಯೇ ಭಾಷೆಯಲ್ಲ; ಅನುಭವವಿಲ್ಲದೆ ಅಭಿವ್ಯಕ್ತಿಯಿಲ್ಲ. ಭಾಷೆಯೆತ್ತು ಅನುಭೂತಿಯು ತಡೆ ಹಿಡಿಯದ ಸಂಬಂಧವುಳ್ಳದ್ದು. ಕಲಾಕಾರನು ತನ್ನ ಭಾವನೆಯನ್ನು ಶಬ್ದದ ಮೂಲಕ ಪ್ರಕಟಿಸಿ, ಅದಕ್ಕೊಂದು ಸ್ಥಾಯೊ ರೂಪವನ್ನು ಕೊಟ್ಟಾಗಲೇ ಸಾಹಿತ್ಯದ ಉದಯವಾಗುತ್ತದೆ.

ಸಾಧಾರಣ ರೂಪವಾಗಿ ಸಾಹಿತ್ಯವು ಮಾನವೀಯ ಜ್ಞಾನದ ಸಮುಚ್ಚಯವಾಗಿದೆ. ಸಾಹಿತ್ಯವು ತನ್ನ ವಿಶಾಲ ಅರ್ಥದಲ್ಲಿ ಸಂಪೂರ್ಣ ಜ್ಞಾನ ಸಮಾವೇಶಗೊಳಿಸುತ್ತದೆ. ಮನುಷ್ಯನು ಎಷ್ಟಾದರೂ ಶಬ್ದ ಮುಖಾಂತರವಾಗಿ ಪ್ರಕಟಿಸಿದ್ದಾನೋ, ಅದು ಅವನ ಸಾಹಿತ್ಯಿಕ ಪ್ರವೃತ್ತಿಯ ದ್ಯೋತಕವಾಗಿದೆ. ಈ ಪ್ರಕಾರವಾಗಿ ನಾವು ಶಬ್ದಾತ್ಮಕ ಜ್ಞಾನವನ್ನೇ ಸಾಹಿತ್ಯವೆನ್ನುತ್ತೇವೆ. ಈ ಪರಿಭಾಷೆಯಲ್ಲಿ ಅತಿ ವ್ಯಾಪ್ತಿಯ ದೋಷವಾದರೂ ಇದ್ದೇ ಇದೆ. ಇದು ಸ್ವಸ್ಥತಃ ಜೀವ್ಯವಹಾರ್ಯವೂ ಆಗಿದೆ. ಈ ವ್ಯಾಪಕಾರ್ಥದಲ್ಲಿ ಸಾಹಿತ್ಯದಂತರ್ಗತವಿಲ್ಲವೂ ಬರುತ್ತದೆ. ಜ್ಞಾನ ವಿಜ್ಞಾನ, ಕಲಾಕೌಶಲ — ಯಾವುದಾದರೂ ಕೂಡಾ ನಾವು ಶಾಬ್ದಿಕರೂಪವನ್ನು ಕೊಟ್ಟಾಗ ಈ ಅರ್ಥದಲ್ಲಿ ಸಾಹಿತ್ಯಕ್ಕೆ ಸೇರಿ ಹೋಗುತ್ತದೆ. ಹಾಗೂ ಆಗ ತನ್ನ ಅಸ್ತಿತ್ವವೂ ಇರುವುದಿಲ್ಲ. ಜ್ಞಾನವಾದರೋ ಬ್ರಹ್ಮನದ್ದೇ ರೂಪವಾಗಿದೆ. ಹಾಗೂ ಅನಂತವಾಗಿದೆ. ಮನುಷ್ಯನು ತನ್ನ ಸೀಮಿತ ಬುದ್ಧಿಯಿಂದ ಈ ಅನಂತ ಬ್ರಹ್ಮ ಸ್ವರೂಪ ಜ್ಞಾನದ ಖಂಡ ಸ್ವರೂಪದೊಂದಿಗೆ ಪರಿಚಯ ಹೊಂದುತ್ತಾನೆ. ಈ ರೀತಿಯಾಗಿ ಜ್ಞಾನದ ವಿಭಾಗೀಯ ವರ್ಗೀಕರಣ ಮಾಡಿಯೇ ಅವನು ಉನ್ನತಿಮಾಡಬಲ್ಲನು. ವಿಜ್ಞಾನ ಮತ್ತು ಸಾಹಿತ್ಯವು ಜ್ಞಾನದ್ದೇ ಸ್ಕೂಲರೂಪವಾಗಿರುತ್ತದೆ ವಿಜ್ಞಾನಕ್ಕಿಂತ ಮಿಗಿಲಾದ ಮಾನವೀಯ ಜ್ಞಾನವೇ ಸಾಹಿತ್ಯವ ವಿಶಿಷ್ಟಾರ್ಥವಾಗಿದೆ. ಬಾಹ್ಯ ಜಗತ್ತಿನೊಂದಿಗೆ ಮಾನವನ ಸಂಬಂಧವು ರಹಸ್ಯಮಯ ಸಂಬಂಧವಾಗಿದೆ. ಈ ಭೌತಿಕ ಜಗತ್ತಿನಲ್ಲಿ ಮಾನವನು ತನ್ನನ್ನು ಒಂದು ರಹಸ್ಯದ ನುಧ್ಯೆ ಹೊಂದುತ್ತಾನೆ. ಅವನಿಗೆ ತನ್ನತನದ ಬೋಧವಾದರೋ ಇದ್ದೇ ಇದೆ. ಇಂದ್ರಿಯದ ಮೂಲಕ ಜಗತ್ತಿನ ಯಾವ ಅನುಭವನನ್ನು ಪಡೆಯುತ್ತಾನೋ, ಅವನಿಗೆ ಅದರ ಪರಿಜ್ಞಾನ ಉಂಟಾಗುತ್ತದೆ ಮತ್ತು ಅತನ ಬುದ್ಧಿಯು ಈ ರಹಸ್ಯಮಯ ಪ್ರಪಂಚದ ಭೇದವನ್ನು ತಿಳಿಯುವುದರ ಕಡೆ ಪ್ರೇರೇಪಿಸುತ್ತದೆ. ಜಗತ್ತಿನ ಯಥಾವತ್ತಾದ ಜ್ಞಾನ ಸಂಪಾದನೆಯನ್ನು ಮಾಡುವುದರ ಕಡೆ ಅಗ್ರೇಸರನಾದಾಗ ವಿಜ್ಞಾನ ಸಾಧು ರ್ಭವವಾಗುತ್ತದೆ ಮನುಷ್ಯನು ಯಥಾರ್ಥದ ಮಾನಕ ಮಂಡವನ್ನು ಹಿಡಿದೇ ಈ ವಿಜ್ಞಾನ ಕ್ಷೇತ್ರದಲ್ಲಿ ಮುನ್ನಡೆಯುತ್ತಾನೆ. ಈ ವೈಜ್ಞಾನಿಕ ದೃಷ್ಟಿ ಕೋನವು ಭೌತಿಕ ವಾಸ್ತವಿಕತೆಯ ಕಡೆಗಿದೆ. ಯಾವ ವಸ್ತುವು ಹೇಗಿದೆಯೋ, ಅದೇ ಯಥಾರ್ಥ ರೂಪದಲ್ಲಿ ನೋಡುವುದಕ್ಕೆ — ತಿಳಿಯುವುದಕ್ಕೂ ಇಚ್ಛೆಸುತ್ತಾನೆ. ವೈಜ್ಞಾನಿಕ ಈ ಪ್ರಕಾರವಾಗಿ ಅವನ ಆಧಾರವು ಸ್ವಂತ ವೈಯಕ್ತಿಕದ್ದಾಗಿಂದೆ ವಸ್ತುವಾದೀ ಹಾಗೂ ಪ್ರಮಾಣಾಪೇಕ್ಷೆಯುಳ್ಳದ್ದಾಗಿರುತ್ತದೆ.ಇದೇ ಮನುಷ್ಯನ ವೈಜ್ಞಾನಿಕ ಹಾಗೂ

(೦ನೇ ಪುಟ ನೋಡಿರಿ)

98 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ರಕ್ಷಪ್ರಯೋಗಗಳು

ಟ್ರೇಡ್ ಮಾರ್ಕ್



ಪಂ|| A. R. ಅಯ್ಯರ್

ಸಂತಾನ ಸಿಂಧೂರ (ಸ್ತ್ರೀಯರಿಗೆ: ಪ್ಯಾಕೆಟ್)

ಮದನ ವಿಲಾಸ (ಪುರುಷರಿಗೆ: ಗುಳಿಗೆ)

ಈ ಭಸ್ಮವು ಬಹುಪ್ರ ಸಂಬಂಧದ ಹೊಪ್ಪೆ ನೋವನ್ನು ನಿರ್ಮೂಲನ, ಗರ್ಭಕಾಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಅತ್ಯುತ್ಸ ರಸನಸವಾಡಿ, ಸ್ವಪ್ನ ಮತ್ತು ವೀರ್ಯ ಸ್ಖಲನಗಳನ್ನ ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿ, ನಪುಂಸಕತೆಯನ್ನು ನಾಶಮಾಡಲೇ ಮಾಡುತ್ತದೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ ತಾಯ್ತಂದೆಗಳಾಗಿದ್ದಾರೆ.

ಹೊಸ ಕ್ಯಾಟಲಾಗು, ವಿಷಧದ ಬೆಲೆ ಇತ್ಯಾದಿಗಳಿಗೆ 3 ಆಣೆ ಸ್ಟಾಂಪು ಕಳಿಸಿರಿ

ಎ. ರಾಮಸ್ವಾಮಿ ಅಯ್ಯರ್ ಸನ್ & ಕೆಂ. (ನೆ. ಯು.)

೬೫೫ ಸಂತಾನ ಸಿಂಧೂರ ಸದನ (ಪೋಸ್ಟ್ ಬೇಟ್ ೨) ಮೈಸೂರು S. I.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ಮೆಂಕಟ್ರಾಯ, ಎಲ್. ಎಂ. ಎಸ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟಿ. ಖರ್ಚು ಬೇರೆ)

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕ್ಷಯ ಚಿಕಿತ್ಸೆ

ಅಂತಾರಾಷ್ಟ್ರೀಯ ಸ್ವರೂಪದ ಈ ಸಮಸ್ಯೆಗೆ ಢಿಲ್ಲಿಯಲ್ಲಿ ತಜ್ಞರು ಪರಿಹಾರವನ್ನು ಕಂಡುಹಿಡಿಯುತ್ತಿದ್ದಾರೆ.

ಭಾರತದಲ್ಲಿ ಕ್ಷಯ ರೋಗ ನಿವಾರಣಾ ಕಾರ್ಯವು ಈ ಶತಮಾನದ ಆದಿ ಭಾಗದಲ್ಲಿಯೇ ಪ್ರಾರಂಭವಾಯಿತು. ಆಗ ಕೆಲವು ಕ್ರೈಸ್ತ ಧರ್ಮ ಪ್ರಚಾರಕರು ದೇಶದ ಕೆಲವು ಭಾಗಗಳಲ್ಲಿ ಕ್ಷಯ ರೋಗ ಚಿಕಿತ್ಸೆಗಾಗಿ ಚಿಕಿತ್ಸಾ ಸಂಸ್ಥೆಗಳನ್ನು ಪ್ರಾರಂಭಿಸಿದರು. ೧೯೨೮-೨೯ರಲ್ಲಿ ಐದನೆಯ ಜಾರ್ಜ್ ಚಕ್ರವರ್ತಿಯವರು ರೋಗ ವಿಮುಕ್ತರಾದ ಸ್ಮರಣಾರ್ಥವಾಗಿ ದೇಶದಾದ್ಯಂತವೂ ಕ್ಷಯ ನಿವಾರಣಾ ಕಾರ್ಯವನ್ನು ಕೈಗೊಳ್ಳುವ ಬಗ್ಗೆ ಸಾರ್ವಜನಿಕರಿಂದ ಚಂದಾ ಸಂಗ್ರಹಿಸಬೇಕೆಂದು ನಿರ್ಧರಿಸಲಾಯಿತು. ಈ ಕಾರ್ಯಕ್ಕಾಗಿ ಐದನೆಯ ಜಾರ್ಜ್ ಚಕ್ರವರ್ತಿ ಧನ್ಯವಾದ ಅರ್ಪಣ (ಕ್ಷಯ ನಿವಾರಣೆ) ಸಮಿತಿಯನ್ನು ರೂಪಿಸಲಾಯಿತು.

೧೯೩೧ರ ಡಿಸೆಂಬರ್‌ನಲ್ಲಿ ಆಗಿನ ವೈಸ್‌ರಾಯ್‌ರಾಗಿದ್ದ ಲಾರ್ಡ್ ಲಿನ್‌ಲಿತ್‌ಗೋರವರ ಧರ್ಮ ಪತ್ನಿ ಲೇಡಿ ಲಿನ್‌ಲಿತ್‌ಗೋರವರು ಚಕ್ರವರ್ತಿಗಳ ಕ್ಷಯ ನಿವಾರಣಾ ನಿಧಿ ಎಂಬ ವಿಶೇಷ ನಿಧಿಯನ್ನು ಎತ್ತಿದರು. ಈ ನಿಧಿಗೆ ಒಟ್ಟು ಒಂದು ಕೋಟಿ ರೂ.ಗಳ ಹಣವನ್ನು ಸಂಗ್ರಹಿಸಿದರು. ಈ ಹಣದಲ್ಲಿ ನೂರಕ್ಕೆ ೯೫ರಷ್ಟನ್ನು ಪ್ರಾಂತ್ಯಗಳಿಗೂ ಮತ್ತು ಸಂಸ್ಥಾನಗಳಿಗೂ ವಾಪಸ್ಸು ಕೊಡಲಾಯಿತು. ನೂರಕ್ಕೆ ೫ರಷ್ಟನ್ನು ಕೇಂದ್ರ ಕಾರ್ಯ ಚಟುವಟಿಕೆಗಳಿಗಾಗಿ ಉಳಿಸಿಕೊಳ್ಳಲಾಯಿತು. ೧೯೩೯ರ ಫೆಬ್ರುವರಿಯಲ್ಲಿ ಭಾರತೀಯ ಕ್ಷಯ ಸಂಘವನ್ನು ಸ್ಥಾಪಿಸಲಾಯಿತು. ಲೇಡಿ ಲಿನ್‌ಲಿತ್‌ಗೋರವರು ಈ ಸಂಘದ ಸಂಸ್ಥಾಪಕ ಅಧ್ಯಕ್ಷರಾದರು. ಕಳೆದ ಒಂಭತ್ತು ವರ್ಷಗಳಿಂದಲೂ ಈ ಸಂಘಕ್ಕೆ ಕೇಂದ್ರ ಆರೋಗ್ಯ ಮಂತ್ರಿ, ರಾಜಕುಮಾರಿ ಅಮೃತ ಕೌರ್‌ರವರು ಅಧ್ಯಕ್ಷರಾಗಿರುವರು. ಈ ಸಂಘಕ್ಕೆ ಈಗ ೨೦ ಅಂಗ ಸಂಸ್ಥೆಗಳಿವೆ.

ಅನ್ಯ ಆರೋಗ್ಯ ಸುಧಾರಕ ಸಂಸ್ಥೆಗಳ ಸಹಕಾರದೊಂದಿಗೆ ವೈಜ್ಞಾನಿಕ ರೀತಿಯಲ್ಲಿ ಕ್ಷಯ ನಿವಾರಣಾ ಕಾರ್ಯವನ್ನು ಕೈಗೊಳ್ಳುವ ಬಗ್ಗೆ ಈ ಸಂಘವು ಮಹತ್ವಪೂರ್ಣ ಪಾತ್ರವಹಿಸಿದೆ. ಕ್ಷಯ ನಿವಾರಣಾ ಪ್ರಚಾರ ಕಾರ್ಯವನ್ನು ಕೈಗೊಳ್ಳುವ ಜೊತೆಗೆ ಈ ಸಂಘವು ವೈದ್ಯರು, ಸಮಾಜ ಸೇವಾ ಕಾರ್ಯಕರ್ತರು ಮತ್ತು ಆರೋಗ್ಯ ನೀರ್ಕ್ಷಕರಿಗೆ ತರಬೇತಿ ಕೊಟ್ಟಿದೆ. ಅಂತಹ ಸಿಬ್ಬಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ತರಬೇತಿ ನೀಡುವ ಅಗತ್ಯವನ್ನು ಸರ್ಕಾರಗಳಿಗೆ ತಿಳಿಸಿದೆ. ಈ ಸಂಘವು ಪ್ರತಿ ವರ್ಷವೂ ದೇಶದಲ್ಲಿನ ಕ್ಷಯರೋಗ ನಿವಾರಣಾ ಕಾರ್ಯದಲ್ಲಿ ನಿರತರಾಗಿರುವ ಕಾರ್ಯಕರ್ತರ ಸಮ್ಮೇಳನವನ್ನು ವ್ಯವಸ್ಥೆಗೊಳಿಸುತ್ತಿದೆ. ಈ ಸಂಘದ ಶಿಫಾರಸಿಗೆ ಅನುಗುಣವಾಗಿ ಆರೋಗ್ಯ ಭಾರತೀಯ ವಿಶ್ವ ವಿದ್ಯಾನಿಲಯಗಳಲ್ಲಿ ಕ್ಷಯರೋಗಗಳ ಬಗ್ಗೆ ಸ್ನಾತಕೋತ್ತರ (ಪೋಸ್ಟ್ ಗ್ರಾಜುಯೇಟ್) ಡಿಪ್ಲೊಮಾ ಕೋರ್ಸ್‌ಗಳನ್ನು ಪ್ರಾರಂಭಿಸಲಾಗಿದೆ. ಈ ಸಂಘವು ಎರಡು ಸಂಸ್ಥೆಗಳನ್ನು ಸ್ಥಾಪಿಸಿದೆ. ಸಿವ್ಮಾಲದ ಸಮೀಪದಲ್ಲಿರುವ ಕಸೌಲಿಯ ಲೇಡಿ ಲಿನ್‌ಲಿತ್‌ಗೋ ಸ್ಯಾನಿಟೋರಿಯಂ ಮತ್ತು ದೆಹಲಿಯಲ್ಲಿರುವ ನ್ಯೂ ಡೆಲ್ಲಿ ಟ್ಯೂಬರ್‌ಕ್ಯುಲೋಸಿಸ್ ಕ್ಲೆನಿಕ್‌ಗಳು ಸಿಬ್ಬಂದಿ ತಂಬೇತಿಗೆ ಸೌಲಭ್ಯ ನೀಡುವುದಲ್ಲದೆ ಕ್ಷಯರೋಗ ನಿದಾನ ಹಾಗೂ ಚಿಕಿತ್ಸೆಗಳ ಬಗ್ಗೆ ಸೌಲಭ್ಯ ನೀಡುವುದು.

ದೆಹಲಿಯಲ್ಲಿರುವ ಚಿಕಿತ್ಸಾಲಯವು ಭಾರತದಲ್ಲಿರುವ ಮೂರು ಪ್ರಶಿಕ್ಷಣ ಹಾಗೂ ಪ್ರದರ್ಶನಾ ಕೇಂದ್ರಗಳಲ್ಲಿ ಒಂದಾಗಿ ಅಭಿವೃದ್ಧಿ ಪಡಿಸಲ್ಪಟ್ಟಿದೆ. ಸರ್ಕಾರದವರ ನೆರವಿನೊಂದಿಗೆ ದೆಹಲಿಗೆ ಸಮೀಪದಲ್ಲಿರುವ ಮೆಹ್ರಾಲಿಯಲ್ಲಿ ಈ ಸಂಘವು ಆಸ್ಪತ್ರೆಯೊಂದನ್ನು ನಿರ್ಮಿಸಿದೆ. ಈ ಆಸ್ಪತ್ರೆಯಲ್ಲಿ ಈಗ ೨೫೦ ಶಯ್ಯೆಗಳಿವೆ. ೫೦ ಶಯ್ಯೆಗಳನ್ನು ಕ್ಷಯರೋಗಪೀಡಿತ ಮಕ್ಕಳಿಗಾಗಿ ಮೀಸಲಾಗಿಡಲಾಗಿದೆ.

ಈ ಸಂಘವು ವಿಶೇಷ ನಿಧಿಯ ಸಹಾಯದಿಂದ ೪೧೦ ಮಾಜಿ ಯೋಧರಿಗೆ ಚಿಕಿತ್ಸೆ ನಡೆಸಿದೆ. ಕ್ಷಯರೋಗ ಚಿಕಿತ್ಸೆ ಬಗ್ಗೆ 'ಸ್ಟೈಪ್ಟೊಮೈಸಿನ್,' 'ಪಿಎಎಸ್' ಇತ್ಯಾದಿ ಗಳನ್ನು ಉಚಿತ ರೀತಿಯಲ್ಲಿ ಉಪಯೋಗಿಸುವ ವಿಧಾನವನ್ನು ಸರ್ಕಾರಗಳು ಮತ್ತು ಸಂಸ್ಥೆಗಳಿಗೆ ತಿಳಿಸಿದೆ. ಕ್ಷಯರೋಗದಿಂದ ವಿಮುಕ್ತರಾದವರಿಗೆ ಉದ್ಯೋಗ ಒದಗಿಸುವ ವಿಚಾರದಲ್ಲಿ ಈ ಸಂಘವು ಮಾಡಿರುವ ಪ್ರಯತ್ನಗಳು ಸರ್ಕಾರದವರ ಹಾಗೂ ವ್ಯಾಪಾರಿ ಸಂಸ್ಥೆಗಳ ಗಮನ ಸೆಳೆಯುತ್ತಿವೆ.

ಈ ಸಂಘವು ೧೯೫೦ರಲ್ಲಿ ಕ್ಷಯ ಮೊಹರುಗಳ ಮಾರಾಟ ಚಳವಳಿಯನ್ನು ಪ್ರಾರಂಭಿಸಿತು. ಈ ಚಳವಳಿಯು ಅಕ್ಟೋಬರ್ ೨, ಮಹಾತ್ಮ ಗಾಂಧಿಯವರ ಜನ್ಮ ದಿನದ ಪ್ರಾರಂಭವಾಗಿ ಜನವರಿ ೨೬ ಪ್ರಜಾರಾಜ್ಯ ದಿನದೆಂದು ಸಮಾಪ್ತಿಯಾಗುವುದು. ಕಳೆದ ಆರು ಚಳವಳಿಗಳಿಂದ ೪೧ ಲಕ್ಷ ರೂಪಾಯಿಗಳಿಗೂ ಮಿಗಿದ ಹಣವನ್ನು ಸಂಗ್ರಹಿಸಲಾಗಿದೆ. ರಾಜ್ಯಗಳಲ್ಲಿರುವ ಕ್ಷಯ ಸಂಬಂಧವಾದ ಸಂಘಗಳು ಈ ಹಣವನ್ನು ಕ್ಷಯನಿವಾರಣಾ ಕಾರ್ಯಕ್ಕಾಗಿ ಉಪಯೋಗಿಸುತ್ತಿವೆ.

ವಿವಿಧ ಸಮಿತಿಗಳೂ ಮತ್ತು ಉಪಸಮಿತಿಗಳೂ ಭಾರತೀಯ ಕ್ಷಯ ಸಂಘದ ಕಾರ್ಯಗಳು ನೆರವಾಗುತ್ತಿವೆ. ಈ ಸಮಿತಿಗಳಲ್ಲಿ ಗಣ್ಯ ವ್ಯಕ್ತಿಗಳೂ ಉಚ್ಚ ಸರ್ಕಾರಿ ಅಧಿಕಾರಿಗಳೂ ಇರುವರು. ಕೇಂದ್ರ ಸಮಿತಿಯು ಆಡಳಿತ ಮಂಡಲಿಯಾಗಿರುವುದು. ಈ ಮಂಡಲಿಯು ತನ್ನ ಅಧಿಕಾರಗಳನ್ನು ವಿವಿಧ ಉಪಸಮಿತಿಗಳಿಗೆ ಕೊಟ್ಟಿವೆ. ಉಪಸಮಿತಿಗಳಲ್ಲಿ ಕಾರ್ಯಕಾರಿ ಹಾಗೂ ಹಣಕಾಸಿನ ಉಪಸಮಿತಿಗಳು ಮುಖ್ಯವಾದವು. ಸಂಸ್ಥೆಗಳ ಸ್ಥಾಪನೆ, ಸಿಬ್ಬಂದಿಯ ತರಬೇತಿ, ಔಷಧಗಳ ಬಳಕೆ ಹಾಗೂ ಆರೋಗ್ಯ ಶಿಕ್ಷಣ ಮುಂತಾದ ಪ್ರಶ್ನೆಗಳ ಬಗ್ಗೆ ಸರ್ಕಾರಗಳು ಹಾಗೂ ಸಂಘಗಳಿಗೆ ಸಲಹೆ ನೀಡುವುದಕ್ಕಾಗಿ ತಾಂತ್ರಿಕ ಸಮಿತಿ ಇದೆ. ಭಾರತದಲ್ಲಿನ ಕ್ಷಯ ನಿವಾರಣಾ ಚಳವಳಿಯ ಸಂಕ್ಷಿಪ್ತ ಇತಿಹಾಸವನ್ನು ಸಿದ್ಧಗೊಳಿಸುವುದಕ್ಕಾಗಿ ಉಪಸಮಿತಿಯ ನೇಮಕವಾಗಿದೆ.

ಭಾರತೀಯ ಕ್ಷಯ ಸಂಘವು "ಇಂಡಿಯನ್ ಜರ್ನಲ್ ಆಫ್ ಟ್ಯುಬರ್ ಕ್ಯುಲೋಸಿಸ್" ಎಂಬ ಹೆಸರಿನ ಒಂದು ತ್ರೈಮಾಸಿಕ ಪತ್ರಿಕೆಯನ್ನು ಪ್ರಕಟಿಸುತ್ತಿದೆ. ಈ ಪತ್ರಿಕೆಯಲ್ಲಿ ಕ್ಷಯ ರೋಗ ಚಿಕಿತ್ಸೆ ಸಂಬಂಧವಾದ ವಿಶೇಷ ಲೇಖನಗಳಿರುತ್ತವೆ. ಭಾರತ ಸರ್ಕಾರದವರಿಗೆ ಕ್ಷಯ ರೋಗ ಸಲಹಾಗಾರರೂ, ಸಂಘದ ತಾಂತ್ರಿಕ ಸಲಹಾಗಾರರೂ ಆಗಿರುವ ಡಾ॥ ಪಿ. ವಿ. ಬೆಂಜಾಮಿನ್‌ರವರು ಈ ಪತ್ರಿಕೆಯ ಸಂಪಾದಕರಾಗಿರುವರು.

ಭಾರತೀಯ ಕ್ಷಯ ನಿರೋಧ ಸಂಘವು ಅಂತಾರಾಷ್ಟ್ರೀಯ ಕ್ಷಯ ನಿವಾರಣಾ ಸಂಘದೊಂದಿಗೆ ಸಂಬಂಧ ಪಡೆದಿದೆ ಈ ಅಂತಾರಾಷ್ಟ್ರೀಯ ಸಂಘದಲ್ಲಿ ಭಾರತದ ಐದು ಕೌನ್ಸಿಲರ್ ಸದಸ್ಯರೂ ೧೬೦ಕ್ಕೂ ಮಿಗಿದ ಸಾಧಾರಣ ಸದಸ್ಯರೂ ಇರುವರು. ಸಂಘದ ತಾಂತ್ರಿಕ ಸಲಹಾಗಾರರಾಗಿರುವ ಡಾ॥ ಪಿ. ವಿ. ಬೆಂಜಾಮಿನ್‌ರವರು ಈ ಅಂತಾರಾಷ್ಟ್ರೀಯ ಸಂಘದ ಅಧ್ಯಕ್ಷರಾಗಿರುವರು. ೧೯೫೨ರ ಜನವರಿ ೧ರಿಂದ ೧೯೫೮ ವರೆವಿಗೆ ನವದೆಹಲಿಯಲ್ಲಿ ನಡೆಯುವ ಸಮ್ಮೇಳನಕ್ಕೆ ಡಾ॥ ಬೆಂಜಾಮಿನ್‌ರವರು ಅಧ್ಯಕ್ಷರಾಗಿರುವರು. ಈ ಸಮ್ಮೇಳನದಲ್ಲಿ ಭಾಗ ವಹಿಸಲು ಜಗತ್ತಿನ ನಾನಾ ಭಾಗಗಳಿಂದ ೬೦೦ಕ್ಕೂ ಮಿಕ್ಕ ಪ್ರತಿನಿಧಿಗಳು ಬಂದಿರುವರು ಹೊರಗಿನ ಸರಕಾರಗಳ ಪ್ರತಿನಿಧಿಗಳಾಗಿ ೩೦೦ ಮಂದಿ ತಜ್ಞರು ಆಗಮಿಸಿದ್ದಾರೆ. ಉಡುಪಿ ಸರಕಾರಿ ಆಸ್ಪತ್ರೆಯ ಡಾ॥ ಸುಂದರರಾಯ ಶೇಟರು ಸಹ ಪ್ರತಿನಿಧಿಯಾಗಿ ಹೋಗಿದ್ದಾರೆ. ಇವರು ಕ್ಷಯ ರೋಗದ ಬಗ್ಗೆ ತಜ್ಞ ಅನುಭವವುಳ್ಳವರು

ವ್ಯಾಪಕವಾದ ಕ್ಷಯ ರೋಗ ಚಿಕಿತ್ಸಾ ಸೇವೆಯೊಂದು ಕ್ಷಯ ರೋಗಿಗಳಿಗೆ ಉಚಿತ ಚಿಕಿತ್ಸೆಯನ್ನೂ ಹಾಗೂ ರೋಗ ವಿಮುಕ್ತರಿಗೆ ಪುನರ್ವ್ಯವಸ್ಥಾ ಸೌಲಭ್ಯವನ್ನೂ ನೀಡಬೇಕೆಂಬ ವಿಚಾರವು ಈ ಸಂಘದ ಉದ್ದೇಶವಾಗಿರುವುದು.

ಹೊಸದಾಗಿ ಉದ್ಭವವಾಗುವ ಸಮಸ್ಯೆಗಳನ್ನು ಭಾರತೀಯ ಕ್ಷಯ ಸಂಘ ದಂತಹ ತಜ್ಞಾಧಿಕಾರೇತರ ಸಂಸ್ಥೆಗಳು ಬಗೆಹರಿಸಬೇಕಾಗಿದೆ. ಎರಡು ಯೋಜನೆಗಳ ಅನುಷ್ಠಾನದಲ್ಲಿ ಕ್ಷಯ ರೋಗ ನಿಯಂತ್ರಣ ಕ್ಕಾಗಿ ಹೊಂದಿರುವ ಯೋಜನೆಗಳು ಈ ರೀತಿ ಇವೆ:—

(೧) ಬಿ. ಸಿ. ಜಿ. ವ್ಯಾಕ್ಸಿನೇಷನ್ ಕಾರ್ಯವನ್ನು ದ್ವಿತೀಯ ಯೋಜನಾವಧಿಯಲ್ಲಿ ಪೂರ್ಣಗೊಳಿಸುವುದು.

(೨) ಈಗಿರುವ ೧೦೦ ಕ್ಷಯ ರೋಗ ಚಿಕಿತ್ಸಾಲಯಗಳನ್ನು ಸುಧಾರಿಸುವುದು ಹಾಗೂ ೩೦೦ ಹೊಸ ಚಿಕಿತ್ಸಾಲಯಗಳನ್ನು ಸ್ಥಾಪಿಸುವುದು. ಪ್ರತಿ ಜಿಲ್ಲೆಯಲ್ಲಿಯೂ ಮತ್ತು ಪ್ರತಿ ಊರನಲ್ಲಿಯೂ ಕನಿಷ್ಠ ಪಕ್ಷ ಒಂದೊಂದು ಅಧುನಿಕ ಕ್ಷಯ ರೋಗ ಚಿಕಿತ್ಸಾಲಯವನ್ನು ಸ್ಥಾಪಿಸುವುದು. ಈಗಾಗಲೇ ಮಂಗಳೂರಿನ ಬಳಿ ಮೂಡುಶೆಡ್ಡೆಯಲ್ಲಿ ಜಿಲ್ಲೆಯ ಕ್ಷಯ ರೋಗಿಗಳಿಗಾಗಿ ಉತ್ತಮ ಆರೋಗ್ಯ ಮಂದಿರ ಚಿಕಿತ್ಸಾಲಯವೂ ಏರ್ಪಟ್ಟಿದೆ.

(೩) ನಗರ ಹಾಗೂ ಊರುಗಳಲ್ಲಿರುವ ಕ್ಷಯ ರೋಗಿಗಳನ್ನು ಪ್ರತ್ಯೇಕವಾಗಿಡುವ ಬಗ್ಗೆ ಕನಿಷ್ಠ ಪಕ್ಷ ೧೦ ಸಹಸ್ರ ಶಯ್ಯೆಗಳನ್ನು ಹೆಚ್ಚಾಗಿ ಒದಗಿಸುವುದು.

(೪) ರೋಗ ವಿಮುಕ್ತರ ಪುನರ್ವ್ಯವಸ್ಥೆಗಾಗಿ ಉದ್ಯೋಗ ಕೇಂದ್ರಗಳನ್ನು ಸ್ಥಾಪಿಸುವುದು.

ಈ ಸಾಲಕ್ರಾಮಿಕ ರೋಗದ ನಿರೋಧ ಕಾರ್ಯದಲ್ಲಿ ಬಿ. ಸಿ. ಜಿ ಯು ವಹಿಸಿದ ಪಾತ್ರವು ಸಂದೇಹಾತೀತವಾಗಿ ಸಿದ್ಧವಾಗಿದ್ದರೂ ಶ್ರೀ ರಾಜಗೋಪಾಲಾಚಾರಿಯವರ ಅನುಚಿತ ಚಳವಳಿಯ ದೆಸೆಯಿಂದ ಜನರಲ್ಲಿ ವಿಶ್ವಾಸವು ಕಡಿಮೆಯಾದಂತಿದೆ. ಜನರು ಹೀಗೆ ತಜ್ಞರಲ್ಲದವರ ಮಾತಿಗೆ ಮೋಸ ಹೋಗಿಬಾರದು. ಬಿ. ಸಿ. ಜಿ. ಯಂಥ ಸುಲಭ ನಿರೋಧಕ ಕ್ರಮವನ್ನು ಸ್ವಾಗತಿಸಿ ಕ್ಷಯ ರೋಗದ ಉಚ್ಚಾಟನೆಗೆ ಸಂಪೂರ್ಣ ಸಹಕಾರವನ್ನಿತ್ತು ಧನ್ಯರಾಗಬೇಕು.

ಫಂಟಮಾರಾ

ಇಗ್ನೇಸಿಯೋ ಸಿಲೋನ್‌ನೆಯ ಇಟಾಲಿಯನ್ ಕಾದಂಬರಿಯ ಅನುವಾದ

ಅನುವಾದಕರು:— ಕು. ಶಿ. ಹರಿದಾಸ ಭಟ್ಟ, ಎಂ. ಎ.

—ಕೆಲವು ಅಭಿಪ್ರಾಯಗಳು—

"ಈ ಶತಮಾನದ ಅತ್ಯಂತ ಮರ್ಮಸ್ಪರ್ಶಿ ಕಾದಂಬರಿಗಳಲ್ಲೊಂದು"
—ಕರ್ಮವೀರ.

"ಮೂಲಗ್ರಂಥದ ವೈಶಿಷ್ಟ್ಯಗಳೆಲ್ಲ ಸಮರ್ಪಕವಾಗಿ ಕನ್ನಡಿಸಲ್ಪಟ್ಟಿರುವುದನ್ನು ನೋಡುವಾಗ ಅನುವಾದವು ಸ್ವೋತ್ತಮವೆಂದು ಹೇಳಲು ಅಡ್ಡಿ ಇಲ್ಲ. ಅನುವಾದ ಮಾಡಿದ ಶ್ರೀ ಭಟ್ಟರೂ ನಾಡಿನಿಂದ ಪ್ರಕಾರಕರೂ ಅಭಿನಂದನೀಯರು."
—ಇಂಡಿಯನ್‌ಎಕ್ಸ್‌ಪ್ರೆಸ್.

200 ಪುಟಗಳ ಈ ಕಾದಂಬರಿಯ ಬೆಲೆ ರೂ.2—0—0

ಏಶಿಯದ ಸಂಪತ್ತು

(ಏಶಿಯದ ಆರ್ಥಿಕ ಸ್ಥಿತಿಯ ಚಿತ್ರ)

ಬರೆದವರು: ಕು. ಶಿ. ಹರಿದಾಸ ಭಟ್ಟ, ಎಂ. ಎ.

ಇಂದಿನ ರಾಜಕೀಯದಲ್ಲಿ ಚರ್ಚಾಸ್ಪದವಾದ ಭೂಖಂಡವಾದ ಏಶಿಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ, ವಿಶದವಾಗಿಯೂ, ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ

ಏಶಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ, ಓದಬೇಕಾದ ಪುಸ್ತಕ. ಬೆಲೆ: ಎರಡು ರೂಪಾಯಿ.

ಪ್ರತಿಗಳಿಗೆ ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ವಿಚಾರಿಸಿರಿ.

ಹಸಿದವರಿಗೆ ಸಮಾಧಾನ

ಕೋಟ್ಯಂತರ ಹೊಟ್ಟೆಗಳ ಕ್ರಂದನವನ್ನು ನಿಲ್ಲಿಸಲು ಬಹೂದ್ದೇಶವುಳ್ಳ ಆಹಾರದ ಪುಡಿಯನ್ನು ಜಗತ್ತಿನೆಲ್ಲೆಲ್ಲ ಬಳಸಲಾಗುತ್ತದೆ

ಈ ವರ್ಷದ ಪ್ರಾರಂಭದಲ್ಲಿ ಪ್ರಧಾನ ಮಂತ್ರಿ ನೆಹರೂರವರು, ದೇಶದ ಆಹಾರ ಸಂಪನ್ಮೂಲಗಳನ್ನು ಹೆಚ್ಚಿಸಬಲ್ಲ ಬಹೂದ್ದೇಶ ಆಹಾರವೊಂದನ್ನು ಸಾಮೂಹಿಕ ಪ್ರಮಾಣದಲ್ಲಿ ಉತ್ಪಾದಿಸುವ ಸಾಧ್ಯತೆಗಳನ್ನು ಪರೀಕ್ಷಿಸಲು ಮೈಸೂರಿನ ಫುಡ್ ಟೆಕ್ನಲಾಜಿಕಲ್ ಇನ್ಸ್ಟಿಟ್ಯೂಟ್‌ಗೆ ಭೇಟಿಯಿತ್ತರು ಅವರು ತಯಾರಿಕೆಯ ವಿಧಾನದಲ್ಲಿ ತೀವ್ರ ಆಸಕ್ತಿಯನ್ನು ವ್ಯಕ್ತಪಡಿಸಿದರು ಮತ್ತು ಬಡವರಿಗೆ ಎಟಕುವ ಬೆಲೆಗಳಲ್ಲಿ ಆಹಾರವನ್ನೊದಗಿಸುವಂತೆ ಉತ್ಪಾದನಾ ವಿಧಾನವನ್ನು ರೂಪಿಸುವ ಬಗ್ಗೆ ಅವರು ತೀವ್ರವಾಗಿ ಆಲೋಚಿಸುತ್ತಿದ್ದರು.

ದಾರಿದ್ರ್ಯ ಮತ್ತು ಕ್ಷಾಮಪೀಡಿತ ಪ್ರದೇಶಗಳಲ್ಲಿ ವಿತರಣೆಗಾಗಿ, ಅಮೆರಿಕದಲ್ಲಿ ಬೃಹತ್ಪ್ರಮಾಣದಲ್ಲಿ ತಯಾರಿಸಲಾಗುತ್ತಿರುವ ಬಹೂದ್ದೇಶದ ಆಹಾರದ ಪುಡಿಯನ್ನವರು ಸ್ವತಃ ಪರಿಶೀಲಿಸಿದರು. ಅನಂತರ ಅವರು, ದಿನನಿತ್ಯದ ಆಹಾರಕ್ಕೆ ಕಡಿಮೆ ವೆಚ್ಚದ, ಆದರೂ ಸತ್ವಯುತವಾದ ಪೋಷಕವಾದ ಅಂಶಗಳನ್ನು ಸೇರಿಸಲಿಕ್ಕಾಗಿ ನೆಲಕಡಲೆಗಳಿಂದ ಇಂಥ ಆಹಾರ ನಸ್ತುವನ್ನು ತಯಾರಿಸುವ ಮಾದರಿ ಕಾರ್ಖಾನೆಯೊಂದರ ನಿರ್ಮಾಣಕ್ಕೆ ಆಜ್ಞೆಯಿತ್ತರು. ಹಳ್ಳಿಗಳಲ್ಲಿ ಮತ್ತು ದೊಡ್ಡ ನಗರಗಳಲ್ಲಿ ಜನರಿಗೆ ಕಡಿಮೆ ವೆಚ್ಚದಲ್ಲಿ ಬಹೂದ್ದೇಶದ ಆಹಾರ ವಸ್ತುಗಳನ್ನು ವಿತ್ತೃತವಾಗಿ ವಿತರಣೆ ಮಾಡಲು ಭಾರತದಾದ್ಯಂತ ಇತರ ಎಂಟು ಕಾರ್ಖಾನೆಗಳ ನಿರ್ಮಾಣಕ್ಕೆ ಈಗ ಯೋಜನೆಗಳಾಗುತ್ತಿವೆ.

ಹಸಿದು ನಿರಾಹಾರಿಗಳಾಗಿ ನರಳುತ್ತಿರುವ ಕೋಟ್ಯಂತರ ಜನರ ಹೃದಯ ವಿದ್ರಾವಕ ಮೊರೆಯೇ, ಅಮೆರಿಕನ್ ರಸಾಯನ ವಿಧಾಯಕ ಶೌರ್ಯಕ್ಕೆ ಸವಾಲನ್ನಿತ್ತು, ಸಾಮೂಹಿಕ ಪ್ರದಾಭೆಯನ್ನು ನೀಗಲು ಇಂಥ ಆಹಾರವನ್ನು ಕಂಡುಹಿಡಿಯಲು ಪ್ರೇರೇಪಿಸಿತು.

ಅಮೆರಿಕನ್ ಮಿಷನರಿ ಕುಟುಂಬದಲ್ಲಿ ಜನಿಸಿದ ಕ್ಲೈಫರ್ಡ್ ಕ್ಲೆಂಟನ್‌ರವರು ಹುಡುಗನಾಗಿದ್ದಾಗ ಚೀನದಲ್ಲಿ ಜೀವಿಸಿಕೊಂಡಿದ್ದರು ಮತ್ತು ತನ್ನ ಸುತ್ತು ಮುತ್ತಲೂ ಇದ್ದ ಜನರ ಯಾತನೆಗಳಿಂದ ಚಿಂತಾಕ್ರಾಂತರಾದರು. ಅವರ ಸೂಕ್ಷ್ಮ ಹೃದಯವು ಇಂಥ ದಾರುಣ ದಾರಿದ್ರ್ಯದ ವಿರುದ್ಧ ಪ್ರತಿಭಟಿಸಿತು. ಕ್ಷಾಮ ಮತ್ತು ಅಪೌಷ್ಟಿಕ ಆಹಾರದ ವಿರುದ್ಧ ಹೋರಾಡಲು ತನ್ನ ಜೀವನವನ್ನು ಮುಡಿಪಾಗಿಡಲು ಅವರು ನಿಶ್ಚಯಿಸಿದರು. ಹರೆಯವೇರುತ್ತ ಬಂದಂತೆ ಇವರು ಹಸಿವೆಯ ವಿರುದ್ಧ ವಿಕಾಂಗಿಯಾಗಿ ಉಗ್ರ ಹೋರಾಟವನ್ನು ನಡೆಸಿದರು, ಇವರು ಪೋಷಣೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಅಭ್ಯಸಿಸಿದರು. ಮತ್ತು ನಿರಂತರ ಸಂಶೋಧನೆಗಳ ಫಲವಾಗಿ ಬಹೂದ್ದೇಶ ಆಹಾರವೊಂದನ್ನು ಕಂಡುಹಿಡಿದರು. ಈ ಆಹಾರವು ಈಗಾಗಲೇ ೧೦೨ ದೇಶಗಳಲ್ಲಿನ ಕ್ಷುಧಾ ಪೀಡಿತರಿಗೆ ೪೫ ಕೋಟಿಗಿಂತ ಹೆಚ್ಚು ಊಟಗಳನ್ನೊದಗಿಸಿದೆ.

ಜಗತ್ತಿನಾದ್ಯಂತ ಬೊಧಿಯಲ್ಲಿರುವ ಆಹಾರ ಕ್ರಮಗಳ ರುಚಿ, ತೋರಿಕೆ ಆಕರ್ಷಣೆಗಳ ಮೇಲೆ ಪರಿಣಾಮ ಮಾಡದೆ ಅವುಗಳಿಗೆ ಪೂರಕವಾಗಿಬಲ್ಲ ಆಲ್ಪ ವೆಚ್ಚದ ಆಹಾರವೊಂದನ್ನು ಕಂಡು ಹಿಡಿಯಲು ಕ್ಲೆಂಟನ್‌ರವರು ೧೯೪೪ರಲ್ಲಿ ಒಂದು ಸಂಶೋಧಕ ಪ್ರಾಜೆಕ್ಟನ್ನು ಪ್ರಾರಂಭಿಸಿದರು, ಮತ್ತಿದಕ್ಕೆ ತಮ್ಮ ಸ್ವಂತ ಹಣವನ್ನು ಉಸಯೋಗಿಸಿದರು. ಪ್ರೊಟೀನ್ ಮತ್ತು ವೈಟಮಿನ್ ಅಂಶಗಳು ಅಧಿಕವಿರುವ ಆಹಾರವೊಂದನ್ನು ತಯಾರಿಸುವುದು ಅವರ ಗುರಿಯಾಗಿತ್ತು. ಕೆಲಿಫೋರ್ನಿಯದ ಟೆಕ್ನಾಲಜಿ ಇನ್ಸ್ಟಿಟ್ಯೂಟ್‌ನಲ್ಲಿ ಬಯೋಕೆಮಿಸ್ಟ್ರಿಯಾಗಿರುವ ಡಾ|| ಹೆನ್ರೀ ಜೋರ್ಡಾರವರು ಸೋಯಾಬೀನ್ ಅನ್ನದಲ್ಲಿ ಈ ಅವಶ್ಯಕತೆಗಳಿರುವುದನ್ನು ಕಂಡು ಹಿಡಿದರು. ಒಂದು ಊಟಕ್ಕೆ ಕೇವಲ ಮೂರು ಸೆಂಟ್‌ಗಳ ವೆಚ್ಚ ತಗಲುವ ಮತ್ತು ಉತ್ತಮ ಪೌಷ್ಟಿಕಾಂಶವುಳ್ಳ ಪುಡಿಯೊಂದನ್ನು ಅವರು ತಯಾರಿಸಿದರು. ಯಾವಾಗಲೂ ತೆಗೆದುಕೊಳ್ಳುವ ಕಾರ್ನ್ ಫ್ಲೈಕ್ಸ್‌ಗಳಿಗೆ ದಿನಕ್ಕೆ ಮೂರು ಬಾರಿ ಎರಡು ಔನ್ಸ್‌ಗಳಷ್ಟು ಈ ಪುಡಿಯನ್ನು ಬಡಿಸಿದರೆ, ವೈಟಮಿನ್‌ಸಿಯ ಹೊರತಾಗಿ ಉತ್ತಮ ಪೋಷಣೆಗೆ ಬೇಕಾದ ಕನಿಷ್ಠ ದೈನಿಕ ಆವಶ್ಯಕತೆಗಳನ್ನು ಪೂರೈಸಿದಂತಾಗುವುದು. ವೈಟಮಿನ್‌ಸಿಯನ್ನು ಬೇಯಿಸಿದ ಆಹಾರ ವಸ್ತುಗಳಿಂದ ಪಡೆಯಬೇಕು. ಈ ಪುಡಿಯನ್ನು ಪ್ರತ್ಯೇಕವಾಗಿ ತಿನ್ನಬಹುದು ಅಥವಾ ಇತರ ಆಹಾರಗಳೊಡನೆ ಬೆರಸಿ ಉಣ್ಣಬಹುದು.

ಈ ಹೊಸ ಉತ್ಪನ್ನವನ್ನು ಸ್ವೀಕರಿಸಲು ಜಗತ್ತು-ಸಾಮಾನ್ಯವಾಗಿ ಕ್ಷಾಮಗಳಿರುವ ಪ್ರದೇಶಗಳೂ- ಅನುಮಾನಿಸುತ್ತಿದೆ. ಇದು ವರೆಗೆ ಅಮೆರಿಕನ್ನರ ವಿಚ್ಛಿದ್ರಕಾರಿ ಗೆಳೆಯರಿಂದ ನಡೆಯುತ್ತಿರುವ ವಿಲ್ಸನ್ಸರ್ ಮಿಲಿಯನ್ಸ್ ಫೌಂಡೇಷನ್, ವಿತರಣಾ ಸಂಸ್ಥೆಗಳ ಮೂಲಕ ಮತ್ತು ಎಲ್ಲ ಧಾರ್ಮಿಕ ಪಂಥಗಳ ನಿಯೋಗಗಳ ಮೂಲಕ ವಿದೇಶಗಳಿಗೆ ತನ್ನ ಕೊಡುಗೆಗಳನ್ನು ವಿತರಣೆ ಮಾಡಿದೆ. ಈಗ ಈ ಫೌಂಡೇಷನ್ ತನ್ನ ಹತ್ತನೆಯ ವರ್ಷದಲ್ಲಿದೆ, ಮತ್ತು ತನ್ನ ದೇಶದೊಳಗೆ ವಿಪುಲವಾಗಿ ದೊರೆಯುವ ಪ್ರೊಟೀನ್ ಅಧಿಕಾಂಶವಿರುವ ವಸ್ತುಗಳಿಂದ ತಮ್ಮದೇ ಆದ ಬಹೂದ್ದೇಶ ಆಹಾರ ವಸ್ತುವನ್ನು ಉತ್ಪಾದಿಸುವ ಆಸಕ್ತಿಯಿರುವ ಅನೇಕ ದೇಶಗಳು ಈ ಫೌಂಡೇಷನ್‌ನೊಡನೆ ಈಗ ಸಹಕರಿಸುತ್ತಿವೆ.

ಭಾರತದಂತೆ ಇತರ ದೇಶಗಳೂ, ಕಡಿಮೆ ವೆಚ್ಚದ ಈ ಆಹಾರ ವಸ್ತುವಿನಲ್ಲಿ ಸಮಾನ ರೀತಿಯ ಆಸಕ್ತಿ ತಳೆದಿವೆ. ಬ್ರೆಝಿಲ್ ದೇಶವು ಸೋಯಾಬೀನ್‌ಗಳಿಂದ ಈ ಆಹಾರ ವಸ್ತುವನ್ನುತ್ಪಾದಿಸಲು ಪ್ರಾರಂಭಿಸಿದೆ ಮತ್ತು ಇರಾಕ್ ದೇಶವು ಕ್ಷೀಚ್ಚುವರಿ ಖರ್ಜೂರಗಳಲ್ಲಿ ಮತ್ತು ಎಳ್ಳಿನ ಬೀಜಗಳಲ್ಲಿ ಪ್ರಯೋಗ ನಡೆಸುತ್ತಿದೆ. ಫಿಲಿಪ್ಪೈನ್ಸ್‌ನ ಜೆಸಿ ಸಂಶೋಧಕರು ವಿಸಿನ ಪ್ರಯೋಗ ಮಾಡುತ್ತಿದ್ದಾರೆ ಮತ್ತು ದಕ್ಷಿಣ ಪ್ಯಾಸಿಫಿಕ್ ನಲ್ಲಿ ತೆಂಗಿನ ಕಾಯಿಗಳನ್ನು ಪರೀಕ್ಷಿಸಲಾಗುತ್ತಿದೆ. ಬರ್ಮ, ಸಿಂಹಳ ಮತ್ತು ಜಪಾನ್‌ಗಳು, ತಮ್ಮ ಸ್ವಂತ ಉತ್ಪಾದನಾ ಘಟಕಗಳನ್ನು ಮುನ್ನಡೆಯುತ್ತಿವೆ.

ಇತ್ತೀಚೆಗಿನ ವರ್ಷಗಳಲ್ಲಿ ಫೌಂಡೇಷನ್‌ಗೆ ಬಂದಿರುವ ಪತ್ರಗಳು ಈ ಆಹಾರ ವಸ್ತುವಿನ ಬಗ್ಗೆ ಪ್ರಶಂಸೆಗಳ ಸುರಿಮಳೆ ಸುರಿದಿವೆ; ಭಾರತ, ಸೈಬೀರಿಯ ಮತ್ತು ಇತರ ಶೀತ ಪ್ರದೇಶಗಳ ಆಸ್ಪತ್ರೆಗಳಿಂದ ಮತ್ತು ಕುಷ್ಠ ರೋಗ ಚಿಕಿತ್ಸಾಲಯಗಳಿಂದ. ಕುಷ್ಠ ರೋಗ ಚಿಕಿತ್ಸೆಯಲ್ಲಿ ಈ ಆಹಾರದ ವೈದ್ಯಕೀಯ ಮೌಲ್ಯಗಳಿಗೆ ವರದಿಗಳು ಬಂದಿವೆ

ಅಮೆರಿಕನ್ನರ ಚಿಕ್ಕ ವಂತಿಗೆಗಳು ಮತ್ತು ಚರ್ಚ್‌ಗಳು, ಸ್ತ್ರೀಯರ ಮತ್ತು ಪೌರ ಸಂಘಗಳು ಮತ್ತು ಕಣಕಾಸಿನ ಸಂಸ್ಥೆಗಳು ಮುಂತಾದ ವಿವಿಧ ಸಂಘಗಳ ಕಾಣಿಕೆಗಳು ಬಲುಮಟ್ಟಿಗೆ ಈ ಫೌಂಡೇಶನ್‌ನ ಯಶಸ್ಸಿಗೆ ಕಾರಣವಾಗಿವೆ. ವಂತಿಗೆ ಕೊಡುವವರಲ್ಲಿ ಕೆಲವರು ಮುದುಕರು ಇವರು ಅನೇಕ ಬಾರಿ ಸಂತೋಷದಿಂದ, ಬಡವರಿಗೆ ಉಪಕಾರ ಮಾಡಲು, ದಿನವಲ್ಲಿ ಒಂದು ಊಟವನ್ನು ಬಿಡುತ್ತಾರೆ. ಈ ಪ್ರಾಜೆಕ್ಟ್, "ಅಮೆರಿಕದ ಪಾಸಿಗಿ ನಾಗರಿಕನಿಗೆ, ಕಡಿಮೆ ಭಾಗ್ಯಶಾಲಿಗಳಾಗಿರುವವರಲ್ಲಿ ನೈಜವಾದ ಮಾನವೀಯ ಆಸಕ್ತಿಯಿದೆಯೆಂಬುದನ್ನು ಜಗತ್ತಿನಾದ್ಯಂತವ ಜನರಿಗೆ ಮನಗಾಣಿಸಲು ಬಹು ಪರಿಣಾಮಕಾರಿ ಪ್ರಧಾನವಾಗಿರುತ್ತದೆ" ಎಂದು ಫೌಂಡೇಷನ್ ಭಾವಿಸುತ್ತದೆ.

ಗೋವಿಜಯ

(ಗೋವಿನ ಕಥೆ)

ಶ್ರೀ ಮುಮ್ಮುಖಾಸ್ವಾಮಿ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರಿಗೂ ಶಿಕ್ಷಣಕ್ಕೂ ಅನುಕೂಲವಾದ ಕಥಾರೂಪಕಂಗಳು.

ತಮ್ಮ ಸ್ವಸ್ಥಕ್ಕೆ ತಾವೇ ಕರ್ತೆ, ಹಾಸು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗೂ ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಚಾಣಾಕ್ಷರಾಗಬೇಕೇ? ಹಾಗಾದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0—8—0

NAVAYUGA

Popular Kannada Weekly

Founder:—

A. B. SHETTY, *M. L. A.*
Former Minister for Public Health, Govt. of Madras.
At Present Minister for Health Govt. of Mysore.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೬	೧೦-೧-'೫೭	೧೯

ಕಾಂಗ್ರೆಸಿನ ಸಂಕಲ್ಪ

ಇಂದೋರಿನಲ್ಲಿ ನೊನ್ನೆ ತಾನೆ ಜರಗಿದ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸಿನ ೬೨ನೇ ಅಧಿವೇಶನವು ಮುಂದಿನ ಚುನಾವಣೆಯ ಬಗ್ಗೆ ಕಾಂಗ್ರೆಸು ಸಂಸ್ಥೆಯು ನಿಲುಮೆ ಏನೆಂಬುದನ್ನು ಬಹಳ ಜೆನ್ನಾಗಿ ಸ್ಪಷ್ಟಪಡಿಸಿತು. ಈ ಸಲದ ಅಧಿವೇಶನದ ಮುಂದೆ ಚುನಾವಣೆಯ ಘೋಷಣೆಯನ್ನು ಅನುಮೋದಿಸುವ ಕೆಲಸವೊಂದೇ ಇದ್ದಂತೆ ಕಾರ್ಯಕಲಾಪಗಳು ನಡೆದ ರೀತಿಯಿಂದ ಕಂಡು ಬಂತು. ಇದು ಅಸಹಜವಾದುದೇನೂ ಅಲ್ಲ. ಏಕೆಂದರೆ, ಚುನಾವಣೆಯು ಕೇವಲ ಒಂದೂವರೆ ತಿಂಗಳ ಅಂತರದಲ್ಲಿರುವಾಗ ಕಾಂಗ್ರೆಸು ತನ್ನ ಧ್ಯೇಯ ಧೋರಣೆಗಳನ್ನು ಸ್ಪಷ್ಟವಾಗದಂತೆ ತಿಳಿಸದಿರುವುದು ಸಾಧ್ಯವಿಲ್ಲ. ಆದರೆ ಕಾಂಗ್ರೆಸಿನ ಧುರೀಣರು ಚುನಾವಣೆಯ ಸಂಬಂಧದಲ್ಲಿ ಅನುಸರಿಸಬೇಕಾದ ನೀತಿ-ನಿಯಮಗಳನ್ನು ವರ್ಣಿಸುವಾಗ ಕೇವಲ ಆದರ್ಶ ಪ್ರಪಂಚದಲ್ಲಿ ವಿಹರಿಸುತ್ತಿಲ್ಲವೆಷ್ಟೆ ಎಂಬ ಸಂಶಯ ಉಂಟಾಗುತ್ತದೆ; ಕಾಂಗ್ರೆಸಿನ ಈ ಮುಖಂಡರಿಗೆ ಮತದಾರರ ಮುಂದೆ ಹೋಗಿ ಮತಗಳನ್ನು ಕಾಂಗ್ರೆಸಿನ ಪರವಾಗಿ ಯಾಚಿಸುವ ಸಾಮಾನ್ಯ ಕಾಂಗ್ರೆಸಿಗರ ಮನೋಭಾವನೆಯು ಸ್ವಲ್ಪವೂ ಅರ್ಥವಾಗಿಲ್ಲವಲ್ಲ ಎಂಬ ಖೇದವೂ ಉಂಟಾಗುತ್ತದೆ. ಏಕೆಂದರೆ ಚುನಾವಣೆಯ ಬಗ್ಗೆ ಧುರೀಣರಾದವರು ಎಷ್ಟೇ ಉದಾತ್ತ ದೃಷ್ಟಿಕೋಣವನ್ನು ಇಟ್ಟುಕೊಂಡಿರಲಿ, ಉಮೇದ್ವಾರಿಯಾದವನೂ ಅಷ್ಟೇ ಉನ್ನತವಾದ ಭಾವನೆಯನ್ನು ಹೊಂದಿರುವನೆಂದು ಸತ್ಯ ಸಂಗತಿಯನ್ನೆ ತಿಳಿದವರು ಯಾರೂ ಹೇಳಲಾರರು; ಇನ್ನು ಈ ಉಮೇದ್ವಾರಿಯನ್ನು ಬೆಂಬಲಿಸುವ ಅತನ ಪರಿವಾರದವರಂತೂ "ಹೇಗಾದರೂ ಮಾಡಿ ಓಟು ಬಂದರೆ ಸರಿ" ಎಂಬ ವ್ಯವಹಾರಿಕ ಗತ್ತುಗಾರಿಕೆಯುಳ್ಳವರಲ್ಲದೆ, ಅದಕ್ಕೆಂತ ಉಚ್ಚ ಧ್ಯೇಯವನ್ನು ಹೊಂದಿದ್ದಾರೆ ಎನ್ನುವುದು ಕಷ್ಟ. ವಾಸ್ತವವಾಗಿ ಪರಿಸ್ಥಿತಿ ಇಷ್ಟು ಕೆಟ್ಟರೂವಾಗಿ ಧುರೀಣರು ಚುನಾವಣೆಯ ಬಗ್ಗೆ ಮಾಡಿರುವ ದೀರ್ಘ ಭಾಷಣಗಳೆಲ್ಲವೂ ಕೋಣನ ಮುಂದೆ ಕಿನ್ನರಿ ಬಾರಿಸಿದಂತೆ ನಿಷ್ಪ್ರಯೋಜಕವಾಗುತ್ತವೆ. ಚುನಾವಣೆಯು ತಾವು ಇಚ್ಛಿಸುವ ರೀತಿಯಲ್ಲಿ ನಡೆಯಬೇಕೆಂಬುದು ಕಾಂಗ್ರೆಸಿನ ವರಿಷ್ಠರ ಖಂಡಿತವಾದ ಅಪೇಕ್ಷೆಯಾಗಿದ್ದಲ್ಲಿ ಕಾಂಗ್ರೆಸಿನ ಉಮೇದ್ವಾರಿಗಳನ್ನು ಆರಿಸುವಲ್ಲಿ ಹೆಚ್ಚಿನ ವಿಚಕ್ಷಣತೆಯನ್ನೂ ಚುನಾವಣಾ ಯಂತ್ರದ ಮೇಲೆ ಹೆಚ್ಚಿನ ನಿಯಂತ್ರಣವನ್ನೂ ಸಂಸ್ಥೆಯ ಕಾರ್ಯವಿಧಾನದಲ್ಲಿ ವಿಶೇಷವಾದ ಶಿಸ್ತನ್ನೂ ಕಾಯ್ದುಕೊಂಡು ಹೋಗಲು ಅವರು ಪ್ರಯತ್ನ ಪಡುವುದು ಯೋಗ್ಯವಲ್ಲದೆ ಉಪದೇಶ ವಾಕ್ಯಗಳ ಅವಲಂಬನೆ ಮಾಡುವುದು ವ್ಯರ್ಥ. ಉದಾಹರಣೆಗೆ, ನೈತಿಕ ಮೂಲ್ಯಗಳಿಗೆ ಮಹತ್ವನೀಯಬೇಕೆಂದೂ ನಾರ್ವಜನಿಕವಾಗಿಯೂ ಖಾಸಗಿಯಾಗಿಯೂ ಉಚ್ಚ ಮಟ್ಟದ ಜೀವನ ವಿಧಾನವನ್ನು ಚುನಾವಣೆಗೆ ಸಂಬಂಧಿಸಿದವು ಅನುಸರಿಸಬೇಕೆಂದೂ ಕಾಂಗ್ರೆಸಿನ ಒಂದು ಗೊತ್ತುವಳಿ ಹೇಳುತ್ತದೆ. ಚುನಾವಣೆಯು ಆಂದೋಲನವು ಆದರ್ಶ, ಮತ್ತು ಪಕ್ಷದ ಕಾರ್ಯಕ್ರಮ ಮತ್ತು ಧ್ಯೇಯಗಳ ವರ್ತುಲದಲ್ಲಿ ನಡೆಯಬೇಕಲ್ಲದೆ ಅದಕ್ಕಿಂತ ಕೆಳಗಿಳಿದು ಬಂದು ವ್ಯಕ್ತಿಗತ ದ್ವೇಷಾಸೂಯೆಗಳ ಮತ್ತು ಭರ್ತ್ಸನೆಯ ದಾರಿ ಹಿಡಿಯಬಾರದೆಂದು ಈ ಗೊತ್ತುವಳಿ ವಿಧಿಸುತ್ತದೆ. ಕಳೆದ ಮಹಾ ಚುನಾವಣೆಯ ಅನುಭವವಿದ್ದವರಿಗೆ, ಈ ಚುನಾವಣೆಯಲ್ಲಿ ವ್ಯಕ್ತಿಗತ ಟೀಕೆಗಳಿಗೆ ಆಸ್ಪದ ಉಳಿಯಲಾರದೆಂಬ ಮಾತಿನಲ್ಲಿ ಅಥವಾ ಉಳಿಯಕೂಡದೆಂಬ ಧುರೀಣರ ಅಭಿಲಾಷೆಯು ನೆರವೇರೀತೆಂಬ ವಿಷಯದಲ್ಲಿ ತುಂಬ ಸಂದೇಹವಿದೆ. ಕಾಂಗ್ರೆಸಿನ ಉಮೇದ್ವಾರಿಗಳನ್ನು ಆರಿಸುವಾಗಲೇ ಕಾಂಗ್ರೆಸು ಸಂಸ್ಥೆಯು ನೈತಿಕ ಹಾಗು ವ್ಯಕ್ತಿಗತ ಮೂಲ್ಯಗಳನ್ನು ಕಡೆಗಣಿಸಿದ ನಿದರ್ಶನಗಳು ವಿರಳವಲ್ಲ ಹೀಗಿದ್ದೂ ಚುನಾವಣೆಯು ಉನ್ನತ ಮಟ್ಟದಲ್ಲಿ ನಡೆಯಬೇಕೆಂದು ಕಾಂಗ್ರೆಸಿನ ಗೊತ್ತುವಳಿಯಲ್ಲಿ ಅಪೇಕ್ಷಿಸಿರುವುದಕ್ಕೆ ಏನೆನ್ನೋಣ? ಗೊಸುಧಾರಣೆ, ವಂದ್ಯಪಾನ ಪ್ರತಿಬಂಧ ಅಸ್ಪೃಶ್ಯತೆಯ ನಿರ್ಮೂಲನೆ, ಗೃಹೋದ್ಯಮಗಳಿಗೆ ಪ್ರೋತ್ಸಾಹ ಮುಂತಾದ ಸಾಮಾನ್ಯ ಧೋರಣೆಯ ಮಟ್ಟಿಗೆ ಸಹಜ ತಮ್ಮನಿತ್ಯ ಜೀವನದಲ್ಲಿ ಗೌರವವನ್ನೂ ನಿಷ್ಠೆಯನ್ನೂ ತೋರಿಸದ ಅನೇಕರು ಕಾಂಗ್ರೆಸಿನ ಪಟ್ಟಿಯನ್ನು ಧರಿಸಿ ಚುನಾವಣೆಯಲ್ಲಿ ಹೋರಾಡಲು ಮುಂಬರುವ ಸನ್ನಿವೇಶ ಜನರ ಮುಂದಿರುವಾಗ ಉಪದೇಶ ವಾಕ್ಯಗಳು ಎಷ್ಟು ಹಾಸ್ಯಾಸ್ಪದವಾಗುತ್ತವೆ! ಇದು ಕಾಂಗ್ರೆಸು ಸಂಸ್ಥೆಯು ಪಾರ್ಲಿಮೆಂಟರಿಯನ್ ಆಗಿದ್ದರೆ ಮತ್ತೇನು? ಈ ನಿರಾಶೆಯ ಎಡೆಯಲ್ಲೂ ಸಂತೋಷವನ್ನು ಕೊಡುವ ವಾರ್ತೆ ಏನೆಂದರೆ, ಆಗ್ಗದ ಸ್ನೇಹವನ್ನು ಚುನಾವಣೆಯಲ್ಲಿ ಜಯ ಸಂಪಾದಿಸಲಿಕ್ಕಾಗಿ ಇತರ ಪಕ್ಷಗಳೊಡನೆ ಮಾಡಿಕೊಳ್ಳುವುದಿಲ್ಲ ಎಂಬ ಕಾಂಗ್ರೆಸಿನ ಸಂಕಲ್ಪ. ಶಿಸ್ತಿನ ಪ್ರಶ್ನೆಯ ರೂಪದಲ್ಲಿ ವರಿಷ್ಠರೇ ಇಂಥ ಒಲವಿರಕೂಡದೆಂಬ ಇತ್ಯರ್ಥಕ್ಕೆ ಬಂದುದರಿಂದ ಅನುಚಿತ ಮೈತ್ರಿಗಳಾಗಲಾರವೆಂದು ನಂಬಬಹುದು. ಆಲ್ಲಲ್ಲಿಯ ಪರಿಸ್ಥಿತಿಗೆ ಹೊಂದಿಕೊಂಡು ನಡೆಯಲಿ— ಎಂಬ ಸಾಮಾನ್ಯ ಆದೇಶವನ್ನು ಕೊಡುತ್ತಿದ್ದರೆ ಈ ಸಂತೋಷವೂ ಉಳಿಯುತ್ತಿರಲಿಲ್ಲ. ಚುನಾವಣೆಯಲ್ಲಿ ಗೇಲು ಕಾಂಗ್ರೆಸಿಗಾಗುವುದೆಂಬ ಬಗ್ಗೆ ಸಂಪೂರ್ಣ ಭರವಸೆ ಇದೆ" ಎಂದು ಶ್ರೀ ನೆಹರುರವರು ಹೇಳಿದ್ದಾರೆ; ಜನರ ನುಂದೆ ಧೈರ್ಯದಿಂದ ಹೋಗಿ ಕಾಂಗ್ರೆಸಿನ ಸಾಧನೆಗಳ ಪಟ್ಟಿಯಲ್ಲಿಯ ಮತಗಳನ್ನು ಕೇಳಿ ಎಂದೂ ಅವರು ಹೇಳಿದ್ದಾರೆ. ಚುನಾವಣೆಯಲ್ಲಿ ಸೋತರೂ ಪರವಾಯಿಲ್ಲ; ಚುನಾವಣೆಗಳು ಕೇವಲ ಮತ ಸಂಪಾದನೆಗಾಗಿ ಇವೆ ಎಂಬ ಸಂಕುಚಿತ ಅರ್ಥವನ್ನು ಬಿಟ್ಟುಗೊಟ್ಟು ಅವುಗಳು ಜನಶಿಕ್ಷಣದ ಸಾಧನಗಳಾಗಿವೆ ಎಂಬ ವಿಶಾಲ ಅರ್ಥವನ್ನು ಕಟ್ಟಿಕೊಳ್ಳಬೇಕು ಎಂದು ಕಾಂಗ್ರೆಸಾಧ್ಯಕ್ಷರು ತಿಳಿಸಿದ್ದಾರೆ. ಈ ಜನಶಿಕ್ಷಣದ ಕಲ್ಪನೆಯು ಸೊಗಸಾದುದಾಗಿದೆ. ಪ್ರತಿಯೊಬ್ಬ ಮತದಾರನ ಮುಂದೆ ತಮ್ಮ ಪಕ್ಷವು ಕೈಗೊಡಿಸಿದ ಸಾಧನೆಗಳನ್ನು ವಿವರಿಸಲು ಮತ್ತು ಆತನಲ್ಲಿ ರಾಜಕೀಯ ಜಾಗೃತಿಯನ್ನು ಹುಟ್ಟಿಸಲು ಚುನಾವಣೆಯು ಸಮಯವನ್ನು ಒಂದು ಅವಕಾಶವೀಯುತ್ತದೆ ಎಂಬ ಮಾತು ಸತ್ಯ. ಇಂಥ ಶಿಕ್ಷಣವು ಇಲ್ಲಿಗೆನೇ ಮುಗಿಯದೆ ನಿರಂತರ ನಡೆಯುತ್ತಿರಬೇಕು ಎಂಬ ವಿಚಾರವೂ ಸ್ತುತ್ಯ. ಆದರೆ ಚುನಾವಣೆಯ ಹಿಂದಿನ ನಾಲ್ಕೈದು ವಾರಗಳಲ್ಲಿಯಲ್ಲದೆ ಮತ್ತೆ ಕಾಂಗ್ರೆಸಿನ ಪುರಸ್ಕರ್ತರು ಎಷ್ಟು ಉತ್ಸಾಹದಿಂದ ಈ ಜನ ಶಿಕ್ಷಣ ಕಾರ್ಯದಲ್ಲಿ ಭಾಗವಹಿಸಿದ್ದಾರೆ? ಇಷ್ಟರಕನಕವ ದಾಖಲೆ ಏನೇನೂ ತೃಪ್ತಿಕರವಾಗಿಲ್ಲ. ಮತದಾರರೊಡನೆ ಅತಿ ನಿಕಟವಾದ ಸಂಬಂಧವನ್ನು ಬೆಳೆಸಿಕೊಳ್ಳದ ಸಂಸ್ಥೆಯು ಹೆಚ್ಚುಕಾಲ ಜೀವಂತವಾಗಿರಲಾರದು; ಕಾಂಗ್ರೆಸು ಸರಕಾರಿ ಗದ್ದುಗೆಯ ಮೇಲಿಂದ ಎಷ್ಟು ಒಳ್ಳೆಯ ಕೆಲಸಗಳನ್ನು ಮಾಡುತ್ತಾ ಜನಪ್ರಿಯತೆಯನ್ನು ಸಂಪಾದಿಸ ತ್ರಿವೆಯೋ ಸರಕಾರಿ ವಲಯದಲ್ಲಿ ಹೊರಗೆ, ರಾಜಕೀಯ ಸಂಸ್ಥೆ ಎಂಬ ಸಾಮಾನ್ಯ ಜೌಕಟ್ಟಿನಲ್ಲಿ ಜನರಿಂದ ದೂರ ದೂರ ಸರಿದು ಅವರ ಉಪೇಕ್ಷೆಗೆ ಪಾತ್ರವಾಗಿದೆ—ಎನ್ನಲು ತುಂಬ ವಿಷಾದವಾಗುತ್ತದೆ. ಸರಕಾರದ ಆಡಳಿತ ಯಂತ್ರದ ಮೇಲೆ ಇಂದು ಕಲ್ಯಾಣ ರಾಷ್ಟ್ರದ ಕಲ್ಪನೆಯ ದೆಸೆಯಿಂದ ಹಿಂದಿಗಿಂತ ಹಲವು ಪಟ್ಟು ಹೆಚ್ಚಿನ ಭಾಗಬಿದ್ದಿದೆ; ಆಲ್ಲಿ ಆಷ್ಟು ಮಟ್ಟಿನ ಚಟುವಟಿಕೆ ಕಂಡು ಬರುತ್ತದೆ ಅದರೆ ಕಾಂಗ್ರೆಸು ಸಂಸ್ಥೆಯು ಕಾರ್ಯಶೂನ್ಯವಾಗಿದೆ: ಜಡವಾಗಿದೆ: ಜನರ ಸಂಪರ್ಕದ ಆತುರವಿಲ್ಲದೆ ಅಲಸಿ ಘಾಸಿಗಿ ಬಿದ್ದು ಕೊಂಡಿದೆ. ಇಂಥ ಸಂಸ್ಥೆಯನ್ನು ನಂಬಿಕೊಂಡು ವರಿಷ್ಠರು ಚುನಾವಣೆಯಲ್ಲಿ ಹೋರಾಡಲು ಹೋಗದೆ, ಕಾಂಗ್ರೆಸು ಪಕ್ಷದ ಹೆಸರಿನಲ್ಲಿ ಸರಕಾರವು ಮಾಡಿರುವ ಕೆಲಸಗಳ ಪಟ್ಟಿಯನ್ನೂ ಕಾಂಗ್ರೆಸು ಪಕ್ಷದ ಹೆಸರಿನಲ್ಲಿ ಇನ್ನು ಮುಂದೆ ಮಾಡಲಿರುವ ಕೆಲಸಗಳ ಸ್ಥೂಲ ರೂಪವನ್ನೂ ಚುನಾವಣೆಯ ಘೋಷಣೆಯಲ್ಲಿ ಕಾಣಿಸಿರುವುದು ಚತುರೋಪಾಯವೇ ಸರಿ. ಆದರೆ ಉತ್ಸಾಹಿ ಸಂಸ್ಥೆಯಾಗಿ ಕಾಂಗ್ರೆಸು ಬಾಳಬೇಕೆನ್ನುವವರಿಗೆ ಇಷ್ಟರಿಂದಲೇ ಸಮಾಧಾನವಾಗಲಾರದು.

ಇನ್ನೂ ಚೆಂದಾಹಣವನ್ನು

ಕಳುಹಿಸದವರು ದಯವಾಡಿ ಕೂಡಲೇ ಕಳುಹಿಸಿಕೊಡುವಂತೆ ಇನ್ನೊಮ್ಮೆ ಕೇಳಿಕೊಳ್ಳುತ್ತೇವೆ. ಅಂತೂ ಕಾಲದಲ್ಲಿ ಚಂದಾ ಪಾವತಿಯಾಗದಿದ್ದರೆ ನಾವು ಅನಿವಾರ್ಯವಾಗಿ ಕಳುಹಿಸುವ ವಿ. ಪಿ. ಪಿ. ಯನ್ನಾದರೂ ಪಡೆಕೊಳ್ಳುವಂತೆ ವಿಜ್ಞಾಪಿಸುತ್ತೇವೆ.

ಮೆನೇಜರ್, ನವಯುಗ.

ಇಂದೋರಿನ ಸಂದೇಶ

ಕಾಂಗ್ರೆಸಿನ ಕಾರ್ಯಕ್ರಮ

ಇದೇ ಫೆಬ್ರವರಿ—ಮಾರ್ಚಿ ತಿಂಗಳುಗಳಲ್ಲಿ ನಡೆಯಲಿರುವ ಚುನಾವಣೆಗಳಲ್ಲಿ ಭಾಗವಹಿಸುವ ಪ್ರಮುಖ ಪಕ್ಷಗಳೆಲ್ಲವೂ ತಂತಮ್ಮ ಘೋಷಣೆಗಳನ್ನು ಮಾಡಿರುತ್ತವೆ. ಸಂಸ್ಥೆಯ, ಧ್ಯೇಯ ಮತ್ತು ಸಂಸ್ಥೆಯು ಈ ಧ್ಯೇಯಗಳ ಸಾಧನೆಗಾಗಿ ಕೈಗೊಳ್ಳುವ ವಿಧಾನಗಳನ್ನು ಈ ಘೋಷಣೆಗಳ ಮೇಲಿಂದ ತಿಳಿದುಕೊಳ್ಳಬಹುದು.

ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸು ಸಹ ತನ್ನ ಚುನಾವಣೆಯ ಘೋಷಣೆಯನ್ನು ಸಾಡಿದೆ. ಇಂದೋರಿನಲ್ಲಿ ನೊನ್ನೆ ಜರಗಿದ ಸಮ್ಮೇಳನ ಕಾಲದಲ್ಲಿ ಇದನ್ನು ಪ್ರಕಟಪಡಿಸಲಾಯಿತು.

ವರಿಷ್ಠರ ಅಭಿಪ್ರಾಯದಲ್ಲಿ ಕಾಂಗ್ರೆಸು ಎಂದಿಗೂ "ಹುಸಿ" ಭರವಸೆಯನ್ನು ಕೊಡಲಾರದು; ಏಕೆಂದರೆ ಸುಳ್ಳು ಆಶ್ವಾಸನೆಗಳತ್ತಡ್ಡೇ ಆದರೆ ಜನರು ಹಿಂದಿನಿಂದ ಸಂಸ್ಥೆಯನ್ನು ದೂರುತ್ತಾರೆ. ಇದಕ್ಕೆ ಅವಕಾಶವಿಲ್ಲದಂತೆ ವ್ಯಾವಹಾರಿಕವಾಗಿ ಏನು ಸಾಧ್ಯವೊ ಅಷ್ಟನ್ನು ಮಾತ್ರವೇ ಸಾಧಿಸುವ ಸಂಕಲ್ಪವನ್ನು ಜನರ ಮುಂದಿಡುವುದು ಶ್ರೇಯಸ್ಕರ ಎಂಬುದಾಗಿ ಧುರೀಣರು ಭಾವಿಸಿದ್ದಾರೆ.

ಆದುದರಿಂದ ಕಾಂಗ್ರೆಸಿನ ಚುನಾವಣೆಯ ಘೋಷಣೆಯನ್ನು ಇವೇ ಹನ್ನೆರಲೆಯನ್ನಿಟ್ಟುಕೊಂಡು ತಯಾರಿಸಲಾಗಿದೆ. ವ್ಯಾವಹಾರಿಕತೆಗೆ ಹೆಚ್ಚಿನ ಮಹತ್ವವನ್ನು ಘೋಷಣೆಯಲ್ಲಿ ಕೊಡಲಾಗಿದೆ. ಇದು ಎಷ್ಟೊ ಮತದಾರರಿಗೆ ರುಚಿಸದಿರಬಹುದು; ಅವರಿಗೆ ಕೂಡಲೇ ಭರವಸೆಗಳು ಸಿಗದೆ ಹೋಗಿ ಅಷ್ಟು ಮಟ್ಟಿಗೆ ಆಕರ್ಷಣೆಯು ಕಡಿಮೆಯಾಗಬಹುದು. ಆದರೆ ಭರವಸೆಗಳನ್ನು ಕೊಟ್ಟರೆ ಸಾಲದು; ಪೂರೈಸಲೂ ಬೇಕು ಎಂಬ ಮಾತನ್ನು ಇಂಥ ಮತದಾರರು ಮನಗಂಡರೆ, ಕಾಂಗ್ರೆಸಿನ ಘೋಷಣೆಯೇ ಉಳಿದೆಲ್ಲ ಪಕ್ಷಗಳ ಘೋಷಣೆಗಿಂತ ಸತ್ಯಕ್ಕೆ ಸಮೀಪವೂ ಸುಸ್ಥಿತಿಗೆ ಹೊಂದಿಕೊಂಡಿರುವುದೂ ಆಗಿ ತೋರಿದೀತು.

ಎಪ್ಪತ್ತೈದು ವರ್ಷಗಳ ಹಿಂದೆ ಉದಯವಾದ ಕಾಂಗ್ರೆಸು ಈಗ ಹೆತ್ತು ವರ್ಷಗಳಿಂದ ಸರಕಾರಿ ಪಕ್ಷವಾಗಿ ತಾನು ಹಿಂದೆ ಜನರ ಮುಂದೆ ಆಡಿದ ಮಾತುಗಳಲ್ಲಿ ಒಂದೊಂದನ್ನೆ ಕಾರ್ಯರೂಪದಲ್ಲಿ ಇಳಿಸಿ ತೋರಿಸುತ್ತಾ ಇದೆ. ಜನರ ಮುಂದೆ ಕಾಂಗ್ರೆಸು ಸರಕಾರಗಳ ಕಾರ್ಯಸಾಧನೆಯ ಚಿತ್ರವನ್ನಿಟ್ಟು, ಅದರ ಮಹತ್ವವನ್ನು ಜನರಿಗೆನ್ನೇ ತೀರ್ಮಾನಿಸಲು ಬಿಡುವ ಧೋರಣೆಯು ಘೋಷಣೆಯಲ್ಲಿ ಅಡಕವಾಗಿದೆ.

ಕಾಂಗ್ರೆಸು ಇಂದು ಸಮಾಜವಾದಿ ಆದರ್ಶವನ್ನು ಸ್ವೀಕರಿಸಿದೆ. ಕಾಂಗ್ರೆಸು ಭಾರತದಲ್ಲಿ ರಾಜಕೀಯ ಕ್ರಾಂತಿಯನ್ನು ತನ್ನದೇ ಆದ ರೀತಿಯಲ್ಲಿ ಸಾಧಿಸಿಕೊಟ್ಟಿತು. ಅದೇ ಪ್ರಕಾರ ಈಗ ಆರ್ಥಿಕ ಹಾಗು ಸಾಮಾಜಿಕ ರಂಗದಲ್ಲಿ ಕ್ರಾಂತಿಯನ್ನು

ಸಾಧಿಸಲು ಕಟಿಬದ್ಧವಾಗಿದೆ. ಇನ್ನೆರಡೂ ಒಗೆಯ ಕ್ರಾಂತಿಗಳು ಸಿದ್ಧಾನವಾಗಿ ರಾಷ್ಟ್ರದಲ್ಲಿ ರೂಪುಗೊಳ್ಳುತ್ತವೆ ಎಂದರೂ ತಪ್ಪಲ್ಲ.

ಈಗಾಗಲೇ ಬಹಳಷ್ಟು ಪ್ರಗತಿಯನ್ನು ಸಾಧಿಸಲಾಗಿದೆ. ತನ್ನ ಕಾರ್ಯ ವಿಧಾನಗಳನ್ನು ಕಾಂಗ್ರೆಸು ಸ್ಥಗಿತಗೊಳಿಸದೆ ಮುಂದುವರಿಸುತ್ತಲೇ ಹೋಗುತ್ತದೆ. ಇಷ್ಟೇ ಸಮಯದೊಳಗೆಂದು ನಿರ್ದಿಷ್ಟವಾಗಿ ಹೇಳುವಂತಿಲ್ಲದಿದ್ದರೂ ಇನ್ನೊಂದೆರಡು ದಶಕಗಳಲ್ಲಿ ಪ್ರತಿಯೊಬ್ಬನಿಗೂ ಸ್ವಾತಂತ್ರ್ಯ, ಸುಖ ನೆಮ್ಮದಿ ಅಭಿವೃದ್ಧಿಯ ಸಮಾನಾವಕಾಶಗಳು ಸಿಗುವ ಸಮಾಜವಾದಿ ಪದ್ಧತಿಯನ್ನು ದೇಶದಲ್ಲಿ ಸ್ಥಾಪಿಸಲು ಕಾಂಗ್ರೆಸು ಆಶಿಸುತ್ತದೆ.

ಕಾಂಗ್ರೆಸಿನ ಮುಖ್ಯ ಧ್ಯೇಯಗಳು ಸ್ವಜಾತ್ಯಾಭಿಮಾನ ಮತ್ತು ಸಮಾಜವಾದ; ಇವುಗಳನ್ನು ಶಾಂತ ವಿಧಾನಗಳಿಂದಲೇ ಸಾಧಿಸುವುದು ಕಾಂಗ್ರೆಸಿನ ಸಂಕಲ್ಪ. ಸಮಾಜ ವಾದವು ಮಾನವನ ಆರ್ಥಿಕ ಸಂಬಂಧವನ್ನು ಮಾತ್ರ ಸ್ಪರ್ಶಿಸುತ್ತಿಲ್ಲ; ಅದು ಸಮಾಜದ ನಿಜಾರಧಾರೆಯನ್ನೂ ವ್ಯಕ್ತಿಗತ ಜೀವನ ವಿಧಾನವನ್ನೂ ಪರಿವರ್ತಿಸುತ್ತದೆ. ಜಾತಿಗಳಿಗೂ ವರ್ಗಗಳಿಗೂ ಈ ಪ್ರವೃತ್ತಿಯಲ್ಲಿ ಅವಕಾಶವಿರುವುದಿಲ್ಲ. ಆದು ದರಿಂದ, ಜನ್ಮ, ಜಾತಿ, ವರ್ಗ, ಧನ ಅಥವಾ ಸಂಪ್ರದಾಯದ ಹೆಸರಿನಲ್ಲಿ ಸಮಾಜದ ಪುರೋಗತಿಗೆ ಆತಂಕವಾಗುವವನಿದ್ದರೂ ಅವಿಲ್ಲ ಕಾಂಗ್ರೆಸಿಗೆ ತಾಜ್ಯ.

ವ್ಯಕ್ತಿಯ ಯೋಗ್ಯತೆಯನ್ನು ಆತನ ಸಂಪ್ರದಾಯ, ಆತನ ಉತ್ಪಾದಕ ಹಾಗು ರಚನಾತ್ಮಕ ವ್ಯವಹಾರ ಮತ್ತು ತನ್ನು ಸಮಾಜಕ್ಕೆ ಸಲ್ಲಿಸಿದ ಸೇವೆಯ ಮೇಲಿಂದ ತೀರ್ಮಾನಿಸುವುದು ಕಾಂಗ್ರೆಸಿನ ಕ್ರಮ, ದೈಹಿಕ ಪರಿಶ್ರಮಕ್ಕೆ ಗೌರವ ಸಲ್ಲಬೇಕು. ವ್ಯಕ್ತಿಗೂ ಗೌರವ ಸಲ್ಲಬೇಕು. ಕೇವಲ ಸರಕಾರದ ಕಾರ್ಯಗಳೇ ಇಂಥ ಸಮಾಜವಾದವನ್ನು ತರಲಾರವು; ಜನತೆಯ ಸಹಕಾರವೂ ಅತ್ಯವಶ್ಯ.

—ಹೀಗೆ ಕಾಂಗ್ರೆಸು ತನ್ನ ಚುನಾವಣೆಯ ಘೋಷಣೆಯಲ್ಲಿ ಹೇಳಿ, ಸಾರ್ವಜನಿಕ ಹಾಗು ಸಾಮಾಜಿಕ ಜೀವನದ ಒಂದೊಂದೇ ರಂಗಗಳಲ್ಲಿ ತಾನು ಈ ಆದರ್ಶವನ್ನು ವ್ಯವಹಾರ್ಯಗೊಳಿಸಲು ಸ್ವಯತ್ನಿಸುವುದಾಗಿ ಹೇಳಿದೆ. ಉದಾಹರಣೆಗೆ ಸಂಪತ್ತಿನಲ್ಲಿ ವೈಷಮ್ಯ ನಿರುವುದನ್ನು ತಗ್ಗಿಸುವುದಕ್ಕಾಗಿ ಎಲ್ಲರ ಜೀವನವೂ ಸುಖಮಯವಾದ ಕನಿಷ್ಠ ಮಟ್ಟವನ್ನು ಹೊಂದಿರಬೇಕೆಂಬ ವೃಷ್ಟಿಯಿಂದ ತಾನು ಪ್ರಯತ್ನ ನಡೆಸಿ, ಹಾಗೆ ಸಂಪತ್ತಿನ ವಿತರಣೆಯಲ್ಲಿರುವ ವೈಷಮ್ಯಗಳನ್ನು ನಿವಾರಿಸುವೆನೆಂದು ತಿಳಿಸುತ್ತದೆ. ಇದೇ ರೀತಿ ರಾಷ್ಟ್ರದಲ್ಲಿ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಸಹಸ್ರಪ್ರಥಮ ಪ್ರಾಶಸ್ತ್ಯ ಕೊಡುವ ನಿರ್ಧಾರವನ್ನು ಅದು ಪ್ರಕಟಿಸಿರುತ್ತದೆ.

ಬತಕನದ ವಿಶ್ವ ಯುದ್ಧದ ಘೋಷಣೆಯನ್ನು ಕಾಂಗ್ರೆಸು ಪುನರುಚ್ಚರಿಸಿದೆಯಲ್ಲದೆ ಎರಡನೇ ಪಂಚವಾರ್ಷಿಕ ಯೋಜನೆಯ ಕಾರ್ಯಾಚರಣೆಗೆ ಮಹತ್ವ ಕೊಡುವುದಾಗಿ ಹೇಳಿದೆ. ಜನರು ಆಪತ್ಸ್ಪು ಉಳಿತಾಯವನ್ನು ಸಾಧಿಸಿಯೂ ಯೋಜನೆಯೊಡನೆ ಸಂಪೂರ್ಣ ಸಹಕರಿಸಿಯೂ ನೆರವಾಗಬೇಕೆಂದು ಅದು ವಿಶೇಷ ವಿಜ್ಞಾಪನೆಯನ್ನು ಮಾಡಿರುತ್ತದೆ.

ಕೃಷಿ ಕ್ಷೇತ್ರದಲ್ಲಿ ಸಾಗುವಳಿದಾರನನ್ನು ಭೂಮಿಯ ಒಡೆಯನನ್ನಾಗಿ ಮಾಡಲು ಕ್ರಮಕೈ ಹೆಜ್ಜೆ ಮುಂದಿಡಲಾಗುವುದೆಂದು ಘೋಷಣೆಯು ಹೇಳುತ್ತದೆ. ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಸುಧಾರಿತ ಕೃಷಿಗೆ ಪ್ರೋತ್ಸಾಹ ಕೊಡಲಾಗುವುದೆಂದೂ ಅದು ತಿಳಿಸಿದೆ. ತೆರಿಗೆಗಳನ್ನು ಕಾರ ತಮ್ಯಾನುಸಾರ – ಅಂದರೆ ಹೆಚ್ಚು ಕೊಡ ಬಲ್ಲವರಿಂದ ಹೆಚ್ಚು ಕಡಿಮೆ ಶಕ್ತಿಯು ಳ್ಳವರಿಂದ ಕಡಿಮೆ–ವಸೂಲು ಮಾಡಲಾಗುವುದೆಂದು ಕಾಂಗ್ರೆಸು ಸ್ಪಷ್ಟಗೊಳಿಸಿದೆ.

ಮುಖ್ಯ ಉದ್ಯಮಗಳ ರಾಷ್ಟ್ರೀಕರಣದ ನೀತಿಯು ತನಗೆ ಸ್ವಾಗತಾರ್ಹವೆಂದಿದೆ ಕಾಂಗ್ರೆಸು. ಆದರೆ ಖಾಸಗಿ ಉದ್ಯಮಗಳನ್ನು ಯೋಜನೆಯ ಚೌಕಟ್ಟಿನಲ್ಲಿ ಉಳಿಯುಗೊಡಲಾಗುವುದೆಂದೂ ತಿಳಿಸಿದೆ ಉತ್ಪಾದನೆಯನ್ನು ಹೆಚ್ಚಿಸಿ ಹಣದುಬ್ಬರವನ್ನು ಪಡೆಯಲಾಗುವುದೆಂದೂ ಆದರೆ ಸಂಸು ಮತ್ತಿತರ ರೀತಿಯಿಂದ ದುಡಿಯುವ ಜನರು ಉತ್ಪಾದನೆಗೆ ಆತಂಕ ನೀಡ ಕೂಡದೆಂದೂ ಕಾಂಗ್ರೆಸು ಪ್ರಕಟಿಸಿದೆ.

ಅಸ್ಪೃಶ್ಯತೆಯ ನಿರ್ಮೂಲನೆ, ಮಹಿಳೆಯರ ಪುರೋಗತಿ ಮತ್ತು ಶೈಕ್ಷಣಿಕ ಹಾಗು ವೈದ್ಯಕೀಯ ಅನುಕೂಲತೆಗಳ ವಿಷಯದಲ್ಲಿ ಪ್ರಗತಿಪರ ಕಾರ್ಯಕ್ರಮಗಳನ್ನು ಅನುಸರಿಸುವ ನಿಶ್ಚಯ ವ್ಯಕ್ತ ಪಡಿಸಿದೆ ಗೃಹೋದ್ಯಮಗಳನ್ನು ಸಕಾಲ ರೀತಿಯಿಂದಲೂ ಪ್ರೋತ್ಸಾಹಿಸುವ ಮತ್ತು ಸಮಾಜ ವಿಕಾಸ ಯೋಜನೆ ಮತ್ತು ತರ ಕಾರ್ಯ ವಿಧಾನಗಳಿಂದ ಹಳ್ಳಿಗಳು ಮೂಲೆಯಲ್ಲುಳಿ ಜನೋಪಯೋಗಿ ಕಾರ್ಯಗಳು ನಡೆಯುವಂತೆ ನೋಡಿಕೊಳ್ಳುವ ನಿರ್ಧಾರವನ್ನು ಕಾಂಗ್ರೆಸು ಪುನರುಚ್ಚರಿಸಿದೆ.

ಅಂತರಾಷ್ಟ್ರೀಯ ಕ್ಷೇತ್ರದಲ್ಲಿ "ಪಂಚ ಶೀಲ"ಗಳನ್ನು ಪುರಸ್ಕರಿಸಲಾಗುವುದೆಂಬ ಮಾತನ್ನು ಕಾಂಗ್ರೆಸು ಎತ್ತಿ ಹೇಳಿದೆ. ವರ್ಣದ್ವೇಷವನ್ನೂ ವರ್ಣಾಹಂಕಾರವಾದವನ್ನೂ ತಿರಸ್ಕರಿಸಲಾಗುವುದೆಂದೂ ಕೆಂಪು ಚೀನವು ಉಳಿಯಲು ಬಂದಿದೆಯೆಂದೂ ಘೋಷಣೆಯಲ್ಲಿ ತಿಳಿಸಲಾಗಿದೆ. ಗೋವೆಯ ಸಮಸ್ಯೆಯನ್ನು ಶಾಂತ ವಿಧಾನದಿಂದ ಸರಿಹರಿಸುವ ವಾಗ್ದಾನವನ್ನೂ ಪೊರ್ತುಗೀಸರೊಡನೆ ಖಾಕಿ ಸ್ನಾನ ದೊಡ ಸೆ ಆಕ್ರಮಣಕ್ಕೆ ಇಳಿಲಿಲ್ಲವೆಂದೂ ಉತ್ತನು ಸಂಬಂಧವು ಳ್ಳ ನೆರೆ ಹೊರೆಯಾಗಿ ಪಾಕಿಸ್ತಾನದೊಡನೆ ಬಾಳುವುದೇ ತನ್ನ ಅಭಿಲಾಷೆಯೆಂದೂ ಕಾಂಗ್ರೆಸು ತಿಳಿಸಿರುತ್ತದೆ.

ತನ್ನ ಘೋಷಣೆಯ ಕೊನೆಯಲ್ಲಿ ಕಾಂಗ್ರೆಸು ನಿಸ್ಪೃಹತಂತ್ರ್ಯ ಹೋರಾಟ ಕಾಲದ ಲ್ಲಾಗಲೀ ಆನಂತರವಾಗಲೀ ಜನರಿಂದ ಶಕ್ತಿಯನ್ನೂ ಸ್ಫೂರ್ತಿಯನ್ನೂ ಪಡೆದಿರುವ ವಿಷಯವನ್ನು ಕಾಂಗ್ರೆಸು ಕೃತಜ್ಞತೆಯಿಂದಸ್ಮರಿ, ಜನರ ಗಾಢವಾದವಿಶ್ವಾಸವನ್ನಿಟ್ಟು ದೆಸೆಯಿಂದಲೇ ಸುರಂಬದ್ಧವಾಗಿ ಹೆಣೆದುಕೊಂಡ ಸಂಘಟಿತ ಪಕ್ಷವಾಗಿ ಬೆಳೆದು ರಾಷ್ಟ್ರೀಯ ಐಕ್ಯವನ್ನು ಕಾಯ್ದುಕೊಳ್ಳಲು ತನಗೆ ಸಮರ್ಥವಾಯಿತೆಂದು ಕಾಂಗ್ರೆಸು ಕೀರ್ತಿಸಿದೆ. ಕಾಂಗ್ರೆಸು ಮಾಡಿದ ಕೆಲಸಗಳನ್ನು ಜನರು ತೂಗಿ ನೋಡಿ ಮುರಳಿ ಕಾಂಗ್ರೆಸಿಗೆ ಹಿಂದಿನಂತೆಯೇ ಅಮಿತ ಸಹಕಾರವನ್ನಿತ್ತು ಪ್ರೀತಿಯನ್ನೂ ವಿಶ್ವಾಸವನ್ನೂ ವ್ಯಕ್ತಪಡಿಸಬೇಕೆಂದೂ ಇದು ಕೊನೆಯ ಇಂಥ ಬೆಂಬಲದಿಂದ ಭಾರತೀಯರ ಹರ್ಗತಿಗಾಗಿಯೂ ಲೋಕ ಶಾಂತಿಗಾಗಿಯೂ ದುಡಿಯುವ ಹೆಂಬಲ ತನ್ನದೆಂದೂ ಕಾಂಗ್ರೆಸು ಪ್ರಾರ್ಥಿಸಿರುತ್ತದೆ.

ಉಡುಪಿ

ಗತ್ತಾರ ಕೂಟ — ಸ್ಥಳೀಯ ದೈವಜ್ಞ ಬ್ರಾಹ್ಮಣ ಸವಾಜದ ವತಿಯಿಂದ ಕಳದ ತಾ. ೩೦ರಲ್ಲು ಉಡುಪಿ ಸರಕಾರಿ ಆಸ್ಪತ್ರೆಯ ಡಾ. ಸುಂದರರಾಜು ಶೆಟ್ಟಿ, ಬಿ. ಡಿ. ಸ್ಸಿಲಿಸ್ಟ್, ಅವರು ನವದೆಹಲಿಯಲ್ಲಿ ಕೂಡುವ ಜಾತಿಕ ಕ್ಷಯರೋಗ ಸಮ್ಮೇಳನಕ್ಕೆ ಈ ಜಿಲ್ಲೆಯಿಂದ ಪ್ರತಿನಿಧಿಯಾಗಿ ತೆರಳಿರುವ ಬಗ್ಗೆ, ಅವರನ್ನು ಅಭಿನಂದಿಸಲು ಸತ್ಕಾರ ಕೂಟವೊಂದು ಶ್ರೀ ಪದ್ಮನಾಭ ಶೇಟ್ ವ್ಯಾಕರರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಸ್. ಪದ್ಮನಾಭ ಶೇಟ್, ಕೃಷ್ಣನಾರಾಯಣ ಶೇಟ್ ಮತ್ತು ಬನ್ನಂಜೆ ರಾಮಾಚಾರ್ಯರು ಸಮಯೋಚಿತ ಮಾತುಗಳನ್ನಾಡಿದರು. ಮುಖ್ಯ ಅತಿಥಿಯು ತನಗಿತ್ತ ಗೌರವಕ್ಕಾಗಿ ಸಮಾಜ ಬಂಧುಗಳ ಉಪಕಾರ ಸ್ಮರಿಸಿದರು.

ಉಡುಪಿಯಲ್ಲಿ ಲಾ ಕಾಲೇಜು ಸ್ಥಾಪನೆ — ಬಗ್ಗೆ ಎಕಾಡೆಮಿ ಆಫ್ ಜನರಲ್ ಎಜ್ಯುಕೇಶನ್ ಕಡೆಯಿಂದ ಕರ್ನಾಟಕ ಯೂನಿವರ್ಸಿಟಿಗೆ ಮಾಡಲಾದ ಅರ್ಜಿ ಪರಿಶೀಲನೆಗಾಗಿ ಶ್ರೀಗಳಾದ ವಿ. ಆರ್. ಭಟ್, ಪ್ರಿನ್ಸಿಪಾಲ್, ಬೆಳ್ಳಾಗ್, ಪ್ರಿನ್ಸಿಪಾಲ್ ಎನ್. ಆರ್. ಕುಲಕರ್ಣಿ ಮತ್ತು ಪ್ಲೀಡರ್ ಎಸ್. ಎ. ಗುತ್ತಿಗೋಳಿಯವರುಗಳ ಯೂನಿವರ್ಸಿಟಿ ಕಮಿಶನ್ ಉಡುಪಿಗೆ ತಾ. ೨ ರಲ್ಲು ಬಂದು ವಿಚಾರವಿನಿಮಯ ನಡೆಸಿತು. ರಾತ್ರಿ ಮುಳುಂದ ನಿವಾಸದಲ್ಲಿ ಜರಗಿದ ಭೋಜನ ಸಮಾರಂಭದಲ್ಲಿ ಡಾ. ಟಿ ಎಂ. ಎ. ಪೈಗಳು ಎಕಡಮಿಯು ಸಾಧಿಸಿದ ಕೆಲಸಗಳ ವಿವರಣೆಯಿತ್ತು ಲಾ ಕಾಲೇಜಿನ ಅವಶ್ಯಕತೆಯನ್ನು ವ್ಯಕ್ತಪಡಿಸಿದರು ಕೋರ್ಟು ನ್ಯಾಯಾಧಾರಕ್ಕೆ ಮಾತ್ರವಲ್ಲದೆ ಕೈಗಾರಿಕಾ ಸಂಸ್ಥೆಗಳಿಗೂ ವಕೀಲರ ಅವಶ್ಯಕತೆಯಿದೆಯೆಂದರು. ಪ್ರಿನ್ಸಿಪಾಲ್ ಶ್ರೀ ವಿ. ಆರ್. ಭಟ್ಟರು ಉತ್ತರವೀಯುತ್ತಾ, ಸೂರತಲ್ಲಿ ಒಬ್ಬನಾದರೂ ವಕೀಲನಾಗಬೇಕಾಗಿದೆ. ಆತನು ಉತ್ತಮ ಮನುಷ್ಯನಾದ ವಿಷಯವನ್ನು ಪಡೆಯಬೇಕಾಗಿದೆ. ಉತ್ತಮ ಮನುಷ್ಯರಲ್ಲಿ ಶಿಕ್ಷಣಕ್ಕೆ ಉತ್ತಮ ದರ್ಜೆಯ ಕಾಲೇಜು ಅವಶ್ಯವಿದೆ. ಡಾ! ಟಿ. ಮಾಧವ ಪೈಗಳ ನಾಯಕತ್ವದಲ್ಲಿ, ಜನತೆಯ ಸಹಕಾರದಿಂದ, ಶ್ರೀ ಕೃಷ್ಣನ ಅನುಗ್ರಹದಿಂದ ಉಡುಪಿಯ ಲಾ ಕಾಲೇಜು ಉತ್ತಮ ದರ್ಜೆಯಲ್ಲಿ ಪರಿಣಮಿಸುವುದರಲ್ಲಿ ಸಂದೇಹವಿಲ್ಲವೆಂದರು. ಲಾ ಕಾಲೇಜು ಸ್ಥಾಪನೆಗೆ ತಮ್ಮ ಸಹಾನುಭೂತಿಯಿರುವುದಾಗಿ ಹೇಳಿದರು.

ಕೊಲೆಪ್ರಯತ್ನ — ಉಡುಪಿಯ ಮಾಜಿ ಒನರಿ ಸ್ಪೆಶಲ್ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟ್ ಶ್ರೀ ಪಿ. ಗೋಪಾಲ ನಾಯ್ಕರ ಮನೆಯಲ್ಲಿ ತಾ. ೧೮ರಂದು ರಾತ್ರಿ ಅನಧಿಕೃತವಾಗಿ ಪ್ರವೇಶಿಸಿರುವ ಮೈಸೂರಿನ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪ ಮತ್ತು ಪಿಡಬ್ಲ್ಯೂ ಮಂತ್ರಿ ಶ್ರೀ ಕಡಿದಾಳ ಮಂಜಪ್ಪನವರಿಗೆ ಮಾನಪತ್ರ ನೀಡಬೇಕೆಂದು ಒಮ್ಮತದ ನಿರ್ಣಯವಾಗಿತು.

ಸಪ್ತೋತ್ಸವ — ಶ್ರೀಕೃಷ್ಣ ಮಠದಲ್ಲಿ ಸಪ್ತೋತ್ಸವವು ಪರ್ಯಾಯ ಅದಮಾರು ಸ್ವಾಮಿಗಳವರ ನೇತೃತ್ವದಲ್ಲಿ ತಾ. ೩೦ರಂದು ರಾತ್ರಿ ಪ್ರಾರಂಭವಾಗಿತ್ತೆ. ಮಕರ ಸಂಕ್ರಾಂತಿ ಬ್ರಹ್ಮರಥೋತ್ಸವವು ತಾ ೧೪ರಲ್ಲೂ, ಜಗಲು ರಥೋತ್ಸವವು ತಾ. ೧೫ರಲ್ಲೂ ನಡೆಯಲಿರುವುದು.

ಮಂಗಳೂರು – ನವಮೈಸೂರಿನ ಶೈಕ್ಷಣಿಕ ಮಂತ್ರಿ ಶ್ರೀ ಕಡಿದಾಳ ಮಂಜಪ್ಪನವರು ತಾ ೩೦ರಂದು ಸಂಜೆ ಮಂಗಳೂರಿಗೆ ಆಗಮಿಸಿದರು. ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಮಂಗಳೂರಿನ ಕೇಂದ್ರ ಮೈದಾನದಲ್ಲಿ ಶ್ರೀ ಟಿ. ಎ. ಪೈ, ಬಿ. ಎಲ್. ಎ. ಯವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ದ. ಕ. ಜಿಲ್ಲಾ ಕಾಂಗ್ರೆಸ್ ಚುನಾವಣಾ ಪ್ರಚಾರ ಉದ್ಘಾಟಿಸುತ್ತಾ ಮಂತ್ರಿಗಳು ಪ್ರಚಾರಪ್ರಭುತ್ವದಲ್ಲಿ ಮಾಹಿತಿಕಾರವೆ ಒಂದು ಪವಿತ್ರವಾದ ಆಸ್ತ್ರವಾಗಿದೆ. ಈ ಆಸ್ತ್ರವನ್ನು ಜನತೆಯು ಬಹಳ ಜಾಗರೂಕತೆಯಿಂದ ಯೋಗ್ಯವಾದ ರೀತಿಯಲ್ಲಿ ದೇಶದ ಹಿತದೃಷ್ಟಿಯಿಂದ ಉಪಯೋಗಿಸಬೇಕೆಂದೂ ಇದೇ ಮೈಸೂರಿನ ಶೈಕ್ಷಣಿಕ ಕ್ರಮವನ್ನು ಒಂದೇ ತೆರನಾಗಿ ಮಾಡುವುದಕ್ಕೆ ಪ್ರಯತ್ನಿಸುವುದಾಗಿಯೂ, ದ. ಕ. ಜಿಲ್ಲಾ ಶಿಕ್ಷಣ ಸಂಸ್ಥೆಗಳನ್ನು ಮೈಸೂರಿನ ವಿಶ್ವವಿದ್ಯಾಲಯಕ್ಕೆ ಜೋಡಿಸುವ ಕುರಿತು ಆಲೋಚಿಸುವುದಾಗಿಯೂ ಶೈಕ್ಷಣಿಕ ಕ್ಷೇತ್ರ ಜಿಲ್ಲೆಯಲ್ಲಿರುವ ಹಲವು ಸಮಸ್ಯೆಗಳನ್ನು ಬೇಗನೆ ಪರಿಹರಿಸುವುದಾಗಿಯೂ ಹೇಳಿದರು. ಆರಂಭದಲ್ಲಿ ದ. ಕ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಯು. ಪಿ. ಮಲ್ಯರು ಸ್ವಾಗತಿಸಿದರು. ಅಧ್ಯಕ್ಷರಾದ ಶ್ರೀ ಟಿ. ಎ. ಪೈಗಳು ತನ್ನ ಭಾಷಣದಲ್ಲಿ ಈಗಿನ ಪರಿಸ್ಥಿತಿಯಲ್ಲಿ ಕಾಂಗ್ರೆಸೊಂದೇ ದೇಶದ ಹಿತವನ್ನು ಕಾಯುವ ದೇಶದ ಅಭಿವೃದ್ಧಿಯನ್ನು ಸಾಧಿಸುವ ಪಕ್ಷವಾಗಿದೆ. ಜೇಠಿ ಪಕ್ಷಗಳು ಇಷ್ಟು ಬೆಳೆದು ಬಂದಿಲ್ಲ ಎಂದು ಮುಂತಾಗಿ ಹೇಳಿ ಮುಂದಿನ ಚುನಾವಣೆಯಲ್ಲಿ ಜನರು ಸಹಕಾರವನ್ನು ಕೋರಿದರು.

ಶ್ರೀ ಕೆ. ಕೆ. ಸಟ್ಟಯನವರು ಧನ್ಯವಾದ ವನ್ನರ್ಪಿಸಿದರು. ತಾ. ೨೧ರಂದು ಮಂತ್ರಿಗಳು ಮಂಗಳೂರಿನ ಹಲವು ಶಿಕ್ಷಣಸಂಸ್ಥೆಗಳನ್ನು ಸಂದರ್ಶಿಸಿದರು. ಆಲ್ಲದೆ ಹಲವು ಜನಪ್ರತಿನಿಧಿಗಳೂ ಡನೆಯೂ ಶಿಕ್ಷಣ ಸಂಸ್ಥೆಯ ಪ್ರತಿನಿಧಿಗಳೊಡನೆಯೂ ಶೈಕ್ಷಣಿಕ ವಿಚಾರದಲ್ಲಿ ವಿಚಾರವಿನಿಮಯ ನಡೆಸಿದರು.

ದ. ಕ. ಜಿಲ್ಲಾ ಜೋರ್ಡನ್ ಸಭೆಯು– ಇದೇ ತಾ 16ನೆ ಬುಧವಾರ ಪೂರ್ವಾಹ್ನ 10-10 ಗಂಟೆಗೆ ಜೋರ್ಡನ್ ಸಭಾ ಸದನದಲ್ಲಿ ಜರಗಲಿರುವುದು. ಜನರಲ್ ಮತ್ತು ಎಲಿಮೆಂಟರಿ ಎಜ್ಯುಕೇಶನ್ ಫಂಡುಗಳ ಬಾಬ್ತು 1956-57ನೆ ವರ್ಷದ ತಿದ್ದಿದ ಮತ್ತು 1957-58ರ ಅಂದಾಜು ಪಟ್ಟಿಗಳು ಈ ಸಭೆಯಲ್ಲಿ ಪರಿಶೀಲಿಸಲ್ಪಡುವುದು.

ಕುಂಬಳೆ — ನೂಯಿಪಾಡಿ ಜುನಾದಿ ಆಧ್ಯಾಪಕರ ಕೇಂದ್ರದ ಮಾಸಿಕ ಸಭೆಯು ತಾ ೧೯ರಲ್ಲು ತರಬೇತಿ ಶಾಲೆಯ ಹೆಡ್‌ಮಾಸ್ಟರ್ ಶ್ರೀ ಕೆ. ರಾಮಕೃಷ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಚರ್ಚಾವಾಚನ, ಪೂಮರಿ ಪಾಠ ಇತ್ಯಾದಿ ಕಾರ್ಯಕ್ರಮಗಳಾದುವು.

ಪಡುಬಿದ್ರೆ—ಭಾರತ ಸೇವಕ ಸಮಾಜದ ತರಬೇತಿ ಶಿಬಿರದ ಮುಕ್ತಾಯ ಸಮಾರಂಭವು ತಾ ೩೦ರಲ್ಲು ಜರಗಿತು. ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ಸ್ವಾಗತ ಭಾಷಣ ಮಾಡಿದರು. ಉಡುಪಿ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನತೀರ್ಥ ಸ್ವಾಮಿಗಳವರು ವಿದ್ಯಾರ್ಥಿಗಳು ನಿರ್ಮಿಸಿದ ಹೊಸ ರಸ್ತೆಯನ್ನು ಉದ್ಘಾಟಿಸಿದರು.

ಮೈಸೂರು– ಉಡುಪಿ ಸರಕಾರೀ ತರಬೇತಿ ಹೆಮ್ಮಕ್ಕಳ ಶಾಲೆಯ 45 ಮಂದಿ ವಿದ್ಯಾರ್ಥಿನಿಯರು ಶ್ರೀನಿವಾಸಮಂದಿರ ಶಕ್ತಿಕಲಾ ಥಿಯೇಟರ್‌ಕರ್, ರೋಹಿಣಿ ದೇವಿ ಮತ್ತು ಕಸ್ತೂರಿ ಇವರುಗಳ ನೇತೃತ್ವದಲ್ಲಿ ನೈಸರ್ಗಿಕ ಪ್ರೇಕ್ಷಣೀಯ ಕ್ಷೇತ್ರಗಳನ್ನು ಸಂದರ್ಶಿಸಿದರು. ಭಾರತ ಸೇವಾವಲಯದ ಕೇಂದ್ರ ಕಚೇರಿಗೆ ತಾ. 1ನ್ನು ಭೇಟಿಯಿತ್ತಾಗ ಸಂಘಟನಾ ಕಾರ್ಯದರ್ಶಿ ಶ್ರೀ ಚೆನ್ನ ಬಸಪ್ಪಯ್ಯ ಪ್ರಧಾನ ಕಾರ್ಯದರ್ಶಿ ಶ್ರೀ ನಾರಾಯಣರಾವ್, ದಳಪತಿ ಶ್ರೀ ರಾಮ್ಪುರಾವ್ ಮೊದಲಾದವರು ಸ್ವಾಗತಿಕರಿಸಿ ಸೇವಾ ದಳದ ಪರಿಚಯವನ್ನು ಕೊಟ್ಟರು.

ಎಲ್ಲೆಲ್ಲಿ ಏನೇನು?

ಬಂಟ್ವಾಳ— ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್, ಬಂಟ್ವಾಳ ಶಾಖೆಯ ನೇತೃತ್ವದಲ್ಲಿ ಕೃಷಿಕರ ಮತ್ತು ಮಜೂರರ ಸಭೆಯು ಈಗ್ತಾ ತಾ 31ರಲ್ಲು ನಾಪೋರ್ಲಿ ಶ್ರೀ ಕೆ. ಕೆ. ಸೆಟ್ಟಿ, ಎಸ್. ಎಲ್. ಸಿ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ಜನಾರ್ಧನ ಸೆಟ್ಟಿರು ಸ್ವಾಗತ ಭಾಷಣಮಾಡಿದರು. ಒಕ್ಕಲುಸಹಿತ ಮನ್ಸೊದೆಯಲ್ಲಿ ತರಬೇಕಾದ ಕೆಲವು ತಿದ್ದುಪಡಿಗಳ ಕುರಿತು ಮನವಿಯೊಂದನ್ನು ಕೃಷಿಕರ ಪರವಾಗಿ ಶ್ರೀ ಬಿ. ವಿ. ಬಾಳಿಗ, ಎಮ್. ಎಲ್. ಎ, ಅವರಿಗೆ ಒಪ್ಪಿಸಲಾಯಿತು. ಡಾ. ಕೆ. ನಾಗಪ್ಪ ಅಳ್ವ, ಶ್ರೀ ಬಿ. ವಿ. ಬಾಳಿಗ ಮೊದಲಾದವರು ಸಂಪ್ರಭೋಚಿತ ಭಾಷಣಮಿತ್ತರು.

ಕಾಸು— ಸ್ಥಳೀಯ ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ಶ್ರೀ ವೆಂಕಟ್ರಮಣ ದೇವಸ್ಥಾನವ ಶ್ರೀ ವೆಂಕಟ್ರಮಣ ಮತ್ತು ಶ್ರೀ ದೇವಿ ಭೂದೇವಿಗೆ ಚಿನ್ನದ ಕವಚವನ್ನು ಕಾಶೀ ಮಹಾಧೀಶ ಶ್ರೀ ಸುಧೀಂದ್ರ ತೀರ್ಥ ಸ್ವಾಮಿಗಳವರ ಸನುಷ್ಟಮ ಕಳದ ತಾ. 25 ರಲ್ಲು ಶ್ರೀ ಕಾಸು ವಾಮನ ವಿಷ್ಣಪ್ಪ ಶ್ಯಾನುಭಾಗರ ಅಕ್ಕಂದಿಂದ ಒಪ್ಪಿಸುವ ಸಮಾರಂಭ ಜರಗಿತು

ಕೋಟೇಶ್ವರ— ಸ್ಥಳೀಯ ಸರ್ಬಾಲೋಪ್ಪಾ ಫೀಸಿನಲ್ಲಿ ತಾ. 20ಂದಂತೀತಸೌಕರ್ಯವನ್ನು ಇಲಾಖೆಯವರಿಂದ ಒದಗಿಸಿ ಕೊಡಲಾಗಿದೆ. ಈ ಸಾಕರ್ಯದಬಗ್ಗೆ ಸಾರ್ವಜನಿಕರು ಬಹು ಕಾಲದಿಂದ ಚಳವಳಿಸುತ್ತಿದ್ದರು.

ಹೆರ್ಕಳ—ಇಲ್ಲಿಯ ಜಾಸೆಲ್ ಮಿಲನ್‌ಹಾ| ಎ| ರಾದೆಯ ಹಳೇವಿದ್ಯಾರ್ಥಿ ಸಂಘದ ವತಿಯಿಂದ ಸುಮಾರು 50ಮಂದಿಯ ತಂಡಪ್ರೊಂ ಮು ಕಳದ ತಾ. 29ರಲ್ಲಿ ನವಮ್ಯೆಂಗೂರಿನ ಪ್ರವಾಸನನ್ನು ಕೈಕೊಂಡು ಪ್ರಮುಖಸ್ಥಳಗಳನ್ನು ಸಂದರ್ಶಿಸಿ ತಾ. 27ರಲ್ಲಿ ಹಿಂತೆರಳಿತು. ಪ್ರವಾಸಕಾಲದಲ್ಲಿ ಪೈಮೂರಿನ ಚಾಮುಂಡಿ ಕಾಫಿ ಕ್ಯೂರಿಂಗ್ ವರ್ಕ್ಸ್‌ನ ಶ್ರೀ ಹಿರಿಯಣ್ಣ ಸೆಟ್ಟಿರು ಭೋಜನವಿತ್ತು ಉಪಚರಿಸಿದರು. ಅಲ್ಲಿಂದ ಬೆ. ಕ. ಜಿಲ್ಲೆಯ ಎಮ್. ಎಲ್. ಎ. ಗಳಾದ ಶ್ರೀಯುತ ಟಿ. ಎ. ಪೈ, ಬಿ. ವಿ. ಬಾಳಿಗ, ವೈ. ಮಂಜಯ್ಯ ಸೆಟ್ಟಿರು ತುಂಬಾ ನೆರವಿತ್ತಿದ್ದರು. ಸಂಘದ ಕಡೆಯಿಂದ ಶ್ರೀ ಕೆ. ಆನಂದ ಸೆಟ್ಟಿರು ಅವರೆಲ್ಲರನ್ನು ಅಭಿನಂದಿಸಿದರು.

ಉಡುಪಿ—ಉಡುಪಿ ಪರಿಯಾಳ ಸಮಾಜ ಸುಧಾರಕ ಸಂಘದ ಮಹಾಸಭೆಯು ತಾ 1 ರಲ್ಲು ಉಡುಪಿ ಸರಸ್ವತಿ ಮಂದಿರದಲ್ಲಿ ಡಾ| ಕೆ. ಆರ್. ಬೋಂಟ್ರು, ಆವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷೆ ಶ್ರೀ ಯು.



ಕಳೆದ ಮಹಾಯುದ್ಧದಲ್ಲಿ ಇಟಲಿ ಮತ್ತು ಸಿಸಿಲಿಯ ರಣರಂಗದಲ್ಲಿ ನುಡಿದ ವೀರಯೋಧರ ಸ್ಮಾರಕಾರ್ಥವಾಗಿ ಕಾವ ಬೆಲ್ಜ್ ಕೊಟದ ಪರವಾಗಿ ಒಂದು ಸಮಾಧಿಕ್ಷೇತ್ರವನ್ನು ನಿರ್ಮಿಸಲಾಗಿದೆ. ಸುಮಾರು ಎರಡು ನಾಸಿರ ಭಾರತೀಯ ಸೈನಿ ಪ್ರಾಣವರ್ಪಣಗೈದ ಸೆಲ್ಲೆಸಿದ ಸೇವೆಯನ್ನು ಇಲ್ಲಿ ಕೃತಜ್ಞತೆಯಿಂದ ನೆನೆಯಲಾಗಿದೆ.

ಪಿ. ಸುವರ್ಣರು ಸ್ವಾಗತ ಮಾತುಗಳನ್ನಾಡಿದರು. ಶ್ರೀ ಟಿ. ಟಿ ಸಾಲಿಯಾನರು ವರದಿವಾಚನ ಮಾಡಿದರು. ಶ್ರೀ ಡಿ. ಎಸ್. ಪಡುಬಿದ್ರಿಯವರು ಸಂದೇಶಗಳನ್ನೋದಿದರು. ಸಮಾಜದ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವೀಯುವ, ಹಿಂದುಳಿದ ಸಮಾಜಕ್ಕೆ ಹಿತ್ತುವ ಸವಲತ್ತುಗಳು ಬರಿಯಾಳ ಸಮಾಜಕ್ಕೂ ಸಿಗುವಂತಾಗಬೇಕೆಂದು ಸರಕಾರವನ್ನು ವತ್ತುಯಿಸುವ ನಿರ್ಣಯಗಳಾದವು. ಹೊಸ ಕಾರ್ಯಕಾರೀ ಸಮಿತಿಗೆ ಶ್ರೀಗಳಾದ ಬಿ. ಟಿ. ಸಾಲಿಯಾನ್, ಅಧ್ಯಕ್ಷ; ಟಿ. ಟಿ. ಸಾಲಿಯಾನ್, ಕಾರ್ಯದರ್ಶಿ; ಯು. ಪಿ. ಸುವರ್ಣ; ಕೋಶಾಧಿಕಾರಿ ಕೂಡಾ 13 ಮಂದಿಯನ್ನು ಆರಿಸಲಾಯಿತು. ಸಭಿಕರ ಪರವಾಗಿ ಶ್ರೀ ಸುಬ್ಬ ಜಂಪ, ಹೆಜ್ಮಾದಿ ಮೊದಲಾದವರು ಸೂತನಾಡಿದರು.

ಪಡುಬಿದ್ರಿ— ಮಂಗಳೂರು ಲೋಕಲ್ ಲ್ಯಾಬ್ರರಿ ಆಫಾರಿಟಿಯ ಆಶ್ರಯದಲ್ಲಿ ಪಡುಬಿದ್ರಿ ಜೋರ್ಡು ಹಾ| ಎ| ರಾಶೆಯಲ್ಲಿ ತಾ. 1ರಲ್ಲಿ ಪುಸ್ತಕ ವಿತರಣಾ ಕೇಂದ್ರವನ್ನು ಉಡುಪಿ ಎಮ್. ಜಿ. ಎಮ್. ಕಾಲೇಜಿನ ಶ್ರೀ ಎ. ಕಮಲಾಕ್ಷ ಕಾಮತರು ಉದ್ಘಾಟಿಸಿದರು. ಕೇಂದ್ರದ ನಿತರಣಾ ವ್ಯವಸ್ಥಾಪಕ ಶ್ರೀ ಎಮ್. ಎನ್. ಪ್ರಭುಗಳು ಸ್ವಾಗತ ಮಾತುಗಳನ್ನಾಡಿದರು. ಶ್ರೀ ಎಫ್. ಜಾಂತಿಯವರೂ ಅಧ್ಯಕ್ಷರೂ ವಾಚನಾಲಯಗಳ ನುತ್ತು ಇತಿಪ ಕೇಂದ್ರಗಳ ಆವಶ್ಯಕತೆಯ ಕುರಿತು ಭಾಷಣಮಿತ್ತರು ಶ್ರೀ ಪಿ. ಶಿವಣ್ಣ ಹೆಗ್ಡೆಯವರು ಧನ್ಯವಾದಗಳನ್ನಿತ್ತರು.

ಕಾರ್ಕಳ—ಸ್ಥಳೀಯ ಆಳುಗಳು ಸಂರಕ್ಷಣೆಯ ಸಹಕಾರ ಸಂಘದ ಆಡಳಿತ ಮಂದಳಿಯ ಸಭೆಯು ತಾ. 1ರಲ್ಲು ಶ್ರೀ ಎನ್. ಎಮ್. ಆಡ್ಯಂತಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಉದ್ದೇಶಗಳನ್ನು ಸಾಧಿಸಲು ಸಂಘಕ್ಕೆ ಹತ್ತು ಸಾವಿರ ರೂಪಾಯಿಗಳ ಪಾಲು ಧನವಳವನ್ನು ಜಿಲ್ಲೆಯಾದ್ಯಂತ ಸಂಗ್ರಹಿಸಲು ಶ್ರೀಗಳಾದ ಡಾ॥ ಕೆ ಬಾಳಪ್ಪ ಸೆಟ್ಟಿ, ಡಿ. ಮೋಹನಂಪೈ, ಟಿ. ರಮೇಶ ಪೈ, ಬಿ. ಗೋಪಾಲ ಶೆಣೈ ಮತ್ತು ಸಿ. ಗೇಣಿ ಪಾಲಕೃಷ್ಣ ಕಾಮತರುಗಳುಸನನಿತಿಯೊಂದು ರಚಿಸಲಾಯಿತು.

ನಿಂಜೂರು—ಇಡೇ ತಾ. 3ರಲ್ಲು ಸಂಜೆ ಶ್ರೀ ಎನ್. ಶ್ರೀನಿವಾಸ ಆಚಾರ್ಯರ ಅಧ್ಯಕ್ಷತೆಯಲ್ಲಿ ಶ್ರೀ ವಿವೇಕಾನಂದ ಜಯಂತ್ಸರ ಶಿಕ್ಷಣ ಶಿಬಿರವನ್ನು ಕಾರ್ಕಳ ದೇಂಜೆನ ರಾಲಾ ಸೀನಿಯರ್ ಡಿಸ್ಟ್ರಿಟ್ ಇನ್ಸ್ಪೆಕ್ಟರ್ ಶ್ರೀ ಯು. ಕೃಷ್ಣರಾಯರು ಉದ್ಘಾಟಿಸಿದರು. ಶ್ರೀಗಳಾದ ರಾಘವೇಂದ್ರ ರಾವ್, ಎನ್. ಸಂಜೀವ ಸೆಟ್ಟಿ ಶ್ರೀನಿವಾಸ ಶರ್ಮ ನುತ್ತು ಎನ್. ಹಿರಿಯಣ್ಣ ಸೆಟ್ಟಿರು ಸಂಭೋಚಿತ ಮಾತುಗಳನ್ನಾಡಿದರು.

ಗುತ್ತಿಗಾಡು— ಮಂಗಳೂರು ಸರಕಾರಿ ಕೆಲಾ ಶಾಲೆಯ ಸಮಾಜಸೇವಾ ದಳದ 15 ದಿವಸಗಳ ಶಿಬಿರದ ಮುಕ್ತಾಯ ಸಮಾರಂಭವು ತಾ. 1ರಂದು ಸಂಜೆ ಶ್ರೀ ಎಮ್. ಗಿರಿಯಪ್ಪ ಗೌಡರ ಅಧ್ಯಕ್ಷತೆಯಲ್ಲಿ ಜರಿಗಿತು. ಪುತ್ತೂರು ವಕೀಲ್ ಶ್ರೀ ಕೆ. ಎನ್. ಮಲ್ಯರು ಮುಖ್ಯ ಅತಿಥಿಗಳಾಗಿದ್ದರು. ಮಂಡಪಾಡಿ ಗ್ರಾಮಸುಧಾರಣಾ ಸಂಘದ ಅಧ್ಯಕ್ಷ ಶ್ರೀ ತಮ್ಮಪ್ಪ ಗೌಡರು ವಿದ್ಯಾರ್ಥಿಗಳ ಸೇವಾ ಕಾರ್ಯವನ್ನು ಮೆಚ್ಚಿ ಬಾಲೇಟಿಗೆ ಬೆಳ್ಳಿಯ ಕಪ್ಪನ್ನು ಪಾರಿತೋಷಕವಿತ್ತರು.

ಅರಂಭದಲ್ಲಿ ಶಿಬಿರಾಧಿಕಾರಿ ಶ್ರೀ ಎಮ್. ಪಿ. ಭಂಡಾರಿಯವರು ಸ್ವಾಗತಭಾಷಣಮಾಡಿದರು. ವಿದ್ಯಾರ್ಥಿ ಮುಖಂಡ ಶ್ರೀ ಎಚ್. ರಾಮಯ್ಯ ನಾಯ್ಕರು ವರದಿಯನ್ನೋದಿದರು. ಸಭಿಕರ ಭಾಷಣ, ಅಧ್ಯಕ್ಷ ಭಾಷಣ ಮೊದಲಾದ ಕಾರ್ಯಕ್ರಮಗಳಾಗಿ ಸಮಾರಂಭ ಕೊನೆಗೊಂಡಿತು.

ಕಿನ್ನಿಗೋಳಿ— ಸ್ಥಳೀಯ ರಾಜಕೆಪುರವಲ್ಲಿನ ಗ್ರಾಮ ಜಾನುವಾರು ಅಭಿವೃದ್ಧಿ ಕೇಂದ್ರದಲ್ಲಿ ಪೆ. ಕ. ಜಿಲ್ಲೆಯಲ್ಲಿ ಎರಡನೆಯ ಪಾದ ಪಶು ಕೃತಕ ಗರ್ಭಧಾನ ಕೇಂದ್ರವನ್ನು ತಾ 3ರಲ್ಲು ಜಿಲ್ಲಾ ಲೆಕ್ಕಿಧರ್ ಶ್ರೀ ಎಚ್. ನರಸಿಂಹನವರು ಉದ್ಘಾಟಿಸಿದರು. ಡಾ| ಎಸ್ ಚಂಪನವರು ಸಭಾಧ್ಯಕ್ಷತೆ ವಹಿಸಿದ್ದರು ಡಾ. ಪಿ. ಸದಾಶಿವ ಭಟ್ಟರು ಸ್ವಾಗತ ಭಾಷಣ ಮಾಡಿದರು. ಶ್ರೀ ವೈ. ಗೋಪಾಲ ಕೃಷ್ಣ ಭಟ್ ಮತ್ತು ಡಾ| ರಾಯಪ್ಪ ಕಾಮತರು ಕಾಲೋಚಿತ ಮಾತುಗಳನ್ನಾಡಿದರು. ಶ್ರೀ ಕೆ. ಭೋಜ ಸೆಟ್ಟಿರು ಧನ್ಯವಾದಗಳನ್ನಿತ್ತರು.

ನಿಟ್ಟೂರು—ಕಳೆದ ತಾ 28ರಲ್ಲು ಶ್ರೀ ಕೆ. ಶಿವರಾಮ ಕಾರಂತರನ್ನು ಗೌರವಿಸುವ ಸತ್ಕಾರ ಕೂಟವು ಶ್ರೀ ಎಸ್. ಸಿ. ಕೃಷ್ಣ ಮೂರ್ತಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಗೋಪಾಲ ಹೆಬ್ಬಾರರು ನುಟ್ಟು ಆತಿಥಿಗಳಿಗೆ ಮಾನಪತ್ರವನ್ನರ್ಪಿಸಿದರು. ಶ್ರೀಗಳಾದ ಕೆ. ಕೆ. ಪುರಾಣಿಕ ಮತ್ತು ಆನಂದರಾಯರು ಕಾಲೋಚಿತ ಮಾತುಗಳನ್ನಾಡಿದರು. ರಾತ್ರಿ ಯಕ್ಷಗಾನ ನಾಟಕಗಳಿದ್ದುವು.

ಸೆರೆಡಾಲ—ನವಚೇವನ ಹ್ಯಾಸ್ಕೂಲಿನ ವರ್ಧಂತ್ಯುತ್ಸವವು ತಾ. 3ರಲ್ಲು ಶ್ರೀಕಡಂಗೋಡ್ಲು ಶಂಕರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ವಿದ್ವಾನ್ ಶ್ರೀ ಕೆ. ಕೆ. ರೈಗಳು ಸ್ವಾಗತ ಭಾಷಣ ಮಾಡಿದರು. ಮುಖ್ಯೋಪಾಧ್ಯಾಯ ಶ್ರೀ ಸಿ. ಸುಬ್ರಾಯ ಭಟ್ಟರು ವರದಿಯನ್ನೋದಿದರು. ಶ್ರೀ ವಿ. ವಿ. ಭಟ್ಟರು ಸ್ವಸ್ತಿ ವಾಚನ ಮಾಡಿದರು. ಶ್ರೀ ಎನ್. ಸೂಥವ ಭಟ್ಟರು ಕಾನ್ಯನಾಚನ ನೂಡಿದರು. ಆಂದು ಶ್ರೀ ಎಸ್. ಕೆ. ಪಂಭಟ್ಟರು ಪೂರ್ವಾಧ್ಯ ಧ್ವಜಾರೋಹಣವಮಾಡಿದರು.

ಬೆಳ್ಳಾರೆ—ಬೆಳ್ಳಾರೆ ಅಯ್ಯನ ಕಟ್ಟೆಯಲ್ಲಿ ಇವೇ ತಾ. 31ರಲ್ಲು ಶ್ರೀ ಇರಸೋಮ ನಾಥೇಶ್ವರ ನಾಟಕ ಮಂದಳಿಯವರು ಶ್ರೀ ಮೈಂದಪ್ಪ ರೈಗಳ ಹಾಡುಗಾರಿಕೆಯಿಂದ, ಕುಬ್ರೆಕೋಡುರಾಮ ಭಟ್ಟರ ಯುದಂಗವಾದನದಿಂದ ,,ರಾವಣ ವಧೆ" ಎಂಬ ಕಥಾಭಾಗವನ್ನು ಅಭಿನಯಿಸಲಿವೆ.

ಕುಂದಾಪುರ ಡಿ.ಮು. ಕೋರ್ಟಿನಲ್ಲಿ
S.C 603/55 S.E.P. 1064/56.

ಕೊರಗಯ್ಯ ಸೆಟ್ಟಿ —ಅರ್ಜಿದಾರ
1 ನಂಜಯ್ಯ ಸೆಟ್ಟಿ, 2 ಚೆಂದನ್ನ ಸೆಟ್ಟಿ, 3 ನರಸಿಂಹ ಸೆಟ್ಟಿ. —ಎದ್ರಿದಾ

ಉಡ್ಡಿ ತಾಲ್ಲು ಅಚಲಾಡಿ ಗ್ರಾಮವಲ್ಲಿರುವ ಕೊಲಗೇರಿ ಸೂರನ್ನು ಸೆಟ್ಟಿರ ಮಗ ಮಂಜಯ್ಯ ಸೆಟ್ಟಿ 1 ಈತನ ಹೆಂಡ್ತಿ ಚಂದಮ್ಮ ಸೆಟ್ತಿ 1 ವಕ್ಕಾಡಿ ಗ್ರಾಮವಲ್ಲಿರುವ ವೆಂಕಮ್ಮ ಸೆಟ್ತಿ ಮಗ ನರಸಿಂಹ ಸೆಟ್ಟಿ 1 ಕೂಡಾ 3 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

1-9ನೇ ಎದ್ರಿಂದವ ಸದ್ರಿ ದಿಕ್ಕಿ ಪ್ರಕಾರ ಬರತಕ್ಕ ಹಣ ಬರವಾಡಿಕೊಳ್ಳುವರೆ ಅರ್ಜಿದಾರನು ಪಾಮ್ಲುವಾಡಿದ ಮೇಲಿನ ಅನುಲ್ತರಿಯು ತಾ. 29_1_1957ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಇಟ್ಟುರುತ್ತದೆ. ಆ ಕಡಿತು ವಿನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿನ್ನ ಮೇಲಿನ ಕೋರ್ಟಿಗೆ ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ಞಾಹೀರುಮಾಡಿಕೊಳ್ಳತಕ್ಕದ್ದು. ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಲಾಗುತ್ತದೆ.

N. S. Parameshwariah.
Advocate for Petr.
Date 5—1—57, Coondapoor.

ಕುಂದಾಪುರ ಡಿ.ಮು. ಕೋರ್ಟಿನಲ್ಲಿ
S C 829/56.

ರಾಮಣ್ಣ ಸೆಟ್ಟಿ ಯಡೂರ ಪಟೇಲ ಸುಬ್ಬಣ್ಣ ಸೆಟ್ಟಿ ಅಳಿಯ ಯಿಡೂರು ಕುಂಜಾಡಿ ಗ್ರಾಮ. —ವಾದಿ

2 ಪ್ರತಿವಾದಿರು 1 ಅಣ್ಣಪ್ಪ ಸೆಟ್ಟಿ ಬಳ್ಳಿ ಬೇರು ಸುಬ್ಬಯ್ಯ ಸೆಟ್ಟಿ ಅಳಿಯ 2 ಮಂಜಯ್ಯ ಸೆಟ್ಟಿ 1ನೇ ಪ್ರತಿವಾದಿ ಅಳಿಯ. ಇಡೂರು ಕುಂಜಾಡಿ ಗ್ರಾಮದವರಿಗೆ ತಿಳಿಯಪಡಿಸುವುದೇನೆಂದ್ರೆ—

1 ವಾದಿಗೆ ಪ್ರತಿವಾದಿರು ಬರಕೊಟ್ಟ ವಾನಾ ದಿನಾಂಕ ನೋಟಿನ ಮೇಲೆ ವಾನಾ ದಾಕ್ಷಾನೂರಿರುತ್ತಾನೆ ಸದ್ರಿ ವಾವೆಯು ತಾ. 11_1_1957ಕ್ಕೆ ತಪ್ಪದೆ ಇಟ್ಟುರುತ್ತಾರೆ. ಸದ್ರಿ ತಾರೀಕಿನ ದಿನ್ನ ಪ್ರತಿವಾದಿರ ಆಕ್ಷೇಪ ವಿದ್ರೆ ವಾಜ್ಞಾಗಿ ತಿಳಿಸತಕ್ಕದ್ದು ಇಲ್ಲವಾದ್ರೆ ತೀರ್ಪಾನಿಕೆಲ್ಪಡುವುದು ಎಂಬ ಸಂಗ್ತಿ ಜ್ಞಾಹೀರುಮಾಡಿಕೊಂಡಿದೆ.

ಕೋರ್ಟ್ ಹುಕುಂ ಪ್ರಕಾರ
ವಾದಿರಳಿದೆ ಎಮ್ಪೋಕೇಟ್

ಪೈ. ತೇಜಪ್ಪ ಸೆಟ್ಟಿ,
ಕುಂದಾಪುರ ಕ್ಲಬ್.
ಕುಂದಾಪುರ, 1-1.57.

ಕನ್ನಡದಲ್ಲಿ ಮೊದಲನೆಯದೆಂದೇ ಹೇಳಬಹುದಾದ
ಅಣು ಶಕ್ತಿಯ ಸಚಿತ್ರ ವಿವೇಚನಾ ಗ್ರಂಥ
ಹಿರೋಶಿಮಾದಿಂದ ಜಿನೇವ
ಬರೆದವರು:
ಶ್ರೀ. ಯು. ರಾಘವೇಂದ್ರ ಆಚಾರ್ಯ, ಎಂ. ಎ., ನವದೆಹಲಿ.
ಮುನ್ನುಡಿಕಾರರು: ಶ್ರೀ. ಶಿವರಾಮ ಕಾರಂತರು.
ಪ್ರತಿಯೊಬ್ಬರೂ ಓದಲೇಬೇಕಾದ ನವೀನ ಪುಸ್ತಕ.
ಉತ್ತಮ ಕಾಗದ. ಬೆಲೆ, ರೂ. ೧—೮—೦.
ನವಯುಗ ಪ್ರೆಸ್, ಉಡುಪಿ.

ನೆರೆ ಹೊರೆ

(೧೨ನೇ ಪುಟದಿಂದ)

ಾಷ್ಟ್ರಗಳು ಗೌರವಿಸುತ್ತಿವೆ. ಆದರೆ ಾಕಿಸ್ತಾನದ ವಿಚಾರದಲ್ಲೇ ಅವುಗಳಿಗೆ ತಿ ಿಲ್ಲವೆಂದು ಕರಾಚಿಯ ಅಜಿಮುದ್ದೀ ರು ತಿಳಿಸಿದ್ದಾರೆ. ಇದರಿಂದ ಭಾರತೀಯ ಾಯಕರ ಜನಪ್ರಿಯತೆ ತಿಳಿದು ಬರು ್ತದೆ. ಆದರೆ ಭಾರತೀಯ ಮುಖಂಡರ ಿಲ್ಲೆಯೂ ಪಾಕ್ ನಾಯಕರಿಗೆ ಅಸಹ ೀಯವಾಗಿದೆ. ಇದರಿಂದಾಗಿ ಭಾರತದ ರುದ್ಧವಾಗಿ ಅಲ್ಲಸಲ್ಲದ ಅಪಪ್ರಚಾರ ಗಳನ್ನು ಮಾಡಲೆತ್ನಿಸಿದ್ದಾರೆ. ಏಗುಪ್ತ ಲ್ಲಿ ನಲ್ಲಿಸಲು ಆಂತಾರಾಷ್ಟ್ರೀಯ ದಳ ್ತ ಬಂದಾಗ, ಪಾಕ್ ಸೈನಿಕರು ಸೇನೆ ುಲ್ಲಿ ಸೇರುವುದನ್ನು ಏಗುಪ್ತವು ನಿರಾಕ ರಿಸಿತು. 'ಇಸ್ಲಾಮಿಕ್ ಏಕ್ಯ'ದ ನೆಪದಿಂದ ಂಜಾರ ಕೈಗೊಂಡ ಕುಕೃತ್ಯದಿಯವರ ಂದರ್ಶನಕ್ಕೆ ಏಗುಪ್ತ್ಯಧ್ಯಕ್ಷ ನಸ್ಸೇರರು ಅನುಮತಿ ಕೊಡಲಿಲ್ಲ. ಅಲ್ಲದೆ ಪಾಕ್ ನಾಯಕರ ವಿರುದ್ಧ ಬಗ್ದಾದಿನಲ್ಲಿ ಪ್ರಚಂ ಡ ಮತಪ್ರದರ್ಶನವಾಯಿತು. ಈ ರೀತಿ ಯು ಮುಖಭಂಗದಿಂದಾಗಿ ಪಾಕಿಸ್ತಾ ಕ್ಕೆ ತೀವ್ರ ಅಸಮಾಧಾನವುಂಟಾಗಿದೆ ಲ್ಲದೆ ವಿದೇಶ ವ್ಯವಹಾರಗಳಲ್ಲಿ ನಸ್ಸೇ ರು ನೆಹರುರವರನ್ನು ತನ್ನ 'ರಾಜಕೀ ಯ ಅಧಿದೇವತೆ'ಯೆಂದು ಪೂಜಿಸುತ್ತಿ ್ತಾರೆಂದೂ, ನಸ್ಸೇರರು ನೆಹರುರವರ ಾಳಕ್ಕೆ ಸರಿಯಾಗಿ ಲಾಗ ಹಾಕುವ ೀಲಗೊಂಬೆಯೆಂದು ಪಾಕಿಸ್ತಾನದ ರೋಷಣೆಯಿದೆ. ಪಾಕಿಸ್ಥಾನದ ಈ ುಖಭಂಗದ ಕಾರ್ಯದಲ್ಲಿ ಭಾರತವು ಪ್ರವೇಶಿಸದಿದ್ದರೂ, ಭಾರತದ 'ಒಳಿ ರುವಿಕೆ'ಯೇ ಏಗುಪ್ತದ ತಿರಸ್ಕಾರಕ್ಕೆ ಾರಣವೆಂದು ಭಾರತದ ಮೇಲೆ ವ್ಯರ್ಥ ಾಪಪ್ರಚಾರ ನಡೆಯಿಸುವ ಪಾಕಿಸ್ತಾ ದ ಯತ್ನವು ಶುದ್ಧ ಹುಚ್ಚುತನವೇ ಾ! ಘೋರಣೆಯಲ್ಲಿ ಯಾವ ಬಗೆಯ ೌಮ್ಯವನ್ನೂ ಹೊಂದದಿರುವ ಮತ್ತು ದಾಕಾಲ ಸಂಶಯಶೀಲವಾಗಿರುವ ರಾ ಷ್ಟ್ರವಾದ ಪಾಕಿಸ್ತಾನದಿಂದ ಸೈನ್ಯಸಹಾ ಯವನ್ನು ಏಗುಪ್ತವು ಯಾಚಿಸದಿದ್ದು ನಕ್ಕೆ ಭಾರತವನ್ನು ದೂರಿದರೇನು ಫಲ!

ತನಗಾದ ಮುಖಭಂಗದಿಂದಾಗಿ, ನೊದಲು ಏಗುಪ್ತಕ್ಕೆ ಸಹಾನುಭೂತಿ ೂಚಿಸಿದ್ದ ಸುಹ್ರವರ್ದಿ ಈಗ ಆ ರಾಷ್ಟ್ರ ದ ವಿರುದ್ಧ ಅಲ್ಲ ಸಲ್ಲದ ಆಸಂಬದ್ಧ ಪ್ರ ಾಪಕ್ಕೆ ಆರಂಭ ಮಾಡಿದ್ದಾರೆ. ಆದರ ಿಂದ ನಸ್ಸೇರರ ಮೇಲ್ಮೆಯು ನೆಹರು ವರಿಗೆ ಅಸಹ್ಯವಾಗಿದೆಯೆನ್ನುವುದಕ್ಕೂ ಾಕಿಸ್ತಾನ ಹಿಂಜರಿಯಲಿಲ್ಲ. ಮುಸ್ಲಿ ಾಗಿ ತನ್ನ ಸಹೋದರ ರಾಷ್ಟ್ರವಾದ ಾರತದ ಉನ್ನತಿಯು ಪಾಕಿಸ್ತಾನಕ್ಕೆ ಿಸಹನೀಯವಾಗಿ, ಪಾಕ್ ನಾಯಕರು ೀಗೆ ನಂಜು ಕಾರತೊಡಗಿದ್ದಾರಲ್ಲದೇ, ೀರೇನೂ ಕಾರಣದಿಂದಲ್ಲ. ಆದರೆ ಭಾರ ತವು ನ್ಯಾಯಕ್ಕಿಲ್ಲದೇ, ಇಂತಹ ನಂಜು ಾರುವಿಕೆಗೆಂದೂ ತಲೆ ಬಾಗ-ನಂತಿಲ್ಲ ೆಂದು ಪಾಕ್ ನಾಯಕರು ಮನಗಂಡಿ ಲಿ! ಭಾರತಕ್ಕೆ ಪಾಕಿಸ್ತಾನದ ಮೇಲೇ ೂ ದ್ವೇಷವಿಲ್ಲ. ಭಾರತದ ಸ್ನೇಹ ಹಸ್ತ ಕ್ಕೆ ಕೈ ಜೀಡಿ ವಿಶ್ವಶಾಂತಿಗೆ ಪಾಕಿಸ್ತಾ ನವು ಪ್ರಯತ್ನಿಸಲಿ! ಇಲ್ಲದಿದ್ದರೆ ಗೃಹ ುಂತ್ರಿ ಪಂತರ ಎಚ್ಚರಿಕೆಯು ನಾವುಗ ಳನ್ನು ಪದೇ ಪದೇ ಕೇಳುತ್ತಿರಬೇಕಾ ೀತು!

— ಶ್ರೀ ಎಂ. ರಘುನಂದನ ರಾವ್,
ತಲ್ಲೂರು.

ಮಂಗಳೂರು

ಮತದಾನ ಕ್ರಮ ಪರಿಚಯ— ತಾ. ೨೮ರಲ್ಲು ಮಧ್ಯಾಹ್ನ ಸ್ಥಳೀಯ ಸರಕಾರಿ ಕಲಾಶಾಲೆಯಲ್ಲಿ ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಪೋಲಿಂಗ್ ಆಫೀಸರ್ ಪೊಲೀಸಾಧಿ ಅಧಿಕಾರಿಗಳಾಗಲಿರುವವರಿಗೂ, ಸಾರ್ವಜನಿಕರಿಗೂ ಮತದಾನ ವಿಧಾನಗಳ ಕುರಿತಾಗಿ ಪರಿಚಯ ಮಾಡಿಕೊಡುವ ಪ್ರದರ್ಶನವು ಜಿಲ್ಲಾ ಆಲೆಕ್ಟರ್ ಶ್ರೀ ಎಚ್. ಸರ ಶಿಂಪನವರ ನಾಯಕತ್ವದಲ್ಲಿ ನಡೆಯಿತು.

ಯುವಕ ಕಾಂಗ್ರೆಸಿನ— ಸಾಸ್ತಾಹಿ ಕ ಕಾರ್ಯಕ್ರಮವು ಕಳದ ಅರಿತ್ಮಣರ ಜಿಲ್ಲಾಬೋರ್ಡ್ ಆಫೀಸ್ಸಿಗೆ ಡಾ. ಕೆ. ಕೆ. ಹೆಗ್ಡೆ ಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಕೆ. ಶೆಟ್ಟಿ, ಎಸ್. ಎಲ್. ಶಿ. ಆದರು ಕಾಂಗ್ರೆಸಿನ ಧ್ಯೇಯ ಧೋರಣೆಗಳನ್ನು ವಿವರಿ ಸಿದರು.

ಕವಿ ರುದ್ರ ಭಟ್ಟ ಜಯಂತಿ— ಸರಕಾರೀ ಕಲಾ ಕಾಲೇಜಿನ ಕನ್ನಡ ಮಹಾ ಸಭೆಯು ನೇತೃತ್ವದಲ್ಲಿ ಕವಿ ರುದ್ರ ಭಟ್ಟ ಜಯಂತಿಯು ತಾ. ೯ರಲ್ಲು ಮೈಸೂರು ಮಹಾ ರಾಜ ಕಾಲೇಜಿನ ಪ್ರೊಫೆಸರ್ ಡಿ. ಎಲ್ ನರಸಿಂಹಾಚಾರ್ಯರ ಅಧ್ಯಕ್ಷತೆಯಲ್ಲಿ ಜರ ಗಿತು. ಉಡುಪಿಯ ಎಮ್. ಜಿ. ಎಮ್. ಕಾಲೇಜ್ ಪ್ರೊಫೆಸರ್ ನಾರಾಯಣ ಅಯ್ಯಂ ಗಾರರು ಮುಖ್ಯ ಭಾಷಣಗಾರರಿದ್ದರು.

ಜಿಲ್ಲಾ ಕಲೆಕ್ಟರರ ಪ್ರೆಕಟಣೆ— ಮುಂಬರುವ ಸಾರ್ವತ್ರಿಕ ಚುನಾವಣೆಯು ಮುಂದಿನ ಪೆಬ್ರವರಿ-ಮಾರ್ಚಿ ತಿಂಗಳಲ್ಲಿ ನಡೆಯಲಿರುವುದು. ಈ ಚುನಾವಣೆಯಲ್ಲಿ ಮತ ದಾನ ಮಾಡಲು ೨೧ ವರ್ಷ ವಯಸ್ಸು ಭರ್ತಿ ಯಾದ ಎಲ್ಲಾ ಹಿಂದೂ ಸ್ತ್ರೀಯರ ಪ್ರತಿಜ್ಞೆಗೆ ಹಕ್ಕು ಇರುವುದು. ಆ ಹಕ್ಕನ್ನು ಉಪಯೋಗಿಸಲು ಪ್ರತಿಯೊಬ್ಬ ಪ್ರಜೆಯು ತನ್ನ ಹೆಸರು ಓಟರರ ಸಟ್ಟಿಯಲ್ಲಿ ಸೇರಿಸಬೇಕೆ ಎಂದು ನೋಡುವುದು ಅವಶ್ಯ. ಯಾರೊಬ್ಬರ ಹೆಸರು ಹಾಗೆ ಓಟರರ ಪಟ್ಟಿಯಲ್ಲಿ ಸೇರದೆ ಇದ್ದರೆ ಕ್ರಮಬದ್ಧ ಕಾರ್ಯವನ್ನು ನಿರ್ದಿಷ್ಟ ಫಾರಿಂನಲ್ಲಿ ದ್ವಿಪ್ರತಿಯಾಗಿ ತಯಾರಿಸಿ ಅಯಾ ಯ ಕ್ಷೇತ್ರದ ಇಲೆಕ್ಟೋರಲ್ ರಿಜಿಸ್ಟೆರರ್ ಆಫೀಸರ (ತಪಶೀಲ್ದಾರ್)ರಿಗೆ ಕಳುಹಿಸಿ ಕೊಡಬೇಕು. ಈ ಅರ್ಜಿಗೆ ಸಂಬಂಧಪಟ್ಟ ಫೀಸು ರೂಪಾಯಿ ಒಂದನ್ನು ನೋನ್ ಜುಡಿ ಶಿಯಲ್ ಠಸೆ ಕಾಗದದ ರೂಪದಲ್ಲಿ ಪಾವತಿ ಮಾಡಬೇಕು. ಸದ್ರಿ ಅರ್ಜಿಗಳನ್ನು ಇಲೆಕ್ಟೋ ರಲ್ ಆಫೀಸರರು (ತಪಶೀಲ್ದಾರರು) ತನ್ನಿ ನಡೆಸಿ ಅರ್ಜಿದಾರರ ಹೆಸರನ್ನು ಓಟರರ ಪಟ್ಟಿ ಯಲ್ಲಿ ಸೇರಿಸುವರು. ಹೆಚ್ಚಿನ ಮಾಹಿತಿಯನ್ನು ಆಯಾಯ ತಹಶೀಲ್ದಾರರಿಂದ ಪಡೆಯಬ ಹುದು.

ಶಾಲಾವರ್ಧಂತಿ— ಉರ್ವದ ಕೆನರಾ ಹೈಸ್ಕೂಲಿನ ವಾರ್ಷಿಕೋತ್ಸವವು ತಾ. 6 ರಲ್ಲು ಬೆಲ್ಲಾ ನ್ಯಾಯಾಧೀಶರಾದ ಶ್ರೀ ಎಸ್. ರಾಘಾಕೃಷ್ಣ ಕಿಣಿಯರ ಅಧ್ಯಕ್ಷತೆಯಲ್ಲಿ ಜರ ಗಿತು. ಡಾ| ಎಮ್. ಕೇಶವ ಪೈಗಳು ಸ್ವಾಗತ ಮಾತುಗಳನ್ನಾಡಿದರು. ಶಾಲಾ ಹಳೆ ವಿ ದ್ಯಾರ್ಥಿನಿ ಕುಮಾರಿ ಎಮ್. ಜಯಂತಿ ಯವರು ಸ್ವಸ್ತಿವಾಚನ ಮಾಡಿದರು. ಶಾಲಾ ಹೆಡ್ಮಾಸ್ಟರ್ ಶ್ರೀ ಯು. ಕೇಶವ ರಾಯರು ಶಾಲಾ ವರದಿಯನ್ನೊಪ್ಪಿಸಿದರು. ಶ್ರೀಮತಿ ರಾಧಾಕೃಷ್ಣ ಕಿಣಿಯರು ಬಹುಮಾನ ವಿತರಣೆ ಮಾಡಿದರು. ಶಾಲಾ ಮೆನೇಜರ್ ಶ್ರೀ ಎಸ್. ಅಪ್ಪರಾಯರು ಧನ್ಯವಾದಗಳನ್ನಿತ್ತರು. ಶ್ರೀ ಬಿ. ಸಿ. ಆಳ್ವರು ಸ್ವರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ವಿತರಣೆ ಮಾಡಿ ಕಲಾ ಮತ್ತು ಕೈಕಸಬುಗಳ ಪ್ರದರ್ಶನವನ್ನು ಉದ್ಘಾಟಿಸಿ ದರು. ತಾ. ೧೧ರಂದು ಶಾಲಾ ವರ್ಧಂತಿಯ ಅಂಗವಾಗಿ ಸಂಜೆ ವಿವಿಧ ವಿನೋದಾವಳಿ ಗಳಾದುವು

ದ ಕ. ಜಿಲ್ಲಾ ಸೆಕೆಂಡರಿ ಶಾಲಾ ಮುಖ್ಯೋಪಾಧ್ಯಾಯರ ಸಂಘದ ಸ ಭೆಯು— ಕಳದ ತಾ. ೩ರಲ್ಲು ಸಂಘದ ಅಧ್ಯಕ್ಷ ಶ್ರೀ ಎಚ್ ಪಾಂಡುರಂಗರಾಯರ ಅಧ್ಯಕ್ಷತೆಯಲ್ಲಿ ಜರಗಿತು. ರಾಷ್ಟ್ರಪ್ರಶಸ್ತಿ ಪ್ರಾಪ್ತ ಶಿಕ್ಷಣವ ಕುರಿತಾಗಿ ಈಗಾಗಲೇ ಪ್ರಾಂತೀಯ ಮಾಗೂ ಕೇಂದ್ರ ಸರಕಾರಗಳು ಕೆಲವೊಂದು ಶಿಕ್ಷಣ ಕ್ರಮಗಳನ್ನು ರಚಿಸಿವೆ. ಈ ವಿಚಾರದಲ್ಲಿ ಜೊಕ ರಾಜ್ಯ ರಚನೆಯಿಂ ದೀಚೆಗಿರುವ ಎಲ್ಲಾ ಸಮಸ್ಯೆಗಳನ್ನು ಪರಿ ಶೀಲಿಸಿ, ಸುಂದರ ಸರಿಯಾಗಿ ಪರಿಶೀಲನೆ ನಡೆ ಸಿ ಒಂದು ಶಿಕ್ಷಣ ಕ್ರಮವನ್ನು ರೂಪಿಸುವ ವರೆಗೆ ಈಗ ರೂಪಿಸಿರುವ ಶಿಕ್ಷಣ ಕ್ರಮ ವನ್ನು ತಡೆಹಿಡಿಯಬೇಕು. ಈಗಿರುವ ಶಿಕ್ಷಣ ಪದ್ಧತಿ, ಆಡಳಿತ ವ್ಯವಸ್ಥೆ, ಕ್ರಮ ನಿಯಮ ಗಳು, ಪಾಠ ಪಟ್ಟಿ, ಶಾಲಾಫೀಸುಗಳಲ್ಲಿನ ವಿದಾ ಯತೆಗಳು ಮತ್ತು ಸರಕಾರವು ಕೊಡುವ ಸಹಾಯಧನ ಇತ್ಯಾದಿಗಳನ್ನು ಪರಿಶೀಲನೆ ಗೈದು ಒಂದು ಸರಿಯಾದ ಹೊಸ ವ್ಯವಸ್ಥೆ ಕೈಗೊಳ್ಳುವತನಕ ಯಾವ ಬದಲಾವಣೆ ಯನ್ನೂ ಮಾಡಬಾರದೆಂಬ ಆಗ್ರಹಕ್ಕೆ ನಿರ್ಣ ಯ ಪಾಸಾಯಿತು.

ಕಮ್ಯೂನಿಸ್ಟ್ ಪಾರ್ಟಿಯ ದ. ಕ. ಜಿಲ್ಲಾ ಸಮಿತಿ ಸಭೆಯು ಜರಗಿ, ಮುಂ ಬರುವ ಚುನಾವಣೆಯಲ್ಲಿ ಕಮ್ಯೂನಿಸ್ಟ್ ಪಾ ರ್ಟಿಯು ಸ್ಪರ್ಧಿಸುವ ವಿಚಾರವಾಗಿ ಚರ್ಚೆ ನಡೆ ಸಿತು. ದಕ್ಷಿಣದ ಬೋಳಕಟ್ಟಾ ಸ್ಥಾನಕ್ಕೆ ಶ್ರೀ ಎ. ಕೃಷ್ಣ ಶೆಟ್ಟಿ, ಮಂಗಳೂರು ೨ನೆ (ನಗರ) ಎಸೆಂಬ್ಲಿ ಕ್ಷೇತ್ರಕ್ಕೆ ಶ್ರೀ ಎ ರಾಮಕಾಮತ್ ಪೈ, ಮಂಗಳೂರು ೨ನೆ (ಹೊರವಲಯದ ಮತ್ತು ಕೋಟೆಕಾರು) ಕ್ಷೇತ್ರಕ್ಕೆ ಶ್ರೀ ಬಿ. ಸಿ. ಕಕ್ಕಿಲ್ಲಾಯ, ಪಾಣೆಮಂಗಳೂರು-ಸುರುಮರ ಕ್ಷೇತ್ರಕ್ಕೆ ಶ್ರೀ ಎಸ್. ಎಚ್. ಕೃಷ್ಣಪ್ಪ- ಇವರನ್ನು ಪಾರ್ಟಿಯ ಉಮೇದ್ವಾರರಾಗಿ ಶಿಫಾರಸು ಮಾಡಲಾಗಿದೆ.

ದ. ಕ. ಜಿಲ್ಲೆಯ ಚುನಾವಣಾ ಕ್ಷೇತ್ರಗಳು — ಮುಂಬರುವ ಚುನಾವಣೆ ಯಲ್ಲಿ ದ. ಕ. ಜಿಲ್ಲೆಯಿಂದ ಲೋಕ ಸಭೆಗೆ ಎರಡು ಮತ್ತು ಮೈಸೂರು ಎಸೆಂಬ್ಲಿಗೆ ಹದಿ ನಾಲ್ಕು ಸ್ಥಾನಗಳಿವೆ. ಅವುಗಳ ವಿವರ ಹೀಗಿದೆ:-

ಲೋಕಸಭೆ 1 ಮಂಗಳೂರು: ಪು ತ್ತೂರು ಮತ್ತು ಬೆಳ್ತಂಗಡಿ ತಾಲೂಕು, ಸುರ ತ್ಕಲ್ ಮತ್ತು ಮೂಲ್ಕಿ ಫಿರ್ಕಗಳ ಹೊರತು ಉಳಿದ ಮಂಗಳೂರು ತಾಲೂಕು ಮತ್ತು ಕೊಡಗಿನ ವೀರಜಪೇಟೆ ತಾಲೂಕಿನ ಆಮ್ಟಿಹಾ ನಾದ ಮತ್ತು ನೋಮವಾರಪೇಟೆ ತಾಲೂಕಿನ ಪೊನ್ನಂಪೇಟೆ ಹೋಬಳಿಗಳನ್ನು ಹೊರತು ಉಳಿದ ಕೊಡಗು ಜಿಲ್ಲೆ. 2 ಉಡುಪಿ: ಉಡುಪಿ, ಕಾರ್ಕಳ, ಕುಂದಾಪುರ ತಾಲೂಕು ಗಳು ಮತ್ತು ಮೂಲ್ಕಿ ಹಾಗೂ ಸುರತ್ಕಲ್ ಫಿರ್ಕಗಳು;

ಮೈಸೂರು ಎಸೆಂಬ್ಲಿಗೆ. 1 ಪು ತ್ತೂರು (೨ ಸ್ಥಾನ) ಇಡೀ ಪುತ್ತೂರು ತಾ ಲೂಕು. 2 ಬೆಳ್ತಂಗಡಿ ಪಾಣೆಮಂಗಳೂರು ಫಿರ್ಕದ ಹೊರತು ಉಳಿದ ಬೆಳ್ತಂಗಡಿ ತಾಲೂ ಕು. 3 ಪಾಣೆ ಮಂಗಳೂರು ಪಾಣೆಮಂ ಗಳೂರು ಫಿರ್ಕ ಮತ್ತು ಮಂಗಳೂರು ತಾ ಲೂಕಿನ ಗುರುಪುರ ಫಿರ್ಕ. 4 ಮಂಗಳೂ ರು (1) ಮಂಗಳೂರು ನಗರದ ವಾರ್ಡ್ 1 ರಿಂದ 20ರ ವರೆಗೆ. 5 ಮಂಗಳೂರು (2) 1ರಿಂದ 30ನೆ ವಾರ್ಡುಗಳ ಹೊರತು ಉಳಿದ ಮಂಗಳೂರು ಫಿರ್ಕ. 6 ಸುರತ್ಕಲ್ ಮೂಲ್ಕಿ ಫಿರ್ಕದ ಅತಿಕಾರಿಬೆಟ್ಟು, ಕಣಿಯೆ ಕವರ್ಕಾಡ್, ಕೊಲ್ಲೂರು, ಉಳಿಪಾಡಿ, ಮುಲ್ಕಿ ಪಟ್ಟ, ಮುಚ್ಚೂರು, ಇನ್ನ ಮತ್ತು ಬಳ್ಕುಂಜೆ ಗ್ರಾಮಗಳ ಹೊರತು ಉಳಿದ ಮೂಲ್ಕಿ ಮತ್ತು ಸುರತ್ಕಲ್ ಫಿರ್ಕ. 7 ಕಾಪು ಮೂಲ್ಕಿ ಫಿ ರ್ಕದ ಮೇಲ್ಕಾಣಿಸಿದ ಗ್ರಾಮಗಳು ಮತ್ತು ಕಾಪು ಫಿರ್ಕ. 8 ಉಡುಪಿ ಉಡುಪಿ ತಾ ಲೂಕಿನ ಉಡುಪಿ ಫಿರ್ಕ. 9 ಬ್ರಹ್ಮಾವರ ಮುನ್ನೂರು, ಗಿಳಿಯಾರ, ಬನ್ನಾಡಿ, ಕೋಟ ತಟ್ಟು, ಕಾವಡಿ, ವಡ್ಡರ್ಸೆ, ಆಜೆಕಾಡಿ, ವಿರಿ ಯಾರ, ಯಡಾಡಿ, ಕುಂಭೂರು, ಹೆಗ್ಗುಂಜೆ, ಬಿಲ್ಲಾಡಿ, ಕಕ್ಕುಂಜೆ, ಪಾಲಾಡಿ, ವಂಡಾರು, ಆವರ್ಸೆ, ಹಿಲಿಯಾಣ ಮತ್ತು ಬೀರೂರು-ಈ ಗ್ರಾಮಗಳ ಹೊರತು ಉಳಿದ ಕೋಟ ಫಿರ್ಕ. ಮತ್ತು ಬ್ರಹ್ಮಾವರ ಫಿರ್ಕ. 10 ಕುಂದಾ ಪುರ ಕೋಟ ಫಿರ್ಕಕ ಮೇಲಿನ ಗ್ರಾಮ ಗಳು ಮತ್ತಾ ಕುಂದಾಪುರ ಫಿರ್ಕ. 11 ಬೈಂ ದೂರು ವಂಡ್ಸೆ ಮತ್ತು ಬೈಂದೂರು ಫಿರ್ಕ. 12 ಕಾರ್ಕಳ (೨ ಸ್ಥಾನ) ಇಡೀ ಕಾರ್ಕ ಳ ತಾಲೂಕು.

ಅಮೇರಿಕದ ಪ್ರಸಿದ್ಧ ವಿಜ್ಞಾನಿ, ಹಾರ್ವರ್ಡ್ ವಿಶ್ವವಿದ್ಯಾಲಯದ ಕುಲಪತಿ
ಡಾ. ಜೇಮ್ಸ್ ಬಿ. ಕೊನೇಂಟರ



ಆಧುನಿಕ ವಿಜ್ಞಾನವು ಮನುಷ್ಯ ಜೀವನದ ಮೇಲೆ ಉಂಟುಮಾಡಿರುವ ಕ್ರಾಂತಿಕಾರಕ ಪರಿಣಾಮಗಳನ್ನು ಪರಿಶೀಲಿಸಿ ವಾಣಿಜ್ಯ, ಸರಕಾರ, ನೀತಿ, ಧರ್ಮ, ಮುಂತಾದ ಬದುಕಿನ ವಿವಿಧ ರಂಗಗಳಲ್ಲಿ ವಿಜ್ಞಾನವು ಬೀರಿರುವ ಪ್ರಭಾವವನ್ನು ಡಾ. ಕೊನೇಂಟ್ ಇಲ್ಲಿ ಕಮ್ಮ ಸರಳ ಮತ್ತು ಓಜಸ್ವಿ ಶೈಲಿಯಲ್ಲಿ ಬಣ್ಣಿಸಿವ್ವಾರೆ. ಇಂದಿನ ವಿಜ್ಞಾನಿಯು ಕೇವಲ ಒಬ್ಬ ಕಲ್ಪನಾವಿಹಾರಿ ತಾತ್ವಿಕನಲ್ಲ; ವಿಶ್ವದ ಗೌಪ್ಯವನ್ನು ತೆರೆದು ತೋರಿಸಬಲ್ಲ ಮೆಂತ್ರವಾದಿಯೂ ಅಲ್ಲ. ಆತನು ಇತರ ವ್ಯಾವಹಾರಿಕ ಕ್ಷೇತ್ರಗಳಲ್ಲಿ ಮಡಿಯುವ ಜನರಷ್ಟೇ ಸ್ವಾಭಾವಿಕನಾಗಿಯೂ ಕಷ್ಟಸಹಿಷ್ಣುವಾಗಿಯೂ ಮಡಿಯಬೇಕಾದ ವ್ಯವಹಾರಜ್ಞ. ತತ್ತ್ವಶಾಸ್ತ್ರ ಮತ್ತು ಮತವಿಚಾರಗಳಲ್ಲಿರುವ ಶಂಕೆ, ಮತ್ತು ನ್ಯೂನತೆ ಇಂದಿನ ವಿಜ್ಞಾನವನ್ನೂ ಆವರಿಸಿವೆ. ಇಂದಿನ ಪ್ರಪಂಚದಲ್ಲಿ ವಿಜ್ಞಾನದ ಪಾತ್ರವೇನೆಂದು ವಿಮರ್ಶಿಸುವ ಗ್ರಂಥಗಳಲ್ಲಿ ಡಾ. ಕೊನೇಂಟರ ಈ ಗ್ರಂಥವಷ್ಟು ವಿಚಾರ ಪ್ರಚೋದಕವಾದುದು ಬೇರೊಂದಿಲ್ಲ.

ಇದನ್ನು ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜಿನಲ್ಲಿ ಭೌತ ಶಾಸ್ತ್ರದ ಪ್ರಾಧ್ಯಾಪಕರಾದ ಉಡುಪಿ ಲಕ್ಷ್ಮೀನಾರಾಯಣಾಚಾರ್ಯ ಎಂ. ಎ. ಎಲ್. ಟಿ. ಅವರು ಅನುವಾದಿಸಿದ್ದಾರೆ. ಅವರು ಕನ್ನಡದಲ್ಲಿ ಹಲವು ವೈಜ್ಞಾನಿಕ ವಿಷಯದ ಲೇಖನಗಳನ್ನು ಬರೆದಿದ್ದಾರೆ. ಅವರು ಅನುವಾದಿಸಿದ (ಶ್ರೀ ಕು. ಶಿ. ಹರಿದಾಸ ಭಟ್ಟರೊಡನೆ) ಡಾ. ಕೆರೆಲರ 'ಆತ್ಮಕತ್ತ ಮಾನವ' (Man, the Unknown) ಕನ್ನಡದಲ್ಲಿ ವಿಶೇಷ ಮನ್ನಣೆಯನ್ನು ಪಡೆದಿದೆ.

ಪ್ರಸ್ತುತ ಅನುವಾದದಲ್ಲಿ ಶ್ರೀಯುತರ ಗಂಭೀರ ಆದರೂ ಸರಳ ಮತ್ತು ವೈಜ್ಞಾನಿಕ ಶೈಲಿಯ ಪರಿಚಯವನ್ನು ಮಾಡಿಕೊಳ್ಳಬಹುದು.

ಉತ್ತಮ ಮುಖಪುಟದಲ್ಲಿ ಕಚ್ಚಾಗಿರುವ ಈ ಪುಸ್ತಕದ ಬೆಲೆ ಬರೇ ರೂ.1-8-0 ಮಾತ್ರ

ಪ್ರತಿಗಳಿಗೆ ಬರೆಯಿರಿ:—
ನವಯುಗ ಎಂಟರ್‌ಪ್ರೈಸಸ್ ಲಿಮಿಟೆಡ್, ಉಡುಪಿ.

ಸತ್ವಪೂರ್ಣ ಸಾಹಿತ್ಯ

(೩ನೇ ಪುಟದಿಂದ)

ಕಲಾತ್ಮಕ ರೂಪದ ಆಧಾರವಾಗಿದೆ. ಮನುಷ್ಯನು ವಿಜ್ಞಾನದಲ್ಲಿ ತಥ್ಯ ಪರಿಶೋಧನೆಯ ಬಗ್ಗೆ ಪ್ರಮಾಣದ ಆಧಾರವನ್ನು ಅವಲಂಬಿಸುತ್ತಾನೆ. ಹಾಗೂ ಪ್ರತ್ಯಕ್ಷದೊಡನೆಯೇ ಸಂಬಂಧವನ್ನು ಇಟ್ಟುಕೊಳ್ಳುತ್ತಾನೆ. ಅವನಿಗೆ ಸತ್ಯ ಪದಾರ್ಥ ಜ್ಞಾನದಿಂದಲೇ ಪ್ರಯೋಜನವಿದೆ. ಬುದ್ಧಿಯ ಮೂಲಕ ಆಗ್ರಾಹ್ಯ ಕಲ್ಪನೆಗೆ ಅಲ್ಲಿ ಸ್ಥಾನವಿಲ್ಲ. ಮತ್ತು ಪ್ರತ್ಯಕ್ಷೀಕರಣವಲ್ಲದ ವಿಚಾರಕ್ಕೂ ಬೆಲೆ ಇಲ್ಲ. ಇನ್ನೆ ವಿಷಯವಾಗಿ ಕಲಾತ್ಮಕ ಅಭಿವ್ಯಕ್ತಿಯಲ್ಲಿ ಮಾನವನು ತನ್ನ ವೈಯಕ್ತಿಕ ಅಸ್ತಿತ್ವವನ್ನು ಅಕ್ಷಣ್ಣವಾಗಿರಿಸುತ್ತಾನೆ. ಯಾವುದರ ಮೂಲಕ ಮಾನವನ್ನು ಬಾಹ್ಯ ಜಗತ್ತು ತನ್ನ ಅಂತರದಲ್ಲಿ ವ್ಯಾಸ್ತವಾದ ರಹಸ್ಯವನ್ನು ನಿಜೀರೂಪದಿಂದ ತಿಳಿಯುವುದರ ಹಾಗೂ ತಿಳಿಸುವುದರ ಪ್ರಯತ್ನ ಮಾಡುತ್ತಾನೋ, ಆ ಪ್ರಕಾರವಾದ ಕಲಾತ್ಮಕ ಚೇಷ್ಟೆಯ ಹೆಸರೇ ಸಾಹಿತ್ಯವೆನಿಸುವುದು. ವಿಜ್ಞಾನವು ಯಥಾರ್ಥ ರೂಪೀ ಹಾಗೂ ಭೌತಿಕವಾದಿಯಾಗಿದೆ. ಕಲೆಯು ಸಾಹಿತ್ಯದ ಒಂದು ಅಂಗವಾಗಿದೆ. ಇಲ್ಲದೆ ಆದರ್ಶವಾದೀ ಹಾಗೂ ಕಲ್ಪನಾತ್ಮಕವಾಗಿದೆ.

ಕಲೆಯ ಆಧಾರ ತಿಳಿಯು ವಸ್ತುವಾದಿಯಾಗಿರದೆ ಕಲ್ಪನಾತ್ಮಕ ಹಾಗೂ ಆಧ್ಯಾತ್ಮಿಕವಾಗಿರುತ್ತದೆ. ಕಲೆಯಲ್ಲಿ ಮನುಷ್ಯನು ಯಾವ ಸತ್ಯದ ದರ್ಶನವನ್ನು ಮಾಡುತ್ತಾನೋ, ಅದು ಇಂದ್ರಿಯದ ಮೂಲಕ ಪ್ರತ್ಯಕ್ಷವಾಗಿರದೆ ಅಂತರಂಗ ಜೀವನವನ್ನು ಪುಷ್ಟಿಗೊಳಿಸುವ ಹಾಗೂ ಮನಸ್ಸಿಗೆ ಶಾಂತಿ ಪುತ್ತು ಆಹ್ಲಾದವನ್ನುಂಟು ಮಾಡುವಂಥಾದ್ದಾಗಿರುತ್ತದೆ. ವೈಜ್ಞಾನಿಕ ಕೋಧನೆಯು ಪ್ರಕೃತಿಯ ಮೂಲ ರೂಪವನ್ನು ಯಥಾರ್ಥ ಭಾವದಿಂದ ಪರಿಗ್ರಹಿಸಲಿಚ್ಛೆಯುತ್ತದೆ. ಕಲಾತ್ಮಕ ಪ್ರವೃತ್ತಿಯ ರಹಸ್ಯವನ್ನು ಹೃದಯಂಗವ ಗೊಳಿಸುವುದಕ್ಕಾಗಿ ಮನಸ್ಸಂತೋಷನವನ್ನು ಆಧಾರವಾಗಿರಿಸುತ್ತದೆ. ಪ್ರಥಮ: ಪ್ರಯಾಸದಲ್ಲಿ ಬುದ್ಧಿಯೇ ಅವಲಂಬಿತವಾಗಿರುತ್ತವೆ. ಮತ್ತು ವಸ್ತು ಸ್ಥಿತಿಯೇ ಮಾರ್ಗ ನಿರ್ಧಾರಣಗೊಳಿಸುತ್ತದೆ. ಹಾಗೂ ಪ್ರತ್ಯೇಕ ಪಥಿಕನಿಗೆ ಒಂದೇ ಮಾರ್ಗ ಹಾಗೂ ಸಮಾನ ಸಾಧನವಾಗಿದೆ. ಇದಕ್ಕೆ ವಿಪರೀತವಾಗಿ ಕಲೆಯ ಸೇವೆಯು ಕಲ್ಪನೆಯ ಮೂಲಕವೇ ಆಗುತ್ತದೆ. ಹಾಗೂ ಸಾಧ್ಯದತ್ತ ಚಲಿಸುವುದಕ್ಕೆ ಕಲಾಕಾರನಿಗೆ ತನ್ನದೇ ಭಾವನೆ ಮತ್ತು ಅನುಭೂತಿಯ ಆಶ್ರಯ ಹೊಂದಿ ಜೀವಾಗುತ್ತದೆ. ಅನಂತ ಪರಮುಖಾಪೇಕ್ಷೆ ಯಾಗಬೇಕಾಗಿಲ್ಲ. ವಿಜ್ಞಾನದಲ್ಲಿ ಅನುಸಂಧಾನವು ಸಹಯೋಗ ಹಾಗೂ ಪಾರಸ್ಪರಿಕ ಆಧಾನ-ಪ್ರದಾನದ ಸರ್ವ ಸಮ್ಮತ ಆಧಾರದ ಮೇಲೆಯೂ ಆಗಬಲ್ಲುದು. ಎಲ್ಲಿ ಅನುಸಂಧಾನವು ಕಳೆದ ಸಂತರಪೇ ಅಗ್ರಿಮ ಶೋಧನೆಯಾಗುವುದು. ವೈಜ್ಞಾನಿಕನ ದೃಷ್ಟಿಯು ಅಂತರ್ಮುಖಿಯಾಗಿಲ್ಲಸೆ ಬಹಿರ್ಮುಖಿಯಾಗಿರುತ್ತದೆ. ಇದರ ಫಲವೂ ಕೂಡಾ ಪ್ರಪಂಚದಲ್ಲಿ ಸುಲಭ ಹಾಗೂ ಪ್ರತ್ಯಕ್ಷವಾಗಿದೆ. ಅದರ ಯಥಾರ್ಥತೆ ಹಾಗೂ ಉಪಯೋಗಿತನೇ ವಿಜ್ಞಾನದ ಒರೆಗಲ್ಲಾಗಿದೆ. ವಿಜ್ಞಾನವು ಯಾವುದನ್ನು ಕೊಡುತ್ತದೋ, ಅದು ಅದರ ವ್ಯಾವಹಾರಿಕ ಪೌಲ್ಯವಾಗಿದೆ. ವಿಜ್ಞಾನ ಪದತ್ತ ವಿದ್ಯೆಯ ಉಪಯೋಗವೇ ಅದರ ವಿಶೇಷತೆಯಾಗಿದೆ. ವಿಜ್ಞಾನದ ಚರಮ ಲಕ್ಷ್ಯ ಹೀಗಿದ್ದರೂ, ಅದರ ಮೂಲ ಜೀತು ಸ್ವಭಾವ ಜಿಜ್ಞಾಸೆ ಪ್ರಾಪ್ತಿಯಾಗಿದೆ. ಇಲ್ಲಿ ಕಲೆಯೊಂದಿಗೆ ಅದರ ವಿಭೇದವು ಉತ್ಪನ್ನವಾಗುತ್ತದೆ. ಸಾಧಾರಣ ಅರ್ಥದಲ್ಲಿ ಅದರ ಸುಹೃದ್ಭಾವ ಕಾರಣ ಕಲೆಯ ಉಪಯೋಗವಲ್ಲ. ಸೌಂದರ್ಯವನ್ನು ಪ್ರತ್ಯಕ್ಷೀಕರಣಗೊಳಿಸುವುದು ಹಾಗೂ ಮನಸ್ಸಿಗೆ ಶಾಂತಿ ಕೊಡುವುದೇ ಕಲೆಯ ಅಭಿಪ್ರಾಯವಾಗಿದೆ. ಈ ಅರ್ಥದಲ್ಲಿ ಕಲೆಯು ಉಪಯೋಗೀ ಸಾಮಗ್ರಿಯು ಸಹಜವಾಗಿದೆ. ಆದರೆ ಈ ರೀತಿಯ ಉಪಯೋಗವೇ ಕಲೆಯ ಲಕ್ಷ್ಯವಲ್ಲ. ಅದರ ಲಕ್ಷ್ಯವು "ಸತ್ಯಂ" ಹಾಗೂ ಆಧಾರವು 'ಸುಂದರಂ" ಮತ್ತದರ ಫಲವು "ಶಿವಂ" ಇದು ಕಲಾ ಸೃಷ್ಟಿಯ ಭೇದವನ್ನು ತಿಳಿಯುವುದರ ಒಂದು ವಿಶಿಷ್ಟ ಸಾಧನೆ

ಮನುಷ್ಯನ ಜ್ಞಾನೇತರತೆಯು ಗ್ರಂಥದಲ್ಲಿ ಸಿಹಿತವಾಗಿದೆ. ವಿಜ್ಞಾನದಂತೂ ಮನುಷ್ಯನು ನೋಡಿದರೆ ಯಾ ಕೇಳಿದರೆ ಅಥವಾ ತಿಳಿದರೆ ಅದಕ್ಕವನು ಶಬ್ದಾತ್ಮಕ ರೂಪವನ್ನು ಕೊಡುತ್ತಾನಲ್ಲದೆ ತನ್ನಲ್ಲಿಯೇ ಸೀಮಿತವಾಗಿ ಇಟ್ಟಿರುವುದಿಲ್ಲ. ಅವನ್ನು ತನ್ನ ತಿಳಿವನ್ನು ಭಾಷೆಯ ಮೂಲಕ ಪ್ರಕಟಿಸಿ ರಚನಾತ್ಮಕ ಸೃಷ್ಟಿಯ ನಿರ್ಮಾಣ ಮಾಡುತ್ತಾನೆ. ಗ್ರಂಥದ ಮೂಲಕವೇ ಮಾನವರ ಮಧ್ಯೆ ಪರಸ್ಪರ ವಿಚಾರದ ಆದಾನ-ಪ್ರದಾನವಿರುತ್ತದೆ. ಗ್ರಂಥಕಾರನು ತನ್ನ ಜ್ಞಾನವನ್ನು ಲಿಪಿಬದ್ಧವಾಗಿರಿಸಿ ಸಾಮಾಜಿಕ ಪ್ರವೃತ್ತಿಯನ್ನು ಪೂರ್ತಿಗೊಳಿಸುತ್ತಾನೆ. ಗ್ರಂಥದ ಮೂಲಕವೇ ಜ್ಞಾನೇತರತೆಯು ಸಮೃದ್ಧಿಯಾಗುತ್ತದೆ. ಆದರೆ ಜ್ಞಾನವು ಅನಂತ ಹಾಗೂ ಅಸೀಮವಾಗಿದೆ. ವಿಷಯ ಭೇದದಿಂದ ಗ್ರಂಥದಲ್ಲಿಯೂ ಕೂಡಾ ವಿಭಿನ್ನತೆಯುಂಟಾಗುತ್ತದೆ. ಪ್ರತ್ಯೇಕ ವಿಷಯಕ್ಕೂ ವಿಶಿಷ್ಟ ಕ್ಷೇತ್ರವಿದೆ. ಹಾಗೂ ತತ್ಸಂಬಂಧೀ ಪುಸ್ತಕಗಳ ವಿಶೇಷ ವರ್ಗವಿದೆ. ಈ ಪ್ರಕಾರವಾಗಿ ಭಿನ್ನ—ಭಿನ್ನ ವಿಷಯದ ಪುಸ್ತಕಗಳ ಭಿನ್ನ—ಭಿನ್ನ ವರ್ಗದಲ್ಲಿ ವಿಭಾಜಿತಗೊಳಿಸಬಲ್ಲೆವು. ಸಾಹಿತ್ಯದ ರೂಪವು ಜ್ಞಾನಾತ್ಮಕವಾಗಿದ್ದರೂ ಕೂಡಾ ಎಲ್ಲ ವಿಷಯಗಳ ಪುಸ್ತಕಗಳನ್ನೂ ಸಮಾವೇಶಗೊಳಿಸುವುದು ಅನುಚಿತ ಹಾಗೂ ಉಚ್ಚಂಖಲವಾಗಬಹುದು. ಸಾಧಾರಣ ರೂಪದಿಂದ ಸಾಹಿತ್ಯದಲ್ಲಿ ಯಾವುದೂ ವಿಷಯ ವಿಶೇಷದೊಡನೆ ಸಂಬಂಧಿತವಲ್ಲದ ರಚನೆಗಳನ್ನು ಮಾತ್ರ ಸಮಾವೇಶಗೊಳಿಸಬಹುದು. ಪ್ರತ್ಯೇಕ ಪ್ರತಾರವಾದ ಜ್ಞಾನಕ್ಕೆ ತನ್ನದೇ ಆದ ಕ್ಷೇತ್ರವಿದೆ. ಆ ವಿಷಯದ ಮೇಲೆ ಬರೆದ ಪುಸ್ತಕಗಳು ಅದೇ ವಿಷಯದ್ದಿನಿಸುತ್ತವೆ. ಆ ವಿಷಯದೊಡನೆ ಸಂಪರ್ಕವಿಟ್ಟು ಕೊಳ್ಳುವವನು ಅಥವಾ ಆ ಪ್ರಕಾರದ ಜ್ಞಾನದಲ್ಲಿ ಅಭಿರುಚಿಯುಳ್ಳವನೇ ಆ ವಿಷಯದತ್ತ ಆಕರ್ಷಿತನಾಗುತ್ತಾನೆ. ಸರ್ವ ಸಾಧಾರಣರಿಗೆ ಆದರಲ್ಲಿ ಅಭಿರುಚಿ ಕಮ್ಮಿಯಿರಲಿ ಅಥವಾ ಇಲ್ಲದೆ ಇರಲಿ—ಅದರ ಸಾಹಿತ್ಯದ ಸಂಬಂಧವು ಜನ ಸಾಧಾರಣರಲ್ಲಿದೆ. ಯಾವುದನ್ನು ಉತ್ತಮ ಪಂಡಿತರೂ ತಿಳಿಯಬೇಕು ಅಥವಾ ಯಾವುದನ್ನು ತಿಳಿಯುವುದರಲ್ಲಿ ಯಾವುದೋ ವಿಶೇಷ ಮನೋವೃತ್ತಿಯು ಅವಶ್ಯಕತೆ ಬೇಕು ಎಂಬಂಥಾ ಯಾವ ಪ್ರಕಾರದ ಪದಾರ್ಥ ಬೋಧ ಅಥವಾ ವಿಶಿಷ್ಟ ಜ್ಞಾನವೂ ಇಲ್ಲ. ಈ ರೀತಿಯ ಗ್ರಂಥವು ವಿಷಯ ಜ್ಞಾನದಿಂದ ಅನುಪ್ರೇರಿತವಾಗುವ ಕಾರಣ ಆ ವಿಷಯದ ಯಾ ಪದಾರ್ಥಗಳ ಜಿಜ್ಞಾಸೆಗಾಗಿ ಮಾತ್ರವೇ ಆಗಿದೆ. ಸರ್ವ ಸಾಧಾರಣದವರಿಗೆ ಇಂಥಾ ಗ್ರಂಥದಲ್ಲಿ ಯಾವ ವಿಶೇಷ ಆಕರ್ಷಣೆಯೂ ಇಲ್ಲ. ಮನುಷ್ಯ ಮಾತ್ರರಿಗೆ ಸಮಾನ ರೂಪದಲ್ಲಿರುವ ಆಕರ್ಷಣ ರಚನೆಗಳು ಸಾಹಿತ್ಯದಲ್ಲಿವೆ. ಆದರೆ ಆಕರ್ಷಣೆಯೇ ಸಾಹಿತ್ಯದ ಆಧಾರವಲ್ಲ.

ಆಕರ್ಷಣೆಯು ಅನೇಕ ಪ್ರಕಾರದಿಂದಾಗಬಲ್ಲುದು. ಲಾಭದೃಷ್ಟಿಯಿಂದ ನಾವು ಇನ್ನೊಬ್ಬರೊಡನೆ ಆಕರ್ಷಿತರಾಗುತ್ತೇವೆ. ವಿಶೇಷ ಪ್ರಯೋಜನದೆ ಸಿದ್ಧಿಗಾಗಿಯೂ ಕೂಡಾ ನಾವು ಯಾವುದೋ ಕಡೆ ಒಲಿಯುತ್ತೇವೆ. ನಾವು ಯಾವ ವಿಷಯದ ಕಡೆ ಪ್ರವೃತ್ತರಾಗುತ್ತೇವೋ, ಆಗ ಈ ಪ್ರಕಾರದ ಯಾವುದೋ ವಿಶೇಷ ಸ್ವಾರ್ಥ ಸಾಧನೆಯ ಕಡೆಗೆ ನಮ್ಮ ಲಕ್ಷ್ಯ ವಿರುತ್ತದೆ. ಜ್ಞಾನ ವಿಶೇಷಗಳ ಕಾರಣ ಸಾಹಿತ್ಯದ ಆಕರ್ಷಣವಲ್ಲ. ಮನುಷ್ಯ ಮಾತ್ರರಲ್ಲಿ ಸಮಾನ ರೂಪದಿಂದ ತನ್ನ ಪ್ರತಿ ಹಾಗೂ ತನ್ನಂತಿರುವ ಅನ್ಯ ಪುರುಷರ ಪ್ರತಿಯಾಗಿ ಸಹಜಾನುರಾಗವಿದೆ. ಯಾವ ಈ ಸಾಧಾರಣ ಅನುರಾಗದಿಂದ ಪ್ರೇರಿತವಾಗಿ ತನ್ನ ಸುಖ—ದುಃಖಾತ್ಮಕ ಅನುಭೂತಿಯನ್ನು ಸಮಾಜದ ಸಮ್ಮುಖ ಉಪಸ್ಥಿತಿಗೊಳಿಸುವುದೇ ಕಲೆಯ ಉತ್ಪತ್ತಿಯ ಕಾರಣ. ಆದೇ ಮಾನವೀಯ ಪ್ರವೃತ್ತಿಯೇ ಸಾಹಿತ್ಯದ ಪೃಷ್ಠ ಭೂಮಿಯಾಗಿದೆ ಈ ಪ್ರವೃತ್ತಿಯಿಂದ ಉತ್ಪೇರಿತವಾದ ಮಾನವೀಯ ಉದ್ಯೋಗವು ತಾಬ್ದಿಕ ರೂಪವಾಗಿ ಧರಿಸಿದುದನ್ನು ನಾವು ಸಾಹಿತ್ಯವೆಂದು ಹೇಳುತ್ತೇವೆ. ಈ ರೀತಿಯ ಪ್ರಯಾಸವು ಅನೇಕ ರೂಪದಲ್ಲಿ ಪ್ರಕಟವಾಗಬಲ್ಲುದು ಹಾವ-ಭಾವ, ಚೇಷ್ಟೆ, ನೃತ್ಯ, ಗೀತೆಗಳ ಮೂಲಕ ಕೂಡಾ ಮನುಷ್ಯನು ತನ್ನ ಭಾವನೆ ಹಾಗೂ ವಿಚಾರಗಳನ್ನು ಪ್ರದರ್ಶಿಸುತ್ತಾನೆ. ಅಲ್ಲದೆ ಮೂರ್ತಿ ನಿರ್ಮಾಣ, ಚಿತ್ರ ಲೇಖನವೇ ಮೊದಲಾದ ಇಂತಹ ಅನ್ಯ ಸಾಧನೋಪಾಯಗಳಿಂದಲೂ ಕೂಡಾ ತನ್ನ ಅಭಿಪ್ಸವನ್ನು ಪೂರ್ತಿಗೊಳಿಸುತ್ತಾನೆ. ಈ ರೀತಿಯಾಗಿ ಕಲೆಯು ಅನೇಕ ರೂಪತ್ವ ಪ್ರಕಟವಾಗುತ್ತದೆ. ಈ ವಿವಿಧ ಕಲೆಗಳಲ್ಲಿ ಸಮಾನರೂಪದಿಂದ ಅದೇ ಮಾನವೀಯ ಪ್ರವೃತ್ತಿಯಿದೆ. ಮಾನವನ ಆದರ ವಶವಾಗಿ ತನ್ನ ಪರಿಕಲ್ಪನೆಯನ್ನು ಸಾಕ್ಷಾತ್ಕರಿಸುತ್ತಾನೆ ತೋರಿಸುತ್ತಾನೆ.

ಶಬ್ದದ ಮೂಲಕ ಪ್ರಕಟೀಕರವಾದ ಮಾನವೀಯ ಪರಿಕಲ್ಪನೆಯೇ ಸಾಹಿತ್ಯ ರೂಪವಾಗಿ ಹೊಂದುತ್ತದೆ. ಈ ಪ್ರಕಾರದ ಪರಿಕಲ್ಪನೆಯ ಆಶ್ರಯವನ್ನು ಹೊಂದಿ, ಕಲಾಕಾರನು ತನ್ನ ರಾಗಾತ್ಮಕ ಅನುಭೂತಿಯ ಜಗತ್ತನ್ನು ಸೃಷ್ಟಿಸುತ್ತಾನೆ. ಈ ಕಾರಕ ಸೃಷ್ಟಿಯ ಪ್ರಭಾವವು ನಮ್ಮ ಮೇಲೆ ಬಿದ್ದಾಗ ನಾವು ಹರ್ಷಿತರಾಗುತ್ತೇವೆ. ಆಗ ಅದು ಸಾಹಿತ್ಯದ ಶ್ರೇಣಿಗೆ ಸೇರುತ್ತದೆ. ಅನೇಕ ಗ್ರಂಥಗಳಿವೆ. ಆದರೆ ವಿಷಯ ಭೇದದಿಂದ ಎಲ್ಲವೂ ತನ್ನ ತನ್ನ ವಿಯುಕ್ತಿಕ ಶ್ರೇಣಿಯಲ್ಲಿ ವಿಭಕ್ತವಾಗುತ್ತದೆ. ಒಂದೇ ರೀತಿಯ ಜ್ಞಾನದ ಪ್ರತಿಪಾದನೆಯ ಕಡೆ ಲಕ್ಷ್ಯವುಳ್ಳದ್ದು ಸಾಹಿತ್ಯ ಶ್ರೇಣಿಯಲ್ಲಿ ಸಮಾವಿಷ್ಟವಾಗಲಾರದು. ಇಲ್ಲಿ ಗ್ರಂಥದ ಮಹತ್ವ ಆಥವಾ ಉಪಯೋಗದ ಪ್ರಶ್ನೆಯಿಲ್ಲ. ಸಾಹಿತ್ಯದ ಸಂಬಂಧವು ಕೇವಲ ಮಾನವನೊಡನೆಯಲ್ಲ. ಮಾನವ ವಿಶೇಷದೊಂದಿಗಿಲ್ಲ. ಶಬ್ದ ಮೂಲಕ ಮಾನವೀಯ ಪ್ರವೃತ್ತಿಯನ್ನು ಪ್ರಕಟಿಸುವ ಜನ ಸಾಧಾರಣದ ಸ್ಥಾಯಿ. ಮನೋರಂಜನೆಯ ರಚನೆಯು ಸಾಹಿತ್ಯದಂತರ್ಗತ ಸಮಾನೇಶವಾಗುತ್ತದೆ. ಕಲಾಕಾರನ ಸೃಷ್ಟಿಯ ಕಾರಣವೇ ಪ್ರಯಾಸದಲ್ಲಾಗಿವ ಆಂತರಿಕ ಆಹ್ವಾನವಾಗಿದೆ. ಅವನಿಗಾದ ಆನಂದವು ವಾಸ್ತವಿಕ ಜಗತ್ತನ್ನು ಭಾಷಾತ್ಮಕ ರೂಪವನ್ನು ಕೊಡುವುದಕ್ಕೆ ಸಮರ್ಥವಾಗುತ್ತದೆ. ಅದು ಅಲ್ಲಿಯೇ ಸೀಮಿತವಾಗಿರುವುದಿಲ್ಲ. ಒಂದು ವೇಳೆ ಹಾಗಾದಲ್ಲಿ ಅವನ ಪ್ರಯಾಸವು ವಿಫಲವಾಗುತ್ತದೆ. ಭಾವುಕನ ಹೃದಯದಲ್ಲಿ ಎಳುವ ಉಲ್ಲಾಸವೇ ಕಲೆಯ ಪ್ರತಿಫಲ. ಆದುದರಿಂದ ಮನುಷ್ಯ ಮಾತ್ರರಿಗೆ ಅನುರಂಜನಾತ್ಮಕ ಪ್ರವೃತ್ತಿಯು ತೃಪ್ತಿಯುಂಟಾಗುವ ಆ ಸಾಹಿತ್ಯದ ಉತ್ಪತ್ತಿಗರ್ಗತವಾದ ಗ್ರಂಥವು ಬರುತ್ತದೆ. ಸಾಹಿತ್ಯವು ಮಾನವೀಯ ಹೃದಯದ ಕ್ರೀಡಾಕ್ಷೇತ್ರವಾಗಿದೆ. ಕಲ್ಪನೆಯ ಮೂಲಕ ಹುಟ್ಟಿದ ಅಂತರಂಗ ಭಾವನೆಗಳನ್ನು ಸುಂದರತಮ ಭಾಷೆಯಲ್ಲಿ ಸೃಷ್ಟಿಸಿದಾಗ ಸಾಹಿತ್ಯದ ಉದಯವಾಗುತ್ತದೆ. ಸಾಹಿತ್ಯವು ಭಾವಮಯ ಭಾಷೆಯ ಪ್ರಯೋಗವಾಗಿದೆ. ಅದರ ಆಧಾರದಿಂದ ಮನುಷ್ಯನು ತನ್ನ ಮಾನಸಿಕ ಜಗತ್ತಿಗೆ ಬಾಹ್ಯ ರೂಪವನ್ನು ಕೊಟ್ಟು ಒಂದು ನಿಶ್ಚಿತ ಆದರ್ಶದತ್ತ ಅಗ್ರೇಸರನಾಗುತ್ತಾನೆ. ಸಾಹಿತ್ಯದ ಪ್ರತ್ಯಕ್ಷೆ ಸಂಬಂಧವು ಭಾಷೆಯೊಡನಿದೆ. ಮತ್ತು ಭಾಷೆಯ ಮೂಲಕ ಕಲಾತ್ಮಕವಾದ ರಸೋತ್ಪತ್ತಿಯೇ ಅದರ ಪ್ರಾಣವಾಗಿದೆ. ಯಾವುದರ ಮೂಲಕ ಈ ಉಭಯ ಲಕ್ಷ್ಯಗಳ ಸಿದ್ಧಿಯಿದೆಯೋ ಅಂತಹ ಸಮಸ್ತ ರಚನೆಗಳೂ ಸಾಹಿತ್ಯದಲ್ಲಿ ಸಮಾವೇಶವಾಗುತ್ತದೆ.

—ಶ್ರೀ ನಿ. ನಾರಾಯಣ ಬಲ್ಲಾಳ್
ಹಾಸನ.

ಕರ್ನಾಟಕದ ಪ್ರಸಿದ್ಧ ವಿಡಂಬನಕಾರ ಶ್ರೀ ಕುಡ್ಪಿ ವಾಸುದೇವ ಶೆಣೈಯವರ

ಓದಲೇಬೇಕಾದ ಮೂರು ಪುಸ್ತಕಗಳು

ನಿಂರೆ ಮತ್ತು ನಾನು (೨೫ ವಿಂರಾ ಕತೆಗಳು) 1—0—0
ಜಪಾನ್ ಬೆಳಕು ಮತ್ತು ಇತರ ಕಥೆಗಳು 1—0—0
ಕನಸಿನ ಡಬ್ಬಿಗಳು (೨೪ ಹರಟೆಗಳು) 1—0—0

ಪ್ರತಿಗಳಿಗೆ ಬರೆಯಿರಿ:— ನವಭಾರತ ಪುಸ್ತಕ ಭಂಡಾರ, ಉಡುಪಿ.



ವಿಜ್ಞಾನದ ವಿಸ್ಮಯ

(೨ನೇ ಪುಟದಿಂದ)

ಸಮಸ್ಯೆಗೊಳಿಸುವುದಕ್ಕೆ ಇನ್ನೊಂದು ಮಾರ್ಗವೂ ಉಂಟು. ಎತ್ತರವಾದ ನಿಲುವು ಗಂಟುಗಳ ಮೇಲೆ ಬಿಗಿಸಬೇಕಾದ ವಿದ್ಯುಚ್ಛಕ್ತಿಯ ನಿರೋಧಕ ಅನ್ಯಜನಕ ಸಂಯುಕ್ತ ಕಾರಕಗಳನ್ನು (ಲೈಟ್ನಿಂಗ್ ಆರಿಸ್ಟರ್ ಆಕ್ಸಿಡೈಜರ್ಸ್) ಕ್ಷೇತ್ರದ ಮೇಲೆ ಅಲ್ಲಲ್ಲಿ ಯುಕ್ತ ಯುಕ್ತವಾಗಿ ನೆಲೆಗೊಳಿಸುವುದರಿಂದ ಇದು ಸಾಧ್ಯವಾಗುತ್ತದೆ.

ಮಿಂಚನ್ನು ಬಂಧಿಸುವ ಈ ಹೊಸ ಉಪಕರಣಕ್ಕೆ ಮೇಲಿನ ಅಗ್ರಭಾಗದಲ್ಲಿ— ಹೊನೆಚಾಪ ತುದಿಯಿರದೆ, ಇನ್ನೇಕ ದಶಕಗಳಷ್ಟು ಸೆಂಟಿಮೀಟರುಗಳ ವ್ಯಾಸವುಳ್ಳ, ಸೂಕ್ಷ್ಮಾಗಿರುವ ಲೋಹದ ಜೊಡು, ಇದ ಸ್ಥಿ ಜಿಗಿಸಲ್ಪಟ್ಟಿರುತ್ತದೆ. ಇಂತಹ ವಿದ್ಯುತ್ತಾನಿ ನಿರೋಧಕವು ಗುಡುಗು ಮಳೆಗಳ ಕಾಲದಲ್ಲಿ ವಿದ್ಯುಚ್ಛಕ್ತಿಯ ವಿಸರ್ಜನೆಯನ್ನು ಗಣನೀಯ ಪ್ರಮಾಣದಲ್ಲಿ ತಗ್ಗಿಸುವುದು ಮತ್ತು ವಿದ್ಯುತ್ ಕ್ಷೇತ್ರದ ಸಂಕ್ರಿತ್ತ ಸ್ಥಿತಿಯು ಬಲಹೀನಗೊಳ್ಳುವುದನ್ನೂ ತಪ್ಪಿಸುವುದು. ಇದು ಹೆಸ್ಸ ಸರಿಯಲ್ಲಿ ನೇರವಾದ ವಿದ್ಯುಲ್ಲತಾ ವಿಸರ್ಜನೆಗಳನ್ನು ಹೆಚ್ಚಿಸುವುದರ ಸಲುವಾಗಿ ಅನುಕೂಲಪ್ರದವಾಗಿರುವ ಪರಿಸ್ಥಿತಿಗಳನ್ನು ಸೃಷ್ಟಿಸುವುದು.

ಸಮೀಪ ಭವಿಷ್ಯತ್ತಿನ ಒಂದು ಚಿತ್ರವು ಇಲ್ಲಿದೆ. ಗೋಧಿಯನ್ನು ಬೆಳೆಯುವ ಒಂದು ವ್ಯವಸಾಯ ಕ್ಷೇತ್ರವು ಬಿಸಿಲಿನಲ್ಲಿ ಸುಗ್ಗಿಯ ಪಕ್ವಕ್ಕೆ ಬರುತ್ತಿದೆ. ನಿಭಿನ್ನ ಸ್ಥಾನಗಳಲ್ಲಿ, ಮಂದ ನಿಲುವು ಗಂಬಗಳು ಕ್ಷೇತ್ರದ ಮಧ್ಯೆ ಅಲ್ಲಲ್ಲಿ ನೆಲೆಗೊಂಡಿವೆ. ಅವುಗಳ ತುದಿಗಳಲ್ಲಿ ಬೆಳ್ಳಾದ ಲೋಹದ ಜೊಂಡುಗಳು ಕಂಡು ಬರುತ್ತವೆ, ಮೇಲ್ಭಾಗದಲ್ಲಿ ಈ ಪ್ರದೇಶದ ಮೇಲೆ ಎಲ್ಲಿಯೂ ಮನುಷ್ಯರ ಸುಳಿವೇ ಕಾಣಿಸದು.

ಇದ್ದಕ್ಕಿದ್ದ ಹಾಗೆಯೇ ಭಾರೀ ಗುಡುಗು ಮೋಡಗಳು ತಲೆದೋರುತ್ತವೆ ಗ್ರಾಮಾಂತರ ಪ್ರದೇಶದ ರಸ್ತೆಯ ಮೇಲೆ ಕೊದಲನೆಯ ಬಿರುಗಾಳಿಯು ಸುಳಿದು ಧೂಳನ್ನೆಬ್ಬಿಸುತ್ತದೆ. ಕಣ್ಣನ್ನು ಕೋರೈಸುವಂತಹ ವಕ್ರ ವಕ್ರವಾದ ಕೋಲ್ಮಿಂಚುಗಳು, ಸಃಪರಿಚಿತವಾದ ಸಿಡಿತದ, ಗುಡುಗಿನ, ಕಿವುಡುಗೊಳಿಸುವಂತಹ ಸಪ್ಪಳಗಳೊಡನೆ ವಿದ್ಯುಲ್ಲತಾ ನಿರೋಧಕ ಗೋಪುರಗಳಿಗೆ, ಮೇಳೈಗಳ ಕಪ್ಪು ಅಂಚುಗಳೊಡನೆ ಸಂಪರ್ಕವನ್ನು ಉಂಟುಮಾಡುತ್ತವೆ. ಗುಡುಗಿನ ಸಪ್ಪಳಗಳು ಒಂದರ ತರುವಾಯ ಮತ್ತೊಂದು ಅನಿಯಂತ್ರಣವಾಗಿ ಕೆಲವೆಲ್ಲಾವಧಿಯ ಮಧ್ಯಂತರಗಳಲ್ಲಿ ಕೇಳಿಬರುತ್ತಿರುತ್ತವೆ. ಸ್ತಂಭದ ಮಾರ್ಗದ ಸ್ಥೈರ್ಯ ಮಿಂಚಿನ ಪ್ರತಿಯೊಂದು ಹೊಡೆತವೂ ಉಪಯುಕ್ತವಾದು, ಬೆಲೆಬಾಳುವ ಖನಿಜ—ಗೊಬ್ಬರವನ್ನು—'ನೈಟ್ರೆಟ್ ಆಸ್ಫೈಡ್'—ನಿರ್ಮಿಸುತ್ತದೆ. ಈ ಪ್ರಸಾರ ಜನಕ ಸಂಯುಕ್ತವನ್ನೆಲ್ಲವನ್ನೂ ಮಳೆಯು ಬೊಗ್ಗೆ ಹನಿಗಳಲ್ಲಿ ಕರಗಿ ಹೋಗುತ್ತದೆ ಮತ್ತು ಮಳೆಯು ನೀರಿನೊಂದಿಗೆ ಭೂಮಿ ಒಳಕ್ಕೆ ಪ್ರವೇಶಿಸುತ್ತದೆ.

ಮಕರ ಸಂಕ್ರಾತಿ ಬಂತು!!

ಹಿಂದುಗಳು ಈ ಪರ್ವ ಕಾಲವನ್ನು ಮಹತ್ವದ್ದೆಂದು ಏಕೆ ತಿಳಿಯುತ್ತಾರೆ?

'ಜೊಂಗಲ್' ಹಬ್ಬವು ಭಾರತದ ಹೆಚ್ಚಿನ ಜನರು ಆಚರಿಸುವ ಹಬ್ಬ. ಇದು ಕೆಜ್ಜಾಗಿ ಜನವರಿ ೧೫–೧೪ನೇ ದಿನಾಂಕದಂದು ಬರುತ್ತದೆ. ಉಡುಪಿಯಲ್ಲಿ ಈ ಬಗ್ಗೆ ಏಳು ದಿನಗಳ ಉತ್ಸವವು ಶ್ರೀ ಕೃಷ್ಣಪರಮಾತ್ಮನ ಸನ್ನಿಧಿಯಲ್ಲಿ ವೈಭವದಿಂದ ಜರಗುತ್ತದೆ.

ಆಚಾರ್ಯವರಾಹ ವಿಹಿತರ ಮತ ವಂತೆ ಭೂಮಿಯು ಒಂದು ಉದ್ದನೆಯ ಉರುಟು ರಸ್ತೆಯಲ್ಲಿ ಸೂರ್ಯನ ಸುತ್ತ ತಿರುಗುತ್ತದೆ. ಈ ದಾರಿಗೆ ಜ್ಯೋತಿಷ್ಯದಲ್ಲಿ 'ಕ್ರಾಂತಿ ವೃತ್ತ' ವೆಂದು ಕರೆಯುತ್ತಾರೆ. ಭೂಮಿಗೆ ಈ ವೃತ್ತದಲ್ಲಿ ಒಂದು ಸುತ್ತು ಬರಲು ಒಂದು ವರ್ಷ ಬೇತಾಗುತ್ತದೆ. ಈ ವೃತ್ತವನ್ನು ೧೨ ಕಲ್ಪಿತ ತುಂಡುಗಳನ್ನಾಗಿ ಮಾಡಿದರೆ ಈ ಒಂದು ತುಂಡು ಅಥವಾ ರಾಶಿಯಲ್ಲಿ ಭೂಮಿಯು ೧/೧೨ ವರ್ಷ ಅಥವಾ ಒಂದು ಮಾಸ ಸಮಯವನ್ನು ಕಳೆಯುತ್ತದೆ. ಯಾವಾಗ ಭೂಮಿಯು ಈ ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಸಂಚರಿಸುತ್ತದೋ ಆ ಕ್ರಮಣ ಕಾಲವನ್ನು ಸಂಕ್ರಮಣ ಅಥವಾ ಸಂಕ್ರಾಂತಿ ಎಂದು ಕರೆಯುತ್ತೇವೆ.

ಜೈತ್ರ ಮಾಸದಲ್ಲಿ ಭೂಮಿಯ ಕ್ರಮಣವು ಕ್ರಾಂತಿ ವೃತ್ತದ ಪೂರ್ವ ಮೇಷ ಭಾಗದಲ್ಲಿರುತ್ತದೆ. ವೈಶಾಖದಲ್ಲಿ ವೃಷಭ, ಆರ್ದ್ರೆ ರೀತಿ ಪುಷ್ಯ ಮಾಸದಲ್ಲಿ ಮಕರ ಭಾಗದಲ್ಲಿರುತ್ತದೆ. ಆದುದರಿಂದ ಈ ಸಂಕ್ರಮಣ ಕಾಲವು ಮಕರ ಸಂಕ್ರಮಣ ಎಂದು ಕರೆಯಲ್ಪಡುತ್ತದೆ.

ವರ್ಷದ ಹನ್ನೆರಡು ಸಂಕ್ರಮಣಗಳಲ್ಲಿ ಮಕರ ಮತ್ತು ಕರ್ಕಾಟಕ ಸಂಕ್ರಮಣಗಳು ಮಹತ್ವಪೂರ್ಣವಾದವಾಗಿರುತ್ತದೆ. ಕಾರಣ ಈ ಸಮಯದಲ್ಲಿ 'ಅಯನ' ಬದಲಾವಣೆಯಾಗುತ್ತದೆ. ಮಕರ ಸಂಕ್ರಮಣವು ಉತ್ತರಾಯಣದ ಸಮಯವನ್ನೂ ಕರ್ಕಾಟಕ ಸಂಕ್ರಮಣವು ದಕ್ಷಿಣಾಯಣದ ಸಮಯವನ್ನು ಸೂಚಿಸುತ್ತದೆ. ಮಕರ ಸಂಕ್ರಾಂತಿ ಕಾಲದಲ್ಲಿ ಚಳಿಯು ತನ್ನ ಪರಾಕಾಷ್ಠತೆಯನ್ನು ತಲಪಿರುತ್ತದೆ. ಆದರೆ ಅಂದಿನಿಂದ ಮುಂದೆ ಬರುವುದೇ ವರಂಕದ ಸಂತಳ!

ಮಕರಸಂಕ್ರಾಂತಿಯ ತೊತ್ತಿಗೆ ಚಳಿಯ ತೀವ್ರತಾಪೆ ಇರುವುದರಿಂದ ಈ ಸಮಯದಲ್ಲಿ ಎಳ್ಳು, ಕುಪ್ಪ ಕಂಬಳಿ, ಬೆಲ್ಲ ಮೊದಲಾದ ಶೀತ ಹಾರಕ ದ್ರವ್ಯಗಳ, ವಿನಿಯೋಗವೂ, ಆ ದಾನ ಪ್ರದಾನವೂ ನಡೆಯುತ್ತದೆ. ಈ ಸಂದರ್ಭದಲ್ಲಿ ಸೂರ್ಯ ಪ್ರಾರ್ಥನೆ ಆತನ ತೃಪ್ತಿಗಾಗಿ ಪೂಜೆಗಳು ಹೆಚ್ಚಿನ ಕಡೆಗಳಲ್ಲಿ ನಡೆಯುತ್ತದೆ ಈ ಸಮಯದಲ್ಲಿ ಸೂರ್ಯನು ಚಳಿಯ ಬಾಧೆಯಿಂದ ನಮ್ಮನ್ನು ರಕ್ಷಿಸಲು ಬರುತ್ತಿರುವಂತೆ ಭಾಸವಾಗುತ್ತದೆ.

ಉತ್ತರ ಪ್ರದೇಶ, ರಾಜಸ್ಥಾನಗಳಲ್ಲಿ ಈ ಪರ್ವಕಾಲದ ಸಮಯ ಅನ್ನ, ಬಟ್ಟೆ ಗಳ ದಾನ, ಎಳ್ಳು ಬೆಲ್ಲಗಳನ್ನು ಬೆರೆಸಿದ ಉಂಡೆಯ ವಿನಿಯೋಗ ಪದ್ಧತಿ ಇದೆ. ಮಹಾರಾಷ್ಟ್ರದಲ್ಲಿ ಆ ದಿನ ಎಳ್ಳಿನಿಂದ ತಯಾರಿಸಿದ ಒಂದು ತರದ ಹಲ್ವವನ್ನು ಹಂಚುತ್ತಾರೆ. ಬಂಗಾಳದಲ್ಲಿ ಜನರು ರೇಶಿಮೆಯ, ಉಣ್ಣೆಯ, ಬಟ್ಟೆಯುಟ್ಟು ಎಳ್ಳು ಬೆಲ್ಲಗಳನ್ನು ತುಂಬಿ ತಮ್ಮ ಮಿತ್ರ ಬಳಗದ ಕಡೆ ರವಾನಿಸುತ್ತಾರೆ. ಗಂಗಾ ನದಿ ಪ್ರದೇಶದಲ್ಲಿ ಜಲವರು ಗಂಗಾ ಸ್ನಾನ ಮಾಡುವರು.

ದಕ್ಷಿಣ ಭಾರತದಲ್ಲಿ ಈ ಹಬ್ಬವನ್ನು 'ಸೊಂಗಾಲ್' ಎಂದು ಕರೆದು ಮೂರು ದಿನದ ವರೆಗೆ ಆಚರಿಸಲಾಗುತ್ತದೆ.

ಈ ಸಮಯದಲ್ಲಿ ಎಳ್ಳು ಬೆಲ್ಲಗಳ ಉಪಯೋಗದ ಆವಶ್ಯಕತೆಯೇನು? ಎಂದು ವಿಚಾರಿಸಿದರೆ ನಮಗೆ ಈ ವಿಷಯ ಹೊಳೆಯುತ್ತದೆ. ವೈದ್ಯಶಾಸ್ತ್ರದಲ್ಲಿ ಎಳ್ಳು ಶೀತನಾಶಕ; ಚರ್ಮರೋಗ, ಕಫ, ಪಿತ್ತ ನಿವಾರಕವೆಂದೂ ಹೇಳಿದೆ. ಅಲ್ಲದೆ ಎಳ್ಳು ಮಿಶ್ರಿತ ನೀರಿನಿಂದ ಸ್ನಾನಮಾಡಬೇಕೆಂದೂ ಹೇಳಿದೆ. ಚಳಿಗಾಲದಲ್ಲಿ ಈ ರೋಗಗಳು ಬರಬಹುದಾದುದರಿಂದ ಅವುಗಳ ಪರಿಹಾರಕ್ಕಾಗಿ ಈ ರೀತಿ ಸಾಮೂಹಿಕವಾಗಿ ಜನರು ಹಬ್ಬದ ಮೂಲಕ ಅವುಗಳನ್ನು ಉಪಯೋಗಿಸುವ ಅವಶ್ಯಕತೆ ಇದೆ.

ಪೇಲೆ ಹೇಳಿದಂತೆ ಭಾರತದ ಕೆಲವು ಹಳೆಯ ವಾಡಿಕೆಗಳು ಒಳ್ಳೆ ಉದ್ದೇಶದಿಂದ ಕೂಡಿರುತ್ತವೆ. ಬರಬರುತ್ತ ಕೆಲವು ಆಚಾರಗಳು ಅಂದಶ್ರದ್ಧೆಯ ಜನರ ಭ್ರಮೆಯಿಂದ ಅನಾಚಾರವಾದರೂ ಇದರ ಮೂಲವೆಲ್ಲವೂ ಶ್ರೇಷ್ಠವಾಗಿರುತ್ತದೆ. ತುಳಸೀನೀರನ್ನು ತೆಗೆದುಕೊಳ್ಳುವುದು, ಸೂರ್ಯ ನಮಸ್ಕಾರ ಮಾಡುವುದು ಇವೇ ಮೊದಲಾದ ಕ್ರಿಯೆಗಳು ಮನುಷ್ಯನ ಆರೋಗ್ಯವನ್ನು ರಕ್ಷಿಸುತ್ತವೆ. ತುಳಸಿ ಎಲೆಯಲ್ಲಿ ಹೆಲವು ಔಷಧಿ ಗುಣಗಳಿವೆ. ಸೂರ್ಯನಮಸ್ಕಾರ ಮಾಡುವಾಗ ಸೂರ್ಯನ ಬಿಸಿಲು ಚರ್ಮಕ್ಕೆ ತಾಗುತ್ತದೆಯಲ್ಲದೆ ಶರೀರಕ್ಕೆ ವ್ಯಾಯಾಮ ಸಿಗುತ್ತದೆ.

ಇದಂತೆ ಮಕರ ಸಂಕ್ರಮಣ ಕಾಲದಲ್ಲಿ ಎಳ್ಳು ಬೆಲ್ಲ ಹಂಚುವುದು ಮೂಢ ನಂಬಿಕೆಯಲ್ಲ. ಅದು ಹಿರಿಯರ ಅನುಭವದಿಂದ ಬಂದ ಜ್ಞಾನವಾಗಿದೆ. ಇದರ ಈ ರಹಸ್ಯವನ್ನು ತಿಳಿದವರ ಮಾತ್ರ ವಿರಳ.

(ಆಧಾರದಿಂದ)

ಶ್ರೀ ಪಿ. ಎನ್. ರಾಮಚಂದ್ರರಾವ್,
ಪಡುಬಿದ್ರೆ.



ಕುಮಾರಿ ಬಿಸ್ಕಿಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತವೆ!!

P. DEVEE & Co. (N. J.) CALCUTTA—40.

ಸ್ಥಾಪಕರು: ಷಾ ಕಂಪೆನಿ, ಮಂಗಳೂರು—1.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ

ಬೆಲೆ:– ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3½%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%
ಕರೆಂಟ್ ಎಕೌಂಟು ½%

THE MOOLKY BANK, LTD. MULKI

ರೋಗನಾಶಿನಿ ಗಂಗಾಮಾತೆ

ಜಾಹ್ನವಿಯ ಪಾವಿತ್ರ್ಯದಲ್ಲಿ ವೈಜ್ಞಾನಿಕ ತಥ್ಯವಿದೆ, ಗೊತ್ತೆ?

ಮುತ್ತಿನ ಕೋಲಿಗೆ ಆಲ್ಲಲ್ಲಿ ನೀಲದ
ಪಣಿಗಳಕೊಡಂತೆ ಬಂದೆವೆಗೆ,
ಬೆಳುದಾವರೆಗಳ ಮಾಲೆಯೊಳಲ್ಲಲ್ಲಿ
ನೈದಿತೆಗಳನಿಟ್ಟಂತಿನ್ನೊಂದೆಡೆ,
ಕೆಲವೆಡೆ ಹಾರುವ ಮಾನಸ ಹಂಸಗ
ಳೋಳಿ ಮೋಡಗಳಲ್ಲಿ ಬೆರೆತಂತೆ,
ಬೇರೊಮ್ಮೆ ಶರದಭ್ರ ಬಿಳಿ ಮೋಡದೆಡೆಯಲ್ಲಿ
ಬಾನ್ನೀಲವಲ್ಲಲ್ಲಿ ಪೆಣಕಿದಂತೆ,
ಮತ್ತೊಮ್ಮೆ ಕಾಳಸರ್ಪಗಳನ್ನು ತೊಟ್ಟಂಥ
ಭಿನ್ನಭೂಷಿತ ಶಿವತನುವಿನಂತೆ,
ಯಮುನೆಯ ತೆರೆಗಳನಪ್ಪಿದ ಗಂಗೆಯ
ಸೊಬಗ ನಾನೇನೆಂಬೆ ನೋಡೆ ಕಾಂತೆ!
—ಕಾಳಿದಾಸನ "ರಘುವಂಶ"

ಮಹಾಕವಿ ಕಾಳಿದಾಸನ ಸೌಂದರ್ಯ ದೃಷ್ಟಿಗೆ ಗಂಗೆಯಲ್ಲಿ, ಗಂಗಾಜಲದಲ್ಲಿ ಮೇಲೆ ವರ್ಣಿಸಿದಂತೆ ಸೌಂದರ್ಯವು ಕಂಡುಬಂದಿತ್ತು. ಆದರೆ ಗಂಗಾನದಿಯ ವೈಶಿಷ್ಟ್ಯವು ಕೇವಲ ಸೌಂದರ್ಯವಲ್ಲ.

ಹಿಂದು ಧರ್ಮದಲ್ಲಿ ನದಿಗಳಿಗೆ ಅತಿಶಯ ಮಹತ್ವದ ಸ್ಥಾನ ಕೊಡಲ್ಪಟ್ಟಿದೆ. ನದಿಗಳನ್ನು, ಅದರಲ್ಲೂ ಗಂಗಾ ನದಿಯನ್ನು ನಾವು ಬಹು ಪವಿತ್ರವೆಂದು ಭಾವಿಸುತ್ತೇವೆ. ನಮ್ಮಲ್ಲಿ ಗಂಗಾನದಿಯ ಮಹಾತ್ಮೆಯನ್ನು ಪ್ರಾಚೀನ ಕಾಲದಿಂದಲೂ ಮನ್ನಿಸುತ್ತಾ ಬಂದಿದ್ದಾರೆ. ಗಂಗಾಜಲವು ಪವಿತ್ರವೂ ಆರೋಗ್ಯದಾಯಿಯೂ ಎಂದು ನಾವೆಲ್ಲ ತಿಳಿದಿದ್ದೇವೆ. ನಮ್ಮ ಪುರಾಣ ಗ್ರಂಥಗಳಲ್ಲಿ ಮತ್ತು ಐತಿಹಾಸಿಕ ಗ್ರಂಥಗಳಲ್ಲಿ ಗಂಗಾಸ್ನಾನದಿಂದ ಪುಣ್ಯ ಲಭಿಸುವುದರ ಜೊತೆಗೆ ಆರೋಗ್ಯ ಪ್ರಾಪ್ತಿಯೂ ಆಗುವುದೆಂಬ ಉಲ್ಲೇಖಗಳಿವೆ.

೨೦೦೦ ವರ್ಷಗಳ ಹಿಂದೆಯೆ ಆಯುರ್ವೇದ ವಿಶಾರದ ಚರಕನು

ಹಿಮವತ್ಪ್ರಭವಾ ಪಥ್ಯಾ
ಪಥ್ಯಾ ದೇವರ್ಷಿಸರಿತಃ ॥

ಅಂದರೆ "ಹಿಮಾಲಯದಿಂದ ಹೊರಡುವ ಈ ನದಿಗಳು ಹಿತಕರವೂ ಪುಣ್ಯ ಪ್ರದವೂ ಆಗಿವೆ" ಎಂದು ಬರೆದಿದ್ದಾನೆ.

ವಾಗ್ಭಟನ "ಅಷ್ಟಾಂಗ ಹೃದಯ" ಪುಸ್ತಕದಲ್ಲಿ

ಹಿಮವನ್ಮಲಯೋದ್ಭವಾಃ
ಪಥ್ಯಾಸ್ತಾ ಏವ ಚ ಸ್ಥಿರಾಃ ॥

ಅಂದರೆ "ಹಿಮಾಲಯ ಮೆತ್ತು ಮಲಯ ಗಿರಿಗಳಿಂದ ಹೊರಡುವ ನದಿಗಳು ಪಥ್ಯ ಕಾರಕವೂ ಸ್ಥಿರವೂ ಆಗಿವೆ" ಎಂದಿದ್ದಾನೆ.

ಈ ನದಿಗಳ ನೀರು ಗುಡ್ಡ, ಕೊಳ್ಳಗಳಲ್ಲಿ ಹರಿದು ಬರುವುದರಿಂದ ಅವುಗಳ ನೀರು ಪಚನಕ್ಕೆ ಹಗುರಾಗಿರುತ್ತದೆ. ಚಕ್ರಪಾಣಿ ದತ್ತನು

ಯಥೋಕ್ತ ಲಕ್ಷಣ ಹಿಮಾಲಯ
ಭವತ್ವಾ ದೇವಗಾಂಗಂ ಜಲಂ ಪಥ್ಯಂ।

ಅಂದರೆ "ಮೇಲಿನ ಲಕ್ಷಣಗಳಿರುವ ಗಂಗಾ ನದಿಯು ಉಗಮ ಹಿಮಾಲಯದಲ್ಲಿದೆ. ಆದುದರಿಂದಲೇ ಅದರ ನೀರು ಹಿತಕರವಾಗಿದೆ" ಎಂದು ಹೇಳಿದ್ದಾನೆ.

ಜರ್ಮನಿಯ "ಭಾಂಡಾರ್‌ಕರ್ ರಿಸರ್ಚ್ ಇನ್ ಸ್ಟಿಟ್ಯೂಟ್" ದಲ್ಲಿ "ಭೋಜನ ಕುತೂಹಲ"ವೆಂಬುದೊಂದು ಹಸ್ತಲಿಪಿತ ಗ್ರಂಥವಿದೆ. ಅದರಲ್ಲಿ

ತ್ವೇತಂ ಸ್ವಾದು ಸ್ವಚ್ಛನುತ್ಯಂತರುಚ್ಯಂ
ಪಥ್ಯಂ ಪಾಕ್ಯಂ ಪಾಚನಂ ಪಾಪಹಾರಿ ॥

ಅಂದರೆ "ಈ ಗಂಗಾಜಲವು ಶುಭ್ರ, ಸ್ವಚ್ಛ, ಸ್ವಾದಿಷ್ಟ, ರುಚಿಕರ. ಆಡಿಗೆಗೆ ಯೋಗ್ಯ, ಪಚನ ಶಕ್ತಿಗೆ ಪೋಷಕ ಮತ್ತು ಪಾಪಗಳನ್ನು ನಾಶಮಾಡುವದಾಗಿದೆ" ಎಂದು ಹೇಳಿದೆ. ಗಂಗಾಜಲವು ಬುದ್ಧಿವರ್ಧಕವೂ ಆಗಿದೆ.

ಗಂಗಾಜಲದಲ್ಲಿ ಇಷ್ಟೆಲ್ಲ ಉತ್ತಮ ಗುಣಗಳಿವೆ ಎಂದೇ ನಾವು ಪುರಾತನ ಕಾಲದಿಂದಲೂ ಅದನ್ನು "ತೀರ್ಥ" ಎಂಬ ಪಾವಿತ್ರ್ಯ ಸಿದ್ಧೇಶಕ ಸಂಜ್ಞೆಯಿಂದ ಸಂಬೋಧಿಸುತ್ತಾ ಬಂದಿದ್ದೇವೆ.

ಬಹುಗುಣ ಸಂಪನ್ನವಾದ ಗಂಗಾಜಲದ ಸೇವನೆಯನ್ನು ಹಿಂದುಗಳಂತೂ ಸರಿ, ಭಾರತದಲ್ಲಿ ಆಳಿದ ವಿದೇಶಿ ರಾಜರು ಕೂಡ ಮಾಡುತ್ತಿದ್ದರು. ಗಿಸ್ನೇ ಶತಮಾನದಲ್ಲಿ ಆಗಿಹೋದಮಹಮ್ಮದ ತಘಲಕನು ನಿಯಮಿತವಾಗಿ ಗಂಗಾಜಲವನ್ನು ಪಾನಮಾಡುತ್ತಿದ್ದನು. ಅವನು ದೌಲತಾಬಾದಿನಲ್ಲಿ ವಾಸಿಸುತ್ತಿದ್ದರೂ ಕಾಶಿಯಿಂದ ಗಂಗಾಜಲವನ್ನು ತರಿಸಿಕೊಳ್ಳುತ್ತಿದ್ದನು. ಕಾಶಿಯಿಂದ ದೌಲತಾಬಾದಕ್ಕೆ ಗಂಗಾಜಲವನ್ನು ತರಲು ೪೦ ದಿನಗಳು ಹಿಡಿಯುತ್ತಿದ್ದವು. ಅದರಂತೆ ವಿಪರೀತ ನೆಚ್ಚವೂ ಬರುತಿತ್ತು.

ಮಹಮ್ಮದ ತಘಲಕನಂತೆ ಅಕ್ಬರ ಬಾಹಶಹನಿಗೂ ಗಂಗಾಜಲವಿಲ್ಲದೆ ನಡೆಯುತ್ತಿರಲಿಲ್ಲ. ಅಟಲ ಫಜಲನು ಅಕ್ಬರನ ವಿಚಾರವಾಗಿ ಬರೆದಿರುವ "ಆಯಿನೆ ಅಕಬರಿ" ಗ್ರಂಥದಲ್ಲಿ ಅಕ್ಬರನಿಗೆ ಗಂಗಾಜಲವು ಎಷ್ಟು ಪ್ರಿಯವಾಗಿತ್ತು ಎಂಬುದನ್ನು ಹೀಗೆ ವರ್ಣಿಸಿದೆ—

"ಬಾದಶಾಹನಿಗೆ ಗಂಗಾಜಲವು ಅಮೃತದಂತೆ ಭಾಸವಾಗುತ್ತಿತ್ತು. ಗಂಗಾಜಲವು ತನಗೆ ತಪ್ಪದೆ ಸಿಗಬೇಕೆಂದು ಅತನು ಆದಕ್ಕಾಗಿ ಪ್ರತ್ಯೇಕ ಜನರನ್ನೆ ನೇಮಿಸಿಕೊಂಡಿದ್ದನು. ಈ ಜನರು ಗಂಗಾನದಿಯ ದಂಡೆಯಲ್ಲಿ ವಾಸಿಸುತ್ತಿದ್ದರು. ಗಂಗಾಜಲವನ್ನು ಕೊಡಗಳಲ್ಲಿ ತುಂಬಿ ಬಾಯಿಗೆ ಮುದ್ರೆಯೊತ್ತಿ ಬಾದಶಾಹನಿಗೆ ಕಳಿಸಿಕೊಡುತ್ತಿದ್ದರು. ಗಂಗಾಜಲವನ್ನಲ್ಲದೆ ಬೇರೆ ನೀರನ್ನೆ ಬಾದಶಾಹನು ಕುಡಿಯುತ್ತಿರಲಿಲ್ಲ. ಬಾದಶಾಹನಿಗಾಗಿ ಸಿದ್ಧಪಡಿಸುತ್ತಿದ್ದ ಆಡಿಗೆಗೆ ಉಪಯೋಗಿಸುತ್ತಿದ್ದ ಮಳೆಯ ನೀರು ಅಥವಾ ಯಮುನಾ ನದಿಯ ನೀರಿನಲ್ಲಿ ತುಸು ಗಂಗಾಜಲವನ್ನು ಸೇರಿಸುತ್ತಿದ್ದರು....."

ಹಿಂದುಗಳ ಮತ್ತು ಹಿಂದು ಧರ್ಮದ ಕಡು ವೈರಿಯಾದ ಔರಂಗಜೇಬ ಬಾದಶಾಹನಿಗೂ ಗಂಗಾಜಲವಿಲ್ಲದೆ ಸಾಗುತ್ತಿರಲಿಲ್ಲ! ೧೬೫೯ರಿಂದ ೧೭೭೨ರ ನಡುವಿನ ಕಾಲದಲ್ಲಿ ಬರ್ನಿಯರ್ ಎಂಬ ಫ್ರೆಂಚ್ ಪ್ರವಾಸಿಯೊಬ್ಬನು ಭಾರತದಲ್ಲಿದ್ದನು. ಆತನು ಬರೆದಿರುವ ಪ್ರವಾಸ ಗ್ರಂಥದಲ್ಲಿ ಔರಂಗಜೇಬನಿಗೆ ಗಂಗಾಜಲವು ಪ್ರಾಣ ಕ್ಕಿಂತಲೂ ಪ್ರಿಯವಾಗಿತ್ತೆಂಬ ಉಲ್ಲೇಖವಿದೆ. ಆತನ ದರಬಾರದ ಜನರೂ ಗಂಗಾಜಲವನ್ನು ಉಪಯೋಗಿಸುತ್ತಿದ್ದರು. ಪ್ರವಾಸದಲ್ಲಿದ್ದಾಗ ಔರಂಗಜೇಬನು ಕನ್ನಿಂಗಡ ಗಂಗಾಜಲವನ್ನು ಒಯ್ಯಲು ಮರೆಯುತ್ತಿರಲಿಲ್ಲ. ಗಂಗಾಜಲವನ್ನು ಆತನು ಒಂಟೆಗಳ ಮೇಲೆ ಹೇರಿಸಿಕೊಂಡು ತರಿಸುತ್ತಿದ್ದನು. ಮುಂಜಾನೆಯ ಉಪಾಹಾರದ ಬಳಿಕ ಕುಡಿಯಲು ಔರಂಗ ಜೇಬನು ಗಂಗಾಜಲವನ್ನು ಉಪಯೋಗಿಸುತ್ತಿದ್ದನು.

ಆಂಗ್ಲೆ ಖಾಜೆಯಲ್ಲಿ ಕ್ಯಾನ್ಸರ್‌ಎನ್ನುವ ಅರ್ಬುದ ರೋಗದ ಉಪಶಮನಕ್ಕೆ ಅಣುಭಸ್ಮವನ್ನು ಉಪಯೋಗಿಸಲಾಗುತ್ತದೆ. ಬ್ರಿಟನ್ನಲ್ಲಿ ಜಗತ್ತಿನೇ ಮೊದಲನೆಯ ಆಸ್ಪತ್ರೆಗಳಿಗೆ ಅಣುಭಸ್ಮವನ್ನು ಪೂರೈಸುವ ಪ್ರಯೋಗಾಲಯ ತೆರೆಯಲ್ಪಟ್ಟಿದೆ. ಚಿತ್ರ ಪ್ರಯೋಗಾಲಯದ ಕಾರ್ಯಕರ್ತೆಯರು ಕೆಲಸಮಾಡುತ್ತಿರುವುದನ್ನು ಕಾಣಬಹುದು.

ಈ ವಿಚಾರದಲ್ಲಿ ಪ್ರಖ್ಯಾತ ವೈ
ಡಾಕ್ಟರ್ ಡಿ. ಹೆರೆಲಿಯವರು ಕೂಡ
ಪ್ರಯೋಗಗಳನ್ನು ಮಾಡಿದ್ದಾರೆ.
ಸಾರ ನೆತ್ತು ಕಾಲರಾ ರೋಗಗಳ
ಸತ್ತ ಕೆಲವರ ಶವಗಳು ಗಂಗಾ ನದಿಯ
ತೇಲುತ್ತಿದ್ದವು. ನಿಜವಾಗಿ ಎಂದರೆ ಈ
ಗಳ ಕೆಳಗೆ ಕೆಲವು ಜಡಿಗಳ ವರೆಗೂ
ನಲ್ಲಿ ರೋಗ ಜಂತುಗಳು ಕಾಣಿಸಿಗ
ಕು. ಆದರೆ ಈ ಶವಗಳ ಅಕ್ಕಪಕ್ಕದಲ್ಲಿ
ರೋಗ ಜಂತುಗಳು ಕಂಡುಬರಲಿಲ್ಲ
ದನ್ನು ನೋಡಿ ಡಾ. ಹೆರೆಲಿಯವರಿ
ಶ್ಚರ್ಯವಾಯಿತು. ಅವರು ಇನ್ನೂ
ದು ಪ್ರಯೋಗ ಮಾಡಿದರು. ಕೆಲವು ರೋ
ಗಿಗಳ ದೇಹದಿಂದ ಅವರು ಕೆಲವು ರೋ
ಗಜಂತುಗಳನ್ನು ಸಂಪಾದಿಸಿ ಅವನ್ನು
ಳೆಸಿದರು. ಇನ್ನಂತರ ಅವುಗಳನ್ನಿಟ್ಟಿದ್ದ
ಳಿಗೆಯಲ್ಲಿ ತುಸು ಗಂಗಾಜಲವನ್ನು
ಬಿದ್ದು. ಸ್ವಲ್ಪ ಸಮಯದ ಬಳಿಕ ನೆ
ಡುವಾಗ ನಳಿಗೆಯಲ್ಲಿದ್ದ ಸಕಲ ರೋ
ಜಂತುಗಳೂ ಸಂಪೂರ್ಣವಾಗಿ ನಾ
ಗೊಂಡಿರುವುದು ಅವರಿಗೆ ಕಂಡುಬಂ

ಇನ್ನೂ ಒಂದು ಸಾಮಾನ್ಯ ಪ್ರಯೋ
ವು ಗಮನಾರ್ಹವಾಗಿದೆ. ಗಂಗಾಜಲ
ರುದ್ರತೆಯ ಕುರಿತು ಬ್ರಿಟಿಷ್ ಡಾಕ್ಟ
ಸಿ. ಈ. ನೆಲ್ಸನ್ ಎಂಬವರು ಹೀಗೆ
ದಿದ್ದಾರೆ—

"ತಲ್ಲತ್ತೆಯಿಂದ ಇಂಗ್ಲೆಂಡಿಗೆ ಹೋಗಿ
ಪಡಗುಗಳು ಮುಗ್ಗಿ ನದಿಯ ನೀರನ್ನು ತು
ಕೊಳ್ಳುತ್ತವೆ. ಮುಗ್ಗಿ ನದಿಯು ಗಂಗಾ
ಯ ಮುಖಜೆ ಆಗಿದೆ. ಇಂಗ್ಲೆಂಡನ್ನು
ಪುನರಿಗೆಗೂ ಈ ನೀರು ಶುದ್ಧವಾಗಿಯೇ
ಳಿಯುತ್ತದೆ. ಆದರೆ ಇಂಗ್ಲೆಂಡಿನಿಂದ ಭಾ
ಕ್ಕೆ ಬರುವ ಹಡಗುಗಳಲ್ಲಿ ತುಂಬಿಕೊಂ
ನೀರು ನುಂಬಯಿಗೆ ಬರುವವ
ಕೂಡ ಶುದ್ಧವಾಗಿರುವುದಿಲ್ಲ. ಸಾರಿ
ಪೋರ್ಟ್ ಸೈದ್, ಸುಯೆಜ್ ಆಫ್
ಎದಸ್ ನಗರಗಳಲ್ಲಿ ಲಂಡನ್ನಲ್ಲಿ ತುಂ
ಕೊಂಡ ನೀರನ್ನು ಚೆಲ್ಲಿ ಹೊಸ ನೀರನ್ನು
ಬಿಕೊಳ್ಳಬೇಕಾಗುತ್ತದೆ. ಪಾಶ್ಚಿಮಾತ್ಯ ದೇ
ಗಳಲ್ಲಿಯೂ ಜರ್ಮ ರೋಗಗಳ ಚಿಕಿತ್ಸೆಗಾ
ಗಂಗಾ ನದಿಯ ನೀರನ್ನು ಉಪಯೋಗಿ
ತಾರೆಂದು ತಿಳಿದುಬರುತ್ತದೆ. ವಿಶೇಷ
ಶೋಧನ ನಡೆಸಿದವರಿಗೆ ಹಿಮಾಲಯದಲ್ಲಿ
ಗಾನದಿಯ ಉಗಮಸ್ಥಾನದಿಂದ ಸ್ವಲ್ಪ ಕ
ರದೆ ಜಂತು ನಾಶಕ ಸಮಾರಕ್ಷಿತಾಣಿ
ಗಳು ಕಂಡುಬರುವ ಸಂಭವವಿದೆ. ವಿಕೋ
ಹಿಮಾಲಯದ ಆ ಶ್ರೇಷ್ಠವಲ ವನಸ್ಪತಿ, ಔ
ಧಿ ಮತ್ತು ಖನಿಜ ಪದಾರ್ಥಗಳ ಆಗರ
ನಿದೆ."

ಪುರಾತನ ಛಾಂದೋಗ್ಯರು "ಔಷಧ
ಜಾಹ್ನವೀತೋಯಂ ವೈದ್ಯೋ ನಾರಾ
ಯಣೋ ಹರಿಃ" ಎಂದಾಗ ವೈಜ್ಞಾನಿ
ಸತ್ಯವನ್ನೆ ಆಡಿದ್ದರು.

[ಆಮೆಂಡ ಆನಂದ"ದಿಂದ]

—"ಕಸ್ತೂರಿ", ಹುಬ್ಬಳ್ಳಿ

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೬
VOL. 36

17—1—1957

ಸಂಚಿಕೆ ೨೦
NO. 20

ಚುನಾವಣೆಯ ವಿಧಾನ

ಕಾಂಗ್ರೆಸಿಗರು ಮತದಾರರೊಡನೆ ತಪ್ಪುಗಳನ್ನೂ ಸಾಧನೆಗಳನ್ನೂ ಒಟ್ಟೊಟ್ಟಿಗೆ ಚರ್ಚಿಸಲಿ!

ಚುನಾವಣೆಯು ಬಹಳ ಸಮೀಪಿಸಿ ೦. ಈ ಚುನಾವಣೆಯನ್ನು ಕಾಂಗ್ರೆಸಿ ರು ಯಾವ ದೃಷ್ಟಿಯಿಂದ ನೋಡಬೇ ು, ಮತ್ತು ಅದರಲ್ಲಿ ಅವರೆಂತು ಭಾಗ ಹಿಸಬೇಕು ಎಂಬುದನ್ನು ಇಂದೋರಿನ ಧಿವೇಶನ ಕಾಲದಲ್ಲಿ ಧುರೀಣರು ತಮ್ಮ ನಷಣಗಳ ಮೂಲಕ ಮಂದಟ್ಟುಪಡಿ ಲು ಪ್ರಯತ್ನಿಸಿದ್ದಾರೆ.

ಇಂದೋರಿನ ಅಧಿವೇಶನ ಕಾಲದಲ್ಲಿ ಂಗ್ರೆಸಿನ ಮುಖಪತ್ರವು ಪ್ರಧಾನ ಮಂ , ಶ್ರೀ ನೆಹರೂರವರು ಸಂಪದೀಯ ಂಗ್ರೆಸು ಪಕ್ಷದ ಸಭೆಯನ್ನುದ್ದೇಶಿಸಿ ಷಣೆಗೆ ಮಾಡಿದ್ದೊಂದು ಭಾಷಣವನ್ನು ಪ್ರಕಟಪಡಿಸಿತು. ಈ ಭಾಷಣವು ಚುನಾ ಣೆಗಳಲ್ಲಿ ಕಾಂಗ್ರೆಸಿಗರು ಹೋರಾಡ ೀಕಾದ ಬಗೆ ಏನೆಂದು ವಿಷದೀಕರಿಸು ುದೆ.

ಚುನಾವಣೆಯಲ್ಲಿ ಸ್ಥಳೀಯ ಉದ್ದೇ ುಗಳ ಸಾಧನೆಗಾಗಿ ಇತರ ಗುಂಪುಗಳೊ ನೆ ಸಂಧಾನ ನಡೆಸಿಕೊಳ್ಳುವುದು ಎಷ್ಟ ು ಯೋಗ್ಯವಾದುದಲ್ಲವೆಂದು ನೆಹರು ವರು ಎಚ್ಚರಿಸಿದ್ದಾರೆ. ಇಂಥ ಸಂಧಾನ ನ್ನು ಮಾಡಹೋಗುವುದಕ್ಕಿಂತ ಹೆಚ್ಚು ಾಣ ಘಾತಕವಾದುದು ಕಾಂಗ್ರೆಸಿಗೆ ೀರೇನೂ ಇರಲಾರದೆಂದೇ ನೆಹರೂ ವರ ಖಚಿತ ಅಭಿಪ್ರಾಯ.

"ನಾವೆಲ್ಲರೂ ಭಾರತೀಯ ಜನತೆಯ ನ್ನು ನಿಸ್ಪೃಹತೆಯಿಂದ ಸಮೀಪಿಸೋಣ! ನಾವುದೇ ಭಯಾನಕ ಕಲ್ಪನೆಗಳನ್ನು ಾವಿಟ್ಟುಕೊಳ್ಳುವುದು ಬೇಡ. ನಾವೇನು ಮಾಡಬೇಕಾಗಿದ್ದಿತೋ ಅವುಗಳಲ್ಲಿ ಎ ಷ್ಟಿ ಕೆಲಸವನ್ನು ಮಾಡಲಾರದವರಾಗಿ ದ್ದೇವೆ ಎಂದು ಅವರ ಮುಂದೆ ಸರಳತೆ ಯಿಂದ ಒಪ್ಪಿಕೊಳ್ಳೋಣ. ಅದೇ ಹೊ ತ್ತಿಗೆ ನಾವೇನು ಮಾಡಿದ್ದೇವೋ ಅದನ್ನೂ ವರಿಗೆ ಮನನವಾಗಿ ಮಾಡಿಕೊಡೋಣ. ಇಂಥ ಪ್ರಾಮಾಣಿಕತೆ ನಮ್ಮಲ್ಲಿರಲಿ" ಎಂದಿದ್ದಾರೆ ನೆಹರು.

ನಮ್ಮ ಪ್ರತಿಸ್ಪರ್ಧಿಗಳಿಂದ ಪ್ರತಿಯೊಂ ು ಬಗೆಯ ತೊಂದರೆಗಳುಂಟಾಗಬಹು ದೆಂಬುದರಲ್ಲಿ ಅನುಮಾನವಿಲ್ಲ. ಇವೆಲ್ಲವ ನ್ನೂ ಕಾಂಗ್ರೆಸಿಗರು ಎದುರಿಸಿಯೇ ತೀರ ಬೇಕು. ಆದರೆ ಎಂದಿಗೂ ತತ್ವಗಳನ್ನು ಬಲಿಗೊಟ್ಟು ಸಂಧಾನಕ್ಕಾಗಿ ಹಾತೊರೆ ಯುವ ಮನೋಭಾವನೆಯನ್ನು ಮಾತ್ರ ಕಾಂಗ್ರೆಸಿಗರು ಇಟ್ಟುಕೊಳ್ಳಬಾರದು ಎಂ ಬುದಾಗಿಯೂ ನೆಹರು ತಿಳಿಸಿದ್ದಾರೆ.

ಕಾಂಗ್ರೆಸಿಗರು ಚುನಾವಣೆಗಳಲ್ಲಿ ಭಾ ಗವಹಿಸಬೇಕಾದ ರೀತಿ ಮತ್ತು ಪ್ರಚಾರ ವನ್ನು ನಡೆಸಬೇಕಾದ ಕ್ರಮಗಳ ಕುರಿತು ಮಾತನಾಡುತ್ತಾ ಪ್ರಧಾನಿಯವರು ಉ ಪಾತ್ತವೂ ಉಚ್ಚೈವೂ ಆದ ನುಟ್ಟನ್ನೂ ಸಂಪ್ರದಾಯವನ್ನೂ ಕಾಂಗ್ರೆಸಿಗರು ಈ ವಿಷಯದಲ್ಲಿ ಜಾಕೆಕೊಂಡು ಮತ್ತದನ್ನು ಕಾಯ್ದುಕೊಂಡು ಹೋಗಬೇಕೆಂದು ಹೇ ಳಿದ್ದಾರೆ. "ಕಾಂಗ್ರೆಸಿನ ಆತ್ಮವು ಪ್ರಕಾಶ ಮಯವಾಗಿದೆಯೆಂದಾಗಲೀ ಅದು ಈಗ ಲೂ ಶುಭ್ರವಾಗಿದೆಯೆಂದಾಗಲೀ ಹೇಳ ಲು ನಾನು ಸಿದ್ಧನಿಲ್ಲ. ಹಾಗಿದೆಯೆಂದು ನಾನು ಭಾವಿಸುವುದೂ ಇಲ್ಲ. ಆದಾಗ್ಯೂ ನಮ್ಮಲ್ಲಿ ಈ ಉನ್ನತ ಗುಣಗಳ ಸ್ವಲ್ಪಾಂ ಶವಿದೆ ಎಂದು ನನ್ನ ವಿಶ್ವಾಸ; ಈ ಅಂಶ ವೇ ನಮಗೆ ಶಕ್ತಿಯನ್ನು ಕೊಡುತ್ತದೆ ಎಂದು ನನ್ನ ನಂಬಿಕೆ. ಶಕ್ತಿಸ್ರೋತದ ಈ ತುಣುಕನ್ನು ಸಜ ನಾವು ಕಳೆದು ಕೊಂ ಡದ್ದಾದರೆ ನಮ್ಮ ಸಂಪೂರ್ಣವಾಗಿ ದಿ ಕ್ಕು ಪಾಲಾಗಿ ಹೋಗುತ್ತೇವೆ; ಸಂಸ್ಥೆ ಯು ನುಚ್ಚು ನೂರಾಗಿ ಬೀಳುತ್ತದೆ. ಆ ದುದರಿಂದ ಸ್ಥಳೀಯ ಅಥವಾ ಮಹಾ ಚುನಾವಣೆಯ ಬಗ್ಗೆ ಆತುರಪಟ್ಟು ನ ಮ್ಮನ್ನು ನಾವೇ ಕೆಳಗಿಳಿಸಿಕೊಳ್ಳಲು ಹೋಗಬಾರದು" ಎಂಬ ಪ್ರಾಸ್ತವಿಕ ಸತ್ಯ ವನ್ನೂ ನೆಹರು ನುಡಿದಿದ್ದಾರೆ.

ಕಾಂಗ್ರೆಸು ಚುನಾವಣೆಯಲ್ಲಿ ಯಶಸ್ವಿ ಯಾಗಿ ಗೆದ್ದು ಬರುವುದೆಂಬ ಬಗ್ಗೆ ಸಂಶ ಯವಿಲ್ಲವೆಂದು ನೆಹರು ಅಭಿಪ್ರಾಯಪಟ್ಟ ರು. "ನಮ್ಮೆಲ್ಲ ಬಲವನ್ನೂ ಉಪಯೋಗಿ ಸಿದ್ದಾದರೆ ನಾವು ಖಂಡಿತವಾಗಿಯೂ ಗೆ ಲ್ಲುತ್ತೇವೆ. ಆದರೆ ನನ್ನ ಪಟ್ಟಿಗೆ ಹೇಳು ವುದಾದರೆ ನಾವು ಗೆಲ್ಲಲಿ, ಅಥವಾ ಸೋ ಲಲಿ—ಅದು ದೊಡ್ಡ ವಿಷಯವಾಗಲಾರ ದು. ಚುನಾವಣೆಯಲ್ಲಿ ಭಾಗ ವಹಿಸಿ ನ ಮ್ಮ ಪಕ್ಷವನ್ನು ಮಂಡಿಸಿ ಮತಯಾಚನೆ ಯನ್ನು ಮಾಡುವಷ್ಟು ಧೈರ್ಯ ನಮ್ಮಲ್ಲಿ ರುವುದೇ ಮುಖ್ಯವಾದ ವಿಷಯ" ಎಂದು ನೆಹರು ಸಾರಿದ್ದಾರೆ.

ಭಯಪೂರಿತ ಮನೋಭಾವನೆಯು ನಾವು ಆತ್ಮ ರಕ್ಷಣೋಪಾಯಗಳನ್ನು ಅ ವಲಂಬಿಸುವಂತೆ ಸ್ಫೋರಿಸುತ್ತದೆ. ಅದು ಸಂಧಾನವಾಗಲಿ ಎಂಬ ಸೂಚನೆಗೆ ಒಡಂ ಬಡುತ್ತದೆ. ತನ್ನ ನ್ಯಾಯವಾದ ಹಕ್ಕಿನ ಲ್ಲೂ ತ್ಯಾಗವನ್ನು ಮಾಡಲು ಅದು ಮುಂದಾಗಿಸುತ್ತದೆ. ತನ್ನ ತಪ್ಪಿಲ್ಲದಿದ್ದ ರೂ ಇಳಿದಿಳಿಯಲ್ಲಿಯೇ ಮಾತು ಹೊರ ಬರುವಂತೆ ಮಾಡುತ್ತದೆ. ಕಾಂಗ್ರೆಸಿಗರ ಲ್ಲಿ ಇಂಥ ಭಯನಿರಬೇಕಾದ ಕಾರಣವೇ ಇಲ್ಲ ಎಂದು ನೆಹರು ಸ್ಪಷ್ಟ ಪಡಿಸಿದರು.:

ಚುನಾವಣೆಗಳನ್ನು ನಾವು ಧೈರ್ಯ ಸಾಹಸಗಳಿಂದ ಎದುರಿಸೋಣ ಎಂದು ನೆಹರು ಕಾಂಗ್ರೆಸಿನಿಗೆ ಕರೆಯನ್ನಿತ್ತರು. ಭಯಸೀಡಿತರಾಗುವುದು ಸಲ್ಲದೆಂದೂ ಅ ವರು ಉಪದೇಶಿಸಿದರು. ಆತ್ಮರಕ್ಷಣೆಯ, ತಪ್ಪನ್ನು ಒಪ್ಪಿಕೊಳ್ಳುವ, ಸಂಧಾನದ ಆ ತುರವನ್ನು ತೋರ್ಪಡಿಸುವ ದಾರಿ ನಮ್ಮ ದಾಗಬಾರದೆಂದು ಒತ್ತಿ ಹೇಳಿದರು. ನಮ್ಮ ದು ನ್ಯಾಯ ಸಮ್ಮತ ವಿಧಾನವಾಗಿರಲಿ ಎಂದರು.

ನಮ್ಮ ನಿಲುಮೆಯು ನ್ಯಾಯವಾದು ದೆಂದು ಖಚಿತವಾಗಿದ್ದರೆ ಮತ್ತು ನಾವು ಏನು ಮಾಡಲಿದ್ದೇವೆ ಎಂಬುದು ಸ್ಪಷ್ಟ ವಾಗಿ ಗೊತ್ತಿದ್ದರೆ ಇಂಥ ಧೈರ್ಯ ತಾನಾ ಗಿಯೇ ಬರುತ್ತದೆ ಎಂಬ ಸತ್ಯವನ್ನೂ ನೆ ಹರು ಹೊರಗೆಡವಿದರು. ನಾವು ಸ್ಪಷ್ಟ ತಪ್ಪಿತಸ್ಥರಾಗಿದ್ದರೆ ಮತ್ತು ಇಂಥ ತಪ್ಪು ನ್ನು ಮುಚ್ಚಿಕೊಂಡು ಸ್ಥಳೀಯಮಾನದ ಲಾ ಭವನ್ನು ಸಂಪಾದಿಸಲು ಆ—ಈ ಗುಂಪು ಗಳೊಡನೆ ಸಂಧಾನ ನಡೆಸಲು ಮುಂದಾ ದರೆ ಎಂದಿಗೂ ಸಾಹಸಪೂರ್ಣ ಮನೋ ಭಾವನೆ ಉಮೆಯಿಳಸು ಎಂದು ನೆಹರೂ ಎಚ್ಚರಿಸಿದರು.

"ಸರಕಾರವು ಎದುರಿಸಬೇಕಾಗಿ ಬಂ ದ ಕಷ್ಟಗಳ ತಿಳಿವಳಿಕೆಯು ಬೇರೆ ಯಾ ರಿಗಿಂತಲೂ ನನಗೆ ಹೆಚ್ಚು ಜೆನ್ನಾಗಿ ಗೊತ್ತಿದೆ. ಸರಕಾರವು ಏನು ಮಾಡಲು ತಪ್ಪಿಸಿದೆ ಮತ್ತು ಎಲ್ಲಿ ಮುಗ್ಗರಿಸಿದೆ ಎಂ ಬ ಬಗ್ಗೆ ಸಕ ನನಗೆ ಸಂಪೂರ್ಣ ಪರಿ ಜ್ಞಾನವಿದೆ. ಹೀಗೆ ನಾ ವು ಎಷ್ಟೋ ಸಂಗ ತಿಗಳಲ್ಲಿ ಹಿಂದುಳಿದಿದ್ದೇನೆ, ಮತ್ತೆಷ್ಟೋ ತಪ್ಪುಗಳನ್ನು ಮಾಡಿದ್ದೇನೆ ಎಂದು ಗೊ ತ್ತಿದ್ದರೂ ಸಹ, ಭಾರತೀಯ ಜನತೆಯ ಮುಂದೆ ಹೋಗಿ ನಿಂತು ಮತಯಾಚನೆ ಮಾಡಲು ನನಗೆ ನಾಚಿಕೆಯಾಗಲೀ ಸಂ ಕೋಚವಾಗಲೀ ತಪ್ಪನ್ನೊಪ್ಪಿಕೊಳ್ಳು ವಂಥ ದೈನ್ಯಭಾವವಾಗಲೀ ನನ್ನಲ್ಲಿ ಉಂ ಟಾಗದು ಜನರನ್ನು ನಮ್ಮ ಸರ್ವಶಕ್ತಿ ಸಹಿತವಾಗಿ ಸಮೀಪಿಸುವುದೇ ನನ್ನ ಇಚ್ಛೆಯಾಗಿದೆ. ನಾನು ಜನರನ್ನು ಸಮೀ ಪಿಸಿ ಅವರೊಡನೆ ನೇರವಾಗಿ ನಾವು ಮಾ ಡಲು ಹಿಂದುಳಿದ ಕೆಲಸಗಳ ಬಗ್ಗೆ ಮಾತ ನಾಡುತ್ತೇನೆ; ಅದೇ ಸಮಯದಲ್ಲಿ ನಾ ಡಿದ ಕೆಲಸಗಳನ್ನು ಸಹ ಜನರಿಗೆ ನಿವೇ ದಿಸಿಕೊಳ್ಳುತ್ತೇನೆ. ಅವರನ್ನು ಸಹಕಾರ ಗಳೆಂದು ತಿಳಿದು, ಅವರ ವಿಶ್ವಾಸವನ್ನು ಸಂಪಾದಿಸಿಕೊಂಡು ಮತಯಾಚನೆ ಮಾಡುವುದು ನನ್ನ ಪ್ರಯತ್ನ" ಎಂದು ನೆಹರು ನಿಸ್ಸಂ ಕೋಚವಾಗಿ ಕಾಂಗ್ರೆಸಿಗರಿಗೆ ಮಾರ್ಗ ದರ್ಶನ ಮಾಡಿದ್ದಾರೆ.

ಉಪರೋಕ್ತ ವಿಧಾನದಂತೆ ಕೆಲಸ ಮಾಡಿದರೆ ನಮಗೆ ತುಂಬ ಲಾಭವಿದೆ ಎಂದು ನೆಹರು ಹೇಳಿದ್ದಾರೆ. ಇದೇ ವೈಯ ಹಾರ್ಯವಾದುದೆಂದು ಸಹ ಅವರು ಸೂ ಚಿಸಿದ್ದಾರೆ. ನಾವು ಒಮ್ಮೆ ಜನರಲ್ಲಿ ವಿ ಶ್ವಾಸವನ್ನಿಟ್ಟಿದ್ದಾದರೆ ಅವರು ಸಹ

(೧೨ನೆ ಪುಟನೋಡಿರಿ)

ಅಧಿಕಾಧಿಕವಾಗುತ್ತಿರುವ
ನಿಮ್ಮ ವಿಶ್ವಾಸ
ನಮ್ಮ ರಜತ ಮಹೋತ್ಸವದ ವರ್ಷ
ಹಿಂದೆ (31—10—1955)
ರೂಪಾಯಿ:- 76 ಲಕ್ಷ
ಒಟ್ಟು ವಹಿವಾಟು ಸೊಬಲಗು
ಇಂದು:— (31—10—1956)
ರೂಪಾಯಿ:- ಒಂದು ಕೋಟಿ ಗೂ ಮಿಕ್ಕಿದೆ.
ದಿ ವಿಜಯ ಬೇಂಕ್ ಲಿಮಿಟೆಡ್
ಪ್ರಧಾನ ಕಛೇರಿ: ಮಂಗಳೂರು—3.
THE VIJAYA BANK LTD.

ಕನ್ನಡಿಗರ ವೈಭವ

ಹಂಪೆಯ ನೋಟವು ಇಂದಿಗೂ ರಮಣೀಯವಾಗಿದೆ!!

ತನ್ನ ಭಗ್ನಾವಶೇಷಗಳ ಮೂಲಕ ತನ್ನವರ ಹಿಂದಿನ ಜೆಂಪನ್ನು ಸಾರುತ್ತಿರುವ, ಈಗ ಹಾಳುಬಿದ್ದಿರುವ ಹಂಪೆ ಕನ್ನಡ ನಾಡಿನ ಗತ ವೈಭವದ ಉಜ್ವಲ ಸ್ಮಾರಕ. ಹಂಪೆಯ ಹಿಂದಿನ ವೈಭವ ಹಾಗೂ ಇಂದಿನ ಅದರ ಹೀನಸ್ಥಿತಿ-ಇವೆರಡನ್ನು ಅವಲೋಕಿಸಿದಲ್ಲಿ ಕಾಲದ ಮಹಿಮೆಯು ಅವಿಚ್ಛಿನ್ನವಾಗಿ ನಡೆದಿದೆ ಎಂಬುದು ಕಣ್ಣಿಗೆ ನಾಡಷ್ಟನ್ನು ತನ್ನ ಜೀವಮಾನದಲ್ಲಿ ಒಮ್ಮೆಯಾದರೂ ಕನ್ನಡ ನಾಡಿನ ಔನ್ನತ್ಯವನ್ನು ಸಂಸ್ಕೃತಿಯ ತವರ್ಮನೆಯಾದ ಹಂಪೆಯನ್ನು ನೋಡಲೇಬೇಕು! ಈಗಿನ ಹಂಪೆಯೇ ಹಿಂದಿನ ವಿಜಯನಗರ.

ಪರಕೀಯರ ಆಕ್ರಮಣದಿಂದ ಹಿಂದೂ ಧರ್ಮದ ರಕ್ಷಣೆಯ ಉದ್ದೇಶದಿಂದಲೇ ವಿಜಯನಗರ ಸಾಮ್ರಾಜ್ಯವ ಸ್ಥಾಪನೆಯಾಯಿತು. ಈ ಮಹಾ ಚಕ್ರಾಧಿಪತ್ಯದ ರಾಜಧಾನಿಯೇ ವಿಜಯನಗರ ಅಥವಾ ಇಂದು ಹಾಳು ಕೊಂಪೆಯಾಗಿರುವ ಹಂಪಿ. ಇದು ತುಂಗಭದ್ರಾ ನದಿಯ ದಕ್ಷಿಣ ಕಿನಾರೆಯಲ್ಲಿ, ಹೊಸ ಪೇಟೆ ತಾಲೂಕಿನ ಹೊಸ ಪೇಟೆಯಿಂದ ೯ ಮೈಲುಗಳ ದೂರದಲ್ಲಿದೆ. ಹಿಂದೆ ಜಗತ್ತಿನಲ್ಲೇ ಇದಕ್ಕೆ ಸರಿಸಾಟಿಯಾದ ಭವ್ಯ ನಗರ ಬೇರೊಂದಿಲ್ಲವೆಂದು ಹೆಗ್ಗಳಿಕೆ ಪಟ್ಟುಕೊಳ್ಳುವಷ್ಟು ವೈಭವದ ವಿಜಯವನ್ನೇರಿಸಿ, ಏಷ್ಯಾ ಖಂಡದಲ್ಲಿ ನಾಗರಿಕರಿಂದ ಕೂಡಿದ್ದ ಹಂಪಿಯೆಂದರೆ ಇದೇ.

ಪ್ರಸಿದ್ಧ ತತ್ವಜ್ಞಾನಿ ಮಾಧವ ಅಥವಾ ವಿದ್ಯಾರಣ್ಯರೆಂಬ ಸಾಧುವರೇಣ್ಯರಿಂದ ದೈವಿಕ ಪ್ರೇರಣೆ ಹೊಂದಿದ—ಸಂಗಮ ರಾಜವಂಶದ ಸ್ಥಾಪಕ ಸಂಗಮನ ಈರ್ವರು ಪುತ್ರರಾದ ಹರಿಹರ ಮತ್ತು ಬುಕ್ಕರು ಕ್ರಿ. ಶ. ೧೩೩೬ರಲ್ಲಿ ವಿಜಯನಗರ ಚಕ್ರಾಧಿಪತ್ಯವನ್ನು ಸ್ಥಾಪಿಸಿದರು. ತುಂಗಭದ್ರೆಯ ಉತ್ತರ ತಟದಲ್ಲಿ ಆನೆಗುಡಿ ಅಥವಾ ಆನೆಗೊಂದಿಯಿತ್ತು. ವಿಜಯನಗರ ಸಾಮ್ರಾಜ್ಯದ ಪ್ರಥಮ ಪ್ರಧಾನಾಮಾತ್ಯರು ವಿದ್ಯಾರಣ್ಯರೇ. ಸುಮಾರು ಮೂರು ನೂರು ವರ್ಷಗಳ ತನಕ ಇಲ್ಲಿನ ಪ್ರಭುತ್ವವು ಪರಕೀಯ ಸಂಸ್ಕೃತಿ ಹಾಗೂ ಮನೋಭಾವಗಳ ಆಕ್ರಮಣ ವಿರುದ್ಧ, ನೆರೆಕರೆಯನರ ದುರಾಕ್ರಮಣಗಳನ್ನೆದಿರಿಸಿ ಹಿಂದೂ ಧರ್ಮದ ಆಧಾರ ಸ್ತಂಭ ಹಾಗೂ ಆಶ್ರಯ ಸ್ಥಾನವಾಗಿ ಮೆರೆಯಿತು.

ಸಾಮ್ರಾಜ್ಯ ಸ್ಥಾಪಕರಾದ ಹರಿಹರ (ಹುಕ್ಕ) ಬುಕ್ಕರು ಸಂಗಮ ರಾಜವಂಶದ ಸ್ಥಾಪಕರಾದ ಸಂಗಮನ ಐವರು ಮಕ್ಕಳಲ್ಲಿ ಇಬ್ಬರು. ಪ್ರಜಾಪ್ರಿಯ ರಾಜನಾದ ಮೊದಲನೆಯ ಹರಿಹರನ ಪ್ರಜಾರಂಜನೆಯ ತರುವಾಯ ಅವನಿಗಿಂತಲೂ ಪ್ರಸಿದ್ಧನಾದ ಮೊದಲನೆಯ ಬುಕ್ಕನು ವಿಜಯ ನಗರದ ಗದ್ದಿಗೆಯನ್ನೇರಿದನು. ಇವರಿಬ್ಬರಲ್ಲಿ ಇವನ ಒಂದು ರಾಜ್ಯಭಾರವು ಕ್ರೈಸ್ತ ದೇಶಕ್ಕೆ ಹೋಗಿತ್ತು. ಜೈನ ಮತ್ತು ವೈಷ್ಣವ ಮತೀಯರ ಮೈತ್ರಿಗಾಗಿ ಇವನು ಪ್ರಯತ್ನ ಮಾಡಿ ಗೆದ್ದನು.

ಇವನ ಕಾಲಾನಂತರ ಎರಡನೆಯ ಹರಿಹರನು ವಿಜಯ ನಗರ ಸಿಂಹಾಸನಕ್ಕೆ ಇವನ ಉತ್ತರಾಧಿಕಾರಿಯಾದನು. ಎರಡನೆ ಹರಿಹರನ ಅರಸೊತ್ತಿಗೆಯ ಕಾಲದಲ್ಲಿ ವಿಜಯ ನಗರ ಚಕ್ರಾಧಿಪತ್ಯವು ದಕ್ಷಿಣ ಭಾರತದಲ್ಲೇ ವಿಸ್ತರಿಸಿಕೊಂಡಿತ್ತು. ಕೈಸ್ತನಾಗಿದ್ದರೂ ರಾಜನು ಅನ್ಯ ಮತ ಸಹಿಷ್ಣುವಾಗಿದ್ದನು ಅವನ ರಾಜ್ಯ ಕ್ಕೂ ಬಾದಾಮಿಗೂ ಅನವರತ ಕಾದಾಟ ಗಳು ನಡೆದೇ ಇದ್ದುವು. ಸಂಗಮ ವಂಶವು ಕ್ರಿ. ಶ. ೧೪೫೫ರಿಂದ ೧೪೮೫ರ ತನಕ ರಾಜ್ಯಾಡಳಿತೆ ನಡೆಸಿತು. ಹೊಯ್ಸಳರ ಮತ್ತು ಆದಿಯಾದವರ ಸತತಾನಂತರ ಅಧಿಕಾರಕ್ಕೆ ಬಂದ ಈ ಸಂಗಮ ವಂಶಾವಳಿಯಲ್ಲಿ ಒಂಭತ್ತು ಮಂದಿ ರಾಜರಿದ್ದರು.

೧೪೮೫ರಲ್ಲಿ ತನ್ನ ಯಜಮಾನನನ್ನು ಅಧಿಕಾರದಿಂದ ತಳ್ಳಿ, ನರಸಿಂಹ ಸಾಳುವನು ತಾನೇ ಗದ್ದಿಗೆಯನ್ನಾಕ್ರಮಿಸಿದನು. ಅವನ ಮರಣಾನಂತರ ಪಟ್ಟುಪು ಅವನ ಮಗನಾದ ಇಮ್ಮಡಿ ನರಸಿಂಹನಿಗೆ ಸೇರಿತು. ಸಾಳುವ ವಂಶದಲ್ಲಿ ಇಬ್ಬರೇ ರಾಜರು. ಕೊನೆಯವನು ನರಸನಾಯಕನ ಮಗ ವೀರನರಸಿಂಹನಿಂದ ಪದಚ್ಯುತಿಗೊಳಿಸಲ್ಪಟ್ಟನು. ವೀರ ನರಸಿಂಹನು ತುಳುವ ವಂಶದ ರಾಜನು. ವಿಜಯನಗರ ರಾಜಶಿರೋಮಣಿ, ಕಡುಗಲಿ ಕೃಷ್ಣದೇವರಾಯನೇ ಇವನ ಸಹೋದರನು. ಕೃಷ್ಣದೇವರಾಯನು ೧೫೦೯ರಲ್ಲಿ ವಿಜಯನಗರಾಧೀಶ್ವರನಾದನು. ಇವನ ಆಳಿಕೆಯಕಾಲದಲ್ಲಿ ವಿಜಯನಗರ ಸಾಮ್ರಾಜ್ಯವು ಕಟಕ್‌ನಿಂದ ಸಾಲ್ಸೆಟ್‌ನವರೆಗೂ, ಭಾರತದ ಅತಿ ದಕ್ಷಿಣ ಹಾಗೂ ಹಿಂದೂ ಮಹಾಸಾಗರದ ಕೆಲ ದ್ವೀಪಗಳಲ್ಲಿಯೂ ವಿಸ್ತರಿಸಿಕೊಂಡಿತ್ತು. ಕೃಷ್ಣದೇವರಾಯನು ಶೂರನೂ, ಕುದುರೆ ಸವಾರಿಯಲ್ಲಿ ನಿಷ್ಣಾತನೂ, ಅನ್ಯಮತ ಸಹಿಷ್ಣುವೂ, ದಯಾಪರನೂ ಆಗಿದ್ದನಲ್ಲದೇ, ಸಾಹಿತ್ಯಾರಾಧಕನೂ, ಸ್ವತಃ ಕವಿಯೂ ಆಗಿದ್ದನು. 'ಅಮುಕ್ತಮಾಲ್ಯದ' ಎಂಬ ಅಮೂಲ್ಯ ಗ್ರಂಥವು ಅವನ ಸ್ವಂತ ಕೃತಿ.

ಅವನ ಆಸ್ಥಾನದಲ್ಲಿದ್ದ 'ಅಷ್ಟದಿಗ್ಗಜ' ಗಳೆಂಬ ಎಂಟು ಮಂದಿಗಳ ಕವಿ ಸಮೂಹದಲ್ಲಿ ಅಲಸಾನಿ ಪೆದ್ದಣ್ಣನು ರಾಜಕವಿ (Poet Laureate) ಯಾಗಿದ್ದನು. ಪ್ರಖ್ಯಾತ ವಿದೂಷಕನೂ, ಪೆಕರೊಂಡ ಬಡಿಹಗಾರನೂ ಆದ ತೆನಾಲಿ ರಾಮಕೃಷ್ಣನು ಕವಿಗಳಲ್ಲೊಬ್ಬನು. ತಿಮ್ಮರಸು ಅಥವಾ ಅಪ್ಪಾಜಿ ಕೃಷ್ಣರಾಯನ ಸ್ಥಾನಿ.

ಕೃಷ್ಣದೇವರಾಯನ ನಂತರ ೧೫೩೦ರಲ್ಲಿ ಸಿಂಹಾಸನವನ್ನೇರಿದ ಅವನ ಸಹೋದರ ಅಚ್ಯುತರಾಯನು ಅಂಸೊತ್ತಿಗೆ ನಡೆಸಲು ಅಸಮರ್ಥನಾಗಿದ್ದನು. ಅವನ ಸುತಣಾನಂತರ ಅವನ ತಮ್ಮಂದಿರಾದ ಸೋದಲನೆ ವೆಂಕಟ ಹಾಗೂ ಸದಾಶಿವ ರಾಯ ಇವರು ಅನುಕ್ರಮವಾಗಿ ಅಧಿಕಾರಕ್ಕೆ ಬಂದರೂ, ಅಡಳಿತೆಯ ಸೂತ್ರವು ಪ್ರಧಾನಿ ರಾಮರಾಯನ ವಶವಿತ್ತು. ತಾನು ರಾಜನಾದ ನಂತರ ರಾಮರಾಯನು ತನ್ನ ಅನಿಶ್ಚಿತ ಒಪ್ಪಂದಗಳಿಂದ ನೆರೆ ರಂಜ್ಯಗಳ ಜನರ ಸಹಾನುಭೂತಿಯನ್ನು ಕಳೆದುಕೊಂಡನು. ವಿಜಾಪುರ, ಗೋಲ್ಕೊಂಡ, ಅಹ್ಮದ್ ನಗರ, ಬೀದರ್-ಇವೇ ಮೊದಲಾದ ಮಹಮ್ಮದೀಯ ರಾಜ್ಯಗಳ ಅಧಿಪತಿಗಳು ರಾಮರಾಯನಿಗೆ ವಿರುದ್ಧವಾಗಿ ವ್ಯೂಹರಚನೆ ಮಾಡಿದರು. ದೀರ್ಘಕಾಲದ, ಶತೃತ್ವವು ೧೫೬೫ರ ಜನವರಿ ೨೩ರಂದು ತಳಿಕೋಟೆಯ ಯುದ್ಧಾಂಗಣದಲ್ಲಿ ಕದನ ರೂಪದಲ್ಲಿ ಸಿಡಿಯಿತು. ತಾಳಿಕೋಟೆಯು ಕದನವೆಂದು ಪ್ರಸಿದ್ಧವಾದ ಈ ಕಾದಾಟದಲ್ಲಿ ವಿಜಯನಗರದ ಸೇನೆಗಳು ಸೋಲಿಸಲ್ಪಟ್ಟು, ಸುಲ್ತಾನ ಹುಸ್ಸೇನ ನಿಜಾಮ್ ಷಾನಿಂದ ರಾಮರಾಯನ ಶಿರಚ್ಛೇದನವಾಯಿತು. ನಂಬಲಶಕ್ಯವಾದ ಭೀಕರ ಆಕ್ರತ್ಯಗಳನ್ನೆಸಗಿತು ಮುಸಲಸೇನೆ. ವೈಭವದ ನೆಲೆವೀಡಾಗಿದ್ದ ವಿಜಯ ನಗರವು ತನ್ನ ವೈಭವ ಸರ್ವಸ್ವವನ್ನು ಕಳೆದುಕೊಂಡು ಹಂಪೆಯೆಂಬ ಹಾಳು ಕೊಂಪೆಯಾಯಿತು. ಇಂತು ವಿಜಯನಗರದ ವಿನಾಶವಾಯಿತು.

ವಿಜಯ ನಗರ ಅಥವಾ ಹಂಪಿಯು ಪುರಾಣಪ್ರಸಿದ್ಧವಾದುದು. ಹೊಸ ಪೇಟೆಯಿಂದ ಏಳು ಮೈಲುಗಳ ದೂರದಲ್ಲಿ ಕಮಲಾಪುರವಿದೆ. ಇಲ್ಲಿಂದ ಹಂಪಿಗೆ ಹೋಗುವಾಗ ಅರಮನೆಯ ಒಂದು ಭಾಗವಾದ ಸ್ನಾನ ಗೃಹವು ಸಿಗುವುದು. ಹಂಪಿಯಿಂದ ಹೋಗುವಾಗ ಭಗವಾನ್ ನರಸಿಂಹನ ದೊಡ್ಡ ವಿಗ್ರಹವಿದೆ. ಇದರ ಉತ್ತರಕ್ಕೆ ಹೇಮಕೂಟಗಿರಿಯೂ, ಕೆಲವು ದೇವಾಲಯಗಳೂ ಕಂಡುಬರುವವು. ಇನ್ನೂ ಮುಂದೆ ಹೋದಾಗ ಹಂಪೆಯ ಪ್ರಸಿದ್ಧ ವಿರೂಪಾಕ್ಷ ಅಥವಾ ಪಂಪಾಪತಿ ದೇಗುಲ ಕಾಣಿಸಿಗುವುದು. ನದಿ ಕಿನಾರೆಯ ಉತ್ತಾನ್ಯ ದಿಸೆಯಲ್ಲಿ ರಾಮಸ್ವಾಮಿ ಹಾಗೂ ವಿಜಯವಿಠಲ ಮಂದಿರ ಇವುಗಳು ಇವೆ. ಪಂಪಾಪತಿ ದೇವಾಲಯದ ಸುತ್ತಾರು ಅರ್ಧಮೈಲು ಈಶಾನ್ಯದಲ್ಲಿ ರಾಮಾಯಣ ಪ್ರಸಿದ್ಧವಾದ ಋಷ್ಯಮೂಕ ಪರ್ವತವೂ, ಚಕ್ರ ತೀರ್ಥವೂ ಇವೆ. ಪರ್ವತದ ಮೂರು ಪಾರ್ಶ್ವಗಳಲ್ಲಿ ನದಿ ತುಂಗಭದ್ರೆ ಪ್ರವಹಿಸುತ್ತಾಳೆ. ಉತ್ತರಕ್ಕೆ ಸೀತಾ ಸರೋವರವೂ, ರಾವಣಾಸುರನಿಂದ ಅಪಹೃತಳಾದ ಜಾನಕಿಯು ಬಲಾತ್ಕಾರದಿಂದೊಯ್ಯಲ್ಪಡುತ್ತಿದ್ದ ವೇಳೆ ಅವಳು ಬಿಳುಟ ಆಭರಣಗಳು ಬಿದ್ದ ಸ್ಥಳವೆಂದು ತೋರಲಾಗುತ್ತಿರುವ ಒಂದು ಗವಿಯೂ ಇವೆ.

ವಿರೂಪಾಕ್ಷ ಮಂದಿರದ ನಾಲ್ಕು ಮೈಲು ಪೂರ್ವಕ್ಕೆ ಮೌಲ್ಯವಂತ ಪರ್ವತವಿದೆ. ಸುಗ್ರೀವನೊಡನೆ ಒಪ್ಪಂದದ ಬಳಿಕ ಶ್ರೀ ರಾಮಚಂದ್ರನು ಲಕ್ಷ್ಮಣನೊಡನೆ ವಸತಿ ಮಾಡಿಕೊಂಡಿದ್ದನೆಂದು ಹೇಳಲಾಗುವ ಪ್ರಶ್ರವಣಗಿರಿಯೂ ಇದೇ ಎಂದು ನಂಬುತ್ತಾರೆ. ಆದರೆ ಭವಭೂತಿಯ ಅಭಿಪ್ರಾಯದಂತೆ ಇವೆರಡು ಬೇರೆ ಬೇರೆ ಪರ್ವತಗಳು. ಮೌಲ್ಯವಂತಕ್ಕೆ 'ಸ್ಪಟಿಕಶಿಲೆ'ಯೆಂದೂ ಹೆಸರಿದೆ.

ತುಂಗಭದ್ರೆಯ ಉತ್ತರ ಕಿನಾರೆಯಲ್ಲಿನ ಆನೆಗುಡಿ ಅಥವಾ ಆನೆಗೊಂದಿಯೇ ಪುರಾಣ ಪ್ರಸಿದ್ಧವಾದ ಕಿಷ್ಕಿಂಧೆ. ಇದು ಹೊಸಪೇಟೆಯಿಂದ ಮೂರು ಮೈಲು ದೂರದಲ್ಲಿದ್ದು, ಇಲ್ಲಿಂದ ಎರಡು ಮೈಲು ನೈಋತ್ಯದಲ್ಲಿ ಪಂಪಾ ಸರೋವರವಿದೆ. ವಾಯವ್ಯದಲ್ಲಿರುವುದೇ ಹನುಮಂತನ ಜನ್ಮಸ್ಥಳವಾದ ಅಂಜನಿ ಪರ್ವತ. ಅಲ್ಲಲ್ಲೇ ಸ್ವಲ್ಪ ದೂರದಲ್ಲಿಯೇ ಇರುವ ಗುಹೆಯೊಂದರಲ್ಲಿ ಶಬರಿ ವಾಸಿಸುತ್ತಿದ್ದಳಂತೆ. ನಿಂಬಾಪುರದ ಬಳಿಯಲ್ಲಿ ವಾಲಿ(ಸೆ.ಗ್ರೀನಸ್ಟನ ಅಗ್ರಜ)ಯ ದಹನಾವಶೇಷಗಳು ಕಂಡುಬರುತ್ತವೆ.

ಪಂಪಾ ಸರೋವರವು ಭರತಖಂಡದ ಅನೇಕ ಪುಣ್ಯ ತೀರ್ಥಗಳಲ್ಲೊಂದು. ವಿರೂಪಾಕ್ಷ ಕ್ಷೇತ್ರದ ಯಾತ್ರಿ ನಂತರ ಯಾತ್ರಿಕನು ಕ್ಷೌರ ಮಾಡಿಸಿಕೊಂಡು ಉಪವಾಸ ವ್ರತಾಚರಣೆ ಮಾಡಬೇಕು. ಇಲ್ಲದಿದ್ದರೆ, ಅವನು ಮನೆಗೆ ಮರಳುವಾಗ ಪಾಪಗಳೂ ಅವನೊಡನೆ ಹೋಗುತ್ತವೆ ಎಂಬ ನಂಬಿಕೆಯಿದೆ.

ಹಂಪಿಯಲ್ಲಿ ಕಾಣಿಸಿಗುವ ಭಗ್ನಾವಶೇಷಗಳು ಕನ್ನಡ ನಾಡಿನ ಪ್ರಾಚೀನ ಸಂಸ್ಕೃತಿಯ ಕಳೆದುಳಿದ ಕುರುಹುಗಳು ಮಾತ್ರವೇ ಆಗಿದ್ದರೂ ಅವುಗಳಿಂದ ಇಂದಿಗೂ ನಾವು ಸ್ಫೂರ್ತಿಯನ್ನು ಪಡೆಯಬಹುದು; ಅಲ್ಲದೆ ಸಂಸ್ಕೃತಿಯು ಹಿರಿಮೆಯನ್ನೂ ಮನಗಾಣಬಹುದು.

ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಿಸಿಕೊಳ್ಳುವುದು ಪ್ರತಿಯೊಬ್ಬರ ಸಹಜ ಆಸೆ

* *

ಮೈಸೂರು ಸ್ಯಾಂಡಲ್ ಸಾಬೂನು

ನಿಮ್ಮ ಸೌಂದರ್ಯವನ್ನು ಕಾಪಾಡಲು ವೃದ್ಧಿಮಾಡಲು ಒಂದು ನಿಶ್ಚಿತ ಸಾಧನ

ಅನೇಕ ಸುಗಂಧದ್ರವ್ಯಗಳನ್ನು ಜಾಣತನದಿಂದ ಇದರಲ್ಲಿ ಸೇರಿಸಲಾಗಿದೆ.

ಒಮ್ಮೆ ಉಪಯೋಗಿಸಿ ನೋಡಿ

ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ದೊರೆಯುತ್ತದೆ

* *

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು

ನಂಬರು: ಐ. ಎಸ್. ಟಿ. ಎಂ. ಎ.

ಮಕ್ಕಳು

ಚಿಕ್ಕವರಲ್ಲಿ ಧೈರ್ಯ ಪ್ರವೃತ್ತಿಯನ್ನು ಹುಟ್ಟಿಸಿರಿ!

ಮಕ್ಕಳನ್ನು ಪ್ರೀತಿಸದವರು ಬಹು ವಿರಳ— ಬಡತನದ ಬೇನೆಯಲ್ಲಿ ಬಳಲುತ್ತಿರುವ ಹೆತ್ತವರು ಕೂಡಾ ತಮ್ಮ ಚಿಕ್ಕ ಮಕ್ಕಳಿಗೆ ತುಟಿಯಂಚಿನಲ್ಲಿ ಮಿನಗುವ ಹುಸಿನಗುವನ್ನು ಕಂಡು ತಮ್ಮ ಕಷ್ಟ ಕಾರ್ಪಣ್ಯಗಳನ್ನು ಮರೆತು, ಸಂತೋಷದಲ್ಲಿ ತಲ್ಲೀನರಾಗಿ ಮನದಣಿಯೆ ಮುದ್ದಿಸಬೆ ಇರುವುದೇ ವಿರಳವೆನ್ನಬಹುದು. ಹೆತ್ತವರೆಲ್ಲರೂ ಮಕ್ಕಳೇ ತಮ್ಮ ಸರ್ವಸ್ವವೆಂದು ಭಾವಿಸಿ, ಅವರ ಏಳಿಗೆಗಾಗಿ ದುಡಿಯುತ್ತಿರುವುದು ಸ್ವಾಭಾವಿಕವು.

ಮಕ್ಕಳು ತಮ್ಮ ಹೆತ್ತವರ ಸರ್ವಸ್ವ ಮಾತ್ರವಲ್ಲ; ಒಂದು ರಾಷ್ಟ್ರದ ಭವಿಷತ್ತಿನ ಅಕ್ಷಯಮೂಲ್ಯ ಸಂಪತ್ತೆಂಬುದರಲ್ಲಿ ಸಂದೇಹವಿಲ್ಲ. ಒಂದು ರಾಷ್ಟ್ರದ ಸರಕಾರವು ತನ್ನ ರಾಷ್ಟ್ರದ ಮಕ್ಕಳ ಉನ್ನತಿಗಾಗಿ ಎಷ್ಟರಮಟ್ಟಿಗೆ ದುಡಿಯುತ್ತಿದೆ; ಅವರ ಅಭಿವೃದ್ಧಿಗಾಗಿ ಎಂತಹ ಯೋಜನೆ, ಅನುಕೂಲತೆಗಳನ್ನು ಒದಗಿಸುತ್ತಿದೆ ಎಂಬುದರ ಮೂಲಕ ಆ ರಾಷ್ಟ್ರದ ಭವಿಷತ್ತಿನ ಅಭಿವೃದ್ಧಿಯನ್ನು ಈಗಲೇ ಊಹಿಸಬಹುದು. ಮಕ್ಕಳು ಒಂದು ರಾಷ್ಟ್ರದ ಮುಂದಿನ ಜನಾಂಗವು. ಆ ಜನಾಂಗವು ಉಚ್ಚಮಟ್ಟದ ತರಬೇತಿ, ಸದ್ಭಾವನೆಗಳಿಂದ ತುಂಬಿ ಬೆಳೆದು ರಾಷ್ಟ್ರ ಕಲ್ಯಾಣವಾಗಬೇಕಾದರೆ ಚಿಕ್ಕಂದಿನಿಂದಲೇ ಅವರಿಗೆ ತಕ್ಕ ಆದರ್ಶಜೀವನ ಕ್ರಮದ ತರಬೇತಿ ದೊರಕುವಂತಾಗಬೇಕು.

ಮಕ್ಕಳ ಪಾಲನೆಯಲ್ಲಿ ತುಂಬಾ ಜಾಗ್ರತೆ ಬೇಕು. ಹೆತ್ತವರೂ ಶಿಕ್ಷಕರೂ ಮಕ್ಕಳ ಹುಟ್ಟೊಲವುಗಳನ್ನು ತಿಳಿದು ತಕ್ಕ ತರಬೇತಿ ಕೊಡಬೇಕಾಗಿದೆ. ಈಗ ನಿರ್ಧರಿಸಲ್ಪಟ್ಟ ಶಾಲಾ ಪ್ರಾಯದ ಮೊದಲು ಕೂಡಾ ಮಕ್ಕಳಿಗೆ ತಕ್ಕ ತರಬೇತಿ, ಮಾರ್ಗದರ್ಶನ ಮಾಡುವ ಹೊಣೆಗಾರಿಕೆ ಹೆತ್ತವರ ಪಾಲಿಗೆ ತುಂಬಾ ಇದ್ದೇ ಇದೆ. ಶೈಶವ, ಬಾಲ್ಯ ಪ್ರಾಯದಲ್ಲೆಲ್ಲಾ ಮಗುವು ತನ್ನ ಸುತ್ತಮುತ್ತಲಿನವರನ್ನು ಅನುಕರಿಸುತ್ತಾ ಎಷ್ಟೋ ವಿಷಯಗಳನ್ನು ಕಲಿಯುವುದು. ಉತ್ತಮ ವಾತಾವರಣ, ಸಂಗಾತಿಗಳೊಂದಿಗೆ ತಕ್ಕ ಮಾರ್ಗದರ್ಶನದಿಂದ ಮಗುವಿನ ಭವಿಷತ್ತು ಆದರ್ಶವಾಗಿ ರೂಪುಗೊಳ್ಳಬಲ್ಲುದು.

ಮಕ್ಕಳಲ್ಲಿ ಸಹಜವಾಗಿ ಹೊಂದಿಕೊಂಡಿರುವ ಭೀತಿ ಕೋಪ, ಅತ್ಯಾಸೆ, ಹೃತ್ಪೂರ್ವಕತೆ, ಆತ್ಮಸಿಗ್ಗೆಹ, ಸ್ವಾರ್ಥ ಇತ್ಯಾದಿ ಗುಣಗಳನ್ನು ಸಂದರ್ಭವರಿತು ತಕ್ಕ ರೀತಿಯಲ್ಲಿ ತರಬೇತಾಗುವಂತೆ ಯತ್ನಿಸಬೇಕು. ಮಕ್ಕಳಲ್ಲಿ ಸಹಜವಾಗಿ ಇರಬಹುದಾದ ಭೀತಿಯು ತೊಡಕು ದಾರಿಯಲ್ಲಿ ಸಾಗದಂತೆ ಮುಂಜಾಗ್ರತೆ ವಹಿಸಬೇಕು. ಮುಮ್ಮು, ಬೇತಾಳಗಳನ್ನು ಪರಿಕಲ್ಪಿಸಿ, ಮಗುವು ಆ ಛಲವಾಗಿ ಆಥವಾ ಇನ್ನಿತರ ಸಂದರ್ಭಗಳಲ್ಲಿ ಹೆದರಿಸಿದರೆ ಸ್ವಲ್ಪವೂ ಧೈರ್ಯವಿಲ್ಲದ ಅಂಜುಬುರುಕರಾಗುವಂತೆ ಪ್ರೇರೇಪಿಸಿದಂತಾಗುವುದು. ಇದರಿಂದ ಮುಂದೆ ಅಂಜುಬುರುಕನಾಗಿಯೇ ಬಾಳುವಂತಾಗುವ ದರಲ್ಲಿ ಆಶ್ಚರ್ಯವಿಲ್ಲ. ಈ ರೀತಿಯಲ್ಲಿ ಹಿರಿಯರೂ ಹೆತ್ತವರೂ ಮಕ್ಕಳಲ್ಲಿ ಭಯ, ಭೀತಿಯನ್ನು ಬೆಳೆಸದೆ ಹಿರಿಯರಿಗೆ ತಾನು ಅವಿಧೇಯನಾಗಿ ವರ್ತಿಸಿದರೆ ಹಿರಿಯರ ಕೋಪಕ್ಕೆ ತಾನು ಗುರಿಯಾಗಬೇಕಾಗುವುದೆಂದೂ, ಸಮಾಜದಲ್ಲಿ ನೀತಿ ಬಾಹಿರನಾಗಿ ವರ್ತಿಸಿದರೆ ತಾನು ಇತರರ ದೂಷಣೆಗೆ ಗುರಿಯಾಗುವೆನೆಂದೂ ಮಕ್ಕಳಲ್ಲಿ ತಿಳಿಪಡಿಕೆ ಹುಟ್ಟುವಂತೆ ಯತ್ನಿಸಬೇಕು. ಸ್ವಾರ್ಥವು ವಿಷಮತೆಗೇರಿದ ಮಗುವು ಇತರರ ಸೊತ್ತುಗಳನ್ನು ತನ್ನದನ್ನಾಗಿ ಮಾಡಿಕೊಳ್ಳುವ ಯತ್ನಕ್ಕೆ ತೊಡಗಬಹುದು. ಇದು ಅಸಾಧ್ಯವೆಂದಲ್ಲಿ ಕಳ್ಳತನದಿಂದಲಾದರೂ ತನ್ನದನ್ನಾಗಿ ಮಾಡಿಕೊಳ್ಳಲೂ ಯತ್ನಿಸಬಹುದು. ಸ್ವಾರ್ಥವು ಹೀಗೆ ಬೆಳೆಯದಂತೆಯೂ, ರಚನಾತ್ಮಕವಾಗಿ ತಾನೂ ಇತರರಂತೆಯೇ ಪ್ರಯತ್ನಪೂರ್ವಕವಾಗಿ ದುಡಿಯಬೇಕೆಂದೂ ತಕ್ಕ ಸ್ಥಾನಮಾನಗಳನ್ನು ಪಡೆಯಬೇಕೆಂದೂ ಮಗುವಿನಲ್ಲಿ ಪ್ರೇರಣೆಯುಂಟಾಗುವಂತೆ ಮಾರ್ಗದರ್ಶನವು ಅಗತ್ಯವಿದೆ.

ತನ್ನ ಪರಿಸರದಲ್ಲಿ ವ್ಯವಹಾರಕ್ಕೆ ತೊಡಗುವ ನೊದಲು ಮಗುವಿನಲ್ಲಿ ನುರ್ಗುಣಗಳು ಇರುವುದು ಅಸಂಭವನೀಯ. ಅಷ್ಟರ ತನಕ ಮಗುವಿನ ನಡತೆಯು ಪರಿಶುದ್ಧ ಆದುದರಿಂದಲೇ ಚಿಕ್ಕ ಮಕ್ಕಳನ್ನು "ದೇವರ ಪ್ರತಿನಿಧಿಗಳೆಂದು ಕರೆಯುವರು. ಗುಣ ನಡತೆಯಲ್ಲಿ ಕೊಂಚವೂ ಲೋಪದೋಷಗಳಿಲ್ಲದ ಮಗುವು ಭಿನ್ನ ಅಭಿರುಚಿಯ ತನ್ನ ಅನುಯಾಯಿಗಳೊಂದಿಗೆ ಕಲೆತು, ವ್ಯವಹಾರಕ್ಕೆ ತೊಡಗಿ, ಅನುಕರಣೆಯ ಮೂಲಕ ಹಲವು ಬಗೆಯ ಹೊಸ ಅಭ್ಯಾಸಗಳಲ್ಲಿ ವ್ಯವಹರಿಸಲು ತೊಡಗುವುದು.

ಯೋಗ್ಯ ವಾತಾವರಣದಲ್ಲಿ ಬೆಳೆದ ಮಗುವು ಉತ್ತಮ ಗುಣ ನಡತೆಗಳನ್ನು ಕಲಿತು ಮುಂದೆ ತನ್ನ ಹೊಣೆಗಾರಿಕೆಯನ್ನರಿತು ಕರ್ತವ್ಯ ದಕ್ಷನಾಗಲು ಸಾಧ್ಯವಾಗುವುದು. ಎಲ್ಲಾ ಬಗೆಯ ಗುಣ, ನಡತೆಗಳೂ ಬೆಳೆಯುವುದು ಬಾಲ್ಯ ಮತ್ತು ಕೌಮಾರ್ಯಾವಸ್ಥೆಯಲ್ಲಾದುದರಿಂದ ಆ ಸಮಯ ಹೆತ್ತವರೂ, ಅಧ್ಯಾಪಕರೂ, ಹಿರಿಯರೂ ಮಕ್ಕಳಿಗೆ ತಕ್ಕ ಮಾರ್ಗದರ್ಶನ ಮಾಡಬೇಕಾಗಿದೆ.

ಜೀಜಾಬಾಯಿಯು ತನ್ನ ಮಗನಾದ ಶಿವಾಜಿಗೆ ಬಾಲ್ಯದಲ್ಲಿ ರಾಮಾಯಣ, ಮಹಾ ಭಾರತದ ವೀರರ ಕಥೆಗಳನ್ನು ಮನಮೆಚ್ಚುವಂತೆ ಹೇಳಿ ತನ್ನ ಮಗನೂ ಒಬ್ಬ ವೀರ ಪುರುಷನಾಗುವಂತೆ ಮಾರ್ಗದರ್ಶನ ಮಾಡಿದಳು. ಪರಿಣಾಮವಾಗಿ ವೀರನೂ, ಧೀರನೂ ಆಗಿ ಬೆಳೆದ ಶಿವಾಜಿಯು, ಮೊಗಲರ ಹಿಂಸೆಗೆ ತುತ್ತಾಗಿದ್ದ ಹಿಂದೂಗಳ ಪುನರುತ್ಥಾನಕ್ಕೆ ಹೋರಾಡಿ ಹಿಂದೂರಾಜ್ಯ ಸ್ಥಾಪಿಸಿ, ಛತ್ರಪತಿಯಾಗಿ ಮೆರೆದನು.

ಇಂಗ್ಲೆಂಡ್ ದೇಶದ ರಿಚರ್ಡ್ ಕ್ಲೈವನ ಮಗನಾದ ರೋಬರ್ಟ್ ಕ್ಲೈವನು ತೀರಾ ತುಂಟ ಹುಡುಗನಾಗಿದ್ದನು. ಊರವರಿಗೆ ಅವನ ತಂಟೆಯನ್ನು ಸಹಿಸುವುದೇ ಕಷ್ಟವಾಗಿತ್ತು. ಆದಿತ್ಯವಾರದಿನ ಎಲ್ಲರೊಂದಿಗೆ ಪ್ರಾರ್ಥನೆಗಾಗಿ ಇಗರ್ಜಿಗೆ ಹೋಗವನು ಪ್ರಾರ್ಥನೆ ಮಾಡುವ ಬದಲು ಇಗರ್ಜಿಯ ಮುಂಭಾಗದ ಎತ್ತರದ ಶಿಖರದಲ್ಲಿರಿಸಿದ್ದ ಕ್ರಾಜಿಯ ಬಳಿಗೆ ಏರಿ ಕ್ರಾಜಿಯನ್ನು ಹಿಡಿದುಕೊಂಡು ಕುಳಿತಿದ್ದಾಗ ಪ್ರಾರ್ಥನೆ ಮುಗಿಸಿ ಹೊರಬಂದ ಜನರು ಈ ಆಪಾಯಕಾರೀ ದೃಶ್ಯವನ್ನು ಕಂಡು ಬೆರಗಾಗಿ ಬೊಬ್ಬಿಡಲು, ಈ ವರ್ತಮಾನವು ಮನೆಗೆ ತಲಪಲು ಅವನ ತಾಯಿಯು ಇಗರ್ಜಿಯ ಬಳಿಗೆ ಬಂದ ವಳು ಹೆದರದೆ, ಅತನು ಶಿಖರದ ಮೇಲಕ್ಕೆ ಹೇಗೆ ಏರಿರುವನೋ ಹಾಗೆಯೇ ಕೆಳಗಿಳಿಯುವನು ಎಂದು ನಿರ್ಭೀತಳಾಗಿ ಹೇಳಿದಳು. ಇಂತಹ ಪುಂಡತನಗಳನ್ನು ಮಾಡಬಾರದೆಂದೂ, ಆದರಿಂದ ಆಪಾಯ ವಿದೆಯೆಂದೂ ತಿಳಿಸಿರಬಹುದಲ್ಲದೆ ಆದ ಕ್ಕಾಗಿ ಅವನಿಗೆ ಕಠಿಣ ಶಿಕ್ಷೆಗಳನ್ನು ಹೆತ್ತವರು ವಿಧಿಸಿರಲಾರರು. ಮುಂದೆ ಅದೇ ಹುಡುಗನು ಈಸ್ಟ್ ಇಂಡಿಯಾ ಕಂಪೆನಿಯ ವರೊಂದಿಗೆ ಮದ್ರಾಸಿಗೆ ಬಂದು ಗುಮಾಸ್ತನಾಗಿ ಕೆಲಸಮಾಡಿದರೂ ಅದರಲ್ಲಿ ಅಭಿರುಚಿ ಇಲ್ಲದೆ ಸೈನ್ಯಕ್ಕೆ ಸೇರಿ ಆರ್ಕಾಟಿನ ವೀರನೆನಿಸಿಕೊಂಡನಲ್ಲದೆ 'ಹಿಂದೂ ದೇಶದಲ್ಲಿ ಆಂಗ್ಲರಾಜ್ಯ ಸಂಸ್ಥಾಪಕ"ನೆಂದು ಗೌರವಿಸಲ್ಪಟ್ಟನು.

ಮಕ್ಕಳಲ್ಲಿ ತೋರಿಬರುವ ಅಧಿಕ ಚಟುವಟಿಕೆಗಳನ್ನು ಹೆತ್ತವರೂ, ಹಿರಿಯರೂ ಅಡಗಿಸದೆ ತಕ್ಕ ಮಾರ್ಗದರ್ಶನದಿಂದ ಆದರ್ಶ ರೀತಿಯಲ್ಲಿ ಬೆಳೆಯುವಂತೆ ಯತ್ನಿಸಬೇಕಾಗಿದೆ.

ಶಾಲೆಯಲ್ಲಿ ಶಿಕ್ಷಕರು ಮಕ್ಕಳ ಶಾರೀರಿಕ ಮತ್ತು ಮಾನಸಿಕ ಸ್ಥಿತಿಗಳಿಗನುಸರಿಸಿ, ಪ್ರಾಯಶ್ಚಾಪ್ತದ ಶಿಕ್ಷಣಗ್ರಂಥಗಳಂತೆ ವಿದ್ಯಾಭ್ಯಾಸವನ್ನು ಕೊಡಿಸುವುದು ಅಗತ್ಯವು. ಮಕ್ಕಳ ನಡತೆಯಲ್ಲಿ ಕಂಡು ಬರುವ ನ್ಯೂನತೆಗಳನ್ನು ತಿಳಿದು ಸಂದರ್ಭವರಿತು ಪರಿಹಾರ ಕ್ರಮವನ್ನು ಪ್ರಯೋಗಿಸಬೇಕು. ದೇಶದ ಮೂಲೆ ಮೂಲೆಗಳಲ್ಲೆಲ್ಲಾ ನಿಬಿಡವಾದ ಜನಸಂಖ್ಯೆ ಇದ್ದರೆ ಸಾಲದು. ಸಂದರ್ಭೋಚಿತವಾಗಿ ತಮ್ಮ ಹೊಣೆಗಾರಿಕೆಯನ್ನರಿತು ಕರ್ತವ್ಯ ನಿಷ್ಠರಾಗಿ ದುಡಿದು ಬಾಳು ಸಾರ್ಥಕವಾಗುವಪರ ಮೂಲಕ ನಾಡು ಶೋಭಿಸುವಂತಾಗಬೇಕು. ಮಕ್ಕಳು ನಾಡಿನ ಮುಂದಿನ ಜನಾಂಗವು. ನಾಡಿನ ಭವಿಷ್ಯದ ಬೆಳವಣಿಗೆಯು ಇಂದಿನ ಮಕ್ಕಳ ತರಬೇತಿಯನ್ನು ಹೊಂದಿಕೊಂಡಿದೆ. ಹೆತ್ತವರೂ ಶಿಕ್ಷಕರೂ ಸರಕಾರವೂ ನಾಡಿನ ಮಕ್ಕಳ ಪುರೋಭಿವೃದ್ಧಿಗಾಗಿ ವಿರಮಿಸದೆ ದುಡಿದು, ನಾಡು ಶೋಭಿಸುವಂತಾಗಲಿ!

ಶ್ರೀ ಶಿವರಾಮು ಕೆಟ್ಟಿ, ಮಟ್ಟಾಡಿ.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಶುಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಅಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಆಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ. 6/8; ½ ರಾತಲಿಗೆ ರೂ. 1/13

ಪ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಸೆನ್ಸಿ, ಮಂಗಳೂರು.
2. ವಿ. ವಿ. ಪೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ.

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ, ಮದ್ರಾಸ್—3.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.,

ಸ್ಥಾಪನೆ: ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಅಧಿಕೃತ ಬಂಡವಾಳ	...	ರೂ. 56,00,000
ಚಲಾವಣೆ ಬಂಡವಾಳ	...	ರೂ. 32,23,787
ವರ್ಗಣಿ (ಪಾಲು) ಬಂಡವಾಳ	...	ರೂ. 32,11,000
ತೆತ್ತ ಬಂಡವಾಳ	...	ರೂ. 27,45,000
ಕ್ಷೇಮನಿಧಿ	...	ರೂ. 15,00,000

ತಾ. 30-9-1956ರಲ್ಲಿ ನಮ್ಮ ಚಲಾವಣೆ ನಿಧಿ 10 ಕೋಟಿಗೂ ಮಿಕ್ಕಿದೆ

(ನವೋದಿತ ರಾಜ್ಯಗಳಲ್ಲಿ) ನಮ್ಮ ಶಾಖೆಗಳು

(ವಿಶಾಲ) ನವಮೈಸೂರು	59
ಆಂಧ್ರ ಪ್ರದೇಶ	14
ಕೇರಳ	13
ಬೊಂಬಾಯಿ	8
ಮದ್ರಾಸು	2

ಟಿ.ಎ.ಪೈ, ಬಿ ಕಾಂ.(ಜೊಂಬಾಯಿ) ಎಂ.ಎಲ್.ಎ., ಜನರಲ್ ಮೆನೇಜರ್. ಟಿ.ಎಂ.ಎ.ಪೈ, ಎಂ.ಬಿ., ಬಿ ಎಸ್. ಮೆನೇಜಿಂಗ್ ಡೈರೆಕ್ಟರ್.

The Canara Industrial & Banking Syndicate Ltd.

ಇನ್ನೊಂದು ಮೈಲುಗಲ್ಲು

ಹಿರಾಕುಡದ ಯೋಜನೆ

ಒರಿಸ್ಸದ ಭಾಗ್ಯಲಕ್ಷ್ಮಿ

ಮಹಾನದಿಗೆ ಅಡ್ಡವಾಗಿ ನಿರ್ಮಿಸಿರುವ ಮೂರು ಮೈಲಿಗಳ ಉದ್ದದ ಮಣ್ಣಿನ ಗಾರೆ ಹಾಗೂ ಕಾಂಕ್ರೀಟ್ ಅಣೆಕಟ್ಟೆಯ ಕೆಳಗಡೆ ಚಿಕ್ಕದೊಂದು ದ್ವೀಪವಿರುವುದು. ಈ ದ್ವೀಪದ ಹೆಸರನ್ನೇ ಈ ಅಣೆಕಟ್ಟೆಗೆ ಇಡಲಾಗಿದೆ. ಹಿರಾಕುಡ್ ದ್ವೀಪವನ್ನು ಸುರಮ್ಯವಾದ ಉದ್ಯಾನವನವನ್ನಾಗಿ ಪರಿವರ್ತಿಸಲಾಗಿದೆ.

ಈ ವಿಶಾಲ ಅಣೆಕಟ್ಟಿನ ನಿರ್ಮಾಪಕರು, ಇಂಜಿನಿಯರುಗಳು, ಒರಿಸ್ಸಾ ಹಾಗೂ ಭಾರತದ ಅನ್ಯಭಾಗಗಳಿಂದ ಬರುವ ಅತಿಥಿಗಳ ಸಮ್ಮುಖದಲ್ಲಿ ಈ ದ್ವೀಪದಲ್ಲಿ ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ್ ನೆಹರೂರವರು ಇದೇ ಜನವರಿ ೧೬ರಂದು ಸೂರ್ಯಾಸ್ತ ಸಮಯದಲ್ಲಿ ಗುಂಡಿಯೊಂದನ್ನೊತ್ತಿದರು. ಹೀಗೆ ಗುಂಡಿಯನ್ನೊತ್ತಿತ್ತಲೇ ೨೦೦೦ ಅಡಿ ಉದ್ದದ ಅಣೆಕಟ್ಟು, ೧೩ ಮೈಲಿಗಳ ಉದ್ದದ ಮಣ್ಣಿನ ಏರಿಗಳು ಹಾಗೂ ೨೪೮ ಚದುರ ಮೈಲಿಗಳ ಕ್ಷೇತ್ರದಲ್ಲಿ ಹರಡಿರುವ ಜಲಾಶಯವು ವಿದ್ಯುದ್ದೀಪಗಳಿಂದ ಕಂಗೊಳಿಸಿತು.

ಅಣೆಕಟ್ಟಿನ ನಿವೇಶನದ ಬಳಿಯಲ್ಲಿರುವ ಕಾಲೋನಿಗಳು, ಸಂಬಲಪುರ, ಝುರಸಗುಡ ಹಾಗೂ ರೂರ್ಕೆಲಾ ಊರುಗಳನ್ನು ವಿದ್ಯುದ್ದೀಪ ಮಾಲೆಯು ಪ್ರಕಾಶಿಸಿತು.ಅದೇ ಕಾಲದಲ್ಲಿ ರಾಜಗಂಗಪುರದಲ್ಲಿರುವ ಸಿಮೆಂಟ್ ಕಾರ್ಖಾನೆ, ಬ್ರಿಜರಾಜ ನಗರದಲ್ಲಿರುವ ಕಾಗದ ಕಾರ್ಖಾನೆ ಹಾಗೂ ಅಲ್ಲಲ್ಲಿ ಸ್ಥಾಪಿಸಲಾಗಿರುವ ಕಾರ್ಖಾನೆಗಳಲ್ಲಿ ಈ ವಿದ್ಯುಚ್ಛಕ್ತಿಯಿಂದ ಕಾರ್ಯಾಚರಣೆಯು ತೊಡಗಿತು.

ಹಿರಾಕುಡ್ ದ್ವೀಪದ ಈ ಸಮಾರಂಭವು ಹಿರಾಕುಡ್ ವಿವಿಧೋದ್ದೇಶ ಯೋಜನೆಯ ಪ್ರಥಮ ಘಟ್ಟ ಪೂರ್ತಿಯಾಯಿತೆಂಬುದಕ್ಕೆ ಸೂಚಕವಾಗಿರುವುದು ಸ್ವಾತಂತ್ರ್ಯ ಪ್ರಾಪ್ತಿಯಾದ ನಂತರ, ಪ್ರವಾಹ ರಕ್ಷಣೆ, ನೀರಾವರಿ ಹಾಗೂ ಜಲಜನಿತ ವಿದ್ಯುಚ್ಛಕ್ತಿ ಉತ್ಪಾದನೆಗೋಸ್ಕರ ಈ ಯೋಜನೆಯನ್ನು ಕೈಗೊಳ್ಳಲಾಯಿತು.

ಈ ಯೋಜನೆಯು ಪ್ರಸ್ತುತ ಸಾಲಿನಲ್ಲಿ ಒಂದು ಲಕ್ಷ ಎಕರೆಗಳ ಜಮೀನನ್ನು ನೀರಾವರಿಗೆ ಒಳಪಡಿಸಿದೆ. ೧೯೫೮–೫೯ರ ವೇಳೆಗೆ ೪॥ ಲಕ್ಷ ಎಕರೆಗಳ ಜಮೀನು ನೀರಾವರಿಗೆ ಒಳಪಡುವುದು.

ಹಿರಾಕುಡ್‌ನ ವಿಶಾಲ ಅಣೆಕಟ್ಟು ಹಾಗೂ ಅಡ್ಡಕಟ್ಟುಗಳು (ಏರಿಗಳು) ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರದ ನಿರ್ಮಾಣಕ್ಕಾಗಿ ಹಾಗೂ ವಿದ್ಯುಚ್ಛಕ್ತಿಯನ್ನೊಯ್ಯುವ ತಂತಿ ಜಾಲವನ್ನು ಹಾಕುವುದಕ್ಕಾಗಿ ಅಸಂಖ್ಯಾತ ಕುಶಲ ಕೆಲಸಗಾರರ ಅಗತ್ಯವಾಯಿತು. ಕಳೆದ ಮೂರು ವರ್ಷಗಳಲ್ಲಿ ೩೦೦೦೦ ಮಂದಿ ಕೆಲಸಗಾರರು ಕಾರ್ಯನಿರತರಾಗಿದ್ದರು. ಈ ಕೆಲಸಗಾರರು ಕಾಶ್ಮೀರದಿಂದ ಕನ್ಯಾಕುಮಾರಿಯ ವರೆವಿಗೂ, ಕಲ್ಕತ್ತೆಯಿಂದ ಕರ್ಜ್ ವರೆವಿಗೂ ಇರುವ ಭಾರತದ ಎಲ್ಲ ಭಾಗಗಳಿಂದಲೂ ಬಂದವರು.

ಈ ಪ್ರಕಾರವಾಗಿ ಈ ಯೋಜನೆಯು ಪ್ರಸ್ತುತ ರಾಷ್ಟ್ರೀಯ ಯೋಜನೆಯಾಗಿರುವುದು. ಈ ಯೋಜನೆಗೆ ವಿದೇಶೀ ತಾಂತ್ರಿಕ ಪ್ರವೀಣರ ಆಥನಾ ಸಲಹಾಗಾರರ ನೆರವನ್ನು ಪಡೆದಿಲ್ಲ. ಹಿರಾಕುಡ್‌ನ ಮುಖ್ಯ ಎಂಜನಿಯರಾದ ಶ್ರೀ ತಿರುಮಲೆ ಅಯಂಗಾರ್‌ರವರು: "ಕೆಲಸಗಾರು ಸಾಮಾನ್ಯಿಗಳು ಹಾಗೂ ಯಂತ್ರಗಳು ಹೊಂದಿಕೊಳ್ಳುಬು ಕೊಂಚ ಕಾಲ ಬೇಕಾಯಿತು. ವಿವಿಧ ರಾಜ್ಯಗಳಿಂದ ಬಂದಿರುವ ಕೆಲಸಗಾರರಲ್ಲಿ ಮಧುರ ಬಾಂಧವ್ಯ ಬೆಳೆದಿದೆ. ಪ್ರತಿಯೊಬ್ಬ ಕೆಲಸಗಾರನೂ ಈ ರಾಷ್ಟ್ರೀಯ ಕಾರ್ಯದಲ್ಲಿ ತನ್ನ ಪಾತ್ರವನ್ನು ಅರಿತಿರುವುದೊಂದು ಮಹತ್ವಪೂರ್ಣ ವಿಚಾರವಾಗಿದೆ" ಎಂದಿದ್ದಾರೆ.

ಈ ಯೋಜನೆಯಲ್ಲಿ ಕೆಲಸಮಾಡುತ್ತಿರುವ ಭಾರತೀಯ ಎಂಜಿನಿಯರುಗಳು ಕಾರ್ಯಾರಂಭ ಶಕ್ತಿ, ಚಾತುರ್ಯವನ್ನು ಪಡೆದಿದ್ದು ಒಂದು ತಂಡದಂತೆ ಕೆಲಸ ನಿರ್ವಹಿಸಿರುತ್ತಾರೆ. ಅವರು ಸಾಧಿಸಿರುವ ಮಹತ್ಕಾರ್ಯವು ಭಾರತೀಯ ಎಂಜಿನಿಯರಿಂಗ್ ವೃತ್ತಿಗೇ ಗೌರವಾರ್ಹವಾಗಿದೆ. ಈ ಯೋಜನೆಯಲ್ಲಿ ಕೆಲಸಮಾಡುತ್ತಿರುವ ೨೪ ಮಂದಿ ಎಕ್ಸಿಕ್ಯುಟಿವ್ ಎಂಜಿನಿಯರುಗಳಲ್ಲಿ ೨೦ ಮಂದಿ ೩೬ ವರ್ಷಗಳ ವಯಸ್ಸಿನೊಳಗಿರುವರು.

ಅಣೆಕಟ್ಟಿನ ಕಾರ್ಯಗಳು ವಿದೇಶೀ ತಾಂತ್ರಿಕ ಪ್ರವೀಣರಿಂದಲೇ ನಾಶ್ಯವೆಂದು ಮೊದಲು ಭಾವಿಸಲಾಗಿತ್ತು. ಆದರೆ ಇದನ್ನೆಲ್ಲಾ ಭಾರತೀಯ ಎಂಜಿನಿಯರುಗಳೇ ನೈಪುಣ್ಯದಿಂದ ನಿರ್ವಹಿಸಿರುವರು. ಹಿರಾಕುಡ್ ಯೋಜನೆಯು ನಿಪುಣರಾದ ಎಂಜನಿಯರುಗಳು ಪ್ರವೀಣರನ್ನು ತಯಾರಿಸಿಕೊಟ್ಟಿದೆ. ಇದರಿಂದ ಭಾರತ ದೇಶವು ಇದಕ್ಕೂ ಹೆಚ್ಚಿನ ಸೇವೆಯನ್ನು ಪಡೆಯುವುದು ಸಾಧ್ಯವಾಗಿದೆ.

೧೯೪೮ರಲ್ಲಿ ಹಿರಾಕುಡ್ ಯೋಜನೆಯನ್ನು ಮಂಜೂರು ಮಾಡಲಾಯಿತು. ಆಗ ಹಿರಾಕುಡ್ ಒಂದು ದಟ್ಟನಾದ ಅರಣ್ಯವಾಗಿತ್ತು. ಸಂಚಾರ ಸಾಧನವಿರಲೀ ಇಲ್ಲ. ಅಣೆಕಟ್ಟಿನ ಸ್ಥಳಕ್ಕೆ ಸಮೀಪದಲ್ಲಿ ಜಿಲ್ಲಾ ಬೋರ್ಡಿನ ರಸ್ತೆಯೊಂದಿತ್ತು. ಮಹಾನದಿಗೆ ಅಡ್ಡವಾಗಿ ಯಾವ ಸೇತುವೆಯೂ ಇರಲಿಲ್ಲ. ಸುತ್ತಮುತ್ತಲಿನಲ್ಲಿ ಕುಶಲರಾದ ಕಾರ್ಮಿಕರೂ ದೊರೆಯುತ್ತಿರಲಿಲ್ಲ. ಭಾರೀಪ್ರಮಾಣದ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲು ಯಾವ ಕಂಟ್ರಾಕ್ಟರುಗಳೂ ಇರಲಿಲ್ಲ.

ಇಲ್ಲಿ ನಿರ್ಮಾಣಕೈಗೊಳ್ಳುವ ಬಗ್ಗೆ ಭಾರಿ ಸಂಖ್ಯೆಯ ಕೆಲಸಗಾರರೂ ಯಂತ್ರಗಳೂ ಒರಿಸ್ಸಾ ರಾಜ್ಯವೊಂದರಲ್ಲಿಯೇ ದೊರೆಯುವುದು. ಅಸಾಧ್ಯವೆಂದು ಕಂಡು ಬಂದಿತು. ಹೀಗಾಗಿ ವಿವಿಧ ರಾಜ್ಯಗಳಿಂದ ವಿವಿಧ ಕುಶಲ ಕೆಲಸಗಾರರನ್ನು ಪಡೆಯುವ ಬಗ್ಗೆ ಪ್ರಯತ್ನಿಸಲಾಯಿತು. ದಕ್ಷಿಣ ಭಾರತದಿಂದ ಕಲ್ಲುಕುಟ್ಟಿಗರೂ, ಪಂಜಾಬಿನಿಂದ ಕಮ್ಮಾರರೂ, ಬಡಗಿಗಳೂ ಮುಂತಾದ ವೃತ್ತಿಯವರೂ, ಆನ್ಯರಾಜ್ಯಗಳಿಂದ ಎಂಜಿನಿಯರುಗಳೂ ಮುಂತಾದ ಮೇಲುವಸ್ತುವಾಗಿ ಸಿಬ್ಬಂದಿಯವರೂ ಇಲ್ಲಿಗೆ ಬಂದರು.

ಸ್ಥಳೀಯ ಕೆಲಸಗಾರರೂ ಅಧಿಕ ಸಂಖ್ಯೆಯಲ್ಲಿ ಈ ಯೋಜನೆಯ ನಿರ್ಮಾಣ ಕಾರ್ಯದಲ್ಲಿ ಭಾಗಿಗಳಾದರು ಈ ಯೋಜನೆಯಲ್ಲಿರುವ ಕುಶಲರಲ್ಲದ ಕೆಲಸಗಾರರಲ್ಲಿ ನೂರಕ್ಕೆ ಒಂಭತ್ತು ಮಂದಿ ಸ್ಥಳೀಯರೇ ಆಗಿದ್ದಾರೆ. ಇವರಲ್ಲಿ ಹೆಚ್ಚು ಮಂದಿ ಗಂಜಾಂ ಜಿಲ್ಲೆ ಹಾಗೂ ಸುತ್ತಮುತ್ತಲಿನ ಸ್ಥಳಗಳಿಗೆ ಸೇರಿದವರು. ಮಧ್ಯಪ್ರದೇಶದ ಬಿಲಾಸ್‌ಪುರ ಜಿಲ್ಲೆಗೆ ಸೇರಿದವರೂ ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿ ಕೆಲಸ ಮಾಡುತ್ತಿರುವರು.

ಕಳೆದ ಆರು ವರ್ಷಗಳಲ್ಲಿ ಅಧಿಕ ಸಂಖ್ಯೆಯ ಸ್ಥಳೀಯ ಕೆಲಸಗಾರರು ವಿವಿಧ ಕುಶಲ ಕೆಲಸಗಳನ್ನು ಕಲಿತುಕೊಂಡಿರುವರು. ಈಗ ಅವರು ಒಟ್ಟು ಕುಶಲ ಕೆಲಸಗಾರರಲ್ಲಿ ನೂರಕ್ಕೆ ೪೫ರಷ್ಟಿರುವರು. ಈ ಯೋಜನೆಗಾಗಿ ಇಷ್ಟೊಂದು ಮಂದಿ ಕೆಲಸಗಾರರನ್ನು ಸಂಗ್ರಹಿಸುವ ವಿಚಾರದಲ್ಲಿ ಕಂಟ್ರಾಕ್ಟರುಗಳು ಮಹತ್ವಪೂರ್ಣ ಪಾತ್ರವಹಿಸಿರುವರು. ಒಟ್ಟು ಕೆಲಸಗಾರರಲ್ಲಿ ನೂರಕ್ಕೆ ೭೦ರಷ್ಟು ಮಂದಿ ಕಂಟ್ರಾಕ್ಟರುಗಳ ಕೈಕೆಳಗೆ ಕೆಲಸಮಾಡುವರು.

ಹಿರಾಕುಡ್‌ನಲ್ಲಿ ಕೆಲಸಮಾಡುತ್ತಿರುವ ಕೆಲಸಗಾರರ ಸಂಖ್ಯೆಯು ಕಾಲಕಾಲಕ್ಕೆ ಬದಲಾಯಿಸುತ್ತಿರುತ್ತದೆ. ಪ್ರತಿವರ್ಷವೂ ಉದ್ಯೋಗದಲ್ಲಿರುವ ಕೆಲಸಗಾರರ ಅಧಿಕತಮ ಸಂಖ್ಯೆಯು ೩೦೦೦೦ ಈ ಸಂಖ್ಯೆಯು ಮಳೆಗಾಲದಲ್ಲಿ ೧೦,೦೦೦ಕ್ಕೆ ಇಳಿಯುವುದು. ಈ ಕಾಲದಲ್ಲಿ ಹೆಚ್ಚಿನ ಸಂಖ್ಯೆಯ ಕೆಲಸಗಾರರು ಬೇಸಾಯಕ್ಕಾಗಿ ಹಾಗೂ ಕೌಟುಂಬಿಕ ಉದ್ದೇಶಗಳಿಗಾಗಿ ತಮ್ಮ ತಮ್ಮ ಊರುಗಳಿಗೆ ಹೋಗಲು ಅವಕಾಶವನ್ನು ನೀಡುವ ವಿಚಾರವು ಹಿರಾಕುಡ್ ಆಡಳಿತ ವರ್ಗದವರಿಗೊಂದು ಭಾರಿ ಸಮಸ್ಯೆಯಾಗಿತ್ತು. ಅಣೆಕಟ್ಟಿನ ನಿರ್ಮಾಣ ಕಾರ್ಯವನ್ನು ನದಿಯ ಉಭಯ ಪಾರ್ಶ್ವಗಳಿಗೂ ವಿಸ್ತರಿಸಿದ ನಂತರ, ನದಿಯ ಎರಡು ದಡಗಳಲ್ಲಿಯೂ ಎರಡು ದೊಡ್ಡ ಕಾಲೋನಿಗಳನ್ನು ನಿರ್ಮಿಸಬೇಕೆಂದು ನಿರ್ಣಯಿಸಲಾಯಿತು. ಈ ಕಾಲೋನಿಗಳ ಜೊತೆಗೆ ಈ ವಿವಿಧೋದ್ದೇಶ ಯೋಜನೆಯಲ್ಲಿನ ಇತರ ಮುಖ್ಯ ಕೇಂದ್ರಗಳಲ್ಲಿ ಅನೇಕ ಸಣ್ಣ ಪುಟ್ಟ ಕಾಲೋನಿಗಳನ್ನು ನಿರ್ಮಿಸುವುದು ಅವಶ್ಯಕವಾಯಿತು. ಸರ್ಕಾರದವರು ಕೆಲಸಕ್ಕೆ ಹೆಗೆದುಕೊಂಡಿರುವ ಕೆಲಸಗಾರರ ಎಲ್ಲ ೪೦೦೦ ವಸತಿ ಗೃಹಗಳಲ್ಲಿಯೂ ಕಕ್ಕಸ್ಸುಗಳನ್ನೂ ನೀರಿನ ಕೊಳಾಯಿಗಳನ್ನೂ ಒದಗಿಸಲಾಗಿದೆ. ಅನೇಕ ಕಾರ್ಮಿಕ ವಸತಿಗಳಿಗೆ ವಿದ್ಯುದ್ದೀಪಗಳನ್ನು ಒದಗಿಸಲಾಗಿದೆ. ಕಾರ್ಮಿಕರ ಹಿತರಕ್ಷಣಾ ಕೇಂದ್ರಗಳಲ್ಲಿ (ಕಲ್ಯಾಣ ಕೇಂದ್ರಗಳು) ಪುಸ್ತಕ ಭಂಡಾರ, ವಾಚನಾಲಯ ಮತ್ತು ಕ್ರೀಡೆಗಳಿಗೆ ಅವಕಾಶವಿದೆ ಈ ಕೇಂದ್ರಗಳಲ್ಲಿ ಉಚಿತವಾಗಿ ಚಲನ ಚಿತ್ರ ಪ್ರದರ್ಶನಗಳನ್ನು ಏರ್ಪಡಿಸಲಾಗುತ್ತಿದೆ. ಹಬ್ಬ ಹುಣ್ಣಿಮೆ ದಿನಗಳಲ್ಲಿ ನಾಟಕಗಳನ್ನು ವಿವಿಧ ವಿನೋದಾವಳಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ. ಕೆಲಸಗಾರರ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ಕೊಡಲಾಗುತ್ತಿದೆ.

ಮಹಿಳೆಯರು ಕೆಲಸಕ್ಕೆ ಹೋದಾಗ ಅವರ ಮಕ್ಕಳನ್ನು ನೋಡಿಕೊಳ್ಳುವುದ ಕ್ಕಾಗಿ ಅನೇಕ ಶಿಶುವಿಹಾರಗಳನ್ನು ಏರ್ಪಡಿಸಿದೆ. ಅಲ್ಲದೆ ಹಲವಾರು ಸೌಲಭ್ಯ

(ನನೇ ಪುಟನೋಡಿರಿ)

98 ವರ್ಷಗಳ ಪ್ರಾಮಾಣಿಕತೆಯಿಂದ ಪಂ|| ಅಂಬಳಿ ರಾಮಸ್ವಾಮಿ ಆಯ್ಯರ್‌ರವರ ರಕ್ಷಿಸಲ್ಪಟ್ಟಿರುವ ಸಂತಾನ ಸಿಂಧೂರ | ಮದನ ವಿಲಾಸ
ಟ್ರೇಡ್ ಮಾರ್ಕ್
(ಸ್ತ್ರೀಯರಿಗೆ: ಫ್ಯಾಕ್ಟರ್) | (ಪುರುಷರಿಗೆ: ಗುಳಿಗೆ)

ಈ ಭಸ್ಮವು ಬಹಿಷ್ಠೆ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ.
"ಮದನ ವಿಲಾಸ" ಗುಳಿಗೆಗಳು ಆತ್ಯುಷ್ಣ ಶಮನಮಾಡಿ, ಸ್ವಪ್ನ ಮತ್ತು ಶೀಶ್ನ ಸ್ವಲನಗಳನ್ನು ತಡೆಗಟ್ಟಿ, ವೀರ್ಯಾಣುಗಳನ್ನು ಪಂ|| A.R. ಆಯ್ಯರ್ ವೃದ್ಧಿಸಿ, ಸಪುಂಸಕತೆಯನ್ನು ನಿವಾರಿಸಿ ನಿರೂಪವೀರ್ಯ ಮಾಡುತ್ತದೆ.
ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ ತಾಯ್ತಂದೆಗಳಾಗಿದ್ದಾರೆ.
ಜೊತೆ ಕ್ಯಾಪಿಟಲಾಗ್ರು, ಔಷಧದ ಬೆಲೆ ಇತ್ಯಾದಿಗಳಿಗೆ 3 ಆಣೆ ಸ್ಟ್ಯಾಂಪು ಕಳಿಸಿರಿ
ಎ. ರಾಮಸ್ವಾಮಿ ಆಯ್ಯರ್ ಸನ್ಸ್ & ಕಂ., (ನ. ಯು.)
628 ಸಂತಾನ ಸಿಂಧೂರ ಸದನ (ಪೋಸ್ಟ್ ಬೀಟ್ 9) ಮೈಸೂರು S. I.

ನಿಮ್ಮ ಆರ್ಥಿಕ ಸಮಸ್ಯೆಗಳಿಗೆ ಸಲಹೆಗಳು ಬೇಕೆಂದಿದ್ದಾಗ, ಅವುಗಳನ್ನು ಕೊಡಲು ಸದಾ ಸಿದ್ಧರಿದ್ದೇವೆ!
ಮೈಸೂರು, ಮದರಾಸು, ಆಂಧ್ರ ಪ್ರದೇಶ, ಕೇರಳ ಮತ್ತು ಮುಂಬಯಿ ಸಂಸ್ಥಾನಗಳಲ್ಲಿ ಒಟ್ಟು 46 ಶಾಖೆಗಳಿವೆ. ಸಕಲ ವಿಧದ ಬೇಂಕಿಂಗ್ ವಹಿವಾಟುಗಳನ್ನು ಕೈಗೊಳ್ಳುತ್ತೇವೆ. ಗಿರಾಕಿಗಳ ತೃಪ್ತಿಯೇ ನಮ್ಮ ಧ್ಯೇಯ!
50 ವರುಷಗಳಲ್ಲಿ ನಾವು ಗಳಿಸಿದ ನಮ್ಮ ಅತ್ಯಮೂಲ್ಯ ಬೇಂಕಿಂಗ್ ಅನುಭವದ ಪ್ರಯೋಜನವನ್ನು ಇಂದಿನಿಂದಲೇ ಪಡೆಯಿರಿ!!
ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.
ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)
THE CANARA BANKING CORPORATION LIMITED

ಆಕಾಶವಾಣಿ - ಬೆಂಗಳೂರು

[ಆಕಾಶವಾಣಿ ಬೆಂಗಳೂರು ಕೇಂದ್ರವು ರ ಜನವರಿ ೧೩ರಿಂದ ೧೯ರ ವರೆಗೆ ಒ ಸಪ್ತಾಹವನ್ನು ಆಚರಿಸುವುದು. ಸಪ್ತಾಹದಲ್ಲಿ ಈ ಕೇಂದ್ರವು ಹಲವು ಕಾರ್ಯಕ್ರಮಗಳನ್ನು ಬಿತ್ತರಿಸುವು ಪ್ರತಿಭಾವಂತ ಕಲಾವಿದರು ಈ ಕಾ ಮಗಳಲ್ಲಿ ಭಾಗವಹಿಸುವರು. ಆಕಾಶ ಬೆಂಗಳೂರು ಕೇಂದ್ರವು, ಇದುವರೆಗೆ ರುವ ಕಾರ್ಯಪ್ರಗತಿಯನ್ನು ಈ ಕೆಳಗೆ ಸಲಾಗಿದೆ.]

ಕೇಂದ್ರವು ಪ್ರತಿದಿನ ಮೂರು ಗಳಲ್ಲಿ, ಸುಮಾರು ೧೦ ಗಂಟೆಗಳ ಕಾಲ, ಕಾರ್ಯಕ್ರಮಗಳನ್ನು ಪ್ರಸ ಮಾಡುತ್ತಿದೆ. ಈ ಕೇಂದ್ರವು ಮಾ ರುವ ಪ್ರಸಾರ ಕಾರ್ಯಕ್ರಮಗಳಲ್ಲಿ ರಾದಿ ಮತ್ತು ದಕ್ಷಿಣಾದಿ ಸಂಗೀತ ತಿಗಳ ಶಾಸ್ತ್ರೀಯ ಹಾಗೂ ಲಘು ೀತ ಕಾರ್ಯಕ್ರಮಗಳಿರುವುವೆ. ಕವಿ ಗಳನ್ನ, ಕಾವ್ಯಎಾಚನ, ಭಾವಣ ಮತ್ತು ಶಬ್ದ ಚಿತ್ರಗಳನ್ನು ಈ ದ್ರದಿಂದ ಪ್ರಸಾರ ಮಾಡಲಾಗು ಆಗಾಗ್ಗೆ ಹಿಂದಿ, ತೆಲುಗು, ತಮಿ ಮತ್ತು ಉರ್ದು ಕಾರ್ಯಕ್ರಮಗ ಇರುವುವು. ಚರ್ಚಾಕೂಟ, ವಿಚಾರ ಷ್ಠಿ, ವಾರ್ತೆಗಳು, ವಾರ್ತಾವಲೋ , ಶಾಲಾ ಪ್ರಸಾರ, ಗ್ರಾಮಸ್ಥರು, ಂಳೆಯರು ಮತ್ತು ಮಕ್ಕಳಿಗಾಗಿ ರ್ಯಕ್ರಮಗಳಿದ್ದು— ಇವುಗಳೆಲ್ಲವ ನಿಯತ ಕಾಲಗಳಲ್ಲಿ ಈ ಕೇಂದ್ರವು ರಿಸುತ್ತಿದೆ.

ಇತರ ಆಕಾಶವಾಣಿ ಕೇಂದ್ರಗಳಂತೆ ಯೂ ಸಂಗೀತ ಕಾರ್ಯಕ್ರಮಗಳಿಗೆ ಕ್ಕು ಕಾಲವನ್ನು ಕೊಡಲಾಗಿದೆ. ಸೂರು ರಾಜ್ಯ ಮತ್ತು ಸುತ್ತಮುತ್ತಿ ಪ್ರದೇಶಗಳಿಂದ ಅರಿಲಾದ ಸಂಗೀತ ಕಲಾವಿದರ ಪಟ್ಟಿಯಲ್ಲಿ ಸುಮಾರು ೫೦೦ ಮಂದಿ ಕಲಾವಿದರ ಸಪರಿರುವುವು. ಆದರೂ ಸ್ವರ ಪರೀಕ್ಷಕಾ ಸಮಿತಿ(ಆಡಿಷನ್ ಬೋರ್ಡ್) ಹೊಸ ಹೊಸ ಪ್ರತಿಭೆಗಳನ್ನು ಕಂಡುಹಿಡಿಯುವ ಕೆಲಸವನ್ನು ಮುಂದುವರಿಸಿದೆ. ಸ್ವರ ಪರೀಕ್ಷೆಯನ್ನು ಯಾವ ಪಕ್ಷಪಾತವೂ ಇಲ್ಲದಂತೆ ನಡೆಸ ಲಾಗುವುದು. ಕಲಾವಿದರನ್ನು ಆರಿಸು ವಲ್ಲಿ ಪ್ರತಿಭೆಯನ್ನೇ ಪ್ರಧಾನ ಅಂಶ ನ್ನಾಗಿ ಪರಿಗಣಿಸಲಾಗುವುದು. ಈ ಕೇಂದ್ರವನ್ನು ಉದ್ಘಾಟಿಸಿದಿಂದೀಚೆಗೆ ಸುಮಾರು ೯೦೦ ಮಂದಿಯಿಂದ ಸ್ವರ ಸರೀಕ್ಷೆ ಗಾಗಿ ವ್ಯಾರ್ಥನಾ ಪತ್ರಗಳು ಬಂದಿದ್ದವು. ಅವರಲ್ಲಿ ಸುಮಾರು ೬೦೦ ಮಂದಿಯ ಸ್ವರ ಪರೀಕ್ಷೆಯನ್ನು ನಡೆಸಿ, ಅವರಲ್ಲಿ ೧೩೦ ಮಂದಿಯನ್ನು ಈ ಕೇಂದ್ರದ ಕಲಾವಿದರ ಪಟ್ಟಿಗೆ ಸೇರಿಸಿಕೊಳ್ಳಲಾಯಿತು.

ಕರ್ನಾಟಕ ಹಾಗೂ ಭಾರತದ ನಾನಾ ಭಾಗಗಳ ಪ್ರಸಿದ್ಧ ಸಂಗೀತ ವಿದ್ವಾಂಸರು, ಈ ಕೇಂದ್ರದ ಸಂಗೀತ ಕಾರ್ಯಕ್ರಮಗಳಲ್ಲಿ ಭಾಗವಹಿಸುವರು. ಈ ಕೇಂದ್ರವು ನಡೆಸುವ ಸಂಗೀತ ಗೋಷ್ಠಿಗಳು ಕಾರ್ಯಕ್ರಮಕ್ಕೆ ವೈವಿಧ್ಯತೆಯನ್ನು ತರುವುವು. ಅನೇಕ ಸಂಗೀತ ಗೋಷ್ಠಿಗಳನ್ನು ಬೆಂಗಳೂರಿನ ಬಿ.ಆರ್. ವಿ. ಥಿಯೇಟರ್, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕಲ್ಚರ್, ಕನ್ನಡ ಸಾಹಿತ್ಯ ಪರಿಷತ್ತು ಮುಂತಾದ ಕಡೆಗಳಲ್ಲಿ ಏರ್ಪಡಿಸಿ, ಅಲ್ಲಿಂದ ಬಿತ್ತರಿಸಲಾಯಿತು. ಇತ್ತೀಚೆಗೆ ತಿರುನೊಗ್ಗದಿಂದ ಒಂದು ಸಂಗೀತ ಸಭೆಯ ಕಾರ್ಯಕ್ರಮವನ್ನು ಬಿತ್ತರಿಸಲಾಯಿತು. ಈ ರೀತಿಯ ಸಭೆಗಳು ಹೆಚ್ಚು ಪ್ರೇಕ್ಷಕರಿಗೆ ಮತ್ತು ಸಂಗೀತ ಪ್ರಿಯರಿಗೆ ಶ್ರವಣ ಸದವಕಾಶಗಳನ್ನು ಒದಗಿಸುತ್ತಿವೆ.

ಬೆಂಗಳೂರು ಆಕಾಶವಾಣಿಯು 'ನಾದ ಬ್ರಹ್ಮೈ', 'ರಾಗ ಲೋಕ', 'ಅಪೂರ್ವ ರಾಗಗಳು', 'ವರ್ಷ ಹರ್ಷ' "ಗೀತ ಗೋಪಾಲ", ನದಿಯ ಮಕ್ಕಳು", ಇತ್ಯಾದಿ ಸಂಗೀತ ರೂಪಕ ಮತ್ತು ಗೀತ ನಾಟಕಗಳನ್ನು ಬಿತ್ತರಿಸಿದೆ. ಆಕಾಶವಾಣಿ ಬೆಂಗಳೂರು ಕೇಂದ್ರವು ಆರಂಭಿಸಿರುವ 'ಸಂಗೀತ ಸಾಮ್ರಾಜ್ಯ'ವೆಂಬ ಹೊಸ ಕಾರ್ಯಕ್ರಮವನ್ನು ಇಲ್ಲಿ ಉಲ್ಲೇಖಿಸಿದರೆ ಅಪ್ರಕೃತವಾಗಲಾರದು. ಸಂಗೀತವನ್ನು ಕುರಿತ ವಿಚಾರಗೋಷ್ಠಿ, ಉತ್ತಮ ರೀತಿಯ ಶಬ್ದ ಚಿತ್ರ, ಜಪರೂಪವಾದ ಸಂಗೀತ ಕೃತಿ ಮತ್ತು ಭಾಷಣಗಳನ್ನು ಈ ಕಾರ್ಯಕ್ರಮದಲ್ಲಿ ಏರ್ಪಡಿಸಲಾಗುವುದು. ಪ್ರಸಿದ್ಧ ವಿದ್ವಾಂಸರು ಇದರಲ್ಲಿ ಭಾಗವಹಿಸುವರು. ಇಂತಹ ಒಂದು ಕಾರ್ಯಕ್ರಮವನ್ನು ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ 'ನೃದ್ಧ ಪಿತಾಮಹ' ನೆನಿಸಿದ ಶ್ರೀ ಕೆ. ವಾಸುದೇವಾಚಾರ್ಯರ ಕಲಾ ಪ್ರತಿಭೆಗೆ ವಿಸಲಾಗಿದಲಾಗಿತ್ತು. ಈ ಕೇಂದ್ರವು ಗ್ರಾಮ ಸ್ಥರ ಹಾಗೂ ಇತರ ಕಾರ್ಯಕ್ರಮಗಳಲ್ಲಿ ಜಾನಪದ ಸಂಗೀತಕ್ಕೆ ಅಗತ್ಯ ಮನ್ನಣೆಯನ್ನಿತ್ತಿದೆ. ಗ್ರಾಮಾಂತರ ಪ್ರದೇಶಗಳಿಂದ ಸುಮಾರು ೧೦೦ ಮಂದಿ ಕಲಾವಿದರು ಆಗಾಗ್ಗೆ ಬಂದು ಕಾರ್ಯಕ್ರಮಗಳಲ್ಲಿ ಪಾಲುಗೊಳ್ಳುತ್ತಾರೆ. ಈ ಕೇಂದ್ರದಲ್ಲಿನ ಎಲ್ಲಾ ರೀತಿಯ ಜಾನಪದ ಸಂಗೀತ ಪದ್ಧತಿಗಳ ಧ್ವನಿ ಮುದ್ರಿಕೆಗಳನ್ನು ಸಿದ್ಧಗೊಳಿಸಿ, ಈ ಕೇಂದ್ರದಲ್ಲಿ ಇಟ್ಟುಕೊಂಡಿರುವುದು ಇನ್ನೊಂದು ಮುಖ್ಯವಾದ ಅಂಶ. ಅದರಂತೆಯೇ ಉಜ್ವಲ ಪರಂಪರೆಯನ್ನು ಳೆ 'ಯಕ್ಷಗಾನ'ಕ್ಕೂ ಆಕಾಶವಾಣಿಯು ಕಾರ್ಯಕ್ರಮಗಳಲ್ಲಿ ಪ್ರಧಾನ ಪಾತ್ರವನ್ನು ಕೊಡಲಾಗಿದೆ.

ಈ ಕೇಂದ್ರದ ದಿನವಹಿ ಕಾರ್ಯಕ್ರಮಗಳಲ್ಲಿ ಬರುವ ಸಾಹಿತ್ಯ ಮತ್ತು ಸಾಂಸ್ಕೃತಿಕ ಕನ್ನಡ ಕಾರ್ಯಕ್ರಮಗಳು ವೈವಿಧ್ಯಪೂರ್ಣವೂ, ಬೋಧಪ್ರದವೂ, ಮನರಂಜನೀಯವಾಗಿಯೂ ಇರುವುವು. ಇವುಗಳ ಜೊತೆಗೆ, ತಮಿಳು, ತೆಲುಗು, ಮತ್ತು ಹಿಂದಿ ಭಾಷೆಗಳಲ್ಲಿಯೂ ಕಾರ್ಯಕ್ರಮಗಳಿರುವುದು, ಈ ಪ್ರದೇಶದ ಜನರ ವೈವಿಧ್ಯತೆ ಮತ್ತು ವಿಶಾಲ ದೃಷ್ಟಿಗಳ ಸಂಕೇತವೆನಿಸಿಕೊಂಡಿದೆ. 'ರಸ ಮಂಜರಿ' ಎಂಬ ಸಂಸ್ಕೃತ ಕಾರ್ಯಕ್ರಮವು ಸಂಸ್ಕೃತ ಸಾಹಿತ್ಯದಲ್ಲಿ ಅಭಿರುಚಿಯುಳ್ಳ ಶ್ರೋತೃಗಳಲ್ಲಿ ಜನಪ್ರಿಯನಾಗಿದೆ

ರಾಷ್ಟ್ರೀಯ ನಾಟಕ ಕಾರ್ಯಕ್ರಮಗಳನ್ನು ಆರಂಭಿಸಿರುವುದು, ನಮ್ಮ ದೇಶದ ಇತರ ಭಾಷೆಗಳಲ್ಲಿನ ಉತ್ತಮ ನಾಟಕಗಳ ಸವಿಯನ್ನು ಕನ್ನಡ ಶ್ರೋತೃಗಳಿಗೆ ಒದಗಿಸುವ ಸದವಕಾಶವನ್ನು ಬೆಂಗಳೂರು ಕೇಂದ್ರಕ್ಕೆ ಒದಗಿಸಿದಂತಾಗಿದೆ. ಈ ವರ್ಷದಲ್ಲಿ ರೇಡಿಯೋ ನಾಟಕ ಸ್ಪರ್ಧೆಯಲ್ಲಿ ಬಹುಮಾನ ಪಡೆದ ಅನೇಕ ನಾಟಕಗಳನ್ನು ಪ್ರಸಾರ ಮಾಡಲಾಯಿತು.

ಬೆಂಗಳೂರಿನಲ್ಲಿ ೧೯ನೇ ಫೆಬ್ರುವರಿ ತಿಂಗಳಲ್ಲಿ ನಡೆದು 'ಇಕಾಫೆ' ಅಧಿವೇಶನ ಮತ್ತು ಇಡೀ ಭಾರತದಲ್ಲಿ ಈ ವರ್ಷ ಆಚರಿಸಲ್ಪಟ್ಟ ಭಗವಾನ್ ಬುದ್ಧನ ೨೫೦೦ ವರ್ಷಗಳ ವಾರ್ಷಿಕೋತ್ಸವ-ಇವುಗಳನ್ನು ಬೆಂಗಳೂರು ಆಕಾಶವಾಣಿ ಕೇಂದ್ರವು ಅತ್ಯಂತ ವ್ಯಾಪಕವಾಗಿ ಬಿತ್ತರಿಸಿತು. 'ಇಕಾಫೆ' ಅಧಿವೇಶನ ನಡೆಯುತ್ತಿದ್ದ ಕಾಲದಲ್ಲಿ ಪ್ರತಿದಿನವೂ ಈ ಅಧಿವೇಶನದಲ್ಲಿ ನಡೆದ ಕಾರ್ಯಕ್ರಮಗಳ ಸಂಕ್ಷಿಪ್ತ ವರದಿಯನ್ನು ಬಿತ್ತರಿಸಲಾಯಿತು.

ಈ ಕೇಂದ್ರವು ಆಚರಿಸಿದ ಕಾರ್ಯಕ್ರಮಗಳಲ್ಲಿ 'ರೇಡಿಯೋ ಸಪ್ತಾಹ'ವೂ ಒಂದು ಮುಖ್ಯವಾದ ಕಾರ್ಯಕ್ರಮ ಈ ಸಪ್ತಾಹದಲ್ಲಿ, ಶ್ರೀ ಕುವೆಂಪುರವರ 'ರಕ್ತಾಕ್ಷಿ' ನಾಟಕವನ್ನು ಬಿತ್ತರಿಸಲಾಯಿತು. ಗೀತಾವಳಿ, ಅಂತರ ಕಾಲೇಜು ವಾಕ್ ಸ್ಪರ್ಧೆ ಮತ್ತು ಪರಿಷತ್ತಿನಲ್ಲಿ ಕವಿ ಸಮ್ಮೇಳನಗಳನ್ನು ಏರ್ಪಡಿಸಿ ಬಿತ್ತರಿಸಲಾಯಿ ು.

ಬೆಂಗಳೂರು ಆಕಾಶ ವಾಣಿಯ ಬಾಹ್ಯ ಪ್ರಸಾರ ವಿಭಾಗವು(ಔಟ್‌ಸ್ಟೈಡ್ ಬ್ರಾಡ್ ಕಾಸ್ಟ್ ಸೆಕ್ಷನ್) ಇಡೀ ವರ್ಷ ಅವಿಶ್ರಾಂತವಾಗಿ ಕೆಲಸ ಮಾ . ಸ್ಥಳೀಯ ಸಭೆ ಸಮಾವೇಶಗಳ , ಕ್ರೀಡಾ ಕಾರ್ಯಕ್ರಮಗಳನ್ನೂ ಈ ಕೇಂದ್ರವು ಬಿತ್ತರಿಸುತ್ತಿದೆ. ಪ್ರಕೃತ ವರ್ಷದಲ್ಲಿ, ಮಹಾರಾಜಾ ಗೋಲ್ಡ್ ಕಪ್ ಹಾಕಿ

೭ನೇ ಪುಟ ನೋಡಿರಿ

ತ್ತೂರು ಡಿ. ನುು. ಕೋರ್ಟಿನಲ್ಲಿ
E.P. 140/56. O.S 66/46.
. ಶೇಷಪ್ಪ —ಅರ್ಜಿದಾರ
ೀಜಪ್ಪ ರೈ ಸಗೈರರು —ಎದ್ರಿರು
1. ಕೋಚಪ್ಪ ರೈ. ತಿಮ್ಮಪ್ಪ ರೈಗಳ ಗ, ಕೊಡಗುಜೆಲ್ಲಾ ತಾಟುಕ್ಕೇರಿ ಗ್ರಾಮದ ತಾಳ್ತಮನೆ.
4. ಕಮಲ, ಲಕ್ಷ್ಮಿ ಹೆಂಗ್ಸಿನ ಮಗಳು, Taglewadi Ramachandra ane. Malad. Bombay.
5. ಭವಾನಿ. ಲಕ್ಷ್ಮಿ ಹೆಂಗ್ಸಿನ ಮಗಳು, ವಕಾಕೊಳ್ಳಿ ಎಸ್ಟೇ ಟ್. ಸೋಮವಾರ ಟಿ ಕೊಡಗು.
6. ಲಲಿತ. ಮುತ್ತಮ್ಮನ ಮಗಳು, ೈಂಗಡಿ ತಾಲೂಕು ಕುರಿಯಾಳ ಗ್ರಾಮದ ರಿಯಾಳಗುತ್ತು.

ಇವರಿಗೆ ತಿಳಿಸುವುದೇನೆಂದರೆ,

ಎದ್ರಿರ ಸ್ತಿರಾಸ್ತಿಯನ್ನು ಜಪ್ತಿಮಾಡಿ ಲಂ ಪಡಿಸಬೇಕೆಂತ ಅರ್ಜಿದಾರ ವಾಕಲು ಮಾಡಿದ ಈ ಅಮಲ್ದಾರಿಯು ಬಲಂ ಇಸ್ತಿರಿನ ಕರತಗಳನ್ನು ನಿರ್ಣಯಿಸುವ ಬಗ್ಗೆ ೨. 22 - 1—57ಕ್ಕೆ ಇರುವುದರಿಂದ ಆ ರಿತು ಆಕ್ಷೇಪಣೆಇದ್ದಲ್ಲಿ ಆ ದಿನಸ ಉದಯ ಸಿಕೊಳ್ಳತಕ್ಕದು. ತಪ್ಪಿದರೆ ನಿಮ್ಮ ಸೈರು ಏಕ್ಪಾರ್ಟಿಯಲ್ಲಿ ತೀರ್ಮಾನಿಸಲಾಗುವುದು.

B. Chidananda Rao.
Vakil for Petitioner.

ಪುತ್ತೂರು, ತಾ. 29-12-56.



NAVAYUGA

Popular Kannada Weekly

Founder:—

A. B. SHETTY, *M. L. A.*

Former Minister for Public Health, Govt. of Madras.

At Present Minister for Health Govt. of Mysore.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೧೬-೧-೧೯೫೭	೨೦

ಕಾಶ್ಮೀರ

ಪಾಕಿಸ್ತಾನವು ನಾಲ್ಕು ವರ್ಷಗಳ ಬಳಿಕ ಇದೀಗ ಪುನಃ ಕಾಶ್ಮೀರದ ಪ್ರಶ್ನೆಯನ್ನು ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಮಂಡಳದ ಮುಂದೆ ಎತ್ತಲು ಪ್ರಯತ್ನಶೀಲವಾಗಿದ್ದು ಇದೇ ೧೬ನೇ ದಿನಾಂಕದಂದು ಭದ್ರತಾ ಮಂಡಳದ ಸಭೆ ಜರಗುವುದೆಂದು ಸಹ ತಿಳಿದುಬರುತ್ತದೆ. ಕಾಶ್ಮೀರ ಪ್ರಶ್ನೆಯನ್ನು ಇತ್ಯರ್ಥಗೊಳಿಸದಿದ್ದರೆ "ಶಾಂತಿಗೆ ಅಪಾಯ" ಇದೆ ಎಂದು ಪಾಕಿಸ್ತಾನವು ಹೇಳಿದ್ದು, ಈ ಅಪಾಯ ನಿವಾರಣೆಗಾಗಿ ತುರ್ತಿನಿಂದ ಸಭೆ ಸೇರಬೇಕೆಂದು ಅದು ಒತ್ತಾಯಿಸಿತು. ಇಷ್ಟು ಜರೂರಾಗಿ ಕಾಶ್ಮೀರ ಪ್ರಶ್ನೆಯನ್ನು ಚರ್ಚಿಸಬೇಕೆಂದು ಪಾಕಿಸ್ತಾನವು ಬಯಸಿರುವುದರ ಕಾರಣವೇನು? ಇದೇ ೨೬ನೇ ದಿನಾಂಕ ಕಾಶ್ಮೀರ ರಾಜ್ಯವು ತಾನು ಹೊಸದಾಗಿ ತಯಾರಿಸಿದ ಶಾಸನವನ್ನು ಅಂಗೀಕರಿಸಿಕೊಳ್ಳುವುದು; ಮತ್ತು ಈ ಘಟನೆಯು ಕಾಶ್ಮೀರವು ಭಾರತದ ಅವಿಭಾಜ್ಯ ಅಂಗವಾಗಿದೆ ಎಂದು ಹೇಳುವುದರಿಂದ ಕಾಶ್ಮೀರದ ಮುಸ್ಲಿಂ ಜನತೆಯ ಒಟ್ಟು ಕೆದರಿಕೊಳ್ಳುವುದಕ್ಕೆ ಇದು ನೆಪವಾದೀತು — ಎಂಬುದೇ ಪಾಕಿಸ್ತಾನವು ಮುಂದಿಟ್ಟಿರುವ ಕಾರಣವಾಗಿದೆ. ಕಾಶ್ಮೀರದ ಘಟನೆ ಎನ್ನುವುದು ಭದ್ರತಾ ಮಂಡಳದ ಹಿಂದಿನ ಗೊತ್ತುವಳಿಗೆ ತೀರ ಅಸಂಗತವಾದ ವಿಷಯವೆಂದು ಸಹ ಪಾಕಿಸ್ತಾನವು ಪ್ರತಿವಾದಿಸುತ್ತದೆ. ಜನಮತ ಗಣನೆಯನ್ನು ನಡೆಸುವ ಸಂಬಂಧದಲ್ಲಿ ಗೊತ್ತುವಳಿಯನ್ನು ಸ್ವೀಕರಿಸಿರುವ ಭದ್ರತಾ ಮಂಡಳವು ಕಾಶ್ಮೀರದ ಈ ಘಟನೆಯು ಜಾರಿಯಲ್ಲಿ ಬಾರುವುದಕ್ಕೆ ಅವಕಾಶಕೊಡಬಾರದು ಎಂದು ಪಾಕಿಸ್ತಾನದ ಒತ್ತಾಯವಿದೆ. ಆದುದರಿಂದಲೇ ತುರ್ತಿನ ಸಭೆಯನ್ನು ಜರಗಿಸಿ ೨೬ನೇ ತಾರೀಕಿನೊಳಗಾಗಿ ಭದ್ರತಾ ಮಂಡಳವು ಕಾಶ್ಮೀರದ ಘಟನೆ ಜ್ಯಾರಿಗೆ ಬರುವುದನ್ನು ತಡೆಯಲು ಉದ್ದೇಶಿಸಿದ ಗೊತ್ತುವಳಿಯೊಂದನ್ನು ಅಂಗೀಕರಿಸುವಂತೆ ನೋಡಿಕೊಳ್ಳುವುದೇ ಪಾಕಿಸ್ತಾನದ ಗುರಿಯಾಗಿಸಿ. ಆದರೆ ಇದು ಸುಲಭದಲ್ಲಿ ಭದ್ರತಾ ಮಂಡಳವು ಪಾಕಿಸ್ತಾನದ ಇಚ್ಛೆಯನ್ನು ಸಲ್ಲಿಸಬಹುದೆ? ಈ ವಿಷಯದಲ್ಲಿ ನಿರೀಕ್ಷಕರು ಸಂದೇಹವನ್ನು ವ್ಯಕ್ತಪಡಿಸುತ್ತಿದ್ದಾರೆ. ಪಾಕಿಸ್ತಾನವು ಎಣಿಸಿದಷ್ಟು ಶೀಘ್ರದಲ್ಲಿ ಕಾಶ್ಮೀರ ಪ್ರಶ್ನೆಯ ಬಗ್ಗೆ ಇನ್ನೊಂದು ಗೊತ್ತುವಳಿಯನ್ನು ಸ್ವೀಕರಿಸುವುದು ಸಾಧ್ಯವಾಗಲಾರದೆಂದು ಇವರ ಅಭಿಪ್ರಾಯವಾಗಿದೆ. ಉದಾಹರಣೆಗೆ, ಫಿಲಿಪೀನದ ಪ್ರತಿನಿಧಿಗಳೂ ಭದ್ರತಾ ಮಂಡಳದ ಈ ತಿಂಗಳ ಅಧ್ಯಕ್ಷರೂ ಆಗಿರುವ ಕೊಮುಲೋರವರು ಕಳೆದ ನಾಲ್ಕು ವರ್ಷಗಳಲ್ಲಿ ನಡೆದಿರುವ ಬೆಳವಣಿಗೆಯನ್ನೂ ಆ ದೃಷ್ಟಿಯಲ್ಲಿ ಕಾಶ್ಮೀರದ ಬಗ್ಗೆ ಸಂಯುಕ್ತ ರಾಷ್ಟ್ರ ಸಂಘದ ಪರವಾಗಿ ನೇಮಿಸಿದ್ದ ನಾಲ್ವರು ನಿರೀಕ್ಷಕರ ವರದಿಗಳನ್ನೂ ಇತರ ದಾಖಲೆಗಳನ್ನೂ ಪುನಃ ಪರಿಶೀಲಿಸಿ ಭದ್ರತಾ ಮಂಡಳದ ಸದಸ್ಯರು ಒಂದು ತೀರ್ಮಾನಕ್ಕೆ ಬರಬೇಕಾದರೆ ಸ್ವಲ್ಪ ಸಮಯ ಬೇಕಾಗಬಹುದು ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಆದುದರಿಂದ ಪಾಕಿಸ್ತಾನದ ದೂರನ್ನೂ ಅದಕ್ಕೆ ಭಾರತದ ಸಮಾಧಾನವನ್ನೂ ಕೇಳಿಕೊಂಡ ಬಳಿಕ ಭದ್ರತಾ ಮಂಡಳದ ಸಭೆಯು ಮುಂದುವರಿಯಬಹುದೆಂದೂ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳಿಗೆ ಸಮಯವನ್ನು ಅಭ್ಯಸಿಸುವ ಅವಕಾಶವನ್ನೊದಗಿಸುವುದಕ್ಕಾಗಿ ಹೀಗೆ ಸಭೆ ಮುಂದರಿಯುವುದು ಅವಶ್ಯವೆಂದೂ ಹೇಳಲಾಗುತ್ತದೆ. ಮುಂದಿನ ಸಭೆ ಮತ್ತೆ ಯಾವಾಗ ಎಂದು ಸೇರಬಹುದೊ ತಿಳಿದಿಲ್ಲ. ಇದರಂತೆ ಮಹಾ ರಾಷ್ಟ್ರಗಳಾದ ಬ್ರಿಟನ್ ಮತ್ತು ಅಮೇರಿಕಗಳ ಸಹ ಗೊತ್ತಾಗಿಲ್ಲ. ಬ್ರಿಟನಿನಲ್ಲಿ ಈಗ ಮಂತ್ರಿಮಂಡಳದ ಬದಲಾವಣೆ ನಡೆದಿದ್ದು ಅಮೇರಿಕದ ಮನಸ್ಸನ್ನು ಒಲಿಸಿಕೊಳ್ಳುವುದೇ ಈಗಿನ ಪ್ರಧಾನಿ ಮ್ಯಾಕ್‌ಮಿಲನ್ ಪಡಿಸಿರುವ ಘೋರಣೆಯಾಗಿದೆ. ಆದುದರಿಂದ ಅಮೇರಿಕವು ಏನು ಹೇಳುತ್ತದೋ ಅದಕ್ಕೆ ಸೈಗುಟ್ಟುವ ಘೋರಣೆಯನ್ನು ಕಾಶ್ಮೀರದ ಸಮಸ್ಯೆಯ ಗುಟ್ಟಿಗೆ ಬ್ರಿಟನ್ ಪಡಿಸಬಹುದು. ಅಮೇರಿಕವು ಏನು ಮಾಡುತ್ತದೆ? ಹಿಂದೆ ಕಾಶ್ಮೀರ ಪ್ರಶ್ನೆಯು ಕೊನೆಯದಾಗಿ ಭದ್ರತಾ ಮಂಡಳದ ಮುಂದೆ ಬಂದುದು ೧೯೫೨ನೇ ದಶಂಬರದಲ್ಲಿ— ಆಗ ಏಕರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದರೂ ಟ್ರೂಮನ್ನರೇ ಇನ್ನೂ ಅಧಿಕಾರದಲ್ಲಿದ್ದರು. ಆ ಮುದರಿಂದ ಹಿಂದೆ ಆ ಮೇರಿಕವು ಏನೇ ಅಭಿಪ್ರಾಯವನ್ನು ಹೊಂದಿರಲಿ.—ಆದು ಇಂದಿನ ಏಕರ ಆಮೇರಿಕದ ಅಭಿಪ್ರಾಯವೆನಿಸಲಾರದು. ಏಕರ ಸರಕಾರಕ್ಕೆ ಕಾಶ್ಮೀರದ ಕುರಿತು ಅಭಿಪ್ರಾಯವನ್ನು ವ್ಯಕ್ತಪಡಿಸುವ ಸಂದರ್ಭ ಇಪ್ಪರಿ ವರೆಗೆ ಬಂದಿರಲಿಲ್ಲ. ಆದುದರಿಂದ ಈಗ ಹೊಸದಾಗಿ ಏಕರು ಈ ಬಗ್ಗೆ ನಿರ್ಣಯವೊಂದನ್ನು ಕೈಗೊಳ್ಳಬೇಕಾಗಿದೆ. ಅಮೇರಿಕದ ಮನಸ್ಸನ್ನು ಹೇಗಾದರೂ ಮಾಡಿ ಒಲಿಸಿಕೊಳ್ಳಬೇಕೆನ್ನುವುದಕ್ಕಾಗಿ ಪಾಕಿಸ್ತಾನವು ಅನೇಕ ರೀತಿಯಲ್ಲಿ ನ್ಯೂಢ ಪ್ರಯತ್ನ ಮಾಡುತ್ತಿದೆ. ಉದಾಹರಣೆಗೆ "ಭಾರತದ ಭಯಾನಕ ಆಡಳಿತ"ವು ಕಾಶ್ಮೀರದಲ್ಲಿ ನಡೆದಿದೆ ಎಂದೂ ಅಲ್ಲಿ ಜನಾಭಿಪ್ರಾಯವನ್ನು ಉಗ್ರವಾಗಿ ಹತ್ತಿಕ್ಕಲಾಗುತ್ತಿದೆಯೆಂದೂ ಸೇನೆಗಳ ಕಾರುಭಾರೇ ಕಂಡು ಬರುತ್ತಿದೆಯೆಂದೂ ಇದು ರಕ್ಷ್ಯವು ಹಿಂಗೇರಿಯಲ್ಲಿ ಕೈಗೊಂಡಿರುವ ಆತ್ಯಾಚಾರಕ್ಕೆ ಯಾವ ಪ್ರಕಾರದಲ್ಲೂ ಕಡಿಮೆಯಾದುದಲ್ಲವೆಂದೂ ಪಾಕಿಸ್ತಾನವು ಹೇಳುತ್ತದೆ. ಗುಡ್ಡ ಗಾಡು ಜನರು ಕಾಶ್ಮೀರದ ಜನರ ಬಗ್ಗೆ ಗಾಢವಾದ ಸಹಾನುಭೂತಿಯುಳ್ಳವರಾಗಿದ್ದಾರೆ. ಇವರು ಕಾಶ್ಮೀರದೊಳಗುಗ್ಗಲು ತೀವ್ರಾಪೇಕ್ಷೆಯುಳ್ಳವರಾಗಿದ್ದಾರೆ. ಇವರನ್ನು ತಡೆದಿಡುವುದು ಸಾಧ್ಯವಾಗಲಾರದು. ಗುಡ್ಡ ಗಾಡು ಜನರ ಅಸಂತುಷ್ಟಿಯನ್ನು ಬೆಳೆಯಗೊಟ್ಟುದಾದರೆ ಸೈನಿಕ ಶಾಣ್ಯಗಳ ದೃಷ್ಟಿಯಿಂದ ಅಯಕಟ್ಟಿನದಾದ ಪ್ರದೇಶದಲ್ಲಿ ಅಶಾಂತಿಯೆನ್ನು ಹುಟ್ಟಿಸಿದಂತೆ ಆಗುತ್ತದೆ. ಇದು ಕಮ್ಯುನಿಸಮ್ಮಿನ ಪ್ರಸಾರಕ್ಕೆ ಕಾರಣವಾಗಬಹುದು ಎಂದು ಸಹ ಪಾಕಿಸ್ತಾನವು ಹೇಳುತ್ತದೆ. ಸುಯೇಜಿನ ಪ್ರಶ್ನೆಯ ಪರಿಹಾರ ಕೈಗೊಂಡಂತೆ, ಕಾಶ್ಮೀರದಲ್ಲಿ ಸಹ ಆಲ್ಲೀಗ ತಳವೂರಿರುವ (ಭಾರತದ) ಸೈನ್ಯವನ್ನು 'ಬಲಾತ್ಕಾರವಾಗಿ ಹೊರದಬ್ಬಬೇಕು' ಸಂಯುಕ್ತ ರಾಷ್ಟ್ರ ಸಂಘದ ಸೇನೆಯನ್ನು ನೆಲೆಗೊಳಿಸಿದ್ದಾದರೆ ಪಾಕಿಸ್ತಾನವು ತನ್ನ ವಶದಲ್ಲಿರುವ ಭೂಭಾಗದಿಂದ ಸೇನೆಯನ್ನು ವಾಪಸು ಪಡೆಯುವುದೆಂಬ ಪರಿಹಾರ ಮಾರ್ಗವನ್ನು ಸಹ ಪಾಕಿಸ್ತಾನದ ಸರಕಾರ ಮುಂದಿಟ್ಟಿರುತ್ತದೆ. ಭಾರತವು ಯುದ್ಧ ಸನ್ನದ್ಧನಾಗಿದೆಯೆಂದೂ ಸೈನ್ಯಗಳನ್ನು ಆದು ಕಾಶ್ಮೀರದಲ್ಲೂ ಪಾಕಿಸ್ತಾನದ ಗಡಿಯಲ್ಲೂ ಉದ್ದೇಶಪೂರ್ವಕವಾಗಿ ತಂದು ನಿಲ್ಲಿಸಿದೆಯೆಂದೂ ಹೇಳುತ್ತಾ ಪಾಕಿಸ್ತಾನದ ಅಧ್ಯಕ್ಷರು ತಮ್ಮ ವಿಮಾನಪಡೆಗೆ ಯುದ್ಧಕ್ಕೆ ಸನ್ನದ್ಧರಾಗಿ ನಿಂತಿರುವ ಆವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ. ಜೀಗೆ ನಾನಾ ಬಗೆಯ ಆರೋಪ ಆಪಾದನೆಗಳನ್ನು ಮಾಡುತ್ತಾ ಪಾಕಿಸ್ತಾನವು ಭಾರತ ಕೈಯುದ್ಧ ದಾಹವಿದೆಯೆಂದೂ ಕಾಶ್ಮೀರವನ್ನದು ಅನ್ಯಾಯದಿಂದ ಪುಂಗಲು ಪವಣಿಕುತ್ತಿದೆಯೆಂದೂ ಕಾಶ್ಮೀರದ ಪ್ರಜೆಗಳು ತೀರ ಅಸುಖಿಗಳಾಗಿದ್ದಾರೆಂದೂ ಚಿತ್ರವನ್ನು ರೇಖಿಸಲು ಒದ್ದಾಡುತ್ತಿದೆ. ಆದರೆ ಸತ್ಯವನ್ನು ತಿಳಿದವರು ಈ ಪ್ರಲಾಪಗಳು ವಾಸ್ತವಿಕ ಮಹತ್ವವನ್ನು ಹೊಂದಿಲ್ಲವೆಂದು ಸುಲಭದಲ್ಲಿ ಮನಗಂಡಿದ್ದಾರೆ ನಿದರ್ಶನಕ್ಕಾಗಿ ಈಜೆಗೆ ಕಾಶ್ಮೀರವನ್ನು ಸಂದರ್ಶಿಸಿದ ಬ್ರಿಟನಿನ ಮಾಜಿ ಪ್ರಧಾನಿ ಅಲ್ಲ್ ಲೈಟ್ಲಿಯನವರು ಭಾರತ ದೊಡನೆ ಸೇರ್ಪಡೆಹೊಂದಲು ಆತುರವಾಗಿರುವ ಕಾಶ್ಮೀರ ಭೂಭಾಗವಲ್ಲಿ ಗ್ರಾಮ ಮಟ್ಟದಲ್ಲಿಯೇ ನೆಲೆಗೊಂಡಿರುವ ಪ್ರಜಾಸತ್ತಾತ್ಮಕ ಸರಕಾರವಿದೆಯೆಂದೂ ಆದು ದಕ್ಷವಾಗಿದೆಯೆಂದೂ ಅಲ್ಲಿ ಅಭಿವೃದ್ಧಿ ಪ್ರಯತ್ನಗಳು ನಡೆದಿವೆಯೆಂದೂ ಹೇಳಿದ್ದಾರೆ ಪಾಕಿಸ್ತಾನದ ಘಟನೆಗಿತ ಕಾಶ್ಮೀರದ ಘಟನೆಯು ಉತ್ಕೃಷ್ಟವಾಗಿದೆ; ಪಾಕಿಸ್ತಾನಕ್ಕಿಂತ ಹೆಚ್ಚಿನ ಅಭಿವೃದ್ಧಿಯನ್ನು ಕಾಶ್ಮೀರವು ಭಾರತದ ಸಹಾ

ಸೂಚನೆಗಳು:—

ನಾವು ೩೪-೧-೫೭ಕ್ಕೆ ಪ್ರಕಟಿಸಬೇಕೆಂದಿದ್ದ ನವಯುಗದ ಪ್ರಜಾರಾಜ್ಯ ವಿಶೇಷ ಸಂಚಿಕೆಯನ್ನು ಅನಿವಾರ್ಯ ಕಾರಣಗಳಿಂದ ಒಂದುವಾರ ವಿಳಂಬವಾಗಿ, ೩೧-೧-೫೭ಕ್ಕೆ ಹೊರಡಿಸುವೆವು. ಈ ವಿಶೇಷ ಸಂಚಿಕೆಯ ಪ್ರಕಟನೆಯ ಸಂಬಂಧ ತಾ೩೪—೧—೫೭ರ ಸಂಚಿಕೆಯನ್ನು ಹೊರಡಿಸಲಾಗುವುದಿಲ್ಲ. ಇದನ್ನು ಪಾಠಕರು ಗಮನಿಸಬೇಕಾಗಿ ವಿನಂತಿ.

ಕರ್ನಾಟಕದ ಸುಪ್ರಸಿದ್ಧ ಲೇಖಕರ ನೇಕರ ವಿಶೇಷ ಲೇಖನಗಳಿಂದ ತುಂಬಿರುವ ೧೯೫೭ಕ್ಕೆ ಪ್ರಕಟವಾಗುವ ಪ್ರಜಾರಾಜ್ಯ ವಿಶೇಷಾಂಕವನ್ನು ನಿರೀಕ್ಷಿಸಿರಿ.

ಸಿಬ್ಬಂದಿ ವರ್ಗ.

In The Court of The District Munsiff of Mangalore

R. E. P. No. 659/56.

Between :-

Srimad Anantheswar Temple, Manjeshwar —Petitioner

and

K. Ramappa —Respondent

To Garnishee.

Paride Beary S/o Hammade Beary residing at Kumballi Kasbe village, Manjarbad Taluk, Sakleshpur P. O.

Please take, notice that the Petitioner has filed the above E.P. for attachment of the simple mortgage debt due by you to the Respondent in respect of the Registered mortgage deed dated 25—4—1948 and the said application is posted to 8—2—1957 at 11 A. M. for filing your counter if any. In case you fail to appear on that day, the matter will be decided exparte.

(By order of the Court)

M. Venkatraya Kamath.

Advocate for Petitioner.

Mangalore, 11—1—1957.

ಆಕಾಶವಾಣಿ—ಬೆಂಗಳೂರು

(ಸೀರೆ ಸುಟದಿಂದ)

ಟೂರ್ನಮೆಂಟ್, ನ್ಯೂಜಿಲೆಂಡ್ ಪ್ರವಾಸಿ ತಂಡ ಮತ್ತು ದಕ್ಷಿಣ ವಲಯದ ತಂಡಗಳ ನಡುವೆ ನಡೆದ ಕ್ರಿಕೆಟ್ ಆಟ, ರಾಷ್ಟ್ರೀಯ ಈಜುಗಾರಿಕೆ ಸ್ಪರ್ಧೆ ಇತ್ಯಾದಿಗಳ ಪ್ರತ್ಯಕ್ಷ ವಿವರಣೆಯನ್ನು ಬೆಂಗಳೂರು ಆಕಾಶವಾಣಿ ಕೇಂದ್ರವು ಏರ್ಪಡಿಸಿತ್ತು. ವಿದೇಶಗಳಿಂದ ಒಂದ ಪ್ರಮುಖ ವ್ಯಕ್ತಿಗಳು ಈ ರಾಜ್ಯದಲ್ಲಿ ಪ್ರವಾಸ ಕೈಗೊಂಡಾಗ ಈ ಕೇಂದ್ರವು ವ್ಯಾಪಕವಾದ ರೇಡಿಯೋ ವರದಿಗಳನ್ನು ಬಿತ್ತರಿಸುತ್ತಿದೆ.

ಬೆಂಗಳೂರು ಕೇಂದ್ರದಿಂದ ಇಂಗ್ಲೀಷ್ ಮತ್ತು ಕನ್ನಡ ಭಾಷೆಗಳಲ್ಲಿ ಬಿತ್ತರಿಸಲಾದ ಭಾಷಣಗಳು ಹಾಗೂ ಚರ್ಚೆಗಳು ಜೀವನದ ಎಲ್ಲಾ ವಿಚಾರಗಳಿಗೂ ಸಂಬಂಧಿಸಿದೆ. ಪಂಚವಾರ್ಷಿಕ ಯೋಜನೆ ಮತ್ತಿತರ ಅಭಿವೃದ್ಧಿ ಯೋಜನಾ ಕಾರ್ಯಗಳಂತಹ ವಿಷಯಗಳ ಮೇಲೆ ಅನುಭವ ಪಡೆದಿರುವವರಿಂದ ಭಾಷಣಾದಿಗಳನ್ನು ವ್ಯವಸ್ಥೆಗೊಳಿಸಲಾಯಿತು

ಮಹಿಳೆಯರಿಗಾಗಿ ಕಾರ್ಯಕ್ರಮವನ್ನು ವಾರಕ್ಕೆರಡುಸಾರಿ ಬಿತ್ತರಿಸಲಾಗುವುದು. ಈ ಕಾರ್ಯಕ್ರಮಗಳ ಅವಧಿಯನ್ನು ಈಚೆಗೆ ೪೫ ನಿಮಿಷಗಳಿಗೆ ಹೆಚ್ಚಿಸಿ, ಹೆಚ್ಚಿನ ವೈವಿಧ್ಯತೆಗೆ ಅವಕಾಶವೀಯಲಾಗಿದೆ. ಮಕ್ಕಳ ಕಾರ್ಯಕ್ರಮವನ್ನು ಶನಿವಾರ ಹಾಗೂ ಭಾನುವಾರ ದಿನಗಳಂದು ಬಿತ್ತರಿಸಲಾಗುವುದು. ನಾನಾ ಶಿಶು ವಿಹಾರಗಳು, ಪ್ರಾಥಮಿಕ ಶಾಲೆಗಳು, ಶಿಶು ರಕ್ಷಣಾ ಸಂಸ್ಥೆಗಳು ಮತ್ತು ಪ್ರಸಿದ್ಧ ಶಿಶುಸಾಹಿತ್ಯ ಗ್ರಂಥಕರ್ತರ ಸಹಕಾರದೊಂದಿಗೆ ಮಕ್ಕಳ ಕಾರ್ಯಕ್ರಮಗಳನ್ನು ನಿಯೋಜಿಸಲಾಗುತ್ತಿದೆ. ಆಕಾಶವಾಣಿಯ ಮಕ್ಕಳ ಕುಂಟೆದಲ್ಲಿ ಒಂದು ಸಹಸ್ರಕ್ಕೂ ಮಿಂರಿದ ಸದಸ್ಯರಿದ್ದಾರೆ, ಈ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿದೆ.

ವಾರ್ತಾ ಪ್ರಸಾರವು ಆಕಾಶವಾಣಿಯ ಒಂದು ಮುಖ್ಯ ಕಾರ್ಯವಾಗಿದೆ. ಪ್ರತಿನಿತ್ಯವೂ ಆಕಾಶವಾಣಿ ಕೇಂದ್ರದಿಂದ ಏಳು ಪ್ರಕಟಣೆಗಳನ್ನು (ನ್ಯೂಸ್ ಬುಲೆಟಿನ್ಸ್) ನಾಲ್ಕು ಇಂಗ್ಲೀಷ್, ಎರಡು ಕನ್ನಡ ಹಾಗೂ ಒಂದು ಹಿಂದಿ ವಾರ್ತಾ ಪ್ರಕಟಣೆಗಳನ್ನು ಬಿತ್ತರಿಸಲಾಗುವುದು. ೧೯೫೬ರ ಸೆಪ್ಟೆಂಬರ್ ೩೦೦೦ ಪ್ರಾದೇಶಿಕ ವಾರ್ತಾ ಪ್ರಕಟಣೆಯೊಂದನ್ನು ಕನ್ನಡದಲ್ಲಿ ೧೧ ನಿಮಿಷಗಳ ಕಾಲ ಬಿತ್ತರಿಸಲಾಗುತ್ತಿದೆ.

ವಿನಂತಿ:—

"ನವಯುಗ"ದ ಚಂದಾಹಣ ಬಾಕಿಯಿರುವ ಚಂದಾದಾರರು, ದಯವಾಡಿ ಅದನ್ನು ಈಗಲಾದರೂ ಕಳುಹಿಸಿಕೊಡುವಂತೆ ಇನ್ನೊಮ್ಮೆ ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇವೆ. ಚಂದಾರ್ಕಣವನ್ನು ಸಕಾಲದಲ್ಲಿ ಪಾವತಿಮಾಡುವುದೇ 'ನವಯುಗ'ಕ್ಕೆ ಮಾಡುವ ದೊಡ್ಡ ಉಪಕಾರವಾಗಿದೆ. ಹಿಂದಿನಂತೆಯೇ ಮುಂದೆಯೂ ಅಭಿಮಾನದಿಂದ ಚಂದಾಹಣವನ್ನು M. O. ಮಾಡಬೇಕಾಗಿ ಕೇಳಿಕೊಳ್ಳುತ್ತೇವೆ.

—ಮೆನೇಜರ್.

ಎರಡನೇ ಪಂಚವಾರ್ಷಿಕ ಯೋಜನೆಯು ಕೈಗಾರಿಕೆಗಳ ವಿಕಾಸಕ್ಕೆ ಮಹತ್ವವನ್ನು ಕೊಟ್ಟಿರುವುದು ನಿಜವಾದರೂ ಕೃಷಿಕ್ಷೇತ್ರದ ಉತ್ಪಾದನೆಯನ್ನು ಸ್ವಲ್ಪಮಾತ್ರಕ್ಕೂ ಉಪೇಕ್ಷಿಸತಕ್ಕದ್ದಲ್ಲವೆಂದು ಪ್ರಧಾನಮಂತ್ರಿಗಳು ಈಚೆಗೆ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಅಧಿವೇಶನದಲ್ಲಿ ಎಚ್ಚರದ ನುಡಿಗಳನ್ನಾಡಿದರು. ಪ್ರಧಾನಮಂತ್ರಿಗಳ ಭಾಷಣ ನಡೆಯುತ್ತಿರುವುದನ್ನು ಚಿತ್ರದಲ್ಲಿ ನೋಡಬಹುದು.

ಉಡುಪಿ

ಸಹೋತ್ಸವ ಮುಕ್ತಾಯ— ಉಡುಪಿ ಶ್ರೀ ಕೃಷ್ಣ ಮಠದಲ್ಲಿ ಪರ್ಯಾಯ ಅಧಿನದಲ್ಲಿರುವ ಶ್ರೀ ಪಲಿಮಾರು ಮಠದ ಶ್ರೀ ವಿಬುಧೇಶತೀರ್ಥ ಸ್ವಾಮಿಗಳವರ ನೇತೃತ್ವದಲ್ಲಿ ಈಗಿನ ಪುಂಗಳ ವಾರ ಪ್ರಾರಂಭವಾದ ಸಹೋತ್ಸವವು ತಾ. 14ರಲ್ಲು ಹಗಲು ತೇರು, ಅವಭೃತ ಸ್ನಾನ ಮೊದಲಿಗೆ ಯಶಸ್ವಿಯಾಗಿ ಕೊನೆಗೊಂಡಿತು.

ಮುನಿಸಿಪಲ್ ಕೌನ್ಸಿಲಿನ ಸಭೆಯು— ತಾ. 12ರಲ್ಲು ನಗರಸಭಾಪತಿ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಸಿಮೆಯಲ್ ಪೊಟೊ ಹೌಸಿನಿಂದ ರಥವೀಧಿ ಜಂಕ್ಷನ್ ವರೆಗಿನ ರಸ್ತೆಗೆ ಸಿಮೆಂಟ್ ಕಾಂಕ್ರೀಟ್ ಹಾಕುವ ಯೋಜನೆಯನ್ನು ಸ್ವಾಗತೀಕರಿಸಲಾಯಿತು. ನೀರು ಸರಬರಾಜು ಮತ್ತು ಚರಂಡಿ ಯೋಜನೆಯನ್ನು ಈ ನೆಗರಕ್ಷೇತ್ರದಲ್ಲಿ ಕಾರ್ಯರೂಪಕ್ಕೆ ತರುವ ಸರಕಾರೀ ಯೋಜನೆಯನ್ನು ಸ್ವಾಗತೀಕರಿಸಲಾಯಿತು. ಅಲ್ಲದೆ ಆ ಎರಡು ಬಾಬುಗಳ ಲೆಕ್ಕದಲ್ಲಿರುವ ಜನವನ್ನು ನಗರ ಸಭೆಯು ಸರಕಾರಕ್ಕೆ ಕೊಡಲು ಸಿದ್ಧವಾಗಿದೆ ಎಂದೂ ನುಂಚಕ್ಕೆ ಪರ್ಷಕ್ಕೆ ರೂ. 15,000ದಂತೆ ಕೊಡುವುದಾಗಿಯೂ ಸರಕಾರಕ್ಕೆ ತಿಳಿಸಲಾಯಿತು. ಮದ್ರಾಸಿನ ಡಾ. ಯು. ಎಲ್. ನಾರಾಯಣ ರಾಯರು ಆಜ್ಜರಕಾಡಿನಲ್ಲಿ ಈಗ ಇರುವ ರೇಡಿಯೋದ ಬದಲಿಗೆ ಹೊಸ ರೇಡಿಯೋ ಇಡಲು ತಗಲುವ ಖರ್ಚನ್ನು ತಾನು ಕೊಡುವುದಾಗಿ ತಿಳಿಸಿದ ಬಗ್ಗೆ ಧನ್ಯವಾದಗಳನ್ನರ್ಪಿಸಲಾಯಿತು. ಧಾರಿತ ಸೇವಕ ಸನ್ಮಾನದನರು ದಾನವತ್ತ ಆಜ್ಜರಕಾಡಿನ ಕಟ್ಟಡವನ್ನು ರೀಡಿಂಗ್ ರೂಮ್ ಮತ್ತು ಲೈಬ್ರೆರಿಗೆ ಉಪಯೋಗಿಸಬಹುದೆಂದಾಯಿತು. ನವ ಮೈಸೂರು ರಾಜ್ಯದ ಹೊಸ ವೇತನ ಸ್ಕೇಲನ್ನು ಈ ನಗರಸಭೆಯ ಶಿಬಂದಿಗೂ ಅನ್ವಯಿಸಬೇಕೆನ್ನುವ ಶ್ರೀ ಕೆ. ದಾಸ ನೇರಿಗಾರರ ನಿರ್ಣಯವನ್ನು ಕೆಲವೊಂದು ಆರ್ಥಿಕ ಪರಿಶೀಲನೆಗಾಗಿ ಮುಂದರಿಸಿದಲಾಯಿತು

ಉದ್ಘಾಟನೆ— ಉಡುಪಿ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನತೀರ್ಥ ಸ್ವಾಮಿಗಳವರು ತಮ್ಮ ಮಠದ ಕಡೆಯಿಂದ ಮುದ್ರಿಸಿದ ಉಡುಪಿ (ಕ್ಷೇತ್ರ ಪರಿಚಯ) ಪುಸ್ತಕವನ್ನು ತಾ. 13ರಲ್ಲು ಸಂಜೆ ಪರ್ಯಾಯ ಅಧಪೂರ್ಯ ಮಠದ ಶ್ರೀ ವಿಬುಧೇಶತೀರ್ಥ ಸ್ವಾಮಿಗಳ ವರು ಉದ್ಘಾಟಿಸಿದರು. ಶ್ರೀ ಬನ್ನಂಜೆ ರಾಮಾಚಾರ್ಯರು ಶ್ರೀ ಮಠದ ಕಡೆಯಿಂದ ಸ್ವಾಗತಿಸಿದರು. ಕೊನೆಯಲ್ಲಿ ಶ್ರೀ ಬಿ. ಶ್ರೀನಿವಾಸ ಭಟ್ಟರು ಧನ್ಯವಾದವಿತ್ತರು.

ಮಂಗಳೂರು

ವಿಜಯಾ ಬ್ಯಾಂಕಿನ ರಜತೋತ್ಸವದಲ್ಲಿ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು— ಇವೇ ತಾ. 14ರಂದು ಶ್ರೀ ರಾಮಕೃಷ್ಣ ನಿಷ್ಕಾರ್ಥಿ ಭವನದಲ್ಲಿ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ವಿಜಯಾ ಬ್ಯಾಂಕಿನ ರಜತೋತ್ಸವ ಸಮಾರಂಭವು ಜರಗಿತು. ಮಂತ್ರಿಗಳು ಮೊತ್ತಾಮೊದಲು ಪ್ರ. ಕ. ಜಿಲ್ಲೆಯ ಬ್ಯಾಂಕಿಂಗ್ ವ್ಯವಹಾರದಲ್ಲಿ ತುಂಬಾ ಮುಂದುವರಿದಿವೆಯೆಂದೂ, ಹಳೆ ಮೈಸೂರಿನಲ್ಲಿ ಬೇಂಕಿಂಗ್ ಉದ್ಯಮವು ಚೆನ್ನಾಗಿ ಬೆಳೆದಿಲ್ಲವೆಂದೂ ಕೃಷಿ-ಕೈಗಾರಿಕೆಗಳ ಬೆಳವಣಿಗೆಗೆ ಬ್ಯಾಂಕಿಂಗ್ ತುಂಬಾ ಸಹಕಾರಿಯೆಂದೂ ಆದರೆ ನನ್ನು ರೀತಿಯ ಬ್ಯಾಂಕುಗಳು ವಾಣಿಜ್ಯ ಬ್ಯಾಂಕುಗಳಾಗಿಯೇ ಉಳಿದಿರುವುದರಿಂದ ಗ್ರಾಮಾಂತರಗಳ ಕೃಷಿಕರಿಗೆ ಸಹಕಾರಿ ತತ್ವದ ಮೇಲೆ ಬ್ಯಾಂಕಿಂಗ್ ಸೌಲಭ್ಯ ಒದಗಿಸಬೇಕೆಂದೂ ಪಂಚವಾರ್ಷಿಕ ಯೋಜನೆಯಿಂದಾಗಿ ಸಣ್ಣ ಚಿಲ್ಲರೆಯು ಜಾಸ್ತಿಯಾಗುವುದರಿಂದ ಬ್ಯಾಂಕುಗಳು ಜನದ ದುರುಪಯೋಗವಾಗದಂತೆ ಜಾಗ್ರತೆ ವಹಿಸಬೇಕೆಂದೂ ಹೇಳಿದರು. ಬ್ಯಾಂಕಿನ ಸ್ಥಾಪಕ ಚೇರ್‌ಮೇನರಾಗಿದ್ದ ಮೈಸೂರಿನ ಆರೋಗ್ಯ ಮಂತ್ರಿ ಶ್ರೀ ಎ. ಬಿ ಶೆಟ್ಟರು ಉಪಸ್ಥಿತರಿದ್ದರು.

ಆರಂಭದಲ್ಲಿ ಚೇರಮೆನ್‌ರಾದ ಶ್ರೀ ಸುಂದರರಾಯ ಶೆಟ್ಟರು ಸ್ವಾಗತಮಾತುಗಳನ್ನಾಡುತ್ತಾ ಶ್ರೀ ಎ. ಬಿ. ಶೆಟ್ಟರೇ ಮುಂತಾದವರಿಂದಿನ ಆದರ್ಶ ಬೆಂಡಿಕೆಯವರು ಸಾಧಿಸಿದ ಪ್ರಗತಿಯನ್ನು ವಿವರಿಸಿದರು. ಬೇಂಕಿನ ಸುಪರಿಂಟೆಂಡೆಂಟರು ಪ್ರಮುಖ ವ್ಯಕ್ತಿಗಳಿಂದ ಬಂದ ಶುಭಾಶಯಗಳನ್ನೊದಿದರು. ಕೆ. ಆರ್. ಆಚಾರ್ ಮತ್ತು ಎಫ್. ಎಕ್ಸ್. ಡಿ. ಪಿಂಟೋರವರು ಬ್ಯಾಂಕಿನ ಪ್ರಗತಿಪರ ಭಾಷಣಮಾಡಿದರು. ಬ್ಯಾಂಕಿನ ಡೈರೆಕ್ಟರ್ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಧನ್ಯವಾದಗಳನ್ನಿತ್ತರು. ಬಳಿಕ ಮೂಸ್ತರ್ ವಿಠಲ್‌ರ ಶಿಷ್ಯೆಯರಿಂದ ಭರತನೃತ್ಯ ಪ್ರದರ್ಶನ ಜರಗಿತು.

ರಾತ್ರಿ ಬೇಂಕಿನ ಡೈರೆಕ್ಟರ ಮಂಡಳಿಯು ಗೌರವಾರ್ಥವಾಗಿ ಶ್ರೀ ಎಸ್. ಸುಬ್ರಾಯಬಲ್ಲಿ ಮತ್ತು ಎ. ನಾರಾಯಣ ಹೆಗ್ಡೆಯವರು ಏರ್ಪಡಿಸಿದ ಭೋಜನ ಸತ್ಕಾರಕೂಟದಲ್ಲಿ ಮುಖ್ಯಮಂತ್ರಿಗಳು, ಆರೋಗ್ಯಮಂತ್ರಿ ಶ್ರೀ ಎ. ಬಿ. ಶೆಟ್ಟರೂ ಭಾಗವಹಿಸಿದರು

ವೈಕೂರು ಮತ್ತು ಕನ್ನಡ ಮಾತನಾಡುವ ಪ್ರದೇಶಗಳ ಸಾಂಸ್ಕೃತಿಕ ಪ್ರಗತಿಯಲ್ಲಿ, ಬೆಂಗಳೂರು ದೇಡಿಯೋ ಕೇಂದ್ರದ ಉದ್ಘಾಟನೆಯು ಒಂದು ಮುಖ್ಯವಾದ ಮೈಲಿಗಲ್ಲೆನಿಸಿದೆ. ಕನ್ನಡ ಮಾತನಾಡುವ ಪ್ರದೇಶಗಳ ಭವ್ಯ ಹಾಗೂ ಪುರಾತನ ಸಾಂಸ್ಕೃತಿಕ ಪರಂಪರೆಯನ್ನು ಹೆರಡಲು ಹಾಗೂ ಜನತೆಯ ಸಾಂಸ್ಕೃತಿಕ ಅಗತ್ಯಗಳನ್ನು ಈಡೇರಿಸಲು ಬೆಂಗಳೂರು ಕೇಂದ್ರವು ಆಕಾಶವಾಣಿ ಧಾರವಾಡ ಕೇಂದ್ರವನ್ನು ನಿಕಟ ಸಹಕಾರದೊಂದಿಗೆ ಸರ್ವ ಪ್ರಯತ್ನ ಮಾಡುತ್ತಿದೆ. ಕರ್ನಾಟಕದ ಉದಯದೆ ಕಾಲಬಲ್ಲಿಯೇ ಆಕಾಶವಾಣಿ ಬೆಂಗಳೂರು ಕೇಂದ್ರದವರು ಪ್ರಥಮ ವಾರ್ಷಿಕೋತ್ಸವನ್ನು ಆಚರಿಸುತ್ತಿರುವುದು ಮತ್ತಷ್ಟು ಸಂತೋಷದಾಯಕವಾದ ವಿಚಾರ. ಕರ್ನಾಟಕದ ಉದಯದೊಂದಿಗೆ ಬೆಂಗಳೂರು ಕೇಂದ್ರದ ಜವಾಬ್ದಾರಿಯು ಸ್ವಾಭಾವಿಕವಾಗಿ ಹೆಚ್ಚಾಗುವುದು.

ರೂಪಾಯಿ 75,000 ಪಡೆಯಿರಿ— 24 D ಯಲ್ಲಿ

ಕೆವರ್‌ಸನ ಉತ್ತರಕ್ಕೆ ರೂ65,000, ಪ್ರಥಮದ 3ಸಾವಿರಕ್ಕೆ ಉತ್ತರಕ್ಕೆ ರೂ7000, ಪ್ರಥಮದ 2ಸಾವಿರಕ್ಕೆ ಸಮಉತ್ತರಕ್ಕೆ ರೂ 3000, ನಿಯಮಗಳಿಗೆ 0-4-0

ಉತ್ತರಕ್ಕೆ 0-4-0 ಪ್ರವೇಶಧನ ಒಂದು ಉತ್ತರಕ್ಕೆ ರೂ1. ಆದು ಉತ್ತರಗಳಿಗೆ ರೂ5. ಕಂಡದ್ದಲ್ಲಿ ಜನವ್ಲೂ ಮೊತ್ತವು 1ರಿಬರುವಂತೆ 3300ರಿಂದ 87ರವರೆಗಿನ ಅಂಕೆಗಳನ್ನು ಕೂಡಿಸಿರಿ. ಒಂದು ಅಂಕೆಯನ್ನು ಒಮ್ಮೆ ಮೊತ್ತ ಉಪಯೋಗಿಸ ತಕ್ಕುದು. ಪ್ರವೇಶಧನ ಜನೆಯೊಡ ದಾಮೂಲಯದಲ್ಲಿ ಜಯವಾಣ ಮಂಚಿಲಾಗುವುದು. ಪ್ರವೇಶ ಧನವನ್ನು M. O. ಮೂಲಕ ಕಳುಹಿಸಿರಿ. ಉತ್ತರ ಸ್ವೀಕಾರವ ಕೊನೆಯದಿನ 28.1.57. ಫಲಿತಾಂಶ ಪ್ರಕಟಣೆ 26-1 57 ಉತ್ತರವೆಹಿದವೆ M. O. ರಶೀದಿಯನ್ನು ಲಕ್ಷೀಕರಿಸಿ ಇಂಗ್ಲೀಷಿನಲ್ಲಿ ಬರೆಯಿರಿ.

Devi Co. 59, A. B. Road, Choolai. Madras-7.

ಮಕ್ಕಳ ಮಗ್ಗಿಪುಸ್ತಕ

ನವಯುಗಪ್ರೆಸ್, ಉಡುಪಿ.

ದ. ಕ. ಜಿಲ್ಲೆಯಲ್ಲಿ ಮೈಸೂರು ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು — ಮೈಸೂರಿನ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ತಾ. 18ರಂದು ರಾತ್ರಿ ಮಂಗಳೂರಿಗೆ ಆಗಮಿಸಿದಾಗ ಅವರನ್ನು ಅಧಿಕಾರಿಗಳೂ, ಅಧಿಕಾರೇತರ ಪ್ರಮುಖರೂ ಸ್ವಾಗತಿಸಿದರು. ಮಂತ್ರಿಗಳು ಸೀವಾ ಜಸ್ಟೀಸಿನ ಎಸ್. ವಾಮನ ನಾಯಕ್ ಎಂಡ್ ಸನ್ಸ್‌ಗೆ ತೆರಳಿ ಆ ಕಾರ್ಖಾನೆಯ ವಿಸ್ತರಣೆಯ ವಿಧಾನ ವನ್ನು ಉದ್ಘಾಟಿಸುತ್ತಾ, ಗದಿಯೂರಿನ ಉದ್ಯಮವಲ್ಲಿ ಹಿಂದೆ ಶೇಷಪ್ಪ ಹಿಂದೆ ಬಿದ್ದಿರುವ ಈ ಕಾಲದಲ್ಲಿ ಈ ಕಾರ್ಖಾನೆಯನ್ನು ಸ್ಥಾಪಿಸಿ ಸ್ವದೇಶೀ ಗದಿಯಾರಗಳ ಉತ್ಪಾದನೆಯಲ್ಲಿ ಶ್ರಮಿಸುತ್ತಿರುವ ವಾಮನನಾಯ್ಕರ ಕಾರ್ಯ ಸ್ತುತ್ಯರವೆಂದರು. ಶ್ರೀ ಬಿ. ಎಸ್. ಕುಡ್ವರು ಸಮಾರಂಭದ ಅಧ್ಯಕ್ಷತೆವಹಿಸಿದ್ದರು. ಶ್ರೀ ಎಸ್. ಶ್ರೀಧರ ನಾಯ್ಕರು ಸ್ವಾಗತ ಭಾಷಣಮಾಡುತ್ತಾ, ಸಂಸ್ಥೆಯ ಪೂರ್ವೇತಿಹಾಸವನ್ನು ತಿಳಿಸಿದರು.

ಕೇಂದ್ರ ಮೈದಾನಿನಲ್ಲಿ — ಮುಖ್ಯಮಂತ್ರಿಗಳು ಕೇಂದ್ರ ಮೈದಾನಿನಲ್ಲಿ ಯುವಕ ಕಾಂಗ್ರೆಸಿನ ರ್ಯಾಲಿ ಮತ್ತು ವಾರ್ಷಿಕೋತ್ಸವ ಸಮಾರಂಭ ಹಾಗೂ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡುತ್ತಾ, ಜನಸಾಮಾನ್ಯರಲ್ಲಿ ಜಾತೀಯತೆಯಿಲ್ಲ. ನುಬಂಡರೆನಿಸುವ ಅಲವ ತುಂಟರೇ ಜಾತೀಯತೆಯಿಂದ ರಾಜಕೀಯವನ್ನು ಕೆಡಿಸುತ್ತಾರೆ. ಜಾತೀಯತೆಯ ತಳಹದಿಯ ಮೇಲೆ ರಾಜ್ಯ ರಚಿಸಿದರೆ ಅದು ಹೆಚ್ಚು ಕಾಲ ಬಾಳುವುದಿಲ್ಲವೆಂದರು. ಮತದಾನದ ಕುರಿತು ಪ್ರಸ್ತಾಪಿಸುತ್ತಾ, ಜನರು ತಮ್ಮ ಸುಕ್ಷಾನನರ್ವಸ್ಥೆ ಯೋಗ್ಯರೀತಿಯಲ್ಲಿ ಮಾಡಿ ಮುಂದಿನ ವರ್ಷಗಳಲ್ಲಿ ತಮ್ಮ ಸರಕಾರದ ಆಡಳಿತೆಯು ಸುಗಮವಾಗಿ ನಡೆಯುವಂತೆ ನೋಡಬೇಕೆಂದರು. ದ. ಕೆ. ಜಿಲ್ಲೆಯ ಜನರು ಬುದ್ಧಿವಂತರು, ವಿವೇಕಿಗಳು ಇರುವುದರಿಂದ ಹೆಚ್ಚಾಗಿ ಏನೂ ಹೇಳಬೇಕಾಗಿಲ್ಲ ವೆಂದರು. ಮಂಗಳೂರು ಬಂದರು ಒಂದು ಸರ್ವಾಂಗೀಣ ಬಂದರಾಗಿ ಸಣ್ಣದೊಡ್ಡ ಹಡಗುಗಳು ಇಲ್ಲಿ ತಂಗುವಂತೆ ಮಾಡಬೇಕು. ಮುಂದೆ ಪುತ್ತೂರಿಗೂ ಪ್ರಯೋಜನ ಬಂದರವಾಗಿ ಬಹುಸಂಖ್ಯ ನಿರೀಕ್ಷೆಯಿದೆ. ಕರ್ನಾಟಕದಲ್ಲಿ ಅಪಾರ ನೈಸರ್ಗಿಕ ಸಂಪತ್ತಿದೆ. ನಮ್ಮ ಕರಾವಳಿಯ ಸಾಮಾನ್ಯಾರಿಕೆಯ ಅಭಿವೃದ್ಧಿಗಾಗಿ ಸುಮಾರು ೮೫-೯೦ ಲಕ್ಷದ ಯೋಜನೆ ತಯಾರಿಸಲಾಗಿದೆ. ಅನೇಕಾಲು ರೋಗವನ್ನು ತಡೆಗಟ್ಟಲು ನಳ್ಳಿನೀರಿನ ಯೋಜನೆ, ಜರಂಡಿ ಯೋಜನೆ ಬೇಗನೆ ಕಾರ್ಯಗತ ಗೊಳಿಸಲು ಪ್ರಯತ್ನಿಸಲಾಗುವುದು ಎಂದು ಹೇಳಿದರು.

ಯುವಕರ ಹೊಣೆಯ ಕುರಿತು ಮಾತನಾಡುತ್ತಾ, ನಮ್ಮ ರಾಜ್ಯದ ಸಂಪತ್ತನ್ನು ಬೆಳೆ



ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪ್ರದರ್ಶನಗಳನ್ನು ನಮ್ಮಲ್ಲಿ ಸಂತೆ ನೆರೆಯುವಷ್ಟೇ ಸುಲಭವೆನ್ನಾಡಿಕೆಯ ರೂಪದಲ್ಲಿ ನೆರೆಯಿಸಲಾಗುತ್ತದೆ. ವ್ಯಾಪಾರವೇ ಜೀವಾಳವಾಗಿರುವ ಈ ರಾಷ್ಟ್ರಗಳು ಪ್ರದರ್ಶನಗಳನ್ನು ಏರ್ಪಡಿಸಿ, ವ್ಯಾಪಾರಿಗಳಿಗೆ ತಮ್ಮ ಮಾಲಿನ ಆಕರ್ಷಣೆಗಳನ್ನು ವಿವರಿಸಿ, ಗ್ರಾಹಕರ ಕ್ಷೇತ್ರವು ವಿಶಾಲವಾಗುವಂತೆ ನೋಡಿಕೊಳ್ಳುತ್ತವೆ. ಚಿತ್ರದಲ್ಲಿ ಮೋಟರ್ ಸೈಕಲ್ ಪ್ರದರ್ಶನದ ದೃಶ್ಯವನ್ನು ಕಾಣಬಹುದು. ಹೆಗುರಾದ ಚೌಕಟ್ಟುಗಳುಳ್ಳ ಮತ್ತು ವೇಗವನ್ನು ಬೇರೆ ಬೇರೆ ಮಟ್ಟಗಳಲ್ಲಿರಿಸಬಲ್ಲ ಗೇರ್ ಇರುವ ಮೋಟರ್ ಸೈಕಲ್ ೧೯೫೭ನೇ ವರ್ಷದ ವಿಶೇಷ ಆಕರ್ಷಣೆಯಾಗಿದೆ ಎನ್ನುತ್ತದೆ ಬ್ರಿಟನಿನ ಈ ಪ್ರದರ್ಶನದಲ್ಲಿ ಭಾಗವಹಿಸಿದ ವ್ಯಾಪಾರಿ ವರ್ಗ.

ಸುವ ಜವಾಬ್ದಾರಿ ಯುವಕರ ಮೇಲಿದೆ. ಅವರಲ್ಲಿ ಶಿಸ್ತು ಸಂಯಮವು ಬೆಳೆದು ಅದರ ಮೂಲಕ ಸಮೃದ್ಧಿಯನ್ನು ಉಪಯೋಗಿಸುವ ಜವಾಬ್ದಾರಿ ಬೆಳೆದು ಜವಾಬ್ದಾರಿ ಹೊರಲು ಯೋಗ್ಯವಾದ ಸಮಾಜ ರಚಿಸುವಂತಾಗಬೇಕು. ಆ ಜವಾಬ್ದಾರಿ ಯುವಕ ಕಾಂಗ್ರೆಸಿನ ಗರ ಮೇಲಿದೆ ಎಂದರು.

ನಂತರ ಮುಖ್ಯಮಂತ್ರಿಗಳು ಮಂತ್ರಿ ಶ್ರೀ ಎ. ಬಿ. ಶೆಟ್ಟಿರೊಂದಿಗೆ ಬಿಲ್ಲಾ ಮೆಡಿಕಲ್ ಎಸೋಸಿಯೇಶನ್‌ನವರಿತ್ತ ಭೋಜನ ಕೂಟದಲ್ಲಿ ಭಾಗವಹಿಸಿದ್ದರು. ಡಾ. ಕೆ. ನಾಗಪ್ಪ ಅಳ್ವರು ಸ್ವಾಗತ ಭಾಷಣಮಾಡಿದರು.

ನಗರ ಸಭೆಯಲ್ಲಿ— ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರಿಗೆ ತಾ. 14ರಲ್ಲು ಪೂ ನಾರ್ಹ ಮಂಗಳೂರು ನಗರಸಭೆಯ ಪರವಾಗಿ ಅದರ ಅಧ್ಯಕ್ಷ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಪೂರಪತ್ರ ಅರ್ಪಿಸಿದರು. ಆಕೋಗ್ಯಮಂತ್ರಿ ಶ್ರೀ ಎ. ಬಿ. ಶೆಟ್ಟಿರೂ ಉಪಸ್ಥಿತರಿದ್ದರು. ಮಾನಪತ್ರದಲ್ಲಿ, ಪೆಟ್ರೋಲ್ ಪೂರ್ಕೆಟಿನ ಅಭಿವೃದ್ಧಿಗೆ ಮತ್ತು ನಿಸ್ತರಣೆಗೆ 8 ಲಕ್ಷ ರೂಪಾಯಿ ಸಾಲವೆತ್ತು ಪರಿಹಾರಗೂ ಕುದ್ರೋಳಿ ಕಂಠಿಪ ಪುನರ್ರಚನೆಗಾಗಿ ರೂ. 75,000 ಸಾಲಕೊಡಬೇಕು, ಬಸ್ ಸ್ಟೇಂದಿನ ವಿಸ್ತರಣೆಗಾಗಿಯೂ ಎರಡು ಲಕ್ಷ ರೂಪಾಯಿ ಸಾಲ ಒದಗಿಸಬೇಕು. ನಗರಸಭೆ ಗೊಂಪು ಸ್ವಂತ ಕಚೇರಿ ಕಟ್ಟಡ ಕಟ್ಟಲು ಸಹಕಾರ ಸಹಾಯ ನೀಡಬೇಕು. ಮಂಗಳೂರು ಸರ್ವಾಂಗೀಣ ಬಂದರಾಗುವಂತೆ ಮತ್ತು ಹಾಸನ-ಮಂಗಳೂರು ರೈಲ್ವೆಯಾಗುವಂತೆ ಆಗಬೇಕು ಎಂಬಿತ್ಯಾದಿ ವಿಷಯಗಳು ಮಾನಪತ್ರದಲ್ಲಿ ಹೇಳಲ್ಪಟ್ಟಿದ್ದುವು.

ಮುಖ್ಯಮಂತ್ರಿಗಳು ಉತ್ತರವೀಯುತ್ತಾ, ತಮ್ಮ ಜವಾಬ್ದಾರಿಯನ್ನು ತಾವೇ ಅರಿತು ಕೊಂಡು ಮುಂದೆ ಬಂದು ತಮ್ಮ ಅನುಕೂಲತೆಗಳನ್ನು ಕಲ್ಪಿಸಿಕೊಳ್ಳುವುದರಲ್ಲಿ ಬೆಂಗಳೂರಿನ ನಾಗರಿಕರನ್ನು ಯಾರೂ ಮುಂದುವರಿದಿಲ್ಲವೆಂದು ತನ್ನ ಅಭಿಪ್ರಾಯವ್ಯಪಡಿಸಿದರು. ಇಂತಹ ನಾಗರಿಕರಿಗೆ ನಾವು ಸಹಾಯವನ್ನಾದಿದ್ದರೆ ಜವಾಬ್ದಾರಿ ಸ್ಥಾನದಲ್ಲಿರುವವರು ಕರ್ತವ್ಯ ಲೋಪಮಾಡಿದಂತಾಗುತ್ತದೆ. ಇಲ್ಲಿನ ತೆರಿಗೆ ಸೇಕಡಾ 25ರಷ್ಟಿದೆಯೆಂದು ತಿಳಿದಿದೆ. ಆಷ್ಟು ತೆರಿಗೆ ಬೇರೆಲ್ಲೂ ರಾಕಿರಲಿಕ್ಕಿಲ್ಲವೆಂದು ತೋರುತ್ತದೆ. ಸರಕಾರ ನಮ್ಮ ದೇಣಿಕೆಗಳ ಮಟ್ಟಿಗೆ ಸಾಕಷ್ಟು ಸಹಾಯ ಮಾಡುವುದು ಅಗತ್ಯವಿದೆ. ನೀವೇನೂ ಸಹಾಯಧನ ಯೋಚನೆ ಸಲಹೆಯಾತ್ರ ಕೇಳಿರುವಿರಿ, ಆದನ್ನು ಜಾಗ್ರತೆಯಿಂದ ಸಾಲ ಕೊಡುವಂತೆ ಪ್ರಯತ್ನಿಸುತ್ತೇನೆ. ನಿಮ್ಮವರ ದೇಣಿಕೆಗಳು ಸೊಕ್ಕತ್ತಿದ್ದು ಅವುಗಳ ಕತೆಗೆ ಗನುಸಲೀಯುತ್ತೇವೆ. ಮುನಿಸಿಪಲ್ ನೌಕರರ ಬೇಡಿಕೆಗಳ ಬಗ್ಗೆ ಸಹಾನುಭೂತಿಯಿಂದ ಪರಿಶೀಲಿಸುತ್ತೇನೆ" ಎಂದು ಹೇಳಿದರು.

ದಿ| ಕಿಲ್ಲೆಯವರ ಪುಸ್ತಕಗಳು

ಪ್ರಾಚೀನ ತುಳುನಾಡು

(ಎನ್. ಎಸ್. ಕಿಲ್ಲೆ ಮತ್ತು ಎನ್. ಎ ಶೀನಪ್ಪ ಹೆಗ್ಡೆ)

ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.

150 ಪುಟಗಳು. ಬಿಳಿ ಕಾಗದ, ಆಕರ್ಷಕ ರಕ್ಷಾ ಪತ್ರ ಬೆಲೆ 2-0-0

ಭಾರತದ ಕರ್ಣ

ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0.

ಮುರಲಿ

ಪುಲ್ಲರೆಗತಿಯ ಕವಿತೆಗಳ ಸಂಗ್ರಹ.

ಬೆಲೆ: 0-12-0.

ಮೂರೂ ಪುಸ್ತಕಗಳನ್ನು ದಿ| ಕಿಲ್ಲೆಯವರ ಧರ್ಮಪತ್ನಿ ಇಂದಿರಾ ಕಿಲ್ಲೆ, ಅವರು ಪ್ರಕಟಿಸಿದ್ದಾರೆ.

ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:

ನವಭಾರತ ಪುಸ್ತಕ ಭಂಡಾರ ಉಡುಪಿ.

ವಿಜಯಾ ಬ್ಯಾಂಕ್ ಲಿಮಿಟೆಡ್

ಇವರಿಗೆ ನಮ್ಮ ಹಾರ್ದಿಕ ಶುಭಾಶಯಗಳು

25 ವರ್ಷಗಳ ಬ್ಯಾಂಕಿಂಗ್ ಸೇವೆಯನ್ನು ನಾಡಿಗೆ ಸಲ್ಲಿಸಿ ತಮ್ಮ ರಜತ ಮಹೋತ್ಸವವನ್ನು ಆಚರಿಸಿದ ವಿಜಯಾ ಬ್ಯಾಂಕ್ ಲಿಮಿಟೆಡ್ ಮಂಗಳೂರು ಇವರಿಗೆ ನಮ್ಮ ಹಾರ್ದಿಕ ಶುಭಾಶಯಗಳು.

ಬ್ಯಾಂಕಿಂಗ್ ವ್ಯವಹಾರದಲ್ಲಿ ಮುಂದುವರಿದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪನೆಯಾದ ಬ್ಯಾಂಕುಗಳು ತಮ್ಮ ಕಾರ್ಯ ಕ್ಷೇತ್ರಗಳನ್ನು ವಿಸ್ತರಿಸಿ ನಾಡಿನ ವ್ಯಾಪಾರ ಉದ್ದಿಮೆ, ಕೈಗಾರಿಕೆಗಳ ಬೆಳವಣಿಗೆಯಲ್ಲಿ ನೆರವಾಗಿ ತಮ್ಮ ಸುವರ್ಣ ಮಹೋತ್ಸವವನ್ನೂ, ರಜತ ಮಹೋತ್ಸವವನ್ನೂ ಆಚರಿಸಿರುವುದು ಜನರು ಬ್ಯಾಂಕುಗಳಲ್ಲಿಟ್ಟ ವಿಶ್ವಾಸದ ದ್ಯೋತಕವು.

ದೇಶದ ಸರ್ವತೋಮುಖ ಉನ್ನತಿಗೆ ಬ್ಯಾಂಕುಗಳು ಇನ್ನೂ ಹೆಚ್ಚಿನ ಸೇವೆ ಸಲ್ಲಿಸುವ ಪೂರ್ಣ ಭರವಸೆ ನಮಗಿದೆ.

ಕೆನರಾ ಬ್ಯಾಂಕ್ ಲಿಮಿಟೆಡ್

ಸ್ಥಾಪನೆ: 1906

ಒಟ್ಟು ಸಾಧನ ಸಂಪತ್ತು ಇಪ್ಪತ್ತು ಕೋಟಿಗೂ ಮೀರಿದೆ

ಓದುಗರೊಡನೆ—

ನಮ್ಮ ಇದೇ ಸಂಚಿಕೆಯ ಎರಡನೇ ಪುಟದಲ್ಲಿ ಪಂಪಯ ಕುರಿತು ಸ್ವಕಟಿಸಾಗಿರುವ ಲೇಖನವನ್ನು ಬರೆದವರು: ಶ್ರೀ ಯೆಂ. ರಘುನಂದನ ರಾವ್, ತಲ್ಲೂರು. ಇವನ್ನು ಮಯಃಪೂರ್ವಿ ಗಮನಿಸಬೇಕಾಗಿ ಕೋರುತ್ತೇವೆ.

—ಸಂ. ನ.

ಇನ್ನೊಂದು ಮೈಲುಗಲ್ಲು

(೪ನೇ ಪುಟದಿಂದ)

ಗಳನ್ನು ಒದಗಿಸಿದೆ. ಎರಡು ಮುಖ್ಯ ಆಸ್ಪತ್ರೆಗಳಿವೆ. ಪೂರ್ಣ ಕಾಲದ ವೈದ್ಯರನ್ನೂ ದಾದಿಯರನ್ನೂ ವಿವಿಧ ಕಾರ್ಮಿಕ ಕಾಲೋನಿಗಳಿಗಾಗಿ ನೇಮಿಸಲಾಗಿದೆ.

ಕಾರ್ಮಿಕರ ಹಿತರಕ್ಷಣೆಗಾಗಿ ಓರ್ವ ಕಾರ್ಮಿಕ ಅಧಿಕಾರಿಯೂ ಮತ್ತು ಓರ್ವ ಕಾರ್ಮಿಕ ಹಿತರಕ್ಷಣಾಧಿಕಾರಿಯೂ ಇರುವರು. ಕೆಲಸಗಾರರ ಹಿತರಕ್ಷಣೆ ಸಂಬಂಧವಾದ ವಿಚಾರಗಳಲ್ಲಿ ಮುಖ್ಯ ಎಂಜಿನಿಯರುಗಳಿಗೆ ಸಲಹೆ ನೀಡಲು ಯೋಜನಾಧಿಕಾರಿಗಳ ಕಲ್ಯಾಣ ಸಮಿತಿಯೊಂದನ್ನು ನೇಮಿಸಿದೆ. ಇದಲ್ಲದೆ ಕೆಲಸಗಾರರಿಗಾಗಿ ಹಿತರಕ್ಷಣಾ ಸಮಿತಿಗಳಿವೆ.

ಆಣೆಕಟ್ಟು ಯೋಜನೆಯಲ್ಲಿರುವ ಕೆಲಸಗಾರರ ಕಾರ್ಯವು ಸಂತೋಷಜನಕವಾಗಿದೆ. ಉಚಿತ ವೇತನ ಹಾಗೂ ವಿವಿಧ ಸೌಲಭ್ಯಗಳ ಕಾರಣದಿಂದಾಗಿ ಹಿಂದುಳಿದ್ದನ್ನಲ್ಲಿರುವ ಕೆಲಸಗಾರರ ಮತ್ತು ಆಡಳಿತ ವರ್ಗದವರ ನಡುವೆ ಇರುವ ಪರಸ್ಪರ ಸಂಬಂಧವು ಉತ್ತಮವಾಗಿದೆ ಎಂಬುದು ಸಮಾಧಾನಕರವಾದ ವಿಷಯ

ಹೀಗೆ ಭಾರತದ ಜನರಿಂದ ಕಟ್ಟಲಾದ ಈ ಆಣೆಕಟ್ಟನ್ನು ಪ್ರಧಾನಿ ನೆಹರುರವರು "ಆಧುನಿಕ ದೇವಾಲಯ ಇದ್ದಿದೆ" ಎಂಬಂತಹ ಹೃದ್ಯಾತ್ಮಕವಾಯಿಕ ಉದ್ಗಾರದಿಂದ ವರ್ಣಿಸಿದುದು ತುಂಬಾ ಉಜಸವೆಂದು ಹೇಳಬಹುದು. ಇಷ್ಟರ ವರೆಗೆ ಒಂದು ಬೆಳೆಯಾಗುವಲ್ಲಿ ಎರಡು ಬೆಳೆಯನ್ನೂ ಏನೂ ಬೆಳೆಯುಗದಲ್ಲಿ ಕೊಸೆತಾಗಿ ಬೆಳೆಯನ್ನೂ ವಿದ್ಯುಚ್ಛಕ್ತಿಯನ್ನು ಸಹ ಕೈಗೊಂಡುಮಾರ್ಕಲು ದಂತಹ ಪಟ್ಟಣಗಳಲ್ಲಿ ಕಬ್ಬಿಣದ ಕಾರ್ಖಾನೆ ತಲೆ ಎತ್ತುವುದಕ್ಕೂ ಜಕರ ಪ್ರಮುಖೋದ್ಯಮಗಳು ವಿಕ್ರಸಿಸುವುದಕ್ಕೂ ಈ ಯೋಜನೆ ನೆರವಾಗುತ್ತದೆ. ಸ್ವತಂತ್ರ ಭಾರತದ ಇಂತಹ ಸಾಧನೆಗಾಗಿ ನಾವು ಸಂತೋಷಪಡಬೇಡವೆ ?

ಪುತ್ತೂರು ಡಿ. ಮುಂ. ಕೋರ್ಟಿನಲ್ಲಿ

S. C. 245/1956.

ಚಂದ್ರರಾಜ ಸೇನಿತ —ವಾದಿ

ಮರುಜೇವಿ ಕೂಡಾ —ಪ್ರತಿವಾದಿರು.

6ನೇ ಪ್ರತಿವಾದಿ ರತ್ನಾವತಿ ಆನಂತ ಶಾಸ್ತ್ರಿಗಳ ಪೆಂಡತಿ ವ ನಾಗರಾಜ ಕೊಂಡೆಯವರ ಮಗಳು, ಮೈಸೂರು ಸಂಸ್ಥಾನದ ಪಾಸನ ಪಲ್ಲಿರುವನಳು.

ಸದ್ರಿಯವಳಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ: ಹಾಲಿ ಮೃತಪಟ್ಟ ನಾಗರಾಜ ಕೊಂಡೆ ವ ೨ನೇ ಪ್ರತಿವಾದಿ ಕೂಡಾ ವಾದಿಗೆ ತಾ. 7—8—1953ರಲ್ಲು ಬರಕೊಟ್ಟಿ ನೋಟಿನ ಅಸ್ಸು ಬಡ್ಡಿ ಅ್ಯಜೇಜು ವಸೂಲಿ ಬಗ್ಗೆ ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 24—1—1957ಕ್ಕೆ ಇಟ್ಟಿರುವುದರಿಂದ ನೀವು ಸದ್ರಿ ವ್ಯಾದೆ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಈ ಕೋರ್ಟು ಮುಂದೆ ಹಾಜ್ರಾಗಿ ಉದಹರಿಸಿಕೊಳ್ಳತಕ್ಕದ್ದು. ಇಲ್ಲ ವಾದ್ರೆ ನಿಮ್ಮನ್ನು ಶಿಕ್ಷಾಪಾದಿ ದಿಕ್ರಿಕೊಡೋ ಹಾಗಾಗುವುದು.

(ಕೋರ್ಟು ಹುಕುಂ ಪ್ರಕಾರ)

S. Soorappaya,
Vakil for Plff.

ತಾ. 6—1—1957.

ದ. ಕ. ಜಿಲ್ಲೆಯಲ್ಲಿ ಮೈಸೂರು ಶಿಕ್ಷಣ ಸಚಿವ ಶ್ರೀ ಕಡಿದಾಳ ಮಂಜಪ್ಪನವರು—

ಮೈಸೂರು ರಾಜ್ಯ ಶೈಕ್ಷಣಿಕ ಸಚಿವ ಶ್ರೀ ಕಡಿದಾಳ ಮಂಜಪ್ಪನವರಿಗೆ ತಾ. 9ರಲ್ಲು ಜಿಲ್ಲಾ ಕಾಲಾ ಆಡಳಿತ ಮತ್ತು ಎಯಿಡೆಡ್ ಸೆಕೆಂಡರೀ ಶಾಲೆಗಳ ಹೆಡ್ಮಾಸ್ಟರ ಸಂಘದ ಪರವಾಗಿ ಶ್ರೀ ಎಮ್. ಅಣ್ಣಾಪ್ಪ ಕಾನವರು, ಜಿಲ್ಲಾ ಶಿಕ್ಷಣ ಸಂಘದ ಪರವಾಗಿ ಅಧ್ಯಕ್ಷ ರೆ| ಫಾ| ಜೀನ್ಸ್ ಕೊಯಲೋರವರು, ಜಿಲ್ಲಾ ಆಭವೃದ್ಧಿ ಮತ್ತು ಹಿತಚಿಂತನಾ ಸಮಿತಿಯ ಪರವಾಗಿ ಶ್ರೀ ಎಸ್. ಎಸ್. ಏಕಾಂಬರರಾಯರು, ಜಿಲ್ಲಾ ಸಂಸ್ಕೃತ ಶಾಲೆಗಳ ಪರವಾಗಿ ಪ್ರಿನ್ಸಿಪಾಲ್ ಶ್ರೀ ಕಾಲಿಗಿ ಶೇಷಾಚಾರ್ಯರು ಮನವಿಗಳನ್ನರ್ಪಿಸಿದರು.

ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾ ಸದನದಲ್ಲಿ ಸೇರಿದ ಮಾಸಿಗ ಶಾಲಾ ಆಡಳಿತ ಯೆವರ ಸಂಸ್ಥೆ, ಸೆಕೆಂಡರೀ ಶಾಲಾ ಹೆಡ್ಮಾಸ್ಟರ ಸಂಘಗಳ ಪ್ರತಿನಿಧಿಗಳು ಸುತ್ತಿತರ ಉಪಾಧ್ಯಾಯರು ಸೇರಿದ ಸಭೆಯಲ್ಲಿ ಮಂತ್ರಿಗಳು ಮಾತನಾಡುತ್ತಾ, ಸಮಗ್ರ ಮೈಸೂರು ರಾಜ್ಯಕ್ಕೆ ಅನ್ವಯಿಸುವಂತೆ ಒಂದು ಶೈಕ್ಷಣಿಕ ಯೋಜನೆ ರೂಪಿಸಲು ಸರಕಾರವು ಸಮಿತಿಯೊಂದನ್ನು ನೇಮಿಸಿದೆ. ಅದು ಒಂದು ಯೋಜನೆ ತಯಾರಿಸಲು ಒಂದೆರಡು ವರ್ಷಗಳಾದರೂ ಹಿಡಿಯಬಹುದು. ಶೈಕ್ಷಣಿಕ ಕ್ಷೇತ್ರದಲ್ಲಿ ಹಲವಾರು ಪ್ರಯೋಗಗಳನ್ನು ಮಾಡುವ ಅಗತ್ಯವಿಲ್ಲ. ಅಗಾಗ ಬವಲಾವಣೆ ಮಾಡುತ್ತಿರುವುದು ದೇಶಕ್ಕೆ ಹಾನಿಕರ. ಒಮ್ಮೆ ರೂಪಿಸಿದ ಶೈಕ್ಷಣಿಕ ಯೋಜನೆಯು ೨೫ ವರ್ಷಗಳ ತನಕವಾದರೂ ಉಳಿಯುವಂತಾಗಬೇಕು ಎಂದು ನುಡಿದರು.

ಕೆಲಸಾನಿಕೇತನದ ಉದ್ಘಾಟನೆಯನ್ನು—

ಶ್ರೀನಿಗಳಪತಿ ಹೈಸ್ಕೂಲಿನ ಪಾರವಾ ಸದನದಲ್ಲಿ ಶಿಕ್ಷಣ ಮಂತ್ರಿಗಳು ನೆರಸೇರಿಸುತ್ತಾ, ನಾಟಕ, ಯಕ್ಷಗಾನ, ಸಂಗೀತ ಸೈತ್ಯಾದಿ ಕಲೆಗಳಿಂದ ಮಾನಸಿಕ ಸಂತೋಷ ವಾಗುವುದರ ಜತೆಗೆ ಆತ್ಮೋನ್ನತಿಯೂ ಸಾಧಿಸುವಂತಾಗಬೇಕೆಂದರು. ಶ್ರೀ ಬಿ. ಬಿ. ಬಾಳಿಗ, ಎಸ್. ಎಲ್. ಎ. ಅವರು ಸಭಾರಂಭದ ಅಧ್ಯಕ್ಷತೆ ವಹಿಸಿದ್ದರು. ಕಲಾನಿಕೇತನದ ಅಧ್ಯಕ್ಷ ಶ್ರೀ ಕೆ. ಜಾಲಕೃಷ್ಣರಾಯರು ಸ್ವಾಗತಮಾತುಗಳನ್ನಾಡಿದರು. ಶ್ರೀಗಳಾದ ಸುಷಾಬಲ ನೋಂಡೆ, ಪರಿಕ್ಕಳ ಈಶ್ವರಪ್ಪ ಕೆ. ಬಾಲಕೃಷ್ಣರಾವ್, ಕೃಷ್ಣಮಲ್ಲಿ, ಗೋಪಾಲಕೃಷ್ಣ ಭಟ್ ಮೊದಲಾದವರ ಕೂಡುವಿಕೆಯಿಂದ ಯಕ್ಷಗಾನರೂಪ ಜರಗಿತು. ಶ್ರೀ ಶ್ರೀನಿವಾಸ ಉಡುಪರು ಧನ್ಯವಾದಗಳನ್ನರ್ಪಿಸಿದರು.

ಉಪ್ಪಿನಂಗಡಿ ಬೋರ್ಡುಹಾಸ್ಕೂಲ್ ಕಟ್ಟಡದ ಶಂಕುಸ್ಥಾಪನೆ—

ಯನ್ನು ತಾ. 8ರಲ್ಲು ಸಿದ್ಧಾಮಂತ್ರಿಗಳು ನೆರವೇರಿಸಿದರು. ಶ್ರೀ ಸಂಯಂಕಳ್ಳಿ ರಾಮಂರಾಯರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಕೆ. ಪೇಣಿ ಗೋಪಾಲ ನಾಯಕರು ಸ್ವಾಗತಭಾಷಣ ಮಾಡಿದರು ಕಾಲಾ ಹೆಡ್ಮಾಸ್ಟರ್ ಶ್ರೀ ಗೋಪಾಲ ಕೃಷ್ಣ ರೆಡ್ಡಿಯವರು ವರದಿಯನ್ನೊಪ್ಪಿಸುತ್ತಾ ಕಟ್ಟಡದ ಅಂದಾಜು ವೆಚ್ಚ ಸಾಧಾರಣ ರೂ. 2000/- ಆಗಬಹುದೆಂದೂ ಶ್ರೀ ಸಯೆಂಪಳ್ಳಿ ರಾಮಂರಾಯರು ೮ ಎಕ್ರೆ 40 ಸೆಂಟ್ಸು ಸ್ಥಳವನ್ನು ಉದಾರ ಪಾನಕೊಟ್ಟಿರುವುದಾಗಿಯೂ ತಿಳಿಸಿದರು. ಶ್ರೀಗಳಾದ ವೆಂಕಟ್ರಮಣ ಗಾಡ್ಡಿ, ಎಸ್. ಎಲ್. ಎ. ಕೆ. ಆರ್. ಆಚಾರ್, ಜಿಲ್ಲಾ ಬೋರ್ಡು ಅಧ್ಯಕ್ಷ ಡಾ| ಕೆ. ಕೆ. ಪೈ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಶಾಲಾಸಮಿತಿ ಉಪಾಧ್ಯಕ್ಷ ಶ್ರೀ ಬಿ ಗಂಗಾಧರ ರೈಗಳು ಧನ್ಯವಾದಗಳನ್ನರ್ಪಿಸಿದರು.

ಪುತ್ತೂರಲ್ಲಿ—ಶ್ರೀ ಕಡಿದಾಳ ಮಂಜಪ್ಪನವರಿಗೆ ಸಂಜೆವನದ ಸ್ವಾಗತಪೀಯಲಾಯಿತು ಮಂತ್ರಿಗಳು ಪುತ್ತೂರಲ್ಲಿ ಕಾಲೇಜು ಸ್ಥಾಪಿಸುವರೆ ನಿಶ್ಚಯಿಸಿದ ಸ್ಥಳವನ್ನು ಪರಿಶೀಲಿಸಿದರು. ಬಳಿಕ ಶ್ರೀ ಬಿ ವಿಠಲದಾಸ ಶೆಟ್ಟಿರ ಅಧ್ಯಕ್ಷತೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ನೂತನವಾಯತ್ತಾ, ವೇರಪ ಹಿತವು ಕಾಂಗ್ರೆಸ್ಸಿನಿಂದ ಮಾತ್ರ ಸಾಧಿಸಲು ಸಾಧ್ಯವೆಂದರು. ಪುತ್ತೂರಲ್ಲಿ ಕಾಲೇಜು ಸ್ಥಾಪಿಸಲು ಮಂಜೂರಾತಿಕೊಡಬೇಕೆನ್ನುವ ವಿನಂತಿಗೆ ಮಂತ್ರಿಗಳು ಸಹಾನುಭೂತಿಯಿಂದ ತಕ್ಷಿಂದ ಸಾಧ್ಯವಾಪ ಸಹಾಯ ನೀಡುವ ಭರವಸೆ ಕೊಟ್ಟರು.

ಸೈಂಟ್ ಎಲೋಸಿಯಸ್ ಕಾಲೇಜ್ ಹೈಸ್ಕೂಲ್ ವಾರ್ಷಿಕ ಸಾರಿತೋಷೆ— ವಿತರಣೆಯನ್ನು ಮಂತ್ರಿಗಳು ಮಾಡುತ್ತಾ, ಎಲ್ಲರೂ ಆದಷ್ಟು ತ್ವರ್ಯ ನಿಷ್ಪಾಯಂತರನ್ನಾಗಿ ಮಾಡಬೇಕೆಂಬ ಇರಾದೆ ಸರಕಾರಕ್ಕೆ ಇದೆ ಎಂದು ಹೇಳಿದರು. ಹೈಸ್ಕೂಲ್ ಮುಖ್ಯೋಪಾಧ್ಯಾಯ ರೆ| ಫಾ| ಜೇನ್ಸು ಕೊಯಲೋರವರು ಶಾಲೆಯ ನರದಿಯನ್ನೋದಿದರು. ಸುಶಿಕ್ಷಿತರಲ್ಲಿ ಉದ್ಯೋಗಿಸ್ಥರು ಸಮಸ್ಯೆಗಳು ತಲೆದೋರುತ್ತಿರುವ ಈ ಕಾಲದಲ್ಲಿ ಪ್ರತಿಯೊಂದು ವೃತ್ತಿಯೂ ಗೌರವಯುತವಾದುದೇ ಎಂಬುದನ್ನು ನಾವು ಆರಿಯಬೇಕು. ಶುಂಠ್ರಿಯಿಂದ ಜಾಡ ಮಾಲಿಯನರೆಗಿನ ಎಲ್ಲಾ ವೃತ್ತಿಗಳೂ ಗೌರವಾನ್ವಿತವಾದವುಗಳೇ ಎಂದು ಮಂತ್ರಿಗಳು ಹೇಳಿದರು.

ಕಾರ್ಕಳದಲ್ಲಿ— ಶ್ರೀ ಕಡಿದಾಳರು ತಾ. 10ರಂದು ಬೆಳಿಗ್ಗೆ ಹೊಕ್ಕಾಂಬಾಡಿ ಅಲ್ಲಿಯ ಎಸ್. ವಿ. ಎಸ್. ಹೆಣ್ಣುಗಿಯರ ಹೈಸ್ಕೂಲನ್ನು ಸಂಚರಿಸಿದರು. ಶಾಲಾಪಡಕೆತ ಸುಂದಳೆಯವರು, ಅಧ್ಯಾಪಕರು ಹೊವಲಾದವರು ಮಂತ್ರಿಗಳಿಗೆ ಸ್ವಾಗತ ನೀಡಿದರು. ಬಳಿಕ ವಿದ್ಯಾರ್ಥಿನಿಯರ ಸಭೆಯಲ್ಲಿ ಭಾಷಣ ಮಾಡುತ್ತಾ, ಈ ಶಾಲೆಯ ಶಿಸ್ತಿನ ಸುಟ್ಟವು ಚೆನ್ನಾಗಿರುವುದಾಗಿ ಸಂತೋಷ ಸೂಚಿಸಿ ಶಾಲೆಗೆ ಉತ್ತರೋತ್ತರ ಶ್ರೇಯಸ್ಸನ್ನು ಕೋರಿದರು.

ಉಪಾಧ್ಯಾಯರ ವಾರ್ಷಿಕೋತ್ಸವ ಸಮಾರಂಭದಲ್ಲಿ—

ಕುಂದಾಪುರಕ್ಕೆ ರಾತ್ರಿ ೯ಕ್ಷಣ ಮಂತ್ರಿಗಳು ರಾತ್ರಿ ಆಗಮಿಸಿ ಶ್ರೀ ಬೈ. ಮಂಜಯ್ಯ ಶೆಟ್ಟಿ, ಎಮ್. ಎಲ್. ಎ, ಅವರಲ್ಲಿ ಭೋಜನ ತೀರಿಸಿ ಬೋರ್ಡು ಹೈಸ್ಕೂಲಿನಲ್ಲಿ ಜರಗಿದ ಕುಂದಾಪುರ ಕೇಂದ್ರ ಉಪಾಧ್ಯಾಯರ ಸಂಘದ ವಾರ್ಷಿಕೋತ್ಸವದ ಅಧ್ಯಕ್ಷತೆ ವಹಿಸಿದರು. ಶ್ರೀ ನಾರಾಯಣ ಮಾಸ್ತರರು ನರದಿಯನ್ನೋದಿದರು. ನಂತರ ಮಂತ್ರಿಗಳಿಗೆ ಅಧ್ಯಾಸಕರ ಕೇಳಿಗಳನ್ನೊಳಗೊಂಡ ಮನವಿಗಳು ಅರ್ಪಿಸಲಾಯಿತು. ಸಚಿವರು ಎಲ್ಲವನ್ನೂ ಸಾವಧಾನ ಚಿತ್ತದಿಂದ ಪರಿಶೀಲಿಸುವುದಾಗಿಯೂ ಅಧ್ಯಾಪಕರ ಬೇಡಿಕೆಗಳಲ್ಲಿ ತಮ್ಮ ಸಹಾನುಭೂತಿಯಿರುವುದಾಗಿಯೂ ಹೇಳಿದರು. ಸರ್ವರೊನವ ಮೈಸೂರನರು ಎಂಬ ಭಾವನೆಯಿಂದ ಕರ್ತವ್ಯನಿರತರಾಗಿ ನೂಡಿಸಿದರು.

ಶಂಕುಸ್ಥಾಪನೆ—ಮಂತ್ರಿಗಳು ಅಲ್ಲಿಂದ ವ ಬೋರ್ಡು ಹೈಸ್ಕೂಲಿಗೆ ಆಗಮಿಸಿ ಅ ಕಾಲೆಯ ಕೃಷಿ ಮತ್ತು ವಾಣಿಜ್ಯ ವಿಭಾಗಗಳಿಗೆ ಕಟ್ಟಿಸಲಿರುವ ಹೊಸ ಕಟ್ಟಡದ ಶಂಕು ಸ್ಥಾಪನೆ ಮಾಡಿಯವರು. ಶ್ರೀ. ಕೆ. ವಾಸುದೇವ ಕಾಮಾತರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ. ಕೆ. ಜಿ. ರೆಡ್ಡಿಯವರು ಸ್ವಾಗತ ಭಾಷಣ ಮಾಡಿದ ಬಳಿಕ ಶ್ರೀ. ಬಿ. ಎಸ್. ಭಾಸ್ಕರ ರೈಗಳು ಶಾಲೆಯು ಪಡೆಯನ್ನು ಮಂತ್ರಿಗಳಿಗೆ ಮಾಡಿಕೊಟ್ಟರು. ಮಂತ್ರಿಗಳು ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳನ್ನು ಉಲ್ಲೇಖಿಸಿ, ಮುಂದಿನ ಮಹಾಚುನಾವಣೆಯಲ್ಲಿ ಕ್ಯಾಂಗ್ರೆಸಿಗೆ ವೋಟು ಕೊಡಬೇಕೆಂದು ಕೇಳಿಕೊಂಡರು ಶಾಲಾ ಹೆಡ್ಮಾಸ್ಟರ್ ಶ್ರೀ ವಿ. ಆರ್. ಆಚಾರ್ಯರವರು ಧನ್ಯವಾದಗಳರ್ಪಿಸಿದರು.

ಮಂಜೇಶ್ವರ—ಮಂತ್ರಿಗಳು ಕಾರ್ಕಳದಿಂದ ಉಡುಪಿಗೆ ಲರುವಾಗ್ಗೆ ದಾರಿಯಲ್ಲಿ ಮಂಜೇಶ್ವರದ ಕಸ್ತೂರ್ಬಾ ಮೆಡಿಕಲ್ ಕಾಲೇಜಿಗೂ ಸಂದರ್ಶನವಿತ್ತರು. ಬಳಿಕ ಎಂ ಜಿ. ಎಸ್. ಕಾಲೇಜಿಗೂ ಭೇಟಿಯಿತ್ತರು. ಉಡುಪಿಗೆ ಮುಕ್ಕಂದ ನಿವಾಸದಲ್ಲಿ ಶ್ರೀ ಟಿ. ಎ. ಪೈ, ಎಸ್. ಎಲ್. ಎ., ಅವರು ಏರ್ಪಡಿಸಿದ ಭೋಜನ ಸಮಾರಂಭದಲ್ಲಿ ಭಾಗವಹಿಸಿದರು. ಅಪರಾಹ್ನ ಸರಕಾರಿ ಹುಡುಗಿಯರ ಟ್ರೈನಿಂಗ್ ಶಾಲೆ ಸಂಸ್ಕೃತ ಕಾಲೇಜುಗಳಿಗೆ ಭೇಟಿಯಿತ್ತರು.

ಬೋರ್ಡು ಹೈಸ್ಕೂಲಿನ ಪೀಪಿಲ್ಸ್ ಹಾಲಿನಲ್ಲಿ— ಸೇರಿದ ಶಿಕ್ಷಕರ ಸಭೆಯಲ್ಲಿ ಮಂತ್ರಿಗಳಿಗೆ ಹೈಸ್ಕೂಲ್ ಹೆಡ್ಮಾಸ್ಟರ್ ಶ್ರೀ ಬಿ. ಅನಂತಕೃಷ್ಣ ಸಾನು ಗರು ಸ್ವಾಗತಬಯಸಿದರು. ನಂತರ ಮಾನವಿಗಳು ಅರ್ಪಿಸಲಾಯಿತು. ನವ ಮೈಸೂರಿನ ಹೊಸ ಸೈಲಿನ ಸಂಬಳವು ಜಾಸಗಿ ಸುತ್ತು ಲೋಕಲ್ ಬೋರ್ಡು ಸಂಸ್ಥೆಗಳ ಉಪಾಧ್ಯಾಯರಿಗೂ ಸಿಕ್ಕಬೇಕೆಂಬ ಬೇಡಿಕೆಯು ನ್ಯಾಯವಾಪೆದ್ದೇ. ಆದರೆ ಆ ಕುರಿತು ಪರಿಶೀಲನೆ ನಡೆಯುತ್ತಿದೆ. ಹಣಕಾಸಿನ ಮಂತ್ರಿ ಮತ್ತು ಮುಖ್ಯಮಂತ್ರಿಗಳೊಡನೆ ಈ ವಿಚಾರ ಪರಿಶೀಲಿಸಲಾಗುವುದು. ಅಂತೂ ತನ್ನ ಸಹಾನುಭೂತಿಯಿಯಾಗಿ ಮಂತ್ರಿಗಳು ಉತ್ತರವನ್ನು ತಿಳಿಸಿದರು. ಜಿಲ್ಲಾ ಬೋರ್ಡು ಅಧ್ಯಕ್ಷ ಡಾ| ಕೆ. ಕೆ. ಪೈಯವರು ಸಭಾಧ್ಯಕ್ಷತೆ ವಹಿಸಿದ್ದರು.

ಹೊಸ್ಪೇಲ್ ಕಟ್ಟಡದ ಉದ್ಘಾಟನೆ— ಮಂತ್ರಿಗಳು ಬ್ರಹ್ಮಗಿರಿಯಲ್ಲಿ ಹರಿಜನ ವಿದ್ಯಾರ್ಥಿನಿಯರ ಹಾಸ್ಟೆಲ್ ಕಟ್ಟಡವನ್ನು ಉದ್ಘಾಟಿಸಿದರು. ಜಿಲ್ಲಾ ಕಾಂಗ್ರೆಸ್ ಕಮಿಟಿ ಪ್ರೆಸಿಡೆಂಟ್ ಡಾ. ಯು. ಪಿ. ಮಲ್ಯರು ಸಭಾಧ್ಯಕ್ಷತೆವಹಿಸಿದ್ದರು.

ನಗರಸಭೆಯ ಮಾನಪತ್ರ ಸ್ವೀಕಾರ—ಉಡುಪಿ ನಗರಸಭೆಯ ಪರವಾಗಿ ಮಂತ್ರಿಗಳಿಗೆ ನಗರಸಭಾಪತಿ ಶ್ರೀ ಕೆ. ಕೆ. ಪೈಗಳು ಮಾನಪತ್ರವನ್ನು ತಾ 10ರಂದು ಸಂಜೆ ಮುನಿಸಿಪಲ್ ಮಹಾತ್ಮಾ ಗಾಂಧಿ ಎಲಿಮೆಂಟರಿ ಶಾಲೆಯಲ್ಲಿ ಆರ್ಪಿಸಿದರು. ಮುನಿಸಿಪಲ್ ಶಾಲೆಗಳನ್ನು ಸರ್ಕಾರವು ಸ್ವಾಧೀನಪಡಿಸಿಕೊಳ್ಳುವ ಸಲಹೆ, ತಿಪ್ಪಿನ ಗುಂಡಿಗೆ ಎಲಿಮೆಂಟರಿ ಶಾಲಾ ಕಟ್ಟಡ ನಿರ್ಮಾಣಕ್ಕೆ ಧನಸಹಾಯ ಇತ್ಯಾದಿ ಮಾನಪತ್ರದಲ್ಲಿ ಹೇಳಲಾಗಿತ್ತು. ಮಂತ್ರಿಗಳು ಉತ್ತರಿಸುತ್ತಾ, ಮುನಿಸಿಪಲ್ ಶಾಲೆಗಳನ್ನು ಸರಕಾರ ಸ್ವಾಧೀನಪಡಿಸಿಕೊಳ್ಳಬೇಕೆಂಬ ಬೇಡಿಕೆ ಸ್ವಾಗತಾರ್ಹವಾದರೂ, ಅದು ಎಷ್ಟರಮಟ್ಟಿಗೆ ಸಾಧ್ಯವೆಂಬುದು ಪ್ರಥಮತ ಪರಿಶೀಲನೆಯಾಗಬೇಕಾಗಿದೆ ಎಂದರು. ನಗರಸಭೆಯವರು ತಮ್ಮ ಕರ್ತವ್ಯಗಳನ್ನು ಪಾಲಿಸಿದರೆ ಪ್ರಜಾಪ್ರಭುತ್ವ ಸರಾಗವಾಗಿ ನವೆಯುವುದೆಂದರು. ಕೊನೆಯದಾಗಿ ಮತವಾರರು ಕಾಂಗ್ರೆಸ್ಸಾ ಉಮೇದ್ವಾರಿಗೆಗೆ ಮತವಾನ ಮಾಡಬೇಕೆಂದು ವಿನಂತಿಸಿದರು. ಆ ಮೇಲೆ ಮಂತ್ರಿಗಳು ಪತ್ತಿಗೆ ಮನೆ, ಶ್ರೀಕೃಷ್ಣ ಮಠಗಳನ್ನು ಸಂದರ್ಶಿಸಿ ಅಲ್ಲಿಯ ಧರ್ಮಾಧಿಕಾರಿಗಳಿಂದ ಆಶೀರ್ವಾದ, ಫಲಮಂತ್ರಾಕ್ಷತೆಗಳನ್ನು ಪಡೆದು ಸಂಜೆ ಕುಂದಾಪುರಕ್ಕೆ ಪ್ರಯಾಣ ಮಾಡಿದರು.

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ, ಕಾಗದದ ಒಂದೇ ಮಗ್ಗುಲಿನಲ್ಲಿರ ಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

೭೦ ವರ್ಷಗಳಿಂದಲೂ ಪ್ರಸಿದ್ಧ ಇದೆ. | ಮಲೇರಿಯಾ ಇನ್ಫ್ಲೂಯೆಂಜಾ ಮತ್ತು ಎಲ್ಲ ಜ್ವರಗಳಿಗೆ | ಎಲ್ಲ ಕೆಮಿಸ್ಟರಲ್ಲಿ ಗ್ರೋಸರೆರಲ್ಲಿ ದೊರೆಯುತ್ತವೆ

ಬಾಟ್ಲಿವಾಲಾ ಎಗ್ಮೂಮಿಕ್ಶ್ಚರ್ ಚೆ
ಮತ್ತು ಗುಳಿಗೆಗಳು

ಸೋಲ ಮ್ಯಾನುಫ್ಯಾಕ್ಚರರು.
ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್ ಮತ್ತು ಕಂ. ಲಿ.,
ಬಾಟ್ಲಿವಾಲಾ ಬಿಲ್ಡಿಂಗ್, ೨೩ ಬಿ, ಪೋರ್ತುಗೀಜ ಚರ್ಚಸ್ಟ್ರೀಟ, ದಾದರ್, ಮುಂಬಯಿ ೨೮.
Tele add "CAWASHABAD"

ಏಳಿಗೆಯ ಬಗೆ

ಪ್ರಾಮಾಣಿಕತೆಯಲ್ಲಿ ದೃಢ ವಿಶ್ವಾಸವಿಟ್ಟು ಕಂತುಗಳಲ್ಲಿ ಕ್ರಯ ಪಡೆದುಕೊಳ್ಳುವ ಪದ್ಧತಿ ಅಮೇರಿಕದಲ್ಲಿದೆ!

ಚಾರ್ಲ್ಸ್ ಡುರ್ಯೋರವರ ಹೆಳೆಯ ಮಾದರಿಯ ಮೋಟರ್ ಕಾರಿನ ಮೊದಲನೆಯ ಸಂಚಾರ ೧೮೯೫ರಲ್ಲಿ ಯಶಸ್ವಿಯಾದಾಗ, ವೀಕ್ಷಿಸುತ್ತಿದ್ದ ವ್ಯಕ್ತಿಗಳಲ್ಲಿ ಒಬ್ಬ ಬ್ಯಾಂಕರನಿದ್ದನು. "ಇದು ಅದ್ಭುತವಾಗಿದೆ. ಆದರೆ ಇದರಿಂದ ಪ್ರಯೋಜನವೇನು? ಇದರ ಬೆಲೆಯು, ಈ ಪಟ್ಟಣದ ಹೆಚ್ಚಿನ ಜನರ ಎರಡು ವರ್ಷಗಳ ಗಳಿಕೆಗಿಂತಲೂ ಅಧಿಕವಾಗಿರುತ್ತದೆ. ಮತ್ತು ಮಿ| ಡುರ್ಯೋಯವರ ಸಾಧನವನ್ನು ಕೊಳ್ಳುವಂಥ್ಥ ಲಕ್ಷಾಧೀಶರು ಎಷ್ಟು ಮಂದಿ ಇದ್ದಾರೆ?" ಎಂದು ಆ ಜಾಗರೂಕ ಬ್ಯಾಂಕರರು ಜೇಳಿದರು. ಆವರ ಮಾನಸದಂಡದಿಂದ ಅಳೆದರೆ ಇಂದು ಅಮೆರಿಕದಲ್ಲಿ ಐದು ಕೋಟಿಗಿಂತಲೂ ಅಧಿಕ ಲಕ್ಷಾಧೀಶರಿದ್ದಾರೆ. ಇದು ಆದ್ಭುತವೇನೋ ನಿಜ, ಆದರೆ ಇಂಥ ಸಾಧನೆಗೆ ಆಸ್ಪದವಿತ್ತಿರುವ ಪದ್ಧತಿಯು ಇನ್ನೂ ಹೆಚ್ಚು ಆದ್ಭುತವಾದುದು.

ಜಿಲ್ಲೆನಿ ಜೇನಿಯಲ್ ಮೆಚ್ಚುಗಾರರು ಒಮ್ಮೆ ಹೀಗೆಂದರು: "ಮಾನವ ಕುಲದ ಸಂಪತ್ತನ್ನು ಅಭಿವೃದ್ಧಿಗೊಳಿಸಲು ಪತ್ತಿನ ಪದ್ಧತಿಯು, ಲೋಕದ ಎಲ್ಲ ಚಿನ್ನದ ಗಣಿಗಳಿಗಿಂತ ಸಾವಿರ ಪಾಲು ಹೆಚ್ಚು ನೆರವಾಗಿದೆ. ಅದು ಕಾರ್ಮಿಕರನ್ನು ಉನ್ನತಿಗೇರಿಸಿದೆ, ಕೈಗಾರಿಕೆಗಳಿಗೆ ಉತ್ತೇಜನವಿತ್ತಿದೆ ಮತ್ತು ಪ್ರತಿಯೊಂದು ಸಾಗರದಾಚೆಗೂ ವಾಣಿಜ್ಯವನ್ನು ವಿಸ್ತರಿಸಿದೆ" ಒಹು ಸಂಖ್ಯಾತ ಜನರಿಗೆ ಶ್ರಮ ಮತ್ತು ಕೈಗಾರಿಕೆಯ ಫಲಗಳನ್ನನುಭವಿಸಲು ಸಹಾಯ ಮಾಡುವ, ಈ ಪತ್ತಿನ ಪದ್ಧತಿಯಂದರೇನು? ಕಂತಿನ ಯೋಜನೆಯು ಪತ್ತಿನ ಪದ್ಧತಿಯು ಕಳಪದಿಯಾಗಿರುತ್ತದೆ. ಕಂತಿನ ಖರೀದಿಯ ಪದ್ಧತಿಯೆಂದರೆ, ಖಂಡವಾಳಶಾಹಿ ಪದ್ಧತಿಗೆ ಮತ್ತು ಜನರ ಕೇಳಿಕೆಗಳಿಗೆ ಕೊಂದಿಕೊಳ್ಳಲು ಸಮಾಜದ ಸಂಯುಕ್ತ ಮತ್ತು ವಿವೇಕಪೂರ್ಣ ಪ್ರಯತ್ನವಾಗಿರುತ್ತದೆ.

ಕಾರ್ಖಾನೆಗಳಿಂದ ಹೊರಬರುವ ಉಪಯುಕ್ತ ವಸ್ತುಗಳ ಸದಾ ಹೆಚ್ಚುತ್ತಿರುವ ವೈವಿಧ್ಯದಿಂದಾಗಿ, ಈ ಸ್ಕಯೋಜನಗಳನ್ನು ಸಮಾಜದ ಹೆಚ್ಚಿನ ಭಾಗಗಳಿಗೆ ಒದಗಿಸಲು ವಿಧಾನಗಳನ್ನು ಅಭಿವೃದ್ಧಿಗೊಳಿಸುವ ಆವಶ್ಯಕತೆಯುಂಟಾಗುತ್ತದೆ. ಕಂತಿನ ಖರೀದಿಯ ಪದ್ಧತಿಯು ಇದಕ್ಕೆ ಉತ್ತರವನ್ನೊದಗಿಸಿತು. ಇದು ಅನೇಕ ಜನರಿಗೆ, ತಮ್ಮ ಆದಾಯಗಳನ್ನು ಅಳೆದು, ವೆಚ್ಚಗಳನ್ನು ನುಂಡಾಗಿಯೇ ನಿಯೋಜಿಸುವ ಕ್ರಮವನ್ನು ಕಲಿಸಿತು. ಹೀಗೆ ಜನರು ಮಿತವ್ಯಯದ ಅಭ್ಯಾಸದಲ್ಲಿ ಕ್ರಯಂ ತರಬೇತಿ ಪಡೆದರು. ತಮ್ಮನ್ನು ಮತ್ತು ತಮ್ಮ ಮಕ್ಕಳನ್ನು ತಮ್ಮ ಪರಿಸ್ಥಿತಿಯಿಂದ ಮೇಲಕ್ಕೆತ್ತಲು ಇದು ಒಡನವರಿಗೊಂಡು ವರಪ್ರಸಾದವಾಯಿತು.

ಕಂತಿನ ಪುಸ್ತು ನಾಗರಿಕತೆಯಷ್ಟೇ ಪುರಾತನವಾದುದು. ಕ್ರಿ. ಪೂ. ೪೦೦೦ದಿಂದ ಕ್ರಿ. ಪೂ. ೩೫೦೦ರ ನಡಿಗಿನ ಅವಧಿಯಲ್ಲಿ, ಸುಮೇರಿಯನ್ ಯುಗದಲ್ಲಿ, ಬಯಲುಗಳಲ್ಲಿ ಜಲದಾಡುತ್ತಿದ್ದ ಜನರು ಮೊದಲನೆಯ ಶಾಸನ ಸೂತ್ರಗಳನ್ನು ಮತ್ತು ಮೌಲ್ಯದ ಸಂಕೇತಗಳಾಗಿ ಚಿನ್ನ, ಬೆಳ್ಳಿಗಳ ಪ್ರಥಮ ಉಪಯೋಗವನ್ನು ಅಭಿವೃದ್ಧಿಗೊಳಿಸಿದರು ಮಾತ್ರವಲ್ಲದೆ, ಪತ್ತಿನ ಪದ್ಧತಿಯ ಕಲ್ಪನೆಯನ್ನೂ ಬಳಕೆಗೆ ತಂದರು. ಕ್ರಿ. ಪೂ. ೨೦೦೦ದ ಬೆಬಿಲೋನಿಯನ್ನರ ಮತ್ತು ಫಿನೀಷಿಯನ್ನರ ಕಾಲದಿಂದ, ಕಂತಿನ ಪಾವತಿಗಳ ಮೂಲಕ ಮನೆಗಳನ್ನು ಮತ್ತು ವಿವೆಗಳನ್ನು ಪಡೆಯುವ ಪದ್ಧತಿ ಪ್ರಚುರವಾಗಿತ್ತು.

೧೯೦೭ರಲ್ಲಿ ನ್ಯೂಯಾರ್ಕ್‌ನ ಕೌಪರ್ ವೈಟ್ ಎಂಡ್ ಸನ್ಸ್‌ರವರು ಕಂತಿನ ಮೇಲೆ ಗೃಹೋಪಯೋಗಿ ಸಾಮಾನುಗಳನ್ನು ಮಾರಿದಾಗ, ಈ ವಿಧಾನವು ಅಮೆರಿಕದಲ್ಲಿ ಬಹು ಜನ ಪ್ರಿಯವಾಯಿತು. ಐವತ್ತು ವರ್ಷಗಳ ಅನಂತರ ಸಿಂಗರ್ ಸಾಯಿಂಗ್ ಮೆಷೀನ್ ಕಂಪೆನಿಯು, ತನ್ನ ಸರಕುಗಳಿಗೆ ಮಾರುಕಟ್ಟೆಯನ್ನು ವಿಸ್ತರಿಸಲು, ಈ ವಿಧಾನವನ್ನಂಗೀಕರಿಸಿತು. ೧೯೫೦ರಲ್ಲಿ, ಸಾಮಾನ್ಯ ಕುಟುಂಬದ ವಾರ್ಷಿಕ ಆದಾಯವು ೨೦೦೦ ಡಾಲರ್‌ಗಳಿಗಿಂತ ಕಡಿಮೆಯಿದ್ದಾಗ ಇದು ೧೨೫ ಡಾಲರ್‌ಗಳಿಗೆ ಮಾರಾಟವಾಗುತ್ತಿದ್ದ ಸೂಯಿಂಗ್ ಮೆಷೀನ್‌ಗಳನ್ನು ತಯಾರಿಸಿ ಮಾರುತ್ತಿತ್ತು. ಇಪ್ಪತ್ತು ವರ್ಷಗಳ ಅನಂತರ ಪಿಯಾನೋ ಉದ್ದಿಮೆಯು ಈ ಕ್ಷೇತ್ರಕ್ಕೆ ಪ್ರವೇಶಿಸಿತು. ತಿನೆಯು ಶತಮಾನವು ಸಾಮೂಹಿಕ ಉತ್ಪಾದನೆಯು ತತ್ವದ ವ್ಯಾವಹಾರಿಕ ಅಭಿವೃದ್ಧಿಯನ್ನು ಕಂಡಿತು. ಅದುದರಿಂದ ಮಾರಾಟದ ಬೆಲೆಗಳಲ್ಲಿ ಪ್ರಗತಿಪರವಾದ ಕಡಿತವನ್ನು ಮಾಡುತ್ತಿರಬೇಕಾದರೆ, ವಿಸ್ತೃತವಾದ ಮಾರುಕಟ್ಟೆಯು ಅವಶ್ಯವಾಯಿತು. ಈಸಮಯದಲ್ಲಿ ಮೋಟಾರು ಕಾರುಗಳ ವ್ಯಾಪಾರಿಗಳು ತಮ್ಮ ಕಾರುಗಳನ್ನು ಕಂತಿನ ಖರೀದಿಯಲ್ಲಿ ಕೊಡಲು ಮುಂದೆ ಬಂದರು.

ಕಂತಿನ ಖರೀದಿಯು ಮೋಟರ್ ಕಾರುಗಳ ಮಾರಾಟವನ್ನು ಹೆಚ್ಚಿಸಿತು. ಇದರಿಂದಾಗಿ ಮೋಟರ್ ಕಾರುಗಳ ಉತ್ಪಾದನೆಯೂ ಹೆಚ್ಚಿತು. ವೆಚ್ಚವು ತಗ್ಗಿದುದರಿಂದ ಅನೇಕರಿಗೆ ಕಾರುಗಳನ್ನು ಕೊಳ್ಳಲು ಸಾಧ್ಯವಾಯಿತು. ೧೯೧೦ರಲ್ಲಿ ಒಂದು ಮೋಟರ್ ಕಾರಿನ ಕ್ರಯವು ಕುಶಲ ಕಾರ್ಮಿಕನ ಮೂರು ಪೂರ್ಣ ವರ್ಷಗಳ ಗಳಿಕೆಯಷ್ಟಿತ್ತು. ಇಂದು ಸಾಮಾನ್ಯ ಉದ್ಯೋಗಿಯ ಆರು ತಿಂಗಳ ಗಳಿಕೆಯಿಂದ ಒಂದು ಕಾರನ್ನು ಅನೇಕರು ಅಮೆರಿಕದಲ್ಲಿ ಕೊಳ್ಳಬಹುದು. ೧೯೫೦ರಲ್ಲಿ ೫ ಲಕ್ಷ ಕಾರುಗಳನ್ನು ಜನರು ಪಡೆದಿದ್ದರೆ ಇಂದು ಅದು ೪೦ ಲಕ್ಷವನ್ನೂ ಮೀರಿರುತ್ತದೆ.

ಮೋಟರ್ ಕಾರುಗಳ ಮಾರುಕಟ್ಟೆಯ ವಿಸ್ತರಣವು ಅಮೆರಿಕನ್ ಆರ್ಥಿಕ ಜೀವನದ ಮೇಲೆ ಬಹಳ ಪರಿಣಾಮ ಮಾಡಿತು. ಇದರಿಂದಾಗಿ ನಗರಗಳ ಪುನರ್ನಿರ್ಮಾಣವಾಯಿತು ಮತ್ತು ಉಪನಗರಗಳು ನಿರ್ಮಿತವಾದುವು. ಇದರಿಂದ ಮನೋರಂಜಕ ಕಾರ್ಯಕಲಾಪಗಳ ಸ್ವರೂಪ ಸಮಾರ್ಪಟ್ಟಿತು, ಮತ್ತು ಸಾಧಾರಣ ಪ್ರತಿಯೊಂದು ಕುಟುಂಬಕ್ಕೂ ಹೊಸ ಸೇವೆಗಳನ್ನು ಮತ್ತು ಸೌಕರ್ಯಗಳನ್ನು ಒದಗಿಸಲು ನೆರವಾಯಿತು. ಮೋಟರ್ ಕಾರ್ಖಾನೆಗಳು ಈ ತಮ್ಮ ಕಾರ್ಮಿಕರ ಜೀವನ ಮಟ್ಟಗಳನ್ನೆತ್ತರಿಸಿದಂತೆಲ್ಲ, ಇತರ ಕೈಗಾರಿಕೆಗಳು ಇದನ್ನನುಸರಿಸಿದುವು.

ಶಿಕ್ಷಣದಲ್ಲೂ ಕಂತಿನ ಯೋಜನೆ ಪ್ರವೇಶಿಸದಿರಲಿಲ್ಲ. ಅನೇಕ ಕಾಲೇಜುಗಳು ಅಂಶಕಃ – ಪಾವತಿಯ ಯೋಜನೆಗಳ ಮೇರೆಗೆ ಕೋರ್ಸ್‌ಗಳನ್ನೊದಗಿಸಿದುವು ಮತ್ತದರಿಂದ ಹೆಚ್ಚು ಮೇಧಾಶಕ್ತಿ ಇದ್ದರೂ, ಹಣದ ಕೊರತೆಯಿರುವ ಮಹತ್ವಾಕಾಂಕ್ಷೆಯ ಸ್ತ್ರೀಪುರುಷರಿಗೆ ವಿದ್ಯಾಭ್ಯಾಸ ಮಾಡಲು ಸಾಧ್ಯವಾಯಿತ. ತಿಳುವಳಿಕೆಯು ಮತ್ತು ತರಬೇತಿಯ ಹೆಚ್ಚಳದಿಂದ, ಗಳಿಕೆಗಳು ಹೆಚ್ಚಿದುವು—ಇನ್ನು ರಾಷ್ಟ್ರದ ಅನುಭೋಗ ಶಕ್ತಿಯನ್ನು ಹೆಚ್ಚಿಸುವ ಮುಖ್ಯವಾದ, ನಿಶ್ಚಿತವಾದ ವಿಷಯವಾಗಿರುತ್ತದೆ.

ದೇಶದ ಸಂಪತ್ತನ್ನು ಹಂಚಿಕೊಳ್ಳುವ ಈ ವಿಧಾನವು, ಅಮೇರಿಕದಲ್ಲಿ ಪ್ರಜಾಪ್ರಭುತ್ವದ ಸಂರಕ್ಷಣೆಗೆ ನೆರವಾಗಿದೆ. ದೇಶದ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸುವುದರಲ್ಲಿ ಉಪಯೋಗಿಸಲಾದ ಬುದ್ಧಿ ಕೌಶಲ್ಯ ಮತ್ತು ಜನರ ವ್ಯಾಪಾರಾಣಿಕತೆಯಲ್ಲಿನ ದೃಢ ವಿಶ್ವಾಸ-ಇವುಗಳು ಜೀವನಮಟ್ಟವನ್ನು ಎತ್ತರಿಸಲು ಅಪರಿಮಿತ ಪ್ರಮಾಣದಲ್ಲಿ ನೆರವಾಗಿವೆ ಬಹು ಮಂದಿ ಕಾರ್ಮಿಕರಿಗೆ ಜೀವನದ ಅನೇಕ ಭೋಗಗಳನ್ನನುಭವಿಸುವ ಸಾಮರ್ಥ್ಯ ಉಂಟಾದುದರಿಂದ, ಆರ್ಥಿಕ ವರ್ಗಗಳ ನಡುವಣ ಅಂತರವು ಕಡಿಮೆಯಾಯಿತು. ವ್ಯಾವಹಾರಿಕವಾಗಿರುವ ಪತ್ತಿನ ಪದ್ಧತಿಯು ಜನರಲ್ಲಿ ಆತ್ಮವಿಶ್ವಾಸವನ್ನು ಉಂಟುಮಾಡಿದೆ ಮತ್ತು ಭವಿಷ್ಯಕ್ಕೆ ಮಹತ್ವ ಭದ್ರತೆ ಮತ್ತು ಆಶಾವಾದವಾಗಿರುವ ಆಧುನಿಕ ಕೈಗಾರಿಕೆಯ ನಿರ್ಮಾಣಕ್ಕೆ ನೆರವಾಗಿದೆ.

ಜನರಿಗೆ ಅಸಂಖ್ಯಾತ ಸೊತ್ತುಗಳು ಮತ್ತು ಸೌಕರ್ಯಗಳಿರುವುದಕ್ಕೆ, ರಾಷ್ಟ್ರದ ಸಂಪನ್ನತೆಯು ಕಾರಣವಲ್ಲ; ಜನರು ತಮ್ಮ ಉತ್ಪನ್ನಗಳನ್ನು ತಯಾರಿಸಿ, ಖರೀದಿಮಾಡಿ, ಬಳಸುತ್ತಿರುವುದು ದೇಶದ ಸಂಪನ್ನತೆಗೆ ಕಾರಣವಾಗಿರುತ್ತದೆ.

ಭಾರತ ದೇಶದಲ್ಲಿ ಹೀಗೆ ಕಂತುಗಳಲ್ಲಿ ಖರೀದಿ ನಡೆಸುವ ಕ್ರಮವನ್ನು ಜನಪ್ರಿಯಗೊಳಿಸುವುದು ಕಡ ಪದ್ಧತಿಯನ್ನು ಊರ್ಜಿತವಿಡುವುದಕ್ಕಿಂತ ಅಥವಾ ಕಡ ಕೊಡಲು ನಿರಾಕರಿಸುವುದಕ್ಕಿಂತ ಹೆಚ್ಚು ಉತ್ತಮವಾದುದಾಗಿದೆ. ಗಿರಾಕಿಗಳು ಮೋಸಮಾಡಲಾರರೆಂಬ ನಂಬಿಕೆಯೇ ಕಂತಿನ ಖರೀದಿಯ ತಿರುಳು. ಬಾಡಿಗೆ ದಾರನಿಗೆ ಮನೆಯನ್ನು, ಬೇಸಾಯುಗಾರನಿಗೆ ಭೂಮಿಯನ್ನು ಒಪ್ಪಿಸಿಕೊಟ್ಟು, ಹಿಂದಿನಿಂದ ಇದಕ್ಕೆ ತಕ್ಕ ಪ್ರತಿಫಲವನ್ನು ಕ್ಲಪ್ತ ಸಮಯದಲ್ಲಿ ಪಡೆಯುವಂತೆ, ನಮ್ಮ ವ್ಯಾಪಾರಿ ವರ್ಗದವರು ಸಹ ಕಂತಿನ ಖರೀದಿಯನ್ನು ಪ್ರೋತ್ಸಾಹಿಸುವುದು ಹಿತಕರ. ಇದರಿಂದ ಜನರು ಹೆಚ್ಚು ಸಮರ್ಪಕ ಭೋಗ ಭಾಜನರಾಗುವುದಷ್ಟೇ ಯಲ್ಲ, ತತ್ಪರಿಣಾಮವಾಗಿ ವ್ಯಾಪಾರದ ಜೊತ್ತೂ ಹೆಚ್ಚುಕೊಳ್ಳುತ್ತದೆ.

ಸೂಚನೆ

'ನವಯುಗ'ದ ಚಂದಾ ಹಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇವರ ಯಾವುದೇ ಶಾಖೆಯಲ್ಲಿ ಯಾವತ್ತೊಂದು ತರದ ಪರ್ಮಿಟ್ ಇಲ್ಲದೆ (ನವಯುಗ ವಾರಪತ್ರಿಕೆಯ ಖಾತೆಗೆ) ಜಮಾತ ಮಾಡಬಹುದು.

ಮೆನೇಜರ್.

ನವಯುಗ, ಉಡುಪಿ.

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶ್ಯಲ್ ನಂ ೧} {ಮೆಡಿಕೇಟಿಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ಜೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ಪಾದಲ್ (ನೆಂಟ್ರಲ್ ರೈಲ್ವೆ) ಮುಂಬಯಿ, ೧೪

ಕುಮಾರಿ ಬಿಲ್ಲೆಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತವೆ!!

P: DEVEE & Co. (N. J.) CALCUTTA—40.

ಸ್ವಾಮಿಸ್ವರು: ಪೈ ಕಂಪೆನಿ, ಮಂಗಳೂರು—1.

ಸ್ಫೂರ್ತಿದಾಯಕ ಚಿತ್ರ

ಭಾರತೀಯ ನಾಗರಿಕತೆಯು ಕುಂಚದ ಮೂಲಕವೂ ವಿಕಸಿಸಿತು!!!

ಅನಾದಿ ಕಾಲದಿಂದಲೂ ಭಾರತವು ಹಲವು ಕಾರಣಗಳಿಂದಾಗಿ ಜಗತ್ತಿನಲ್ಲಿ ಶ್ರೇಷ್ಠವಾದ ದೇಶವೆಂದು ಹೆಸರು ಪಡೆದಿದೆ. ಪೌರ್ವಾತ್ಯ ನುತ್ತು ಪಾಶ್ಚಿಮಾತ್ಯ ದೇಶಗಳ ಹಾಗೂ ಅನಾಗರಿಕ ಜನರ ಅನ್ವೇಷಣವು ನಡೆದ ಕಾಲದಲ್ಲಿ ಭಾರತವು ಒಂದು ಜನನಿಬಿಡವಾದ ರಾಷ್ಟ್ರವಾಗಿತ್ತು. ಭಾರತವು ಪ್ರಗತಿ ಹೊಂದಿದ ಉಚ್ಚ ರಾಷ್ಟ್ರವಾಗಿತ್ತು. ಏಕಚಕ್ರಾಧಿಪತ್ಯದಿಂದ ಆಳುತ್ತಿದ್ದ ರಾಜರುಗಳ ಉದಾರತೆಯೂ, ಆದರ್ಶ ವ್ಯಕ್ತಿತ್ವ, ಪೋಷಕ ಗುಣವು ಅಭೇದ್ಯವಾಗಿ ಖಂಡಗಳ ಜನರನ್ನು ಆಕರ್ಷಿಸುತ್ತಿತ್ತು. ಇತಿಹಾಸದ ಪುಟಗಳನ್ನು ಮಗುಚಿ ಹಾಕಿದರೆ ಸರಕೀಯರು ಭಾರತದ ಶ್ರೇಷ್ಠತೆಗೂ ಘನತೆಗೂ ಆಸೂಯೆಪಟ್ಟು, ಇಲ್ಲಿಗೆ ಧಾಳಿ ಮಿಟ್ಟು ಅಧಿಕ ಪ್ರಮಾಣದಲ್ಲಿ ದ್ರವ್ಯವನ್ನೂ, ಸಂಪತ್ತನ್ನೂ ಸೂರೆಗೊಂಡರು.

ಇದಕ್ಕಿಂತಲೂ ಪೂರ್ವದಲ್ಲಿ ಋಷಿಗಳಿಂದಲೂ, ಆಚಾರ್ಯರುಗಳಿಂದಲೂ ರಚಿಸಲ್ಪಟ್ಟ ವೇದಮಂತ್ರ, ಉಪನಿಷತ್ತು—ಮೊದಲಾದ ಗ್ರಂಥಗಳಿಂದಲೂ ಮತ್ತು ಇವರು ಉಪದೇಶ ಮಾಡಿದ ವೇದಾಂತ ತತ್ವಗಳೂ, ರಾಜಾಶ್ರಯ ಕ್ಕೊಳಗಾಗಿ ಅನೇಕ ಉತ್ತಮ ಸಾಹಿತ್ಯ ಕೃತಿಗಳನ್ನು ಅರ್ಪಿಸಿದ ಮಹಾ ಸಾಹಿತ್ಯ ವಿದ್ವಾಂಸರುಗಳಿಂದಲೂ ಪ್ರಸಿದ್ಧವಾಯಿತು. ಇವರು ರಚಿಸಿದ ಕಾವ್ಯ, ನಾಟಕಗಳು ಜಗತ್ಪ್ರಸಿದ್ಧವಾದವು. ಸಂಸ್ಕೃತ ಸಾಹಿತ್ಯದ ಸಂಪತ್ತಿನಂತೆಯೇ ಉಳಿದಿರುವ ಆಯುರ್ವೇದ ಶಾಸ್ತ್ರ ಹಚ್ಚಿನ ಬಳಕೆಯಲ್ಲಿದ್ದಿತು ಒಂದು ದೃಷ್ಟಿಯಿಂದ ಆಯುರ್ವೇದ ಮತ್ತು ವೈಜ್ಞಾನಿಕ ವೈದ್ಯಕೀಯ ಕ್ರಮಗಳನ್ನು ತುಲನೆ ಮಾಡಿದರೆ ಕೆಲವು ವಿಧದಿಂದ ಅದಕ್ಕೆ ಸಮನಾಗಿಯೂ, ಇನ್ನು ಕೆಲವು ಶಂಕೆರ್ಪಗಳಲ್ಲಿ ಅದಕ್ಕಿಂತಲೂ ಒಂದು ಕೈ ಮೇಲೆನಿಸಿಕೊಂಡು ಸರಳವಾದಬಹು ದಿವ್ಯ ಶಾಸ್ತ್ರವಾಗಿದೆ. ಜ್ಯೋತಿಷ ಶಾಸ್ತ್ರವು ಹಾಗೆಯೇ ಅದು ಒಂದು ಪದ್ಧತಿಯನ್ನು ಅನುಸರಿಸಿಕೊಂಡು ಬಂದಿತ್ತು. ಈ ಖಗೋಳ ಮತ್ತು ಜ್ಯೋತಿಷ ಕ್ಷೇತ್ರದಲ್ಲಿ 'ಜಗ ಪಂಡಿತ'ರೆನಿಸಿಕೊಂಡವರೆಷ್ಟೋ ಮಂದಿ. ಇಂದಿನ ಆ ಶಾಸ್ತ್ರೀಯ ಕ್ರಮವು ಇಂದಿನ ಯಾವ ನೈಜ್ಞಾನಿಕ ಕ್ರಮಕ್ಕೆ ಕಡಿಮೆ ಇದೆ! ಮಹಾ ಶಿಲ್ಪಿಗಳಿಂದ ನಿರ್ಮಾಣಗೊಂಡ್ಯವಾಸ್ತು—ಮೊದಲಾದ ಲಲಿತ ಕಲೆಗಳೂ ಭಾರತದ ಕೀರ್ತಿಯನ್ನು ಹೆಚ್ಚಿಸಲು ಕಾರಣವಾಗಿದೆ. ಕಲಾ ಪ್ರಪಂಚದಲ್ಲಿ ಸಾಧಿಸಿದ ಔನ್ನತ್ಯವು ಪಾಶ್ಚಿಮಾತ್ಯ ಕಲೆಯು ಮಟ್ಟಕ್ಕೆ ಸರಿತೂಗುವಷ್ಟು.

ಭಾರತದ ಪ್ರತಿಯೊಂದು ನಿರ್ಮಾಣವು ಯಾ ಕೃತಿಗಳು ಕಾಲ ವಿಸ್ತಾರದಿಂದಲೂ, ಸಂಖ್ಯೆಯಿಂದಲೂ ಮತ್ತು ತನ್ನ ನೈಜವಾದ ಸ್ವಾತಂತ್ರ್ಯದ ಗುಣಾತಿಶಯದಿಂದಲೂ ಗಣನಾರ್ಹವಾಗಿದೆ.

ಲಲಿತ ಕಲೆಗಳಲ್ಲಿ ಕಾವ್ಯವು ಒಂದು ಮಹತ್ತರ ಸ್ಥಾನವನ್ನು ಪಡೆದಿದೆ ಎಂಬುದು ಒಪ್ಪತಕ್ಕ ಸಂಗತಿಯಾಗಿದೆ.

ಗಾವು ನಮ್ಮ ಸುತ್ತ-ಮುತ್ತಲಿನ ಜೀವ ಜಂತುಗಳನ್ನೂ, ಮಾನವ ಕೋಟಿಯನ್ನೂ ಉದಾತ್ತ ಭಾವನೆಯಿಂದ ಮತ್ತು ಸಹೃದಯತೆಯಿಂದ ಕಾಣುವಾಗ ನಮ್ಮಲ್ಲಿ ಸಹಜವಾದ ಭಾವೋನ್ಮೇಷದ ಪ್ರೀತಿಯು ಹುಟ್ಟುತ್ತದೆ. ಅದರಲ್ಲೂ ಭಾವನಾಮಯಿಯಾದ ಆಕಾಜೀವಿ ಅದನ್ನು ವಿಶೇಷವಾಗಿ ಅನುಭವಿಸುತ್ತಾನೆ. ಇಂತಹ ಒಂದು ವಿಶೇಷ ಅನುಭವವು ಜನನಾಮಾನ್ಯರಲ್ಲೂ ಆಗುತ್ತದೆ ಎನ್ನುವುದಕ್ಕೆ ಬರುವುದಿಲ್ಲ. ಒಂದು ವಸ್ತುವಿನ ಅರ್ಥವನ್ನು ತಿಳಿಯುವುದರಲ್ಲಿ ಕವಿಯ ಅಭಿಪ್ರಾಯವು ಬಹು ಘನವಾಗಿದ್ದು ಒಳ್ಳೆ ತೂಕದ್ದಾಗಿರುತ್ತದೆ. ಇಂತಹದೇ ಸದ್ಭಾವನೆಯನ್ನು ಇತರರ ಮೇಲೆ ಯಥಾವತ್ತಾಗಿ ಮೂಡಿಸಲು ಕಾವ್ಯಪ್ರೌಢಿಯೇ ಸಾಧನವೆಂಬುದು ನಿರ್ವಿವಾದ.

ಇದೇ ರೀತಿ ಒಂದು ವಸ್ತುವಿನ ನಿಜವಾದ ಸೌಂದರ್ಯ ಯಾ ಬೆಲೆಯನ್ನು ಕವಿಯ ಹೃದಯದಿಂದಲೇ ತಿಳಿಯಬೇಕು. ಭಗವಂತ—ನೊದಲಾದ ವರನ್ನು ಸ್ತುತಿಸವಾಗ- ಕೊಂಡಾಡುವಾಗ ಭಕ್ತಿ ಪರವಶತೆಯ ಭಾವನೆ ಬೆಳೆದು ಬರಬೇಕು. ಮತ್ತು ಜನಸಾಮಾನ್ಯರ ಜೀವನ, ಸುಖ-ದುಃಖ ಮೊದಲಾದವುಗಳ ಕಲ್ಪನೆಯು ಚಿಕ್ಕಣವನ್ನು ಮತ್ತೊಬ್ಬನ ಮೇಲೆ ಮೂಡಿಸಲು ಕಾವ್ಯಪ್ರೌಢಿಯೇ ಸಾಧನ.

ಮನೋಭಾವನೆಗಳನ್ನು ಸೂಚಿಸುವ ದರಲ್ಲಿ ಬೇರೆ ಕೆಲವು ಮಾರ್ಗಗಳು ಕಾವ್ಯ ಕಲೆಯನ್ನು ಹೋಲುವಂತಹವುಗಳುಇವೆ. ಇವಕ್ಕೆಲಲಿತ ಕಲೆಗಳೆಂದು ಕೆಸರು. ಇವುಗಳಲ್ಲಿ ನಾಟ್ಯ, ಸಂಗೀತ, ವಾಸ್ತುಶಿಲ್ಪ, ಪ್ರತಿಮಾ ಶಿಲ್ಪ, ಚಿತ್ರಕಲೆ, ನಟನಾ ಕಲೆಗಳು ಮುಖ್ಯ. ಇವು ಪ್ರತಿಯೊಂದೂ ತಮ್ಮ ಸಹಜವಾದ ಗುಣ, ವೈಶಿಷ್ಟ್ಯಗಳಿಂದ ಶ್ರೇಷ್ಠವೆನಿಸಲ್ಪಟ್ಟಿವೆ. ಈ ಲಲಿತ ಕಲೆಗಳೊಂದೊಂದಲ್ಲಿಯೂ ಪ್ರಾಚೀನ ಭಾರತೀಯರು ನಿಪುಣರೆನಿಸಿಕೊಂಡಿರುವರು.

ಭಾರತೀಯರು ತಮ್ಮ ಕುಶಲ ಕೃತಿಗಳನ್ನು ಬಹು ಭವ್ಯ ಸ್ಥಳಗಳಲ್ಲಿ ನಿರ್ಮಿಸುತ್ತಿದ್ದರು. ಪುರಾಣದ-ಇತಿಹಾಸದ ಉತ್ತಮ ಕತೆಗಳನ್ನೊಳಗೊಂಡ ಶಿಲ್ಪ ಚಿತ್ರಣ ಮತ್ತು ಚಿತ್ರ ರೂಪದಲ್ಲಿ ಬರೆಯುತ್ತಿದ್ದರು. ಅವುಗಳಿಂದಿಗೂ ಭಾರತದ ನಾನಾ ಕಡೆಗಳಲ್ಲಿ ಗುಹೆಗಳಲ್ಲಿ ಇವೆ.

ಭಾರತದಲ್ಲಿ ಚಿತ್ರ ಕಲೆಯು ಆರ್ಯರು ಮತ್ತು ದ್ರಾವಿಡರ ಯುಗಮ ಕಾಲದಿಂದ ಆರಂಭವಾಯಿತೆಂದು ಹೇಳಬಹುದು. ಅಂದಿನಿಂದ ಇಂದಿನ ವರೆಗೆ ಏಕ ಪ್ರಕಾರವಾದ ಬೆಳವಣಿಗೆಯಿಂದ ಸಾಗಿಕೊಂಡು ಬಂದಿದೆ. ಈ ಲಲಿತ ಕಲೆಗಳ ಜ್ಞಾನವು ಹುಟ್ಟುವ ಮೊದಲು ಶಿಲಾಯುಗದ ಜನಾಗರಿಕ ಜನರು ಗವಿಗಳಲ್ಲಿ ಮನುಷ್ಯ ರು—ಪ್ರಾಣಿಗಳ ಮತ್ತು ಬೇಟೆಯಾಟದ ಚಿತ್ರಗಳನ್ನು ಕೆತ್ತುತಿದ್ದರು. ಇಂತಹ ವಿಚಾರಕ್ಕೆ ನಿದರ್ಶನವಾಗಿ ರಾಯಚೂರು ಸಂಸ್ಥಾನದ ಸಿಂಗನ್‌ಪುರದಲ್ಲಿ ಇರುವ ಚಿತ್ರಗಳೇ ಸಾಕ್ಷಿ.

ಚಿತ್ರ ಕಲೆಯು ಪ್ರಾಚೀನತೆಯನ್ನು ಮಹಾ ಗ್ರಂಥಗಳಲ್ಲಿ ಉಲ್ಲೇಕಿತವಾಗಿರುವ ಸಂಗತಿಗಳಿಂದಲೂ, ದೇವಸ್ಥಾನ-ಅರಮನೆಗಳ ಗೋಡೆಯ ಮೇಲೆ ಬರೆದಿರುವ ಚಿತ್ರಗಳಿಂದಲೂ ತಿಳಿಯಲು ಬರುತ್ತದೆ.

ಗುಪ್ತರ ಕಾಲದಲ್ಲಿ ಹಿಂದೂ ಸಂಸ್ಕೃತಿಯು ಶ್ರೇಷ್ಠ ಮಟ್ಟಕ್ಕೇರಿ "ಸುವರ್ಣ ಯುಗ" ವೆನಿಸಿಕೊಂಡಿತು. ಗುಪ್ತ ರಾಜರುಗಳು ಹೊರ ದೇಶದವರೊಡನೆ ಇಟ್ಟುಕೊಂಡಿದ್ದ ಬಾಂಧವ್ಯದಿಂದಾಗಿ ಚೀನೆಯರು ಭಾರತದಿಂದ ಚಿತ್ರ ಕಲೆಯ ಜ್ಞಾನವನ್ನು ಬೆಳೆಸಿಕೊಂಡರೆಂದು ಇತಿಹಾಸದ ಪುಟಗಳಿಂದ ತಿಳಿದು ಬರುತ್ತದೆ. ಚಿತ್ರ ಲಕ್ಷಣ, ವಿಷ್ಣು ಧರ್ಮೋತ್ತರ ಗ್ರಂಥಗಳಿಂದ ಪ್ರಾಚೀನ ಚಿತ್ರ ಕಲೆಯ ಗುಣ, ಲಕ್ಷಣಗಳು ಉತ್ತಮವಾಗುತ್ತದೆ. ಮೌರ್ಯರ ಕಾಲದಿಂದೀಚೆಗೆ ಕಲಾಗಾರರು ಮತ್ತು ಶಿಲ್ಪಿಗಳು ತಮಗೆ ಮನಬಂದಲ್ಲಿ ಚಿತ್ರವನ್ನು ಬಿಡಿಸುತ್ತಿದ್ದರು. ಹೀಗಾಗಿ ಸ್ಫೂರ್ತಿದಾಯಕ ಚಿತ್ರಗಳು ದೇಶದ ಅನೇಕ ಅವಶಿಷ್ಟ ಭಾಗಗಳಲ್ಲಿ ಕಂಡು ಬರುತ್ತದೆ. ಗ್ವಾಲಿಯರ್‌ನಲ್ಲಿರುವ ಬಾಗ್, ಅಜಂತ, ಎಲ್ಲೋರ, ಸಿತ್ತನವಾಸಿಲ್ ಸಿಗಿರಿ—ಮೊದಲಾದ ಕಡೆಗಳಲ್ಲಿ ಜೀರೆಯುವ ಸಾಕ್ಷಿಗಳಿಂದ ಉದಾಹರಿಸಬಹುದು.

ಒಂಭತ್ತನೇ ಶತಮಾನದಿಂದೀಚೆಗೆ ಮುಸಲ್ಮಾನರ ಆಕ್ರಮಣ ಆಳ್ವಿಕೆಯಿಂದಾಗಿ ಇಡ್ಡಿಯ ಜನರು ಅವರ ಗಾಳಿಯನ್ನು ಸೇವಿಸಬೇಕಾಯ್ತು. ಮುಸಲ್ಮಾನ ವಿಲಾಸೀ ರಾಜರು ತಮ್ಮ ಭಾವ ಚಿತ್ರಗಳನ್ನೂ, ಮನಮೋಹಕ ದೃಶ್ಯಗಳನ್ನೂ, ಸುಂದರವಾದ ಸ್ತ್ರೀ—ಪ್ರಾಣಿಗಳ ಚಿತ್ರವನ್ನೂ ಸ್ತ್ರೀಯರ ಚಿತ್ರಗಳನ್ನೂ ಮುಸಲ್ಮಾನ ಕ್ರಮದಲ್ಲಿ ಬರೆಯಲು ವಿಶೇಷ ಪ್ರೋತ್ಸಾಹ ಕೊಟ್ಟರು. ಇವಕ್ಕೆ ಮೊಗಲ ಚಿತ್ರಗಳೆಂದು ಹೆಸರು.

ಇದೇ ಕಾಲಕ್ಕೆ ಹಿಂದೂ ಜನರು ಸುರಾಣ ಪ್ರಸಿದ್ಧ ವ್ಯಕ್ತಿಗಳ ಚಿತ್ರವನ್ನೂ; ಪುಣ್ಯಕತೆಗಳನ್ನೊಳಗೊಂಡ ಚಿತ್ರವನ್ನೂ, ತೀರ್ಥ ಯಾತ್ರಿಕರ ಅನುಭವಗಳ ಚಿತ್ರವನ್ನೂ ರಾಜಮಾತ್ರ ರೀತಿಯಲ್ಲಿ ಬರೆಸುತ್ತಿದ್ದರು. ಶಿಲ್ಪ ಚಿತ್ರಣಗಳಲ್ಲಿ ಹಿಂದೂಕ್ರಮವು ವಿಶೇಷವಾಗಿ ದಕ್ಷಿಣ ಹಿಂದೂಸ್ಥಾನದಲ್ಲಿ ಬೆಳೆಯಿತು. ಕರ್ನಾಟಕದ ರಾಜಧಾನಿಯಾದ ವಿಜಯ ನಗರವಲ್ಲೂ, ಇತರ ಸುತ್ತು—ಮುತ್ತಲಿನ ಕರ್ನಾಟಕ ಪ್ರದೇಶಗಳಲ್ಲೂ ಕರ್ನಾಟಕ ಪದ್ಧತಿ ಬೆಳೆಯಿತು. ಆ ಕಾಲದ ಸುಂದರ ಕೃತಿಗಳ ಭಗ್ನಾವಶೇಷಗಳು ಲೇ ಪಾಕ್ಷಿ, ಹಂಪಿ, ಬಾದಾಮಿ, ಬಿಜಾಪುರಗಳಲ್ಲಿ ವಿಶೇಷವಾಗಿ ಕಾಣಬಹುದು.

ಬೆಳೆದು ಬರುತ್ತಿರುವ ನಾಗರಿಕತೆ, ಆಸ್ಥೆರ ಉಪದ್ರವಗಳನ್ನು ಸಹಿಸಲಾರದೆ ಏಕಾಂತ ವಾಸಿಗಳಾದ ತಪಸ್ವಿಗಳೂ, ಋಷಿಗಳೂ, ಸಂನ್ಯಾಸಿಗಳೂ ಜನ ಸಂಚಾರವಿಲ್ಲದ ಪ್ರದೇಶಗಳಲ್ಲಿ ಗವಿಗಳನ್ನು ಕೊರೆದು ವಾಸಿಸುತ್ತಿದ್ದರು. ಮನಸ್ಸಿನ ಕೇಂದ್ರೀಕರಣಕ್ಕಾಗಿಯೂ, ಆತ್ಮ ಸಂಯಮಕ್ಕಾಗಿಯೂ ಗೋಡೆಗಳ ಮೇಲೆ ಚಿತ್ರವನ್ನೂ, ಕೆತ್ತನೆಯನ್ನೂ ಮಾಡಿದರು. ಇಂದು ಭಾರತದಾದ್ಯಂತಬಳಕೆಯಲ್ಲಿರುವ ಕಲೆಗಳಲ್ಲಿ ಕಜ್ಜಿಸನತ್ತ ಅಜಂತ, ಎಲ್ಲೋರ, ಎಲಿಫೆಂಟಾ-ಮೊದಲಾದಲ್ಲಿನ ಕ್ರಮಗಳನ್ನು ಅನುಸರಿಸಿಕೊಂಡಿದೆ.

ಗೋಡೆಗಳಲ್ಲಿ ಚಿತ್ರಿಸುವ ಬಣ್ಣದ ಚಿತ್ರಗಳಿಗಿಂತಲೂ ಶಿಲೆಯ ಕೃತಿಗಳು ಹೆಚ್ಚಿನ ಶಾಶ್ವತವಾಗಿವೆ. ಆದಕಾರಣ ಜನರು ಚಿತ್ರಕಲೆಗಿಂತ ಶಿಲ್ಪಕ್ಕೇನೇ ಮಹತ್ವ ಕೊಟ್ಟರು.

ಮುಂದೆ ಅದೇ ಕ್ರಮ ಬೆಳೆದುಬಂದಾಗ ಜಾತೀಯತೆಯ ಸೃಷ್ಟಿ ಉದ್ಭವವಾಗಿನ ಸಮುಯದಲ್ಲಿ ಆಯಾ ಜಾತಿಯ ಕ್ರಮದ ನೇರಿಗೆ ಶಿಲ್ಪ ಶಾಸ್ತ್ರ ಬೆಳೆದು ಬಂದಿತು. ಬೌದ್ಧರೀತಿ, ಗಾಂಧಾರೀತಿ, (ಶಿಲ್ಪ) ಔತ್ತರೇಯ ರೀತಿ, ದ್ರಾವಿಡ ರೀತಿ ಕರ್ನಾಟಕ ರೀತಿ ಮತ್ತು ಹಿಂದೂ—ಮುಸ್ಲಿಂ ರೀತಿ – ಇವು ಮುಖ್ಯ

ಈ ವಿವಿಧ ಪದ್ಧತಿಗಳನ್ನನುಸರಿಸಿ ಅನಾದಿ ಕಾಲದಿಂದಲೂ ಬೆಳೆದು ಬಂದಿರುವ ಶಿಲ್ಪ ಶಾಸ್ತ್ರದ ನಿದರ್ಶನ ನಮಗೆ ಇಲ್ಲಲ್ಲಿ ದೊರೆಯುತ್ತದೆ. ಅಂದು ಶಿಲ್ಪಿಯಿಂದ ಹುಟ್ಟಿ ಬಂದಿರುವ ಸುಂದರ ಕಟ್ಟಡಗಳು ಇಂದಿಗೂ ಹೆಚ್ಚಿನವು ಅದೇ ರೀತಿಯಲ್ಲಿದ್ದು ಭಾರತದ ಶ್ರೇಷ್ಠತೆಯನ್ನು ಸಾರುತ್ತಿವೆ. ಕಟ್ಟಡಗಳ ಅಲಂಕಾರಕ್ಕಾಗಿ ಗೋಡೆಗಳಲ್ಲೂ, ಕಂಬಗಳಲ್ಲೂ, ಛಾವಣಿಗಳಲ್ಲಾ ಸೂಕ್ಷ್ಮ ಕೆತ್ತನೆಗಳು ಕೆತ್ತಲ್ಪಟ್ಟವು. ಈ ರೀತಿ ಕೊನೆವ ಚಿತ್ರಣವನ್ನು ಇನ್ನೂ ಶೃಂಗಾರಿಸುವುದಕ್ಕೆ ದಂತ, ಶಿಲೆ, ಲೋಹ, ವರ್ಣಗಳನ್ನು ಉಪಯೋಗಿಸುತ್ತಿದ್ದರು.

ಆಹಳೆ ಕಾಲದಿಂದಲೂ ಇದ್ದ ಇಂತಹ ಸೌಂದರ್ಯ ಸಂಪತ್ತು ಕಾಲಾನುಕಾಲದಲ್ಲಿ ವಿವಿಧ ಪರಿವರ್ತನೆಗಳಿಗೊಳಗಾಗಿ ಬಹಳ ಮಟ್ಟಿಗೆ ನಷ್ಟವನ್ನನುಭವಿಸಿನುವು.

ಇಂದು ಭಾರತ ಸರಕಾರ ಇಂತಹವುಗಳಲ್ಲಿ ಉಳಿದುಳಿದವುಗಳ ರಕ್ಷಣೆಯನ್ನಾದರೂ ಶ್ರದ್ಧೆಯಿಂದ ಮಾಡುತ್ತಿರುವುದು ಸ್ತುತ್ಯ.

– ಶ್ರೀ ನಿ. ನಾರಾಯಣ ಬಲ್ಲಾಳ.



ಚುನಾವಣೆಯ ವಿಧಾನ

(ಒಂದೇ ಪುಟದಿಂದ)

ನಮ್ಮಲ್ಲಿ ನಂಬಿಕೆಯನ್ನಿಡುತ್ತಾರೆ. ಅವರನ್ನು ನಾವು ಮೆಚ್ಚಿದ್ದಾದರೆ ಅವರು ಸಹ ನಮ್ಮನ್ನು ಮೆಚ್ಚಿಕೊಳ್ಳುತ್ತಾರೆ. ಇದು ನಿಸರ್ಗ ನಿಯಮ ಎಂದು ನೆಹರು ವ್ಯಕ್ತ ಪಡಿಸಿದ್ದಾರೆ.

ಮತಯಾಚನೆಯ ಕಾಲದಲ್ಲಿ ಕೇವಲ ಸಾಧನೆಗಳನ್ನು ಮಾತ್ರ ವರ್ಣಿಸುತ್ತಾ ಹೋಗುವುದು ಬೇಡ. ಭಯವಿಲ್ಲದೆ ಜನರನ್ನು ಎದುರಿಸುವುದು ನಮ್ಮ ಕ್ರಮವಾಗಿರಲಿ; ಮತ್ತು ನಾವೆಲ್ಲಿ ತಪ್ಪಿಬಿದ್ದಿದ್ದೇವೆ, ಎಲ್ಲಿ ಹಿಂದುಳಿದಿದ್ದೇವೆ ಎಂಬುದನ್ನು ನಿಸ್ಸಂಕೋಚವಾಗಿ ಜನರೊಡನೆ ಚರ್ಚಿಸುವ ಬುದ್ಧಿ ನಮ್ಮದಾಗಲಿ. ಮತದಾರರನ್ನು ಸಮಾನತೆಯಿಂದ ಕಾಣುವುದೂ ಅವರ ಬುದ್ಧಿಮತ್ತೆಯನ್ನು ಮೆಚ್ಚಿಕೊಳ್ಳುವುದೂ ನಮ್ಮ ಗುಣವಾಗಲಿ—ಎಂಬುದೇ ನೆಹರುಗಳ ಉಪದೇಶದ ಸಾರ.

ಚುನಾವಣೆಯ ಪರಿಣಾಮಗಳು ಕಾಂಗ್ರೆಸಿನ ವಿರುದ್ಧವಾಗಿ ಒಂದು ಮೇಳೆ ನಿಂತವೆಂದು ಭಾವಿಸೋಣ. ಆಗೇನು? ಇದಕ್ಕಾಗಿ ಭಯಪಡುವುದುಬೇಡ. ಒಂದೆರಡು ಚುನಾವಣೆಗಳಲ್ಲಿ ಸೋತರೆ, ಅಥವಾ ಕೆಲವು ಸ್ಥಾನಗಳನ್ನು ಕಳೆದುಕೊಂಡರೆ, ಅಷ್ಟರಿಂದಲೇ ಕಾಂಗ್ರೆಸು ಭಾರತದಿಂದ ಮಾಯವಾಗಲಾರದು. ಯಾರು ಚುನಾವಣೆಯಲ್ಲಿ ಸೋತರೋ ಅವರ ಪಾಲಿಗೆ ಇದು ಒಳ್ಳೆಯ ಪಾಠವನ್ನು ಕಲಿಸುತ್ತದೆ. ತಮ್ಮ ತಪ್ಪಿನ ಮತ್ತು ಕ್ರಿಯಾ ಶೂನ್ಯತೆಯ ತಿಳಿವಳಿಕೆಯನ್ನು ಈ ಸೋಲು ಅವರಿಗೆ ಮಾಡಿಕೊಡುತ್ತದೆ. ತಮ್ಮನ್ನು ಸುಧಾರಿಸಿಕೊಳ್ಳುವಂತೆ ಈ ವಿಪರೀತ ಪರಿಣಾಮವು ಅವರನ್ನು ಒತ್ತಾಯಿಸುತ್ತದೆ. ಆದುದರಿಂದ ಇಂಥ ಪ್ರಮೇಯವನ್ನು ತಪ್ಪಿಸಲಿಕ್ಕಾಗಿ ದೈನ್ಯ ಭಾವವನ್ನಾಗಲೀ ಸಂಧಾನದ ಮಾರ್ಗವನ್ನಾಗಲೀ ಅನುಸರಿಸ ಬೇಕಾಗಿಲ್ಲ; ನಾವು ಸಂಪೂರ್ಣ ಸಿದ್ಧತೆಯಿಂದ ಚುನಾವಣೆಗಳ ಮೇಲೆ ಆಕ್ರಮಣ ಮಾಡುವುದೇ ಶ್ರೇಯಸ್ಕರ—ಎಂದು ನೆಹರು ಕೊನೆಯಲ್ಲಿ ತಿಳಿಸಿದ್ದಾರೆ. ಕಾಂಗ್ರೆಸು ಇದನ್ನು ಅನುಮೋದಿಸಿರುತ್ತದೆ.

ಆಕಾಶವಾಣಿ ಸಂಸ್ಥಾಪನ ನಿಮಿತ್ತ ಈ ನಾಲ್ಕು ಕನ್ನಡಿಗರು ಧಾರವಾಡ ಮತ್ತು ಬೆಂಗಳೂರು ಆಕಾಶವಾಣಿ ನಿಲಯಗಳಿಂದ ವಿಶೇಷ ಕಾರ್ಯಕ್ರಮಗಳನ್ನು ಈಗಾಗಲೇ ಕೇಳಿರಬಹುದು; ಅಥವಾ ಇದೇ ರವಿವಾರದ ವರೆಗೆ ಕೇಳುತ್ತಿರಲೂ ಬಹುದು.

ಪ್ರಜಾಸತ್ತಾತ್ಮಕ ಪ್ರಯೋಗವು ಭಾರತದಲ್ಲಿ ಯಶಸ್ವಿಯಾಗಬೇಕಾದರೆ ಸಂವಿಧಿ ಸಾಧನೆಗಳಾದ ವರ್ತಮಾನ ಪತ್ರಿಕೆಗಳು, ಚಲಚ್ಚಿತ್ರಗಳು ಮತ್ತು ರೇಡಿಯೋಗಳ ಅಭಿವೃದ್ಧಿಯು ಅತ್ಯವಶ್ಯವಾಗಿದೆ. ಶ್ರವಕರ ಅಜ್ಞಾನವನ್ನು ಹೋಗಲಾಡಿಸಲೂ ಅವರಲ್ಲಿ ಕಲೆಮತ್ತು ಸಂಗೀತಾದಿಗಳ ಮೇಲೆ ಪ್ರೀತಿಯನ್ನು ಹುಟ್ಟಿಸಲೂ ಆಕಾಶವಾಣಿಯು ತುಂಬ ಸಹಾಯಕವಾಗಿದೆ.

೧೯೨೭ರಲ್ಲಿ ಮೊದಲನೆಯದಾಗಿ ಆಕಾಶವಾಣಿಯನ್ನು ಭಾರತದಲ್ಲಿ ಪ್ರಾರಂಭಿಸಿದಂದಿನಿಂದ ಇದರ ಜನಪ್ರಿಯತೆ ಹೆಚ್ಚುತ್ತಾ ಹೋಗಿದೆ. ಮೊದಲನೇ ಯೋಜನೆಯ ಕಾರ್ಯಕ್ರಮದಂತೆ ದೇಶದೊಳಗೆ ಆಕಾಶವಾಣಿ ನಿಲಯಗಳನ್ನು ತುಂಬ ವಿಸ್ತರಿಸಲಾಗಿದೆ; ಇಷ್ಟರಲ್ಲೆ ವಿದೇಶಗಳಿಗೆ ಸೇವೆಸಲ್ಲಿಸುವ ವ್ಯವಸ್ಥೆಯೂ ಪೂರ್ತಿಯಾಗುವುದೆಂದು ಅಂದಾಜು.

ಕಾರ್ಯಕ್ರಮಗಳನ್ನು ಬಹಳ ಮುತುವರ್ಜಿಯಿಂದ ಸಿದ್ಧ ಪಡಿಸುತ್ತಿದ್ದು ಸಮಾಜದ ಬೇರೆ ಬೇರೆ ವರ್ಗಗಳ ಅವಶ್ಯಕತೆ ಮತ್ತು ಅಭಿರುಚಿಗಳ ಕಡೆಗೆ ಹೆಚ್ಚಿನ ಗಮನ ಕೊಡಲಾಗುತ್ತದೆ. ಚಿತ್ರದಲ್ಲಿ ನಾಟಕದ ಪಾತ್ರಾಭಿನಯ ನಡೆಯುತ್ತಿರುವುದನ್ನು ಕಾಣಬಹುದು.

ಜನಮತ

ನ್ಯಾಯವಾದ ಜನಾಭಿಪ್ರಾಯಕ್ಕೆ ಸೂಕ್ತ ಪ್ರಸಿದ್ಧಿಯನ್ನು ಕೊಡಲು ಈ ವಿಭಾಗವನ್ನು ಉಪಯೋಗಿಸಲಾಗುತ್ತದೆ. ಸಾರ್ವಜನಿಕರು ಪತ್ರಮುಖೇನ ನನ್ನೊಡನೆ ಸಹಕರಿಸಬೇಕಾಗಿ ಬಿನ್ನಹ.
ಸಂ. ನ.

ಅದೃಷ್ಟ ಬಲ ಒಳ್ಳೆಯದಿಲ್ಲ!!!

ಕಾಸರಗೋಡಿನಿಂದ ಮಂಗಳೂರಿಗೆ ಅಡಿಕೆ ಪರ್ಮಿಟು ಸಾಗಿಸಬೇಕಾಗಿದ್ದಲ್ಲಿ ಕೇರಳ ಸರಕಾರದ ಪರ್ಮಿಟು ಮಾಡಿಕೊಳ್ಳಬೇಕು—ಎಂದು ತನ್ನ ಪ್ರಾಂತ್ಯದಲ್ಲಿನ ಸಾರಿದೆ—ಕೇರಳ ಸರಕಾರ. ಕಾಸರಗೋಡಿನ ಸಮೃದ್ಧಿ ಸಂಪತ್ತು ಆಡಿಕೆ. ಕಾಸರಗೋಡಿನವರು ವ್ಯಾಪಾರವನ್ನು ಕಳಚಿಸುತ್ತಿದ್ದುದು ಮಂಗಳೂರಿಗೆ. ಈಗ ಪರ್ಮಿಟು ಮಾಡಿಸಿಕೊಳ್ಳಬೇಕು. ಪರ್ಮಿಟ್ಟಲ್ಲಿ ಪೆ ಕೊಂಡು ತೊಗ ಕೂಡದು. ಅಂದರೆ ಸರಕಾರಕ್ಕೆ ತಿಳಿದೆ ಸಾಗಬೇಕು ಎಂಬ ಯೋಚನೆಯಿಂದ ಈ ರೀತಿ ನಾಡಿರಬೇಕು—ಕೇರಳ!

ಪರ್ಮಿಟು ಮಾಡಿಸದಿದ್ದರೆ, ಮಂಗಳೂರಿಗೆ ಕಾಸರಗೋಡಿನ ಅಡಿಕೆ ಸಾಗಿಸಲು ಅಸಾಧ್ಯ. ಕೋರ್ಟಿಗೆ ಕಳುಹಿಸಬೇಕು. ಹೆಚ್ಚಿನವರು ಅಲ್ಲಿಗೆ ಈ ತನಕ ಹೋದವರಲ್ಲ—ಮುಳೆಯೊಳ ತಿದವರಲ್ಲ. ಎಂದ ಮೇಲೆ ಅವರೆಂತ ವ್ಯಾಪಾರ ನಡೆಸಬೇಕು? ಈಗ ಪರ್ಮಿಟೆಂದು ಪ್ರಾರಂಭಿಸಿ ಕಡೆಗೆ ತೆರಿಗೆ ವಸೂಲು ಮಾಡುವ ಯೋಜನೆಯೇ ಎಂದು ತೋರುತ್ತದೆ. ಪಾಗಾದಲ್ಲಿ ಕೃಷಿಕರಿಗೆ ತುಂಬಾ ನಷ್ಟ-ಕಷ್ಟಗಳಿವೆಯೆಂಬುದನ್ನು ವಿವರಿಸಬೇಕಾಗಿಲ್ಲ. ಅಂತೂ ಕಾಸರಗೋಡಿನ ಜನತೆಗೆ ಒಳ್ಳೆಯ ಅದೃಷ್ಟವಿಲ್ಲ ಎನ್ನಬೇಕಾಗಿದೆ—ಈ ಪ್ರಾಂತ್ಯ ವಿಭಜನೆಯ ದೆಸೆಯಿಂದಾಗಿ!

—ಶ್ರೀ. ಕೆ. ವ. ಕೇರವ, ಪೇಲಂಸಾಡಿ

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3½%
6	,,	3¼%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%
ಕರೆಂಟ್ ಎಕೌಂಟು ½%

THE MOOLKY BANK, LTD. MULKI

ನಿಮ್ಮಭಾಷೆಗೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ ಶ್ರೀ. ಕೊರಡ್ಡಲ್ಲಾಯ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭರಲ್ಲಿ ಇಂಗ್ಲಿಷ್

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಪ್ರತಿಗಳು ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No 466 N/50 date 12-12-1950 of the Director of public Instruction Madras.

Edited, Printed & Published by K. H. Shetty, at the Navayuga press, Udipi S. India





ಪ್ರಜಾರಾಜ್ಯ
ವಿಶೇಷಾಂಕ ೧೯೫೭

(ಬೆಲೆ ಮೂರಾಣೆ)

NAVAYUGA REPUBLIC DAY SPECIAL 1957

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟಿನ

ಪ್ರಜಾರಾಜ್ಯ ದಿನಾಚರಣೆಯ ಶುಭಾಶಯಗಳು

ಪ್ರಜಾರಾಜ್ಯದ ಸಾಫಲ್ಯವಾಗಬೇಕಾದರೆ—
ಅದು ಜನತೆಯ ರಾಜ್ಯ, ಜನತೆಗಾಗಿ, ಜನತೆಯಿಂದ—
ಎಂಬ ತತ್ವಕ್ಕೆ ಹೊಂದಿಕೊಂಡಿರಬೇಕು.

ಸಿಂಡಿಕೇಟು ಬೇಂಕು—ಜನತೆಯ ಸಂಸ್ಥೆ,
ಜನತೆಯ ಸೌಕರ್ಯಕ್ಕಾಗಿ, ಜನತೆಯ ಸಹಕಾರ
ದಿಂದಲೇ ಅಭಿವೃದ್ಧಿಯನ್ನು ಪಡೆದಿದೆ—

ರೂ. **10** ಕೋಟಿಗೂ ಮಿಕ್ಕಿದ ವ್ಯವಹಾರವಿದೆ

96 ಶಾಖೆಗಳು-- ಇದಕ್ಕೆ ನಿದರ್ಶನ.

ಟಿ. ಎ. ಪೈ, B.Com.(Bom.)A.I.I.B.,F.R.E.S.,
ಜನರಲ್ ಮೆನೇಜರ್.

ಡಾ। ಟಿ. ಮಾಧವ ಪೈ, M.B., B.S.,
ಮೆನೇಜಿಂಗ್ ಡೈರೆಕ್ಟರ್.

The Canara Industrial & Banking Syndicate Ltd.

H. O. **UDIPI**

ESTD: **1925**

ನವಭಾರತದ ನಿರ್ಮಾಣ ಕಾರ್ಯ.....

.... ರಾಷ್ಟ್ರದ ಪುನರುಜ್ಜೀವನದಲ್ಲಿ ಒಳನಾಡಿನ ವ್ಯಾಪಾರಕ್ಕೆ ಇರುವ ಮಹತ್ವ ಅತ್ಯಧಿಕ. ಒಳನಾಡಿನ ವ್ಯಾಪಾರವು ಮೋಟಾರು ಮತ್ತು ಲಾರಿಗಳು ಓಡಾಡಿದಷ್ಟೂ ಹೆಚ್ಚು ಪ್ರಮಾಣದಲ್ಲಿ ಅಭಿವೃದ್ಧಿಯನ್ನು ಹೊಂದುತ್ತದೆ.

ಮೋಟಾರು ಸಾರಿಗೆಯ ಜೀವನಾಡಿಯಂತಿರುವುದೇ ಸ್ಪ್ರಿಂಗ್ ಉದ್ಯಮ.

ಸ್ವಾವಲಂಬನೆಯ ದಿಸೆಯಲ್ಲಿ ಹೆಜ್ಜೆಯಿಟ್ಟು ನಾವು ನಡೆಸುತ್ತಿರುವ ದೇಶೀಯ ಸ್ಪ್ರಿಂಗ್ ಉದ್ಯಮಕ್ಕೆ ತಮ್ಮ ಪ್ರೋತ್ಸಾಹವಿರಲಿ!

ಕೆನರಾ ವರ್ಕ್‌ಶೋಪಿನ ಸ್ಪ್ರಿಂಗುಗಳು ಹಿಂದುಸ್ತಾನದಲ್ಲಿ ತಯಾರಾಗುವ ಇತರ ಎಲ್ಲಾ ಸ್ಪ್ರಿಂಗುಗಳಿಗಿಂತಲೂ ಉತ್ಕೃಷ್ಟವಾಗಿವೆ.

ಕೆನರಾ ವರ್ಕ್‌ಶೋಪ್ಸ್ ಲಿಮಿಟೆಡ್,

ಮಂಗಳೂರು—3.

ಭಾರತದಲ್ಲಿರುವ ಮೂರು ಕಾರ್ಖಾನೆಗಳಲ್ಲಿ ಇದೊಂದು.

THE CANARA WORKSHOPS LIMITED,

MANGALORE-3.

Hearty greetings for the annual celebration of the Republic Day.

SCHOOL BOOK Co.,

BOOK SELLERS—PUBLISHERS &
WHOLESALE PAPER DEALERS

DISTRIBUTORS:

MYSORE PAPER MILLS LTD.,
& "GANGES" PRINTING INKS.

Head Office: CAR STREET,

MANGALORE—1.

Branch. **VISHWA BHAVAN BUILDING, HAMPANKATTA.**

ಸ್ಕೂಲ್ ಬುಕ್ ಕಂಪೆನಿ,

ರಥಬೀದಿ, ಮಂಗಳೂರು—1.

Telegrams: "SCHOOLBOOK" Phone: 229

ಪ್ರಜಾರಾಜ್ಯ ದಿನಾಚರಣೆಯ ಶುಭಾಶಯಗಳು.

* * *

ಪ್ರತಿಯೊಬ್ಬ ವ್ಯಕ್ತಿಯೂ ರಾಷ್ಟ್ರದ ಅಭ್ಯುದಯಕ್ಕೆ ಸಾಧಕನಾಗುವಂತೆ ರಾಷ್ಟ್ರದ ಕಡೆಗಿರುವ ಹೊಣೆಗಾರಿಕೆಯನ್ನು ತಿಳಿದು ಶ್ರಮಿಸುವುದೇ ಪ್ರಜಾರಾಜ್ಯ ದಿನಾಚರಣೆ.

ನಮ್ಮ ದೇಶದ ಹವಾಮಾನ, ಜನರ ಆರ್ಥಿಕ ಮತ್ತು ದೈಹಿಕ ಪರಿಸ್ಥಿತಿಗಳಿಗೆ ಅನುಕೂಲವಾಗಿರುವ ಉತ್ತಮ ಆಯುರ್ವೇದ ರಾಸ್ತ್ರೀಯರೀತ್ಯಾ ವ ಅನುಭವಸಿದ್ಧ ಔಷಧಿಗಳನ್ನು ತಯಾರಿಸಿ ನಿಮ್ಮೆಲ್ಲರ ಪ್ರೀತಿ ವಿಶ್ವಾಸದಿಂದ ೩೪ ವರುಷಗಳ ಯೋಗ್ಯ ಸೇವೆಯನ್ನು ಪೂರ್ತಿಗೊಳಿಸಿ ರಜತೋತ್ಸವ ವರ್ಷದಲ್ಲಿ ಹೆಜ್ಜೆಯಿಟ್ಟಿದ್ದೇವೆ. ಇನ್ನೂ ಅಧಿಕ ವಿಶ್ವಾಸದಿಂದ ಹೆಚ್ಚಿನ ಸೇವೆಗಾಗಿ ಪರಿಶ್ರಮಿಸುವ ನಿರ್ಧಾರ ಮಾಡುವುದೇ ನಮ್ಮ ಪಾಲಿನ ಪ್ರಜಾರಾಜ್ಯ ದಿನಾಚರಣೆ.

ಭುವನೇಂದ್ರ ಪ್ರೊಡಕ್ಟ್ಸ್ ಪ್ರೈವೇಟ್ ಲಿಮಿಟೆಡ್,

ಕಟಪಾಡಿ, ದ. ಕ.

ಆಯುರ್ವೇದ ಶಾಸ್ತ್ರೀಯರೀತ್ಯಾ ವ ಅನುಭವಸಿದ್ಧ ಔಷಧಿ ತಯಾರಿಸುವ ಕಾರಖಾನೆ.

* * *

ಡಿಪೋ:—

(೧) ಉಡುಪಿ, ದ. ಕನ್ನಡ. (೨) ಮುರಾತಗಲ್ಲಿ, ಹುಬ್ಬಳ್ಳಿ

ಪ್ರಜಾಪ್ರಭುತ್ವದಲ್ಲಿ ಆಡಳಿತ ದಕ್ಷತೆ

ಪ್ರಜೆಗಳೇ ಆಳಿಸಿಕೊಳ್ಳುವವರೂ ಆಳುವವರೂ ಆಗಿರುವ ಈ ಕಾಲದಲ್ಲಿ ದಕ್ಷ ಆಡಳಿತವು ವ್ಯಕ್ತಿಯೊಬ್ಬನನ್ನು ಹೊಂದಿಕೊಂಡಿರದೆ ಪ್ರಜಾವರ್ಗದ ತರಬೇತಿಯನ್ನು ಅವಲಂಬಿಸಿದೆ.

ಬರೆದವರು: ಶ್ರೀ ಬಿ. ಎಚ್. ಶ್ರೀಧರ

"ಸಾರ್ವಜನಿಕ ಕಾರ್ಯಕರ್ತನು ತಾನು ತ್ರೈಮಾಡಿಕೊಳ್ಳದ ವಿಷಯದ ಬಗ್ಗೆ ಳಕ ಕೊಡಬಾರದೆಂಬುದನ್ನು ನಾನೇ ಅನುಭವದಿಂದ ಕಂಡುಕೊಂಡೆ" ಎಂ

ಗಾಂಧಿ ವಿಚಾರವನ್ನು ನಾವಿಂದು ಸ್ಮರಿಸಿತ್ತು. ಮನನಮಾಡಬೇಕಾಗಿದೆ. ಂದು ಅಲ್ಲಲ್ಲಿ ಹಿತ್ತಾಳಿ ಕಿವಿಯ ಗಣ್ಯರು ಚ್ಚಾಗಿ ಕಂಡುಬರುತ್ತಿರೆ. ಅಂಥವರಿಂ ಸರಕಾರದ ಹಾಗೂ ಇತರ ಆಡಳಿತ ತ್ರಗಳಲ್ಲಿ ಅನಿವಾರ್ಯವಾದ ಹಾನಿ ಒ ಗುವ ಸಂಭವವಿದೆ. ಇಂದಿನ ವಿಜ್ಞಾನ ುಗಕ್ಕೆ ಸುಸಂಸ್ಕೃತಿಯಿಲ್ಲದೆ ವರದಿಯ ರ ಮೇಲಿಂದ ಕಾರ್ಯಪ್ರವೃತ್ತರಾಗುವು ು ಅಂಧನಾಸ್ಪದ.

ಸೋವಿಯಟ್ ರಶಿಯದಲ್ಲಿಯ ಸ ರ್ವಾಚ್ಚ ನ್ಯಾಯವಿಧಾಯಕ ಸಭೆಯ ದಸ್ಯರು ಅನುಭವಿಸುತ್ತಿರುವ ನಿಯಮಗ ು ಎಲ್ಲ ಸಾರ್ವಜನಿಕ ಕಾರ್ಯಕರ್ತರಿಗೂ ೃಷ್ಟಿಯ ಆದರ್ಶ ಆಗಿವೆ. ಅವೆಂದರೆ ತಾ ೀ ಸ್ವತಃ ಕೆಲಸವನ್ನು ಮಾಡುವುದು, ಮ್ಮ ಕಾಯದೆಗಳನ್ನು ತಾವೇ ಮೊದ ು ಆಚರಿಸಿ ತೋರಿಸುವುದು, ಕಾವೇ ೃತಃ ವ್ಯಾಯೋಗಿಕ ಪರಿಣಾಮಗಳನ್ನು ಯಂತ್ರಿಸುವುದು, ತಮ್ಮನ್ನು ಚಿ.ನಾಯಿ ಡವರಿಗೆ ತಾವು ಸ್ವತಃ ಹೊಣೆಯಾಗಿರು ೃದು ನ್ಯತ್ತು ತಮ್ಮ ಸಾರ್ವಜನಿಕ ಕಾ ೃತ್ಪೇತ್ರದ ಹೊರಗೇ ಜೀವನೋಪಾಯ ವೃತ್ತಿ ಅಥವಾ ಉದ್ಯೋಗವನ್ನು ಹಿಡಿ ರುವುದು. ಮೇಲಿನ ನಿಯಮಗಳಲ್ಲಿ ಸ್ವತಃ' ಎಷ್ಟು ಸಲ ಬಂದಿವೆ ಎಂಬುದ ನ್ನು ಗಮನಿಸಿದರೆ ಹಿಂದೆ ಹೇಳಿದ ಹಿತ್ತಾ ಳಿ ಕಿವಿತನದ ಆನಾಹುತ ಎಷ್ಟೆಂಬುದು ಕಲ್ಪನೀಯವಾಗುತ್ತದೆ. ಎರಡನೆಯದಕ್ಕೆ ಉಕ್ತ ಸಭೆಯ ಚರ್ಚಾ ಪದ್ಧತಿಯನ್ನೂ ಎಲ್ಲರೂ ಸ್ವೀಕರಿಸಬಹುದಾಗಿದೆ. ಸಹಕಾರಿಗಳಿಗೆ ಸಮಾನ ಸ್ಥಾನ ಕೊಟ್ಟು ಚರ್ಚಿಸುವ ಅಭ್ಯಾಸ ಭಾರತದಲ್ಲಿ ಅಪರೂಪ. ಹಾಗೆ ಕೊಟ್ಟುಬಿಟ್ಟರೆ ಅವರಿಗೆ ಪ್ರಾಮುಖ್ಯ ಬಂದು ಅವರು ಹೆಚ್ಚಿಕೊಂಡುಬಿಟ್ಟರೆ ಹೇಗೆಂಬ ಶಂಕೆಯಿಂದ ಚರ್ಚಿಸಲೊರಡುವ ಅಥವಾ ಹೊರಡದ ನೇತೃವು ಆಡಳಿತಕ್ಕಾಗಿದ ದುರ್ಬಲಾತ್ಮ. ಇದೆ ನ್ನರಿತೇ ಗಾಂಧಿಯವರು ನೌಖಾಲಿಯಲ್ಲಿ ಸಂಚರಿಸುತ್ತಿದ್ದಾಗ ಕೂಡ ನಮ್ಮಲ್ಲಿ ದೇ ಶಭಕ್ತರಿದ್ದರೂ ದಕ್ಷ ಆಡಳಿತಗಾರರಿದ್ದಂ ತಿಲ್ಲ ಎಂಬ ಚಿಂತೆಗೊಳಗಾಗಿದ್ದರು ಅವ ರಿಗೆ ಇಂಥ ದುರ್ಬಲಾತ್ಮರ ಸಂಖ್ಯೆ ದೇಶ ದಲ್ಲಿ ಬಹಳವಾಗಿ ಕಂಡಿರಬೇಕು.

ಬ್ರಿಟಿಶ್ ಸರಕಾರ ಬಿಟ್ಟುಹೋದ ಅ ಧಿಕಾರಿ ವರ್ಗವನ್ನು ಬದಲಾಯಿಸದೆ ಇಟ್ಟುಕೊಂಡದ್ದು ಸ್ವತಂತ್ರ ಭಾರತದಲ್ಲಿ ಆಡಳಿತದಕ್ಷತೆ ಹೆಚ್ಚಿದೆ ಇರಲು ಪಾಕ್ಷಿಕ ಕಾರಣವಾಗಬಹುದು. ಆದರೆ ಅದಕ್ಕಿಂತ ಹೆಚ್ಚಾಗಿ ಬ್ರಿಟಿಶರು ಹಾಕಿಕೊಟ್ಟು ಹೋ ದ ಆಡಳಿತ ಪದ್ಧತಿಯಲ್ಲಿ ಮಾಡದೆ ಉಳಿ ದ ಹಾಗೂ ಮಾಡಿದ ಬದಲಾವಣೆಗಳಿಂ ದ ಉಂಟಾದ ಅಂದಿಗಿಂತ ಹೆಚ್ಚಿನ ಆಡ ಳಿತ ಶಿಥಿಲತೆ ನಮಗಿಂದು ನಸ್ಯ ಕೊಡು ತ್ತಿದೆ. ಅಂದರೆ ನಮ್ಮ ದೇಶದ ನಿದ್ದ್ಯಮಾ ನ ವ್ಯಾವಹಾರಿಕತೆಯನ್ನು ಚೆನ್ನಾಗಿ ಅ ಭ್ಯಸಿಸುವ ಗೋಜಿಗೆ ಯಾರೂ ಹೋದಂ ತಿಲ್ಲ. ಆಲಸ್ಯ, ಅಜ್ಞಾನ, ಅಂಧ ಶ್ರದ್ಧೆಗ ಳಿಂದ ಇದ್ದ ಬಿದ್ದ ರೀತಿ ನೀತಿಗಳನ್ನೇ ಅನುಸರಿಸುತ್ತ, ಅಲ್ಲಿ ಇಲ್ಲಿ ಅನುಕೂಲಿಕವಾ ದ ಚಿಲ್ಲರೆ ಬದಲಾವಣೆಗಳನ್ನು ಮಾಡಿ ಅಷ್ಟರಿಂದ ತೃಪ್ತರಾಗುತ್ತ ದಿನದಬ್ಬುವ ಪ್ರವೃತ್ತಿ ಶಿಖರಸ್ಥ ನಾಯಕ—ಅಧಿಕಾರಿ ಗಳಲ್ಲಿ ನೆಲೆನಿಂತಿರುವುದೇ ಹೀಗೆ ಕುತೂ ಹಲ ವಿಮುಖತೆ ತಲೆದೋರಲು ಕಾರಣ. ನಮ್ಮ ಸುತ್ತುಮುತ್ತಲಿನ ಜನಜೀವನದ ಕೂಲಂಕಷ ಜ್ಞಾನವನ್ನು ಮಾಡಿಕೊಳ್ಳ ಲು ಸಕಾರಿಯಾಗದ ಶಿಕ್ಷಣ ಪದ್ಧತಿ ಯೂ ಮೇಲೆ ಳಿದಂಥ ನೇತೃಗಳನ್ನು ನಾವು ಕಾಣುವಂತಾಗಲು ಕಾರಣವಾಗಿದೆ.

ರಾಜನೀತಿ ಶಾಸ್ತ್ರದಪ್ಪೇ ಆಡಳಿತ ಶಾ ಸ್ತ್ರವೂ ಮುಖ್ಯ ಎಂಬುದನ್ನು ನಾವಿಂ ದು ಮನಗಂಡಿಲ್ಲ. ಮನೆಯಿಂದ ಹಿಡಿದು ರಾಜ್ಯಭಾರದವರೆಗೆ ಆಡಳಿತಜ್ಞಾನದ ಅ ವಶ್ಯಕತೆ ಮನುಷ್ಯನಿಗಿದೆ. ನಮ್ಮ ಶಿಕ್ಷಣ ಪ್ರಾಥಮಿಕದಿಂದ ವಿಶ್ವವಿದ್ಯಾಲಯದವರೆಗೂ ಈ ಗುರಿಯ ಸಾಧನೆಗೆ ಮಿಸಲಾಗ ಬೇಕು. ಮನೋ ರಾಜ್ಯದಲ್ಲಿ ಆಡಳಿತದ ಸುವ್ಯವಸ್ಥೆಯುಂಟಾಗದೆ ವಾರ್ತಾಕೋಶ ವಾಗಿರುವ ವಿದ್ಯಾಲಯನ ಮಿದುಳು ಕಾರ್ಯ ರಾಜ್ಯದಲ್ಲಿ ವ್ಯವಸ್ಥಿತವಾಗಿ ನಾಗಲು ಹೇಗೆ ಶಕ್ತ?

ಆಡಳಿತದಲ್ಲಿ ಗಣ್ಯವಾಗಿರುವುದು ಸ ಮನ್ವಯ ತಂತ್ರ. ವ್ಯಕ್ತಿ, ವರ್ತನೆ, ಕಲ್ಪ ನೆ, ನಿಯಮ, ಆವಶ್ಯಕತೆ, ಸತ್ಯ, ಗಾಂಭೀ ರ್ಯ, ನ್ಯಾಯ, ಸಾರ್ವಹಿತ, ಸ್ವಹಿತಗಳಲ್ಲಿ ಹೊಂದಿಕೆಯನ್ನು ಒಡರಿಸಲು ಅನೇಕ ಮಿದುಳುಗಳಿಂದು ಅಸಮರ್ಥವಾಗಿರುವು ದೇ ಆಡಳಿತ ಕಲೆಗೆ ಬೆಲೆಯಿಲ್ಲದಂತಾದು ದರ ದೊಡ್ಡ ಗುರುತು: ಆಡಳಿತಕ್ಕಿಂದು Qualification ಅರ್ಹತೆ ಏನೆಂಬುದೇ ಸ್ಪಷ್ಟವಾಗದಿರುವುದರ ಮೂಲ; ತರ್ಕ ಸಮರ್ಥನೆಗಿಂತ ಅಧಿಕಾರನಿಷ್ಠ ಅತ್ಮ ಸಮರ್ಥನೆ ಎದ್ದು ನಿಲ್ಲಲು ಕಾರಣ.

Qualities of Leadership - ನೇತೃತ್ವದ ಗುಣಗಳನ್ನು ತರಬೇರಲ್ಲಿ ವಿಶ್ವವಿದ್ಯಾನಿಲಯದ ಶಿಕ್ಷಣ ಬೆಳೆಯಿಸು ತ್ತದೆ ಎಂಬುದು ರೂಢಿ. ಆದರಿದು ನಮ್ಮ ಲ್ಲಿಂದೆ. ಕೇವಲ ಬಣ್ಣದ ಮಾತಪ್ಪೇ- ನಮ್ಮ ದೇಶದಲ್ಲಿ ಮೊಗಲರ ಕಾಲದಲ್ಲಿ ರಾಜನಿರ್ವಾಹಕರಿದ್ದರು, ಮದ್ರಾಸಿನಲ್ಲಿ ಮಂತ್ರಿ ನಿರ್ವಾಹಕರಾಗಿ ಹೋದರು— ಆದರೆ ಇಂದು, ಆಡಳಿತದಕ್ಷರ ನಿರ್ವಾಹ ನೆಗೆ ಯಾವ ನೀತಿ, ವ್ಯಕ್ತಿ ಅಥವಾ ಸಂ ಸ್ಥೆಯೂ ಹೆಸರಾಗಿಲ್ಲ. ಅಂಧಾಚಾರ ಇಲ್ಲ ವೆ ಸ್ವಚ್ಛಂದ ಕಾರಭಾರ ಬಿಟ್ಟರೆ ಅನೇಕ ಕಡೆ ವ್ಯತ್ತೇನೂ ಕಾಣದಂತಾಗಿದೆ.

ಜೀವನವೇ ಸಮರಸ ತತ್ವಕ್ಕೆ ಉದಾ ಹರಣೆಯಾಗಿರುವಾಗ ಅದರ ಆರ್ಥವನ್ನು ಜೀರ್ಣಿಸಿಕೊಂಬ ತರಬೇತು ಶಿಕ್ಷಣದಿಂದ ದೊರಕಬೇಕಲ್ಲವೆ? ಹಾಗೆ ದೊರಕುತ್ತಿಲ್ಲ ವೆಂಬುದಕ್ಕೆ ಶಿಕ್ಷಕರ ಕಾರ್ಯದಕ್ಷತೆಯ ಅನೇಕ್ಷಣೀಯ ಅಂಶಗಳೇ ಸಾಕ್ಷಿ. ಹೀ ಗಿದ್ದರೂ ಯಾರೂ ಇಂದು ಶಿಕ್ಷಣ ವಿಶಾ ಸದತ್ತ ಗಮನ ಹಾಕುವುದು ಕಾರ್ಯತಃ ಕಂಡು ಬರುತ್ತಿಲ್ಲ. ಇನ್ನು School of Administration ಆಡಳಿತ ಶಾಲೆ ಯೊಂದು ಸ್ಥಾಪನೆಯಾಗಿದೆಯೋ ಆಗಲಿ ದೆಯೋ ಎಂದು ಒಮ್ಮೆ ಒಂದು ಸುದ್ದಿ ಬಂದಿತ್ತು. ಆನಂತರ ಅದರ ಸುದ್ದಿ ಇಲ್ಲ ವೇ ಇಲ್ಲ. ಅಲ್ಲದೆ ಈ I. C. S.ನ ಸ್ವ ತಂತ್ರ ಭಾರತೀಯ ರೂಪಾಂತರವೂ ಕ ನಿಷ್ಠವೇ! ಜೊತೆಗೆ ಅಂಥ ತರಬೇತಾದ ರೂ ನೂರಕ್ಕೆ ಎಷ್ಟು ಜನಕ್ಕೆ ದೊರಕು ತ್ತದೆ? ಇಂಥ ತರಬೇತ್ಕಿದೆ ಸಾರ್ವಜನಿ ಕ (ಸರಕಾರಿ) ಕಾರ್ಯವಾಲಕತ್ವ ಎಷ್ಟು ದಿನ ಹೀಗೇ ಸಾಗುತ್ತಿರಬೇಕು?

'Harmony is the richer music generated by opposition of sounds in one and the same moment — ಏಕ ಕಾಲ ದಲ್ಲಿ ವಿರುದ್ಧ ಧ್ವನಿ ಳು ಹೊರಡಿಸುವ ಸಮೃದ್ಧತರ ಸಂಗೀತವೇ ಸಾಮರಸ್ಯ' ಎಂಬ ಮಾತಿನಂತೆ ಸಂಯುಕ್ತ ಕಾರ್ಯ ನಿರ್ವಾಹಕತ್ವವನ್ನು ಕಟ್ಟಿಸಿವ ರೀತಿಯ ವ್ಯಕ್ತಿ, ಕಂದರ್ಭ, ಕಾರ್ಯನೀತಿ ಧ್ಯೇಯ ಗಳನ್ನು ಹೊಂದಿಸಬಲ್ಲ ಜಾಣ್ಮೆಯೇ ಆಡ ಳಿತ ಕಲೆ. "ಅತ್ಯುತ್ತಮ ಗುರಿಗಳನ್ನು ಆರಿಸಿಕೊಂಡು ಅವುಗಳ ಸಾಧನೆಗೆ ಅತ್ಯು ತ್ತಮ ಸಾಧನಗಳನ್ನು ಬಳಸಿಕೊಂಬುದೇ ವಿವೇಕ" ಎಂಬ ಅಂಶವು ಆಡಳಿತ ಕಲೆಗೆ ಮತ್ತಷ್ಟು ಆನ್ವಯಿಸುತ್ತದೆ. 'ಪರೀಂಗಿತ ಜ್ಞಾನವಿದ್ದವರೆ ನಾಸ್ತ್ರ ಬುದ್ಧಿಯಿದ್ದವರ್ಕೈ ನಾರ್ಥಕ' ಎಂಬ ತತ್ವವಾದರೂ ಆಡಳಿತ ಗಾರನಿಗೇ ಹೆಚ್ಚು ಅನ್ವಯಿಸುತ್ತದೆ. ಯ ಜಮಾನಿಕೆ ಎಂಬ ಮಾತಾದರೂ ಆಡಳಿತ ಗಾರಿಕೆ, ಹೊಂಚಗಾರಿಕೆ, ಎಂಬುವುಗಳಿಗೆ ಸವಿೂಪವಾಘ ಕ. ಯಜಮಾನರಿಲ್ಲದಾಗ ಆಗುವ ಅನಾಯಕತ್ವ —ಅರಾಜಕತೆ — ಅಸ್ತವ್ಯಸ್ತತೆಗಳಿಗಂತೂ ಅನರ್ಹ ಯಜಮಾ ನರಿದ್ದಾಗ ಫಲಿಸುವ ಅಂಥ ಸಿದ್ಧಿಗಳಿಗೂ ಬಹಳ ವ್ಯತಾಸವಿಲ್ಲ. ಯಜಮಾನ ಪದ ದಲ್ಲಿಯ ಅರ್ಥದಂತೆ ಆಡಳಿತಗಾರನಿಗೆ ತ್ಯಾಗ ಶೀಲತೆ ಪರಮಾಧಿಸ್ಥಾನ. ಅದೇ ಲೋಪವಾದಲ್ಲಿ ಯಜಮಾನಿಕೆಗೂ ದಬ್ಬಾಳಿಕೆಗೂ ಯಾವ ವ್ಯತ್ಯಾಸವೂ ಕಂಡುಬಂಬಲಾರದು. ಆದುದರಿಂದ ದಬ್ಬಾ ಳಿಕೆಯಲ್ಲ ಪ್ರಜಾಸತ್ತೆ ಬದಲಾವುದು ಅ ಸಾಧ್ಯ; ನಮ್ಮ ಸ್ವರಾಜನ ನಿಜವಾದ ದಕ್ಷ ಸ್ಥಿತಿಯ ಪ್ರಜಾತ್ರೆಯಾಗಿಲ್ಲವಷ್ಟೇ ಅಲ್ಲ ಆಗಲು ನಾವು ನ್ಯಾಯುನಾದ ಪ್ರಯತ್ನ ವನ್ನೂ ಮಾಡುತ್ತಿಲ್ಲ ಎಂಬ ಅಂಶದ ಬಗ್ಗೆ ನಾವಿಂದು ಕಣ್ಣಿರಿಸು ಬೇಕಾಗಿದೆ. ನಾ ಟಕದ ನಾಯಕನ ಲಕ್ಷಣಗಳಲ್ಲಿ ಕೂಡ 'ತ್ಯಾಗೀಕೃತೇ ಕುಲೀನಃ" ಎಂದು, ಮುಂಚಾಗಿ ತ್ಯಾಗ ಶೀಲತೆಗೇ ಪ್ರಥಮ ಸ್ಥಾನವನ್ನು ಕೊಡಲಾಗಿದೆ. ಸಾಮರಸ್ಯ ವು ಸೌಂದರ್ಯದ ಹೃದಯವಾದರೆ, ತ್ಯಾಗ ವು ಸಾಮರಸ್ಯದ ಹೃದಯ. ತ್ಯಾಗವೆಂದರೆ ಸಾರ್ವಜನಿಕತೆ, ಸಮಷ್ಟಿ ಹಿತಕಾರಿತ್ವ.

ಮೇಲೆ ಹೇಳಿದ ದೃಷ್ಟಿಯಿಂದ ನಾವಿಂ ದು ತೂಗಿನೋಡಿ ಮುನ್ಸಿಪ್ದಿಗಳನ್ನು, ಮುಖಂಡರನ್ನು, ಅಧ್ಯಕ್ಷರನ್ನು, ಗುರುಗ ಳನ್ನು, ಕಾರ್ಯ ನಿರ್ವಾಹಕರನ್ನು ಮೆಜ ಮಾನರನ್ನು ಆಯ್ದು ಸಾಮೂಹಿಕ ಕಾ ರ್ಯಗಳ ಆಡಳಿತವನ್ನು ಅವರ ಕೈಗೆ ಒಪ್ಪಿ

(೨೬ನೇ ಪುಟ ನೋಡಿರಿ)

ಮನುಕಾಲೀನ ರಾಜ್ಯಪದ್ಧತಿ

ರಾಜನಿಲ್ಲದಿದ್ದರೂ ರಾಜ್ಯವೆ ಇಂದೂ ಎಂದೂ ಊರ್ಜಿತದಲ್ಲಿರುವುದು ಆದುದರಿಂದ ಪ್ರಾಚೀನ ರಾಜ್ಯಪದ್ಧತಿಯನ್ನು ತಿಳಿದುಕೊಳ್ಳುವುದ ರಿಂದ ಪ್ರಯೋಜನವಿದೆ.

ಬರೆದವರು: ಶ್ರೀ ಯ. ನಾ. ಉಡುಪ.

ಧೈರ್ಯಯುಗಕ್ಕೆ ಮನುಸ್ಮೃತಿಯಂತೆ! ಹಾಗೆಂದ ಮೇಲೆ ಕಲಿಯುಗದಲ್ಲೂ ಕೃತಯುಗವನ್ನು ನೆಲೆನಿಲ್ಲಿಸುವುದು ಮನುಸ್ಮೃತಿಯಲ್ಲವೆ? ಗೀತೆಗಳಲ್ಲಿ ಭಗವದ್ಗೀತೆ; ಸ್ಮೃತಿಗಳಲ್ಲಿ ಮನುಸ್ಮೃತಿ ಅಥವಾ ಭೃಗು ಸಂಹಿತೆ. ಇದನ್ನು ಸ್ವಾಯಂಭುವ ಮನುವಿನ ಅಪ್ಪಣೆಯಂತೆ ಆತನ ಶಿಷ್ಯ ಭೃಗು ಮಹರ್ಷಿಯು ನುನಿಗಳಿಗೆ ಉಪದೇಶಿಸಿದನು. ಈ ಉಪದೇಶವು ಜೀವನದ ತಿರುಳನ್ನು ಸಂಪೂರ್ಣ ಶಕ್ತಿಯುತವಾಗಿ ಮಾಡಲು ಪ್ರಯತ್ನಪಡುತ್ತಿರುವುದು ಮಾತ್ರವಲ್ಲ; ಓಜಸ್ವಿ ಮತ್ತು ತೇಜಸ್ವಿಯಾಗಿ ಬಾಳನ್ನು ಹೊನೆಯುವ ಅಧಿಕಾರವನ್ನೂ ಪಹಿಸಿದೆ. ಇದು ರಾಮರಾಜ್ಯಗಳ ಮುಖ್ಯ ಸೂತ್ರಗಳ ಕೈಪಿಡಿ. ಇದರ ಕೆಲವು ಭಾಗಗಳನ್ನು ಇಂದಿನವರೆಗೆ ಆಚರಣೆಗೆ ತರಲು ಅಸಾಧ್ಯವಾಗಿ ಕಂಡರೂ, ಅದು ಬಯಸಿದಕ್ಕೆ ಉಚ್ಚ ಧ್ಯೇಯವೆಂಬುದರಲ್ಲಿ ಎರಡಿಲ್ಲ.

ರಾಜನ ಕುರಿತಾಗಿ ಮನು (ವೇದಾರ್ಥವನ್ನು ಮನಸ್ಸಿನಲ್ಲಿ ಮನನ ಮಾಡುವವನು) ವಿಗೆ ಒಂದು ಪವಿತ್ರವಾದ ಭಾವನೆ ಮತ್ತು ಅನುಪಮ ಗೌರವವಿತ್ತು. ಅವನು ಸೂಚಿಸತಕ್ಕ ಯೋಗ್ಯತೆಯುಳ್ಳ ರಾಜನು ಯಾವ ಕಾಲಕ್ಕೂ ಅವಾಯ ಕಾರಿಯಲ್ಲ. ಅವನು ಮಾನವರ ಉತ್ಸವ ಮೂರ್ತಿ; ಅದರ್ಶ ಶಕ್ತಿ. ದುಷ್ಟ ಶಿಕ್ಷಣ ಶಿಷ್ಟರಕ್ಷಣಾರ್ಥ ಆತನ ಧರ್ಮ. 'ಕಾರ್ಯವಶದಿಂದ ತೀಕ್ಷ್ಣನೂ ಮೃದುವೂ ಆಗಬಲ್ಲ ರಾಜನು ಸರ್ವಸಮ್ಮತನಾಗುತ್ತಾನೆ' (೭-೧೪೧) 'ಜಗತ್ಕರ್ತನು ಅರಸನನ್ನು ನಿರ್ಮಿಸಿದನು' (೭-೩) 'ಧರ್ಮಿಷ್ಠನಾದ ರಾಜನು ದೇವಾಂಶ ಸಂಭೂತನು' (೭-೫) ಧರ್ಮರಕ್ಷಣೆಗಾಗಿ ಅತನು ವಿಶ್ವರೂಪಧಾರಣೆ ಮಾಡುವುದರಿಂದ, ಅವನು ವಿಶ್ವರೂಪಿ ಪರಮಾತ್ಮನ ಅಂಶ ಸಂಭೂತನೆಂದು ಸೂಚಿತನಾಗುವುದು. 'ನಾವಿಷ್ಣುಃ ಪೃಥಿವೀ ಪತಿಃ' ಈ ವಾಕ್ಯವು ಮನುವಿಗೆ ಸಮ್ಮತವಾದುದು. 'ನೀತಿಶಾಸ್ತ್ರದಂತೆ ನಡೆಯುವ ರಾಜನು ಶಿಲೋಂಛವೃತ್ತಿಯಿಂದ (ಶಿಲ=ಗದ್ದೆಯಲ್ಲಿ ಪೈರನ್ನು ಕೊಯಿದ ಮೇಲೆ ಅಲ್ಲಲ್ಲಿ ಬಿದ್ದಿದ್ದ ಧಾನ್ಯದ ಕೆನೆಗಳನ್ನು ಸಂಗ್ರಹಿಸುವುದು. ಉಂಛ=ಬಿದ್ದ ಧಾನ್ಯ ಅಥವಾ ಬೀಸಿದ ಮೇಲೆ ಬಿಟ್ಟ ಹಿಟ್ಟನ್ನು ಆರಿಸಿ ಸಂಗ್ರಹಿಸುವುದು) ಜೀವಿಸುತ್ತಿದ್ದರೂ ಅವನ ಕೀರ್ತಿಯು ಜಗತ್ತಿನಲ್ಲಿ ನೀರಿನಲ್ಲಿ ಬಿದ್ದ ತೈಲಕಣದಂತೆ ವಿಸ್ತರಿಸುವುದು, (೭-೩೨,೩೩) 'ಇಂದ್ರಿಯವಶನಾದ ರಾಜನ ಕೀರ್ತಿಯು ನೀರಿನಲ್ಲಿ ಹಾಕಿದ ತುಪ್ಪದ ಬಿಂದುವಿನಂತೆ ಸಂಕೋಚವಾಗುತ್ತದೆ' (೭-೩೪) 'ವಿನಯ ಬುದ್ಧಿಯುಳ್ಳ ರಾಜನು ಎಂದಿಗೂ ನಾಶಹೊಂದುವುದಿಲ್ಲ' (೭-೩೭) 'ರಾಜನು ಬ್ರಹ್ಮಚರ್ಯೆಯಿಂದ ಅರ್ಥಸಹಿತ ಮೂರು ವೇದಗಳನ್ನೂ, ಅರ್ಥಶಾಸ್ತ್ರವನ್ನೂ, ತರ್ಕಶಾಸ್ತ್ರವನ್ನೂ, ಅಧ್ಯಾತ್ಮಿಕ ವಿದ್ಯೆಯನ್ನೂ, ಲೋಕ ವ್ಯವಹಾರವನ್ನೂ ಅಭ್ಯಾಸ ಮಾಡಬೇಕು' (೭-೪೩). 'ಜಿತೇಂದ್ರಿಯನಾದ ರಾಜನೇ ಯಾವಾಗಲೂ ಪ್ರಜೆಗಳನ್ನು ವಶದಲ್ಲಿಟ್ಟುಕೊಳ್ಳಲು ಸಮರ್ಥನಾಗುತ್ತಾನೆ' (೭-೪೪). ಈ ಮೇಲಿನ ವಾಕ್ಯಗಳು ಮನುವಿನಿಂದ ಚಿತ್ರಿಸಲ್ಪಟ್ಟ ರಾಜನ ನಕ್ಷೆಯಾಗಿದೆ. ಇಂತಹ ರಾಜನ ಅಡಳಿತೆಯಲ್ಲೇ ಮರ್ತ್ಯ ಪ್ರಪಂಚವು ಸ್ವರ್ಗಭೂಮಿಯಾಗುವುದರಲ್ಲಿ ಆಶ್ಚರ್ಯವೇನೆ?

ಇಂದಿನ ಪ್ರಜಾಪ್ರಭುತ್ವದ ದಿನಗಳಲ್ಲಿ ರಾಜನಿಗೆ ಸ್ಥಾನವಿರದಿದ್ದರೂ, ರಾಜತ್ವ ಕ್ಕೆ ಸ್ಥಾನವಿದೆ; ಮನ್ನಣೆ ಇದೆ. ಈ ರಾಜತ್ವವು ಗವರ್ನರರು ಮತ್ತು ಮಂತ್ರಿಗಳಿಂದಾರಂಭಿಸಿ ಉಗ್ರಾಣಿಯವರೆಗಿನ ಅಧಿಕಾರಿಗಳಲ್ಲಿ ಅಯಾ ಉದ್ಯೋಗಕ್ಕೆ ತಕ್ಕಷ್ಟು ಇದ್ದೇ ಇದೆ. ಈ ಕಾಲದಲ್ಲಿ ರಾಜನೆಂಬ ವ್ಯಕ್ತಿಯನು, ಜನತೆಯೆಂಬ ಶಿವನ, ಕಾರ್ಯಭಾರವೆಂಬ ನೇತ್ರವನ್ನು ಯಿಂದ ಸುಟ್ಟು ಬೂದಿಯಾಗಿದ್ದರೂ, ಆತನ ಅಟ್ಟಗಳ ಹಿಂದಿಗಿಂತ ಇಂದು ವಿಶ್ವವ್ಯಾಪಿಯಾಗಿದೆ. ಹಾಗೆಯೇ ಪ್ರಜಾಪ್ರಭುತ್ವದಲ್ಲಿ ದೃಶ್ಯ ರಾಜನಿಲ್ಲದಿದ್ದರೂ ಆತನ ಅದೃಶ್ಯ ಶಕ್ತಿಯು ಪ್ರಜೆಗಳ ಹೃದಯವನ್ನ ಸೆಳೆಯುತ್ತಲೋ ತುಳಿಯುತ್ತಲೋ ಇದ್ದೇ ಇದೆ. ಈ ಅದೃಶ್ಯ ರಾಜತ್ವವು ಪ್ರಜೆಗಳ ಹೃದಯವನ್ನು ರಂಜಿಸುವ ಬದಲಿಗೆ ಭುಂಜಿಸತೊಡಗಿದರೆ ದೇಶದಲ್ಲಿ ಚಳವಳಿಯೋ ಕ್ರಾಂತಿಯೋ ಏಳತ್ತದೆ.

ಮನುವಿನ ಕಾಲದಲ್ಲಿ ವಿದ್ಯಾಬುದ್ಧಿಗಳಲ್ಲಿ ಪರೀಕ್ಷಿಸಲ್ಪಟ್ಟ ಏಳು ಅಥವಾ ಎಂಟು ಮಂದಿ ಮಂತ್ರಿಗಳನ್ನು ನೇಮಿಸಿಕೊಳ್ಳುತ್ತಿದ್ದರು. ರಾಜನು ಮಂತ್ರಿಗಳೊಡನೆ ಸಂಧಿ (ಒಪ್ಪಂದ), ವಿಗ್ರಹ (ಯುದ್ಧ), ಸ್ಥಾನ (ದಂಡ, ಕೋಶ, ಪಟ್ಟಣ, ರಾಷ್ಟ್ರ), ಸಮುದಯ (ಧಾನ್ಯ ಚಿನ್ನ ಮೊದಲಾದವು ಹುಟ್ಟತಕ್ಕ ಸ್ಥಳ), ಗುಪ್ತಿ (ಆತ್ಮರಕ್ಷಣ), ಲಬ್ಧಪ್ರಶಮನ (ಸಂಪಾದಿಸಿದ ದ್ರವ್ಯವನ್ನು ಸತ್ಪಾತ್ರದಲ್ಲಿ ದಾನಮಾಡುವುದು)—ಇವುಗಳ ಕುರಿತು ಯೋಚಿಸುತ್ತಿದ್ದನು. ಅವನು ನಿರಂಕುಶನಾಗಿಸರ್ವಥಾ ವರ್ತಿಸುತ್ತಿದ್ದಿಲ್ಲ. ಆತನು ಮಂತ್ರಿಗಳನ್ನು ನಿಯಮಿಸಿಕೊಂಡ ಮೇಲೆ ಅವರವರ ಯೋಗ್ಯತೆಯಂತೆ ಅಧಿಕಾರಗಳನ್ನು ಕೊಡುತ್ತಿದ್ದನು. ಅಲ್ಲದೆ ಇತರರಿಗೂ ಅವರ ಯೋಗ್ಯತೆಗೆ ತಕ್ಕ ಅಧಿಕಾರವನ್ನು ಕೊಡುವುದರಲ್ಲಿ ರಾಜನು ಜಾಗ್ರತನಾಗಿರುತ್ತಿದ್ದನು. ಆರಸನು ಭೋಜನಾಲಯಗಳಿಗೂ, ಶಯನಾಗಾರಕ್ಕೂ, ಅಂತಃಪುರಕ್ಕೂ ಅಂಜುಕುಳಿಗಳನ್ನೇ ಅಧಿಕಾರಿಗಳನ್ನಾಗಿ ನಿಯಮಿಸುತ್ತಿದ್ದನು. ಮಂತ್ರಿಗಳಲ್ಲಿ ಶೂರರೂ, ದಕ್ಷರೂ, ಉತ್ತಮ ಕುಲದಲ್ಲಿ ಜನಿಸಿದವರೂ, ಹಣದಲ್ಲಿ ದುರಾಶೆಯಿಲ್ಲದ ಪರಿಶುದ್ಧ ಸ್ವಭಾವದವರೂ ಚಿನ್ನ ಮೊದಲಾದುವುಗಳನ್ನು ಅಗೆದು ತೆಗೆಯುವ ಖನಿ ಮತ್ತು ಧಾನ್ಯ ಸಂಗ್ರಹದ ಮುಖ್ಯಾಧಿಕಾರಿಗಳಾಗುತ್ತಿದ್ದರು. ಮನುವು ಹೀಗೆ ಹೇಳುವುದರಿಂದ ಆ ಕಾಲದಲ್ಲಾ ಸತ್ಪಾತ್ರಿಗಳ ಸಂಖ್ಯೆ ವಿಪುಲವಲ್ಲದಿದ್ದರೂ, ಪರಿಪಾಲನೀಯಾದರೂ ಇದ್ದಿರಬೇಕೆಂದೆನಿಸುವುದು. ನೀತಿಶಾಸ್ತ್ರಗಳನ್ನು ತಿಳಿದಿದ್ದು, ಪರರ ಇಂಗಿತಗಳನ್ನು, ಆಕಾರ ಮತ್ತು ಚೇಷ್ಟೆಗಳಿಂದ ಅವರ ಭಾವ ತಿಳಿಯಬಲ್ಲ; ದುರಾಶೆ, ದುರಭ್ಯಾಸವಿಲ್ಲದ, ಸತ್ಕುಲದಲ್ಲಿ ಹುಟ್ಟಿದ ಕಾರ್ಯಸಮರ್ಥನು ರಾಜಭಾರಿಯ ಕೆಲಸವನ್ನು ನಿರ್ವಹಿಸುತ್ತಿದ್ದನು. ಮನುವು ಎಲ್ಲಾ ಉದ್ಯೋಗಗಳಲ್ಲಿ ಸದ್ಗುಣ ಮತ್ತು ಸತ್ಕುಲಗಳಿಗೆ ಪ್ರಾಶಸ್ತ್ಯವನ್ನಿತ್ತಿರುವನು.

ಆ ಕಾಲದಲ್ಲಿ ಏರಡು ಅಥವಾ ಮೂರು ಗ್ರಾಮಗಳ ಇಲ್ಲವೇ ಐದು ಗ್ರಾಮಗಳ ಮಧ್ಯದಲ್ಲಿ ಪ್ರಾಮಾಣಿಕರಾದ ಪುರುಷರಿಂದ ಕೂಡಿದ ರಕ್ಷಕರನ್ನು ಆರಿಸಿ ಅವರಲ್ಲಿ ಪ್ರಧಾನ ಪುರುಷನನ್ನು ರಾಜ್ಯ ರಕ್ಷಣೆಗಾಗಿ ಸಂಗ್ರಹಿಸುತ್ತಿದ್ದರು ಹಾಗೆಯೇ ನೂರು ಗ್ರಾಮಗಳಿಗೂ ರಕ್ಷಕರನ್ನು ನಿಯಮಿಸಿ ರಾಜ್ಯವನ್ನು ರಕ್ಷಿಸುತ್ತಿದ್ದರು. ಅಂದು ಒಂದು ಗ್ರಾಮಕ್ಕೊಬ್ಬ, ಹತ್ತು ಗ್ರಾಮಗಳಿಗೊಬ್ಬ, ಇಪ್ಪತ್ತು ಗ್ರಾಮಗಳಿಗೊಬ್ಬ, ನೂರು ಗ್ರಾಮಗಳಿಗೊಬ್ಬ, ಸಾವಿರ ಗ್ರಾಮಗಳಿಗೊಬ್ಬ—ಹೀಗೆ ಅಧಿಪತಿಯನ್ನು ನೇಮಿಸುತ್ತಿದ್ದರು. ಒಂದು ಗ್ರಾಮದ ಅಧಿಪತಿಯು ತನ್ನ ಗ್ರಾಮದ ಕಳ್ಳತನ ಮೊದಲಾದ ದೋಷಗಳನ್ನು ತೀರ್ಮಾನಿಸಲು ಅಶಕ್ತನಾದರೆ ತನ್ನ ಮೇಲಿನ ದಶ ಗ್ರಾಮಾಧಿಪತಿಯೊಡನೆ ವಿಚಾರಿಸಿಕೊಳ್ಳುತ್ತಿದ್ದನು. ದಶ ಗ್ರಾಮಾಧಿಪತಿಯು ಆ ಕಾರ್ಯದಲ್ಲಿ ಅಸಮರ್ಥನಾದರೆ ಇಪ್ಪತ್ತು ಗ್ರಾಮಗಳ ಅಧಿಪತಿಗೊಡನೆ ವಿಜ್ಞಾಪಿಸುತ್ತಿದ್ದನು. ಹೀಗೆಯಿಂದಲೂ ಅಸಾಧ್ಯವಾದರೆ ಕ್ರಮವಾಗಿ ಸಹಸ್ರಗ್ರಾಮಾಧಿಪತಿಯವರೆಗೂ ಮೊರೆ ಹೋಗುತ್ತಿತ್ತು.

ಅಂದಿನ ತೆರಿಗೆಗಳೂ ಪ್ರಜೆಗಳಿಗೆ ಭಾರವಾಗಿರದೆ, ಸಂತೋಷದಿಂದ ತೆರಲು ಸಾಧ್ಯವಾಗುತ್ತಿತ್ತು. ಆಗ ರಾಜನಿಗೆ ಧಾನ್ಯಗಳ ಎಂಟನೆಯ ಒಂದೆಂಪಲು ವರ್ಷಕ್ಕೊಮ್ಮೆ ತೆರಿಗೆಯ ರೂಪದಲ್ಲಿ ಸಲ್ಲುತ್ತಿತ್ತು. ಇದನ್ನು ಗ್ರಾಮಾಧಿಪತಿಯು ಉಪಯೋಗಿಸದೆ, ಗ್ರಾಮ ವಾಸಿಗಳು ಪ್ರತಿದಿನ ರಾಜನಿಗೆ ಸಲ್ಲಿಸತಕ್ಕ ಅನ್ನ ಪಾನಕ ಬಟ್ಟೆಗಳನ್ನು ಮಾತ್ರ ಸಂಗ್ರಹಿಸಿ ಅಪ್ಪರಿಂದಲೇ ಜೀವನ ನಡಿಸಬೇಕಿತ್ತು. ಇದೇ ಆಗಿನ ಕಾಲದ ಸಂಬಳ. ಆಗ ಹತ್ತು ಗ್ರಾಮಗಳ ಅಧಿಪತಿಯು ಒಂದು ಕುಲದ (ಹನ್ನೆರಡು ಎಕ್ರುಗಳ ನೇಗಿಲು ಉಳುವ ಭೂಮಿ) ಉತ್ಪತ್ತಿಯನ್ನೂ, ಇಪ್ಪತ್ತು ಗ್ರಾಮಗಳ ಅಧಿಪತಿಯು ಐದು ಕುಲದ ಉತ್ಪತ್ತಿಯನ್ನೂ, ನೂರು ಗ್ರಾಮಗಳ ಅಧಿಪತಿಯು ಸಾವಾನ್ಯವಾದ ಒಂದು ಗ್ರಾಮದ ಉತ್ಪತ್ತಿಯನ್ನೂ, ಸಹಸ್ರ ಗ್ರಾಮಗಳ ಒಡೆಯನು ತನ್ನ ಜೀವನಕ್ಕಾಗಿ ಸಾಮಾನ್ಯವಾದ ಒಂದು ಪಟ್ಟಣದ ಉತ್ಪತ್ತಿಯನ್ನೂ ಉಪಯೋಗಿಸಿಕೊಳ್ಳಬಹುದಿತ್ತು. ಗ್ರಾಮಾಧಿಪರಿಗೂ ಮತ್ತು ಗ್ರಾಮವಾಸಿಗಳ ಕರ್ತವ್ಯಗಳಲ್ಲಿ ಪರಸ್ಪರ ವಿರೋಧ ಬಂದಾಗ ರಾಜನ ಹಿತವನ್ನು ಬಯಸುವ ಮಂತ್ರಿಯು ಆ ವ್ಯವಹಾರವನ್ನು ವಿಚಾರಿಸುತ್ತಿದ್ದನು. ನಗರಾಧಿಪತಿಯು ಆಗಾಗ ತನ್ನ ದೇಶದಲ್ಲಿ ಸಂಚರಿಸಿ, ಗ್ರಾಮಾಧಿಪತಿಗಳನ್ನು ಪರೀಕ್ಷಿಸುವುದಿತ್ತು. ಆಗಾಗ ಅವರ ನಡತೆಯನ್ನು ಗುಪ್ತಚಾರರ ಮೂಲಕ ತಿಳಿಯುವುದೂ ಇತ್ತು.

ಆ ಕಾಲದಲ್ಲಿ ವೃತ್ತಿ ತೆರಿಗೆ ಇತ್ತು. ಅದನ್ನು ಸರಕಾರವು ಒಂದು ಕ್ರಮದಲ್ಲಿ ಪಡೆಯುತ್ತಿತ್ತು. ಸಾಮಾನುಗಳನ್ನು ಕ್ರಯಕ್ಕೆ ಪಡೆದುದಿಷ್ಟಕ್ಕೆ? ಸಂಗ್ರಹಿಸಲ್ಪಟ್ಟದ್ದು ಎಷ್ಟು? ವರ್ಷಕನಿಗೆ ಈ ಬಗ್ಗೆ ಸ್ವಂತದ ಖರ್ಚು ಎಷ್ಟಾಗಿರಬಹುದು? — ಈ ಕುರಿತು ಲೆಕ್ಕ ಪಾಕ, ಸಾಗಿಸುವಾಗ ಕಳ್ಳಕಾಕರಿಂದ ರಕ್ಷಿಸುವುದಕ್ಕಾಗಿ ಸುತ್ತ ಇತರ ಖರ್ಚುಗಳಿಗಾಗಿ ವೆಚ್ಚವಾದುದನ್ನು ಕಳೆದು, ವ್ಯಾಪಾರಿಗೆ ಲಾಭ ಎಷ್ಟಿರಬಹುದೆಂದು ಊಹಿಸಿ ಲಾಭಾಂಶದಿಂದ ತೆರಿಗೆಯನ್ನು ಎತ್ತುತ್ತಿದ್ದರು. ಈ ತೆರಿಗೆಯು ತೆರುವವನಿಗೆ ನೋವುಂಟುಮಾಡುತ್ತಿರಲಿಲ್ಲ. ಸ್ವಲ್ಪ ಸ್ವಲ್ಪವಾಗಿ ಜಿಗಳೆಯು ಜನರ ರಕ್ತವನ್ನು ಹೀರುವಂತೆ, ಕರುಳು ತಾಯಿಯ ಮೊಲೆತಾಲನ್ನು ಚೀಪುವಂತೆ, ತುಂಬಿಗಳು ಮಕರಂದವನ್ನು ಪಾನಮಾಡುವಂತೆ, ರಾಜನು ಮೂಲಧನಕ್ಕೆ ತೊಂದರೆಯಾಗದ ಹಾಗೆ ವರ್ಷಕ್ಕೊಮ್ಮೆ ಜನರಿಂದ ಸ್ವಲ್ಪ ಸ್ವಲ್ಪ ತೆರಿಗೆ ಪಡೆಯುತ್ತಿದ್ದನು. ಆಗ ಪಶು ಮತ್ತು ಹಿರಣ್ಯಗಳ ಮಾರಾಟದ ಲಾಭದಲ್ಲಿ ನೂರರಲ್ಲಿ ಐವತ್ತರ ಅಂಶವನ್ನೂ, ಧಾನ್ಯಗಳಲ್ಲಿ ಎಂಟನೆಯೊಂದು ಅಥವಾ ಆರನೆಯೊಂದನ್ನೂ, ಕೆಲವು ಸಾರಿ ಹನ್ನೆರಡನೆಯೊಂದನ್ನೂ ರಾಜನು ತೆರಿಗೆಯಾಗಿ ಪಡೆಯುತ್ತಿದ್ದನು. ಮರ, ಮಾಂಸ, ಜೇನು, ತುಪ್ಪ, ಗಂಧ, ಔಷಧಿ, ರಸಪದಾರ್ಥ, ಪುಷ್ಪ, ಗಡ್ಡೆ, ಹಣ್ಣು, ಎಲೆ, ತರಕಾರಿ, ಹೂಲ್ಲು, ಚರ್ಮ, ಬೇಳೆ, ಬಿದಿರಿನ ಮತ್ತು ಮಣ್ಣಿನ ಪಾತ್ರೆಗಳು, ಬೀಸುವ ಕಲ್ಲು—ಇವುಗಳ ಮಾರಾಟದ ಲಾಭಾಂಶದಲ್ಲಿ ಆರನೆಯೊಂದನ್ನು ಮಾತ್ರ ರಾಜನು ಪಡೆಯಲು ಅರ್ಹನಾಗಿದ್ದನು.

ಈ ತೆರಿಗೆಯನ್ನು ಕೂಲಿಸಾಲಿ ಮಾಡಿ ಜೀವಿಸುವವರೂ ಇನ್ನೊಂದು ವಿಧದಿಂದ ಸಲ್ಲಿಸಬೇಕಿತ್ತು. ಅಡುಗೆಯವರಿಂದ, ಕರ್ಮಾರರಿಂದ, ಅಗಸರಿಂದ, ಕೂರೆ ಹೊರುವುದೇ ಮೊದಲಾದ ದೀಕ್ಷಯಮ ಮಾಡುವ ಶೂದ್ರರಿಂದ ತೆರಿಗೆಯ ರೂಪವಾಗಿ ವರ್ಷಕ್ಕೊಂದು ದಿನ ಬಿಟ್ಟ ಕೆಲಸ ಮಾಡಿಸುತ್ತಿದ್ದರು ಈಗಲೂ ರೂಢಿಯಲ್ಲಿರುವ ಬಿಟ್ಟಿಯ ಪದ್ಧತಿಯು ಸುಮಾರು ಒಂದು ಸಾವಿರ ವರ್ಷಕ್ಕೆಂತಪ್ರಾಚೀನವಾದುದು.

ಪೂರ್ವಕಾಲದಲ್ಲಿ ಒನ್ಮೊಮ್ಮೆ ಯುದ್ಧವು ಅನಿವಾರ್ಯವಾಗುತ್ತಿತ್ತು. ಆಗ ಸಂಗ್ರಾಮ ಭೂಮಿಯು ವೀರರ ರಕ್ತದಿಂದ ರಂಜಿಸುತ್ತಿತ್ತು. ರಾಜನ ಕಾರ್ಯಸಿದ್ಧಿಗಾಗಿ ಈಶ್ವರನು ಶಿಕ್ಷೆಯನ್ನು (ದಂಡವನ್ನು) ನಿರ್ಮಿಸಿದನೆಂಬ ಭಾವನೆಯೂ, ರಾಜದಂಡದ ಭಯದಿಂದಲೇ ಚರಾಚರ ಪ್ರಾಣಿಗಳು ತಮಗೆ ವಿಹಿತವಾದ ಧರ್ಮಮಾರ್ಗದಲ್ಲೇ ನಡೆಯುತ್ತವೆಂಬ ತಿಳಿವಳಿಕೆಯೂ ಜನರಲ್ಲಿದ್ದುದರಿಂದ ಯುದ್ಧವು ಅಸ್ವಾಭಾವಿಕವಾಗಿರಲಿಲ್ಲ. ಆಗಿನ ಯುದ್ಧ ಧರ್ಮವು ಈ ಕಾಲಕ್ಕಿಂತ ತೀರಾ ಭಿನ್ನ

(ಮುಂದೆ ಪುಟ ನೋಡಿರಿ)

ಶಿಕ್ಷಣ ವಿವೇಚನೆ

ವಿದ್ಯಾರ್ಥಿಯು ಮನೋಧರ್ಮಕ್ಕೆ ಹೊಂದಿಕೊಂಡಿದ್ದರೆಯೇ ಕೊಟ್ಟ ಶಿಕ್ಷಣವು ಸಾರ್ಥಕ. ಸ್ವವೃತ್ತಿಪರ ಶಿಕ್ಷಣವನ್ನು ಮಕ್ಕಳಿಗೆಕೊಟ್ಟು ನಾವು ಅವರನ್ನು ಸ್ವತಂತ್ರ ಅಂಬಿಗರಾಗಿ ಮಾಡುವಂತಿಲ್ಲ.



ಬರೆದವರು: ಶ್ರೀ ಶಿವರಾಮ ಕಾರಂತ

ಯಾವ ದೇಶವು ಮುಂದೆ ಬರಬೇಕಾದರೂ ಕೂಡ, ಕಾಲಕ್ಕೆ ತಕ್ಕಂತೆ ಆ ದೇಶದಲ್ಲಿ ಶಿಕ್ಷಣದಲ್ಲಿ ತಕ್ಕ ಪ್ರಗತಿಯೂ ಇದ್ದರೆ, ಅದು ಸಾಧ್ಯವಾಗಲಾರದು. ಯಾವ ದೇಶವೇ ಆಗಲಿ, ಯಾವ ಕಾಲದಲ್ಲೇ ಇರಲಿ, ತನ್ನ ಆ ದಿನದ ಪರಿಸ್ಥಿತಿಗೂ, ಆಶೋತ್ತರಗಳಿಗೂ–ಇರುವ ಅಂತರವನ್ನು ಅಳೆದು ನೋಡಬೇಕು; ಅದನ್ನು ನಿವಾರಿಸುವುದಕ್ಕೆ ಆ ಕಡೆಗೆ ನಡೆದು ಬರಬೇಕಾದದ್ದು ಶಿಕ್ಷಣ ಕ್ಷೇತ್ರದ ಕೂರತೆಯೇನೆಂಬುದನ್ನು—ಗಮನಿಸಬೇಕು. ನಮ್ಮ ಸುತ್ತಮುತ್ತಲಿನವರು, ಶಿಕ್ಷಣ ಕ್ಷೇತ್ರದಲ್ಲಿ ಈ ತನಕ ಮಾಡಿರುವ ಪ್ರಯತ್ನಗಳನ್ನು ನಾವು ಪ್ರಯೋಜನಕ್ಕೆ ತಂದುಕೊಳ್ಳಬೇಕು. ಶಿಕ್ಷಣದಲ್ಲಿ ಪ್ರಗತಿಯಾಗಬೇಕಾದರೆ ಪರಿಣತವಾದ ಅನುಭವಗಳ ಲಾಭವನ್ನು ನಾವು ದೊರಕಿಸಿಕೊಳ್ಳಬೇಕಾಗುವುದು ಇದ್ದು ಸುಲಭ ಮಾರ್ಗ. ಈ ದೃಷ್ಟಿಯಿಂದ ನಮ್ಮ ನಾಡಿನ ಶಿಕ್ಷಣದ ಪದ್ಧತಿಯ ಅನ್ವೇಷಣೆಗಳೇ, ಕಾರ್ಯಕ್ರಮವನ್ನಾಗಲೀ ನಾವು ಪರಿಶೀಲಿಸಿದ್ದಾದರೆ ನಮ್ಮ ಆಲೋಚನೆಗಳಿಗೂ, ನಡುವಳಿಕೆಗಳಿಗೂ–ಇರುವ ಅಪಾರ ವ್ಯತ್ಯಾಸ ಎಷ್ಟೆಂದು ಗೊತ್ತಾಗುತ್ತೀತು. ನಮ್ಮ ದೇಶದಲ್ಲಿ ರೂಢಿಯಲ್ಲಿರುವ ಶಿಕ್ಷಣದ ಕುಂದುಕೊರತೆಗಳು ನಮಗೆ ಕಾಣಿಸುತ್ತವೇನೋ! ನಿಜ. ಆ ದೃಷ್ಟಿಯಿಂದ ನೋಡ ಹೋದರೆ—ಇವತ್ತಿನ ಶಾಲೆಗಳು ಕೈಕೆಸರು ಮಾಡಿಕೊಳ್ಳದಂಥ; ಕರಕೌಶಲೀಕರಣವನ್ನು ನಿರ್ಮಿಸುವ ಕಾರ್ಖಾನೆಗಳೆಂದೂ ನಿಜ. ಆದರೆ–ನಾವು ಈಗಾಗಲೇ ಕೊಡಿರುವ, ಕೊಡುತ್ತಿರುವ ಕೆಲವೊಂದು ಹಂಚಿಕೆಗಳಿಂದ, ನಮ್ಮ ಶಿಕ್ಷಣದ ಉದ್ಧಾರಣೆಯಾದೀತು—ಎಂಬ ಮಾತು ಜವೇ? ಬದಲಾವಣೆ ಮಾಡಿದ ಮಾತ್ರಕ್ಕೆ ಉದ್ಧಾರಣೆಯಾಗಬೇಕಿಲ್ಲ. ಆ ಬದಲಾವಣೆಯು ಇನ್ನಷ್ಟು ನಿರಾಶೆಯನ್ನು ಹುಟ್ಟಬಹುದು. ಗುಮಾಸ್ತಿಕೆಯ ಶಿಕ್ಷಣ ನಮ್ಮದಂಬುದು ನಿಜವಾದರೂ, ಈ ನಾಡಿಗೆ ಲಕ್ಷಾಂತರ ಗುಮಾಸ್ತರುಗಳು ಬೇಕಾಗಿರುವುದು ನಿಜ. ಆದರೆ ಸಾವತ್ತೂ ಜನರು ಅದೊಂದೇ ಕೆಲಸವನ್ನು ಮಾಡಬೇಕಾಗಿಲ್ಲ. ನಮಗೆ ಗುಮಾಸ್ತಿಕೆ ಶಿಕ್ಷಣ ಬೇಡವೆಂದಲ್ಲ; ಅದಕ್ಕೆ ಮಿತಿ ಇದೆ. ಅದೊಂದು ನಮಗೆ ಬೇಕಾಗಿರುವ ಗುಮಾಸ್ತರ ಬೇಡಿಕೆಗಿಂತಲೂ ಸಾವಿರಪಟ್ಟು ಹೆಚ್ಚಾಗಿದೆ—ಎಂಬುದು ಅದರ ತಾತ್ಪರ್ಯವೇ ಕೊರತು ಗುಮಾಸ್ತರೇ ಬೇಡವೆಂಬುದು ಆ ಮಾತಿನ ಅರ್ಥವಲ್ಲ. ನಮ್ಮ ಶಿಕ್ಷಣದ ಕೊರತೆಯನ್ನು ನೀಗಿಸಬೇಕೆಂಬ ಆವಶ್ಯಕತೆಯಲ್ಲಿ, ನಮ್ಮ ಮುಂದಾಳುಗಳು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಕ್ಷೇತ್ರದಲ್ಲಿ, ಸೂಚಿಸುತ್ತಿರುವ ಬದಲಾವಣೆಗಳು—ಅಷ್ಟೇ ಅರ್ಥ ತಾತ್ಪರ್ಯವುಳ್ಳವು. ವೃತ್ತಿಪರ ಶಿಕ್ಷಣವೇ ಇದಕ್ಕೆ ಚಿಕಿತ್ಸೆ ಎಂದು ಕೂಗುತ್ತಿದ್ದೇವೆ. ಎಲ್ಲರೂ ವೃತ್ತಿಪರ ಶಿಕ್ಷಣಕ್ಕೆ ಶಕ್ತರಾಗಲಾರರು ಎಂಬುದನ್ನೂ ನಾವು ಗಮನಿಸಬೇಕಾಗಿದೆ. ಅದಲ್ಲದೆಯೇ, ನಾಡಿನ ಯಾವತ್ತು ಜನರಿಗೆ ಉದ್ಯೋಗ ದೊರಕುತ್ತದೆಂಬ ಆತ್ಮ ವಿಶ್ವಾಸಕ್ಕೂ ಆಧಾರವಿಲ್ಲ. ನಾವು ಮಾಡುತ್ತಿರುವ ಮಾರ್ಪಾಟಿನಿಂದ ಇದ್ದದ್ದೂ ಹೋಗಿ, ಹೊಸತೂ ಇಲ್ಲದಾದೀತು.

ಏವ್ಯಾಧ್ಯಾಸವಾಗಲೀ ಶಿಕ್ಷಣವಾಗಲೀ ಇರಬೇಕಾದದ್ದು ಜ್ಞಾನಸಂಪಾದನೆಗೆ—ಎಂದು ಪುರಾತನಕಾಲದಿಂದಲೂ ನಮ್ಮ ದೇಶ ತಿಳಿದುಕೊಂಡಿತ್ತು. 'ಜ್ಞಾನಕ್ಕಾಗಿ ಜ್ಞಾನ', 'ವಿದ್ಯೆಗಾಗಿ ವಿದ್ಯೆ' ಎಂದಿದ್ದರು ನಮ್ಮ ಹಿರಿಯರು. ಇಂದು ಜಗದೇಶದಲ್ಲಿ, ಈ ಧ್ಯೇಯಕ್ಕೆ ಯಾವ ಬೆಲೆಯೂ ಉಳಿಯದಾಗಿದೆ. ಇಂದು ನಮ್ಮ ಯಾವತ್ತು ಶಿಕ್ಷಣ ಕ್ರಮವೂ, ರೂಪಾಯಿ, ಆಣೆ ಪೈಗಳ ಎಣಿಕೆಯಿಂದ ನಡೆದಿದೆ; ನೌಕರಿ ದೊರಕಿಸಿಕೊಡುವುದೇ ಅದರ ಮುಖ್ಯೋದ್ದೇಶವಾಗಿದೆ. ಈ ದೇಶದಲ್ಲಿ—ಸಾಹಿತ್ಯವನ್ನೋ, ಕಲೆಯನ್ನೋ, ಶಾಸ್ತ್ರವನ್ನೋ ಕೇವಲ ಆನಂದಕ್ಕಾಗಿಯೇ ಅಭ್ಯಸಿಸಬೇಕೆಂಬ ವ್ಯಕ್ತಿಗಳೇ ಇರಲಾರದೇ? ಅಂಥ ಕೆಲವರಾದರೂ ಇರುವಲ್ಲಿ, ನಮ್ಮ ಶಿಕ್ಷಣ ಸಂಸ್ಥೆಗಳು, ಅಂಥವರ ಸಲುವಾಗಿ ಏನು ಮಾಡಲಿವೆ? ಯಾವುದೇ ಜ್ಞಾನಕ್ಷೇತ್ರ ಬೆಳೆಯಬೇಕಾದರೂ, ಆಯಾ ಜ್ಞಾನವನ್ನು ಸ್ವೀಕರಿಯಿಂದ, ಆದದಕ್ಕಾಗಿಯೇ ಅಭ್ಯಸಿಸುವವರು ಬೇಕು; ಅಂಥವುಗಳ ಸಲುವಾಗಿ ಪ್ರಯತ್ನಿಸುವವರು ಬೇಕು. ಜನರ ಆ ಪ್ರಯತ್ನವನ್ನೇ ಮಾಡದೆ ಹೋಗಿದ್ದರೆ ಇಂದು ವೈದ್ಯ, ವ್ಯಾಪಾರ, ವಿಜ್ಞಾನ ಕ್ಷೇತ್ರಗಳು ಇಷ್ಟೊಂದು ಬೆಳೆಯುತ್ತಿರಲಿಲ್ಲ; ಜನಗಳಿಗೆ ನಾನಾಕಷ್ಟ ಅನ್ನ ಆಹಾರವೂ ದೊರಕುತ್ತಿರಲಿಲ್ಲ. ಹಾಗಾದ್ದ ಮೇಲೆ—ಕೇವಲ ವೃತ್ತಿಪರವಾದ ಶಿಕ್ಷಣವೇ ಸಾರ್ವತ್ರಿಕ ಶಿಕ್ಷಣದ ಮುಖ್ಯ ಗುರಿಯಾದರೆ ಕೆಟ್ಟದೇ? ಅಂಥ ವಿರೂಪವು ಪ್ರಾಥಮಿಕ ವಿದ್ಯಾಭ್ಯಾಸದ ಪ್ರಾರಂಭದಿಂದಲೇ ತೊಡಗಿದರೆ ಏನು ಗತಿ?

ಈಗ ನಾವು ಶಿಕ್ಷಣದ ಮೊದಲನೆಯ ಹಂತವನ್ನು ಪರಿಶೀಲಿಸೋಣ. ಇಲ್ಲಿರುವಂಥದು ಸುಮಾರಿಂದ ೧೨ ವರ್ಷಗಳೊಳಗೆ ತೊಳಲಾಡುವ – ಮಕ್ಕಳು: ಅವರು ಪ್ರಯೋಜನದ ಯಾವ ಅಳತೆಗೂ ಸಿಗಲಾರದಂಥ ವಸ್ತುಗಳು, ಅಂಥ ಮಗು ವಿನಲ್ಲಿರುವ ಜ್ಞಾನವನ್ನು ಅಳೆಯುವುದೂ ಕಷ್ಟ. ಅವನಿನ ಸಂಸಾರಕ್ಕೆ ನೆರವು ಸಿಗುವುದೂ ಕಷ್ಟ. ಹಾಗಿರಕೂಡದೆಂದು ನಿರ್ಧರಿಸಿ ನಾವು ಮಕ್ಕಳ ಚಿಕಿತ್ಸೆಗೆ ಹೊರಟಿದ್ದೇವೆ. ನಮ್ಮ ಪಾಲಿಗೆ ಕಾಣಿಸುತ್ತಿರುವ ಚಿಕಿತ್ಸೆಯ ರೂಪವು 'ವೃತ್ತಿ ಶಿಕ್ಷಣ' ಇಲ್ಲವೆ 'ಮೂಲ ಶಿಕ್ಷಣ' ಪ್ರಯೋಗ ಮತ್ತು ವಿನೋದೆಗಳಿಗೂ ಅವಕಾಶವನ್ನು ಇರಿಸಿಕೊಳ್ಳೆದೆ—ರಾಷ್ಟ್ರೀಯ ಕೃಷಾಣದಲ್ಲೇ ಇದಕ್ಕಾಗಿ ತರಬೇತಿ ಕೇಂದ್ರಗಳನ್ನೂ, ವಿದ್ಯಾ ಕೇಂದ್ರಗಳನ್ನೂ ಆರಂಭಿಸಿಬಿಟ್ಟಿದ್ದೇವೆ. ಬೇರೆಗಿಂತ ಕಟ್ಟುವಾದ ನುದ್ದನ್ನು ಉಪಯೋಗಿಸುತ್ತಿದ್ದೇವೆ—ಎಂದು ನನಗನಿಸುತ್ತಿದೆ. ಶಿಶುವಿಗೆ ಒಂದು ಮನೋಧರ್ಮವುಂಟು; ಅದರದೇ ಆದಂಥ ಪ್ರವೃತ್ತಿಯೊಂದುಂಟು. ಶಿಶುವಿನ ಚಟುವಟಿಕೆ ಎಂಬುದಿದೆ. ಮಗುವಿಗೆ ಒದಗಿಸುವ ಯಾವುದೇ ಶಿಕ್ಷಣವು ಅದರ ಮನೋಧರ್ಮದ ಶರೀರ ಸ್ವಭಾವದ ಅನುಸಾರವಾಗಿಯೇ ನಡೆಯಬೇಕೆಂಬ ವಿಷಯವನ್ನು ನಾವು ತೀರ ಮರೆತಿದ್ದೇವೆ. ಶಿಶುಗಳ ಮನೋಧರ್ಮದ ವಿಷಯದಲ್ಲಿ ಪಾಶ್ಚಾತ್ಯ ದೇಶಗಳು ನಡೆಯಿಸಿರುವ ಯಾವತ್ತು ಪ್ರಯೋಗಗಳೂ, ಸಂಶೋಧನೆಗಳೂ—ಇದ್ದೂ ಇಲ್ಲದೆಯಂತೆ, ನಮ್ಮ ಪ್ರಾಥಮಿಕ ಶಿಕ್ಷಣ ನಡೆಯುತ್ತದೆ!

ಮನುಷ್ಯನ ಕೂಸು ಹತ್ತು ಹದಿನೈದು ವರ್ಷ ಪ್ರಾಯದಲ್ಲಿ, ಇಂದಿನ ನಾಗರಿಕತೆಯಲ್ಲಿ, ಎಂದೂ ಉದರಪೋಷಕ ವಿದ್ಯೆಗೆ ಸಿದ್ಧವಾಗಿಲಾರದು. ಅದರ ಪ್ರಪಂಚ ಮನೋಮಯ; ಅದರ ಚಟುವಟಿಕೆ ಭಾವಮಯ. ಅದರ ಕಾರ್ಯಾಂಗ ಸೃಷ್ಟಿಕಾರಕ; ಅದಕ್ಕೆ ಕಲಿಕೆಯೊಂದು ಸಂಗತಿಯೂ ಅದರ ಗ್ರಹಣ ಶಕ್ತಿಯ ಮಿತಿಗೆ ಒಳಗಾಗಿರಬೇಕು. ಉದ್ಯೋಗ ಸಂಪಾದನೆ, ಹಣಸಂಪಾದನೆ, ಈ ವಯಸ್ಸಿನಲ್ಲಿ ಆ ಮಿತಿಯ ಹೊರಗಿನ ಮಾತುಗಳು. ನಮ್ಮ ಇಂದಿನ ಪ್ರಾಥಮಿಕ ಶಿಕ್ಷಣದಲ್ಲಿ ಕೇವಲ ಬೌದ್ಧಿಕ ಚಟುವಟಿಕೆಗೆ ಅವಕಾಶವಿದೆಯೇ ಹೊರತು ಶರೀರದ ಚಟುವಟಿಕೆಗೆ—ಇಲ್ಲ. ಎಂಬ ಟೀಕೆ ನಿಜವಾದುದು. ಆದರೆ ಮಗುವಿನ ಶರೀರದ ಚಟುವಟಿಕೆಯು ಸೃಷ್ಟಿಕಾರಕ ಬಯಕೆಗಳಿಂದ ಬರುವಂಥದು. ದೊಡ್ಡವರು ವಿಧಿಸುವ ಬೇಸರ ತರಿಸುವ, ಕೇವಲ ಯಾಂತ್ರಿಕವಾದ ಚಟುವಟಿಕೆಗಳಿಂದ ತೃಪ್ತಿ ಕೊಡುವಂಥದಲ್ಲ. 'ತಕಲಿ' ವ್ಯವಹಾರದ ಚಟುವಟಿಕೆ ಅವಲ್ಲ. ನೂರಾರು ವಿಧವ ಆಟ, ಪಾಟಗಳಿಂದ,

(ಉಳಿದ ಪುಟ ನೋಡಿರಿ)

ಆಯುರ್ವೇದ ಔಷಧಗಳಿಂದ ತಯಾರು ಮಾಡಿದ

ರಾಮತೀರ್ಥ ಬ್ರಾಹ್ಮೀ ತೈಲ

ಆಯುರ್ವೇದ ಔಷಧ

ಸ್ಪೆಶಲ್ ನಂ. ೧ (ರಿಜಿಸ್ಟರ್ಡ್)

ಪ್ರಖ್ಯಾತ ಡಾಕ್ಟರರು, ವೈದ್ಯರು ವಿದ್ವಾಂಸರು ಮತ್ತು ಅನೇಕ ಸ್ತ್ರೀಪುರುಷರು ಈ ತೈಲದ ಪ್ರಶಂಸೆ ಮಾಡುತ್ತಾರೆ.

ಯಾಕೆಂದರೆ ಈ ತೈಲವು ಅನೇಕ ಬಗೆಯ ಲಾಭವನ್ನು ಕೊಡುತ್ತದೆ.

ಕವಿಯಲ್ಲಿ ಹುಡುಕಿದರೆ ಕವಿಯು ನರಗಳು ಸಶಕ್ತವಾಗಿ ಕವಿಯು ಕೆಲವು ರೋಗಗಳು ಗುಣವಾಗುತ್ತವೆ. ಶಾಂತವಾದ ನಿದ್ದೆ ಬರುತ್ತದೆ, ತಲೆನೋವು ನಿಲ್ಲುತ್ತದೆ. ಮಿದುಳು ಮತ್ತು ಕೂದಲಿಗೆ ಶ್ರೇಷ್ಠ.

ಸೂಚನೆ: ಪ್ರತಿಯೊಬ್ಬ ಸ್ತ್ರೀ, ಪುರುಷ ಮತ್ತು ಮಕ್ಕಳಿಗೆ ಈ ತೈಲವು ಎಲ್ಲಾ ಋತುಗಳಲ್ಲಿ ಅನುಕೂಲವಿದೆ. ಎಲ್ಲಾ ಕಡೆಗಳಲ್ಲಿ ಸಿಗುತ್ತದೆ. ಇನೇ ಎಚ್ಚೆತ್ತನ್ನೇ ಕೇಳಿರಿ.

ತೈಲದ ಕ್ರಯ ದೊಡ್ಡ ಬಾಟ್ಲಿ ರೂ. ೩-೮-೦ ಸಣ್ಣ ಬಾಟ್ಲಿ ರೂ. ೨-೦-೦. ಪೋಸ್ಟ ಮುಖಾಂತರ ತರಿಸುವವರು ದೊಡ್ಡ ಬಾಟ್ಲಿಗೆ ರೂ. ೪-೧೨-೦ ಸಣ್ಣ ಬಾಟ್ಲಿಗೆ ರೂ. ೨-೪-೦ (ವೇಕಿಂಗ್ ಖರ್ಚು ಸುತ್ತು ಆಂಚೆವೆಚ್ಚೆ ಸೇರಿ) ಮನಿಯಾರ್ಡರಿನಿಂದ ಕಳುಹಿಸಬೇಕು. ವಿ. ಪಿ. ಮಾಡುವದಿಲ್ಲ.

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ (ಸೆಂಟ್ರಲ್ ರೈಲ್ವೆ) ಮುಂಬಯಿ ೧೪.

Tele. 62889 ಟೆಲಿಗ್ರಾಮ್: PRANAYAM.

ಮಾತೃಪ್ರಧಾನ ಕುಟುಂಬಗಳು

ಕಾಲನೇ ಮಾತೃಪ್ರಧಾನ ಕುಟುಂಬಗಳ ಅವನತಿಯನ್ನು ತಂದಿತು. ಈಗಂತೂ ಭಾರತಸರ್ಕಾರದ ಹಿಂದೂ ಕಾಯಿದೆ ಶಾಸನವು ಈ ಕುಟುಂಬ ಪದ್ಧತಿಯ ಮೇಲೆ ಕೊನೆಯ ಆಘಾತವನ್ನು ಮಾಡಿದೆ ಎಂದರೂ ತಪ್ಪಲ್ಲ.

ಬರೆದವರು: ಶ್ರೀ ಸಂಜೀವ ಲಕ್ಷ್ಮೀಶ್ವರ. ಬಿ. ಎ.

ಕುಟುಂಬವೆಂದ ಕೂಡಲೇ ಸಂಬಂಧಿಕರ ಒಂದು ಗುಂಪು ಅಥವಾ ಮನೆತನ ಎಂಬ ಕಲ್ಪನೆ ಸರ್ವ ಸಾಧಾರಣವಾಗಿ ಆಗುವದು. ಅದರಲ್ಲಿಯೂ ರಕ್ತ ಸಂಬಂಧಿಕರ ಒಂದು ಗುಂಪು ಎಂಬ ಕಲ್ಪನೆ ಬರುವದು ಸಹಜವಾದದ್ದೆ. ಹೀಗಿರುವದರಿಂದ ಕುಟುಂಬದ ಜನರ ಸಂಬಂಧದ ಮೂಲವು ರಕ್ತ ಸಂಬಂಧದ ಮೇಲೆ ಅವಲಂಬಿಸಿದೆ ಎಂದಂತಾಯಿತು. ಆದರೆ ಪ್ರಾಚೀನ ಕಾಲದ ಕುಟುಂಬ ಪದ್ಧತಿಗಳು ಈ ರಕ್ತ ಸಂಬಂಧದ ಮೇಲೆ (Blood Bond) ಹೆಚ್ಚು ಅವಲಂಬಿಸಿರಲಿಲ್ಲ. ಸಮಾನ ವಯಸ್ಕರಿಂದ ಸ್ತ್ರೀ ಪುರುಷರು ಅಣ್ಣತಮ್ಮ ಅಕ್ಕತಂಗಿ ಎಂಬ ಭಾವನೆಯಿಂದ ಇರುತ್ತಿದ್ದರು. ವಯಸ್ಸಿನಿಂದ ಹಿರಿಯರಾದವರು ತಾಯಿತಂದೆ ಎಂದು ಭಾವಿಸಲ್ಪಡುತ್ತಿದ್ದರು. ಈ ತರಹೆಯ ವಿಶಾಲವಾದ ಭಾವನೆಯ ತಳಹದಿಯ ಮೇಲೆ ರೂಪತಾಳಿದ ಕುಟುಂಬ ಪದ್ಧತಿಗೆ "Generation Grades" ಎಂದು ಹೆಸರು.

ಪುರಾತನ ಕಾಲದ ಕುಟುಂಬ ಪದ್ಧತಿಯ ಮತ್ತೊಂದು ವೈಶಿಷ್ಟ್ಯವೆಂದರೆ ವ್ಯಕ್ತಿಗೆ ಪ್ರತ್ಯೇಕವಾದ ಸ್ಥಾನಮಾನವಿರಲಿಲ್ಲ. ಯಾವದೇ ಜನಾಂಗ ಅಥವಾ ಗುಂಪಿನ ಒಬ್ಬ ಸರ್ವಸಾಧಾರಣವಾದ ಸದಸ್ಯನಾಗಿ ಆ ಗುಂಪಿನ ಒಡಲಿತಕ್ಕೆ ಸಂಪೂರ್ಣವಾಗಿ ಅಧೀನವಾಗಿರಬೇಕಾಗುತ್ತಿತ್ತು. ಇದರಿಂದಾಗಿ ವ್ಯಕ್ತಿ ಸ್ವಾತಂತ್ರ್ಯವು ಅಸ್ತಿತ್ವದಲ್ಲಿರಲಿಲ್ಲ. ಎಲ್ಲ ಆಸ್ತಿಯು ಇಡೀ ಕುಟುಂಬದ್ದು ಆಪತ್ಕಾಲಕ್ಕೆ ಎಲ್ಲ ಸದಸ್ಯರು ಒಡೆಯರು ಎಂಬ ಭಾವನೆ ಅಲ್ಲಿ ಪ್ರಚುರವಾಗಿತ್ತು. ಈ ವಿಶಾಲವಾದ ಭಾವನೆಯ ತಳಹದಿಯ ಮೇಲೆ ಕುಟುಂಬಗಳು ಜನಿತವಾಗಿದ್ದರಿಂದ ಯಾವದೇ ಕುಟುಂಬದ ಒಟ್ಟು ಹಿರಿಯ ಮೃತನಾದ ಎಂಬ ಕ್ಷುಲ್ಲಕ ಕಾರಣಕ್ಕಾಗಿ ಆ ಕುಟುಂಬದ ವಿಸರ್ಜನೆಯಾಗಬೇಕು ಅಥವಾ ಆ ಕುಟುಂಬವು ಮುಂದುವರೆಯಲಾರದು ಎಂಬ ನಿಯಮವು ವಿದ್ದಿರಲಿಲ್ಲ. ಈ ಉದಾತ್ತತತ್ವಗಳ ಮೇಲೆ ಆಧಾರಿತವಾದ ಕುಟುಂಬಗಳೇ ಆರ್ಯನ ಜನಾಂಗದ ಪ್ರತೀಕವಾದ ಏಕತ್ರ ಕುಟುಂಬಗಳು (Joint Family). ಈ ಏಕತ್ರ ಕುಟುಂಬ ಪದ್ಧತಿಯು ಹಿಂದು ಸ್ಥಾನದಲ್ಲಿ ಇಂದಿಗೂ ದೊರೆಯುತ್ತವೆ. The family group or joint undivided family constitutes the typical future of the Aryan Community. ಈ ಏಕತ್ರ ಕುಟುಂಬದ ಒಂದು ಉತ್ತಮ ಉದಾಹರಣೆಯೆಂದರೆ ಸಾರವಕ (sarawak) ಎಂಬಲ್ಲಿ ೪೦೦ ಜನರುಳ್ಳ ಒಂದೇ ಒಂದು ಕುಟುಂಬವು ಒಂದು ವಿಶಾಲವಾದ ಮನೆಯಲ್ಲಿ ವಾಸಿಸುತ್ತಿದ್ದರು.

ಕುಟುಂಬಗಳನ್ನು ಎರಡು ವಿಧವಾಗಿ ವಿಭಾಗಿಸಬಹುದು. ೧) ಮಾತೃ ಪ್ರಧಾನ ಕುಟುಂಬಗಳು. ೨) ಪಿತೃ ಪ್ರಧಾನ ಕುಟುಂಬಗಳು. ಈ ರೀತಿಯ ವಿಭಜನೆಗೆ ಮೂಲಕಾರಣವೆಂದರೆ ಮೊದಲನೆಯ ಪ್ರಕಾರದಲ್ಲಿ ಸ್ತ್ರೀ ಕುಟುಂಬದ ಹಿರಿಯ ಳೆದ್ದು, ಕುಟುಂಬದ ಎಲ್ಲ ಅಧಿಕಾರ ಸೂತ್ರಗಳು ಅವಳ ಕೈಯಲ್ಲಿದ್ದುವು. ಎರಡನೆಯ ಪ್ರಕಾರದಲ್ಲಿ ಪುರುಷನು ಅಧಿಕಾರಾರೂಢನಾಗಿದ್ದನು. ಇವುಗಳಲ್ಲಿ ಮೊದಲು ಯಾವ ಕುಟುಂಬವು ಆಸ್ತಿತ್ವದಲ್ಲಿ ಬಂದೀತು ಎಂಬುವರ ಬಗ್ಗೆ ವಾದವಿವಾದವಿದ್ದರೂ ಮೊದಲು ಸ್ತ್ರೀ ಪ್ರಧಾನ ಕುಟುಂಬಗಳು ಆಸ್ತಿತ್ವದಲ್ಲಿ ಬಂದೀತು. ಹಾಗು ಮುಂದೆ ಕಾಲನೂನ ಪರಿಸ್ಥಿತಿಯ ಬದಲಾವಣೆಯು ಮೂಲಕವಾಗಿ ಸ್ತ್ರೀ ಪ್ರಧಾನ ಕುಟುಂಬಗಳ ಬದಲು ಪುರುಷ ಪ್ರಧಾನ ಅಥವಾ ಪಿತೃ ಪ್ರಧಾನ ಕುಟುಂಬವು ಅವತರಿಸಿತು ಎಂದು ಹೇಳಬಹುದು.

ಮಾತೃ ಪ್ರಧಾನ ಕುಟುಂಬಗಳ ವೈಶಿಷ್ಟ್ಯ:— ಈ ಪ್ರಕಾರದ ಕುಟುಂಬಗಳ ಕೆಲವು ಮುಖ್ಯ ವೈಶಿಷ್ಟ್ಯಗಳನ್ನು ಇಲ್ಲಿ ಉದಹರಿಸಬಹುದು. ೧) ಇಲ್ಲಿ ವಂಶ ವೃದ್ಧಿ, ಪಿತ್ರಾರ್ಜಿತ ಆಸ್ತಿಗೆ ಹಕ್ಕುದಾರಿಕೆ ಹಾಗು ಉತ್ತರಾಧಿಕಾರಿಕೆ ಸ್ತ್ರೀಯರ ಮೂಲಕವಾಗಿ ಮುಂದುವರೆಯುತ್ತಿದ್ದುವು. Descent inheritance & succession follow the female line. ಯಾವದೇ ಕುಟುಂಬದ ಆಸ್ತಿಗೆ ಮಗನು ಬಾಧ್ಯಸ್ಥನಾಗದೇ ಹೆಣ್ಣು ಮಗಳು ಬಾಧ್ಯಸ್ಥಳಾಗುತ್ತಿದ್ದಳು. ೨) ಮಾತೃಪ್ರಧಾನ ಕುಟುಂಬಗಳಲ್ಲಿ ಸ್ತ್ರೀಗೆ ಎಲ್ಲ ಅಧಿಕಾರಗಳು ಇದ್ದು ಜನಾಂಗದ ಅಥವಾ ಕುಟುಂಬದ ಎಲ್ಲ ಸೂತ್ರಗಳು ಅವಳ ಕೈಯಲ್ಲಿಯೇ ಇರುತ್ತಿದ್ದವು. ಜನಾಂಗದ ಅಥವಾ ಕುಟುಂಬದ ಎಲ್ಲ ಪುರುಷರು ವಯೋಮಾನದ ಇತಿ-ಮಿತಿ ಇರದೇ ಅವಳ ಆಜ್ಞೆಯನ್ನು ಪಾಲಿಸಬೇಕಾಗುತ್ತಿದ್ದಿತು. ಸ್ತ್ರೀಯ ಅಧಿಕಾರ ವ್ಯಾಪ್ತಿಯ ಬಗ್ಗೆ "ಇರೊಕೋಯಿ" ಎಂಬ ಜನಾಂಗದ ಉದಾಹರಣೆ ಕೊಡಬಹುದು. ಆ ಜನಾಂಗವ ಎಲ್ಲ ಭೂಮಿಗಳು ಆ ಜನಾಂಗದ ಮುಂದಾಳಾದ ಸ್ತ್ರೀಯ ಸೊತ್ತಾಗಿದ್ದವು. ಆ ಜನಾಂಗವನ್ನು ಫೆಡರಾಯಿಡ್ ಸ್ತ್ರೀಯಳ ಹೆಸರಿನಿಂದಲೇ ಕರೆಯುವ ಪದ್ಧತಿ ರೂಢಿಯಲ್ಲಿದ್ದಿತ್ತು. ಎಲ್ಲ ಸ್ಥಿರ ಹಾಗು ಅಸ್ಥಿರ ಆಸ್ತಿಗಳಿಗೆ ಒಡೆಯಳಾದ ಸ್ತ್ರೀಯು ಸರ್ವಾಧಿಕಾರಿ ರಾಜನಂತೆ ಅಧಿಕಾರ ನಡೆಸಲು ಸಮರ್ಥಳಾಗುತ್ತಿದ್ದಳು. ಇವರಿಂದಾಗಿ ಪುರುಷನ ಅಸ್ತಿತ್ವಕ್ಕೆ ಮಹತ್ವವೇ ಇರಲಿಲ್ಲ. ೩) ಮಾತೃಪ್ರಧಾನ ಕುಟುಂಬಗಳಲ್ಲಿ ಮದುವೆಯಾನಂತರ, ಮದುವೆಯಾದ ಪುರುಷನು ಹೆಂಡತಿ ಇದ್ದಲ್ಲಿಗೇ ಅವಳೊಡನೆ ವಾಸಿಸಲು ಹೋಗಬೇಕಾಗುತ್ತಿತ್ತು. ಇದಕ್ಕೂ ವಿಚಿತ್ರವಾದ ಸಂಗತಿ ಎಂದರೆ ಪತಿಗೆ ತನ್ನ ಮಕ್ಕಳ ಮೇಲೆ ಕೂಡ ಯಾವದೇ ಅಧಿಕಾರವಿರಲಿಲ್ಲ. ಎಲ್ಲ ಅಧಿಕಾರವು ಕುಟುಂಬದ ಹಿರಿಯಳಾದ ಹೆಣ್ಣು ಮಗಳಿಗೆ ಮತ್ತು ಅವಳ ಅಣ್ಣತಮ್ಮಂದಿರಿಗೆ ಇರುತ್ತಿದ್ದವು. The children belong to the totem to the mother and of course, receive their Caste from her. The father has no authority over his own Children. The maternal uncle of the children has for more to say about them than the father-the aunts on the maternal side have, also, all authority over their nephews and nieces. When the mother dies the father must relinquish his children to the maternal uncles & aunts. If the father were to inflinct any injury on his child, his tribe would have to pay damages to his wife's tribe" Jones. ಇದರಿಂದ ಸ್ತ್ರೀಯ ಅಧಿಕಾರ ವ್ಯಾಪ್ತಿ ಹಾಗು ಮಜಬೂತದ ಕಲ್ಪನೆ ಬರುವದಲ್ಲದೇ ಪುರುಷನ ನಿರ್ಬಲತೆಯ ಕಲ್ಪನೆ ಸಹ ಬರುವದು.

ಮಾತೃ ಪ್ರಧಾನ ಕುಟುಂಬಗಳ ಲೋಪದೋಷಗಳು: ೧) ಮಾತೃ ಪ್ರಧಾನ ಕುಟುಂಬಗಳ ಮುಖ್ಯವಾದ ನ್ಯೂನತೆ ಎಂದರೆ ಅವು ಪ್ರಗತಿರಹಿತವಾಗಿರಲಿಲ್ಲ. ಬದಲಾಗುತ್ತಿರುವ ಪರಿಸ್ಥಿತಿಗನುಸರಿಸಿ ಕೂಡಿಕೊಂಡು ನಡೆಯುವದು ಅಸಾಧ್ಯವಾಯಿತು. ಈ ಕುಟುಂಬಗಳ ಉದ್ದೇಶವೆಂದರೆ ಎಲ್ಲ ಸಂಬಂಧಿಕರು ಒಂದೆಡೆಗೆ ಕಲೆತು ಜೀವನ ನಡೆಸುವದೊಂದೇ ಆಗಿದ್ದಿತು. ಅದರ ಗುರಿ ಆರ್ಥಿಕ ಅಥವಾ ಸಾಮಾಜಿಕ ಜೀವಪಥದಲ್ಲಿ ಸುಧಾರಣೆ ಮಾಡುವದರ ಕಡೆಗೆ ಇರಲಿಲ್ಲ ಹೀಗಿರುವದರಿಂದ ಎಲ್ಲಿಯವರೆಗೆ ಉಪಜೀವನದ ಮಾರ್ಗವು ಸರಳವಾಗಿದ್ದಿತೋ ಆಲ್ಲಿಯವರೆಗೆ ಈ ಪದ್ಧತಿಯು ಕುಟುಂಬಗಳ ಅಸ್ತಿತ್ವಕ್ಕೆ ಅಪ್ಪದವಿದ್ದಿತು. ಆದರೆ ಬರಬರುತ್ತ ಉಪಜೀವನದ ಮಾರ್ಗಗಳು ಕಠಿಣವಾಗಹತ್ತಿದವು. ಮೇಲಾಗಿ ಈ ಕುಟುಂಬದ ಪದ್ಧತಿಗನುಸಾರವಾಗಿ ಆಸ್ತಿ ಹಾಗು ಸಾಮಾಜಿಕ ಸ್ಥಾನಮಾನಗಳಿಗೆ ಸ್ತ್ರೀಯರೇ ಹಕ್ಕು ಬಾಧ್ಯಸ್ಥರು ಆದ್ದರಿಂದ ಒಂದೇ ತರಹದ ಆರ್ಥಿಕ ಹಾಗು ರಾಜಕೀಯ ಘಟಕಗಳು ಮುಂದುವರಿಯುತ್ತ ಬಂದಿದ್ದವು. ಉಪಜೀವನದ ಮಾರ್ಗಗಳು ಕಠಿಣವಾಗುತ್ತ ನಡೆದಂತೆ ಈ ತರಹದ

(೨೩ನೇ ಪುಟ ನೋಡಿರಿ)

ಮಾಧುರಿ

ಅತ್ಯಂತ ಮನೋಹರವಾದ ಸುವಾಸನೆಯುಳ್ಳ ಅಗರುಬತ್ತಿ.

ಮೈಸೂರ್ ಮಲ್ಲಿಕ್

ಮೈಸೂರು ಮಲ್ಲಿಗೆಯ ಮಧುರ ಸೌರಭವನ್ನು ಬೀರುವ ಸುಗಂಧದ್ರವ್ಯ. (ಕರವಸ್ತ್ರಕ್ಕೆ ಯೋಗ್ಯವಾದುದು)

ದಿ ಸದ್ವೈದ್ಯಶಾಲಾ (ಪ್ರೈವೇಟು) ಲಿ., ನಂಜನಗೂಡು.

ಶಾಖೆಗಳು: ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ.

ಸ್ವಾತಿಸ್ವಸ್ತಿ:— ಯು. ವೆಂಕಟೇಶ ಜೋಗಪ್ಪ ರ್ಯಾಸುಭೋಗ್ ಅಂಡ್ ಸನ್ಸ್, ತೆಂಕಪೇಟೆ, ಉಡುಪಿ. (ದಕ್ಷಿಣ ಕನ್ನಡ)

ಬೌದ್ಧ ಧರ್ಮದ ಸೆಲೆ-ನೆಲೆಗಳು

ನಮ್ಮ ಗಣರಾಜ್ಯದ ೬ನೇ ವರ್ಷದಲ್ಲಿ ನಡೆದ ದೊಡ್ಡ ಉತ್ಸವವೆಂದರೆ ಬುದ್ಧ ಭಗವಾನನ ಮಹಾಪರಿನಿರ್ವಾಣದ ೨೫೦೦ನೇ ವರ್ಷದ ಸ್ಮಾರಕ ಸಮಾರಂಭ. ಪಂಚಶೀಲಗಳನ್ನು ಆಧುನಿಕ ಕಾಲಕ್ಕೆ ಅಳವಡಿಸಿಕೊಂಡಿರುವ ಭಾರತ ಸರಕಾರದ ಅತಿಥಿಗಳಾಗಿ ಬೌದ್ಧ ಪ್ರಪಂಚದ ಜಗದ್ಗುರುಗಳಾದ ಲಾಮಾದ್ವಯರೇ ಈ ಉತ್ಸವದಲ್ಲಿ ಭಾಗವಹಿಸಿದ್ದರು.

ಲೇಖಕರು: ಡಾ|| ಕೆ ಕೃಷ್ಣಮೂರ್ತಿ, ಎಂ. ಎ., ಬಿ. ಟಿ., ಪಿಎಚ್. ಡಿ.

ನಮ್ಮೀ ಭಾರತ ವರ್ಷವು ವಿಶ್ವದ ಬಾದ್ಧಂಗೆಲ್ಲ ಧರ್ಮಭೂಮಿ. ಭಗವಾನ್ ಬುದ್ಧನಿಗೆ ಜನ್ಮವಿತ್ತ ಪುಣ್ಯಭೂಮಿ; ಬುದ್ಧನ ವಿಚಾರಗಳನ್ನು ಅಮರ ಗ್ರಂಥಗಳಲ್ಲಿ ಮೂಡಿಸಿದ ಪವಿತ್ರ ಭೂಮಿ. ಈರ್ಷ್ಯಾಸೂಯೆಗಳಿಂದಲೂ ರಾಗದ್ವೇಷಗಳಿಂದಲೂ ಅಶಾಂತಿಪರ್ವ ಆರಂಭವಾಗುತ್ತಿರುವ ಇಂದಿನ ವಿಶ್ವದಲ್ಲಿ ಶಾಂತಿಯ ಬೆಳಕನ್ನು ಮತ್ತೊಮ್ಮೆ ಲೋಕಹಿತಕ್ಕಾಗಿ ಬೆಳಗಿಸಿತೆಂದು, ಪೌರ್ವಾತ್ಯ ಜಗತ್ತೆಲ್ಲ ಭಾರತದ ಕಡೆಗೆ ತವಕದಿಂದ ಎದುರುನೋಡುತ್ತಿರುವುದಕ್ಕೆ, ಪೂರ್ವದಲ್ಲಿ ಅದು ಬೌದ್ಧಧರ್ಮದ ಉತ್ಪತ್ತಿ ವಿಕಾಸಗಳಿಗೆ ಆಶ್ರಯಸ್ಥಾನವಾದ ಇತಿಹಾಸವೂ ಒಂದು ಕಾರಣವೆನ್ನಬಹುದು. ಇಂದು ಭಾರತದಲ್ಲಿ ಬೌದ್ಧಧರ್ಮದ ಅನುಯಾಯಿಗಳ ಸಂಖ್ಯೆ ಸಣ್ಣದಾದರೂ, ಬೌದ್ಧರ ಶಾಂತಿ ವಾತ್ಸಲ್ಯವೂ ಕರ್ತವ್ಯನಿಷ್ಠೆಯೂ ಅಪ್ಪಿಲಿತ ವೇದಾಂತದಂತೆ ಶಿಲ್ಪಕಲಾ ಸಂಪದ್ರಾಯಗಳಲ್ಲಿಯೂ ಹಾಸುಹೊಕ್ಕಾಗಿ ಪ್ರಸರಿಸಿ ಭಾರತೀಯರ ನಿತ್ಯಜೀವನದ ಸ್ತೋತ್ರ ಸತ್ಯಗಳೆಲ್ಲೊಂದಾಗಿ ಇಂದಿಗೂ ಉಳಿದೇ ಇದೆ. ಮತಶ್ರದ್ಧಾಚಾರಗಳಲ್ಲಿ ಹೆಚ್ಚಿನ ಅಸಕ್ತಿಯೇನೂ ಇಲ್ಲದ ನಮ್ಮ ಮಂತ್ರಿವರ್ಯ ಶ್ರೀ ಜವಾಹರಲಾಲರುಜಗತ್ತಿಗೆಲ್ಲ ಇಂದು ಯಾವ "ಪಂಚ-ಶೀಲ"ವನ್ನು ಸಾರುತ್ತಿರುವರೋ, ಅದರ ಮೊದಲ ಉದ್ಗಾರವನ್ನು ತೆಗೆದ ಮಹಾನುಭಾವನೆಂದರೆ ಭಗವಾನ್ ಬುದ್ಧನೇ ಸರಿ. ನಮ್ಮ ರಾಷ್ಟ್ರಧ್ವಜದಲ್ಲಿ ಅಂಗೀಕೃತವಾಗಿರುವ ಅಶೋಕಚಕ್ರವೆಂಬೂ ಭಗವಾನ್ ಬುದ್ಧನ ಧರ್ಮಚಕ್ರದ ಪ್ರತೀಕವೆಂಬುದು ಸರ್ವರಿಗೂ ವಿದಿತವೇ. ಬುದ್ಧನ ದಿನ್ಯವಾಣಿಯನ್ನು, ಜ್ಞಾನಜ್ಯೋತಿಯನ್ನು ೨೫೦೦ ಸಂವತ್ಸರಗಳು ಸಂದುಹೋದಮೇಲೂ ಈಗ ಭಾರತವು ವಿಜೃಂಭಣೆಯಿಂದ ಧ್ವನಿಸುತ್ತಿದೆ; ಟಿಬೆಟ್‌ನ ಧರ್ಮಪೀಠಾಧಿಪತಿಗಳಾದ ದಲಾಯಿ ಲಾಮ, ಪಂಚೆನ್ ಲಾಮ ಮುಂತಾದ ಮಹಾತ್ಮರೂ ಚೀನ, ಜಪಾನ್, ಬರ್ಮ, ಸಿಂಹಳ, ಮುಂತಾದ ದೇಶಗಳ ಬೌದ್ಧ ಆಚಾರ್ಯರೂ ರಾಜಕಾರಣಿಗಳೂ ಈಗ ಎಂದಿಗಿಂತಲೂ ಹೆಚ್ಚಾಗಿ ಭಾರತದೊಡನೆ ಸಂಪರ್ಕವನ್ನು ಇಟ್ಟುಕೊಳ್ಳುತ್ತಿದ್ದಾರೆ; ಬೆಳೆಯಿಸಿಕೊಳ್ಳುತ್ತಿದ್ದಾರೆ. ಭಾರತದತ್ಪುತ್ರರೇ ಡಾ|| ಅಂಬೇಡಕರರ ನೇತೃತ್ವದಲ್ಲಿ ಬೌದ್ಧಧರ್ಮದ ಪ್ರಚಾರ ಕಾರ್ಯವೂ ಪುನರುಜ್ಜೀವಿತವಾಗಿದೆ. ಭಾರತವು ಪ್ರಜಾರಾಜ್ಯವಾದ ಮೇಲೆಯೇ ಈ ರೀತಿಯಾಸ ವಿಶೇಷ ಆಸಕ್ತಿ, ಸಂಪರ್ಕ ಜಾಗೃತಿಗಳು ಬೌದ್ಧಜಗತ್ತಿನಲ್ಲಿ ಕಾಣಿಸುತ್ತಿರುವುದರಿಂದ ಆ ಧರ್ಮದ ಸೆಲೆ ನೆಲೆಗಳನ್ನು ಕುರಿತು ಪರಿಚಯಾತ್ಮಕವಾಗಿ ಒಂದೆರಡು ವಿಷಯಗಳನ್ನು ಇಲ್ಲಿ ಸಂಗ್ರಹಿಸಲು ಯತ್ನಿಸಿದೆ.

೧

ಬೌದ್ಧಧರ್ಮದ ಮೂಲ ತತ್ತ್ವವಿಗೆ ಳೇನು? ಎಂಬ ಪ್ರಶ್ನೆಗೆ ಉತ್ತರ ಕೇಳುವುದು ಸುಲಭವಲ್ಲ. ಒಂದು ಕಡೆ ಶ್ರೀಮದ್ಭಾಗವತದಲ್ಲಿಯೇ ಬುದ್ಧನನ್ನು ಮಹಾವಿಷ್ಣುವಿನ ಒಂಭತ್ತನೆಯ ಅವತಾರವೆಂದು ಪರಿಗಣಿಸಲಾಗಿದೆ. ಲೋಕಕಾರುಣ್ಯದ ಮಹಾಮೂರ್ತಿಯೆಂದು ಗೀತ ಗೋವಿಂದವನ್ನು ಬರೆದ ಜಯದೇವನೇ ಭಗವಾನ್ ಬುದ್ಧನಿಗೆ ಕೈ ಮುಗಿದಿದ್ದಾನೆ. ಇದು ಒಂದು ಚಿತ್ರ. ಇನ್ನೊಂದು ಕಡೆ ಶ್ರೀ ಶಂಕರ ಭಗವತ್ಪಾದಾಚಾರ್ಯರೇ ಮುಂತಾದವರನ್ನು ನಾಸ್ತಿಕ ಮತವಾದ ಬೌದ್ಧಧರ್ಮವನ್ನು ಖಂಡುತುಂಡಾಗಿ ಖಂಡಿಸಿದ ಮಹಾತ್ಮರೆಂದೂ ವರ್ಣಿಸುವ ಉಲ್ಲೇಖಗಳಿವೆ, ಶಂಕರ ದಿಗ್ವಿಜಯವೇ ಮೊದಲಾದ ಗ್ರಂಥಗಳಲ್ಲಿ. ಇದು ಇನ್ನೊಂದು ಚಿತ್ರ. ಈ ಎರಡು ಚಿತ್ರಗಳಿಗೂ ತಾಳ ಮೇಳಗಳಲ್ಲ. ಮೊದಲನೆಯ ಪೂಜ್ಯ ಬುದ್ಧಿಗಿಂತ ಎಷ್ಟನೆಯ ತ್ಯಾಜ್ಯಬುದ್ಧಿಗೇ ಭಾರತಜನಲ್ಲಿ ಹೆಚ್ಚಿನ ಪ್ರಚಾರ ಸಿಕ್ಕಿದಂತೆ ತೋರುತ್ತದೆ. ಬುದ್ಧನು 'ನಾಸ್ತಿಕ', 'ವೇದ ಬಾಹಿರ', 'ವೇದನಿಂದಕ', 'ನೈರಾತ್ಮ ವಾದಿ' ಎಂದರೆ 'ಆತ್ಮ'ವನ್ನೇ ಒಪ್ಪದವನು, ಎಂದು ಮುಂತಾದ ಕಲ್ಪನೆಗಳು ಜನಗಳಲ್ಲಿ ಪ್ರಬಲವಾಗಿ ಬೇರೂರಿಕೊಂಡಿವೆ. ಈ ಭಾವನೆಗಳ ಪ್ರಭಾವದಿಂದಲೇ ಅಲ್ಲಲ್ಲಿ ಈಗಲೂ ಬೌದ್ಧಧರ್ಮದ ವಿಷಯದಲ್ಲಿ ಸರಕಾರ ತೋರಿಸುತ್ತಿರುವ ಆದರವು ಟೀಕೆಗಳಿಗೂ ಗುರಿಯಾಗುತ್ತಿವೆ. ವಸ್ತುಸ್ಥಿತಿಯನ್ನರಿಯಲು ಈ ವಿಷಯದಲ್ಲಿ ಅಳವಾದ ಅಭ್ಯಾಸವನ್ನು ಕೈಗೊಂಡಿರುವ ಡಾ|| ರ್ರಿಸ್ ಡೇವಿಡ್ಸ್ ದಂಪತಿಗಳು, ಬರ್ವಾ, ಡಾ|| ರಾಧಾಕೃಷ್ಣನ್ ಮುಂತಾದವರ ಸಂಶೋಧನಾತ್ಮಕ ತತ್ತ್ವಶಾಸ್ತ್ರಗಳ ಅಧ್ಯಯನ ಅಗತ್ಯವಾಗುತ್ತದೆ.

ಒಂದೇ ಮಾತಿನಲ್ಲಿ ವಿದ್ವಾಂಸರ ನಿರ್ಣಯಗಳನ್ನು ಸೂಚಿಸುವುದಾದರೆ, ಭಗವಾನ್ ಬುದ್ಧನಿಗೆ ಸಂಕುಚಿತಭಾವನೆಗಳೊಂದೂ ಇರಲಿಲ್ಲ. ಅವನು ಕೇವಲ ಸ್ವೇಶ್ವರಯತ್ನದಿಂದ ಬುದ್ಧ ಅಥವಾ ಸರ್ವಜ್ಞನಾದ ಮಹಾಪುರುಷ. ಕೇವಲ ಐಹಿಕ ಸುಖಾಪೇಕ್ಷೆಯಿಂದ ಪ್ರವೃತ್ತವಾಗುವ ಕರ್ಮಗಳೆಲ್ಲವೂ ಅವನ ದೃಷ್ಟಿಯಿಂದ ಪೂರ್ಣತ್ವ ಪ್ರಾಪ್ತಿಗೆ ಪ್ರತಿಬಂಧಕಗಳೇ. ಯಜ್ಞಯಾಗಾದಿಗಳಿಗೆ ಅವಿಕಾಲಪಲ್ಲಿದ್ದ ಔಚಿತ್ಯ ತಪ್ಪಿದ ಮೇಲೆ ಅವುಗಳ ಯಾಂತ್ರಿಕ ಅನುಷ್ಠಾನಕ್ಕೆ ಮಹತ್ತ್ವವನ್ನು ಕೊಡಲು ಬುದ್ಧನು ಸಿದ್ಧನಾಗಿರಲಿಲ್ಲ. ಅವರೆಲ್ಲ ಯುಗಗಳನುಗುಣವಲ್ಲದಿದ್ದರೂ ಧರ್ಮ ಚಿಂತನೆಗೆ ಅವನು ವಿರುದ್ಧನೂ ಆಗಿರಲಿಲ್ಲ. ವೇದಾಂತವೆನಿಸಿಕೊಳ್ಳುತ್ತಿದ್ದ ಉಪನಿಷತ್ತುಗಳಲ್ಲಿ ನೋಕ್ಷವೇ ಪರಮಪುರುಷಾರ್ಥವೆಂದು ಸ್ಪಷ್ಟಪಡಿಸಿಯೊಪ್ಪಿದ್ದುದನ್ನು ಭಗವಾನ್ ಬುದ್ಧನು ಸರ್ವಾತ್ಮನಾ ಒಪ್ಪುತ್ತಾನೆ; ಮೋಕ್ಷಾಧಿಕಾರವು ವರ್ಣಾಶ್ರಮಾತೀತವೆಂದೂ ಮುಮುಕ್ಷುಗಳೆಲ್ಲರಿಗೂ ಉಂಟೆಂದೂ ಅಲ್ಲಿ ಹೇಳಿರುವುದನ್ನೆಲ್ಲಾ ಬದ್ಧನೂ ಸಾರವಿಸುತ್ತಾನೆ. ಉಪನಿಷತ್ತುಗಳಲ್ಲಿ ಮೋಕ್ಷ ಸಾಧನೆಗಾಗಿ ಉಕ್ತವಾಗಿರುವ ಜ್ಞಾನಮಾರ್ಗಕ್ಕೆ ಬುದ್ಧನೂ ತನ್ನ ಅನುಭವದಿಂದ ಸಮರ್ಥನೆಯನ್ನೇ ಒದಗಿಸುತ್ತಾನೆ. ಆದರೆ ಬುದ್ಧನ ಕಾಲದಲ್ಲಿ ನೋಕ್ಷವೆಂದರೆ ಬ್ರಹ್ಮಜ್ಞಾನ; ಬ್ರಹ್ಮಜ್ಞಾನವೆಂದರೆ ಆತ್ಮಜ್ಞಾನ; ಆತ್ಮಜ್ಞಾನಕ್ಕೆ ಯೋಗಾದಿ ಸಾಧನೆಗಳು ಆವಶ್ಯಕ, ಇವೇ ಮುಂತಾಗಿ ಉಕ್ತವಾಗಿದ್ದ ಮುಖ್ಯ ವಿಚಾರಸರಣಿಯೂ ಸಹ ಆತ್ಮನೆಂದರೆ ಮನುಷ್ಯನ ದೇಹದೊಳಗಿರುವ ಒಂದು ಸಾಕಾರ—ಆದರ ಅಳತೆ ಇಷ್ಟೆಂದು ಗೊತ್ತಿರುವ ವಿಚಾರ ಸರಣಿಯೂ ಇತ್ತು—ಅಥವಾ ಸೋವಧಿಕ ವಸ್ತುವೆಂಬ ಸಂಕುಚಿತ ಅರ್ಥದಲ್ಲಿ ಜನಸಾಮಾನ್ಯರಲ್ಲಿ ಪ್ರಚಾರಕ್ಕೆ ಬಂದು, ಅದರ ಸಾಧನೆಗೆ ಲೋಕ ಕಲ್ಯಾಣವನ್ನು ಕೈಬಿಟ್ಟು ಸಂನ್ಯಾಸವನ್ನವಲಂಬಿಸುವುದು ಅನಿವಾರ್ಯ

(ಮುಂದೆ ಪುಟ ನೋಡಿರಿ)

ಬಿಲ್ಡಿಂಗ್ ಇಂಜಿನಿಯರು ನಿರ್ದಿಷ್ಟವಾಗಿ ಹೇಳುತ್ತಾರೆ—

ಎಣೆಯಿಲ್ಲದ ಖಾತರಿಗೆ
ಚಾಮುಂಡಿ ಸಿಮೆಂಟ್

ರೋಲ್ಡ್ ಸ್ಟೈಲ್ ಸ್ಟೀಲ್ ಸೆಕ್ಷನ್ನುಗಳು
ರೌಂಡ್ಸ್—ಸ್ಕ್ವೇರುಗಳು
ಫ್ಲಾಟ್ಸ್—ಆ್ಯಂಗಲ್ಸ್
ಹೂಪ್ಸ್ ಮತ್ತು ಸ್ಟ್ರಿಪ್‌ಗಳು

ಬಳಕೆಯ ಎಲ್ಲಾ ಸೈಜುಗಳಲ್ಲಿಯೂ ದೊರೆಯುತ್ತವೆ.

ನಿಮ್ಮ ಕಟ್ಟಡ ರಚನೆಗೆ ಮೈಸೂರು ಉಕ್ಕು ಮತ್ತು ಚಾಮುಂಡಿ ಸಿಮೆಂಟ್ ಉಪಯೋಗಿಸುವುದು ಅವಶ್ಯಕವೆಂಬುದನ್ನು ಅನಕ್ಕೆ ಇರುವ ಬೇಡಿಕೆ ನಿರೂಪಿಸಿಸುತ್ತದೆ.

ಮೈಸೂರು
ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ
ಭದ್ರಾವತಿ (ಸದರನ್ ರೈಲ್ವೆ)

ಶ್ರೀದಿ ಕಿಲ್ಲೆಯವರ ಪುಸ್ತಕಗಳು

ಪ್ರಾಚೀನ ತುಳುನಾಡು
(ಎನ್. ಎಸ್. ಕಿಲ್ಲೆ ಮತ್ತು ಎನ್. ಎ ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.
150 ಪುಟಗಳು. ದಿಳಿ ಕಾಗದ, ಅಕರ್ಷಕ ರಕ್ಷಾ ಪತ್ರ ಬೆಲೆ 2-0-0

ಭಾರತದ ಕರ್ಣ
ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0.

ಮುರಲಿ
ಮೇಲ್ಕರೆಗತಿಯ ಕವಿತೆಗಳ ಸಂಗ್ರಹ.
ಬೆಲೆ: 0-12-0.

ಮೂರೂ ಪುಸ್ತಕಗಳನ್ನು ದಿ| ಕಿಲ್ಲೆಯವರ ಧರ್ಮಪತ್ನಿ ಇಂದಿರಾ ಕಿಲ್ಲೆ, ಅವರು ಪ್ರಕಟಿಸಿದ್ದಾರೆ.

ನಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:

ನವಭಾರತ ಪುಸ್ತಕ ಭಂಡಾರ ಉಡುಪಿ.

ಭಾರತ ಸೇವಕ ಸಮಾಜದ ಚಟುವಟಿಕೆಗಳು

ಜನಸೇವೆಯ ಸದಪಕಾರವನ್ನು ಒದಗಿಸಿಕೊಟ್ಟು ಪ್ರಜಾಪ್ರಭುತ್ವವಲ್ಲಿ ಸ್ಥಳೀಯ ಆವಶ್ಯಕತೆಗಳನ್ನು ಅಲ್ಲಲ್ಲಿಯ ಸಾಧನಸ್ರೋತದಿಂದಲೇ ಪೂರೈಸಿ ಕೊಳ್ಳುವುದೇ ಈ ಸಮಾಜದ ಸಾಪನ.

ಬರೆದವರು: ಶ್ರೀ ಎಫ್. ದಾಂತಿ

ಪ್ರಜಾಪ್ರಭುತ್ವದ ಸಫಲತೆಯು ಆ ದೇಶದ ಜನರು ಪ್ರಜಾಪ್ರಭುತ್ವವನ್ನು ಎಷ್ಟು ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಾರೋ ಮತ್ತು ಎಷ್ಟು ಹೆಚ್ಚಾಗಿ ಪ್ರಜಾಹಿತಕ್ಕಾಗಿ ದುಡಿಯುತ್ತಾರೋ ಅದರ ಮೇಲೆ ಹೊಂದಿಕೊಂಡಿರುತ್ತದೆ. ಜನರು ರಾಜಕಾರಣಕ್ಕೆ ಎಷ್ಟು ಗಮನವನ್ನು ಕೊಡುತ್ತಾರೋ ಅಷ್ಟೇ ಹೆಚ್ಚಾಗಿ ಜನತಾ ಸೇವೆಗೂ ಲಕ್ಷ್ಯವನ್ನೂ ಕೊಡಬೇಕಾಗುತ್ತದೆ. ಹಾಗಿದ್ದರೆ ಮಾತ್ರ ಅಂತಹ ರಾಜಕಾರಣದಿಂದ ಜನರಿಗೆ ಪ್ರಯೋಜನವಾಗುತ್ತದೆ

ರಾಜಕೀಯವು ದ್ವೇಷಾಸೂಯೆ ಭಾವನೆಗಳಿಂದಲೂ ಜಾತಿ-ವರ್ಗಗಳ ಕಲಹಗಳಿಂದಲೂ ಯೋಜನ ದೂರದಲ್ಲಿದ್ದರೆ ದೇಶದ ರಾಜಕೀಯ ಕ್ಷೇತ್ರವೂ ಜನ ಜೀವನವೂ ನಿರ್ಮಲವಾಗತ್ತದೆ. ದೇಶವು ಆರೋಗ್ಯದಲ್ಲಿರುತ್ತದೆ. ಯಾವುದೇ ರಾಜಕೀಯ ಪಕ್ಷವಿರಲಿ ಆದು ಆ ದೇಶದ ಅಭಿವೃದ್ಧಿಯನ್ನು ಸಾಧಿಸುವ ಕಡೆಗೆ ಕೆಲವ್ಯವನ್ನು ತಾಳಿ ಕೇವಲ ಸ್ವಾರ್ಥ ಸಂಕುಚಿತತೆಗಳಿಂದ ಪಣತ್ಯಿಳಿದರೆ ಅದು ದೇಶದ ಅವನತಿಗೆ ಯತ್ನಿಸಿದಂತಾಗುತ್ತದೆ. ಯಾವ ಜಾತಿಯೇ ಆಗಲಿ, ದೇಶದ ಹಿತಕ್ಕಾಗಿ ದುಡಿಯುವ ನಾವೆಲ್ಲರೂ ಒಂದೇ ಜಾತಿ ಎಂಬ ಭಾವನೆ ಕೂಡಾ ಬಹು ಮುಖ್ಯವಾದುದು. ಭಿನ್ನಭಾವಗಳನ್ನು ದ್ವೇಷಾಸೂಯೆಗಳನ್ನು ಮರೆತು ಕೇವಲ ದೇಶದ ಹಿತದೃಷ್ಟಿಯಿಂದ ದುಡಿಯುವ ನಿಷ್ಠೆಗಾಗಲೀ ಸಂಸ್ಥೆಗಾಗಲೀ ಅಂತಹ ಮನೋವೃತ್ತಿಯ ಸ್ಥಾನ ಸಲಬೇಕಾದುದು ಅತ್ಯವಶ್ಯಕ. ಯಾವುದೇ ವಿಧದಾದ ರಚನಾತ್ಮಕ ಚಟುವಟಿಕೆಯನ್ನು ದೇಶದ ಹಿತದೃಷ್ಟಿಯಿಂದ ಮುಂದರಿಸಿಕೊಂಡು ಸಾಗಿಸಿಕೊಂಡು ಹೋಗುವ ಜನ ದೇಶಕ್ಕೆಂದು ಬಹು ಸಂಖ್ಯೆಯಲ್ಲಿ ಬೇಕಾಗಿದ್ದಾರೆ. ಆದಕ್ಕಾಗಿ ಪಂಡಿತ ಜವಾಹರಲಾಲ ನೆಹರು ಗಳು 1952ನೇ ಇಸವಿಯಲ್ಲಿ ಭಾರತ ಸೇವಕ ಸಮಾಜವೆಂಬ ಸಂಸ್ಥೆಯೊಂದನ್ನು ಸ್ಥಾಪಿಸಿದರು.

ಮೊನ್ನೆ ಮೊನ್ನೆಯ ವರೆಗೆ ಈ ಭಾರತ ಸೇವಕ ಸಮಾಜದ ಕಾರ್ಯ ಚಟುವಟಿಕೆಗಳು ಕನ್ನಡ ನಾಡಿನಲ್ಲಿ ಹೆಚ್ಚಾಗಿರಲಿಲ್ಲ. ಮೇಜರ್ ಟಿ. ರಾಮಚಂದ್ರನ್‌ರವರು ಭಾರತ ಸೇವಕ ಸಮಾಜದ ತಿಬಿರಾಂಗದ ಮುಖ್ಯ ಅಧಿಕಾರವನ್ನು ವಹಿಸಿಕೊಂಡಂದಿನಿಂದ ಭಾರತ ಸೇವಕ ಸಮಾಜದ ಚಟುವಟಿಕೆಗಳು ದಕ್ಷಿಣ ಭಾರತದಲ್ಲಿ ಕೂಡಾ ಬಹಳವಾಗಿ ಜರಗುತ್ತಿವೆ. ಮೇಜರ್ ಟಿ. ರಾಮಚಂದ್ರನ್‌ರವರು ತನ್ನ ಸರಳತೆ, ಕರ್ತವ್ಯ ದಕ್ಷತೆಗಳಿಂದ ಈ ಸಮಾಜದ ಎಲ್ಲರ ಆಕರ್ಷಣೆಯ ಕೇಂದ್ರವಾಗಿರುತ್ತಾರೆ. ಇವರನ್ನು "ಎರಡನೇ ಗಾಂಧೀ" ಯೆಂದೇ ಸಂಭೋದಿಸುವುದರಿಂದ ಈ ವ್ಯಕ್ತಿಯ ಪರಿಚಯವನ್ನು ಸಾಕಷ್ಟು ಮಾಡಿಕೊಟ್ಟಂತಾಗುವುದು. ಅತ್ಯುಚ್ಚ ಪದವಿಯಲ್ಲಿದ್ದ ಈ ವ್ಯಕ್ತಿಯು ತನ್ನ ಸರ್ವಸ್ವವನ್ನೂ ದೇಶ ಸೇವೆಗೆ ಮುಡುಪಾಗಿರಿಸಿ ಭಾರತ ಸೇವಕ ಸಮಾಜದಲ್ಲಿ ದೀಕ್ಷಾಬದ್ಧರಾಗಿ ದೇಶ ಸೇವೆಯನ್ನು ಸಲ್ಲಿಸುತ್ತಿರುವರು ಎಲೆಮರೆಯ ಕಾಯಿಯಾಗಿ ಇನ್ನೂ ಅನೇಕ ಮಹಾಪುರುಷರು ನಮ್ಮ ದೇಶದಲ್ಲಿ ಸೇವೆ ಸಲ್ಲಿಸುತ್ತಲಿದ್ದಾರೆ ಎಂಬುದಕ್ಕೆ ಮೇಜರ್ ಟಿ. ರಾಮಚಂದ್ರನ್‌ರವರು ಒಳ್ಳೆಯ ನಿದರ್ಶನ.

"ತಿಣಿಕೆದನು ಫಣಿರಾಯ ನಮ್ಮಯ ಸಂಘ ಸಂಸ್ಥೆಯು ಸಂಖ್ಯೆಯಿಂದಲಿ" ಎಂಬಂತೆ ನೂರಾರು ಸಂಘ ಸಂಸ್ಥೆಗಳಿದ್ದಾಗ ಇದೊಂದು ಹೊಸತು ಏಕೆ? ಅಥವಾ ಇದು ಸಾಧಿಸುವಂತಹುದಾದರೂ ಏನು? ಎಂದು ಜನ ಕೇಳುವುದು ಸಹಜವೇ. ಒಂದು ದೃಷ್ಟಿಯಲ್ಲಿ ನೋಡುವುದಿದ್ದರೆ ಈ ಸಂಸ್ಥೆಯೇನೂ ನವೀನ ಸೃಷ್ಟಿಯಲ್ಲ. ಸಮೆಂಟ್ಸ್ ಆಫ್ ಇಂಡಿಯಾ ಸೋಸೈಟಿ, ರಾಷ್ಟ್ರೀಯ ಸೇವಾದಳ, ಮೊದಲಾದ ಸಂಸ್ಥೆಗಳಲ್ಲಿರುವ ಹಲವು ವಿಚಾರಗಳಿಗೂ ಈ ಭಾರತ ಸೇವಕ ಸಮಾಜಕ್ಕೂ ಹೊಂದಿಕೆಯಿದೆ. ಹಾಗೆಯೇ ಕಾಲಕ್ಕನುಗುಣವಾದ ಸ್ವಲ್ಪ ವ್ಯತ್ಯಾಸವೂ ಇದೆ. ದೇಶದ ಪ್ರಗತಿಯ ಯಾವುದೇ ಕಾರ್ಯವನ್ನು ಸೇವಾ ದೃಷ್ಟಿಯಿಂದ ಮಾಡಲು ಮುಂದೆ ಬರುವ ಜನರ ಸಂಸ್ಥೆಯೇ ಭಾರತ ಸೇವಕ ಸಮಾಜ. ನಮ್ಮ ದೇಶದ ಅಭಿವೃದ್ಧಿಗಾಗಿ ದೇಶದ ಮುಂದಿಟ್ಟಿರುವ ಪಂಚವಾರ್ಷಿಕ ಯೋಜನೆಯು ದೇಶದ ಅಭಿವೃದ್ಧಿಯ ಕಡೆಗೆ ಇಟ್ಟ ಬಹು ದೊಡ್ಡ ಹೆಜ್ಜೆ. ಈ ಯೋಜನೆಯ ಸಫಲತೆಯ ವಿಚಾರಯಕ ಸಹಕಾರವು ಅತ್ಯಾವಶ್ಯಕವಾಗಿದೆ. ಯಾವುದೇ ಯೋಜನೆಯಾಗಲಿ, ದೇಶವು ಆ ಕುರಿತು ಅಸ್ಥಿ ವಹಿಸದಿದ್ದರೆ ಅದರಿಂದೇನೂ ಮಹತ್ವನ್ನು ಸಾಧಿಸಿದಂತಾಗುವುದಿಲ್ಲ. ಪಂಚವಾರ್ಷಿಕ ಯೋಜನೆಯ ಕಡೆಗೆ ಜನರು ಹೆಚ್ಚು ಹೆಚ್ಚಾಗಿ ಗಮನ ಕೊಡುವಂತೆಯೂ, ಪಂಚವಾರ್ಷಿಕ ಯೋಜನೆಯೊಳಗೆ ಸೇರ್ಪಡೆಯಾಗಿದ್ದ ಸ್ಥಳೀಕ ಆವಶ್ಯಕತೆಗಳಲ್ಲಿ ಸಾಧ್ಯವಾದಷ್ಟನ್ನು ಸ್ಥಳೀಕ ಜನರ ನೆರವಿನಿಂದಲೇ ಒದಗಿಸಿಕೊಳ್ಳುವಂತೆಯೂ ನಿಸ್ವಾರ್ಥ ದೃಷ್ಟಿಯಿಂದ ದುಡಿಯಲು ಭಾರತ ಸೇವಕ ಸಮಾಜವು ಯತ್ನಿಸಬೇಕೆಂಬುದೇ ಈ ಸಮಾಜದ ಮುಂದಿರುವ ಮುಖ್ಯ ಧ್ಯೇಯ.

ಉಲ್ಲೇಖನೀಯವಾದ ವೈಶಿಷ್ಟ್ಯವೆಂದರೆ ಈ ಸಮಾಜಕ್ಕೆ ಯಾವ ಪಕ್ಷವನ್ನೂ

(ಎರಡನೇ ಪುಟ ನೋಡಿರಿ)

ನಾನಾ ಮುಖದಿಂದ ಬೆಳೆಯುತ್ತಿರುವ ಉಡುಪಿಯ
ಅಂತಸ್ತಿಗೆ ತಕ್ಕಂತೆ ವಸತಿಗೃಹ

ನಿಯೋ ರೋಯಲ್ ಕೆಫೆ

ವ್ಯವಹಾರ ಕೇಂದ್ರಗಳಿಗೂ ದೇವಸ್ಥಾನಕ್ಕೂ ಹತ್ತಿರವಾಗಿ,
ಬಸ್ ಸ್ಟೇಂಡಿನಿಂದ ಕೆಲವೇ ಯಾರ್ಡುಗಳ ದೂರದಲ್ಲಿದೆ.

- ಉತ್ತಮ ಕಾಫಿ ತಿಂಡಿಗಳು, ಥಂಡಾ ಪಾನೀಯಗಳು.
- ಶುಚಿಯಾಗಿರುವ ಸುಸಜ್ಜಿತ ಕೊಠಡಿಗಳು.
- ಅಭ್ಯಾಗತರ ಮನವೊಪ್ಪುವಂಥ ಊಟದ ವ್ಯವಸ್ಥೆ.

ಲೈಫ್ ಇನ್ಶೂರೆನ್ಸ್ ಕಾರ್ಪೊರೇಶನ್ ಆಫ್ ಇಂಡಿಯಾದ ದಿನಿಜನಲ್ ಕಚೇರಿಯ ಪರಿವಾರದವರಲ್ಲೂ, ಮುಸ್ಲಿಫ್ ಕೋರ್ಟಿನ ನವಾಬರವರಲ್ಲೂ ಎರಡು ಕ್ಯಾಂಟೀನುಗಳು ನಮ್ಮ ಮೇಲ್ವಿಚಾರಣೆಯಲ್ಲಿಯೇ ಜನಪ್ರಿಯವಾಗಿ ನಡೆಸಲ್ಪಡುತ್ತಿವೆ.

ಪ್ರೊಪ್ರೈಟರ್:- ಯಂ. ನರಸಿಂಹ ಭಟ್ಟ.

NEO ROYAL CAFE, UDIPI, S. K.

ವೇಳೆ
(Opportunity)

****

ನಾನೊಂದೆ ಸಲ ಬರುವೆಂ ಕದತಟ್ಟಿ ನೀನೊಳಗೆ
ಇಲ್ಲದಿರೆ ತೊಲಗಿದಪೆ, ಮತ್ತೆ ನಾ ಮರಳೆ
ನೆಂಬರಿಯರೆನ್ನ, ನಿನ್ನ ಬಾಗಿಲ ಬಳಿಗೆ
ಬಂದು ದಿನದಿನ ನಿನ್ನನೆಚ್ಚರಿಪೆ ಮರುಳೆ!
ಏಳೆಂಬೆ ನಿನಗೆದ್ದು ಕಾದೆಂಬೆ, ಗೆಲ್ಲೆಂಬೆ,
ಕಳೆದ ಸಂದರ್ಭಗಳಿಗಿಸ್ಸಳಲ ಬೇಡ!
ಗೆಳೆಯ, ದಿನಚರಿಯಂ ಬರೆದೆನ್ನ ಕಡತಂ ತುಂಬೆ,
ಸುಟ್ಟುಳಿ ಬೂದಿಸುವನೆದ ನಿರುಳರುಳೆ ನೋಡ!
ಕೊಡುವೆನಿದೊ—ಕೊರಗದಿರು ಕುಸಿದೆಂದು ಕೆಸರೊಳಗೆ—
ತಾನಾವೆನೆಂಬ ಸಾಧಕಗೆನ್ನ ಶಕ್ತಿ;
ಅನಿತುಂ ನಾಣ್ಚೆಡುಕನಕಟೆಹನೆ, ತಾನಿತಿಮುಳುಗೆ
ಮೇಲೆದ್ದು ಮತ್ತೆ ನರನೆನ್ನಿಸದ ವ್ಯಕ್ತಿ?
ಹೊತ್ತುದಿಸುವೊಂದಿಗೆ ಪ್ರತಿದಿನಂ ಪ್ರತಿನರಂ
ಮರಳಿ ಹುಟ್ಟುವನದುವೆ ಪ್ರಕೃತಿಯೇರ್ಪಾಟು;
ಕಾಲನಾತ್ಮಜೆಯೆನ್ನ ಕರೆಗೆ ಬರುವನಿಬರಂ
ಗೆಲಿಸೆ ಸಹಚರಿಪೆನವೆ ನೆನ್ನಿಸಿ ಪರಿಪಾಟ.
ನರರನೆನ್ನಯ ಕರೆಗೆ ಕಿವುಡಿಸುವ ದೈವ
ದೊಡನಾದರೆನಗೆ ಜಗಳಾಟವೆ ಸದೈವ.

ಗೋವಿಂದ ಪೈ.

೧ ಅವಕಾಶ ನಿಮ್ಮ ಬಾಗಿಲ ಬಡಿಯುತ್ತದೆ (Opportunity knocks but once) ಎಂಬ ಇಂಗ್ಲೀಷು ನಾಣ್ಣುಡಿಗೆ ಈ ಕವಿತೆ ಪ್ರತ್ಯುತ್ತರ. ೨ ದಿನಚರಿ=ದಿನಂಪ್ರತಿಯ ಕೆಲಸಗಳನ್ನು ಬರೆದಿಡುವಿಕೆ, ಅಥವಾ ಅವನ್ನು ಬರೆದಿಡುವ ಪುಸ್ತಕ (ಡಾಳಿಗದ ಪುಸ್ತಕ) ೩ ಕಡತ=ಲೆಕ್ಕ ಬರೆದಿಡುವ ಬಹಳ ಹಳೆಯ ಮಾದರಿಯ ಪುಸ್ತಕ. ೪ ಬೂದಿಸು=ಬೂದಿ ಮಾಡು. ೫ ನಾಣ್ಚೆಡುಕ=ನಾಚಿಕೆ ಇಲ್ಲದಾತ, ಲಜ್ಜಾಹೀನ. ೬ ಪರಿಪಾಟಿ=ಕ್ರಮ, ಪದ್ಧತಿ. ೭ ಸದೈವಜಯವಾಗಲಿ.

ಸಂತಕವಿ-ಕಬೀರದಾಸ

ಕಬೀರನಿಂದ ಹಿಂದೀ ಸಾಹಿತ್ಯ ಸಮೃದ್ಧವಾಯಿತು, ನಿಜ ಅದಕ್ಕಿಂತ ಹೆಚ್ಚಾಗಿ ಹಿಂದುಸ್ತಾನದ ಜನರಲ್ಲಿ ಜಾಗೃತಿ ಹುಟ್ಟಿಕೊಂಡಿತು. ಅತನು ಡಂಭಾಚಾರದ ವಿರುದ್ಧ ಹಿರಿದ ಬಾಣದ ಅಲಗು ಇಂದಿಗೂ ಹರಿತವಿದೆ, ಎಂದೇ ಅತನ ಸೇವೆ ಸ್ತುತ್ಯಾರ್ಹ!

ಬರೆದವರು: ಶ್ರೀ ಬಿ. ಆರ್. ಕುಲಕರ್ಣಿ.

ಕಬೀರದಾಸರು ನಿಜವಾದ ಸಾಕ್ಷಾತ್ಕಾರಗಳಾದುದರಿಂದ ಅವರ ವಾಣಿಯಲ್ಲಿ ಆಧ್ಯಾತ್ಮಿಕ ಬಲವು ತುಂಬಿ ತುಳುಕುತ್ತದೆ. ಅವರ ಕಾರ್ಯದಿಂದ ಸಮಾಜ ಸುಧಾರಣೆಯೂ ಆದುದಂಟು ಸರ್ವಧರ್ಮ ಸಮನ್ವಯ—ಅದರಲ್ಲಿಯೂ ಹಿಂದು—ಮುಸ್ಲಿಮರ ಐಕ್ಯ ಅವರ ಬರವಣಿಗೆಯಲ್ಲಿ ಎದ್ದು ಕಾಣುತ್ತದೆ. ದ್ವೈತ ಅದ್ವೈತ, ಸಗುಣ—ನಿರ್ಗುಣ, ಭಕ್ತಿ—ಜ್ಞಾನ ಜ್ಞಾನ-ಕರ್ಮ ಇವೇ ಮೊದಲಾದ ದ್ವಂದ್ವಗಳ ಸಮನ್ವಯಕ್ಕಾಗಿ ಕಬೀರದಾಸರು ಶ್ರಮಿಸಿದ್ದಾರೆ. ಎಲ್ಲೆಡೆಯಲ್ಲಿ ಅವರಿಗೆ ಸಾಮರಸ್ಯ ಬೇಕು. ಹಿಂದು-ಮುಸ್ಲಿಮ ಧರ್ಮಗಳ ನೈತಿಕ, ಧಾರ್ಮಿಕ ಮೂಲ ಭೂತ ತತ್ವಗಳ ಐಕ್ಯವನ್ನು ಸಾರಿ ಪರಸ್ಪರ ಸ್ನೇಹ ಭಾವನೆ, ಬಂಧು ಭಾವನೆಯನ್ನು ಬೆಳೆಯಿಸಿದ ಆದ್ಯ ಪ್ರಯತ್ನ ಕಬೀರದಾಸರದು. ಅನೇಕ ಮತ ಪಂಗಡಗಳ ತತ್ವಗಳ ಭಿನ್ನತೆ ಕೇವಲ ಹೊರಗಣ ರೂಪದಲ್ಲಿಯೇ ಕಂಡುಬರುವುದೆಂದೆ ಅವುಗಳ ಸಾರದಲ್ಲಿ ಅಲ್ಲ. ಈ ಕಬೀರದಾಸರ ವಿಚಾರವು ದೊಡ್ಡ ತತ್ವವನ್ನು ಜಗವನ್ನೊಂದುಗೂಡಿಸುವ ಮುಂದಾಳುಗಳ ಮುಂದಿಟ್ಟಿದೆ. ಮಾನವತೆಯನ್ನು ಒಂದುಗೂಡಿಸಲು ಕೇವಲ ವಿಜ್ಞಾನ ರಾಜನೀತಿ, ಮಾನಸ ಶಾಸ್ತ್ರ ಇಲ್ಲವೆ ನೀತಿ ಶಾಸ್ತ್ರ ಇವೆಲ್ಲ ಸಾಲವು. ಮಾನವೈಕ್ಯತೆಯ ಮಂದಿರವು ಅಧ್ಯಾತ್ಮದ ತಳಹದಿಯ ಮೇಲೆಯೇ ಇರಬೇಕು. ಇಂಥ ವಿಚಾರದ ಓಘವನ್ನು ನಾವು ಕಬೀರಂದಾರ್‌ಲ್ಲಿ ಕಾಣುವೆವು.

ಭಾಷೆಯ ಮೇಲೂ ಕಬೀರದಾಸರ ಪ್ರಭುತ್ವ ಕಂಡುಬರುತ್ತದೆ. ಇವರ ಕಟುಟೀಕೆಯಿಂದ ಡಾಂಭಿಕ ಪಂಡಿತ, ಕಾಜಿ, ಅವಧೂತ, ಜೋಗಿ, ಮುಲ್ಲಾ ಹಾಗೂ ಮೌಲವಿ ಇವರಾರೇ ಆಗಲಿ ಪಾರಾಗಿಲ್ಲ. ಇವರ ವ್ಯಕ್ತಿತ್ವವನ್ನು ಇವರ ಕೃತಿಗಳೆಲ್ಲ ದಿಟ್ಟಿ ನೋಡಬಹುದು. ಆದೇಕೆ" ಪ್ರತಿಯೊಂದು ಕೃತಿಯಲ್ಲಿ ತಮ್ಮ ವ್ಯಕ್ತಿತ್ವವನ್ನು ವ್ಯಕ್ತಗೊಳಿಸುವ ಕಬೀರರಂಥ ಬರಹಗಾರರು ಹಿಂದೀ ಸಾಹಿತ್ಯದಲ್ಲಿ ವಿರಳರೆಂದು ಹೇಳಬಹುದು. ಜಾತಿ, ಕುಲ, ಆಚಾರ, ಸಂಸ್ಕಾರ ಮೊದಲಾದ ಕೇಳು ಬಂಧನಗಳಿಂದ ದೂರಾಗಿ ಬೇವನಲ್ಲಿ ಅವಿಚಲ, ಅಖಂಡ ವಿಶ್ವಾಸವನ್ನಿಡುವುದೇ ಬಾಳುವೆಯ ಪರಮಪ್ರಾಪ್ತಿ ಎಂದು ಬೋಧಿಸಿದ ಶ್ರೇಯಸ್ಸು ಕಬೀರದಾಸರಿಗಿದೆ. ಕಬೀರದಾಸರ ಕೃತಿಗಳಲ್ಲಿ ಕಾವ್ಯಾಲಂಕಾರ ಸೌಂದರ್ಯವಿಲ್ಲ. ಮೃದು ವಚನವಿಲ್ಲ; ಕೆಲವೆಡೆಗಳಲ್ಲಿಯಂತೂ ಛಂದಸ್ಸು, ವ್ಯಾಕರಣ, ಶಾಸ್ತ್ರಸಮ್ಮತ ಶಬ್ದ ಪ್ರಯೋಗ ಇವೇ ಮೊದಲಾದವುಗಳೆಲ್ಲವಾದುದರಿಂದ ಅವರು ಕವಿಗಳು ಹೇಗೆ ಎಂದು ಕೆಲವರ ಸಂದೇಹವಿದೆ. ಆದರೆ ಕವಿತ್ವವು ಕೇವಲ ನಯವಾದ ಭಾಷಾ ಸೌಂದರ್ಯದಲ್ಲಿಲ್ಲ. ವ್ಯಾಕರಣಬದ್ಧವಾಗಿ ಬರೆಯುವುದರಲ್ಲಲ್ಲ. ಇನ್ನಾರಿಗೂ ತಿಳಿಯದಿರುವ ಶೈಲಿಯಲ್ಲಿ ಉದ್ದೇಶ ಬರೆಯುವುದಲ್ಲಿಲ್ಲ; ಅಂತರ್ದೀಪ್ತಿಯನ್ನೋ, ಸಂಧ್ಯಾ ರಾಗವನ್ನೋ, ಸಾಗರದ—ಏರಿಳಿತಗಳನ್ನೋ, ಪ್ರೇಮತರಂಗಗಳಂತೆ ತರುಣ ತರುಣಿಯರ ನೈರಾಶ್ಯವನ್ನೋ ಕಂಡು ಭಾವೋದ್ರೇಕವಾಗಿ ಶಬ್ದಗಳ ಝರಿಯಿಂದ ಅವನ್ನು ಹೊರ ಚಿಮ್ಮುವುದರಲ್ಲಲ್ಲ. ತಮ್ಮ ಅನುಭವಾನಂದದಿಂದ ಗೂಢ ಅನೇಕ ತತ್ವಗಳನ್ನು ಸಾಧಕರಿಗೆ ಬೋಧಿಸಲೆಂದೇ ಕಬೀರದಾಸರು ಕವನಗಳನ್ನು ರಚಿಸಿದ್ದಾರೆ. ಅವರ ಕವನಗಳಲ್ಲಿ ಅಲ್ಲಲ್ಲಿ ಕಂಡುಬರುವ ಅನೇಕ ದೋಷಗಳು ಅವರ ಕಾವ್ಯಗುಣಕ್ಕೆ ಕುಂದು ತರಲಾರವು. ಅವರ ಕವನಗಳಲ್ಲಿ ಕಂಡುಬರುವ ಅನೇಕ ದೋಷಗಳು ಅವರ ಕಾವ್ಯಗುಣಕ್ಕೆ ಕುಂದು ತರಲಾರವು. ಅವರ ಕವನಗಳಲ್ಲಿ ಕಂಡುಬರುವ ಅನೇಕ ದೋಷಗಳು ಅವರ ಕಾವ್ಯಗುಣಕ್ಕೆ ಕುಂದು ತರಲಾರವು.

ಪರತತ್ವದ ನಿರೂಪಣೆಯಲ್ಲಿ ಕಬೀರರು ರಾಮ, ರಹೀಮ, ಅಲ್ಲಾ, ಸತ್ ನಾಮ, ಗೋಬ್ಯಂದ, ಸಾಹಬ ಇತ್ಯಾದಿ ಅನೇಕ ಶಬ್ದಗಳನ್ನು ಪ್ರಯೋಗಿಸಿದ್ದಾರೆ. ತತ್ವಜ್ಞಾನ ಸೀಮೆಗಲ್ಲದ ಪರತತ್ವ ವಿವೇಚನೆಯಲ್ಲಿ ಶಬ್ದ ಪ್ರಯೋಗಗಳ ಅತ್ಯಂತ ಶುದ್ಧತೆ ಹಾಗೂ ಎಚ್ಚರಿಕೆ ಇವು ಆತ್ಯವಶ್ಯ. ಆದರೆ ಇವನ್ನು ಕಬೀರರಲ್ಲಿ ಕಾಣುವುದು ಸ್ವಲ್ಪ ಕಷ್ಟ. ಯಾಕೆಂದರೆ ಅವರ ತಾತ್ವಿಕತೆಯು ಅಧ್ಯಯನದ ಫಲವಲ್ಲ. ಪರವಸ್ತುವಿನ ಸತತ ಅನುಸಂಧಾನದ—ಅನುಭವದ—ಆತ್ಮ ಸಾಕ್ಷಾತ್ಕಾರದ ಪ್ರಸಾದ. ಆದುದರಿಂದ ಇವರ ಕೃತಿಗಳಲ್ಲಿ ಕಂಡು ಬರುವ ಅನೇಕ ದೇದೀಪ್ಯ ಜ್ಯೋತಿಗಳು ಬುದ್ಧಿಗಮ್ಯಗಳಲ್ಲ ಅನುಭವಜನ್ಯಗಳು. ಇವರ ಕೆಲವು ಪದ್ಯಗಳಂತೂ ಪ್ರತ್ಯಕ್ಷವಾಗಿ ಕಂಡ ಸ್ವಪ್ರತೀತಿಯ ಪ್ರತೀಕಗಳೇ ಆಗಿವೆ.

ಈ ಜಗದಲ್ಲಿ ತೋರುವ ವಸ್ತುಗಳೆಲ್ಲವೂ ಕ್ಷಣಿಕವಾಗಿವೆ. ಇವೆ—ಇವೆ ಎನ್ನುವಷ್ಟರಲ್ಲಿ ಇಲ್ಲವಾಗುತ್ತವೆ ದಿಗಂತವಿಟ್ಟುಸಿರಾತ್ತುಂಗ ಪರ್ವತವೂ ಕೂಡಕಾಲನ ಕೊಡೆತದಿಂದ ಕುಸಿದು ಬಿದ್ದು ಆಗಿಲ್ಲದೆ ದರಿಯಾಗಿ ಪರಿಣಮಿಸಬಹುದು. ಚಂದ್ರ ಸೂರ್ಯ ತಾರಾ ಮಂಡಲವೇ ಸ್ಥಿರವಿದ್ದಿರುವಾಗ ಶಾಶ್ವತತೆಯನ್ನು ಈ ನಶ್ವರ ವಿಶ್ವದಲ್ಲಿ ಕಾಣಬಹುದು? ಮಾಯೆ, ಕ್ಷಣಭಂಗುರತೆ, ಕುಬೇರನೂ ಕೂಡ ಕ್ಷಣಾರ್ಧದಲ್ಲಿ ತಿರುಕನಾಗುವುದು, ಏಕಚಕ್ರಾಧಿಪತ್ಯವುಳ್ಳ ನೆಪೋಲಿಯನ್ನೂ ಕೂಡ ಕ್ಷಣ ಬಂದರಲ್ಲಿ ಎಲ್ಲಕ್ಕೂ ಎರವಾಗುವುದು ಇವೇ ಮೊದಲಾದ ಜಗದ ವೈಚಿತ್ರ್ಯಗಳೆ. ನೈತಿಕ ಹಾಗೂ ಆಧ್ಯಾತ್ಮಿಕ ಪಥದತ್ತ ಮಾನವನನ್ನು ಎಳೆಯುತ್ತವೆ. ಈ ವಿನಾಶದ ಜಗದಲ್ಲಿ ಒಂದೇ ಸತ್ಯ ತತ್ವವಿದೆ ಅದೆಂದರೆ ರಾಮ.

ಬ್ರಹ್ಮ ಒಂದೇ ಜಗತ್ತಿನಲ್ಲಿ ಸತ್ಯ. ಬ್ರಹ್ಮನಲ್ಲದೆ ಬೇರಾವ ಸತ್ಯವೂ ಇಲ್ಲ. ಪ್ರಪಂಚದಲ್ಲಿ ಬ್ರಹ್ಮದಿಂದಲೇ ಹುಟ್ಟಿ ಅದರಲ್ಲಿಯೇ ಲಯವಾಗುತ್ತದೆ.

"ಪಾನೀ ತೇ ಹಿಮ ಹಿಮು ಭಯಾ, ಹಿಮು ಪೈ ಗಯಾ ಬಲಾಯಿ.

ಜೋಕುಭಥಾ ಸೋಯಿ ಭಯಾ ಅಬ ಕುಛ ಕಹಾನಜಾಯೆ ಎಂದು ಕಬೀರದಾಸರು ಹೇಳುತ್ತಾರೆ. ಏಕಮೇವಾದ್ವಿತೀಯ ಬ್ರಹ್ಮವು ವಿಶ್ವವೆಲ್ಲ, ವಿಶ್ವವು ಬ್ರಹ್ಮ ದಲ್ಲಿ-ಖಾಲಿಕ ಖಲಕ್, ಖಲಕಮೇ ಖಾಲಿಕ—ಹೀಗೆ ಸಾರಿ ಕಬೀರದಾಸರು ಪರತತ್ವದ ಅಂತರ್ಯಾಮಿತ್ವವನ್ನು ಪರತತ್ವಕ್ಕೆ ಸತ್ಯತೆಯನ್ನೂ ನಿರೂಪಿಸುತ್ತಾರೆ. ಬ್ರಹ್ಮೈಕ್ಯ ಸತ್ಯತೆಯನ್ನು ವಿವರಿಸುವ ಕಬೀರರು ಮಾಯಾವಾದವನ್ನು ಸಾರುವುದಿಲ್ಲ. ಅವರು ಅನುಭವದ ತತ್ವವು ಸಂಪೂರ್ಣ ಅದ್ವೈತವಲ್ಲ ಪ್ರತಿಬಿಂಬವಾದವನ್ನೂ ಅನರಲ್ಲಿ ಕಾಣುತ್ತಾರೆ. ಪರತತ್ವವು ರೂಪ ನಾಮರೂಪಾತ್ಮಕ ವಿಶ್ವವೆಲ್ಲ ಪ್ರತಿಬಿಂಬವೆಂದು ಅವರು ಹೇಳುತ್ತಾರೆ.

ಜ್ಯೋ ಜಲನೀ ಪ್ರತಿಬಿಂಬ, ತ್ಯೂ ಸಕಲ ರಾಮಹಿ ಜಾಣಿಜೆ ॥

ಕನಕ ಕುಂಡಲ ನ್ಯಾಯ, ಜಲಘಟ ನ್ಯಾಯ, ಸಾಗರತರಂಗ ನ್ಯಾಯ, ಪಿಂಡ ಬ್ರಹ್ಮಾಂಡ ನ್ಯಾಯ ಇವೇ ಮೊದಲಾದ ತತ್ವವನ್ನು ಬೇರಾವ ಕಬೀರದಾಸರೂ ಅದ್ವೈತವಾದದ ಒಲವನ್ನು ತೋರಿಸುತ್ತಾರೆ.

ಇಂಥ ಅದ್ವೈತವಾದಿ, ನಿರ್ಗುಣವಾದವನ್ನು ಬೋಧಿಸುವ ಕಬೀರರು ಭಕ್ತಿ ಪಂಥದತ್ತ ಏಕೆ ಹೊರಳಿದರು? ಇದೇ ಸೋಜಿಗದ ವಿಷಯ. ಏಕಮೇವಾದ್ವಿತೀಯ ಬ್ರಹ್ಮವಾದವನ್ನು, ಇಲ್ಲವೇ ತತ್ವಮಸಿ, ಅಹಂ ಬ್ರಹ್ಮಾಸ್ಮಿ ಮಂತ್ರವನ್ನು ಉರುರಿವೆ ಬೇಲಿ ಭಕ್ತಿ ಶಿಖರದ ಕಳಸವೇ ಮುಗ್ಗರಿಸಿ ಬೀಳುತ್ತದೆ. ಮಾಯಾವಾದದಿಂದಲೇ ಕಬೀರದಾಸರು ಭಕ್ತಿ ಮಾರ್ಗಕ್ಕೆ ತಿರಿಗುತ್ತಾರೆ. ಮಾಯಾ ಮೋಸಗಾರ್ತಿಯ ಎವರು ಪುತ್ರರಾಸೆ ಕಾಮ, ಕ್ರೋಧ, ಲೋಭ, ಮೋಹ ಹಾಗೂ ಮತ್ಸರ ಇವೇ ಮಾನವನನ್ನು ಅಧಃಪಾತಕ್ಕೆಳೆಯುತ್ತವೆ. ಆತ್ಮನನ್ನು ಬಂಧನ ಕೂಪದಲ್ಲಿ ಕೆಡುವುತ್ತವೆ. ಮಾಯೆಯೇ ನಾಸ್ತಿಕತೆಯ ತವರೂರು. ಅದ್ವೈತದ ಒಲವನ್ನು ತೋರಿಸುವ ಕಬೀರದಾಸರು ಈ ಮಾಯಾವಾದದಿಂದ ಬಿಡುಗಡೆ ಹೊಂದಲು ಪರಮಾರ್ಥದತ್ತ ಭಕ್ತಿ ಮಾರ್ಗವನ್ನು ತಿರುಗಿಸಿದಂತಿದೆ. ಡಾಂಭಿಕತೆಯ ಗಾಳಿಯನ್ನು ಕೂಡ ಇವರ ಸೈರಿಸರು. ಕೇವಲ ಹೊರಗಣ ವೇಷಗಳು ಜಪದಿಂದ ಯಾವ ಲಾಭವೂ ಇಲ್ಲ. ಕರಕಾ ಮನಕಾ

೨೦ನೇ ಪುಟ ನೋಡಿರಿ

ಭವ್ಯ ಶುದ್ಧ ಸೌರಭ

ಮೈಸೂರು ಗಂಧದ ಎಣ್ಣೆ ವಿಶ್ವದ ಅತ್ಯುತ್ತಮ ಗುಣದ ಎಣ್ಣೆಯೆಂದು ಪರಿಗಣಿತವಾಗಿದೆ

ಮೈಸೂರು ಸರ್ಕಾರದ ಮುದ್ರೆ ಮತ್ತು ಚಿಹ್ನೆಯಿರುವ ಶುದ್ಧ ಮೂಲ ಶೀಷೆಗಳನ್ನು ಪಡೆಯುವ ಭರವಸೆಯನ್ನು ಹೊಂದಿರಿ.

ಮೈಸೂರು ಗಂಧದ ಎಣ್ಣೆ

ಅಪ್ಪಟವಾದ ಗಂಧದ ಎಣ್ಣೆ.

ಬೆರಕೆಯ, ನೋಸದ ಎಣ್ಣೆಯನ್ನು ಕೊಳ್ಳುವುದು ಬೇಡ

ಸರ್ಕಾರದ ಗಂಧದ ಎಣ್ಣೆ ಕಾರ್ಖಾನೆ, ಮೈಸೂರು.

ಚುನಾವಣೆಯು ಹೇಗಿರಬೇಕು?

ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಶ್ರಾವಾಣಿಕತೆಯಿಂದ ಬಲಿಸಿ ಕೊಂಡು ಚುನಾವಣೆಗೆ ಕಾಂಗ್ರೆಸಿಗರು ಇಳಿಯಲಿ!!!

ಬರೆದವರು: ಶ್ರೀ. ಟಿ. ಎ. ಪೈ., ಎಂ. ಎಲ್. ಎ.

ಎಡಪದೇ ಮಹಾ ಚುನಾವಣೆಯು ಸಮೀಪಿಸುತ್ತಿದೆ. ಸುಮಾರು ಇಪ್ಪತ್ತು ಕೋಟಿ ಜನತೆಯು ಭಾಗವಹಿಸಿ ತನ್ನ ದೇಶದ ಮುಂದಾಳುಗಳನ್ನು, ಶಾಸನ ಸಭೆಯ ಪ್ರತಿನಿಧಿಗಳನ್ನು ಆರಿಸುವ ಮಹಾಕಾರ್ಯದಲ್ಲಿ ಮನಹರಿಯಿಸುವ ಮಹಾ ಪರ್ವಕಾಲವು ಸನ್ನಿಹಿತವಾಗುತ್ತಿದೆ. ಚುನಾವಣೆಯು ಸಮೀಪಕ್ಕೆ ಬಂದಂತೆ ದೇಶದ ವಾತಾವರಣವು ತಿಳಿಯಾಗುತ್ತಿದೆಯೇ? ಅಥವಾ ಇದುದ್ದೇಶಕ್ಕಾಗಿ ವಿರ್ಪಡಿಸಿದ ಚುನಾವಣೆಯಿಂದ ಅನಾಹುತ, ವಿಷಮತೆಯುಂಟಾಗುತ್ತಿದೆಯೇ ಎಂಬುದನ್ನು ವಿವೇಚಿಸಬೇಕಾಗುತ್ತದೆ. ಹತ್ತಾರು ಪಕ್ಷಗಳು ಚುನಾವಣಾ ರಂಗಕ್ಕೆಳಿದಿವೆ. "ಸಮರ್ಥವಾಗಿ ಆಳುತ್ತೇವೆ, ನಮಗೆ ಬೆಂಬಲ ಕೊಡಿರಿ" ಎಂದು ಕಾಂಗ್ರೆಸು ವಿನಂತಿಸುತ್ತಿದ್ದರೆ "ಸಮರ್ಥವಾಗಿ ವಿರೋಧಿಸುತ್ತೇವೆ" ನಮಗೆ ಬೆಂಬಲಕೊಡಿ" ಎಂದು ವಿರೋಧಿ ಪಕ್ಷಗಳು ನಿವೇದಿಸುತ್ತಿವೆ. ಇದರಿಂದಲೇ ಅಪಾರ ಭಾರತದಲ್ಲೇ ವ್ಯಾಪ್ತಿಯಿದ್ದು ಆಳುವ ಪ್ರಬಲ ಪಕ್ಷವಾಗಿ ರೂಪುಗೊಂಡಿರುವ ಸಂಸ್ಥೆ ಕಾಂಗ್ರೆಸ್ ಒಂದೇ ಎಂಬುದನ್ನು ಎಲ್ಲರೂ ನಿರ್ವಿವಾದವಾಗಿ ಒಪ್ಪಿಕೊಳ್ಳುತ್ತಿದ್ದಾರೆ. ಅಲ್ಲೊಂದು ಇಲ್ಲೊಂದು ಎನ್ನುವಂತೆ ಲೋಪದೋಷಗಳಿರಬಹುದು. ಹೀಗೆ ದೇಶದ ಒಂದನೆಯ ಪಕ್ಷವಾಗಿರುವ ಕಾಂಗ್ರೆಸು ಚುನಾವಣೆಯಲ್ಲಿ ಹೇಗೆ ವರ್ತಿಸಬೇಕು ಎಂಬುದನ್ನು ಕಾಂಗ್ರೆಸಿಗರೂ ಜನತೆಯೂ ಸಾಕಷ್ಟು ಚೆನ್ನಾಗಿ ಅರಿತುಕೊಳ್ಳಬೇಕು. ನಮ್ಮ ಪ್ರಧಾನರಾದ ಪಂಡಿತ ನೆಹರೂರವರು ಚುನಾವಣೆ ಹೇಗಿರಬೇಕೆಂದು ಹಿಂದೊಮ್ಮೆ ಹೇಳಿದ ಮಾತುಗಳನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುವುದು ದೇಶದ ಹಿತದೃಷ್ಟಿಯಿಂದ ಉತ್ತಮ. ಅವರ ನುಡಿಮುತ್ತುಗಳ ಅಭಿಪ್ರಾಯ ಸಂಗ್ರಹವನ್ನು ಕೆಳಗೆ ನಿರೂಪಿಸಿದೆ. ಈ ಮಾತುಗಳನ್ನವರು ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷದ ಜನರಿಗೆ ಸ್ವಲ್ಪ ಸಮಯದ ಹಿಂದೆ ಹೇಳಿದ್ದರು.

"—ಚುನಾವಣೆಯು ಸಮೀಪಿಸಿತು. ಪ್ರತ್ಯೊಂದು ವಿಧದ ಕೆರುಕುಳಗಳ ಆಟವು ಮುಂದೆ ಬರಬಹುದೆಂಬುದರಲ್ಲಿ ನನಗೆ ಸಂಶಯವಿಲ್ಲ. ನಮ್ಮ ಪ್ರತಿಪಕ್ಷೇಯರಿಂದ ಏನೇ ಬರಲಿ ಅವನ್ನು ನಾವು ಎದುರಿಸಿಯೇ ತೀರಬೇಕು. ಹೇಗೆ ಎದುರಿಸಬೇಕು? ನಮ್ಮ ತತ್ವಗಳನ್ನು ಬಲಿಕೊಟ್ಟು, ರಾಜಿಯನ್ನು ಮಾಡುವ ಹವ್ಯಾಸದಿಂದಲ್ಲ ವೆಂಬುದನ್ನು ನಾವು ಖಂಡಿತವಾಗಿಯೂ ತಿಳಿದಿರಬೇಕು."

"ಚುನಾವಣೆಯಲ್ಲಿ ನಮಗೆ ಸಹಾಯ ಸಿಕ್ಕಬಹುದೆಂಬ ಆಶೆಯಿಂದ ಯಾವುದೇ ವ್ಯಕ್ತಿಯ ಅಥವಾ ಗುಂಪಿನ ಉದಾರಾಶ್ರಯಕ್ಕೆ ಕೈ ಚಾಚಲು ನಾವು ಮುಂದಾಗಬಾರದು. ಹೀಗೆ ಚುನಾವಣೆಗಾಗಿ ವ್ಯಕ್ತಿ ಅಥವಾ ಗುಂಪನ್ನು ಮರಿಹೊಗುವಷ್ಟು ಗಂಡಾಂತರದ ಸ್ಥಿತಿಗೆ ಬೇರಾವುದೂ ಇಲ್ಲ. ಆತ್ಮವನ್ನು ಕಳೆದುಕೊಳ್ಳುವಷ್ಟು ಹೀನಾಯವಾದ ಗಂಡಾಂತರವೆ ಕೃತ್ಯ ಬೇರಾವುದೂ ಇರಲಾರದು. ಕಾಂಗ್ರೆಸ್ ಸಂಸ್ಥೆಯ ಆತ್ಮವು ಅತ್ಯಂತ ಪರಿಶುದ್ಧವಾಗಿದೆ ಎಂದು ನಾನನ್ನಲಾರೆ. ಅದರ ಆತ್ಮವು ಶುಭ್ರವಾಗಿ ಮಿರುಗುತ್ತದೆ ಎಂದೂ ನನ್ನ ಭಾವನೆ ಇಲ್ಲ. ಹಾಗಿದ್ದರೂ ಅಂತಹ ಪರಿಶುದ್ಧತೆಯು ಶುಭ್ರತೆಯ ತೃಣ ಕಣ್ಣಾದರೂ ನಾವು ಕಾಪಾಡಿಕೊಳ್ಳಲು ಶಕ್ತರಾಗಿದ್ದೇವೆ. ಮತ್ತು ಈ ಅಂಶವೇ ನಮ್ಮ ಶಕ್ತಿಯ ಕಾರಣವೂ ಆಗಿರುವುದು. ಯಾವ ಕ್ಷಣದಲ್ಲಿ ನಾವೀ ತೃಣಾಕನ್ನು ಈ ಅಂಶವನ್ನು ಸಹಾ ಕಳೆದುಕೊಳ್ಳುತ್ತೇವೆಯೋ ಅಂದು ನಾವು ನುಚ್ಚುನೂರಾಗಿ ಹೋದೇವು. ಅದುದರಿಂದ ಕೇವಲ ಚುನಾವಣೆಗಾಗಿ ನಮ್ಮನ್ನು ನಾವು ಕೆಳವಟ್ಟು ಕೈಳಿಸಿಕೊಳ್ಳುವ ನನ್ನ ಆತ್ಮ ಶಕ್ತಿಯನ್ನು ಕಳೆದುಕೊಳ್ಳುವ ನೀಚ ಕಾರ್ಯಕ್ಕೆಳಿಯಬಾರದು".

"ಸರಕಾರದ ಕಾರ್ಯಭಾರಗಳಲ್ಲಿ ಆಗಾಗ ಸಂಭವಿಸಿದ ವಿಫಲತೆಗಳ ಪರಿಚಯವು ಎಲ್ಲರಿಗಿಂತಲೂ ನನಗೆ ಹೆಚ್ಚಾಗಿದೆ. ಎಲ್ಲರಿಗಿಂತಲೂ ಹೆಚ್ಚಾಗಿ ನಾನವುಗಳನ್ನು ಎದುರಿಸಿದ್ದೇನೆ. ಆದರೆ ಈ ವಿಫಲತೆಗಳಿಗಾಗಿ ಭಾರತದ ಪ್ರಜೆಯಿದುರು ನಾನೆಂದೂ ತಲೆ ತಗ್ಗಿಸಿಕೊಳ್ಳಲಾರೆ; ಎಂದಿಗೂ ನಾಚಿಕೆ ಪಡಲಾರೆ. ನನ್ನ ಕಾರ್ಯಗಳ ಸಫಲತೆ ಮತ್ತು ವಿಫಲತೆಗಳಿಗೆ ನನ್ನ ನಿಲುವಿನ ಸ್ಪಷ್ಟವಾದ ಕಲ್ಪನೆ ನವಗಿರಲೇಬೇಕು. ನಾವೇ ನನ್ನಲ್ಲಿ ಹುಳುಕುಗಳಿಂದ ಕೂಡಿಕೊಂಡಿದ್ದರೆ ಇಂತಹ ಉನ್ನತ ವಿಧಾನವನ್ನು ಅನುಸರಿಸಲಿಕ್ಕೆ ನನ್ನಿಂದ ಹೇಗೆ ಸಾಧ್ಯ? ಗೆಲ್ಲುವ ದೃಷ್ಟಿಯಿಂದ ವ್ಯಕ್ತಿ ಗುಂಪುಗಳ ಅಪ್ರಯವನ್ನು ನಮ್ಮ ತತ್ವಗಳನ್ನು ಬಲಿಕೊಟ್ಟು ಪಡೆಯಲು ಹವಣಿಸಿದರೆ ನಾನೆಂತು ಈ ಧೀರೋದಾತ್ತ ಪದ್ಧತಿಯನ್ನು ಅನುಸರಿಂಬಲ್ಲೆನ್ನ? ಒಡಕು ಆಯುಧದಿಂದ ಗೆಲ್ಲುಹೊರಟ ಯೋಧನಂತೆ ನನ್ನ ತತ್ವಗಳನ್ನು ಬಲಿಕೊಡುವ ಹುಚ್ಚಾಸದ ಒಡಕುಗಳು ನನ್ನನ್ನ ಈ ಉತ್ತಮ ವಿಧಾನವನ್ನು ಅನುಸರಿಸಲು ಬಿಡಲಾರವು!"

"ಸರಕಾರದ ಕಾರ್ಯಭಾರಗಳಲ್ಲಿ ಆಗಾಗ ಸಂಭವಿಸಿದ ವಿಫಲತೆಗಳ ಪರಿಚಯವು ಎಲ್ಲರಿಗಿಂತಲೂ ನನಗೆ ಹೆಚ್ಚಾಗಿದೆ. ಎಲ್ಲರಿಗಿಂತಲೂ ಹೆಚ್ಚಾಗಿ ನಾನವುಗಳನ್ನು ಎದುರಿಸಿದ್ದೇನೆ. ಆದರೆ ಈ ವಿಫಲತೆಗಳಿಗಾಗಿ ಭಾರತದ ಪ್ರಜೆಯಿದುರು ನಾನೆಂದೂ ತಲೆ ತಗ್ಗಿಸಿಕೊಳ್ಳಲಾರೆ; ಎಂದಿಗೂ ನಾಚಿಕೆ ಪಡಲಾರೆ. ನನ್ನ ಕಾರ್ಯಗಳ ಸಫಲತೆ ಮತ್ತು ವಿಫಲತೆಗಳಿಗೆ ನನ್ನ ನಿಲುವಿನ ಸ್ಪಷ್ಟವಾದ ಕಲ್ಪನೆ ನವಗಿರಲೇಬೇಕು. ನಾವೇ ನನ್ನಲ್ಲಿ ಹುಳುಕುಗಳಿಂದ ಕೂಡಿಕೊಂಡಿದ್ದರೆ ಇಂತಹ ಉನ್ನತ ವಿಧಾನವನ್ನು ಅನುಸರಿಸಲಿಕ್ಕೆ ನನ್ನಿಂದ ಹೇಗೆ ಸಾಧ್ಯ? ಗೆಲ್ಲುವ ದೃಷ್ಟಿಯಿಂದ ವ್ಯಕ್ತಿ ಗುಂಪುಗಳ ಅಪ್ರಯವನ್ನು ನಮ್ಮ ತತ್ವಗಳನ್ನು ಬಲಿಕೊಟ್ಟು ಪಡೆಯಲು ಹವಣಿಸಿದರೆ ನಾನೆಂತು ಈ ಧೀರೋದಾತ್ತ ಪದ್ಧತಿಯನ್ನು ಅನುಸರಿಂಬಲ್ಲೆನ್ನ? ಒಡಕು ಆಯುಧದಿಂದ ಗೆಲ್ಲುಹೊರಟ ಯೋಧನಂತೆ ನನ್ನ ತತ್ವಗಳನ್ನು ಬಲಿಕೊಡುವ ಹುಚ್ಚಾಸದ ಒಡಕುಗಳು ನನ್ನನ್ನ ಈ ಉತ್ತಮ ವಿಧಾನವನ್ನು ಅನುಸರಿಸಲು ಬಿಡಲಾರವು!"

"ಅದರಿಂದ ಇಂತಹ ಧೀರೋದಾತ್ತವಾದ ವಿಧಾನವನ್ನು ನಾವು ಅನುಸರಿಸಬೇಕಾದರೆ ಜನತೆಯು ಮುಂದಿಟ್ಟಲ್ಲಿ ಅವರ ಸ್ನೇಹವನ್ನೂ ಸಹಾನುಭಾವ ಸಹಕಾರಗಳನ್ನೂ ಪಡೆಯಬಲ್ಲೆನೆಂಬ ವಿಶ್ವಾಸ ನನಗಿದೆ. ಯಾತಕ್ಕೆಂದರೆ ನಾವು ಸಾಧಿಸಿದುದನ್ನು ಜನರು ಚೆನ್ನಾಗಿ ತಿಳಿದಿಕೊಳ್ಳುವಷ್ಟು ವಿವೇಕಿಗಳಿರುತ್ತಾರೆ."

"ಈ ತರದ ನಿಷ್ಕಪಟವಾದ, ಸರಳವಾದ ಧೀರೋದಾತ್ತವಾದ ವಿಧಾನವು ನ್ಯಾಯವಾದ, ಪ್ರಜಾರಾಜ್ಯಕ್ಕನುಗುಣವಾದ ವಿಧಾನ ಮಾತ್ರವಲ್ಲ ಅದು ಯೋಗ್ಯ ಪ್ರತಿಫಲವನ್ನು ಕೊಡುವ ವಿಧಾನ ಸಹಾ ಆಗಿದೆ. ನೀವು ಜನರನ್ನ ನಂಬಿದರೆ ಅವರೂ ನಿಮ್ಮಲ್ಲಿ ವಿಶ್ವಾಸವಿಡುವರು. ನೀವು ಅವರನ್ನು ಮೆಚ್ಚಿದರೆ ಅವರೂ ನಿಮ್ಮನ್ನು ಮೆಚ್ಚುವರು. ಇದು ಪ್ರಕೃತಿವತ್ತಾದ ನಿಯಮ".

"ನಮ್ಮ ನ್ಯೆಯತ್ತೆಯ ಅಥವಾ ಕಮಷಿಯ ಕಾರ್ಯಗಳು, ಅಥವಾ ಅಲೋಚನೆಗಳು ನನ್ನ ಕುರಿತು ಜನತೆಯು ಮೇಲೆ ಒಂದು ವಿಧವಾದ ಪರಿಣಾಮವನ್ನು ಮಾಡಿಯೇ ಮಾಡುತ್ತವೆ. ನಾವು ಬೇರೆಯವರ ಕುರಿತು ಒಳ್ಳೆಯವರಾಗಿದ್ದರೆ ಬೇರೆಯವರೂ ನಮ್ಮ ಕುರಿತು ಒಳ್ಳೆಯ ಭಾವನೆಯನ್ನೇ ತಳೆಯುತ್ತಾರೆ. ನಾವು ಮಹಾನುಭಾವತೆಯಿಂದ ವರ್ತಿಸಿದರೆ ಜನತೆಯೂ ಅದೇ ಭಾವನೆಯನ್ನು ಪ್ರದರ್ಶಿಸುತ್ತಾರೆ. ಇದು ಎಂದೆಂದಿಗೂ ಸತ್ಯವಾದ ಸಿದ್ಧಾಂತ. ನಾನೀ ರೀತಿಯಲ್ಲಿ ವರ್ತಿಸುತ್ತೇನೆಂದು ನಾನೆನ್ನಲಾರೆ. ಯಾಕೆಂದರೆ ಅನೇಕ ವಿಫಲತೆಗಳ ಅನುಭವವು ನನಗಿದೆ ಆದರೂ ಇದೇ ವಿಧಾನದ ಮೇಲೆ ನನಗೆ ದೃಢವಿಶ್ವಾಸವಿದೆ. ಇದೇ ವಿಧಾನದಿಂದ ಭಾರತದ ಪ್ರಜೆಗಳ ಸಂಪರ್ಕವನ್ನು ನಾನು ಬೆಳೆಸುತಿದ್ದೇನೆ. ನಾನು ಹಲವು ಭಾರಿ ಕಠಿಣವಾಗಿ ಅವರೊಡನೆ ವರ್ತಿಸಿರಬಹುದು. ಆದರೆ ಆ ಕಠಿಣತೆಗಿಂತಲೂ ನನಗೆ ಭಾರ

(ಇನ್ನೂ ಮುಂದಿದೆ)

MYSORE LAMPS
BEST IN THE MARKET
Under
Government of India
Rate Contract
All Types of Lamps Manufactured
THE MYSORE
LAMP WORKS LTD
MALLESWARAM P. O.,
BANGALORE 3
Telegram: "MYSORELAMP"
Telephone: 2026

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕವಿರ ಬೇಕಲ್ಲದೆ, ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

ಆದರ್ಶ ಪ್ರಜಾರಾಜ್ಯವೇ ನಮ್ಮ ಗುರಿ

ಪ್ರಜಾಸತ್ತೆಯನ್ನು ಪೈಗೂಡಿಸಿಕೊಳ್ಳುವ ಇಚ್ಛೆ ನಮ್ಮವಾಗಿದ್ದರೆ ನಿತ್ಯ ವ್ಯವಹಾರದಲ್ಲಿಯೂ ದೃಷ್ಟಿಕೋನದಲ್ಲಿಯೂ ಅಮೂಲಾಗ್ರ ಪರಿವರ್ತನೆ ನಡೆಯುವುದು ಅತ್ಯವಶ್ಯ; ಸತ್ತು ಇದೊಂದು ಮುಗಿಯದ ಮಹಾಪ್ರಯೋಗ!

ಬರೆದವರು: ಶ್ರೀ ರಂಗನಾಥ ದಿವಾಕರ,
ಕಾಪಾರದ ರಾಜ್ಯಪಾಲರು.

ನಮ್ಮ ಪ್ರಜಾರಾಜ್ಯದ ಏಳನೆಯ ವಾರ್ಷಿಕೋತ್ಸವವನ್ನು ಇಂದು ನಾವು ಆಚರಿಸುತ್ತಿದ್ದೇವೆ. ಆಷ್ಟೇ ಅಲ್ಲದೆ ನಮ್ಮ ಘಟನೆಗನುಸಾರವಾಗಿ ಎರಡನೆಯ ಮಹಾಚುನಾವಣೆಯೂ ಕೆಲವು ದಿನಗಳಲ್ಲೇ ನಡೆಯಲಿದೆ. ಆದುದರಿಂದ ಈ ಸಂದರ್ಭದಲ್ಲಿ ನಮ್ಮ ಧ್ಯೇಯ, ಸಾಧನೆಗಳನ್ನೆಲ್ಲ ಪರಿಶೀಲಿಸಿ ನಾವು ಕೈಗೆ ಮಂತ್ರದೆಯತಕ್ಕುದು ಎಂಬುದರ ವಿಮರ್ಶೆಯು ಸುಸಂಗತವೆನಿಸುತ್ತದೆ.

ನಮ್ಮ ಘಟನೆ ಏನೋ ಅನೇಕ ವಿಷಯಗಳನ್ನು ಅತ್ಯಂತ ರೋಚಕವಾಗಿ ಪ್ರತಿಪಾದಿಸುತ್ತದೆ; ಮಾತ್ರ ವಲ್ಲ, ಈ ಏಳು ವರ್ಷಗಳಲ್ಲಿ ನಾವು ತಕ್ಕಷ್ಟು ಪ್ರಗತಿಯನ್ನೂ ಹಲವಾರು ರಂಗಗಳಲ್ಲಿ ಸಾಧಿಸಿದ್ದೇವೆ. ಇಷ್ಟರಿಂದಲೇ ನಾವು ಸಂಪ್ರಕ್ತರಾಗತಕ್ಕುದಲ್ಲ. ಸಂಯುಕ್ತ ಅಮೇರಿಕದ ಜಸ್ಟಿಸ್ ವಾರನ್‌ರಂತಹರು ನಮ್ಮ ಘಟನೆಯನ್ನು ಮುಕ್ತಕಂಠದಿಂದ ಹೊಗಳಿದ ಮಾತ್ರದಿಂದ ನಮ್ಮ ಲಕ್ಷ್ಯ, ಗುರಿಗಳೆಲ್ಲವೂ ಹಾಗೆಯೇ ಮಾರ್ಗಗಳೆಲ್ಲವೂ ಸಾಧುವಾದುವುಗಳು, ನಿರ್ದುಷ್ಟವಾದುವುಗಳು ಎಂದೆನ್ನುವ ಹಾಗೂ ಇಲ್ಲ. ಎತಕ್ಕೆನ್ನುವಿರಾ? ದೇಶವೊಂದರ ಘಟನೆಯೆಂದರೇನು? ಬರಿಯ ಶಬ್ದಗಳಿಂದ, ಪದ ಸಮೂಹಗಳಿಂದ ಒಂದು ಘಟನೆಯು ನಿರ್ಮಾಣವಾಗಲಾರದು. ಇಂಗ್ಲೆಂಡಿನ ಘಟನೆಯು ಎಷ್ಟಕ್ಕೂ ಕೇವಲ ಪದವಾಕ್ಯ ಪ್ರಮಾಣವಾಗಿಲ್ಲವೆಂಬುದನ್ನು ನಾವರಿತಿಲ್ಲವೆ? ದೇಶದ ಘಟನೆಯು ಕೇವಲ ಶಬ್ದಗಳು, ವಾಕ್ಯಗಳು, ಸೂತ್ರಗಳ ಅಥವಾ ಕಾನೂನುಗಳ ಆಡಂಬರದಿಂದೊಡಗತಕ್ಕ ವಿಚಾರವಲ್ಲ; ದೇಶದ ಜನ, ತಮ್ಮ ವರ್ತನೆಯಿಂದ, ಮತ್ತು ಆಚರಣೆಯಿಂದಲೇ ಅದನ್ನು ಅರ್ಥವತ್ತಾಗಿ ಮಾಡಬಲ್ಲರಲ್ಲದೆ, ಅಂಥ ಕಾನೂನು ನಿಯಮಾದಿಗಳಿಂದ ಪ್ರಣೀತವಾದ ಘಟನೆಯ ವಿಮರ್ಶೆಗೂ, ಪರಿಶೀಲನೆಗೂ ಅವಕಾಶವನ್ನೊದಗಿಸಬಲ್ಲರು. ಅಥವಾ ಚಟುಕಾಗಿ ಕೇಳತಕ್ಕುದಾದರೆ, ದೇಶದ ಜನರೇ ಆದರ ಘಟನೆಯು ರೂಪುಗೊಳ್ಳಲು ಕಾರಣರಾಗತಕ್ಕವರು.

ಶತಮಾನಗಳ ಹಿಂದೆ ಗ್ರೀಸ್, ರೋಮ್ ಮತ್ತು ನಮ್ಮ ಭಾರತಗಳಲ್ಲಿ ಪ್ರಜಾರಾಜ್ಯಗಳಿದ್ದುವು. ಇಂಥ ಪ್ರಜಾರಾಜ್ಯಗಳಲ್ಲಿ ಕೆಲವೇ ಮಂದಿ ಜನ ಅಂಥ ರಾಜ್ಯಗಳ ಸೂತ್ರಧಾರಿಗಳಾಗಿದ್ದು, ಸ್ವಾತಂತ್ರ್ಯ ಹಾಗೂ ಸಮಾನತೆಯು ಸವಿಗುನ್ನರಿತಿದ್ದರು. ಅನೇಕರ ಪಾಲಿಗೆ, ಇಂಥ ಸ್ವಾತಂತ್ರ್ಯ ಮತ್ತು ಸಮಾನತೆಗಳು ತಮ್ಮ ಹಕ್ಕಿನ ಸೊತ್ತುಗಳಾಗಿರಲಿಲ್ಲ. ಇಂದು ಕೂಡ ಫ್ರಾನ್ಸ್, ಸ್ವಿಜರ್‌ಲೇಂಡ್, ಸಂಯುಕ್ತ ಅಮೇರಿಕಗಳಕ್ಕ ಪ್ರಜಾ ರಾಜ್ಯಗಳಿವೆ. ಮಾನವನ ಹಕ್ಕು ಬಾಧ್ಯತೆಗಳನ್ನು ಪೂರ್ಣವಾಗಿ ರಕ್ಷಿಸುವೆವೆಂದನ್ನುತ್ತಿರುವ ಅಲ್ಲಿನ ರಾಜ್ಯ ಘಟನೆಗಳು ಕೂಡ ಎಷ್ಟಕ್ಕೂ ಆದರ್ಶ ರಾಜ್ಯಗಳಾಗಿಲ್ಲ, ಆದರ್ಶ ಘಟನೆಗಳಾಗಿಲ್ಲ, ಅಥವಾ ಅಲ್ಲಿನ ರಾಜ್ಯ ಘಟನೆಗಳೆಲ್ಲ ಪೂರ್ಣ ವ್ಯಾಪ್ತಿಯುಳ್ಳವುಗಳೂ ಅಲ್ಲವೆಂಬುದನ್ನು ನಾವು ಮರೆಯಬಾರದು. ಇಂಥ ಘಟನೆಗಳನ್ನು ರಚಿಸುವಾಗಿನ ಧ್ಯೇಯಗಳಾದರೋ ಅತ್ಯಂತ ಉಚ್ಚ ಪಾಟ್ಟವುಗಳು. ಆದರೆ ಪ್ರತಿ ಘಟನೆ ಎನ್ನು ಕಾರ್ಯರೂಪಕ್ಕೆ ಇಳಿಸಿದಾಗ ಅದು ಕುಂದುಕೊರತೆಗಳು ಕಂಡುಬಂದು ಯಾವುದೊಂದೂ ಆದರ್ಶವಾಗಿಲ್ಲವೆಂಬ ವಿಚಾರವು ವೇದ್ಯವಾಗಿದೆ. ನಾವು ಪ್ರಸ್ತಾಪಿಸಿದ ವಿವಿಧ ಘಟನೆಗಳಲ್ಲಿ, ಜನಾಂಗಗಳ ಪ್ರತ್ಯೇಕತೆ ಮತ್ತು ಉಚ್ಚ ನೈಚ್ಯಗಳವಾದ, ಸಾರ್ವ ಭೌಮಾಧಿಕಾರದ ವಾದ, ಆಶ್ರಿತ ರಾಜ್ಯ ಮತ್ತು ವಸಾಹತು ನಿತಿಗಳ ಸಮರ್ಥನೆಗಳಿರುವಕನಕ ಅವುಗಳು ಆದರ್ಶವೆನಿಸಲಾರವು.

ರಾಜಕೀಯ-ಗಿ ಭಾರತವು ಇಂದು ಸ್ವತಂತ್ರನಾದು, ಪ್ರಜಾಸತ್ತಾತ್ಮಕವಾದ ಗಣರಾಜ್ಯ. ಪ್ರಜಾಸತ್ತಾತ್ಮಕ ವಿಧಾನಗಳಿಂದಲೇ ಶಾಸನ ನಿಯಮಗಳಿಂದಲೇ ನಾವು ನಮ್ಮನ್ನು ಆಳುತ್ತಿರುವೆವು ಎಂದರೆ ತಪ್ಪಿಲ್ಲ. ಆದುದರಿಂದಲೇ ನಾವು ಸ್ವತಂತ್ರರಾಗಿದ್ದೇವೆ, ಪರತಂತ್ರರಾಗಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಸಮಾನತೆ ಮತ್ತು ನ್ಯಾಯಗಳ ಸಮಾನ ವಿತರಣೆಯ ದೃಷ್ಟಿಯಿಂದ ಆದರ್ಶವೆನಿಸುವ ರಾಜ್ಯದ ಮೊದಲ ಪೀಠಿಕೆ ಇದು. ಆದರ್ಶ ರಾಜ್ಯದಲ್ಲಿ ಪ್ರತಿಯೊಬ್ಬನಿಗೂ ಸಾಮಾಜಿಕ ಜೀವನಕ್ಕೆ ಸಂಬಂದಿಸಿದ ಸೌಕರ್ಯಗಳು ಏಕ ಪ್ರಕಾರವಾಗಿರಬೇಕು ಮಾತ್ರವಲ್ಲದೆ ಆರ್ಥಿಕ ಹಂಚಿಕೆಯೂ ಸಮ್ಯಕ್ಪಕ್ಷಿಕವಾಗಿರಬೇಕು.

ಇಂಥ ಆದರ್ಶ ರಾಜ್ಯದ ಸ್ಥಾಪನೆಗೆ ಅವಶ್ಯವಿರುವ ಸಾಧನೆಗಳಳ್ಯಾವುವು? ಇಂಥ ರಾಜ್ಯದ ಪ್ರೇರಕ ಶಕ್ತಿಗಳಳ್ಯಾವುವು? ಹಾಗೆಯೇ ಇಂಥರಾಜ್ಯದ ಸ್ಥಾಪನೆಯಲ್ಲಿ ಎಂಥ ತೊಡಕುಗಳನ್ನು ನಾವು ಇದಿರಿಸಬೇಕಾಗಿ ಬರಬಹುದು? ಎಂಬುದನ್ನು ಸ್ಥೂಲವಾಗಿ ವಿಚಾರಿಸುವ.

'ನಮ್ಮ ಪ್ರಜಾರಾಜ್ಯವು ಶಾಂತಿಯನ್ನು ಅಥವಾ ಎಲ್ಲಾ ದುರ್ಧರ ಪ್ರಸಂಗಗಳಲ್ಲೂ ಶಾಂತ ಮಾರ್ಗಗಳನ್ನೇ ನೆಚ್ಚಿಕೊಂಡಿದೆ. ನಾವು 'ಪಂಚಶೀಲ' ತತ್ವವನ್ನವಲಂಬಿಸಿಯೇ ಎಲ್ಲಾ ವ್ಯವಹಾರಗಳನ್ನೂ ನಡೆಸತಕ್ಕವರು. 'ಪಂಚಶೀಲ' ಎಂದರೆ ಒಂದು ಬರಿಯ ಸೊಳ್ಳು ಘೋಷಣೆಯಲ್ಲ, ಅಥವಾ ಎಷ್ಟಕ್ಕೂ ಕುಟಿಲ ನೀತಿಯ ದ್ಯೋತಕವಲ್ಲ. ಇದು ಯುದ್ಧ ನೀತಿಯನ್ನು ವಿರೋಧಿಸುತ್ತದೆ. ಯುದ್ಧಗಳಾದರೋ ಶಾಂತಿಯನ್ನು, ವ್ಯೆಯಕ್ತಿಕ ಮತ್ತು ಸಾಮೂಹಿಕ ಸ್ವಾತಂತ್ರ್ಯಗಳನ್ನೆಲ್ಲ ಧ್ವಂಸಮಾಡುವವಲ್ಲವೆ? ಆದುದರಿಂದಲೇ ಯುದ್ಧ ಭೀತಿಯು ಸಾಂಕ್ರಾಮಿಕ ರುಜಿನಗಳಿಗೆ ಕಾರಣವಾದ ಆಣುಜೀನಿಗಳಂತೆ ಮನುಷ್ಯರನ್ನು ದಂಗುಬಡಿಸಲು ಶಕ್ತವಾಗಿದೆ. ಯುದ್ಧಗಳಿಂದ ಯಾವ ಸಮಸ್ಯೆಗಳೂ ಬಗೆಹರಿಯುವಂತಿಲ್ಲ; ಬದಲಾಗಿ, ಆ ಸಮಸ್ಯೆಗಳಲ್ಲಿ ಮತ್ತೂ ಕ್ಲಿಷ್ಟವಾಗುವುವು. ಆದುದರಿಂದ ವಿವಿಧ ರಾಷ್ಟ್ರಗಳು ಶಾಂತಿಯನ್ನು ನೆಚ್ಚಿದರೇನೆ ತಂತಮ್ಮ ಸಮಸ್ಯೆಗಳನ್ನು ಸಮಾಧಾನಕರವಾಗಿ ಬಿಡಿಸಲ್ಲುವು. ಅಥವಾ, ಸಮಾಧಾನದಿಂದ ಬಿಡಿಸಲಾಗದ ಸಮಸ್ಯೆಯೊಂದಿದೆ ಎನ್ನಿರಿ, ಅದನ್ನು ಯಾವನೂ ಯುದ್ಧವಾಡಿ ಬಿಡಿಸಲಾರನೆಂಬುದು ತೀರ ಸತ್ಯವಾದ ಮಾತು. ಆದ-ದರಿಂದ ಶಾಂತ ಮಾರ್ಗಗಳಿಗೇನೆ, ಅಹಿಂಸೆಗೇನೆ ಎಲ್ಲಾ ಪ್ರಾಶಸ್ತ್ಯವನ್ನಿತ್ತು ನಾವು ಪಂಚಶೀಲ ತತ್ವವನ್ನೆಂಗೀಕರಿಸಿರುವೆವು; ಹಿಂಸ ಮಾರ್ಗಾವಲಂಬಿಗಳಾಗಿ ಪ್ರಬಲ ರಾಷ್ಟ್ರಗಳೊಡನೆ ಸೇನಾ ಒಪ್ಪಂದಗಳನ್ನು ನಾವು ಈ ಕಾರಣದಿಂದಲೇ ಮಾಡಿಕೊಂಡಿಲ್ಲವೆಂಬುದನ್ನು ಇಲ್ಲಿ ಒತ್ತಿ ಹೇಳಲಿಚ್ಛಿಸುತ್ತೇನೆ.

ಸ್ವಾಯತ್ತತೆಯ ಪೂರ್ವಾಪೇಕ್ಷೆಯನ್ನು ಮುಟ್ಟಿದ ನಾಯಿ ಮತ್ತು ಫೇಸಿಸ್ಟ್ ತತ್ವಗಳು ತಾಂಡವಾಡಿದ, ಇದೀಗಲೂ ಹಲವೆಡೆಗಳಲ್ಲಿ ತಾಂಡವವಾಡುತ್ತಿರುವ ದಶಕಗಳಲ್ಲವು. ಬೆರಳೆಣಿಕೆಯ ಮಂದಿ ಒಂದು ರಾಜ್ಯದ ಜನನನ್ನೆಲ್ಲ ಕುಣಿಸಬಹುದು ಎಂಬ ತತ್ವವನ್ನೊಪ್ಪುವ ಪಂಗಡಗಳು ನಮ್ಮಲ್ಲಿವೆ ಇಂಥ ತತ್ವಗಳ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅನುಭವಿಸಿದ ಸೋಲು ಇನ್ನೂ ಇನರ ಕಣ್ಣಿಗಳನ್ನು ತೆರೆದಿಲ್ಲವೆನ್ನಬಹುದು ಮತ್ತೂ ಒಂದು ಪಕ್ಷದ ಜನರು ಜಗತ್ತಿನಲ್ಲೆಲ್ಲ ಒಂದೇ ಕಾದ ಆರ್ಥಿಕ ನೀತಿ ಮತ್ತು ಸುಧಾರಣೆಗಳಿಂದ ಎಲ್ಲರ ಸೋಲನ್ನೂ ನಿಗಬಲ್ಲವು ಎಂದು ವಾದಿಸುತಿದ್ದಾರೆ. ಇಲ್ಲಿ ಮನುಷ್ಯನ ವ್ಯಕ್ತಿ ಸ್ವಾತಂತ್ರ್ಯಕ್ಕೇನೆ ತಕ್ಕ ಮನ್ನಣೆ ದೊರೆತಿಲ್ಲ. ಮನುಷ್ಯನು ಯಂತ್ರದಂತೆ ದುಡಿಯಬೇಕು, ಎಲ್ಲವೂ ಸರಿಯಾಗಿ ದುಡಿಯಬೇಕು. ಇವು ಸಾಧ್ಯವಾಗುವಂತೆ ರಾಜ್ಯವು ತಕ್ಕ ವಿಧೇಯಕಗಳನ್ನು, ಶಾಸನಗಳನ್ನು ಮಾಡಬೇಕು ಎಂದೆನ್ನುವ ವಾದದಲ್ಲಿ ಮನುಷ್ಯನ ಮಾನವೀಯತೆಗೆ ಎಳ್ಳಷ್ಟು ಸ್ಥಾನವು ದೊರಕಿಲ್ಲವೆಂದು ಖಂಡಿತವಾಗಿ ಹೇಳಬಹುದು. ಮತ ವಿಚಾರಗಳಲ್ಲಿ ಅಂತಿಮ ಶ್ರದ್ಧೆಯು ಹೇಗೆ ಅವಶ್ಯವೆ ಹಾಗೆಯೇ ಅರ್ಥಶಾಸ್ತ್ರದಲ್ಲಿ ಕೂಡ ಅಂಥ ಶ್ರದ್ಧೆ ಮತ್ತು ಪರಿಪೂರ್ಣಕ್ಕೆ ಅನುಗುಣವಾಗಿ ಹೊಂದಿಕೊಳ್ಳುವ ಶಾಸ್ತ್ರನೀತಿಗಳು ಸತ್ಯವನ್ನು ಪ್ರತಿಪಾದಿಸಲಾರವು. ಜ್ಞಾನದ ವಿವರ್ಧನೆಗೆ, ಅದರ ಸಮಗ್ರ ವಿಕಾಸಕ್ಕೆ ಅಗಿಂದಂಗ್ಯೆ ಸ್ಥಾಪಿತವಾದ ವಿಚಾರಗಳ ವಿಮರ್ಶೆಯು ಪೋಷಕವಾಗುವ ಕಾರಣದಿಂದಲೇ ಅವಶ್ಯವೆನಿಸುತ್ತವೆ. ಹೀಗೆ ಜೀವನ

(ಉಳಿದ ಪುಟ ನೋಡಿರಿ)

SRI RAMAKRISHNA THEATRE LIMITED,
UDIPI.

ನಿಮ್ಮ ಮನರಂಜನೆಗೆ
ಉತ್ತಮ ಚಿತ್ರಗಳ ಪ್ರದರ್ಶನ!
ವ್ಯಾಪಾರ ಅಭಿವೃದ್ಧಿಗೆ ಸ್ಲೈಡ್ ಮತ್ತು
ಪತ್ರಿಕಾ ಜಾಹೀರಾತಿನ ನಿದರ್ಶನ!!!

- "ಪ್ರಕಾಶ" ವಾರಪತ್ರಿಕೆಯ ಮೂಲಕ ವರ್ತಮಾನ ಪ್ರಸಾರ, ಪ್ರಚಲಿತ ವಿಚಾರಗಳ ಮೇಲೆ ಕ್ಷ-ಕಿರಣ—
- ಮೋಟಾರು, ರೇಡಿಯೋ ಬಿಟ್ರಗಳನ್ನು ಅತ್ಯುತ್ತಮವಾಗಿ ಚಾರ್ಜ್ ಮಾಡಿಕೊಡುವುದು—
- ಸಭೆ, ಸತ್ಕಾರ ಕೂಟದಲ್ಲಿ ಉಪಯೋಗವಾಗುವ ಧ್ವನಿವರ್ಧಕ ಯಂತ್ರವನ್ನು ಒದಗಿಸುವುದು—
- ಮದುವೆ, ಮುಂಜಿಗಳಾಗಲು ಯೋಗ್ಯ ಸನ್ನಾಹ—

ಇವೆಲ್ಲವುಗಳ ವ್ಯವಸ್ಥೆ ಎಲ್ಲಿ?

ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್,

ಉಡುಪಿ--ಇಲ್ಲಿ!

ಸಾವಿರ ಮೆಟ್ಟಿಲುಗಳ ಮೇಲಿನಿಂದ--ಮೈಸೂರು

ಕನ್ನಡಿಗರ ಭುವನೇಶ್ವರಿಯ ಮಡಿಲಲ್ಲಿಯೂ ಕಸ್ಪ–ಕಾರ್ಪಣ್ಯದ ಅನುಭವಾಗುತ್ತಿದೆ; ಅಲ್ಲೂ ಮನುಷ್ಯ ಸಹಜ ಪ್ರವೃತ್ತಿಗಳ ಲಾಸ್ಯ ಕಂಡುಬರುತ್ತದೆ!

ಬರೆದವರು: ಶ್ರೀ ಮಂಗಳೂರು ಜಾರಪ್ಪ

ಸಾವಿರದೊಂಬೈನೂರ ಐವತ್ತೊಂದನೇ ಇಸವಿ, ಅಕ್ಟೋಬರ ತಿಂಗಳ ಇಪ್ಪತ್ತೆ ನಾಲ್ಕನೇ ತಾರೀಕು, ಬುಧವಾರ—ಮೈಸೂರು ಚಾಮುಂಡೇಶ್ವರಿಯನ್ನು ನೋಡ ಬೇಕೆಂಬ ನಿರ್ಧಾರದಿಂದ ಬೆಳಿಗ್ಗೆ ಒಂಭತ್ತು ಗಂಟೆಗೆ ಸಿದ್ಧನಾದೆ. ನಾನು ಇಳಿದಿದ್ದ ದೊಡ್ಡ ಹೊಟೇಲಿನ ಮೆನೇಜರರನ್ನು ಕೇಳಿದೆ "ಚಾಮುಂಡಿ ಬೆಟ್ಟಕ್ಕೆ ಹೋಗ ಬೇಕು, ಬಸ್ಸು ಎಷ್ಟು ಗಂಟೆಗೆ ಹೊರಡುತ್ತದೆ?" ಎಂದೆ. ಅವರೆಂದರು "ಈ ದಿನ ಬಸ್ಸು ಆಫೀಸಿಗೆ ಹೋಗುವುದಿಲ್ಲ. ಒಂಭತ್ತು ಮೈಲಿಗಳಿವೆ. ಟೇಕ್ಸಿ ಆಥವಾ ಟೊಂಗಾ ಮಾಡಿಕೊಂಡು ಹೋಗಿ. ಮಂಗಳವಾರ ಮತ್ತು ಶುಕ್ರವಾರವಾದರೆ ಬಸ್ಸು ಆಫೀಸಿಗೆ ಹೋಗುತ್ತದೆ" ನಾನು ಈ ಯಾತ್ರೆಗೆ ಹೆಣ ವೆಚ್ಚಮಾಡಲು ಸಿದ್ಧನಾಗಿದ್ದಿಲ್ಲ. ಬರೇ ಕಾಲ್ನಡಿಯಿಂದಲೇ ಹೋಗಬೇಕು ಎಂದು ನೆನೆದುಕೊಂಡಿದ್ದೆ. ಅದನ್ನು ಕೇಳಿ ರೈಲ್ವೆ ಸ್ಟೇಶನಿಗೆ ಹೋದೆ. ಚಾಮುಂಡಿ ಬೆಟ್ಟದತ್ತ ಹೋಗುವ ಬಸ್ಸು ಉಂಟೋ?" ಎಂದು ಒಬ್ಬರನ್ನು ಕೇಳಿದೆ. ಅವರೂ ಇಲ್ಲವೆಂದರು, "ಟೇಕ್ಸಿ ಮಾಡಿಕೊಂಡು ಹೋಗಿ, ಒಂಭತ್ತು ರೂಪಾಯಿ ತಗಲುತ್ತದೆ" ಎಂದರು. ಮತ್ತೊಬ್ಬರನ್ನು ವಿಚಾರಿಸಿದೆ. ಅದೇ ಉತ್ತರ. "ಟೊಂಗಾ ಮಾಡಿಕೊಂಡು ಹೋಗಿ" ಎಂದರು. ಮಗು ದೊಬ್ಬರನ್ನು ವಿಚಾರಿಸಿದೆ "ಬಸ್ಸು ಇಲ್ಲ. ಟೇಕ್ಸಿ ಮಾಡಿರಿ" ಎಂದರು. "ಎನಂರೀ? ಒಂಭತ್ತು ಮೈಲು! ಯಾವನ ಸ್ಟರೀ ನೀವು! ಅದೇಕೆ ನಡೆದೇಕೊಂಡು ಹೋಗಬಾರದು?" ಎಂದು ಯಾರೂ ಕೇಳಲಿಲ್ಲ. ಎಲ್ಲರೂ ಸುಖದ ದಾರಿಯನ್ನೇ ತೋರಿಸುತ್ತಾರಲ್ಲ! "ಸುಣ್ಣ ಕೆಲಸ, ನಡೆಯಿರಿ" ಎಂದು ಹೇಳುವವರೇ ಇಲ್ಲವಲ್ಲಾ! ಹಾಗಾದರೆ ಒಂಭತ್ತು ಮೈಲುಗಳನ್ನು ನಡೆದೇ ತೀರಬೇಕು; ನೋಡೋಣ ಎಂದು ಹೊರಟೆ. "ಟಾಂಗ ಹೋಗಿ" ಎಂದರು ಒಬ್ಬರು. ನೆಟ್ಟಗೆ ದಕ್ಷಿಣಾಭಿಮುಖವಾಗಿ ಹೊರಟೆ. ಮೊದಲೊಮ್ಮೆ ನಾಲ್ಕು ವರ್ಷಗಳ ಮೊದಲು ಚಾಮುಂಡಿ ಬೆಟ್ಟವನ್ನು ಕಾರಿನಿಂದ ಏರಿ ಚಾಮುಂಡೇಶ್ವರಿಯನ್ನು ನೋಡಿರುವೆನಾದರೂ ಬೆಟ್ಟದ ದಾರಿಯನ್ನು ಅರಿಯದಾದೆ. ಒಂದೆರಡು ಮೈಲುಗಳನ್ನು ಪೇಟೆಯ ಮಾರ್ಗವಾಗಿ ನಡೆಯುತ್ತಲೇ ಬೆಟ್ಟವು ದೂರದಿಂದ ಕಾಣಿಸಿಕ್ಕಿತು. "ದೂರದ ಬೆಟ್ಟ ನುಣ್ಣಗೆ" ಎಂಬಂತೆ ಚಾಮುಂಡಿ ಬೆಟ್ಟವು ಹಿಮದಿಂದಾವೃತವಾದ ವಿಶಾಲ ಗುಡ್ಡದಂತೆ ಕಂಡಿತು. ಅದರ ಹತ್ತಿರ ಹತ್ತಿರ ಸಮೀಪಿಸುತ್ತಲೇ ಬೆಟ್ಟದ ಸೌಂದರ್ಯ, ಅದು ನಿಂತಿರುವ ಪ್ರಾಕೃತಿಕ ಲಕ್ಷಣಗಳೆಲ್ಲ ಒಂದೊಂದಾಗಿ ಚಿತ್ರಪಟದಂತೆ ಕಂಗೊಳಿಸಿದುವು. ನಾಲ್ಕು ಮೈಲು ದೂರದಿಂದ ಬೆಟ್ಟದ ಸೊಬಗೇ ಬೇರೆ. ಪೂರ್ವದಿಂದ ಪಶ್ಚಿಮ ಕ್ಕೆ ನೀಳವಾಗಿ ಮಲಗಿರುವ ಬೆಟ್ಟದ ಮಧ್ಯ ಭಾಗದ ತುತ್ತ ತುದಿಯಲ್ಲಿ ಮೈಸೂರು ಮಹಾರಾಜರ ಬೆಟ್ಟದ ಆರಮನೆಯ ಗಂಭೀರವಾಗಿ ನಿಂತಿದೆ. ಮನುಷ್ಯ ನಿರ್ಮಿತವಾದ ಅಧುನಿಕ ಅರಮನೆಯು ಭೂದೇವಿಗೆ ವಜ್ರದ ಬೆಂಡೋಲೆಯನ್ನಿಟ್ಟಂತೆ ತೋರುತ್ತದೆ. ಚಾಮುಂಡಿ ಬೆಟ್ಟದ ಸೊಬಗನ್ನು ನೂರುಮಡಿ ಹೆಚ್ಚಿಸುವ ಆ ಅರಮನೆಯು ನಿಂತಿರುವ ಶಾಂತವೂ ಗಂಭೀರವೂ ಆದ ಠೀವಿಯೇನು? ಮೇಲೆ ಮೇಲೆ ಉದಯಿಸುತ್ತಿರುವ ಸೂರ್ಯನ ಪ್ರಕಾಶವು ಅರಮನೆಯ ಮೇಲೆ ಬೀಳುತ್ತಿದೆ. ಅರಮನೆಯನ್ನು ಮುಟ್ಟಿಕೊಂಡಿರುವ ನೀಲ ವಸ್ತ್ರವೋ ಎಂಬಂತೆ ನೀಲ ವರ್ಣದ ಆಕಾಶವು ಎಲ್ಲೆಲ್ಲೂ ಕವಚಿಕೊಂಡಿದೆ. ಬೆಟ್ಟದ ಕಳೆಯನ್ನು ಏರಿಸಲೋ ಎಂಬಂತೆ ಬಿಳೀ ಮೋಡಗಳು ಸೂರ್ಯನನ್ನು ನಿಮಿಷ ನಿಮಿಷ ಮುಚ್ಚಿಕೊಂಡು ಒಮ್ಮೆ ಬೆಟ್ಟವನ್ನು ನೆರಳಿನಿಂದ ತುಂಬುತ್ತವೆ. ಮತ್ತೊಮ್ಮೆ ದೂರ ಹಾರಿ ಹೋಗಿ ಪುನಃ ಸುಪ್ರಕಾಶವನ್ನು ಬೀರುತ್ತವೆ. ಬೆಟ್ಟದ ಸುತ್ತಲೂ ವಿಶಾಲವಾದ ಪ್ರದೇಶ. ಹಸುರು ಬಣ್ಣದಿಂದ ಕಂಗೊಳಿಸುವ ಗದ್ದೆಗಳು, ಕೆರೆಕುಂಟೆಗಳು. ಅಲ್ಲಲ್ಲಿ ಗುಡಿಗುಂಡಾರಗಳು. ಅಲ್ಲಲ್ಲಿ ಮೇಯುವ ದನ, ಕರು ಎಮ್ಮೆಗಳು. "ಬೆಟ್ಟಕ್ಕೆ ಹತ್ತಿರದ ದಾರಿ ಯಾವುದು?' ಎಂದು ಒಬ್ಬ ನಾರಿ ಹೋಕರನ್ನು ಕೇಳಿದೆ ನನ್ನನ್ನು ತುದಿಯಿಂದ ಕಡೆ ತನಕ ನೋಡಿದರು ನನ್ನ ಬಿದ್ದರು ಜುಬ್ಬ ಜವರಲ್ಲಿ ಏನೋ ನಂದೇ ಹೆವನ್ನುಂಟು ಮಾಡಿದುತೆ ತೋರಿತು. "ಕಾಲ್ನಡಿಯಿಂದಲೇ ಹೋಗುತ್ತೀರೋ? ಹಾಗಾದರೆ, ಆಗೊಳ್ಳಿ, ರೇಸ್ ಕೋರ್ಸನ್ನು ದಾಟಿಕೊಂಡೇ ಹೋಗಿ ದೂರದಿಂದ ಕಾಣುತ್ತಿಲ್ಲವೆಯೆಲ್ಲ; ಒಂದು ಸಾವಿರ ಮೆಟ್ಟಿಲುಗಳಿವೆ. ಪತ್ತಿಕೊಂತು ಹೋಗಿ" ಎಂದರು. "ಥೇಂಕ್ಸ್" ಎಂದು ಹೊರಟೆ ರೇಸ್ ಕೋರ್ಸ್‌ನ ಭೂಮಿಯ ಮಧ್ಯ ದಿಂದಲೇ ಹೋದೆ. ಇನ್ನೇನು ಇನ್ನು ಎರಡು ಮೈಲುಗಳು. "ಅಪ್ಪೆ! ಬೆಟ್ಟ ಕಾಣುತ್ತಿದೆ.ಹತ್ತಿದಂತಾಯಿತು. ಇನ್ನು ಸುಲಭ!" ಎಂದು ಕೊಂಡು ಮುಂದಿದೆ. ರೇಸ್ ಕೋರ್ಸ್‌ನ ನೆಲವನ್ನು ಕೆಲಸಗಾರರು ಸರಿಗೊಳಿಸುತ್ತಿದ್ದರು. "ಈ ಭೂಮಿಯಿಂದಾಗಿ ಎಷ್ಟು ಲಕ್ಷಾಂತರ ಮಂದಿ ಹಣ ಕಳಕೊಳ್ಳುತ್ತಾರೆ!" ಎಂದು ನಾನೇ ಭಾವಿಸಿಕೊಂಡು ಮುಂದಿರಿದೆ. ಒಂದು ಹತ್ತಿಲನ್ನು ದಾಟಿದೆ. ಒಂದು ಜವುಗು ಭೂಮಿಯನ್ನು ನಡೆದೆ. ಕೆಲವು ಬೇಲಿಗಳ ಒಳಗಿಂದ ತೂರಿದೆ. ಕಡೆಗೆ ಒಂದು ಹತ್ತಿಲ ಬೇಲಿಯ ಬಳಿ ಹೋದೆ. ಅಲ್ಲೊಂದು ಸಣ್ಣ ಕೆರೆಯಿತ್ತು. ಮನುಷ್ಯರಾರೂ ಇರಲಿಲ್ಲ. ನಡೆಯುತ್ತಿರುವಷ್ಟರಲ್ಲಿ ಕೆರೆಯಲ್ಲಿ 'ಬಸಾಲ್ಲ" ಎಂಬ ಶಬ್ದ ಕೇಳಿಸಿತು; ಒಬ್ಬ ಮನುಷ್ಯನು ನೀರಿಗೆ ಹಾರಿದೋವಾದಿ. ಆದರೆ ಮನುಷ್ಯನಲ್ಲ. ನೀರು ತಳವು ಳವಾಗುತ್ತಿತ್ತು. ದೊಡ್ಡ ಮೊಸಳೆಯಾಗಿರಬೇಕು. ನುತ್ತೂ ಮುಂದಿದೆ. ದಾರಿ ಕಂಡಿತು. "ಬದುಕಿದೆ" ಎಂದು ದಾರಿ ಹತ್ತಿದೆ. ಮತ್ತೂ ದಾರಿಯಲ್ಲಿ ನಡೆದೆ. ಎರಡು ಫರ್ಲಾಂಗು ನಡೆಯುತ್ತಲೇ ಬೆಟ್ಟಕ್ಕೆ ಹೋಗುವ ಮೆಟ್ಟಿಲುಗಳು ಕಾಣಬಂದುವು. ನಡೆದೆ. ಅಲ್ಲೊಂದು ಛತ್ರ; ಇಲ್ಲೊಂದು ಛತ್ರ. ಒಬ್ಬಬ್ಬರು ಅಲ್ಲಲ್ಲಿದ್ದರು ಹತ್ತಿ ಉದ್ದ ಎರಡಡಿ ಅಗಲವಿರುವ ಬಂಡೆ ಕಲ್ಲುಗಳ ಮೆಟ್ಟಿಲುಗಳು. ಇದೇನು ಮಹಾ ಎಂದು ಹತ್ತಲಾರಂಭಿಸಿದೆ. ಹತ್ತು ಮೆಟ್ಟಿಲು ಹತ್ತುತ್ತಲೇ ಒಬ್ಬ ಸನ್ಯಾಸಿಯು ಒಂದು ಶಿವಲಿಂಗಕ್ಕೆ ಹೂಗಳನ್ನು ಹಾಕಿ ಆದರೆದರು ಇರುವ ಬಸವನಿಗೆ ನೀರೆರೆ ಚುತ್ತಿದ್ದನು. ಪಿಗ್ಮಿಗಳು ಮಕ್ಕಳಾಡುವ ಗೊಂಬೆಗಳಷ್ಟು ಗಾತ್ರದವುಗಳು "ಸಂಸಾರದ ಗಲಾಟೆಯನ್ನು ಬಿಟ್ಟು ಶಾಂತಿಯನ್ನು ಹೊಂದಿದೆನೇ ಧನ್ಯ!" ಎಂದು ಮನದಲ್ಲಂದುಕೊಂಡು ಮೇಲೆ ನಡೆದೆ. ನಲ್ವತ್ತು ಮೆಟ್ಟಿಲುಗಳನ್ನು ಹತ್ತುತ್ತಲೇ ನನ್ನ ಕಾಲು ಬಚ್ಚಿತು. ಬಾಯಾರಿಕೆಯಾಯಿತು. ಎಲ್ಲಿಯಾದರೂ ಒಂದಿಷ್ಟು ನೀರು ಸಿಗಬಹುದೋ ಎಂದು ನೋಡಿದೆ. ಎಲ್ಲಿಯೂ ನೀರಿಲ್ಲ. ಒಂದೊಂದು ಆನೆಯಷ್ಟು ದೊಡ್ಡ ಬಂಡೆಕಲ್ಲುಗಳು ಬೆಟ್ಟವಿಡೀ ಬಿದ್ದುಕೊಂಡಿವೆ. ಕೋಟಿ ಮುಖ್ಲ, ಶತ ಕೋಟಿಗಟ್ಟಲೆ ಲೆಕ್ಕದಿಂದ ಈ ಬಂಡೆ ಕಲ್ಲುಗಳನ್ನು ಮೇಲಿಂದ ಮೇಲಕ್ಕೆ ತಂದು ಹಾಕಿದ ಶಕ್ತಿ ಯಾವುದು? ಈ ಕಲ್ಲುಗಳಿಗೆ ಮುಂಡಿಗಿನ ಆಕಾರವನ್ನು ಕೊಟ್ಟವರು ಯಾರು? ಈ ಘನವಾದ ಬಂಡೆಕಲ್ಲುಗಳ ಚೆಂಡುಗಳು ಕೆಲವು ಭೂಮಿಯನ್ನು ಆವರಿಸಿಕೊಳ್ಳದೆ ಎರಡಂಗುಲ ಮೂರಂಗುಲ ಸ್ಥಳದಲ್ಲಿ ನಿಂತಿರುವ ಯಾವ ಮಹಿಮೆಯಿಂದ? ಎಂದು ತರ್ಕಿಸಿಕೊಳ್ಳುತ್ತಾ ಮುನ್ನಡೆದೆ ಮಧ್ಯಾಹ್ನದ ಬಿಸಿಲು ತಲೆಗೆ ಬಡೆಯುತ್ತಿತ್ತು. ಆದರೆ ಬೆಟ್ಟದ ತಂಗಾಳಿಯು ಆ ಶಾಕವನ್ನು ಹೊಡೆಯುತ್ತಿತ್ತು. ಸೂರ್ಯನು ತಲೆಯ ನೇರಲೆ ನೀಲಾಕಾಶದ ಮಧ್ಯೆ ನನ್ನನ್ನು ಇಣುಕುತಿರುವನು. ಮೋಡಗಳು ಶಕ್ತಿಯ ರಾಶಿಯನ್ನು ಹಿಡಿದುಕೊಂಡು ಓಡುತ್ತವೋ ಎಂದು ಗೋಚರಿಸುತ್ತಿದ್ದುವು. ಹಿಂದೆ ನೋಡಿದೆ. ಉತ್ತರದಲ್ಲಿ ಮೈಸೂರು ಪಟ್ಟಣದ ಮರ ಪುಟ್ಟುಗಳು ಕಾಣುತ್ತಿದ್ದುವು. ಸ್ವಲ್ಪ ಕೂತೆ-ಒಂದು ಮರದಡಿಯಲ್ಲಿ ಪುನಃ ನಡೆದೆ; "ಸಾವಿರ ಮೆಟ್ಟಿಲುಗಳಿವೆ" ಎಂದು ಅವಿಕೊಬ್ಬರು ಹೇಳಿದುದು ಜ್ಞಾಪಕಕ್ಕೆ ಬಂತು; ಮೈ ಜುಮ್ಮೆಂದಿತು. ಸಾವಿರ ಮೆಟ್ಟಿಲುಗಳ ಬಂಡೆಕಲ್ಲುಗಳನ್ನು ಈ ಶರೀರವು ತುಳಿಯೆವುದುಂಟೇ? ಮೊದಲಾವಾಗಲಾದರೂ ಬೆಟ್ಟ ಹತ್ತಿ ಅಭ್ಯಾಸವಿದ್ದರೆ ಚಿಂತಿಲ್ಲವಿತ್ತು. ಇದು ನವನಾಗರಿಕನ ಶರೀರ. ಕಾರಿನಲ್ಲಿ ಆತ್ತ ಹೋಗಿ ಕಾರಿನಲ್ಲಿ ಇತ್ತ ಬಂದೆ "ಕೋಮಲ" ಶರೀರ. ಇದು ಪಣಿದೀತೆ? ಮೊನ್ನೆ ಜೊಂಬಾಯಿಗೆ ಹೋವಾಗ ಟಿಕ್ಸಿ, ಟ್ರೇಮ್ ಮತ್ತು ಬಸ್ಸ್‌ಗಳಲ್ಲದೆ ಈ ಸೇಹ ನೆಲವನ್ನು ಮುಟ್ಟಿಲಿಲ್ಲ. ಇಂದು 'ಸಾವಿರ ಮೆಟ್ಟಿಲು'ಗಳನ್ನು ಹತ್ತಲಾದೀತೆ? ಕ್ಷಣನೆ ಎಲ್ಲವೂ ಸ್ಮಶಾನೆಗೆ ಬಂದುವು. ಪೇಟೆ ಪಟ್ಟಣಗಳ ಜೀವನ,—ಇಂದು ಚಾಮುಂಡಿ ಬೆಟ್ಟದತ್ತ ಹೊರಟಸ್ಟಿತಿ ಎಷ್ಟು ವ್ಯತ್ಯಾಸ! ಅದಾಗಿ ಮನುಷ್ಯರೊಬ್ಬರೂ ಈ ಬೆಟ್ಟದತ್ತ ಬರುವುದಿಲ್ಲ ವಶಂತ ಕಳೆದು ಹತ್ತು ದಿನಗಳಾದುವಷ್ಟೆ! ಆದರೂ ಜನರ ಸುಳಿವಿಲ್ಲ. ಪೇಟೆಯಲ್ಲಾದರೆ ಲಕ್ಷಾಂತರ ಜನರಿದ್ದಾರೆ. ಮತ್ತೂ ಕತ್ತು ಮೆಟ್ಟಿಲುಗಳನ್ನು ಧೈರ್ಯದಿಂದ ನಡೆದೆ, ಸಾಗಲಿಲ್ಲ; ಆಗಲಿಲ್ಲ. ಕಾಲುಗಳು ಮುಂದೇಳಲಿಲ್ಲ. ಕಾಲುಗಳನ್ನು ನೆಟ್ಟಗಿಟ್ಟು ದೇಹವನ್ನು ನೀಟಪಿಟ್ಟು, ಶ್ವಾಸವನ್ನು ಮೂಗಿನಿಂದ ಬಿಟ್ಟರೂ ದೇಹವು ವೇಲೇರದು. "ಅಯ್ಯೋ, ಟಾಕ್ಸಿ ಮಾಡುತ್ತಿದ್ದರೆ ಹಿತವಿತ್ತು" ಎಂದು ಕೊಂಡೆ. ಹಣೆ ಬೆವತಿತು; ಕಾಲು ಬೆವತಿತು; ಆಯಾರಿಕೆಯಾಯಿತು. ಅಲ್ಲೆಲ್ಲಿಯೂ ನೀರಿದ್ದಿಲ್ಲ. ಆಪ್ಪರಲ್ಲಿ ಬೆಟ್ಟದ ಮೇಲಿನಿಂದ ಏನೋ ಬೆದ್ದುಕೊಂಡು ಎದ್ದುಕೊಂಡು ಓಡಿಕೊಂಡುಬರುವ ಶಬ್ದ ಕೇಳಿಸಿತು. ಮನುಷ್ಯನೊಬ್ಬನು ಓಡಿಕೊಂಡು ಬರುವಂತೆ ಭಾಸವಾಯಿತು. ಹೌದು -ಅದೊಬ್ಬನು ಪೈಜಾಮ ಉಟ್ಟುಕೊಂಡು ಕೈಯಲ್ಲೊಂದು ರಿಕಾರ್ಡ್ ಹಿಡಿದುಕೊಂಡು ಮೇಲಿಂದ ಪಟಪಟಾಲ್ಲೆಂದು ಓಡಿಕೊಂಡು ಬರುತ್ತಿದ್ದನು. ನೋಡಿ ಆಶ್ಚರ್ಯವಾಯಿತು. ಇದೇನಪ್ಪ ಆಟ! ಬೊಂಬಾಯಿಯಲ್ಲಿ ಎಳವಾಳಿಗೆಯಿಂದ ಕೆಳಗೆ ಬರುವವನನ್ನು ಕಂಡಿದ್ದೇನೆ. ಕೆಲವರು ಓಡಿಕೋಡೇ ಬರುತ್ತಾರೆ. ಆದರೆ ಕೈಗೆ

(೧೭ನೇ ಪುಟ ನೋಡಿರಿ)

Kalmanje Vyasacharya's, Metal-ware Emporium,
Estd: 1919.] CAR STREET, UDIPI, S. K. [Post Box No. 9
ಸರ್ವರಿಗೂ ಬೇಕಾದ ವಿಶೇಷತರದ–

:: ಉಡುಪಿ ಪಾತ್ರೆಗಳು ::
ಪುಡ್ಡ ಚೀನೀ ಬೆಳ್ಳಿಯ ವಿವಿಧ ಪಾತ್ರೆಗಳು, ದೇವತಾ ಪೂಜಾ ಕಾಲದಲ್ಲಿ ಉಪಯೋಗಿಸುವ ಪಾತ್ರೆಗಳು, ತಾಂಬ್ರ, ಹಿತ್ತಾಳೆ, ಪುಡ್ಡ ಕಂಚು ಪೊದಲಾದ ಚಿಕ್ಕ ದೊಡ್ಡ ಹಲವು ವಿಧದ ಪಾತ್ರೆಗಳು, ಜಾಘಂಟಿಗಳು ಇತ್ಯಾದಿಯಾವಾಗಲೂ ನಮ್ಮಲ್ಲಿ ನಾನಾ ಟಕ್ಕೆ ಸಿದ್ಧವಾಗಿವೆ.
ವಿ. ಸೂ: ಸವೀನ ಸ್ಟೈನ್‌ಲೆಸ್ ಸ್ಟೀಲಿನ ಎಲ್ಲಾ ಉಪಕರಣಗಳೂ ದೊರೆಯುತ್ತವೆ.
ಪರವೂರಿನ ಆರ್ಡರುಗಳಿಗೆ ಸಕಾಲದಲ್ಲಿ ನಿಗಾ ಕೊಡಲಾಗುವುದು.
ಪಾತ್ರೆ ಮ್ಯಾಲು! ನ್ಯಾಯವಾದ ಕೂಕ!! ಒಂದೇ ದರ!!!
ವಿಶೇಷ ಮಾಹಿತಿಗೆ—
ಕಲ್ಕುಂಜೆ ವ್ಯಾಸಾಚಾರ್ಯರ ಪಾತ್ರೆಭಂಡಾರ
ಪ್ರಸಿದ್ಧ ಪಾತ್ರೆ ವ್ಯಾಪಾರಸ್ಥರು ಶ್ರೀಪದನಂತೇಶ್ವರದ ಬಳಿ. ಉಡುಪಿ, ದ.ಕ

ಗೀತೆಯ ಸಲಹೆ ಪ್ರೀತಿ

ಆಚಾರದಲ್ಲಿ ಕರ್ತವ್ಯ ನಿಷ್ಠೆಗೆ ಕೊಟ್ಟರುವ ಮಹತ್ವವನ್ನೇ ಅಂತರ್ಯದಲ್ಲಿ ಪ್ರೇಮಭಾವವನ್ನು ನೆಲೆಗೊಳಿಸುವುದಕ್ಕೂ ಗೀತೆಯು ನೀಡಿದೆ.

ಬರೆದವರು: ಶ್ರೀ ತದ್ದಲಸೆ ವಿಘ್ನೇಶ್ವರ ಶರ್ಮಾ, ಶಿರಸಿ.

ಶ್ರೀ ಭಗವದ್ಗೀತೆಯು ಮಾನವ ಲೋಕಕ್ಕೆ ದೊರೆತ ಒಂದು ಅಪೂರ್ವವಾದ ಸಲಹೆ. ಆದರಲ್ಲಿ ಅಧಿಕಾರಸ್ಥಾನದಿಂದ ಬಜಾಯಿಸಿದ ಅರ್ಜುನಂತಹ ಶ್ರೀಮದ್ಭಾಂಭೀರ್ಯವಿಲ್ಲ. ಕಠಿಣವಾದ ಶಾಸ್ತ್ರ ಸಮಸ್ಯೆಯನ್ನು ಬುದ್ಧಿಯ ಒರೆಗಲ್ಲಿಗೆ ಹಚ್ಚಿ ಚರ್ಚಿಸುವಂತಹ ದೊರಗು ತನವೂ ಇಲ್ಲ. ಮೊದಲಿನಿಂದ ಕೊನೆಯವರೆಗೆ ಅದರ ನಿರೂಪಣೆಯಲ್ಲಿ ತೋರಿ ಬರುವ ವಿಶೇಷವೆಂದರೆ-ಪ್ರೀತಿಯು ಸುಗಂಧವೇ ಸರಿ ಶ್ರೀಕೃಷ್ಣನಿಗೆ ಅರ್ಜುನನು ಜೀವದ ಗೆಳೆಯ. ಆ ಗೆಳೆಯನಿಗಾಗಿ ದಿವ್ಯ ಪ್ರೇಮದ ಸಲಹೆಯನ್ನು ಅಚಿಂತ್ಯ ಪ್ರೇಮದಿಂದ ನೀಡಿದ್ದಾನೆ.

ಮಾನವನಿಗೆ ಅನಂತಕಾಲ ಸುಖಿಯಾಗಿ ಬಾಳುವ ಅವ್ಯಾಹತ ಆಶೆಯೊಂದಿರುವದು ಅದು ಅವನ ಹೃದಯದೊಂದಿಗೇ ಹುಟ್ಟಿಕೊಂಡಿದೆ. ಅವನ ಬಾಳುನೆಯ ಅವಿಭಾಜ್ಯವಾದ ಅಂಗವಾಗಿಸೆ. ಯಾರು ಅಂಕುಶವಿಟ್ಟರೂ ಎಂಥ ಸಂದರ್ಭದಲ್ಲಿಯೂ ಅದು ಅಳಿಯುವದಿಲ್ಲ.

ಆದರೆ ಹಾಗೆ ಆತ ಸುಖಿಯಾಗಲಾಪನೇ? ಸಾವಿನ ಕೈಚಪ್ಪಿ ಚಿರಕಾಲ ಬಾಳಲಾಪನೇ? ಈ ಅಭಿಲಾಷೆಯಿಂದ ಬಗೆ ಬಗೆಯ ಚಿಂತೆಗೊಳಗಾದ ಮಾನವ ಹೃದಯವನ್ನು ಮೃದುವಾಗಿ ಸಂತೈಸುವದಾವುದು? ಧೈರ್ಯ ಕೊಡುವದಾವುದು? ಎಂದರೆ ಗೀತೆಯ ಪಂಗೀತವೇ! "ಆಚ್ಛೇದ್ಯೋಽಹ ಮದಾಹ್ಯೋಽಹಂ ನನ್ನನ್ನು ತುಂಡರಿಸಲಾರರು. ಯಾರೂ ನನ್ನನ್ನು ಸುಡಲಾರರು, ಎಂದು ಧೈರ್ಯವಾಗಿ ನಮ್ಮಿಂದ ಒಡನುಡಿಸುವದು ಗೀತೆಯೊಂದೇ "ಯತ್ಸುಖಾನ್ನಾಪರಂ ಸುಖಂ" ಇದಕ್ಕೆ ಮೀರಿದ ಸುಖವಿಲ್ಲ. ಎಂಬ ಅವ್ಯಕಾನುಭವದಲ್ಲಿ ನಮ್ಮನ್ನು ನುಸುಳಿಗಿಸುವದು ಈ ಭಗವದ್ಗೀತೆ.

ಗೀತಾ ಸಾಗರದೊಳಗೆ ಇಳಿದು ಕೆಲವರು ಅಮೃತವನ್ನು ಹುಡಿಕಿದರೆ ಮತ್ತೆ ಕೆಲವರು ದ್ಯೆತವನ್ನು ಅರಸಿದರು. ಬೇರೆ ಕೆಲವರು ವಿಶಿಷ್ಟಾದ್ವೈತವನ್ನು ಶೋಧಿಸಿದರು. ಆವರವರಿಗೆ ಬೇಕಾದುದೆಲ್ಲವೂ ಸಿಕ್ಕದೇ ಅವರಿಗೆ? ಆದರೆ ಜೊತೆಗೆ ಮತ್ತೊಂದು ವಿಶೇಷವೂ ಸಿಕ್ಕಿದೆ. ಗುರಿಗೊಂಡು ಹುಡುಕದಿದ್ದರೂ ಅದು ತಾನಾಗಿ ಅವಂ ಕೈ ತಾಕಿಕೊಂಡು ಕೈ ಸೇರಿದೆ. ಬಿಟ್ಟರೂ ಬಿಡದ ವಿಸಯವಾಗಿ ಅವರೆಲ್ಲರ ತತ್ವ ವಿವೇಚನೆಯ ಪ್ರಣಾಲಿಯಲ್ಲಿ ಪಕ್ಷಪಾತವಿಲ್ಲದೇ ಬಿಂಕುಕೊಂಡುಬಿಟ್ಟಿದೆ. ಆದಾವುದೆಂದರೆ ಮಾನವ ಜೀವನ ವಿಕಾಸಕ್ಕೆ ಸಾಧನವೂ ಸಾಧ್ಯವೂ ಆದ ಮಾನವ ಪ್ರೇಮ! ಬೇಕಾದರೆ ಅಮರವಾದ ವಿಶ್ವ ಪ್ರೇಮವೆನ್ನಿ! ಗೀತೆಯ ಎಲ್ಲಾ ಸಲಹೆಗಳೊಂದಿಗೂ ಅದು ನಯನಾಗಿ ಗೃಹೀತ ವಿಷಯವಾಗಿ ಅವಿಭಾಜ್ಯವಾಗಿರುವುದು. ಎಲ್ಲಾ ತತ್ವಜ್ಞಾನಿಗಳೂ ಇದನ್ನು ಒಂದಿಲ್ಲೊಂದು ವಿಧದಿಂದ ಒಪ್ಪಿಕೊಂಡಿದ್ದಾರೆ. ನಿಸ್ವಾರ್ಥಂಕ ಪ್ರೇಮ ಹೃದಯದವಿಲ್ಲದವನಿಗೆ ಯಾವ ಸಾಧನವೂ ಪ್ರಗತಿಯನ್ನಾಗಲೀ ಪೂರ್ಣತೆಯನ್ನಾಗಲೀ ಹೊಂದಲಾರದೆಂಬುದೇ ಗೀತೆಯ ಆಶಯ.

ಗೀತೆಯ ಪ್ರೀತಿಯೆಂದರೆ ವಸ್ತುಗಳಿಂದಾಗಲೀ ವ್ಯಕ್ತಿಗಳಿಂದಾಗಲೀ ಗಡಿಗಟ್ಟಿದಂಥಾದ್ದಲ್ಲ. "ಸರ್ವ ಭೂತೇಷು ಯೇನೈಕಂ ಭಾವಮವ್ಯಯ ಮೀಕ್ಷತೇ' ಎಂದು ಭಗವಂತನೇ ಘೋಷಿಸಿದ್ದಾನೆ. ಭಾವ ಎಂಬ ಮಾತಿಗೆ "ಸತ್ಯ" "ಅಸ್ತಿತ್ವ" ಎಂದು ಮುಂತಾಗಿ ಬೇರೆ ಬೇರೆ ಅರ್ಥವನ್ನು ಮಾಡುವರು. ಪ್ರೀತಿ ಎಂಬ ಅರ್ಥವೂ ಇದಕ್ಕಿರುವುದು. ಪ್ರಕರಣದ ಬಲದಿಂದ ಬೇರೆ ಅರ್ಥವನ್ನು ಬೇರೆಯವರು ಮಾಡಿದರೂ "ಭಾವ" ಎಂಬ ಶಬ್ದಕ್ಕೆ "ಪ್ರೀತಿ" ಎಂಬ ಧ್ವನಿಯೇ ನಮಗೆ ತೋರುವುದು. ಏಕೆಂದರೆ ಗೀತೆಯಲ್ಲಿ ಪ್ರೀತಿಯ ಸಂಬಂಧವಿಲ್ಲದ ಸಾಧನವಾಗಲೀ ಸಿದ್ಧಾಂತವಾಗಲೀ ಇಲ್ಲವೆಂದೇ ನಮ್ಮ ನಂಬಿಗೆ. ಸರ್ವಸತ್ಯ ಸ್ವರೂಪನಾದ ಮಂಗಲಮಯನೂ, ಹೃದಯಂಗಮನೂ ಆದ ದೇವರು ಪರಮ ಪ್ರೇಮರೂಪನೆಂದು ಉಪನಿಷತ್ತುಗಳೂ ಒತನುಡಿಯುವುವು. (ಸತ್ಯಂ, ಶಿವಂ, ಸುಂದರಂ, ರಸೋವೈಸಃ) ಈ ದೃಷ್ಟಿಯಿಂದಲಾದರೂ ಭಾವ ಎಂಬ ಶಬ್ದಕ್ಕೆ ಪ್ರೇಮರೂಪನಾದ ಈಶ್ವರನೆನ್ನೋಣ, ಅಂತಹ ಈಶ್ವರನ ಆರಾಧನೆಗೆ ಸಾಧನವಾವುದು? ಸ್ವಾರ್ಥವೇ? ಸಂಕೋಚವೇ? ಜೀವ ಲೋಕವನ್ನೆಲ್ಲ ಬಿಟ್ಟು ಆಚೆಗಿರುವ ಅಸ್ಪೃಶ್ಯದ ಅಗಮ್ಯದ ಚಿಂತನವೇ? ನೆರ ಹೊರೆಯನ್ನು ಮರೆತು ಕಲ್ಲು ಕಂಚುಗಳ ಮೂರ್ತಿಯಲ್ಲಿಯೇ ಸರ್ವಸ್ವವನ್ನು ಭಾವಿಸುವದೇ? ಎಂದರೆ ಅದಿಲ್ಲವೂ ಉಪಸಾಧನಗಳಾಗಿರಲಿ! ಆದರೆ ಅಷ್ಟಕ್ಕೆಯೇ ದೃಷ್ಟಿ ಕುಂದುವುದು ಬೇಡ. ಅಖಿಲ ಜೀವಲೋಕದಲ್ಲೆಲ್ಲ ನಿನ್ನ ಪ್ರೇಮದ ದೇವರನ್ನು ಕಂಡು ನಿನ್ನ ಹಾರ್ದಿಕವಾದ ವಿರುದ್ಧ ನಿಃಸ್ವಪಟ ಪ್ರೇಮದಿಂದ ಆಲ್ಲೆಲ್ಲ ಆರಾಧನೆ ನಡಿಸು. ನಿನ್ನ ಆರಾಧನೆ ವಿಶಾಲವಾಗಲಿ! ಆಗ ನಿನ್ನ ಸಾಧನವೂ ಸಿದ್ಧಿಯಾಗುವದು. ನಿನ್ನ ಆರಾಧನೆಯ ಧ್ಯೇಯವೂ ತೀರ ಸನ್ನಿಹಿತವಾಗುವದು. ಸ್ವಾಭಾವಿಕವಾದ ಹೃದಯ ಪ್ರೇಮವನ್ನು ಅನಂತ ಪ್ರೇಮಮಯನಿಗೆ ಸಮರ್ಪಿಸಿ ಕೃತಾರ್ಥನಾಗು ಎಂದೇ ಗೀತೆಯ ಸಂದೇಶ.

ಇನ್ನು ಹಾಗೆ ಶ್ರೀತಿಜೀವಿಯನ್ನೂ ಪ್ರತಿ ವ್ಯಕ್ತಿಯನ್ನೂ ವಿಶಾಲ ಪ್ರೇಮದಿಂದ ಕಾಣುವುದಾದರೆ ಕ್ರಿಯೆ ಪ್ರತಿಕ್ರಿಯೆಗಳಿಂದ ತುಂಬಿದ ಜಗತ್ತಿನಲ್ಲಿ ಉಳಿಗಾಲವುಂಟೇ ಎಂಬ ಶಂಕೆಗೂ ಗೀತೆಯು ಉತ್ತರವಿದೆ– ಆಂತರ್ಯದಲ್ಲಿ ಅಪಾರವಾದ ಪ್ರೇಮ ತುಂಬಿರಲಿ! ಆದರೆ ವ್ಯವಹಾರದಲ್ಲಿ ಧೈರ್ಯವೂ—ಕರ್ತವ್ಯನಿಷ್ಠೆಯೂ ಅಚಲವಾಗಿರಲಿ" ಎಂಬುದು.

The Academy of General Education,

MANIPAL, S. K.

Applications are invited from students for admission to the proposed Engineering College and Law College sponsored by thy Academy.

Graduates or under-Graduates in Maths, Physics and Chemistry alone need apply for the Civil Engineering course. The College will be affiliated to the Karnatak University. The duration of the course is 3 years. Classes are expected to be opened on 15th June, 1957 Location of the College is in Manipal. Advance reservation for 100 students is offered against payment of Rs. 2547—8—0 as follows:

Donation	Rs.	1500–0–0	
Annual tution fee	Rs.	1000–0–0	
Academy membership fee	Rs.	30–0–0	
Reservation fee	Rs.	8–0–0	
Incidental Charges	Rs.	9–8–0	Rs. 2547–8–0

If for any reason, the College does not come into existence, a sum of Rs. 2500/ becomes refundable.

The proposed Law College will be started in Udipi on 15th June, 1957. The College will be affiliated to the Karnatak University and an inspecting commission on behalf of the University is expected shortly. The LL.B. Course will be for 2 years for graduates and 3 years for under-graduates. Persons seeking admission may apply immediately for reservation of seats remitting Rs. 397—8—0 as follows:

Annual Tution fee	Rs.	300–0–0	
Admission fee	Rs.	50–0–0	
Reservation fee	Rs.	8–0–0	
Incidental charges	Rs.	9–8–0	
Academy membership fee	Rs.	30–0–0	Rs. 397–8–0

A sum of Rs. 350/- becomes refundable if the College does not come into existence for any reason.

For further particulars, apply to:

MANIPAL,
1st January, 1957.

Dr. T. M. A. Pai, M. B., B. S.,
Registrar,
Academy of General Education.

NAVAYUGA

Popular Kannada Weekly

Founder:—

A. B. SHETTY, *M. L. A.*

Former Minister for Public Health, Govt. of Madras.

At Present Minister for Health Govt. of Mysore.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೩	೩೧-೧-'೫೭	೨೧

ಸಿಂಹಾವಲೋಕನ

ಮೊನ್ನೆಯಷ್ಟೇ ನಾವು ಮುನಃ ಪ್ರಜಾರಾಜ್ಯ ದಿನೋತ್ಸವವನ್ನು ಆಚರಿಸಿದೆವು: ನಾವು ಕೈಗೂಡಿಸಿಕೊಂಡಿರುವ ಪ್ರಗತಿಗಾಗಿ ಹೆಮ್ಮೆ ಪಟ್ಟುಕೊಂಡೆವು. ಇದರಲ್ಲಿ ತಪ್ಪೇನೂ ಇಲ್ಲ. ಏಕೆಂದರೆ ನಮ್ಮ ಸಾಧನೆಯೇ ಅಷ್ಟು ಅಭಿಮಾನಾಸ್ಪದವಾದುದಾಗಿದೆ. ನರೆಯ ಪಾಕಿಸ್ತಾನದ ಸ್ಥಿತಿಗತಿಯೊಡನೆ ಹೋಲಿಸಿದರೆ ಗೊತ್ತಾಗುತ್ತದೆ— ಸ್ವಾತಂತ್ರ್ಯವನ್ನು ಪಡೆದು ಜನತೆಯ ಏಳಿಗೆಗಾಗಿ ಶ್ರಮಿಸಿದ ಸರಕಾರ ಯಾವುದು ಎಂದು. ಪಾಕಿಸ್ತಾನಕ್ಕೂ ಭಾರತಕ್ಕೂ ಒಟ್ಟೊಟ್ಟಿಗೇನೇ ಸ್ವಾತಂತ್ರ್ಯ ದೊರೆಯಿತು. ಆದರೆ ನಾವು ಗಳಿಸಿದಷ್ಟು ಪ್ರಗತಿಯನ್ನು ವಿಧಾಯಕ ಕ್ಷೇತ್ರದಲ್ಲಿ ಪಾಕಿಸ್ತಾನವು ಗಳಿಸಿಲ್ಲ. ನಾವು ಎರಡನೇ ಯೋಜನೆಯಲ್ಲಿ ಪದಾರ್ಪಣ ಮಾಡಿದ್ದೇವೆ; ಅದಿನ್ನೂ ಒಂದನೇ ಯೋಜನೆಯ ಹೊಸ್ತಿಲಲ್ಲೆ ತಡವರಿಸುತ್ತಿದೆ. ನಾವು ಎರಡನೇ ಮಹಾಚುನಾವಣೆಯನ್ನು ಇನ್ನು ಕೆಲವೇ ದಿನಗಳಲ್ಲಿ ನಡೆಸಲಿದ್ದೇವೆ; ಆದರೆ ಪಾಕಿಸ್ತಾನದಲ್ಲಿ ಚುನಾವಣೆ ನಡೆಸಲು ಇನ್ನೂ ಸರಕಾರವು ಸಿದ್ಧವಾಗಿಲ್ಲ. ರಾಜಕೀಯ ದಕ್ಷತೆಗಾಗಿ ಭಾರತ ಸರಕಾರವು ಹೆಸರಾಗಿದೆ. ಅರಾಜಕತೆ ಮತ್ತು ಅಶಾಂತಿಗಾಗಿ ಪಾಕಿಸ್ತಾನವೆಡೆ ಬೊಟ್ಟಿತ್ತಿ ತೋರಿಸಲಾಗುತ್ತದೆ. ಅದುದರಿಂದ ಭಾರತದಲ್ಲಿ ಏನೂ ನಡೆದಿಲ್ಲವೆನ್ನುವವರು ಪಾಕಿಸ್ತಾನದ ಸ್ಥಿತಿಗತಿಯನ್ನು ಕಂಡದ್ದಾದರೆ ಏನು ಹೇಳಿಯಾರು? ಅದೂ ಒಂದು ರಾಷ್ಟ್ರ ಎಂದ ಮೇಲೆ ಅಲ್ಲಿಗಿಂತ ಇಲ್ಲಿನ ವಾತಾವರಣವು ತುಂಬ ನೆಮ್ಮದಿಯಾಗಿದೆ; ಜನ ಹೆಚ್ಚು ಸುಖಿಗಳಾಗಿದ್ದಾರೆ ಎಂದೆನ್ನಲು ಸಂದೇಹಪಡುವುದೇಕೆ? ನಿಜಕ್ಕೂ ನಾವು ಪ್ರಜಾರಾಜ್ಯವಾಗಿ ಭಾರತವನ್ನು ಘೋಷಿಸಿಕೊಂಡ ಬಳಿಕ ಪ್ರಗತಿ ಪಥದಲ್ಲೇ ಮುಂದರಿಯುತ್ತಿದ್ದೇನೆ. ವಿದೇಶಗಳಿಂದ ಬಂದಿರುವ ದೊಡ್ಡ ದೊಡ್ಡ ರಾಜಕೀಯ ಪಟುಗಳು ನಮ್ಮ ದೇಶದ ಪ್ರಗತಿಗಾಗಿ ಆಶ್ಚರ್ಯಪಟ್ಟುಕೊಂಡಿದ್ದಾರೆ. ಜನರ ದಾರಿದ್ರ್ಯವನ್ನು ನಿರ್ಮೂಲಗೊಳಿಸಿ ಸಂಪತ್ತಿನ ಸ್ವೋತ ಸಂವರ್ಧನೆಗೆ ನೆರವಾಗುವ ಮೂಲಭೂತ ಯೋಜನೆಗಳನ್ನು ಯಶಸ್ವಿಯಾಗಿ ಕಾರ್ಯಗತ ಗೊಳಿಸಿರುವುದಕ್ಕೆ ಅವರೆಲ್ಲ ಮೆಚ್ಚುಗೆಯನ್ನು ಪ್ರದರ್ಶಿಸಿದ್ದಾರೆ. ಇದು ಬೊಳ್ಳು ಪ್ರಶಂಸೆ ಎಂಬೆನ್ನುವ ಹಾಗೇನೂ ಇಲ್ಲ. ಈ ವರ್ಷದ ಮಹಾಸಾಧನೆಯಾಗಿ ಹಿರಾ ಕುಡದ ಜಲಶಕ್ತಿಯನ್ನು ಎತ್ತಿ ತೋರಿಸಬಹುದು. ಇದೇ ಪ್ರಕಾರ ನಾಮಾಜಿಕ ಹಾಗು ರಾಜಕೀಯ ರಂಗದಲ್ಲೂ ಮುನ್ನಡೆಯ ಕ್ರಮಗಳನ್ನು ಕೈಗೊಳ್ಳಲಾಗಿದೆ.ಹಿಂದೂ ಕಾಯಿದೆಗಳ ಕ್ರೋಢೀಕರಣವನ್ನು ನಿದರ್ಶನವಾಗಿತ್ತು ಸಾಮಾಜಿಕ ರಂಗದಲ್ಲಿ ಮಾಡಲೆಳಸಿದ ಸುಧಾರಣೆಯ ಚಿತ್ರಾಂಕ ನವನ್ನು ನಾವು ಈ ವರ್ಷ ಮಾಡಬಹುದು. ಅದೇ ರೀತಿ ಹೆಚ್ಚು ಕಡಿಮೆ ಭಾಷೆಯ ತಳಹದಿಯ ಮೇಲೆಯೇ ರಾಜ್ಯಗಳ ಪುನಾರಚನೆಯನ್ನು ಮಾಡಿರುವ ಸಂಗತಿಯನ್ನೂ ರಾಜಕೀಯ ರಂಗದ ಉಲ್ಲೇಖನೀಯ ಚಟುವಟಿಕೆ ಎಂದು ಹೇಳಬಹುದು ಇವೆಲ್ಲವನ್ನೂ ಜನತೆಯ ಸಹಕಾರ ದೊಡನೆ ಸಾಧಿಸಲಾಯಿತು ಚರ್ಚೆ, ವಿಚಾರವಿನಿಮಯ ಮತ್ತು ಶಾಸನಾಂಗದ ಮಟ್ಟದಲ್ಲಿಯೇ ಈ ಸಾಧನೆ ರೂಪುಗೊಂಡಿತು; ಹೊರತು ಮಕಪ್ರದರ್ಶನ ಮತ್ತು ಒತ್ತಾಯಗಳು ನಿರ್ಣಯಗಳ ಮೇಲೆ ಪ್ರಭಾವವನ್ನು ಬೀರಲಿಲ್ಲ. ರಾಜ್ಯಗಳ ಪುನಾರಚನೆಯು ನಡೆದ ದೆಸೆಯಿಂದ ಜೆಚ್ಚಿನ ಲಾಭವಾಗುವುದಿದ್ದರೆ ಕರ್ನಾಟಕಕ್ಕೆ ಎಂದೆನ್ನಬಹುದು. ಆಂಧ್ರ ರಾಜ್ಯವಾದೊಡನೆಯೇ ಕರ್ನಾಟಕದ ಪ್ರಶ್ನೆಯನ್ನು ಎತ್ತಿಕೊಳ್ಳಬೇಕೆಂದು ಒತ್ತಾಯಿಸಿದರು. ಕನ್ನಡಿಗರು —ಇಂದು ನಮಗೆ ಬೇಕಾದ ರಾಜ್ಯದೊರೆತಿದೆ. ಕಾಸರಗೋಡಿನಿಂದ ಗಡಿ ಪ್ರದೇಶಗಳು ಅನ್ಯಾಯವಾಗಿ ಕೈಬಿಟ್ಟು ಹೋಗಿರುವುದು ನಿಜ. ಆದಾಗ್ಯೂ ಉಳಿದ ಕನ್ನಡಿಗರ ಪಾಲಿಗೆ ಒಕ್ಕೂಟ ಪ್ರದೇಶವೊಂದು ಸಿಕ್ಕಿದೆ. ಹರಿದು ಹಂಚಿಹೋದ ದೆಸೆಯಿಂದ ಪ್ರಗತಿಹೊಂದಲು ಸಾಧ್ಯವಿಲ್ಲದೆ ಹೋಯಿತೆಂಬ ಅಸಮಾಧಾನಕ್ಕೆ ಅಥವಾ ಕುಂಟು ನೆಪಕ್ಕೆ ಇನ್ನು ಅವಕಾಶವಿಲ್ಲ. ನಮ್ಮ ರಾಜ್ಯವನ್ನು ಹೇಗೆ ಬೇಕೋ ಹಾಗೆ ರೂಪುಗೊಳಿಸುವ ಸ್ವಾತಂತ್ರ್ಯ ನಮಗಿದೆ. ಶ್ರೀ ನಿಜಲಿಂಗಪ್ಪನವರ ನೇತೃತ್ವದಲ್ಲಿ ರೂಪುಗೊಂಡಿರುವ ನಮ್ಮೆಯ ಸರಕಾರವು ಕನ್ನಡ ಪ್ರದೇಶದ ಅಭಿವೃದ್ಧಿಗಾಗಿ "ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವ ಲಕ್ಷಣಗಳು ಕಾಣಿಸಿವೆ. ಮುಖ್ಯವಾಗಿ ನಮ್ಮ ಪ್ರಕೃತಿ ಸಂಪತ್ತಿನ ಸದುಪಯೋಗವನ್ನು ಪಡೆಯುವುದೇ ಕಾರ್ಯವಾಗಿದೆ.ಇದಕ್ಕೊಂದು ಆವಕಾಶವನ್ನು ಪ್ರಜಾರಾಜ್ಯದ ಎಳನೇ ವರ್ಷದಲ್ಲಿ ನಾವು ಪಡೆದಿರುವುದು ಚಾರಿತ್ರಾರ್ಹವಾದ ಘಟನೆಯಾಗಿದೆ. ಇನ್ನು ಅಂತಾರಾಷ್ಟ್ರೀಯ ರಂಗದ ಕಾರ್ಯಕಲಾಪಗಳಲ್ಲಿ ಭಾರತವು ವಹಿಸಿದ ಪಾತ್ರವನ್ನು ನೋಡಿದರೂ ತೃಪ್ತಿಯ ಭಾವವೇ ಉಂಟಾಗುತ್ತದೆ. ಸುಯೇಜಿನಲ್ಲಿ ಇನ್ನೊಂದು ಮಹಾಯುದ್ಧದ ಕೆಡಿ ಹೊತ್ತಿಕೊಂಡಾಗ ಭಾರತದ ಮುತ್ಸದ್ದಿತನವೂ ಜಿಮೇರಿಕದ ಸಂಯಮವೂ ಆ ಅಗ್ನಿ ಜ್ವಾಲೆಯು ಸ್ಥಳೀಯ ಸ್ವರೂಪವನ್ನಷ್ಟೆ ಹೊಂದಿಕೊಂಡು ಅಲ್ಲೆ ಆರಿಹೋಗುವಂತೆ ನೋಡಿಕೊಂಡವೆನ್ನಬಹುದು. ಭಾರತೀಯರು ಮೊದಲಿನಿಂದಲೂ ಶಾಂತಿಪ್ರಿಯರೆಂದು ಹೆಸರಾಗಿದ್ದಾರೆ. ಈ ಸಂಸ್ಕೃತಿಗೆ ಹೊಂದಿಕೊಂಡು ಪ್ರಧಾನಿ ನೆಹರೂರವರು ತಮ್ಮ ಅಂತಾರಾಷ್ಟ್ರೀಯ ಘೋರಣೆಯನ್ನು ರೂಪಿಸಿರುವುದು ನಿಜಕ್ಕೂ ಪ್ರಶಂಸನೀಯವಾದ ಮತ್ತು ಹೆಮ್ಮೆ ಪಟ್ಟುಕೊಳ್ಳಬಹುದಾದ ಕಾರ್ಯ. ಪಂಚಶೀಲಗಳು ಹೆಚ್ಚು ಹೆಚ್ಚು ಜನಪ್ರಿಯವಾಗುತ್ತಿವೆ; ಸೈನಿಕ ಒಪ್ಪಂದಗಳು ಲೋಕಶಾಂತಿಗೆ ಪೋಷಕವಲ್ಲವೆಂಬ ನೀತಿಯೂ ಚಿಕ್ಕ ರಾಷ್ಟ್ರಗಳ ಮನಸ್ಸಿಗೆ ಬಂದಿದೆ. ಇತಿಯೋಪಿಯಾ, ಸಿರಿಯಾ ಮುಂತಾದ ಆಸ್ಫೋಕ್ಯ ರಾಷ್ಟ್ರಗಳು ಭಾರತದ ನಿಲುಮೆಯನ್ನು ಶ್ಲಾಘಿಸಿವೆ. ಮಹಾರಾಷ್ಟ್ರಗಳಾದರೂ ಪ್ರಧಾನಿ ನೆಹರುಗಳ ವ್ಯಕ್ತಿತ್ವವನ್ನು ಬಹಳವಾಗಿ ಗೌರವಿಸಿ ಅವರ ಘೋರಣೆಯನ್ನು ತಿಳಿದುಕೊಳ್ಳಲು ಉತ್ಸಾಹ ತೋರಿಸಿದ್ದಾರೆ. ಫ್ರಿನೇರಿಕದ ಅಧ್ಯಕ್ಷ ಐಕರು ತಮ್ಮ ಖಾಸಗಿ ಮನೆಯಲ್ಲಿ ದಿನವಿಡೀ ನೆಹರುರೊಡನೆ ಸಮಾಲೋಚನೆ ನಡೆಸಿ ನೆಹರೂರ ವಿಚಾರಗಳನ್ನು ಅರ್ಥಮಾಡಿಕೊಳ್ಳಲು ನೋಡಿದುದನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು. ಭಾರತದ ವಸಾಹತು ವಿರೋಧಿ ಧೋರಣೆಯು ಸಹ ಈಗ ತಾನೆ ಸ್ವಾತಂತ್ರ್ಯ ಪಡೆದ ರಾಷ್ಟ್ರಗಳಲ್ಲಿ ಜನಪ್ರಿಯವಾಗಿದೆ. ಗೋವೆಯ ಸಮಸ್ಯೆ ಇನ್ನೂ ಬಿಡಿಸಲ್ಪಟ್ಟಿಲ್ಲವಾದರೆ, ಅದಕ್ಕೆ ಪಾಕಿಸ್ತಾನದಂತಹ ರಾಷ್ಟ್ರಗಳು ಪೋರ್ಚುಗಾಲಿಗೆ ಕೊಡುತ್ತಿರುವ ಪ್ರತ್ಯಕ್ಷ ಹಾಗು ಪರೋಕ್ಷ ಪ್ರೋತ್ಸಾಹವೇ ಕಾರಣ. ಗೋವೆಗೆ ಭಾರತ ಸರಕಾರವು ಆರ್ಥಿಕ ದಿಗ್ಬಂಧನವನ್ನು ಹೇರಿದ್ದರೂ ಪಾಕಿಸ್ತಾನವು ನಿರಾತಂಕವಾದ ವ್ಯಾಪಾರವನ್ನೆ ಈ ವಸಾಹತು ಪ್ರದೇಶದೊಡನೆ ನಡೆಸಿ ಭಾರತದ ಆರ್ಥಿಕ ದಿಗ್ಬಂಧನವನ್ನು ವಿಫಲಗೊಳಿಸಿರುತ್ತದೆ. ಆದಾಗ್ಯೂ ಭಾರತವು ಶಾಂತಿಗೆ ಭಂಗ ಬಾರದಂತೆ ಈ ಸಮಸ್ಯೆಯ ಪರಿಹಾರ ಮಾಡಲು ಆತುರದಿಂದಲೇ ಇದೆ. ಭಾರತದ ಪ್ರಗತಿಗೆ ಮುಖ್ಯವಾಗಿ ಬಾಧಕವಾಗಿರುವುದು ಪಾಕಿಸ್ತಾನಿ ಪ್ರಭೃತಿಗಳ ಪ್ರಲಾಪ ವಾತ್ಯ! ಅವರು ಭಾರತವು ಯುದ್ಧ ಪಿಪಾಸುರಾಷ್ಟ್ರವೆಂದೂ ಪಾಕಿಸ್ತಾನದ ಮೇಲೆ ಪಾಳಿ ನಡೆಸಲು ಅದು ಹೊಂಚು ಹಾಕುತ್ತಿದೆಯೆಂದೂ ಪಾಕಿಸ್ತಾನಿ ಧುರೀಣರು ಸುಳ್ಳು ಪ್ರಚಾರವನ್ನು ಅವಿರತವಾಗಿ ನಡೆಸುತ್ತಿದ್ದಾರೆ. ಕಾಶ್ಮೀರದ ಸೇರ್ಪಡೆಯು ಭಾರತದೊಡನೆ ೧೯೪೭ನೇ ಅಕ್ಟೋಬರದಲ್ಲಿ ವಿದ್ಯುಕ್ತವಾಗಿ ನಡೆದುಹೋಗಿದ್ದರೂ ಇನ್ನೂ ಆ ವಿಷಯವನ್ನು ಜನರ ಭಾವನೆಯನ್ನು ಉದ್ರೇಕಿಸುವ ಆಯುಧವಾಗಿ ಉಪಯೋಗಿಸುತ್ತಿದ್ದಾರೆ. ಭಾರತವು ಕಾಶ್ಮೀರದ ಜನಾಭಿಪ್ರಾಯವನ್ನು ಮನ್ನಿಸುವೆನೆಂದು ಹೇಳಿದ್ದು ಪಾಕಿಸ್ತಾನ ಕ್ಯಾಬಲೇ ಸಂಯುಕ್ತರಾಷ್ಟ್ರಸಂಘಕ್ಕಾಗಲೀ ಅಲ್ಲ—ಕಾಶ್ಮೀರದ ಜನತೆಗೆ ಎಂಬ ಮೂಲ ಸತ್ಯವನ್ನು, ಪಾಕಿಸ್ತಾನವೇ ಆಕ್ರಮಣ ನಡೆಸಿದ ರಾಷ್ಟ್ರವೆಂದು ಸಂಯುಕ್ತರಾಷ್ಟ್ರಸಂಘದ ಭದ್ರತಾ ಮಂಡಳಿ ಘೋಷಿಸಿದ ವಾಕ್ಯವನ್ನೂ ಹಿನ್ನೆಲೆಗೆ ಸರಿಸಿಯೋ, ಮರೆತೋ ಪಾಕಿಸ್ತಾನವು ಭಾರತವನ್ನು ಕಾಶ್ಮೀರದ ಸಮಸ್ಯೆಯ ನೆಪದಲ್ಲಿ ಹೊಂಡಕ್ಕೆಳೆಸಲು ನೋಡುತ್ತದೆ. ಸೈನಿಕ ಒಪ್ಪಂದಗಳಿಗೆ ವಿರೋಧ, ಕಮ್ಯುನಿಸ್ಟರೊಡನೆ ಪೈರ ಇತ್ಯಾದಿ ಭಾವನೆಗಳಿರುವ ವಾಶ್ಚಾತ್ಯ ರಾಷ್ಟ್ರಗಳು ತಮ್ಮ ಭಾರತ ವಿರುದ್ಧ ಭಾವನೆಗಳಿಗೆ ಆಕಾರವನ್ನು ಕೊಡಲೋ ಎಂಬಂತೆ ಪಾಕಿಸ್ತಾನದ ಬೆನ್ನು ಚಪ್ಪರಿಸುವ ಹವ್ಯಾಸವನ್ನು ಕಾಶ್ಮೀರ ಪ್ರಶ್ನೆಯಂಥ ಪ್ರಸಂಗಗಳಲ್ಲಿ ಪ್ರದರ್ಶಿಸುತ್ತಿದ್ದಾರೆ. ಇದು ಶೋಚನೀಯವಾದುದಾದರೂ ಒಟ್ಟಿನಲ್ಲಿ ಭಾರತದ ಪ್ರತಿಷ್ಠೆಗೆ ಕುಂದೇನೂ ಇಲ್ಲ ಆದುದರಿಂದ ನಾವು ಧೈರ್ಯವಾಗಿ ಪ್ರಜಾರಾಜ್ಯವಾಗಿ ಭಾರತವನ್ನು ಘೋಷಿಸಿಕೊಂಡ ಬಗ್ಗೆಯೂ ಹಾಗೆ ಸಾಧಿಸಿದ ಪ್ರಗತಿಯ ಕುರಿತಾಗಿಯೂ ಅಭಿಮಾನದಾಯಿ ಮಾತುಗಳನ್ನಾಡಬಹುದು. ನುಂದಿನ ಚುನಾವಣೆಯಲ್ಲಿ ಕಾಂಗ್ರೆಸು ಪಕ್ಷವು ಇತ್ತರ ತನಕ ನಡೆಸಿದ ಪ್ರಗತಿಯನ್ನೆ ಒರೆಗಲ್ಲಾಗಿ ಇಟ್ಟುಕೊಂಡು ಹೋರಾಟ ಕೊಡಲು ಸಂಕಲ್ಪಿಸಿದೆ. ಜನರು ಒಳ್ಳೆಯ ಕೆಲಸವನ್ನು ಮೆಚ್ಚಿಕೊಳ್ಳುತ್ತಾರೆಂಬ ನಂಬಿಕೆಯಿಂದ ಕಾಂಗ್ರೆಸು ಚುನಾವಣೆಯ ಕಣಕ್ಕಿಳಿದಿದೆ. ಜನರು ಸ್ವತಂತ್ರ ಭಾರತದ ಪ್ರಗತಿಗೆ ಸಂತೋಷಿಸಿ ಇದಕ್ಕೆ ಕಾರಣವಾದ ಸರಕಾರಿ ಪಕ್ಷವನ್ನು ಬೆಂಬಲಿಸುವರೆಂದು ನಾವು ದೃಢವಾಗಿ ನಂಬಿದ್ದೇವೆ.

ಎಕಾಡೆಮಿಯ ಸಾಹಸ

ಈ ಸಂಚಿಕೆಯ ೧೩ನೇ ಪುಟದಲ್ಲಿ ಮಣಿಪಾಲದ ದಿ ಎಕಾಡೆಮಿ ಆಫ್ ಜನರಲ್ ಎಜುಕೇಶನಿನವರ ಪ್ರಕಟಣೆಯನ್ನು ಕೊಡಲಾಗಿದೆಯಷ್ಟೆ: ಇಂಜಿನಿಯರಿಂಗ್ ಹಾಗು ಅಗ್ರಿಕಲ್ಚರ್ ಜಾಗಗಳನ್ನು ತೆರೆಯಲು ಎಕಾಡೆಮಿಯು ಪ್ರಯತ್ನಿಸಿದೆ. ಈ ಶಿಕ್ಷಣ ಸಂಸ್ಥೆಗಳಲ್ಲಿ ಸೇರಬಯಸುವವರು ತ್ವರೆ ಮಾಡಬೇಕಾಗಿದೆ. ನಮ್ಮ ದೇಶದಲ್ಲಿ ಇಂಜಿಯರಿಂಗಿನಂತಹ ಉಚ್ಚ ಶಿಕ್ಷಣಕ್ಕೆ ಇರುವ ಅವಕಾಶಗಳು ಬಹಳ ಮಿತವಾಗಿವೆ. ಆದುದರಿಂದ ಅಖಿಲ ಭಾರತ ಸ್ವರೂಪದ ಈ ಸಮಸ್ಯೆಯ ನಿವಾರಣೆಗೆ ಡಾ|| ಟಿ. ಎಂ.ಎ. ಪೈ ಗಳ ಸಮರ್ಥ ನೇತೃತ್ವದಲ್ಲಿ ತನ್ನ ಸೇವೆಯನ್ನು ಸಲ್ಲಿಸಲು ಎಕಾಡೆಮಿ ಟೊಂಕ ಕಟ್ಟಿರುವುದು ಸ್ತುತ್ಯಾರ್ಹವಾದ ಸಾಹಸ. ಜನರು ಮೆಡಿಕಲ್ ಕಾಲೇಜಿಗೆ ನೀಡಿದಂತೆಯೇ ಈ ಕಾಲೇಜಿಗೂ ಸಹಾಯ ಮತ್ತು ಪ್ರೋತ್ಸಾಹವನ್ನು ನೀಡಬೇಕಾ

ಬಟ್ಟೆಗಳ ಸ್ವಚ್ಛತೆಗೆ ಮತ್ತು ಬಾಳಿಕೆಗೆ

ಶೋಭಾ ಬಾರ್ ಸೋಪು

ಜೈ ಭಾರತ ಮಿಲ್ಸ್ ಪ್ರೈವೇಟ್ ಲಿಮಿಟೆಡ್, ಉಡುಪಿ.

ದದ್ದು ಕರ್ತವ್ಯ. ಆ ಕಾಲೇಜಿಗೆ ಸಹ ಇದೇ ಮಾತು ಅನ್ವಯಿಸುತ್ತದೆ. ಆಧುನಿಕ ವ್ಯಾಪಾರ–ವಾಣಿಜ್ಯಗಳ ಮರ್ಮವನ್ನು ತಿಳಿದುಕೊಳ್ಳುವುದಕ್ಕೂ ನ್ಯಾಯ ಶಾಸ್ತ್ರದ ಪರಿಜ್ಞಾನ ಅತ್ಯಗತ್ಯವಾಗಿರುವ ಈ ಕಾಲದಲ್ಲಿ ವಿದ್ಯಾರ್ಥಿಗಳು ಅತಿ ಹೆಚ್ಚು ಸಂಖ್ಯೆಯಲ್ಲಿ ಬಂದು ಈ ಶಿಕ್ಷಣ ಸಂಸ್ಥೆಯನ್ನು ಬೆಳಗಿಸುವರೆಂದು ಅರಿಸಬಹುದು.

ಈ ಸಂಚಿಕೆಯ ಕುರಿತು—

ನಾವು ಈ ಬಾರಿ ಹಿಂದಿಗಿಂತಲೂ ಹಿರಿದಾದ ವಿಶೇಷ ಸಂಚಿಕೆಯನ್ನು ಹೊರಡಿಸುವ ಇಚ್ಛೆಯನ್ನು ಹೊಂದಿದ್ದೆವು. ಅದಕ್ಕೆ ತಕ್ಕ ಪೂರ್ವಸಿದ್ಧತೆಗಳನ್ನು ತೊಡಗಿಯೂ ಇದ್ದೆವು. ಆದರೆ ಮಧ್ಯೆ ದಿನದಿಂದಂತೆ ಪತ್ರಿಕೆಯ ಸಂಚಾಲಕ–ಸಂಪಾದಕರು ಶಸ್ತ್ರಕ್ರಿಯೆ ಕ್ಕೆ ಬಲಿಯಾದರು. ಆದುದರಿಂದ ವಿಶೇಷ ಸಂಚಿಕೆಯ ಸಿದ್ಧತೆಗಳನ್ನು ಮುಂದೊತ್ತುವುದು ಸಾಧ್ಯವಾಗದೆ ಹೋಯಿತು. ಮಾತ್ರವಲ್ಲ ವಿಶೇಷ ಸಂಚಿಕೆಯ ಸುದ್ದಿಯನ್ನೆ ಬಿಟ್ಟುಬಿಡುವ ಪ್ರಸಂಗ ಬಂದೊದಗಿದಂತೆ ತೋರಿತು. ಈಜೆಗೆ ಕೆಲವು ದಿನಗಳಂದ ಅವರ ಆರೋಗ್ಯವು ತುಸು ಸುಧಾರಣೆಗೊಳ್ಳಹತ್ತಿದುದರಿಂದ ಹಿಂದಿನಿಂದಲೂ ಪ್ರಕಟಿಸುತ್ತಾ ಬಂದ ಪ್ರಜಾರಾಜ್ಯ ದಿನೋತ್ಸವ ಸಂಚಿಕೆಯನ್ನು ಈ ಸಲವೂ ಪ್ರಕಟಿಸುವುದೇ ಪ್ರಶಸ್ತವೆಂದೂ ನಿಶ್ಚಿಸುವುದು ಯೋಗ್ಯವಲ್ಲವೆಂದೂ ಭಾವಿಸಿ ಈ ನ ರೂಪದಲ್ಲಿ (೩೮ ಪುಟಗಳ) ಕಿರಿದಾದ ಸಂಚಿಕೆಯನ್ನೆ ಒಂದು ವಾರ ವಿಳಂಬಿಸಿ ವಾಚಕರ ಕೈಗೆ ನೀಡಿದ್ದೇವೆ. ಸಮಯೋಚಿತವಾದ ಲೇಖನಗಳು ಕೆಲವೇ ಇವೆ—ಆದರೂ ಉಳಿದ ಲೇಖನಗಳು ವಾಚಕರ ಅಭಿರುಚಿಗೆ ಒಪ್ಪಿಗೆಯೂ ದಾವೆಂಬ ಭರವಸೆಯಿಂದ ನಾವು ಅವುಗಳಿಗೆ ಈ ಸಂಚಿಕೆಯಲ್ಲಿ ಸ್ಥಾವನ್ನಿತ್ತಿದ್ದೇವೆ. ಅಂತೂ ಈ ಸಂಚಿಕೆಯೂ ಇಷ್ಟಾದರೂ ಕಳೆಗೊಡುವಂತೆ ಸಹಕರಿಸಿದ ಲೇಖಕ ಬಂಧುಗಳಿಗೂ ಪಾಹೀರಾತುದಾರರಿಗೂ ಕೃತಜ್ಞತೆಯನ್ನು ಸೂಚಿಸುತ್ತೇವೆ. ಮೊದಲಿನಿಂದಲೂ ತ್ಮೀಯಭಾವದಿಂದ ನಮ್ಮ ಕಾರ್ಯಗಳಲ್ಲಿ ನೆರವಾಗುತ್ತಿರುವ ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇದರ ಜನರಲ್ ಮ್ಯಾನೇಜರ್ ಹಾಗೂ ನಮ್ಮ ಜನಪ್ರಿಯ ಸಂ. ಎಲ್. ಎ. ಆಗಿರುವ ಶ್ರೀ ಟಿ. ಎ ಪೈಗಳಿಗೆ ಪ್ರತ್ಯೇಕ ವಂದನೆಗಳನ್ನು ಸಲ್ಲಿಸಬೇಕಾಗಿದೆ. ಇನ್ನು ಅಲ್ಪಾವಧಿಯಲ್ಲಿ ಯಾದರೂ ಈ ಸಂಚಿಕೆಯು ಸಕಾಲದಲ್ಲಿ ಹೊರಡವಂತೆ ಶ್ರದ್ಧೆಯಿಂದ ದುಡಿದ ಪ್ರಿಸ್ಟಿನ ಕೆಲಸಗಾರ ಬಂಧುಗಳಿಗೂ ತ ಜ್ಞತೆಯ ಸ್ತು ಅರ್ಪಿಸುತ್ತೇವೆ.

ನೇತಾಜಿಯ ಸೇನೆಯ ನೆನಪು

"ಜಯ್ ಹಿಂದ್!!!" ಎಂಬ ಘೋಷಣೆಯನ್ನು ಕೇಳಿದಾಗೆಲ್ಲ ನಮ್ಮ ಮೈ ನವಿರೇಳುವುದಿಲ್ಲವೆ? ಗಾಂಧೀ ಮಾರ್ಗದ ವಿರುದ್ಧ ನೇತಾಜಿಯವರು ನಡೆದರೂ ಅವರ ದೇಶಭಕ್ತಿಯು ಸ್ವತಂತ್ರ ರಾಷ್ಟ್ರಕ್ಕೆ ಆದರ್ಶ ಪ್ರಾಯವಾಗಿದೆ ಎಂಬುದರಲ್ಲಿ ಸಂದೇಹಕ್ಕೆ ಎಡೆಯಿಲ್ಲ.

ಬರೆದವರು: ಶ್ರೀ ಎಂ. ರಘುನಂದನ ರಾಯರು, ತಲ್ಲೂರು.

ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಮೊದಲ್ಲಿ ಪ್ರಮುಖ ಪಾತ್ರಧಾರಿಯಾಗಿ, ಸ್ವಾತಂತ್ರ್ಯಧುರೀಣ ಧೀರ ಸೇನಾನಿಯಾಗಿ ಮೆರೆದ ನೇತಾಜಿಯ ಹೆಸರನ್ನು ಕೇಳದ ಭಾರತೀಯನಾರು? ಹಿಂದಿನಿಂದಲೂ ಕ್ರಾಂತಿಕಾರಕತನದ ಮೂರ್ತಿ ಸ್ವರೂಪರಾಗಿದ್ದ ನೇತಾಜಿಯು ಸ್ಥಾಪಿಸಿದ, ತಾಯ್ನಾಡಿನ ಬಿಡುಗಡೆಗಾಗಿ ಅಂಗ್ಲರೊಡನೆ ಕೊಯ್ದಾಡಿದ ಆಝಾದ್ ಹಿಂದ್ ಫೌಜ್‌ನ್ನು ಹಿಂದೀ ಜನತೆ ಮರೆಯುವುದೆಂತು? ಸುಭಾಷರು ಅಂದು ರಾಷ್ಟ್ರಪತಿಯಾಗಿದ್ದು, ರಾಷ್ಟ್ರಸಭೆಯ ಉಗ್ರಪಕ್ಷದ ನೇತೃವಾಗಿದ್ದರು. ಸ್ವಾತಂತ್ರ್ಯಹವದಲ್ಲಿ ಹಿಂಸೆಯನ್ನು ಹಿಂಸೆಯಿಂದಲೇ ಎದುರಿಸಿ, ಸ್ವಾತಂತ್ರ್ಯಲಾಭ ಮಾಡಿಕೊಳ್ಳಬೇಕೆಂದು ವಾದಿಸುತ್ತಿದ್ದ ಸುಭಾಷರ ಘೋಷಣೆಯನ್ನು ಗಾಂಧೀವಾದಿಗಳು ಮೆಚ್ಚದಿದ್ದುದರಿಂದ, ಸುಭಾಷ ಹಾಗೂ ಗಾಂಧೀ ಪಕ್ಷಗಳಿಗೆ ಘರ್ಷಣೆಯು ನಡೆದು; ಸುಭಾಷರು ತನ್ನ ರಾಷ್ಟ್ರಸಭಾಧ್ಯಕ್ಷತೆಯ ಪದವಿಯನ್ನು ತ್ಯಜಿಸಿ, 'ಫಾರವರ್ಡ್ ಬ್ಲಾಕ್'ನ್ನು ಸ್ಥಾಪಿಸಿದರು.

೧೯೪೧ರ ಜನವರಿ ೨೬ರ ಸ್ವಾತಂತ್ರ್ಯ ದಿನಾಚರಣೆಯಂದು— ತನ್ನ ಮನೆಯಲ್ಲೇ ಬಂಧಿತರಾಗಿದ್ದ ಸುಭಾಷರು ಇದ್ದಕ್ಕಿದ್ದಂತೆ ಒಮ್ಮೆಗೇ ಅದೃಶ್ಯರಾಗಿದ್ದರು. 'ಆರ್ಲಾಂಡೊ ಮ್ಯಾಝೊಟ್ಟ' ಎಂಬ ಹೆಸರನ್ನಿಟ್ಟುಕೊಂಡ, ಪಠಾಣ ವೇಷಧಾರಿಯಾಗಿ ಅವರು ಕಾಬೂಲಿನ ಮಾರ್ಗವಾಗಿ ಇಟಲಿಗೆ ತೆರಳಿ, ಅಲ್ಲಿನ ಸರ್ವಾಧಿಕಾರಿ ಬೆನಿಟೊ ಮುಸ್ಸಲಿನಿಯನ್ನು ಸಂದರ್ಶಿಸಿ, ಮುಂದಿನ ಜರ್ಮನಿಗೆ ಹೋಗಿ ಅಲ್ಲಿನ ಸರ್ವಾಧಿಕಾರಿ ಎಡೊಲ್ಫ್ ಹಿಟ್ಲರನ ಸಖ್ಯ ಬೆಳೆಸಿ, ಅವನ ನೆರವಿನಿಂದ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಂಗ್ಲರ ವಿರುದ್ಧ ಹೋರಾಡಲು ಸೇನೆಯೊಂದನ್ನು ಸ್ಥಾಪಿಸಲು ಕಾರ್ಯಪ್ರವೃತ್ತರಾದರು.

ಇತ್ತ ದ್ವಿತೀಯ ಜಾಗತಿಕ ಯುದ್ಧದಲ್ಲಿ ನೊವಲು ಜಯಶಾಲಿಯಾಗಿ ಅಕ್ಷರಮಣವನ್ನು ನಡೆಸುತ್ತಿದ್ದ ಜಪಾನು ೧೯೪೨ರ ಫೆಬ್ರುವರಿ ೧೫ರಂದು ಸಿಂಗಪುರವನ್ನು ಸ್ವಾಧೀನಪಡಿಸಿಕೊಂಡಿತು. ಮಾತೃಭೂಮಿಯ ಪಾರತಂತ್ರ್ಯ ವಿಮೋಚನೆಗೆ ಸುವರ್ಣ ಸಂದರ್ಭ ಬಂದೊದಗಿತೆಂದೆಣಿಸಿ, ನೇತಾಜಿ ಜರ್ಮನಿಯಿಂದ ಜಪಾನಿಗೆ ತೆರಳಿದರು. ಅಲ್ಲಿ ಜಪಾನಿನ ಸಹಾಯದಿಂದ ಮೊದಲೇ ಸೇನಾ ಸಂಘಟನಾ ಕಾರ್ಯವು ಭರದಿಂದ ಸಾಗಿತ್ತು. ಸುಭಾಷರ ಆಗಮನದ ಮುನ್ನವೇ ರಾಷ ಬಿಹಾರಿ ಘೋಷರು ಜಪಾನಿಗೆ ಹೋಗಿ ನೆಲಸಿದ್ದರು. ಇಬ್ಬರ ಧ್ಯೇಯವೂ ಒಂದೇ ಆಗಿತ್ತು. ಘೋಷರ ಮುಂದಾಳ್ತನದಲ್ಲಿ ಯುದ್ಧ ಸವಿತಿಯೊಂದು ರಚಿತವಾಗಿ, ಆಝಾದ್ ಹಿಂದ್ ಫೌಜಿನ ಸ್ಥಾಪನೆಗೆ ಪೀಠಿಕೆ ಹಾಕಿಕೊಟ್ಟಿತು. ಫೌಜಿನಲ್ಲಿದ್ದ ಸೈನಿಕರೆಲ್ಲರೂ ಸುಸಂಘಟಿತರಾಗಿದ್ದರು. ಸುಭಾಷರ ಆಗಮನದ ಮುನ್ನೆ ಇಷ್ಟೆಲ್ಲ ಪೂರ್ವ ಸಿದ್ಧತೆ ನಡೆದಿತ್ತು. ಸೈನಿಕರಲ್ಲಿ ಅಖಂಡ ರಾಷ್ಟ್ರಭಕ್ತಿ, ಕಂಡು ಬರುತ್ತಿತ್ತು. ಸುಭಾಷರ ಆಗಮನದಿಂದ ಧಗಧಗಿಸುವ ಅಗ್ನಿಗೆ ಆಜ್ಯವನ್ನೆರೆದಂತಾಯಿತು.

೧೯೪೩ರ ಜುಲೈ ೨ರಂದು ಸುಭಾಷ ಬೋಸರು ಸಿಂಗಪುರಕ್ಕೆ ಬಂದರು. ಜುಲೈ ೫ರಂದು ಅವರ ಪ್ರಧಾನಿತ್ವದಲ್ಲಿ ಆಝಾದ್ ಹಿಂದ್ ಸರಕಾರದ ರಚನೆಯಾಗಿ, ಫೌಜಿನ ಪ್ರಧಾನ ಸೇನಾಧಿಪತಿಯೂ ಅವರೇ ಆದರು. ಸೇನೆಯ ಖರ್ಚನ್ನು ವಹಿಸಿಕೊಳ್ಳಲು ಆಝಾದ್ ಹಿಂದ್ ಬೇಂಕು ತೆರೆಯಲ್ಪಟ್ಟು, ಮೂರು ಬಾರಿ ಸುಭಾಷರ ಸುವರ್ಣ ತುಲಾಭಾರವು ನಡೆಯಿತು. 'ನೇತಾಜಿ' ಎಂಬ ಬಿರುದು ಅವರಿಗರ್ಪಿತವಾಗಿ, ಸುಭಾಷರು ಸರ್ವ ಜನಾದರಣೀಯ ವ್ಯಕ್ತಿಯೆನಿಸಿಕೊಂಡರು. ಆಝಾದ್ ಹಿಂದ್ ಫೌಜಿನಲ್ಲಿ ಸುಮಾರು ೭೦,೦೦೦ಕ್ಕೂ ವಿ.ಕ್ಕೆ ಯೋಧರಿದ್ದರು. ಕ್ಯಾಪ್ಟನ್ ಲಕ್ಷ್ಮಿಯವರ ನೇತೃತ್ವದಲ್ಲಿ ರಾಣಾ ದಿಲರು ಸಂಘಟಿತವಾಗಿ, ಬಾಲಕರ ಸೇನೆಯೊಂದು ಸಿದ್ಧವಾಯಿತು.

"ಏಕ್ಯ–ವಿಶ್ವಾಸ–ಬಲಿದಾನ"—ಇವು ಫೌಜಿನ ಮುಖ್ಯೋದ್ದೇಶಗಳಾಗಿದ್ದುವು. "ಜೈ ಹಿಂದ್"—ಸೇನೆಯ ವಂದನಾ ಪದವಾಗಿತ್ತು. ಆಝಾದ್ ಹಿಂದ್ ಸರಕಾರವು ಆಂಗ್ಲ ಹಾಗೂ ಅಮೇರಿಕನ್ ಸರಕಾರಗಳ ಮೇಲೆ ಯುದ್ಧ ಘೋಷಣೆ ಮಾಡಿತು. ಬರ್ಮದ ದಾಪಿಯಾಗಿ, ಭಾರತವನ್ನಾಕ್ರಮಿಸಿ, ಭರತ ಮಾತೆಯನ್ನು ಸ್ವತಂತ್ರಿಗೊಳಿಸುವ ಮುಖ್ಯೋದ್ದೇಶದಿಂದ ಸೇನೆಯು 'ದಿಲ್ಲೀ ಚಲೋ" ಎಂಬ ವೀರ ಘೋಷಣೆಯೊಂದಿಗೆ ಮುಂದುವರಿಯಿತು. ಭಾರತ–ಬರ್ಮಗಳ ಸರಹದ್ದಿನಲ್ಲಿ ಆಝಾದ್ ಹಿಂದ್ ಮಹಿಳಾ ಸೇನೆಯು ಆಂಗ್ಲ ಸೇನೆಯನ್ನೆದುರಿಸಿ, ಅದನ್ನು ಕಂಗೆಡಿಸಿ, ಅದು ಹಿಂದಿರಿವಂತೆ ಮಾಡಿತು. ಬಳಿಕ ಆಝಾದ್ ಹಿಂದ್ ಫೌಜ್ ತಮ್ಮ ಸ್ವತಂತ್ರ ಮಾತೃಭೂಮಿಯನ್ನು ಪ್ರವೇಶಿಸಿ, ಮಣಿಪುರ, ಕೊಹಿಮಾ, ಬಿಷ್ಣನಪುರ—ಮುಂತಾದ ಭಾಗಗಳನ್ನಾಕ್ರಮಿಸಿ, ಗೆದ್ದು ಅಲ್ಲೆಲ್ಲ ಆಝಾದ್ ಹಿಂದ್ ಸರಕಾರವನ್ನು ಸ್ಥಾಪಿಸಿತು. ೧೯೪೪ರ ಮೇ ತಿಂಗಳಂದು ಫೌಜ್ ಇಂಫಾಲಕ್ಕೆ ದಾಳಿಯಿಟ್ಟಿತು. ಮಳೆಗಾಲದ ಆರಂಭ ಕಾಲವಾಗಿತ್ತದು ಸೇನೆಗೆ ತೆಕ್ಕೆಪ್ಪು ಆಹಾರ ಪೂರೈಕೆ ದೊರೆಯಲಿಲ್ಲ. ಆಯುಧಗಳ ಸಂಗ್ರಹ ಸಾಕಷ್ಟಿರಲಿಲ್ಲವಾದುದರಿಂದ ಬಿಂತೆರಳುವಂತೆ ಸೇನೆಗೆ ಮುಂದಾಳುಗಳು ಆಣತಿಯಿತ್ತರು. ಉಪಾಯಾಂತರವಿಲ್ಲದೇ ಸೇನೆ ಹಿಂದೆ ಸರಿಯಿತು.

ದ್ವಿತೀಯ ಜಾಗತಿಕ ಸಮರದಲ್ಲಿ ಜಪಾನು ಸೋತು ಹಿಂಜರಿಯಿತು. ರಂಗೂನಿನಲ್ಲಿದ್ದು ಹೂರ್ವ ಸಿದ್ಧತೆ ಮಾಡಿ, ಭರತ ಭೂಮಿಯ ಮೇಲೆ ದಂಡೆತ್ತಿ ಹೋಗಬೇಕೆಂಬುದಾಗಿ ಸುಭಾಷರು ಇಚ್ಛಿಸಿದ್ದರು. ಆದರೆ ಸೋತು, ಆಪಾರ ನಷ್ಟಕ್ಕೆಡಾದ ಜಪಾನಿಯರು ರಂಗೂನಿನಿಂದ ತಮ್ಮ ತಾಣಗಳನ್ನು ಕಿತ್ತು ಬೆಂಗ್‌ಕೋಕೆಗೆ ಹೋದುದರಿಂದ ನೇತಾಜಿಯೂ ೧೯೪೫ರ ಏಪ್ರಿಲ್ ೨೪ರಂದು ಬೇಂಗ್‌ಕೋಕೆಗೆ ಹೋದರು. ಆಗಸ್ಟ್ ೧೪ನೆಯ ದಿನಾಂಕದಂದು ಜಪಾನು ಶಕ್ತ್ಯುಗಳಿಗೆ ಶರಣು ಹೋಯಿತು. ಆದರೆ ಫೌಜಿನ ಯೋಧರು ತಾವೇನೂ ಶರಣಾಗತರಾಗಿಲ್ಲವೆಂದು ಖಡಾಖಂಡಿತವಾಗಿ ನುಡಿದರು. ಕರ್ನಲ್ ಬೋನ್ಸ್ಲೆಯವರಿಗೆ ಅವರನ್ನು ಸಂತೈಸಲು ತುಂಬಾ ಪ್ರಯಾಸವಾಯಿತು. ಕೊನೆಗೆ ಹೇಗೂ ಅವರನ್ನು ಒಪ್ಪಿಸಲಾಯಿತು. ಆಂಗ್ಲ ಸೇನಾಧಿಕಾರಿಗಳು ತಾವಿತ್ತ ಎಲ್ಲಾ ಭರವಸೆಗಳನ್ನು ಬದಿಗೊತ್ತಿ, ಸೈನಿಕರನ್ನು ಸೆರೆಹಿಡಿದು, ತಮ್ಮ ವಿಶ್ವಾಸ ಘಾತಕತನವನ್ನು ಪ್ರದರ್ಶಿಸಿದರು!

ಯುದ್ಧ ಕೊನೆಗಂಡಿತು. ಸಿಪ್ಲಾ ಪರಿಪತ್ತಿಗಾಗಿ ರಾಷ್ಟ್ರ ಸಭಾ ನೇತೃಗಳ ಬಂಧ ವಿಮೋಚನೆಯಾಯಿತು. ಸರದಾರ್ ವಲ್ಲಭಭಾಯಿ ಪಟೇಲ್, ಪಂಡಿತ್ ಜವಾಹರ್‌ಲಾಲ್ ನೆಹರೂ ಮೊದಲಾದ ಧುರೀಣರು ಆಝಾದ್ ಹಿಂದ್ ಫೌಜಿನ ಚರಿತ್ರೆಯನ್ನು ಬಹಿರಂಗಪಡಿಸಿದರು. ಅಲ್ಲಲ್ಲೇ ದೇಶಭಕ್ತ ಸೈನಿಕರನ್ನು ಬಂಡಾಯಗಾರರಂತೆ ನೋಡಿದಲ್ಲಿ ಪರಿಣಾಮ ಭೀಕರವಾಗಬಹುದೆಂದೂ, ಸೈನಿಕರ ಶಿಸ್ತೆಯಿಂದ ರಾಷ್ಟ್ರದ ಹೃದಯಕ್ಕೆ ಬರೆ ಎಳೆದಂತಾಗುವುದೆಂದು ಸರಕಾರಕ್ಕೆ ಎಚ್ಚರಿಕೆಯನ್ನಿತ್ತರು. ಕೂಡಲೇ ದೇಶದಾದ್ಯಂತ ಆಂದೋಲನಕ್ಕೆ ಮೊದಲಾಯಿತು. ಎಲ್ಲೆಡೆಗಳಲ್ಲೂ ಮೆರವಣಿಗೆ, ಸಭೆಗಳಾಗಿ, 'ಕೆಂಪು ಕೋಟೆಯನ್ನೊಡೆದು ಸ್ವತಂತ್ರ ಭಾರತ ಸೇನೆಯನ್ನು ಬಿಡುಗಡೆಗೊಳಿಸಿರೆಂಬ ಪ್ರಚಂಡ ಘೋಷಣೆಯಾಯಿತ; ಕೆಲವೆಡೆಗಳಲ್ಲಿ ಕೆನ್ನೀರಿನ ಕಾಲುವೆಯೇ ಹರಿಯಿತು. ಮೊಕದ್ದಮೆ ಸೇನಾ ನ್ಯಾಯಾಲಯದಲ್ಲಿ ನಡೆಯುವುದೆಂದು ಸರಕಾರ ಸಾರಿತು.

ತಾಯ್ನಾಡಿನ ಬಿಡುಗಡೆಗಾಗಿ ತನ್ನ ಶಕ್ತಿಯಿಂದಾದಷ್ಟು ಈ ಸ್ವತಂತ್ರ ಭಾರತ ಸೇನೆ ಅರ್ಥಾತ್ ಸುಭಾಷ ಸೇನೆಯು ಹೆಸರು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಲಿಖಿತವಾಗಬೇಕಾದುದಾಗಿದೆ. ನೇತಾಜಿಯ ದೇಶಭಕ್ತಿಯು ಮೂರ್ತಿಸ್ವರೂಪವಾಗಿದೆ—ಈ ಆಝಾದ್ ಹಿಂದ್ ಫೌಜ್.

— ಜೈ ಹಿಂದ್! —

ಅತ್ಯುತ್ತಮ ಸಾನೀಯ

ಕೇಲಗೂರು ಚಾ

ಜೈ ಭಾರತ ಮಿಲ್ಸ್ ಸ್ಟೇಟ್ ಲಿಮಿಟೆಡ್, ಉಡುಪಿ.

FOR ALL REQUIREMENTS IN:

Paper, Indian or Foreign,
Stationery,
Printing Inks,
School Requisites,
Typewriters,
Carbon Papers
Etc. Etc. Etc.

SRINIVAS BROTHERS

PAPER MERCHANTS
& STATIONERS,
CAR STREET,
MANGALORE-1.
Post Box No. 130.

Tel: ACTIVE. Phone: 449.

ಒಂದು ಹೊಸ ಮಹಾ ಕಾದಂಬರಿ

ನಡುಹಗಲಿನ ಕಗ್ಗತ್ತಲೆ

ಸಿಲ್ಕ್ ಪುಟಗಳು ಬೆಲೆ 2½ ರೂಪಾಯಿ

ಯುರೋಪಿನಲ್ಲಿ ಈಗ ನಲ್ವತ್ತು ವರ್ಷಗಳ ಹಿಂದೆ ನಡೆದು ಇಡೀ ಪ್ರಪಂಚವನ್ನೇ ತಲ್ಲಣಗೊಳಿಸುತ್ತಿರುವ ಒಂದು ರಾಜಕೀಯ ಪದ್ಧತಿಯಿಂದ ಮನುಷ್ಯನ ಆತ್ಮವು ಪತನವಾಗುತ್ತಿರುವ ದುರಂತದ ಒಂದು ಮಾರ್ಮಿಕ ಕಾದಂಬರಿ.

ರಕ್ತಮಯ ಕ್ರಾಂತಿಯು ವ್ಯಕ್ತಿಯ ಜೀವ ಮತ್ತು ನೆತ್ತರನ್ನು ನಿರ್ದಾಕ್ಷಿಣ್ಯವಾಗಿ ಹೀರುವ ಭೀಕರ ಚಿತ್ರಣ.

ಇದರಲ್ಲಿ ಪ್ರಚಲಿತ ಪ್ರಪಂಚದ ರಾಜನೀತಿ, ಇತಿಹಾಸ, ಮತ್ತು ಅಂತಾರಾಷ್ಟ್ರೀಯ ರೀತಿ ನೀತಿಯ ಒಳನೋಟ ದೊರೆಯುತ್ತದೆ.

ಪ್ರಖ್ಯಾತ ಲೇಖಕ ಆರ್ಥರ್ ಕೊಸ್ಲರ್ ಅವರ ಜರ್ಮನ್ ಕಾದಂಬರಿಯ ಮನೋಜ್ಞ ಕನ್ನಡವನ್ನು ಅನುವಾದಿಸಿದವರು **ಕು. ಶಿ. ಹರಿದಾಸ ಭಟ್ಟರು.**

ಪ್ರಕಾಶಕರು:

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.

(ಪ್ರತಿಗಳು ನವಭಾರತ ಪುಸ್ತಕ ಭಂಡಾರ, ಉಡುಪಿ, ಇಲ್ಲಿಯೂ ದೊರೆಯುತ್ತವೆ)

ದ. ಕ. ಜಿಲ್ಲೆಯ ಕಾಂಗ್ರೆಸ್ ಹುರಿಯಾಳುಗಳು

ಲೋಕಸಭೆಗೆ:

ಮಂಗಳೂರು ಮತದಾರ ಕ್ಷೇತ್ರದಿಂದ: ಶ್ರೀ ಕೆ. ಆರ್. ಆಚಾರ್.
ಉಡುಪಿ ಮತದಾರ ಕ್ಷೇತ್ರದಿಂದ: ಶ್ರೀ ಯು. ಎಸ್. ಮಲ್ಯ.

ಮೈಸೂರು ಎಸೆಂಬ್ಲಿಗೆ:

ಪುತ್ತೂರು: (೨ಸ್ಥಾನ) ಶ್ರೀ ಕೆ. ವೆಂಕಟರಮಣ ಗೌಡ (ಸಾಮಾನ್ಯ) ಶ್ರೀ ಎಸ್. ಸುಬ್ಬಯ್ಯ ನಾಯಕ್ (ಪರಿಶಿಷ್ಟವರ್ಗದಸ್ಥಾನ) **ಬೆಳ್ತಂಗಡಿ:** ಶ್ರೀ ಪಿ. ರತ್ನವರ್ಮ ಹೆಗ್ಡೆ. **ಪಾಣೆಮಂಗಳೂರು:** ಡಾ. ಕೆ. ನಾಗಪ್ಪ ಆಳ್ವ. **ಮಂಗಳೂರು1:** ಶ್ರೀ ಬಿ. ವಿ. ಬಾಳಿಗ. **ಮಂಗಳೂರು2:** ಶ್ರೀ ಗಜಾನನ ರಾವ್ ಪಂಡಿತ್. **ಸುರತ್ಕಲ್:** ಶ್ರೀ ಬಿ. ಆರ್. ಕರ್ಕೇರ. **ಕಾಪು:** ಶ್ರೀ ಎಫ್. ಎಕ್ಸ್. ಡಿ. ಪಿಂಟೋ. **ಉಡುಪಿ:** ಶ್ರೀ ಪಿ. ವಿ. ಆಚಾರ್. **ಬ್ರಹ್ಮಾವರ:** ಶ್ರೀ ಬಿ. ಜಗಜ್ಜೀವನದಾಸ ಶೆಟ್ಟಿ. **ಕುಂದಾಪುರ** ಶ್ರೀ ಕೆ. ಎಸ್. ಎನ್. ಅಡಿಗ. **ಬೈಂದೂರು:** ಶ್ರೀ ವೈ. ಮಂಜಯ್ಯ ಶೆಟ್ಟಿ **ಕಾರ್ಕಳ** (೨ಸ್ಥಾನ): ಡಾ. ಕೆ. ಕೆ. ಹೆಗ್ಡೆ (ಸಾಮಾನ್ಯ) ಶ್ರೀ ಯು. ನಂಜಪ್ಪ (ಪರಿಶಿಷ್ಟವರ್ಗದಸ್ಥಾನ.)

ಕಾಂಗ್ರೆಸ್ ಹುರಿಯಾಳುಗಳನ್ನೇ ಆರಿಸಿರಿ.

ಸೂಚನೆ

'ನವಯುಗ'ದ ಚಂದಾ ಹಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇವರ ಯಾವುದೇ ಶಾಖೆಯಲ್ಲಿ ಯಾವದೊಂದು ತರದ ಬಿಡ್ಡೂ ಇಲ್ಲದೆ (ನವಯುಗ ವಾರಪತ್ರಿಕೆಯ ಖಾತೆಗೆ) ಪಾವತಿ ಮಾಡಬಹುದು.

ಮೆನೇಜರ್.

ನವಯುಗ, ಉಡುಪಿ.

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No 466 N/50 date 12-12-1950 of the Director of public Instruction Madras.

ಜಾಹೀರು ಮಾಡಲ್ಪಟ್ಟ ಸಾಮಾನುಗಳನ್ನೇ ಖರೀದಿಸಿರಿ

ಮುದ್ರಣ ಕಾರ್ಯಗಳಿಗೆ—
ನವಯುಗ ಪ್ರೆಸ್,
ಸಂತೆಕಟ್ಟೆ .... ಉಡುಪಿ

ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ

ಕಾಂಗ್ರೆಸ್ ಉಮೇದ್ವಾರಿಗಳಿಗೇ

ನಿಮ್ಮ ಅತ್ಯಮೂಲ್ಯ ಮತಗಳನ್ನಿತ್ತು ಬೆಂಬಲವನ್ನೀಯಿರಿ.

ವಿಜಯಾ ಬೇಂಕ್ ಲಿ., ಕುಂದಾಪುರ (ದ. ಕ.)

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮುನೀಯರು ನಮ್ಮ ಬೇಂಕಿನಿಂದ ಬಿನ್ನಾಧರಣಗಳ ಅಡವಿನ ಜೋಡಿ ಪಡಕೊಂಡ ಸಾಲವನ್ನು ಮರುಪಾವತಿಮಾಡುವರೆ ರಿಜಿಸ್ಟ್ರಿ ನೋಟೀಸುಗಳ ಮೂಲಕ ಕೇಳಿಕೊಂಡಾಗ್ಯೂ, ಅಸ್ಸಲ ಬಡ್ಡಿಯನ್ನು ಈ ವರೆಗೆ ಕೊಡದೆ ಬಾಕಿಮಾಡಿಕೊಂಡಿರುವುದರಿಂದಲೂ, ಇನ್ನು ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ನಮಗೆನೇ ವಾಪಾಸು ಬಂದಿರುವುದರಿಂದಲೂ, ಸದ್ರಿಯವರು ನಮ್ಮಲ್ಲಿ ಈಡಿಟ್ಟ ನಗಗಳನ್ನು ಇದೇ ತಾರೀಕು 16.2.1957 ನೇ ಶನಿವಾರ ಅಪರಾಹ್ನ ಘಂಟೆ 3ಕ್ಕೆ ಸರಿಯಾಗಿ ಯಾ ಬೇಂಕಿಗೆ ಯುಕ್ತ ಕಂಡ ಯಾವುದೇ ಇತರ ದಿನಗಳಲ್ಲಿ ಪುನಃನೋಟೀಸು ಕೊಡದೇನೇ ಬೇಂಕಿನ ನಿರ್ಣಾರವಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದೆಂತು ಎಂಬುದನ್ನು ಈ ಮೂಲಕ ತಿಳಿಯಪಡಿಸಿದೆ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	31-12-56ರ ವರೆಗೆ ಬಡ್ಡಿ ಸೇರಿ ಮೊಬಲಗು
10/54	ಬಾಲ್ತಿಜಾರ್ ಸೋಜ, ಜಾವಿದ್ ಸೋಜರ ಮಗ, ಬಿನ್ನಾಸಿ, ಹಂಗ್ಳೂರು, ಪೋಸ್ಟು ಕುಂದಾಪುರ ದ. ಕ.	55 9
77/54	ಎಚ್. ಮೋನಪ್ಪ ಶೆಟ್ಟಿ, ಕೆ. ವೀರಣ್ಣ ಶೆಟ್ಟರ ಮಗ, ಹುಯ್ಯಾರು, ಪೋಸ್ಟು ಹಾಲಾಡಿ ದ. ಕ.	125 4
323/54	ಮಹಾಬಲ ಶೆಟ್ಟಿ, ಕೃಷ್ಣಪ್ಪ ಶೆಟ್ಟರ ಮಗ, ಕೋರ್ಗಿ ಮನೆ, ಕನ್ಯಾನ ಗ್ರಾಮ, ಪೋಸ್ಟು ತಲ್ಲೂರು ದ. ಕ.	133 14
598/54	ಹಕ್ಕೂರು ಸಂಜೀವ ಶೆಟ್ಟಿ, ಬಿ ನಾಗಯ್ಯ ಶೆಟ್ಟರ ಮಗ, ಹಕ್ಕೂರು ಗ್ರಾಮ, ಪೋಸ್ಟು ಗಂಗೊಳ್ಳಿ ದ. ಕ.	388 0
604/54	ಅಣ್ಣಪ್ಪ ಶೆಟ್ಟಿ, ಪುಟ್ಟಕ್ಕ ಶೆಟ್ತಿಯವರ ಮಗ, ಕೊಡ್ಲಾಡಿ, ಪೋಸ್ಟು ಶಂಕರನಾರಾಯಣ ದ. ಕ.	58 15
765/54	ಹಿರಿಯಣ್ಣ ಶೆಟ್ಟಿ, ವೆಂಕಪ್ಪ ಶೆಟ್ಟರ ಅಳಿಯ, ತೋಟಬೈಲು ಮನೆ, ಕನ್ಯಾನ ಗ್ರಾಮ, ಪೋಸ್ಟು ಕಟ್ ಬೆಲ್ತೂರು ದ. ಕ.	48 14
75/55	ಎ. ಆನಂದ ಶೆಟ್ಟಿ, ಪಡೀಲ್ ಚಿನ್ನಯ್ಯ ಶೆಟ್ಟರ ಅಳಿಯ, ಉಪಾಧ್ಯಾಯ, ಜಯ ಭಾರತೀ ಎಯಿಡೆಡ್ ಎಲಿಮೆಂಟರಿ ಶಾಲೆ, ಅಂಪಾರು, ಪೋಸ್ಟು ಕಾವ್ರಾಡಿ ದ. ಕ.	209 13
194/56	ಕೆ. ನರಸಿಂಪ ಶೆಟ್ಟಿ, ಎ. ಮಹಾಲಿಂಗ ಶೆಟ್ಟಿಯ ಮಗ, ಶಾಳಾವರೆ ಗ್ರಾಮ, ಪೋಸ್ಟು ಸಲ್ವಾಡಿ ದ. ಕ.	607 0

Office of the Vijaya Bank Ltd., Coondapoor, Dated 24—1—1957.

B. R. Adyanthaya
AGENT

ಸಾವಿರ ಮೆಟ್ಟಿಲುಗಳ ಮೇಲಿನಿಂದ – ಮೈಸೂರು

(೨೩ನೇ ಪುಟದಿಂದ)

ಅಧಾರವಾಗಿ ಪಕ್ಕದ ಶೈಲಿಂಗ್ಸನ್ನು ಒಡಿಕೊಳ್ಳುತ್ತಾರೆ. ಈ ಮನುಷ್ಯಸಮತಟ್ಟಾದ ಭೂಮಿಯಲ್ಲಿ ಓಡುವಂತೆ ಬೆಟ್ಟದಿಂದ ಕೆಳಗೆ ಓಡಿಬರುತ್ತಾನೆ. ಎಲ್ಲಿಯಾದರೂ ಕಾಲುಜಾರಿದರೆ ಇವನ ಗತಿಯೇನಾದೀತು?. ಎಂದು ನಾನು ಯೋಚಿಸುತ್ತಿರುವಷ್ಟರಲ್ಲೇ ಅವನು ಕೆಳಗೆ ಭೂಮಿಯಲ್ಲಿ ಹೋಗಿ ಸುಖವಾಗಿ ನಿಂತ. ಇದು ಅಭ್ಯಾಸದಬಲ. ಇವನು "ಬೆಟ್ಟದ ಮನುಷ್ಯನೇ ಆಗಿರಬೇಕು" ಎಂದು ಭಾವಿಸಿಕೊಂಡೆ. ಅಷ್ಟರಲ್ಲಿ ಮತ್ತೊಬ್ಬನು ಅವನಿಗಿಂತ ರಭಸದಿಂದ ಓಡಿಕೊಂಡು ಬಂದ. ಇವನ ಕಾಲುಗಳಲ್ಲಂತೂ ಮೆಟ್ಟಿಲುಗಳನ್ನು ಮುಟ್ಟುತವೋ ಇಲ್ಲವೋ ಎಂದು ಸಂದೇಹವೂ ಆಯಿತು. "ಅಭ್ಯಾಸ ಮಹಿಮೆ" ಎಂದಂದುಕೊಂಡೆ. ಇಷ್ಟಾಗುತ್ತಿರುವಾಗ ನಾನು ಮರದಡಿಯಲ್ಲಿ ಕುಳಿತೇ ಇದ್ದೇನೆ. ಸೂರ್ಯನ ಬಿಸಿಲನ್ನು ತಪ್ಪಿಸುತ್ತಾ ಇದ್ದೇನೆ. "ಹೇಗೆ ಮೇಲೇರಲಿ?" ಎಂದು ತರ್ಕಿಸುತ್ತಿರುವಾಗ ಕೆಳಗಿನಿಂದ ಅದೊಬ್ಬನು ಒಂದು ಮಗುವನ್ನು ತಲೆಯಲ್ಲಿಟ್ಟುಕೊಂಡು, ವಸ್ತ್ರದ ದೊಡ್ಡ ಕಟ್ಟು ಒಂದನ್ನು ಸೊಂಟದ ಮೇಲಿಟ್ಟುಕೊಂಡು ಮೇಲೆ ಬರುವುದನ್ನು ಕಂಡೆ ಖಾಪ! ಬೆವರು ಸುರಿಯುತ್ತಿದೆ. ಹರಕು ಬಟ್ಟೆ, ಹರಿದ ಅರ್ಧ ಇಜಾರು. ಒಬ್ಬ ಸಂಸಾರಿಯಾಗಿದ್ದಿರಬೇಕು. ನಾಲ್ಕೈದು ವರ್ಷದ ಗಂಡು ಮಗುವು ನನ್ನನ್ನು ನೋಡುತ್ತಿದೆ—ಗಾಂಧಿ ಟೊಪ್ಪಿಯನ್ನಿಟ್ಟಿದೆ—ತನ್ನ ತಂದೆ ತನ್ನನ್ನು ಹೊತ್ತುಕೊಂಡು ಪಡುವ ಸಂಕಟವನ್ನು ನೋಡಿ. "ನನ್ನನ್ನು ಹುಟ್ಟಿಸಿದೆ ಯಾಕೆ? ನಾಕು ಅಥವಾ ನಾಯು" ಎಂದು ಹೇಳುವಂತೆ ಕಂಡಿತು. ಪಾಪದ ಮನುಷ್ಯನು ಮೆಟ್ಟಿಲನ್ನು ಹತ್ತಿ ಮೇಲೆ ಮೇಲೆ ಬರುವಾಗ ವಿಶೇಷವೊಂದನ್ನು ಕಂಡೆ. ಅವನು ಹಾವು ನಡೆಯುವಂತೆ ನಡೆಯುತ್ತಿದ್ದನು. ಆಂದರೆ ಮೆಟ್ಟಿಲುಗಳ ಎಡದಿಂದ ಹಜ್ಜೆ ಇಟ್ಟವನು ನೆಟ್ಟಗೆ ಅವುಗಳ ಬಲಕ್ಕೆ ನಡೆಯುತ್ತಿದ್ದನು. ಬಲಕ್ಕೆ ಹಜ್ಜೆಯಿಟ್ಟು ಎಡಕ್ಕೆ ಹೋಗುತ್ತಿದ್ದನು. ಕಾಲುಗಳನ್ನು ಎತ್ತಿ ನೇರವಾಗಿ ಮತ್ತೊಂದು ಮೆಟ್ಟಿಲಿನ ಮೇಲೆ ಇಡುತ್ತಿದಿಲ್ಲ. ಎಡದಿಂದ ಬಲಕ್ಕೆ ಬಲದಿಂದ ಎಡಕ್ಕೆ ನಡೆಯುತ್ತಾ ಮೆಟ್ಟಿಲನ್ನು ಸುಲಭವಾಗಿ ಹತ್ತುತ್ತಿದ್ದನು. ಸ್ವಲ್ಪ ಮುಂದೆ ಹೋಗುತ್ತಲೇ ಮಗುವನ್ನು ಕೆಳಗಿಳಿಸಿದನು. ಅದು ಕೂಡಾ ಒಡನೆ ತಂದೆಯಂತೆಯೇ ನಡೆಯಲಾರಂಭಿಸಿತು; ಎರಡಂಗುಲದ ಅಗಲ ಪಾದಗಳನ್ನು ಎಡದಿಂದ ಬಲಕ್ಕೂ ಬಲದಿಂದ ಎಡಕ್ಕೂ ಮೆಟ್ಟಿಲು ಮೆಟ್ಟಿಲಲ್ಲಿ ಇಡುತ್ತಾ ಮೇಲೆ ನಡೆಯಿತು. ಒಡನೆ ನನಗೆ ನಾಚಿಕೆಯಾಯಿತು. 'ನಮಗು ಹತ್ತಿದ ಮೆಟ್ಟಿಲನ್ನು ನಾನು ಹತ್ತಿನೇ'? ಎಂದು ಪ್ರಶ್ನಿಸಿಕೊಂಡೆ. ಅಲ್ಲದೆ ಮೆಟ್ಟಿಲು ಹತ್ತುವ ಆ ದೊಂಡು ಗುಟ್ಟನ್ನೂ "ಬೆಟ್ಟದ ಮನುಷ್ಯ" ನೊಬ್ಬನಿಂದ ಕಲಿತೆ: ನಿತ್ಯ ಹೇಳುವಂತೆ 'ಹೇರೇ ರಾಂ' ಎಂದು ಮಂದರಿಡೆ. ಸರ್ವಾಕಾರವಾಗಿಯೇ ನಡೆದೆ. ಬಲದಿಂದ ಎಡಕ್ಕೆ ನಡೆದೆ. ಎಡದಿಂದ ಬಲಕ್ಕೆ ನಡೆದೆ. ಆಶ್ಚರ್ಯ! ವಹಾದಾಶ್ಚರ್ಯ! ದೇಕಕ್ಕೆ ಸರಿಸಮವೇ ಬೀಳಲಿಲ್ಲ. ಮಾರ್ಗದಲ್ಲಿ ಆಯಾಸವಿಲ್ಲದಂತೆ ತುರತುರನೆ ನಡೆದೆ. ಒಂದು ಕಡೆ ಮೆಟ್ಟಿಲಿನಲ್ಲಿ "500" ಎಂದು ಕೆತ್ತಿದ್ದಿತು. ಅದನ್ನು ನೋಡಿದೊಡನೆ "ಇದು ಮೆಟ್ಟಿಲುಗಳ ಲೆಕ್ಕವಿರಬೇಕು" ಎಂದು ಊಹಿಸಿಕೊಂಡೆ. ಜಿಲ್ಲಿ ನಿಂತು ಹಿಂದೆ ಮೈಸೂರು ಪಟ್ಟಣವನ್ನು ನೋಡಿದೆ. ನೋಡುವುದೇನು? ಒಂಭತ್ತು ಮೈಲುಗಳ ದೂರದಿಂದ ಮಹಾರಾಜರ ಅರಮನೆಯು ಸುವರ್ಣಕಲ್ಪಿತ ಗೋಪುರವು ಫಳಫಳಿಸುತ್ತಿತ್ತು. ಲಕ್ಷಾಪಧಿ ಮನೆ ಮಂದಿರಗಳ ಮಾಡುಗಳ ಹಂಚುಗಳು ಇಡೀ ಪಟ್ಟಣದಲ್ಲಿ ಕೆಂಪಗಿನ ದೊಡ್ಡ ದೊಡ್ಡ ಹದ್ದುಗಳಂತೆ ಕಾಣುತ್ತಿದ್ದುವು. ಕಟ್ಟಡಗಳ ಗೋಡೆಗಳು ಹಳದಿ ಬಣ್ಣವು ದೂರದಿಂದ ಸರಿಯಾಗಿ ಕಾಣುತ್ತಿದ್ದಿತು. ದೂರದಿಂದ "ಎಲ್ಲಾ ಕಟ್ಟೋಣಗಳಿಗಿಂತಲೂ ನಾನೇ ಉನ್ನತ" ಎನ್ನುತ್ತ ಸೈಂಟ್‌ಫಿಲೋಮಿನಾ ಚರ್ಚ್ ಕಾಣುತ್ತಿದ್ದಿತು. ಏನು ಸೊಬಗು? ಏನು ರಮಣೀಯತೆ? ಈ ನೋಟ—

ಜಗತ್ತಿನ ಇನ್ನಾವ ಕಡೆಯಲ್ಲಿದೆ? ಮನವನ್ನು ಸೂರೆಗೊಳ್ಳುವ ಮಹಾ ಮಹಾ ಕಟ್ಟೋಣಗಳ ಮೇಲ್ಬಾಗವು ಮೈಸೂರು ಪಟ್ಟಣದ ಶೃಂಗಾರ ರಸವನ್ನು ದರ್ಪದಿಂದ ಪ್ರಕಟಿಸುವಂತೆ ಕಾಣುತ್ತಿದ್ದಿತು. ಸೃಷ್ಟಿ ಸೌಂದರ್ಯವನ್ನು ಹೆಚ್ಚು ನೋಡಬೇಡವೆಂದೋ ಏನೋ, ಕಂಠವಾರಿತು. ಬಾಯಾರಿತು. ಹಸಿವಾಯಿತು. ನೀರು ಎಲ್ಲಿಯೂ ಇಲ್ಲ. ಬಂಡಿ ಬಂಡಿ, ಎಲ್ಲೆಲ್ಲಿಯೂ ಬಂಡಿ, ಪೊವಲುಗಳು!, ಮರಗಿಡಗಳು! "ಬೆಟ್ಟದಲ್ಲಿ ದೊಡ್ಡ ಕಾಡೇನು ಇಲ್ಲ, ಇದೇನಿದು? ಸ್ವಾಭಾವಿಕವಾಗಿ ಕಾಡು ಬೆಳೆದುಬೇಕಿತ್ತಲ್ಲಾ" ಎಂದುಲೋಚಿಸಿದೆ. ಅರ್ಥವಾಗಲಿಲ್ಲ. ಎದ್ದೆ, ಉಳಿದಿರುವ ಐನೂರು ಮೆಟ್ಟಲು ಹತ್ತೋಣವೆಂದು ನೂರು ಮೆಟ್ಟಲು ಹತ್ತತ್ತಲೇ ಸಾಕಾಯಿತು. ಉರುನೂರು ಮೆಟ್ಟಲು ದಾಟುತ್ತಲೇ ಅಲ್ಲೊಂದು ಮೋಟರ್ ಮಾರ್ಗ ಗಂಡಿತು. ನಾನು ಮೊದಲೊಮ್ಮೆ ಕಾರಿನಲ್ಲಿ ಹೋದುದು ಇದೇ ಮಾರ್ಗದಲ್ಲಿ ಎಂಬ ಸ್ಮರಣೆಗೆ ಬಂತು. ಮೇಲೆ ನೋಡಿದೆ. ಇನ್ನೂ ಬೆಟ್ಟವು ದೂರದಿಂದ ಕಾಣುತ್ತಿದೆ. ಇನ್ನು ನಡೆಯಲಸಾಧ್ಯ. ಮಾರ್ಗದಲ್ಲಿ ನಡೆದುಕೊಂಡೇ ಹೋಗಿ ಎಲ್ಲಿಯಾದರೂ ನೀರಿದೆಯೇ ಎಂದು ನೋಡುತ್ತೇನೆಂದು ಮಾರ್ಗದಲ್ಲಿ ಎರಡು ಹೆಜ್ಜೆ ಮುಂದರಿದೆ. ಆದರೆ ಭೀಕರ ಬಿಸಿಲು. ಬಾಯಾರಿ ಕಣ್ಣು ಕತ್ತಲು ಕವಿಯುವಂತಾಯಿತು. 'ಹೇ ರಾಮ! ಇದೆಂತಹ ಕಷ್ಟವಾತು" ಎಂದು ಕೊಂಡು ಬೆಟ್ಟದ ಮೇಲೆ ನೋಡುತ್ತಿರುವಾಗ ನಾನು ಮುಂಜೆ ಒಮ್ಮೆ ನೋಡಿದ್ದ ಬಸವನ ಪಹಾ ಮೂರು ತಿಯ ಬೆನ್ನು ಕಂಡು ಬಂತು. ಅಲ್ಲಿಗೆ ಹೋಗುವೆನೆಂದು ಹೆತ್ತು ಮೆಟ್ಟಲು ಹೆತ್ತುತ್ತಲೇ ಅಲ್ಲೊಂದು ಕಟ್ಟೆ ಕಂಡು ಬಂತು. ಬಂಡೆ ಕಲ್ಲಿನ ಎರಡು ಸೀಟುಗಳು ಕಂಡು ಬಂದುವು. ನೀರು ಉಂಟೋ ಎಂದು ತತ್ತರಿಸುವ ಜೀವವು ಅತ್ತಿತ್ತ ನೋಡಿತು. ಹೌದು. ನೀರಿನ ನಳ್ಳಿಯೊಂದು ಇದ್ದಿತು. ಬೇಗನೇ ಹೋಗಿ ಒತ್ತಿದೆ. ಧಾರಾಕಾರವಾಗಿ ನೀರು ಸುರಿಯಿತು. ನೀರಿನ ನಿಜವಾದ ಮಹಿಮೆಯು ತಿಳಿದು ಬಂದ ಪುಣ್ಯ ದಿನವಿದು. "ಹೇ ದೇವ! ಏನೆಲ್ಲ ನಡೆಸುವೆ. ಹೇಗೆಲ್ಲ ಮನುಷ್ಯನನ್ನು ಪರೀಕ್ಷಿಸುವೆ.

"ತನುವನಲ್ಲಾಡಿಸಿ ನೋಡುವೆ ನೀನು
ಮನವನಲ್ಲಾಡಿಸಿ ನೋಡುವೆ ನೀನು
ಧನವನಲ್ಲಾಡಿಸಿ ನೋಡುವೆ ನೀನು
ಇವೆಲ್ಲಕ್ಕುಜದಿದ್ದರೆ ಭಕ್ತ ಕಂಪಿತ
ನಮ್ಮ ಕೂಡಲ ಸಂಗಮ ದೇವ."—

ಎಂದು ಬಸವಣ್ಣನವರು ಹಾಡಿದುದು ನಿಜವಾಯಿತು. ನನ್ನ ಮನವನಲ್ಲಾಡಿದುದು ಬರೇ ನೀರಿನಿಂದ —ನೀರಿಗಾಗಿ! ಬೇಗ ಬೇಗನೆ ಹೊಟ್ಟೆತುಂಬಾ ನೀರು ಕುಡಿದೆ! ಏನು ರುಚಿ ಆ ನೀರಿಗೆ,—ಅದು ಕೂಡಾ ಆ ಸಮಯದಲ್ಲಿ! ಲೋಕದಲ್ಲಿ ಇನ್ನಾವ ಆಹಾರವೂ ಆಗ ಬೇಡವೆನಿಸಿತು. ಕುಡಿದಷ್ಟು ನುತ್ತೂ ಕುಡಿದೆ. ಮುಖ ತೊಳೆದೆ. ಪಾದರಕ್ಷೆಯನ್ನು ಅಜಿಗಿಟ್ಟು ಕಾಲುತೊಳೆವೆನೆಂದು ಕೊಂಡೆ. ಕಾಲನ್ನು ನೀರಿನಡಿ ಇಡುತ್ತಲೇ, ಮನದಲ್ಲಿ ಭಯವೆದ್ದಿತು. "ನನ್ನ ಜೀವರಕ್ಷಿಸಿದೆ ಈ ನೀರನ್ನು ನನ್ನ ಬಾಯಾರಿಕೆ ಕಳೆದ ನಂತರ ನನ್ನ ಕಾಲಿಗೆಸಗಿ ಅದನ್ನು ಹಾಳುಗೈದೆನಲ್ಲ! ಇದೇನು ತಿಳಿಗೇಡಿತನ, ನೀಚತನ. ಒಂದರೆಗಳಿಗೆಯ ಮೊದಲು ಪ್ರಾಣಕ್ಕಿಂತಲೂ ಮೇಲೆಣಿಸಿಕೊಂಡ ಆ ನೀರು ಧಾರಾಳವಾಗಿ ದೊರೆತೊಡನೆ ಅದರುಪಯೋಗಗೊಳಿಸುವುದೇ? ಕೂಡದು, ಕೂಡದು!" ಎಂದು ಮನಸ್ಸು ತಿರಸ್ಕರಿಸಿತು. ಕಾಲಿಗೆಸೆಯುವ ನೀರನ್ನು ಕುಡಿದು ನನ್ನ ಹಿಂದೆ ಬರುವ ಯಾತ್ರಿಕನು ಬದುಕಲಿ ಎಂದೆಂದುಕೊಂಡು ಬಸವನ ಬಳಿಗೆ ಹೋದೆ. ಏನನ್ನು ನೋಡುವುದು? ಸಣ್ಣ ಪರ್ವತವೇ ಮೂರ್ತಿಮತ್ತಾಗಿ ಉತ್ತರಕ್ಕೆ ಮುಖಮಾಡಿ ಬಸವನು ಚಾಮುಂಡಿಯ ಮಂದಿರವನ್ನು ನೋಡುತ್ತಿದ್ದನೋ ಎಂದು ಭಾಸವಾಗುತಿತ್ತು. ಒಂದೇ ಕಲ್ಲಿನಿಂದ ಕೆತ್ತಿದ ಮಹಾ ವಿಗ್ರಹ ಕೂತಿದೆ. ದೊಡ್ಡ ಕಟ್ಟಡದ ತಿಖರವನ್ನು ನೋಡುವಂತೆ ತಲೆಯೆತ್ತಿ ಬಸವನ ಮುಖವನ್ನು ನೋಡಿದೆ. ಬಿಸಿಲುಬೇಗೆಯಲ್ಲಿ ಕುಳಿತಿದ್ದಾನೆ. ಬಂಡೆಯಿಂದ ನಿರ್ಮಿಸಲ್ಪಟ್ಟರೂ ಜೀವವಿರುವ ವಿಚಿತ್ರ ಪ್ರಾಣಿಯಂತೆ ತೋರುತ್ತಿದ್ದಾನೆ. ಇದನ್ನು ಇಷ್ಟು ಗಾಂಭೀರ್ಯವಾಗಿ ಕೆತ್ತಿದ ಶಿಲ್ಪಿ ಯಾರಪ್ಪ? ಇದಕ್ಕಾಗುವಬಂಡೆಯನ್ನು ಎಲ್ಲಿಂದ ತಂದರು? ಏನಿದು ಮನುಷ್ಯಪ್ರಾಣಿಯ ಅದ್ಭುತ ಕಾರ್ಯ! ಅವನು ಸಾಧಿಸಿರುವುದು ಯಾವುದನ್ನು? ಎಂದುಕೊಂಡು ಬಸವನ ಹಿಂದಣ ಪಾರ್ಶ್ವವನ್ನು ಮುಟ್ಟಿದೆ. ಅವನನ್ನು ನಿರ್ಮಿಸಿದ ಶಿಲ್ಪಿ, ಅವನು ಜನನಕ್ಕೆ ಬಂದ ಕಾಲ ಚರಿತ್ರಾರ್ಹವಾಗಿಲೆಂದು ಅವನನ್ನು ತಟ್ಟಿದೆ. ಆದೇ ಗಳಿಗೆಯಲ್ಲಿ ಮೈಸೂರು ಪಟ್ಟಣದಿಂದ ಮಧ್ಯಾಹ್ನ ಹನ್ನೆರಡು ಗಂಟೆಯನ್ನು ಸೂಚಿಸುವ ವಿದ್ಯುತ್ ವಾಣಿಯು ದೂರದಿಂದ ಕೇಳಿ ಬಂತು. ಮೇಲೆ ನೋಡಿದೆ. ಸಹಸ್ರಾರು ವರ್ಷಗಳಿಂದ ಇಂತಹ ಘಟನೆಗಳನ್ನು ನೋಡಿ ನೋಡಿ ನಗುತ್ತಿರುವ ಸೂರ್ಯ ದೇವನು ನನ್ನನ್ನೂ ನೋಡಿ ನಗುತ್ತಿದ್ದಾನೆ. ಬಸವನ ಹಿಂದಣ ನೆರಳಲ್ಲಿ ಸ್ವಲ್ಪ ಕುಳಿತೆ. ಈಗ ಮೈಸೂರು ದೇಶದ ಬೆಡಗು ಸಾವಿರ ಪಾಲು ಕಳೆಯೇರಿ ಬಂದಿದ್ದಿತು. ಐನೂರನೇ ಮೆಟ್ಟಿಲಿನಲ್ಲಿಂದ ಕಾಣಿಸಿರುವ ದೃಶ್ಯಗಳು ಕಂಡು ಬಂದುವು. ದೂರದಿಂದ ಸರದೆಯು ಮೇಲಕ್ಕೆತ್ತಲ್ಪಟ್ಟ ನಾಟಕ ಮಂದಿರದಂತೆ ಮೈಸೂರು ದೇಶವು ಕಂಡಿತು. ಮಟನಟ ಮಧ್ಯಾಹ್ನ. ಮನೆ ಮಂದಿರಗಳು ಕೆಂಪಗಿನ ಪೆಪ್ಪೆಗಳಂತೆ ಕಂಡವು. ಪಟ್ಟಣದ ಕೆಲವು ದೊಡ್ಡ ದೊಡ್ಡ ಮಾರ್ಗಗಳು ಬಿಳೀ ರೇಖೆಗಳಂತೆ ತೋರಿದುವು. ನೂರಾರು ಮೈಲುಗಳ ದೂರದಿಂದ ಹೂರ್ವದ ಪ್ರದೇಶವು ಮಹಾಸಮುದ್ರದಂತೆ ತೋರಿತು. ಆತ್ತ ಪ್ರದೇಶ ಇತ್ತ ಪ್ರದೇಶ;ನಡುವಿನಲ್ಲಿ ಬೆಟ್ಟ. ಹಸರು ಪ್ರದೇಶದ ನಡುವಿನಲ್ಲಿ ಬಿಳಿ ಹಕ್ಕೆಗಳು ಕುಳಿತಂತೆ ದೂರದ ಕಟ್ಟಡಗಳು ಕಂಡುಬಂದುವು. ಕೆಂಡಷ್ಟು ಮನ ತಣಿಯದು ನೋಡಿದಷ್ಟು ನೋಡಬೇಕೆನಿಸಿತು. ಜೀವನದಲ್ಲಿ ನೋದಲು ಇಂತಹ ದೃಶ್ಯವನ್ನು ನೋಡಿಲ್ಲವಲ್ಲಾ ಎಂದು ಚಿತ್ಕರೇ ಕರೆದು ಹೇಳುತ್ತಿದ್ದಿತು ಬೊಂಬಾಯಿಯ ಆ ಘೋರ ನಾಂದರ್ಯವೆಲ್ಲಿ? ಮೈಸೂರಿನ ಈ ಶಾಂತ ಸೊಬಗೆಲ್ಲಿ? ಉದಕಮಂಡಲದ ಆ ಕಾಡ ಸೊಬಗೆಲ್ಲಿ? ಮೈಸೂರಿನ ಈ ಹಸುರು ಭೂಮಿಯ ಕಾಂತಿಯೆಲ್ಲಿ? ಮದ್ರಾಸಿನ ಆ ನಿರ್ಜೀವ ಬೆಡಗೆಲ್ಲಿ? ಮೈಸೂರಿನ ಈ ತೇಜಸ್ಸೆಲ್ಲಿ? ನಿಜವಾಗಿಯೂ ದೈವಕಲ್ಪಿತ ನಾಡಿದು ಎಂದು ಭಾವವತ್ತಾಗಿ ಯೋಚಿಸುತ್ತಿದ್ದಾಗ ಮೇಲೆ ನಡೆಯುವ ತವಕವಾಯಿತು. ನಳ್ಳಿಗೆ ಹೋಗಿ ನೀರನ್ನು ಮತ್ತೂ ಕುಡಿದೆ. ಬರೇ ಹೊಟ್ಟೆಯಲ್ಲಿ ಎಷ್ಟು ಹಿಡಿಯುತೋ? "ಹರೇ ರಾಂ" ಎಂದು ಹೊರಟೆ.

ಮೇಲೆ ನಡೆದೆ ಈಗ ದಾರಿ ಸುಲಭ ಕಂಡಿತು. ನುತ್ತೂ ಮೂನ್ನೂರು ಮೆಟ್ಟಿಲುಗಳನ್ನು ಹತ್ತುವಷ್ಟರಲ್ಲೇ ಬಲಗಡೆ ಸಣ್ಣ ಗುಡಿಯೊಂದು ಕಂಡು ಬಂತು. ಒಳಗೆ ಕತ್ತಲಾಗಿದ್ದಿತು. ಇಣಿ

(೨೭ನೇ ಪುಟ ನೋಡಿರಿ)

ಆಯುರ್ವೇದಿಕ್ ಹೊಸ ಗ್ರಂಥಗಳು—
ಮೈಸೂರು ಆಯುರ್ವೇದಿಕ್ ಕಾಲೇಜ್ ಪ್ರಾಸ್ಪೇಲ್ ಸುಪರಿಂಟೆಂಡೆಂಟರಾದ ಸುಸ್ನೇಹಪಡೆದ ೪೦೦ ಪುಟಗಳು ಆಲೋಪಥಿಕ್ ಔಷಧಿ ಗುಣ ರಹಸ್ಯ ಬೆಲೆ ೬೦೦
೧೦೫೫ ಮೂಲ ಔಷಧಿಗಳಿಗೆ ಸಂಪೂರ್ಣ ಉತ್ಪತ್ತಿ ಗುಣ ಧರ್ಮವುಳ್ಳ ಅಪೂರ್ವ ಗ್ರಂಥವು.
೨. ಇಂಜೆಕ್ಷನ್ ವಿಜ್ಞಾನ ಶಾಸ್ತ್ರವು — ಬೆಲೆ. ೫ ೦ ೦
೩. ಐಷಿಕ ಸಂತಾನ— ಬೆಲೆ. ೧ ೮ ೦
—ಗ್ರಂಥಗಳು ದೊರೆಯುವ ಸ್ಥಳಗಳು—
(೧) ಲೇಖಕಾ ಪ್ರಕಾಶನ ಮಂದಿರ್, ಪೋಸ್ಟು ಪೆಟಾಸಿಗೆ—ಧಾರವಾಡ ಜಿಲ್ಲಾ.
(೨) ಇಂಟರ್ ನ್ಯಾಶನಲ್ ಸ್ಟೋರ್ಸ್, ಬೆಳಗಾಂವಗಲ್ಲಿ—ಹುಬ್ಬಳ್ಳಿ.

Rubber stamps
ರಬ್ಬರ್ ಮೊಹರುಗಳಿಗೆ ರೂ. 2-0-0
ದಿನಚರಿ ಸೆಟ್ 12ಕ್ಕೆ ರೂ. 3-0-0
ಫೋಟೊ ಪುಸ್ತಕ(ಕನ್ನಡ)ರೂ.0-8-0
SOCH. MALVALLI

ಆದರ್ಶ ಪ್ರಜಾರಾಜ್ಯವೇ ನಮ್ಮ ಗುರಿ

(೦೦ನೇ ಪುಟದಿಂದ)

ದಲ್ಲಿಯೂ ಮನುಷ್ಯನ ವಿಕಾಸಕ್ಕೆ ಕಾರಣವಾಗುವ ವಿಚಾರಗಳಲ್ಲೆಲ್ಲ ವಿವಿಧ ಮಾರ್ಗಗಳು ಸ್ವತಂತ್ರವಾಗಿಯೇ ಬೆಳೆದು ಬಂದು ಒಂದೇ ವಿಷಯವನ್ನು ಪ್ರಸ್ತಾಪಿಸುವ ಹಲವು ಮಾರ್ಗಗಳ ವಿಚಾರಪೂರ್ಣ ವಿಮರ್ಶೆಯು ಅಥವಾ ತುಲನೆಯು ಅತ್ಯಾವಶ್ಯಕವಿರುತ್ತದೆ. ಇದರ ಬದಲಾಗಿ ಎಲ್ಲರ ಮಾರ್ಗಗಳನ್ನು ಒಂದೇ ತೆರನಾಗಿ ಮಾಡಿಕೊಂಡರೆ ವಿಕಾಸವು ಅಸಾಧ್ಯವೆನಿಸುವುದು. ನಮ್ಮ ದೇಶವು ಅನಾದಿಯಿಂದಲೂ ಧಾರ್ಮಿಕ ಆರ್ಥಿಕ ಮತ್ತು ರಾಜಕೀಯ ವಿಚಾರಗಳಲ್ಲೆಲ್ಲಾ ತುಂಬಾ ಸ್ವಾತಂತ್ರ್ಯಕ್ಕೆ, ಸ್ವತಂತ್ರ ವಿಚಾರಗಳಿಗೆ ಅಸ್ಪದವನ್ನಿತ್ತಿರುತ್ತದೆ. ಒಂದು ಕಾಲದಲ್ಲಿ ಎಲ್ಲಾ ಜನರ ಸಮಗ್ರಹಿತವನ್ನೊದಗಿಸಿದ ವಿಚಾರಗಳು ಎಲ್ಲಾ ಕಾಲಗಳಲ್ಲೂ ಎಲ್ಲರ ಸಮಗ್ರಹಿತವನ್ನೊದಗಿಸುವುದು ಕಷ್ಟ ಸಾಧ್ಯವಾದ ವಿಚಾರ. ಆದುದರಿಂದ ಇಂದಿಗೆ ನಮಗೆಲ್ಲ ಹಿತವನ್ನೊದಗಿಸಬಹುದಾದ ಹಾದಿಯನ್ನು ನಾವೆಲ್ಲರೂ ಯಾವನೊಬ್ಬನ ಸ್ವಾತಂತ್ರ್ಯಕ್ಕೂ ಧಕ್ಕೆ ಬಾರದಂತೆ ಕಂಡು ಹಿಡಿಯಬೇಕು. ಈ ಹಾದಿಯಿಂತೂ ನಮ್ಮ ದೇಶದ ಧಾರ್ಮಿಕ, ಆರ್ಥಿಕ ಮತ್ತು ಸಾಮಾಜಿಕ ಕಟ್ಟುಗಳಿಗೆ ಅನುಗುಣವಾಗಿರಬೇಕಾದುದು ಎಂದು ಬೇರೆ ಹೇಳುವ ಅವಶ್ಯವಿಲ್ಲ.

ಹೊರಗಿನ ಪೀಡೆಗಳನ್ನು ನಿವಾರಿಸುವ ಕಾರ್ಯಕ್ರಮಗಳೊಡನೆ ನಾವು ಅವಶ್ಯವಾಗಿಯೂ ನಮ್ಮ ದೈನಂದಿನ ಜೀವನದಲ್ಲಿ ಇಲ್ಲಿ ಅಲ್ಲಿ ಕಂಡು ಬರುವ ಪ್ರಜಾಸತ್ತೆಯ ಮೂಲಭೂತ ನಿಯಮಗಳಿಗೆ ವಿರೋಧವಾಗಿರುವ ಹಾಗೆಯೇ ನಮ್ಮ ಪ್ರಜಾರಾಜ್ಯಕ್ಕೂ ಹಾನಿ ತರಬಹುದಾದ ವಿಚಾರಗಳ ಉನ್ಮೂಲನವನ್ನು ಸಾಧಿಸಬೇಕಾಗುತ್ತದೆ. ನಿದರ್ಶನಕ್ಕೆ ಒಟ್ಟು ಸಂಖ್ಯೆಯ ಅರ್ಧದಷ್ಟಿರುವ ಹೆಂಗಸರನ್ನು ನಾವು ಸಮಾನತೆಯ ದೃಷ್ಟಿಯಿಂದ ಕಂಡುಕೊಳ್ಳುತ್ತಿಲ್ಲ. ಇದು ಪ್ರಜಾಸತ್ತೆಯ ಮೂಲನಿಯಮಗಳಿಗೆ ತೀರ ವಿರೋಧವಾದುದು, ಅಥವಾ ಸಾಮಾಜಿಕ ದೃಷ್ಟಿಯಿಂದಲೂ ಹೀನವಾದ ಸಂಪ್ರದಾಯ. ಪರಪೆಯ ಪದ್ಧತಿ, ವ್ಯಭಿಚಾರ, ಮರಣಕ್ಷಣೆಯೇ ಮೊದಲಾದವು ನಮ್ಮ ಸಮಾಜದಲ್ಲಿ ಈಗಲೂ ಉಳಿದುಕೊಂಡಿರುವ ಜಾಡ್ಯಗಳಾಗಿವೆ ಹಾಗೆಯೇ ನಮ್ಮ ಜನರಲ್ಲಿ ಕಂಡು ಬರುತ್ತಿರುವ ಜಾತಿ ಪದ್ಧತಿ, ಧನಿಕ ದರಿದ್ರರಲ್ಲಿ ಕಾಡುಬರುವ ಅಂತರಗಳು ಅಧುನಿಕ ಪ್ರಜಾಯತ್ತೆಗಳ ತಾತ್ವಿಕ ದೃಷ್ಟಿಯಲ್ಲಿ ಅತ್ಯಂತ ಹೇಯವಾದ ವುಗಳು. ಉಚ್ಚ, ನೀಚ ಜಾತಿಯವರಲ್ಲಿ ಕಂಡು ಬರುತ್ತಿರುವ ಅಸ್ಪೃಶ್ಯತೆಯು ಘೋರವಾದುದಷ್ಟೆ! ಧನಿಕ, ದರಿದ್ರರ ನಡುವೆ ಕಂಡುಬರುತ್ತಿರುವ ಸಾಮಾಜಿಕ ವ್ಯವಹಾರಗಳಲ್ಲಿನ ಅಂತರವೂ ಇಷ್ಟೇ ಭೀಕರವಾದುದು ಎಂಬುದನ್ನು ನಾವು ಒತ್ತಿ ಹೇಳಬೇಕಾಗುತ್ತದೆ.

ಜಾತೀಯತೆಯ ಪ್ರಶ್ನೆಯಿಂದಾಗಿ ನಮ್ಮ ಭಾರತವು ಭೌಗೋಲಿಕವಾಗಿ ಒಂದೇ ಇದ್ದರೂ ಇಂದು ಇಬ್ಭಾಗವಾಗಿದೆ. ಆದರೆ ಈ ಪ್ರಶ್ನೆಯು ಹಿಂದನಷ್ಟೇ ಭೀಕರವಿದೆ. ಭಾರತವನ್ನು ವಿಭಾಗಿಸಿದುದರಿಂದ ನಮ್ಮ ಸಮಸ್ಯೆಯು ತೀರ್ಮಾನವಾಯಿತೆಂದೆಲ್ಲ. ಹಾಗಾದರೆ ಇದನ್ನು ಹೇಗೆ ಬಗೆಹರಿಸಬಹುದು? ಒಂದು, ಮುಸ್ಲಿಮರು, ಸಿಕ್ಖರು, ಪ್ರತಿಯೊಬ್ಬನೂ ತನ್ನ ಮಕ್ಕಳೆಲ್ಲಾದರೂ ಈ ಕೋಮು ದ್ವೇಷದ ಜಾಡ್ಯವು ಅಂಟಿಕೊಳ್ಳದಂತೆ ಮುಂಜಾಗ್ರತೆಯನ್ನು ವಹಿಸತಕ್ಕುದು.

ನಮ್ಮ ದುರ್ದೈವದಿಂದಲೆಂಬಂತೆ, ಕಳೆದ ವರ್ಷ ಇನ್ನೊಂದು ಪ್ರಶ್ನೆಯು ನಮ್ಮ ದೌರ್ಬಲ್ಯವನ್ನು ಪ್ರಕಟಿಸಿದೆ. ವಿವಿಧ ಭಾಷೆಗಳನ್ನಾಡುವ ನಮ್ಮ ಒಂದೇ ದೇಶದ ವಿವಿಧ ಜನರಲ್ಲಿ ಅದ್ಭುತ ವೈಷಮ್ಯವು ಬೆಳೆದುನಿಂತಿದೆ ಪಾಶ್ಚಾತ್ಯರು ಹಲವು ಭೂಖಂಡಗಳಲ್ಲಿ ತೋರುತ್ತಿರುವ ಜನಾಂಗಗಳಲ್ಲಿನ ಭೇದ ಬುದ್ಧಿಯಷ್ಟೇ, ಈ ಭಾಷಾ ವೈಷಮ್ಯವೂ ಹೇಯವಾಗಿದೆ. ಹಲವು ಜನಾಂಗಗಳ ಜನರು ಬುದ್ಧಿವಂತರು, ಇತರರು ಬುದ್ಧಿಹೀನರು ಎಂಬ ಭಾವನೆ ಅಸಮಂಜಸವಾದುದು ಎಂಬುದನ್ನು ಜೀವ ವಿಜ್ಞಾನಿಗಳು ಇತ್ತೀಚೆಗೆ ಪ್ರಮಾಣೀಕರಿಸಿದ್ದಾರೆ, ಹಾಗಾದರೆ ವಿವಿಧ ಭಾಷೆಗಳನ್ನಾಡುವ ಜನರಲ್ಲಿ ಉಚ್ಚ ನೀಚ ಭಾವನೆಗಳು ಸರ್ವಥಾ ಸಮಂಜಸವೆನಿಸಲಾರವು. ಯಾವ ಮನುಷ್ಯನೂ ಹುಟ್ಟುವಾಗಲೇ ಭಾಷೆಯೊಂದನ್ನು ಕಲಿತುಬರುವುದಿಲ್ಲ. ಅನಂತರವೇ ಅವನ್ನು ಕಲಿತುಕೊಳ್ಳುತ್ತಾವಷ್ಟೆ. ಹಾಗಾದರೆ ಇದರಿಂದ ಏತಕ್ಕೆ ವಿವಿಧ ಜನರಲ್ಲಿ ವೈಷಮ್ಯವುದಿಸಬೇಕು?

ಹೀಗೆ ನಾವೆಲ್ಲರೂ ಒಂದೇ ತಾಯಿಯ, ನಾಡಿನ ಮಕ್ಕಳು ಎಂಬ ಭಾವನೆಯು ನಮ್ಮಲ್ಲಿ ಉದಯವಾಗಬೇಕು. ಭಾಷೆ, ಜಾತಿ, ಲಿಂಗ, ಮತ, ಪ್ರಾಂತ ಭೇದಗಳು ನಮ್ಮಲ್ಲಿ ಪರಸ್ಪರ ಭೇದ ಭಾವನೆಗಳನ್ನು ಉಂಟುಮಾಡಬಾರದು. ನಮ್ಮೆಲ್ಲರ ಇತಿಹಾಸ, ನಮ್ಮ ನಾಡಿನ ಪ್ರತಿ ಹಾಸವು ಒಂದೇ ಎಂಬುದನ್ನು ಮರೆಯದೆ, ನಮ್ಮ ಭವಿಷ್ಯವು, ಎಲ್ಲರ ಭವಿಷ್ಯವೂ ಒಂದೇ ಆಗುವಂತೆ ಸತತ ಶ್ರಮಿಸಬೇಕು.

ಹೀಗೆ ನಮ್ಮೆಲ್ಲರಲ್ಲಿ ಐಕ್ಯವು ತಲೆದೋರಬೇಕು. ಈ ಐಕ್ಯವು ಎಲ್ಲರೂ ದುಡಿದು ಸಾಧಿಸಬಹುದಾದ ಸಾಮೂಹಿಕ ಶ್ರೇಯಸ್ಸು. ಇಂಥ ಕ್ರಮ ಸಾಧನೆಯ ಮಾರ್ಗವೆಂದೂ ಖಂಡಿತ ಪ್ರಜಾತಂತ್ರದತ್ವಕ್ಕನುಗುಣವಾದ ಮಾರ್ಗ ಮಾತ್ರವಲ್ಲದೆ ಇಂಥ ಮಾರ್ಗದಿಂದಲೇ ನಮ್ಮ ಶಾರೀರಿಕ ಮತ್ತು ಮಾನಸಿಕ ಶ್ರೇಯಸ್ಸುಗಳು ಸಾಧ್ಯವಿರುತ್ತವೆ. ನಮ್ಮ ಭೇದ ಬುದ್ಧಿಯನ್ನು ತೊರೆದು, ನಮ್ಮೆ ಸುಖ-ದುಃಖಗಳನ್ನೆಲ್ಲ ತೂಗಿ ತುಲನೆಮಾಡಿ ಎಲ್ಲರ ಸುಖವನ್ನು ಸಾಧಿಸುವ ಮಹಾ ಕಾರ್ಯದಲ್ಲಿ ಪ್ರತಿಯೊಬ್ಬನೂ ಕಾರ್ಯತತ್ಪರನಾಗಬೇಕು. ಇದನ್ನೇ ನಮ್ಮ ಪ್ರಜ ರಾಜ್ಯವು ನಮ್ಮೆಲ್ಲರಿಂದಲೂ ಪ್ರತೀಕ್ಷಿಸುತ್ತಿದೆ. ಹೊಣೆಯರಿತು ನಮ್ಮ ನಮ್ಮ ಕಾರ್ಯವನ್ನು ಪೂರ್ಣಮಾಡಿದರೇನೆ ನಮ್ಮ ದೇಶವು ಪ್ರಗತಿಯನ್ನು ಸಾಧಿಸಬಲ್ಲುದು.

— ಅನುವಾದಕರು: ಶ್ರೀ ಯು. ಲಕ್ಷ್ಮೀನಾರಾಯಣ ಆಚಾರ್ಯ, ಎಂ. ಎ ಎಲ್. ಟಿ.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. 3/57.

ಅರ್ಜಿಣ ಸೆಟ್ಟಿ — ಅರ್ಜಿದಾರಳು

ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವುದೇನೆಂದರೆ,

ಅರ್ಜಿದಾರಳು ಮೃತ ಅಂಬಾಡಿಬೀಡು ಮುದ್ದಣ್ಣ ಸೆಟ್ಟರ ಹೆಂಡತಿಯಾಗಿದ್ದು ಅರ್ಜಿಯಲ್ಲಿ ನಿವರಿಸಿದ ದಿಕ್ಕಿನ ಆಸ್ತಿಯು ವಸೂಲಿಗೆ ಅರ್ಜಿದಾರಳ ಹೆಸರಲ್ಲಿ ಸರ್ಟಿಫಿಕೇಟು ಕೊಡಿಸಬೇಕಾಗಿ ಮೇಲ್ಕಂಡ ಅರ್ಜಿ ದಾಖಲುಮಾಡಿರುವುದರಿಂದ ಆ ಕಾರಿತು ಆಕ್ಷೇಪ ಕೊಡುವವರಿದ್ದರೆ ತಾ. 12—2—57ಕ್ಕೆ ಬೆಳಿಗ್ಗೆ ಗಂಟೆ 11ಕ್ಕೆ ಕೋರ್ಟು ನುಂಡೆ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದಂತ ಈ ಮೂಲಕ ಸರ್ವರಿಗೂ ತಿಳಿಸೋಣಾಗಿ ಯ್ತಿದೆ.

(By order of the court)

Y. C. S. Hegde.
Advocate for Petitioner.

ತಾ. 24—1—1957, ಉಡುಪಿ.

—ಉಡುಪಿಯಲ್ಲಿ—

ಐರೋಡಿಯವರ ಪಾತ್ರೆಗಳು ಪ್ರಸಿದ್ಧವಾಗಿವೆ ಯಾಕೆ?

ಕ್ರಯದಲ್ಲಿ ಕಡಿಮೆ ಮಟ್ಟದಲ್ಲಿದ್ದು ಸೌಂದರ್ಯ ಬಾಳಿಕೆಯಲ್ಲಿ ಮೇಲ್ಮಟ್ಟದ್ದಾಗಿರುವುದರಿಂದ ಅಂಥಾ ಪ್ರಸಿದ್ಧವಾದ

ಮನೆ, ಮಠ, ದೇವಾಲಯಗಳಿಗೆ ಬೇಕಾಗುವ

ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು, ಶುದ್ಧ ಕಂಚು, ಸ್ಟೀಲು,

ಎಲ್ಲಮಿನಿಯಂ ಪಾತ್ರೆಗಳು ಬೇಕಾಗಿದ್ದರೆ

ರಖಂ ಆಗಿಯೂ ಚಿಲ್ಲರೆಯಾಗಿಯೂ ಸಿಗುವ ಅಂಗಡಿ:

ಐರೋಡಿ ರಾಧಾಕೃಷ್ಣ ಪೈ,

ಪಾತ್ರೆ ವ್ಯಾಪಾರಿ, ರಥಬೀದಿ, ಉಡುಪಿ.

ವಿ. ಸೂ.— ದೇವತಾರ್ಚನೆ ಪಾತ್ರೆಗಳ ಸಚಿತ್ರ ಕ್ಯಾಟಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸಲಾಗುವುದು.

ಅತ್ಯಾಧುನಿಕ ಸೌಕರ್ಯಗಳನ್ನೊಳಗೊಂಡ
ಮೇಲ್ತರಗತಿಯ ಭೋಜನ ಮತ್ತು ವಸತಿಗೃಹ-

ರಾಯಲ್ ಮಹಲ್

ಉಡುಪಿ.

ಕೆ. ವೆಂಕಟ್ರಮಣ ಭಟ್ಟ, ಮ್ಯಾನೇಜಕ.

ROYAL MAHAL

(REGD)

BOARDING & LODGING HOUSE,

UDIPI, S. K.

R. O. C. No. B3/7225/56.

UDIPI MUNICIPALITY

Notice

Is hereby given that the right of collecting fees in the municipal markets, cart stands, Jutka stand, mutton stalls and slaughter house for the year 1957—58 will be sold by public auction by the Municipal Commissioner, Udipi, on Friday, the 15th February, 1957 at 3—00 P. M. in the Municipal Office, Udipi. The sale is subject to the rules in force.

Further particulars or information may be obtained from the Municipal Office, Udipi on all working days during office hours.

A. S. D'SOUZA,
Commissioner.

Municipal Office,
UDIPI,
Dated 23-1-1957.

R, O. C. No. B3/7225/56

ಉಡುಪಿ ಮುನ್ಸಿಪಾಲಿಟಿ.

ನೋಟೀಸು

ಈ ಮೂಲಕ ತಿಳಿಯಪಡಿಸುವುದೇನೆಂದರೆ:-

1957-58ನೇ ವರ್ಷದಲ್ಲಿ ಉಡುಪಿ ಮುನ್ಸಿಪಾಲಿಟಿಯ ಆಡಳಿತಕ್ಕೆ ಒಳಪಟ್ಟ ಮಾರ್ಕೇಟುಗಳು, ಗಾಡಿ ಟ್ರಾಕ, ಜಟ್ಕಾ ಟ್ರಾಕ, ಮಟನ್ ಸ್ಟೋಲ್ಸ್ ಮತ್ತು ವಧಾಗೃಹದಲ್ಲಿ ಪರಿವಸೂಲುಮಾಡುವ ಹಕ್ಕನ್ನು ಮುನ್ಸಿಪಲ್ ಕಮಿಷನರವರು ತಾರೀಕು 15-2-1957ನೇ ಶುಕ್ರವಾರ ಅಪರಾಹ್ನ ಗಂಟೆ 3-00ಕ್ಕೆ ಮುನ್ಸಿಪಲ್ ಆಫೀಸಿನಲ್ಲಿ ಆ ಕಾರಿತು ಜ್ಯಾರಿಯಲ್ಲಿರತಕ್ಕ ನಿಯಮಗಳಿಗನುಸಾರವಾಗಿ ಬಹಿರಂಗವಾಗಿ ಏಲಂ ಮೂಲಕ ಸೂರಾಟ ಮಾಡುವರು.

ಆ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಆಫೀಸು ಸಮಯ ಮುನ್ಸಿಪಲ್ ಆಫೀಸಿಗೆ ಬಂದು ತಿಳಿಕೊಳ್ಳಬಹುದು.

ಎ. ಎಸ್. ಡಿ. ಸೋಜ,
ಕಮಿಷನರ್.

ಮುನ್ಸಿಪಲ್ ಆಫೀಸು, ಉಡುಪಿ,
ತಾ. 23—1—1957.

ಚುನಾವಣೆಯು ಹೇಗಿರಬೇಕು?

(೧೦೦ನೇ ಪುಟದಿಂದ)

ಶದ ಪ್ರಜೆಗಳ ಮೇಲಿನ ವಾತ್ಸಲ್ಯವೇ ಅಧಿಕವಿದೆ ಎಂದು ನಾನು ತಿಳಿಸ್ತೇನೆ. ಅನಂತರ ಆದನ್ನೂ ಆರಿತಿದ್ದಾರೆ."

"ಜನತೆಯನ್ನು ನಾವು ನಿಷ್ಪಟವಾಗಿ ಸರಳತೆಯಿಂದ ಕಾಣಬೇಕು. ನಾವು ಯಾವುದನ್ನು ಸಾಧಿಸಲಿಲ್ಲವೋ ಅದನ್ನು ಇಲ್ಲವೆಂದು ಇದ್ದದನ್ನು ಇದ್ದಂತೆ ಒಪ್ಪಿ ಕೊಳ್ಳೋಣ. ಯಾವುದನ್ನು ಸಾಧಿಸಿದ್ದೇವೆ, ಮುಂದೆ ಏನನ್ನು ಸಾಧಿಸಲಿಕ್ಕಿದ್ದೇವೆ ಇದನ್ನೂ ನಮ್ಮ ಕಷ್ಟ ಸಂಕಷ್ಟಗಳನ್ನೂ ಯಥಾರೀತಿಯಾಗಿ ಅವರ ಮುಂದಿಡೋಣ. ಇಂತಹ ಮಹಾಕಾರ್ಯಗಳಿಗೆ ಜನತೆಯ ಬೆಂಬಲ ಆವಶ್ಯಕವಾದುದೆಂದು ಇದ್ದಹಾಗೆ ಹೇಳೋಣ. ಕೇವಲ ನಮ್ಮ ಒಳ್ಳೆಯದನ್ನು ಮಾತ್ರ ಬಡಬಡಿಸುತ್ತಾ ಹೋಗುವುದು ಬೇಡ. ಉಳಿದ ವಿಚಾರಗಳನ್ನು ನಿಷ್ಪಟವಾಗಿ ಅವರ ಮುಂದಿಡೋಣ. ಅವರು ಬೇರಲ್ಲ ನಾವು ಬೇರಲ್ಲ ಎಂದು ಅವರಿಗೆ ಮನವರಿಕೆ ಮಾಡೋಣ. ಅಂತಹ ಉದಾತ್ತ ವಿಧಾನವನ್ನು ಅನುಸರಿಸಿ ಫಲವೇನೇ ಇರಲಿ ಅದಕ್ಕಾಗಿ ಚಿಂತಿಸದಿರೋಣ. ಒಂದೊಮ್ಮೆ ಇಂತಹ ವಿಧಾನವನ್ನು ಅನುಸರಿಸಿ ನಾವು ಸೋತೇನೆನ್ನೋಣ ನಮಗಿದರಿಂದ ಯಾವ ಹಾನಿಯೂ ಆತ್ಮ ಬೇಸರವೂ ಇಲ್ಲ ಏಕೆಂದರೆ ನಾವು ವಾಮ ಮಾರ್ಗವನ್ನು ಅನುಸರಿಸಲಿಲ್ಲ. ಅದುದ

ಹೇಗಿರಬೇಕು?

ರಿಂದ ಧೀರೋದಾತ್ತನಾಗಿ, ಪ್ರಜಾ ಪ್ರಭುತ್ವ ತತ್ವಸ್ಥೈರ್ಯಗಳಿಗೆ ಣವಾದ ನ್ಯಾಯೋಚಿತ ವಿಧಾನದಿಂದ ಚುನಾವಣೆಯನು ನಡೆಸಿ ನನ್ನು ಸಂಸ್ಥೆಯ ಆತ್ಮಶಕ್ತಿಯನ್ನು ನೈಪುಣ್ಯಗೊಳಿಸೋಣ."

ಚುನಾವಣೆ ಸಮೂಪಿಸಿದಂತೆ ಜಾತೀಯ ಭಾವನೆ, ಗುಂಪಿನ ಭಾವನೆ, ಕೋಮುವಾರಿನ ಭಾವನೆಗಳನ್ನು ಮುಂದೆ ತಂದು ಅನೇಕ ರೀತಿಯ ಆಕೆ ಆಮಿಷಗಳನ್ನು ತೋರಿಸಿ, ವಾತಾವರಣವನ್ನೇ ಕಲುಷಿತಗೊಳಿಸುವ ಅತ್ಯಂತ ನಿಕೃಷ್ಟವಾದ ಒಂದು ಚುನಾವಣ ವಿಧಾನಕ್ಕೂ ನೆಹರೂ ಜಿಯ ಚುನಾವಣಾ ವಿಧಾನಕ್ಕೂ ಇರುವ ತಾರತಮ್ಯವನ್ನು ಜನತೆಯೇ ಳೆದು ಕೊಳ್ಳಬೇಕು. "Be Frank and Truthful" — "ನಿಷ್ಕಪಟ ವಂತ ಸತ್ಯವಾದಿಯಾಗಿರು" ಈ ಸೂಕ್ತಿಯ ಚುನಾವಣೆಯ ಮೂಲ ಮಂತ್ರವಾಗಿದ್ದರೆ ಮಂತ್ರ ಪದವನ್ನು ತನ್ನ ಪ್ರತಿಜ್ಞೆಯೆಂದು ಪ್ರತಿನಿಧಿಯು ಸ್ವೀಕರಿಸಿದರೆ ವಾಕ್ಯ ಚುನಾವಣೆಯು ಕುರಿತ. ನೆಹರುಗಳ ವಾಡಿದ ಕಲ್ಪನೆ ಯಥಾರ್ಥವಾದೀತು. ಪೋಟಾಗಿ ಏನೇನೋ ವಾಟ ಹೊಡುವುದನ್ನು ಬಿಟ್ಟು ನೆಹರು ಹೇಳಿದ ಧಿರೋದಾತ್ತವಾದ ನಿಷ್ಕಪಟತನದ ಸತ್ಯತೆಯ ಚುನಾವಣಾ ವಿಧಾನವನ್ನ ದೇಶವೆಲ್ಲಾ ಪ್ಪಗಳೂ, ಪ್ರತಿನಿಧಿಗಳೂ ಅನುಸರಿಸಿದಲ್ಲಿ ಚುನಾವಣೆಯು ಅತ್ಯಂತ ಭವ್ಯವಾದ ದಿವ್ಯವಾದ ರಾಜಕೀಯ ಕ್ರೀಡೆಯಾದೀತು.

ಬದುಕಬೇಕೆನ್ನುವಿರಾ? ಹಾಗಿದ್ದರೆ ಹೂವು ಚೆಲ್ಲಿದ ಹಾದಿ ಇಲ್ಲಿದೆ!

ನಾವು ಕಲೆಯ ಆರಾಧಕರು, ನಾವು ಕಲೆಯ ಪೋಷಕರು, ನಾವೇ ಕಲೋದ್ಧಾರಕರು ಎಂಬುವವೇ 'ಜೀವನವೆಂಬುದೂ ಒಂದು ಶ್ರೇಷ್ಠ ಕಲೆ' ಎಂಬುದನ್ನು ಆರಿಯದೆ ಹೋಗುತ್ತಾರೆ

ನಾಟಕದಲ್ಲಿಯೋ ಚಲಚಿತ್ರದಲ್ಲಿಯೋ ಭಿಕ್ಷುಕನ ಪಾತ್ರವೊಂದನ್ನು ನೋಡಿ ಮರುಗುವ ಜನ, ತಮ್ಮ ನಿತ್ಯ ಜೀವನದಲ್ಲಿ ಬಾಗಿಲಿಗೆ ಬಂದ ಭಿಕ್ಷುಕನನ್ನು ದಬ್ಬಿ ಹಾಕುತ್ತಾರೆ.

ತಪ್ಪು ಮಾಡುವದು ದೊಡ್ಡ ತಪ್ಪಲ್ಲ; ಮಾಡಿದ ತಪ್ಪನ್ನು ಒಪ್ಪಿಕೊಳ್ಳುವುದು ಬಹು ದೊಡ್ಡ ಗುಣ. ತಪ್ಪು ಮಾಡಿಯೂ ಮಾಡಿಲ್ಲವೆಂದು ವಾದಿಸುವವರ ಸಂಗ ಬೇಡ!

ಹತ್ತು ಜನರ ಹತ್ತು ಹತ್ತಾ ಮೂರ್ಖ ಗುಣಗಳನ್ನು, ಸದ್ಗುಣವಲ್ಲಿಯ ಅನೇಕ ಸದ್ಗುಣಗಳಲ್ಲಿ ಒಂದೇ ಸದ್ಗುಣ ತಿದ್ದ ಬಲ್ಲುದು.

ಎಲ್ಲರೂ ವೈದ್ಯರಾದರೆ ರೋಗಿಗಳೇ ಇಲ್ಲ! ಎಲ್ಲರೂ ಪಲ್ಲಕ್ಕಿಯಲ್ಲಿ ಕೂತ ಬಯಸಿದರೆ ಹೊರುವವರೇ ಇಲ್ಲ!! ಇಂಥ ಸಮಯದಲ್ಲಿ ಜಗತ್ತೂ ನಿಲ್ಲಲಾರದು.

ಹೊಲೆಯರಾರು? ಸಂಪನ್ನರಾರು? ಹೊಲಗೇರಿಯಲ್ಲಿರುವವರೆಲ್ಲೇ ಹೊಲೆಯರಲ್ಲ; ಕೈಲಾಸವಾಸಿ ಶಂಕರನೂ ಪ್ರಾಣವಾಸಿಯಾಗಿದ್ದ! ಬಸವಣ್ಣನವ ಮಾತನಲ್ಲಿ ಹೇಳುವುದಾದರೆ— "(ಅನ್ಯರ ವಿಷಯಕ್ಕೆ) ಮನದೊಳಗೆ ಕೇಡು ಬಗೆವವನೆ ಕೊಲೆಯ!"

"ತಾನು ಸುಖವಾಗಿರಬೇಕೆಂದು ಇತರರು ಕಷ್ಟ ವಿಷಯಕ್ಕೆ ಆಪಿಸಲೆಂದು ನಾವು ಆಪೇಕ್ಷಿಸಿದರೆ, ಅವರೂ ಸುಖವಾಗಿರಲೆಂದು ನಾವೂ ಆಶಿಸಲೇ ಬೇಕಾಗುತ್ತದೆ.

ದೊಡ್ಡವರಲ್ಲಿ ಬೇಧ ಭಾವನೆ ಇರುವದಿಲ್ಲ. ಅರಮನೆಯ ಅಂಗಳದಲ್ಲಿ ಹುಲ್ಲು ಕಿರಣಗಳನ್ನು ಸೂಸುವ ಚಂದ್ರನೇ ಜಾಂಡಾಲನ ಮನೆಯಂಗಳವನ್ನೂ ಬೆಳಗುತ್ತಾನೆ.

ಸಂಗ್ರಾಹಕ

ಶ್ರೀ ಕೆ. ಎಸ್. ಕಟ್ಟಿ, ಧಾರವಾಡ.

ತಿಳಿಗೇಡಿಗೆ ಬುದ್ಧಿವಾದವ್ಯರ್ಥ ಇದ್ದಲನ್ನು ಸಾಬೂನು ಬಿಳಿದಾಗಿಸದು.

—ಕಬೀರ್.

ಶರೀರಕ್ಕೆ ನಿದ್ರೆಯಂತೆ ಜ್ಞಾನಕ್ಕೆ ಮೌನ ನಿದ್ರೆ ಶರೀರಕ್ಕೆ ಜೀತನ ತುಂಬುವಂತೆ ಮೌನ ಜ್ಞಾನಕ್ಕೆ ಬಲಗೊಡಿಸುವದು. —ಬೆಕನ್.

ಚಿಂತೆ ಸರ್ವರ ಪಾಲಿನ ವಸ್ತುವಾಗಿ ವ್ದರೂ ಅದಷ್ಟು ನಿರರ್ಥಕ ವಸ್ತು ಜಗತ್ತಿನಲ್ಲಿ ಬೇರಿಲ್ಲ

—ರಾಬರ್ಟ್ ಪವರ್

36 YEARS'

SOUND & EFFICIENT

BANKING SERVICE

The Pangal Nayak Bank, Ltd.,

Estd: 1920

Head Office: UDIPI, S. INDIA.

Banking Business of Every Description Transacted

BRANCHES AT:

Mangalore-Bunder, Mangalore-Hampankatta, Udipi, Katapadi, Shankerpura, Haleangadi, Kinnigoli, Suratkal, Kasaragod, Kanhangad & Nileshwar.

ಅಧಿಕಾಧಿಕವಾಗುತ್ತಿರುವ

ನಿಮ್ಮ ವಿಶ್ವಾಸ

ನಮ್ಮ ರಜತ ಮಹೋತ್ಸವದ ವರ್ಷ

ಹಿಂದೆ (31—10—1955)

ರೂಪಾಯಿ:- 76 ಲಕ್ಷ

ಒಟ್ಟು ಚಲಾವಣೆ ಮೊಬಲಗು

ಇಂದು:— (31—10—1956)

ರೂಪಾಯಿ:- ಒಂದು ಕೋಟಿಗೂ ಮಿಕ್ಕಿದೆ.

ದಿ ವಿಜಯ ಬೇಂಕ್ ಲಿಮಿಟೆಡ್

ಪ್ರಧಾನ ಕಛೇರಿ: ಮಂಗಳೂರು-3.

THE VIJAYA BANK LTD.

ಕೈಮಗ್ಗದ ಬಟ್ಟೆಗಳಿಗೆ ಮನೆಮಾತು

ಪೂರ್ಣಿಮಾ ಸ್ಟೋರ್ಸ್

ಹೆಸರಾಂತ ಪೂರ್ಣಿಮಾ ಸ್ಪೆಶಲ್ ಸೀರೆ ತಯಾರಕರು.
ಎಲ್ಲಾ ತರದ ಕೈಮಗ್ಗದ ಬಟ್ಟೆಗಳ ರಖಂ ಮತ್ತು ಚಿಲ್ಲರೆ ಜವುಳಿ ಮಳಿಗೆ

ಪೊಪ್ಯುಲರ ಕಟ್ಟಡ, ಮಂಗಳೂರು-1.

ಬೊಂಬೈಯಲ್ಲಿ ನಮ್ಮ ಶೀರೆಗಳು—

ಪ್ರಭಾತ ಎಂಪೋರಿಯಂ,

301, A ಲೇಮಿಂಗ್ಟನ್ ರೋಡ, ಬೊಂಬೈ.

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50' or more and Rs. 3/-per column inch for casual advertisements.

Classified Advertisements: — As. 8/- per line (minimum 8 lines).

For rates for advertising in colours and special positions, please write to:

ADVERTISEMENT MANAGER,

'NAVAYUGA'

Post Box No. 22, UDIPI, S. K.

ಸಂತಕವಿ--ಕಬೀರದಾಸ

(೧೯ನೇ ಪುಟದಿಂದ)

ಭಾಂಡಿಕೇ, ಮನಕಾ ಮುನಕಾ ಫೇರ—ತರದ. ಜಪಮಾಲೆಯನ್ನು ಬಿಟ್ಟು ಮನದ ಜಪಮಾಲೆಯನ್ನೆಣಿಸು ಎಂದು ಅವರು ಬೋಧಿಸಿ.ತ್ತಾರೆ. ಜ್ಞಾನಮಾರ್ಗಿಗಳ ಬ್ರಹಜಜ್ಞಾನೆಯು, ಹಾಗೂ ಪ್ರೇಮ ಭಕ್ತರ ನಗುಣ ಭಕ್ತಿಯು ಮಹತ್ವದ ವಿಚಾರಗಳನ್ನೂ ತೆಗೆದು-ಕೊಂಡು ಕಬೀರದಾಸರು ತಮ್ಮ ನಿರ್ಗುಣ ಭಕ್ತಿಯ ಮಂದಿರವನ್ನು ನಿರ್ಮಿಸಿದರು. ಎಂದು ಡಾ|| ಶ್ಯಾಮ ಸುಂದರದಾಸರು ಕೀಳಿವ ಮಾತಿನಲ್ಲಿ ವಿಶೇಷ ತಥ್ಯವಿದೆ. ಜ್ಞಾನಮಾರ್ಗಿಗಳು ಹೇಳುವಂತೆ ನಿರ್ಗುಣ ನಿರಾಕಾರ ಬ್ರಹ್ಮವು ಶಮ ಚಿಂತನೆಯ ವಿಷಯವಾಗಿದೆಯು ಪ್ರೇ ಈಶಾಸ್ಯ ಚಿಂತನೆಯನ್ನು ಬದಿಗಿರಿಸಿ ಕಬೀರರು ಪ್ರೇಮಯುಕ್ತ ಭಾವಯುಕ್ತ ಧ್ಯಾನವನ್ನು ಬೋಧಿಸಿದರು. ಈ ನಿರ್ಗುಣ ಭಕ್ತಿಯಲ್ಲಿ ಪ್ರಪಂಚ—ಪರಮಾರ್ಥ, ಪ್ರವೃತ್ತಿ—ನಿವೃತ್ತಿಗಳೆರಡೂ ಆಡಕವಾಗಿ ಮೆ. ತನ್ನ ಎಲ್ಲಾ ವ್ಯಾಪಾರವನ್ನೂ ದೂರಿಟ್ಟು ಕೇವಲ ಪರವಸ್ತುವಿನ ಧ್ಯಾನೈಕ್ಯವುವುದೇ ಪಾರಮಾರ್ಥಿಕ ಇಲ್ಲವೆ ನಿವೃತ್ತಿಪರಧಾಗ; ಜಗದ ಎಲ್ಲ ವ್ಯಾಣಿ ಮಾತ್ರಗಗಳಲ್ಲಿ ಪ್ರೇಮ ಹಾಗೂ ದಯೆಯನ್ನು ತೋರುವುದೇ ಪ್ರವೃತ್ತಿಯು ಆಥವಾ ಪ್ರಪಂಚದ ಭಾಗ.

ಕಬೀರದಾಸರಲ್ಲಿ ತೀರ ಸ್ವಲ್ಪವೇ ಆದರೂ ಕಂಡು ಬರುವ ಆಚ್ಚರಿಯ ವಿಷಯವೆಂದರೆ ಮಧುರಭಾವ. ವಿಭುವನ್ನು ಕೆಲವೆಡೆಯಲ್ಲಿ ಪ್ರಿಯತಮನೆಂದು ಕರೆಯುತ್ತಾ.ವೆ. ವಿರಹ ಭಾವವನ್ನು ವ್ಯಕ್ತಗೊಳಿಸುವ ಒಂದೆರಡು ಪದ್ಯಗಳನ್ನು ಇವಲ್ಲಿ ಕಾಣಬಹುದು. ಮಧುರ ಭಕ್ತಿಯ ಪ್ರಕಾರ ಪರಮಾತ್ಮನು ಪ್ರಿಯಕರನು:—ಪತಿಯು: ಭಕ್ತನು ಪ್ರಿಯ ತಮೆಯು—ಪತಿಯು. ಆದರೆ ಸೂಫಿ ಮತವನ್ನು ಅವಲೋಕಿಸಿದರೆ ದೇವನೇ ಪ್ರಿಯತಮೆಯು ಹಾಗೂ ಭಕ್ತನೇ ಪ್ರಿಯೆಗಾಗಿ ಅಂದರೆ ದೇವನಿಗಾಗಿ ಹಂಬಲಿಸುವ ಪ್ರಿಯಕರನು. ಇಂತಹ ಅತಾರ್ಕಿಕ, ಅನೀತಿಪರ ವಿಚಾರಗಳಿಂದ ಅಧ್ಯಾತ್ಮ ಶಾಸ್ತ್ರದಲ್ಲಿ ಯಾವ ಪ್ರಗತಿಯೂ ಆಗಲಾರದು. ಉಪಾಸನೆಗಾಗಿ—ಉಪಾಸ್ಯ ದೇವತೆಯಲ್ಲಿ ಕೆಲವು ಗುಣಗಳನ್ನು ಕಲ್ಪಿಸಿದಲ್ಲಿಯೇ ಉಪಾಸನೆ ಸಾಧ್ಯವಿದೆ. ಈ ಮಾತನ್ನು ನಾವು ಒಪ್ಪಬಹುದು. ಭಗವಂತನಲ್ಲಿ ಪ್ರೇಮ ಅಥವಾ ಅನುರಾಗ ಹುಟ್ಟಿಸಲು ಆವನೊಡನೆ ಸಾಂಸಾರಿಕ ಸಂಬಂಧಗಳನ್ನು ಬೆಳೆಯಿಸಲು ಬೇಡವೇ ಎಂದು ಕೆಲವರು ಪ್ರಶ್ನಿಸಬಹುದು ಆದರೆ ನನ್ನ ವಿಚಾರದಂತೆ ಪರಮಾತ್ಮನೊಡನೆ ಸಾಂಸಾರಿಕ ಸಂಬಂಧಗಳನ್ನು ಕಲ್ಪಿಸುವದೇ ಆದರೆ ಅವನನ್ನು ತಂದೆಯೆಂದೊ, ತಾಯಿಯೆಂದೊ ಸ್ವಾಮಿಯೆಂದೊ ಕಲ್ಪಿಸಬಹುದು ಅವನನ್ನು ಗೆಳೆಯನೆಂದು ಕಲ್ಪಿಸಿ ಪೂಜಿಸಲು ಯಾವ ಯೋಗ್ಯತೆಯು ಸಾಧಕನು ಅಥವಾ ಭಕ್ತನು ಬೇಕೋ ನನಗೆ ತಿಳಿಯದ ವಿಷಯ. ಭಗವಂತನನ್ನು ತಾಯಿ-ತಂದೆ. ಇಲ್ಲವೆ ಸ್ವಾಮಿ ಎಂದು ತಿಳಿಯುವುದೂ ಕೂಡ ಕಲ್ಪನೆಯ ಆಟವೇ. ಕಲ್ಪನೆಗಳನ್ನೆಲ್ಲವನ್ನು ಅಳಿದು ಧ್ಯಾನ ಮಾಡು ಎಂದ. ಸಾಕ್ಷಾತ್ಕಾರಿಗಳ ಉಪದೇಶವಿರುವಾಗ ಅಧೋಗತಿಗೆಳೆಯುವ ಕಲ್ಪನೆಯು ಬೆನ್ನುಹತ್ತಿ ದೇವನನ್ನು ಕಾಣಬಯಸುವುದು 'ಒಡಲಲ್ಲಿ ಸುಣ್ಣದ ಹುಳು ಕಟ್ಟಿಕೊಂಡು ಮಡುವಿನಲ್ಲಿ ಬಿದ್ದಂತೆಯೇ ಸರಿ" ಕಲ್ಪನೆಯು ಎಂದೂ "ವಸ್ತು"ವಿನ ಸತ್ಯದ ಮಟ್ಟಕ್ಕೆ ಬರಲಾರದು. ಕೊನೆಗೂ ಆದು ಕಲ್ಪನೆಯೇ. ದೇವನನ್ನು ಪ್ರಿಯಕರನೆಂದು ಕಲ್ಪಿಸಿ ಎಷ್ಟೋ ಶಾಲ್ಪನಿಕ ಹೇಯ ರಂಗ—ಭೋಗಗಳನ್ನೂ ಅನುಭವಿಸಿ ತಾವು ಪಾರಮಾರ್ಥಿಗಳೆಂದು ಕಪಟದಂಭ ತಾಳಿ ಕೊನೆಗೆ ನೋಸಹೋದ ಸಾಧಕರು ಶುದ್ಧ ಅವಿಚಾರಿಗಳೇ. ಪರಮಾತ್ಮನನ್ನು ಪ್ರಿಯೆಯೆಂದು ಕಲ್ಪಿಸಿ, ಆ ಪ್ರಿಯೆಗಾಗಿ ಹಲುಬುವುದೂ, ಹಂಬಲಿಸುವುದು, ಕಲ್ಪನೆಯು ವಿರಹ ನೇದನೆಯನ್ನು ಅನುಭವಿಸುವುದು ಇನೇ ಮುಂತಾದ ಹುಚ್ಚಾಟಗಳ ಬಗ್ಗೆ ಬರೆಯುವುದೇ ಬೇಡ. ಈ ಅವಮಾರ್ಗದ ಬೇರನ್ನು ನಾವು ಉಪನಿಷತ್ತಿನಲ್ಲಿಯೂ ಕಾಣಬಹುದು

ತದ್ ಯಥಾ ಪ್ರಿಯಯಾ ಸಂಪರಿಷ್ವಕ್ತಃ ನ ಬಾಹ್ಯಂ ಕಿಂಚನ ವೇದ. ನಾಂತರಮ್ ಏವಮೇವಾಯಂ ಪುರುಷಃ ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತಃ ನ ಬಾಹ್ಯಂ ಕಿಂಚನ ವೇದ ನಾಂ ತರಮ್ ಎಂದು ಬೃಹದಾರಣ್ಯಕ ಉಪನಿಷತ್ತು ದೇವಭಕ್ತರ ಸಂಗಮವನ್ನು ಪತಿ-ಪತಿಯರ ಕೂಟಕ್ಕೆ ಹೋಲಿಸಿ ಮಧುರ ಭಕ್ತಿಯ ಬೀಜವನ್ನು ಬಿತ್ತಿತೆಂದು ಹೇಳಬಹುದು. ನಿರ್ಗುಣ ನಿರಾಕಾರ ದೇವನಿಗೆ ಇಂಥ ಸಾಂಸಾರಿಕ ಸಂಬಂಧಗಳನ್ನು ಕಲ್ಪಿಸುವುದೇ ರಹಸ್ಯವಾದದ ತತ್ವವಾದಲ್ಲಿ ರಹಸ್ಯವಾದದಂಥ ತರ್ಕ ಹೀನ, ಅನೈತಿಕ ವಿಚಾರ ಇನ್ನೆಂದಿಲ್ಲಿ-ಎಂದು ನಮ್ಮ ಖಂಡಿತ ವಿಚಾರ. ಶುದ್ಧ ಭಕ್ತಿ, ನಿರ್ಮಲ ಭಕ್ತಿ, ಉದಾತ್ತ ಭಕ್ತಿ, ನೀತಿಯ ಪುತ್ಥಳಿಗಳನ್ನು ಮಾಡುವ ಭಕ್ತಿಯೇ ಉಚ್ಚಭಕ್ತಿ. ಯಾವ ಭಕ್ತಿಯನ್ನು ಮಾಡುವುದರಿಂದ ಭಕ್ತನ ಮನಸ್ಸಿನಲ್ಲಿ ಉಚ್ಚ ವಿಚಾರಗಳು ಬಂದು, ಆಂತಃಕರಣ ತೊಳೆದು ಸದ್ಭಾವವು ನೆಲೆಗೊಳ್ಳುವುದೋ, ಅದೇ ಉಚ್ಚ ಭಕ್ತಿ. ಉಚ್ಚ ನೀತಿಯ ನೆಲೆಗಟ್ಟಿನ ಮೇಲೆ ನಿಂತಿರುವ ಅಧ್ಯಾತ್ಮ ಮಂದಿರಕ್ಕೂ ಅಧೋಗತಿಗೆಳೆಯುವ ಮಧುರ ಭಕ್ತಿಗೂ ಯಾವ ಸಂಬಂಧ ಪ್ರಿಯಕರನ ಹಲುಬು ವಿಕೆಯಿಂದ ಇಲ್ಲವೆ ಪ್ರಿಯೆಯ ಅನುರಾಗದಿಂದ ಭಗವಂತನನ್ನು ಕಾಣಬಹುದೆಂದು ಕೆಲವು ಮಹನೀಯರ ವಿಚಾರವಿದೆ. ಆದರೆ ಪ್ರಿಯಕರನು ದೇವರ ಹೆಸರಿನಿಂದ ಪ್ರಿಯೆಯ ಶರೀರ ಸೌಂದರ್ಯವನ್ನು ಚಿಂತಿಸುವನೇ ಹೊರ್ತು ಪರಮಾತ್ಮನನ್ನಲ್ಲ. ಇದರಂತೆ ಪ್ರಿಯೆಯಾದರೂ ಮೂರ್ತಿಮಂತ ಪ್ರಿಯಕರನಲ್ಲಿಯೇ ಅನುರಕ್ತಳಾಗುವಳೇ ಹೊರ್ತು ಪರವಸ್ತು ವಿನಲ್ಲಿ ಅಲ್ಲ. ಆದುದರಿಂದ ಈ ಪ್ರಿಯಾ ಪ್ರಿಯರ ಗೊಂದಲದಲ್ಲಿ ನಾವು! ದೇವನೆತ್ತ ಬರುವನೋ ನನಗೆ ಹೊಳೆಯದ ವಿಷಯ. ಇದರ ಮೇಲೂ ಕೆಲವರು ಹುಟ ಹಿಡಿದು ಇಂಥ ಪ್ರೇಮ ಪಥದಿಂದಲೇ ಪರಮಾತ್ಮನತ್ತ ಸಾಗುವದನ್ನು ಪ್ರತಿಪಾದಿಸಿದರೆ ನಮ್ಮ ಉತ್ತರವಿಷ್ಟೆ - ದೊಡ್ಡ ದೊಡ್ಡ ಸಂತ ಕವಿಗಳು ವಿಮಲವಾದ ನೀತಿ ಪಂಥಾಣಿಯಲ್ಲಿತಪ್ಪುಗಳನ್ನೂ ತಿಳಿಯಪಡಿಸಿದರೂ ಆತತ್ವಗಳನ್ನು ವಿಪರೀತವಾಗಿ ತಿಳಿಯುವ ಜನರು ಸಾಕಷ್ಟಿರುವಾಗ ಇಂಥ ಅನೀತಿಪರ, ಕಾಮುಕ ಸಂಬಂಧಗಳ ನಿವೇಜನೆಯಿಂದ ಜನಸಾಮಾನ್ಯರಲ್ಲಿ ಎಂಥ ಭಾವನೆಗಳು ಮೂಡಬಹುದು?

ಇಂಥ ಅವಿವೇಕದ ಅತಿರೇಕವು ಕಬೀರದಾಸರಲ್ಲಿ ಕಾಣವು. ಜವರು ಉನ್ನತ ಅನುಭಾವದ ಪ್ರತೀಕವಾಗಿದ್ದಾರೆ. ಸಾಕ್ಷಾತ್ಕಾರದ ಉಚ್ಚಮಟ್ಟದ ದರ್ಶನ, ಸ್ಪರ್ಶನ, ಸಂಭಾಷಣೆಗಳನ್ನು ವಿವರಿಸುವ ಅನೇಕ ಪದ್ಯಗಳನ್ನು ಕಬೀರರ ಕೃತಿಗಳಲ್ಲಿ ಕಾಣಬಹುದು. ಸಾಕ್ಷಾತ್ಕಾರದ ಈ ಔನ್ನತ್ಯವನ್ನು ಪಡೆದ ಸಂತ ಕವಿಗಳು ಹಿಂದೀ ಸಾಹಿತ್ಯದಲ್ಲಿ ಇಲ್ಲವೆಂದು ಹೇಳಬಹುದು

'ಹದೆ ಹದೆ ಪರ ಸಬ ಹಿಸಯಾ,
ಬೇಹದ ಗಯಾ ನ ಕೋಯ ।
ಬೇಹದ ಕೇ ಪೈವಾನಮೇ ರಮೈ
ಕಬೀರಾ ಸೋಯ ॥

ಬಯಲಿನ ಸೀಮೆಯನ್ನು ಎಲ್ಲ ಸಾಧಕರು ಮುಟ್ಟುವರೂ ಸೀಮೆಯನ್ನು ದಾಟಿ ಅನಿರ್ಬಾಯಲಿನಲ್ಲಿ ಆನಂದ ಪರವಶನಾದವ ಕಬೀರನೊಬ್ಬನೇ.

ಅನುಭವದ ಉನ್ನತೋನ್ನತ ಶಿಖರಕ್ಕೇರಿದ್ದರೂ ಕಬೀರದಾಸರ ವಿನಯ ಬೆರಗನ್ನುಂಟು ಮಾಡುವಂತಿದೆ.

'ಕಬೀರಾ ದೇಖಾ ಏಕ ಅಂಗ ಮಹಿಮಾ
ಕಹೀ ನ ಜಾಯ ।
ತೇಜಃ ಪುಂಜ ಪರಸಾಧಸೀ ನೈನೋ
ರಹಾ ಸಮಾಯ ॥

ಪರಾ ವಸ್ತುವಿನ ಒಂದಂಶವನ್ನು ಮಾತ್ರ ನಾನು ಕಂಡೆ ಆದರ ಮಹಿಮೆಯನ್ನು ಬಣ್ಣಿಸಲಳವಲ್ಲ. ತೇಜಃ ಪುಂಜ ಸ್ವಾಮಿಯ ಸ್ಪರ್ಶಮಾತ್ರ ನಾಡಿದೆ ಆತ ನನ್ನ ಕಣ್ಣಿನಲ್ಲಿ ತುಂಬಿದ್ದಾನೆ.—ಎಂದು ಹೇಳುವಲ್ಲಿ ಅವರ ವಿನಯ, ಭಕ್ತಿ ತೆಗಳು ಮೆಚ್ಚುವಂತಿಲ್ಲವೆ?

— —

GERMAN STORES

Important dealers of Watches, Time-pieces, Spectacles, Cameras, Role films, all kinds of Pens, Watch-chains and other important Stationery goods—

Hospital Road, **UDIPI, S. K.**

ನಮ್ಮಲ್ಲಿ ಸದಾಕಾಲ ಉತ್ತಮ ಖಾತ್ರಿ ಸ್ವಿಸ್ ಮತ್ತು ಜರ್ಮನ್ ವಾಚುಗಳೂ, ಟ್ಯಾಂಪೀಸುಗಳೂ, ಎಲ್ಲಾ ತರಹದ ಪೆನ್ನುಗಳೂ, ಕೈಗಡಿಯಾರಗಳೂ, ಉತ್ತಮ ಕನ್ನಡಕಗಳೂ, ಇತರ ಸ್ಟೇಶನರಿ ಸಾಮಾನುಗಳೂ ಖಾತ್ರಿಯಾಗಿ ಸಿಗುತ್ತವೆ.

ಜರ್ಮನ್ ಸ್ಟೋರ್ಸ್

ಹೋಸ್ಪಿಟಲ್ ರೋಡ್, ಉಡುಪಿ.

ಕುಮಾರಿ ಬಿಲ್ಲೆಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ಥಾಪಕರು: **ಷಾ ಕಂಪೆನಿ, ಮಂಗಳೂರು—1.**

98 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ರಿಜಿಸ್ಟರ್ಡ್ ಔಷಧಿಗಳು

ಟ್ರೇಡ್ ಮಾರ್ಕ್

ಸಂತಾನ ಸಿಂಧೂರ (ಸ್ತ್ರೀಯರಿಗೆ: ಪ್ಯಾಕೆಟ್)

ಮದನ ವಿಲಾಸ (ಪುರುಷರಿಗೆ: ಗುಳಿಗೆ)

ಈ ಭಸ್ಮವು ಬಹುಷ್ಕೆ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಆತ್ಯುಷ್ಣ ಶರೀರವನ್ನು ಸ್ವಸ್ಥ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಸಿ, ನಪುಂಸಕತೆಯನ್ನು ಸಾಮಾನ್ಯವೇಷ ಮಾಡುತ್ತದೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ ತಾಯ್ತಂದೆಗಳಾಗಿದ್ದಾರೆ.

ಹೊಸ ಕ್ಯಾಟಲಾಗು, ಔಷಧದ ಬೆಲೆ ಇತ್ಯಾದಿಗಳಿಗೆ 3 ಆಣೆ ಸ್ಟ್ಯಾಂಪು ಕಳಿಸಿರಿ

ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ. (ನ ಯು.)

628 ಸಂತಾನ ಸಿಂಧೂರ ಸದನ (ಪೋಸ್ಟ್ ಬಾಕ್ಸ್ 9, ಮೈಸೂರು S. I.

ಕರ್ನಾಟಕದ ಪ್ರಸಿದ್ಧ ವಿಡಂಬನಕಾರ ಶ್ರೀ ಕುಪ್ಪಿ ವಾಸುದೇವ ಶೆಣೈ ಯವರ

ಓದಲೇಬೇಕಾದ ಮೂರು ಪುಸ್ತಕಗಳು

ಮೂರೆ ಮತ್ತು ನಾನು (೧೫ ಮೂರಾ ಕತೆಗಳು)	1—0—0
ಜಪಾನ್ ಬೆಳಕು ಮತ್ತು ಇತರ ಕಥೆಗಳು	1—0—0
ಕಸದ ಡಬ್ಬಿಗಳು (೨೮ ಹರಟೆಗಳು)	1—0—0

ಪ್ರತಿಗಳಿಗೆ ಬರೆಯಿರಿ:— ನವಭಾರತ ಪುಸ್ತಕ ಭಂಡಾರ, ಉಡುಪಿ.

ಭಾರತ ಸೇವಕ ಸಮಾಜದ ಚಟುವಟಿಕೆಗಳು

(ಅನೇ ಪುಟದಿಂದ)

ಯಾವ ಜಾತಿಯವನೂ ಸದಸ್ಯನಾಗಿ ಸೇರಬಹುದು. ಸದಸ್ಯತನಕ್ಕೆ ಫೀಜಾಗಲೀ ವಂತಿಗೆ ಯಾಗಲೀ ಇರುವುದಿಲ್ಲ. ಹಾಗೆಯೇ ಈ ಸಂಸ್ಥೆಯನ್ನು ಯಾವುದೇ ರಾಜಕೀಯ ಪಕ್ಷದ ಪ್ರಚಾರ ಪ್ರಭಾವಗಳಿಗೂ ಉಪಯೋಗಿಸಕೂಡದು. ಆರ್ಥಿಕ ಆಯವ್ಯಯಗಳ ಮಟ್ಟಿಗೆ ಬಹು ಕಠಿಣತರವಾದ ಮೇಲ್ವಿಚಾರಣೆಯನ್ನು ಏರ್ಪಡಿಸಲಾಗಿದೆ. ಈ ಸಂಸ್ಥೆಗೆ ಸದಸ್ಯರಾಗಲು ಬೇಕಾದ ಅರ್ಹತೆಯೆಂದರೆ ಸೇವಾ ಭಾವನೆ ಸಂಸ್ಥೆಯು ಸದಸ್ಯನಾಗಲೀ, ಸಂಸ್ಥೆಯ ಶಿಬಿರವಾಸಿಯಾಗಲೀ ತನ್ನ ಜಾತಿ ಭಾರತೀಯರು ತನ್ನ ಮತ ರಾಷ್ಟ್ರದಪ್ರಗತಿ ಎಂದೇ ತಿಳಿದುಕೊಳ್ಳಬೇಕು. ಸರಕಾರೀ ನೌಕರರೂ ಈ ಸಮಾಜದ ಸದಸ್ಯರಾಗಿರಬಹುದು. ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಈ ಸಮಾಜದಲ್ಲಿ ಸೇರಿ ಸೇವೆಮಾಡಲು ಅನೇಕ ಅವಕಾಶಗಳಿವೆ. ಭಾರತಸೇವಕ ಸಮಾಜವು ಅತ್ಯಂತ ಮಹತ್ವವಾದ ಕಾರ್ಯಗಳನ್ನು ಪೂರೈಸಿದೆ. ಬಿಹಾರಿನ ಕೋಸಿ ಯೋಜನೆಯಂತಹ ಅಸಾಧ್ಯವೆಂದೆನ್ನಲ್ಪಟ್ಟಿದ್ದ ಯೋಜನೆಯೊಂದನ್ನು ಕಾರ್ಯರೂಪಕ್ಕೆ ತಂದ ಕೀರ್ತಿಯು ಈ ಸಮಾಜಕ್ಕಿದೆ.

ಪಂಡಿತ ನೆಹರುಗಳ ಮುಂದಾಳುತನದಲ್ಲಿರುವ ಈ ಸಮಾಜದಲ್ಲಿ ನಂದಾ ಮೊದಲಾದ ಮುತ್ಸದ್ದಿಗಳೂ ಟಿ. ರಾಮಚಂದ್ರನರೇ ಆದಿಯಾದ ಸೇವಾ ನಿರತರೂ ಇರುವರು. ದೇಶದ ಪ್ರತಿಯೊಬ್ಬ ವ್ಯಕ್ತಿಯು ದೇಶಕ್ಕೆ ತನ್ನಿಂದಾದಷ್ಟು ಸೇವೆಯನ್ನು ಸಲ್ಲಿಸಲು ಅನುಕೂಲವಾಗುವಂತೆ ಸಾಧು ಸನ್ಯಾಸಿ ಮಹಿಳಾ ವಿಭಾಗ, ಪೆನ್ಷನ್ ಜನರಲ್ ವಿಭಾಗ ಇತ್ಯಾದಿ ಅನೇಕ ಅನೇಕ ಉಪಾಂಗಗಳು ಈ ಸಂಸ್ಥೆಯ ಆಶ್ರಯದಲ್ಲಿ ಅದರ ಅಂಗವಾಗಿ ಕೆಲಸ ನಡೆಸುತ್ತಿವೆ. ಕರ್ನಾಟಕದಲ್ಲಿ ಶ್ರೀ ಆರ್. ಆರ್. ಹುಕ್ಕೇರಿಕರರು ಈ ಪ್ರದೇಶದ ಈ ಸಂಸ್ಥೆಯ ಅಧ್ಯಕ್ಷರಾಗಿರುತ್ತಾರೆ. ಪ್ರೊ. ಇನವರೆ ಪ್ರೊ. ಕಾಳೆ, ಪ್ರೊ. ಪರೋಜಿನಿ ಮಹಿಷಿ ಮೊದಲಾದ ಮಹಿಳಾ ಸಮಾಜವೂ ಕರ್ನಾಟಕ ಶಾಖೆಯಲ್ಲಿ ಕೆಲಸಮಾಡುತ್ತಿದ್ದಾರೆ. ಕೇಂದ್ರದಿಂದ ನೇಮಕಗೊಂಡಿದ ವೈಸೂಂಡಿಸ್ ಶ್ರೀ ಯನ್. ಪಿ. ಚಿಕ್ಕಣ್ಣ. ಬಿ. ಎ. ಇವರು ಶಿಬಿರಗಳ ಪರಿಶೀಲನಾಧಿಕಾರಿಯಾಗಿರುವರಲ್ಲದೆ ಶ್ರೀ. ಕೆ. ಬಿ. ಪಾಸ್ತೆಯವರು ಸಹಾ ಕರ್ನಾಟಕ ಪ್ರದೇಶದಿಂದ ನೇಮಕಗೊಂಡಿರುವರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಸಮಾಜದ ಶಾಖೆಯು ಅಧ್ಯಕ್ಷರಾಗಿ ಶ್ರೀ ಟಿ. ಎ. ಪೈಯವರು ನೇಮಕಗೊಂಡಿರುವುದಲ್ಲದೆ ಈ ಸಮಾಜವೆ ರಚನಾತ್ಮಕ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿರುವರು. ಶ್ರೀ ಪೈಗಳ ಉತ್ಸಾಹದಿಂದಲೇ ಪಡುಬಿದ್ರೆಯ 80 ವಿದ್ಯಾರ್ಥಿಗಳ ಶಿಬಿರವು ಅತ್ಯಂತ ಯಶಸ್ವಿಯಾಗಿ ಜರಗಿತು. ಹಲವಾರು ವರುಷಗಳಿಂದ ಜನರು ಅಪೇಕ್ಷಿಸಿಹುತ್ತಿದ್ದ ಮಿನುಗಾರಿಕೆಯ ಜನರಿಗೆ ಅತ್ಯಾವಶ್ಯಕವಾಗಿದ್ದ ರಸ್ತೆಯೊಂದನ್ನು ರಚಿಸುವುದರಲ್ಲಿ ಈ ಶಿಬಿರವು ಯಶಸ್ವಿಯಾದುದು ಭಾರತ ಸೇವಕಸಮಾಜದ ಹಿನ್ನೆಲೆಯಲ್ಲಿರುವ ಉದಾತ್ತ ತತ್ವಗಳ ಮಹತ್ತನ್ನು ಪ್ರದರ್ಶಿಸುತ್ತದೆ. ಗ್ರಾಮ-ಗ್ರಾಮಗಳಲ್ಲಿ ಜಾತ್ಯಾತೀತ ಮತ್ತು ಪಕ್ಷಾತೀತವಾದ ಭಾರತ ಸೇವಾಸಮಾಜದ ಸಮಿತಿಗಳು ರಚನೆಯಾಗಿ, ದೇಶದ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಕೈಗೊಳ್ಳಲು ಜನರು ಮುಂದೆ ಬರಬೇಕಾಗಿದೆ. ಹೀಗೆ ತನ್ನ ದೇಶಕ್ಕೆ ತನ್ನಿಂದಾದಷ್ಟು ಸೇವೆ ಸುನ್ನು ಪ್ರತಿಪ್ರಜೆಯು ಸಲ್ಲಿಸಿದರೆ ಮಾತ್ರ ಪ್ರಜಾಪ್ರಭುತ್ವದ ಸಫಲತೆಯನ್ನು ಸಾಧಿಸಬಹುದು; ದೇಶವು ಅಭಿವೃದ್ಧಿಯಾಗಬಲ್ಲದು.

—

ಸುದ್ದಿಮುತ್ತುಗಳು

ಒಂದೇ ಜಿಗಿತಕ್ಕೆ ಸ್ವರ್ಗ ಸಿಗದು, ಸ್ವರ್ಗವನ್ನೇರುವ ನಿಚ್ಚಣಿಕೆಯನ್ನು ನಾವು ಯತ್ನದಿಂದ ಕಟ್ಟಬೇಕು.

—ಜೆ. ಜಿ. ಹಾಲಂಡ್.

ನನಗಿಂತ ಹೆಚ್ಚು ಬಲ್ಲವನನ್ನು ನಾನು ದ್ವೇಷಿಸುವುದಿಲ್ಲ ಆದರೆ ನನ್ನಷ್ಟು ತಿಳಿಯದವರ ಬಗ್ಗೆ ಅನುಕಂಪ ಪಡುತ್ತೇನೆ.

—ಟಿ. ಬ್ಯಾನ್.

ತಾನು ಯಾರೆಂದು ಅರಿವಿದ್ದ ಮಾನವನಿಗೆ ಯಾವ ಘಟನೆಯಿಂದಲೂ ಅಸಮಾಧಾನವಾಗಲಾರದು.

—ಎಪಿಕ್ಟೆಟಸ್.

ಉದಾರ ಸ್ವಭಾವಿಗಳು, ಉಳಿದವರು ತಮ್ಮ ಸುಖದಲ್ಲಿ ಭಾಗಿಯಾದಾಗ, ತಾವು ಅತಿ ಸುಖಿಯೆಂದು ಭಾವಿಸುವರು.

—ಡಂಕನ್.

ರಾಷ್ಟ್ರೀಯ ಶಬ್ದಕೋಶದಲ್ಲಿ ಹೇಡಿ ಶಬ್ದಕ್ಕೆ ಸ್ಥಾನವೇ ಇಲ್ಲ. —ಗಾಂಧೀಜಿ.

ನಮ್ಮ ಅಸ್ತಿತ್ವದ ವಿಷಯದಲ್ಲಿ ನಾವು ಹೇಗೆ ವಾದಿಸಿದಾದ ಮಾಡುವುದಿಲ್ಲವೋ ಹಾಗೆಯೇ ದೇವರ ಅಸ್ತಿತ್ವದ ವಿಷಯದಲ್ಲೂ ವಾದವಿವಾದ ಮಾಡಬೇಡಿರೆಂದು ನನ್ನ ಸೂಚನೆ. — ಗಾಂಧೀಜಿ.

ಕಲಹದಲ್ಲಿ ಮಾನವನೆ ಕುಲ ಗೊತ್ತಿಲ್ಲ ಗುತ್ತದೆ— ಬರ್ನಾಡ್ ಶಹಾ.

ಅತ್ಯಾವಶ್ಯಕವಾದ ಯಾವ ಅಂಜಿಕೆಯೂ ಇಲ್ಲದೆ. ಒಬ್ಬೊಂಟಿಗರಾಗಿ ಬೀದಿಗಳಲ್ಲಿ, ಪೇಟೆಗಳಲ್ಲಿ ಅಲೆಯುಲು ಹೆಂಗಸರಿಗೆ ಶಕ್ಯವಾದ ದಿನವೇ ನನಗಾದರು ಸ್ವಾತಂತ್ರ್ಯ ಪಾದಂತೆ. —ಶ್ರೀ ರಾಜಾಜಿ.

ಹಿಂದು ಧರ್ಮವು ಬೆಲೆಯಿಲ್ಲದ ರತ್ನಗಳಿಂದ ತುಂಬಿದ ಅಪಾರ ಸಾಗರವೆಂತಿದೆ

—ಗಾಂಧೀಜಿ.

ಪದವೀಧರರಿಗಿಂತ ಅನೇಕ ಸಲ ಪದವಿಗಳಲ್ಲದವರೇ ಜಾಣರಾಗಿರುತ್ತಾರೆ.

—ನೆಹರು.

ಕೆನರಾ ಬೇಂಕ್ ಲಿಮಿಟೆಡ್

ಕಳೆದ ಜುಲಾಯಿ ತಿಂಗಳಲ್ಲಿ ಸವರ್ಣ ಮಹೋತ್ಸವದ ನಿಮಿತ್ತ ಶಿಬಂಧಿಗೆ ವಿಶೇಷ ಬೋನಸ್ಸು ಮತ್ತು ಪಾಲುಗಾರರಿಗೆ ಡಿವಿಡೆಂಟು ಕೊಟ್ಟು ಮತ್ತಿತರ ಆತ್ಮೋತ್ಕರ್ಷ ಜಾಬುಗಳಿಗೆ ಹಣದ ವಿನಿಯೋಗವಾದ ಬಳಿಕ, ಆಡಿಟರ್ ಲೆಕ್ಕಪ್ರಕಾರ ಕೆನರಾ ಬೇಂಕಿನ ಒಟ್ಟು ಲಾಭವು ರೂ. 8,41,002—7—3 ಆಗಿದ್ದು ಇದರಲ್ಲಿ ರೂ. 19,501—7—3 ನುಂದಿನ ವರ್ಷದ ಲಾಭಕ್ಕೆ ವರ್ಗಾಯಿಸಲ್ಪಡುವಂತಾಗಿದೆ. ಡೈರೆಕ್ಟರರು ಲಾಭಾಂಶವನ್ನು ಈ ರೀತಿ ವಿನಿಯೋಗಿಸಲು ಶಿಫಾರಸು ಮಾಡಿರುವರು. ಇಪ್ಪತ್ತುವರ್ಷಾನ್ವಿತಿಗೆ ರೂ. 4,60,000; ಶಿಬಂದಿಗೆ ಬೋನಸ್ಸು ರೂ. 1,40,000; ಸೇಕಡಾ ನಿಷ್ಕನ ಪ್ರಿಫರೆನ್ಸ್ ಶೇರುಗಳಿಗೆ ಡಿವಿಡೆಂಟ್ ರೂ. 52,500; ಸಾಮಾನ್ಯ ಶೇರುಗಳಿಗೆ ಸೇಕಡಾ 10ರಂತೆ ಡಿವಿಡೆಂಟ್ ರೂ. 1,50,000; ರೂ. 38,503—1—3 ನುಂದಿನ ಲೆಕ್ಕಕ್ಕೆ ವರ್ಗಾಯಿಸುವಿಕೆ.

ನವರಿವರ್ಷಗಳಲ್ಲಿ ರೂ. 2.37 ಕೋಟಿಯಷ್ಟು ಡಿಪೋಜಿಟುಗಳು ಕೇರಿಸಲ್ಪಟ್ಟಿದ್ದು ಕೊಡಾ ಈಗ ರೂ. 14.82 ಕೋಟಿ ಡಿಪೋಜಿಟುಗಳಿವೆ

ಎಲ್ಲಾ ತರದ ಫೋಟೋ ಮತ್ತು ಆರ್ಟ್ ಕೆಲಸಗಳಿಗೆ ಸಂದರ್ಶಿಸಿರಿ.

ನಾಯಕ್ ಸ್ಟುಡಿಯೋ,

ಲೈಟ್ ಹೌಸ್ ಹಿಲ್ ರೋಡು, ಹಂಪನಕಟ್ಟೆ, ಮಂಗಳೂರು.

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ವಿದ್ವಾನ್ ಶ್ರೀ. ಕೊರಪಳ್ಳ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಣೆಮಾಡುವುದು
ಪ್ರತಿಯೊಬ್ಬರ ನೆಚ್ಚಿನ ಆಸೆ

* *

ಮೈಸೂರು
ಸ್ಯಾಂಡಲ್ ಸಾಬೂನು

ನಿನ್ನ ಸೊಬಗನ್ನು ಕಾಪಾಡಲು ವೃದ್ಧಿಮಾಡಲು
ಒಂದು ನಿಶ್ಚಿತ ಸಾಧನ
ಅನೇಕ ಸುಗಂಧದ್ರವ್ಯಗಳನ್ನು ಜಾಣತನದಿಂದ ಇದರಲ್ಲಿ ಸೇರಿಸಲಾಗಿದೆ.
ಒಮ್ಮೆ ಉಪಯೋಗಿಸಿ ನೋಡಿ

ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ದೊರೆಯುತ್ತದೆ

* *

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು

ಮೆಂಬರು: ಐ. ಎಸ್. ಟಿ. ಎಂ. ಎ.

ಬೌದ್ಧ ಧರ್ಮದ ಸೆಲೆ-ನೆಲೆಗಳು

(೬ನೇ ಪುಟದಿಂದ)

ವೆಂಬ ಕಲ್ಪನೆ ತಲೆದೋರಿತ್ತು. ಮೋಕ್ಷದ ಸಾಧನೆಯೆಂದರೆ ಬ್ರಹ್ಮಾನಂದದ ಸಾಧನೆಯೆಂದು ಜನರೆಲ್ಲರ ಲಕ್ಷ್ಯವನ್ನೂ ಆತ್ಮ ಸೆಳೆಯುವ, ಆನಂದಾ ಸಕ್ತಿಯನ್ನು ಕೇಳಿ ಸುವ ಯಕ್ಷಗಳೂ ನಡೆದಿದ್ದುವು. ಬುದ್ಧನು 'ಬುದ್ಧಿಗೋಚರವಲ್ಲದ ಒಂದನ್ನೂ ಒಪ್ಪಬಾರದು; ಕೇವಲ ನಂಬಿಕೆಗಳಿಂದ ಪ್ರಯೋಜನ ಕಡಿಮೆ; ತನಗೆ ಬುದ್ಧಿಗೋಚರವಾಗುವದಷ್ಟನ್ನೇ, ತನ್ನ ಅನುಭವದಿಂದ ಪ್ರಮಾಣಿಸಿ ನೋಡಿ ಮಾತ್ರ ಒಪ್ಪಬೇಕು' ಎಂಬ ತರ್ಕಶುದ್ಧ ವಿಚಾರಣೆಯಿಂದ ಎಲ್ಲವನ್ನೂ ಪುನರಾಲೋಚನೆ ಮಾಡಿ ಆನಂದಮಯ ಮೋಕ್ಷದ ಬದಲು 'ನಿರ್ವಾಣ' ಅಥವಾ 'ಪರಿನಿರ್ವಾಣ'ವೆಂಬ ಗುರಿಯನ್ನು ಜನರ ಮುಂದಿಟ್ಟನು. ಆ ನಾತ್ಮವನ್ನು 'ಆತ್ಮ' ಅಥವಾ ಪರಬ್ರಹ್ಮ ವಸ್ತುವೆಂದು ಭ್ರಮಿಸುವ ಸಂಭವನೇ ಹೆಚ್ಚಾಗಿದ್ದುದರಿಂದ ನಮ್ಮ ಶರೀರವನ್ನೆಲ್ಲ ಪರೀಕ್ಷಿಸಿದರೂ ರೂಪ, ವೇದನಾ, ಸಂಜ್ಞಾ, ಸಂಸ್ಕಾರ, ವಿಜ್ಞಾನ, ಈ ಐದು 'ಸ್ಕಂಧ'ಗಳಲ್ಲದೆ ಬೇರಾವ 'ಆತ್ಮ'ವೂ ಸಿಕ್ಕುವುದಿಲ್ಲವೆಂದು ನಿರ್ಣಯಿಸುತ್ತಾನೆ. ಪ್ರಪಂಚದ ವ್ಯವಹಾರವೆಲ್ಲವೂ ದೇವತಾದಿ ಶ್ರದ್ಧೆಗಳೂ ಕ್ಷಣಿಕವಾದ ಮನೋಮಯ ಪ್ರತಿಭಾಸ ಮಾತ್ರವೇ ಎಂದು ತೀರ್ಮಾನಿಸುತ್ತಾನೆ ಇದರಿಂದ ಉಪನಿಷತ್ತುಗಳು ಹೇಳುವ 'ಆತ್ಮ'ವನ್ನು ಬುದ್ಧನು ಅಲ್ಲಗಳೆದಂತಾಗುವುದಿಲ್ಲ. ಉಪನಿಷತ್ತುಗಳು "ಅನಾತ್ಮ"ವೆಂದು ಯಾವುದನ್ನು ತಿಳಿಯುತ್ತಿದ್ದನೋ ಅದನ್ನೇ 'ಆತ್ಮ'ವೆಂದು ಭ್ರಮಿಸುವುದನ್ನು ತಪ್ಪಿಸಿದಂತೆ ಮಾತ್ರ ಆಗುತ್ತದೆ ವಸ್ತುತಃ ಅನಾತ್ಮವಾದ, ವಿಜ್ಞಾನಮಯವಾದ, ಪಸ್ತುಗಳ ಸ್ವರೂಪವನ್ನೆಲ್ಲ ತಿಳಿದ ಬಳಿಕ್ಕೆ ಬೋಧಿಯಲ್ಲಿ ತಿಳಿಯುವುದು ನಿಜವಾದ 'ಆತ್ಮ" ಪ್ರಕಾಶವೇ ಎಂಬುದನ್ನು ಬುದ್ಧನೇ ಅನೇಕಸಲ ಕೇಳಿದ್ದಾನೆ ವಿಭಿನ್ನವಾಗಿರುವುದು "ಆತ್ಮ" ವಲ್ಲ. ಯಾವುದೊಂದೇ ಎಲ್ಲದರಲ್ಲೂ ಅಭಿನ್ನವಾಗಿ ಉಂಟೋ ಅದೇ "ಆತ್ಮ"

ಹೀಗೆ ಕಾರ್ಯಕಾರಣ ಭಾವವನ್ನು ವಿಶ್ಲೇಷಣೆಯಲ್ಲಿ ಅನ್ವಯಿಸಿ ನೋಡಿದರೆ ಬುದ್ಧನಿಗೆ ಕಾರಣವ ನಾಲ್ಕೇ ತತ್ತ್ವಗಳೆಂದರೆ ದುಃಖದ ಸರ್ವತೋವ್ಯಾಪಿತ್ವ; ದುಃಖದ ಕಾರಣವಾದ ತೃಷ್ಣೆ; ದುಃಖ ನಿವೃತ್ತಿಗೆ ಅಗತ್ಯವಾದ ತೃಷ್ಣಾಕ್ಷಯ ಮತ್ತು ತೃಷ್ಣಾಕ್ಷಯಕ್ಕೆ ಅನುಕೂಲಿಸುವ ಎಂಟು ಸಾಧನೆಗಳು. ಮನೋವಾಕ್ಕಾಯ ಕರ್ಮಗಳಲ್ಲಿ ಸತ್ಪ್ರವೃತ್ತಿ, ನೈಷ್ಕ್ರಿಯ, ಯತ್ನ, ಮನೋವ್ಯಾಪಾರಗಳ ನಿಗ್ರಹ ಮತ್ತು ಧ್ಯಾನ ಇವೇ ಅನಂತ ಸಾಧನೆಗಳ ಮೂಲಸೂತ್ರಗಳು. ಬುದ್ಧನ ಮಧ್ಯೆ ಮಾರ್ಗವು ಅಪಾರವಾದ ಆತ್ಮವಿಶ್ವಾಸವುಳ್ಳವನಿಗೆ ಮಾತ್ರ ಸಾಧ್ಯ. ಎಲ್ಲಕ್ಕೂ ಮೊದಲು ಈ ವಿಶ್ವ ವ್ಯವಹಾರವು ಎಂದಿದ್ದರೂ ಕ್ಷಣಿಕವೆಂಬ ವಿಂಗಡಿಸಿ ನೋಳೆತರೆ. ಈ ವೇಳೆ ಲೋಕೋಪಯೋಗಿಯಾದ ಸತ್ಕರ್ಮ, ಸದಾಚಾರ, ಸದ್ಭಾವನೆಗಳ ಮೂಲಕವಾಗಿ ಅವನ ಮನಸ್ಸು ಪರಿಪಾಕಕ್ಕೆ ಬಂದು ಬುದ್ಧಿಯ ಪಹರ್ಷದಲ ಕನುಲವನ್ನು ಸಹಿಸಬಹುದಾಗಿ ತೆರೆಯುತ್ತದೆ; ನಿರ್ವಾಣ ಅಥವಾ ಬೋಧಿ ಗೊಯ್ಯುತ್ತದೆ. ಕರ್ಮ ಬಂಧನವನ್ನೂ ಕಡಿಯುತ್ತದೆ. ಕರ್ಮವೆಂದರೆ ದೈವದ ವಿಲಾಸವಲ್ಲ; ನಿನ್ನೆಯ ಹುರುಷಾಕಾರವೇ ಇಂದಿನ ಕರ್ಮವಾಗಿ ಪರಿಣಮಿಸುತ್ತದೆ. ಅಜ್ಞಾನದಿಂದ ದುಸ್ಕರ್ಮವೊಪಗಿ ಅದು ದುಃಖಚಕ್ರದಲ್ಲಿ ಮನುಷ್ಯನನ್ನು ತಿರುಗಿಸುತ್ತಲೇ ಇರುತ್ತದೆ. ಈ ಚಕ್ರದಿಂದ ಬಿಡುಗಡೆಯಾಗಬೇಕೆಂಬ ವಿವೇಕಕ್ಕೆ ನಿರ್ವಾಣ ದೊರೆತೇ ತೀರುತ್ತದೆ.

ನಮಗೆಲ್ಲರಿಗೂ ಚಿರಪರಿಚಿತವಾಗಿರುವ—ಆನೆ ಮತ್ತು ಏಳು ಜನ ಕುರುಡರ ಕಥೆಯನ್ನು ಮೊದಲು ಹೇಳಿದವನು ಬುದ್ಧ. ಇದನ್ನೇ ಅವನು ತತ್ತ್ವಚಿಂತಕರಿಗೆ ಉನ್ಮಯಿಸುತ್ತಾನೆ. ಅಷ್ಟಿಷ್ಟನ್ನು ತಿಳಿದುದರಿಂದಲೇ ನಿರ್ವಾಣ ಸಿದ್ಧಿಸುವುದಿಲ್ಲ. ಅದಕ್ಕೆ ಅಖಂಡ ಪ್ರಯತ್ನವೂ ಅಪಾರ ಹಟವೂ ಅದಮ್ಯ ಉತ್ಸಾಹವೂ ಬೇಕಾಗುತ್ತವೆ. ಬುದ್ಧನು ಮಾಡಿದ ಉಪದೇಶ ನೆಪ್ಪೋ, ಇಂದು ತಿಳಿಯುವುದು ಕಷ್ಟ. ಏಕೆಂದರೆ ಪಾಳಿಯಲ್ಲಿ ಅತನ ಉಪದೇಶಗಳನ್ನು ಸಂಗ್ರಹಿಸುವ ಕೆಲಸ ನಡೆದುದೇ ಅವನು ಶತ ನೂರಾರು ವರ್ಷಗಳ ಮೇಲೆಯೇ. ಈ 'ತ್ರಿಪಟಕ'ಗಳೇ ಸಿಲೋನ್, ಬರ್ಮಾ ಮುಂತಾದ ಬೌದ್ಧರ ಪವಿತ್ರ ಗ್ರಂಥಗಳು ಕಡೆಕಡೆಗೆ ಬೌದ್ಧ ಚಿಂತಕರು ದೊಡ್ಡ ಶಾಸ್ತ್ರಸೌಧವನ್ನೇ ಸಂಸ್ಕೃತದಲ್ಲೂ ವಿಸ್ತರಿಸಿದರು. ವಿಜ್ಞಾನವಾದ, ಶೂನ್ಯವಾದಮುಂತಾದ ಮಹಾತತ್ತ್ವಗಳನ್ನು ಅಸಂಗ, ನಾಗಾರ್ಜುನ, ದಿಙ್ನಾಗ, ಧರ್ಮಕೀರ್ತಿ ಮುಂತಾದವರು ವಿಸ್ತರಿಸಿ, ಇತರ ಭಾರತೀಯ ದರ್ಶನಗಳನ್ನು ವಿಮರ್ಶಿಸಿದರು; ಈ ಪರಸ್ಪರ ಖಂಡನ ಮಂಡನಗಳಿಂದಲೇ ಭಾರತದಲ್ಲಿ ತತ್ತ್ವಶಾಸ್ತ್ರ ಬೆಳೆಯುತ್ತ ಸ್ಪದವಾಯಿತು. "ಬೋಧಿ"ಯ ವಿಷಯವಾಗಿ ಮೌನ-ತಾಳುವುದೇ ಬುದ್ಧನ ಲಕ್ಷಣ"ವೆಂದು ಬುದ್ಧನು ಹೇಳುತ್ತಿದ್ದನಂತೆ. ಆ ಗುರಿಯನ್ನು ಮನುಷ್ಯನಿಟ್ಟುಕೊಳ್ಳುವುದು, ಆದರಂತೆ ನಡೆಯುವುದು, ಈ ಎರಡಕ್ಕೂ ಹೆಚ್ಚಿನ ಪ್ರಾಶಸ್ತ್ಯಕೊಟ್ಟ ಕೀರ್ತಿ ಭಗವಾನ್ ಬುದ್ಧನದು. 'ಬೋಧಿ' ಅಥವಾ ನಿರ್ವಾಣವಿಲ್ಲಿರುವವನ ಮೌನದಿಂದಲೇ ಎಲ್ಲರ ಎಲ್ಲ ಸಂದೇಹಗಳೂ ಪರಿಹಾರವಾಗಬಹುದು. "ಅವಚನಾ ಬುದ್ಧವಚನಂ."

ಹೀಗೆ ಭಾರತದಲ್ಲಿ ಬುದ್ಧಿಗೆ ಶ್ರದ್ಧೆಗಿಂತ ಹೆಚ್ಚಿನ ಸ್ಥಾನವನ್ನು ಸ್ಪಷ್ಟವಾಗಿ ಕೊಟ್ಟವನು ಬುದ್ಧ. ಅಂತೆಯೇ ಅವನ ಅನುಯಾಯಿಗಳಿಂದ ಅನೇಕ ಸ್ವತಂತ್ರ ವಿಚಾರಗಳು ಸಾಹಿತ್ಯ, ಸಂಗೀತ, ಕಲೆ, ವ್ಯಾಕರಣ ಮುಂತಾದ ಚತುರ್ದಶಕ ವಿದ್ಯೆಗಳಲ್ಲಿಯೂ ಮೂಡಿಬಂದುವು. ಆಮರ ಕೋಷದ ಕರ್ತೃ ಬೌದ್ಧನಾದರೆ, ಸಾಹಿತ್ಯ ಶಾಸ್ತ್ರದ ಮೊದಲ ಲೇಖಕನು ಬೌದ್ಧನಾದ ಭಾಮಹ ತರ್ಕಶಿಲಾ, ನಾಲಂದಾ ವಿಶ್ವವಿದ್ಯಾಲಯಗಳನ್ನು ನಡೆಸಿ ವಿದ್ಯೆಯನ್ನು ಬೆಳೆಸಿದವರೂ ಬೌದ್ಧರೇ. ಇಂದಿನ ಬುದ್ಧಿ ಪ್ರಧಾನವಾದ ವಿಜ್ಞಾನಯುಗಕ್ಕೆ ಬುದ್ಧನಿತ್ತ ಪ್ರಯೋಧಕತ್ವವು ಅತುಲನವಲ್ಲೇ ಅಲ್ಲ. ವಿಹಿತವೂ ಅಗಿದೆಯೆಂದು ಹೇಳಬಹುದು. ಭಾರತದ ಪ್ರಾಚೀನ ಜ್ಞಾನ ಪರಂಪರೆಯ ನವನೀತವೇ ಬೌದ್ಧಶಿತ್ತ.

"ಯಸ್ಯ ಜ್ಞಾನಮಯಾ ಸಿಂಹೋರಗಾಥಾ
ಸ್ಯಾನಘಾ ಗುಣಾಃ।
ಸೇನ್ಯತಾನುಕ್ಷಪೋ ಧೀರಾಃ ಸಕ್ರಿಯೇ
ಜಾನ್ಯತಾಯಜಿ"

ನಿಮ್ಮ ಆರ್ಥಿಕ ಸಮಸ್ಯೆಗಳಿಗೆ ಸಲಹೆಗಳು ಬೇಕೆಂದಿದ್ದಾಗ, ಅವುಗಳನ್ನು ಕೊಡಲು ಸದಾ ಸಿದ್ಧರಿದ್ದೇವೆ!

ಮೈಸೂರು, ಮದರಾಸು, ಆಂಧ್ರ ಪ್ರದೇಶ, ಕೇರಳ ಮತ್ತು ಮುಂಬಯಿ ಸಂಸ್ಥಾನಗಳಲ್ಲಿ ಒಟ್ಟು 46 ಶಾಖೆಗಳಿವೆ. ಸಕಲ ವಿಧದ ಬೇಂಕಿಂಗ್ ವಹಿವಾಟುಗಳನ್ನು ಕೈಗೊಳ್ಳುತ್ತೇವೆ. ಗಿರಾಕಿಗಳ ತೃಪ್ತಿಯೇ ನಮ್ಮ ಧ್ಯೇಯ!

50 ವರುಷಗಳಲ್ಲಿ ನಾವು ಗಳಿಸಿದ ನಮ್ಮ ಅತ್ಯಮೂಲ್ಯ ಬೇಂಕಿಂಗ್ ಅನುಭವದ ಪ್ರಯೋಜನವನ್ನು ಇಂದಿನಿಂದಲೇ ಪಡೆಯಿರಿ!!

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

THE CANARA BANKING CORPORATION LIMITED

ಮೈಸೂರು ಟ್ಯೂಪ್ ಫೌಂಡ್ರಿ,

ಬೆಂಗಳೂರು—2.

ಆಧುನಿಕ ಯಂತ್ರ ಸಾಧನಗಳಿಂದ ಸುಸಜ್ಜಿತವಾದ "ಮೈಸೂರು ಟ್ಯೂಪ್ ಫೌಂಡ್ರಿ"ಯಲ್ಲಿ ಪ್ರಿಂಟಿಂಗ್ ಟ್ಯೂಪುಗಳನ್ನು (ಕನ್ನಡ) ರೀಕಾಸ್ಟ್ ಮಾಡಿಸುವುದರಿಂದ ವಿಶೇಷ ಉಳಿತಾಯವಾಗುತ್ತದೆ.

ದಕ್ಷಿಣ ಕನ್ನಡದ ಹಲವು ಮುದ್ರಣಾಲಯಗಳಿಗೆ ನಾವು ಟ್ಯೂಪು ರೀಕಾಸ್ಟು ಮಾಡಿಕೊಡುತ್ತಿದ್ದೇವೆ.
ಇಂದೇ ವಿವರಗಳಿಗೆ ಬರೆಯಿರಿ:—

THE MYSORE TYPE FOUNDRY
Subedar Chatram Road, BANGALORE-2.



ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಗೊಬ್ಬರಿದ್ದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ನೆಂಕಟ್ರಾವ್, ಎಲ್. ಐ.ಎಂ.

ಮಕ್ಕಳಿಗೆ, ಹೆಂಗಸರಿಗೆ, ಗರ್ಭಿಣಿಯರಿಗೆ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟಪಾಲು ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಾತೃ ಪ್ರಧಾನ ಕುಟುಂಬಗಳು

(೬ನೇ ಪುಟದಿಂದ)

ಪದ್ಧತಿಯ ಕುಟುಂಬಗಳು ಸಾಮಾಜಿಕ ಹಾಗು ಆರ್ಥಿಕ ಸುಧಾರಣೆಗೆ ನಿರುಪಯೋಗಿ ಎಂದು ಅನಿಸಲು ಪ್ರಾರಂಭಿಸಿದವು.

೭) ಈ ಪದ್ಧತಿಯು ಕುಟುಂಬಗಳಲ್ಲಿ ಸ್ತ್ರೀಗೆ ಇದ್ದ ಅಧಿಕಾರ ವ್ಯಾಪ್ತಿಯು ಪರಮಾವಧಿಯದಾಗಿತ್ತು. ಗಂಡನಿಗೆ ಯಾವ ಹೆಚ್ಚಿನ ಅಧಿಕಾರಗಳು ಇರಲಿಲ್ಲ "In so for as the man appears only as a guest in the house and by reason of his functions there resembles a serving member of the house hold, while the permanence of the establishment is represented by the woman" ಈ ನಿರಂಕುಶ ಪ್ರಭುತ್ವಿಯು ಬದಲಾದ ಪರಿಸ್ಥಿತಿಗೆ ಒಗ್ಗದಾಯಿತು.

೩) ಕೇವಲ ಪರಂಪಾವಧಿಯ ಅಧಿಕಾರ ವ್ಯಾಪ್ತಿಯೊಂದೇ ಕಾರಣವಾಗದೇ ಅಧಿಕಾರಾರೂಢವಾದ ಸ್ತ್ರೀಯು ಬಲಶಾಲಿಯಾಗಿರಲಿಲ್ಲ ಸ್ತ್ರೀಯರಿಗೆ ಬೇಟೆ ಆಡುವದಾಗಲೀ ಯುದ್ಧ ಮಾಡುವದಾಗಲೀ ಬರುತ್ತಿರಲಿಲ್ಲ. ಮೇಲಾಗಿ ಆಗಿನ ಸಾಮಾಜಿಕ ಪದ್ಧತಿಗನು ಸಾರವಾಗಿ ಪುರುಷರು ತಮ್ಮ ಪತ್ನಿಯರಿದ್ದಲ್ಲಿ ವಾಸಿಸಲು ಹೋಗಬೇಕಾಗುತ್ತಿದ್ದರಿಂದ, ಅಲ್ಪ ಸ್ವಲ್ಪ ಅಧಿಕಾರ ಹೊಳ್ಳ ತಾಯಿಯ ಅಣ್ಣ ತಮ್ಮಂದಿರು ತಮ್ಮ ಪತ್ನಿಯರೊಂದಿಗೆ ವಾಸಿಸಲು ಹೋಗಬೇಕಾಗುತ್ತಿದ್ದರಿಂದ, ಕುಟುಂಬದ ಆಡಳಿತವು ಸಮರ್ಥವಾಗಿ ನಡೆಯುವದು ಅಸಾಧ್ಯವಾಗ ತೊಡಗಿತು.

೪) ಆರ್ಥಿಕ ಪರಿಸ್ಥಿತಿಯು ಬದಲಾದುದರಿಂದ ಪುರುಷನ ಸಮರ್ಥ ಆಡಳಿತ ಹಾಗು ಮಾರ್ಗದರ್ಶನದ ಆವಶ್ಯಕತೆ ದಿನದಿನಕ್ಕೆ ಬೆಳೆಯು ತೊಡಗಿತು. ಇಂಥ ಸಮರ್ಥವಾದ ಆಡಳಿತವನ್ನು ನಾಗರಿಸುವದ ಅಬಲೆಯರಾದ ಸ್ತ್ರೀಯರಿಗೆ ಅಸಾಧ್ಯವಾಗಿತ್ತು. ಹೀಗಾಗಿ ಕುಟುಂಬದ ಆಡಳಿತ ಪದ್ಧತಿಯಲ್ಲಿ ಬದಲಾವಣೆಯು ಅತ್ಯವಶ್ಯವಾಗಿ ಕಂಡು ಬಂದದ್ದರಿಂದ ಮಾತೃ ಪ್ರಧಾನ ಕುಟುಂಬಗಳ ಬದಲು ಪಿತೃ ಪ್ರಧಾನ ಕುಟುಂಬಗಳು ತಲೆಯೆತ್ತ ತೊಡಗಿದವು.

ಮಾತೃ ಪ್ರಧಾನ ಕುಟುಂಬಗಳ ಅವನತಿಯ ಕಾರಣಗಳು:— ೧) **ಆರ್ಥಿಕ—** ಆರ್ಥಿಕ ದೃಷ್ಟಿಯಿಂದ ಮಾತೃ ಪ್ರಧಾನ ಕುಟುಂಬ ಪದ್ಧತಿಯು ಜನಾಂಗದ ಅಭ್ಯುದಯಕ್ಕೆ ಸಹಾಯವಾಗುವಂತಿರಲಿಲ್ಲ ಉಪಜೀವನದ ಮಾರ್ಗಗಳು ಕಠಿಣವಾಗ ತೊಡಗಿದ್ದರಿಂದ ಹೊಸ ಹೊಸ ಮಾರ್ಗಗಳನ್ನು ಹುಡುಕಿ ತೆಗೆಯುವದು, ನೈಸರ್ಗಿಕ ಸಂಪತ್ತನ್ನು ಉಪಯುಕ್ತವಾದ ರೀತಿಯಲ್ಲಿ ಬಳಸಿಕೊಳ್ಳುವದು ಮುಂತಾದ ಗಡುತರ ಕೆಲಸಗಳು ಸ್ತ್ರೀಯರಿಂದ ಅಸಾಧ್ಯವಾಯಿತು. ಇಂಥ ಹೊಸ ಮಾರ್ಗಗಳನ್ನು ಹುಡುಕಿ ತೆಗೆಯಲು ಬೇಕಾಗುವ ಆಸ್ಥೆ ಹಾಗು ಕ್ರಮ ಸಹಿಷ್ಣುತೆ ಸ್ತ್ರೀಯರಲ್ಲಿರಲಿಲ್ಲ. ಆರ್ಥಿಕ ಪ್ರಗತಿಗೆ ಪುರುಷನ ಕ್ರಮ ಹಾಗು ಕೇಂದ್ರೀಕೃತ ಆಸ್ಥೆಗಳು ಅವಶ್ಯವೆನಿಸಿದ್ದರಿಂದ ಮಾತೃ ಪ್ರಧಾನ ಕುಟುಂಬಗಳು ಅಯಶಸ್ವಿಯಾಗರಂಭಿಸಿದ್ದರಿಂದ ಪುರುಷ ಪ್ರಧಾನ ಅಥವಾ ಪಿತೃ ಪ್ರಧಾನ ಕುಟುಂಬಗಳು ತಲೆ ಎತ್ತಿದವು. ಪಿತೃ ಪ್ರಧಾನ ಕುಟುಂಬಗಳು ಆರ್ಥಿಕ, ಸಾಮಾಜಿಕ ಕ್ರಾಂತಿಯನ್ನು ಮಾಡಲು ಸಮರ್ಥವಾಗಿದ್ದವು. The principle of association in the father family is rule, not kingship, Lippert.

೭) ರಾಜಕೀಯ:— ಪೇರಿಂದ ಮೇಲೆ ಒದಗುತ್ತಿದ್ದ ಯುದ್ಧದ ಗಂಡಾಂತರಗಳು ಈ ಬದಲಾವಣೆಗೆ ಪ್ರಮುಖ ಕಾರಣವಾಗಿದ್ದವು. ಯುದ್ಧದ ಸಮಯದಲ್ಲಿ ಜನಾಂಗದ ಹಿತರಕ್ಷಣೆಗಾಗಿ ಹೋರಾಡಬಲ್ಲ ಬಲಶಾಲಿ ಪುರುಷನ ಅವಶ್ಯಕತೆ ದಿನದಿನಕ್ಕೆ ಹೆಚ್ಚುತ್ತೊಡಗಿತು. ಮೇಲಾಗಿ ಗಂಡಾಂತರ ಸಮಯಗಳಲ್ಲಿ ಬೇಕಾಗುವ ಬಲಶಾಲಿಗಳ ಮುಂದಾಳ್ತನ ಹಾಗು ರಾಜಕೀಯ ಧೂರ್ತತನಗಳುಳ್ಳ ಸ್ತ್ರೀಯರು ಸಿಗುವದು ದುಸ್ತರವಾಗಿತ್ತು. ಸ್ತ್ರೀಯರು ಮುಂದಾಳ್ತನ ವಹಿಸಿದರೂ ಕೋರಾಡುವವರು ಪುರುಷರೇ ಇರುತ್ತಿದ್ದರು. ಆದರೆ ಈ ಪದ್ಧತಿಯು ಅಷ್ಟು ಫಲಕಾರಿಯಾಗಿರಲಿಲ್ಲ ನೈಸರ್ಗಿಕವಾಗಿ ಪುರುಷರು ಬಲಶಾಲಿಗಳು, ಯೋಧರು ಹಾಗು ಬೇಟೆಗಾರರು ಆಗಿದ್ದರಿಂದ ಜನಾಂಗದ ರಕ್ಷಣೆಗೆ ಅವರ ಮುಂದಾಳ್ತನವು ಅವಶ್ಯವೆನಿಸಿದ್ದರಿಂದ ಮಾತೃ ಪ್ರಧಾನ ಕುಟುಂಬಗಳು ಹಂತೆಗೆದು ಪಿತೃ ಪ್ರಧಾನ ಕುಟುಂಬಗಳಿಗೆ ಆ ಸ್ಥಾನ ದೊರೆಯಿತು.

೩) ಸಾಮಾಜಿಕ:— ಪಿತೃ ಪ್ರಧಾನ ಕುಟುಂಬಗಳು ಅವತರಿಸಲು ಪುರುಷನ ಸ್ಥಾನ ಪದ್ಧತಿಗಳಲ್ಲಿ ಆದ ಕೆಲವು ಸುಧಾರಣೆಗಳು ಕಾರಣೀಭೂತವಾದವು. ಹೆಂಡತಿಯನ್ನು ಕ್ರಯಕೊಟ್ಟು ತರುವದು ಮತ್ತು ಶೌರ್ಯದಿಂದ ಹೋರಾಡಿ ಗೆದ್ದು ತರುವದು ಮುಂತಾದ ಪದ್ಧತಿಗಳು ಇದ್ದವು. ಹೀಗೆ ಕ್ರಯಕೊಟ್ಟು ಕೊಂಡ ಪತ್ನಿಯಾಗಲೀ ಅಥವಾ ಹೋರಾಡಿ ಗೆದ್ದು ತಂದ ಪತ್ನಿಯಾಗಲೀ ಪುರುಷನ ಸೊತ್ತು ಎಂದು ತಿಳಿಯಲ್ಪಡುತ್ತಿದ್ದಳು. ಆವಳ ಮೇಲೆ ಪುರುಷನ ಅಧಿಕಾರವು ಇರುತ್ತಿದ್ದಿತು. ಆ ಅಧಿಕಾರವನ್ನು ಸ್ತ್ರೀಯು ಮನ್ನಿಸಲೇ ಬೇಕಾಗುತ್ತಿದ್ದಿತು. ಇದರಿಂದಾಗಿ ಮಾತೃ ಪ್ರಧಾನ ಕುಟುಂಬಗಳಲ್ಲಿ ಇದ್ದ ಸ್ತ್ರೀಯು ಅಧಿಕಾರ ಹಾಗು ಪ್ರಾಮುಖ್ಯತೆಗಳು ಮಾಯವಾಗ ತೊಡಗಿ ಅವೆಲ್ಲ ಅಧಿಕಾರಗಳು ಈಗ ಪುರುಷನ ಕೈಯಲ್ಲಿ ಬಂದದ್ದರೀ ' ಪುರುಷ ಪ್ರಧಾನ ಕುಟುಂಬಗಳು ತಲೆ ಎತ್ತಿದವು. ಹೀಗೆ ಆರ್ಥಿಕ, ಸಾಮಾಜಿಕ ಹಾಗು ರಾಜಕೀಯ ಕಾರಣಗಳಿಂದಾಗಿ ಉದ್ಭವಿತವಾದ ಪಿತೃ ಪ್ರಧಾನ ಕುಟುಂಬಗಳು ಇಂದಿಗೂ ಅಸ್ತಿತ್ವದಲ್ಲಿದೆ.

ಧನವ್ಯಯವಾಗುತ್ತದೆ; ಆದರೆ ಜ್ಞಾನ ಮತ್ತು ಪ್ರೇಮ ವೃದ್ಧಿಯಾಗುತ್ತದೆ.

—ಜನ್ನಿ ಬೆಸೆಂಟ್.

ಅಲ್ಪ ಮನುಷ್ಯನಿಗೆ ದೊಡ್ಡ ಛಾಯೆ ಪ್ರಾಶಸ್ತ್ಯವಾದೊಡನೆ ಸೂರ್ಯನು ಅಸ್ತಮಾನನಾಗುತ್ತಾನೆಂದು ತಿಳಿಯಬೇಕು.

—ವಾಲ್ಟರ್ ಲ್ಯಾಂಡರ್.

ತಾನರಿತಿರುವುದು ಇನ್ನೂ ಅತ್ಯಲ್ಪವೆಂದು ಅನಿಸುವುದೇ ಜ್ಞಾನೋದಯದ ಲಕ್ಷಣ —ಶ್ರೀ ಅರವಿಂದರು.

ಸ್ವಾತಂತ್ರ್ಯವು ಯಾಚನೆಯಿಂದಲಲ್ಲ ಸದು ಅವನ್ನು ಬಾಹುಬಲದಿಂದ ಪಡೆಯಬೇಕಾಗುತ್ತದೆ. —ಛತ್ರಪತಿ ಶಿವಾಜಿ.

ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸು. — ಯೇಸುಕ್ರಿಸ್ತ.

ಪ್ರತಿಯೊಬ್ಬರೂ ತಮ್ಮ ಕೆಕ್ಕಸ್ಸುಗಳ ಬಗ್ಗೆ ಅಗ್ರಹಪಟ್ಟು ಕರ್ತವ್ಯ ಮರೆತರೆ ಸಂಪೂರ್ಣ ಗೊಂದಲ ಮತ್ತು ಅನ್ಯವಸ್ಥೆಯುಂಟಾಗುವುದು. —ಗಾಂಧೀಜಿ.

ಅಣುಯುಗದ ಸಂಪೂರ್ಣ ಪರಿಚಯ ನಿಮಗೆ ಬೇಕೇ?

ರಾಳವೇಂದ್ರ ಆಚಾರ್ಯರ ಪುಸ್ತಕ ಕನ್ನಡದ ಅಮೂಲ್ಯ ಆಸ್ತಿ

"ಒಂದು ಗ್ರ್ಯಾಮ್" (ಒಂದು ಪೌಂಡಿನಲ್ಲಿ ಒಟ್ಟು ಎಳಸು ಗ್ರ್ಯಾಮ್ ಇವೆ) ತೂಕದ ಯಾವುದೇ ಒಂದು ವಸ್ತುವನ್ನು ಸಂಪೂರ್ಣ ನಾಶಗೊಳಿಸಿದರೆ ಅದರಿಂದ ೯೦೦ ಮಿಲಿಯ ಮಿಲಿಯ ಮಿಲಿಯ (ಮಿಲಿಯ-೧೦ ಲಕ್ಷ) ಶಕ್ತಿ ಉತ್ಪತ್ತಿಯಾಗುತ್ತದೆಂದು ಐನ್‌ಸ್ಟೈನ್ ೧೯೦೫ ರಲ್ಲಿ ಪ್ರಥಮತಃ ತೋರಿಸಿದನು. ಇಷ್ಟು ಶಕ್ತಿಯೆನ್ನು ವಿದ್ಯುಚ್ಛಕ್ತಿಯಾಗಿ ಪರಿವರ್ತಿಸಿದರೆ ಅದರಿಂದ ೩೦ ಮಿಲಿಯ ಯುನಿಟ್ ವಿದ್ಯುತ್ತನ್ನು ಪಡೆಯಬಹುದು.

ಯುನಿಟಿಗೆ ೪ ಆಣೆಯಂತೆ ಬೆಲೆ ಹಿಡಿದರೆ ಬರೀ ಕಸದ ಬುಟ್ಟಿಯಿಂದ ತೆಗೆದ ಕಾಗದಪೂರೊಂದನ್ನು ನಾಶಗೊಳಿಸಿ ಆರೂ ಕಾಲು ಮಿಲಿಯ ರೂಪಾಯಿ ಬೆಲೆ ಬಾಳುವ ವಿದ್ಯುಚ್ಛಕ್ತಿಯನ್ನು ತಯಾರಿಸಬಹುದೆಂದಾಯಿತು. ಇಷ್ಟು ಶಕ್ತಿಯನ್ನು ಮಾಮೂಲು ಪ್ರಕಾರ ಇದ್ದಲನ್ನು ಸುಟ್ಟು ತಯಾರಿಸಿಕೊಳ್ಳಬೇಕಾದರೆ ಮೂರು ಮಿಲಿಯ ಪೌಂಡು ಇದ್ದಲು ಬೇಕಾಗುವುದು."

ಅಣುಶಕ್ತಿಯ ಬೃಹದ್ದರ್ಶನ ಮಾಡಿಸಲು ಯು. ರಾಳವೇಂದ್ರಾಚಾರ್ಯರ (ಹಿರೋಶಿಮಾದಿಂದ ಜಿನೇವ) ಪುಸ್ತಕದಿಂದ ಎತ್ತಿಕೊಂಡ ಇದೊಂದು ಚಿಕ್ಕ ಉಲ್ಲೇಖ ಸಾಕಾಗಬಹುದು.

ದಕ್ಷಿಣ ಕನ್ನಡ ಜಿಲ್ಲೆಯವರಾದ ಈ ಪ್ರತಿಭಾವಂತ ವಿಜ್ಞಾನಿ ಈಗ ಭಾರತೀಯ ಸೇನೆಯ ಹವಾಮಾನ ವಿಭಾಗದಲ್ಲಿ ಕೆನಿಷ್ಠ್ ಅಧಿಕಾರಿಯಾಗಿದ್ದಾರೆ.

ಅಣುಶಕ್ತಿಯ ಕಲ್ಪನೆಯಿಂದ ಹಿಡಿದು ಅದನ್ನು ಪಳಗಿಸುವ ದಿಕೆಯಲ್ಲಿ ನಡೆದ ಎಲ್ಲ ಸಾಧನೆಗಳನ್ನೂ ಸಿದ್ಧಿಗಳನ್ನೂ ಈ ತೊಂಬತ್ತು ಪುಟಗಳ ಪುಟ್ಟ ಪುಸ್ತಕದಲ್ಲಿ ಬಹು ವಿವರವಾಗಿ, ಸುನೋಜ್ಞವಾಗಿ ವಿಜ್ಞಾನಿ ಎಲ್ಲದವನಿಗೂ ತಿಳಿಯುವಂತೆ, ಆಚಾರ್ಯರು ಬಹು ಸಮರ್ಥವಾಗಿ ಆಧಾರಯುತವಾಗಿ ವಿವರಿಸಿದ್ದಾರೆ.

ವಿಜ್ಞಾನದಂಥ ಕ್ಲಿಷ್ಟ ವಿಷಯವನ್ನು ಇಷ್ಟೊಂದು ಸಾರವತ್ತಾಗಿ ಹೇಳಿರುವ ಗ್ರಂಥ ಕನ್ನಡದಲ್ಲಿ ಇದೊಂದೇ ಎಂಬುವಲ್ಲಿ ಸಂದೇಹವಿಲ್ಲ. ಸ್ವತಃ ಶಿವರಾಮ ಕಾರಂತರು, ಈ ಗ್ರಂಥಕ್ಕೆ ನೀಡಿರುವ ಮುನ್ನುಡಿಯಲ್ಲಿ, "ಇವತ್ತು ಕನ್ನಡ ನಾಡಿನಲ್ಲಿ ವೈಜ್ಞಾನಿಕ ವಿಷಯಗಳನ್ನು ಜೀರ್ಣಾಗಿ ತಿಳಿದು ಕನ್ನಡದಲ್ಲಿಯೇ ಹೇಳಬಲ್ಲವರ ಸಂಖ್ಯೆ ಬರೆಯ ಐದಾರಕ್ಕೂ ಮೀರಿಲ್ಲ. ಅವರಲ್ಲಿ ಆಚಾರ್ಯರು ವಿಶೇಷ" ಎಂದು ಹೇಳಿದ ಮೇಲೆ ಅನ್ಯರ ಪ್ರಶಸ್ತಿ ಪ್ರಶಂಸೆ ಒಂದೂ ಬೇಕಾಗಲಾರವು.

ಇಂಥ ಉಪಯುಕ್ತ ಗ್ರಂಥ ಬರೆದು ತಿಳಿವಳಿಕೆಕೊಟ್ಟು ನಮ್ಮನ್ನು ಅಣುಯುಗದ ಹೊಸ್ತಿಲಲ್ಲಿ ತಂದು ನಿಲ್ಲಿಸಿರುವ ಆಚಾರ್ಯರಿಗೆ ಕನ್ನಡ ಜಿಜ್ಞಾಸುಗಳೆಲ್ಲರೂ ಋಣಿಯಾಗಬೇಕಾಗಿದೆ.

—ಪ್ರಪಂಚ.

ಹಿರೋಶಿಮಾದಿಂದ ಜಿನೇವ

ಲೇಖಕರು: ಯು. ರಾಳವೇಂದ್ರ ಆಚಾರ್ಯ, ಎಂ. ಎ.

ಪ್ರಕಾಶಕರು: ನವಯುಗ ಎಂಟರ್ ಪ್ರೈಸಸ್ ಲಿಮಿಟೆಡ್ ಉಡುಪಿ.

ಬೆಲೆ: ರೂ. ೧—೮—೦.

ಪ್ರತಿಗಳಿಗೆ ಪ್ರಕಾಶಕರಿಗಾಗಲಿ, ನವಭಾರತ ಪುಸ್ತಕ ಭಂಡಾರ, ಉಡುಪಿ, ಇವರಿಗಾಗಲಿ ಬರೆಯಿರಿ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R.E P.594/56 in O S. 222/56

ರಾಮಣ್ಣ ರೈ —ಅರ್ಜಿದಾರ

ಳ್ಯತಪ್ಪೆ ರೈ ಮುತ್ತಪ್ಪ ರೈ ಆಳಿಯ ನ ಬಿಕ್ಕಮ್ಮ ಹೆಂಡ್ತಿನ ಮಗ. ಪುತ್ತೂರು ತಾಲೂಕು ಕುರಿಯ ಗ್ರಾಮದಲ್ಲಿ ನೋಸ್ಸು ಕುಂಬ್ರ ಪ. ಕ. —ಎದ್ರಿ

ಪುತ್ತೂರು ಡಿ. ಮು. ಕೋರ್ಟಿನ O S 36/50ನೇ ಡಿಕ್ರಿಯ ಸಂದಾಯದ ಬಗ್ಗೆ, ಮಂಗಳೂರು ಸಬ್ ಕೋರ್ಟಿನ O. S. 39/50ನೇ ದಾವೆಯಲ್ಲಿಯ ವಾದಿರು, ಚಿಕ್ಕಮ್ಮ ವೆಗ್ಗೆನವರು, ಮಾಡಿದ R. I. A. 1408/53ನೇ ಅರ್ಜಿಯ ಮೇಲಣ ಹುಕುಂಶ್ರಕಾರ, ಸದ್ರಿ ಕೋರ್ಟಿನಿಂದ ರಿಸೀವರಾಗಿ ನೇಮಕಗಟ್ಟಿ ಎದ್ರಿಯು, ಈ ಅರ್ಜಿದಾರರಿಂದ, ಡಿ. ಪೈ. ನೋಟಿನ ಜೇರಿ ಪಡದ ಸಾಲದ ಅಸ್ಸು ಬಡ್ಡಿಯ ಕುರಿತು ಪಡದ ಪುತ್ತೂರು ಡಿ ಮು. ಕೋರ್ಟಿನ O. S. 222/56ನೇ ಡಿಕ್ರಿ ಮೇಲೆ ನಡ್ಸಿದ R. E P. 594/56ನೇ ಅಮ್ಲು ಜಾರಿಯಲ್ಲಿ ಎದ್ರಿಯು ನೋಟೀಸು ಜ್ಯಾರಿಗೆ ಸಿಕ್ಕದೆ ತಪ್ಪಿಸಿಕೊಳ್ಳುವದ್ರಿಂದ್ಲ ಸದ್ರಿ ಅಮ್ಲು ಜಾರಿಯು ತಾ. ೨—೨—೫೭ಕ್ಕೆ ಇಟ್ಟರೆಸ್ಟ್ರಿಂದ ಆ ದಿನ ಪಗಲು ಗಂಟೆ 11ಕ್ಕೆ ಈ ಕೋರ್ಟುಮುಂದೆ, ಖುದ್ದು ಯಾ ವಕೀಲರ ಮುಖಾಂತ್ರ ಎದ್ರಿಯು ಹಾಜರಾಗಿ ಉವರಿಸರಿ ಸಾಕ್ಷ್ಯವು ತಪ್ಪಿದರೆ ಕಿನ್ಯಾಯಾಸಿ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳ್ಸಿಯದೆ.

(By order of the court)

(Sd) B. N. Baliga.
Advocate for Petitioner.

ಪುತ್ತೂರು, 12—1—57.

ಶಿಕ್ಷಣ ವಿವೇಚನೆ

(೨ನೇ ಪುಟದಿಂದ)

ಮುರಿಯುವುದು, ನೋಡುವುದರಿಂದ ಆದರ ಚಟುವಟಿಕೆಯು ಕೂಡಿಕೊಂಡಿದೆ. ಕಾಸಿನ ಎಣಿಕೆ, ಕಂಪಾನಿಯ ಎಣಿಕೆ-ಅದಕ್ಕೆಲ್ಲ. ವಿವಿಧ ಪ್ರಯೋಗಗಳಿಂದ ತನ್ನ ರಚನಾ ಕೌಶಲ್ಯ ಬೆಳೆಯಿಸಿಕೊಳ್ಳುವುದು. ಮನಸ್ಸಿಗೂ ಕೈಯಿಗೂ ಹೊಂದಿಕೆ ತರುವುದು, ಅದರ ಚಟುವಟಿಕೆಗೆ ಇರಬೇಕಾದ ರೂಪು. ಈ ವಯಸ್ಸು ಶರೀರ ಶ್ರಮಕ್ಕೆ ಪಳಗುವ ವಯಸ್ಸಲ್ಲ; ದುಡ್ಡಿಗಾಗಿ ದುಡಿಯುವ ವಯಸ್ಸು ಎಂದೂ ಅಲ್ಲ. ಅಭಿರುಚಿಯನ್ನು ಬೆಳೆಯಿಸಿಕೊಳ್ಳುವ ವಯಸ್ಸು ಇದು. ಈ ವಯಸ್ಸಿಗೆ ಮಗುವಿನ ಶರೀರವು ತುಂಬ ದುಡಿದೀತಾದರೂ, ಅದು ಯಾಂತ್ರಿಕ ದುಡಿಮೆಯಲ್ಲ. ಶೈಶವ—ತಾನು ಏತಕ್ಕಾದೀನು—ಎಂದು ಕಂಡುಕೊಳ್ಳುವ ಪ್ರಯೋಗಶಾಲೆಯೇ ಹೊರತು 'ನೀನು ಇಂಥದೇ ಗುಲಾಮನಾಗು' ಎನ್ನುವ ವಯಸ್ಸಲ್ಲ. ಈ ದೃಷ್ಟಿಯಿಂದ-ಅದರ ಶಿಕ್ಷಣವ ಪುನರ್ ಯೋಜನೆಯಾಗಬೇಕೇ ಹೊರತು, ಶಿಶು ಮನೋಧರ್ಮದ ಮೂಲಭೂತ ಕೊಲೆಯನ್ನು ನಾವು ಮಾಡಬಾರದು.

ಇಲ್ಲಿಂದ ಮುಂದಿನ ಹೆಜ್ಜೆಯೆಂದರೆ ಮಾಧ್ಯಮಿಕ ಶಿಕ್ಷಣ. ಇಲ್ಲಿ ಕಲಿಯುವ ಮಗುವಿನ ವಯಸ್ಸು ಹದಿನೆರಡರಿಂದ ಹದಿನಾರೋ ಹದಿನೆಂಟಕ್ಕೋ ಏರುತ್ತದೆ. ಇಲ್ಲಿಯೂ ಶಿಶು ಮನೋಧರ್ಮದ ಮುಂದಿನ ಬೆಳವಣಿಗೆ ನಡೆಯಬೇಕಾಗಿದೆ. ಜಿಜ್ಞಾಸೆ, ಪ್ರಪಂಚದವ್ಯಾಪಾರಗಳಲ್ಲಿ ಆಸಕ್ತಿ ಬೆಳೆಯುವಂತೆ ನಾವು ಬಾಲಕರಿಗೆ ಅವಕಾಶಗಳನ್ನು ಒದಗಿಸಿಕೊಡಬೇಕು. ಹಾಗೆ ಆಸಕ್ತಿ ಬೆಳೆಯಿಸುವುದಕ್ಕೆ ತಕ್ಕ ವಿಷಯಗಳೂ ತಕ್ಕ ರೀತಿಗಳೂ ಇಲ್ಲದಿರುವುದು—ಇಂದಿನ ಶಿಕ್ಷಣದ ಕೊರತೆಯೇ ಹೊರತು, ಈಗ ಕಲಿಸುವ ವಿಷಯಗಳೇ ಪ್ರಯೋಜನವಿಲ್ಲ—ಎಂಬುದು ಅದರ ಅರ್ಥವಲ್ಲ. ಹುಡುಗನ ಬೌದ್ಧಿಕ ಬೆಳವಣಿಗೆಗೆ ನಾವು ಇಂದು ನಡೆಯಿಸುತ್ತಿರುವ ಅಸಚಾರವೆಂದರೆ-ಅವನಿಗೆ ಪಾಠ್ಯ ಬರುವ ಮುಂಚೆಯೇ, ಅವನನ್ನು ಪಠ್ಯಪುಸ್ತಕದ ಹಾಗೆ, ಅಂದರೆ ದೊಡ್ಡವರಾದ ನಮ್ಮಂತೆ, ಆಡಿಸಬೇಕೆನ್ನುವ ಚಪಲ. ಪ್ರೌಢ ಜೀವನದಲ್ಲಿ ಮಹತ್ವವಾಗಿ ಕಾಣಿಸಬಹುದಾದ ಎಲ್ಲ ವಿಷಯಗಳನ್ನೂ, ಪಾಠಗಳ ಮೂಲಕ ನಾವು ಹುಡುಗರ ತಲೆಯಲ್ಲಿ ಪುಂಬಿಸಲೆತ್ನಿಸುತ್ತೇವೆ ನಮ್ಮ ಸಮಾಜ ಶಿಕ್ಷಣದ ಪಾಠಗಳಂತು ಮಕ್ಕಳ ವಯಸ್ಸಿಗೆ ಹಿಡಿಸದ ಪ್ರತಿಯೊಂದು ಫಸಲ ವಿಷಯದಿಂದಲೂ ಕೂಡಿಕೊಂಡಿದೆ. ಸಾಲದ್ದಕ್ಕೆ ಅವರನ್ನು ಮೂರು ತಿಂಗಳು ಅರು ತಿಂಗಳಿಗೊಮ್ಮೆ ಪರೀಕ್ಷೆಯ ಮಾನದಂಡದಿಂದ ಅಳೆದು, ನಾವು ಭಿದರಿಸುತ್ತಿದ್ದೇವೆ ತಾನು ಏತಕ್ಕೆ ಸಮರ್ಥನೆಂದು ಕಂಡುಕೊಳ್ಳುವ ಅವಕಾಶವನ್ನು ಮಕ್ಕಳಿಗೆ ಯಾವ ವಿಧದಿಂದಲೂ ಒದಗಿಸದ ನಾವು 'ನೀನು ಇಂಥದರಲ್ಲಿ ನಾಪಾಸು' ಎಂದು ಒಬರಿ ಹೇಳುವ ಕ್ರಮವನ್ನು ಮಾತ್ರ ಇರಿಸಿಕೊಂಡಿದ್ದೇವೆ. 'ಆ ಇಂಥದು ಇವನಿಗೆ ಯಾಕೆ ಬೇಕು' ಎಂದು ತೋರಿಸಿಕೊಟ್ಟವರಲ್ಲ ಶಾಲೆಯಲ್ಲಿ ವಿಧಿಸುವ ಕೆಲವು ವಿಷಯಗಳನ್ನು ಬಿಟ್ಟರೆ, ಉಳಿದ ಯಾವುದೇ ವಿಷಯ ಬಾಲಹುಡುಗನಿಗೆ ಗೊತ್ತಿದ್ದರೂ ಪ್ರಯೋಜನವಿಲ್ಲ- ಎಂಬ ಪೂರ್ವ ಸಿದ್ಧಾಂತ ನಮ್ಮದು. ಈ ಬಗೆಯಾಗಿ ಅಳೆಯುವಲ್ಲಿ, ಅಳೆಯುವವರಿಗೇನೋ ಶ್ರಮ ಕಡಿಮೆ. ಪರೀಕ್ಷೆಗಳಲ್ಲಿ ಕೊಡುವ ದೂರ್ಕಿನ ಮೇಲಿಂದ, ಮನುಷ್ಯ ಪ್ರಾಣಿಯ ಯೋಗ್ಯತೆಯನ್ನು ಅಳೆದು ನಾವು ವರ್ಗೀಕರಿಸಬಹುದು. ಭಯದಿಂದಲೋ, ಮಾನ ಪಮಾನದ ಅಂಜಿಕೆಯಿಂದಲೋ, ಅರ್ಥಾರ್ಥ ಸಂಬಂಧವಿಲ್ಲದ ಪರೀಕ್ಷೆ ಮತ್ತು ನೌಕರಿಯ ದಾಂಪತ್ಯದಿಂದ ಓ — ಓದಿ ಪಾಸಾಗುವ ಮಕ್ಕಳೂ ಸಾಕಷ್ಟು ಇದ್ದಾರೆ. ಪಾಠವನ್ನು ಉಸಾಹಕವುದು, ಸ್ಮರಣೆಯಲ್ಲಿರಿಸಿಕೊಳ್ಳುವುದು, ಅನುಕರಿಸುವುದು — ಇದಕ್ಕೆ ತಕ್ಕ ಸಾಧನಗಳು. ಆದರೆ ವ್ಯಕ್ತಿತ್ವ ವಿಕಾಸನವನ್ನು ಪ್ರಾಥಮಿಕ ಹೆಜ್ಜೆಯಲ್ಲೂ ನಾವು ಕಾಣುವುದಿಲ್ಲ; ಮಾಧ್ಯಮಿಕ ಶಿಕ್ಷಣದಲ್ಲೂ ಕಾಣುವುದಿಲ್ಲ. ನಮ್ಮ ಶಿಕ್ಷಣ ಮಾನದಂಡದಲ್ಲಿ ಅದಕ್ಕೆ ಬೆಲೆಯೂ ಇದ್ದಂತಿಲ್ಲ.

ಇನ್ನು — ಹದಿನೆರಡರಿಂದ ಹದಿನೆಂಟರ ತನಕ ನಡೆಯುವ ಈ ವಯಸ್ಸು-ವೃತ್ತಿ ಶಿಕ್ಷಣಕ್ಕೆ ತಕ್ಕ ವಯಸೆನ್ನುತ್ತೀರಾ? ಇಂದಿನ ಯುಗದ ವ್ಯಾಪಾರೋದ್ಯಮಗಳ ಸಮಸ್ಯೆಯನ್ನು ಇದಿರಿಸುವ ಶಕ್ತಿ ಯುವ ಈ ಕಿರಿಯ ವಯಸ್ಸಿನಲ್ಲಿ ಯಾರಿಗಾದರೂ ಬಂದೀತೇ ತನ್ನ ಭವಿಷ್ಯದ ದಾರಿಯನ್ನು, ಒಬ್ಬ ಬಾಲಕ ಈಗಾಗಲೇ ತೀರ್ಮಾನಿಸಿ, ತಾನು ಬಡಗಿಯೋ, ಕೃಷಿಕನೋ, ಕಾರ್ಕೂನನೋವೈದ್ಯನೋ— ಆಗಬೇಕೆಂದು ನಿರ್ಧರಿಸುವುದುಎಂದಾದರೂ ಸಾಧ್ಯವೇ? ಹಾಗಿದ್ದರೆ vocational bias— ಎಂಬ ಮಾತಿನ ಅರ್ಥವೇನು? ಸರಕಾರಕ್ಕೆ ಮುಕ್ಕಳ ಮೇಲಿನ ಹೊಣೆಯನ್ನು ಆಡಷ್ಟುಮಟ್ಟಿಗೆ ಕಳಚಿಕೊಳ್ಳಬೇಕೆಂಬುದು ಉದ್ದೇಶವಾದರೆ, ಹೀಗೆ ಮಾಡಬಹುದು. ಆದರೆ ತರುಣರು ರಾಷ್ಟ್ರದ ಸಂಪತ್ತೆಂದು ತಿಳಿಯಬಲ್ಲ ಸಮಾಜ ಹಿತಚಿಂತಕ ಸರಕಾರವೊಂದು ಎಂದೂ ಹೀಗೆ ಮಾಡಲಾರದು.

ಪ್ರಾಥಮಿಕ ಶಿಕ್ಷಣದ ಹಂತವು ಮಗುವಿನ ಕನಸಿನ ರಾಜ್ಯ. ಅದೇ ಮಾಧ್ಯಮಿಕ ಶಿಕ್ಷಣದಲ್ಲಿ ಮುಂದುಸರಿದು ಬೆಳೆಯಬೇಕಾಗಿದೆ. ಶೈಶವದ ಚಟುವಟಿಕೆಯೊಸನೆ ತಾರುಣ್ಯದ ಉತ್ಸಾಹವು ಸೇರಿ, ಹೆಚ್ಚಿನ ಸಾಹಸಕ್ಕೆ, ಪ್ರಯೋಗಕ್ಕೆ ಅಲ್ಲಿ ಅವಕಾಶ ದೊರೆಯಬೇಕು. ಹಲಬಾರು ಕುಶಲ ಚಟುವಟಿಕೆಗಳೂ, ವಿಷಯ ವೈವಿಧ್ಯಗಳೂ, ಸಾಧನೆಯ ಅವಕಾಶಗಳೂ, ಮಕ್ಕಳೆದುರಿಗೆ ಇರಬೇಕು. ಪ್ರಯೋಗಶೀಲತೆ, ಸಾಹಸ, ಸ್ವವಿಚಾರಶಕ್ತಿ ಇವುಗಳು—ಅವರಲ್ಲಿ ಬೆಳೆಯಬೇಕು. ಪಠ್ಯಕ್ರಮ ಈ ದೃಷ್ಟಿಯಿಂದ ಯೋಜಿಸಲ್ಪಡಬೇಕು.

ನಾಳಿನ ಜೀವನವನ್ನು ಆತ ಇದಿರಿಸಲು ಸ್ವಶಕ್ತಿಯಿಂದ ಸಮರ್ಥನಾಗುವಂತೆ 'ಇದೇಕೆ ಹೀಗಾಯಿತು?' 'ಇದಕ್ಕೇನು ಮಾಡಬೇಕು?' 'ಹೀಗೆ ಮಾಡಿದರೆ ಹೇಗಾದೀತು?' ಎಂದು ಅವನ ಮನಸ್ಸು ಪ್ರಶ್ನೆ ಕೇಳಬೇಕು; ಉತ್ತರಿಸಬೇಕು; ಪ್ರಯೋಗ ನಡೆಯಿಸಬೇಕು. ಬಾಲಕನ ಧೈರ್ಯ ಇಲ್ಲಿ ಬೆಳೆಯಬೇಕು. ಪಂಥಾವಲಂಬನೆ ಕಡಿಮೆಯಾಗಬೇಕು. ಅನುಕರಣೆ, ಸ್ಮರಣಶಕ್ತಿಗಳಿಗೆ ಇಂದು ನಾವು ಕೊಡುತ್ತಿರುವ ಹೆಚ್ಚಿನ ಮನ್ನಣೆ ತಪ್ಪಿ, ಸ್ವಸಾಹಸ, ಸ್ವವಿಚಾರಶಕ್ತಿಗಳಿಗೆ ನ್ಯೋತ್ಸಾಹ ದೊರೆಯಬೇಕು.

ವೃತ್ತಿ ಶಿಕ್ಷಣದ ಸ್ವರೂಪವು, ಈ ಹಂತದಲ್ಲಿಯೂ ನಿರ್ಧಾರವಾಗಿಬಾರದು. ವೃತ್ತಿಯ ಪ್ರವೃತ್ತಿ ಮಕ್ಕಳಲ್ಲಿ ಬೆಳೆಯಬೇಕು. ಇದೇನೇ ಸೃಷ್ಟಿಕಾರಕ ಪ್ರವೃತ್ತಿಯ ವಿಸ್ತಾರ. ವ್ಯಾಯೋಗಿಕ ಚಿತ್ರ, ಶಿಲ್ಪ, ಯಂತ್ರ ಶಿಲ್ಪಗಳ ಚಟುವಟಿಕೆ ಹೆಚ್ಚಬೇಕಲ್ಲಿ, ಮುಂದಿನ ಜೀವನದಲ್ಲಿ ಪ್ರಚಿತವಾದ ಯಾವುದೇ ಉದ್ಯಮಕ್ಕೆ ಸಂಬಂಧಪಟ್ಟ ವ್ಯವಸಾಯವನ್ನು, ಆತ ಕೈಕೊಳ್ಳಬಹುದು. ಮುಂಮುಂದಿನ ರಾಷ್ಟ್ರಗಳಲ್ಲಿ ಹದಿನೆರಡು ಹದಿನೆಂಟರ ಒಳಗಿನ ಮಕ್ಕಳ ತಲೆಯ ಮೇಲೆ, ಬಡಗಿತನ, ಕೃಷಿಗಳಂತಹ ವೃತ್ತಿಯನ್ನು ಕಡ್ಡಾಯವಾಗಿ ಹೊರಿಸುವುದಿಲ್ಲ. ಬದಲು—ಹತ್ತೆಪ್ಪತ್ತು ತೆರನ ವಿವಿಧ ವೃತ್ತಿಪರ ಚಟುವಟಿಕೆಗಳಿಗೆ ಅವಕಾಶಕೊಡುತ್ತಾರೆ ಇಲ್ಲೂ ದೊಡ್ಡವರು ಹಿಡಿಯುವ ಉಳಿ, ಕೊಡತಿ, ಹಾರೆ, ಗುದ್ದಲಿ, ಮಕ್ಕಳ ಕೈಗೆಕೊಡುವುದಲ್ಲ. ಅವರವರ ಶರೀರದ ಗಾತ್ರ,ಪುಷ್ಟಿ,ಶಕ್ತಿಗಳಿಗೆ ಸಮನಾದ ಸಾಧನ ಸಲಕರಣೆಗಳನ್ನೊದಗಿಸಬೇಕು. ಮಾಧ್ಯಮಿಕ ಶಿಕ್ಷಣವೆಂಬುದು 'ಅವಕಾಶ, ಸಂದರ್ಭ, ಪ್ರಯೋಗಗಳ' ಒಂದು ವಿಸ್ತಾರ ರಂಗವೇ ಹೊರತು, ವೃತ್ತಿ ಜೀವನ ಕಲಿಯುವ ಸ್ಥಳವಲ್ಲ

ಇದರ ಮುಂದಿನ ಹಂತವೇ ಪ್ರೌಢ ವಿದ್ಯಾಭ್ಯಾಸ ಅದು ವಿಶ್ವವಿದ್ಯಾಲಯಗಳ ರಂಗ; ಶಾಸ್ತ್ರೀಯ ಇಲ್ಲವೆ ವೃತ್ತಿ, ಶಿಕ್ಷಣದ ರಂಗ. ಇಲ್ಲಿಗೆ ಬರುವ ತರುಣನು ತನ್ನ ಆಳತೆ, ತೂಕ, ಸಾಮರ್ಥ್ಯವನ್ನು ಕಂಡುಕೊಂಡಿರಬೇಕು. ಅವನಿಗೆ ತನ್ನ ಅಭಿರುಚಿ ಗೊತ್ತಿರಬೇಕು. ಮುಂದೇನು ಮಾಡಬೇಕೆಂದು ಆತನಿರ್ಧರಿಸಬಲ್ಲನೆಂಬುದು ಅರ್ಥ. ಆದರೆ ನಮ್ಮ ದೇಶದಲ್ಲಿ ಪ್ರಾಥಮಿಕ ಶಾಲೆ, ಮಾಧ್ಯಮಿಕ ಶಾಲೆ ವಿಶ್ವವಿದ್ಯಾಲಯದೆ ಬಿ ಎ. ತನಕವೂ ಒಂದೇ ತೆರನ ಓಟ ಸಾಗಿದೆ. ವಿಶ್ವವಿದ್ಯಾಲಯದ ಏಚ್ಛಿಕ ವಿಷಯಗಳು ಕೂಡ, ಶಿಕ್ಷಣ ಕೊಡುವವರ ಇಚ್ಛೆಯನ್ನು ಹೊಂದಿಸಿದೆಯೇ ಹೊರತು, ವಿದ್ಯಾರ್ಥಿಯ ಇಚ್ಛೆಯನ್ನು ಹೊಂದಿಕೊಂಡಿಲ್ಲ. ಎಲ್ಲರೂ ಒಂದೇ ಬಗೆಯ ಸರಕಾರಿ ನೌಕರಿಗಾಗಿ ಕಾಲೇಜುಗಳಿಗೆ ಧಾವಿಸಿ ಬರುವವರು. ಆದನ್ನು ಬಿಟ್ಟರೆ ಬೇರೆ ಸ್ವತಂತ್ರ ಕ್ಷೇತ್ರ, ಉದ್ಯಮ ದೊರಕಿಸುವ ಸಂಸ್ಥೆಗಳು ನಾಡಿನಲ್ಲಿ ಸಾಕಷ್ಟು ಕಾಣಿಸುವುದಿಲ್ಲ ನಿಜಕ್ಕೂ ಖಾಸಗಿ ವ್ಯವಹಾರಅಷ್ಟು ಬಲಿತಿಲ್ಲ. ಹಾಗಿರುತ್ತಾ ವಿದ್ಯಾರ್ಥಿಯಬಿ. ಎ. ಇಲ್ಲವೆ ಎಮ್.ಎ. ಮುಗಿಸಿ, ಸರಕಾರ ಕೊಡುವ ನೌಕರಿಗೆ ಸೇರಿಕೊಳ್ಳುವುದೇ ಮುಖ್ಯ ಉದ್ದೇಶವೆನಿಸುತ್ತದೆ. ಆತ ಓದಿದ ವಿಷಯಕ್ಕೂ, ಸೇರುವ ನೌಕರಿಗೂ ಯಾವ ಸಂಬಂಧವೂ ಇರಬೇಕಿಲ್ಲ ಇಂಥ ಡೊಂಬರಾಟದ ಕ್ರಮವನ್ನು — ದಾಟಿ, ಅಧಿಕಾರಕ್ಕೆ ಬಂದವರು ಈ ಸೂತ್ರ, ನಮ್ಮ ಶಿಕ್ಷಣದ ಪುನರ್ ಯೋಜನೆ ನಡೆಸಲು ಕೊರಬರುವುದರಿಂದಲೇ, ಭವಿಷ್ಯತ್ ಯಾವ ಆಸೆಯನ್ನು ಹಿಡಿಯುವುದೂ ಕಷ್ಟವಾಗಿದೆ.

ದೇಶದಲ್ಲಿ ಯಾವ್ಯಾವ ವೃತ್ತಿಗಳು ನಡೆದಾವು; ಯಾವ್ಯಾವುದಕ್ಕೆ ಎಷ್ಟು ಜನ ಬೇಕು; ನಮ್ಮದೇಶವ ಉತ್ಪನ್ನಗಳಿಂದ ಯಾವೆಲ್ಲ ಉದ್ಯಮಗಳೋ ಕೈಗಾರಿಕೆಗಳೂ ಸಾಧ್ಯ, ಅವು ಎಷ್ಟರಮಟ್ಟಿಗೆ ಆರ್ಥಿಕ ಸ್ವಾಯತ್ತತೆಯನ್ನು ಗಳಿಸಬಲ್ಲವು—ಅವು ಇಂದು ಕೇಗಿವೆ, ನಾಳೆ ಕೇಗಾಗಬೇಕು—ಇಷ್ಟೆಲ್ಲ ಸಂಗತಿಗಳನ್ನು ಎಣಿಕೆ ಹಾಕಿ,ವೃತ್ತಿಶಿಕ್ಷಣವನ್ನು ನಾಡಿನ ಅವಶ್ಯಕತೆಗೆ ತಕ್ಕಂತೆ ರೂಪಿಸಬೇಕಾಗಿರುವಾಗ—ನಾವು ಸ್ವಪ್ನೋದ್ದೇಶವಿಲ್ಲಿ, ಪ್ರಚಿತ ರೂಪವಿಲ್ಲವೆ, ವೃತ್ತಿ ಶಿಕ್ಷಣಾಲಯಗಳಗಳನ್ನು ತೆರೆಯುತ್ತಿದ್ದೇವೆ. ನಮ್ಮ ಅವಶ್ಯಕತೆಗೂ, ಅದರ ರೂಪಕ್ಕೂ, ನಮ್ಮ ಶಿಕ್ಷಣಾಲಯಗಳಿಗೂ ಸಂಬಂಧವಿಲ್ಲ ಶಿಕ್ಷಣ ಸಂಸ್ಥೆಗಳಲ್ಲಿರುವ ಅವಕಾಶಕ್ಕೂ ವಿದ್ಯಾರ್ಥಿಗಳ ಸಂಖ್ಯೆಗೂ ಸಂಬಂಧವಿಲ್ಲ. ವಿದ್ಯಾರ್ಥಿಯ ಯೋಗ್ಯತೆಗೂ ಶಿಕ್ಷಣಾವಕಾಶಕ್ಕೂ ಸಂಬಂಧವಿಲ್ಲ. ಇವುಗಳೊಳಗೆ ಎಷ್ಟೆಷ್ಟು ವಿಸಂಗತಿಯೋ, ಅಷ್ಟಷ್ಟು ಸುಧಾರಣೆಯಾಯಿತೆಂದು—ನಾವು ತಿಳಿದುಕೊಳ್ಳುವಂತಿದೆ.

ಪರಿಸ್ಥಿತಿಯು ಇಷ್ಟೆಲ್ಲ ನಿರಾಶಾದಾಯಕವಾಗಿದ್ದರೂ ಸಂಬಂಧಿಸಿದ ಕುಲಪತಿಗಳ, ಅಧಿಕಾರಿಗಳ ಆಡಂಬರದಮಾತುಗಳಿಗೆ, ಅವಾಸ್ತವಿಕ ಯೋಜನೆಗಳಿಗೆ ತುದಿ ಮೊದಲಿಲ್ಲ "ಬದಲಾವಣೆ, ಮಾಡಿದರೆ ಸುಧಾರಣೆಯಾಯಿತೆನ್ನುತ್ತಿದ್ದೇವೆ ನಾವು ನಡೆಯಿಸುವ ಯಾವ ಪ್ರಯೋಗವೇ ಇರಲಿ — ಅದರ ಸರಿಣಾಮ, ಸಾಫಲ್ಯಗಳನ್ನು ತೂಗಿ ನೋಡುವ ತನಕ, ನಮ್ಮ ಅವಸರ ತಡೆಯಬೇಕು. ಒಂದು ಪ್ರಯೋಗವನ್ನು ಸಾರ್ವತ್ರಿಕವಾಗಿ ಮುಂದುವರಿಸುವ ಮೊದಲು, ಜಡಿಷ್ಟು ಸಫಲವಾಗಿದೆ; ಉದ್ದೇಶ ಸಾಧಿಸಿದೆ—ಎಂದು ತೂಗಿ ನೋಡುವ ಪರೀಕ್ಷೆಬೇಕು. ನಾಡಿನ ಸಾಕಷ್ಟು ತರುಣ ತರುಣಿಯರನ್ನು ನಮ್ಮ ಮುಗ್ಧ ಯೋಜನೆಗಳಿಗೆ ಬಲಿ ಕೊಟ್ಟು, ಅನಂತರ 'ಈ ಶಿಕ್ಷಣ ಪದ್ಧತಿ ಸಮನಾಗಿಲ್ಲ ಎಂದು ಅಳಬೇಕಾದ ಪ್ರಸಂಗವನ್ನು ಕಂದುಕೊಳ್ಳಬಾರದು. ಕೊನೆ ಪ್ರಯೋಗಗಳಿಗೆ ನಾವು ಜಂಜಬೇಕಾಗಿಲ್ಲ ಆದರೆ ಅವುಗಳನ್ನು ನಡೆಯಿಸಿ, ತೂಲನೆ, ಪರೀಕ್ಷೆಗಳಿಗೆ ಒಳಪಡಿಸಿ—ಸಮಾಧಾನ ಕಂಡ ಬಳಿಕವೇ ಕಾರ್ಯಕ್ಷೇತ್ರವನ್ನು ಬೆಳೆಯಿಸಬೇಕು.

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3½%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK, LTD·MULKI

ಮನುಕಾಲೀನ ರಾಜ್ಯಪದ್ಧತಿ

[೪ನೇ ಪುಟದಿಂದ]

ವಾಗಿತ್ತು. ಶತ್ರುಗಳೊಡನೆ ಯುದ್ಧಮಾಡುವ ವೀರನು ಕಪಟದ ಆಯುಧಗಳಿಂದಲೂ, ಅಂಕುಶದಂತಹ ವಕ್ರಬಾಣಗಳಿಂದಲೂ, ವಿಷ ಮಿಶ್ರಿತವಾದ ಅಥವಾ ಬೆಂಕಿಯಿಂದ ಬಿಸಿಯಾದ ಆಯುಧಗಳನ್ನು ಉಪಯೋಗಿಸಬಾರದೆಂದಿತ್ತು. ಕ್ಷತ್ರಿಯನು ತಾನು ರಥದಲ್ಲಿದ್ದಾಗ ನೆಲದಲ್ಲಿದ್ದ ಶತ್ರುವನ್ನೂ, ನಮಸ್ಕರಿಸಿದವನನ್ನೂ, ಶರಣುಬಂದವನನ್ನೂ, ತಲೆ ಕೂದಲನ್ನು ಹರಡಿ ಕೊಂಡವನನ್ನೂ, ಕುಳಿತುಕೊಂಡವನನ್ನೂ, ಮರೆಹೊಕ್ಕವನನ್ನೂ ಕೊಲ್ಲಬಾರದೆಂದಿತ್ತು. ಹಾಗೆಯೇ ನಿದ್ರಿತನನ್ನೂ, ಯುದ್ಧಕ್ಕೆ ಸಿದ್ಧನಾಗದವನನ್ನೂ, ಬತ್ತಲೆಯಾಗಿರುವವನನ್ನೂ, ನಿರಾಯುಧನವನನ್ನೂ, ಯುದ್ಧ ಪ್ರೇಕ್ಷಕರನ್ನೂ, ಇನ್ನೊಬ್ಬನೊಡನೆ ಯುದ್ಧ ಮಾಡುತ್ತಿದ್ದವನನ್ನೂ ಕೊಲ್ಲುತ್ತಿರಲಿಲ್ಲ. ಒಮ್ಮೆ ಯುದ್ಧರಂಗದಲ್ಲಿ ನೀಲೆ ಹೇಳಿದ ವ್ಯಕ್ತಿಯೊಂದರ ಕೂಲೆ ಅಥವಾ ಹಾನಿಯಾದರೆ ಎಲ್ಲರೂ ಆ ಕೊಲೆಪಾತಕಿಯನ್ನು ಒಳಿತಾಗಿ ಛೀಗುಟ್ಟುತ್ತಿದ್ದರು. ಇನ್ನು ಗಾಯಾಳುಗಳನ್ನೂ, ಪಾಜಿತರನ್ನೂ, ಭೀತರನ್ನೂ ಸಹಕೊಲ್ಲಲು ನಿಷೇಧವಿತ್ತು.

ಪರಾಜಿತನಾದ ಶತ್ರುವಿನ ರಥ ಕುದುರೆ ಆನೆ ವಕ್ರ ಧನಧಾನ್ಯ ಪಶು ಸ್ತ್ರೀ ಮತ್ತು ಚಿನ್ನ ಬೆಳ್ಳಿಗಳು, ಜಯಶಾಲಿಯಾದ ರಾಜನನ್ನೇ ಸೇರುತ್ತಿದ್ದುವು. ತಾಮ್ರ ಮೊದಲಾದ ವಸ್ತುಗಳು ಅವನ್ನು ಜಯಿಸಿ ತಂದವನಿಗೇ ಸೇರಬೇಕೆಂದಿತ್ತು. ರಾಜನು ತಾನು ಜಯಿಸಿ ತಂದ ಹಣವನ್ನು ಶುರಕ್ಷಿತವಾಗಿಡುತ್ತಿದ್ದನಲ್ಲದೆ, ವ್ಯಾಪಾರಾದಿಗಳಿಂದ ವೃದ್ಧಿಪಡಿಸುತ್ತಿದ್ದನು.

ಮನುವಿನ ಕಾಲದ ಯುದ್ಧದ ಕ್ರಮವೂ ಇಂದಿಗಿಂತ ಭಿನ್ನವಾಗಿತ್ತು. ಆಗ ವ್ಯೂಹಗಳನ್ನೊಡ್ಡಿ ಕಾದಾಡುತ್ತಿದ್ದರು. ಶತ್ರುವಿನ ಇದಿರಾಗಿ ಹೋಗುವಾಗ ದಂಡ ವ್ಯೂಹವು ಅಂದರೆ ದಂಡದ ಆಕಾರದಲ್ಲಿ ಸೇನೆಯನ್ನು ನಿಲ್ಲಿಸಿ ಮುಂದೆ ಬಲಾಢ್ಯ ಕ್ಷತ್ರಿಯನೂ, ಮಧ್ಯದಲ್ಲಿ ರಾಜನೂ, ಹಿಂದೆ ಸೇನಾಪತಿಯೂ ಎರಡು ಪಕ್ಕಗಳಲ್ಲಿ ಆನೆಗಳೂ, ಅವುಗಳ ಕತ್ತಿರ ಕುದುರೆಗಳೂ, ಆ ಮೇಲೆ ಕಾಲಾಳುಗಳನ್ನು ನಿಲ್ಲಿಸುವುದು. ಒಂದು ಪದ್ಧತಿಯಾಗಿತ್ತು. ಸೇನೆಗೆ ಎಲ್ಲಾ ಕಡೆಯಿಂದ ಶತ್ರುಭಯವಿದ್ದಾಗ ಈ ದಂಡ ವ್ಯೂಹದಲ್ಲಿ ಸೇನೆಯನ್ನು ನಿಲ್ಲಿಸಿ ಕಾದುತ್ತಿದ್ದರು. ಶಕಟ ವ್ಯೂಹವೆಂದರೆ ಮುಂದೆ ಸೂಜಿಯಂತಿದ್ದು ಹಿಂದೆ ವಿಶಾಲವಾದ ವ್ಯೂಹ. ಇದು ಹಿಂದಿನಿಂದ ಶತ್ರುಗಳ ಪೀಡೆಯು ಹೆಚ್ಚಿದಾಗ ಸೇನೆಯು ಈ ವ್ಯೂಹದಲ್ಲಿ ನಿಂತು ಶತ್ರುಗಳನ್ನು ಹಿಣಿಯುತ್ತಿತ್ತು. ವರಾಹ ವ್ಯೂಹವೆಂದರೆ ಸೇನೆಯು ಮುಂಭಾಗ ಮತ್ತು ಹಿಂಭಾಗವು ಸೂಕ್ಷ್ಮವಾಗಿದ್ದು ಮಧ್ಯಭಾಗವು ಅತಿ ವಿಶಾಲವಾಗಿರುವುದು, ಗರುಡ ವ್ಯೂಹವೆಂದರೆ ಸೈನ್ಯವು ಹಿಂದೆ ಮುಂದೆ ಸೂಕ್ಷ್ಮವಾಗಿದ್ದು ನಡುವೆ ವಿಶಾಲವಾಗಿರುವುದು. ಶತ್ರುಗಳ ಭಯವು ಎರಡು ಮಗ್ಗುಲಲ್ಲಿರುವಾಗ ವರಾಹ ಮತ್ತು ಗರುಡ ವ್ಯೂಹದಲ್ಲಿ ಸೇನೆಯನ್ನು ಮುನ್ನಡೆಸುತ್ತಿದ್ದರು. ಮಕರ ವ್ಯೂಹವು ಮುಂದೆ ವಿಶಾಲವಾಗಿದ್ದು ಮಧ್ಯದಲ್ಲಿ ಸೂಕ್ಷ್ಮವಾಗಿರುವುದು, ಹಿಂದೆ ಮುಂದೆ ಶತ್ರುಗಳ ಒತ್ತಡವು ಅಧಿಕವಾಗಿದ್ದರೆ ಮಕರ ವ್ಯೂಹದಲ್ಲಿ ಸೈನ್ಯವನ್ನು ಮುಂದರಿಯಿಸುತ್ತಿತ್ತು. ಸೂಚಿ ವ್ಯೂಹದಲ್ಲಿ ಇರುವೆ ಸಾಲಿನಂತೆ ಹಿಂದೆ ಮುಂದೆ ಗುಂಪು ಸೇರಿದ ಸೇನೆಯಿದ್ದು, ಮುಂಭಾಗದಲ್ಲಿ ವೇಗವಾಗಿ ಚಲಿಸಬಕ್ಕ ಪರಾಕ್ರಮಿಗಳಿರುತ್ತಿದ್ದರು. ರಾಜನು ಪದ್ಮ ವ್ಯೂಹದಿಂದಲೇ ಸೇನೆಯನ್ನು ಪಟ್ಟಣದ ಹೊರಗೆ ಕೊಂಡು ಹೋಗುತ್ತಿದ್ದನು. ಶತ್ರು ಭಯವಿರುವ ದಿಕ್ಕಿನಲ್ಲಿ ಸೈನ್ಯವನ್ನು ವಿಸ್ತರಿಸಿ ಮಧ್ಯದಲ್ಲಿ ಜಯಿಸಲು ಅಪೇಕ್ಷಿಸಿದ ರಾಜನಿಗೆ ಪದ್ಮ ವ್ಯೂಹವು ಅನುಕೂಲವಾಗಿತ್ತು. ಈ ಎಲ್ಲಾ ವ್ಯೂಹಗಳ ಭೇದನವನ್ನು ಕುರಿತು ಅಂದಿನ ವೀರರಿಗೆ ಕ್ರಮಬದ್ಧವಾದ ಶಿಕ್ಷಣವು ದೊರಿಯುತ್ತಿತ್ತು.

ಅಂದು ಚತುರಂಗಗಳ ಹತ್ತು ಸೇನೆಗಳ ಅಧಿಕಾರಿಯನ್ನು ಪತ್ತಿನಾಯಿಕ ಎಂದು ಕರೆಯುತ್ತಿದ್ದರು. ಇಂತಹ ಹತ್ತು ಪತ್ತಿಗಳ ಅಧಿಕಾರಿಯೇ ಸೇನಾಪತಿ. ಇಂತಹ ಸೇನಾಪತಿಗಳ ಮೇಲಧಿಕಾರಿಯೇ ಬಲಾಧ್ಯಕ್ಷ. ಯುದ್ಧ ಮಾಡುತ್ತಿರುವಾಗ ಸೇನೆಯು ಸೂಚೀವ್ಯೂಹದಲ್ಲಿ ಅಥವಾ ವಜ್ರವ್ಯೂಹದಲ್ಲಿ ನಿಂತು ಯುದ್ಧ ಮಾಡಬೇಕೆಂದಿತ್ತು. ಸೇನೆಯನ್ನು ಮೂರು ಪಾಲು ಮಾಡಿ ನಿಲ್ಲಿಸುವುದೇ ವಜ್ರ ವ್ಯೂಹ. ಆಗ ಸಮತಟ್ಟಾದ ಭೂಪ್ರದೇಶಗಳಲ್ಲಿ ರಥ ಕುದುರೆಗಳ ಸಹಾಯದಿಂದಲೂ, ಹೆಚ್ಚು ನೀರುಳ್ಳ ಪ್ರದೇಶದಲ್ಲಿ ಹಡಗು ಮತ್ತು ಆನೆಗಳ ನೆರವಿನಿಂದಲೂ, ಮುಳ್ಳುಗಳಿಂದ ತುಂಬಿದ ಪ್ರದೇಶದಲ್ಲಿ ಬಿಲ್ಲು ಬಾಣಗಳಿಂದಲೂ, ಹಳ್ಳಮುಳ್ಳು ಕಲ್ಲುಗಳ ಪ್ರದೇಶದಲ್ಲಿ ಖಡ್ಗ ಈಟಿ ಮೊದಲಾದ ಆಯುಧಗಳಿಂದಲೂ ಯುದ್ಧ ಮಾಡುತ್ತಿದ್ದರು.

ಮನು ಮತ್ತು ಭೃಗು ಋಷಿಗಳು ಬ್ರಹ್ಮಾವರ್ತದ ಪ್ರಜೆಗಳೆಂದು ತೋರುತ್ತದೆ. ಹಿಂದೂದೇಶವಿಲ್ಲೇ ಸರಸ್ವತೀ ಮತ್ತು ದೃಷದ್ವತೀ ನಡುವಣ ಪ್ರದೇಶವೇ ಬ್ರಹ್ಮಾವರ್ತ (ಬ್ರಾಹ್ಮಣರು ಇಲ್ಲಿ ಯಜ್ಞಾಗಲೂ ಇರುವರು)ವೆಂದೂ ಆಲ್ಲಿಯ ಜನರ ಆಚಾರವೇ ಸದಾಚಾರವೆಂದೂ ಅವರು ಹೇಳುತ್ತಾರೆ. ಆರ್ಯಾವರ್ತಕ್ಕೆ ಬ್ರಹ್ಮಾವರ್ತದ ಸ್ಥಾನವಿಲ್ಲ ಆ ದಿನಗಳಲ್ಲಿ ಜಿತೇಂದ್ರಿಯಕನ ಮತ್ತು ಮನೋನಿಗ್ರಹಕ್ಕೆ ತುಂಬಾ ಗೌರವ ಸಲ್ಲುತ್ತಿತ್ತು! ಜನ್ಮತಃ ಬ್ರಾಹ್ಮಣನಾದವನಿಗಿಂತ ಬ್ರಹ್ಮತೇಜಸ್ಸನ್ನು ಪಡೆದ ಸಪ್ತರ್ಷಿಯನಿಗೆ ನಮಸ್ಕರಿಸಲೆಬಾಗುತ್ತಿದ್ದರು. ಹತ್ತು ಉಪಾಧ್ಯಾಯರಿಗಿಂತ ಒಬ್ಬ ಆಚಾರ್ಯನೂ ನೂರು ಆಚಾರ್ಯರಿಗಿಂತ ತಂದೆಯೂ, ಸಹಸ್ರ ತಂದೆಗಳಿಗಿಂತ ತಾಯಿಯೂ ಪೂಜ್ಯಳಾಗಿದ್ದಳು ಇದರಿಂದ ಆಗ ಗುರುಹಿರಿಯರಿಗೆ ತಲೆಬಾಗುವುದೂ, ಅವರ ಹಿತೋಪದೇಶದಂತೆ ಜೀವನದಲ್ಲಿ ಮುನ್ನಡೆಯುವುದೂ ಸಾಮಾನ್ಯ ವಿಚಾರವಾಗಿತ್ತು.

ಬ್ರಾಹ್ಮ ಮೊದಲಾದ ಎಂಟು ವಿವಾಹಗಳಲ್ಲಿ ಆಗ ಪ್ರಚಾರದಲ್ಲಿದ್ದು ಬ್ರಾಹ್ಮ ವಿವಾಹವು (ವಿದ್ಯಾವಂತನೂ ಶೀಲವಂತನೂ ಆದವರನ್ನು ತಾನಾಗಿ ಕರೆದು ಉತ್ತಮ ವಸ್ತ್ರಾಲಂಕಾರಗಳಿಂದ ಪೂಜಿಸಿ ಅಲಂಕೃತಳಾದ ಕನ್ಯೆಯನ್ನು ಅತನಿಗೆ ದಾನ ಮಾಡುವುದು) ಉತ್ತಮವೆಂದೂ, ರಾಕ್ಷಸ ಸೈಶಾಚ ವಿವಾಹಗಳು (ಬಲಾತ್ಕಾರದಿಂದ ಕನ್ಯೆಯನ್ನು ಅಪಹರಿಸುವುದು ರಾಕ್ಷಸ ವಿವಾಹ. ನಿದ್ರಿಸುತ್ತಿರುವ ಅಥವಾ ಎಚ್ಚರ ತಪ್ಪಿರುವ ಕನ್ಯೆಯ ಸಂಸರ್ಗವೇ ಪೈಶಾಚ ವಿವಾಹ) ಕನಿಷ್ಠವೆಂದೂ ಧಾರಿಸಲ್ಪಡುತ್ತಿದ್ದುವು. ಆಗ ಕನ್ಯಾ ವಿಕ್ರಯವನ್ನೂ, ಸ್ತ್ರೀ ಧನ ಸ್ವೀಕಾರವನ್ನೂ ನಿಷಿದ್ಧವೆಂದು ತಿಳಿದಿದ್ದರು.

ಆ ಸಮಯದಲ್ಲಿ ಸಮಸ್ತರೂ ಮಾಂಸಾಹಾರವನ್ನು ಮಾಡುತ್ತಿದ್ದರೆಂದು ತೋರುತ್ತದೆ. ಪಾರಾವಾರ, ಹಮ್ಮು, ಗಂಡು ಗುಬ್ಬಿ, ನೀರು ಕೋಳಿ, ಹಂಸ, ಚಕ್ರವಾಕ, ಊರು ಕೋಳಿ, ನೀರು ಕಾಗೆ, ಗಿಳಿ ಮೊದಲಾದ ಪಕ್ಷಿಗಳು ಆಹಾರಕ್ಕೆ ಅಯೋಗ್ಯವೆನ್ನಿಸಿದ್ದುವು. ನೀರುಳ್ಳಿ, ಬೆಳ್ಳುಳ್ಳಿಗಳು ನಿಷೇಧಿಸಲ್ಪಟ್ಟಿದ್ದುವು. ಕೆಲವು ಜಾತಿಯ ಮೂಗು ಗಳನ್ನು ತಿನ್ನಬಾರದೆಂದು ಸೂಚಿಸಿದ್ದರೂ ಪಾಠೀನನೆಂಬ ಮೀನನ್ನೂ, ಕೆಂಪು ಮೀನನ್ನೂ, ರಾಜಮೀನನ್ನೂ ಹವ್ಯಕವ್ಯಗಳಿಗೆ ಬಿಟ್ಟು ಉಳಿದ ಕಾಲಗಳಲ್ಲಿ ತಿನ್ನಬಹುದೆಂದಿತ್ತು. ಮುಳ್ಳುಹಂದಿ, ಉಡುಗಳು ಆಮೆಮೊಲಗಳು ತಿನ್ನಲು ಯೋಗ್ಯವಾದ ಆಕಾರವಸ್ತುವೆಂದು ಭಾವಿಸಿದ್ದರು. ಯಜ್ಞದಲ್ಲಿ ಮಾತ್ರ ಪಶುವಧೆಯು ದೋಷವಲ್ಲವೆನ್ನುವ ನಂಬಿಕೆ ಇತ್ತು. ಸ್ತ್ರೀಯರು ಯಾವಾಗಲೂ ಸ್ವತಂತ್ರರಾಗಿ ವರ್ತಿಸಬಾರದೆಂದು ಮನುವಿನ ಅಭಿಪ್ರಾಯವಿದೆ.

ರಾಜನು ಅನಾಥ ಬಾಲಕರ ಪಾಲಿನ ದ್ರವ್ಯವನ್ನು, ಆತನು ಬ್ರಹ್ಮಚರ್ಯವನ್ನು ಮುಗಿಸಿ ಸ್ನಾತಕನಾಗಿ ಗುರುಕುಲದಿಂದ ಹಿಂದಿರುಗುವವರೆಗೂ ಅಥವಾ ಬಾಲ್ಯವು ಕಳೆಯುವವರೆಗಾದರೂ ರಕ್ಷಿಸಿಕೊಂಡಿರಬೇಕಾಗಿತ್ತು. ಬಂಜೆಯರ ರೋಗಿಷ್ಠರಾದ ಸ್ತ್ರೀಯರ, ವಿಧವೆಯ ಸ್ವಸ್ತನ್ನೂ ರಾಜನೇ ಕಾಪಾಡಬೇಕೆತ್ತು. ಲಂಚವು ಆ ಕಾಲದಲ್ಲಿದ್ದರೂ ಅಸರೂಪವಾಗಿದ್ದು ನಿಷೇಧಿಸಲ್ಪಟ್ಟಿತ್ತು. ವಾವಿ ಪ್ರತಿವಾದಿಗಳ ವ್ಯವಹಾರದಲ್ಲಿ ಸಾಕ್ಷ್ಯವು ಜಗತ್ಯವಾಗಿತ್ತು. ನ್ಯಾಯಾಧಿಪತಿಯು ಬ್ರಾಹ್ಮಣನನ್ನು ಕುರಿತು 'ಹೇಳು ಎಂದೂ, ಕ್ಷತ್ರಿಯನೊಡನೆ 'ಸತ್ಯವನ್ನು ಹೇಳು ಎಂದೂ, ವೈಶ್ಯನನ್ನು ಕುರಿತು ಸುಳ್ಳು ಹೇಳಿದೆಯಾದರೆ ಗೋ—ಬೀಜ—ಸುವರ್ಣಾಗಳನ್ನು ಅಪಹರಿಸಿದ ಪಾಪವು ತಗಲುವುದರಿಂದ ಸತ್ಯವನ್ನೇ ಹೇಳು ಎಂದೂ, ಶೂದ್ರನೊಡನೆ 'ಬ್ರಾಹ್ಮಣ ಮತ್ತು ಸ್ತ್ರೀಜನರ ವಧೆಮಾಡಿದ ಪಾಪಗಳು ಸುಳ್ಳು ಹೇಳಿದರೆ, ನಿನಗೆ ಪ್ರಾಪ್ತವಾಗುವುದು. ಆದಕಾರಣ ಸತ್ಯಹೇಳು, ಎಂದೂ ಹೇಳಿದರೆ ಸತ್ಯವಾದ ಉತ್ತರವೇ ದೊರೆಯುತ್ತಿತ್ತು.

ಆ ದಿನಗಳಲ್ಲಿ ಬಡ್ಡಿಯಿಂದ ಜೀವಿಸುವವರನ್ನು ವಾರ್ಧುಷಿಕರೆನ್ನುತ್ತಿದ್ದರು. ಆಗ ಅಡವಿಟ್ಟು ಪಡೆಯುವ ಸಾಲಕ್ಕೆ ನೂರಕ್ಕೆ ಒಂದೂಕಾಲರಂತೆ ಬಡ್ಡಿಯು ಪ್ರಚಾರದಲ್ಲಿತ್ತು. ಹಾಗೆಯೇ ಅಡವಿಡದೆ ಪಡೆದ ಸಾಲಕ್ಕೆ ಬ್ರಾಹ್ಮಣರು ನೂರಕ್ಕೆ ಎರಡರನ್ನೂ, ಕ್ಷತ್ರಿಯನು ಮೂರನ್ನೂ, ವೈಶ್ಯನು ನಾಲ್ಕನ್ನೂ, ಶೂದ್ರನು ಐದನ್ನೂ ಬಡ್ಡಿಯಾಗಿ ತಿಂಗಳಿಗೆ ತೆರುವ ಕ್ರಮವಿತ್ತು. ಈ ಬಡ್ಡಿಯು ಸಾಲಕೊಡುವಾಗ ನಿರ್ಣಯಿಸಿದುದಕ್ಕಿಂತ ಇಮ್ಮಡಿಯನ್ನು ಮೀರಬಾರದಿತ್ತು. ಆಗ ನೂರಕ್ಕೆ ಎರಡರಂತಿರುವ ಬಡ್ಡಿಗೆ 'ಕೃತಾ' ಎಂದೂ, ಅದಕ್ಕೆ ಮೀರಿದ ಬಡ್ಡಿಗೆ 'ಅಕೃತಾ' ಎಂದೂ ಹೆಸರಿತ್ತು. ಚಕ್ರವೃದ್ಧಿ (ಬಡ್ಡಿಯ ಬಡ್ಡಿ) ಕಾಲವೃದ್ಧಿ (ಇಮ್ಮಡಿಗಿಂತ ಹೆಚ್ಚು ಪಡೆಯುವುದ), ಕಾಯಿಕಾ (ದಿನಗಳನ್ನು ಲೆಕ್ಕಮಾಡಿ ದಿನ ದಿನದ ಬಡ್ಡಿಯನ್ನು ಪಡೆಯುವುದು) ಕಾರಿಕಾ (ಆತ್ಮಾಲದಲ್ಲಿ ಅಧಮವರ್ಣನು ನಿರ್ವಾಹವಿಲ್ಲದೆ ಇಷ್ಟು ಬಡ್ಡಿ ಕೊಡುವೆನೆಂದು ತನ್ನಿಚ್ಛೆಯಿಂದ ಒಪ್ಪಿಕೊಂಡ ಬಡ್ಡಿ)-ಈ ನಾಲ್ಕು ತರದ ಬಡ್ಡಿಯು ಆಗ ನಿಷೇಧಿಸಲ್ಪಟ್ಟಿತ್ತು.

ಆಗ ಅಣ್ಣತಮ್ಮಂದಿರ ವಿಭಾಗ ಕ್ರಮವು ವಿಚಿತ್ರವಾಗಿತ್ತು. ಸಹೋದರರಲ್ಲಿ ಆಗ ಹಿರಿಯನಿಗೆ ದಾಯಭಾಗದಲ್ಲಿ ಉತ್ತಮವಾದ ಇಪ್ಪತ್ತನೆಯ ಒಂದಂಶವನ್ನೂ, ಮಧ್ಯಮನಿಗೆ ಅದರ ಅರ್ಧವನ್ನೂ, ಕನಿಷ್ಕನಿಗೆ ಉದರ ನಾಲ್ಕನೆಯ ಒಂದಂಶವನ್ನೂ ತೆಗೆದಿಟ್ಟು, ಉಳಿದುದನ್ನು ಸಮವಾಗಿ ಹಂಚಿಕೊಳ್ಳಬೇಕಿತ್ತು. ಸಹೋದರಿಯರಿಗೆ ಸಹೋದರರು ವಿಭಾಗಿಸಿಕೊಂಡ ದ್ರವ್ಯದ ನಾಲ್ಕನೆಯ ಒಂದಂಶವನ್ನು ಕೊಡಬೇಕೆಂದಿತ್ತು.

ಮನುವಿನ ಕಾಲದಲ್ಲಿ ಧರ್ಮ, ನ್ಯಾಯ, ನೀತಿಗಳ ಸ್ವಭಾವತ್ವ ಎಲ್ಲೆಲ್ಲಿಯೂ ಕಾಣಬರುತ್ತಿದ್ದರೂ, ಅನ್ಯಾಯ ಅಧರ್ಮಗಳು ಇಲ್ಲದಿರಲಿಲ್ಲ. ಆಗ ಕಳ್ಳತನ, ವ್ಯಭಿಚಾರ, ಸುರಾಪಾನಗಳಿದ್ದಂತೆ ತೋರುತ್ತದೆ. ಈಗಿನ ಕಾಲದಲ್ಲೂ ಪರಿಶಾಂತಪಾಪಂ, ಎನ್ನಬೇಕಾದ ಪಾಪ ಕೃತ್ಯಗಳೂ ಆಗ ದೃಷ್ಟಿಗೆ ಗೋಚರಿಸುತ್ತಿದ್ದುವು ಇಂಥವುಗಳಲ್ಲಿ ಕೆಲವು ಪಾಪವೆಂದು ಪರಿಗಣಿಸಲ್ಪಟ್ಟಿರಲಿಲ್ಲ. ಮೃತನಾದ ಅಣ್ಣನ ಹೆಂಡತಿಯು ಮಕ್ಕಳಿಲ್ಲದ ವಳಾಗಿದ್ದರೆ ತಮ್ಮನು ಮಕ್ಕಳ ಬಯಕೆಯಿಂದು ಆಕೆಯನ್ನು ಋತುಕಾಲದಲ್ಲಿ ಸೇರಬಹುದೆಂದಿತ್ತು. ಇಂತಹನಿಗೆ ವಿಧಿಷೂ ಪತಿಯೆಂಬ ಹೆಸರಿತ್ತು. ಸಂತತಿಯಿಲ್ಲದವಳು ಪತಿಯಾಜ್ಞೆಯಂತೆ ಸಂತತಿಗಾಗಿ ಪತಿಯು ಸಹೋದರ ಅಥವಾ ಸಪಿಂಡ (ಶತ್ರು ದಿನದ ಜಾತಕವಿರುವ ಕಟುಂಬಿಕನು) ನನ್ನು ಸೇರಬಹುದೆಂದಿತ್ತು. ಒಂದೇ ಒಂದು ಸಂತತಿಗಾಗಿ ಮಾತ್ರವೆನ್ನತಿಂದ, ದೇಹಕ್ಕೆ ತುಪ್ಪಹಚ್ಚಿಕೊಂಡು ವಿಧವಾಗಮನವೂಡಿದರೂ ದೋಷವಿಲ್ಲವೆಂದಿದೆ! ಇಷ್ಟಲ್ಲದೆ ಕುಂಡಗೋಲಕರ (ಕುಂಡ=ಗುಂಡನಿರುವಾಗ ವ್ಯಭಿಚಾರದಿಂದ ಹುಟ್ಟಿದವ, ಗೋಲಕ, ವಿಧವೆಯಲ್ಲಿ ವ್ಯಭಿಚಾರದಿಂದ ಹುಟ್ಟಿದವ)

(೨೭ನೇ ಪುಟನೋಡಿರಿ)



ಪ್ರಜಾಪ್ರಭುತ್ವದಲ್ಲಿ ಆಡಳಿತ ದಕ್ಷತೆ

(೩ನೇ ಪುಟದಿಂದ)

ಸುತ್ತಿದ್ದೇವೆಯೇ ಇಲ್ಲ—ಈ ದೃಷ್ಟಿಯೇ ಮೂಡಿಲ್ಲ! ಮೂಡಲು ಅವಕಾಶವನ್ನು ಕಲ್ಪಿಸುತ್ತಲೂ ಇಲ್ಲ! ಇದು ಗಾಂಧಿಯು ವರನಾಡಿನ ಗೌರವಕ್ಕೆ ತಕ್ಕದ್ದಾಗುವುದೆ? ಭಾರತೀಯ ಸಂಸ್ಕೃತಿಗೆ ಭೂಷಣವೆ?

ತತ್ವಜ್ಞಾನವು ಜ್ಞಾನ ಸಂಗ್ರಹದ ಸಾರಭೂತ ಮಾರ್ಗ; ಜೀವನದ ಕಲೆ, ಕಾಯಿದೆ ಎಂದೂ ಅದಕ್ಕೆ ಹೆಸರಿದೆ ಈ ಅರ್ಥದಲ್ಲಿ ಆಡಳಿತ ಜ್ಞಾನವೇ ಪರಮ ತತ್ವಜ್ಞಾನವೆನ್ನಬಹುದು. ತಲೆಯಲ್ಲಿ ಜ್ಞಾನಗಳ ಸುವ್ಯವಸ್ಥಾಪನೆ, ಹೃದಯದಲ್ಲಿ ಭಾವನೆಗಳ ಸಮನ್ವಯ, ವರ್ತನೆಯಲ್ಲಿ ನ್ಯಾಯಾರ ಸೌಂದರ್ಯದ ಸಂಪಾದನೆಗಳು ಆಡಳಿತ ನೀತಿಯಿಲ್ಲವೆ ಆಗಲಾರವು. ಸಹಕೃತ ಕಾರ್ಯಗಳ ಯಶಸ್ಸಿಗೆ ಯಜಮಾನಿಕೆಯು ದಕ್ಷತೆಯೇ ಪ್ರಧಾನ ಕಾರಣ. ಸೈನಿಕರಿಗಿಂತ ಸೇನಾಪತಿಗೆ ಎಂದಿನಿಂದಲೂ ಅಗ್ರಸ್ಥಾನ ದೊರೆತಿರುವುದರ ಅರ್ಥ ಇದೇ.

ಸಂಘಟನೆಯಿಲ್ಲದೆ ಯಾವ ಘಟನೆಯೂ ಸಂಭವಿಸದು. ಆದುದರಿಂದ ಆಡಳಿತದಲ್ಲಿ ಸೂಕ್ಷ್ಮ ದೃಷ್ಟಿಯಿಂದ ಶಕ್ತಿಗಳನ್ನು, ಕೌಶಲಗಳನ್ನು, ಸಾಮಗ್ರಿಗಳನ್ನು, ವ್ಯಕ್ತಿಗಳನ್ನು ಸುಸಂಬದ್ಧವಾಗಿ ಸಂಘಟಿಸುವ ಕೌಶಲ ಆಡಳಿತದ ತಂತ್ರಸಾರ. ಇಂಥ ಕ್ರಮಬಂಧವನ್ನು ರೂಪಿಸಲು, ನಮ್ಮ ಯಾವ ಕಚೇರಿಯೂ ಕಾರ್ಯಾಲಯವೂ ಆಫೀಸೂ ಸಂಸ್ಥೆಯೂ ಸಂಘವೂ ಜಾಗೃತ ಪ್ರಯತ್ನವನ್ನು ಮಾಡುತ್ತಿಲ್ಲ. ಕುತಿ ಕಂಡಂತೆ ಆಜ್ಞೆ ಕೊಡುವ ಕೆಲವರ ಕುತಾಲು ತೋಘಗಳನ್ನುಳಿದರೆ ಅಂಥ ಚಿಕಿತ್ಸಕ ಬುದ್ಧಿ ಇನ್ನೆಲ್ಲೂ ಕಂಡು ಬರುತ್ತಿಲ್ಲ. ಅಂಗ್ಲ ಅಪ್ಪ ಬೆಳೆಸಿದ ಅಲವ ಮಕ್ಕೆ ಆಡಳಿತಗಾರ ಮಗನಿಂದು ನೇಣು ಹಾಕಿಕೊಂಬಷ್ಟು ನಕಲುಗಾರನಾಗುತ್ತಿದ್ದಾನೆ ಜೀವನದ ಇತರ ಕ್ಷೇತ್ರಗಳಿಗಿಂತ ಆಡಳಿತ ಕ್ಷೇತ್ರದಲ್ಲಿ ಪಾಶ್ಚಾತ್ಯ ಅಂಧಾನುಕರಣ ದಿನೇ ದಿನೇ ಹೆಚ್ಚುತ್ತಿದೆ. ಅನುಕರಣ ಬೇಕು—ಆದರದು ಹೀಗೆ ಅಂಧವಾಗಿಕೂಡದು ಕತ್ತಲಿದ್ದಲ್ಲಿ ದೆವ್ವಗಳ ಉತ್ಪನ್ನವಾಗದೆ ಉಳಿದಾವೇ? ರಶಿಯ, ಚೀನ, ಜಪಾನುಗಳ ಕಾರ್ಯಕ್ಷೇತ್ರಗಳಲ್ಲಾದ ಕೆಲ ಸಿದ್ಧಿಗಳನ್ನು ಆಗೀಗ ಕೆಲವರು ವರ್ಣನೆ ಮಾಡುವುದನ್ನು ಬಿಟ್ಟರೆ ಅಲ್ಲಿಯ ಕಾರ್ಯಸಂಘಟನಾ ಪದ್ಧತಿಯನ್ನು ಪರೀಕ್ಷಾರ್ಥವಾಗಿ ಯಾದರೂ ಪ್ರಯೋಗಕ್ಕೆ ನಮ್ಮ ದೇಶ ತರುತ್ತಿದೆಯೇ? ಇಮ ಸ್ಪರ್ಧೆಯ ಲಕ್ಷಣವೆಂದು ಯಾರೂ ಹೇಳಲಾರರು ನಾವು ಕಲಿಯುತ್ತಿರುವ ಕ್ರಮವನ್ನೆಣಿಸಿದರೆ 'Nothing in education is so astonishing as the amount of ignorance it, accumulates in the form of inert facts— ಜಡ ವಸ್ತು ಜ್ಞಾನದ ರೂಪದಲ್ಲಿ ಶಿಕ್ಷಣವು ಅಜ್ಞಾನವನ್ನು ರಾಶಿ ಹಾಕುವುದರಷ್ಟು, ಆಶ್ಚರ್ಯಕರವಾದುದು ಅವರಲ್ಲಿ ಬೇರೊಂದಿಲ್ಲ" ಎಂದ ಹೆನ್ರಿ ಆದಮ್ಸನ ಮಾತು ನೆನಪಾಗದಿರದು.

ಗಾಂಧಿಯವರ ಸಚರ್ಮತಿ ಆಶ್ರಮದ ಶಿಸ್ತು, ಕರ್ತವ್ಯಪರತೆ, ಧ್ಯೇಯನಿಷ್ಠೆ, ಮಾನವ ಸ್ನೇಹ, ಸಮಾನಭಾವ, ಪ್ರಾಮಾಣಿಕತೆ ಸ್ವಯಂಕಾರ್ಯ ಪ್ರಾಯಶ್ಚಿತ್ತ ಮುಂತಾದ ಗುಣಗಳನ್ನು ತರುಣರಲ್ಲಿ ಬೆಳೆಸಲು ಆ ಮಾದರಿಯ ಆಶ್ರಮ ಅಥವಾ ಶಾಸ್ತ್ರೀಯ (ಉಚ್ಚ ಮಟ್ಟದ) ಸಂಸ್ಥೆಗಳನ್ನೇಕೆ ಜಿಲ್ಲೆಗೊಂದರಂತೆ ತೆರೆಯುವುದಿಲ್ಲ? ಪ್ರದೇಶಕ್ಕೊಂದರಂತಾದರೂ ಸ್ಥಾಪಿಸಬಾರದು? ಆದರಲ್ಲಿ ತರಬೇತಾದ ಆಡಳಿತೆಯನ್ನು ಗಣ್ಯನಾಗಿ ಆಡಳಿತ ಕ್ಷೇತ್ರದಲ್ಲಿ ಬರತಕ್ಕ ಜನಗಳಿಗೆ ನಿಕಷವನ್ನಾಗಿ ತೆಗೆದುಕೊಳ್ಳಬಾರದು? ವಿದೇಶದ ತರುಣ ತರಬೇತಿನ ಮಾದರಿಯನ್ನಾದರೂ ತೆಗೆದುಕೊಂಡಿದ್ದುಂಟೇ? "ನೆಹರುಗಳಾದ ಮೇಲೆ ಯಾರು?" ಎಂಬ ಬೆದರುಗಣ್ಣಿನ ಪ್ರಶ್ನೆಯನ್ನು ಹಾಕುವ ಮುತ್ಸದ್ದಿಗಳಿಗೆ ಇಂಥ ಯಾವ ಯೋಜನೆಯೂ ಹೊಳೆಯದಾಗಿದೆಯೇ? ಆಡಳಿತ ತರಬೇತಿನ ಇನ್ನಾವ ತತ್ವಸೂತ್ರಣಾಲಿಯೂ ಗೋಚರಿಸದಾಯಿತೆ? ಇದು ದೇಶದ ದುರ್ದೈವವೆಂದೇ ಹೇಳಬೇಕು. ಈಗ Experienced ಆನುಭವಸ್ಥರೆಂದು ತೆಗೆದುಕೊಂಬ ಜನರೆಲ್ಲ ಪರಂಪರಾಧೀನರೂ ಇದ್ದ ಬಗೆಯನ್ನು ಹೇಗಾದರೂ ಹೆಚ್ಚು ಕಡಿಮೆ ನಡೆಸಿಕೊಂಡು ಹೋಗುವ ಪ್ರವೃತ್ತಿಯವರಾಗಿರುವುದೂ ಆಂಗ್ಲ ಮಾಧ್ಯಮ ಪುರಸ್ಕರ್ತರಿಂದ ಸ್ವಭಾವಾಗುತ್ತದೆ; ರಿಪೋರ್ಟ್ ಬರೆಯಲು ಕಲಿಸುವ ಹಳೆಹುಲಿ ಆಫೀಸರರಿಂದ ಸುಸೇವ್ಯವಾಗಿದೆ. ನ್ಯಾಯ-ಕಾರ್ಯ-ಕಾಯದೆ ಪಾಯೆಗಳೆಲ್ಲದರಲ್ಲೂ ಇದೇ ಧೋರಣೆಯು ಮನುಷ್ಯರು ಹೆಚ್ಚುಕಡಿಮೆ ನಿಯಂತ್ರಗಳಾಗಿದ್ದಾರೆ. ಈ ಆಂಶವನ್ನು ಚಿಂತಿಸಲು ಮೂಕಕೋಟಿಗೇ ಬಿಡಲಾಗಿದೆ ಎಂದು ತೋರುತ್ತದೆ.

ಒಬ್ಬ ಪ್ರಜಾ ಪ್ರತಿನಿಧಿಗಳು ಮೊನ್ನೆ ಹೇಳಿದರು: "ಜನಾವಳಿಗೆ ನಿಲ್ಲಲು ಕಡಿಮೆಯೆಂದರೆ ಹತ್ತುಸಾವಿರ ಹಿಡಿದುಕೊಳ್ಳಬೇಕು' ಎಂದು. ಶಕ್ತಿಯಿಲ್ಲವಾದರೆ ಐದನ್ನಾದರೂ ಹುಡಿಮಾಡದೆ ಎಮ್ಮೆಲ್ಲೇ ಆಗುವದಿಂದು ಸಾಧ್ಯವೆ? ಸಾಧ್ಯವಲ್ಲವೆಂಬುದು ಜಗಜ್ಜಾಹೀರಾಗಿದೆ. ಇದು ಗಾಂಧಿಯವರನ್ನ ಕೊಂಡಾಡುವ ಜನನಿರ್ಮಿಸಿಕೊಳ್ಳತಕ್ಕ ಸಾಮಾಜಿಕ-ರಾಜಕೀಯ ಆವರಣವೇನು? ಪ್ರಾಮಾಣಿಕತೆಯನ್ನು ವಿದೇಶಗಳಿಗೆ ರಫ್ತುಮಾಡಿ ಕಳಿತ ಜನರಾಷ್ಟ್ರವನ್ನು ಸುಭದ್ರವಾಗಿ ಕಟ್ಟುವ ಆಡಳಿತ ಜ್ಞಾನವನ್ನು ಆಚರಣೆಯಲ್ಲಿ ತೋರಿಸೀತೇ? ಶಕ್ಯವಿಲ್ಲ, ಸರ್ವಥಾ ಶಕ್ಯವಿಲ್ಲ!

ಆದುದರಿಂದ 'ಸಜ್ಜೇ ಬೇಸಾರ್ ಸಂಘ್' ರಂತಹ ಪ್ರಾಮಾಣಿಕತಾ ಸಂವರ್ಧನ ಸಂಸ್ಥೆಗಳನ್ನು ತೆರೆಯುವ ಕಾಲವಿಂದು ಬಂದಿದೆ. ಕರ್ತೃಸಾವಿರವನ್ನು ಹುಡಿಮಾಡುವ ಆವಶ್ಯಕತೆಯನ್ನು ತಂದೊಡ್ಡಿದ ಸಮಾಜ ಪ್ರಜಾಸತ್ತಾತ್ಮಕವೆ? ಸಮಾಜವಾದಿ ಸಮಾಜದ ಸ್ವರೂಪದ್ದೇ? ಎಲ್ಲಾ ಕಚ್ಚೆನಿಸುವುದಿಲ್ಲವೆ? ಭಾರತ ಸ್ವತಂತ್ರವಾದಂದಿನಿಂದ ಇಂಥ ರೀಟುಗಳು ಏರುತ್ತ ಕೋಗಿವೆಯಲ್ಲದೆ ಕಡಿಮೆಯಾಗುತ್ತ ಹೋಗಿಲ್ಲ! ಅಮೇರಿಕದ ಸಾವಕಾರಿಕೆಯ ಚುನಾವಣೆಗೂ ಇದಕ್ಕೂ ವ್ಯತ್ಯಾಸವೇನು? 'India is aping America —ಭಾರತವು ಅಮೇರಿಕವನ್ನು ನಕಲು ಮಾಡುತ್ತಿದೆ' ಎಂಬೊಬ್ಬರು ಉದ್ಗರಿಸಿದರು. ಆದರಲ್ಲಿ ಸತ್ಯಾಂಶವಿದೆಯೆಂಬುದು ಇದರಿಂದ ಹೊಳೆಯುವುದಿಲ್ಲವೆ? ಈ ದುರುಪಾಹರಣದ ಅನುಕರಣ ಹೆಚ್ಚುತ್ತ ಹೋಗುವುದು ಸುಧಾರಣೆಯ ಲಕ್ಷಣವೆ?

'ಶಕ್ತಿಪ್ರಜ್ಞತ, ಜಾಗ್ರತ, ಪ್ರಾಪ್ಯವರಾಸ್ಸಿ ಬೋಧತ" ಎಂಬ ಭಾರತೀಯ ಸಂದೇಶವನ್ನಿಂದು ಪುನರುಚ್ಚರಿಸಬೇಕಾಗಿದೆ. 'ಜನರೇ ಬಲ' ಎಂದು ಎಚ್ಚರಿಕೆ ಕೊಡಬೇಕಾಗಿದೆ. ರಾಜಪ್ರಭುತ್ವದಲ್ಲಿಯೇ ನಿದ್ರಾಮುದ್ರಿಕ ಸ್ರಜಂಕೋಟೆ ಸಾಕಷ್ಟು ಹಾನಿಗೀಡಾಗಿದೆ. ಇಂದವೇಲಿನ್ನು ಪ್ರಜಾಪ್ರಭುತ್ವದಲ್ಲಿ ಕೇಳಬೇಕೆ? ಆಡಳಿತ ಅಥವಾ ಪ್ರಭುತ್ವದ ಲಗಾಮನ್ನು ಹಿಡಿಯಲು ಅರ್ಹತೆಯನ್ನು ಸಂಪಾದಿಸಲು ನಾವಿನ್ನು ಅಹೋರಾತ್ರಿ ಶ್ರಮಿಸಬೇಕು ಇಲ್ಲವಾದರೆ ಅತ್ಯಪ್ಪ ದೇಶವು ಎಂದಾದರೂ ವಿದೇಶೀಯರ ಪ್ರತ್ಯಕ್ಷಾ ಪ್ರತ್ಯಕ್ಷವೆ ಧಾಳಿಗೆ ನೆರವೀಯುವ ಸಂಭವ ಬಂದೀತು! ಆಂತರಿಕ ಆಡಳಿತ ಆಡಳಿತವನ್ನು ತೀರಾ ಕಡೆಗಣಿಸಿ ಕೇವಲ ವಿದೇಶ ನೀತಿಯ್ಯ ಯಶಸ್ಸನ್ನು ಗಳಿಸಿ ಬಹಳ ಕಾಲ ನಿಲ್ಲಿಸಿಕೊಳ್ಳಲು ಸಾಧ್ಯವಾಗದು. ಹಾಗೆಮಾಡ ಹೋಗುವುದು ಒಲೆಯನ್ನು ಒಳಗಿಟ್ಟು ಚೀಲವನ್ನು ಹೊಲಿದಂತೆ ಎಂಬುದನ್ನು ರಾಜಕಾರಣಿಗಳಿಗೆ ಕಳಿ ಕೊಡಬೇಕೆ? ಆದರಲ್ಲೂ ಸೈನಿಕ-ಧನಬಲಗಳು ದೊಡ್ಡ ರಾಷ್ಟ್ರಗಳ ಹತ್ತಿರವೆ ಒಂದರಷ್ಟೂ ಇಲ್ಲದ ನಮ್ಮ ಧರ್ಮರಾಜ್ಯ ಎಷ್ಟು ಜಾಗ್ರತೆ ವಹಿಸಿ ಅವರಿಕ ಭದ್ರತೆಯನ್ನು ಕಾದುಕೊಂಡರೂ ಸಾಲದು; ಬರಿಯ ಭಾಷಾವಾರ ಸ್ವಾಂತ ರಚನೆಯನ್ನು ಬಹುಸ್ವರಿಸಿ ಬಿಟ್ಟಾಕ್ಷಣ ದೇಶೈಕ್ಯ ಸಾಧಿಸಲಾರದು. ದೇಶದ ಏಕ್ಯಕ್ಕೆ ಪ್ರಜಾತೃಪ್ತಿಯೇ ಬುನಾದಿ ಪ್ರಜಾತೃಪ್ತಿಯನ್ನು ಕಡೆಗಣಿಸಿದ ಯಾವ ರಾಜ್ಯಪದ್ಧತಿಯೂ ಬಹಳ ಕಾಲ ಬಾಳಲಾರದು. ಆದುದರಿಂದ ದೇಶದ ತರುಣ ಶಿಸ್ತಿತ ವರ್ಗವು ಆಡಳಿತ ಶಕ್ತಿಯ ಮಹತ್ವವನ್ನು ಮನಗಂಡು ಜರೂರ ತರಬೇತಿನ ಬಗ್ಗೆ ಅಗತ್ಯವಾದ ಸಂಘ-ಸಂಸ್ಥೆಗಳನ್ನು ಸ್ಥಾಪಿಸಿಕೊಳ್ಳಲು ಮುಂದೆ ಬರುವುದೆ ಆಸಾವಾರ್ಯ.



ಅನೇರಿಕದ ಪ್ರಸಿದ್ಧ ವಿಜ್ಞಾನಿ, ಹಾರ್ವರ್ಡ್ ವಿಶ್ವವಿದ್ಯಾಲಯದ ಕುಲಪತಿ
ಡಾ. ಜೇಮ್ಸ್ ಬಿ. ಕೊನೇಂಟರ



ಆಧುನಿಕ ವಿಜ್ಞಾನವು ಮನುಷ್ಯ ಜೀವನದ ಮೇಲೆ ಉಂಟುಮಾಡಿರುವ ಕ್ರಾಂತಿಕಾರಕ ಪರಿಣಾಮಗಳನ್ನು ಪರಿಶೀಲಿಸಿ ವಾಣಿಜ್ಯ, ಸರಕಾರ, ನೀತಿ, ಧರ್ಮ, ಮುಂತಾದ ಬದುಕಿನ ವಿವಿಧ ರಂಗಗಳಲ್ಲಿ ವಿಜ್ಞಾನವು ಬೀರಿರುವ ಪ್ರಭಾವವನ್ನು ಡಾ. ಕೊನೇಂಟ ಇಲ್ಲಿ ತಮ್ಮ ಸರಳ ಮತ್ತು ಓಜಸ್ವಿ ಶೈಲಿಯಲ್ಲಿ ಬಣ್ಣಿಸಿದ್ದಾರೆ. ಇಂದಿನ ವಿಜ್ಞಾನಿಯು ಕೇವಲ ಒಬ್ಬ ಕಲ್ಪನಾವಿಹಾರಿ ತಾತ್ತ್ವಿಕನಲ್ಲ; ವಿಶ್ವದ ಗೌಪ್ಯವನ್ನು ತೆರೆಮರೆ ತೋರಿಸಬಲ್ಲ ಮಂತ್ರವಾದಿಯೂ ಅಹ್ಲ. ಅತನು ಇತರ ವ್ಯಾವಹಾರಿಕ ಕ್ಷೇತ್ರಗಳಲ್ಲಿ ದುಡಿಯುವ ಜನರಷ್ಟೇ ಪ್ರಾಮಾಣಿಕನಾಗಿಯೂ ಕಷ್ಟಸಹಿಷ್ಣುವಾಗಿಯೂ ದುಡಿಯಬೇಕಾದ ವ್ಯವಹಾರಜ್ಞ. ತತ್ತ್ವಶಾಸ್ತ್ರ ಮತ್ತು ಮತವಿಜಾರಗಳಲ್ಲಿರುವ ಶಂಕೆ, ಮತ್ತು ನ್ಯೂನತೆ ಇಂದಿನ ವಿಜ್ಞಾನವನ್ನೂ ಆವರಿಸಿವೆ. ಇಂದಿನ ಪ್ರಪಂಚದಲ್ಲಿ ವಿಜ್ಞಾನದ ಪಾತ್ರವೇನೆಂದು ವಿಮರ್ಶಿಸುವ ಗ್ರಂಥಗಳಲ್ಲಿ ಡಾ. ಕೊನೇಂಟರ ಈ ಗ್ರಂಥದಷ್ಟು ವಿಚಾರ ಪ್ರಚೋದಕವಾದುದು ಬೇರೊಂದಿಲ್ಲ.

ಇದನ್ನು ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜಿನಲ್ಲಿ ಭೌತ ಶಾಸ್ತ್ರದ ಪ್ರಾಧ್ಯಾಪಕರಾದ ಉಡುಪಿ ಲಕ್ಷ್ಮೀನಾರಾಯಣಾಚಾರ್ಯ ಎಂ. ಎ. ಎಲ್. ಟಿ. ಅವರು ಅಸುವಾದಿಸಿದ್ದಾರೆ. ಅವರು ಕನ್ನಡದಲ್ಲಿ ಹಲವು ವೈಜ್ಞಾನಿಕ ವಿಷಯದ ಲೇಖನಿಗಳನ್ನು ಬರೆದಿದ್ದಾರೆ. ಅವರು ಅನುವಾದಿಸಿದ (ಶ್ರೀ ಕು. ಶಿ. ಹರಿದಾಸ ಭಟ್ಟರೊಡನೆ) ಡಾ. ಕೆರೆಲರ 'ಅಜ್ಞಾತ ಮಾನವ' (Man, the Unknown) ಕನ್ನಡದಲ್ಲಿ ವಿಶೇಷ ಮನ್ನಣೆಯನ್ನು ಪಡೆದಿದೆ.

ಪ್ರಸ್ತುತ ಅನುವಾದದಲ್ಲಿ ಶ್ರೀಯುತರ ಗಂಭೀರ ಅವರೂ ಸರಳ ಮತ್ತು ವೈಜ್ಞಾನಿಕ ವೈಲಿಯ ಪರಿಚಯವನ್ನು ಮಾಡಿಕೊಳ್ಳಬಹುದು.

ಉತ್ತಮ ಕಾಗದದಲ್ಲಿ ಅಜ್ಞಾಗಿರುವ ಈ ಪುಸ್ತಕದ ಬೆಲೆ ಬರೇ ರೂ.1-8-0ವಗತ

ಪ್ರತಿಗಳಿಗೆ ಬರೆಯಿರಿ:—

ನವಯುಗ ಎಂಟರ್‌ಪ್ರೈಸಸ್ ಲಿಮಿಟೆಡ್, ಉಡುಪಿ.

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ. ಬೆಲೆ: ೦—೨—೦

ನವಯುಗ ಪ್ರೆಸ್, ಉಡುಪಿ.

ಸಾವಿರ ಮೆಟ್ಟಿಲುಗಳ ಮೇಲಿನಿಂದ–ಮೈಸೂರು

(೧೭ನೇ ಪುಟದಿಂದ)

ಕಿನೆ. ಶ್ರೀ ರಾಮನು ಸೀತೆಯೊಡನೆ ಕುಳಿತಿರುವ ವಿಗ್ರಹ. ಅವನ ಬಲ ಹನುಮಂತನು ; ಕೈಮುಗಿದು ನಿಂತಿರುವನು. ಕೆಳಗಿನ ಭಾಗದಲ್ಲಿ ಹನುಮಂತನ ಪುತ್ತೊಂದು ಚಿತ್ರವಿದ್ದಿತು. ಪೂಜೆ ಮಾಡಿ ಗಂಧ ಪುಷ್ಪಾದಿಗಳನ್ನು ಹಾಕಿದ್ದರು. ಮಂದಿರಕ್ಕೆ ಬಾಗಿಲು ಹಾಕಿತ್ತು. "ಹೇರಾಂ" ಎಂದು ಕರೆಯುತ್ತ ಬಂದ ಜೀವಕ್ಕೆ ರಾಮನನ್ನು ನೋಡಿ ಆದ ಆನಂದಕ್ಕೆ ಪರವೆಯೇ ಇಲ್ಲ.

ಮತ್ತೆ ನೂರು ಮೆಟ್ಟಿಲುಗಳನ್ನು ನಿಮಿಷಮಾತ್ರದಲ್ಲಿ ಹತ್ತಿದೆ. ತಿರುಗಿ ನೋಡಿದೆ. ಮೈಸೂರಿನ ಸೌಂದರ್ಯವನ್ನು ಹೃದಯ ತಲ್ಲಣಿಸಿತು.

ಚಾಮುಂಡಿಯನ್ನು ನೋಡುವ ಕಾತುರತೆಯಿಂದಿದ್ದ ಜೀವಕ್ಕೆ ಅವಸರವೆನಿಸಿತು ದೇವಸ್ಥಾನದ ಬಳಿ ಇಬ್ಬರು ಹೆಂಗಸರು ಹಣ್ಣುಕಾಯಿಗಳನ್ನು ಸಿದ್ಧಪಡಿಸಿ ಇಟ್ಟಿದ್ದರು. "ಒಂದು ರೂಪಾಯಿ" ಎಂದರು. ಬೇಗನೆ ಅದೊಬ್ಬಳಿಂದ ಪಡೆದು ಅವಳ ಕುಕ್ಕೆ ಸಮೇತವಾಗಿ ದೇವಸ್ಥಾನಕ್ಕೆ ನಡೆದೆ. "ಈ ಜೀವ ದೇವರಿಗೆ ಹಣ್ಣು ಕಾಯಿಗಳನ್ನು ಸ್ವಂತ ಕೈಯಿಂದಲೇ ಅರ್ಪಿಸಿದುದು ಇದೇ ಮೊದಲು!" ಎಂಬ ಸತ್ಯದ ನೆನಪಾಯಿತು. ಆದರೂ ಆ "ಅಹಂ"ನ್ನು ಶಾಂತಗೊಳಿಸಿದೆ.

ಜಗಜ್ಜನನಿ ಚಾಮುಂಡಿ ಬೆಟ್ಟದಲ್ಲಿ ಪೂರ್ವಾಭಿಮುಖವಾಗಿ ಕುಳಿತಿದ್ದಾಳೆ. ದಸರೆಯ ಉತ್ಸವ ಮೂರ್ತಿಯಾಗಿ ಮಿಲಿಯಾವಧಿ ಭಕ್ತರನ್ನು ಹರಸಿ ಹರಸಿ ಪೋಷಿಸುವ ಪುತ್ಥಳಿಯಾಗಿ ಕುಳಿತಿದ್ದಾಳೆ. ಸುವರ್ಣ ನಿರ್ಮಿತ ಗುಂಡಿಗೆಯಿಂದ ಜನ್ಮ ಪ್ರಭೆಯನ್ನು ಮೈಸೂರಿನಲ್ಲೇ ಅಲ್ಲ, ಇಡೀ ಜಗತ್ತಿನಲ್ಲಿ ಪ್ರಕಾಶವಾನಗೆಗೊಳಿಸಿದ್ದಾಳೆ. ಮೈಸೂರು ಜಾಮುಂಡಿಯ ಖ್ಯಾತಿಯನ್ನು ಕೇಳದವರಾರು? ಅವಳು ಯಾವ ಕಾಲದಲ್ಲಿ ಬೆಟ್ಟವನ್ನೇರಿದಳು —ಏನೆಲ್ಲ ಅದ್ಭುತಗಳನ್ನು ನಡೆಸಿದಳೆಂದು ಇಲ್ಲಿ ಕೇಳುವ ಅವಶ್ಯವಿಲ್ಲ. ರಾಜಾಧಿರಾಜರು ಅವಳ ಸೇವಕರಾಗಿದ್ದಾರೆ. ಅವಳ ಜನುಪನು ಶಕ್ತಿಯಿಂದ ಭಕ್ತರನ್ನು ರಕ್ಷಿಸಿಕೊಂಡು ಬಂದಿದ್ದಾಳೆ. ಚಾಮುಂಡಿ ಬೆಟ್ಟವಿಷ್ಟೇ ಅವಳ ನಾಮಕರ್ಣಕ್ಕಾಗಿಯೇ ಸೃಷ್ಟಿಯಿಂದ ನಿರ್ಮಿಸಲ್ಪಟ್ಟಿದೆಯೆಂದು ಬೇರೆ ಹೇಳುವುದೇಕೆ?

ಹಣ್ಣು ಕಾಯಿಗಳನ್ನರ್ಪಿಸಿ ಸಂತೋಷಚಿತ್ತದಿಂದ ಹೊರಬಿದ್ದೆ. ಕಾಯಿ ನೂರು ಪವಳ ಕುಕ್ಕೆಯನ್ನು ಹಿಂದೆ ಕೊಟ್ಟೆ. ತೆಂಗಿನ ಕಾಯಿಯ ಎರಡು ಹೋಳುಗಳನ್ನು ಎರಡು ಮಕ್ಕಳಿಗೆ ಹಂಚಿದೆ. ಪಸಿವಿನಿಂದ ತತ್ತರಿಸುತ್ತಿದ್ದ ಜೀವವು ನಾಲ್ಕು ಬಾಳೆ ಹಣ್ಣುಗಳನ್ನು ತಿಂದಿತು. ಪ್ರಸಾದವನ್ನು ಹಿಡಿದುಕೊಂಡೆ. ಇನ್ನೂ ನಾಲ್ಕು ಹಣ್ಣುಗಳನ್ನು ಪಡೆಯಲೆಂದು ನಡೆದೆ. ಅಲ್ಲಿಯೇ ಒಬ್ಬ ಖ್ಯಾಯಸ್ಥನೂ ಒಬ್ಬಳು ಎಂಟು ವರ್ಷ ವಯಸ್ಸಿನ ಹುಡುಗಿಯೂ ಬಾಳೆ ಹಣ್ಣು ಮಾರುತ್ತಿದ್ದರು. ಹುಡುಗಿಯೊಡನೆ ಮೊದಲು ವಿಚಾರಿಸಿದೆ "ಒಂದಾಣೆಗೆ ಎರಡು" ಎಂದಳು. ಆಶ್ಚರ್ಯಲ್ಲಿ ಆ ಖ್ಯಾಯಸ್ಥನು ತನ್ನಿಡನ್ನು ಪಡೆಯಿರೆಂದ. ಕಟ್ಟಾಳೂ; ನಿರ್ಮಲದ ಕಜ್ಜೆ ಮುಂಡಾಸು ಉಟ್ಟಿದ್ದಾನೆ. ಕಠ್ಯಗಾಗಿ ಹುಲಿಯುತಿದ್ದಾನೆ. ದೂರದಲ್ಲಿ ನೀರಿಳಿಯುವ ಹೆಂಗಸಿನೊಡನೆ ಜಗಳಾಡುತ್ತಿದ್ದಾನೆ ಅದರೊಡನೆ ಹಣ್ಣು ಮಾರುತ್ತಾನೆ ಒಂದು ನಿಮಿಷ ಕೋಪವನ್ನು ನುಡಿತು "ಈ ಹಣ್ಣು ಪಡೆಯಿರಿ ಸಾರ್" ಎಂದ. 'ನಾನು ಅವಳದ್ದನ್ನೇ ಪಡೆಯುತ್ತೇನೆ ಎಂದೆ. ಅದರೂ ಅವನನ್ನೂ ನಿರಾಶೆಗೊಳಿಸುವುದು ಬೇಡನೆಂದು "ಅವಳು ಎರಡು ಕೊಡಲಿ. "ನೀವು ಎರಡು ಕೊಡಿ" ಎಂದು ಎರಡಾಣೆಯ ಒಂದು ಪಾವಲಿಯನ್ನು ಅವನ ಕೈಯಲ್ಲಿ ಹಾಕಿ ಅವನ ಎರಡು ಹಣ್ಣುಗಳನ್ನು ಪಡೆದೆ. ಅವಳಿದ್ದನ್ನೂ ಪಡೆದೆ. "ಒಂದಾಣೆಯನ್ನು ಅವಳಿಗೆ ಕೊಡಿ"ಎಂದೆ. ಅವನಿಗೇನಾಯಿತೋ! ಮಹಾ ಸಿಟ್ಟಿನಿಂದ ಆ ಪಾವಲಿಯನ್ನು ನೆಲಕ್ಕೆ ಬಡಿದ. "ಇದೇನು ಈ ದಿನ ಒಂದೊಂದಾಣೆದ್ದು ಕೆಟ್ಟ ವ್ಯಾಪಾರ! ಪೇಹುಡುಗೀ ಎಂತಹೆಮ್ಮೆತ್ತುವಪ್ಪಾ ನೀನು." ಎಂದು ಹುಡುಗಿಗೆ ಬೈದ. ನಾನು ಸುಮ್ಮನಿದ್ದೆ. ಹಣ್ಣನ್ನು ಸುಲಿದು ತಿನ್ನುತ್ತಾ ಕೆಳಗಿಳಿದೆ. "ಜೀವ! ನಿನ್ನ ಈ ಪರ್ವತದಲ್ಲೂ ಮನುಷ್ಯನು ಕೋಪವನ್ನು ಬಿಟ್ಟಿಲ್ಲವೇ? ಪೇಟೆ ಪಟ್ಟಣಗಳಲ್ಲಿ ಈ ಜೈತ್ರವನ್ನು ನೋಡಿರುವೆ. ಅಯ್ಯೋ ಹಣದ ಮಾಯೆಯೇ! ಜಾಮುಂಡಿಯೇ!" ಎಂದು ಮನದಲ್ಲಿ ನೆನೆಯುತ್ತಾ, ಬಂದ ಮೆಟ್ಟಿಲುಗಳನ್ನು ಮೆಟ್ಟುತ್ತಾ ಕೆಳಗಿಳಿದೆ. ನೂರು ಮೆಟ್ಟಿಲುಗಳನ್ನು ಇಳಿಯುತ್ತಲೇ ರಾಮ ಮಂದಿರವು ಕಾಣಬಂತು. ಮನಸ್ಸು ಮಂದಿರದೊಳಗೆ ಇಣಿಕಿ ನೋಡುತ್ತಿದ್ದೆ. ಅಷ್ಟರಲ್ಲಿ ಒಂದೆರಡು ವರ್ಷ ವ್ಯಾಯಿನ ಸಣ್ಣ ಕರುಳೊಂದು ಬೆಟ್ಟದ ಮೆಟ್ಟಿಲು ಹತ್ತುತ್ತಾ ಬಂತು. ರಾಮನ ನೋಲಿದ್ದ [illegible] ಕಾಣಿತು. ಇದೇ ನಿಜು? ಸಣ್ಣ ಕರುವು ಈ ಮೆಟ್ಟಿಲನ್ನು ಸುಲಭದಲ್ಲಿ ಹತ್ತುವುದು! ನನಗೆ ಮಹಾ ಪರ್ವತವಾಗಿದ್ದ [illegible] ಇದು ನಿರಾಯಾಸವಾಗಿ ನಡೆದು ಸೋಲೆ ವೇಲೆ ಬರುತ್ತಿದೆ. ಅದನ್ನೇ ನೋಡಿದೆ. ನನ್ನಿಂದ ಹತ್ತು ಅಡಿ ದೂರದಲ್ಲಿ ಅದು ಒಮ್ಮೆ ನಿಂತಿತು. ನನ್ನನ್ನೇ ನೋಡಿತು. ನಾನೂ ನೋಡಿದೆ. ಮಂದಿರ ಬಿಟ್ಟು ಒಂದು ಹೆಜ್ಜೆ ಇಟ್ಟೆ. ಅದೂ ಮುಂದಡಿ ಇಟ್ಟಿತು. ನನ್ನ ಬಳಿಯಿಂದ ನಡೆಯುತ್ತಾ "ಅಂಬಾ" ಎಂದು ಕರೆಯಿತು. ಅದರ ಆ ಸ್ವರವು ನನಗೆ ಪೂರ್ಣವಾಗಿ "ಅಂಬಾ" ಎಂದು ಜಡೊಬ್ಬ ಮನುಷ್ಯನು ಕರೆಯುವಂತೆ ಕೇಳಿಸಿತು. ಆ ಕರೆಯು ಬೆಟ್ಟದ ತುತ್ತ ತುದಿಯವರೆಗೆ ಕೇಳಿಸಿತು. ಅದರ ನುಡಿಕೇಳಿ ನನಗೆ ಆಶ್ಚರ್ಯವಾಯಿತು. ಒಂದು ಕರುವು ಇಷ್ಟು ಜೋರಾಗಿ "ಅಂಬಾ" ಎಂದು ಚಾಮುಂಡೇಶ್ವರಿಯನ್ನು ಕರೆಯಿತೇ ಎಂಬ ಸಂದೇಹವು ಒಡನೆ ಉಂಟಾಯಿತು. ನನ್ನ ಯಾತ್ರೆಯನ್ನು ಕಂಡು ಮೆಚ್ಚಿದ ಅಂಬೆಯು ಕರುವಿನ ಬಾಯಿಯಿಂದ ನನಗೆ ಸಾಕಷ್ಟು ಲಿಸಿದಳೇ ಯಾರು ಬಲ್ಲ? ಸ್ವಲ್ಪ ನಿಂತೆ. ಕರುವನ್ನು ಮತ್ತೂ ನೋಡಿದೆ. ಇನ್ನೊಮ್ಮೆ "ಅಂಬಾ" ಎಂದು ಎಲ್ಲಿಯೂ ಕೇಳಿಲಿಲ್ಲ. ನಟ್ಟಗೆ ಬೆಟ್ಟದ ದಾರಿಯನ್ನು ಸಣ್ಣ ಮಗು ತುಳಿಯುವಂತೆ ತುಳಿಯುತ್ತಾ ಮುಂದೆ ಹೋಯಿತು ಅತಿಥಿಯಾಗಿ ಬಂದು, ಚಾಮುಂಡಿಯು ಪ್ರಸಾದವನ್ನು ಉಂಡ ಈ ಜೀವವು ಅವಳ ನಿವಾಸಸ್ಥಾನವಾದ ಬೆಟ್ಟದಲ್ಲೇ ಒಮ್ಮೆ "ಅಂಬಾ" ಎಂದು ಬಾಯಿತ್ತಿ ಹೇಳದರೆ ಆಶ್ಚರ್ಯವಿಲ್ಲ. ಹೇಳಿ ಕೇಳಗಿಳಿದೆ. ಆರುನೂರನೇ ಮೆಟ್ಟಿಲಿನಲ್ಲಿಯ ನೀರ ನಳ್ಳಿಯಲ್ಲಿ ಮುತ್ತುಗಳು ನೀರು ಕುಡಿದೆ ಅಲ್ಲೇ ಸ್ವಲ್ಪ ದೂರದಲ್ಲಿರುವ ಕಟ್ಟೆಯೊಂದರಲ್ಲಿ ವಿಶ್ರಾಂತಿಗೆಂದು ಕುಳಿತೆ. ಮೈಸೂರು ದೇವಿಯ ನನ್ನೆದುರು ಚಿತ್ರಪಟದಂತೆ ಕಂಗೊಳಿಸುತ್ತಿದೆ. ಸೂರ್ಯನು ಪಶ್ಚಿಮಾಭಿಮುಖನಾಗಿ ಹೊರಡಲು ತಲೆ ತಗ್ಗಿಸಿದ್ದಾನೆ ವಿಸಿಲಿನ ತಾಪದಿಂದ ಶಮನಕ್ಕೆ ಸೃಷ್ಟಿಯು ಉರಿಯುತ್ತಿದೆ. ಆದರೆ ಬೆಟ್ಟವು ತಣ್ಣಗಿದೆ. ಕುಳಿತು ಭವ ಪರವಶನಾಗುತ್ತಿದ್ದಾಗ ಜೊಬ್ಬ ಬಂದ. ಒಂದು ಕಟ್ಟೆಯಲ್ಲಿ ಕುಳಿತ. ಒಮ್ಮೆ ಸಣ್ಣ ಕಟ್ಟನ್ನು ಬಿಚ್ಚಿದ. ನಾಲಕ್ಕಾರು ಕೊಳಲುಗಳನ್ನು ಕೆಳಗಿಟ್ಟ. "ಏನಪ್ಪಾ ಯಾ?" ಎಂದೆ. "ಒಂದಕ್ಕೆ ಎರಡು ರೂಪಾಯಿ' ಎಂದ.

ನಾನು! ಆ ಜನವನನ್ನು ಯಾರು ನಿರ್ಮಿಸಿದರಂತೆ?! ಅವನು ಜನರ ಕಥೆಯೋ ಸಾರ್. ಅವನ್ನು ದಕ್ಷಣಾತ್ಯ ಜಾಗರೆಂಬ ಮಹಾ ಶಿಲ್ಪಿಯೊಬ್ಬರು ರಾತ್ರೆಬೆಳಗಾಗುವುದರೊಳಗಾಗಿ ನಿರ್ಮಿಸಿದರಂತೆ. ಆ ಕಥೆ ಗೊತ್ತಿಲ್ಲೆ? ಅವರು ವೈವಿಕಶಕ್ತಿಯಿಂದ ವಿಗ್ರಹಗಳನ್ನು ಕೆತ್ತುತ್ತಿದ್ದರು. ಅವರ ಮಗ ಸೊಬ್ಬ ಸೋಮನಾಥ ದೇವಸ್ಥಾನದ ತಂದೆಯ ಕೆತ್ತನೆಯ ಕೆಲಸದಲ್ಲಿ ನ್ಯೂನತೆ ಇದೆ ಎಂದು ಕಂಡು ಹಿಡಿದನಂತೆ. ತಂದೆಗೆ ಮಗನು ಯಾರು ಎಂಬ ತಿಳಿಯದೆ ಅವನೊಡನೆ ಪಂಥಕ್ಕೆಳೆದು ನೋಡಿ, ಶರ್ತದಂತೆ ತನ್ನ ಬಲಗೈಯನ್ನು ತುಂಡರಿಸಿಕೊಂಡರಂತೆ. ಮತ್ತೆ ನೋಡಲಾಗಿ ಅವನು ತನ್ನ ಸ್ವಂತ ಮಗನೇ ಎಂದು ಸರ್ವರನ್ನು ಉದ್ಧರಿಸಿ ಕಾಡುಕೊಂಡರಂತೆ.

ನಾನು: ಈ ಬೆಟ್ಟದಲ್ಲಿ ದೊಡ್ಡ ದೊಡ್ಡ ಮರಗಳು ಏತಕ್ಕಿಲ್ಲ?

ಅವನು "ಹಾಗೆಯೋ ಸ್ವಾಮಿ. ಇಲ್ಲಿ ಬೆಟ್ಟದಲ್ಲಿ ಸುಮಾರು ಇನ್ನೂರು ಗುಸಿಗೆ ಳಿವೆ. ಯಾರೊಬ್ಬನೂ ಒಂದು ಹಿಡಿ ಸೌದೆ ಪೇಟೆಯಿಂದ ತರುವುದಿಲ್ಲ. ಬೆಳದಷ್ಟು ಮರಗಿಡಗಳು ಒಳಿಗೇ ಸರಿ.

ನಾನು: ನಿಮ್ಮ ಉದ್ಯೋಗ?

ಅವನು: ದೇವಸ್ಥಾನದ ಕೆಲಸ. ರೇಶನ್ ಅಲ್ಲದೆ ದಿನಕ್ಕೆ ಎರಡು ಸೇರು ಅಕ್ಕಿ ಮತ್ತು ತಿಂಗಳಿಗೆ ಇಪ್ಪತ್ತೈದು ರೂಪಾಯಿ ಕೊಡುತ್ತಾರೆ. ದೇವಿಯ ಸೇವಕನಾಗಿದ್ದು ಏನೊಂದು ತೊಂದರೆಗಳಿಲ್ಲದೆ ದಿನ ಕಳೆಯುತ್ತಿದ್ದೇವೆ; ದೇವಿಯ ಕೆಲಸಕ್ಕೆಂದು ನೂರಕ್ಕೆಂಟಲೂ ಹೆಚ್ಚು ಮಂದಿ ಈ ಬೆಟ್ಟದಲ್ಲಿ ವಾಸಿಸುತ್ತಾರೆ. ಎಲ್ಲರೂ ಬಡತನದಿಂದ ದೂರಾಗಿ ಚಾಮುಂಡೇಶ್ವರಿಯ ಕೃಪೆಯಿಂದ ಸುಖಿಗಳೇ.

ನಾನು: ದೇವಿಯ ಒಡನೆ ಚಿನಕ್ಕಾಭರಣಗಳು ಎಷ್ಟಿದ್ದಾವು?

ಅವನು: ಅವುಗಳ ಲೆಕ್ಕವೇನು ಸ್ವಾಮಿ! ಅವಳಿಗಿರುವ ವಜ್ರ ವೈಢೂರ್ಯಗಳ ಮಾಲೆಗಳ ಜೆಲೆಯಂತಿರಲಿ ಅವಳ ಮಾಲೆಯ ಒಂದು ಹರಳಿನ ಕ್ರಯವು ಅಖಿಲ ಹಿಂದೂಮೇಶದ ಕ್ರಯಾರ್ಹವಾಗಿದೆಯು ಎಂದು ವಜ್ರ ವ್ಯಾಪಾರಿಗಳು ನೋಡಿ ಹೇಳಿ ಬೆಟ್ಟದ್ದಾರೆ. ಅವುಗಳು ಕೋಟಾನುಕೋಟಿವು ಎಂದಾದರೂ ಎಂದು ಕೇಳುವುದು ಯಾರನ್ನು?

ಮತ್ತೂ ಕುಳಿತ. ಒಂದು ಕೊಳಲನ್ನು ಬಾರಿಸಿದ. ಸಮಸ್ತ ಬೆಟ್ಟವೇ ಅವನ ಊದಿಗೆ ತಲೆಯಲ್ಲಾಡಿಸಿದಂತೆ ತೋರಿತು.

ಮತ್ತೆ ಆರೆಗಳಿಗೆಯಲ್ಲಿ "ಬರ್ತೀನೆ ಸಾರ್" ಎಂದು ಪಟಪಟಾನೆ ಮೆಟ್ಟಿಲನ್ನು ಹಾರಿ ಕೆಳ ಹೋಗಿಬಿಟ್ಟ.

ನಾನೂ ಕೆಳಗಿಳಿದೆ. ಮೇಲೇರುವಾಗ ಕಾಣದ ಕೆಲವು ದೃಶ್ಯಗಳು ಕಂಡುಬಂದುವು. ಅನೇಕ ಮರಗಿಡಗಳ ಕಾಂಡಗಳ ಮೇಲೂ ಗುಡಿ ಗುಂಡಾರಗಳ ಮೇಲೂ ಕೆಲವು ನಕ್ಷದ ಕಂಪೆನಿಯವರು ಕೆಲವು ಸಿನೆಮ ಕಂಪೆನಿಯವರೂ ವಾಲ್‌ಪೋಸ್ಟ್ ಮಗಳನ್ನು ಹಚ್ಚಿಸಿದ್ದರು. ಪಟ್ಟಣದಲ್ಲಿ ಜಾಹೀರಾತು ಮಾಡಿಯೆವುದು ಸಾಕಾಗದೆ ಬೆಟ್ಟವನ್ನೂ ಹೆತ್ತಿರುವರು. ಅಯ್ಯೋ ಮನುಷ್ಯನ ಹಣವ ನೋಹದ ಬಲ್ಮೆಯೆ! ಭಕ್ತಿಯೇ ತಾಂಡವವಾಡಿ ಕಣ್ಣಿದ್ದವರಿಗೆ ಕಾಣುವ ದಿವ್ಯದಿವ್ಯತೆಯನ್ನು ಬೆಗಿಸಿವ ಈ ಚಾಮುಂಡಿ ಬೆಟ್ಟದಲ್ಲೂ ವ್ಯಾಪಾರವೇ!

ಏಳುನೂರು ಮೆಟ್ಟಿಲುಗಳನ್ನು ಇಳಿದು ಬರುತ್ತಿದ್ದಾಗಲೇ ದೂರದಲ್ಲಿ ಕಾಣುತ್ತಿದ್ದ ರೇಸ್ ಕೋರ್ಸಿನಲ್ಲಿ ಕುದುರೆ ಜೂಜು ತೊಡಗಿತ್ತು. ಜನರ ಹಾಹಾಕಾರವು ಬೆಟ್ಟಕ್ಕೆ ಕೇಳುತ್ತಿತ್ತು. ಬೆಟ್ಟವಿಳಿದು ಕೆಳಗೆ ಬಂದೆ. ನಾರ್ಗನ ವಸ್ಯೆಯಂತೆ ಜಲದ ಕಡೆ ಬೆಟ್ಟದ ಮೇಲಿರುವ ಮಹಾನ್ ಶಕ್ತಿಯ ಮಹಿಮೆಯನ್ನೂ, ರೇಸ್ ಕೋರ್ಸ್‌ನಲ್ಲಿ ಜೂಜಿಗೆ ತೊಡಗಿರುವ ಜನತೆಯನ್ನೂ ನೆನೆದುಕೊಂಡೆ. ಬೆಟ್ಟದ ಮೇಲೆ ಕೋಟೆ ಸೂರ್ಯರಂತೆ ಬೆಳಗುವ ಪ್ರಕಾಶವಿದೆಯೆಂದು ಭಾಸವಾಯಿತು. ಕೆಳಗೆ ಮಹಾ ಅನಾವಾಸ್ಯೆಯ ಕತ್ತಲು ಕವಿದಿದೆಯೆಂದೇ ಬೋಧೆಯಾಯಿತು. ದೇವಿ! ಕೆಳಗೆ, — ಸೇಟೆ ನಟ್ಟಣಗಳಲ್ಲೂ ನಿನ್ನ ಪ್ರಕಾಶವನ್ನು ಬೀರು! ಜ್ಞಾನ ತೋರು!

(೨೩ನೇ ಪುಟದಿಂದ)

ಪ್ರಸ್ತಾಪವನ್ನು ಮನುವು ಎತ್ತಿದ್ದಾನೆ. ಆಕ್ಕತಂಗಿಯರ ಸಂಬಂಧ, ಸೋಸಿಯಲ್ ಭೋಗ, ಗಂಡುಸರ ಪರಸ್ಪರ ಸಂಭೋಗ —ಇಂತಹ ಅನಾಚಾರ ಅನಾಚ್ಯಾಚಾರಗಳ ಕುರಿತೂ ಆತನು ಹೇಳಿರುವುದರಿಂದ ಕೃತಯುಗದ ಪಾಪಚಿಜಗಳೇ, ಶ್ರೇಷ್ಠಿಯಲ್ಲಿ ಅಂಕುರಿಸಿ ದ್ವಾಪರದಲ್ಲಿ ಸಸಿಯಾಗಿ, ಕಲಿಯುಗವಲ್ಲಿ ಶಾಪೋಪಶಾಪಗಳಿಂದ ಕೂಡಿದ ಮಹಾ ವೃಕ್ಷವಾಗಿ ವಿಷಫಲಗಳನ್ನು ಕೊಡುತ್ತಿದೆಯೆಂಬುದರಲ್ಲಿ ಅತಿಶಯವಿಲ್ಲ. ಕೃತಯುಗದಲ್ಲಿ ಇಂತಹ ದುರಾಚಾರಗಳು ಈಗಿನಂತೆ ವಿಪುಲವಾಗಿಲ್ಲದಿದ್ದರೂ ವಿರಳವಾಗಿಯಾದರೂ ಇದ್ದುದರಿಂದ ಮನುವು ಆ ಕುರಿತು ತನ್ನ ಸ್ಮೃತಿಯಲ್ಲಿ ಹೇಳಿರಬೇಕು. ಸೃಷ್ಟಿಯ ಆದಿಯಿಂದಲೂ ಭಗವಂತನೇ ಈ ರೀತಿಯ ತಕರಾರುಗಳೇಳುವಂತೆ ಪ್ರಕೃತಿಯನ್ನು ಚಿತ್ರವಿಚಿತ್ರವಿಟ್ಟಿದ್ದಾನೆ! ಭೂಮಿಯು ಹೆತ್ತ ಒಬ್ಬ ನರಕಾಸುರನಿಂದ (ನರಕ ಮತ್ತು ಅಸುರ) ದ್ವಾಪರನು ತಲ್ಲಣಿಸಿ ಪರಮಾತ್ಮನಿಗೆ ದೂರುಕೊಟ್ಟನಂತೆ ಈಗಿನ ಅಸಂಖ್ಯ ನರಕಾಸುರರಿಂದ ಕಲಿಯುಗತ ಏನಾಗಿರ ಬಹುದು? ಇಂದಿನ ಜಗತ್ತನ್ನ ಕಂಡರೆ ಕಲಿಯೂ ನರಕಾಸುರರು ಪರಸ್ಪರ ಒಪ್ಪಂದ ಮಾಡಿಕೊಂಡತೆ ತೋರುವುದಲ್ಲವೆ?

Regd. No. M. 3818
LICENCE NO. 31
Licensed to Post without Prepayment.

ರಾಷ್ಟ್ರ ನಿರ್ಮಾಣಕರು

ರಾಷ್ಟ್ರ ನಿರ್ಮಾಣ ಮತ್ತು ಅದರ ಅಭಿವೃದ್ಧಿಗಾಗಿ ಹೆಣಗಾಡಿದ ಅನೇಕ ಪ್ರತಿಷ್ಠಿತ ಗೃಹಸ್ಥ ಗೃಹಿಣಿಯರಿಗೆ ಪ್ರಜಾರಾಜ್ಯ ದಿನದ ಈ ಸಂದರ್ಭದಲ್ಲಿ ನಾವು ನಮ್ಮ ಹಾರ್ದಿಕ ಕೃತಜ್ಞತೆಯನ್ನು ಸಲ್ಲಿಸುತ್ತೇವೆ.

ಐವತ್ತು ವರ್ಷಗಳಿಗೂ ಮಿಕ್ಕಿದ ಅವಧಿಯಲ್ಲಿ **ಕೆನರಾ ಬ್ಯಾಂಕು** ರಾಷ್ಟ್ರದ ಏಳಿಗೆಗಾಗಿ ವ್ಯಾಪಾರ, ಕೈಗಾರಿಕೆ, ಕಾಮರ್ಸ್‌ಗಳ ಬೆಳವಣಿಗೆಗಾಗಿ ಸೇವೆಯನ್ನು ಸಲ್ಲಿಸಿಯದೆ.

ನಮ್ಮ ಈಗಿನ ಗ್ರಾಹಕರಿಗೂ..... ನಾಳಿನ ಗ್ರಾಹಕರಿಗೂ..... ಮುಂಬರುವ ವರುಷಗಳಲ್ಲಿ ಸದಾ ಆರ್ಥಿಕ ಸೇವೆ ಸಲ್ಲಿಸಲು ಬದ್ಧಕಂಕಣರಾಗಿದ್ದೇವೆಂದು ಪುನಹ ಶ್ರುತಪಡಿಸುತ್ತೇವೆ.

ಕೆನರಾ ಬ್ಯಾಂಕ್ ಲಿಮಿಟೆಡ್

ಸ್ಥಾಪನೆ: 1906

20 ಕೋಟಿಗೂ ಮಿಕ್ಕಿದ ಚಲಾವಣೆ ಮೊಬಲಗು

ನರಸಿಂಹ ರಸಾಯನಮ್

ನರಗಳ ದುರ್ಬಲತೆ, ಜ್ಞಾಪಕಶಕ್ತಿ ಕುಗ್ಗುವಿಕೆ ಮೊದಲಾದುವುಗಳಿಗೆ ಹೇಳಿದ ರುಚಿಕರವಾದ ಟಾನಿಕ್

ತಯಾರಕರು:

ಆರ್ಯ ವೈದ್ಯಶಾಲಾ ಕೊಟ್ಟಕಲ್

ರೈಲ್ವೆ ಸ್ಟೇಶನು: ತೀರೂರು

(ಸ್ಥಾಪನೆ: **1902**)

ಪಿ. ಮೂಲಚಾರು

ಶಾಖೆಗಳು:

ಕೊಯಿಕೊಡೆ (ಫೋನ್ ನಂಬ್ರ 155): ಪಾಲ್ಘಾಟ್ [ಫೋನ್ ನಂಬ್ರ 104]
ತೀರೂರು (ಫೋನ್ ನಂಬ್ರ 10) ಮತ್ತು ಈರೋಡು.

ಮುಖ್ಯ ಕಾರ್ಯಾಲಯದಲ್ಲೂ ಶಾಖಾ ಕಚೇರಿಗಳಲ್ಲೂ ಶಾಸ್ತ್ರೀಯ ರೀತ್ಯಾ ತಯಾರಿಸಲ್ಪಟ್ಟ ಶುದ್ಧ ಆಯುರ್ವೇದೀಯ **600**ಕ್ಕೂ ಮಿಕ್ಕಿದ ಔಷಧಿಗಳು ದೊರೆಯುತ್ತವೆ. ನವರ್ಕಳಿ, ಫಿಜಿಚಿಲ್ ಇತ್ಯಾದಿ ಕೇರಳದ ವಿಶೇಷ ಶುಶ್ರೂಷೆಗಳು ನಮ್ಮ

ಗೋಲ್ಡನ್ ಜುಬಿಲಿ ನರ್ಸಿಂಗ್ ಹೋಮ್, ಕೊಟ್ಟಕಲ್,

ಇಲ್ಲಿ ನಡೆಸಲಾಗುವುವು.

ಔಷಧಿ ಪ್ರಯೋಗದ ವಿವರಗಳನ್ನು ಸ್ವತಃ ಕೇಳಿ ಪಡೆಯಬಹುದು, ಇಲ್ಲವೆ ಚೀಫ್ ಫಿಜಿಶಿಯನ್‌ರೊಡನೆ ಪತ್ರವ್ಯವಹಾರ ಮಾಡಿ ತಿಳಿಯಬಹುದು.
ವಿವರಗಳಿಗೆ ಬರೆಯಿರಿ.

Edited, Printed and Published by K. H. Shetty at the Navayuga Press, Udipi, S. India.

REGD. NO. M. 3618

LICENCE NO. 31
Licensed to Post without Prepayment.

ಸಮಯ

ಸಂಪುಟ ೩೬
VOL. 36

7—2—1957

ಸಂಚಿಕೆ ೨೨
NO. 22

ಕನ್ನಡಿಗರ ಮುದ್ದಣ

ಶ್ರೀ ರಾಮಾಶ್ವಮೇಧ ಗ್ರಂಥವೇ ಈ "ಕಬ್ಬಿಗರ ಬಲ್ಲಹ"ನ ಶಾಶ್ವತವಾದ ಸ್ಮಾರಕ

ಪ್ರಕೃತಿ ಸೌಂದರ್ಯದ ವರ್ಣನೆಯಲ್ಲಿ ಕಾಳಿದಾಸ, ಷೇಕ್‌ಸ್ಪಿಯರರಿಗಿಂತ ಕಡಿಮೆಯಾಗಿರದ, ಹಾಸ್ಯರಸದ ಪ್ರವಾಹವನ್ನು ತೆರೆತೆರೆಯಾಗಿ ಉಕ್ಕೇರಿಸಿದ ನಗೆಗಾರನಾದ, ಯಕ್ಷಗಾನ ಸೇವೆಯಲ್ಲಿ ಸರಸ್ವತಿಯ ಸಾನಿಧ್ಯವನ್ನು ಪಡೆದ ಶುದ್ಧೋಪಾಸಕನಾದ, ಕರ್ನಾಟಕ ವಿಜೃಂಭಣವಸವನ್ನು ದಾಟಿ ಷಡಕ್ಷರಿಯ ಗಿರಿದುರ್ಗವನ್ನು ಮುಟ್ಟಿದ ಮಹಪೀಠಿಯನಾದ, ನಂದಳಿಕೆ ಮುದ್ದಣನ ಹೆಸರನ್ನು ಕೇಳಿದ ಕನ್ನಡಿಗನಾದರೂ ಇರುವನೇ? ಹೊಸಗನ್ನಡದ ಕಾವ್ಯಾಕಾಶದಲ್ಲಿ ಉದಯಿಸಿದ ತರುಣ ಭಾಸ್ಕರನಂತೆ ನಂದಳಿಕೆಯಲ್ಲಿ ಜನವರಿ ೩೪ರ ೧೮೭೦ರಲ್ಲಿ ಕವಿಯು ಜನಿಸಿದನು. ಪಾಠಾಳಿ ತಿಮ್ಮಪ್ಪಯ್ಯ ಹಾಗೂ ಮಹಾಲಕ್ಷ್ಮಮ್ಮ ಇವರೇ ಕವಿಯ ಜನಕ ಜನನಿಯರು. ಜೊಚ್ಚಲ ಮಗುವಾದ ಇದು ತಾಯಿಯ 'ಮುದ್ದಣ್ಣ' ನಾದುದರಲ್ಲಿ ಆಶ್ಚರ್ಯವೇನು?

ನಂದಳಿಕೆಯಲ್ಲಿ ಮುರೂರು ಚರಡಪ್ಪಯ್ಯನವರು ಸ್ಥಾಪಿಸಿದ್ದ ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವು ಮುಗಿಯಿತು. ಶಾಲೆಯ ಒಳ ಆವರಣದಲ್ಲಿ ಗುರುಮುಖದಿಂದ ಕಲಿತ ಅಕ್ಷರಾಭ್ಯಾಸದ ಶಿಕ್ಷಣದ ಜೊತೆಗೆ ಶಾಲೆಯ ಹೊರ ಆವರಣದಲ್ಲಿ ಪ್ರಕೃತಿಯ ಮುಖದಿಂದ ಸೃಷ್ಟಿನಿರೀಕ್ಷಣದಿ ಸೌಂದರ್ಯದ ಪಾಠವನ್ನೂ ಕಲಿತನು. ಪ್ರಕೃತಿಯು ಮಡಿಲಲ್ಲಿ ದೊರಕಿನ ಶಿಕ್ಷಣ ಜೊಂದಿಗೆ ಹಳ್ಳಿಯಲ್ಲಿ ಅಲ್ಲಲ್ಲಿಯಾಗುವ ಪುರಾಣ ಕಥೆಗಳು; ದಶಾವತಾರ ಆಟಗಳು; ನವರಾತ್ರಿ ದೀಪಾವಳಿ, ಯುಗಾದಿ ಮೊದಲಾದ ಹಬ್ಬಗಳಲ್ಲಿ ಹಳ್ಳಿಗಳಲ್ಲಿ ಜರಗುತ್ತಿದ್ದ ವಿಶೇಷ ಕಾರ್ಯಕ್ರಮಗಳು, ರಥೋತ್ಸವ, ದೀಪೋತ್ಸವ ಮೊದಲಾದ ಊರ ಜಾತ್ರೆಗಳು ಇವು ಮುದ್ದಣನಿಗೆ ಹೆಚ್ಚಿನ ಜ್ಞಾನವನ್ನು ನೀಡುವ ಪ್ರೇರಕಗಳಾದುವು.

ಪ್ರಾಥಮಿಕ ಶಿಕ್ಷಣ ಮುಗಿಸಿದ ಮುದ್ದಣ ಮುಂದಿನ ವಿದ್ಯಾಭ್ಯಾಸಕ್ಕಾಗಿ ಉಡುಪಿಯನ್ನು ಆಶ್ರಯಿಸಬೇಕಾಯಿತು. ೨ ವರ್ಷ ಇಂಗ್ಲಿಷ್ ಶಿಕ್ಷಣ ಕಲಿಯುವಾಗಲೇ ಬಡ ಕುಟುಂಬದಲ್ಲಿ ಜನಿಸಿದ ಮುದ್ದಣನಿಗೆ ಮುಂದಿನ ವಿದ್ಯಾಭ್ಯಾಸ ಕಲಿಯಲು ಆಸಾಧ್ಯವಾಯಿತು. ಅವಕಾರಣ ಇಂಗ್ಲಿಷ್ ಶಾಲೆಯನ್ನು ಬಿಟ್ಟು 'ಬತವರ ಬಂಧು'ವಾದ ಕನ್ನಡ ಟ್ರೈನಿಂಗ್ ಶಾಲೆಗೆ ಸೇರಿದನು. ಯಕ್ಷಗಾನದಲ್ಲಿ ಹೆಚ್ಚಿನ ಅಭಿರುಚಿ ಇದ್ದ ಮುದ್ದಣನಿಗೆ ಉಡುಪಿಯಲ್ಲಿರುವಾಗ ಹೆಚ್ಚಿನ ಪ್ರಸಂಗಗಳನ್ನು ಕಾಣುವ ಸಂದರ್ಭ ದೊರಕಿತು. ಈ ಎಲ್ಲಾ ಯೋಗ್ಯ ಪರಿಸ್ಥಿತಿಗಳಿಂದ ಮುದ್ದಣನ ಸುಪ್ತ ಕವಿ ಹೃತ್ಪದ್ಮ ವಿಕಾಸ ಹೊಂದುತ್ತಾ ಇದ್ದಿತು. ಸುಮಾರು ೧೮ ವರ್ಷ ವಯಸ್ಸಾಗುವಾಗ ತರಬೇತಿ ಶಾಲೆಯ ಜೀವನ ಮುಗಿಯಿತು. ಕನ್ನಡ ತರಬೇತಿ ಶಿಕ್ಷಣ ಪಡೆದರೂ ಉದ್ಯೋಗ ದೊರೆಯುವುದು ಕಷ್ಟವಾಯಿತು. ಆದರೆ ತರಬೇತಿ ಶಾಲೆಯ ಮುಖ್ಯೋಪಾಧ್ಯಾಯರು ಈತನ ದೇಹದಾರ್ಢ್ಯವನ್ನು ಕಂಡು ಅಂಗ ಸಾಧನೆಯ ವಿಶೇಷ ರೀತಿಯ ಅಭ್ಯಾಸಕ್ಕಾಗಿ ಮದ್ರಾಸಿಗೆ ಕಳುಹಿಸಿ ಕೊಟ್ಟರು. ಮದ್ರಾಸಿನಲ್ಲಿರುವಾಗ ಶ್ರೀ. ಎಚ್. ನಾರಾಯಣರಾಯರು, ಶ್ರೀ ಬೆನಗಲ್ ರಾಮರಾಯರು ಮುಂತಾದವರ ಸಹಾಯದಿಂದ ಸಾಹಿತ್ಯ ವಿಷಯದ ಚಟುವಟಿಕೆಯಲ್ಲಿ ಅಭ್ಯಾಸ ಪಡೆದದ್ದಲ್ಲದೆಹೆಚ್ಚಿನವ್ಯವಹಾರ ಜ್ಞಾನವು ಲಭಿಸಿತು. ಅಂಗಸಾಧನೆಯ ಶಿಕ್ಷಣ ಮುಗಿದ ನಂತರ ಉಡುಪಿಯ ಕ್ರೈಬ್ಬಿಯನ್ ಕೈಸ್ಕೂಲಿನಲ್ಲಿ ವ್ಯಾಯಾಮ ಶಿಕ್ಷಕನ ಕೆಲಸ ದೊರೆಯಿತು.

ಶ್ರೀ. ಗೋವಿಂದ ಪೈಗಳ ಅಭಿಪ್ರಾಯದಂತೆ ಗಿರ್ಲರ್‌ರಲ್ಲಿ ಈ ಕೆಲಸ ದೊರಕಿತು. ಅಂದಿನಿಂದಲೇ ಮುದ್ದಣನ ಕವಿ ಜೀವನ ಪ್ರಾರಂಭನಾಯಿತು. ಪ್ರಾರಂಭದಲ್ಲಿ ಯಕ್ಷಗಾನ ಪ್ರಸಂಗವಾದ 'ರತ್ನಾವತಿ ಕಲ್ಯಾಣ' ಎಂಬ ಕೃತಿಯನ್ನು ರಚಿಸಿದನು. ಆದೇ ಕೈಸ್ಕೂಲಲ್ಲಿ ಮಳಲಿ ಸುಬ್ಬರಾಯರೆಂಬ ವಿದ್ವಾಂಸರಿದ್ದರು. ಇವರ ಸಹಾಯದಿಂದಲೇ ಪ್ರಾರಂಭದ ಕೃತಿಯು ಶೋಭಿಸಿತು.

ನಂತರ ಸ್ಕಾಂದಪುರಾಣದೊಳಗಿನ 'ಕುಮಾರ ವಿಜಯ' ಎಂಬ ಪ್ರಸಂಗವನ್ನು ಬರೆದನು.

'ಸರ್ವ ಭೂಷಣ ಭೂತ್ತ ಕವಿತಾ
ದರ್ಪಣಾಬ್ಜಿಗಭೀರಗುರುವೆನಿ
ಸಿರ್ವ ಮಳಲೀ ಸುಬ್ಬರಾಯರಿಗರ್ಪಿ
ಸಿದೆನು'

ಎಂದು ಕುಮಾರ ವಿಜಯದಲ್ಲಿ ಹೇಳಿರುವನು. ಕುಮಾರ ವಿಜಯವು ಶ್ರೇಷ್ಠ ತರ ಗತಿಯ ಉತ್ತಮ ಪ್ರಸಂಗವಾಯಿತು. ಕುಮಾರ ವಿಜಯ ಪ್ರಸಂಗವನ್ನು ಓದಿದ ಪಂಜೆ ಮಂಗೇಶರಾಯರು ಬೆರಗಾಗಿ 'ಕುಮಾರ ವಿಜಯ ಬಿಟ್ಟರೆ ಪ್ರಸಂಗವಿಲ್ಲ, ನಂದಳಿಕೆಯವರನ್ನು ಬಿಟ್ಟರೆ ಕವಿಯಿಲ್ಲ' ಎಂದರು.

ಮುಂದೆ ಯಕ್ಷಗಾನ ರಚನೆಯಿಂದ ತೃಪ್ತನಾಗದ ಈತ ಹೊಸ ರೀತಿಯ ಕಾವ್ಯ ರಚನೆಗೆ ಕೈ ಹಾಕಿದನು. ಸಂಸ್ಕೃತ ನೊಳಗಿನ 'ಅದ್ಭುತ ರಾಮಾಯಣ' ಎಂಬುದನ್ನು ಗುರುಮುಖದಿಂದ ಕಲಿತು ಹಳಗನ್ನಡದ ಗದ್ಯದಲ್ಲಿ ಬರೆಯಲು ಪ್ರಾರಂಭಿಸಿದನು.

ಮುಂದೆ ಜೈಮಿನಿ ಭಾರತದ ಮಾದರಿಯಲ್ಲಿ ರಾಮಪಟ್ಟಾಭಿಷೇಕ ಎಂಬ ಗ್ರಂಥವನ್ನು ರಚಿಸಿದನು. ಈ ಸಂದರ್ಭದಲ್ಲಿ ಬಪುಲಾಡಿ ವೆಂಕಟರಮಣ ಹೆಬ್ಬಾರರ ಪರಿಚಯವು ಆಯಿತು. 'ರಾಮಾಶ್ವಮೇಧ' ಎಂಬ ಗ್ರಂಥವನ್ನು ಬರೆಯಲು ಪ್ರಾರಂಭಿಸಿದ ಮುದ್ದಣ್ಣನ ಪ್ರಾರಂಭದ ಪಟ್ಟಾಭಿಷೇಕ ಭಾಗವನ್ನು ಓದಿದ ಹೆಬ್ಬಾರರು "ಈ ಪದ್ಯಗಳನ್ನು ಬರೆಯುವುದಕ್ಕಿಂತ ಛಂದಸ್ಸಿನ ಗೊಡವೆ ಬಿಟ್ಟು ವಚನರೂಪದಲ್ಲಿಯೇ ಯಾಕೆ ಬರೆಯಬಾರದು.?" ಎಂಬ ಸೂಚನೆಯನ್ನು ಕೊಟ್ಟರು. ಜೈಮಿನಿ ಭಾರತದ ಮಾದರಿಯ ರಾಮಾಶ್ವಮೇಧ ಬರೆಯಲು ಹೊರಟ ಮುದ್ದಣ್ಣನು ಅವರ ಸೂಚನೆಯನ್ನು ಅಂಗೀಕರಿಸಿ ಪ್ರಾರಂಭದ ಪಟ್ಟಾಭಿಷೇಕ ಭಾಗವನ್ನು ಮುಗಿಸಿ ರಾಮಾಶ್ವಮೇಧವನ್ನು ಹಳಗನ್ನಡ ಗದ್ಯದಲ್ಲಿ ಬರೆಯಲು ಪ್ರಾರಂಭಿಸಿದನು. 'ಕರ್ಮಣಿಸರದೊಳ್ ಜೆಂಬನಳಮಂಕೋದಂತಿರೆ, ರಸಮೊಸರೆ, ಲಕ್ಷಣಂ ಮಿಕ್ಕೆರೆ, ಎಡೆಯೆಡೆಯೋಳ್ ಸಕ್ಕದವ ನಲ್ನುಡಿ ನೆರೆಯೆ ತಿರುಳ್ಗನ್ನಡದೊಳ್ ರಾಮಾಶ್ವಮೇಧವನ್ನು ರಚಿಸಿದನು.

ರಾಮಾಶ್ವಮೇಧದಲ್ಲಿ ಬರುವ ಮುದ್ದಣ ಮನೋರಮೆ ಮಯೂರವರ ಪಾತ್ರ ಸೃಷ್ಟಿ ಅಪೂರ್ವನಾದದ್ದು. ಇವರ ಕಾಮದೇವರತಿದೇವಿಯರ ಸಲ್ಲಾಪದ, 'ಭವತಿ ಭಿಕ್ಷಾಂದೇಹಿ' ಪ್ರಕರಣದ ಸಲ್ಲಾಪದ ಭಾಗಗಳು ಹಾಸ್ಯರಸದ ಮಹತುಗಳಾಗಿ ಕಂಗೊಳಿಸುತ್ತವೆ ಈ ಗ್ರಂಥಸೃಷ್ಟಿ ಮುದ್ದಣನ ಗ್ರಂಥರಚನಾಕೌಶಲ, ಏಕಾಗ್ರಬುದ್ಧಿ, ಚಿತ್ತಸ್ಥೈರ್ಯ, ಹಾಸ್ಯಮಯ ಜೀವನ, ಮೊದಲಾದ ಕೆಲ ಸಂಗತಿಗಳನ್ನು ತಿಳಿಸುತ್ತವೆ. ಈಗ್ರಂಥ ರಚಿಸುವ ಸಮಯದಲ್ಲಿ ಮುದ್ದಣನು ಕುಂದಾಪುರ ಕೈಸ್ಕೂಲಿನಲ್ಲಿ ವ್ಯಾಯಾಮ ಶಿಕ್ಷಕನಾಗಿದ್ದ. ಇದಕ್ಕಿಂತ ಮೊದಲೇ ಅಂದರೆ ೧೮೯೩ರಲ್ಲಿ ಶಿವಮೊಗ್ಗ ಜಿಲ್ಲೆಯ ಕಾಗೇಕೋಡಮಗ್ಗಿ ಗ್ರಾಮದ ನಾರ್ಣಪ್ಪಯ್ಯನ ಮಗಳಾದ ಕಮಲಾಬಾಯಿ ಎಂಬಾಕೆಯೊಂದಿಗೆ ಲಕ್ಷ್ಮೀನಾರಾಯಣ ಕವಿಗೆ ವಿವಾಹವಾಗಿತ್ತು.

ಈ ರೀತಿ ಹಲವು ಗ್ರಂಥಗಳ ರಚನೆಮಳ್ತು ಇನ್ನಿತರ ಗ್ರಂಥಗಳ ಪಠನೆಯಿಂದ ಅವಿಶ್ರಾಂತವಾದ ಮಾನಸಿಕ ಪರಿಶ್ರಮಕ್ಕೆ ಒಳಗಾದನು. ಇದರಿಂದ ಶಕ್ತಿಕುಂದಿ ಕ್ಷಯರೋಗಕ್ಕೆ ತುತ್ತಾದನು. ಕೊನೆಗೆ ೧೯೦೧ ಫೆಬ್ರವರಿ ೨೫ನೇ ದಿನಾಂಕ ತನ್ನ ೩೨ನೆಯ ವಯಸ್ಸಿನಲ್ಲಿ ಅಕಾಲ

(೨೩ನೇ ಪುಟ ನೋಡಿರಿ)

ಮೈಸೂರಿನ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರ
ಅಧ್ಯಕ್ಷತೆಯಲ್ಲಿ
14—1—1957ರಂದು ಮಂಗಳೂರಲ್ಲಿ ಜರಗಿದ
ನನ್ನ ಬ್ಯಾಂಕಿನ
ರಜತ ಮಹೋತ್ಸವವು
ಯಶಸ್ವಿಯಾಗುವಂತೆ ನಮ್ಮೊಡನೆ ಸಹಕರಿಸಿದ ಮತ್ತು ನಮಗೆ ನೆರವಾದ ಎಲ್ಲಾ ಪೋಷಕರಿಗೂ ಗೆಳೆಯರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತೇವೆ.
ದಿ ವಿಜಯ ಬೇಂಕ್ ಲಿಮಿಟೆಡ್
ಪ್ರಧಾನ ಕಛೇರಿ: ಮಂಗಳೂರು—3.

ಶ್ರಮಣರ ಶ್ರೀಕ್ಷೇತ್ರ

ಶ್ರವಣ ಬೆಳ್ಗೊಳದಲ್ಲಿರುವುದು ಗುಮ್ಮಟ ವಿಗ್ರಹವಲ್ಲ— ನಿಜಕ್ಕೂ ಮೋಹಕ ಮುನ್ನಥ!!!

ಜಗದ್ವಿಖ್ಯಾತವಾದ ಮೂರು ಗೋಮಟೇಶ್ವರ ಮಹಾ ವಿಗ್ರಹಗಳೂ ನಮ್ಮ ಕನ್ನಡ ನಾಡಿನಲ್ಲಿಯೇ ಇರುವುದು ಕನ್ನಡಿಗರಿಗೊಂದು ಹೆಮ್ಮೆ. ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ, ವೇಣೂರುಗಳ ಗೋಮಟೇಶ್ವರ ವಿಗ್ರಹಗಳನ್ನು ಹಲವು ಬಾರಿ ಕಂಡಿದ್ದರೂ ಶ್ರವಣ ಬೆಳಗೊಳವನ್ನು ಒಂದು ಬಾರಿ ಸಂದರ್ಶಿಸಬೇಕೆಂಬ ಮಹದಾಸೆ ನೊಂದಲಿಂದಲೂ ಇತ್ತು. ಶ್ರವಣಬೆಳಗೊಳದ ಕುರಿತು ಚರಿತ್ರೆಯಲ್ಲಿ ಮಾತ್ರ ಓದಿ ತಿಳಿದ ನೆನಪು ಮೌರ್ಯ ವಂಶದ ಚಂದ್ರಗುಪ್ತ ಚಕ್ರವರ್ತಿಯು ತನ್ನ ಪುತ್ರನಿಗೆ ರಾಜ್ಯದ ಪಟ್ಟವನ್ನು ಕಟ್ಟಿ ತನ್ನ ಗುರು ಭದ್ರಬಾಹು ಮುನಿಗಳೊಡನೆ ಈ ಶ್ರವಣಬೆಳಗೊಳ ಕ್ಷೇತ್ರಕ್ಕೆ ಬಂದಿದ್ದನಂತೆ. ಶ್ರವಣಬೆಳಗೊಳವನ್ನು ಕೂಡಾ 'ದಕ್ಷಿಣ ಕಾಶಿ'ಯೆಂದು ಕರೆಯುವುದಿದೆ.

ಶ್ರವಣ ಬೆಳಗೊಳದಲ್ಲಿ ಪ್ರವಾಸಿಗಳ ದೃಷ್ಟಿಯಿಂದ ಉತ್ತಮವಾದ ಹೋಟೇಲುಗಳಿಲ್ಲ ಛತ್ರಗಳೇನೋ ಕೆಲವು ಇವೆ. ಜಿಲ್ಲಾ ಜೋರ್ಡಿನ ಆಡಳಿತೆಗೊಳಪಟ್ಟ ರವ "ಪ್ರವಾಸಿ ಮಂದಿರ"ವು ಊರ ಸಮೀಪದಲ್ಲಿಯೇ ಇದೆ. ಬೆಳಗೊಳ ಊರು ಚಿಕ್ಕದೇ. ತಾಲೂಕಿನ ಕೇಂದ್ರವೂ ಅಲ್ಲ. ಪ್ರಪಂಚದಲ್ಲಿಯೇ ಪ್ರಖ್ಯಾತವಾದ ಗೋಮಟೇಶ್ವರನ ಏಕ ಶಿಲಾವಿಗ್ರಹದ ದೆಸೆಯಿಂದಲೇ ಭೂಪಠದಲ್ಲಿ ಈ ಊರಿಗೊಂದು ಗಣನೀಯ ಸ್ಥಾನವು ದೊರಕಿದೆಯೆಂದರೂ ಸಲ್ಲುವುದು. ಊರಿನ ಮಧ್ಯದಲ್ಲಿ ಎರಡು ದೊಡ್ಡ ಬೆಟ್ಟಗಳಿವೆ. ಈ ಎರಡು ಬೆಟ್ಟಗಳ ಮಧ್ಯೆ ಒಂದು ಸರೋವರವಿದೆ. ಈ ಸರೋವರಕ್ಕೆ 'ಶ್ವೇತ ಸರೋವರ"ವೆಂಬ ಹೆಸರಿದೆಯಂತೆ. ಅದು ದರಿಂದಲೇ ಈ ಊರಿಗೆ ಬಿಳಿಯ ಕೊಳ-ಬೆಳ್ಗೊಳ ಎಂಬ ಹೆಸರು ಬಂದಿದೆ. ಕೊಳದ ನಾಲ್ಕೂ ಕಡೆಗಳಲ್ಲಿ ಸುಂದರವಾದ ಏಕಪ್ರಮಾಣದ ಪಾವಟಿಗೆಗಳಿವೆ.

ಬೆಟ್ಟಗಳಲ್ಲಿ ದೊಡ್ಡದಾದ ಬೆಟ್ಟವನ್ನು 'ಇಂದ್ರಗಿರಿ' ಎಂಬ ಹೆಸರಿನಿಂದ ಕರೆಯುತ್ತಾರೆ. ಈ ಬೆಟ್ಟವು ಸಮುದ್ರ ಮಟ್ಟದಿಂದ ಸುಮಾರು ೩೫೦೦ ಅಡಿಗಳಷ್ಟು ಎತ್ತರವಾಗಿದೆ. ಜಗತ್ಪ್ರಸಿದ್ಧವಾದ ಗೋಮಟೇಶ್ವರನ ವಿಗ್ರಹವಿರುವುದು ಇದೇ ಬೆಟ್ಟದ ಮೇಲೆ. ಈ ಊರನ್ನು ಯಾವಮೂಲೆಯಿಂದ ಬೆಳಗೆಪ್ಪುವೇಪಿಸಿದರೂ ನೋಡಲು ನಮಗೆ ಕಾಣಿಸಿಗುವ ಮನೋಹರವಾದ ನೋಟವೆಂದರೆ ಏಕಶಿಲೆಯಲ್ಲಿ ಕೆಡೆಯಲ್ಪಟ್ಟ ಬಾಹುಬಲಿಯ ಮನಮೋಹಕ ಮುಗ್ಧ ಸೌಂದರ್ಯ. ಇಂದ್ರಗಿರಿಯ ಸ್ನೇರಲು ಸುಮಾರು ೬೦೦ಕ್ಕಿಂತಲೂ ಹೆಚ್ಚು ಶಾಸನಗಳನ್ನು ಕೆಡೆದಿದ್ದಾರೆ. ಈ ಪಾವಟಿಗೆಗಳನ್ನು ಏರುತ್ತ ಸುತ್ತಲೂ ಕಣ್ಣು ಹಾಯಿಸಿದರೆ ಪ್ರಕೃತಿ ಸೌಂದರ್ಯದ ಪರಮಾವಧಿಯನ್ನು ಸ್ವಾಧಿಸಬಹುದು.

ಬೆಟ್ಟದ ಮೇಲಿರುವ ಮಹಾದ್ವಾರವನ್ನು ಪ್ರವೇಶಿಸಿದೊಡನೆ ದಿವ್ಯ ಮೂರ್ತಿ ಗೋಮಟೇಶ್ವರನ ದರ್ಶನವಾಗುತ್ತದೆ. ಗೋಮಟೇಶ್ವರನೆಂದರೆ ಬಾಹುಬಲಿ. ಅರಸನಾದ ಬಾಹುಬಲಿ ಗೋಮಟನಾದುದು — ಹೇಗೆ — ಈ ಕುರಿತಾದ ಕಥೆಯು ಇಂತಿದೆ.

ಬಹುಕಾಲದ ಹಿಂದೆ ಅಯೋಧ್ಯೆಯನ್ನಾಳಿಕೊಂಡಿದ್ದ ಹದಿನಾಲ್ಕನೆಯ ಮನು ನಾಭಿರಾಜರಿಗೆ ಮರುದೇವಿಯೆಂಬ ಪಟ್ಟದ ರಾಣಿಯಲ್ಲಿ ವೃಷಭ ತೀರ್ಥಂಕರರಿಗೆ ಯಶಸ್ವಿನಿ ವೆಂಬ ಸುನಂದಾ ಎಂಬಿಬ್ಬರು ಕನ್ಯೆಯರನ್ನು ವಿವಾಹ ಮಾಡಿಸಿದರು. ಹಿರಿಯ ರಾಣಿಯಲ್ಲಿ ಚಕ್ರವರ್ತಿ ಸಂಪನ್ನನಾದ ಭರತನೂ, ಕಿರಿಯ ರಾಣಿಯಲ್ಲಿ ಬಾಹುಬಲಿಯೂ ಹುಟ್ಟಿದರಂತೆ. ಕಾಲಕ್ರಮೇಣ ಕಾರಣಾಂತರಗಳಿಂದ ವೃಷಭ ತೀರ್ಥಂಕರರು ವೈರಾಗ್ಯ ಪರವಶರಾಗಿ ಹಿರಿಯ ಮಗ ಭರತನಿಗೆ ಪಟ್ಟವನ್ನು ಕಟ್ಟಿ, ಕಿರಿಯ ಪುತ್ರ ಬಾಹುಬಲಿಯನ್ನು ಯುವರಾಜನನ್ನಾಗಿ ಮಾಡಿ ಭರತನು ಅಯೋಧ್ಯೆಯಲ್ಲಿಯೂ, ಬಾಹುಬಲಿಯು ಪೌದನಾಪುರದಲ್ಲಿಯೂ ಆಳುವಂತೆ ಆಸ್ಪಣಿ ಕೊಟ್ಟು ತಾವು ತಪಸ್ಸಿಗಾಗಿ ಹೊರಟು ಹೋದರು. ಅಯೋಧ್ಯೆಯನ್ನಾಳಿ ಕೊಂಡಿದ್ದ ಭರತ ಚಕ್ರವರ್ತಿಯು ಆಯುಧಾಗಾರದಲ್ಲಿ "ಚಕ್ರರತ್ನ"ವೊಂದು ಉದಯಿಸಿತು. ಇವನ್ನು ಕಂಡ ಭರತಪಲ್ಲಿ ತಾನು ಪೂರ್ಣ ಚಕ್ರವರ್ತಿಯಾಗಬೇಕೆಂಬ ಮಹದಾಸೆಯು ಮೂಡಿ ತಕ್ಷಣಾ ಮವಾಗಿ ದಿಗ್ವಿಜಯಕ್ಕೆ ಹೊರಟನಂತೆ. ಪೂರ್ವಾಭಿಮುಖನಾಗಿ ಹೊರಟ ಭರತನಿಗೆ ಅನೇಕ ಮಂದಿ ಅರಸರು ಶರಣಾಗತರಾಗಿ ಕಪ್ಪಕಾಣಿಕೆಗಳನ್ನು ಸಲ್ಲಿಸಿದರು. ಬಳಿಕ ಭರತನು ಉತ್ತರಾಭಿಮುಖನಾಗಿ ಹೊರಟು ಭೂಮಂಡಲವನ್ನೆಲ್ಲಾ ಗೆದ್ದು 'ಚಕ್ರವರ್ತಿ' ಬಿರುದಾಂಕಿತನಾಗಿ ರಾಜಧಾನಿಯನ್ನು ಪ್ರವೇಶಿಸಿದನು. ಆದರೆ ಅವನ 'ಚಕ್ರರತ್ನ'ವು ಮಾತ್ರ ಪುರಪ್ರವೇಶವನ್ನು ಮಾಡದೆ ಪುರದ್ವಾರದಲ್ಲಿಯೇ ನಿಂತು ಬಿಟ್ಟಿತಂತೆ. ಆಗ ಭರತ ಚಕ್ರವರ್ತಿಯು ಪುರೋಹಿತರೊಡನೆ ವಿಚಾರಿಸಿ ಕಾರಣವನ್ನು ತಿಳಿದನು. ಭರತನ ಸೋದರನಾದ ಬಾಹುಬಲಿಯು ತನ್ನಣ್ಣನಿಗೆ ಮಣಿಯದೆ ತನ್ನ ರಾಜ್ಯಕ್ಕೆ ತಾನೇ ಅಧಿಪತಿಯೆನಿಸಿ ಕೊಂಡಿದ್ದನು. ಇದರಿಂದ ಹಿರಿಯನಾದ ಭರತನು ಕೋಪಾವಿಷ್ಟನಾಗಿ ತನ್ನ ತಮ್ಮನ ಮೇಲೆಯೇ ಯುದ್ಧಕ್ಕೆ ಸನ್ನದ್ಧನಾದನು. ಆದರೆ ಎರಡೂ ಪಕ್ಷಗಳ ಮುಖ್ಯ ಮಂತ್ರಿಗಳು "ಈ ಇಬ್ಬರು ಅಣ್ಣ ತಮ್ಮಂದಿರೂ ಯುದ್ಧದಿಂದ ಜನನಾಶಕ್ಕೆ ಕಾರಣರಾಗುತ್ತಾರೆ. ಆದುದರಿಂದ ಇಬ್ಬರೊಳಗೆ ಧರ್ಮ ಯುದ್ಧವು ನಡೆಯಲಿ" ಎಂದು ತೀರ್ಮಾನಿಸಿದರು. ಭರತ, ಬಾಹುಬಲಿ ಇವರೊಳಗೆ ದೃಷ್ಟಿ ಯುದ್ಧ, ಜಲಯುದ್ಧ, ಮಲ್ಲಯುದ್ಧಗಳು ನಡೆದುವು. ಆದರೆ ಈ ಎಲ್ಲ ಯುದ್ಧಗಳಲ್ಲೂ ಅಣ್ಣನಾದ ಭರತನೇ ಸೋತು ಹೋದನಂತೆ ತೊನೆಗೆ ಅತ್ಯಂತ ಕೋಪಗೊಂಡ ಭರತನು ತನ್ನ ಚಕ್ರರತ್ನವನ್ನು ಕರೆದು "ಬಾಹುಬಲಿಯ ತಲೆಯನ್ನು ಕಡಿದು ರುಳಿಸು" ಎಂದು ಕಟ್ಟಪ್ಪಣೆಯನ್ನು ಕೊಟ್ಟೇ ಬಿಟ್ಟನು. ಆದರೇನು? ಬಾಹುಬಲಿಯ ಮುಂದೆ "ಚಕ್ರರತ್ನ"ವು ನಿರ್ವೀರ್ಯವಾಗಿ ನಿಂತು ಬಿಟ್ಟಿತು. ಬಾಹುಬಲಿಯ ಬಳಿಕ ಬಂದ "ಜಕ್ರರತ್ನ"ವು ಸ್ವಧ್ವನಾಗಿಯೇ ನಿಂತಿರುವುದನ್ನು ಕಂಡ ಮೇಲಂತೂ ಭರತನಿಗೆ ಲಜ್ಜೆಯಾಯ್ತು— "ತನ್ನಣ್ಣನಾದ ಭರತನ ಅಪಮಾನಕ್ಕೆ ತಮ್ಮನಾದ ತಾನೇ ಕಾರಣನಾದೆನೆಲ್ಲಾ" ಎಂದು ಬಾಹುಬಲಿಯು ಪಶ್ಚಾತ್ತಾಪ ಪಟ್ಟನು. ಕೂಡಲೇ ಅಣ್ಣನ ಕಾಲಿಗೆರಗಿ ತನ್ನ ಸಕಲ ರಾಜವೈಭವಗಳನ್ನೂ ಭರತನಿಗೇ ಧಾರೆಯೆರೆದು ತಾನು ದೀಕ್ಷೆ ಪಡೆದು ತಪಸ್ಸಿಗೆ ಹೊರಟು ಹೋದನಂತೆ. ಸರ್ವ ಸಂಘಪರಿತ್ಯಾಗಿಯಾಗಿ ಆಂತರಿಕ ಶತ್ರುಗಳನ್ನು ಸದೆ ಬಡಿಯುವುದಕ್ಕಾಗಿ ಬಾಹುಬಲಿಯು ಘೋರವಾದ ತಪಸ್ಸನ್ನು ಕೈಗೊಂಡನು. ಶರೀರದ ಸುತ್ತಮುತ್ತಲೂ ಬಳ್ಳಿಗಳು ಬೆಳೆದು ಮೈಯನ್ನೆಲ್ಲಾ ಸುತ್ತಿದವು. ಬಾಹುಬಲಿಯು ಕೇವಲ ಜ್ಞಾನವನ್ನು ಪಡೆದನು. ಇಂತಹ ಬಾಹುಬಲಿಯನ್ನು ನಮ್ಮ ಕನ್ನಡಿಗರು ತಿಳಿದಷ್ಟು ಬೇರಾರೂ ತಿಳಿದಿಲ್ಲ. ಶ್ರೀ. ಜಿ. ಬ್ರಹ್ಮಪ್ಪ B. A. (Hons) ಇವರು "ಕನ್ನಡಿಗರ ಬಾಹುಬಲಿ" ಎಂಬ ತಮ್ಮ ಲೇಖನವೊಂದರಲ್ಲಿ ಹೀಗೆ ಬರೆದಿದ್ದಾರೆ!

"ಕಾವ್ಯದಲ್ಲಿ ಈ ಮಹಾನುಭಾವನ ಪುಣ್ಯ ಚರಿತ್ರೆಯನ್ನು ಹಲವರು ಹಾಡಿದರು. ಕಾವ್ಯದಲ್ಲಿ ಚಿತ್ರಿತನಾದ ಬಾಹುಬಲಿ ಕನ್ನಡ ಬಲ್ಲವರ ಬಾಹುಬಲಿಯಾಗಿದ್ದ. ಕನ್ನಡದ ಶಿಲ್ಪಿಗಳು ಬೆಟ್ಟದ ಶಿಖರವನ್ನೇ ಕೆಡೆದು ಬಾಹುಬಲಿಯ ನಿರ್ಮಲಾಕಾರವನ್ನು ನಿರ್ಮಿಸಿದರು. ಬಾಹುಬಲಿಯ ಹೆಸರಿಕ್ಕು ಮುಟ್ಟದ ಕಗ್ಗಲ್ಲೂ ನೀರ್ಗಲ್ಲಾಗಿ ಅನಾವಶ್ಯಕ ಭಾಗ ಕರಗಿ ಸೋರಿ ಬಾಹುಬಲಿಯ ದಿವ್ಯಾಕಾರವು ಮಾತ್ರ ಮೂಡಿ ರಾರಾಜಿಸಿತು. ಕನ್ನಡಿಗರು ಬಣ್ಣಿಸಿ, ಬಣ್ಣಿಸಿ ಬಾಹುಬಲಿಯ ಭಕ್ತರಾದರು. ಕಲ್ಲನ್ನು ಕರಗಿಸಿ ಕಲಾಸಿರಿಯನ್ನು ಸುರಿಸಿ ಸುರಿಸಿ ಕನ್ನಡಿಗರು ಬಾಹುಬಲಿಯ ಭಕ್ತರಾದರು! ಗೊಮ್ಮಟ ಸಾಹಿತ್ಯ ಹತ್ತು ಶತಮಾನಗಳಿಂದಲೂ ನಿರಂತರವಾಗಿ ಕನ್ನಡ ಸಾಹಿತ್ಯವಾಹಿನಿಯಲ್ಲಿ ಸೇರಿಕೊಂಡು ಹಿಂಯುತ್ತಲಿದೆ. ಗೊಮ್ಮಟ ಶಿಲ್ಪವೂ ಹತ್ತು ಶತಮಾನಗಳಿಂದಲೂ ಆಗಾಗ್ಗೆ ಸ್ಫೂರ್ತಿಗೊಂಡು ಶ್ರವಣ ಬೆಳಗೊಳ, ಕಾರ್ಕಳ ವೇಣೂರು ಮೊದಲಾದ ಕಡೆಗಳಲ್ಲಿ ಕೊನರುತ್ತಲಿದೆಯೇ ಹೊರತು ಕೊಂಕಿಲ್ಲ. ಸಂಪ ಮಹಾಕವಿಯ ಆದಿ ಪುರಾಣದಲ್ಲಿ ಬಾಹುಬಲಿಯ ಭವ್ಯತಮ ಬಾಳ್ವೆ ದಿವ್ಯವಾಗಿ ಮೂಡಿದೆ. ಕನ್ನಡ

(೦ನೇ ಪುಟ ನೋಡಿರಿ)

ಝಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತಮ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ. 6/8; ½ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ವಿಳಾಸಗಳಲ್ಲಿ ಸಿಗುವುದು.

1. ಶಾ ಕಂಸೆನ್ಸಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ,

ಏನೇ ವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ, ಮದ್ರಾಸ್—3.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.,

ಸ್ಥಾಪನೆ: ೧೯೩೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಅಧಿಕೃತ ಬಂಡವಾಳ	...	ರೂ. 56,00,000
ಚಲಾವಣೆ ಬಂಡವಾಳ	...	ರೂ. 32,23,787
ವರ್ಗಣಿ (ಪಾಲು) ಬಂಡವಾಳ	...	ರೂ. 32,11,000
ತೆತ್ತ ಬಂಡವಾಳ	...	ರೂ. 27,45,000
ಕ್ಷೇಮನಿಧಿ	...	ರೂ. 15,00,000

ತಾ. 30-9-1956ರಲ್ಲಿ ನಮ್ಮ ಚಲಾವಣೆ ನಿಧಿ 10 ಕೋಟಿಗೂ ಮಿಕ್ಕಿದೆ

(ನವೋದಿತ ರಾಜ್ಯಗಳಲ್ಲಿ) ನಮ್ಮ ಶಾಖೆಗಳು

(ವಿಶಾಲ) ನವಮೈಸೂರು	59
ಆಂಧ್ರ ಪ್ರದೇಶ	14
ಕೇರಳ	13
ಬೊಂಬಾಯಿ	8
ಮದ್ರಾಸು	2

ಟಿ. ಎ. ಪೈ, ಬಿ. ಕಾಂ. (ಬೊಂಬಾಯಿ) ಎಂ. ಎಲ್. ಎ., ಜನರಲ್ ಮೆನೇಜರ್. ಟಿ. ಎಂ. ಎ. ಪೈ, ಎಂ. ಬಿ., ಬಿ ಎಸ್. ಮೆನೇಜಿಂಗ್ ಡೈರೆಕ್ಟರ್.

The Canara Industrial & Banking Syndicate Ltd.

ಕರ ಕೌಶಲ

ಗುಡಿಕೈಗಾರಿಕೆಗಳನ್ನು ಪ್ರೋತ್ಸಾಹಿಸಿದಷ್ಟೂ ರಾಷ್ಟ್ರಕ್ಕೆ ಶ್ರೇಯಸ್ಸು!!!

ಭಾರತಕ್ಕೊಂದು ಇತಿಹಾಸ ಪ್ರಾರಂಭವಾದಂದಿನಿಂದಲೂ ಇಲ್ಲಿಯ ಕೈಕಸುಬು-ಗುಡಿ ಕೈಗಾರಿಕೆಗಳು ಪ್ರಪಂಚದ ಮಾನ್ಯತೆಯನ್ನು ಪಡೆದಿತ್ತು ಎಂದು ತಿಳಿದು ಬರುತ್ತದೆ. ನಮ್ಮ ಭಾರತದ ಗುಡಿ ಕೈಗಾರಿಕೆಗೊಂದು ಗೌರವಪೂರ್ಣವಾದ ಏಕಾಧಿಕಾರ ಪ್ರಭುತ್ವವುಳ್ಳ ಹಿನ್ನೆಲೆಯಿದೆ. ವಿಶ್ವದ ನೂರು ಕಟ್ಟೆಯಲ್ಲಿ ಅವುಗಳು ಬೇಕಲು ಎನಿಸಿಕೊಳ್ಳಲಿಲ್ಲ. ಹಿಂದೊಮ್ಮೆ ವಿಶ್ವದ ನೂರು ಕಟ್ಟೆಯಲ್ಲಿ ಅಗ್ರಪೂಜೆ ಪಡೆಯುತ್ತಿದ್ದ ನಮ್ಮ ಗುಡಿ ಕೈಗಾರಿಕೆಯು ಇತಿಹಾಸಕ್ಕೆ ಈಗ ಗ್ರಹಣ ಹಿಡಿದಿದೆಯೇ -ಮುಗ್ಗರಿಸಿ ಬಿದ್ದಿದೆಯೇ ಎಂದು ನಾವು ನಮ್ಮ ಗುಡಿ ಕೈಗಾರಿಕೆಯ ಸದ್ಯದ ಗತಿ-ಮುಂದಿನ ಪ್ರಗತಿಯನ್ನು ಪರೀಕ್ಷಿಸುವಾಗ ನಿಮರ್ಶಿಸಬೇಕಾದೀತು.

ಭಾರತದ ವ್ಯಾಪಾರೋದ್ದಿಮೆಯ ರಂಗಗಳಲ್ಲಿ ಚತುರರಾದ ನಮ್ಮ ನಾವಿಕರು ತಡಿಸಿದ ಕೈ ದೊಡ್ಡದು. ಕೇಂದ್ರ ವ್ಯಾಪಾರ ಸಂಸ್ಥೆಗಳಲ್ಲಿ ಇಲ್ಲಿಯ ಗುಡಿ ಕೈಗಾರಿಕೆಗೆ ಸಲ್ಲುತ್ತಿದ್ದ ಸ್ಥಾನ-ಮಾನ ದೊಡ್ಡದು. ನಮ್ಮವರು ಪೂರ್ವ-ಪಶ್ಚಿಮಗಳಲ್ಲೂ ಏಕಮುಖವಾಗಿ, ಮರ್ಯಾದಾಪೂರ್ಣವಾದ ಮಾರು ಕಟ್ಟೆಯನ್ನು ಸೊರಕಿಸಿಕೊಂಡಿದ್ದರು. ಇದು ವಿದೇಶಿಯರಿಗೂ ಪರ್ಯಾಪ್ತವಾದ ವಿಷಯವೇ ಆಗಿತ್ತು. ಸೂರ್ವ—ಪಶ್ಚಿಮ ನಮ್ಮ ಕೈಕಲೆಯನ್ನು ಕಂಡು ಅಚ್ಚರಿ ಪಡುತ್ತಿರುವಾಗ ದಕ್ಷಿಣದ ಬಂದವಲುಗಾರರ ಕೊಟ್ಟೆಕಚ್ಚೆದ್ದು ಉರಿಯುತ್ತಿತ್ತು. ಚೀನಾ, ಇಜಿಪ್ಟ್, ಗ್ರೀಸ್, ರೋಮ್, ಇಟಲಿ ಮತ್ತಿನ್ನಿತರ ಐರೋಪ್ಯ ದೇಶಗಳಲ್ಲಿ ನಮ್ಮ ಗುಡಿ ಕೈಗಾರಿಕೆಗೆ ಕ್ರಿಸ್ತ ಪೂರ್ವದಲ್ಲೂ ಒಳ್ಳೆ ಸ್ಥಾನ ಗೌರವವಿತ್ತು. ಅದು ಚತುರರಾದ, ಬುದ್ಧಿವಂತರಾದ ನಮ್ಮ ಹಿಡಗುಗಾರರು ಉಳಿಸಿಕೊಂಡಿದ್ದ ಪ್ರತಿಷ್ಠೆ, ಗೌರವಗಳಿಗೆ ಉಡುಗೊರೆಯಾಗಿ ಸಲ್ಲುತ್ತದೆ. ದಕ್ಷಿಣ ಭಾರತೀಯರು ರೋಮ್ ದೇಶದೊಡನೆ ವ್ಯಾಪಾರ ಸಂಬಂಧವನ್ನಿಟ್ಟುಕೊಂಡಿದ್ದರೆಂಬುದಕ್ಕೆ ರೋಮ್‌ನಲ್ಲಿ ಈಚೆಗೆ ದೊರಕಿದ ಆಂಧ್ರದ ಚಿಪ್ಪೆಯುಳ್ಳ ಮೊಹರುಗಳೂ, ಆಂಧ್ರದಲ್ಲಿ ದೊರಕಿರುವ ರೋಮ್ ಪ್ರಭುತ್ವದ ಅಂಕಿತವುಳ್ಳ ನಾಣ್ಯಗಳೂ ಪುಷ್ಟಿಯನ್ನಿತ್ತಿರುವುವೆ. ನಮ್ಮ ಕರಾವಳಿಯ ಜನರು ಒಳ್ಳೆಯ ನಾವಿಕರಾಗಿದ್ದರೆಂದು ಇತಿಹಾಸದ ಸಾಕ್ಷಿಗಳು ಹೇಳುತ್ತಿವೆ. ಅವರು ನೌಕಾ ಸೂಕ್ಷ್ಮವನ್ನು ಅರಿತಿ.ಕೊಂಡುದಕ್ಕೆ— ಅಮೇರಿಕಾ, ಆಸ್ಟ್ರೇಲಿಯಾ— ಮೊದಲಾದ ದೂರದ ದೇಶಗಳೊಡನೆ ಕಣ್ಣು ಮೋಣಿಗಳ ಮೂಲಕ ಅಲ್ಲಿಗೆಲ್ಲ ಹೋಗಿ ಬರುತ್ತಿದ್ದು ಅಲ್ಲಿಯ ನಾಗರಿಕತೆಯನ್ನು ಕದ್ದು ತಂದಿರುವುದು ಸಾಕ್ಷಿಯಾಗಿದೆ ಎಂದು ಎಚ್. ಜಿ. ವೆಲ್ಸ್ ಹೇಳುತ್ತಾರೆ. ಹಾಗಿರುವಲ್ಲಿ ದೂರದ ಇಜಿಪ್ಟ್, ಗ್ರೀಸ್, ರೋಮ್-ಮೊದಲಾಲೆಡೆಗಳಲ್ಲಿ ನಮ್ಮ ಜನರ ವ್ಯಾಪಾರ ಸ್ವಾತಂತ್ರ್ಯ ಮಾರುಕಟ್ಟೆ ಇರಲು ಸಾಧ್ಯವಿತ್ತು ಎಂದು ಹೇಳಲು ಅಡ್ಡಿಯಿಲ್ಲ.

ಮುಖ್ಯವಾಗಿ ವಿದೇಶೀಯರ ಕಣ್ಣು ಭಾರತದತ್ತ ವಕ್ರಿಸಿದುದೇ ನಮ್ಮ ಗುಡಿ ಕೈಗಾರಿಕೆಗಳು ದೇಶ-ವಿದೇಶದಲ್ಲಿ ಪಡೆಯುತ್ತಿದ್ದ ಮನ್ನಣೆಯ ಕಾರಣದಿಂದಾಗಿ ಎಂದು ಒಬ್ಬರು ಇತಿಹಾಸಕಾರರು ಹೇಳುತ್ತಾರೆ. ಎಂತಲೇ ಅವರು- ಬೆಳೆಯುರು ವ್ಯಾಪಾರದ ತಕ್ಕಡಿಯನ್ನು ಹಿಡಿದುಕೊಂಡು ಭಾರತದ ನೆಲದಲ್ಲಿ ಕಾಲಿಟ್ಟರು; ನಮ್ಮ ಜನದ ಎದೆಯನ್ನು ತುಳಿದರು. ಭಾರತದ ವ್ಯಾಪಾರ ಕೇಂದ್ರಗಳಲ್ಲಿ ಅಸಲು-ಬಡ್ಡಿಯ ಬಿಕ್ಕಾಟಾರವನ್ನು ಚಲಾಯಿಸಿದರು. ಅವಿಲ ಭಾರತದ ವ್ಯಾಪ್ತಿಯಲ್ಲಿ ಹೇಳುವಾಗ ಇಲ್ಲಿಯ ಡಕ್ಕಾ ಮಸ್ಲಿನ್, ಕಾಶ್ಮೀರಿ ಶಾಲುಗಳೂ—ದಕ್ಷಿಣ ಭಾರತದ ಹುರಿಹೆಗ್ಗ, ಜಾಪೆಗಳೂ, ಬೆತ್ತದ ಬುಟ್ಟಗಳೂ, ಚರ್ಮದ ಸಾಮಾನುಗಳೂ, ತಾಡಪತ್ರದ ಚಿತ್ರಗಳೂ, ಗೊಂಬೆಗಳೇ—ಮೊದಲಾದವುಗಳು ಇಡೀ ಪ್ರಪಂಚದಲ್ಲೇ ಪ್ರಖ್ಯಾತಿ ಪಡೆದ ಪ್ರಾಮುಖ್ಯ ಗುಡಿ ಕೈಗಾರಿಕೆಗಳಾಗಿದ್ದವು.

ಹಿಂದೆ

ಈ ಸಂದರ್ಭದಲ್ಲಿ ನಮ್ಮ ಪ್ರಾಮುಖರಿಯರು ಬೆವರಿಳಿಸಿ ಮಾಡುತ್ತಿದ್ದ ಜಪ್ಪಡಿ, ಬಡಿ ಮಂಜಗಳನ್ನು ನೆನೆಯದಿರಲು ಸಾಧ್ಯವಿಲ್ಲ. ದಕ್ಷಿಣ ಭಾರತೀಯರ ಕೈಗಾರಿಕೆ, ಬಂಧಕಲೆ ಸರ್ವತ್ರ ಮಾನ್ಯವನ್ನು ಪಡೆಯುತ್ತಿದ್ದರೆ, ಉತ್ತರದ ನಮ್ಮ ಸೋದರರು ಆವರ ವಾತಾವರಣ, ನುಡಿ ಮಾತುಗಳಿಗೆ ಅನುಕೂಲವಾಗುವ ಸರಕುಗಳನ್ನು ತಯಾರಿಸಿ ಆ ಭಾಗದಲ್ಲಿ ಜನಾನುರಾಗವನ್ನು ಪಡೆಯುತ್ತಿದ್ದರು. ಅಂತೂ ಉತ್ತರ—ದಕ್ಷಿಣ ಜಗತ್ತಿನ ಮೂರನೇ ಕಣ್ಣಾಗಿ ಪ್ರಕಾಶಿಸುತ್ತಿದ್ದು ಪ್ರಶಂಸಿಸಲ್ಪಡುತ್ತಿತ್ತು.

ನಮ್ಮ ಜನದ ಸ್ಫೂರ್ತಿ ಈಗೆಲ್ಲಿ ಹೋಯಿತೋ! ಯಾವುದೋ ಆ ತಡೆದು ಹಿಡಿಯಲಾಗದ ಶಕ್ತಿ ಅದಮ್ಯ ಸ್ಫೂರ್ತಿ, ಉತ್ಸಾಹ ಆತುರತೆ, ದಕ್ಷತೆ—ಕ್ಷಮತೆಗಳು ಈಗೆಲ್ಲಿ ಹೋದವೋ! ಯಾರ ಕೈಕವಕದ ಕೈಯ ಆಟದಿಂದ ನಮ್ಮ ಗುಡಿಕೈಗಾರಿಕೆಗಳ ಸ್ವರ್ಗೀಯಉಪವನ ಹಾಳಾಗಿ ಹೋಯಿತೋ!

ಭಾರತ ಸರಕಾರದ ಪ್ರಕೃತದ ಘೋರಣೆ ನಮ್ಮ ಗುಡಿ ಕೈಗಾರಿಕೆಗಳನ್ನು ಎತ್ತಿ ಹಿಡಿಯುವಂತಹದಾಗಿದೆ. ದ್ವಿತೀಯ ಪಂಚವಾರ್ಷಿಕ ಯೋಜನೆಯು ಕಾರ್ಯೋನ್ಮುಖವಾಗುವಾಗ ಗುಡಿ ಕೈಗಾರಿಕೆಯು ಮೇಲೆದ್ದು ಬರಲು ಸಾಧ್ಯವುಂಟು. ಆಧಿಕ ಬಂಡವಲದ ದೊಡ್ಡ ಕಾಮಗಾರಿಗಿಂತ ಮನೆಯು ನಾಲ್ಕು ಗೋಡೆಯ ಮಧ್ಯದಲ್ಲಿ ಕೂತು ಬಂಡವಲು ಇಲ್ಲದೇನೇ ತಯಾರಿಕುವ ಸಣ್ಣ ಕೈಗಾರಿಕೆಗಳಿಂದ ಭಾರತದ ಉಚ್ಚ್ರಾಯ ಗತಿಗೆನ್ನಿಲುಕಲು ಸಾಧ್ಯವುಂಟೆಂಬು ಗಾಂಧೀ ತಾತ ಹೇಳಿದ ವಾತಿನ ಮೇಲೆ ಪ್ರಥಮ ಪಂಚವಾರ್ಷಿಕ ಯೋಜನೆ ಜೇಕು ಜೆಲ್ಲಿದೆ. ನಾವು ಪೀಠ್ಸು ಫಲ ಉಣ್ಣಲೇಕೆನ್ನುವರು. ಆದರೆ ತಾಳ್ಮೆಯ ಶಕ್ತಿ ನಾಳೆ ನಮ್ಮನ್ನು ಉತ್ತಮ ಸ್ಥಿತಿಗೆ ಒಯ್ಯಬಲ್ಲುದು. ರಷ್ಯಾದಲ್ಲಿ ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹವಿಲ್ಲ. ಗುಡಿ ಕೈಗಾರಿಕೆಗಳಿಂದ ರಾಷ್ಟ್ರೋನ್ನತಿಯಾಗುವುದೆಂಬ ಮಾತು ಆವರು ಒಪ್ಪುವುದಿಲ್ಲ. ಎಂದ ಮಾತ್ರಕ್ಕೆ ರಷ್ಯಾ ಕೈಗಾರಿಕೆಯನ್ನು ಮರೆತಿದೆ ಎಂದರ್ಥವಾಗುವುದಿಲ್ಲ. ಅದು ಸಾಧಿಸಿದ ಪ್ರಗತಿ ದೊಡ್ಡದು. ಪ್ರಪಂಚದಲ್ಲಿ ಬೇರೆ ಯಾವೊಂದು ರಾಷ್ಟ್ರವೂ ಸಾಧಿಸದ ಪ್ರಗತಿಯನ್ನು ರಷ್ಯಾ ಸಾಧಿಸಿ ಸಾಧ್ಯವೆಂದು ತೋರಿಸಿಕೊಟ್ಟಿದೆ. ಅಲ್ಲಿಯ ಜೀವನ ಮಟ್ಟವ ಏರು ಮುಗಿಲಿಗೆ ಮುಟ್ಟಿರಬಹುದು; ಆದರೆ ಅಲ್ಲಿಯ ಕಾರ್ಖಾನೆಗಳು ಮಾಡುವ ಕೆಲಸ ಪ್ರಪಂಚದ ಮತ್ತೊಂದು ದೊಡ್ಡ ರಾಷ್ಟ್ರವಾದ ಅಮೇರಿಕೆಯ ಆಶಮನೆ ಯಲ್ಲಾಗುತ್ತಿಲ್ಲ. ತನ್ನ ಮಾತು—ಗುಡಿ ಕೈಗಾರಿಕೆಗಳಿಂದ ರಾಷ್ಟ್ರದ ಉನ್ನತಿ ಆಗಲಾರದು ಎನ್ನುವ ಮಾತು—ಸಾಧ್ಯವೆಂದು ರಷ್ಯಾ ತನ್ನ ಕರ್ತವ್ಯದಿಂದ ತೋರಿಸಿಕೊಟ್ಟಿದೆ. ರಷ್ಯಾದ ಮಾತು ಬೇರೆ. ಆದರ ಮಾತು, ರೀತಿ, ವರ್ತನೆ ಇನ್ನೂ ವಿವಾದಾಸ್ಪದವಾಗಿಯೇ ಇರುವುದಿಬರಿಂದ ನಾವು ಆ ಕುರಿತು ಹಚ್ಚಲಕ್ಕೆ ಕೆರೆದುಕೊಳ್ಳುವುದು ಬೇಡ.

ಆದರೆ ಭಾರತದ ಸ್ಥಿತಿಯೇ ಬೇರೆ. ಇಲ್ಲಿಯ ಪರಿಸ್ಥಿತಿ— ಮನೆಗಳಲ್ಲಿ ಕೇಳಿಸಬೇಕಾಗಿದ್ದ ಗಾಂಧೀಜೀಯ ಮಾತು ಈಪತ್ತು ಕಾರ್ಖಾನೆಯ ದೊಡ್ಡ ಸಪ್ಪಳದೊಂಗಿಗೆ ಲೀನವಾಗಿ ಹೋಗಿದೆ; ತಾತಾ, ಬಿರ್ಲಾ, ಬಿಶ್ವಾಸ್, ಘೋಷ್, ದೇಶಪಾಂಡೆ, ಪಟೇಲ್— ಇವರ ದೊಡ್ಡ ಬಂಡವಲಿನ ಕಾರ್ಖಾನೆಗಳ ದಪ್ಪಗಿನ ಹೊಗೆಯಲ್ಲಿ ಬೆರೆತು.ಕೊಂಡಿದೆ.

ಈ ಪರಿಸ್ಥಿತಿ ಬದಲಾಗುವ ಶುಭ ಘಳಿಗೆಗೆ ಕಳೆಪೈದು ವರ್ಷಗಳಿಂದ ಕಾದುಬರುತ್ತಿದೆ ದ್ವಿತೀಯ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗಾಗಿ ನಮ್ಮ ಪರಿಸ್ಥಿತಿ ಬೇರೆಯೇ ಆದೀತೆಂದು ಆಶಿಸಿದರೆ ನಾವು ತಪ್ಪಾಗಲಾರೆವು.

ನಮ್ಮ ಗುಡಿ ಕೈಗಾರಿಕೆಗಳಲ್ಲಿ ಕೆಲವು ಸತ್ತು ಹೋಗಿವೆ. ಕೆಲವು ಸತ್ತುಹೋಗುವ ಸ್ಥಿತಿಯಲ್ಲವೆ. ಇನ್ನು ಕೆಲವು ಉತ್ತೆ ಸಾಯುವುದೂ ಇಲ್ಲ; ಇತ್ತ ಬದುಕುವುದೂ ಇಲ್ಲ ಎಂಬ ಸ್ಥಿತಿಯಲ್ಲಿವೆ.

ಪಶ್ಚಿಮದಲ್ಲಿ

ಪಾಶ್ಚಿಮಾತ್ಯ ದೇಶಗಳಲ್ಲಿ ಔದ್ಯೋಗಿಕ ಕ್ರಾಂತಿ ನಡೆಯುತ್ತಿದ್ದಾಗ ನಮ್ಮ ದೇಶದವರು ಸಂಪರ್ಕ ಮಾಡಿಕೊಳ್ಳಲಿಲ್ಲ. ನಮ್ಮ ಗುಡಿ ಕೈಗಾರಿಕೆಗಳಿಗೆ ಆಳುವ ವರ್ಗವೆ ಸಹಾಯ ಆಗ ನಿಗುತ್ತಿತ್ತು. ಆದರೆ ಪಾಶ್ಚಿಮಾತ್ಯ ದೇಶಗಳಲ್ಲಿ ಬೀಸಿದ ಔದ್ಯೋಗಿಕ ಕ್ರಾಂತಿಯು ನಾಳೆ ನಮ್ಮ ದೇಶಕ್ಕೆ ಎಂದು ಬೀಸಿತೋ, ಆಂದು ಗುಡಿ ಕೈಗಾರಿಕೆಗಳ ಉದ್ಯಮದಲ್ಲಿ ನಿರ್ಜಾವಟು ಆಗಲು ವ್ಯಾಪಾರಂಭವಾಯಿತು. ಏಕೆಂದರೆ ಪಾಶ್ಚಾತ್ಯರ ಮೂಲಕ ಇಲ್ಲಿಗೆ ಬಂದ ಔದ್ಯೋಗಿಕ ಕಲಾ ಕೌಶಲದಿಂದಾಗಿ ಗುಡಿ ಕೈಗಾರಿಕೆಗೆ ಧಕ್ಕೆ ತಗುಲಿತು. ಬಕಳ ಒಂದು ಮೇಲ್ಮಟ್ಟದ ಸ್ಥಿತಿಯಲ್ಲಿದ್ದು, ಉನ್ನತ ಸ್ಥಾನ-ಮಾನಪಡೆದ್ದ ಗುಡಿ ಕೈಗಾರಿಕೆಯು ಮೇಲೆಕಾರ್ಖಾನೆಗಳು ಪ್ರಭುತ್ವ ಹೇರಲು ವ್ಯಾಪಾರಂಭಿಸಿದುದರಿಂದಲೂ ಗುಡಿಕೈಗಾರಿಕೆಯು ಇಳಿಮುಖ ಕಂಡಿತು. ಇದರಿಂದ ಇಬ್ಬಗೆಯು ಹೊಡೆತ ಬಿತ್ತು. ಇವರಿಂದ ತರಗತಿ, ಉತ್ಪತ್ತಿ ಎರಡೂ ಕೆಳಗಿಳಿದವು.

ಈಗ ಇದ್ದೂ ಇಲ್ಲದಂತೆ, ತೋರಿಯೂ ತೋರದಂತಿರುವ ಗುಡಿ ಕೈಗಾರಿಕೆಯು ಪದ್ಧತಿಯಲ್ಲಿ ತುಂಬಾ ಲೋಪ-ದೋಷಗಳಿವೆ. ಇವನ್ನು ಆಂತರಿಕ ದೋಷ ಮತ್ತು ಬಾಹ್ಯ ದೋಷಗಳೆಂದು ಎಣಿಸಬಹುದು. ಈ ಎರಡೂ ದೋಷಗಳು ಗುಡಿಕೈಗಾರಿಕೆಯ ಪ್ರಗತಿಯ ದಾರಿಯಲ್ಲಿ ಅಡ್ಡ ಗೋಡೆಗಳಂತೆ ನಿಂತಿವೆ. ಕಚ್ಚಾ ಪದಾರ್ಥ ಅರೂಪದ ಮತ್ತು ಹಳೆಯ ಪದ್ಧತಿಯ ಉಪಕರಣಗಳು ಪ್ರಗತಿಯನ್ನೆಸಗಿದ ಕೆಲವು ಕಾರಣಗಳು. ಪ್ರಗತಿಯನ್ನೆಸಗಿದ ಕೆಲವು ಕಾರಣಗಳು

ನಿಮಗಿದು ತಿಳಿದಿರಲಿ

ಕಾರ್ಯ ಹಾಗು ಅದರ ಪರಿಣಾಮಗಳ ನಡುವೆ ಗಾಢವಾದ ಸಂಬಂಧ ನೆಲಸಿದೆ —ಇದೇ ಸಮೀಕರಣ ನಿಯಮ.

ಜಗತ್ತಿನ ಯಾವುದಾದರೂ ಬೆಲೆಯುಳ್ಳ ವಸ್ತುವು ನಮಗೆ ದೊರಕಬೇಕಾದರೆ ನಾವು ಅದರ ಬೆಲೆಯನ್ನು ಕೊಡಬೇಕಾಗುವುದು ಅದನ್ನು ನಾವು ಇಷ್ಟೇ ಮೌಲ್ಯದ ಇತರ ವಸ್ತುಗಳಿಂದಾಗಲೀ, ನಮ್ಮ ದೈಹಿಕ, ಮಾನಸಿಕ ಪರಿಶ್ರಮದಿಂದಾಗಲೀ ತೀರಿಸಲು ಸಾಧ್ಯವಿದೆ. ನಮ್ಮ ವ್ಯವಹಾರದಲ್ಲಿ ಪಡೆದಷ್ಟೇ ಕೊಡಬೇಕು ಎಂಬುದು ನಿರ್ವಿವಾದ. ಅಂತೆಯೇ ನಾವು ಇತರರಿಗೆ ಎಷ್ಟನ್ನು ಕೊಡುವೆವೋ ಅಷ್ಟೇ ಪ್ರಮಾಣ ನಮಗೆ ಸಿಗುವುದು. ಯಾವುದಾದರೊಂದು ಲಾಭವಿಲ್ಲದೆ ತ್ಯಾಗವು ಸಾಧ್ಯವಿಲ್ಲ. ಆಂತೆಯೇ ಪ್ರತಿಯೊಂದು ತ್ಯಾಗಕ್ಕೂ ಪ್ರತಿಫಲವು ದೊರಕೆಯೇ ತೀರುವುದು. ಇದನ್ನೇ ಸಮೀಕರಣದ ನಿಯಮವೆನ್ನುವರು. ಈ ನಿಯಮವು ಬಾಹ್ಯ ಜಗತ್ತಿನ ಪ್ರತಿ ವ್ಯವಹಾರದಲ್ಲಿ ಸ್ಪಷ್ಟವಾಗಿ ದೃಷ್ಟಿಗೋಚರವಾಗುವುದು ಕಡಿಮೆ ಅದರ ಕಾರ್ಯವು ಅದೃಶ್ಯವಾಗಿರುತ್ತದೆ. ಇದನ್ನು ವಿವೇಕದಿಂದಲೇ ತಿಳಿಯಲು ಸಾಧ್ಯ.

ಪುರಾಣ ಕಾಲದ ಉದಾಹರಣೆಗಳನ್ನು ತೆಗೆದುಕೊಂಡರೆ ಇದರ ಸ್ಪಷ್ಟತೆಯನ್ನು ನಾವು ಮನಗಾಣಬಹುದು ಮಹಾಭಾರತ ಕಥೆಯಲ್ಲಿ ಸೂರ್ಯದತ್ತ ಕವಚ ಕುಂಡಲಗಳುಳ್ಳ ಕರ್ಣನು, ತನ್ನ ಪುತ್ರ ಅರ್ಜುನನನ್ನು ಸಂಹರಿಸಬಹುದೆಂಬ ಭಯದಿಂದ, ಕರ್ಣನ ದಾನದ ಸದುಪಯೋಗವನ್ನು ಮಾಡಿಕೊಳ್ಳಲು ಇಂದ್ರನು ಭಿಕ್ಷುಕ ವೇಷದಿಂದ ಬಂದು ಕವಚ ಕುಂಡಲಗಳನ್ನು ಬೇಡಿದನು. ಮರುಮಾತಿತ್ತದೆ ಕರ್ಣ ಅವುಗಳನ್ನು ದಾನವಿತ್ತ ಪರಿಣಾಮವಾಗಿ, ಇಂದ್ರನು ರಥದಲ್ಲಿ ಕುಳಿತು ದೇವಲೋಕಕ್ಕೆ ಹೋಗಲು ಪ್ರಯತ್ನಿಸಿದರೆ ದಿವ್ಯಾಶ್ವಗಳು ರಥವನ್ನೆಳೆಯಲಿಲ್ಲ. ವಿಷ್ಣು ತನಾದ ಇಂದ್ರನಿಗೆ ಅದರ ಕಾರಣ ಹೊಳೆಯಿತು. ಕರ್ಣನ ದಾನದ ಭಾರದಿಂದ ರಥ ಮುಂದರಿಯಲಿಲ್ಲ. ಪುನಃ ಇಂದ್ರ ಹಿಂತಿರುಗಿದ ತನ್ನ ಸಂಕಲ್ಪವನ್ನು ಹೇಳಿಕೊಂಡು ತನ್ನಿಂದೇನಾದರೂ ಪ್ರತಿಫಲ ಪಡೆಯಲು ಕೇಳಿಕೊಂಡನು. ಭಿಕ್ಷುಕ ರೂಪನೆ ಭಿಕ್ಷೆಪಡೆಯಲು ತಾನುಸಿದ್ಧನಿಲ್ಲ ನೆಂದು ಕರ್ಣ ಉತ್ತರವಿತ್ತನು. ಕೊನೆಗೆ ಇಂದ್ರನ ಅಗ್ರಹದಿಂದಾಗಿ, ಅವನ ಅಮೋಘ ಶಕ್ತಿಯನ್ನು ಪಡಕೊಂಡನು. ಇದರಿಂದ ಪಾರ್ಥಿವತೆಯನ್ನು ತೊಲಗಿಸಿಕೊಂಡು ಇಂದ್ರನು ಸ್ವರ್ಗಾರೋಹಣಕ್ಕೆ ಅರ್ಹನಾದನು. ಬಲಿಯೊಡನೆ ಮೂರು ಪಾದಗಳಷ್ಟು ಭೂಮಿದಾನ ಬೇಡಿದ ಶ್ರೀ ವಿಷ್ಣು ಚಿರಕಾಲ ಅವನ ದ್ವಾರ ಪಾಲಕನಾಗಬೇಕಾಯಿತು.

ಇದರಿಂದ ನಾವು ತಿಳಿಯುವ ತತ್ವವೇನು? ಯಾವನೊಬ್ಬ ವ್ಯಕ್ತಿಯು, ಯಾವುದೊಂದು ರೀತಿಯ ಭಿಕ್ಷೆಯನ್ನು ಪ್ರತಿಫಲಕೊಡದೆ ಸ್ವೀಕರಿಸಿದರೆ ಅದರ ಪರಿಣಾಮವಾಗಿ ಅವನು ತನ್ನ ದೈನಿಕತೆಯನ್ನು ಕಳಕೊಳ್ಳಬೇಕಾಗುವುದು. ಇತರರ ಕೃಪಾಭಿಕ್ಷೆಯನ್ನು ಪಡೆದ ವ್ಯಕ್ತಿ ತನ್ನ ಆತ್ಮದ ಬೃಹತ್ಸ್ವರೂಪವನ್ನು ಮರೆಯುವನು. ತ್ಯಾಗ, ಪರಸೇವೆಯಿಂದ ಮಾನವನು ಉತ್ತಮನಾಗುವನು. ಪರಿಗ್ರಹ, ಭೋಗೇಚ್ಛೆ. ಇತರರಿಂದ ಸೇವೆ ಮಾಡಿಸಿಕೊಳ್ಳುವ ಆಸಕ್ತಿಯುಳ್ಳವನು ಕೀಳಾಗುವನು. ತ್ಯಾಗ ಫಲಗಳಿಂದ ತನ್ನ ಆತ್ಮ ಸ್ವರೂಪದ ಪರಿಚಯವಾಗುವುದು. ಪಾರ್ಥಿವತೆಯು ನಷ್ಟವಾಗುವುದು. ಬಾಹ್ಯ ಪದಾರ್ಥಗಳ ಲಾಭದಿಂದಲೇ ಆಂತರಿಕ ಶಾಂತಿಯು ಕಡಿಮೆಯಾಗುವುದು. ಇದರಿಂದ ಸಮೀಕರಣದ ಮಹತ್ವದ ಅರಿವಾಗಬಹುದು

ನಾವು ಎಷ್ಟೇ ಅಲ್ಪ ಬೆಲೆಯ ವಸ್ತು ವನ್ನೇ ಆಗಲಿ. ಅದರ ಜೆಲೆ ಕೊಡದೆ ಪಡೆಯಬಾರದು. ಬಾರಿ ಬಾರಿಗೂ ಇತರರಿಂದ ಉದಾರವಾಗಿ ದಾನಪಡೆಯುವುದರಿಂದ ನಮ್ಮ ಆತ್ಮ ವಿಶ್ವಾಸವು ನಷ್ಟವಾಗುವುದು. ನಾವು ಇತರರಿಗಿಂತ ಕೀಳೆಂಬ ಭಾವನೆ ನಮ್ಮಲ್ಲಿ ಬೇರೂರುವುದು. ಹೆಚ್ಚಾಗಿ ನಾವು ನಮ್ಮ ಸಮಾನ ವ್ಯಕ್ತಿಗಳಿಂದ ದಾನ ಪಡೆಯುವುದು ಅಧಿಕ. ಇದರಿಂದ ನಮ್ಮ ಮಿತ್ರನೇ ಆದರೂ. ನಿಜವಾಗಿ ಏನೂ ಪ್ರತಿಫಲಾಪೇಕ್ಷೆ ಇಲ್ಲದೆ ದಾನವಾಗಿ ಅವನು ವಸ್ತುಗಳನ್ನು ಕೊಟ್ಟರೂ, ಬಾಹ್ಯ ಮನಸ್ಸಿನಲ್ಲಿ ಏನೊಂದು ಬದಲಾವಣೆಗಳಾಗಲಾರವು. ಆದರೆ ಆಂತರ್ಮನದಲ್ಲಿ ಖಂಡಿತ ಬದಲಾವಣೆಗಳಾಗುವುವು. ಅವನು ಶ್ರೇಷ್ಠತೆಯ ಅನುಭವವನ್ನು ಪಡೆಯುವನು. ಇದರಿಂದ ಪರಸ್ಪರ ವ್ಯವಹಾರದಲ್ಲಿ ಬದಲಾವಣೆಗಳು ತೋರುವುವು. ಇತ್ತ ಬದಲಾದ ಸಂಬಂಧದ ದ್ಯೋತಕಗಳಾಗಿವೆ.

ಹೆಚ್ಚಾಗಿ ಶ್ರೀಮಂತರು ವಿದ್ವಾಂಸರಿಗೆ ಧನಸಹಾಯಮಾಡಿ, ರಾಜ್ಯಾಧಿಕಾರಿಗಳು ಪ್ರಭಾವಶಾಲಿ ವ್ಯಕ್ತಿಗಳಿಗೆ ಮಾನ ಸನ್ಮಾನಗಳನ್ನು ಕೊಟ್ಟು ಅವರ ಮನಸ್ಸಿನ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸುತ್ತಾರೆ. ಪುರಸ್ಕಾರ ಪಡೆದ ವ್ಯಕ್ತಿಯ ಮನಸ್ಸು ಪುರಸ್ಕಾರ ಕೊಟ್ಟ ವ್ಯಕ್ತಿಯ ವಾಸನಾಗುವುದು. ಯಾರು ತನ್ನ ಬುದ್ಧಿ ಶಕ್ತಿಯನ್ನು ಸ್ವತಂತ್ರವಾಗಿಟ್ಟುಕೊಳ್ಳಬಯಸುವನೋ, ಅವನು ಇತರರಿಂದ ಉದಾರದಾನ, ಪುರಸ್ಕಾರಗಳ ಗ್ರಹಣ ಮಾಡಬಾರದು. ಜಾಲ್ಲೇಂಡಿನ ಯೆಹೂದಿ, ಶತ್ರವೇತ್ತನಾದ "ಸ್ಪೆನೋಜಾ"ನಿಗೆ, ಫ್ರಾನ್ಸಿನ ದೊರೆ 14ನೇ ಲೂಯಿಯು ವರ್ಷಕ್ಕೆ 14 ಸಾವಿರ ಫ್ರಾಂಕುಗಳ ವರ್ಷಾಸನ ಕೊಡಲು ನಿರ್ಧರಿಸಿದನು. ತನ್ನ ಮಾನಸಿಕ ಸ್ವತಂತ್ರತೆಯನ್ನು ಮಾರಲು ಸಿದ್ಧನಿರದ "ಸ್ಪೆನೋಜಾ" ಅದನ್ನು ನಿರಾಕರಿಸಿದನು.

ಸಮೀಕರಣದ ನಿಯಮವು ನಮಗೆ ಯಾವ ಕಾರ್ಯವನ್ನೂ ಫಲದಿಂದ ಬೇರ್ಪಡಿಸಲು ಸಾಧ್ಯವಿಲ್ಲವೆಂಬುದನ್ನು ತೋರಿಸುವುದು. ಕೆಟ್ಟ ಕೆಲಸ ಮಾಡಿದರೆ ಅದರ ದಂಡನೆಯನ್ನು ಅನುಭವಿಸಬೇಕು. ಅಂತೆಯೇ ಒಳ್ಳೆಯ ಕೆಲಸ ಮಾಡಿದರೆ ಅದರ ಶುಭ ಫಲವು ಸಿಕ್ಕಿಯೇ ತೀರುವುದು. ಆದರೆ ನಮಗೆ ಕಾರ್ಯ ಮತ್ತು ಅದರ ಪರಿಣಾಮದ ಅವಿಚ್ಛೇದ ಸಂಬಂಧವು ಅದರ ನಡುವಿನ ಕಾಲಾವಧಿಯಿಂದ ಗೋಚರಿಸುವುದಿಲ್ಲ. ಸೂಕ್ಷ್ಮದೃಷ್ಟಿಯ ವ್ಯಕ್ತಿಯು ಇವುಗಳ ಸಂಬಂಧವನ್ನು ತಿಳಿಯುವನು. ನಮ್ಮ ಪ್ರತಿಯೊಂದು ಕಾರ್ಯಕ್ಕೂ ಅವಿನಾಶಿಯಾದ ಆತ್ಮನು ಸಾಕ್ಷಿಯಾಗಿದ್ದಾನೆ. ನಮ್ಮ ಕಾರ್ಯವು ಕೂಡಲೇ ಅಂತರ್ಮನದಲ್ಲಿ ಲಿಖಿತವಾಗುವುದು. ಸಮಯ ಬಂದೊಡನೆ ಅದರ ಫಲವನ್ನು ಅನುಭವಿಸಬೇಕಾಗುವುದು. ಕಾರ್ಯ ಮತ್ತು ಫಲಗಳ ನಡುವಿನ ಅಂತರವು ಎಷ್ಟು ಹೆಚ್ಚುವುದೋ, ಅಷ್ಟೇ ಫಲದ ಮಹತ್ವವೂ ಹೆಚ್ಚುವುದು. ಪರಮಾತ್ಮನ ಬೇಂಕಿನಲ್ಲಿಟ್ಟ ಸತ್ಕೃತವು ಕಾಲಾವಧಿಯ ಬಡ್ಡಿಸಹಿತ ಫಲಕೊಡುವುದು ನಿಶ್ಚಯ. ಇದಕ್ಕೆ ಅನುಮಾನವೇ ಇಲ್ಲ.

ಯಾವನೊಬ್ಬ ವ್ಯಕ್ತಿಯು ಇತರರಿಗೆ ಸರಳ ಹೃದಯದಿಂದ ಸೇವೆ ಮಾಡಿದರೆ ಅದರಿಂದ ಅವಶ್ಯವಾಗಿ ಲಾಭವಾಗುವುದು. ಇದರಿಂದ ಬಾಹ್ಯಲಾಭವು ಅದರೂ ಆಗಬಹುದು. ನಿಶ್ಚಿತವಿಲ್ಲ. ಆದರೆ ಆಧ್ಯಾತ್ಮಿಕ ಲಾಭವು ಆಗಿಯೇ ತೀರುವುದು. ಇತರರಿಗೆ ದುಃಖವನ್ನುಂಟುಮಾಡುವುದರಿಂದ ನಮ್ಮ ಮನವು ಕಲುಷಿತವಾಗುವುದು. ಇತರರ ಸೇವೆಯಿಂದ ನಮ್ಮ ಮನವು ಪವಿತ್ರವಾಗುವುದು. ಕಲುಷಿತ ಮನವೇ ದುಃಖಗಳ ಮೂಲ, ಪವಿತ್ರಮನವೇ ಆನಂದದ ಸ್ರೋತವಾಗಿದೆ. ಮನಸ್ಸು ಶುದ್ಧವಾಗಿರುವ ವ್ಯಕ್ತಿಯು ಎಲ್ಲಾ ಪರಿಸ್ಥಿತಿಗಳಲ್ಲೂ ಆನಂದದಿಂದಿರುವನು. ಬಾಹ್ಯಜಗತ್ತಿನ ವಿಪತ್ತುಗಳು ಅವನಿಗೇನೂ ಮಾಡಲಾರವು. ಇತರರಿಗೆ ಹಾನಿಮಾಡುವ ದುರುದ್ದೇಶವುಳ್ಳವರು ಸದಾ ಸಂತಪ್ತ ಹೃದಯಿಗಳಾಗಿರುವರು. ಅವರಿಗೆ ಮಿತ್ರರೂ ಶತ್ರುಗಳಾಗಿ ತೋರುವರು. ಇದರಿಂದ ಅವರು ಸ್ವಕಪೋಲ ಕಲ್ಪಿತ ಪಿಶಾಚಿಗಳಲ್ಲಿ ಮುಳುಗುವರು.

ನಾವು ಇತರರೊಡನೆ ವ್ಯವಹಾರ ನಡೆಸುವಾಗ ಇತರರು ಮೋಸಮಾಡದಂತೆ ಸತರ್ಕರಾಗಿರುವೆವು. ಇತರರು ಮೋಸ ಮಾಡುವರೋ ಎಂಬ ಭಯವು ನಮಗೆ ಯಾವಾಗಲೂ ಇರುವುದು. ಆದರೆ "ಆಧ್ಯಾತ್ಮಿಕ ಸಮೀಕರಣ"ದ ನಿಯಮವನ್ನು ತಿಳಿದರೆ ನಮ್ಮ ಈ ಭಯವು ದೂರವಾಗುವುದು. ನವ್ಯನ್ನು ನಾವಲ್ಲದೆ ಇತರರು ಮೋಸ ಮಾಡಲಾರರು. ಸರ್ವಾಂತರ್ಯಾಮಿಯಾದ ಪರಮಾತ್ಮನು ಪ್ರತಿಯೊಂದು ಕರ್ತವ್ಯ ಕರ್ಮವನ್ನೂ ನೋಡುವನು. ಅಂತೆಯೇ ಫಲವನ್ನು ಕೊಡುವನು. ಆವನು ಸದಾ ನ್ಯಾಯರಕ್ಷಣೆ ಮಾಡುವನು. ಈ ತತ್ವವನ್ನು ತಿಳಿದರೆ ನಮ್ಮ ಭಯವು ಸುಮ್ಮನೆ ಎಂದು ಸ್ಪಷ್ಟವಾಗುವುದು. ಇಂಥ ಇತರರನ್ನು ಮೋಸಗೊಳಿಸಲೆತ್ನಿಸುವ ಅವನು ತನ್ನನ್ನು ತಾನೇ ಮೋಸ ಮಾಡಿದಂತಾಗುವುದು. ಅಂತಹ ವ್ಯಕ್ತಿಯು ಬಾಹ್ಯ ಲಾಭವನ್ನು ಪಡೆದರೂ ಆಂತರಿಕ ಶಾಂತಿಗೆ ಭಂಗ ಉಂಟಾಗುವುದು. ಸರಳ ಹೃದಯದವರನ್ನು ಮೋಸಗೊಳಿಸಿ ಭೌತಿಕ ಹಾನಿಯುಂಟಾಗುವಂತೆ ಮಾಡಿದರೂ, ಅವರ ಆಧ್ಯಾತ್ಮಿಕ ಸುಖ ಶಾಂತಿಗಳು ಕಡಿಮೆಯಾಗಲಾರವು.

ಯಾವ ಕಾರ್ಯವನ್ನು ನಾವು ಇಂದು ಗುಪ್ತ ರೀತಿಯಿಂದ ನೆರವೇರಿಸುವೆವೋ, ಅದು ಒಂದಲ್ಲ ಒಂದು ದಿನ ಬಹಿರಂಗವಾಗಿಯೇ ತೀರುವುದು. ಇದು ಆಧ್ಯಾತ್ಮಿಕ ಸಮೀಕರಣದ ನಿಯಮ. ಸರ್ವವ್ಯಾಪಿಯಾದ ಆತ್ಮನಿಂದ ಯಾರು ಯಾವುದನ್ನು ಬಚ್ಚಿಡಲು ಸಾಧ್ಯ? ಪಾಪಕರ್ಮಿಗಳು ನರಕಕ್ಕೂ, ಪುಣ್ಯಜೀವಿಗಳು ಸ್ವರ್ಗಕ್ಕೂ ಹೋಗುವರೆಂದು ಪ್ರತೀತಿ ಇದೆ. ಎಲ್ಲಾ ಧರ್ಮೋಪದೇಶಕರೂ ಈ ರೀತಿ ಜನರನ್ನು ಸದಾಚಾರಿಗಳನ್ನಾಗಿ ಮಾಡಲು ಪರಿಶ್ರಮಪಟ್ಟಿದ್ದಾರೆ. ಈ ಜನ್ಮದಲ್ಲಿ ಮಾಡಿದ ಪುಣ್ಯಕರ್ಮಗಳ ಫಲ ಈ ಜನ್ಮದಲ್ಲಿ ಸಿಗುವುದಿಲ್ಲ. ಮುಂದಿನ ಜನ್ಮದಲ್ಲಿ ಸಿಗುವುದು. ಅಂತೇ ಪಾಪಿಗಳು ಮುಂದಿನ ಜನ್ಮದಲ್ಲಿ ದುಃಖವನ್ನು ಅನುಭವಿಸಬೇಕಾಗುವುದು ಎಂಬ ಈ ನಿಯಮಗಳು ಬಡವ ಧನಿಕ ಎಂಬ ಭಾವನೆಗಳನ್ನು ತೊಲಗಿಸಿ ಜೀವನವನ್ನು ಸತ್ಯ

ನಿಮ್ಮ ಆರ್ಥಿಕ ಸಮಸ್ಯೆಗಳಿಗೆ ಸಲಹೆಗಳು ಬೇಕೆಂದಿದ್ದಾಗ, ಅವುಗಳನ್ನು ಕೊಡಲು ಸದಾ ಸಿದ್ಧರಿದ್ದೇವೆ!

ಮೈಸೂರು, ಮದರಾಸು, ಆಂಧ್ರ ಪ್ರದೇಶ, ಕೇರಳ ಮತ್ತು ಮುಂಬಯಿ ಸಂಸ್ಥಾನಗಳಲ್ಲಿ ಒಟ್ಟು 46 ಶಾಖೆಗಳಿವೆ. ಸಕಲ ವಿಧದ ಬೇಂಕಿಂಗ್ ವಹಿವಾಟುಗಳನ್ನು ಕೈಗೊಳ್ಳುತ್ತೇವೆ. ಗಿರಾಕಿಗಳ ಕೃಪ್ತಿಯೇ ನಮ್ಮ ಧ್ಯೇಯ!

50 ವರುಷಗಳಲ್ಲಿ ನಾವು ಗಳಿಸಿದ ನಮ್ಮ ಅತ್ಯಮೂಲ್ಯ ಬೇಂಕಿಂಗ್ ಅನುಭವದ ಪ್ರಯೋಜನವನ್ನು ಇಂದಿನಿಂದಲೇ ಪಡೆಯಿರಿ!!

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

THE CANARA BANKING CORPORATION LIMITED

THE MYSORE LAMP WORKS LTD.,

BANGALORE–3.

We have pleasure in announcing that

M/s. K. S. GOWDER & Co.,

Subedar Chatram Road,

BANGALORE–2

have been appointed as our Sole Distributors for the Mysore State with effect from 1-2-1957.

Our Constituents and Patrons in the Mysore State are requested to obtain their requirements of our Wellknown "MYSORE LAMPS" through them.

Bangalore, 30th Jan. 1957.

C. RAMASWAMY, Secretary.

ರ್ಮಗಳಿಂದ ಕಳೆಯಲು ಪ್ರೇರಕವಾಗಿವೆ. ಆದರೆ ತರ್ಕಪ್ರಧಾನ ವ್ಯಕ್ತಿಗಳು ಇದರಿಂದ ಸಂತುಷ್ಟರಾಗುವುದಿಲ್ಲ. ಧೂರ್ತ ಜನರು ಇದರ ದುರುಪಯೋಗವನ್ನೂ ಮಾಡಬಹುದು. ಈ ರೀತಿಯ ಭಾವನೆಗಳು ಮೋಸದಿಂದ ಬಡಜನರನ್ನು ಧನಿಕರ ದರ್ಶದಿಯಲ್ಲಿ ಸಿಲುಕಿಸಲು ಮಾಡಿದ ಉಪಾಯಗಳೆಂದು ರಷ್ಯದ ಸುಪ್ರಸಿದ್ಧ ಲೇಖಕ ವೆಕೋನಿನ್ ಎಂಬವರ ಅಭಿಪ್ರಾಯವಾಗಿದೆ.

ಪುಣ್ಯ ಗಳಿಸುವ, ಸದಾಚಾರಿಗಳಾಗಿ ಜೀವಿಸುವ ಜನರಿಗೆ ದೊರಕುವ ಪ್ರತ್ಯಕ್ಷ ಲಾಭಗಳೇನು? ಇಷ್ಟಕ್ಕೆ ನಾವು ಆಧ್ಯಾತ್ಮಿಕ ಸಮೀಕರಣದ ನಿಯಮವನ್ನು ತಿಳಿದುಕೊಳ್ಳಬೇಕು. ಎಲ್ಲಾ ಸುಖೋಪಭೋಗಗಳ ಅಂತಿಮಲಕ್ಷ್ಯವು ಆತ್ಮಶಾಂತಿಯಾಗಿದೆ. ಭೋಗಗಳ ಬಾಹ್ಯರೂಪದಿಂದ ವಂಚಿತರಾಗದ ವ್ಯಕ್ತಿಗಳು, ಸುಖಭೋಗಗಳ ಸಾಮಗ್ರಿಗಳ ಸಂಗ್ರಹದಿಂದ ಆತ್ಮಶಾಂತಿಯೂಗಲೀ, ಆನಂದವಾಗಲೀ ದೊರಕದು ಎಂಬುದನ್ನು ಬಲ್ಲರು. ಸುಖವೂ, ಆನಂದವೂ, ಶಾಂತಿಯೂ, ಬರೀ ಮನಸ್ಸಿನ ಸ್ಥಿತಿ ಮತ್ತು ಭಾವನೆಗಳನ್ನು ಅವಲಂಬಿಸಿವೆ. ಎಷ್ಟು ಭೋಗ ವಸ್ತುಗಳಿದ್ದರೂ, ಮನಃ ಸ್ವಾಸ್ಥ್ಯವಿಲ್ಲದವರ ಅದರ ಆನಂದನನ್ನನುಭವಿಸುವುದು ಹೇಗೆ? ಆದ್ದರಿಂದ ಬುದ್ಧಿವಂತನಾದವನು ಮನಸ್ಸನ್ನು ಉತ್ತಮಗೊಳಿಸಲು ಪ್ರಯತ್ನಿಸುವನು. ಸ್ವಾರ್ಥ ಭಾವನೆಗಳಿಂದ ಮನಸ್ಸು ಕ್ಷಾಂತವಾಗುವುದು. ಪರಮಾರ್ಥ ಭಾವನೆಗಳಿಂದ ಮನವು ಶಾಂತವಾಗುವುದು. ಒಬ್ಬ ವ್ಯಕ್ತಿಯೊಡನೆ ಜಾಹ್ಯ ಸುಖಸಾಧನೆಗಳು ಎಷ್ಟಿದ್ದರೂ, ಸುಖವು ಅವನ ಮನಃಸ್ಥಿತಿಯನ್ನೇ ಹೊಂದಿಕೊಂಡಿದೆ. ಹಣವನ್ನು ವೃದ್ಧಿಗೊಳಿಸುವ ಹಂಬಿಕೆಯಲ್ಲಿರುವ ಶ್ರೀಮಂತನಿಗೆ ಶಾಂತಿ ಎಲ್ಲಿ?

ಸಮೀಕರಣದ ನಿಯಮವು ನಮಗೆ ಆತ್ಮಸಂತೋಷವನ್ನು ಕಲಿಸುವುದು. ನಮಗೆ ಒಂದು ವಸ್ತುವು ಸಿಗುವಾಗ ಇನ್ನೊಂದು ಸಿಳೆಯಲ್ಪಡುವುದು. ಇದು ಸರ್ವಸಾಧಾರಣವಾದ ನಿಯಮ. ಒಬ್ಬ ಗರ್ಭ ಶ್ರೀಮಂತನಿದ್ದಾರೆ. ಅವನಿಗೆ, ಸಂತಿ, ಸನ್ಮಿತ್ರ, ಜ್ಞಾನ, ಆರೋಗ್ಯ ಇತ್ಯಾದಿಗಳಲ್ಲಿ ಯಾವುದಾದರೊಂದರ ಕೊರತೆ ಇದ್ದೇ ಇದೆ. ಇದು ನಮ್ಮನ್ನು ಈರ್ಷ್ಯಾಗ್ನಿಯಿಂದ ಉಳಿಸುವುದು. ಬಾಹ್ಯ ಸುಖವೂ, ಆಂತರಿಕ ಶಾಂತಿಯೂ ಒಂದೇ ಎಲ್ಲವೆಂಬುದನ್ನು ನಾವು ನೆನಪಿಡಬೇಕು. ಇದು ಮಾನವನಿಗೆ ಕಲ್ಯಾಣಕಾರಿಯಾದ. ಇದರ ಮೇಲೆ ಬಾಳಿ ಬಾಳಿಗೂ ವಿಚಾರ ಮಾಡಿ, ಮನನ ಮಾಡುವುದು ಪರಮ ಲಾಭಕಾರಿಯಾಗಿದೆ.

ಸಮೀಕರಣದ ನಿಯಮವು ನೈತಿಕತೆಯ ಆಧಾರವಾಗಿದೆ. ಮಾನವನಲ್ಲಿ ದೈವೀ ಹಾಗೂ ಆಸುರೀ ಶಕ್ತಿಗಳೆಂಬ ಎರಡು ಶಕ್ತಿಗಳಿವೆ. ಆಸುರೀ ಸಂಪತ್ತು ಮೋಹ, ಅಜ್ಞಾನಗಳ ದ್ಯೋತಕವಾಗಿದೆ. ದೈವೀ ಸಂಪತ್ತು ಜ್ಞಾನ, ಸುಖಗಳ ದ್ಯೋತಕತ್ವ. ಮಾನವನು ದೈವೀ ಸಂಪತ್ತಿನಿಂದ, ಆಸುರೀ ಸಂಪತ್ತಿನ ಮೇಲೆ ವಿಜಯವನ್ನು ಪಡೆಯಲು ಪ್ರಯತ್ನಿಸಬೇಕು. ಇದರ ಅಂತಿಮಸ್ಥಿತಿಯನ್ನು ವಿಷ್ಣುವೆನ್ನುವರು. ಸದಾಚಾರ ಮತ್ತು ನೈತಿಕತೆಗಳು ನಮ್ಮನ್ನು ಆ ದಿಕ್ಕಿಗೆ ನಡೆಸುವುವು. ಆತ್ಮವು ಆಸುರೀ ಸಂಪತ್ತುಗಳಿಂದ ತಪ್ಪಿಕೊಳ್ಳಲು ಪ್ರೇರೇಪಿಸುತ್ತದೆ. ಇದರಿಂದಾಗಿ ನಾವು ಜ್ಞಾನವಾಗಿಯೂ ಅಜ್ಞಾನವಾಗಿಯೂ ಆತ್ಮೋದ್ಧಾರದ ಕೆಲಸಗಳನ್ನು ಮಾಡುವೆವು. ಜ್ಞಾನವಾಗಿ ನಡೆಯುವ ಕ್ರಿಯೆಗಳನ್ನು ನೈತಿಕತೆಯೆನ್ನಬಹುದು. ನೈತಿಕ ಬಲದಿಂದ ಮಾನವನು ಮೋಹ, ಅಜ್ಞಾನಗಳಿಂದ ಪ್ರಾಪ್ತವಾಗುವ ಸಂಕಟ, ದುಃಖಗಳನ್ನು ದೂರಗೊಳಿಸಲು ಸಾಧ್ಯ. ಆತ್ಮನೇ ದುಃಖ, ಸಂಕಟಗಳನ್ನೂ ನಿರ್ಮಾಣಗೊಳಿಸಿ ಆ ಜಿಜ್ಞಾಸ ಮೋಹಗಳು ನಿವೃತ್ತಿಯಾಗುವಂತೆ ಮಾಡುವನು. ಇದು ಅಜ್ಞಾತ ಆತ್ಮೋದ್ಧಾರದ ಕಾರ್ಯವಾಗಿದೆ.

ಜ್ಞಾನಿಗಳು ತಮ್ಮ ತಪ್ಪಿಗಾಗಿ ಪ್ರಾಯಶ್ಚಿತ್ತವನ್ನು ಅನುಭವಿಸಲು ಸಿದ್ಧರಿರುವರು. ಅವರಿಂದ ಅಪರಾಧಗಳು ನಡೆದಲ್ಲಿ ಅವುಗಳನ್ನು ಒಪ್ಪಿಕೊಳ್ಳಲು ಹಿಂಜರಿಯುವುದಿಲ್ಲ. ಅದರ ದಂಡನೆಯನ್ನು ಸಂತಸದಿಂದ ಅನುಭವಿಸುವರು. ಅವರ ಮನಸ್ಸಿನಲ್ಲಿ ತಾವು ನೂಡಿದ ಅನುಚಿತ ಕಾರ್ಯದ ವಿರುದ್ಧವಾಗಿ ಕೂಡಲೇ ಒಂದು ಪ್ರತಿಕ್ರಿಯೆ ಮೂಡುವುದು. ಇದರ ಕಾರಣವು ಆತ್ಮನ ಸಮೀಕರಣ ಪ್ರಸೃತ್ತಿಯೇ ಆಗಿದೆ. ಮೇಲಿನ ಸಿದ್ಧಾಂತದ ಸತ್ಯತೆಗೆ ರಾಜಾ ಪರೀಕ್ಷಿತನ ಉದಾಹರಣೆ ಕೊಡಬಹುದು. ಕಲಿವಶನಾದ ಪರೀಕ್ಷಿತನು ಶೃಂಗಿ ಮಹರ್ಷಿಯ ಕೊರಳಲ್ಲಿ ಮೃತ ಸರ್ಪವನ್ನು ಹಾಕಿದನು. ಹಿಂತಿರುಗಿದೊಡನೆ ಅವನಿಗೆ ತನ್ನ ತಪ್ಪು ತಿಳಿಯಿತು. ಪ್ರೋಥೆಗೊಂಡ ಅವನಿಗೆ ಕ್ಷಣವೂ ಚಿತ್ತ ಶಾಂತಿ ಇರಲಿಲ್ಲ. ಅದಕ್ಕಾಗಿ ಪ್ರಾಯಶ್ಚಿತ್ತವನ್ನನುಭವಿಸಲು ಅವನು ಸಿದ್ಧನಾಗಿದ್ದನು. ಅವನು ಇನ್ನು ಏಳು ದಿನಗಳಲ್ಲಿ ಮೃತ್ಯುವಶನಾಗುವಂತೆ ಕೂಟ್ಟ ಶಾಪವನ್ನು ಕೇಳಿ ಶಾಂತನಾದನು. ಉಳಿದ ತನ್ನ ಜೀವನವನ್ನು ಸಾರ್ಥಕಗೊಳಿಸುವ ಪ್ರಯತ್ನದಲ್ಲಿ ತೊಡಗಿದನು.

ಇದರಿಂದ ನಮಗೆ ತಿಳಿಯುತ್ತದು— ನೂನವನ ಅಹಂಕಾರವೇ ಕಲಿ, ಸಾಂಸಾರಿಕ ವೈಭವವೇ ಸ್ವರ್ಣ ಮುಕುಟ. ಈ ಸ್ವರ್ಣ ಮುಕುಟದ ಅಹಂಕಾರದಿಂದ ಅನೇಕ ಅನ್ಯಾಯಗಳನ್ನು ಮಾಡುವೆವು. ಆಗ ಆತ್ಮ ನಿರೀಕ್ಷಣೆಯ ಶಕ್ತಿ ಇರುವುದಿಲ್ಲ. ಎಂದಿನವರೆಗೆ ನಾವು ಸನಾಜದೊಡನೆ ವ್ಯವಹಾರದಲ್ಲಿರುವೆವೋ ಅವರೆಗೆ ಅಹಂಕಾರ ವಶರಾಗಿರುವೆವು. ಆದರೆ, ಏಕಾಂತಸ್ಥಳಕ್ಕೆ ಹೋಗಿ ಆತ್ಮ ನಿರೀಕ್ಷಣೆಯಲ್ಲಿ ತೊಡಗಿದಾಗ ಅಹಂಕಾರವಶರಾಗಿ ಮಾಡಿದ ಅನ್ಯಾಯಗಳು ಗೋಚರಿಸುವುವು. ಇದರಿಂದಾಗಿ ಆತ್ಮವು ಪ್ರಾಯಶ್ಚಿತ್ತವನ್ನನುಭವಿಸಲು . ಪ್ರೇರೇಪಿಸುವುದು. ಈ ರೀತಿ ಆತ್ಮಶುದ್ಧಿಯ ಪ್ರಯತ್ನವು ನಡೆಯುವುದು. ಇದೇ ಆಧ್ಯಾತ್ಮಿಕ ಸಮೀಕರಣದ ನಿಯಮ.

ಈ ರೀತಿಯ ಪ್ರಾಯಶ್ಚಿತ್ತ ಪ್ರವೃತ್ತಿಯಿಂದ, ವಾಪಕ್ರಿಯೆಗಳಿಂದ ಉತ್ಪನ್ನವಾದ ಕುಪ್ರವೃತ್ತಿಗಳ ಸಫಲತಾಸಾರ್ವಕ ವಿರೋಧವೂ, ಅವರ ದುಷ್ಪರಿಣಾಮಗಳ ನಷ್ಟವೂ ಆಗುವುದು ತಮ್ಮ ಪಾಪಗಳಿಗೆ ಪ್ರಾಯಶ್ಚಿತ್ತವನ್ನನುಭವಿಸಲು ಸಿದ್ಧನಿಲ್ಲದ ವ್ಯಕ್ತಿಯ ದುಷ್ಪ್ರವೃತ್ತಿಗಳು ಬಲಗೊಳ್ಳುವುವು. ಒಂದು ಸಂದರ್ಭದಲ್ಲಿ, ಬಾಹ್ಯ ಪರಿಸ್ಥಿತಿಗಳಿಂದಲೇ ಇದರ ಪ್ರತೀಕಾರವಾಗುವುದು. ಆತ್ಮಶುದ್ಧಿಯು ಜ್ಞಾನ ತರೂಪವಾಗಿ ಪ್ರಾಯಶ್ಚಿತ್ತದಿಂದ ಜ್ಞಾನಿಗಳಲ್ಲಿಯೂ, ದುಃಖಗಳನ್ನನ್ನುಭವಿಸಿ ಅಜ್ಞಾನಿಗಳಲ್ಲಿ ಅಜ್ಞಾತರೂಪವಲ್ಲಿಯೂ, ಉಂಟಾಗುವುದು.

ಈ ಸಮೀಕರಣ ಪ್ರವೃತ್ತಿಯೇ ಸಮಸ್ತ ಸಂಸಾರದಲ್ಲಿ ಹರಡಿರುವುದನ್ನು ನಾವು ನೋಡಬಹುದು. ಈ ಪ್ರವೃತ್ತಿಯೇ ಶ್ರೀಮಂತನನ್ನು ದರಿದ್ರನನ್ನಾಗಿಯೂ, ದರಿದ್ರನನ್ನು ಧನಿಕನನ್ನಾಗಿಯೂ, ಸನ್ಮಾನಿತನನ್ನು ತಿರಸ್ಕೃತನನ್ನಾಗಿಯೂ, ತಿರಸ್ಕೃತರನ್ನು ಸನ್ಮಾನಿತರನ್ನಾಗಿಯೂ ಮಾಡುವುದು. ಧನಿಕ ರಾಷ್ಟ್ರವನ್ನು ದರಿದ್ರವನ್ನಾಗಿಯೂ, ಬಡರಾಷ್ಟ್ರವನ್ನು ಶ್ರೀಮಂತ ರಾಷ್ಟ್ರವನ್ನಾಗಿಯೂ ಮಾಡುವುದು ಇದೇ ಪ್ರವೃತ್ತಿ. ಆಧ್ಯಾತ್ಮಿಕ ಜೀವನದಲ್ಲಿಯೂ ಈ ಪ್ರವೃತ್ತಿ ಕಾರ್ಯಗೈಯುವುದು. ಅನುರಾಗದ ಸ್ಥಾನದಲ್ಲಿ ವಿರಾಗವೂ, ಪುತ್ರತೆಯ ಬದಲಿಗೆ ಪಶುತ್ವವೂ ಸ್ವಾರ್ಥದ ಬದಲು ತ್ಯಾಗವೂ ಕಾಣಿಸಿಕೊಳ್ಳುವುದು ಇದರಿಂದ.

ಆತ್ಮದ ಸಮೀಕರಣ ಪ್ರವೃತ್ತಿಯನ್ನು ಸರಿಯಾಗಿ ತಿಳಿಯಲು ಅದೃಶ್ಯ ಮನಸ್ಸಿನ ಕ್ರಿಯೆಗಳನ್ನು ತಿಳಿಯಬೇಕು. ಆಧುನಿಕ ಮನೋವಿಜ್ಞಾನಿಗಳ ಅಭಿಪ್ರಾಯದಂತೆ ಸ್ವಪ್ನವು ನಮ್ಮ ಸುಪ್ತ ವಾಸನೆಗಳ ರೂಪಾಂತರವಾಗಿದೆ. ಕನಸಿನಲ್ಲಿ ನಾವು ಪ್ರಿಯ ಹಾಗೂ ಅಪ್ರಿಯ ಘಟನೆಗಳನ್ನು ನೋಡುವೆವು. ಸ್ವಪ್ನದ ನಿರ್ಮಾಣವನ್ನು ಅದೃಶ್ಯ ಮನಸ್ಸೇ ಮಾಡುವುದು ಪ್ರಿಯ ಘಟನೆಗಳಿಂದ ರಾಗಾತ್ಮಕ ಪ್ರವೃತ್ತಿಯೂ, ಅಪ್ರಿಯ ಘಟನೆಗಳಿಂದ ವಿರಾಗಾತ್ಮಕ ಪ್ರವೃತ್ತಿಯೂ ಉಂಟಾಗುವುದು. ಈ ಎರಡು ಪ್ರವೃತ್ತಿಗಳೂ ಸಮಬಲವುಳ್ಳವುಗಳು. ನಮ್ಮ ನಿಜ ಸ್ವರೂಪದ ಜ್ಞಾನವು ಅನಾಸಕ್ತಿಯಿಂದಲೇ ಉಂಟಾಗುವುದು. ಸ್ವಪ್ನದ ಅಪ್ರಿಯ ಘಟನೆಗಳು ಅತ್ಮವು ವಿಷಯಾಸಕ್ತಿಗಳಿಂದ ಮುಕ್ತವಾಗಲು ಪ್ರಯತ್ನಿಸುವ ಸೂಚನೆಗಳ್ಳೆ. ನಮ್ಮ ವ್ಯಕ್ತಿತ್ವವು ಸಂಸಾರದ ವಿಷಯಾಸಕ್ತಿಗಳಿಂದ ಮುಕ್ತವಾಗಲು ಅದೃಶ್ಯ ಮನವು ಈ ಅಪ್ರಿಯ ಘಟನೆಗಳನ್ನು ಸೃಷ್ಟಿಸುವುದು ನಮ್ಮ ಅಹಂಕಾರಿ ಮನವು ಈ ವಿಷಯವನ್ನು ತಿಳಿದಿಲ್ಲ.

ಜಾಗ್ರತ ಅವಸ್ಥೆಯಲ್ಲಿಯೂ ಇದೇ ರೀತಿ ನಡೆಯುವುದು. ಮಾನವನ ಜೀವನ, ಮರಣಗಳು ಅವನ ಇಚ್ಛೆಗಳನ್ನೇ ಹೊಂದಿಕೊಂಡಿವೆ. ಅವನ ಸುಖ, ದುಃಖಗಳೂ ಅದೃಶ್ಯ ಮನದ ಲೆಕ್ಕಗಳು. ವ್ಯಕ್ತ ಮನದಲ್ಲಿ ಸುಖದ ಪ್ರವೃತ್ತಿಯು ಹುಟ್ಟಿದೊಡನೆ, ಅವ್ಯಕ್ತ ಮನದಲ್ಲಿ ಅದರಿಂದ ಮುಕ್ತವಾಗುವ ಪ್ರವೃತ್ತಿಯು ಹುಟ್ಟುವುದು. ಈ ಪ್ರವೃತ್ತಿಯೇ ದುಃಖದ ಕಾರಣವಾಗಿದೆ. ಸುಖದುಃಖಗಳೆಂಡೂ ಒಂದನ್ನೊಂದು ಹೊಂದಿಕೊಂಡಿವೆ. ಆದರೆ ನಾವು ಮೋಹವಶರಾಗಿ ಒಂದನ್ನು ವಾಂಛಿಸುವೆಂದೂ, ಇನ್ನೊಂದನ್ನ ಅವಾಂಛನೀಯವೆಂದೂ ತಿಳಿಯುತ್ತೇವೆ.

ಜಗತ್ತಿನ ಪ್ರಮುಖ ಕವಿಗಳ ಕೃತಿಗಳನ್ನು ವಿವೇಚನಾತ್ಮಕ ದೃಷ್ಟಿಯಿಂದ ನೋಡಿದರೆ ಪ್ರತಿಯೊಂದು ಸುಖಾಂತ, ಅಥವಾ ದುಃಖಾಂತ ನಾಟಕಗಳಲ್ಲಿ ಲೋಭಿ, ದುರಾಚಾರಿಗಳ ವಿನಾಶವನ್ನೂ, ಸದಾಚಾರಿಗಳು ಸುಖ ಸಂಪನ್ನರಾಗುವುದನ್ನೂ ಪರಿಶೀಲಿಸಬಹುದು. ಕೆಲವು ಸಲ ದುರಾಚಾರಿಗಳು ಲೋಭವಶರಾಗಿ ಆಚರಿಸಿದ

(ಉಳಿದ ಸುದ್ದಿ ನೋಡಿರಿ)

ಇದೊಂದು ವಿಗ್ರಹವಲ್ಲ—ಮಂಗನ ಜಾತಿಯೂ ಅಲ್ಲ. ಆಕಾಶಮಂಡಲದಲ್ಲಿ ಅತಿಎತ್ತರ ಹಾರಬೇಕಾಗಿ ಬರುವ ವಿಮಾನ ಚಾಲಕರಿಗೆ ಇಂಥ ವೇಷ ಹಾಕಿಕೊಳ್ಳುವುದು ಅಗತ್ಯವಾಗುತ್ತದೆ. ಚಿತ್ರದಲ್ಲಿರುವಾತನು ಎಂಗ್ ಕೆಮೊಂಡರ್ ನಾಲ್ಕರ್ ಗಿಬ್—ಈತನು ಆಸ್ಟ್ರೇಲಿಯದಿಂದ ೬೫೦೦ ಅಡಿ ಎತ್ತರದಲ್ಲಿ ಹಾರಾಡಿ ಹೊಸವಾಹನವೊಂದನ್ನೆ ನಿರ್ಮಿಸಿದನು. ಸೈಬಿರಿಯಾದ ತಯಾರಾದ ಈ ಉಡುಪಿನಲ್ಲಿ ರಬ್ಬರಿನನಳಿಗೆಗಳೂ ಇವೆಯಲ್ಲಿವೆ. ಇವು ಬಿಗಿಸಲೂ ಸಡಿಲಿಸಲೂ ಅಪಾಯಗಳಿಂದ ದೇಹವನ್ನು ರಕ್ಷಿಸಲೂ ಇವುಗಳಿಂದ ಸಹಾಯವಾಗುತ್ತವೆ.

NAVAYUGA

Popular Kannada Weekly

Founder:—

A. B. SHETTY, *M. L. A.*
Former Minister for Public Health, Govt. of Madras.
At Present Minister for Health Govt. of Mysore.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೬	೭-೨-೧೯೫೨	೨೨

ಕಾಶ್ಮೀರದಲ್ಲಿ ಯಾರು ತಪ್ಪು?

ನಮ್ಮೆಲ್ಲರನ್ನು ಜುನಾವಣೆಗಳ ಸುದ್ದಿ ಸಮಾಚಾರಗಳೇ ಆಕರ್ಷಿಸಿರುವ ಈ ದಿನಗಳಲ್ಲಿ— ಕಾಶ್ಮೀರದ ಪ್ರಶ್ನೆಯೊಂದು ವಿಕಟರೂಪದಿಂದ ಭಯಪಡಿಸುತ್ತಿರುವುದು ನಿಜಕ್ಕೂ ಶೋಚನೀಯವಾದ ವಿಚಾರವೆನ್ನದೆ ವಿಧಿಯಿಲ್ಲ. ಪ್ರಧಾನಿ ನೆಹರೂರವರು ಮೊನ್ನೆ ಮದ್ರಾಸಿಗೆ ಸಂದರ್ಶನ ವಿತ್ತಾಗ ಮಾಡಿದ ಸಾರ್ವಜನಿಕ ಭಾಷಣದಲ್ಲಿ ಸವಿಸ್ತಾರವಾಗಿ ಕಾಶ್ಮೀರ ಪ್ರಶ್ನೆಯ ಹಿನ್ನೆಲೆಯನ್ನು ವಿವರಿಸಿರುವುದೂ ಇದನ್ನೆ ಸೂನೆ ಮತ್ತು ಹೊಸದೆಹಲಿಗಳಲ್ಲಿ ನಡೆದ ಸಭೆಯ ಮುಂದೆ ಪುನರುಚ್ಚರಿಸಿದುದೂ ಸಕಾಲಿಕವಾದ ಕಾರ್ಯವೆಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಜುನಾವಣೆಯಲ್ಲಿ ವಿದೇಶ ಧೋರಣೆಯ ಒಂದು ಮಹತ್ವದ ಪ್ರಶ್ನೆಯಾಗಿ ಕಾಶ್ಮೀರ ಸಮಸ್ಯೆ ಪರಿಣಮಿಸುತ್ತಿದೆ; ಅದಕ್ಕಿಂತ ಹೆಚ್ಚಾಗಿ ಜುನಾವಣೆಗಳು ನಡೆಯುತ್ತಿದ್ದಂತೆಯೇ ಅಥವಾ ಅವು ಮುಗಿದೊಡನೆಯೇ ಈ ದೇಶದ ಜನರು ಕಾಶ್ಮೀರ ಪ್ರಶ್ನೆಯ ಸಂಬಂಧದಲ್ಲಿ ಬಹಳ ಮಹತ್ವವಾದ ಜನಾಭ್ಯಾರಿಗೆ ಕೆಗಲು ಕೊಡಬೇಕಾಗಿ ಬರುವ ಸಕಲ ಲಕ್ಷಣಗಳೂ ಕಾಣಿಸುತ್ತವೆ. ಶ್ರೀ ಕೃಷ್ಣ ಮೆನೋನ್ನರನ್ನು ಮುಂಬಯಿಯಂಥ ಸುಶಿಕ್ಷಿತ ಹಾಗು ಸಮಿಶ್ರ ಮತದಾರ ಕ್ಷೇತ್ರದಲ್ಲಿ—ಜಗತ್ತಿನಲ್ಲಿಯೇ ಹಿರಿದಾದ ಕೇಂದ್ರ ನಗರಪ್ರೊಂದರಲ್ಲಿ—ಲೋಕ ಸಭೆಗೆ ಉಮೇದ್ವಾರಿಗಳಾಗಿ ನಿಲ್ಲಿಸಿರುವುದು ಅಂತಾರಾಷ್ಟ್ರೀಯ ನೀತಿಯನ್ನು ಒರೆಗಲ್ಲಿಗೆ ಹಚ್ಚುವ ಉದ್ದೇಶದಿಂದಲೇ ಎಂದು ಪ್ರಧಾನಿಯವರು ತಿಳಿಸಿದ್ದಾರೆ. ಶ್ರೀ ಮೆನೋನ್ನರಿಗೆ ಪ್ರತಿ ಸ್ಪರ್ಧಿಯಾಗಿ ಶ್ರೀ ಪೀಟರ್ ಆಳ್ವಾರೀಸರೆಂಬವರು ಪ್ರಜಾ ಸಮಾಜವಾದಿ ಪಕ್ಷದಿಂದ ನಿಂತಿದ್ದಾರೆ; ಶ್ರೀಯುತರು ಗೋವೆಯ ಪ್ರಶ್ನೆಯ ಬಗ್ಗೆ ಕಾಂಗ್ರೆಸಿನೊಡನೆ ಸಹ ಮತವಿಲ್ಲದ ವ್ಯಕ್ತಿಯಾದುದರಿಂದ ಕಾಶ್ಮೀರದ ಪ್ರಶ್ನೆಯಂತೆಯೇ ಗೋವೆಯ ವಿಮೋಚನೆಯೂ ಈ ಸ್ಪರ್ಧೆಯಲ್ಲಿ ಮುಖ್ಯ ವಿಷಯವಾಗಿ ಪರಿಣಮಿಸಬಹುದು. ಅದೇನೇ ಇದ್ದರೂ ಕಾಶ್ಮೀರ ಪ್ರಶ್ನೆಯು ಗೋವೆಯ ತಂಟೆಯಂತೆಯೇ ಮುಖ್ಯ ರಾಷ್ಟ್ರೀಯ ಸಮಸ್ಯೆಯಾಗಿದೆ ಎಂಬುದು ನಿರ್ವಿವಾದವ ವಿಷಯ; ಮತ್ತು ಜಾಗತಿಕ ಸಂಘರ್ಷದಲ್ಲಿ ಈ ವಿವಾದವು ಈಗ ಪರ್ಯಾಲೋಚನೆಗೆ ಗುರಿಯಾಗಿರುವುದರಿಂದ ಗೋವೆಗಿಂತಲೂ ಹೆಚ್ಚು ಮಹತ್ವವನ್ನು ಈ ಕಾಲದಲ್ಲಿದು ಪಡೆದಿರುತ್ತದೆ ಎಂಬುದು ನಿಸ್ಸಂಶಯ. ಆದುದರಿಂದ ಪ್ರಧಾನಿಗಳು ಕಾಶ್ಮೀರದ ಮೇಲೆ ಆದಷ್ಟು ಹೆಚ್ಚು ಪ್ರಕಾಶವನ್ನು ಸ್ಪಷ್ಟವಾಗಿ ಬೀರಲು ಪ್ರಯತ್ನಿಸಿರುವುದು ಕಾಲೋಚಿತವಾದ ಉದ್ಯಮವೆನ್ನಲೇ ಬೇಕು. ಪ್ರಧಾನಿಯವರು ಹೇಳುವುದೇನು? ಮೊದಲನೆಯದಾಗಿ ಭಾರತವು ಜನಮತಗಣನೆಯ ವಿಷಯದಲ್ಲಿ ನೀಡಿದ್ದ ಭರವಸೆಯ ಮಾತುಗಳನ್ನು ಎಂದಿಗೂ ಮುರಿದಿದ್ದಿಲ್ಲ. ಪಾಕಿಸ್ತಾನವೂ ಆದರೆ ಮಿತ್ರವೃಂದವೂ ಒಟ್ಟು ಸೇರಿ ಭಾರತದ ಮೇಲೆ ಭಜನ ಭಂಗದ ಆರೋಪವನ್ನು ಹೊರಿಸುತ್ತಿವೆ. ಇದು ಸರಿಯಾದುದಲ್ಲ. ಭಾರತವು ಮತಗಣನೆಗೆ ನಿಶ್ಚರ್ತವಾಗಿ ಒಪ್ಪಿದ್ದಿಲ್ಲ. ಕೆಲವೊಂದು ಶರ್ತಗಳ ಮೇಲೆ ಗಣಮಟ್ಟು ಹಿಂದಿನ ಆ ಪರಿಸ್ಥಿತಿಯಲ್ಲಿ ಒಪ್ಪಿದ್ದು ಹೌದು. ಆದರೆ ಆ ಶರ್ತಗಳಲ್ಲಿ ಪ್ರಾಮುಖ್ಯವಾದುದೇನೆಂದರೆ ಪಾಕಿಸ್ತಾನವು ಕಾಶ್ಮೀರ ಭೂ ಪ್ರದೇಶದಿಂದ ತನ್ನೆಲ್ಲ ಸೈನ್ಯವನ್ನು ಹಿಂದೆಗೆದುಕೊಳ್ಳಬೇಕು ಎಂಬುದು. ಈ ಶರ್ತದ ಪಾಲನೆಯನ್ನು ಈವರೆಗೂ ಪಾಕಿಸ್ತಾನವು ಮಾಡಿದ್ದಿಲ್ಲ. ಅಜಾದ್ ಕಾಶ್ಮೀರ್ ಎಂಬ ಹೆಸರನ್ನು ತಾನು ಆಕ್ರಮಿಸಿದ ಭೂ ಪ್ರದೇಶಕ್ಕೆ ಪಾಕಿಸ್ತಾನವು ಕೊಟ್ಟು ಅನ್ಯಾಯವಾಗಿ ಅಲ್ಲಿ ಸೈನ್ಯ ಸಹಿತ ಈಗಲೂ ತಳವೂರಿದೆ. ಪಾಕಿಸ್ತಾನವು ಕಾಶ್ಮೀರದ ಮೇಲೆ ಆಕ್ರಮಣಗೈದಿರುವ ಅಪರಾಧವನ್ನು ಹೊತ್ತ ರಾಷ್ಟ್ರವೆಂದು ಸ್ವತಃ ಭದ್ರತಾಮಂಡಳಿಯೇ ಗೊತ್ತುವಳಿಯೊಂದರ ಮೂಲಕ ಗುರುತಿಸಿರುವಾಗ, ಅಜಾದ್ ಕಾಶ್ಮೀರ್ ಪ್ರದೇಶದಿಂದ ಪಾಕಿಸ್ತಾನವು ತನ್ನ ಸೈನ್ಯವನ್ನು ಹಿಂದೆಗೆಸಿಕೊಳ್ಳುವಂತೆ ಯಾವ ಪ್ರಯತ್ನವನ್ನೂ ಮಾಡಿರದೆ ಇರುವುದು ಕ್ರಮಬದ್ಧವಾದುದೆ? ಭಾರತವು ಈ ಬಗ್ಗೆ ಒತ್ತಾಯವನ್ನು ಇಷ್ಟರವರೆಗೆ ಹೇರಿದಿದ್ದರೆ, ಅದು ಈ ಮುಖ್ಯಾಂಶವನ್ನು ಕಡೆಗಣಿಸಿದೆ ಎಂಬುದರಿಂದಲ್ಲ; ಶಾಂತಿ ಭಂಗವಾಗಬಾರದು ಎಂಬ ಹಾನೈಕೆ ಹಾಗು ಜಗತ್ತಿನ ರಾಷ್ಟ್ರಗಳು ಬುದ್ಧಿ ಹೇಳಿ ಪಾಕಿಸ್ತಾನವನ್ನು ಸರಿದಾರಿಗೆ ಹಚ್ಚಬಹುದು ಎಂಬ ನಿರೀಕ್ಷೆಯಿಂದ ಅದು ಈ ಘೋರ ಅನ್ಯಾಯವನ್ನು ಸಹಿಸಿಕು ಸಂಯುಕ್ತ ರಾಷ್ಟ್ರ ಸಂಘದ ಸದಸ್ಯ ರಾಷ್ಟ್ರಗಳು ಈ ಕಡೆಗೆ ಇನ್ನೂ ಗಮನವನ್ನು ಕೊಡದಿರುವುದು ದೊಡ್ಡ ಆಶ್ಚರ್ಯ! ಆದಕ್ಕೂ ಹೆಚ್ಚಾಗಿ ಮಹಾ ರಾಷ್ಟ್ರಗಳೆಂದು ಹೇಳಿಕೊಳ್ಳುವ ದೇಶಗಳ ಪ್ರತಿನಿಧಿಗಳು ಭಾರತದ ನಿಲುವಿಯನ್ನು ಅರ್ಥಮಾಡಿಕೊಳ್ಳುವುದಂತೂ ದೂರ ಉಳಿಯಿತು, ಕೇಳಿಕೊಳ್ಳುವುದಕ್ಕೂ ಸಿದ್ಧವಿರದೆ "ನಿರ್ಣಯ"ಗಳನ್ನು ಸ್ವೀಕರಿಸುವುದು ಹೊಣೆಗೇಡಿತನದ ಪರಮಾವಧಿ ಎಂದೆನ್ನದೆ ನಿರ್ವಾಹವಿಲ್ಲ. ಇಂಥ ಲಕ್ಷಣ ವರ್ತನೆಯು ಭದ್ರತಾ ಮಂಡಳಿ ಮತ್ತು ಸಂಯುಕ್ತ ರಾಷ್ಟ್ರ ಸಂಘದ ಘನತೆಗೆ, ಅದರಲ್ಲಿ ನ್ಯಾಯ ಪಕ್ಷಪಾತಗಳು ಇಟ್ಟಿರುವ ವಿಶ್ವಾಸಕ್ಕೆ ತಕ್ಕುದಲ್ಲ ಎಂಬುದನ್ನು ನೆಹರು ಒತ್ತಿ ಹೇಳಿರುವುದು ಎರಡನೆಯ ಮುಖ್ಯ ವಿಷಯವಾಗಿದೆ. ಅಂತಾರಾಷ್ಟ್ರೀಯ ನ್ಯಾಯಾಲಯದಲ್ಲಿ ಪಾಕಿಸ್ತಾನದ ಸೈನ್ಯವು ಕಾಶ್ಮೀರದಲ್ಲಿ ಪ್ರದೇಶವಿಲ್ಲವೆಂದು ಭದ್ರತಾ ಮಂಡಳಿಯ ಮುಂದೆ ಹಸಿ ಹಸಿ ಸುಳ್ಳನ್ನು ಹೇಳಿದ್ದು ಮತ್ತದನ್ನು ಸಂಯುಕ್ತ ರಾಷ್ಟ್ರ ಸಂಘದ ನಿರೀಕ್ಷಕರು ತಪ್ಪೆಂದು ಸಿದ್ಧಪಡಿಸುವ ವರೆಗೂ ಲಜ್ಜೆಗೆಟ್ಟು ಸಾಧಿಸಿದ್ದೆ ಸರ್ ಜಾಫರುಲ್ಲಾ ಖಾನರಂಥ ನ್ಯಾಯಾಧಿಪತಿಗಳು ಶೋಭಿಸುತ್ತಾರೆಂದ ಮೇಲೆ ಈ ತೆರನಾದ ವಿಶ್ವಸಂಸ್ಥೆಗಳಲ್ಲಿ ನ್ಯಾಯದಾನವಾಗುತ್ತದೆಂಬ ವಿಶ್ವಾಸವು ಸಾಮಾನ್ಯ ನಾಗರಿಕ ನಿಗೆಂದೂ ಉಂಟಾಗಲಾರದು. ಆದರೆ ಸಂಯುಕ್ತ ರಾಷ್ಟ್ರ ಸಂಘ, ಭದ್ರತಾ ಮಂಡಳಿ, ಅಂತಾರಾಷ್ಟ್ರೀಯ ನ್ಯಾಯ ಸ್ಥಾನ ಮುಂತಾದ "ವಿಶ್ವಸಂಸ್ಥೆ"ಗಳ "ಘನ" ಸದಸ್ಯತ್ವವನ್ನು ಪಡೆದಿರುವ ಒಂದು ಸರಕಾರವು ಸಾಮಾನ್ಯ ನಾಗರಿಕನಷ್ಟು ಪ್ಲೇಪ್ರದಲ್ಲಿ ವಿಶ್ವಾಸವನ್ನು ಕಳೆದುಕೊಳ್ಳಲಾರದು; ಕಣ್ಣಾರೆ ಕಂಡರೂ ಪರಾಂಬರಿಸಿ ನೋಡಬೇಕು ಎಂಬಂತೆ "ದುಡುಕುತನ"ದ ಅಪವಾದ ಭಾರದಿಂತೆ ನಡೆಯಬೇಕಾಗಿ ಬರುತ್ತದೆ. ಭಾರತವು ಈ ಅಗ್ನಿ ಪರೀಕ್ಷೆಯನ್ನು ಇದೇ ದೃಷ್ಟಿಯಿಂದ ಕಾಣುತ್ತಿದೆಯೆನ್ನಬಹುದು. ಇಲ್ಲವಾದರೆ, ಕಾಶ್ಮೀರದಲ್ಲಿ ಜನಮತಗಣನೆ ನಡೆಯಲಿ ಎಂದು ಪಾಕಿಸ್ತಾನವು ಕೇಳುತ್ತಿರುವುದೂ ಅದಕ್ಕೆ ಉಳಿದ ರಾಷ್ಟ್ರಗಳು ನಮ್ಮ ಸಮ್ಮತಿಸೂಚಕವಾಗಿ ತಲೆಯಾಡಿಸುತ್ತಿರುವುದೂ ಭಾರತವು ವಚನ ಭಂಗಮಾಡಿದೆ ಎಂಬ ಆರೋಪಪಟ್ಟಿಗೆ ಹಾನ್ಯಾಸ್ಪದವಾಗುವುದಲ್ಲವೆ? ಶ್ರೀ ನೆಹರೂರವರು ಕಾಶ್ಮೀರದ ಪ್ರಶ್ನೆಯ ಮೂರನೇ ಮುಖ್ಯ ವಿಷಯವಾಗಿ ಇದನ್ನೆ ಪ್ರಸ್ತಾಪಿಸಿದ್ದಾರೆ. ಕಾಶ್ಮೀರದಲ್ಲಿ ಜನಮತಗಣನೆ ನಡೆಯಲಿ ಎನ್ನುವ ಪಾಕಿಸ್ತಾನದಲ್ಲಿ ಇಷ್ಟರವರೆಗೆ ಜುನಾವಣೆ ಎಂಬುದು ನಡೆದಿದೆಯೇ? ನಾವೀಗ ಎರಡನೇ ಮಹಾ ಜುನಾವಣೆಯಲ್ಲಿದ್ದೇವೆ; ಮತ್ತು ನಗರಸಭೆ, ಜಿಲ್ಲಾ ಬೋರ್ಡುಗಳಂಥ ಅನೇಕ ಜುನಾವಣೆಗಳನ್ನು ನಾವು ಮುಗಿಸಿದ್ದೇವೆ ಆದರೆ ಪಾಕಿಸ್ತಾನದಲ್ಲಿ? ಜುನಾವಣೆಯ ದಿನಗಳನ್ನು ಬೇಕೆಂದೇ ಮುಂದೂಡಲಾಗುತ್ತದೆ. ಭಾರತ ಬೊಡನೆ ಸಂಪರ್ಕವಿರುವ ಕಾಶ್ಮೀರ ಭೂ ಭಾಗದಲ್ಲಿ ಕಳೆದ ವರ್ಷ ೧೦೦೦ ಪ್ರವಾಸಿಗಳು ಸಂದರ್ಶನವನ್ನಿತ್ತರು. ಅಲ್ಲಿ ಎಲ್ಲರಿಗೂ ಮುಕ್ತದ್ವಾರವಿದೆ. ಅವರೆಲ್ಲರೂ ಈ ಪ್ರದೇಶದಲ್ಲಿ ಸುವ್ಯವಸ್ಥಿತವಾದ ರಾಜ್ಯಭಾರ ನಡೆಯುತ್ತಿದೆ ಎಂದು ಸಮಾಧಾನಪಟ್ಟಿದ್ದಾರೆ. ಆದರೆ ಅಜಾದ್ ಕಾಶ್ಮೀರ್ ಪ್ರದೇಶದಲ್ಲಿ ಪಾಕಿಸ್ತಾನವು ದಬ್ಬಾಳಿಕೆಯನ್ನು ನಡೆಸಿದೆ ಎಂದು ಆ ಭೂ ಭಾಗದ ಒಂದು ದಳವೇ ರಾಷ್ಟ್ರ ಸಂಘಕ್ಕೆ ದೂರನ್ನೊಯ್ದಿದೆ. ಇದನ್ನು ಕೆವಿಗೊಟ್ಟು ಭದ್ರತಾ ಮಂಡಳಿ ಆಲಿಸಿದೆಯೆ? ಪಾಕಿಸ್ತಾನದ ಕಡೆಯಿಂದ ಬಂದಿರುವ ಜನಮತಗಣನೆಯ ಬೇಡಿಕೆ ಎಷ್ಟು ಅಪಹಾಸ್ಯದಿಂದ ಕೂಡಿದೆ ಎಂಬುದನ್ನು ಜಗತ್ತಿನ ಸ್ರಬಲ ಶಕ್ತಿ ಸಂಪನ್ನ ರಾಷ್ಟ್ರಗಳು ನೋಡಿದ್ದುಂಟೆ? ಎಷ್ಟಕ್ಕೂ ಇಲ್ಲ—ಅವು ಪಾಕಿಸ್ತಾನದ "ಪ್ರಚಾರ ತಂತ್ರ" ಮತ್ತು ಸೈನಿಕ ಸ್ನೇಹದ ಮುಗ್ಧವಾಗಿ ವಿವೇಕವನ್ನು ಕಳೆದುಕೊಂಡಿನೆ ಎಂಬಂಥ ಮಾತನ್ನು ನಾವು ಹೇಳಿದರೂ ಅದು ಕಟೋಕ್ತಿಯಾಗಲಾರದು; ಉದ್ದಟತನವೂ ಆಗಲಿಕ್ಕಿಲ್ಲ. ಪಾಕಿಸ್ತಾನವು ತನ್ನ ಸೈನ್ಯಶಕ್ತಿಯ ಮದದಲ್ಲಿನೆ; ಬ್ರಿಟನ್ ಮತ್ತಿತರ ಪಾಶ್ಚಾತ್ಯ ರಾಷ್ಟ್ರಗಳು ಭಾರತವು ಸ್ವಾತಂತ್ರ್ಯೋತ್ತರದ ಅಲ್ಪಾವಧಿಯಲ್ಲಿಯೇ ಗಳಿಸಿರುವ ಜನಪ್ರಿಯತೆಯನ್ನೂ ಉಚ್ಚಸ್ಥಾನವನ್ನೂ

ಸಹಿಸದೆ ಮತ್ಸರಿಗಳಾಗಿನೆ -- ಆದುದರಿಂ ಪ್ರಧಾನಿಗಳೇ ಆಪ್ಪಣೆ ಕೊಡಿಸಿದಂತೆ "ನೆತ್ತರು ಮೊಣಕಾಲೂರುವಂತೆ ಮಾಡುವುದೇ" ಅವುಗಳ ಏಕಮೇವ ಧ್ಯೇಯವಾಗಿರುವಂತೆ ಕಾಣುತ್ತದೆ! ಕಾಶ್ಮೀರನ ಸಂಯುಕ್ತ ರಾಷ್ಟ್ರ ಸಂಘದ ಸೈನ್ಯದೆಷ ವೇಶವಾಗಬೇಕ್ಕುಉಲ್ಲಿಯವರೆಲ್ಲರೂ ಮುಸ್ಲಿಮರು ಎನ್ನುತ್ತಿರುವುದು ಇದೇ ದುರುದ್ದೇಶದಿಂದ ಎಂಬುದು ಸ್ಪಷ್ಟ. ಹಿಂದೆಸಂಯುಕ್ತ ರಾಷ್ಟ್ರ ಸಂಘದ ನಿರೀಕ್ಷಕರಾಗಿ ಬಂದ ಕೆಲವರು ಪಾಕಿಸ್ತಾನದಗುಪ್ತಚಾರರಾಗಿ ಕೆಲಸ ಮಾಡಿದರೆನಿಪುನವ ಗುಂಟು; ಪಾಕಿಸ್ತಾನವು ಜನಮತಗಣನೆಯ ನೆಪದಿಂದ ಕಾಶ್ಮೀರಿ ಮುಸ್ಲಿಮರಲ್ಲಾ ಹಿಂದುಗಳಲ್ಲೂ ವಿಷ ಬೀಜವನ್ನು ಬಿತ್ತಿ ಭಾರತದಲ್ಲೂ ಅದು ವ್ಯಾಪಿಸುವಂತೆ ಕುಹಕ ನಡೆಸಿದೆ ಎಂಬುದನ್ನು ಅರಿಯುವಷ್ಟು ವಿವೇಕವೂ ನಮಗುಂಟು. ಆದುದರಿಂದ, ನಾವು ಜನಮತಗಣನೆಯನ್ನು ಜಾತೀಯ ಭೂತಕ್ಕೆ ಅವಾಹನೆ ಮಾಡುವ ರೀತಿಯಲ್ಲಿ ನಡೆಸಲು ಅವಕಾಶ ಕೊಡುವಂತಿಲ್ಲ; ಪರಕೀಯ ಸೈನ್ಯಕ್ಕೆ ಕಾಶ್ಮೀರದಲ್ಲಿ ಪ್ರವೇಶ ಕೊಡುವಂತಿಲ್ಲವೆಂಬ ನೆಹರು ಪುನರುಚ್ಚರಿಸಿರುವುದು ಸಂಪೂರ್ಣವಾಗಿ ಸರಿಯಾದದಾಗಿದೆ. ಕಾಶ್ಮೀರ ಸ್ವತ್ತಿಗೆ ಬಗ್ಗೆ ಮುಂದೆ ನಾವು ಅನುಸರಿಸಬೇಕಾದ ನಡವಳಿಕೆಯು ಕಾನೂನು ಬದ್ಧವಾಗಿರಬೇಕಾದುದೂ ಆಗತ್ಯವಾಗಿದೆ—ಏನೆಂದರೆ, ಕಾಶ್ಮೀರವು ಕ್ರಮದಂತೆ ಭಾರತದೊಡನೆ ಸೇರ್ಪಡೆ ಹೊಂದಿದೆ; ಜನಾಭಿಪ್ರಾಯ ತಿಳಿದುಕೊಳ್ಳುವ ಆಶ್ವಾಸನೆಯನ್ನು ಭಾರತ ಸರಕಾರವು ಕಾಶ್ಮೀರದ ಜನರಿಗೆ ಕೊಟ್ಟಿದಲ್ಲದೆ ಪಾಕಿಸ್ತಾನಕ್ಕಾಗಲೀ ಭದ್ರತಾ ಮಂಡಳಿಕ್ಕಾಗಲೀ ಅಲ್ಲ; ೧೯೫೧ರಲ್ಲಿ ಜನಮತಗಣನೆಗೆ ಭಾರತವು ಹಾಕಿದ ಕರಾರುಗಳು ಪೂರ್ತಿಯಾಗಿಲ್ಲವಾದುದರಿಂದ ಜನಮತಗಣನೆಯು ಸೂಚನೆಯು ಈಗ, ಬದಲಾಯಿಸಿದ ಪರಿಸ್ಥಿತಿಗಳಲ್ಲಿ. ಅವೇ ಸ್ವರೂಪದಲ್ಲಿ ಊರ್ಜಿತವಿರುವುದೂ ಸಾಧ್ಯವಿಲ್ಲ: ಸಾಧ್ಯವಿದೆ ಎಂದೇ ಭದ್ರತಾ ಮಂಡಳಿದ ತೀರ್ಮಾನವಾದರೆ ಅದು ಪಾಕಿಸ್ತಾನವು ಚಕ್ರನುಣಕಾರಿ ರಾಷ್ಟ್ರ ಎಂದು ಮುಂತಾದ ವ್ಯಾನುಖ್ಯಾರ್ಥಗಳನ್ನು ಗಮನಿಸಲು ತಪ್ಪ ಕೂಡದು.

ನವಯುಗಕ್ಕೆ ಚಂದಾದಾರರಾಗಿ
ಪ್ರೋತ್ಸಾಹಿಸಿರಿ

ನೇತ್ರ ಚಿಕಿತ್ಸೆ

ಒಳ್ಳೆಯ ದೃಷ್ಟಿಯನ್ನು ಪಡೆಯಲು ನೈಸರ್ಗಿಕ ತತ್ವಾನುಸಂಧಾನವೇ ಯೋಗ್ಯಮಾರ್ಗ

ಹಲವೊಮ್ಮೆ ನಾವು ಕಣ್ಣು ನೋವಿ ಂದ ಬಳಲುತ್ತಿರುವುದುಂಟು. ಪರೀಕ್ಷೆ ಓದಲೆಂದೋ ಅಥವಾ ಇನ್ನಿತರ ಕಾರ ಗಳಿಂದ ನಿದ್ದೆಗೆಟ್ಟಾಗ, ಹಾಗೂ ಗಂಟೆ ಟ್ಟಲೆ ಓದಿದಾಗ—ಹೀಗೆ ಕೆಲವು ಸಂದ ರ್ಭಗಳಲ್ಲಿ ನಮಗೆ ಕಣ್ಣು ನೋವು ತಲೆ ತಿರುಗುವುದು.

ಅಲ್ಲದೆ—ಉಗಿಬಂಡಿಯಲ್ಲಿ ಪ್ರಯಾಣ ವಾಗಿ ಕಲ್ಲಿದ್ದಲ ಹೊಗೆ ಕಣ್ಣಿಗೆ ಬಡಿ ಯುವುದರಿಂದಲೂ, ಮುಳ್ಳು ಕೋಲು ಗಳಿಂದ ಗೀರಿಕೊಳ್ಳುವುದರಿಂದಲೂ, ಇತ್ಯಾ ದಿ ರಸ, ರಸಗಳು ಬೀಳುವುದರಿಂದಲೂ ಕಣ್ಣು ನೋವು ಉಂಟಾಗುತ್ತದೆ.

ಇವು ತಾತ್ಕಾಲಿಕ ಬೇನೆಗಳಾದರೆ—ಕಣ್ಣು, ಕೋಸುಗಣ್ಣು, ದೃಷ್ಟಿ ಮಂ ದ್ಯ ಮೊದಲಾದುವುಗಳು 'ರೋಗ'ದ ಪಟ್ಟಿಯಲಿಗೆ ಸೇರಿದವುಗಳು.

ಯಾವ ಸಾಲಿಗೇ ಸೇರಲಿ; ಕಣ್ಣು ನೋವನ್ನು ಸಹಿಸುವುದು ಸ್ವಲ್ಪ ಕಷ್ಟ. ಕೆಲವೊಮ್ಮೆ ಕಣ್ಣಿನಿಂದ ನೀರು ಹರಿ ಯುತ್ತಿದ್ದು, ರೆಪ್ಪೆದೆರೆಯಲು ಸಾಧ್ಯವಾ ಗುವುದಿಲ್ಲ. ಸಡಿಕವಂತೂ ಸಹಿಸಲಸಾ ಧ್ಯವಾದರೂ ಕಣ್ಣು ಕೋಮಲವಾ ಅಂಗವಲ್ಲವೇ! ಅದಕ್ಕೆನ್ನು ಸಹಿಸಲು ಸೂಲವೋ ಅಷ್ಟನ್ನು ಮಾತ್ರ ಅದು ಸಹಿಸಲ್ಲುದು. ಅದರ ತಕ್ಕೆಗೆ ಮೀರಿದ್ದಾ ಪ್ರತಿಕ್ರಿಯೆ ಕಂಡೇ ಕಾಣುವುದು. ಸುಡುಸುಕರಂತೆ ಕಣ್ಣು ಕೆಂಪಗೆ ಮಾಡಿ ಗಾಡುನ ಕೆಂಗಣ್ಣು ರೋಗಿಗಳು ದಿಂದ ದಿನಕ್ಕೆ ಏರುತ್ತಿದ್ದಾರೆ. ಅಂತೆ ಬಾಲ್ಯಾವಸ್ಥೆಯಲ್ಲೇ (ಕಣ್ಣು ಕಾ ಣಿಸದೆ) ಕನ್ನಡಕ ಧರಿಸುತ್ತಿರುವ ಸ್ತ್ರೀ ಪುರುಷರ—ಯುವಕ ಯುವತಿಯರ ಸಂ ಖ್ಯೆ ತೀವ್ರ ಗತಿಯಲ್ಲಿ ಅಧಿಕವಾಗುತ್ತಿದೆ!

ಈ ರೀತಿಯಲ್ಲಿ ಅತ್ಯಧಿಕ ಪ್ರಮಾಣ ದಲ್ಲಿ ಯೇರುತ್ತಿರಲು ನಿತಿಮಿರಿದ ಅ ಯಾಚರಣೆಯೇ ಮುಖ್ಯ ಕಾರಣ. ಕಣ್ಣು ಗಳನ್ನು—ಸರಿಯಾಗಿ ವಿಶ್ರಾಂತಿಯನ್ನೀ ಯದೆ, ದಣಿಸುವುದರಿಂದ, (ಕಣ್ಣನ್ನು ಉದ್ರೇಕಿಸುವಂತಹ ಅತ್ಯಾಧುನಿಕ ಸಿನಿ ಮಾ ನಾಟಕ, ಸರ್ಕಸ್ ಮೊದಲಾದುವು ಗಳನ್ನು ನೋಡುವುದು; ರಾತ್ರಿ ವಿದ್ಯು ದ್ದೀಪದ ಬಳಿ ಕುಳಿತು ಓದುವುದು) ಹದ ಮೀರಿದ ಆಹಾರ ಸೇವನೆ; ಬೀಡಿ ಸಿಗಾ ರುಗಳಂತಹ ಚಾ, ಕಾಫಿ, ಬ್ಯಾಂದಿ ಅಫೀಮುಗಳಂತಹ ಮಾದಕ ಪದಾರ್ಥ ಗಳೂ, ಅಲಂಕಾರಕ್ಕಾಗಿ ಹಾಕಿಕೊಳ್ಳು ವ ನಾನಾ ವಿಧದ ಕನ್ನಡಕಗಳೂ ಕಣ್ಣಿ ನ ರೋಗದ ಹೆಚ್ಚಳಕ್ಕೆ— ಹರಡ.ವಿಕೆಗೆ ತುಂಬಾ ಸಹಕಾರಿಯಾಗಿವೆ.

ಸೋಕಿಗೆಂದು ಕನ್ನಡಕ ಧರಿಸಲು ಪ್ರಾರಂಭಿಸಿ ಕಡೆಗೆ ನಿಜವಾಗಿ ದೃಷ್ಟಿ ಮಂದತ್ವವನ್ನು ಹೊಂದಿದ ಅದೆಷ್ಟೋ ವಿದ್ಯಾರ್ಥಿ ವಿದ್ಯಾರ್ಥಿನಿಯರು— ಯುವ ಕ ಯುವತಿಯರು ಇಂದು ನಮ್ಮುಲ್ಲಿ ಬೇ ಕಾದಷ್ಟು ಮಂದಿಯಿದ್ದಾರೆ!

ಆವರಿಗೆ ಈ 'ಗತಿ'ಯಾಗಲು ಕಾರಣ ವೇನು? ಅವರು ಅನುಸರಿಸಲು ಹೊರಟ ಆಧುನಿಕ ಜೀವನ ಕ್ರಮವೇ ಆಗಿದೆ.

ಆಲ್ಲದೆ ಆಧುನಿಕ ವೈದ್ಯ ಶಾಸ್ತ್ರದ ಅಂಶವೂ ಇದರಲ್ಲಿ ಸೇರಿಕೊಂಡಿದೆ. ಕಣ್ಣು ನೋವಿಗೆ ಕಾರಣವಾದ ಕಶ್ಮಲ ವನ್ನು ಶರೀರದಿಂದ ಹೊರಹಾಕುವ ಬದಲು, ಅದನ್ನಲ್ಲೇ ಬೆಕೆ ಹಿಡಿದು ಒಮ್ಮೆ ಬಾಹ್ಯ ನೋಟಕ್ಕೆ ಗುಣವಾದಂ ತೆಸಗುತ್ತದೆ! ಇಂದಿನ ವೈದ್ಯಶಾಸ್ತ್ರ ಅಯು ವೇದದ ಗಿಡಮೂಲಿಕೆಗಳ ಪ್ರಭಾವ ವನ್ನೂ ನಿರ್ಲಕ್ಷಿಸಿದೆ. ಈ ರೀತಿಯ ಆಧು ನಿಕ ವೈದ್ಯಶಾಸ್ತ್ರದ ನವೀನ ವಿಧಾನವು ಯಶಸ್ವಿಯಾಗದೆ ಮತ್ತೂ ರೋಗವನ್ನು ಬಲಗೊಳಿಸುತ್ತದೆ. ಬರಿಯ 'ಕೆಮ್ಮು'ಗೆ ಔಷಧಿಗೆ ಹೋಗಿ ಕಡೆಗೆ 'ಕ್ಷಯ' ಹಿಡಿ ಸಿಕೊಂಡವರು ಅದೆಷ್ಟು ಮಂದಿಯಿಲ್ಲ ನಮ್ಮಲ್ಲಿ? ಕಣ್ಣು ನೋವಿಗೆ ಔಷಧಿ ಪಡೆದು ಪಡೆದು ಕುಟ್ಟು ತುದಿಯಲ್ಲಿ ಕುರು ಡರೇ ಆಗಿ ಬಿಡ.ತ್ತಾರೆ!

ದೃಷ್ಟಿ ಊನವೆಂಬುದು ಅದೊಂದು ರೋಗವೆಂಬಷ್ಟು ದೊಡ್ಡ ಸಂಗತಿಯಲ್ಲ ಎಂದಿದೆ. ನಮ್ಮ ಡಾಕ್ಟರ್ ಮಹಾಶಯ ರಲ್ಲಿ! ಎಂತಲೇ ಅವರು ಬಹಳ ಸುಲಭ ವಲ್ಲಿ ದೃಷ್ಟಿವಾನಿಯಮಿಸುತ್ತಾರೆ- ಯೇನದು ಚಿಕಿತ್ಸೆ?

--ಪರೀಕ್ಷೆಮಾಡಿ ಯೋಗ್ಯ ಉಪನ ಯನ ಕರುಣಿಸುವುದು!

ಹೌದು; ವೈದ್ಯಕೀಯದ ಈ ಪರಿಶೋ ಧನೆಗೆ ಮೆಚ್ಚಲೇಬೇಕು. ಕನ್ನಡಕ ದರಿಸಿ ದಾಗ 'ಅರೆ ಕುರುಡ'ನೂ ದೃಷ್ಟಿಪಡೆಯು ತ್ತಾನೆ-ಎಂದರೆ ಅದರ ಪ್ರಯೋಜನ ಆ ಗಾ ದ ವೆಂದು ಪಕ್ಷಿನೋಟ ದಿಂದೀಕ್ಷಿಸುವಾಗ ನಮಗೆ ವೇದ್ಯ ವಾಗಬಲ್ಲುದಾದರೂ ಒಳ ಹೊಕ್ಕು ನೋಡಿದಲ್ಲಿ ಅದರ ಯಥಾರ್ಥತೆ ಕಂಡು ಬರುವುದು.

ಕನ್ನಡಕವೊಂದನ್ನು ದರಿಸಿದಲ್ಲಿ ಕಣ್ಣು ಕಾಣುತ್ತಿದೆಯಾದರೂ ಅದು ಕನ್ನಡಕದ ಶಕ್ತಿ ಹೊರತು ಆ ವ್ಯಕ್ತಿಯ ನೈಜಶಕ್ತಿ ಯಲ್ಲ. ಒರ್ನನ ಹೆಗಲನ್ನೇರಿ ಸಂಚರಿಸು ವ ಕುಂಟನೊಬ್ಬ 'ತಾನಿದೋ ನಡೆಯುತ್ತಿದ್ದೇನೆ'-ಎಂದರೆ ಅದೆಷ್ಟು ಹಾಸ್ಯಾಸ್ಪದವಾಗುವುದೋ ಅಷ್ಟೇ ದೃಷ್ಟಿದೋಷಕ್ಕೆ ಕನ್ನಡಕ ದರಿಸುವ ವಿಷಯ ಕೂಡಾ!

ನೇತ್ರದೋಷಕ್ಕೆ ಪರಿಹಾರ ಕನ್ನಡಕ ವಲ್ಲ,-ಯೋಗ್ಯ ಚಿಕಿತ್ಸೆ ಪರಿಹಾರ. ಆದ ರಿಂದ ಒಂದು ವ್ಯಕ್ತಿಗೆ ಕಾಣುವಂತಾಗ ಬಹುದು. ಆದರೆ ಆತನ ಮುಂ ಮುಕ್ಕಳ ಗತಿಯೇನು? ಕನ್ನಡಕವೇ ಗತಿಯೇ? ಅವೇ ರೀತಿ ಮುಂದುವರಿದಲ್ಲಿ ಎರಡು ಮೂರು ತಲೆ ಮಾರು ಕಳೆಯುವಾಗ ಕನ್ನಡಕವೇ ಕಣ್ಣಾಗಿ ಪರಿಣಮಿಸಬಹು ದು. ಮಾನವನ ಕಣ್ಣು ನಿಸ್ತೇಜವಾಗಿ ಬಹುದು.

ಸಟಿಯೊಂದನ್ನು ದಿಟವೆಂದೆಸಿಸಲು ಹತ್ತಾರು ಸುಳ್ಳನ್ನೆಂತು ಕಟ್ಟಬೇಕಾಗುತ್ತ ದೋ ಹಾಗೆಯೇ ಈ ಕೃತ್ರಿಮತೆಗೆ ಇನ್ನೂ ಅನೈಜತೆಯನ್ನು ಸೇರಿಸಬೇಕಾ ದೀತು.

"ಮಗನೇ ನೈರಿಸು; ದುಡುಕಬೇಡ. ನಿನ್ನ ಅವೇಶದಂತೆ ನಡೆ, ನಾನು ನಿನ್ನ ತಾಯಿ. ನಿನ್ನನ್ನು ನಿರ್ಲಕ್ಷಿಸಿವಲ್ಲಿ ನಿನ್ನ ನ್ನು ನಾನು ಶಿಕ್ಷಿಸಬೇಕಾಗುವುದು".

—ಜೀವಕೋಟಿಗಳೆಲ್ಲವುಗಳ ತಾಯಿ ಭೂಮಾತೆ.ನಿಸರ್ಗದೇವಿ ನ.ಡಿಯುತ್ತಿರು ವ ನುಡಿಯಿದು. ಆದರೆ ಜಂಭದ ಕೋಳಿ ಯಂತಿರುವ ಮಾನವನಿಗೆ ಆ ನುಡಿಯಂ ತು ಮೆಚ್ಚುಗೆಯಾಗಬೇಕು! ಲೋಕಕ್ಕೆ ಪ್ರತಿಲೋಕ ನಿರ್ಮಿಸಬಲ್ಲೆ ಎಂಬಷ್ಟೂ ಅಹಂಕಾರದಿಂದ ಹಾರಾಡುತ್ತಿರುವ ನರನು ಆ ಮಹಾತಾಯಿಯ ಮಾತನ್ನು ಮನ್ನಿಸದಾದ. ಒಂದರ ಹಿಂದೆ ಒಂದರಂ ತೆ ಹೆಜ್ಜೆಯಿಡತೊಡಗಿದ.

ತಾಯಿಯ ಸಹನೆ ಎಲ್ಲೆಯಿರಿತು. ತನ್ನನ್ನೀರೀತಿ ನಿರ್ಲಕ್ಷಿಸಿದ್ದಲ್ಲದೆ ತನ್ನೊ ಡನೆಯೇ ಸ್ಪರ್ಧಿಸಲು ಮುಂದಾಗಿದ್ದಾನೆ!!

ಇನ್ನೂ ಸಲುಗೆ ಬಿಟ್ಟರೆ....??
ಕೊಟ್ಟು ಬಿಟ್ಟಳು ಶಿಕ್ಷೆ
ನರಳ ತೊಡಗಿದರು ನರರು ಬಗೆ
ಬಗೆಯ ರೋಗದಿಂದ!

—ದೃಷ್ಟಿದೋಷವೂ ಆಕೆಯ ಶಿಕ್ಷೆ ಯೇ. ನಮ್ಮ ಹಿರಿಯರಿಗಿತ್ತ ಶಿಕ್ಷೆಯಲ್ಲಿ ನಮಗೂ ಪಾಲು ಬಂದಿದೆ. ನಾವಾದರೂ ನಿಸರ್ಗದ ನಿರ್ಲಕ್ಷ್ಯತನವನ್ನು ಕಡಿಮೆ ಮಾಡುತ್ತಿದ್ದರೆ ಆಕೆ ಸಮಾಧಾನ ಪಡುತ್ತಿ ದ್ದಳೋ ಏನೋ! ಆದರೆ ನಾವು ನಮ್ಮ ಹಿರಿಯರಿಗಿಂತಲೂ ಮುಂದುಪರಿದೆವು—ಮುಂದುವರಿಯುತ್ತಿದ್ದೇವೆ. ಅಂತೆಯೇ ಶಿಕ್ಷೆಯೂ ಬಲಗೊಳ್ಳುತ್ತಿದೆ. ಇನ್ನೂ ನಿರ್ಲಕ್ಷಿಸುತ್ತಲೇ ತೆರಳಿದಲ್ಲಿ ನಮ್ಮ ಮ ರಿಮಕ್ಕಳ ಕಾಲಕ್ಕೆ ಮಾನವರ ಸ್ಥಿತಿಗತಿಗ ಳೆಂತಾಗಬಹುದೆಂದು ಬೇಗಲು ಬರುವು ದಿಲ್ಲ. ನಿಸ್ಯಾಳು ನಿರ್ಮಲಚಿತ್ತಳೂ ಶಾಶ್ವ ತಳೂ ಆದ ಆ ಮಹಾತಾಯಿಯೇ ಬಲ್ಲಳು!

ನಮ್ಮಲ್ಲರ ಕಲ್ಯಾಣಕ್ಕಾಗಿ ನಾವಿಂದಿ ನಿಂದಲೇ ನಿಸರ್ಗ ಮಾತೆಯತ್ತ ತಿರುಗಿ ಬೇಕಾಗಿದೆ.

ಆವಳಿಗೆ ಶರಣುಬಂದಲ್ಲಿ ನವ್ಯ ರೋ ಗಗಳನ್ನೆಲ್ಲಾ ಅವಳು ಪರಿಹರಿಸುವಳು.

ಪ್ರಕೃತಿ ಸಿದ್ಧ ಶಕ್ತಿಗಳಾದ ಮಣ್ಣು, ನೀರು, ಗಾಳಿ, ಬೆಳಕು, ಆಕಾಶಗಳೆಂಬ ವುಗಳನ್ನು ಬಳಸಿಕೊಂಡು ಉತ್ತಮವಾದ ಜೀವನವನ್ನು ನಡೆಸುವುದರಿಂದ ದೃಷ್ಟಿ ದೋಷಗಳು—ಸರ್ವ ರೋಗಗಳೂ ಗುಣಪೊಂದಲು ಸಾಧ್ಯವಿದೆ.

ಕಣ್ಣಿಗೆ ಮಣ್ಣಿನ ಹಾಗೂ ತಣ್ಣೀರಿನ ಚಿಕಿತ್ಸೆಯೇ ಪ್ರಧಾನ. ಕಣ್ಣಿನ ಸಣ್ಣ ಸಣ್ಣ ಬೇನೆಗಳಿಗೆ ಬಹಳ ಸುಲಭದಿಂದ ಈ ಚಿಕಿತ್ಸೆ ಮಾಡಬಹುದು. ಕೆಂಗಣ್ಣು ಮೊದಲಾದ ಕಠಿಣ ರೋಗಗಳಿಗೆ ಮಾತ್ರ ಸ್ವಲ್ಪ ಚಿಕಿತ್ಸೆಯಲ್ಲಿ ವ್ಯತ್ಯಾಸ ಮಾಡಬೇ ಕಾಗುವುದು. ಅಂದರೆ ಚಿಕಿತ್ಸೆ ಕ್ರಮಬದ್ಧ ವಾಗಿ ನಡೆಯಬೇಕು. ಹೀಗಿದ್ದರೂ ಬಹಳ ಸುಲಭದಿಂದ ಗುಣಮುಖವಾಗಬಲ್ಲುದು!

ಉದಾಹರಣೆಗೆ, ಕಣ್ಣಿನೊಳಕ್ಕೆ ಏ ನಾದರೂ ಬಿದ್ದು, ತಡಿಗೆ, ಕಣ್ಣು ನೋ ವಾಗುತಿದ್ದರೆ ನಿಸರ್ಗಚಿಕಿತ್ಸೆಯ ಈ ಕ್ರ ಮವನ್ನು ಮಾಡಿರಿ. ಕೆಲವೇ ಗಂಟೆಗಳಲ್ಲಿ ನಿವ್ಯ ನಿಡಿತ ಮಾಯವಾಗಿ ಕಣ್ಣು ರು ಭ್ರವಾಗುವುದು.

ಬಿಳಿಯ ಶುಭ್ರವಾದ ಕಣ್ಣ ಬಟ್ಟೆಯ ನ್ನು ತೆಗೆದುಕೊಳ್ಳಿ. ಇದನ್ನು ತಣ್ಣೀರಲ್ಲಿ ಒದ್ದೆಮಾಡಿ, ರೋಗಿಯನ್ನು ಕಂಗತಿತ ಮುಲಗಿಸಿ ಕಣ್ಣಾ ರೆಪ್ಪೆಯಾ ಮೇಲೆ ಇಡಿರಿ. ಆ ಬಳಿಕ ಕಲ್ಲಿಲ್ಲದ ನಯವಾದ ಒಳ್ಳೆಯ ಮಣ್ಣನ್ನು ಕೆಲಸಿ ಬಟ್ಟೆಯ ಮೇಲೆ ಲೇಪ ಹಾಕಿರಿ.

ಒಂದು ಗಂಟೆಯ ಬಳಿಕ ಅದನ್ನು ತೆಗೆ ದು ಬಟ್ಟೆಯನ್ನು ನೀರಲ್ಲಿ ತೊಳೆದು ಪು ನ�ः ಮೊದಲಿನ ರೀತಿ ಮಾಡಿರಿ. ಹೀಗೆ ಎರಡು ಮೂರ ಸಲ ಮಾಡಿದಾಗ ಸಾಧಾ ರಣದ ನೋವ್ ಕಡಿಮೆಯಾಗುವುದು. ನೋವು ಹೆಚ್ಚಿದ್ದರೆ ಒಂದೆರಡು ದಿನ ಮಾ ಡಬೇಕಾದೀತು.

ಕೆಲವ್ ವೇಳೆ ಅಕಸ್ಮಾತ್ ಸಂದರ್ಭ ದಲ್ಲಿ ಮಣ್ಣು ಸಿಗದೇ ಇದ್ದಲ್ಲಿ ಬಟ್ಟೆಯ ನ್ನು ಆಂಗ್ಲೆದಪ್ಪಕ್ಕೆ ಮಡಚಿ ಒದ್ದೆಮಾಡಿ ಕಣ್ಣಿನಲ್ಲಡಬೇಕು. 'ಪಸೆ' ಬಣಗದಂತೆ ಒದ್ದೆ ಮಾಡಿಕೊಳ್ಳಬೇಕು.

ಮಣ್ಣು ಮತ್ತು ನೀರಿನ ಸಾರವು ಕ ಣ್ಣೊಳಕ್ಕೆ ಹೊಕ್ಕು ಒಳಗಿನ ಕಶ್ಮಲವನ್ನು ಹೊರಹಾಕಿ ಕಣ್ಣನ್ನು ಪೂರ್ವ ಸ್ಥಿತಿಗೇ ತಂದೊಡ್ಡುವುದು ಮಣ್ಣು ನೀರಿನ ಶಕ್ತಿ ಅಗಾಧವಲ್ಲವೇ?

ಇಂದಿನ ವೈದ್ಯಕೀಯದ ಹುಚ್ಚು, ತಪ್ಪಿ ದೆಯೆಂದು ಈಗೀಗ ಜಲವರಿಗೆ ತಿಳಿಯ ತೊಡಗಿದೆ. ಆದೆಷ್ಟೋ ಡಾಕ್ಟರರೂ ನಿಸರ್ಗ ಸಿದ್ಧಾಂತವನ್ನು ಒಪ್ಪಿದ್ದಾರೆ.

ನೈಸರ್ಗಿಕ ರೀತಿಯಿಂದಲೇ ರೋಗ ನಿರ್ನಾಮ ಕೊಂದುವುದೆಂಬ ತತ್ವ ಪೂ ರ್ವದಲ್ಲೇ ಇದ್ದರೂ, ನನಗೆ ಇಮ ತಿಳಿ ಯತೊಡಗಿದುದು ಈಗ.

ಜರ್ಮನಿಯ 'ಲೂಯಿಖುನೆ' ಎಂಬ ವರು ಈ ಕುರಿತು ಸ್ವತ್ಯೆಕ್ಷ ಸಂಶೋಧನೆ ನಡೆಸಿ ಜನತೆಗೆ ಇದರ ಪ್ರಯೋಜನ ಸಿ ಕ್ಕುವಂತೆ ಹುಂಬಾ ದುಡಿದಿರುವರು. ಮ ಲೆಯಾಳದಲ್ಲಿ ಗ್ರಂಥವನ್ನು ಕೂಡಾ ಈ ಕುರಿತು ಬರೆದಿರುವರು. ಆದಿಗ ಹಲವಾ ರು ಭಾಷೆಗಳಲ್ಲಿ ಭಾಷಾಂತರಿಸಲ್ಪಟ್ಟಿದೆ ಯಾದರೂ, ಕನ್ನಡದಲ್ಲಿ ಈ ತನಕ ಪ್ರಕ ಟನವಾಗಿಲ್ಲ.

ಅಖಿಲ ಕರ್ನಾಟಕ ಒಂದಾದ ಈ ಸು ಸಮಯದಲ್ಲಿ ನಿಸರ್ಗ ಚಿಕಿತ್ಸೆಯ ಕ್ರಮ ವಿಧಾನಗಳನ್ನೊಳಗೊಂಡ ಕನ್ನಡ ಗ್ರಂಥ ದ ಅಗತ್ಯವನಿದೆ.

ಬೇಗನೇ ಅದು ಕನ್ನಡದಲ್ಲಿ ಪ್ರಕಟ ವಾಗಿ ಸರ್ವರಿಗೂ 'ನಿಸರ್ಗ ಚಿಕಿತ್ಸೆ'ಯ ಪ್ರಯೋಜನ ತಿಳಿಯುವಂತಾಗಲೆಂದು ಹಾರೈಸೋಣ.

—ಶ್ರೀ ಕೀ. ವ. ಕೇಶವ.

ಉಡುಪಿ

ಪ್ರಜಾಪ್ರಭುತ್ವ ದಿನಾಚರಣೆ— ನಮಿತ್ತ ತಾ. ೨೦ನಲ್ಲು ಬೆಳ್ಳಿ ಪ್ರಭಾತಚೇರಿ ಯಾದ ಬಳಿಕ ಗಾಂಧಿ ಮೈದಾನದಲ್ಲಿ ನಡು ತಲೆಕ್ಟರ್ ಶ್ರೀ ಕೆ. ಸೂರ್ಯನಾರಾಯಣ ರಾಯರು ಧ್ವಜಾರೋಹಣ ನಡಾಡಿದರು. ನಗರ ಸಭಾಪತಿ ಶ್ರೀ ಕೆ. ಕೆ. ಪೈಗಳು ಸ್ವಾಗತ ಮಾತುಗಳನ್ನಾಡಿದರು. ನಂತರ ನುಕ್ತೆಳಿಗೆ ನಿಹಿತಿಂದ ಹಂಚಲಾಯಿತು. ಆ ಜೀತ ವಿವಿಧ ಸಂಘ್ಯಟನೆಗಳವು. ಸಂಜೆ ಸಾರ್ವಜನಿಕ ಸಭೆಯು ನಗರ ಸಭೆಯ ಉವಾಧ್ಯಕ್ಷೆ ಶ್ರೀ ಪಿ. ನಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿ ತು. ಸಂಘ್ಯಟನೆಗಳಲ್ಲಿ ನೆದ್ದವರಿಗೆ ಪಾರಿತೋಷ ಕಿತರಣೆ ಮಾಡಲಾಯಿತು.

ಪೈಲೇರಿಯಾ ನಿರೋಧ ದಳವು ಸಾ ಗೊನ್ಸಲ್ವೀಸ್ರ ನೇತೃತ್ವದಲ್ಲಿ ಉಡುಪಿಗೆ ಐದು ನಗರವ ಬೀರೆ ಬೀರೆ ವಾರ್ಡುಗಳಲ್ಲಿ ಯ ಜನರ ರಕ್ತ ಪರೀಕ್ಷೆ ನಡೆಸಿತು. ಸಾಧಾ ರಣ ಸೇಕಡಾ 10ರಷ್ಟು ಅನಕಾಲು ರೋಗದ ಚಿನ್ನೆಗಳು ಕಂಡು ಬಂದಿವೆ ಎನ್ನಲಾಗಿದೆ. ನ ಗರ ಸಭಾಪತಿ ಶ್ರೀ ಕೆ. ಕೆ. ಪೈ ಮೊದಲಾದ ವರು ದಳವನ್ನೊಡನೆ ಸಹಕರಿಸಿದ್ದರು.

NAVAYUGA

Popular Kannada Weekly

Founder:—

A. B. SHETTY, *M. L. A.*
Former Minister for Public Health, Govt. of Madras.
At Present Minister for Health Govt. of Mysore.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೬	೭-೨-೫೭	೨೨

ಕಾಶ್ಮೀರದಲ್ಲಿ ಯಾರು ತಪ್ಪು?

ನಮ್ಮೆಲ್ಲರನ್ನು ಜುನಾವಣೆಗಳ ಸುನ್ದಿ ಸಮಾಚಾರಗಳೇ ಆಕರ್ಷಿಸಿರುವ ಈ ದಿನಗಳಲ್ಲಿ— ಕಾಶ್ಮೀರದ ಪ್ರಶ್ನೆಯೊಂದು ವಿಕಟರೂಪದಿಂದ ಭಯಪಡಿಸುತ್ತಿರುವುದು ನಿಜಕ್ಕೂ ಶೋಚನೀಯವಾದ ವಿಚಾರವೆನ್ನದೆ ವಿಧಿಯಿಲ್ಲ. ಪ್ರಧಾನಿ ನೆಹರೂ ರವರು ನೊನ್ನೆ ಮದ್ರಾಸಿಗೆ ಸಂದರ್ಶನ ವಿತ್ತಾಗ ಮಾಡಿದ ಸಾರ್ವಜನಿಕ ಭಾಷಣದಲ್ಲಿ ಸವಿಸ್ತಾರವಾಗಿ ಕಾಶ್ಮೀರ ಪ್ರಶ್ನೆಯ ಹಿನ್ನೆಲೆಯನ್ನು ವಿವರಿಸಿರುವುದೂ ಇದನ್ನೆ ಪೂಸೆ ಮತ್ತು ಹೊಸದೆಹಲಿಗಳಲ್ಲಿ ನಡೆದ ಸಭೆಯ ಮುಂದೆ ಪುನರುಚ್ಚರಿಸಿದೂ ಸಕಾಲಿಕವಾದ ಕಾರ್ಯವೆಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಜುನಾವಣೆಯಲ್ಲಿ ವಿದೇಶ ಧೋರಣೆಯ ಒಂದು ಮಹತ್ವದ ಪ್ರಶ್ನೆಯಾಗಿ ಕಾಶ್ಮೀರ ಸಮಸ್ಯೆ ಪರಿಣಮಿಸುತ್ತದೆ; ಅವಕ್ಕಿಂತ ಹೆಚ್ಚಾಗಿ ಜುನಾವಣೆಗಳು ನಡೆಯುತ್ತಿದ್ದಂತೆಯೇ ಅಪಾಯ ಆವು ಮುಗಿದೊಡನೆಯೇ ಈ ದೇಶದ ಜನರು ಕಾಶ್ಮೀರ ಪ್ರಶ್ನೆಯ ಸಂಬಂಧದಲ್ಲಿ ಬಹಳ ಮಹತ್ವವಾದ ಜವಾಬ್ದಾರಿಗೆ ಕೆಗಲು ಕೊಡಬೇಕಾಗಿ ಬರುವ ಸಕಲ ಲಕ್ಷಣಗಳೂ ಕಾಣಿಸುತ್ತವೆ. ಶ್ರೀ ಕೃಷ್ಣ ಮೆನೊನ್ನರನ್ನು ಮುಂಬಯಿಯಂಥ ಸುಶಿಕ್ಷಿತ ಹಾಗು ಸಮ್ಮಿಶ್ರ ಮತದಾರ ಕ್ಷೇತ್ರದಲ್ಲಿ—ಜಗತ್ತಿನಲ್ಲಿಯೇ ಹಿರಿದಾದ ಕೇಂದ್ರ ನಗರಪೊಂದರಲ್ಲಿ—ಲೋಕ ಸಭೆಗೆ ಉಮೇದ್ವಾರಿಗಳಾಗಿ ನಿಲ್ಲಿಸಿರುವುದು ಅಂತಾರಾಷ್ಟ್ರೀಯ ನೀತಿಯನ್ನು ಒರೆಗಲ್ಲಿಗೆ ಹಚ್ಚುವ ಉದ್ದೇಶದಿಂದಲೇ ಎಂದು ಪ್ರಧಾನಿಯವರು ತಿಳಿಸಿದ್ದಾರೆ. ಶ್ರೀ ಮೆನೊನ್ನರಿಗೆ ಪ್ರತಿ ಪ್ರಧಿಯಾಗಿ ಶ್ರೀ ಪೀಟರ್ ಆಳ್ವರೀಸರೆಂಬವರು ಪ್ರಜಾ ಸಮಾಜವಾದಿ ಪಕ್ಷದಿಂದ ನಿಂತಿದ್ದಾರೆ; ಶ್ರೀಯುತರು ಗೋವೆಯ ಪ್ರಶ್ನೆಯ ಬಗ್ಗೆ ಕಾಂಗ್ರೆಸಿನೊಡನೆ ಸಹ ಮತವಿಲ್ಲದ ವ್ಯಕ್ತಿಯಾದುದರಿಂದ ಕಾಶ್ಮೀರದ ಪ್ರಶ್ನೆಯಂತೆಯೇ ಗೋವೆಯ ವಿವಾದವೂ ಈ ಸ್ಪರ್ಧೆಯಲ್ಲಿ ಮುಖ್ಯ ವಿಷಯವಾಗಿ ಪರಿಣಮಿಸಬಹುದು. ಆದೇನೇ ಇದ್ದರೂ ಕಾಶ್ಮೀರ ಪ್ರಶ್ನೆಯು ಗೋವೆಯ ತಂಟೆಯಂತೆಯೇ ಮುಖ್ಯ ರಾಷ್ಟ್ರೀಯ ಸಮಸ್ಯೆಯಾಗಿದೆ ಎಂಬುದು ನಿರ್ವಿವಾದದ ವಿಷಯ; ಮತ್ತು ಜಾಗತಿಕ ಸಂಸ್ಥೆದಲ್ಲಿ ಈ ವಿವಾದವು ಈಗ ಪರ್ಯಾಲೋಚನೆಗೆ ಗುರಿಯಾಗಿರುವುದರಿಂದ ಗೋವೆಗಿಂತಲೂ ಹೆಚ್ಚು ಮಹತ್ವವನ್ನು ಈ ಕಾಲದಲ್ಲಿದು ಪಡೆದಿರುತ್ತದೆ ಎಂಬುದು ನಿಸ್ಸಂಶಯ. ಆದುದರಿಂದ ಪ್ರಧಾನಿಗಳು ಕಾಶ್ಮೀರದ ಮೇಲೆ ಆದಷ್ಟು ಹೆಚ್ಚು ಪ್ರಕಾಶವನ್ನು ಸ್ಪಷ್ಟವಾಗಿ ಬೀರಲು ಪ್ರಯತ್ನಿಸಿರುವುದು ಕಾಲೋಚಿತವಾದ ಉದ್ಯಮವೆನ್ನಲೇ ಬೇಕು. ಪ್ರಧಾನಿಯವರು ಹೇಳುವುದೇನು? ಪೊಲಬನೆಯದಾಗಿ ಭಾರತವು ಜನಮತಗಣನೆಯ ವಿಷಯದಲ್ಲಿ ನೀಡಿದ್ದ ಭರವಸೆಯ ಮಾತುಗಳನ್ನು ಎಂದಿಗೂ ಮುರಿದಿದ್ದಿಲ್ಲ. ಪಾಕಿಸ್ತಾನವೂ ಅದರ ಮಿತ್ರವೃಂದವೂ ಒಟ್ಟು ಸೇರಿ ಭಾರತದ ಮೇಲೆ ಬಿಜನ ಭಂಗದ ಆರೋಪವನ್ನು ಹೊರಿಸುತ್ತವೆ. ಇದು ಸರಿಯಾದುದಲ್ಲ. ಭಾರತವು ಮತಗಣನೆಗೆ ನಿಶ್ಚರ್ತವಾಗಿ ಒಪ್ಪಿದ್ದಿಲ್ಲ. ಕೆಲವೊಂದು ಶರ್ತಗಳ ಮೇಲೆ ಗಣಾರಪ್ಪು ಹಿಂದಿನ ಆ ಪರಿಸ್ಥಿತಿಯಲ್ಲಿ ಒಪ್ಪಿದ್ದು ಹೌದು. ಆದರೆ ಆ ಶರ್ತಗಳಲ್ಲಿ ಪ್ರಾಮುಖ್ಯವಾದುದೇನೆಂದರೆ ಪಾಕಿಸ್ತಾನವು ಕಾಶ್ಮೀರ ಭೂ ಪ್ರದೇಶದಿಂದ ತನ್ನೆಲ್ಲ ಸೈನ್ಯವನ್ನು ಹಿಂದೆಗೆದುಕೊಳ್ಳಬೇಕು ಎಂಬುದು. ಈ ಶರ್ತದ ಪಾಲನೆಯನ್ನು ಈವರೆಗೂ ಪಾಕಿಸ್ತಾನವು ಮಾಡಿದ್ದಿಲ್ಲ. ಅಜಾದ್ ಕಾಶ್ಮೀರ್ ಎಂಬ ಹೆಸರನ್ನು ತಾನು ಆಕ್ರಮಿಸಿದ ಭೂ ಪ್ರದೇಶಕ್ಕೆ ಪಾಕಿಸ್ತಾನವು ಕೊಟ್ಟು ಅನ್ಯಾಯವಾಗಿ ಅಲ್ಲಿ ಸೈನ್ಯ ಸಹಿತ ಈಗಲೂ ತಳವೂರಿದೆ. ಪಾಕಿಸ್ತಾನವು ಕಾಶ್ಮೀರದ ಮೇಲೆ ಆಕ್ರಮಣಗೈದಿರುವ ಅಪರಾಧವನ್ನು ಹೊತ್ತ ರಾಷ್ಟ್ರವೆಂದು ಸ್ವತಃ ಭದ್ರತಾಮಂಡಳಿಯೇ ಗೊತ್ತುವಳಿಯೊಂದರ ಮೂಲಕ ಗುರುತಿಸಿರುವಾಗ, ಅಜಾದ್ ಕಾಶ್ಮೀರ್ ಪ್ರದೇಶದಿಂದ ಪಾಕಿಸ್ತಾನವು ತನ್ನ ಸೈನ್ಯವನ್ನು ಹಿಂದೆಗೆಸಿಕೊಳ್ಳುವಂತೆ ಯಾವ ಪ್ರಯತ್ನವನ್ನೂ ಮಾಡಿರದೆ ಇರುವುದು ಕ್ರಮಬದ್ಧವಾದುದೆ? ಭಾರತವು ಈ ಬಗ್ಗೆ ಒತ್ತಾಯವನ್ನು ಇಪ್ಪರವರೆಗೆ ಹೇರಿರದಿದ್ದರೆ, ಅದು ಈ ಮುಖ್ಯಾಂಶವನ್ನು ಕಡೆಗಣಿಸಿದೆ ಎಂಬುದರಿಂದಲ್ಲ; ಶಾಂತಿ ಭಂಗವಾಗಬಾರದು ಎಂಬ ಹಾರೈಕೆ ಹಾಗು ಜಗತ್ತಿನ ರಾಷ್ಟ್ರಗಳು ಬುದ್ಧಿ ಹೇಳಿ ಪಾಕಿಸ್ತಾನವನ್ನು ಸರಿದಾರಿಗೆ ಹಚ್ಚಬಹುದು ಎಂಬ ನಿರೀಕ್ಷೆಯಿಂದ ಅದು ಈ ಘೋರ ಅನ್ಯಾಯವನ್ನು ಸಹಿಸಿತು ಸಂಯುಕ್ತ ರಾಷ್ಟ್ರ ಸಂಘದ ಸದಸ್ಯ ರಾಷ್ಟ್ರಗಳು ಈ ಕಡೆಗೆ ಇನ್ನೂ ಗಮನವನ್ನು ಕೊಡದಿರುವುದು ದೊಡ್ಡ ಆಶ್ಚರ್ಯ! ಅದಕ್ಕೂ ಹೆಚ್ಚಾಗಿ ಮಹಾ ರಾಷ್ಟ್ರಗಳೆಂದು ಹೇಳಿಕೊಳ್ಳುವ ದೇಶಗಳ ಪ್ರತಿನಿಧಿಗಳು ಭಾರತದ ನಿಲುಮೆಯನ್ನು ಅರ್ಥಮಾಡಿಕೊಳ್ಳುವುದಂತೂ ದೂರ ಉಳಿಯಿತು, ಕೇಳಿಕೊಳ್ಳುವುದಕ್ಕೂ ಸಿದ್ಧವಿರದೆ "ನಿರ್ಣಯ"ಗಳನ್ನು ಸ್ವೀಕರಿಸುವುದು ಹೊಣೆಗೇಡಿತನದ ಪರಮಾವಧಿ ಎಂದೆನ್ನದೆ ನಿರ್ವಾಹವಿಲ್ಲ. ಇಂಥ ಲಘು ವರ್ತನೆಯು ಭದ್ರತಾ ಮಂಡಳಿಯ ಮತ್ತು ಸಂಯುಕ್ತ ರಾಷ್ಟ್ರ ಸಂಘದ ಘನತೆಗೆ, ಅವರಲ್ಲಿ ನ್ಯಾಯ ಪಕ್ಷಪಾತಿಗಳು ಇಟ್ಟಿರುವ ವಿಶ್ವಾಸಕ್ಕೆ ತಕ್ಕುದಲ್ಲ ಎಂಬುದನ್ನು ನೆಹರು ಒತ್ತಿ ಹೇಳಿರುವುದು ಎರಡನೆಯ ಮುಖ್ಯ ವಿಷಯವಾಗಿದೆ. ಆಂತಾರಾಷ್ಟ್ರೀಯ ನ್ಯಾಯಾಲಯದಲ್ಲಿ ಪಾಕಿಸ್ತಾನದ ಸೈನ್ಯವು ಕಾಶ್ಮೀರದಲ್ಲಿ ಪ್ರವೇಶಿಸಿಯೇ ಇಲ್ಲವೆಂದು ಭದ್ರತಾ ಮಂಡಳಿದ ಮುಂದೆ ಹಸಿ ಹಸಿ ಸುಳ್ಳನ್ನು ಹೇಳಿದ್ದನ್ನು, ಮತ್ತು ಅದನ್ನು ಸಂಯುಕ್ತ ರಾಷ್ಟ್ರ ಸಂಘದ ನಿರೀಕ್ಷಕರು ತಪ್ಪೆಂದು ಸಿದ್ಧಪಡಿಸುವ ವರೆಗೂ ಲಜ್ಜೆಗೆಟ್ಟು ಸಾಧಿಸಿದ್ದ ಸರ್ ಜಾಫರುಲ್ಲಾ ಖಾನರಂಥ ನ್ಯಾಯಾಧಿಪತಿಗಳು ಶೋಭಿಸುತ್ತಾರೆಂದು ಮೇಲೆ ಈ ತೆರನಾದ ವಿಶ್ವಸಂಸ್ಥೆಗಳಲ್ಲಿ ನ್ಯಾಯದಾನವಾಗುತ್ತದೆಂಬ ವಿಶ್ವಾಸವು ಸಾಮಾನ್ಯ ನಾಗರಿಕ ನಿಗೆಂದೂ ಉಂಟಾಗಲಾರದು. ಆದರೆ ಸಂಯುಕ್ತ ರಾಷ್ಟ್ರ ಸಂಘ, ಭದ್ರತಾ ಮಂಡಳಿ, ಅಂತಾರಾಷ್ಟ್ರೀಯ ನ್ಯಾಯ ಸ್ಥಾನ ಮುಂತಾದ "ವಿಶ್ವಸಂಸ್ಥೆ"ಗಳ "ಘನತೆ" ಸದಸ್ಯತ್ವವನ್ನು ಪಡೆದಿರುವ ಒಂದು ಸರಕಾರವು ಸಾಮಾನ್ಯ ನಾಗರಿಕನ ಪ್ಪು ಪ್ಲೇಪ್ರದಲ್ಲಿ ವಿಶ್ವಾಸವನ್ನು ಕಳೆದು ಕೊಳ್ಳಲಾರದು; ಕಣ್ಣಾರೆ ಕಂಡರೂ ಪರಾಂಬರಿಸಿ ನೋಡಬೇಕು ಎಂಬಂತೆ "ದುಡುಕುತನ"ದ ಅಸವಾದ ಬಾರದೆಂತೆ ನಡೆಯಬೇಕಾಗಿ ಬರುತ್ತದೆ. ಭಾರತವು ಈ ಅಗ್ನಿ ಪರೀಕ್ಷೆಯನ್ನು ಇದೇ ದೃಷ್ಟಿಯಿಂದ ಕಾಣುತ್ತಿದೆಎನ್ನಬಹುದು. ಇಲ್ಲವಾದರೆ, ಕಾಶ್ಮೀರದಲ್ಲಿ ಜನಮತಗಣನೆ ನಡೆಯಲಿ ಎಂದು ಪಾಕಿಸ್ತಾನವು ಕೇಳುತ್ತಿರುವುದೂ ಅದಕ್ಕೆ ಉಳಿದ ರಾಷ್ಟ್ರಗಳು ನಮ್ಮ ಸಮ್ಮತಿಸೂಚಕವಾಗಿ ತಲೆಯಾಡಿಸುತ್ತಿರುವುದೂ ಭಾರತವು ವಚನ ಭಂಗಮಾಡಿದೆ ಎಂಬ ಆರೋಪಪಟ್ಟಿಗೆ ಹಾಸ್ಯಾಸ್ಪದವಾಗುವುದಲ್ಲವೆ? ಶ್ರೀ ನೆಹರೂರವರು ಕಾಶ್ಮೀರದ ಪ್ರಶ್ನೆಯ ಮೂರನೇ ಮುಖ್ಯ ವಿಷಯವಾಗಿ ಇದನ್ನೆ ಪ್ರಸ್ತಾಪಿಸಿದ್ದಾರೆ. ಕಾಶ್ಮೀರದಲ್ಲಿ ಜನಮತಗಣನೆ ನಡೆಯಲಿ ಎನ್ನುವ ಪಾಕಿಸ್ತಾನದವಲ್ಲಿ ಇಷ್ಟರವರೆಗೆ ಜುನಾವಣೆ ಎಂಬುದು ನಡೆದಿದೆಯೇ? ನಾವೀಗ ಎರಡನೇ ಮಹಾ ಜುನಾವಣೆಯಲ್ಲಿದ್ದೇವೆ; ಮತ್ತು ನಗರಸಭೆ, ಜಿಲ್ಲಾ ಬೋರ್ಡುಗಳಂಥ ಅನೇಕ ಜುನಾವಣೆಗಳನ್ನು ಸಹ ಮುಗಿಸಿದ್ದೇವೆ ಆದರೆ ಪಾಕಿಸ್ತಾನದಲ್ಲಿ? ಜುನಾವಣೆಯ ದಿನಗಳನ್ನು ಬೇಕೆಂದೇ ಮುಂದೂಡಲಾಗುತ್ತದೆ. ಭಾರತದೊಡನೆ ಸಂಪರ್ಕವಿರುವ ಕಾಶ್ಮೀರ ಭೂ ಭಾಗದಲ್ಲಿ ಕಳೆದ ವರ್ಷ ೧೦೦೦ ಪ್ರವಾಸಿಗಳು ಸಂದರ್ಶನವನ್ನಿತ್ತರು. ಅಲ್ಲಿ ಎಲ್ಲರಿಗೂ ಮುಕ್ತದ್ವಾರವಿದೆ. ಅವರೆಲ್ಲರೂ ಈ ಪ್ರದೇಶದಲ್ಲಿ ಸುವ್ಯವಸ್ಥಿತವಾದ ರಾಜ್ಯಭಾರ ನಡೆಯುತ್ತಿದೆ ಎಂದು ಸಮಾಧಾನಪಟ್ಟಿದ್ದಾರೆ. ಆದರೆ ಅಜಾದ್ ಕಾಶ್ಮೀರ್ ಪ್ರದೇಶದಲ್ಲಿ ಪಾಕಿಸ್ತಾನವು ದಬ್ಬಾಳಿಕೆಯನ್ನು ನಡೆಸಿದೆ ಎಂದು ಆ ಭೂ ಭಾಗದ ಒಂದು ದಳವೇ ರಾಷ್ಟ್ರ ಸಂಘಕ್ಕೆ ದೂರನ್ನೊಯ್ದಿದೆ. ಇದನ್ನೆಕೆವಿಗೊಟ್ಟು ಭದ್ರತಾ ಮಂಡಳ ಆಲಿಸಿದೆಯೆ? ಪಾಕಿಸ್ತಾನದ ಕಡೆಯಿಂದ ಬಂದಿರುವ ಜನಮತಗಣನೆಯ ಬೇಡಿಕೆ ಎಷ್ಟು ಲಘಹಾಸ್ಯದಿಂದ ಕೂಡಿದೆ ಎಂಬುದನ್ನು ಜಗತ್ತಿನ ಪ್ರಬಲ ಶಕ್ತಿಸಂಪನ್ನ ರಾಷ್ಟ್ರಗಳು ನೋಡಿದ್ದುಂಟೆ? ಎಷ್ಟಕ್ಕೂ ಇಲ್ಲ—ಅವು ಪಾಕಿಸ್ತಾನದ "ಪ್ರಚಾರ ತಂತ್ರ" ಮತ್ತು ಸೈನಿಕ ಸ್ನೇಹದ ಮುಗ್ಧವಾಗಿ ವಿವೇಕವನ್ನು ಕಳೆದುಕೊಂಡಿವೆ ಎಂಬಂಥ ಮಾತನ್ನು ನಾವು ಹೇಳಿದರೂ ಅದು ಕಟೋಕ್ತಿಯಾಗಲಾರದು; ಉದ್ಧಟತನವೂ ಆಗಲಿಕ್ಕಿಲ್ಲ. ಪಾಕಿಸ್ತಾನವು ತನ್ನ ಸೈನ್ಯಶಕ್ತಿಯ ಮದದಲ್ಲಿಸೆ; ಬ್ರಿಟನ್ ಮತ್ತಿತರ ಪಾಶ್ಚಾತ್ಯ ರಾಷ್ಟ್ರಗಳು ಭಾರತವು ಸ್ವಾತಂತ್ರ್ಯೋತ್ಸವದ ಅಲ್ಪಾವಧಿಯಲ್ಲಿಯೇ ಗಳಿಸಿರುವ ಜನಸ್ವಿಯತೆಯನ್ನೂ ಉಚ್ಚಸ್ಥಾನವನ್ನೂ

ಸಹಿಸದ ಮತ್ಸರಿಗಳಾಗಿವೆ -- ಅದುದರಿಂ ಪ್ರಧಾನಿಗಳೇ ಅಪ್ಪಣೆ ಕೊಡಿಸಿದಂತೆ "ನೆಹರು ಮೊಣಕಾಲೂರುವಂತೆ ಮಾಡುವುದೇ" ಅವುಗಳ ಏಕಮೇವ ಧ್ಯೇಯವಾಗಿರುವಂತೆ ಕಾಣುತ್ತದೆ! ಕಾಶ್ಮೀರದ ಸಂಯುಕ್ತ ರಾಷ್ಟ್ರ ಸಂಪಿದ ಸೈನ್ಯದಪ ವೇಶವಾಗಬೇಕು,ಅಲ್ಲಿ ಯುವರೆಲ್ಲರೂ ಮುಸ್ಲಿಮರು ಎನ್ನುತ್ತಿರುವುದು ಇದೇ ದುರುದ್ದೇಶದಿಂದ ಎಂಬುದು ಸ್ಪಷ್ಟ. ಹಿಂದೆಸಂಯುಕ್ತ ರಾಷ್ಟ್ರಸಂಘದ ನಿರೀಕ್ಷಕರಾಗಿ ಬಂದ ಕೆಲವರು ಪಾಕಿಸ್ತಾನದಗುಪ್ತಚಾರರಾಗಿಕೆಲಸ ಮಾಡಿದನೆನೆಸುನೆ.ಗುಂಟು; ಪಾಕಿಸ್ತಾನವು ಜನಮತಗಣನೆಯ ನೆಪದಿಂದ ಕಾಶ್ಮೀರಿ ಮುಸ್ಲಿಮರಲ್ಲೂ ಹಿಂದುಗಳಲ್ಲೂ ವಿಷ ಬೀಜವನ್ನು ಬಿತ್ತಿ ಭಾರತದಲ್ಲೂ ಆಮ ವ್ಯಾಪಿಸುವಂತೆ ಕುಹಕ ನಡೆಸಿದೆ ಎಂಬುದನ್ನು ಅರಿಯುವಷ್ಟು ವಿವೇಕವೂ ನಮಗುಂಟು. ಆದುದರಿಂದ, ನಾವು ಜನಮತಗಣನೆಯನ್ನು ಜಾತೀಯ ಭೂತಕ್ಕೆ ಆವಾಹನೆ ಮಾಡುವ ರೀತಿಯಲ್ಲಿ ನಡೆಸಲು ಅವಕಾಶ ಕೊಡುವಂತಿಲ್ಲ; ಪರಕೀಯ ಸೈನ್ಯಕ್ಕೆ ಕಾಶ್ಮೀರದಲ್ಲಿ ಪ್ರವೇಶ ಕೊಡುವಂತಿಲ್ಲವೆಂದು ನೆಹರು ಪುನರುಚ್ಚರಿಸಿರುವುದು ಸಂಪೂರ್ಣವಾಗಿ ಸರಿಯಾದುದಾಗಿದೆ. ಕಾಶ್ಮೀರ ಪ್ರಶ್ನೆಯು ಬಗ್ಗೆ ಮುಂದೆ ನಾವು ಅನುಸರಿಸಬೇಕಾದ ನಡವಳಿಕೆಯು ಕಾನೂನು ಬದ್ಧವಾಗಿರಬೇಕಾದುದೂ ಅಗತ್ಯವಾಗಿದೆ—ಏನೆಂದರೆ, ಕಾಶ್ಮೀರವು ಕ್ರಮದಂತೆ ಭಾರತದೊಡನೆ ಸೇರ್ಪಡೆ ಹೊಂದಿದೆ; ಜನಾಭಿಪ್ರಾಯ ತಿಳಿದುಕೊಳ್ಳುವ ಆಶ್ವಾಸನೆಯನ್ನು ಭಾರತ ಸರಕಾರವು ಕಾಶ್ಮೀರದ ಜನರಿಗೆ ಕೊಟ್ಟುದಲ್ಲದೆ ಪಾಕಿಸ್ತಾನಕಾಶ್ಯಗಲೀ ಭದ್ರತಾ ಮಂಡಳಕಾಶ್ಯಗಲೀ ಅಲ್ಲ; ಗಣಾರಲ್ಲಿ ಜನಮತಗಣನೆಗೆ ಭಾರತವು ಹಾಕಿದ ಕರಾರುಗಳು ಪೂರ್ತಿಯಾಗಿಲ್ಲವಾದುದರಿಂದ ಜನಮತಗಣನೆಯು ಸೂಚನೆಯು ಈಗ, ಬದಲಾಯಿಸಿದ ಪರಿಸ್ಥಿತಿಗಳಲ್ಲಿ. ಅದೇ ಸ್ವರೂಪದಲ್ಲಿ ಊರ್ಜಿತವಿರುವುದೂ ಸಾಧ್ಯವಿಲ್ಲ; ಸಾಧ್ಯವಿದೆ ಎಂದೇ ಭದ್ರತಾ ಮಂಡಳದ ತೀರ್ಮಾನವಾದರೆ ಅದು ಪಾಕಿಸ್ತಾನವು ಆಕ್ರಮಣಕಾರಿ ರಾಷ್ಟ್ರ ಎಂದು ಮುಂತಾದ ಪ್ರಾಮುಖ್ಯಾಂಶಗಳನ್ನು ಗಮನಿಸಲು ತಪ್ಪಲೂ ಕೂಡದು.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ನೇತ್ರ ಚಿಕಿತ್ಸೆ

ಒಳ್ಳೆಯ ದೃಷ್ಟಿಯನ್ನು ಪಡೆಯಲು ನೈಸರ್ಗಿಕ ತತ್ವಾನುಸಂಧಾನವೇ ಯೋಗ್ಯಮಾರ್ಗ

ಹಲವೊಮ್ಮೆ ನಾವು ಕಣ್ಣು ನೋವಿನಿಂದ ಬಳಲುತ್ತಿರುವುದುಂಟು. ಪರೀಕ್ಷೆಗೆ ಓದಲೆಂದೋ ಆಫೀಸಿನ ಇನ್ನಿತರ ಕಾರಣಗಳಿಂದ ನಿದ್ದೆಗೆಟ್ಟಾಗ, ಹಾಗೂ ಗಂಟೆಕಟ್ಟಲೆ ಓದಿದಾಗ—ಹೀಗೆ ಕೆಲವು ಸಂದರ್ಭಗಳಲ್ಲಿ ನಮಗೆ ಕಣ್ಣು ನೋವು ತಲೆದೋರುವುದು.

ಅಲ್ಲದೆ—ಉಗಿಬಂಡಿಯಲ್ಲಿ ಪ್ರಯಾಣಿಸುವಾಗ ಕಲ್ಲಿದ್ದಲ ಹೊಗೆ ಕಣ್ಣಿಗೆ ಬಡಿಯುವುದರಿಂದಲೂ, ಮಳ್ಳು ಕೋಲು ವಗೈರೆ ಗಿರಿಹೋಗುವುದರಿಂದಲೂ, ಇಕ್ಕರಕಸ, ರಸಗಳು ಬೀಳುವುದರಿಂದಲೂ ಕಣ್ಣು ನೋವು ಉಂಟಾಗುತ್ತದೆ.

ಇವು ತಾತ್ಕಾಲಿಕ ಬೇನೆಗಳಾದರೆ—ಕೆಂಗಣ್ಣು, ಕೋಸುಗಣ್ಣು, ದೃಷ್ಟಿ ಮಂದತ್ವ ಮೊದಲಾದುವುಗಳು 'ರೋಗ'ದ ಪಾಲಿಗೆ ಸೇರಿದವುಗಳು.

ಯಾವ ಸಾಲಿಗೇ ಸೇರಲಿ; ಕಣ್ಣು ನೋವನ್ನು ಸಹಿಸುವುದು ಸ್ವಲ್ಪ ಕಷ್ಟವೇ. ಕೆಲವೊಮ್ಮೆ ಕಣ್ಣಿನಿಂದ ನೀರು ಹರಿಯುತ್ತಿದ್ದು, ರೆಪ್ಪೆಬೆರೆಯಲು ಸಾಧ್ಯವಾಗುವುದಿಲ್ಲ. ಸಿಡಿತವಂತೂ ಸಹಿಸಲಸಾಧ್ಯ. ಎಷ್ಟಾದರೂ ಕಣ್ಣು ಕೋಮಲವಾದ ಅಂಗವಲ್ಲವೇ! ಅದಕ್ಕೆಷ್ಟು ಸಹಿಸಲು ಸಾಧ್ಯವೋ ಅಷ್ಟನ್ನು ಮಾತ್ರ ಅದು ತಾಳಬಲ್ಲುದು. ಅದರ ಶಕ್ತಿಗೆ ಮೀರಿದ್ದಾದರೆ ಪ್ರತಿಕ್ರಿಯೆ ಕಂಡೇ ಕಾಣುವುದು.

ಕುಡುಕರಂತೆ ಕಣ್ಣು ಕೆಂಪಗೆ ಮಾಡಿ ಎರುಗಾಡುವ ಕೆಂಗಣ್ಣು ರೋಗಿಗಳು ದಿನದಿಂದ ದಿನಕ್ಕೆ ಏರುತ್ತಿದ್ದಾರೆ. ಅಂತೆಯೇ ಬಾಲ್ಯಾವಸ್ಥೆಯಲ್ಲೇ (ಕಣ್ಣು ಕಾಣಿಸದೆ) ಕನ್ನಡಕ ಧರಿಸುತ್ತಿರುವ ಸ್ತ್ರೀ ಪುರುಷರ—ಯುವಕ ಯುವತಿಯರ ಸಂಖ್ಯೆ ೀವು ಗತಿಯಲ್ಲಿ ಅಧಿಕವಾಗುತ್ತಿದೆ!

ಈ ರೀತಿಯಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಯೇರುತ್ತಿರಲು ಮಿತಿಮೀರಿದ ಅಜಾಗರೂಕತೆಯೇ ಮುಖ್ಯ ಕಾರಣ. ಕಣ್ಣುಗಳನ್ನು—ಸರಿಯಾಗಿ ವಿಶ್ರಾಂತಿಯನ್ನೀಯದೆ, ದಣಿಸುವುದರಿಂದ, (ಕಣ್ಣನ್ನು ಉದ್ರೇಕಿಸುವಂತಹ ಅತ್ಯಾಧುನಿಕ ಸಿನಿಮಾ ನಾಟಕ, ಸರ್ಕಸ್ ಮೊದಲಾದುವುಗಳನ್ನು ನೋಡುವುದು; ರಾತ್ರಿ ವಿದ್ಯುದ್ದೀಪದ ಬಳಿ ಕುಳಿತು ಓದುವುದು) ಹೆದರಿಂದ ಆಹಾರ ಸೇವನೆ; ಬೀಡಿ ಸಿಗಾರುಗಳಂತಹ ಚಾ, ಕಾಫಿ, ಬ್ರಾಂದಿ ಆಫೀಮುಗಳಂತಹ ಮಾದಕ ಪದಾರ್ಥಗಳೂ, ಅಲಂಕಾರಕ್ಕಾಗಿ ಹಾಕಿಕೊಳ್ಳುವ ನಾನಾ ವಿಧದ ಕನ್ನಡಕಗಳೂ ಕಣ್ಣಿನ ರೋಗದ ಹೆಚ್ಚಳಕ್ಕೆ— ಹರಡುವಿಕೆಗೆ ತುಂಬಾ ಸಹಕಾರಿಯಾಗಿವೆ.

ಜೋಕಿಗೆಂದು ಕನ್ನಡಕ ಧರಿಸಲು ಪ್ರಾರಂಭಿಸಿ ಕಡೆಗೆ ನಿಜವಾಗಿ ದೃಷ್ಟಿ ಮಂದತ್ವವನ್ನು ಪೊಂದಿದ ಅದೆಷ್ಟೋ ವಿದ್ಯಾರ್ಥಿ ವಿದ್ಯಾರ್ಥಿನಿಯರು— ಯುವಕ ಯುವತಿಯರು ಇಂದು ನಮ್ಮಲ್ಲಿ ಬೇಕಾದಷ್ಟು ಮಂದಿಯಿದ್ದಾರೆ!

ಅವರಿಗೆ ಈ 'ಗತಿ'ಯಾಗಲು ಕಾರಣ ವೇನು? ಜವರು ಅನುಸರಿಸಲು ಹೊರಟ ಆಧುನಿಕ ಜೀವನ ಕ್ರಮವೇ ಅಗಿದೆ.

ಅಲ್ಲದೆ 'ಆಧುನಿಕ' ವೈದ್ಯ ಶಾಸ್ತ್ರವ ಅಂಶವೂ ಇದರಲ್ಲಿ ಸೇರಿಕೊಂಡಿದೆ. ಕಣ್ಣು ನೋವಿಗೆ ಕಾರಣವಾದ ಕಶ್ಮಲವನ್ನು ಶರೀರದಿಂದ ಹೊರಹಾಕುವ ಬದಲು, ಅದನ್ನಲ್ಲೇ ಬೆಕೆ ಹಿಡಿದು ಒನ್ಮೆ ಬಾಹ್ಯ ನೋಟಕ್ಕೆ ಗುಣವಾದಂತೆ ತೆಸಗುತ್ತದೆ! ಇಂದಿನ ವೈದ್ಯಶಾಸ್ತ್ರವು ಯೇ ದದ ಗಿಡಸುಸೂಲಿಕೆಗಳ ಪ್ರಭಾವವನ್ನೂ ನಿರ್ಲಕ್ಷಿಸಿದೆ. ಈ ರೀತಿಯ ಆಧುನಿಕ ವೈದ್ಯಶಾಸ್ತ್ರದ ನವೀನ ವಿಧಾನವು ಯಶಸ್ವಿಯಾಗದೆ ಮತ್ತೂ ರೋಗವನ್ನು ಬಲಗೊಳಿಸುತ್ತದೆ. ಬರಿಯ 'ಕೆಮ್ಮು'ಗೆ ಔಷಧಿಗೆ ಹೋಗಿ ಕಡೆಗೆ 'ಕ್ಷಯ' ಬಿಡಿಸಿಕೊಂಡವರು ಅದೆಷ್ಟು ಮಂದಿಯಿಲ್ಲ ನಮ್ಮಲ್ಲಿ? ಕಣ್ಣು ನೋವಿಗೆ ಔಷಧಿ ಪಡೆದು ಪಡೆದು ತಾಟ್ಪತುದಿಯಲ್ಲಿ ಕುರುಡರೇ ಆಗಿ ಬಿಡುತ್ತಾರೆ!

ದೃಷ್ಟಿ ಊನವೆಂಬುದು ಆದೊಂದು ರೋಗವೆಂಬಷ್ಟು ದೊಡ್ಡ ಸಂಗತಿಯಲ್ಲ ಎಂದಿದೆ. ನಮ್ಮ ಡಾಕ್ಟರ್ ಮಹಾಶಯರಲ್ಲಿ! ಎಂತಲೇ ಅವರು ಬಹಳ ಸುಲಭವಲ್ಲಿ ದೃಷ್ಟಿವಾನವೀಯುತ್ತಾರೆ- ಯೇನೆಮ ಚಿಕಿತ್ಸೆ!

—ಪರೀಕ್ಷೆಮಾಡಿ ಯೋಗ್ಯ ಔಷಧಿಯನ್ನೆ ಕರುಣಿಸುವುದು!

ಹೌದು; ವೈದ್ಯಕೀಯದ ಈ ಪರಿಶೋಧನೆಗೆ ಮೆಚ್ಚಲೇಬೇಕು. ಕನ್ನಡಕ ದರಿಸಿದಾಗ 'ಆರೆ ಕುರುಡಾ'ನೂ ದೃಷ್ಟಿವಡೆಯುತ್ತಾನೆ-ಎಂದರೆ ಆದರ ಪ್ರಯೋಜನ ಆ ಗಾ ದ ವೆಂದು ಪಕ್ಷಿನೋಟದಿಂದೀಕ್ಷಿಸುವಾಗ ನಮಗೆ ವೈದ್ಯವಾಗಿಬಲ್ಲುದಾದರೂ ಒಳ ಹೊಕ್ಕು ನೋಡಿದಲ್ಲಿ ಅವರ ಯಥಾರ್ಥತೆ ಕಂಡು ಬರುವುದು.

ಕನ್ನಡಕವೊಂದನ್ನು ದರಿಸಿದಲ್ಲಿ ಕಣ್ಣು ಕಾಣುತ್ತಿದೆಯಾದರೂ ಅದು ಕನ್ನಡಕದ ಶಕ್ತಿ ಹೊರತು ಆ ವ್ಯಕ್ತಿಯ ನೈಜಶಕ್ತಿಯಲ್ಲ. ಒನ್ದನ ಹೆಗಲನ್ನೇರಿ ಸಂಚರಿಸುವ ಕುಂಟನೊಬ್ಬ 'ತಾನಿದೋ ನಡೆಯುತ್ತಿದ್ದೇನೆ'-ಎಂದರೆ ಅದೆಷ್ಟು ಹಾಸ್ಯಾಸ್ಪದವಾಗುವುದೋ ಅಷ್ಟೇ ದೃಷ್ಟಿದೋಷಕ್ಕೆ ಕನ್ನಡಕ ದರಿಸುವ ವಿಷಯ ಕೂಡಾ!

ನೇತ್ರದೋಷಕ್ಕೆ ಪರಿಹಾರ ಕನ್ನಡಕ ವಲ್ಲ,—ಯೋಗ್ಯ ಚಿಕಿತ್ಸೆ ಪರಿಹಾರ. ಆದರಿಂದ ಒಂದು ವ್ಯಕ್ತಿಗೆ ಕಾಣುವಂತಾಗ ಬಹುದು. ಆದರೆ ಆತನ ನಂರಿ ಮಕ್ಕಳ ಗತಿಯೇನು? ಕನ್ನಡವೇ ಗತಿಯೇ? ಅವೇ ರೀತಿ ಮುಂದುವರಿದಲ್ಲಿ ಎರಡು ಮೂರು ತಲೆ ಮಾರು ಕಳೆಯುವಾಗ ಕನ್ನಡಕವೇ ಕಣ್ಣಾಗಿ ಪರಿಣಮಿಸಬಹುದು. ಮಾನವನ ಕಣ್ಣು ನಿಸ್ತೇಜವಾಗಬಹುದು.

ಸಟೆಯೊಂದನ್ನು ದಿಟವೆಂದೆನಿಸಲು ಹತ್ತಾರು ಸುಳ್ಳನ್ನೆಂಕು ಕಟ್ಟಬೇಕಾಗುತ್ತದೋ ಹಾಗೆಯೇ ಈ ಕೃತ್ರಿಮತೆಗೆ ಇನ್ನೂ ಅನ್ಯೆಜತೆಯನ್ನು ಸೇರಿಸಬೇಕಾದೀತು.

"ಮಗನೇ ನೈರಿಸು; ದುಡುಕಬೇಡ. ನನ್ನ ಆದೇಶದಂತೆ ನಡೆ, ನಾನು ನಿನ್ನ ತಾಯಿ. ನನ್ನನ್ನು ನಿರ್ಲಕ್ಷಿಸಿದಲ್ಲಿ ನಿನ್ನನ್ನು ನಾನು ಶಿಕ್ಷಿಸಬೇಕಾಗುವುದು".

—ಜೀವಕೋಟಿಗಳೆಲ್ಲವುಗಳ ತಾಯಿ ಭೂಮಾತೆ-ನಿಸರ್ಗದೇವಿ ನ.ಡಿಯುತ್ತಿರುವ ನುಡಿಯಿದು. ಆದರೆ ಜಂಭದ ಕೋಳಿಯಂತಿರುವ ಮಾನವನಿಗೆ ಆ ನುಡಿಯಂತು ಮೆಚ್ಚುಗೆಯಾಗಬೇಕು? ಲೋಕಕ್ಕೆ ಪ್ರತಿಯೋಕ ನಿರ್ಮಿಸಬಲ್ಲೆ ಎಂಬಷ್ಟೂ ಅಹಂಕಾರದಿಂದ ಹಾರಾಡುತ್ತಿರುವ ನರನು ಆ ಮಹಾತಾಯಿಯ ಮಾತನ್ನು ಮನ್ನಿಸಬಹುದಾದ. ಒಂದರ ಹಿಂದೆ ಒಂದರಂತೆ ಹೆಜ್ಜೆಯಿಡತೊಡಗಿದ.

ತಾಯಿಯ ಸಹನೆ ಎಲ್ಲೆಮೀರಿತು. ತನ್ನನ್ನೀರೀತಿ ನಿರ್ಲಕ್ಷಿಸಿದ್ದಲ್ಲದೆ ತನ್ನೊಡನೆಯೇ ಸ್ಪರ್ಧಿಸಲು ಮುಂದಾಗಿದ್ದಾನೆ!!

ಇನ್ನೂ ಸಲುಗೆ ಬಿಟ್ಟರೆ....??
ಕೊಟ್ಟು ಬಿಟ್ಟಳು ಶಿಕ್ಷೆ
ನರಳ ತೊಡಗಿದರು ನರರು ಬಗೆ
ಬಗೆಯ ರೋಗದಿಂದ!

—ದೃಷ್ಟಿದೋಷವೂ ಅಕೆಯು ಶಿಕ್ಷೆಯೇ. ನಮ್ಮ ಹಿರಿಯರಿಗಿತ್ತ ಶಿಕ್ಷೆಯಲ್ಲಿ ನಮಗೂ ಪಾಲು ಬಂದಿದೆ. ನಾವಾವರೂ ನಿಸರ್ಗವಿರ್ನಿರ್ಲಕ್ಷಿತನವನ್ನು ಕಡಿಮೆ ಮಾಡುತ್ತಿದ್ದರೆ ಆಕೆ ಸಮಾಧಾನ ಪಡುತ್ತಿದ್ದಳೋ ಏನೋ! ಆದರೆ ನಾವು ನಮ್ಮ ಹಿರಿಯರಿಗಿಂತಲೂ ಮುಂದುವರಿದೆವು—ಮುಂದುವರಿಯುತ್ತಿದ್ದೇವೆ. ಅಂತೆಯೇ ಶಿಕ್ಷೆಯೂ ಬಲಗೊಳ್ಳುತ್ತಿದೆ. ಇನ್ನೂ ನಿರ್ಲಕ್ಷಿಸುತ್ತಲೇ ತೆರಳಿದಲ್ಲಿ ನಮ್ಮ ಮರಿಮಕ್ಕಳ ಕಾಲಕ್ಕೆ ಮಾನವರ ಸ್ಥಿತಿಗತಿಗಳೆಂತಾಗಬಹುದೆಂದು ಹೇಳಲು ಬರುವುದಿಲ್ಲ. ನಿಸ್ಯಳೂ ನಿರ್ಮಲಚಿತ್ತಳೂ ಶಾಶ್ವತಳೂ ಆದ ಆ ಮಹಾತಾಯಿಯೇ ಬಲ್ಲಳು!

ನಮ್ಮೆಲ್ಲರ ಕಲ್ಯಾಣಕ್ಕಾಗಿ ನಾವಿಂದಿನಿಂದಲೇ ನಿಸರ್ಗ ಮಾತೆಯತ್ತ ತಿರುಗಿ ಬೇಕಾಗಿದೆ.

ಆವಳಿಗೆ ಶರಣುಬಂದಲ್ಲಿ ನವ್ಯ ರೋಗಗಳನ್ನೆಲ್ಲಾ ಅವಳು ಪರಿಹರಿಸುವಳು.

ಪ್ರಕೃತಿ ಸಿದ್ಧ ಶಕ್ತಿಗಳಾದ ಮಣ್ಣು, ನೀರು, ಗಾಳಿ, ಬೆಳಕು, ಆಕಾಶಗಳೆಂಬವುಗಳನ್ನು ಬಳಸಿಕೊಂಡು ಉತ್ತಮವಾದ ಜೀವನವನ್ನು ಇಡೆಸುವುದರಿಂದ ದೃಷ್ಟಿ ದೋಷಗಳು—ಸರ್ವ ರೋಗಗಳೂ ಗುಣಹೊಂದಲು ಸಾಧ್ಯವಿದೆ.

ಕಣ್ಣಿಗೆ ಮಣ್ಣಿನ ಪಾಗೂ ತಣ್ಣೀರಿನ ಚಿಕಿತ್ಸೆಯೇ ಪ್ರಧಾನ. ಕಣ್ಣಿನ ಸಣ್ಣ ಸಣ್ಣ ಬೇನೆಗಳಿಗೆ ಬಹಳ ಸುಲಭದಿಂದ ಈ ಚಿಕಿತ್ಸೆ ಮಾತಬಹುದು. ಕೆಂಗಣ್ಣು ಮೊದಲಾದ ಕಠಿಣ ರೋಗಗಳಿಗೆ ಮಾತ್ರ ಸ್ವಲ್ಪ ಚಿಕಿತ್ಸೆಯಲ್ಲಿ ವ್ಯತ್ಯಾಸ ಮಾಡಬೇಕಾಗುವುದು. ಅಂದರೆ ಚಿಕಿತ್ಸೆ ಕೈಗುಬದ್ಧವಾಗಿ ನಡೆಯಬೇಕು. ಹೀಗಿದ್ದರೂ ಬಹಳ ಸುಲಭದಿಂದ ಗುಣಮುಖವಾಗಬಲ್ಲುದು!

ಉದಾಹರಣೆಗೆ, 'ಕಣ್ಣಿನೊಳಕ್ಕೆ ಏನಾದರೂ ಬಿದ್ದು, ತಾಗಿ, ಕಣ್ಣು ನೋವಾಗುತಿದ್ದರೆ ನಿಸರ್ಗಚಿಕಿತ್ಸೆಯ ಈ ಕ್ರಮವನ್ನು ಮಾಡಿರಿ. ಕೆಲವೇ ಗಂಟೆಗಳಲ್ಲಿ ನಿಮ್ಮ ಸಿಡಿತ ಮಾಯವಾಗಿ ಕಣ್ಣು ಶುಭ್ರವಾಗುವುದು.

ಬಿಳಿಯ ಶುಭ್ರವಾದ ಕಣ್ಣು ಬಟ್ಟೆಯನ್ನು ತೆಗೆದುಕೊಳ್ಳಿ. ಅದನ್ನು ತಣ್ಣೀರಲ್ಲಿ ಒದ್ದೆಮಾಡಿ, ರೋಗಿಯನ್ನು ಶಾಂತಿತ ಮಲಗಿಸಿ ಕಣ್ಣು ರೆವ್ವೆಯ ಮೇಲೆ ಇಡಿರಿ. ಆ ಬಳಿಕ ಕಲ್ಲಿಲ್ಲವ ನೀರನ್ನಾವ ಒಳ್ಳೆಯ ಮಣ್ಣನ್ನು ಕೆಲಸಿ ಬಟ್ಟೆಯ ಮೇಲೆ ಲೇಪ ಹಾಕಿರಿ.

ಒಂದು ಗಂಟೆಯ ಬಳಿಕ ಆದನ್ನು ತೆಗೆದು ಬಟ್ಟೆಯನ್ನು ನೀರಲ್ಲಿ ತೊಳೆದು ಪುನಃ ನೊದಲಿನ ರೀತಿ ಮಾಡಿರಿ. ಹೀಗೆ ಎರಡು ಮೂರೆ ಸಲ ಮಾಡಿದಾಗ ಸಾಧಾರಣವಾದ ನೋವು ಕಡಿಮೆಯಾಗುವುದು. ನೋವು ಹೆಚ್ಚಿದ್ದರೆ ಒಂದೆರಡು ದಿನ ಮಾಡಬೇಕಾದೀತು.

ಕೆಲವು ವೇಳೆ ಅಕಸ್ಮಾತ್ ಸಂದರ್ಭದಲ್ಲಿ ಮಣ್ಣು ಸಿಗದೇ ಇದ್ದಲ್ಲಿ ಬಟ್ಟೆಯನ್ನು ಅಂಗೈದಪ್ಪಕ್ಕೆ ಮಡಚಿ ಒದ್ದೆಮಾಡಿ ಕಣ್ಣಿನೆಲ್ಲೆಡೆಬೇಕು. 'ಪಸೆ' ಒಣಗದಂತೆ ಒದ್ದೆ ಮಾಡಿಕೊಳ್ಳಬೇಕು.

ಮಣ್ಣು ಮತ್ತು ನೀರಿನ ಸಾರವು ಕಣ್ಣಿನೊಳಕ್ಕೆ ಹೊಕ್ಕು ಒಳಗಿನ ಕಶ್ಮಲವನ್ನು ಹೊರಹಾಕಿ ಕಣ್ಣನ್ನು ಪೂರ್ವ ಸ್ಥಿತಿಗೇ ತಂದೊಡ್ಡುವುದು ಮಣ್ಣು ನೀರಿನ ಶಕ್ತಿ ಅಗಾಧವಲ್ಲವೇ?

ಇಂದಿನ ವೈದ್ಯಕೀಯದ ಹುಚ್ಚಿ, ತಪ್ಪಿದೆಯೆಂದು ಈಗೀಗ ಕೆಲವರಿಗೆ ತಿಳಿಯತೊಡಗಿದೆ. ಅದೆಷ್ಟೋ ಡಾಕ್ಟರರೂ ನಿಸರ್ಗ ಸಿದ್ಧಾಂತವನ್ನು ಒಪ್ಪಿದ್ದಾರೆ.

ನೈಸರ್ಗಿಕ ರೀತಿಯಿಂದಲೇ ರೋಗ ನಿರ್ನಾಮ ಕೊಂಡುವುದೆಂಬ ತತ್ವ ಪೂರ್ವದಲ್ಲೇ ಇದ್ದರೂ, ನರರಿಗೆ ಅದು ತಿಳಿಯತೊಡಗಿದುದು ಈಗ.

ಜರ್ಮನಿಯ 'ಲೂಯಿಖುನೆ' ಎಂಬವರು ಈ ಕುರಿತು ಪ್ರತ್ಯಕ್ಷ ಸಂಶೋಧನೆ ನಡೆಸಿ ಜನತೆಗೆ ಇದರ ಪ್ರಯೋಜನ ಸಿಕ್ಕುವಂತೆ ಕುಂಬಾ ದುಡಿದಿರುವರು. ಮಲೆಯಾಳದಲ್ಲಿ ಗ್ರಂಥವನ್ನು ಕೂಡಾ ಈ ಕುರಿತು ಬರೆದಿರುವರು. ಅದೀಗ ಹಲವಾರು ಭಾಷೆಗಳಲ್ಲಿ ಭಾಷಾಂತರಿಸಲ್ಪಟ್ಟಿದೆಯಾದರೂ, ಕನ್ನಡದಲ್ಲಿ ಈ ತನಕ ಪ್ರಕಟವಾಗಲಿಲ್ಲ.

ಅಖಿಲ ಕರ್ನಾಟಕ ಒಂದಾದ ಈ ಸಮಯದಲ್ಲಿ ನಿಸರ್ಗ ಚಿಕಿತ್ಸೆಯ ಕೈನುವಿಧಾನಗಳನ್ನೊಳಗೊಂಡ ಕನ್ನಡ ಗ್ರಂಥದ ಆಗತ್ಯವಿದೆ.

ಬೇಗನೇ ಅದು ಕನ್ನಡದಲ್ಲಿ ಪ್ರಕಟವಾಗಿ ಸರ್ವರಿಗೂ 'ನಿಸರ್ಗ ಚಿಕಿತ್ಸೆ'ಯ ಪ್ರಯೋಜನ ತಿಳಿಯುವಂತಾಗಲೆಂದು ಹಾರೈಸೋಣ.

—ಶ್ರೀ ಕೀ. ವ. ಕೇತನ.

ಉಡುಪಿ

ಪ್ರಜಾಪ್ರಭುತ್ವ ದಿನಾಚರಣೆ—ನಿಮಿತ್ತ ತಾ. ೨೬ರಲ್ಲು ಬೆಳಿಗ್ಗೆ ಪ್ರಭಾತಫೇರಿಯಾವ ಬಳಿಕ ಗಾಂಧಿ ಮೈದಾನದಲ್ಲಿ ಸಭಾ ಕಲೆಕ್ಟರ್ ಶ್ರೀ ಕೆ. ಸೂರ್ಯನಾರಾಯಣ ರಾಯರು ಧ್ವಜಾರೋಹಣ ನಡಾಡಿದರು. ನಗರ ಸಭಾಪತಿ ಶ್ರೀ ಕೆ. ಕೆ. ಪೈಗಳು ಸ್ವಾಗತ ಮಾತುಗಳನ್ನಾಡಿದರು. ನಂತರ ಮಕ್ಕಳಿಗೆ ಸಿಹಿತಿಂಡಿ ಹಂಚಲಾಯಿತು. ಆ ಮೇಲೆ ವಿವಿಧ ಪಂದ್ಯಾಟಗಳಾದುವು. ಸಂಜೆ ಸಾರ್ವಜನಿಕ ಸಭೆಯು ನಗರ ಸಭೆಯ ಉಪಾಧ್ಯಕ್ಷ ಶ್ರೀ ಪಿ. ವಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಪಂದ್ಯಾಟಗಳಲ್ಲಿ ಗೆದ್ದವರಿಗೆ ಪಾರಿತೋಷಕ ವಿತರಣೆ ಮಾಡಲಾಯಿತು.

ಹೈಲೇರಿಯಾ ನಿರೋಧ ದಳವು ಡಾ। ಗೊನ್ಸಾಲ್ವೀಸ್‌ರ ನೇತೃತ್ವದಲ್ಲಿ ಉಡುಪಿಗೆ ಐದು ನಗರದ ಬೀದಿ ಬೀದಿ ವಾರ್ಡುಗಳಲ್ಲಿಯ ಜನರ ರಕ್ತ ಪರೀಕ್ಷೆ ನಡೆಸಿತು. ಸಾಧಾರಣ ಸೇವೆಯಾ 10ರಷ್ಟು ಜನಕ್ಕಾಲು ರೋಗದ ಜಿನ್ನೆಗಳು ಕಂಡು ಬಂದಿವೆ ಎನ್ನಲಾಗಿದೆ. ನಗರ ಸಭಾಪತಿ ಶ್ರೀ ಕೆ. ಕೆ. ಪೈ ಮೊದಲಾದ ಇದು ದಳವನ್ನೊಡನೆ ಸಹಕರಿಸಿದ್ದರು.

ಎಲ್ಲೆಲ್ಲಿ ಏನೇನು?

ಉಡುಪಿಯಲ್ಲಿ ಕಂದಾಯಮಂತ್ರಿ ಶ್ರೀ ಪಾಟೀಲರು — ಮೈಸೂರು ಸರಕಾರದ ಕಂದಾಯ ಮಂತ್ರಿ ಶ್ರೀ ಎಮ್. ಪಿ. ಪಾಟೀಲರು ಕಳೆದ ತಾ. ೨೫ರಲ್ಲು ಉಡುಪಿಯ ವ್ಯಾಪಾರಿಗಳ ಹಾಲಾಪಜಾಲೆಗಳನ್ನು ಕೇಳಿ, ಅವುಗಳಿಗೆ ಉತ್ತರಿಸಿಯುತ್ತಾ ಮೈಸೂರು ರಾಜ್ಯದಲ್ಲಿ ಒಂದೇ ತೆರನಾದ ಮಾರಾಟಕರ ಪದ್ಧತಿಯನ್ನು ಬೇಗನೆ ಜ್ಯಾರಿಗೆ ತರುವುದಾಗಿ ಹೇಳಿದರು. ಈಗಿನ ಸೂರಾಟ ತೆರಿಗೆಯ ಕನಿಷ್ಠ ಮಿತಿ ರೂಪಾಯಿ 10,000ವನ್ನು ರೂಪಾಯಿ 25,000 ಕ್ಕೇರಿಸಬೇಕಾಗಿ ವ್ಯಾಪಾರಿಗಳು ಮಂತ್ರಿಗಳಿಗೆ ವಿನಂತಿಸಿದ್ದರು.

ಕಂದಾಯ ಮಂತ್ರಿಗಳು ಬೆಳಿಗ್ಗೆ ಮಲ್ಪೆಗೆ ಶ್ರೀ ಟಿ. ಎ. ಪೈ, ಎಸ್. ಎಲ್. ಎ. ಅವರೊಡನೆ ಹೋಗಿ ಆಲ್ಲಿಯ ಮೊಗವೀರ ಬಂಧುಗಳ ಸಂಕಷ್ಟಗಳನ್ನು ಕೇಳಿ ಅವುಗಳ ಕುರಿತು ಶಕ್ಯವಿದ್ದ ಪರಿಹಾರವನ್ನೆ ಮಾಡಲಾಗುವುದೆಂದರು. ಸಹಕಾರಿ ತಳಹದಿಯ ಮೇಲೇ ಮೀನುಗಾರಿಕೆಯ ಅಭಿವೃದ್ಧಿಪಡಿಸಿದರೆ ಕಷ್ಟಗಳು ನಿವಾರಣೆಯಾಗುವುದೆಂದರು. ಮಧ್ಯಾಹ್ನ ಮಂತ್ರಿಗಳಿಗೆ ಮಲ್ಪೆಯಲ್ಲಿ ನವಾಸದಲ್ಲಿ ಶ್ರೀ. ಟಿ. ಎ. ಪೈಗಳು ಭೋಜನ

(ಜನೇ ಪುಟದಿಂದ)

ಕೃತ್ಯಗಳಿಂದ ನಡೆಯುವ ಮಾನಸಿಕ ಅಂತರ್ದ್ವಂದ್ವವನ್ನೂ ಎಜೆಕ್ಟೀಸಲು ತನ್ನನಾಶವನ್ನು ಮಾಡಿಕೊಳ್ಳುವ ಭಾವನೆಗಳನ್ನೂ ಉಗ್ರತಮ ಕೃತಿಗಳಲ್ಲಿ ಸ್ವಗತ ಭಾಷಣಗಳಿಂದ ಸೂಚಿಸುವರು.

ಮಾನವನಿಗೆ ಯಾವುದರ ಹಾರ್ದಿಕ ಇಚ್ಛೆ ಇದೆಯೋ ಅದೇ ರೀತಿಯ ಫಲವು ಸಿಗುವುದು. ಜೀವನದಲ್ಲಿ ಸುಖ ಸಮೃದ್ಧಿಗಳನ್ನು ಇಚ್ಛಿಸುವವರಿಗೆ ಸುಖ ಸಮೃದ್ಧಿಗಳೂ, ಮೃತ್ಯು, ದುಃಖಗಳನ್ನು ಇಚ್ಛಿಸುವವರಿಗೆ ಮೃತ್ಯು, ದುಃಖಗಳೂ ಸಿಗುವುವು. ಎರಡು ರೀತಿಯ ವಸ್ತುಗಳೂ ಆತ್ಮ ನಿರ್ಮಿತವಾಗಿವೆ. ಆದ್ದರಿಂದ ಯಾರು ಒಂದನ್ನು ಬಯಸುವರೋ, ಅವರು ಇನ್ನೊಂದನ್ನು ಬಯಸದೆ ಪಡೆಯುವರು. ಆತ್ಮನು ನಿರ್ಲಿಪ್ತ, ಶುದ್ಧ, ನಿರ್ವಿಕಾರ ಸ್ವರೂಪನಾಗಿದ್ದಾನೆ. ಅವನು ಸದಾ ಸಮತೆಯನ್ನು ಇಚ್ಛಿಸುತ್ತಾನೆ. ಮನೋವಿಶ್ಲೇಷಣಕಾರರ ಪ್ರತಿಪಾದನೆಯಂತೆ ಮರಣವೂ ನಮ್ಮ ಸ್ವೇಚ್ಛೆಯಿಂದಲೇ ಬರುವುದು. ಮೃತ್ಯುವೆ ನಿರ್ವಾಣದ ಇಚ್ಛೆಯ ಒಂದು ರೂಪವಾಗಿದೆ. ಈ ಇಚ್ಛೆಯಿಂದಲೇ ನಿದ್ರೆಯು ಬರುವುದು, ಮೃತ್ಯುವು ಸನ್ನಿಹಿತವಾಗುವುದು, ಜೀವವು ಸಾಂಸಾರಿಕ ಜೀವನದಿಂದ ಮುಕ್ತವಾಗುವುದು. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಆತ್ಮನ ಸಮತೆಯ ಇಚ್ಛೆಯೇ, ಸವಿಕಲ್ಪ ನಿರ್ವಿಕಲ್ಪ ಸೃಷ್ಟಿಯೇ, ಸಾಂಸಾರಿಕ ಸುಖದುಃಖಗಳ ಉದಸ್ಥಿತಿಯ ಕಾರಣವಾಗಿದೆ. ಜನ್ಮ, ಮೃತ್ಯುಗಳಿಗೆ ಕಾರಣವಾಗಿದೆ. ಇದನ್ನು ತಿಳಿಯದಿರುವುದು ಅಜ್ಞಾನ. ಇದನ್ನು ತಿಳಿದ ಎಲ್ಲರ ಜೀವನವೂ ಸರ್ವ ರೀತಿಯಿಂದಲೂ ಸುಖಮಯವಾಗುವುದು. ವಾಸ್ತವಿಕ ಸ್ವೈತಿಕತೆಯು ನೆಲೆಗೊಳ್ಳುವುದು ಆದ್ದರಿಂದ 'ಸುಖದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ | ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ" (ಗೀತಾ ೨।೩೮)

ಇದನ್ನು ನಮ್ಮ ಜೀವನಕ್ಕೆ ಹೊಂದಿಸಿಕೊಂಡು ಸುಖಿಗಳಾಗಿ ಬಾಳೋಣ.

—ಕ. ಪುರುಷೋತ್ತಮ ಮಲ್ಯ

ಕೂಟನಸ್ಥೇರ್ಪಡಿಸಿದ್ದರು. ಶ್ರೀ. ಎ. ಜೆ. ಆಲ್ಪಯರವರು ಮಂತ್ರಿಗಳನ್ನು ಸ್ವಾಗತಿಸುತ್ತಾ ಕೆಲವೊಂದು ಸೂಚನೆಗಳನ್ನಿತ್ತರು. ಇಡೀ ಮೈಸೂರು ರಾಜ್ಯದ ಹಿತ ದೃಷ್ಟಿಯಿಂದ ಮಲ್ಪೆಯಲ್ಲಿ ಪ್ರಬುದ್ಧ ಬಂದರನ್ನಾಗುವುದು ಅಗತ್ಯವಿದೆ ಎಂದು ಮಂತ್ರಿಗಳು ಅಭಿಪ್ರಾಯಪಟ್ಟರು.

ಮಂತ್ರಿಗಳು ಎಮ್. ಜಿ. ಎಮ್ ಕಾಲೇಜ್ ಕಸ್ತೂರ್ಬಾ ಮೆಡಿಕಲ್ ಕಾಲೇಜು, ಶ್ರೀ ಕೃಷ್ಣ ಮಠಗಳಿಗೆ ಸಂದರ್ಶನವಿತ್ತರು. ಶ್ರೀ ಎಸ್. ನಾಂತಿಯವರು ಮಂತ್ರಿಗಳಿಗೆ ಮನವಿಯೊಂದನ್ನು ಅರ್ಪಿಸಿದರು. ಉಪಾಧ್ಯಾಯರಿಗೆ ವಸತಿ ಬಗ್ಗೆ ಸರಕಾರಿ ಜಾಗವನ್ನು ಕೊಡುವ ಕುರಿತು ಮಂತ್ರಿಗಳು ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ನಗರ ಸಭೆಯಲ್ಲಿ ನಗರ ಸಭಾಪತಿ ಶ್ರೀ ಕೆ. ಪೈಗಳು ಮಂತ್ರಿಗಳಿಗೆ ಚಹಾ ಸತ್ಕಾರವಿತ್ತರೆಂದು ತಿಳಿದು ಬರುತ್ತದೆ.

ಹಿರಿಯಡಕದಲ್ಲಿ— ಶ್ರೀ ಎಮ್. ಪಿ. ಪಾಟೀಲರು ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿ ಅಶ್ರಯದಲ್ಲಿ ಹಿರಿಯಡಕದಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾ, ಒಕ್ಕೂಲು ಹಿತರಕ್ಷಣಾ ಸಂಬಂಧವಾಗಿ ಮತ್ತು ಭೂ ಸಂಬಂಧವಾದ ಸುಧಾರಣೆಯ ಕುರಿತಾಗಿ ಪರಿಶೀಲಿಸಿ ಒಂದು ಕಾನೂನನ್ನು ಕಾರ್ಯಗತಗೊಳಿಸುವರೆ ಈಗಾಲೇ ಒಂದು ಸಮಿತಿಯನ್ನು ನೇಮಿಸಿರುವುದಾಗಿಯೂ ಹೊಸ ಮೈಸೂರು ಪ್ರಾಂತವನ್ನಲ್ಲಿ ವಿವಿಧ ಭೂ ಒಕ್ಕಲು ಕಾನೂನುಗಳು ಇರುವಂತಹ ಪ್ರದೇಶಗಳು ಸೇರಿರುವುದರಿಂದ ಈ ಎಲ್ಲಾ ತಾರತಮ್ಯಗಳನ್ನು ಪರಿಶೀಲಿಸಿ ಅರಿತುಕೊಂಡು ಹೊಸದೇ ಆದೊಂದು ಕಾನೂನನ್ನು ಜ್ಯಾರಿಗೆ ತರುವ ಅವಸರವಿಲ್ಲವೆಂದು ಹೇಳಿದರು. ಶ್ರೀ ಟಿ. ಎ. ಪೈಗಳು ಸಭಾಧ್ಯಕ್ಷತೆ ವಹಿಸಿದ್ದರು. ಸಭಾರಂಭದಲ್ಲಿ ಡಾ| ಜಂದಯ್ಯ ಹೆಗ್ಡೆಯವರು ಸ್ವಾಗತ ನುಡಿತುಗಳನ್ನಾಡಿದರು. ಕೊನೆಯಲ್ಲಿ ಮುದ್ರಾಡಿ ಕೃಷ್ಣಯ್ಯ ಸೆಟ್ಟರು ಧನ್ಯವಾದಗಳನ್ನಿತ್ತರು.

ಬೆಳ್ಮಣ್ಣು ನಂದಳಿಕೆ — ಮುದ್ದಣ್ಣ ಮಹಾ ಕವಿಯ ಜಯಂತುತ್ಸವವು ಕಳೆದ ತಾ. 25 ನುತ್ತು 26ರಲ್ಲು ಅನುಕ್ರಮವಾಗಿ ಉಡುಪಿ "ಪ್ರಕಾರ" ವಾರಪತ್ರಿಕೆಯ ಸಂಪಾದಕ ಶ್ರೀ ಎ. ಜೆ. ಆಲ್ಪ ಮತ್ತು ಕುಂದಾಪುರ ರೆವಿನ್ಯೂ ಡಿವಿಜನಲ್ ಆಫೀಸರ್ ಶ್ರೀ ಕೆ. ಸೂರ್ಯನಾರಾಯಣ ರಾವರ ಅಧ್ಯಕ್ಷತೆಯಲ್ಲೂ ಸಾಂಗವಾಯಿತು. ಜಯಂತಿಯುತ್ಸವದ ಸ್ವಾಗತ ಸಮಿತಿ ಅಧ್ಯಕ್ಷ ಡಾ. ಕೊರ ಡ್ಡಲ್ ವೆಂಕಟ್ರಾಯರು ಎರಡು ದಿವಸಗಳಲ್ಲೂ ಸ್ವಾಗತಭಾಷಣಗೈದಿದರು. ಎಮ್. ಜಿ ಎಮ್. ಕಾಲೇಜ್ ಲೆಕ್ಚರರ್ ಶ್ರೀ ಎಸ್. ಕೆ. ಶ್ರೀಪತಿ ಆಚಾರ್ ಉಡುಪಿ ಬೋರ್ಡು ಹೈಸ್ಕೂಲಿನ ಕನ್ನಡಪಂಡಿತ ವಿದ್ವಾನ್ ಶ್ರೀ ಪುಟ್ಟಣ್ಣ ಸೆಟ್ಟಿ, ಉಡುಪಿಯ ಬನ್ನಂಜೆ ರಾಮಾಚಾರ್ಯ ಮತ್ತು ಗೋವಿಂದಾಚಾರ್ಯ ಸಹೋದರರು, ಮೂಡಬಿದ್ರೆಯ ಜೈನ ಹೈಸ್ಕೂಲ್ ಕನ್ನಡ ವಿದ್ವಾನ್ ಶ್ರೀ ಕಾಂತ ರೈ, ಮಂಗಳೂರು "ಕಂಠೀರವ" ಸಂಪಾದಕ ಪುರುಳಿ ಭೀಮರಾಯ್, ಮಂಗಳೂರು ವಾಮನ ಪೊದಲಾದವರು ಪ್ರಮುಖ ಉಪನ್ಯಾಸಕರಿದ್ದರು. ಕೊನೆಯದಿನ ಭೀಮನತ ಶ್ರೀ ನಾರಾಯಣ ಬಲಿಸ, ಮದ್ದಳೆಗಾರ ಶ್ರೀ ಕೆಮ್ಮುಣ್ಣು ನಾರಾಣಪ್ಪಯ್ಯನವರ ಕೂಟನವರ ತಾಳಮದ್ದಳೆ ನಡೆಯಿತು.

ಪಡುಬಿದ್ರಿ— ಸ್ಥಳೀಯ ಹಿರಿಯಂಟಲ್ ಮಿಡ್ಲ್ ಸ್ಕೂಲಿನಲ್ಲಿ ತಾ. ೨೫ರಲ್ಲು ಪ್ರಜಾಪ್ರಭುತ್ವ ದಿನಾಚರಣೆಯು ವಿವಿಧ ಕಾರ್ಯಕ್ರಮಗಳಿಂದ ಆಚರಿಸಲ್ಪಟ್ಟಿತು.

ಸುರತ್ಕಲ್— ಮುಕ್ಕೆನಿತ್ರ ಪಟ್ಟಣ ಗಂಗಯ ಸ್ಮಾರಕ ರಾತ್ರಿ ಮತ್ತು ಅಗ್ನಿಶಕರಿ ಹಾ| ಎ ಶಾಲೆಯಲ್ಲೂ ಪ್ರಜಾಪ್ರಭುತ್ವ ದಿನಾಚರಣೆಯು ಸಾಂಗವಾಯಿತು. ಕೊಂಚೆ ಕಿರಿಯ ಬುನಾದಿ ಶಾಲೆಯಲ್ಲಿ ಪರ್ಕಳ ಬಾಸೆಲ್ ಮಿಶನ್ ಹಾ| ಎ ಶಾಲೆಯಲ್ಲಿ, ಕಡಿಯಾಳಿ ಹಾ| ಎ ಶಾಲೆಯಲ್ಲಿ, ಸುರತ್ಕಲ್ ವಿದ್ಯಾದಾಯಿನಿ ಹೈಸ್ಕೂಲಲ್ಲಿ ಕನಯೂರು ಪದ್ಮಾಂಜ ಹೈಸ್ಕೂಲಲ್ಲಿ ಕನಯೂರು ಪದ್ಮಂಜ ಜೋರ್ಡು ಎಲೆಮೆಂಟರಿ ಶಾಲೆಯಲ್ಲಿ. ಪ್ರಜಾಪ್ರಭುತ್ವ ದಿನಾಚರಣೆಯು ವಿವಿಧ ಕಾರ್ಯಕ್ರಮಗಳಿಂದ ನಡೆಯಿತು

ಪೆರ್ಡೂರು — ಕಳೆದ ತಾ. 12 ಮತ್ತು 13ರಲ್ಲು ಹಿರಿಯಡಕ ಬೋರ್ಡು ಹೈಸ್ಕೂಲಿನ ಸೌರತನ ಶಿಕ್ಷಣ ಶಿಬಿರವೆ ಪೆರ್ಡೂರು ಕೇಂದ್ರವಲ್ಲಿ ನಡೆಯಿತು. ಶ್ರೀ ಅನಂತ ಪದ್ಮನಾಭ ದೇವಸ್ಥಾನದ ಆಡಳಿತೆ ಮೊಕ್ತೇಸರರ ಶ್ರೀ. ಕೆ. ಭೋಜರಾಜ ಸೆಟ್ಟರು ಶಾಲಾ ಧ್ವಜವನ್ನು ಆರೋಹಿಸಿ ಶಿಬಿರವನ್ನು ಉದ್ಘಾಟಿಸಿದರು. ಶ್ರೀಗಳಾದ ಸುಬ್ರಾಯ ಮಲ್ಯ, ಬಿ. ಸಂಜೀವ ಹೆಗ್ಡೆ, ಡಾ| ಎಸ್. ಪಿ. ಸೆಟ್ಟಿ, ಡಾ| ಎಮ್. ಆರ್. ಹೆಗ್ಡೆ, ಡಾ| ಬಿ. ಜಂದಯ್ಯ ಹೆಗ್ಡೆ, ಎಸ್. ಗಣಪಯ್ಯ ಸೆಟ್ಟಿ ಮೊದಲಾದವರು ಸಹಕರಿಸಿದ್ದರು.

ಕಡಂದಲೆ— ಸ್ಥಳೀಯ ಬೋರ್ಡು ಹಾ| ಎ ಶಾಲೆಯು ಜಿಲ್ಲೆಯ ಯಾವತ್ತೂ ಬೋರ್ಡು ಚಿಟಿ ಎ ಶಾಲೆಗಳ ಪೈಕಿ ಕಳೆದ ಇ. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಗಳಿಸಿದ ಬಗ್ಗೆ ಜಿಲ್ಲಾ ಬೋರ್ಡು ವ್ರೆಸಿಡೆಂಟರು ದುಬಾರಿಲಿಸಿದ ಬೆಳ್ಳಿಯ ಗುರಾಣಿಯನ್ನು ಮೆರವಣಿಗೆಯಿಂದ ತರಿದು ತಿರೆಯಲ್ಲಿರಿಸಿದರು.

ಇನ್ನಂಜೆ— ಸ್ಥಳೀಯ ಎಸ್. ವಿ. ಎಜ್. ಹೈಸ್ಕೂಲಿನ ವರ್ಧಂತಿ ಸಮಾರಂಭವು ಕಳೆದ ತಾ 16ರಲ್ಲು ಶ್ರೀ ಟಿ. ಎ. ಪೈ, ಎಮ್. ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಲೀಡಿಕ ಶ್ರೀ ಶ್ರೀಪತಿ ಆಚಾರ್ಯರು ಸ್ವಾಗತನುತುಗಳನ್ನಾಡಿದರು ಪೆಡ್ಮಾಸ್ಟರ್ ಶ್ರೀ ಎಚ್. ರಾಮರಾಯರು ವರ್ಧಿಯನ್ನೋದಿದರು. ಶ್ರೀಗಳಾದ ಎ.ಎಜ್. ಕೃಷ್ಣಾಪ್, ಬಿ. ವಿ. ನಾಯರ್ ಮೊಲಾದವರು ಕಾಲೇಚಿತ ಉಪನ್ಯಾಸಗಳನ್ನಿತ್ತರು. ಶ್ರೀ ಎಫ್. ಎಕ್ಸ್. ಡಿ ಸಿಂಟೋರವರು ಸಾರಿತೋಷ ವಿತರಣೆಗೈದರು.

ಬೆಳ್ತಂಗಡಿ— ಕಳೆದ ತಾ 25ರಲ್ಲು ಸ್ಥಳೀಯ ಮಹಿಳಾವ್ಯದವರು ಇಲ್ಲಿಯ ಹೈಸ್ಕೂಲು ಕಟ್ಟಡದ ಸಭಾಭವರ್ಥನಾರ್ಥ ಜಾತಕ ಫಲಕ ಎಂಬ ಕನ್ನಡ ನಾಟಕವನ್ನು ಮಂಗಳೂರಿನ ಶ್ರೀಮತಿ ಸುನಂದಾ ಸಿ. ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ಅಭಿನಯಿಸಿದರು. ಶ್ರೀಮತಿ ಶಾಂತಿ ಆರ್. ರಾಯರು ಸ್ವಾಗತ ಭಾಷಣ ಮಾಡಿದರು.

ಎಡಪದವು — ಸ್ಥಳೀಯ ಪಾ. ಎ. ಶಾಲೆಯ ವಾರ್ಷಿಕೋತ್ಸವು ಕಳೆದ ತಾ. 26ರಲ್ಲು ಉಡುಪಿ ಫಲಿಮಾರು ಮಠದ ಶ್ರೀ ರಘುವಲ್ಲಭತೀರ್ಥ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಮುಖ್ಯೋಪಾಧ್ಯಾಯ ಶ್ರೀ ರಾಮಾಚಾರರು ಸ್ವಾಗತಭಾಷಗಳ ನ್ನಾಡಿ ಶಾಲಾ ವರದಿಯನ್ನೊಪ್ಪಿಸಿದರು. ಶ್ರೀಗಳಾದ ಆನಂದ ಆಳ್ವ, ಎಸ್. ಪದ್ಮನಾಭ ಪಾರ್ಯ ಮೊಲಾದವರು ಕಾರ್ಯೋಚಿತವಾಗಿ ತುಗಳನ್ನಾಡಿದರು. ಅಧ್ಯಕ್ಷ ಸ್ವಾಮಿಗಳವರು ತಮ್ಮ ಭಾಷಣದಲ್ಲಿ ಜ್ಞಾನ ಸಂಪಾದನೆಯ ಗುರಿ ಹೇಗಿರಬೇಕು ಎಂಬುದನ್ನು ವಿವರಿಸಿ ತಮ್ಮ ಸಹಾನುಭೂತಿ, ಸಹಕಾರಗಳೆಲ್ಲಿ ಯಾವ ಕಾಲದಲ್ಲೂ ಈ ಶಾಲೆಯ ಕಡೆಗಿವೆ ಎಂದು ಜೀಳಿ ಆಶೀರ್ವದಿಸಿದರು.

ಕುರುಕಾಲು— ಇಲ್ಲಿಯ ಶ್ರೀ ಕುಂಜಾರು ಗಿರಿಜಾ ಹಾ| ಎ ಶಾಲೆಗಾಗಿ ಕಟ್ಟಿಸಿದ ಹೊಸ ಕಟ್ಟಡವನ್ನು ಇದೇ ತಾ 10ನೆ ಆದಿತ್ಯವಾರ ಸಂಜೆ 3 ಗಂಟೆಗೆ ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಉದ್ಘಾಟಿಸಿ ಪ್ರಭಾತಿವರ್ಷಗಳಲ್ಲಾಲಯವರು ಕುಂದಾಪುರ ವಿವಿಜನಲ ಸರ್ಜ ಕಲೆಕ್ಟರ್ ಶ್ರೀ ಕೆ. ಸೂರ್ಯನಾರಾಯಣಾಯರು ಆಗಿನ ಕಾರ್ಯಕ್ರಮಗಳ ಅಧ್ಯಕ್ಷತೆ ವಹಿಸಿರುವರು. ಈ ಸಂದರ್ಭದಲ್ಲಿಯೇ ಉಡುಪಿ ತಾಲೂಕು ಮಹಿಳಾ ಸಮಿತಿ ಅಧ್ಯಕ್ಷೆ ಶ್ರೀಮತಿ ಪ್ರೇಮಾ ಎ. ಪೈಗಳು ಶಿಶು ಪಾರ್ಕಿನ ಉದ್ಘಾಟನೆಯನ್ನು ನೆರವೇರಿಸಿದರು.

ರಾತ್ರಿ 7½ ಗಂಟೆಗೆ ಶ್ರೀ ಕುಂಜಾರು ಗಿರಿಜಾ ಹಾ| ಎ ಶಾಲೆ, ಕುರುಕಾಲು ಗಣಪತಿ ಎಲೆಮೆಂಟರಿ ಶಾಲೆಗಳ ಸಂಯುಕ್ತ ವರ್ಧಂತ್ಯುತ್ಸವವು ಶ್ರೀ ಟಿ ಎ. ಪೈ, ಎಮ್. ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಸರ್ವರೂ ಬಂದು ಸಹಕರಿಸಿ ಬೇಕಾಗಿ ಕೆ ಗಣಪಯ್ಯ ಸೆಟ್ಟು ತಿಳಿಸುತ್ತಾರೆ

ಕುಂಬಡಾಜೆ ಮುತ್ತಣ್ಣ ಸ್ಮಾರಕ ಸ್ಪರ್ಧೆಗಳು— ಕಥಾಸ್ಪರ್ಧೆ-ಕವನ ಸ್ಪರ್ಧೆ-ಚಿತ್ರಸ್ಪರ್ಧೆ. ಈ ಮೂರು ಸ್ಪರ್ಧೆಗಳಿಗೆ 9 ಬಹುಮಾನಗಳು ಪ್ರತಿಯೊಂದು ಸ್ಪರ್ಧೆಯ ಪ್ರಥಮ ಬಹುಮಾನ ರೂಪಾಯಿ 5/- ದ್ವಿತೀಯ ಬಹುಮಾನ ರೂ. 3/- ತೃತೀಯ ಬಹುಮಾನ ರೂ. 2/- ಈ ತಿಂಗಳ ತಾ. 28ರೊಳಗೆ ಕೃತಿಗಳನ್ನು ಕಳಿಗಿನ ವಿಳಾಸಕ್ಕೆ ಕಳುಹಿಸಬೇಕು. ಸ್ಪರ್ಧೆಪಥನ—ಕವನ ಒಂದರ 0 - 2—0 ಅಥವಾ ಚಿತ್ರ ಪ್ರತಿಯಂದರ 0 4—0 ಅಂಚೆಚೀಟುಗಳು ಪೂರ್ತ. 25 ವರ್ಷ ವಯಸ್ಸಿನೊಳಗಿನ ವಿದ್ಯಾರ್ಥಿಗಳು ಮಾತ್ರ ಕೃತಿಗಳನ್ನು ಕಳುಹಿಸಿಕೊಡುವುದು ಫಲಿತಾಂಶ ಪ್ರಕಟಣೆ ತಾ. 14-3-1957.

ನಿಯಮಗಳು— ಈ ಮೊದಲು ಪ್ರಕಟವಾಗದ ಸ್ವಂತ ಕೃತಿಗಳನ್ನು ಒಬ್ಬನೇ ಹೆಚ್ಚು ಸಂಖ್ಯೆಯಲ್ಲಿ ಕಳುಹಿಸಿಕೊಡಬಹುದು. ಹೆಚ್ಚಿನ ವಿವರಗಳಿಗೆ : ಕಾರ್ಯದರ್ಶಿ ಮುತ್ತಣ್ಣ ಮೆಮೋರಿಯಲ್ ಟ್ರಸ್ಟ್, ಕುಂಬಡಾಜೆ (ವ.ಕ.) ವಿಳಾಸಕ್ಕೆ ಬರೆದು ತಿಳಿಸಿಕೊಳ್ಳುವುದು

ಒಂದು ಹೊಸ ಮಹಾ ಕಾದಂಬರಿ

ನಡುಹಗಲಿನ ಕಗತಲೆ

ಸಿಲ್ ಪುಟಗಳು ಬೆಲೆ 2¼ ರೂಪಾಯಿ

ಯುರೋಪಿನಲ್ಲಿ ಈಗ ನಲ್ವತ್ತು ವರ್ಷಗಳ ಹಿಂದೆ ನಡೆದು ಇಡೀ ಪ್ರಪಂಚವನ್ನೇ ತಲ್ಲಣಗೊಳಿಸುತ್ತಿರುವ ಒಂದು ರಾಜಕೀಯ ಪದ್ಧತಿಯಿಂದ ಮನಸ್ಸಿನ ಆತ್ಮವು ಪತನವಾಗುತ್ತಿರುವ ದುರಂತದ ಒಂದು ಮಾರ್ಮಿಕ ಕಾದಂಬರಿ.

ರಶಿಯದ ರಕ್ತಮಯ ಕ್ರಾಂತಿಯು ವ್ಯಕ್ತಿಯ ಜೀವನ ಮತ್ತು ನೆತ್ತರನ್ನು ನಿರ್ದಾಕ್ಷಿಣ್ಯವಾಗಿ ಹೀರುವ ಭೀಕರ ಚಿತ್ರಣ.

ಇದರಲ್ಲಿ ಪ್ರಚಲಿತ ಪ್ರಪಂಚದ ರಾಜಕೀಯ, ಇತಿಹಾಸ, ಮತ್ತು ಅಂತಾರಾಷ್ಟ್ರೀಯ ರೀತಿ ನೀತಿಯ ಒಳನೋಟ ದೊರೆಯುತ್ತದೆ.

ಪ್ರಖ್ಯಾತ ಲೇಖಕ ಆರ್ಥರ್ ಕೊಸ್ಲರ್ ಅವರ ಜರ್ಮನ್ ಕಾದಂಬರಿಯ ಮನೋಜ್ಞ ಕನ್ನಡವನ್ನು ಅನುವಾದಿಸಿದವರು **ಕು. ಶಿ. ಹರಿದಾಸ ಭಟ್ಟರು.**

ಪ್ರಕಾಶಕರು:

ನವಯುಗ ಎಂಟರ್‌ಪ್ರೈಸಸ್ ಲಿಮಿಟೆಡ್, ಉಡುಪಿ.

(ಪ್ರತಿಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ. ಇಲ್ಲಿಯೂ ದೊರೆಯುತ್ತವೆ)

ಮಂಗಳೂರು

ರಿಪಬ್ಲಿಕ್ ದಿನಾಚರಣೆಯು— ಮಂಗಳೂರಿನಲ್ಲಿ ಕಳೆದ ತಾ. 26ರಲ್ಲು ಬೆಳಿಗ್ಗೆ ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಹ, ಇವರಿಂದ ಧ್ವಜಾರೋಹಣ, ಧ್ವಜವಂದನೆಗಳಿಂದ ಪ್ರಾರಂಭವಾಯಿತು. ಪೋಲೀಸ್ ದಳ, ಎನ್. ಸಿ. ಸಿ. ಮತ್ತು ಸ್ಕೌಟು ದಳದವರು ಗೌರವವಹಿಸಿದ್ದರು. ಸಂಜೆ ಸಾರ್ವಜನಿಕ ಸಭೆಯು ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಿಗಿ ವಿಲಕೆಲವರ ಕಾಲೋಚಿತ ಭಾಷಣಗಳಾ ಯಿತು.

ಜಿಲ್ಲಾ ಬೋರ್ಡಿನ ಸಭೆಯು— ಕಳೆದ ತಾ. 16ರಂದು ಡಾ. ಕೆ. ಕೆ. ಪೈಗೆ ಯವರ ಅಧ್ಯಕ್ಷತೆಯಲ್ಲಿ ಜರಗಿತು. ಹೆಜಮಾ ಕೋಡಿಯ ಕಾಲು ಸಂಕಕ್ಕೆ, ಕಂದಿಪಾಡಿ ಪ್ರೈಸ್ಕೂಲಿನ ಬಾನಿಗೆ, ಬಡಗಬೆಟ್ಟು ಕೊಡ ಪ್ಪರು, ಮುಂಡೆನೂರು, ಸೂವಿನಕಾಡು, ಕಣೂರು ಎಲಿಮೆಂಟರಿ ಶಾಲೆಗಳ ಕಟ್ಟಡಗ ಗಿಗೆ ಆವಶ್ಯಕ ಪೆಚ್ಚಿದ ಬಿಟ್ಟು ಮೊತ್ತಕ್ಕೆ ಸೇ ರಿಸಿ ಡಾ 15 ಕೊಡುಸ ನಿರ್ಧಾರವಾಯಿತು. ಇಲಾಕೆಯ ಬೋರ್ಡು ಹೈಸ್ಕೂಲಿನ ಕೃಷಿ ಶಿಕ್ಷಣ ವಿಭಾಗಕ್ಕಾಗಿ ಬೋರ್ಡು ಕೊಡುವ ಹಣ ರೂಪಾಯಿ 38,000 ಮಂಜೂರಾ ಯಿತು. ನಿಟ್ಟೆ ಗ್ರಾಮದಲ್ಲಿ ಒಂದು ಗ್ರಾಮಾ ಭಿವೃದ್ಧಿಕೇಂದ್ರ ವೈದ್ಯಕೀಯ ಚಿಕಿತ್ಸಾಲಯವನ್ನು ತೆರೆಯಬೇ ಕೆಂಬ ಶ್ರೀ ಬಿ. ಎಸ್. ಭಾಸ್ಕರ ರೈಗಳ ಪ್ರಸ್ತಾವು ಸಾಗಾಯಿತು.

ಹಾಸ್ಟೆಲ್ ದಿನಾಚರಣೆ— ದ. ಕ. ಸ್ತ್ರಾವಿಡ ಬ್ರಾಹ್ಮಣ ವಿದ್ಯಾರ್ಥಿ ಭವನದ ವಾರ್ಷಿಕೋತ್ಸವವು ಕಳೆದ ತಾ. 27ರಲ್ಲು ಸಂಸ್ಥಾಪಕರು ಸಬ್ ಡಿವಿಜನಲ್ ಮೆಜಿಸ್ಟ್ರೇಟ್ ಶ್ರೀ ಪಿ. ರಾಮಚಂದ್ರ ರಾಯರ ಅಧ್ಯಕ್ಷತೆ ಯಲ್ಲಿ ಜರಿಗಿತು. ಶ್ರೀ ಸಿ. ಎಚ್. ಗಣಪತಿ ರಾಯರು ಸ್ವಾಗತ ಭಾಷಣ ಮಾಡಿದ ಬಳಿಕ ಶ್ರೀ ಬಿ. ಪಿ. ಹೊಳ್ಳರು ಸ್ವಸ್ತಿವಾಚನಮಾಡಿದರು. ಶ್ರೀ ಪಿ. ರಾಮಕೃಷ್ಣ ಜಡಿಗರು ಉತ್ತರವಿತ್ತರು. ಅಧ್ಯಕ್ಷ ಭಾಷಣಾನಂತರ, ವಿವಿಧ ಬಹುಮಾನವಿತರಣೆ ಕಾರ್ಯಕ್ರಮಗಳಾದುವು.

ಎಸ್. ಆರ್. ಎಸ್.— ಹೋಂ(ಬಂ ಟರ ಹಾಸ್ಟೆಲು) ಇದರ ವಾರ್ಷಿಕೊತ್ಸವವು ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಹ ನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ನರಸಿಂಹನವರು ಬಹುಮಾನವಿತರಣೆ ಮಾಡಿ ದರು. ಡಾ. ಬಿ. ಆರ್. ಪೈಗೆಯವರು ಸ್ವಾಗ ತಮೊತ್ತುಗಳನ್ನಾಡಿದರು. ಶ್ರೀ ಕೆ. ವಿ. ಸಟ್ಟಿ ರವರಿವಾಜಸಮಾಡಿದರು. ಟ್ರೆಜರಿ ಡಿಪ್ಯೂ ಟಿ ಕಲೆಕ್ಟರ್ ಶ್ರೀ ಬಿ. ನಾರಾಯಣ ಹೆಗ್ಡೆ ಯವರು ಸ್ವಸ್ತಿವಾಚನಮಾಡಿದರು. ಶ್ರೀ ವಾಸು ಸಟ್ಟಿರು ಉತ್ತರವಿತ್ತರು. ಅಧ್ಯಕ್ಷರ ಭಾ ಷಣ, ವಿವಿಧಸಿನೋದಾವಳಿ ಮೊದಲಾದ ಕಾ ರ್ಯಕ್ರಮಗಳಾಗಿ ಸನಾರಂಭ ಕೊನೆಗೊಂ ಡಿತು.

ಕೆದಿಂಜೆ ಮಹಾಬಲ ಹೆಗ್ಡೆಯವ ನಿಧನ— ತಾ. 27ರಂದು ಕಾರ್ಕಳದ ಪ್ರಸಿ ದ್ಧ ವಕೀಲರಾದ ಶ್ರೀ ಕೆದಿಂಜೆ ಮಹಾಬಲ ಹೆಗ್ಡೆಯವರು ಯೇಣಗುಡ್ಡೆಯಲ್ಲಿ 56ನೇ ವಯಸ್ಸಿನಲ್ಲಿ ದೈವಾಧೀನರಾದರೆಸ್ಸಲು ವಿಷಾ ದವಾಗುತ್ತದೆ. ದಿವಂಗತರು ಗಣ್ಯರೂ, ಜನ ಪ್ರಿಯರೂ, ಒಳ್ಳೆಯ ಮೇಧಾವಿಗಳೂ ಆಗಿ ದ್ದರು. ಅಲ್ಲದೆ ಅವರು ಪ್ರಸಿದ್ಧ ಬಂಟ ಕು ಟುಂಬದವರು. ಮಾತ್ರವಲ್ಲದೆ 1941ರಿಂದ ವಿಜಯ ಬ್ಯಾಂಕಿನ ಡೈರೆಕ್ಟರಾಗಿದ್ದು ಜನ ಸೇವೆಯನ್ನು ಸಲ್ಲಿಸಿದ್ದರು. ಮಾತ್ರವಲ್ಲದೆ ಇತರ ಹಲವಾರು ಸಂಸ್ಥೆಗಳಲ್ಲಿ ಅನಕ್ತರಿಯಿಂದ ಕೆಲಸಮಾಡುತ್ತಿದ್ದರು. ಇಂತಹ ಹಿರಿಜೀವಿ ಯ ಅತ್ಯಕ್ಕೆ ಚಿರಶಾಂತಿಯೊರೆಯಲಿ.

ಸಂತಾಪಸೂಚಕ ಸಭೆ— ಸ್ಥಳೀಯ ವಿಜಯಾ ಬ್ಯಾಂಕಿನ ಡೈರೆಕ್ಟರರಾದ ಶ್ರೀ ಕೆದಿಂಜೆ ಮಹಾಬಲ ಹೆಗ್ಡೆಯವರ ಆಕಾಲ ನಿಧನದ ಸುದ್ದಿಗೆ ಸಂತಾಪ ಸೂಚಿಸಲು ಬ್ಯಾಂಕಿ ನ ಆಡಳಿತಾಧಿಕಾರಿಗಳ ಸಭೆಯು ಕಳೆದ ತಾ. 28ರಲ್ಲು ಬ್ಯಾಂಕಿನ ಅಧ್ಯಕ್ಷ ಶ್ರೀ ಕೆ. ಸುಂದರರಾಮ ಸಟ್ಟಿರ ಅಧ್ಯಕ್ಷತೆಯಲ್ಲಿ ಜರಿಗಿತು.

ನಾಮಪತ್ರಗಳ ಪರಿಶೀಲನೆ ಶ್ರೀ ವೈ ಮಂಜಯ್ಯ ಸೆಟ್ಟಿರ ಅವಿರೋಧ ಆಯ್ಕೆ— ದ ಕ. ಜಿಲ್ಲೆಯಿಂದ ಲೋಕ ಸಭಾ ಮತ್ತು ವಿಧಾನ ಸಭೆಗಳಿಗೆ ಸಲ್ಲಿಸಲಾದ ನಾಮಪತ್ರಗಳ ಪರಿಶೀಲನೆಯು ತಾ. 18ರಲ್ಲು ಅಯಾಯ ದಿನಿಜನುಗಳಲ್ಲಿ ನಡೆಯಿತು. ಪೈಕೊ ದೂರು ಮತದಾರ ಕ್ಷೇತ್ರಕ್ಕೆ ಕಾಂಗ್ರೆಸ್ ಪಕ್ಷದ ಶ್ರೀ ವೈ. ಮಂಜಯ್ಯ ಸೆಟ್ಟಿರಿಗೆ ಶ್ರೀತ ಸ್ಪರ್ಧಿಯಿಲ್ಲದಿದ್ದು ಅವರ ನಾಮಪತ್ರವು ಸಂ ಧಾನವಾದುದರಿಂದ ಆ ಕ್ಷೇತ್ರಕ್ಕೆ ಶ್ರೀ ವೈ. ಮಂಜಯ್ಯ ಸೆಟ್ಟಿರು ಅವಿರೋಧವಾಗಿ ಆಯ್ಕೆ ಗೊಂಡರು. ಇಷ್ಟು ದ. ಕ. ಜಿಲ್ಲೆಯಲ್ಲಿ ಕಾಂ ಗ್ರೆಸ್ ಪಕ್ಷವು ಗಳಿಸಿದ ಪ್ರಥಮ ವಿಜಯ ವಾಗಿದೆ.

ಪ್ರಧಾನಿ ನೆಹರೂರವರು ಇದೇ ತಿಂಗಳ ತಾ. 26ರಂದು ಮಂಗಳೂರಿಗೆ ಬರು ವರೆಂದು ತಿಳಿದುಬರುತ್ತದೆ

ಕ್ಷಯರೋಗಿಗಳ ಪರೀಕ್ಷೆ— ಕಂ ಕನಾಡಿ ಫಾದರ್ ಮುಲ್ಲರ್ಸ್ ಆಸ್ಪತ್ರೆಯಲ್ಲಿ ಕ್ಷಯರೋಗಿಗಳ ಪರೀಕ್ಷೆಯನ್ನು ಡಾ॥ ಪಿ. ವಿಶ್ವೇಶ್ವರಯ್ಯನವರು ನಡೆಸುತ್ತಿದ್ದಾರೆ.

ದ. ಕ. ಜಿಲ್ಲಾ ಸಾರ್ವತ್ರಿಕ ಚುನಾವಣಾ ದಿನಗಳು

ಪುತ್ತೂರು, ಮಡಿಕೇರಿ	25_2_57
ಪಾಣೆಮಂಗಳೂರು, ಬೆಳ್ತಂಗಡಿ	28_2_57
ವೀರರಾಜಪೇಟೆ	1_3_57
ಮಂಗಳೂರು	4_3_57
ಸುರತ್ಕಲ್	6_3_57
ಬ್ರಹ್ಮಾವರ, ಕಾಪು, ಉಡುಪಿ	9_3_57
ಬೈಂದೂರು, ಕುಂದಾಪುರ	12_3_57

— ——

ಕಟಪಾಡಿ— ಕಟಪಾಡಿ ಶ್ರೀ ಪೆಂಚಟ್ಟು ಮಣ ದೇವರ ಭಂಡಾರದ ಆಡಳಿತೆಗೆ ಒಳ ಪಟ್ಟ ಪ್ರಾಂಗಣಾ ಶ್ರೀ ಬ್ರಹ್ಮಲಿಂಗೇಶ್ವರ ದೇವರ ಅಲಾಭೆ ಜಾತ್ರೆಯು ಇದೇ ಬರುವ ಮಾಘ ರು. ೧೪ ಯು ಬುಧವಾರ ತಾ. 13_2_1957 ರಂದು ಜರಗಲ್ಪಡುತ್ತದೆ ಯೆಂದು ತಿಳಿದುಬರುತ್ತದೆ.

ಜನರು ಸುಶಿಕ್ಷಿತರಾದರೆ ಮಾತ್ರ ಯೋಗ್ಯ ಪ್ರತಿನಿಧಿಗಳು ಆರಿಸಿ ಬರುವರು— ತಾ. 8ರಲ್ಲು ಮಿಷನ್ ಹೈಸ್ಕೂಲಿನ ಕಲಾಮಂದಿರದಲ್ಲಿ ಜರಗಿದ ಸನ್ಮಾನಿತ ರಾತ್ರಿ ಶಾಲೆಯ ವಾರ್ಷಿಕೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ, ದ. ಕ. ಜಿಲ್ಲಾ ನ್ಯಾಯಾಧೀಶರಾದ ಶ್ರೀ. ಎಂ. ರಾಧಾಕೃಷ್ಣ ಕಿಣಿಯವರು ತಮ್ಮ ಭಾಷಣದಲ್ಲಿ ಎಲ್ಲ ಮತ ದಾರರೂ ಸುಶಿಕ್ಷಿತರಾಗಿಬ್ಬು, ತಾವು ಆರಿಸಿರಿ ರುವ ಪ್ರತಿನಿಧಿಯ ಯೋಗ್ಯತೆಯನ್ನು ತೂಲನೆ ಮಾಡಿ ನೋಡುವ ಬುದ್ಧಿ ಪಕ್ತಿಯಳ್ಳವರಾಗ ಬೇಕು. ಈ ವಿಷಯದಲ್ಲಿ ಇವರು ಮಾಡುವ ಕೆಲಸ ಪ್ರಶಂಸನೀಯವಾಗಿದೆ ಎಂದರು.

ಭಜೀರು— ತಾ. 30ರಂದು ಇಲ್ಲಿಯ ವನಿತಾ ಸಮಾಜದ ಅಧ್ಯಕ್ಷೆ ಶ್ರೀಮತಿ ಸರಸ್ವತಿ ಅಧಿಕಾರಿಯವರ ನೇತೃತ್ವದಲ್ಲಿ ಗಾಂಧಿಜಿ ಯವರ 9ನೇ ಪುಣ್ಯತಿಥಿಯನ್ನು ಆಚರಿಸಲಾ ಯಿತು. 2 ನಿಮಿಷ ಮೌನ ಪ್ರಾರ್ಥನೆಯೊಡನೆ ವನಿತಾ ಸಮಾಜದ ಸದಸ್ಯೆಯರು ಒಂದು ಘಂಟೆ ಮೌನ ಸೂತ್ರ ಯಜ್ಞವನ್ನು ಮಾಡಿ, ಒಂದೊಂದು ಗುಂಡಿ ನೂಲಿನನ್ನು ಸಮರ್ಪಿಸಿದರು. ಕಾರ್ಯಕರ್ತರಿಗೆ ಕೊಡುವುದಾಗಿ ನಿರ್ಧರಿಸಿದರು. ಭಜನಾನಂತರ ಸಭೆ ಮುಕ್ತಾಯವಾಯಿತು.

ಕುಂದಾಪುರ ಡಿ.ಮು. ಕೋರ್ಟಿನಲ್ಲಿ

O. S. 29/1956 R. E. P. 1140/1956.

ಗಣಪಯ್ಯತುಂಗ —ಅರ್ಜಿದಾರ

1 ಶಂಕರ ಸಪಸ್ರ 2 ರಾಮ ಸಪಸ್ರ 3 ಕೃಷ್ಣ ಸಪಸ್ರ 4 ಶಿವಯ್ಯ ಸಪಸ್ರ.

—ಎದ್ರಿರು

ಉಡ್ಡಿ ತಾಲ್ಲು ಗುಂಡ್ಮಿ ಗ್ರಾಮದಲ್ಲಿರುವ ಪಣಿಯಪ್ಪ ಸಪಸ್ರರ ಮಕ್ಕಳು 1ಂಕರ ಸಪಸ್ರ 1 ರಾಮ ಸಪಸ್ರ 1 ಕೃಷ್ಣ ಸಪಸ್ರ 1 ಶಿವಯ್ಯ ಸಪಸ್ರ ಕೂಡಾ 4 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಸದ್ರಿ ವ್ಯವಹಾರಕ್ಕೆಯಲ್ಲಿ ಎದ್ರಿರ ಪಕ್ಷಿಸ ಸ್ತಿರಾಸ್ತಿಯನ್ನು ಯೇಲಂ ಮಾಡುವ ಬಗ್ಗೆ ಅರ್ಜಿದಾರನು ದಾಖ್ಲು ಮಾಡಿದ ಯೇಲಂ ಇಸ್ತಿಹಾರಿನ ಪರತುಗಳನ್ನು ನಿರ್ಣಯಿಸುವ ಬಗ್ಗೆ ತಾ. 20—2—57ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಇಟ್ಟಿರುತ್ತಾನೆ. ಆ ಕುರಿತು ಯೇನಾದರೂ ಅಕ್ಷೇಪಣೆಗಳಿದ್ದವರೆ ಸದ್ರಿ ದಿವ್ಯ ಮೇಲಿನ ಕೋರ್ಟು ಮುಂದೆ ಹೆಸರು 11ಂಟೆಗೆ ಹಾಜ್ರಾಗಿ ಜ್ಞಾಪಿಸಿರಮಾಡಿಕೊಳ್ಳತ ಕ್ಕದ್ದು. ಎಂಬ ಸಂಗ್ತಿ ಈ ಮೂಲಕ ತಿಳಿಯ ಪಡಿಸಲಿರುತ್ತದೆ.

(Sd) G. V. Aithal,
Advocate for Petitioner.
Date 31—1—57, Coondapoor.

ಕುಂದಾಪುರ ಡಿ.ಮು. ಕೋರ್ಟಿನಲ್ಲಿ

S. C. 960/56.

ಸಂಜೀವ ಸಟ್ಟಿ —ಮಾದಿ

1 ಭಾಗೀರಥಿ ಸೆಟ್ತಿ 2 ಜಲಜಮ್ಮ ಸೆಟ್ತಿ

—ಪ್ರತಿವಾದಿರು

ಬೈಂದೂರು ಸುಬ್ಬಕ್ಕ ಸೆಟ್ತಿರ ಮಕ್ಕಳು

1ನೇ ಪ್ರತಿವಾದಿರು ಕುಂದಾಪುರ ತಾಲ್ಲು ಆನಗೆಳ್ಳಿಗ್ರಾಮ 2ನೇ ಯವಳು ಬಳ್ಳಾರಿ ಗ್ರಾಮದಲ್ಲಿರುತ್ತಾಳೆ. ಸದ್ರಿ ಎರಡನೇ ಪ್ರತಿ ವಾದಿಗೆ ಈ ಮೂಲಕ ತಿಳಿಯಪಡಿಸುವುದೇ ನೆಂದ್ರೆ,

ನೀವು ಕೂಡಾ ಪ್ರತಿವಾದಿರು ಮಾದಿಗೆ ತಾರೀಕು 10—10—1952 ರಲ್ಲಿ ರೂ. 100/ಕ್ಕೆ ಬರಕೊಟ್ಟ ದಿನಾಂಡು ನೋಟಿನ ಆಸಲು ಬಡ್ಡಿ ಬಕ್ಕಿ ವಾದಿಯು ನಿಮ್ಮ ಜೋಲೆ ಮಾಡಿದ ಮೇಲಿನ ದಾನೆಯನ್ನು ತಾ. 9—2—1957ಕ್ಕೆ ತನ್ನಿಗೆ ಇಟ್ಟಿರುತ್ತಾರೆ. ಆ ಕುರಿತು ನಿಮ್ಮಲ್ಲೇನಾದರೂ ಆಕ್ಷೇಪಣೆಯಿದ್ದರೆ ಆ ದಿನಕ ಪೆಗಲು 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಞಾಪಿಸುಮಾಡಿಕೊಳ್ಳತಕ್ಕದ್ದು ಎಂಬಕಂಗ್ತಿ ತಿಳಿಸಿರುತ್ತದೆ.

(By order of the court)
Y. Tejappa Shetty.
Advocate for Plff.
Coondapoor 28—1—57.

ಉಡುಪಿ ಡಿ. ಮು. ಕೋರ್ಟಿನಲ್ಲಿ

S. C. 555/1956.

ಪದ್ಮನಾಭ ನಾಯ್ಕ —ವಾದಿ

ಮತ್ತು

B. ಗಣಪಯ್ಯ ಆಚಾರ್ಯ ಶೇಷಾಚಾರಿ ಮಗ, ಮೈಸೂರು ಸ್ಟೇಟ್ ತೀರ್ಥಹಳ್ಳಿ ತಾ ಹೊಸಳ್ಳಿ ಅಗುಂಬೆ ಕಸ್ಬಾ —ಪ್ರತಿವಾದಿ

ಯವರೊಳಗೆ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯ ಪಡಿಸುವುದೇನಂದ್ರೆ! ವಾದಿಗೆ ಪ್ರತಿವಾದಿಯು ತಾ. 6-8-1953ರಲ್ಲು ರೂಪ್ಯಾ 60/-ಕ್ಕೆ ಬರಕೊಟ್ಟ ದಿನಾಂಡು ನೋಟಿನ ಆಸಲು ಬಡ್ಡಿ ಅಪೇಜುಗಳನ್ನು ಬರವಾಡಿಕೊಳ್ಳು ವಿರಿ ವಾದಿಯು ನೂಡಿದ ಮೇಲ್ಕಂಡ ದಾವೆ ಯು ತಾರೀಕು 14—2—1957ಕ್ಕೆ ಇಟ್ಟಿ ರುತ್ತದೆ. ಉಪಾಹರಿಸುವಂಥದ್ದಿದ್ದರೆ ಆ ದಿವಸ ಪೂರ್ವಾಹ್ನ 10 ಘಂಟೆಗೆ ಸದ್ರಿ ಕೋ ರ್ಟಿಗಮುಂದೆ ಹಾಜ್ರಾಗಿ ಜ್ಞಾಪಿಸಿರುವಾದಿಕೊ ಳ್ಳಬಹುದು. ತಪ್ಪಿದ್ರೆ ನಿಮ್ಮ ಗೈರು ಹಾಜರಿ ಯಿಂದ್ಲೆ ಏಕಪಕ್ಷೀಯವಾಗಿ ತೀರ್ಮಾನಿಸಲ್ಪಡು ವುದು.

K. Ramakrishna Rao.
Vakil for Plff.
Date 1—2—1957.

ರಾಮತೀರ್ಥ
ಬ್ರಾಹ್ಮೀ ತೈಲ

ಸೈಕ್ಲಿಂಗ್ ನಂ ೧] [ಮೆಡಿಕೇಟಿಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:
ADVERTISEMENT MANAGER,
'NAVAYUGA'
Post Box No. 22, UDIPI, S. K.

ಕರ ಕೌಶಲ

(೩ನೇ ಪುಟದಿಂದ)

ಅಂತರಿಕ ದೋಷಗಳೆಂದು ಕಜ್ಜಾರು ಕರೆಯುತ್ತಾರೆ.

ಕಾರ್ಖಾನೆಗಳು

ಕಾರ್ಖಾನೆಯಲ್ಲಿ ಉತ್ಪತ್ತಿಯಾಗುವ ವಸ್ತುಗಳಿಗೆ ತಕ್ಕುದಾದ ಮತ್ತು ರಖಂ ವ್ಯಾಪಾರಿಗಳು ಸಿಗುವುದು ಸ್ವಾಭಾವಿಕ. ಆದರೆ ಗುಡಿ ಕೈಗಾರಿಕೆಗಳಿಗೆ ಅಂತಹ ಸೌಲಭ್ಯವಿಲ್ಲ. ಪಾಶ್ಚಿಮಾತ್ಯ ಔದ್ಯೋಗಿಕ ಕ್ರಾಂತಿಯ ಗಾಳಿಯ ತಿಕ್ಕೆಯಲ್ಲಿ ಭಾರತ ಹೊರಗುಳಿಯಲು ಸಾಧ್ಯವಾಗಲಿಲ್ಲವೆಂದು ಈ ಹಿಂದೆಯೆ ಹೇಳಿದೆಯಷ್ಟೇ? ಇದರಿಂದ ಕಾರ್ಖಾನೆಗಳಲ್ಲಿ ಉತ್ಪತ್ತಿಯು ಹೆಚ್ಚಾಗಿ ವ್ಯಾಪಾರ ಕ್ಷೇತ್ರ ದೊಡ್ಡದಾಯಿತು. ಉತ್ಪತ್ತಿ ಹೆಚ್ಚಾದಾಗ ಬೆಲೆ ಇಳಿವುದು ಸಾಧಾರಣವಾಗಿರುವುದು ಸ್ವಾಭಾವಿಕ. ಬೆಲೆ ಇಳಿಮುಖವಾದಾಗ ಕೊಳ್ಳುವ ಸಂಖ್ಯೆ ಬೆಳೆಯುತ್ತದೆ. ಎಂತಲೇ ಅಗ್ಗ ಬೆಲೆಯ ಸಾಮಾನುಗಳು ರಾತ್ರಿ-ರಾತ್ರಿಯಾಗಿ ಕಾರ್ಖಾನೆಗಳಿಂದ ಹೊರಬರಲು ಸಾಧ್ಯವಿದೆ. ಆ ಸಾಮಾನುಗಳಿಗೆ ಒಂದು ರೀತಿಯ ಸೌಂದರ್ಯವೂ, ನಯವೂ ಇದ್ದುದರಿಂದ ಜನ ಅವುಗಳಿಗೆ ನೂರು ಹೋಯಿತು. ಈ ಪ್ರೋತ್ಸಾಹ ದಪ್ಪಗಿನ, ಹೊರಗಿನ ದೇಶೀಯ ಗುಡಿ ಕೈಗಾರಿಕೆಗಳಿಗೆ ಸಿಗದೆ ಹೋಯಿತು.

ಗುಡಿ ಕೈಗಾರಿಕೆಗಳ ಅಧಃಪತನಕ್ಕೆ ಕಾರಣೀಭೂತವಾದ ಆಂತರಿಕ ದೋಷಗಳನ್ನು ಎಣಿಸುತ್ತಾ ಹೋಗುವಾಗ ನೆಮಗಿನ್ನೂ ಹೆಚ್ಚಿನ ವಿಷಯಗಳು ತಿಳಿಯುತ್ತವೆ. ಕಾರ್ಖಾನೆಯ ಮಾಲುಗಳಿಗೆ ವಿಶ್ವದಾದ್ಯಂತ ಸಂತೆ ದೊರೆತು, ದರ ಪರಿಸ್ಥಿತಿಯಿಂದಾಗಿ ಗಿರಾಕಿಗಳೂ ಅಧಿಕ ಸಂಖ್ಯೆಯಲ್ಲಿ ಸಿಕ್ಕಿದುದರಿಂದ ಬಂಡವಲದಾರರಿಗೆ ಧೈರ್ಯವೂ ಬಂತು. ಅವರು ತೊಡಗಿಸಿದ ಅಸಲಿಗೆ ಐದು ವರ್ಷಗಳಲ್ಲಿ ೩ನೇ ೩ ಭಾಗದಷ್ಟು ಲಾಭ ದೊರೆಯುವಂತಾಯಿತು. ೫೫ ವರ್ಷಗಳಲ್ಲಿ ಇವರ ತೊಡಗಿಸಿದ ಹಣದ ಬಡ್ಡಿ ಅಸಲಿಗೆ ಮಿಗುವಂತಾಯಿತು. ಇಂತಹ ಪರಿಸ್ಥಿತಿಯಲ್ಲಿ ಗುಡಿ ಕೈಗಾರಿಕೆಗಳಿಗೆ ಸಾಕಷ್ಟು ಆರ್ಥಿಕ ಸಹಾಯ ಸಿಗದೆ ಹೋಯಿತು. ಆ ಕೈಗಾರಿಕೆಗಳಲ್ಲಿ ಹಣ ತೊಡಗಿಸಲು ಬಂಡವಲಗಾರರಿಗೆ ಹೆದರಿಕೆಯಾಯಿತು. ಕಾರಣ ಉತ್ಪತ್ತಿಸಿದ ಸಾಮಗ್ರಿಗೆ ಗಿರಾಕಿಗಳೇ ದೊರೆಯದುದೂ, ವಿಶ್ವದ ಮಾರುಕಟ್ಟೆಯಲ್ಲಿ ಆ ಸಾಮಗ್ರಿಗಳಿಗೆ ಸ್ಥಾನವು ದೊರೆಯದೆ ಹೋದುದೂ ಹೆದರಿಕೆಯನ್ನು ಹುಟ್ಟಿಸಿದವು. ಕಾರ್ಖಾನೆಯ ಮಾಲುಗಳು ಮೇಲಿಂದ ಮೇಲೆ ಈ ಗುಡಿ ಕೈಗಾರಿಕೆಯ ಸಾಮಾನುಗಳನ್ನು ನಯ-ನಾಜೂಕಿನಲ್ಲಿ, ಬಾಳಿಕೆಯಲ್ಲೂ ಸ್ಪರ್ಧೆಗೆ ಕರೆದುವು ಗುಡಿ ಕೈಗಾರಿಕೆಯ ಉತ್ಪತ್ತಿಗೆ ಕಾರ್ಖಾನೆಯ ಉತ್ಪತ್ತಿಯೊಡನೆಸ್ಪರ್ಧಿಸಲು ಶಕ್ತಿ ಸಾಲದೇ ಹೋಯಿತು.

ಲಾಭದ ಪ್ರಶ್ನೆ

ಬಂಡವಲಗಾರರು ಹೆಚ್ಚಿನ ಲಾಭದ ಆಶೆಯನ್ನು ಇಟ್ಟುಕೊಂಡುದರಿಂದ ಕಾರ್ಖಾನೆಗಳಿಗೆ ಹೆಚ್ಚೆಚ್ಚು ಹಣವನ್ನು ಸುರಿಯಲು ಪ್ರಾರಂಭಿಸಿದರು. ಇದರಿಂದ ೫೫ ವರ್ಷಗಳಲ್ಲಿ ತೊಡಗಿಸಿದ ಅಸಲಿನ ಸ್ಥೀ ಲಾಭವು ಅವರಿಗೆ ಸಿಗುತ್ತಿತ್ತು. ಗುಡಿ ಕೈಗಾರಿಕೆಗಳಿಗೆ ಹಣ ಹಾಕುವ ಶ್ರೀಮಂತರ ಅಭಾವದಿಂದಾಗಿ ಆ ವೃತ್ತಿಯಲ್ಲೇ ಜೀವನ ಸಾಗಿಸುವ ಮಂದಿ ಬಂಡವಲ ಕ್ಕಾಗಿ ಬೇರೆ ಶ್ರೀಮಂತರ ಮುಖವನ್ನು ನೋಡ ಬೇಕಾಯಿತು. ಅವರಿಗೂ ಕಾರ್ಖಾನೆ ಕೊಡುವ ಬಡ್ಡಿಯ ದುಡ್ಡಿನ ರುಚಿ ಈ ಮೊದಲೇಗೇ ಸಿಕ್ಕಿದ್ದರಿಂದ, ಒಂದು ವೇಳೆ ಹಣ ಕೊಡುತ್ತೇವೆಂದು ಒಪ್ಪಿದರೂ ಹೆಚ್ಚಿನ ಬಡ್ಡಿಯನ್ನು ಕೇಳಲು ಪ್ರಾರಂಭಿಸಿದರು.

ಇಷ್ಟೇ ಅಲ್ಲದೆ ಗುಡಿಕೈಗಾರಿಕೆಯ ಸಾಮಾನುಗಳು ವೈಜ್ಞಾನಿಕವಲ್ಲದ ರೀತಿಯಲ್ಲೂ, ಜಾಣ್ಮೆಯ ಆಧಾರ ತೋರಿ ಬಂದುದರಿಂದಲೂ ಗಿರಾಕಿಗಳನ್ನು ಆಕರ್ಷಿಸದೆ ಹೋಯಿತು. ಇದೇ ಸಮಯದಲ್ಲಿ ಪಾಶ್ಚಾತ್ಯ ವಸ್ತೋತ್ಪತ್ತಿಯ ಬೆಡಗು-ಬಿನ್ನಾಣ ಜೀವನದ ಮೇಲೆ ಥಳಿ ನಡೆಸಿದುದರಿಂದ ಅಂಧ ಶಿಕ್ಷಣವುದೊರೆಯುತ್ತಿದ್ದುದರಿಂದ ದೇಶ ಪ್ರೇಮವುಮಾಯವಾಗುತ್ತಾ ಹೋಗುವುದರ ಜೊತೆಗೆ ದೇಶೀಯ ಮಾಲುಗಳ ಮೇಲೂ ಮಮತೆ ಕಡಿಮೆಯಾಯಿತು.

ಮೇಲೆ ಹೇಳಿದುದನ್ನೆಲ್ಲಾ ಆಂತರಿಕ ದೋಷಗಳೆಂದು ಪರಿಗಣಿಸಿದರೆ ಬಾಹ್ಯ ದೋಷಗಳು ಬೇರೆಯೇ ಇವೆ.

ರಾಹು—ಶುಕ್ರ

ಈ ದಿನೆಯಲ್ಲಿದ್ದ ನಮ್ಮ ಗುಡಿ ಕೈಗಾರಿಕೆಯ ಗೃಹಮಾನಕ್ಕೆ ಮತ್ತೊಂದು ರೀತಿಯಲ್ಲಿ ರಾಹು-ಶುಕ್ರರು ಎರಗಿದರು. "ಆತ್ಮ-ಸೊನೆಯರ ಜಗಳದಲ್ಲಿ ಮಗುನ್ನಣ್ಣಗೆಯಾಯಿತು" ಎಂದು ಹೇಳುವ ಗಾದೆಗೆ ಸರಿಯಾಗಿ ದೇಶೀಯ ಕಾರ್ಖಾನೆಗಳೊಡನೆ ವಿದೇಶೀಯ ಕಾರ್ಖಾನೆಗಳು ಸ್ಪರ್ಧೆ ಹೂಡಿದವು. ಇಲ್ಲಿಗೆ ಅಮದಾಗಿ ಬರುವ ವಿದೇಶೀಯ ಕಾರ್ಖಾನೆಯ ಮಾಲುಗಳು ಅಗ್ಗ ಬೆಲೆಗೆ ದೊರಕುವಂತಾಯಿತು. ಆಗ ಭಾರತ ಬ್ರಿಟಿಷರ ಅಧೀನದಲ್ಲಿದ್ದುದರಿಂದ ವಿದೇಶದ ಮಾಲುಗಳಿಗೆ ಒಳ್ಳೆಯ ಮಾರುಕಟ್ಟೆಯು ಭಾರತದಲ್ಲಿ ದೊರೆಯಲೂ ಅನುಕೂಲವಾಯಿತು. ಕನ್ಯಾಕುಮಾರಿಯಿಂದ ಮುಂಬಾಯಿ ವರೆಗೆ, ಅರಬೀ ಸಮುದ್ರದ ಪಶ್ಚಿಮ ಕರಾವಳಿಯುದ್ದಕ್ಕೂ, ಕಲ್ಕತ್ತ, ಡಿಲ್ಲಿ, ಬೆಂಗಳೂರು:—ಮೊದಲಾದ ಭಾರತದ ಒಳನಾಡ ಪ್ರಮುಖ ಕೇಂದ್ರಗಳಲ್ಲೂ ವಿದೇಶೀಯ ಸ್ವಾರ್ಥಿಗಳ ಸರಕು ಪುಷ್ಕಳವಾಗಿ ದೊರೆಯಲಾರಂಭಿಸಿದವು. ಭ್ರಾಂತದ ಕಾರ್ಖಾನೆಗಳಾದರೂ ಕಚ್ಚಿನ ಕಚ್ಚಾ ಮಾಲುಗಳಿಗೆ ಹೊರ ದೇಶದ ಮುಖವನ್ನೇ ನೋಡಬೇಕಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ದೇಶೀಯ ಕಾರ್ಖಾನೆಗಳ ಮೇಲೆ ದುಡ್ಡು ಸುರಿದ ನಮ್ಮ ಶ್ರೀಮಂತರು ಮತ್ತೂ ಹೆಚ್ಚು ಹಣ ಸುರಿದು, ಕೆಲಸದ ಸಮಯವನ್ನು ೭ ಗಂಟೆಯಿಂದ ೯ಕ್ಕೇರಿಸಿ, ೮ ವರ್ಷದ ಹುಡುಗರನ್ನು ಕೂಡಾ ಕೆಲಸಕ್ಕೆ ಸೇರಿಸಿಕೊಂಡು ಉತ್ಪತ್ತಿಯನ್ನು ಮೊದಲಿಗಿಂತ ಇಮ್ಮಡಿಯಷ್ಟು ಹೆಚ್ಚು ಗೊಳಿಸಿ, ವಿದೇಶೀಯ ಅಗ್ಗದ ಮಾಲುಗ ಕೊಡನೆ ತೀವ್ರ ಸ್ಪರ್ಧೆಯನ್ನು ಹೂಡಿ ನರು. ಈ ದೇಶೀಯ ಮತ್ತು ವಿದೇಶೀಯ ಸ್ಪರ್ಧೆಗಳಿಂದಾಗಿ ಮೊದಲೇ ತುಕ್ಕು ಹಿಡಿಯಲು ತಯಾರಾಗಿದ್ದ ಗುಡಿ ಕೈಗಾರಿಕೆಗೆ ಸಂಪೂರ್ಣವಾಗಿ ತುಕ್ಕು ಹಿಡಿಯಿತು. ಮೊದಲೇ ಕುಂಟುತ್ತಾ ನಡೆದ ಅದರ ಬೆಳವಣಿಗೆಗೆ ಕೊಡಲಿ ಏಟು ಬಿತ್ತು. ಗುಡಿ ಕೈಗಾರಿಕೆಗೆ ಈ ಸ್ಪರ್ಧೆಗಳೊಂದಿಗೆ ಸ್ಪರ್ಧಿಸಲು ಸಾಧ್ಯವಾಗಲಿಲ್ಲ.

ಒಂದು ಆಣಿಗೆ ದೊರಕುವ ಸಣ್ಣ ಸುಕ್ಕಳ ಪೀಪಿಯೋದು ಭಾರತದಲ್ಲೇ ತಯಾರಾಗಿ ಸುಂಕವಿಲ್ಲದೆ ಜಿಲ್ಲರೆಯಾಗಿ ಮಾರಲ್ಪಡುವಾಗ ರಖಂ ವ್ಯಾಪಾರದಲ್ಲಿ ಮೂರು ಪಾವಾಣೆಗೋ ಆಧಾ ಆಣೆಗೋ ಆಂಗಡಿಯಲ್ಲಿ ದೊರೆಯುತ್ತಿತ್ತು. ಅದೇ ಪೀಪಿ, ಈ ಸ್ಪರ್ಧೆಯ ಮೇಲಾಟದಿಂದಾಗಿ ನಿದೇಶದಿಂದ ಆಮದಾಗಿ ಇಲ್ಲಿಯ ಆಂಗಡಿಗಳಲ್ಲಿ ಜಿಲ್ಲರೆಯಾಗಿ ಮೂರು ಪಾವಾಣೆಗೋ, ರಖಂ ಆಗಿ ಒಂದು ಪಾವಾಣೆಗೋ ಮಾರಲ್ಪಡುವಾಗ ಗುಡಿಕೈಗಾರಿಕೆಯ ಒಂದು ಪೀಪಿ ಅದರ ಮೂಲ ಬೆಲೆಯೇ ೫ ಪಾವಾಣೆಯಾಗಿರುವಾಗ ಆಂಗಡಿಗಳಲ್ಲಿ ಗಿರಾಕಿಗಳು ಯಾವುದಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಬಲ್ಲರು?

ಉದಾಹರಣೆ

ಹತ್ತಿಯ ಬಟ್ಟೆಗಳನ್ನು ಉತ್ಪತ್ತಿ ಮಾಡುವ ಕಾರ್ಖಾನೆಗಳು ಸಿಂಡಿಕೇಟ್ ರೀತಿಯಲ್ಲಿ ಗುಂಪುಗಳಾಗಿ ಮಾರುವ ವತ್ತು ಕೊಳ್ಳುವ ಹಕ್ಕನ್ನು ಇಟ್ಟುಕೊಂಡು, ಆ ಸಿಂಡಿಕೇಟಿನ ಪರಿಮಿತಿಯೊಳಗೆ ಬರುವ ಎಲ್ಲಾ ಕಾರ್ಖಾನೆಗಳಿಗೆ ಬೇಕಾದಷ್ಟು ಕಚ್ಚಾ ಮಾಲುಗಳನ್ನು ಖರೀದಿ ಮಾಡುತ್ತವೆಯೆಂದು ಇಟ್ಟುಕೊಳ್ಳೋಣ. ಆಅನುಕೂಲ ಗುಡಿಕೈಗಾರಿಕೆಗಳಿಗೆ ಇಲ್ಲ ಏಕೆಂದರೆ ಕಾರ್ಖಾನೆಯಲ್ಲಿ ತಯಾರಾಗುವ ಎಲ್ಲಾ ಸಾಮಾನುಗಳಿಗೂ ಒಂದೇ ತರದ ಆಕಾರ ಇರುವುದೂ ಮತ್ತು ಒಂದು ಬಟ್ಟೆ ಗಿರಣಿಯಲ್ಲಿ ತಯಾರಾಗುವ ಸೀರೆಗಳಿಗೆ ಒಂದೇ ತರದ ಡಿಸೈನ್ ಇರುವುದೂ ಸ್ವಾಭಾವಿಕವಾಗಿದೆ. ಈ ಸ್ವಾಭಾವಿಕತೆ ಒಬ್ಬೊಬ್ಬರು ಒಂದೊಂದುವಿಧಾನದಲ್ಲಿ ತಯಾರಿಸುವ ಗುಡಿ ಕೈಗಾರಿಕೆಯ ಸಾಮಾನಿಗೆ ಅಥವಾ ಸರಕಿಗೆ ಬರಲು ಸಾಧ್ಯವಿಲ್ಲ. ಅಷ್ಟೇ ಅಲ್ಲದೆ ಕಚ್ಚಾ ಮಾಲುಗಳನ್ನು ಪಡೆದುಕೊಳ್ಳುವುದಾಗಲೀ ಅಥವಾ ಸಿಂಡಿಕೇಟ್ ಸಂಸ್ಥೆಯವರು ಕೂಡಿಟ್ಟು ಮಾರುವಂತೆ ಮಾರುವುದಾಗಲೀ ಗುಡಿ ಕೈಗಾರಿಕೆಯನ್ನವಲಂಬಿಸಿಕೊಂಡಿರುವ ಸಾಮಾನ್ಯ ಜನಕ್ಕೆ ಸಾಧ್ಯವಾಗುವಂತಹುದಲ್ಲ. ಅಥವಾ ಸರ್ವತಾಕಾರದಲ್ಲಿರುವ ಗುಡಿ ಕೈಗಾರಿಕೆಗೆ ಸ್ಪರ್ಧಿಸಲು ಸಾಧ್ಯವಾಗುವಂತಹುದೂ ಅಲ್ಲ.

ಆದರೂ ನಾವು ಆಶಾವಾದಿಗಳು. ಹಿಂದೊಮ್ಮೆ ಭಾರತದ ಭವಿತವ್ಯನನ್ನು—ಭಾರತದ ಭವ್ಯ ಭವಿಷತ್ತನ್ನು ಎತ್ತಿ ಮೆರೆಸಿದ ನಮ್ಮ ಗುಡಿಕೈಗಾರಿಕೆ ಕುರಿತಾಗಿ ಆಡುವುದು ಈಗ ಹಳ್ಳಿಯ ಮಾತಾಗಿರಬಹುದು. ಈ ಲೇಖನದಲ್ಲಿ ನಮ್ಮ ಗುಡಿ ಕೈಗಾರಿಕೆ—ಅದರ ಸತ್ಯದ ಗತಿ, ಮುಂದಿನ ಪ್ರಗತಿಯ ಕುರಿತು ಇಷ್ಟು ಹೊತ್ತು ವಿವರಿಸಲಾಯಿತು. ಈಗ ಅದರ ಪ್ರಗತಿ ಹೇಗೆಂದು ಸ್ವಲ್ಪ ವಿವೇಚಿಸಬೇಕಾಗಿದೆ.

ಕರೆಯುವ ದನ ಬರಡಾದೊಡನೆ ಅದನ್ನು ಕಟುಕನಿಗೊಪ್ಪಿಸುವುದಿಲ್ಲ ತನ್ನ ತಾರುಣ್ಯದಲ್ಲಿ ಅದು ನಮಗೆ ಹಾಲು ಕೊಟ್ಟಿತ್ತು. ಈಗ ನಾವೇ ಅದಕ್ಕೆ ಬೇಕಷ್ಟು ಮೇವನ್ನು ಕೊಡದಿದ್ದುದರಿಂದ ಅದು ಹಾಲು ಕೊಡುವುದೂ ನಿಲ್ಲಿಸಿತು ನಾವು ಬೇರೆಯ ವ್ಯಾಮೋಹಕ್ಕೊಳಗಾಗಿ ಅದಕ್ಕೆ ಕೊಡಬೇಕಾಗಿದ್ದ ಮೇವನ್ನು ಕೊಡದೆ ಕೋದೆವು. ನಮ್ಮ ತಪ್ಪಿಗಾಗಿ ದನವನ್ನು ದೂರುವುದಲ್ಲ. ಈ ಮಾತು ಬರಡು ದನವಾಗಿರುವ ಗುಡಿ ಕೈಗಾರಿಕೆಗೂ ಅನ್ವಯಿಸುತ್ತದೆ. ಒಳ್ಳೆಯ ಮೇವನ್ನು ಕೊಟ್ಟು ಆ ಬರುದನ ಹಾಲು ಕೊಡುಮಂತೆ ಮಾಡುವ ಹೊಣೆ ನಮ್ಮ ಪಾಲಿಗಿದೆ.

ತತ್ವಾದರ್ಶ

ಹಾಗಾದರೆ ನಾವು ಗಾಂಧೀಜಿ ತತ್ವಾದರ್ಶವನ್ನು ಮರೆತು ಬಿಟ್ಟೆವೇ? ಸಾಧ್ಯವಿಲ್ಲ. ಅವರು ನಮಗೆ ಹಳ್ಳಿಯನ್ನು ನೋಡಲು ಹೇಳಿದ್ದಾರೆ. ಅಲ್ಲಿಯ ಜೀವನವನ್ನು ನೋಡಲು ಹೇಳಿದ್ದಾರೆ. ಪ್ರಕೃತಿಯನ್ನು ನೋಡಲು ಹೇಳಿದ್ದಾರೆ. ಆ ಹಳ್ಳಿಯ ಜೀವಾಳ ಈ ಕೈಗಾರಿಕೆ—ಅದೇ ಗುಡಿ ಕೈಗಾರಿಕೆ.

ಭಾರತ ದೇಶ ಹಳ್ಳಿಗಳ ದೇಶ. ನಾವು ಮಾಡಬೇಕಾಗಿದ್ದು ಮಾಡದೆ ಇರುವ ದೊಡ್ಡ ಕೆಲಸ ಇದೇ—ಗುಡಿಕೈಗಾರಿಕೆಗೆ ಪ್ರೋತ್ಸಾಹ ಕೊಡದಿರುವುದೇ ಆಗಿದೆ. ಗುಡಿಕೈಗಾರಿಕೆ ಜೀರ್ಣಾವಸ್ಥೆಯಲ್ಲಿದೆಯೆಂದು ಬೊಟ್ಟಿಟ್ಟು ತೋರಿಸುತ್ತಾ ಅದನ್ನು ಮೇಲೆತ್ತಲು ಸಂಕಲ್ಪವೇ ಬರಬೇಕೆಂದು ಆಗ್ರಹಪಟ್ಟು, ಆ ಸಮಯವನ್ನು ಕಾಯುತ್ತಾ ಕುಳಿತುಕೊಳ್ಳುವುದು ಸರಿಯಲ್ಲ. ಸರಕಾರ ಅದು ಮಾಡುವ ಕೆಲಸವನ್ನು ಮಾಡಿಯೇ ಬಿಡುತ್ತದೆ. ಆದರೆ ನಾವು ನಮ್ಮ ಕೆಲಸವನ್ನು ಮಾಡಬೇಕು.

ಬಂಡವಲಗಾರರು ಇನ್ನಾದರೂ ಕಣ್ಣಿತೆರೆದರೆ ಜೀರ್ಣಾವಸ್ಥೆಯಲ್ಲಿರುವ ನಮ್ಮ ಗುಡಿಕೈಗಾರಿಕೆ ಮೇಲೆ ಬರಲು ಸಾಧ್ಯವಿದೆ. ಆಗ ಗುಡಿಕೈಗಾರಿಕೆಯನ್ನು ಮೇಲೆತ್ತುವುದು ರಾಜಕೀಯ ಪ್ರಶ್ನೆಯಾಗಿಲಾರದು. ರಾಷ್ಟ್ರದ ಸಮಸ್ಯೆಯೂ ಆಗಲಾರದು.

ನಾವೀಗ ಪ್ರಜಾಕಂಠ್ರರು. ನಮ್ಮ ಗುಡಿ ಕೈಗಾರಿಕೆ ಈಗ ಭಾರತದ ಮಾನಕಟ್ಟೆಗೆ ಒಮ್ಮಿಂದೊಮ್ಮೆಗೆ ಬರುವುದಾವಲ್ಲಿ ದೇಶ ಪ್ರೇಮವನ್ನು ಗಿರಾಕಿಗಳಲ್ಲಿ ಅದು ತಾನಾಗಿಯೇ ಹುಟ್ಟಿಬಿಳುವುದು. ಆದರೆ ಸರಕಾರ ದೊಂದಿಗೆ ದೊಡ್ಡ ಳ್ಳವರು ನುಂದೆ ಬಂದರೆ ಮಾತ್ರ ಸಾಧ್ಯ. ಅವರು ನುನಸ್ಸು ಮಾಡಲಾರರೇ?

—ಶ್ರೀ ನಿ. ನಾರಾಯಣ ಬಲ್ಲಾಳ

98 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯಂಗಾರ್‌ವರ ರತ್ನತ್ರಯಗಳು

ಟ್ರೇಡ್ ಮಾರ್ಕ್

ಪಂ|| A. R. ಅಯ್ಯಂಗಾರ್

ಸಂತಾನ ಸಿಂಧೂರ (ಸ್ತ್ರೀಯರಿಗೆ: ಪ್ಯಾಕೆಟ್) | ಮದನ ವಿಲಾಸ (ಪುರುಷರಿಗೆ: ಗುಳಿಗೆ)

ಈ ಭಸ್ಮವು ಬಹುವಿಧ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನನಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ವೀರ್ಯಾಣುಗಳನ್ನೆ ವೃದ್ಧಿಸಿ, ಸಹಾಂಕಕ್ತಿಯನ್ನು ನಾಮಾವಶೇಷ ಮಾಡುತ್ತವೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ ತಾಯ್ತಂದೆಗಳಾಗಿದ್ದಾರೆ.

ಹೊಳ ಕ್ಕಾಟಲ್ಲಾಗು, ಔಷಧದ ಬೆಲೆ ಇತ್ಯಾದಿಗಳಿಗೆ 3 ಆಣೆ ಸ್ಟಾಂಪು ಕಳಿಸಿರಿ

ಎ. ರಾಮಸ್ವಾಮಿ ಅಯ್ಯಂಗಾರ್ ಸನ್ಸ್ & ಕಂ., (ನೆ. ಯು.)

628 ಸಂತಾನ ಸಿಂಧೂರ ಸದನ (ಪೋಸ್ಟ್ ಬೇಟ್ 9) ಮೈಸೂರು S. I.

ಶ್ರವಣಬೆಳ್ಗೊಳ ಶ್ರೀಕ್ಷೇತ್ರ

(೨ನೇ ಪುಟದಿಂದ)

ಜನತೆಯ ಆಕರ್ಷಣೆಯ ಹಾಗೂ ಸ್ಥಿರವಾದ ಬಾಹುಬಲಿಯ ಕಲ್ಪನೆಗೆ ಪಂಪಕವಿ ನಾಲಗೆಯಾಗಿ ನಿಂತ. ಆ ಮಹಾಕವಿ ಚಿತ್ರಿಸಿದ ಬಾಹುಬಲಿಯೇ ಕನ್ನಡಿಗರ ಹೃದಯಾಂತರಾಳದ ಬಾಬು ಬಲಿಯಾಗಿದ್ದಾನೆ" ಈ ಬಾಹು ಬಲಿಯೇ ಗೋಮಟೇಶ್ವರ. ಬಾಹು ಬಲಿಯು ಗೋಮಟೇಶ್ವರನಾದುದು ಹೇಗೆಂಬುದು ಬಿಡಿಸಲಾರದ ಸಮಸ್ಯೆ.

ಶ್ರೀ ಮಂಜೇಶ್ವರ ಗೋವಿಂದ ಪೈಗಳ ಅಭಿಪ್ರಾಯದಂತೆ ಗೋಮಟ ಎಂಬುದು "ಮುನ್ಮಥ" ಎಂಬುದರಿಂದ ಬಂದಿರಬೇಕು. ಪ್ರೊ। ತೀ. ನಂ. ಶ್ರೀ ರಂಗಯ್ಯನವರ ಅಭಿಪ್ರಾಯವೇ ಬೇರೆ ಶ್ರವಣ ಬೆಳಗೊಳದಲ್ಲಿ ಈ ಗೊಮಟೇಶ್ವರನ ವಿಗ್ರಹವನ್ನು ಸ್ಥಾಪಿಸಿದ ಚಾವುಂಡರಾಯನಿಗೆ "ಗೊಮ್ಮಟ" ನೆಂಬ ಹೆಸರಿದ್ದಿತಂತೆ. ಈತನ ಇಷ್ಟದೇವತೆಯಾದ ಬಾಹುಬಲಿಗೆ ಗೋಮಟೇಶ್ವರ ಎಂಬ ಹೆಸರು ಬಂದಿರಬೇಕು. ಎನ್ನುತ್ತಾರೆ. ಶ್ರೀ ತೀ. ನಂ. ಶ್ರೀ ಕಂಠಯ್ಯ. ಶ್ರವಣ ಬೆಳಗೊಳದ ಗೋಮಟೇಶ್ವರ ವಿಗ್ರಹ ಎತ್ತರದಲ್ಲೂ ಮತ ಭೇದಗಳನೆ. ಸರ್. ಆರ್ಥರ್ ವಲ್ಲೆಸ್ಲಿಯವರು ೬೦ ಅಡಿ ೩ ಇಂಚುಗಳೆಂದೂ, ಮಿ। ಚಾರಿಂಗ್ ಸಾಹೇಬರು ೫೭ ಅಡಿಗಳೆಂದೂ ಅಭಿಪ್ರಾಯಪಟ್ಟಿದ್ದಾರೆ. ಕ್ರಿ. ಶ. ೧೯೨೧ರಲ್ಲಿ ಶ್ರವಣ ಬೆಳಗೊಳದಲ್ಲಿ ಜರಗಿದ ಗೋಮಟೇಶ್ವರ ಮಹಾಮಸ್ತಕಾಭಿಷೇಕದ ಸುಸಂದರ್ಭದಲ್ಲಿ ಸರಕಾರಿ ಅಧಿಕಾರಿಗಳು ವಿಗ್ರಹದ ಎತ್ತರವನ್ನು ಅಳೆದು ೫೭ ಅಡಿ ೬ ಇಂಚುಗಳೆಂದು ನಿರ್ಧರಿಸಿದ್ದಾರೆ. ಆದರೆ ಜನ ಜನಿತವಾಗಿರುವಂತೆ ಈ ವಿಗ್ರಹದ ಎತ್ತರ ೫೭ ಅಡಿ ೩ ಇಂಚುಗಳು. ಈ ವಿಗ್ರಹವು ಕಮಲದ ಮಧ್ಯೆ ಕರ್ಣಿಕೆಯಲ್ಲಿ ಪ್ರತಿಷ್ಠಿತವಾಗಿದೆ. ಬಾಹುಬಲಿಯು ಕೆಥೆಯಲ್ಲಿ ಈ ಮೊದಲೇ ತಿಳಿಸಿರುವಂತೆ ಧ್ಯಾನಾಸಕ್ತನಾಗಿದ್ದಾಗ ಬೆಳೆದು ಸುತ್ತಿಕೊಂಡ ಬಳ್ಳಿಗಳು, ಹುತ್ತಗಳು ಹರಿದಾಡುತ್ತಿರುವ ಹಾವುಗಳನ್ನು ಕನ್ನಡದ ಶಿಲ್ಪಿ ಚಿನ್ನಾಗಿಯೇ ಕೆತ್ತಿದ್ದಾನೆ. ಶ್ರವಣ ಬೆಳಗೊಳದಲ್ಲಿ ಸಿಕ್ಕಿರುವ ನೂರಾರು ಶಿಲಾಲೇಖಗಳು ಅಲ್ಲಿಯ ಇತಿಹಾಸವನ್ನು ರೂಪಿಸಲು ನೆರವಾಗುತ್ತವೆ. ಇಂಥಕ ಒಂದು ಲೇಖನದಿಂದ ೬೦೦ ನೇ ವಿಭವ ಸಂವತ್ಸರದ ಜೈತ್ರ ಶುದ್ಧ ಪಂಚಮಿ ಭಾನುವಾರ ಕುಂಭಲಗ್ನ ಸೌಭಾಗ್ಯಯೋಗ ಮೃಗಶಿರಾ ನಕ್ಷತ್ರದಲ್ಲಿ ಚಾವುಂಡರಾಯನು ಬೆಳ್ಗೊಳ ನಗರದಲ್ಲಿ ಗೋಮಟೇಶ ಪ್ರತಿಷ್ಠೆಯನ್ನು ಮಾಡಿಸಿದನೆಂದು ತಿಳಿಯುತ್ತದೆ. ಈ ದಿನವನ್ನು ಶ್ರೀ ಮಂಜೇಶ್ವರ ಗೋವಿಂದ ಪೈಗಳು ಕ್ರಿ. ಶ. ೯೮೧ನೇ ಮಾರ್ಚ್ ತಿಂಗಳ ೧೩ನೇ ತಾರೀಕು ಎಂದು ಅಭಿಪ್ರಾಯಪಟ್ಟು ಸಮರ್ಥಿಸಿದ್ದಾರೆ.

ಶ್ರವಣ ಬೆಳಗೊಳದಲ್ಲಿ ಗೋಮಟೇಶ್ವರನ ವಿಗ್ರಹವಿರುವ ಇಂದ್ರಗಿರಿಯು ಎದುರಿಗಿರುವುದೇ 'ಚಂದ್ರಗಿರಿ' ಅಥವಾ ಚಿಕ್ಕ ಬೆಟ್ಟ. ಇದು ಸುಮಾರು ೩೧೦ ಅಡಿಗಳಷ್ಟು ಎತ್ತರವಾಗಿದೆ. ಇಲ್ಲಿಯ ಕೆಲವು ಶಿಲಾ ಲೇಖಗಳಿಂದ ಈ ಬೆಟ್ಟಕ್ಕೆ ತೀರ್ಥಗಿರಿ, ಋಷಿಗಿರಿ, ಎಂಬ ಹೆಸರುಗಳಿರುವುತೆ ಕಂಡುಬರುತ್ತದೆ. ಈ ಬೆಟ್ಟದಲ್ಲಿ ಎರಡು ದೊಡ್ಡ ಜೈನ ಮಂದಿರಗಳ ಜೊತೆ ಪಡ್ಡಗಳನೆ. ಅಲ್ಲೇ ಪಕ್ಕದಲ್ಲಿ ಕ್ರಿ. ಶ. ೧೯೨೦ ರಲ್ಲಿ ಮೈಸೂರನ್ನು ಆಳಿಕೊಂಡಿದ್ದ ನಾಲ್ವಡಿ ಕೃಷ್ಣ ರಾಜೇಂದ್ರ ಒಡೆಯರವರು ಸಹಮಾಡಿದ್ದರೆಂದು ಒಬ್ಬರು ತೋರಿಸಿದರು. ಇವೆಷ್ಟು ನಿಜವೆಂದು ಮಾತ್ರ ಗೊತ್ತಿಲ್ಲ. ಅಂಕಿ ಬಂಡೆಯು ಮೇಲೆ K. R. W. ಎಂಬ ಮೂರು ಅಕ್ಷರಗಳಿರುವುದು ಸತ್ಯ. ಸ್ವಲ್ಪ ಉತ್ತರದಲ್ಲಿ ಸುತ್ತಲೂ ಕಲ್ಲಿನ ಗೋಡೆಗಳಿಂದ ಭದ್ರವಾಗಿರುವ ಪ್ರದೇಶದಲ್ಲಿ ಅತ್ಯಮೂಲ್ಯವಾದ ಪುರಾತನ ಶಾಸನವೊಂದಿದ್ದು ಅದರ ಪಕ್ಕದಲ್ಲಿ "ಶ್ರೀ ಕವಿರತ್ನ ರನ್ನ" ಎಂದು ರನ್ನ ಕವಿಯ ಸ್ಮಹಸ್ತಾಕ್ಷರವಿದೆ. ನಮ್ಮ ಕನ್ನಡ ನಾಡಿನ ಸುಪ್ರಸಿದ್ಧ ಕವಿಶ್ರೀಷ್ಠನಾದ ರನ್ನ ಮಹಾಕವಿಯನ್ನು ಆದರಿಸಿದ್ದುದು ಶ್ರವಣ ಬೆಳ್ಗೊಳದ ಈ 'ಚಂದ್ರಗಿರಿ' ಗೊಂದು ಹೆಮ್ಮೆಯೇ ಸರಿ. ರನ್ನನು ತನ್ನ ಗುರುವಾದ ಅಜಿತ ಸೇನಾಚಾರ್ಯರೊಂದಿಗೆ ಇಲ್ಲಿಯೇ ವಿದ್ಯಾಭ್ಯಾಸವನ್ನು ಮಾಡಿಕೊಂಡಿದ್ದನೆಂದು ತಿಳಿದು ಬರುತ್ತದೆ.

ಚಂದ್ರಗಿರಿಯಲ್ಲಿ ಅನೇಕ ಬಸದಿಗಳವೆ. ಕೆಲವು ಚಿಕ್ಕ ಬಸದಿಗಳಾದರೂ ಎಲ್ಲಕ್ಕಿಂತ ಹಿನ್ನೆಲೆಯಲ್ಲಿ ದೊಡ್ಡ ಇತಿಹಾಸವೇ ಅಡಗಿಕವಾಗಿದೆ. ಉದಾಹರಣೆಗೆ ಇಲ್ಲಿರುವ ಕತ್ತಲ ಬಸದಿಯೆಂಬುದು ಚಂದ್ರಗುಪ್ತನಿಂದ ನಿರ್ಮಿಸಲ್ಪಟ್ಟುದು ಎಂದು ಅಲ್ಲಿಯೇ ಇರುವ ಒಂದು ಶಾಸನದಿಂದ ತಿಳಿದುಬರುತ್ತದೆ. ಈ ಬಸದಿಯಲ್ಲಿ ಅನೇಕ ತೀರ್ಥಂಕರರ ವಿಗ್ರಹಗಳೂ ಬೇರೆ ಕೆಲವು ಪ್ರತಿಮೆಗಳೂ ಇವೆ. ಈ ಬಸದಿಯ ಒಳಭಾಗದಲ್ಲಿಯೇ ಪ್ರದಕ್ಷಿಣೆ ಬರಲು ಸಾಕಷ್ಟು ಅನುಕೂಲತೆಯಿದೆ. ಈ ಬೆಟ್ಟದಲ್ಲಿರುವ ಬೇರೆ ಯಾವ ಬಸದಿಯೊಳಗೂ ಪ್ರದಕ್ಷಿಣೆ ಬರುವ ಸೌಲಭ್ಯವಿಲ್ಲದಿ ಇಲ್ಲಿ ಮಾತ್ರ ಆ ಸದವಕಾಶವಿರುವುದನ್ನು ಪ್ರವಾಸಿಗಳು ಗಮನಿಸಬೇಕು.

ಇದೇ ಚಿಕ್ಕ ಬೆಟ್ಟದಲ್ಲಿರುವ ಪಾರ್ಶ್ವನಾಥ ಬಸದಿಯು ಇನ್ನೊಂದು ಪ್ರಮುಖ ಜೈತ್ಯಾಲಯ. ಈ ಬಸದಿಯಲ್ಲಿ ಸುಮಾರು ೧೫ ಅಡಿ ಎತ್ತರದ ಪಾರ್ಶ್ವನಾಥ ಸ್ವಾಮಿಯ ಪ್ರತಿಮೆಯಿದೆ. ವಿಗ್ರಹದ ಹಿನ್ನೆಲೆಯಲ್ಲಿ ಗನ್ನಾಡಿನ ಕಲ್ಲು ಕುಟ್ಟಿಗನ ಶಿಲ್ಪಕಲಾವೈಭವದ ಕೈಚಳಕವನ್ನು ಕಣ್ಣಾರೆ ಕಂಡು ಆನಂದಿಸಬಹುದು ಈ ಬಸದಿಯೊಳಗೆ ಶಿಲ್ಪಕಲೆಯಿಂದ ಕೂಡಿದ ಅಂದವಾದೊಂದು ಕಂಬವೂ ರಂಗಮಂಟಪವೂ ಇವೆ. ಮಾತ್ರವಲ್ಲದೆ ಬಸದಿಯ ಎದುರುಗಡೆ ಒಂದು ಮಾನಸ್ತಂಭವಿದೆ. ಶ್ರವಣ ಬೆಳಗೊಳದಲ್ಲಿರುವ ಮಾನಸ್ತಂಭಗಳಲ್ಲೆಲ್ಲಾ ಇವೇ ಅತ್ಯಂತ ದೊಡ್ಡದು ಹಾಗೂ ಸುಂದರವಾದುದು ಎಂದು ಶಿಲ್ಪಕಲಾತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಚಂದ್ರಗಿರಿ ಬೆಟ್ಟದ ಮೇಲೆ ಅನೇಕ ಶಿಲಾಲೇಖಗಳೂ ಚಿಕ್ಕ, ದೊಡ್ಡ ಬಸದಿಗಳೂ ಇವೆ. ಚಾವುಂಡರಾಯನ ಬಸದಿ, ಎರಡು ಕಟ್ಟೆಯ ಬಸದಿ, ಸವತಿ ಗಂಧವಾರಣ ಬಸದಿ, ಚಂದ್ರಪ್ರಭ ಬಸದಿ. ಶಾಸನ ಬಸದಿ ಇವೇ ಮೊದಲಾದ ಜೈತ್ಯಾಲಯಗಳು ಪ್ರವಾಸಿಗಳು ಈ ಬೆಟ್ಟದ ಮೇಲೆ ಕಾಣಲೇಬೇಕಾದವುಗಳು.

ಶ್ರವಣ ಬೆಳಗೊಳದ ಎರಡೂ ಬೆಟ್ಟಗಳನ್ನು ನೋಡಿದ ಬಳಿಕ ಊರಲ್ಲಿರುವ ಕೆಲವು ಮುಖ್ಯ ಜಿನಾಲಯಗಳನ್ನು ಪ್ರವಾಸಿಗಳು ನೋಡಲು ಮರೆಯಬಾರದು. ಅಕ್ಕನ ಬಸದಿಯೆಂದು ಪ್ರಖ್ಯಾತವಾದ ಜೈತ್ಯಾಲಯದಲ್ಲಿ ಎದು ಅಡಿ ಎತ್ತರದ ಪಾರ್ಶ್ವನಾಥ ಸ್ವಾಮಿಯ ವಿಗ್ರಹವಿದೆ ಇಲ್ಲಿಯ ಪ್ರಭಾವಳಿಯಲ್ಲಿ ಅತ್ಯಮೂಲ್ಯವಾದ ಕೆತ್ತನೆಗಳಿಂದ ಕೂಡಿದ್ದು ಬಹು ಚಿಕ್ಕ ಪ್ರಮಾಣದಲ್ಲಿ ಶಿಲ್ಪಿಯು ೭೪ ತೀರ್ಥಂಕರರನ್ನು ಕೆತ್ತಿರುವನು. ಒಬ್ಬ ಬ್ರಾಹ್ಮಣ ಮಂತ್ರಿಯ ಪತ್ನಿ ಜೈನ ಕುಮಾರಿ 'ಅಚಿಯಕ್ಕ' ಎಂಬಾಕೆ ಸುಮಾರು ಕ್ರಿ. ಶ. ೧೧೦೩ರಲ್ಲಿ ಈ ಬಸದಿಯನ್ನು ಕಟ್ಟಿಸಿದಳೆಂದೂ ಅಚಿಯಕ್ಕನು ಕಟ್ಟಿಸಿದ ಬಸದಿಯೇ "ಅಕ್ಕನ ಬಸದಿ" ಯೆಂಬ ಹೆಸರನ್ನು ಗಳಿಸಿತೆಂದೂ ಹೇಳುತ್ತಾರೆ.

ಶ್ರವಣ ಬೆಳಗೊಳದಲ್ಲಿ ಸುಮಾರು ೩೦ ಕ್ಕೆಂತಲೂ ಹೆಚ್ಚು ಬಸದಿಗಳಿವೆಯೆಂದು ಹೇಳುತ್ತಾರೆ. ಗೋಮಟೇಶ್ವರ ಮಹಾಮಸ್ತಕಾಭಿಷೇಕೋತ್ಸವವು ಜೈನ ಮತಾನುಯಾಯಿಗಳಿಗೆ ಅತಿ ದೊಡ್ಡ ಐತಿಹ್ಯೋತ್ಸವ. ಭೂರತಾದ್ಯಂತದಿಂದ ಸಾವಿರಗಟ್ಟಲೆಯಲ್ಲಿ ಜೈನ ಯಾತ್ರಿಕರು ಈ ಉತ್ಸವಕ್ಕಾಗಿ ಶ್ರವಣ ಬೆಳಗೊಳ ಕ್ಷೇತ್ರಕ್ಕೆ ಆಗಮಿಸುತ್ತಾರೆ. ಕ್ರಿ. ಶ. ೧೯೫೩ರಲ್ಲಿ ಶ್ರವಣ ಬೆಳಗೊಳದಲ್ಲಿ ಮಹಾ ಮಸ್ತಕಾಭಿಷೇಕವು ಅತ್ಯಂತ ವೈಭವದಿಂದ ಜರಗಿತು. ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳದಲ್ಲಿ ಇಂಥದೊಂದು ಮಹಾ ಮಸ್ತಕಾಭಿಷೇಕವು ಈಗ ತಾನೆ ಜರಗುತ್ತಿದೆ ಎಂಬ ದನ್ನು ಈ ಸಂದರ್ಭದಲ್ಲಿ ಸೂಚಿಸುವುದು ತಪ್ಪಾಗಲಾರದು ಈ ಮಹಾ ಮಸ್ತಕಾಭಿಷೇಕವನ್ನು ನೋಡಿದ ಮಹಾನುಭಾವರೊಬ್ಬರು "The Maha Mastakabhisheka is indeed a sight for the gods; its grandear is perhaps never surpassed by any event in the world" ಎಂದು ಉದ್ಗಾರವೆತ್ತಿದ್ದಾರೆ ಇಂಥಹ ವೈಭವಯುಕ್ತವಾದ ಮಹೋತ್ಸವವನ್ನು ಕಾಣಲು ಅವಾಧ್ಯವಾದರೂ ಕೊನೆಗೆ ಜಗತ್ಪ್ರಖ್ಯಾತವಾದ ಶ್ರವಣ ಬೆಳಗೊಳದ ಗೋಮಟೇಶ್ವರ ಮಹಾ ವಿಗ್ರಹವನ್ನು ಕನ್ನಡಿಗರು ಕಣ್ಣಾರೆ ಕಂಡು ಕನ್ನಾಡ ಕಲ್ಲು ಕುಟ್ಟಿಗನ ಕೈಚಳಕವನ್ನು ಆರಿತು ನಮ್ಮ ಹಿರಿಯರ ಹಿರಿಮೆಯಿಂದ ಸ್ಫೂರ್ತಿಯನ್ನು ತಾಳಬೇಕು. ಶ್ರವಣ ಬೆಳೊಳದಲ್ಲಿ ನಿಂತಿರುವುದು ಗುಮ್ಮಟ ವಿಗ್ರಹವಲ್ಲ; ನಿಜಕ್ಕೂ ಮನ್ಮಥ!

ಶ್ರೀ.ಶ್ರೀಪತಿರಾವ್ ಪಲಿಮಾರ್ಕಾರ್
ಬಿ.ಎ.,ಬಿ.ಟಿ.

In the Court of the District Munsiff of Mangalore.

R E. P. No. 604/56

Between:—

The Pangal Nayak Bank Ltd., Mangalore ... Petitioner.

and

Jainaboo and others ... Respondents.

To Respondents 2 to 4.

2. M. B. Mohammad Iqbal, 3. Beepathumma, 4. M. B. Ismail, —Children of M. B. Iddinabba. All are residing at Bcebi Alabi Road, Mangalore Town.

Whereas the abovenamed Execution Petitioner has applied for sale of the immoveable property belonging to you and fully described in the Sale Proclamation, you are hereby informed that the 21st day of February 1957 has been fixed for settling the terms of the Proclamation of sale. In case you fail to appear on that day the matter will be decided in in your absence.

(Sd.) M. Venkatraya Kamath.
Advocate for Petitioner.

Mangalore 29—1—1957.

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ಥಾನಿಕರು: ಷಾ ಕಂಪೆನಿ, ಮಂಗಳೂರು—1.

ಪುರಾತನ ಮಾನವ

ರಶ್ಯದ ವಿದ್ವಾಂಸರೊಬ್ಬರು ಮೃದ್ವಸ್ಥಿಗಳ ಮಿಶ್ರಣದ ಆಭ್ಯಾಸಗೈದು ಮುಖಾಕೃತಿ ರಚಿಸುತ್ತಾರೆ, ಗೊತ್ತೆ?

ಶಿಲ್ಪಿ, ಮನುಷ್ಯವರ್ಣನ ಶಾಸ್ತ್ರಜ್ಞ ಮತ್ತು ಇತಿಹಾಸವ ಪಂಡಿತರಾದ ಮಿಖಾಯಿಲ್‌ಗೆರಾಸಿಮೋವ್‌ರವರು ಹಿಂದಿನ ಕಾಲದಲ್ಲಿ ಸತ್ತ ವರ ಪ್ರತಿಮೆಗಳನ್ನು ರೂಪಿಸುವ ಶಿಲ್ಪಕಲೆಯಲ್ಲಿ ವಿಶೇಷಜ್ಞರಾಗಿದ್ದಾರೆ. ತಾವು ಸ್ವತಃ ಸಿದ್ಧಗೊಳಿಸಿರುವ ವೈಜ್ಞಾನಿಕ ವಿಧಾನದಿಂದ, ರುಂಡ ಎಲುಬುಗಳನ್ನುಕೂಲಂಕಷವಾಗಿ ಪರೀಕ್ಷಿಸಿ, ಅವರು ಈ ಪ್ರತಿಮೆಗಳನ್ನು ತಯಾರಿಸುತ್ತಾರೆ. ಅವರ ಆತ್ಯಾಧುನಿಕ ಕೃತಿಯ ವಿಷಯವಾಗಿ ಈ ಕೆಳಗಿನ ಲೇಖನದಲ್ಲಿ ಮಾಹಿತಿಯನ್ನು ಕೊಡಲಾಗಿದೆ.

ಪೇಕಿಂಗ್ ನಗರದಿಂದ ಅನೇಕದೂರದಲ್ಲಿ, ಈಗ ಚೀನದ ಭೂಭಾಗವಾಗಿರುವ ಪ್ರದೇಶದಲ್ಲಿ, ೫೫,೦೦೦ ವರ್ಷಗಳ ಹಿಂದೆ ವಾಸಿಸುತ್ತಿದ್ದ ಮನುಷ್ಯನ ಶಿಲ್ಪರೂಪವನ್ನು ನೀವು ಎಂ. ಗೆರಾಸಿಮೋವ್‌ರವರ ಕಲಾಶಾಲೆಯಲ್ಲಿ ಕಾಣಲು ಸಾಧ್ಯವಿದೆ. ಜಾ ಕಾಟಿಯೆನ್ ಬಳಿಯಲ್ಲಿ ಭೂಮಿಯನ್ನು ಅಗೆಯುತ್ತಿದ್ದಾಗ ಸುಂಶಾತ್ತ ಶಾಸ್ತ್ರಜ್ಞರು ಈ ಮನುಷ್ಯನ ರುಂಡದ ಎಲುಬುಗಳನ್ನು ಕಂಡರು. ಚೀನೀ ಜನತೆಯ ಈ ಅತ್ಯಂತ ಪ್ರಾಚೀನ ಕಾಲದ ಪೂರ್ವಜರ ಪ್ರತಿರೂಪವನ್ನು ಚಿತ್ರಿಸಲು, ಚೀನದಿಂದ ಗೆರಾಸಿಮೋವ್‌ರವರು ಪಡೆದ, ರುಂಡದ ಎಲುಬುಗಳ ಕರಾರುವಾಕಾದ ನಮೂನೆಗಳು ಅವರಿಗೆ ಸಾಮರ್ಥ್ಯವನ್ನಿತ್ತವು.

ಮಾಸ್ಕೋ ನಗರದ ವೈದ್ಯಕೀಯ ವಿದ್ಯಾಲಯವೊಂದರಲ್ಲಿ ನ್ಯಾಯಾಲಯದ ವಿವಾದ ಸಂಬಂಧೀ (ಫೊರೆನ್ಸಿಕ್) ಔಷಧಿ ಶಾಸ್ತ್ರದ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದಾಗ, ರುಂಡಗಳ ಎಲುಬುಗಳ ಪರೀಕ್ಷೆಯನ್ನು ನಡೆಸಿ, ಗೆರಾಸಿಮೋವ್‌ರವರು ಹಿಂದೆಯೇ ಸತ್ತಿದ್ದ ಅನೇಕ ಜನರ ಮುಖವಾಡಗಳನ್ನು (ಮಾಸ್ಕ್) ತಯಾರಿಸಿದರು. ಸಾಮಾನ್ಯವಾಗಿ, ಸತ್ತವರ ಬಂಧುಜನರು ಈ ಮುಖವಾಡಗಳನ್ನು ಈ ಮಾರ್ಗದಿಂದ, ನೀರಿನಲ್ಲಿ ಮುಳುಗಿ ಸತ್ತವರ ಶರೀರಗಳನ್ನು ಗುರುತಿಸಲು, ಅಥವಾ ಸತ್ತಿರುವ, ಕೊಲೆಗೀಡಾಗಿರುವ ವ್ಯಕ್ತಿಯ ಹೆಸರನ್ನು ಬಳಸಿಕೊಂಡು ಮೆರೆಯುತ್ತಿರುವ ಅಪರಾಧಿಯನ್ನು ಬಯಲಿಗಿಡಲು ಸಾಧ್ಯವಾಗುತ್ತದೆ.

"ನ್ಯಾಟೋ"— "ಸೀಟೋ"— "ಬಗ್ದಾದ್"— ಮುಂತಾದ ಸೈನಿಕ ಒಪ್ಪಂದಗಳ ಸ್ನೇಹವು ಕಣ್ಣನ್ನು ಕುರುಡಾಗಿಸಿ ನ್ಯಾಯವನ್ನು ನೂಲೆಗೆ ತಳ್ಳಲು ಹೇಸುವುದಿಲ್ಲ ಎಂಬುದಕ್ಕೆ ಕಾಶ್ಮೀರಪ್ರಶ್ನೆಯಲ್ಲಿ ಭಾರತದ ಪ್ರತಿನಿಧಿಯು ಹೇಳಿಕೆಯನ್ನು ಕೇಳಿಕೊಳ್ಳುವುದಕ್ಕೆ ಮುಂಚೆಯೇ ಭದ್ರತಾಸಮಿತಿಯ ಸದಸ್ಯರು "ನಿರ್ಣಯ" ಸ್ವೀಕರಿಸಿ ಕುಳಿತುಬಿಟ್ಟದ್ದು ಪ್ರತ್ಯಕ್ಷ ನಿದರ್ಶನ. ಚಿತ್ರದಲ್ಲಿ "ನ್ಯಾಟೋ" ಸಮ್ಮೇಳನಕ್ಕೆ ಬಂದಿರುವ ದಲ್ಲೆಸ್, ಪಿನೋ ಸುತ್ತು ಸೆಲ್ವಿನ್‌ಲ್ಯಾಂಡ್ ಇವರನ್ನು ಕಾಣಬಹುದು.

ಯುಗಾಂತರ ಕಾಲದೊಳಹೊಕ್ಕು ನಡೆಸಿದ ಪರ್ಯಟನೆ

ಡಾ|| ಗೆರಾಸಿಮೋವ್‌ರವರನ್ನು ಕಂಡು ಅಚರಿಪಡನೆ ಮಾತನಾಡುವುದೂ ಅವರ ಕಲಾಶಾಲೆಯಲ್ಲಿನ ವಸ್ತುಗಳನ್ನು ಪರೀಕ್ಷಿಸುವುದೂ, ಕಣ್ಣಿಗೆ ಕಟ್ಟದಂತೆ ಇರುವ ಚಿತ್ರಗಳನ್ನೊಳಗೊಂಡ, ಆಕರ್ಷಕವಾದ ಐತಿಹಾಸಿಕ ಕಾದಂಬರಿಯನ್ನು ಓದಿದಂತೆ ಇರುವುದು.

ಅವರ ಕೃತಿಗಳು, ಕಳೆದ ೫,೦೦,೦೦೦ ವರ್ಷಗಳ ಕಾಲಾವಧಿಯಲ್ಲಿ ಮಾನವತೆಯ ಅಭಿವೃದ್ಧಿಯ ಇತಿಹಾಸವನ್ನು ತೋರಿಸುತ್ತವೆ. ಯೂರೋಪ್, ಏಶಿಯಾ ಮತ್ತು ಆಫ್ರಿಕಾ ದೇಶಗಳಲ್ಲಿ ಕಂಡುಬಂದ ರುಂಡಗಳ ಮೂಳೆಗಳನ್ನು ಪರೀಕ್ಷಿಸಿ, ಅವರು ಪುರಾತನ ಮನುಷ್ಯರ ಸುಮಾರು ಇನ್ನೂರು ತಲೆಗಳನ್ನು ಪುನಃ ರಚಿಸಿದ್ದಾರೆ. 'ಸಿನಾಂತ್ರೋಪಸ್' 'ನೆಯಾಂಡರ್‌ಥಾಲ್' ಮತ್ತು 'ಕ್ರೋ-ಮ್ಯಾಗ್ನಸ್' ಮನುಷ್ಯರು, ಕಲ್ಲುಕೆತ್ತನೆಯ (ಸಿಯೊಲಿಥಿಕ್) ಕಾಲಾವಧಿಯ ಮನುಷ್ಯರು, ಕಂಚು ಮತ್ತು ಕಬ್ಬಿಣ ಲೋಹಯುಗಗಳ ಮನುಷ್ಯರು—ಇವರೆಲ್ಲರೂ ಇಲ್ಲಿ ಐತಿಹಾಸಿಕ ನಾಯಕರ ಶಿಲ್ಪಕಲಾಕೃತಿಗಳ ರೂಪದಲ್ಲಿ ಕಂಡುಬರುತ್ತಾರೆ.

ಇಲ್ಲಿ ನೀವು ವಿಜೇತ ತೈಮೂರ್‌ಲೇನನ ಉಗ್ರಮುಖಭಾವವನ್ನು ನೀವು ಕಾಣಲು ಸಾಧ್ಯವಿದೆ. ಆತನ ಮುಖಲಕ್ಷಣಗಳು ಜಯಿಸಲಸಾಧ್ಯವಾದಂತಹ ಜೇತನವನ್ನು ಪ್ರತಿಬಿಂಬಿಸುತ್ತವೆ. ನ್ಯಾಚ್ಯ ದೇಶದ ಸುವಿಖ್ಯಾತ ವಿಚಾರಪರರೂ, ಕವಿಯೂ ಮತ್ತು ಗಣಿತ ಶಾಸ್ತ್ರಜ್ಞರೂ ಆಗಿದ್ದ ಅವಿಸೆನ್ನಾ ಇಬ್ನ್—ಸೀನಾರವರ ಪ್ರತಿಮೆಯನ್ನೂ ನೀವು ಕಾಣಬಹುದು. ಯೂರೋಸ್ಲಾವ್ ಮುದ್ರಿಯು (ವಿನೇಕಿ) ತಮ್ಮ ಆಳವಾದ ನಿಟ್ಟು ನೋಟದ ಕಣ್ಣುಗಳಿಂದ ನಿಮ್ಮ ಕಡೆ ನೋಡುವಂತಿದೆ. ಹನ್ನೊಂದನೆಯ ಶತಮಾನದ ಕೀಯೆವ್ ರಾಜಕುಮಾರನ ಈ ಶಿಲ್ಪ ಪ್ರತಿಮೆಗೂ ಮತ್ತು ಆದರ ಮೂಲರೂಪಕ್ಕೂ ನಡುವೆ ಇರುವ ಹೋಲಿಕೆಯು, ಇತ್ತೀಚೆಗೆ ಕೀಯೆವ್ ನಗರದಲ್ಲಿನ ಸೈಂಟ್ ಸೋಷಿಯಾ ಕೆಥೀಡ್ರಲ್ಲಿನಲ್ಲಿ (ಇಗರ್ಜಿಯ) ಪುನರುದ್ಧರಣ ಕಾರ್ಯದಲ್ಲಿ ತೊಡಗಿದ್ದಾಗ ರುಜುವಾತುಗೊಳಿಸಲ್ಪಟ್ಟಿತು. ಪುನರುದ್ಧರಿಸಲ್ಪಟ್ಟ ಭಿತ್ತಿ ಚಿತ್ರಗಳಲ್ಲಿ ಒಂದು ಚಿತ್ರವು ಜನರ ತಂಡವೊಂದನ್ನು ತೋರಿಸುತ್ತದೆ. ಅದರ ನಡುವೆ ಇರುವ ವ್ಯಕ್ತಿಯ ಚಿತ್ರವು, ರಾಜಮನೆತನದ ಉಡುಪು ಧರಿಸಿರುವ ಮುದುಕನೊಬ್ಬಾತನ ಚಿತ್ರವಾಗಿದೆ. ಆ ವ್ಯಕ್ತಿಯ ಮುಖವು ಗೆರಾಸಿಮೋವ್‌ರವರ ಶಿಲ್ಪಾಕೃತಿಯನ್ನು ಅದ್ಭುತವಾಗಿ ಹೋಲುತ್ತದೆ.

ಗೆರಾಸಿಮೋವ್‌ರವರೂ (ಮತ್ತು ಇತ್ತೀಚೆಗೆ ಅವರ ಶಿಷ್ಯರೂ) ಇಂತಹ ಉಲ್ಲೇಖನೀಯವಾದ ಪರಿಣಾಮಗಳನ್ನು ಹೇಗೆ ಪಡೆಯುತ್ತಾರೆ?

ಅವರು ಬಳಸುವ ಪದ್ಧತಿಗಳು

ಈ ವಿಜಯವು ಮೂವತ್ತು ವರ್ಷಗಳ ಸತತ ಪರಿಶ್ರಮದ ಮೇಲೆ ಆಧಾರಪಟ್ಟಿದೆ ತಲೆಯ ಮೃದ್ವಸ್ಥಿಗಳಿಗೂ ಮತ್ತು ರುಂಡದ ಆಕಾರಕ್ಕೂ ನಿರ್ದಿಷ್ಟವಾದ ಅಂತರಿಕ ಅವಲಂಬನೆಯು ಉಂಟೆಂಬುದಾಗಿ, ವಿವರಪೂರ್ಣವಾದ ಶರೀರ ಶಾಸ್ತ್ರದ ಮತ್ತು ಮನುಷ್ಯ ವರ್ಣನ ಶಾಸ್ತ್ರದ ಅಭ್ಯಾಸಗಳಿಂದ ಈ ವಿಜ್ಞಾನಿಗೆ ಭರವಸೆಯುಂಟಾಯಿತು. ರುಂಡದ, ಈ ಅಥವಾ ಆ—ಯಾವುದಾದರೂ ಭಾಗದ ವೈಚಿತ್ರ್ಯಗಳೊಂದಿಗೆ ಮೃದ್ವಸ್ಥಿಗಳ ದಪ್ಪವು ಹೊಂದಿಕೊಂಡಿರುತ್ತದೆ. ಮುಖದ ಅಪ್ರಧಾನ ಭಾಗಸಂಖಂಡಗಳ "ಸ್ಥಳ ವಿವರವು" (ಟೋಪೋಗ್ರಫಿ) ಎಷ್ಟು ಭಿನ್ನವಾಗಿದ್ದರೂ ಕೂಡ, ಅದು ರುಂಡದ ವೈಯಕ್ತಿಕ ಲಕ್ಷಣಗಳಿಗೆ ಸದಾ ಸಂಬಂಧಪಟ್ಟಿರುತ್ತದೆ.

ತಾವು ಪುನಃ ರಚಿಸುತ್ತಿರುವ ಪ್ರತಿಯೊಂದು ಮುಖದ ವಿಷಯದಲ್ಲಿಯೂ, ಗೆರಾಸಿಮೋವ್‌ರವರು ವೈಯಕ್ತಿಕವಾದ ದೃಕ್ಪಥವುಳ್ಳವರಾಗಿರುತ್ತಾರೆ. ಅವರು ಪಕ್ಷಪಾತ ಧೋರಣೆಯು "ಕುಲತತ್ವ ನಿಧಾನದ" (ರೇಸಿಯಲ್ ದಯಾಗ್ನೊಸಿಸ್) ದೃಷ್ಟಿಯನ್ನು ನಿರ್ದಿಷ್ಟವಾಗಿ ತಿರಸ್ಕರಿಸುತ್ತಾರೆ. ವೈಯುಕ್ತಿಕವಾದ ಪುನರ್ರಚಿತ ಶಿಲ್ಪದಂಥ ಪ್ರತಿಮೆಗಳನ್ನು ತಯಾರಿಸುವ ತಮ್ಮ ಪ್ರಯತ್ನಗಳಲ್ಲಿ ಗೆರಾಸಿಮೋವ್‌ರವರ ಪಾಶ್ಚಿಮಾತ್ಯ ಸಹೋದ್ಯೋಗಿಗಳು ತಪ್ಪು ಹಾದಿಗಳನ್ನು ತುಳಿಯಲು ಈ ಪಕ್ಷಪಾತ ಧೋರಣೆಯ ಹಾದಿಮಾಡಿಕೊಡುತ್ತದೆ. ಆಧುನಿಕ ಮನುಷ್ಯನಲ್ಲಿ ಕುಲಮೂಲಕ (ರೇಷಿಯಲ್) ಲಕ್ಷಣಗಳು ತುಂಬಾ ಮಿಶ್ರವಾಗಿರುವುದರಿಂದಲೂ, ಕಲೆಗಳು ತುಂಬಾ ಆಂತರಿಕವಾಗಿ ಬೆಳೆತಿರುವುದರಿಂದಲೂ, ಪುನರ್ರಚಿತವಾದ ಮುಖಾಕೃತಿಗಳನ್ನು ಈಗ ಅಸ್ತಿತ್ವದಲ್ಲಿ ಇಲ್ಲದಿರುವ "ಶುದ್ಧ ನಮೂನೆ"ಗಳೊಂದಿಗೆ ಹೊಂದಾವಣೆಮಾಡಲು ಸಾಧ್ಯವಿಲ್ಲವೆಂದು ಆತನು ಭಾವಿಸುತ್ತಾನೆ. ರುಂಡದ ವಿವರಗಳೊಂದಿಗೆ ಸದಾ ಸರಿಹೊಂದಿಕೊಂಡಿರುವ ಮೃದ್ವಸ್ಥಿಗಳ ಮಿಶ್ರಣಗಳಿಂದ ಕೂಡಿರುವ, ಅದ್ವಿತೀಯವಾದ ವ್ಯಕ್ತಿರೂಪಾಕೃತಿಯನ್ನು ತಯಾರಿಸಲು ಗೆರಾಸಿಮೋವ್‌ರವರು ಪ್ರಯತ್ನಿಸುತ್ತಾರೆ.

ಪ್ರಸ್ತುತ ಸಮಯದಲ್ಲಿ ಈ ವಿಜ್ಞಾನಿಯು, ಹತ್ತನೆಯ ಶತಮಾನದ ಸುವಿಖ್ಯಾತ ತಾಜಿಕ್ ಕವಿ ರುದಾಕ್ಸಿಯವರ ಮುಖಾಕೃತಿಯನ್ನು ಪುನ ನಿರ್ಮಿಸುವ ಕಾರ್ಯದಲ್ಲಿ, ತೊಡಗಿದ್ದಾರೆ ಈ ಕವಿಯ ವಾರ್ಷಿಕೋತ್ಸವವು ಬೇಗನೆ ತಾಜಿಕಿಸ್ತಾನನಲ್ಲಿ ನಡೆಯಲಿದೆ.

ಕನ್ನಡಿಗರ ಮುದ್ದಣ

(ಇನೇ ಪುಟದಿಂದ)

ಮೃತ್ಯುವಿಗೆ ತತ್ತಾಗಿ ಪರಂಧಾಮನನ್ನೈದಿದನು.

ಈತನು ಭಗವದ್ಗೀತೆಯನ್ನು ಭಾಮಿನಿ ಷಟ್ಪದಿಯಲ್ಲಿ, 'ಕರ್ಣಾಟಕ ರಾಮಾಯಣ' ವೆಂಬುದನ್ನು ವಾರ್ಧಿಕ ಷಟ್ಪದಿಯಲ್ಲಿ, ರಚಿಸಲು ತೊಡಗಿದ್ದನೆಂದು ತಿಳಿದುಬರುತ್ತದೆ. ಇನ್ನೂ ಬ್ರಹತ್ ಸಾಹಿತ್ಯ ಕೃತಿಗಳನ್ನು ರಚಿಸಲು ಆತಿಸಿದ್ದ ಮುದ್ದಣನು ಅಕಾಲದಲ್ಲಿ ಮರಣಕ್ಕೆ ಕುತ್ತಾದುದು ಕನ್ನಡಿಗರ ದುರ್ದೈವವಲ್ಲದೆ ಮತ್ತೇನು.

ಈ ವರ್ಷ ನಂದಳಿಕೆಯಲ್ಲಿ ಈತನ ಸ್ಮಾರಕ ರಚಿಸುವ ಸಿದ್ಧತೆಯಲ್ಲಿರುವರು. ಒಂದುಗೂಡಿದ ಕರ್ನಾಟಕದಲ್ಲಿ ಪ್ರಥಮವಾಗಿ ಬಂದ ಮುದ್ದಣ ಜಯಂತಿ ದಿನವನ್ನು ನಂದಳಿಕೆಯಲ್ಲಿ ಉತ್ತಮವಾದ ರೀತಿಯಲ್ಲಿ ಸಂಭ್ರಮದಿಂದ ಆಚರಿಸಿ ಸ್ಮರಿಸಿದ್ದಾರೆ ನಂದಳಿಕೆಯ ಜನರೊಡನೆ ಸಹಕರಿಸುವುದು ಕನ್ನಡ ನಾಡಿನ ಇತರ ನಾಗರಿಕರ ಆದ್ಯ ಕರ್ತವ್ಯ.

—ಪಿ. ಯನ್. ರಾಮಚಂದ್ರರಾವ್,
ಪಡುಬಿದ್ರೆ.

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರೆಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.		
24	ತಿಂಗಳಿಗೆ	4%
12	,,	3½%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK. LTD. MULKI



Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೬ VOL. 36

14—2—1957

ಸಂಚಿಕೆ ೨೩ NO. 23

ನಿಮಗಿದು ತಿಳಿದಿರಲಿ

ದಶಮಾನ ನಾಣ್ಯ ಪದ್ಧತಿಯಲ್ಲಿ ವ್ಯವಹಾರ

ಕಳೆದ ಮುಂಗಡ ಸತ್ರದ ಅಧಿವೇಶನದಲ್ಲಿ ಸಂಸತ್ತು ಒಂದು ಕಾನೂನನ್ನು ಮಾಡಿ, ನಾಣ್ಯ ಪದ್ಧತಿಯನ್ನು ದಶಮಾಂಶ ಕ್ರಮಕ್ಕೆ ಒಳಪಡಿಸಿಕೊಳ್ಳಲು ಅವಕಾಶವನ್ನು ನೀಡಿತು. ಕಾನೂನಿನಲ್ಲಿ ಹೊಸ ಬಗೆಯ ನಾಣ್ಯಗಳನ್ನು ಚಲಾವಣೆಗೆ ತರುವ ದಿನವನ್ನು ಗೊತ್ತುಪಡಿಸುವ ಕೆಲಸವು ಸರಕಾರದ್ದೆಂದು ಹೇಳಿರುತ್ತದೆ. ಏಕೆಂದರೆ, ಸರಕಾರಕ್ಕೆ ಮಾತ್ರವೇ ಹಳೆಯ ನಾಣ್ಯಗಳ ಸ್ಥಾನದಲ್ಲಿ ಹೊಸತಾಗಿ ನಾಣ್ಯಗಳನ್ನು ಯಾವ ವೇಗದಲ್ಲಿ ಮತ್ತು ಎಷ್ಟು ಪ್ರಮಾಣದಲ್ಲಿ ಮುದ್ರಿಸಿ ತರಬಹುದೆಂದು ತಿಳಿಯಲು ಸಾಧ್ಯ. ಈಗ ಸರಕಾರವರು ಪತ್ರಿಕಾ ಪ್ರಕಟಣೆಗಳ ಮೂಲಕ ಇದೇ ೧೯ನೇ ಏಪ್ರಿಲಿನಿಂದ ಹೊಸ ನಾಣ್ಯಗಳು ಬಳಕೆಗೆ ಬರುತ್ತವೆ ಎಂದು ತಿಳಿಸಿದ್ದಾರೆ. ಅನೇಕ ಕಾರಣಗಳಿಗಾಗಿ ಹೊಸ ನಾಣ್ಯಗಳನ್ನು ಹೊಸ ಆರ್ಥಿಕ ವರ್ಷದ ಪ್ರಾರಂಭದಿಂದ ಚಲಾವಣೆಗೆ ತರುವುದು ಸೂಕ್ತವೆಂದು ಕಂಡುಬಂದುದರಿಂದ ಈ ದಿನವನ್ನು ಗೊತ್ತುಪಡಿಸಲಾಯಿತು.

ಹೊಸ ನಾಣ್ಯಗಳು ಇದೇ ೧೯ನೇ ಏಪ್ರಿಲಿನಿಂದ ಚಲಾವಣೆಗೆ ಬಂದರೂ ಹಳೆಯ ನಾಣ್ಯಗಳು ಆಕೂಡಲೇ ಚಲಾವಣೆಯಿಂದ ಹಿಂದೆಗೆಯಲ್ಪಡುವುದಿಲ್ಲ. ಸುಮಾರು ಮೂರು ವರ್ಷಗಳ ಅವಧಿಯಲ್ಲಿ ಎಲ್ಲ ಹಳೆಯ ನಾಣ್ಯಗಳನ್ನೂ ಕಾಪಸು ತೆಗೆದು ಕೊಂಡು ಸಂಪೂರ್ಣವಾಗಿ ಹೊಸ ನಾಣ್ಯಗಳನ್ನೇ ಬಳಕೆಯಲ್ಲಿ ಬರುವಂತೆ ತಕ್ಕ ಕ್ರಮಗಳನ್ನು ಸರಕಾರವು ಕೈಗೊಳ್ಳುತ್ತದೆ. ಮೂರು ವರ್ಷಗಳ ಈ ಮಧ್ಯಾವಧಿಯಲ್ಲಿ ಹಳೆಯ ಹಾಗು ಹೊಸ ನಾಣ್ಯಗಳು ಚಲಾವಣೆಯಲ್ಲಿದ್ದು ವ್ಯವಹಾರವನ್ನು ಇವೆರಡೂ ಬಗೆಯ ನಾಣ್ಯಗಳಲ್ಲಿ ಮಾತಲು ಅಡ್ಡಿಯಿಲ್ಲ.

ಇದರಿಂದ ಎರಡು ರೀತಿಯ ಸಹಾಯವಾಗುತ್ತದೆ—ಒಂದನೆಯದೇನೆಂದರೆ, ಸರಕಾರವು ಈಗಲೇ ದಶಮಾಂಶ ಕ್ರಮದ ಹೊಸ ನಾಣ್ಯಗಳನ್ನು ಬಹಳ ದೊಡ್ಡ ಪ್ರಮಾಣದಲ್ಲಿ ತಯಾರಿಸಿಡಬೇಕಾದ ಕಷ್ಟವಿಲ್ಲ; ಸರಕಾರಕ್ಕೆ ಹೊಸ ನಾಣ್ಯಗಳನ್ನು ಸ್ವಲ್ಪ ಸ್ವಲ್ಪವೇ ತಯಾರಿಸಿ ಚಲಾವಣೆಗೆ ತರಲು ಅನುಕೂಲವಾಗುತ್ತದೆ. ಒಂದೇ ಸಲ ಹಳೆಯ ನಾಣ್ಯಗಳ ಬದಲಿಗೆ ಹೊಸ ನಾಣ್ಯಗಳನ್ನು ಚಲಾವಣೆಗೆ ತರಬೇಕೆಂದರೆ, ನಮ್ಮ ಎಲ್ಲ ಟಂಕಸಾಲೆಗಳ ದುಡಿಮೆಯ ಸಾಮರ್ಥ್ಯ ಸಾಕಾಗಲಾರದು. ಎರಡನೇ ಪ್ರಯೋಜನವು ಜನರ ಪಾಲಿನದು: ಅದೇನೆಂದರೆ, ಜನರು ಹೊಸ ನಾಣ್ಯಗಳಿಗೆ ಇನ್ನೂ ಹೊಸಬರಾದುದರಿಂದ ಗಲಿಬಿಲಿಗೊಳ್ಳುವ ಕಾರಣವಿಲ್ಲ. ಹಳೆಯ ನಾಣ್ಯಗಳಲ್ಲಿಯೇ ಹಳ್ಳಿಯವರೂ ಅಷ್ಟು ಶಿಕ್ಷಿತರಲ್ಲದವರೂ ವ್ಯವಹಾರವನ್ನು ಸಾಗಿಸಬಹುದು. ಮೂರು ವರ್ಷಗಳ ಅವಧಿಯಲ್ಲಿ ಈ ಅವಿದ್ಯಾವಂತರೂ ನ್ಯಾಯವಿಾಣರೂ ಹೊಸ ನಾಣ್ಯಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ತಿಳಿದುಕೊಳ್ಳಬಲ್ಲರು. ಅಷ್ಟರವರೆಗೆ ಅವರಿಗೆ ಹೊಸ ನಾಣ್ಯಗಳಲ್ಲಿ ಶಿಕ್ಷಣವಷ್ಟೇ ನಡೆಯುವುದೆಂದು ಹೇಳಬಹುದು. ಅಂತೂ ಜನರಿಗಾಗಲೀ ಸರಕಾರಕ್ಕಾಗಲೀ ತೊಂದರೆಯಾಗದಂತೆ ಹೊಸ ನಾಣ್ಯಗಳನ್ನು ಬಳಕೆಗೆ ತರಲಾಗುತ್ತದೆ.

ಇನ್ನು ಮುಂದೆ ಚಲಾವಣೆಗೆ ಬರಲಿರುವ ಹೊಸ ನಾಣ್ಯಗಳಲ್ಲಿ ಏಳುಬಗೆಯವಿವೆ—ಅವು ಯಾವುವೆಂದರೆ ರೂಪಾಯಿ, ಅರ್ಧರೂಪಾಯಿ, ಕಾಲು ರೂಪಾಯಿ, ೧೦ ನಯೆಪೈಸೆ, ೫ ನಯೆಪೈಸೆ, ೨ ನಯೆ ಪೈಸೆ ಮತ್ತು ೧ ನಯಾಪೈಸಾ. ಸರಕಾರವರು ೧೯ನೇ ಏಪ್ರಿಲಿನಂದು ಕೊನೆಯ ನಾಲ್ಕು ಬಗೆಯ ಹೊಸ ನಾಣ್ಯಗಳನ್ನು ಮಾತ್ರ ಚಲಾವಣೆಗೆ ತರುತ್ತಾರೆ. ಉಳಿದ ಮೂರು ಬಗೆಯವನ್ನು ಹಿಂದಿನಿಂದ ಚಲಾವಣೆಗೆ ತರಲಾಗುತ್ತದೆ. ಏಕೆಂದರೆ ಈಗಿನ ರೂಪಾಯಿ, ಅರ್ಧರೂಪಾಯಿ ಮತ್ತು ಕಾಲುರೂಪಾಯಿ ಬೆಲೆಯು ಹೊಸ ನಾಣ್ಯಗಳ ಪದ್ಧತಿಯಲ್ಲಿ ಸಹ ಕೆಡದೆ, ಕುಂದದೆ ಹಾಗೆಯೇ ಉಳಿಯುತ್ತದೆ. ಆದಾಗ್ಯೂ ಹೊಸ ರೂಪಾಯಿ ಅರ್ಧ ರೂಪಾಯಿ ಮತ್ತು ಕಾಲು ರೂಪಾಯಿಯ ನಾಣ್ಯಗಳನ್ನು ಮುದ್ರಿಸುವ ಅಗತ್ಯವೇನೆಂದರೆ ಈ ನಾಣ್ಯಗಳು ಎಷ್ಟು ನಯೇ ಪೈಸೆಗೆ ಸಮಾನವಾಗಿವೆ ಎಂಬುದನ್ನು ಸ್ಪಷ್ಟವಾಗಿ ಜನರಿಗೆ ತಿಳಿಸಬೇಕೆಂಬುದಕ್ಕಾಗಿ ಮಾತ್ರ. ಸರಕಾರವು ಜನರಿಗೆ ಯಾವುದೇ ರೀತಿಯ ತೊಂದರೆಯಾಗಕೂಡದೆಂಬ ಉದ್ದೇಶವನ್ನು ಹೊಂದಿರುತ್ತದೆ.

ಕೂಡಲೇ ಜ್ಯಾರಿಗೆ ಬರಲಿರುವ ನಾಲ್ಕು ಬಗೆಯ ಹೊಸ ನಾಣ್ಯಗಳಲ್ಲಿ ಜನರಿಗೆ ತೊಂದರೆಯಾಗಬಾರದೆಂಬ ಸರಕಾರದ ಉದ್ದೇಶವು ಪ್ರತಿಫಲಿತವಾಗಿದೆ. ಹೇಗೆಂದರೆ ಅವುಗಳಲ್ಲಿ ಅಯಾ ನಾಣ್ಯದ ಬೆಲೆಯು ಎಷ್ಟೆಂಬುದನ್ನು ನಯಾ ಪೈಸಾದಲ್ಲಿ ಹೇಳಿರುವುದಲ್ಲದೆ ಅದು ರೂಪಾಯಿಯ ಎಷ್ಟನೇ ಭಾಗವಾಗುವುದೆಂಬುದನ್ನು ಸಹ ಹಿಂದಿಯಲ್ಲಿ ಬರೆಯಲಾಗಿದೆ. ಉದಾಹರಣೆಗೆ ೧೦ ನಯೇ ಪೈಸೆಯ ನಾಣ್ಯದಲ್ಲಿ ರೂಪಾಯಿಯು ಹತ್ತನೇ ಒಂದಂಶವೆಂದು ಬರೆದಿದ್ದಾರೆ; ೫ ನಯೇ ಪೈಸೆಯ ನಾಣ್ಯದಲ್ಲಿ ರೂಪಾಯಿಯ ಇಪ್ಪತ್ತನೇ ಒಂದಂಶವೆಂದು ಬರೆದಿದೆ. ದಕ್ಷಿಣ ಭಾರತದ ಜನರಿಗೆ ಹಿಂದಿಯು ಕೆಚ್ಚಾಗಿ ಅರ್ಥವಾಗುವುದಿಲ್ಲವೆನ್ನುವುದು ನಿಜ. ಆದರೆ, ಈಗೀಗ ಪ್ರತಿ ಶಾಲೆಯಲ್ಲೂ ಮಕ್ಕಳಿಗೆ ಹಿಂದಿಯನ್ನು ಕಲಿಸಲಾಗುತ್ತದೆ; ಮತ್ತು ಪ್ರತಿ ಹಳ್ಳಿಯಲ್ಲೂ ಶಾಲೆಗಳಿವೆ—ಆದುದುಂದ ಮಕ್ಕಳ ಮೂಲಕ ಹಿರಿಯರು ಈ ನಾಣ್ಯಗಳ ನಿಜವಾದ ಬೆಲೆಯನ್ನು ತಿಳಿದುಕೊಳ್ಳಬಹುದು. ಏನಿಲ್ಲದಿದ್ದರೂ ನಾಲ್ಕಾರು ಸಲ ಕೈಬದಲಾಯಿಸುವಾಗ ಹೊಸ ನಾಣ್ಯಗಳ ತಿಳಿವಳಿಕೆ ತನ್ನಷ್ಟಕ್ಕೆ ತಾನೇ ಆಗುತ್ತದೆ.

ಹೊಸ ನಾಣ್ಯ ಪದ್ಧತಿಯಲ್ಲಿ ರೂಪಾಯಿಯನ್ನು ನಯಾ ಪೈಸಾಗಳಿಗೆ ವಿಭಾಗಿಸಲಾಗಿದೆ. ಎಂದು ಇಸ್ಪರಲ್ಲೇ ನಿಮಗೆ ಹೊಳೆದಿರಬಹುದು. ಹೌದು, ಒಂದು ರೂಪಾಯಿಯು ೧೦೦ ನಯೇ ಪೈಸೆಗೆ ಸಮ. ಹೊಸ ಪದ್ಧತಿಯಲ್ಲಿ ಆಣೆ, ಎರಡಾಣೆ, ಅರ್ಧಾಣೆ, ಪಾವಾಣೆ ಮತ್ತು ಪೈ ಎಂಬ ನಾಣ್ಯಗಳಿಲ್ಲ. ಆಣೆ, ಪೈ ಪದ್ಧತಿ ಸಹ ಇನ್ನುಮುಂದಿಲ್ಲ. ಪಾವಾಣೆಯ ಬದಲಿಗೆ ಪೈಸಾ ಎಂಬುದು ಬಂದಿದೆಯಾದರೂ, ಬೆಲೆಯಲ್ಲಿ ಪೈಸಾವು ಪಾವಾಣೆಗಿಂತ ತುಸು ಕಡಿಮೆಯಾಗಿದೆ. ಮೂರು ವರ್ಷಗಳ ಮಧ್ಯಾವಧಿಯು ಪಾಟೆ ಹೊಸ ನಾಣ್ಯಗಳೇ ಬಳಕೆಯಲ್ಲಿ ಬರುವಂತಾದ ಬಳಿಕ ೫, ೫ ಮತ್ತು ೧೦ ನಯೇ ಪೈಸೆಯ ನಾಣ್ಯಗಳಿಗೆ ಏನಾದರೂ ಹೊಸ ಹೆಸರನ್ನು ಕೊಡಲು ಸಾಧ್ಯವಾಗಬಹುದು. ಅಲ್ಪೇರಿಕದಲ್ಲಿ ೫ ಮತ್ತು ೧೦ ಸೆಂಟುಗಳ ನಾಣ್ಯಗಳನ್ನು ನಿಕ್ಕೆಲ್ಸ್ ಮತ್ತು ಡೈಮ್ಸ್ ಎಂದು ಕರೆಯುತ್ತಾರೆ. ಇದೇ ಪ್ರಕಾರ ನಮ್ಮ ದೇಶದಲ್ಲೂ ಒಂದು ಹೆಸರನ್ನು ಹಿಂದಿನಿಂದ ಜನರು ತಮ್ಮ ಅನುಕೂಲಕ್ಕಾಗಿ ರೂಢಿಸಿಕೊಳ್ಳಬಹುದು. ಆದರೆ ಸರಕಾರವೇ ಹೆಸರೊಂದನ್ನು ಆಚ್ಚು ಹಾಕಿಸುವುದಿಲ್ಲ ಎಂದು ಕೊಸ ಪದ್ಧತಿಯನ್ನು ಅಭ್ಯಾಸ ಮಾಡಿದವರ ಅಭಿಪ್ರಾಯ.

ಹೊಸ ಪದ್ಧತಿಯ ಎಲ್ಲ ನಾಣ್ಯಗಳನ್ನು ತೀರ ಹೊಸ ಆಕಾರಗಳಲ್ಲಿ ಮುದ್ರಿಸಲಾಗುತ್ತದೆ. ಅವುಗಳ ತೂಕ ಮತ್ತು ರೂಪಗಳಲ್ಲಿ ಈಗಿನ ನಾಣ್ಯಗಳಿಗಿಂತ ಸಾಕಷ್ಟು ಗಣನೀಯವಾದ ವ್ಯತ್ಯಾಸವು ಗೋಚರಿಸುವಂತೆ ಜಾಗರೂಕತೆ ವಹಿಸಲಾಗಿದೆ. ಇದರಿಂದಾಗಿ ಜನರು ಮೋಸಕ್ಕೆ ಗುರಿಯಾಗುವ ಸಂಭವ ಬಹಳ ಕಡಿಮೆ ಯಾಗುತ್ತದೆಂದು ಸರಕಾರದ ನಿಶ್ಚಯ. ಆದರೆ, ಮೂರು ವರ್ಷಗಳ ವರೆಗೆ ಹಳೆಯ ನಾಣ್ಯಗಳೂ ಬಳಕೆಯಲ್ಲಿರುವುದು ೧೯ನೇ ಪುಟ ನೋಡಿರಿ

SEASON DEPOSITS

Are now accepted at the Head Office and branches of the Bank of a sum of Rs. 1000 and in multiples thereof, for periods varying between 2 to 6 months at 4% interest per annum. No such deposit will run beyond 31-7-1957.

Special rate will be allowed for Single Deposits of Rupees 25,000/- and above.

THE VIJAYA BANK LTD.

H. O. MANGALORE.

Total Resources of the Bank as on 31-12-1956. | EXCEED RUPEES ONE CRORE

ರಾಷ್ಟ್ರದ ಸೌಭಾಗ್ಯ

ಜಾಗತಿಕ ಸಮಾಜದ ನಿರ್ಮಾಪಕ -ನೆಹರು.

ಭಾರತ ಮಾತೆಯು ಅನೇಕ ಸುಪುತ್ರರಿಗೆ ಜನ್ಮವನ್ನಿತ್ತಿದ್ದಾಳೆ. ಅಂಥ ಸುಪುತ್ರರಲ್ಲಿ ಶ್ರೀ ಪಂಡಿತ ನೆಹೂರವರೊಬ್ಬರು. ಸುಪುತ್ರರಿಗೆ ಜನ್ಮನನ್ನೀಯುವ ಭಾಗ್ಯವನ್ನು ಭಾರತ ಮಾತೆಗೆ ವಿಧಾತನು ಕೊಟ್ಟಿರುವನು. ಆದ್ದರಿಂದಲೇ ಒಂದಕ್ಕೊಂದು ಉಜ್ವಲ, ಪ್ರಖರ ರತ್ನಗಳು ಅವಳ ಉದರದಲ್ಲಿಂದ ಹೊರ ಬೀಳುತ್ತಲಿವೆ. ಹೊರ ಬಿದ್ದು ಪ್ರಪಂಚದ ಕಣ್ಮನಗಳನ್ನು ಚಿಮುಕಿಸುತ್ತಿರುವುವು. ಆದಿಕಾಲದಿಂದಲೂ ಈ ಪ್ರಥೆ ನಡೆದುಕೊಂಡು ಬಂದಿದೆ. ಈ ಪರಂಪರೆಯು ಭಾರತ ದೇಶಕ್ಕೆ ವಿಶಿಷ್ಟವಾಗಿರುವದೆಂದರೆ ತಪ್ಪಾಗದು. ಗಾಂಧೀಜಿಯವರು ಹಾಕಿ ಕೊಟ್ಟ ಮಾರ್ಗದ ಗುಂಟ ಶ್ರೀ ಪಂಡಿತಜಿಯವರು ತಮ್ಮ ಜೀವನ ಯಾತ್ರೆಯನ್ನು ನಡೆಸಿರುವರು.

ವಿಜ್ಞಾನದೇವ

ಮಾನವನಿಂದು ದಾನವ ರೂಪಿಯಾದ ವಿಜ್ಞಾನದ ಬೆನ್ನು ಹತ್ತಿರುವನು. 'ವಿಜ್ಞಾನ ದೇವ' ಎಂದು ಮುತ್ತ ಕಂಠದಿಂದ ಸಾರುತ್ತಿದ್ದಾನೆ. ನಾಸ್ತಿಕರಾದ ಪಾಶ್ಚಿಮಾತ್ಯರು ವಿಜ್ಞಾನವೇ ದೇವರು ಎಂದು ಅಂದರೆ ಆಶ್ಚರ್ಯವಿಲ್ಲ. ಆದರೆ ದೇವರ ಅಸ್ತಿತ್ವವನ್ನು ಮಾನ್ಯಮಾಡುವ ಭಾರತೀಯರು ಸಹ ವಿಜ್ಞಾನದ ಬೆನ್ನು ಹತ್ತಿರುವದು ಆಶ್ಚರ್ಯದ ಸಂಗತಿಯಲ್ಲದೆ ಇನ್ನೇನು? ಇದಕ್ಕೆ ಕಾರಣವಿದ್ದೇ ಇದೆ. ಮಾನವನಿಂದು ವಿಜ್ಞಾನದ ಸೂತ್ರದಗೊಂಬೆಯಾಗಿದ್ದಾನೆ. ಇದನ್ನು ಬಹಿರಂಗವಲ್ಲಿ ಅವನು ಒಪ್ಪಿಕೊಳ್ಳದಿದ್ದರೂ—ಅವನ ಆಂತರಿಕ ಭಾವನೆಯು ನಂಜಿನೆಯನ್ನು ಅವನು ಮಾಡುವುದು ಕಠಿಣವೇ ಇರುವುದು ವಿಜ್ಞಾನ ಮಾನವ, ಜನಾಂಗಕ್ಕೆ ಅನುದವನ್ನೆಂದಿಗೂ ಒದಗಿಸುವುದಿಲ್ಲ. ಆದರೆ ಮಾನವನನ್ನು ಗುಲಾಮನನ್ನಾಗಿ ಮಾಡುವುದು. ನೀರನೇಲಿನ ಬುರಡಿಯನ್ನು ನಂಬಿ ಕೊಳೆಯಲ್ಲಿ ಈಜುಬಿದ್ದವನ ಪರಿಸ್ಥಿತಿಯಾಗುವಂತೆ- ವಿಜ್ಞಾನದ ಬೆನ್ನು ಹತ್ತಿದವನ ಪರಿಸ್ಥಿತಿಯಾಗುವದೆಂದು ಭಾರತೀಯರ ನಂಬಿಕೆ! ವಿಜ್ಞಾನದ ಉಪಯೋಗವನ್ನು ಮಾನವನು ಮಾಡಿಕೊಳ್ಳುವದಕ್ಕೆ ಶಕ್ಯವಿದ್ದರೂ ಎಸ್ಟರಮಟ್ಟಿಗೆ ಮಾಡಿಕೊಳ್ಳುತ್ತಿದ್ದಾನೆ! ಇದರತ್ತ ನೋಡಿದರೆ ಮಾನವ ತನ್ನ ಮತ್ತು ಮಾನವ ಜನಾಂಗದ ಹಾನಿಯನ್ನು ಮಾಡುತ್ತಿದ್ದಾನೆಂದು ಹೇಳಬಹುದು. ಆದ್ದರಿಂದ ಆರು ಸಾವಿರ ವರ್ಷಗಳ ಪೂರ್ವದಲ್ಲಿ ನಮ್ಮ ಹಿರಿಯರು ಇದನ್ನು ಕಂಡುಹಿಡಿದು ಆಧ್ಯಾತ್ಮಿಕ ಪ್ರಧಾನ ಧರ್ಮವನ್ನು ನಮಗೆ ಬೋಧಿಸಿದ್ದಾರೆ.

ತಿರುವು ಮುರುವು

ಭಾರತವು ಸರ್ವ ವಿದ್ಯೆಗಳ ಕೇಂದ್ರ. ತನ್ನ ಈ ಪರಂಪರೆಯನ್ನು ಆದಿಕಾಲದಿಂದಲೂ ಅದು ನಡಿಸಿಕೊಂಡು ಬಂದಿರುವದು. ವಿಜ್ಞಾನವನ್ನು ಅರ್ಥಕ್ಕೆನೆ ಕೈ ಬಿಟ್ಟು ಭಾರತೀಯರು ಪಾರಮಾರ್ಥಿಕದ ಬೆನ್ನು ಹತ್ತಿರುವರು. ಆದರೂ ಸಹ ಅವರು ಸಂಪೂರ್ಣವಾಗಿ ವಿಜ್ಞಾನವನ್ನು ಕೈಬಿಡಲಿಲ್ಲ. ಅಥರ್ವಣವಾದವನ್ನೆಲ್ಲ ವಿಜ್ಞಾನದಿಂದಲೇ ತುಂಬಿ ಇಟ್ಟಿದ್ದಾರಲ್ಲದೆ ಇಂದಿನ ವಿಜ್ಞಾನದ ಪರಮೋಚ್ಚ ಬಿಂದು ವಿನ ನೂಲವನ್ನು ಶೋಧಿಸಿದರೆ ಅಥರ್ವಣ ವಾದವೆಂದು ಎಲ್ಲರೂ ಒಪ್ಪಬೇಕಾದ ವಿಷಯವಾಗಿರುವುದು. ಪಾಶ್ಚಿಮಾತ್ಯ ಪಂಡಿತರು ಇದನ್ನು ಒಪ್ಪುತ್ತಾರೆ. 'ಕಾಲಾಯತಸ್ಮೈನಮಃ ಎಂಬಂತೆ ಭಾರತವಿಂದು ತನ್ನ ಹಿರಿಮೆಯನ್ನು ಕೆಲಪೊಂದು ಅಂಶದಿಂದ ಕಳೆದುಕೊಂಡಿಪೆಯೆಂದು ಹೇಳಬಹುದು. ಅದಕ್ಕೆ ಕಾರಣವೆಂದರೆ ಭಾರತೀಯರ ಮೇಲಾದ ಪರದೇಶದವರ ಆಕ್ರಮಣಗಳು. ಮತ್ತು ಅವರು ತಮ್ಮ ಧರ್ಮ-ಸಂಸ್ಕೃತಿಗಳನ್ನು ಭಾರತದಲ್ಲಿ ಪ್ರಸ್ತಾಪಿಸುವುದಕ್ಕೆ ಪ್ರಯತ್ನಿಸಿದುದು! ಬ್ರಿಟಿಷರಂತೂ ಭಾರತೀಯರ ಆಸ್ತಿತ್ವವನ್ನೇ ಬುಡಮೇಲುಮಾಡುವುದಕ್ಕಾಗಿ ಪ್ರಯತ್ನಿಸಿದರು. ಆದರೆ ಅವರಿಗೇ ಕೊನೆಗೆ ಭಾರತವನ್ನು ಬಿಟ್ಟು ಹೋಗಬೇಕಾಯಿತು. ಬುದ್ಧಧರ್ಮದ ಪರಿಸ್ಥಿತಿಯೂ ಭಾರತದಲ್ಲಿ ಹೀಗೆಯೇ ಆಯಿತು. ಇದಕ್ಕೆ ಕಾರಣವೆಂದರೆ ದೇವರ ಅಧಿಷ್ಠಾನ ನಮ್ಮ ಧರ್ಮ ಸಂಸ್ಕೃತಿಗಳಲ್ಲಿರುವುದು. ಸ್ವಾಮಿ ವಿವೇಕಾನಂದರು ಹೇಳುವಂತೆ 'ನಮ್ಮ ಧರ್ಮವು ನಿಸರ್ಗದಂತಿರುವುದು. ಯಾರಾದರೂ ಅದನ್ನು ಕಡಿದರೆ ಅದು ಪುನಃ ರಭಸದಿಂದ ಚಿಗುರೊಡೆಯುವುದು!'

ಇಂಥ ಭಾರತವಿಂದು ಪರದೇಶದವರ ಡೆಗೆ—ಪ್ರತಿಯೊಂದು ಸಂಗತಿಗಾಗಿ ಕೈಯೊಡ್ಡುವ ಪರಿಸ್ಥಿತಿಯುಂಟಾಗಿರುವದು. ಆದರೆ ಈಗ ಪುನಃ ಆ ಕಾಲವು ಹೊರಟು ಹೋಗಿರುವುದು. ಶರದಾಸ್ಯದಿಂದ ನಾವು ಪಾರಾಗಿದ್ದೇವೆ. ಲಾಲಾಲಜಪತರಾಯ, ಲೋಕಮಾನ್ಯ ತಿಲಕರು, ಮತ್ತು ಮಹಾತ್ಮಾ ಗಾಂಧಿ ಮೊದಲಾದ ಪುಣ್ಯ ಪುರುಷರ ಪ್ರಯತ್ನದ ಫಲರೂಪವಾಗಿ ಭಾರತಕ್ಕೆಂದು ಸ್ವರಾಜ್ಯ ಪ್ರಾಪ್ತಿಯಾಗಿರುವದು. ಗಾಢವಾಗಿ ನಿದ್ರೆಹೋದ ಭಾರತವಿಂದು ಎಚ್ಚೆತ್ತಿರುವದು. ಅದಕ್ಕೆ ತನ್ನ ಗಾಢ ನಿದ್ರೆಯ ಅಸಿಷ್ಟ ಪರಿಣಾಮದ ಅರಿವುಂಟಾಗಿರುವುದು. ರಭಸದಿಂದ ಅದು ನೇವರಿಸಿಕೊಳ್ಳುತ್ತಿದೆ. ತನ್ನ ಸ್ಥಾನ ಮಾನಗಳನ್ನು ಗಳಿಸುವುದಕ್ಕಾಗಿ ಅದು ಜೋರಿನಿಂದ ಪ್ರಯತ್ನ ನಡಿಸಿರುವುದು. ತಮ್ಮ ಆದರ್ಶ, ಶ್ರದ್ಧಾಕೇಂದ್ರ, ಮಾನ ಬಿಂದು, ವೀರ ಪುರುಷರ ಮತ್ತು ಪುಣ್ಯ ಪುರುಷರ ಸ್ಮರಣೆಯನ್ನು ಮಾಡಿಕೊಳ್ಳುತ್ತಿದೆ.

ಇಪ್ಪತ್ತನೆಯ ಶತಮಾನದಲ್ಲಿ ಜಗತ್ತನ್ನೇ ಹಾಳು ಮಾಡುವಂಥ ಎರಡು ಮಹಾಯುದ್ಧಗಳನ್ನು ಪಾಶ್ಚಿಮಾತ್ಯರು ಮಾಡಿದ್ದಾರೆ. ವಿಜ್ಞಾನದಿಂದ ಅವರು ದಿನದಿನಕ್ಕೆ ಉನ್ಮತ್ತರಾಗಿ ಅಸುರಿ ಶಕ್ತಿಗಳನ್ನು • ಕೈಯಲ್ಲಿ ಹಿಡಿದು ಕೊಂಡು ದಾನವರಂತೆ ವರ್ತಿಸುತ್ತಿದ್ದಾರೆ. ತಮ್ಮ ಮುಂದೆ ಯಾರಿದ್ದಾರೆ! ಎಂಬ ಭಾವನೆ ಅವರಿಗುಂಟಾಗಿರುವದು. ತಾವು ಮಾಡಿದ್ದೇ ಶ್ರೇಷ್ಠ! ತಾವು ಶ್ರೇಷ್ಠರು! ಎಂಬ ಮಂಕು ಕಲ್ಪನೆಯನ್ನು ಅವರು ಪ್ರಸಾರಮಾಡುವದಕ್ಕೆ ಪ್ರಯತ್ನಿಸಿರುವರು. ಆದರೆ ಲೋಕಮಾನ್ಯ ತಿಲಕರು ಮತ್ತು ಮಹಾತ್ಮಾ ಗಾಂಧಿಯವರು ಯೋಗ್ಯ ವೇಳೆಯಲ್ಲಿ ಅವರಿಗೆ ಎಚ್ಚರಿಕೆಯನ್ನು ಕೊಡುತ್ತ ಬಂದಿದ್ದಾರೆ. ಉನ್ಮತ್ತ ಪಶುಗಳಾಗ ಬೇಡಿರೆಂದು ಅವರಿಗೆ ಉಪದೇಶವನ್ನು ಮಾಡುತ್ತ ಬಂದಿದ್ದಾರೆ. ಆದರೆ ಅಸುರ ವೃತ್ತಿಯಿಂದ ರಾಕ್ಷಸೀ ಮಹತ್ವಾಕಾಂಕ್ಷೆಯಿಂದ ಕೂಡಿದ ಪಾಶ್ಚಿಮಾತ್ಯರು - ತಮ್ಮುದನ್ನು ಬಿಡಲಿಲ್ಲ. ಸತ್ಯ ಅಹಿಂಸೆಗಳನ್ನು ಬೋಧಿಸಿದ ಯೇಸು ಸ್ವಾಮಿಯ ಉಪದೇಶವನ್ನು ಅಲ್ಲಗಳೆದರು. ಆದರೆ ಭಾರತ ಮಾತ್ರ ಈ ರೀತಿಯಲ್ಲಿ ಸತ್ಯಕ್ಕೆ ಕುಂದುಬರುವಂತೆ ವರ್ತಿಸಿಲ್ಲ ತಮ್ಮ ಪ್ರಧಾನವಾಗಿಲ್ಲ! ಆದ್ದರಿಂದ ಪ್ರತಿಯೊಂದು—ದೇಶದಲ್ಲಿ ಅಶಾಂತಿಯು ಪಸರಿಸಿತೆಂದರೆ ಅದರ ನಿವಾರಣೆಯು ಭಾರವು ಭಾರತದೆಡೆಗೇ ಬರುವುದು. ಇದರ ಅರ್ಥ ಇಷ್ಟೇ ಇವೆ. ಭಾರತದ ಅಧಿಕಾರವನ್ನು ಪಾಶ್ಚಿಮಾತ್ಯರಿಂದು ಅರಿತಿದ್ದಾರೆ. ಪಂಡಿತ ನೆಹರೂಗಳಂತಹ ಕರ್ತೃತ್ವಶಾಲಿಗಳಾದ ಸುಧಾರಿಗಳು ದೊರೆತಿಯು ಭಾರತದ ಸೌಭಾಗ್ಯವೆಂದು ಮುಕ್ತಕಂಠದಿಂದ ಆಡಿತೋರಿಸುತ್ತಿದ್ದಾರೆ. ೬೮ ವರ್ಷದ ಆಯುಷ್ಯದಲ್ಲಿ ಪಾದಾರ್ಪಣ ಮಾಡಿದ ಪಂಡಿತಜಿಯವರು ಓರ್ವ ತರುಣರಂತೆ ಇಂದು ಭಾರತದಲ್ಲಿ ವರ್ತಿಸುತ್ತಿರುವರಷ್ಟೇ ಅಲ್ಲದೆ ಪರದೇಶಗಳಲ್ಲಿ ಸಹ ಹಾಗೆಯೇ ವರ್ತಿಸುವರು. ಅವರಿಂದು ಭಾರತೀಯರಿಗಷ್ಟೇ ಪ್ರಿಯರಾಗಿಲ್ಲ. ಪ್ರಪಂಚಕ್ಕೆ ಪ್ರಿಯರಾಗಿದ್ದಾರೆ. ಪ್ರಪಂಚವು ಅವರಾಜ್ಞೆಯ ಕೊರಗಿಲ್ಲ. ಅಷ್ಟೊಂದು ಹಿರಿಮೆಯಿಂದ ಕೂಡಿದ ವ್ಯಕ್ತಿತ್ವ ಪಂಡಿತಜೀಯವರದು ಇರುವುದು. ಅವರು ಭಾರತೀಯ ಸಂಸ್ಕೃತಿಯ ಆದರ್ಶವನ್ನು ಪ್ರಪಂಚದಲ್ಲೆಲ್ಲ ಪಸರಿಸಿಯೇ ತೀರುವರು.

ಶಾಂತಿ ಜನಕ ನೆಹರೂ

ಪಂಡಿತಜೀಯವರು ಕಾಂಗ್ರೆಸ್ಸಿನಲ್ಲಿ ಸೇರಿದಾಗಿನಿಂದಿಂದ ಶಾಂತಿಯಿಂದಲೇ ತಮ್ಮ ಜೀವನವನ್ನು ನಡೆಸುತ್ತ ಬಂದಿದ್ದಾರೆ. ಭಾರತೀಯ ಸಂಸ್ಕೃತಿಯ ಜೀವಾಳವಾದ ಸತ್ಯ ಮತ್ತು ಅಹಿಂಸೆಯ ಪ್ರತೀತವನ್ನು ತಮ್ಮುಮುದಿಟ್ಟುಕೊಂಡಿದ್ದಾರೆ. ಪಂಚಶೀಲದಿಗಳ ಪುನರುಜ್ಜಾರಮಾಡಿ ಆದರಂತೆ ನಡೆಸುವ ಪ್ರಯತ್ನವನ್ನು ಮಾಡಿರುವರಷ್ಟೇ ಅಲ್ಲದೆ—ಅದರಂತೆ ನಡೆಯುವುದಕ್ಕೆ ಸ್ಫೂರ್ತಿಯನ್ನು ಕೊಡುತ್ತಿದ್ದಾರೆ. ಗಾಂಧೀಜಿಯವರಂಥ ಗುರುಗಳು ಅವರಿಗೆ ದೊರೆತದ್ದರಿಂದ ಪ್ರತಿಯೊಂದು ಕಾರ್ಯವನ್ನು ಯೋಗ್ಯ ರೀತಿಯಿಂದ ಕೈಕೊಂಡು ಅದನ್ನು ನಿರ್ವಹಿಸುವ ಜಾಣ್ಮೆ ಅವರಿಗುಂಟಾಯಿತು. ಹೆಜ್ಜೆಜ್ಜೆಗೆ ಗಾಂಧೀಜಿಯವರು ಪಂಡಿತಜೀಯವರಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಯೋಗ್ಯ ತತ್ವಗಳ ಉಪದೇಶವನ್ನು ಮಾಡುತ್ತಿದ್ದರು. ಗಾಂಧೀಜಿಯವರ ವ್ಯಕ್ತಿತ್ವದ ಸಂಸ್ಕಾರ ಪಂಡಿತಜಿಯವರ ಜೀವನದ ಮೇಲಾದ್ದರಿಂದ ಗಾಂಧೀಜಿಯವರತೆಯೇ ತಮ್ಮ ಜೀವನವನ್ನು ಮಾರ್ಪಡಿಸಿಕೊಳ್ಳುವುದಕ್ಕೆ ಅವರಿಗೆ ಅವಕಾಶ ದೊರೆಯಿತು.

ಭಾರತ ಖಂಡದ ವಿಭಜನೆಯನ್ನು ಮಾಡಿದ್ದು—ಕೆಲವರಿಗೆ ಸಂಬಂಧದ ಸಂಗತಿಯಾಗಿರುವುದು. ಅದು ಕೆಲವೊಂದು ಅಶದಲ್ಲಿ ನಿಜವೂ ಇರುವುದು. ಆದರೆ ಪಾಯಾದಿಗಳಾದ ಪಾಂಡವ—ಕೌರವರು ಜಗಳಾಡುವುದು ಸರಿಯಲ್ಲವೆಂದು ಪಂಡಿತಜೀಯವರು ನಿರ್ಧರಿಸಿದರು ಸೂಜಿಯ ಮೊನೆಯ ಮೇಲೆ ಹತ್ತುವಷ್ಟು ಮಣ್ಣನ್ನು ಪಾಂಡವರಿಗೆ ನಾನು ಕೊಡಲಿಕ್ಕಿಲ್ಲ ....ಎಂದು ಛಲ ಹಿಡಿದ ದುರ್ಯೋಧನನಂತೆ ಪಂಡಿತಜೀಯವರು ವರ್ತಿಸಲಿಲ್ಲ. ದುರ್ಯೋಧನನಂತೆ ಛಲವನ್ನು ಅವರು ಹಿಡಿದಿದ್ದಾದರೆ ಅದರ ಪೂರಕ ಭಾರತಯುದ್ಧವುಂಟಾದಂತೆ ಸ್ವರಾಜ್ಯ ಪ್ರಾಪ್ತಿಯ ಸಮಯದಲ್ಲಿ ದೊಡ್ಡದೊಂದು ಯುದ್ಧವೇ ಆಗುವ ಸಂಭವವಿದ್ದಿತು. ಮುತ್ಸದ್ದಿಗಳಾದ ಸಮ್ಮಂದಿರು—ಆದರೊಡನೆ ಪಾಯಾದಿತನ ಬೇಡವೆಂದು ಅವರು ಬೇಡಿದ ರಾಜ್ಯವನ್ನು ಅವರಿಗೆ ಕೊಟ್ಟರು. ದುರ್ಯೋಧನನು ಪಾಂಡವರು ಬೇಡಿದ ಐದು ಹಳ್ಳಿಗಳನ್ನು ಕೊಟ್ಟಿದ್ದರೆ ಭಾರತಯುದ್ಧವಾಗುತ್ತಿದ್ದಿಲ್ಲ. ಪಾಕಿಸ್ತಾನವು ಬೇಡವೂ—ಅವರು ತಮ್ಮಿಂದ ಬೇರೆಯಾದರೂ ಪಂಡಿತ ನೆಹರೂರವರು—ಧನುರಾಜನಂತೆ ತಮ್ಮ ವರ್ತನನನ್ನಿರಿಸಿದರೆ. ಎಲ್ಲರೂ ನಮ್ಮವರೇ ಇದ್ದಾರೆಂಬ ತರ್ತನವನ್ನಿರಿಸಿಕೊಂಡಿದ್ದಾರೆ. ಪಾಕಿಸ್ತಾನಕ್ಕೆ ಪ್ರಸಂಗೋಪಾತ್ತ ಸಹಾಯವನ್ನು ಒಲ್ಲಿಸುವುದಕ್ಕೆ ಸಹ ಅವರು ಹಿಂಜರಿದಿಲ್ಲ ಹಿಂದೆ ಮುಂದೆ ನೋಡಿಲ್ಲ.

ಪಾಕಿಸ್ತಾನ—ಕಾಶ್ಮೀರ

(೧) ಪಾಕಿಸ್ತಾನವು ಇಷ್ಟರಿಂದ ಸಂತ ಪ್ಪವಾಗದೆ ಭಾರತದ ಅವಿಭಾಜ್ಯ ಭಾಗವ

(೧೦ನೇ ಪುಟನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.,

ಸ್ಥಾಪನೆ: ೧೯೨೩] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಅಧಿಕೃತ ಬಂಡವಾಳ	...	ರೂ. 56,00,000
ಚಲಾವಣೆ ಬಂಡವಾಳ	...	ರೂ. 33,23,787
ವರ್ಗಣಿ (ಪಾಲು) ಬಂಡವಾಳ	...	ರೂ. 32,11,000
ತೆತ್ತ ಬಂಡವಾಳ	...	ರೂ. 27,45,000
ಕ್ಷೇಮನಿಧಿ	...	ರೂ. 15,00,000

ತಾ. 30-9-1956ರಲ್ಲಿ ನಮ್ಮ ಚಲಾವಣೆ ನಿಧಿ 10 ಕೋಟಿಗೂ ಮಿಕ್ಕಿದೆ

(ನವೋದಿತ ರಾಜ್ಯಗಳಲ್ಲಿ) ನಮ್ಮ ಶಾಖೆಗಳು

(ವಿಶಾಲ) ನನಮೈಸೂರು	59
ಆಂಧ್ರ ಪ್ರದೇಶ	14
ಕೇರಳ	13
ಬೊಂಬಾಯಿ	8
ಮದ್ರಾಸು	2

ಟಿ. ಎ. ಪೈ ಬಿ. ಕಾಂ. (ಬೊಂಬಾಯಿ) ಎಂ. ಎಲ್. ಎ., ಜನರಲ್ ಮೆನೇಜರ್.

ಟಿ. ಎಂ. ಎ. ಪೈ, ಎಂ. ಬಿ., ಬಿ ಎಸ್. ಮೆನೇಜಿಂಗ್ ಡೈರೆಕ್ಟರ್.

The Canara Industrial & Banking Syndicate Ltd.

ರೊಕ್ಕತರುವ ಪೈರು

ಗೇರು ಬೀಜ ಹಾಗು ಸಂಬಾರ ಪದಾರ್ಥಗಳು ಕೋಟ್ಯಂತರ ರೂಪಾಯಿಯನ್ನು ವಿಶ್ವದ ಮಾರುಕಟ್ಟೆಯಲ್ಲಿ ಭಾರತಕ್ಕೆ ಸಂಪಾದಿಸಿ ಕೊಡುತ್ತವೆ.

ನುಲಬಾರಿನ ಕಣ್ಣಾನೂರಿನಲ್ಲಿ ಈ ತಿಂಗಳ ಪ್ರಥಮ ವಾರದಲ್ಲಿ ಸಂಬಾರ ಪದಾರ್ಥಗಳು ಮತ್ತು ಗೇರುಬೀಜದ ಕೈಗಾರಿಕೆಯ ಸಂಬಂಧದಲ್ಲಿ ಒಂದು ಪ್ರದರ್ಶನ ನಡೆಯಿತು. ಈ ಪ್ರದರ್ಶನವು ಯಶಸ್ವಿಯಾಗಿ ಭಾರತವು ಈ ರೊಕ್ಕದ ಪೈರುಗಳ ವಿಸ್ತರಣೆಗೆ ಪ್ರಯತ್ನಿಸ ಬೇಕೆಂಬಬಗ್ಗೆ ಜನರಲ್ಲಿ ಹೆಚ್ಚಿನ ಜಾಗೃತಿಯಾಯಿತು. ಏಕೆ?

ಗೇರುಬೀಜ

ಭಾರತವು ವರ್ಷಕ್ಕೆ ಅಂ.ಭಾಗ ಟನ್ನು ಗಳ ಹಸಿ ಗೋಡಂಬಿಯನ್ನು ಉತ್ಪಾದಿಸಿ ವಿಶ್ವದಲ್ಲಿ ಗೋಡಂಬಿಯನ್ನು ಬೆಳೆಯುವ ರಾಷ್ಟ್ರಗಳಲ್ಲಿ ಪ್ರಥಮ ಸ್ಥಾನ ಗಳಿಸಿದೆ. ಗೇರು ಪಪ್ಪು ಹಾಗೂ ಗೇರೆಣ್ಣೆ—ಈ ಎಳ್ಳುಗಳ ವಿಚಾರದಲ್ಲಿ ನಡೆಯುವ ಅಂತರ ರಾಷ್ಟ್ರೀಯ ವ್ಯಾಪಾರದಲ್ಲಿ ನೂರಕ್ಕೆ ೯೦ ರಷ್ಟು ಭಾರತೀಯರ ಕೈಯುಳ್ಳಿದೆ. ಅಮೇರಿಕದ ಸಂಯುಕ್ತ ಸಂಸ್ಥಾನಗಳು ಹಾಗೂ ಗ್ರೇಟ್ ಬ್ರಿಟನ್‌ಗಳಿಗೆ ಮುಖ್ಯವಾಗಿ ಗೋಡಂಬಿ ಉಳ್ಳನ್ನಗಳನ್ನು ವಿಕ್ರಯಿಸಲಾಗುತ್ತಿದೆ. ೧೯೫೫ ಜೂನ್‌ರಲ್ಲಿ ಭಾರತವು ೧೫.೯ ಕೋಟಿ ರೂ.ಗಳ ಬೆಲೆ ಬಾಳುವ ಗೇರು ಪಪ್ಪನ್ನು ರಫ್ತು ಮಾಡಿತು. ವರ್ಷಕ್ಕೆ ೬೦ ಲಕ್ಷ ರೂ.ಗಳ ಬೆಲೆಬಾಳುವ ಗೇರೆಣ್ಣೆಯನ್ನು ರಫ್ತು ಮಾಡಲಾಗುತ್ತಿದೆ.

ಗೋಡಂಬಿಯ ಉತ್ಪಾದನೆಯಲ್ಲಿ ಭಾರತವು ಉಳಿದ ರಾಷ್ಟ್ರಗಳಿಗಿಂತಲೂ ಮುಂದಿದ್ದಾಗ್ಯೂ ಹಸಿ ಗೋಡಂಬಿಯ ವಿಚಾರದಲ್ಲಿ ದೇಶವು ಸ್ವಪರಿಪೂರ್ಣತೆ ಗಳಿಸಿಲ್ಲ. ಭಾರತದಲ್ಲಿರುವ ಗೋಡಂಬಿ ಕಾರ್ಖಾನೆಗಳಿಗೆ ಕೇವಲ ಎಂಟು ಹತ್ತು ತಿಂಗಳ ಗಾಗುವಷ್ಟು ಗೋಡಂಬಿಯನ್ನು ಮಾತ್ರ ದೇಶದಲ್ಲಿ ಈಗ ಉತ್ಪಾದಿಸಲಾಗುತ್ತಿದೆ. ಹೀಗಾಗಿ ಉಳಿದ ಅವಧಿಗೆ ಅಗತ್ಯವಾದ ಪ್ರಮಾಣದ ಗೋಡಂಬಿಯನ್ನು ಪೂರ್ವ ಆಫ್ರಿಕಾದಿಂದ ಆಮದುಮಾಡಿಕೊಳ್ಳುವುದು ಅನಿವಾರ್ಯವಾಗಿದೆ.

ಆಮದು ಮಾಡಿಕೊಳ್ಳುವ ಬಗ್ಗೆ ಇರುವ ಅಗತ್ಯವನ್ನು ತಗ್ಗಿಸುವುದಕ್ಕಾಗಿ ಭಾರತ ಸರ್ಕಾರದವರು ೧೯೬೦—೬೧ರ ವೇಳೆಗೆ ಹಸಿ ಗೋಡಂಬಿಯ ಉತ್ಪಾದನೆಯನ್ನು ೧.೦೬,೦೦೦ ಟನ್ನುಗಳಿಗೆ ಹೆಚ್ಚಿಸುವ ಸಂಬಂಧವಾದ ಅನೇಕ ಯೋಜನೆಗಳನ್ನು ರೂಪಿಸಿರುವರು. ಇವುಗಳಲ್ಲಿ ಎರಡು ಯೋಜನೆಗಳಿಗೆ ಮಂಜೂರಾತಿ ದೊರೆತಿದೆ. ಮದರಾಸು ರಾಜ್ಯದ ಪೂರ್ವ ಕರಾವಳಿ ಜಿಲ್ಲೆಗಳಲ್ಲಿ ೪೦,೦೦೦ ಎಕರೆಗಳ ಅರಣ್ಯ ಪ್ರದೇಶದಲ್ಲಿಯೂ ಮತ್ತು ಕೇರಳ ರಾಜ್ಯದಲ್ಲಿ೫,೦೦೦ ಎಕರೆಗಳಷ್ಟು ಅರಣ್ಯ ಪ್ರದೇಶಗಳಲ್ಲಿಯೂ ಗೋಡಂಬಿಯನ್ನು ಬೆಳಗುವಳಿಗೆ ತರುವುದೇ ಈ ಎರಡು ಯೋಜನೆಗಳಾಗಿವೆ. ಈ ರೀತಿಯಾಗಿ, ಸರ್ಕಾರದವರು 'ಪ್ಲಾಂಟೇಷನ್' ಪ್ರಮಾಣದಲ್ಲಿ ಅರಣ್ಯ ಪ್ರದೇಶಗಳಲ್ಲಿಯೂ, ಜಮೀನುದಾರರು ತಮ್ಮ ಸಣ್ಣ ಸುಟ್ಟ ಹಡುವಳಿ ಭೂಮಿಗಳಲ್ಲಿಯೂ, ಗೋಡಂಬಿಯನ್ನು ಬೆಳೆಯುವರು.

ಗೋಡಂಬಿಯನ್ನು ಬೆಳೆಯುವವರಿಗೆ ಎಕರೆಗೆ ರೂ. ೧೫೦ಗಳಂತೆ ಸಾಲದ ರೂಪದಲ್ಲಿ ಹಣಕಾಸಿನ ನೆರವನ್ನು ಕೊಡಲಾಗುವುದು.

ಜೊತೆಗೆ, ಮಧ್ಯ ಪ್ರದೇಶ ಹಾಗೂ ಕೇರಳ ರಾಜ್ಯಗಳಲ್ಲಿ ಗೋಡಂಬಿ ಸಾಗುವಳಿಯ ಅಭಿವೃದ್ಧಿ ಸಂಬಂಧವಾದ ಯೋಜನೆಗಳಿಗೆ ಮಂಜೂರಾತಿ ನೀಡಲಾಗಿದೆ. ಮಧ್ಯ ಪ್ರದೇಶದಲ್ಲಿ ಅಭಿವೃದ್ಧಿ ಯೋಜನೆಯನ್ನು ಜಸ್ಥಾನಕ್ಕೆ ತರಲಾಗಿದೆ

ಮೈಸೂರು, ಮದರಾಸು, ಒರಿಸ್ಸಾ, ಪಶ್ಚಿಮ ಬಂಗಾಳ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪ ಸಮೂಹ ಈ ಪ್ರದೇಶಗಳಲ್ಲಿ ಗೋಡಂಬಿಯನ್ನು ಉತ್ಪಾದಿಸುವ ಸಂಬಂಧವಾದ ಯೋಜನೆಗಳನ್ನು ಪರೀಕ್ಷಿಸಲಾಗುತ್ತಿದೆ. ಆಸ್ಸಾಂ ರಾಜ್ಯದಲ್ಲಿ ಹೆಚ್ಚಾರು ಕೃಷಿ ಕ್ಷೇತ್ರಗಳಲ್ಲಿ ಗೋಡಂಬಿಯ ಬೆಳೆಯ ಬಗ್ಗೆ ಪ್ರದರ್ಶನವೀಯಲಾಗುತ್ತಿದೆ ಈ ರಾಜ್ಯದಲ್ಲಿ ಹೆಚ್ಚಿನ ಕ್ಷೇತ್ರವನ್ನು ಗೋಡಂಬಿಯ ಸಾಗುವಳಿಗೆ ತರುವ ನಿರೀಕ್ಷೆಯಿದೆ.

ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸುವ ವ್ಯಾಪಕವಾದ ಯೋಜನೆಯೊಂದಿರುವುದು. ಈಗಾಗಲೆ ಐದು ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಮೈಸೂರು ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಉಳ್ಳಾಲ ಕೇರಳ ರಾಜ್ಯದ ಕೊಟ್ಟರಕಾರ ಮುಂಬೈ ರಾಜ್ಯದ ರತ್ನಾಗಿರಿ, ಆಂಧ್ರ ರಾಜ್ಯದ ಬಾಪಟ್ಲ, ಮತ್ತು ಪೇಲಿನ ಆಸ್ಸಾಂ ರಾಜ್ಯದಲ್ಲಿ ಜೋರ್ಹತ್ ಸವಿಪದಲ್ಲಿ ಈ ಕೇಂದ್ರಗಳ ಸ್ಥಾಪನೆಯಾಗಿದೆ. ಈ ಕೇಂದ್ರಗಳು ಗೋಡಂಬಿ ಬೆಳೆಗೆ ಸಂಬಂಧಿಸಿದ ನಾನಾ ವಿಚಾರಗಳ ಬಗ್ಗೆ ಸಂಶೋಧನೆ ನಡೆಸುತ್ತಿವೆ.

ಮಧ್ಯ ಪ್ರದೇಶದ ಅಲಿರಾಜಪುರದಲ್ಲಿ ಸಂಶೋಧನಾ ಹಾಗೂ ಒಟ್ಟಲು ಪಾತಿ (ರಿಸರ್ಚ್ ಕಂ ನರ್ಸರಿ) ಕೇಂದ್ರವೊಂದನ್ನು ಸ್ಥಾಪಿಸುವ ಯೋಜನೆಯನ್ನು ಸಿದ್ಧಗೊಳಿಸಲಾಗಿದೆ. ಮಧ್ಯ ಪ್ರದೇಶ ರಾಜ್ಯದಲ್ಲಿ ಗೋಡಂಬಿ ಸಾಗುವಳಿಯನ್ನು ನೊಡ್ಡ ಪ್ರಮಾಣದಲ್ಲಿ ಪ್ರಾರಂಭಿಸುವುದೇ ಈ ಯೋಜನೆಯ ಉದ್ದೇಶವಾಗಿದೆ. ಈ ರಾಜ್ಯದಲ್ಲಿರುವ ಬುಡಕಟ್ಟಿನ ಜನರಿಗೆ ಈ ಯೋಜನೆಯಿಂದ ಅನುಕೂಲವಾಗುವುದು ಹೆಚ್ಚು. ಗೋಡಂಬಿಯನ್ನು ಉತ್ಪಾದಿಸುವ ವೃಕ್ಷಗಳು ಸ್ಥಳದಲ್ಲಿ ದುರ್ಲಭವಾಗಿರುವುದರಿಂದ ಮುಂಬೈ, ಮದರಾಸು ಮತ್ತು ಕೇರಳ ರಾಜ್ಯಗಳಿಂದ ಉತ್ತಮ ವರ್ಜಿಯ ಬೀಜಗಳನ್ನು ತರಿಸುವುದನ್ನು ಈ ಯೋಜನೆಯು ನಿರೂಪಿಸಿದೆ.

ಕರಿಮೆಣಸು

ಕಳೆದ ವಿಶ್ವ ಸಮರದ ನಂತರ ಭಾರತವು ಕರಿಮೆಣಸಿನ ರಫ್ತಿನಿಂದ ಪ್ರತಿವರ್ಷವೂ ೩೫ ಕೋಟಿ ರೂಗಳ ಹಣವನ್ನು ವಿದೇಶೀ ಧನ ವಿನಿಮಯದ ಮೂಲಕ ಗಳಿಸುತ್ತಿದೆ. ವಿದೇಶೀ ಧನ ವಿನಿಮಯ ಗಳಿಸುತ್ತಿರುವ ವಾಣಿಜ್ಯ ವಸ್ತುಗಳಲ್ಲಿ ಕರಿ ಮೆಣಸು ಕೂಡ ಒಂದು. ಸಮರ ಪೂರ್ವದಲ್ಲಿ ವರ್ಷಕ್ಕೆ ೧೪,೫೦೦ ಟನ್ನು ಗಳ ಕರಿ ಮೆಣಸನ್ನು ಬೆಳೆಯಲಾಗುತ್ತಿತ್ತು. ೧೯೫೫-೫೬ರಲ್ಲಿ ಉತ್ಪಾದನೆಯು ೩೬,೦೦೦ ಟನ್ನುಗಳಿಗೆ ಏರಿದೆ. ಪ್ರಸ್ತುತ ಧಾರಣೆಯೂ ಕೂಡ ಸಮರ ಪೂರ್ವದ ಧಾರಣೆಯ ೩೬ರಷ್ಟು ಭಾರಿ ಹೆಚ್ಚಾಗಿದೆ.

ವಿಶ್ವದಲ್ಲಿ ಕರಿ ಮೆಣಸಿನ ಉತ್ಪಾದನೆಯಲ್ಲಿ ಇಂಡೋನೇಶಿಯಾ ಪ್ರಥಮ ಸ್ಥಾನ ಗಳಿಸಿದೆ. ದ್ವಿತೀಯ ಸ್ಥಾನ ಭಾರತಕ್ಕೆ ಪ್ರಾಪ್ತಿಯಾಗಿದೆ. ವಿಶ್ವಮಾರುಕಟ್ಟೆಯಲ್ಲಿ ಈ ಸ್ಥಾನವನ್ನು ಉಳಿಸಿಕೊಂಡು ಬರುವ ಬಗ್ಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ.

ದ್ವಿತೀಯ ಪಂಚವಾರ್ಷಿಕ ಯೋಜನೆಯ ಪ್ರಕಾರ ೩೬,೦೦೦ ಟನ್ನುಗಳ ಕರಿ ಮೆಣಸನ್ನು ಉತ್ಪಾದಿಸಬೇಕೆಂಬ ಗುರಿಯನ್ನು ಹೊಂದಲಾಗಿದೆ.

ಅಭಿವೃದ್ಧಿ ಯೋಜನೆಗಳಲ್ಲಿ ಅತಿ ಮುಖ್ಯವಾದುದೆಂದರೆ ಮಲಬಾರಿನ ಕಣ್ಣಾನೂರಿನ ಯೋಜನೆ. ೧೯೫೫ರಲ್ಲಿ ಈ ಯೋಜನೆಯನ್ನು ಕಣ್ಣಾನೂರಿನಲ್ಲಿ ಪ್ರಾರಂಭಿಸಲಾಯಿತು. ಭಾರತ ಸರ್ಕಾರದ ಹಣಕಾಸಿನ ಸಹಾಯ ದೊರೆತಿರುವ ಈ ಯೋಜನೆಯ ಉದ್ದೇಶ ಈಗಿರುವ ತೋಟಗಳಲ್ಲಿ ಮೆಣಸಿನ ಉತ್ಪಾದನೆಯನ್ನು ಹೆಚ್ಚಿಸುವುದು. ಹೊಲಮನೆಗಳಲ್ಲಿ ಹಾಗೂ ಉಕ್ಕ್ವಾದ ಕ್ಷೇತ್ರಗಳಲ್ಲಿ ಕೆಲ ಮಟ್ಟದ ಬಳ್ಳಿಗಳ ಬದಲು ಉತ್ತಮ ಜಾತೀಯ ಬಳ್ಳಿಗಳನ್ನು ಹೆಚ್ಚಿಸುವುದು, ಮೆಣಸು ಬೆಳೆಯುವ ಪ್ರದೇಶಗಳಲ್ಲಿ ಒಟ್ಟಲು ಪಾತಿಗಳನ್ನು (ನರ್ಸರಿಗಳು) ಸ್ಥಾಪಿಸುವುದು, ಉತ್ತಮ ಜಾತಿಯ ಮೆಣಸನ್ನು ಸಂಗ್ರಹಿಸಿ ಹಂಚುವುದು.

ಕಣ್ಣಾನೂರು ಯೋಜನೆಯು ಪುನರ್ ವ್ಯವಸ್ಥೆಗೊಂಡ ಇಡೀ ಕೇರಳ ರಾಜ್ಯಕ್ಕೆ ವ್ಯಾಪಕವಾಗುವುದು ಭಾರತದಲ್ಲಿ ಉತ್ಪತ್ತಿಯಾಗುವ ಒಟ್ಟು ಮೆಣಸಿನಲ್ಲಿ ನೂರಕ್ಕೆ ೯೨ ರಷ್ಟನ್ನು ಕೇರಳ ರಾಜ್ಯದಿಂದಲೇ ಪಡೆಯಲಾಗುತ್ತಿದೆ.

ಕೇರಳಕ್ಕಾಗಿಯೇ ಇರುವ ಮತ್ತೊಂದು ಸಂಶೋಧನಾ ಯೋಜನೆಯ ಪ್ರಕಾರ, ತಿರುವಾಂಕೂರು-ಕೊಚ್ಚಿನ್ನಿನಲ್ಲಿ ಮೆಣಸನ್ನು ಬೆಳೆಯುವ ಕ್ಷೇತ್ರದ ವಿಧ್ಯುಕ್ತ ಲ್ಲಿರುವ ತೋಡುಮುಷ್ಠದಲ್ಲಿ ಕೇಂದ್ರವೊಂ

(೧೦ನೇ ಪುಟನೋಡಿರಿ)

ಗಂಟೆಗಟ್ಟಲೆ ಸಂತೋಷವನ್ನು ಕೊಡುವ ತಾತಾರವರ ಸುವಾಸನೆಯ ಸಾಬೂನು

ಜೈ ಸಾಬೂನಿನ ನಲ್ವೆಟ್‌ನಂತಹ ನ್ಮುದುವಾದ ನೊರೆಯುತ್ತು ಮೋಹಕ ಪರಿಮಳವು ನಿಮ್ಮ ಇಡೀದಿವಸ ಉತ್ಸಾಹವಂತರಾಗಿ ಸುವಾಸನೆಯನ್ನು ಬೀರುವಂತೆ ಮಾಡುತ್ತದೆ. ಜೈ, ಸಾಮಾನ್ಯಬೆಲೆಯ ಮೇಲ್ತರಗತಿಯ ಸಾಬೂನು. ಅವನ್ನು ಉಪಯೋಗಿಸಿ ನಿಮ್ಮ ಜೀವನವನ್ನು ಆನಂದಮಯಗೊಳಿಸಿ.

ಜೈ

ಟಾಯಿಲೆಟ್ ಸಾಬೂನು

TATA PRODUCT

ಇಂಡಿಯದ ಬಂಡವಾಳದಿಂದ, ಇಂಡಿಯದ ಸಂಘಾಲಕತ್ವದಲ್ಲಿ, ಇಂಡಿಯಾದಲ್ಲಿಯೇ ತಯಾರಾದುದು

ತಾತಾ ಆಯಿಲ್ ಮಿಲ್ಸ್ ಕಂಪನಿ ಲಿಮಿಟೆಡ್

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರೆಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಮು ದೇವಣಾತಿ.	
24 ತಿಂಗಳಿಗೆ	4%
12 ,,	3½%
6 ,,	3¼%
3 ,,	3%
ಸೇವಿಂಗ್ಸ್ ಬೇಂಕ್ ಲೆಕ್ಕ	2%
ಕರೆಂಟ್ ಎಕೌಂಟು	½%

THE MOOLKY BANK, LTD. MULKI

ವಿವಿಧೋಪಯೋಗಿ ಆಹಾರ

ಮೈಸೂರಿನ ಸಂಶೋಧಕರ ಪ್ರಶಂಸಾರ್ಹ ಪ್ರಯತ್ನ

ಭಾರತವನ್ನು ಉತ್ತಮವಾದ ರಾಷ್ಟ್ರವನ್ನಾಗಿ ಮಾಡಬೇಕು. ಭಾರತೀಯರನ್ನು ಬಲಾಢ್ಯರನ್ನಾಗಿಯೂ ನೃಢಕಾಯರನ್ನಾಗಿಯೂ ಮಾಡುವುದರ ಮೂಲಕ ಈ ಕಾರ್ಯವನ್ನು ಸಾಧಿಸಬಹುದು.

ಭಾರತ ದೇಶವನ್ನು ಬಲಾಢ್ಯವಾದ ರಾಷ್ಟ್ರವನ್ನಾಗಿ ಮಾಡಲು ನಮ್ಮ ನಾಯಕರು ಬದ್ಧಕಂಕಣರಾಗಿದ್ದಾರೆ. ಪುಷ್ಟಿಕರವಾದ ಆಹಾರದ ಬಗ್ಗೆ ಆಧುನಿಕ ವಿಜ್ಞಾನ ಪಡೆಯುವುದರಿಂದ ಜನಗಳು ರೋಗಗಳಿಗೆ ತುತ್ತಾಗದಂತೆ ಹೆಚ್ಚಿನ ಪ್ರತಿಭಟನಾಶಕ್ತಿಯನ್ನು ಪಡೆದು, ಹೆಚ್ಚಿನ ಬುದ್ಧಿಶಕ್ತಿಯನ್ನೂ ದೀರ್ಘಕಾಲದ ಆಯುಃಪ್ರಮಾಣವನ್ನೂ ಪಡೆದ ಉತ್ತಮ ಹಾಗೂ ಬಲಾಢ್ಯವಾದ ಜನಾಂಗವನ್ನು ಬೆಳೆಸಲು ಸಾಧ್ಯವಾಗುವುದು.

ವಿವಿಧೋಪಯೋಗಿ ಆಹಾರ (ಮಲ್ಟಿ ಪರ್ಪಸ್ ಫುಡ್) ಬಹು ಮುಖ್ಯವಾದ ಆಹಾರವಸ್ತು. ಆಧುನಿಕ ವಿಜ್ಞಾನಶಾಸ್ತ್ರ ತಂತ್ರದಿಂದ ಎಂತಹ ಉತ್ತಮ ಆಹಾರವಸ್ತುವನ್ನು ತಯಾರಿಸಬಹುದೆಂಬುದಕ್ಕೆ ಇದು ನಿದರ್ಶನ. ಈ ನೂತನ ಆಹಾರದ ಹಲವು ಸೌಲಭ್ಯಗಳನ್ನು ಪ್ರತಿಯೊಬ್ಬರೂ ತಿಳಿದಿರಬೇಕು. ಏಕೆಂದರೆ ಸಮತೂಕದ ಈ ಆಹಾರವಸ್ತು—ಪುಷ್ಟಿಕರವಾದ ಆಹಾರವಸ್ತುಗಳ—ವೈಜ್ಞಾನಿಕ ತಿಳಿವಳಿಕೆಯಲ್ಲಿ ಗಮನಾರ್ಹವಾದ ಪ್ರಗತಿ ಸಾಧನೆಯನ್ನು ಸೂಚಿಸುತ್ತದೆ. ಅಲ್ಲದೆ ಇದು ಸಾರ್ವಜನಿಕ ಅಡಿಗ್ಯೆಸಾಧನೆಗೆ ಶಾಶ್ವತವಾದ ಉಪಕಾರಿ ವಸ್ತುವಾಗಿದೆ.

ಇಂಥಾ ಆಹಾರವಸ್ತು ಇಂದಿನ ವಿಶ್ವಕ್ಕೆ ಅತ್ಯಗತ್ಯವಾಗಿ ಬೇಕಾಗಿದ್ದಿತು. ಸರ್ ಜಾನ್ ಬಾಯ್ಡ್ ಓರ್ ಅವರು ಹೇಳಿರುವಂತೆ ಉತ್ತಮವಾದ ಆಹಾರ ಸೌಲಭ್ಯ ಪಡೆದಿರುವ ರಾಷ್ಟ್ರಗಳಲ್ಲೂ ಸಹ ಸುಮಾರು ಶೇಕಡ ೨೦-೩೦ರಷ್ಟು ಜನರು ಆರೋಗ್ಯ ನಿಯಮಕ್ಕೆ ಅನುಸಾರವಾಗ ಬಹುದಾದ ಆಹಾರದ ಕೊರತೆ ಇರುತ್ತದೆ.

ವಿವಿಧೋಪಯೋಗಿ ಆಹಾರವನ್ನು ಗಣಿಗಳನೇ ಇರವಿಯಲ್ಲಿ ಕ್ಯಾಲಿಫೋರ್ನಿಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಎಂಬ ವಿದ್ಯಾಸಂಸ್ಥೆಯಲ್ಲಿ ಬಯೋ-ಕೆಮಿಸ್ಟ್ರಿಯ ಪ್ರೊಫೆಸರರಾದ ಡಾ|| ಹೆರ್ಬರ್ಟ್ ಸ್ಪೂರ್‌ಶೂಕ್ ಅವರು ತಯಾರಿಸಿದರು. ಮುಖ್ಯವಾಗಿ ಈ ವಸ್ತುವನ್ನು ಸೋಯಾ ಬೀನ್ಸಿನ ಚರಟದಿಂದ(ಎಂದರೆ ಸೋಯಾ ಬೀನ್ಸಿನಿಂದ ಎಣ್ಣೆಯನ್ನು ತೆಗೆದ ಮೇಲೆ ಉಳಿಯುವ ಹಿಂಡಿಯಿಂದ) ತಯಾರಿಸಿದೆ. ಇದು ಉತ್ತಮವಾದ ಹಾಗೂ ರುಚಿಕರವಾದ ಸಸಾರಜನಕ ಸತ್ವಾಂಶ ಆಹಾರ. ಇದಕ್ಕೆ ವಿಟಮಿನ್‌ಗಳನ್ನೂ ಲವಣಗಳನ್ನೂ ಸೇರಿಸಿ ಪುಷ್ಟಿಕರವಾದ ವಸ್ತುವನ್ನಾಗಿ ಮಾಟಲಾಗಿದೆ. ಈ ವಿವಿಧೋದ್ದೇಶಗಳುಳ್ಳ ಆಹಾರದ ಎಂಟು ಔನ್ಸು ತೂಕದಷ್ಟು ಆಹಾರವಸ್ತುವನ್ನು ಒಂದು "ಊಟ" ಎಂದು ಕರೆಯುತ್ತೇವೆ. ಇದರ ಬೆಲೆ ೩ ಸೆಂಟುಗಳು (ಎರಡೂವರೆ ಆಣೆ.) ಈ ಎರಡು ಔನ್ಸುಗಳ ಆಹಾರವನ್ನು ನೀರಿನೊಡನೆ ಸುಮಾರು ಹತ್ತು ನಿಮಿಷಗಳ ಕಾಲ ಬೇಯಿಸಿದರೆ ಅದು ಎಂಟು ಔನ್ಸುಗಳಷ್ಟು ಗಂಜಿಯಾಕಾರದ ವಸ್ತುವಾಗುತ್ತದೆ. ಇದನ್ನು ಹಾಗೆಯೇ ತಿಂದರೂ ರುಚಕರವಾಗಿರುತ್ತದೆ. ಅಲ್ಲದೆ ತೃಪ್ತಿಕರವಾಗಿಯೂ ಇರುತ್ತದೆ. ಅಥವಾ ಇದರ ಜೊತೆಯಲ್ಲಿ ಸ್ವಲ್ಪ ಕಾಯಿಪಲ್ಯ, ಸೂಪ್ (ಸಾರು) ಕಾಳು ಸೊಪ್ಪು ಅಥವಾ ಮೀನು, ಮಾಂಸ ಇತ್ಯಾದಿ ವ್ಯಂಜನಗಳನ್ನು ಸಹ ಉಪಯೋಗಿಸಬಹುದು. ಈ ಆಹಾರದ ಪ್ರತಿಯೊಂದು "ಊಟ" ಸಾಮಾನ್ಯವಾಗಿ ಮನುಷ್ಯನಿಗೆ ಬೇಕಾದ ಸಸಾರಜನಕ, ಲವಣಗಳ ನಾಲ್ಕನೇ ಒಂದು ಭಾಗದಷ್ಟನ್ನೂ ಮತ್ತು ೩೦೦ ಕ್ಯಾಲರಿಗಳಷ್ಟು ಶಕ್ತಿಯನ್ನೂ ಒದಗಿಸುತ್ತದೆ. ಈ ಒಂದು "ಊಟ"ವು ಕಾಲು ಪೌಂಡ್ ಮಾಂಸ, ಬೆಂದ ಒಂದು ಆಲೂಗೆಡ್ಡೆ, ಒಂದು ಲೋಟ ಹಾಲು, ಸ್ವಲ್ಪ ಬಟಾಣಿ ಇವಷ್ಟರಿಂದಲೂ ಬರುವ ಪುಷ್ಟಿಯನ್ನು ಕೊಡಬಲ್ಲದು.

ವಿವಿಧೋಪಯೋಗಿ ಆಹಾರವನ್ನು ತಯಾರಿಸುವ ಯೋಜನೆ ಮೊತ್ತಮೊದಲು ಕ್ಯಾಲಿಫೋರ್ನಿಯದ ಹೋಟಲು ಮಾಲೀಕನಾದ ಶ್ರೀ ಕ್ಲೆಫರ್ಡ್ ಕ್ಲೆನ್‌ಟನ್ ಎಂಬಾತನಿಗೆ ಹೊಳೆಯಿತು. ಆತ ವಿಶ್ವ ದಾರ್ಢ್ಯಂತವೂ ಸಂಚರಿಸಿ ಜನರು ತೊಟ್ಟಿಗಿಲ್ಲದೆ ಹಸಿವಿನಿಂದಲೂ, ಆಹಾರಪುಷ್ಟಿಯ ಕೊರತೆಯಿಂದಲೂ ನರಳುತ್ತಿರುವ ಕರುಣಾಜನಕವಾದ ದೃಶ್ಯಗಳನ್ನು ಕಂಡಾಗ ಆತನಿಗೆ ಈ ವಿವಿಧೋಪಯೋಗಿ ಆಹಾರ ತಯಾರಿಸಬೇಕೆಂಬ ಯೋಚನೆ ಮೂಡಿತು. ಈ ವಿವಿಧೋದ್ದೇಶಗಳಿಂದ ಕೂಡಿದ ಆಹಾರವನ್ನು ತಯಾರಿಸಿದ ಮೇಲೆ ಕ್ಲೆನ್‌ಟನ್ ಅವರು ತಮ್ಮ ವ್ಯಾಪಾರಿ ಸಹೋದ್ಯೋಗಿಗಳಾದ ಕೆಲವರೊಡನೆ ಲಾಸ್ ಏಂಜೆಲ್ಸ್‌ನಲ್ಲಿ "ಮೀಲ್ಸ್ ಫಾರ್ ಮಿಲಿಯನ್ಸ್ ಫೌಂಡೇಷನ್" ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆ ಖಾತರಿಯಾದುದು; ಆಲ್ಲದೆ ಲಾಭಗಳಿಸಬೇಕೆಂಬ ಆಸೆ ಇಲ್ಲದ್ದು. ಈ ವಿವಿಧೋದ್ದೇಶಗಳುಳ್ಳ ಆಹಾರವನ್ನು ಉಚಿತವಾಗಿಯಾದರೂ ಮಾಡುವ ಮತ್ತು ಅದನ್ನು ಜನತೆಗೆ ಹಂಚುವ ಉದ್ದೇಶದಿಂದ ಮಾತ್ರ ಈ ಸಂಸ್ಥೆ ಕಾರ್ಯನಡಸುತ್ತಿದೆ. ಈ ಸಂಸ್ಥೆಯನರು ಹೆಸಿವು ಖಾಯಿಲೆಗಳಿಂದ ನರಳುತ್ತಿರುವ ಜನರನ್ನು ಆ ಕಷ್ಟದಿಂದ ಪಾರುಮಾಡುವುದಕ್ಕಾಗಿ ಜನರ ಉದಾರವಾದ ದ್ರವ್ಯಸಹಾಯಕ್ಕಾಗಿ ಮೊರೆಯಿಟ್ಟರು. ಜನತೆ ಈ ಫೌನೋದ್ದೇಶವನ್ನು ಮೆಚ್ಚಿ ಉದಾರವಾಗಿ ಈ ಸಂಸ್ಥೆಗೆ ಧನಸಹಾಯ ನೀಡಲು ಉಪಕ್ರಮಿಸಿದರು. ಆ ಕೂಡಲೆ ವಿಶ್ವದ ಯಾವ ಭಾಗಗಳಲ್ಲಿ ಜನರು ಹಸಿವು ಬಳಲಿಕೆಗಳಿಂದ ನೊಂದು ಬೆಂದಿದ್ದಾರೋ, ಆ ಪ್ರದೇಶಗಳಿಗೆ ವಿವಿಧೋದ್ದೇಶ ಭರಿತವಾದ ಆಹಾರ ಯಥೇಚ್ಛವಾಗಿ ರವಾನೆಯಾಯಿತು.

ಈ ಸಂಸ್ಥೆಯನ್ನು ನಡಸುತ್ತಿರುವವರು ಕೇವಲ ಕೆಲವು ಮಂದಿಯಾದರೂ, ಪ್ರತಿಯೊಬ್ಬರೂ ಕಾರ್ಯತತ್ಪರರೂ, ದಯಾರ್ದ್ರಹೃದಯರೂ ಆಗಿದ್ದಾರೆ ಇವರ ಪೈಕಿ ಒಬ್ಬರೆಂದರೆ ಮಿಸ್ ಫ್ಲಾರೆನ್ಸ್ ರೋಸ್ ಅವರು. ಈಕೆ ಈ ಸಂಸ್ಥೆಯ ಜೀವನಾಡಿಯಂತಿದ್ದಾರೆ. ಕಳೆದ ಎಂಟು ವರ್ಷಗಳಲ್ಲಿ ಈ ಸಂಸ್ಥೆ ಸುಮಾರು ೪ ಕೋಟಿಯಷ್ಟು "ಇ ಸೆಂಟ್ ಬೆಲೆಯುಳ್ಳ ಮೀಲ್" ಗಳನ್ನು ಸುಮಾರು ಒಂದು ನೂರಕ್ಕೂ ಹೆಚ್ಚಿನ ದೇಶವಿದೇಶಗಳಿಗೆ, ಅಲ್ಲದೆ ಇಂಡಿಯಾ ದೇಶಕ್ಕೂ ಸಹ ಒದಗಿಸಿರುತ್ತದೆ ಇಂದು ವಿವಿಧೋದ್ದೇಶಭರಿತವಾದ ಆಹಾರ ("ಎಂ. ಪಿ. ಎಫ್.") ಅತ್ಯಂತ ರುಚಿಕರವಾದ ಆಹಾರವೆಂದು ಅತ್ಯಂತ ಜನಪ್ರಿಯವಾಗಿದೆ. ಸ್ನೇಹಭಾಂಧವ್ಯ ಮತ್ತು ಸ್ವಾತಂತ್ರ್ಯ ಇವು ಶಾಂತಿಯುತವಾದ ಜಗತ್ತಿನಲ್ಲಿ ಮಾನವನ ಪ್ರಗತಿಗೆ ಅಡಿಗಲ್ಲೆಂದು ನಂಬಿರುವ ಜನತೆಯಿಂದ ಬಂದ ವಸ್ತುವೆಂದು ಆದರಪೂರ್ವಕವಾಗಿ ಜನರು ಇಂದು ಸ್ವೀಕರಿಸುತ್ತಿದ್ದಾರೆ.

ಕಳೆದ ಕೆಲವು ವರ್ಷಗಳಿಂದ ಭಾರತದಲ್ಲಿಯೂ ಸಹ ವಿಜ್ಞಾನಿಗಳು ತಮ್ಮ ಪ್ರಯೋಗಶಾಲೆಗಳಲ್ಲಿ ಜನತೆಯ ಹಿತವಿನ ಬಾಧೆಯನ್ನು ತಪ್ಪಿಸಿ ಅಲ್ಲದೆ ಸುಷ್ಠಿಯಾದ ಆಹಾರವಿಲ್ಲದೆ ಜನ ನರಳುವುದನ್ನು ನಿವಾರಿಸುವ ಆಹಾರವಸ್ತು ತಯಾರಿಸುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ಈಗ ನಮ್ಮಲ್ಲಿ ದೊರೆಯುವ ಆದರೆ ಬಳಕೆಗೆ ಬಾರದೆಹೋಗಿರುವ ಆಹಾರ ಮೂಲಗಳಿಂದ (ಎಣ್ಣೆ ಬೀಜಗಳ ಹಿಂಡಿಯೇ ಮುಂತಾದುವನ್ನು ಉಪಯೋಗಿಸಿ) ಅಗ್ಗವಾದ ಮತ್ತು ಪುಷ್ಟಿಕರವಾದ ಉತ್ತಮ ಆಹಾರವಸ್ತುಗಳನ್ನು ತಯಾರಿಸುತ್ತಾರೆ. ಇದನ್ನು ನಮ್ಮ ದೇಶದ ಜನರು ತಮ್ಮ ನಿತ್ಯದ ಊಟದ ಜೊತೆಯಲ್ಲಿ ವ್ಯಂಜನವನ್ನಾಗಿ ಉಪಯೋಗಿಸಬಹುದು. ಇದನ್ನೂ ವಿಶೇಷ ತ್ವರಿತ ಸಂದರ್ಭಗಳಲ್ಲಿ ನಿತ್ಯದ ಆಹಾರವಸ್ತುಗಳಿಗೆ ಬದಲಾಗಿ ಉಪಯೋಗಿಸಬಹುದು. ಹಾಗೆ ಮಾಡುವುದರಿಂದ ಯಾವ ತರಹೆಯ ಆಹಾರಕೊರತೆಯೂ ರೋಗರುಜಿನಾದಿಗಳೂ ಬರುತ್ತವೆ ಎಂಬ ಭೀತಿಗೆ ಅವಕಾಶವಿರುವುದಿಲ್ಲ.

ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯ ಮತ್ತು ಬೆಂಗಳೂರಿನ ತಾತಾ ವಿಜ್ಞಾನಮಂದಿರದ ವಿಜ್ಞಾನಿಗಳೂ ಕಳೆದ ಐದು ವರ್ಷಗಳಿಂದಲೂ ಇಂಡಿಯಾ ದೇಶದಲ್ಲಿರುವ ಆಹಾರ ನ್ಯೂನತೆಗಳನ್ನು ಹೋಗಲಾಡಿಸುವಂಥ ಮತ್ತು ಸುಲಭ ಬೆಲೆಗೆ ಸಿಗುವ ಆಹಾರೋತ್ಪತ್ತಿ ಮಾಡಲು ನಡಸುತ್ತಿರುವ ಪ್ರಯೋಗಗಳ ಪರಿಣಾಮವಾಗಿ ಉತ್ತಮ ತರಹೆಯ ಕಡ್ಲೆಕಾಯಿ ಹಿಂಡಿ (೭೦ ಭಾಗ) ಗೋಧಿ ಕಡಲೆ ಹಿಟ್ಟು (೩೦ ಭಾಗ) ಇವುಗಳನ್ನು ಮೂಲ ವಸ್ತುಗಳನ್ನಾಗಿ ಉಪಯೋಗಿಸಿ ಅದಕ್ಕೆ ಮಾನವನಿಗೆ ಬೇಕಾಗುವ ಖನಿಜ ಮತ್ತು ಸತ್ವಾಂಶಗಳನ್ನು ಸೇರಿಸಿ ಅಗ್ಗವಾದ ಆಲ್ಲದೆ ಸಮತೂಕದ ಆಹಾರ ವಸ್ತುವೊಂದನ್ನು ತಯಾರಿಸಿದ್ದಾರೆ. ನಮ್ಮ ದೇಶದಲ್ಲಿ ಸುಮಾರು ವರ್ಷಕ್ಕೆ ೩,೬೦,೦೦೦ ಟನ್ನುಗಳಷ್ಟು ಕಡಲೆಕಾಯಿ ಹಿಂಡಿಯು ಉತ್ಪತ್ತಿಯಾಗುತ್ತದೆ. ಆಲ್ಲದೆ ಇದರಲ್ಲಿ ಶರೀರಕ್ಕೆ ಬೇಕಾದ ಪ್ರೋಟೀನ್ಸ್ ಎಂಬ ಪದಾರ್ಥವು ಹೆಚ್ಚಿನ ಪ್ರಮಾಣದಲ್ಲಿದೆ ಮತ್ತು ಕಡಲೆಯು ಹಿಟ್ಟು ಮೇಲೆ ಹೇಳಿದ ಆಹಾರಕ್ಕೆ ವಿಶೇಷ ವೈಶಿಷ್ಟ್ಯವುಳ್ಳ ರುಚಿಯನ್ನು ಕೊಡುತ್ತದೆ.

ಭಾರತೀಯ ವಿವಿಧೋಪಯೋಗಿ ಆಹಾರವು ಎರಡು ವಿಧದಲ್ಲಿ ದೊರೆಯುತ್ತದೆ. (೧) ಪಕ್ವನ್ನಾಡಿದ ಆಹಾರ, ಅಂದರೆ, ಮಸಾಲೆ ಮುಂತಾದುವುಗಳನ್ನು ಹಾಕಿ ತಯಾರು ಮಾಡಿರುವುದು. ಇದನ್ನು ರುಚಿಕರವಾಗಿ ತಿನಿಸುಗಳನ್ನು ಮಾಡುವುದಕ್ಕೆ ಉಪಯೋಗಿಸಬಹುದು. (೨) ಅಪಕ್ವವಾದ ಆಹಾರ. ಇದನ್ನು ಗಂಜಿ, ಸಿಹಿತಿಂಡಿ ಮುಂತಾದುವುಗಳನ್ನು ಮಾಡುವುದಕ್ಕೆ ಉಪಯೋಗಿಸಬಹುದು. ಇದು ಮಾನವನಿಗೆ ಬೇಕಾಗುವ ಎಲ್ಲ ತರಹೆಯ ಸತ್ವಾಂಶ, ಖನಿಜ ಮತ್ತು ಪ್ರೋಟೀನ್ ಮುಂತಾದುವುಗಳಿಂದ ಕೂಡಿದ್ದಾಗಿದೆ ಇದು. ಅದರಲ್ಲಿಯೂ ಮುಖ್ಯವಾಗಿ ಮಕ್ಕಳು, ಗರ್ಭಿಣಿಯರ ಮತ್ತು ಬಾಣಂತಿಯರ ಆಹಾರವನ್ನು ಪುಷ್ಟೀಕರಿಸುವುದಕ್ಕೆ ಉಪಯೋಗಿಸಬಹುದು

ಈಗಾಗಲೇ ಇದು ರುಚಿ, ಸೊಗಸು ಮತ್ತು ಪರಿವರ್ತನಶೀಲತೆ ಮುಂತಾದುವುಗಳು ಸಾಕಷ್ಟು ಪ್ರಕಾಶಕ್ಕೆ ಬಂದಿವೆ. ನಾನಾ ತರದ ತಿನಿಸುಗಳನ್ನು ಇದರಿಂದ ತಯಾರಿಸುವ ವಿಧಾನವೂ ಪ್ರಮಾಣ ಬದ್ಧ ಮಾಡಲ್ಪಟ್ಟಿವೆ.

ಕಳೆದ ವರ್ಷದ ಫೆಬ್ರವರಿಯಲ್ಲಿ ನವದೆಹಲಿಯಲ್ಲಿರುವ ರಾಷ್ಟ್ರಪತಿಭವನದಲ್ಲಿ ನಡೆದ ಪ್ರದರ್ಶನದಲ್ಲಿ ರಾಷ್ಟ್ರಪತಿ ಪ್ರಧಾನಿ ನೆಹರು ಮತ್ತಿತರ ಪ್ರತಿಷ್ಠಿತರೂ ಕೇಂದ್ರದ ಮಂತ್ರಿಗಳೂ ಹಾಜರಿದ್ದರು.

(ಅನೇ ಪುಟನೋಡಿರಿ)

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ



ಸ್ತ್ರೀ ಸುಧ

ಸ್ತ್ರೀಯರ ಸಮಸ್ತ ವ್ಯಾಧಿಗಳಿಗೆ ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು, ಋತು ದೋಷಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಠೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಗಿಸುವುದು. ಒಂದು ತಿಂಗಳಿಗೆ ಸರಿ ಹೋಗುವ ೧ ತೊಲ ಔಷಧಿ ರೂ. ೪-೦-೦

ನಮ್ಮ ಸ್ನಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ—ಬೆಂಗಳೂರು 2.
(2) ಷಾ ಕಂಪೆನಿ—ನುಂಗಳೂರು 1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

ಕಾಶ್ಮೀರದ ಸತ್ಯ ಚಿತ್ರ

ಮೆನನರಿಂದ ನೂನರ ನಿಲುಮೆಯ ಖಂಡನೆ

"ಪಾಕಿಸ್ತಾನವು ಆಕ್ರಮಣಕಾರಿ ರಾಷ್ಟ್ರ"

ಪಾಕಿಸ್ತಾನದ ಪ್ರಧಾನಿ ಸುಹ್ರವರ್ದಿಯವರು ಕಳೆದ ವಾರ ಒಂದು ಇಕ್ಕಟ್ಟಿನ ಪ್ರಸಂಗಕ್ಕೆ ಬಲಿಬಿದ್ದರು. ಅವರು ಅವಾಮಿ ಲೀಗಿನ ಸರವಾಗಿರುವ ಮಂತ್ರಿಯಾಗಿದ್ದಾರೆ; ಆದರೆ ಅವರ ಮುಂದಾಳುತನದಲ್ಲಿರುವ ಪಾಕಿಸ್ತಾನಿ ಸರಕಾರವು ಅವಾಮಿ ಲೀಗಿನ ಘೋರಣೆಗೆ ತೀರ ವಿರುದ್ಧವಾದ ವಿದೇಶ ನೀತಿಯನ್ನು ಅನುಸರಿಸುತ್ತದೆ; ಮುಖ್ಯವಾಗಿ ಸೈನಿಕ ಒಡಂಬಡಿಕೆಗಳ ಕಡೆಗೆ ವಾಲಿಕೊಂಡು ತಾಟಸ್ಥ್ಯ ರಹಿತನಾಗುತ್ತಿದೆ ಇದು ತಪ್ಪು; ಪಾಕಿಸ್ತಾನಿ ಪಾರ್ಲಿಮೆಂಟಿನಲ್ಲಿರುವ ಅವಾಮಿ ಲೀಗಿನ ಪ್ರತಿನಿಧಿಗಳು ಸರಕಾರದಲ್ಲಿ ಈ ಘೋರಣೆಯು ಬದಲಾಗುವುದಕ್ಕೆ ಪ್ರಯತ್ನಿಸಬೇಕು— ಪ್ರಧಾನ ಮಂತ್ರಿಗಳ ಕರ್ತವ್ಯವಾದರೂ ಇದಕ್ಕಿಂತ ಬೇರೆಯಲ್ಲ ಎಂಬುದಾಗಿ ಅವಾಮಿ ಲೀಗಿನ ಅಧಿವೇಶನವು ಸಾರಿತು.

ಸುಹ್ರವರ್ದಿಯವರು ತಮ್ಮ ನಿಲುಮೆಯನ್ನು ಸಮರ್ಥಿಸಿಕೊಳ್ಳುತ್ತಾ ಅವಾಮಿ ಲೀಗು ಕೆಲವು ವರ್ಷಗಳ ಹಿಂದೆ (೧೯೫೩ರಲ್ಲಿ) ಒಳ್ಳೆಯದೆಂದು ಭಾವಿಸಿದ್ದ ನೀತಿ ಘೋರಣೆಗಳೂ ಕಾರ್ಯಕ್ರಮಗಳೂ ಸದಾ ಕಾಲ ಒಳ್ಳೆಯವಾಗಿಯೇ ಉಳಿಯುವಂತೆ ಬದಲಾವಣೆಗೊಂಡು ವಾತಾವರಣಕ್ಕೆ ಹೊಂದಿಕೊಳ್ಳಬೇಕಾದುದು ಅತ್ಯವಶ್ಯವೆಂದೂ ತಿಳಿಸಿದರು. ಆದರೂ ಅವರಿಗೆ ಸೋಲಾಯಿತು. ಹೀಗೆ ಸೋತವರಿಂದಲಾದರೂ ಅವರಿಗೆ ಬುದ್ಧಿ ಬಂದೀತೆ?

ಕಾಶ್ಮೀರ ಪ್ರಶ್ನೆಯ ವಿಷಯದಲ್ಲಿ ಸುಹ್ರವರ್ದಿಯವರು ಹೇಳುತ್ತಿರುವುದಕ್ಕೂ ತಮ್ಮ ಸಮರ್ಥನೆಗಾಗಿ ಅವರು ಆಡಿಕೊಳ್ಳುವ ಮಾತಿಗೂ ಎತ್ತಾದರೂ ಸಂಬಂಧವಿದೆಯೆ? ನಮ್ಮ ಪ್ರಧಾನಿ ನೆಹರು ಹೇಳುವುದೇನು? ಕಾಶ್ಮೀರದಲ್ಲಿ ಜನಮತಗಣನೆಯ ಭರವಸೆ ನೀಡಿದ ಕಾಲವು ೧೯೪೭—೪೮ರಷ್ಟು ಹಿಂದಿನದು—ಪಾಕಿಸ್ತಾನದ ಅಸಹಕಾರದ ದೆಸೆಯಿಂದಾಗಿ ಜನಮತಗಣನೆಯು ನಡೆಯದೆ ಉಳಿದಿದೆ. ಆದರೆ ಈ ನಡುವೆ ಪಾಕಿಸ್ತಾನವು ಶಸ್ತ್ರಾಸ್ತ್ರಗಳನ್ನು ಹೆಚ್ಚಿಸಿಕೊಂಡು ಮದವೇರಿದೆ; ಇತ್ತ ಕಾಶ್ಮೀರದಲ್ಲಾದರೂ ಜನತೇ ಸ್ವಂತ ಶ್ರಮದಿಂದ ಸುವ್ಯವಸ್ಥಿತ ಸರಕಾರವನ್ನೂ ಸ್ಥಿರತೆಯನ್ನೂ ರೂಪಿಸಿಕೊಂಡಿದ್ದಾರೆ. ಕಾರಣ ಕಾಶ್ಮೀರ ಸಮಸ್ಯೆಯು ಪರಿಹಾರವನ್ನೂ ಈ ಯಥಾರ್ಥ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಕಂಡುಕೊಳ್ಳುವುದು ಅತ್ಯಾವಶ್ಯಕ.

ಭಾರತವು ಈ ನಿಲುಮೆಯನ್ನು ಪಾಕಿಸ್ತಾನ ಒಪ್ಪುವುದಿಲ್ಲ. ವಾತಾವರಣವು ಬದಲಾಯಿಸಿದೆ ಎಂಬ ಮಾತೇ ಆದಕ್ಕೆ ಪಥ್ಯನಿಲ್ಲ ಸುಹ್ರವರ್ದಿಯವರಿಗೆ ೧೯೫೩ರಷ್ಟು ಈ ಜೆಗೆ ತಮ್ಮ ಪಕ್ಷವು ಹಾಕಿಕೊಟ್ಟ ಮಾರ್ಗ ಉಗಲೂ ಸುಗಮ ಮಾರ್ಗವಾಗಿ ಉಳಿಯಲಾರದೆಂಬ ಎಚ್ಚರವಿದೆ; ಆದರೆ ಕಾಶ್ಮೀರ ಪ್ರಶ್ನೆಯ ಮಾತು ಬಂದಾಗ ಮಾತ್ರ ೧೯೫೩ರಷ್ಟು ಹಿಂದಿನ ವಾತಾವರಣ ಇಂದಿಗೂ ಉಳಿಯಬೇಕೆಂದು ವಾಸ್ತವದಲ್ಲಿ ಉಳಿದಿಲ್ಲ ಎನ್ನುವ ಪರಿಜ್ಞಾನ ಮಾತ್ರ ಆಗುತ್ತಿಲ್ಲ. ಪಾಕಿಸ್ತಾನಿ ಮೂಢ ಬುದ್ಧಿಗೆ, ಮಂದ ಮತಿಗೆ, ಅದೂರ ದರ್ಶಿತ್ವಕ್ಕೆ ಆಜ್ಞಾನಕ್ಕೆ ಇದಕ್ಕಿಂತ ಜೆನ್ನಾದ ಬೇರೆ ಉದಾಹರಣೆ ಬೇಕಾಗಿಲ್ಲ.

ಆದುದರಿಂದಲೇ ಪಾಕಿಸ್ತಾನಿ ವಿದೇಶ ಮಂತ್ರಿ ಶ್ರೀ ನೂನರ ನಿಲುಮೆಯು ಖಂಡನೆ ಮಾಡುವಾಗ ಭಾರತದ ಪ್ರತಿನಿಧಿ ಶ್ರೀ ಮೆನನರು ಕಾಶ್ಮೀರ ಪ್ರಶ್ನೆಯ ಮೇಲೆ ಇನ್ನಷ್ಟು ಸ್ಪಷ್ಟವಾದ ಪ್ರಕಾಶವನ್ನು ಜೆಲ್ಲ ಬೇಕಾಯಿತು. ಅವರು ಬಹಳ ಸಮರ್ಥವಾದ ರೀತಿಯಲ್ಲಿ ಸತ್ಯಕ್ಕೆ ವ್ಯತಿರಿಕ್ತವಾಗಿಲ್ಲದಂತೆ, ಕಾಶ್ಮೀರ ಸಮಸ್ಯೆಯ ಚರಿತ್ರೆಯನ್ನು ವರ್ಣಿಸಿದರು. ಅವರ ಭಾಷಣವನ್ನು ನಿರ್ವಿಕಾರಚಿತ್ತದಿಂದ ಅಧ್ಯಯನ ಮಾಡಿದರೆ "ಭಾರತವು ಎಲ್ಲಿ ರಾಷ್ಟ್ರ ಸಂಘಕ್ಕೆ ನೀಡಿದ ಭರವಸೆಗಳನ್ನು ಮುರಿದಿದೆ ತೋರಿಸಿಕೊಡಿರಿ!" ಎಂದು ಪ್ರಧಾನಿ ನೆಹರು ಆತ್ಮ ಭರವಸೆಯಿಂದ ಪ್ರಶ್ನಿಸಿದ್ದು ತೀರ ಸಹಜವೆನ್ನುವ ಭಾವನೆ ಬೇರೂರುತ್ತದೆ.

ಕಾಶ್ಮೀರದ ಮಹಾರಾಜರು ಭಾರತದೊಡನೆ ಕಾಶ್ಮೀರದ ಸೇರ್ಪಡೆಯನ್ನು ಆಶಿಸಿ, ಕ್ರಮಪ್ರಕಾರವಾಗಿ ಸೇರ್ಪಡೆಯ ಪತ್ರಕ್ಕೆ ಅಂಕಿತವನ್ನು ಹಾಕಿದ ತರುವಾಯವೇ ಭಾರತದ ಸೈನ್ಯವು ಕಾಶ್ಮೀರ ಪ್ರದೇಶವನ್ನು ಪ್ರವೇಶಿಸಿ, ಅಲ್ಲಿದ್ದ ಆಕ್ರಮಣಕಾರರ ವಿರುದ್ಧ ಕಾರ್ಯಾಚರಣೆಯನ್ನು ನಡೆಸಿತು. ಭಾರತವನ್ನು ಬ್ರಿಟಿಷರು ಬಿಟ್ಟು ಹೋಗುವಾಗ ಇದ್ದಿದ್ದ ದೇಶೀಯ ಸಂಸ್ಥಾನಿಕರಿಗೆ ಭಾರತ ಅಥವಾ ಪಾಕಿಸ್ತಾನದಲ್ಲಿ ಯಾವುದಾದರೊಂದರೊಡನೆ ಸೇರ್ಪಡೆಹೊಂದುವುದೇ ಒಳಿತೆಂಬ ಉಪದೇಶವನ್ನು ಕೊಟ್ಟಿದ್ದರು. ಆದರೆ ಪಾಕಿಸ್ತಾನವು ಕಾಶ್ಮೀರಿಗಳನ್ನು ಮನವೊಲಿಸಿ, ವಿಕೆಯ ಮೂಲಕ ತಮ್ಮವರಾಗಿ ಮಾಡಿಕೊಳ್ಳುವನ್ನು ಸಂಯಮದಿಂದ ವರ್ತಿಸದೆ, ಎಲ್ಲತ್ತಮೂರು ಸಾವಿರ ಗುಡ್ಡಗಾಡು ನಿವಾಸಿಗಳನ್ನು ಕಾಶ್ಮೀರದೊಳಕ್ಕೆ ನುಗ್ಗಿಸಿಯೂ ತನ್ನ ಸೈನ್ಯದ ಹೆಚ್ಚಿನಂಶವನ್ನು ಇವರಿಗೆ ಟೊಂಬಲವಾಗಿ ಕೊಟ್ಟು ಕಾಶ್ಮೀರಿಗಳ ಶಕ್ತಿ ಸ್ಥಾನದಲ್ಲಿ ನಿಂತಿತು. ಪಾಕಿಸ್ತಾನಿ ದಾಳಿಗಾರರು ಕೊಲೆ, ಸುಲಿಗೆ ಮತ್ತು ಸ್ತ್ರೀಯರ ಮಾನಾಪಹರಣದಲ್ಲಿ ನಿರತರಾದಾಗ ಭಾರತವು ಕಾಶ್ಮೀರಿಗಳ ರಕ್ಷಣೆಗೆ ಧಾವಿಸಿತು.

ಹೀಗೆ ರಕ್ಷಣೆಗೆ ಹೋಗುವ ಅಧಿಕಾರವು ಭಾರತದ ಪಾಲಿಗೆ ನ್ಯಾಯವಾಗಿ ಆಗ ಬಂದಿತ್ತೆಂಬುದನ್ನು ಮರೆಯಬಾರದು. ಏಕೆಂದರೆ ಮಹಾರಾಜರು ಸೇರ್ಪಡೆಯ ಪತ್ರಕ್ಕೆ ವಿಧ್ಯುಕ್ತ ರೀತಿಯಲ್ಲಿ ಅಂಕಿತ ಹಾಕಿದ್ದರು. ಘಟನಾತ್ಮಕವಾಗಿಯೂ ಅಂತಾರಾಷ್ಟ್ರೀಯ ಕಾನೂನಿನಂತೆಯೂ ಸೇರ್ಪಡೆಯ ಪತ್ರಕ್ಕೆ ಉಭಯ ಸರಕಾರಗಳ ಚರಿಷ್ಠರ ಅಂಕಿತವಾದ ಬಳಿಕ ಕಾಶ್ಮೀರವು ಭಾರತದ ನೆಲವಾಯಿತೆಂದೇ ಲೆಕ್ಕ; ಕಾಶ್ಮೀರಿಗಳು ಭಾರತದ ಪ್ರಜೆಗಳಾದರೆಂದೇ ನಿರ್ಣಯ. ಆದುದರಿಂದ ತನ್ನ ಪ್ರಜೆಗಳ ರಕ್ಷಣೆಗೆ ತನ್ನ ಸೇನೆಯನ್ನು ತನ್ನ ಅಧಿಕಾರದಲ್ಲಿದ್ದ ಭೂಸ್ವದೇಶಕ್ಕೆ ಒಯ್ದು ಭಾರತವು ಎಸಗಿದ್ದು ತಪ್ಪಿ ನಡೆದಿಲ್ಲ. ದಾಳಿಗಾರರನ್ನು ಓಡಿಸುವುದು ಆದರ ಕರ್ತವ್ಯವಾಗಿದ್ದಿತು— ಇದನ್ನೆ ಅದು ಮಾಡಿತು. ದಾಳಿಗಾರರನ್ನು ಕಾಶ್ಮೀರದ ತೀರ ಹೊರಗಡೆಗೆ ಓಡಿಸಲು ಸೇನೆಯು ಆತುರದಿಂದಿದ್ದಿತು; ಆದರೆ ಆಗ ಪಾಕಿಸ್ತಾನಿ ಸೇನೆಯು ಹಿಂದಿನಿಂದ ದಾಳಿಗಾರರಿಗೆ ಸ್ಫೋತ್ಸಾಹ ಕೊಡುವುದು ಕಂಡುಬಂತು. ಪಾಕಿಸ್ತಾನಿ ಸೇನೆಯೊಡನೆ ಸೆಣಸಾಡುವುದರಿಂದ ಅಂತಾರಾಷ್ಟ್ರೀಯ ಸ್ವರೂಪದ ಸಂಕಟವುಂಟಾಗಬಹುದು ಎಂದು ಬಗೆದು ಭಾರತವು ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಮಂಡಳಿಯೇ ಪಾಕಿಸ್ತಾನಿ ಸೇನೆಯನ್ನು ಆದ ಅನ್ಯಾಯವಾಗಿ ಆಕ್ರಮಿಸಿದ ಕಾಶ್ಮೀರಿ ಭೂಭಾಗದಿಂದ ಹಿಂದೆ ಕರೆಸಿಕೊಳ್ಳಲಿ ಎಂದು ಬಯಸಿತು.

ಭದ್ರತಾಮಂಡಳಿದ ನುಂದೆ ಕಾಶ್ಮೀರ ಸಮಸ್ಯೆ ಬಂದುದು ಈ ಪ್ರಕಾರ— ಪಾಕಿಸ್ತಾನವು ತನ್ನ ಸೇನೆಯು ದಾಳಿಗಾರರೊಡನೆ ಸರಕಾರಿಸುತ್ತಿದೆ ಎಂಬ ಮಾತನ್ನು ಮೊದಲು ಅಲ್ಲಗಳೆಯಿತು; ಆದರೆ ಸಂಯುಕ್ತ ರಾಷ್ಟ್ರ ಸಂಘದ ನಿರೀಕ್ಷಕರು ಈ ನಿರಾಕರಣೆಯಲ್ಲಿ ಸತ್ಯವಿಲ್ಲವೆಂದೂ ಪಾಕಿಸ್ತಾನಿ ಸೈನಿಕರು ದಾಳಿಗಾರರೊಡನೆ ಬೆರೆತು ಆಕ್ರಮಣ ಕೃತ ನಡೆಸಿದ್ದಾರೆಂದೂ ಸ್ಪಷ್ಟಪಡಿಸಿದರು. ಆಗ ಪಾಕಿಸ್ತಾನದ ಬಣ್ಣ ಬಯಲಾಯಿತು— ಅದು ಆಕ್ರಮಣಗೈದ ಅನ್ಯಾಯವನ್ನು ಹೊತ್ತ ಅಪರಾಧಿ ರಾಷ್ಟ್ರವೆಂದು ಜಗಜ್ಜಾಹೀರಾಯಿತು!

ಸತ್ಯ ಹೀಗಿರುವಾಗ, ಸರ್ ಓವೆನ್ ಡಿಕ್ಸನ್ ಎಂಬ ರಾಷ್ಟ್ರ ಸಂಘದ ನಿರೀಕ್ಷಕರೇ (ಇವರೀಗ ಆಸ್ಟ್ರೇಲಿಯದ ಮುಖ್ಯ ನ್ಯಾಯಾಧೀಶರಾಗಿದ್ದಾರೆ— ಅಂತಾರಾಷ್ಟ್ರೀಯ ಖ್ಯಾತಿಯ ನ್ಯಾಯಮೂರ್ತಿಯೆಂದು ಅನರ್ಥ ಖ್ಯಾತನಾಮರಾಗಿರುವುದೂ ಹೌದು) ಪಾಕಿಸ್ತಾನವು ಕಾಶ್ಮೀರ ಪ್ರಶ್ನೆಯಲ್ಲಿ ಅಂತಾರಾಷ್ಟ್ರೀಯ ನ್ಯಾಯಾತಿಕ್ರಮವನ್ನು ನಡೆಸಿದೆ; ಅದು ಆಕ್ರಮಣಕಾರಿ ರಾಷ್ಟ್ರವಾಗಿದೆ ಎಂದು ನಿಸ್ಸಂದಿಗ್ಧ ಮಾತುಗಳಲ್ಲಿ ಘೋಷಿಸಿರುವಾಗ— ಪಾಕಿಸ್ತಾನದೊಡನೆ ಸಂಧಾನ ಎಂಬ ಮಾತೇ ಏಳುವುದಿಲ್ಲ. ಆವಾಗ್ಯೂ ಸಮಸ್ಯೆಯ ಇತ್ಯರ್ಥಕ್ಕೆ ಸಹಾಯಕವಾಗುವುದಾದರೆ ಆಗಲಿ ಎಂದು ಭಾರತವು ಭದ್ರತಾಮಂಡಳಿಂದ ಬಂದ ಸಲಹೆಗಳನ್ನು ಸಹಾನುಭೂತಿಯಿಂದ ಪರ್ಯಾಲೋಚಿಸಲು ಒಪ್ಪಿತು. ಆವುಗಳಲ್ಲಿ ಜನಮತಗಣನೆ ನಡೆಸುವ ಸೂಚನೆಯೂ ಒಂದು. ಈಗ ಇದೇ ವಿಷಯದಲ್ಲಿ ಪಾಕಿಸ್ತಾನವು ಆಗ್ರಹಪಟ್ಟು ಕುಳಿತಿದೆ ಹಾಗೆ ಅದು ಆಗ್ರಹಪಡುವುದರಲ್ಲಿ ನ್ಯಾಯವಿದೆಯೆ? ಎಷ್ಟಕ್ಕೂ ಇಲ್ಲವೆನ್ನುವುದು ಸ್ಪಷ್ಟ.

ಸಂಯುಕ್ತ ರಾಷ್ಟ್ರ ಸಂಘದ ಪ್ರತಿನಿಧಿಗಳು ಭಾರತಕ್ಕೆ ಕೊಟ್ಟಿರುವ ಭರವಸೆಗಳನ್ನು ನೋಡಿದರೆ ಇದು ವೇದ್ಯವಾಗುತ್ತದೆ. ಮೆನನ್ನರು ಈ ಭರವಸೆಗಳನ್ನು ಹೀಗೆ ವಿವರಿಸಿದ್ದಾರೆ—ಕಾಶ್ಮೀರದ ರಕ್ಷಣೆ ಮತ್ತು ಭದ್ರತೆಯ ಜವಾಬ್ದಾರಿ ಭಾರತಕ್ಕೆ ಸೇರಿದ್ದು; ಇಡಿ ರಾಜ್ಯದ ಮೇಲೆ ಕಾಶ್ಮೀರಿ ಸರಕಾರಕ್ಕೆ ಇರುವ ಸಾರ್ವಭೌಮಾಧಿಕಾರವು ಅಬಾಧಿತನಾಗಿರತಕ್ಕದ್ದು; ಸೇನೆಯನ್ನು ಹಿಂದೆಕರೆಸಿಕೊಳ್ಳುವ ಸಂಬಂಧದ ಸೂಚನೆಯನ್ನು ಪಾಕಿಸ್ತಾನವು ಮನ್ನಿಸದಿದ್ದರೆ ಜನಮತಗಣನೆಯ ಸೂಚನೆ ಭಾರತದ ಮೇಲೆ ಬಾಧಕನಾಗಲಾರದು; ಆಜಾದ್ ಕಾಶ್ಮೀರ್ ಎಂದು ಕರೆಯಲಾಗುವ ಪಾಕಿಸ್ತಾನಿ ಆಕ್ರಮಿತ ಕಾಶ್ಮೀರಿ ಪ್ರದೇಶದ ಸರಕಾರಕ್ಕೆ ಮನ್ನಣೆ ಸಿಗಲಾರದು; ಪಾಕಿಸ್ತಾನವು ಆಕ್ರಮಿಸಿದ ಪ್ರದೇಶವು ಪ್ರತ್ಯೇಕವಾಗಿ ಉಳಿಯಲಾರದು; ಕಾಶ್ಮೀರದಲ್ಲಿ ಆಕ್ರಮಣಕಾರರು ಪ್ರವೇಶಿಸದಂತೆ ಯೋಗ್ಯ ಮುಂಜಾಗ್ರತೆಯ ಕ್ರಮಗಳನ್ನು ಕೈಗೊಳ್ಳುವುದು ಭಾರತಕ್ಕೆ

(ಒನೇ ಪುಟನೋಡಿರಿ)

ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಣೆಮಾಡುವುದು
ಪ್ರತಿಯೊಬ್ಬರ ನೆಚ್ಚಿನ ಆಸೆ

* *

ಮೈಸೂರು
ಸ್ಯಾಂಡಲ್ ಸಾಬೂನು

ನಿಮ್ಮ ಸೊಬಗನ್ನು ಕಾಪಾಡಲು ವೃದ್ಧಿಮಾಡಲು
ಒಂದು ನಿಶ್ಚಿತ ಸಾಧನ

ಅನೇಕ ಸುಗಂಧದ್ರವ್ಯಗಳನ್ನು ಜಾಣತನದಿಂದ ಇದರಲ್ಲಿ ಸೇರಿಸಲಾಗಿದೆ
ಒಮ್ಮೆ ಉಪಯೋಗಿಸಿ ನೋಡಿ

ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ದೊರೆಯುತ್ತದೆ

* *

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು

ನಂಬರು: ಐ. ಎಸ್. ಟಿ. ಎಂ. ಎ.

NAVAYUGA

Popular Kannada Weekly

Founder:—

A. B. SHETTY, *M. L. A.*

Former Minister for Public Health, Govt. of Madras.

At Present Minister for Health Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೬	೧೪-೨-'೭೭	೨೩

ಜಿಲ್ಲೆಯ ಮತದಾರರಲ್ಲಿ ವಿನ್ನಹ

ನಮ್ಮ ಜಿಲ್ಲೆಯ ಮತದಾರ ಮಹಾ ಜನರು ಮಗುದೊಮ್ಮೆ ತಮ್ಮ ಮತದಾನಾಧಿಕಾರವನ್ನು ಉಪಯೋಗಿಸುವ ಅವಕಾಶವೀಗ ಪ್ರಾಪ್ತವಾಗಿದೆ. ಇದೇ ೨೫ನೇ ದಿನಾಂಕದಿಂದ ತೊಡಗಿ ಮಾರ್ಚ್ ತಿಂಗಳ ೧೨ನೇ ತಾರೀಕಿನ ವರೆಗೆ ಜಿಲ್ಲೆಯ ಬೇರೆ ಬೇರೆ ಮತದಾನ ಕ್ಷೇತ್ರಗಳಲ್ಲಿ ಚುನಾವಣೆಗಳು ನಡೆಯುತ್ತವೆ. ಈ ಚುನಾವಣೆಗಳು ಯಶಸ್ವಿಯಾಗುವಂತೆ ಸಹಕರಿಸುವುದು ಪ್ರತಿಯೊಬ್ಬ ಮತದಾರನ ಆದ್ಯಕರ್ತವ್ಯವಾಗಿದೆ. ಆದುದರಿಂದ ಎಲ್ಲ ಮತದಾರರೂ ಮತದಾನ ಕಟ್ಟೆಗಳಿಗೆ ಹೋಗಿ ರಾಜ್ಯದ ಶಾಸನಾಂಗಕ್ಕೂ ಲೋಕ ಸಭೆಯ ಸ್ಥಾನಕ್ಕೂ ನಿಂತಿರುವ ಉಮೇದ್ವಾರರಲ್ಲಿ ತಮಗೆ ಇಷ್ಟ ಕಂಡವರಿಗೆ ಮತವನ್ನಿತ್ತು ಧನ್ಯರಾಗಬೇಕಾಗಿದೆ. ತಮ್ಮ ಈ ಕರ್ತವ್ಯವನ್ನು ನಿರ್ವಹಿಸಲು ಮತದಾರರು ಹಿಂಜರಿಯಬಾರದು. ಚುನಾವಣೆಯಲ್ಲಿ ಮತದಾನವು ಶೇಕಡಾ ನೂರರಷ್ಟಾಗಬೇಕೆಂದೇ ನಾವು ಬಯಸುತ್ತೇವೆ. ಯಾವ ಕಾಲಕ್ಕೂ ಅದು ಶೇಕಡಾ ೭೫-೮೦ಕ್ಕಿಂತ ಕಡಿಮೆಯಾಗ ಕೂಡದು. ಈ ವಿಷಯದಲ್ಲಿ ಮತದಾರರನ್ನು ಎಚ್ಚರಗೊಳಿಸಿ, ಅವರಿಗೆ ಮತದಾನಾಧಿಕಾರದ ಮಹತ್ವವನ್ನು ವಿವರಿಸಿ, ಮತ ಕಟ್ಟೆಗಳಿಗೆ ಬಂದು ತಮ್ಮ ಅಮೂಲ್ಯವಾದ ಅಧಿಕಾರವನ್ನು ನಿರ್ಭೀತಿಯಿಂದ ಚಲಾಯಿಸುವುದಕ್ಕೆ ತಕ್ಕ ಪ್ರೋತ್ಸಾಹ ಕೊಡುವ ಭಾರವು ಚುನಾವಣೆಯಲ್ಲಿ ಸ್ಪರ್ಧಿಸುವ ಉಮೇದ್ವಾರರ ಮತ್ತವರ ಬೆಂಬಲಿಗರ ಹೆಗಲಮೇಲಿರುತ್ತದೆ. ಜಿಲ್ಲೆಯ ಅನೇಕ ಕ್ಷೇತ್ರಗಳಲ್ಲಿ ನೇರವಾದ ಹೋರಾಟ ನಡೆದಿರುವುದರಿಂದ ಈ ಉಮೇದ್ವಾರರನ್ನು ಬೆಂಬಲಿಸಿರುವ ರಾಜಕೀಯ ಪಕ್ಷಗಳು ತಮ್ಮ ಶಕ್ತಿ ಸರ್ವಸ್ವವನ್ನು ಉಪಯೋಗಿಸಿ, ಮತದಾನವು ತುರುಸಿನದಾಗುವಂತೆ ಮತ್ತು ಎಲ್ಲ ಮತಾಧಿಕಾರಿ ಸಂಪನ್ನರೂ ಚುನಾವಣೆಯಲ್ಲಿ ಭಾಗವಹಿಸುವಂತೆ ಮಾಡುವುದರಲ್ಲಿ ಹಿಂಜರಿಯಲಿಕ್ಕಿಲ್ಲವೆಂದು ಈಗಾಗಲೇ ಕಾಣಿಸಹತ್ತಿದೆ. ಇದು ನ್ಯಾಯವಾಗಿ ನಡೆಯಬೇಕಾದ ಕ್ರಮವೇ ಆಗಿರುವುದುಂದ ನಮಗೆ ಸಂತೋಷವಾಗಿದೆ. ಆದರೆ, ನಾವು ಮತದಾರರು ತಮ್ಮ ಅಧಿಕಾರವನ್ನು ಉಪಯೋಗಿಸುವ ಬಗ್ಗೆ ಮಾತ್ರ ಕೆಲವು ಮುಖ್ಯವಾದ ವಿಷಯಗಳನ್ನು ಜ್ಞಾಪಿಸಲು ಇಚ್ಛಿಸುತ್ತೇವೆ. ಮತದಾರರಲ್ಲಿ ಸುತರಿಸ್ಪೇತರರಾಪರು "ಕಾಂಗ್ರೆಸ್ಸನ್ನೇ ಪುನಃ ಅಧಿಕಾರ ಸ್ಥಾನದಲ್ಲಿ ಡಿರಿ" ಎಂಬುದಾಗಿ ಕಾಂಗ್ರೆಸಿನ ವರಿಷ್ಠರು ಈಗ ಕೆಲವು ದಿನಗಳಿಂದ ಪದೇ ಪದೇ ಹೇಳುತ್ತಾ ಬಂದಿದ್ದಾರೆಂಬುದನ್ನು ದೈನಿಕಗಳಲ್ಲಿ ಗಮನಿಸಿರಬಹುದು. ಕಾಂಗ್ರೆಸಿನ ವರಿಷ್ಠರ ಈ ಮಾತನ್ನು ನಾವಾದರೂ ಹೃತ್ಪೂರ್ವಕ ಅನುಮೋದಿಸುತ್ತೇವೆ. ಕಾಂಗ್ರೆಸು ಏಕೆ ಪುನಃ ಅಧಿಕಾರದಲ್ಲಿ ಉಳಿಯಬೇಕು ಎಂಬ ಪ್ರಶ್ನೆಗೆ ಹಲವು ಬಗೆಯಿಂದ ಉತ್ತರವೀಯಬಹುದು. ಮೊದಲನೆಯದಾಗಿ, ಅದರ ಇಪ್ಪತ್ತರ ವರೆಗಿನ ಆಡಳಿತದ ದಾಖಲೆಯು ಕೃಪ್ತಿಕರವಾಗಿದೆ ಎಂಬುದೊಂದು ಮುಖ್ಯವಾದ ಕಾರಣ. ನಮ್ಮ ಜಿಲ್ಲೆಯನ್ನೆ ನೋಡಿದರೆ ಸಾಕು, ಇದು ಸ್ಪಷ್ಟವಾಗುತ್ತದೆ. ಬ್ರಿಟಿಷರ ನೂರಾರು ವರ್ಷಗಳ ಆಳ್ವಿಕೆಯಲ್ಲಿ ನಡೆದಿರದಷ್ಟು ಅಭಿವೃದ್ಧಿ ಕಾರ್ಯಗಳು ಕಾಂಗ್ರೆಸಿನ ಹತ್ತು ವರ್ಷಗಳ ಆಡಳಿತಾವಧಿಯಲ್ಲಿ ಕೈಗೂಡಿರುವುದು ನಿಜಕ್ಕೂ ಅಭಿಮಾನಾಸ್ಪದವಾದ ವಿಷಯ. ನಮ್ಮ ಅನೇಕ ಹೊಳೆಗಳಿಗೆ ಸಂಕ, ನಮ್ಮ ಹಳ್ಳಿಗಳಲ್ಲೆಲ್ಲ ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆ, ಪ್ರಮುಖ ಗ್ರಾಮ ಕೇಂದ್ರಗಳಲ್ಲಿ ಪೇರಿಗೆ, ಶಿಶು ವಿಹಾರ ಜಾನುವಾರು ರೋಗ ನಿವಾರಣೆಯ ಕೇಂದ್ರ ಇತ್ಯಾದಿಗಳ ನಿರ್ಮಾಣ, ಹಳ್ಳಿಗಳ ಮೂಲೆಗಳನ್ನೂ ಮುಟ್ಟಬಹುದಾದಂತೆ ಮಾರ್ಗಗಳ ರಚನೆ— ಇನ್ನೂ ಅನೇಕ ವಿಧವಾದ ಕೆಲಸಗಳು ನಮ್ಮ ಕಣ್ಣ ಮುಂದಿವೆ ನಡೆದಿವೆ. ರಸ್ತೆಗಳಿಗೆ ದಾನಗಳು ಹಾಕುವುದರಿಂದ ಹಿಡಿದು ಹಳ್ಳಿಯ ರೈತರಿಗೆ ಸಹ ವಿದ್ಯುಚ್ಛಕ್ತಿಯ ಪ್ರಯೋಜನವನ್ನು ದೊರಕಿಸಿಕೊಟ್ಟು ಬೆಳೆ ಹೆಚ್ಚಿಸಲು ಸಹಾಯವಾಗುವ ವರೆಗೆ ನಾನಾ ರೀತಿಯ ಪ್ರಗತಿಪರ ಕ್ರಮಗಳನ್ನು ಕಾಂಗ್ರೆಸಿನ ಆಡಳಿತ ಕಾಲವಲ್ಲಿ ಕೈಕೊಳ್ಳಲಾಗಿವೆ. ಆದುದರಿಂದ ಕಾಂಗ್ರೇಸಿನ ಆಡಳಿತದಲ್ಲಿ ಸಾಮಾನ್ಯ ತೃಪ್ತಿಯು ಜನರಲ್ಲಿರುವುದು ಸಹಜವೆಂದು ನಾವು ಭಾವಿಸಿದ್ದೇವೆ. ಆದಾಗ್ಯೂ ಇನ್ನೂ ಮಾಡಬೇಕಾದ ಹಲವು ಕೆಲಸಗಳಿರುವುದು ನಿಜ—ಇದನ್ನು ಮಾಡಬಲ್ಲ ಶಕ್ತಿ ಸಾಮರ್ಥ್ಯಗಳು ಕಾಂಗ್ರೆಸು ಸಂಸ್ಥೆಗೆ ಮಾತ್ರ ಇವೆ ಎಂಬುದು ಸುತರಾರು ಗಮನಿಸಬೇಕಾದ ಎರಡನೆಯ ವಿಷಯ. ಕಾಂಗ್ರೆಸು ಏದು ವರ್ಷಗಳ ಒಂದು ಯೋಜನೆಯನ್ನು ರೂಪಿಸಿಕೊಂಡಿತು; ಅದನ್ನು ಕಾರ್ಯರೂಪಕ್ಕೆ ಸಹ ತಳಿಸಿತು. ಈ ಕೆಲಸದಲ್ಲಿ ಅದು ಒಳ್ಳೆಯ ಅನುಭವವನ್ನು ಸಂಪಾದಿಸಿತು. ಈ ಅನುಭವದ ಬಲದಿಂದಲೇ ಮೊದಲನೇ ಯೋಜನೆಯ ಇನ್ನುಡಿ ಗಾತ್ರದ ಎರಡನೇ ಯೋಜನೆಯನ್ನು ಕೈಗೊಳ್ಳುವ ಧೈರ್ಯ ಅದಕ್ಕೆ ಬಂದಿದೆ. ಚುನಾವಣೆಯಲ್ಲಿ ಕಾಂಗ್ರೆಸೇತರ ಪಕ್ಷಗಳನ್ನು ಅವಿಸಿದ್ದಾದರೆ, ಕಾಂಗ್ರೆಸು ಇಷ್ಟು ವರಿಗೆ ಸಂಪಾದಿಸಿದ ಅನುಭವವು ವ್ಯರ್ಥವಾಗುತ್ತದೆ; ಅದು ಕೈಗೊಂಡು ಅರ್ಧದಲ್ಲಿರುವ ಯೋಜನೆಗಳ ಗತಿಯೂ ಹಾಳಾಗಬಹುದು. ಏಕೆಂದರೆ, ಹೊಸತಾಗಿ ಅಧಿಕಾರಕ್ಕೆ ಬರಬಹುದಾದ ಕಾಂಗ್ರೆಸ್ಸೇತರ ಪಕ್ಷಕ್ಕೆ ಮೂಲದ ಕಾರ್ಯಕ್ರಮದಲ್ಲಿ ವಿಶ್ವಾಸವಿಲ್ಲದೆ, ಅದು ಹೊಸ ಪ್ರಯೋಗಗಳನ್ನು ನಡೆಸಲು ಉದ್ಯುಕ್ತವಾಗಬಹುದು. ಇಂದಿರಾ ಪರಿಣಾಮವಾಗಿ, ದೇಶದ ಪ್ರಗತಿಯು ಹಿಮ್ಮುಖವಾಗಿ ಕುಂಠಿತಗೊಳ್ಳುವುದು ನಿಶ್ಚಯ. ನಾವು ಪ್ರಗತಿಪರ ಹೆಜ್ಜೆಗಳನ್ನು ಹಾಕತೊಡಗಿದ್ದೇವೆ; ನಡುವೆಯೇ ಬ್ರೇಕನ್ನು ಹಾಕಿ, ನಮ್ಮ ದಿಕ್ಕನ್ನು ಬದಲಾಯಿಸಿಕೊಳ್ಳುವುದು ಇನ್ನೂ ಬಡತನದ ಇಳಜಾರಿನಲ್ಲಿ ನಾವಿರುವಾಗ ಹೇಳಿಸಿದ ಸಾಹಸವಲ್ಲ. "ನಡು ನೀರಿನಲ್ಲಿ ಕುದುರೆ ಬದಲಾಯಿಸುವ ಹವ್ಯಾಸ" ಎಂಬುದಾಗಿ ಆಂಗ್ಲ ಭಾಷೆಯಲ್ಲಿ ಕುಹಕಿತ ಭಾವದಿಂದ ಇಂಥ ಸಾಹಸವನ್ನು ಬಣ್ಣಿಸಲಾಗುತ್ತದೆ. ನಾವೆಂದೂ ಹೀಗೆ ಪ್ರವಾಹ ಮಧ್ಯದಲ್ಲಿ ಕುದುರೆ ಬದಲಾಯಿಸಲು ಹೋಗಬಾರದು. ಹಾಗೆ ಬದಲಾಯಿಸಿಕೊಳ್ಳಬಹುದಾದ ಕುದುರೆಯಾದರೂ ಇದೆಯೆ? ಇಲ್ಲ ಎನ್ನುವುದೇ ಕಾಂಗ್ರೆಸನ್ನು ಪುನಃ ಅಧಿಕಾರಕ್ಕೇರಿಸಬೇಕಾದ ಮೂರನೇಯ ಪ್ರಬಲ ಕಾರಣ. ಕಾಂಗ್ರೆಸ್ಸೇತರ ಪಕ್ಷಗಳಲ್ಲಿ ಯಾವುದು ಸಮರ್ಥವಾಗಿದೆ? ಅಖಿಲ ಭಾರತ ಸ್ವರೂಪದ ಮನ್ನಣೆಯನ್ನು ಚುನಾವಣೆಯ ಫಲಿತಾಂಶದಲ್ಲಿ ಕಾಂಗ್ರೆಸು ಗಳಿಸಲಿದೆ ಪ್ರಜಾ ಸಮಾಜವಾದಿ, ಸಾಮ್ಯವಾದಿ ಮತ್ತು ಜನ ಸಂಘವೆಂಬ ಬೇರೆ ನೂರು ಪಕ್ಷಗಳಿಗೆ ಕೊಟ್ಟಿರುವುದು ಹೌದಾದರೂ ಈ ಮೂರೂ ಪಕ್ಷಗಳು ನಿಜವಾಗಿ ಅಖಿಲ ಭಾರತ ಸ್ವರೂಪವನ್ನು ಹೊಂದಿರುವುದಿಲ್ಲ ಕಾಂಗ್ರೆಸಿನಷ್ಟು ಸುವ್ಯವಸ್ಥಿತವಾಗಿ ಸಂಘಟನೆಗೊಂಡಿರುವ ಪಕ್ಷಗಳೂ ಇವಲ್ಲ. ಇವುಗಳಿಗೆ ಕಾಂಗ್ರೆಸಿನಷ್ಟು ದೀರ್ಘ ಕಾಲದ ಇತಿಹಾಸ ಕೂಡ ಇಲ್ಲ. ದಕ್ಷರೂ ಮುನ್ನೋಟವುಳ್ಳವರೂ ಪ್ರಾಮಾಣಿಕರೂ ಆದ ನೆಹರೂರಂಥವರ ಮುಂದಾಳುತನವೆಲ್ಲಿ, ಕೇವಲ ಅತೃಪ್ತಿಯ ದೆಸೆಯಿಂದ ಪಕ್ಷವನ್ನು ಕಟ್ಟಿಕೊಂಡ ಪ್ರಜಾಸಮಾಜವಾದಿ ಭೂಣಂಗರೆಲ್ಲಿ? ರಕ್ತದ ಪದ್ಧತಿಗಾಗಿ ಹಂಬಲಿಸುವ ಸಾಮ್ಯವಾದಿಗಳೆಲ್ಲಿ? "ಹಿಂದೂ ರಾಜ್ಯ"ದ ಕನಸು ಕಾಣುವ ಜನಸಂಘದವರೆಲ್ಲಿ? ಉಸಾತ್ತವಾದ ದೃಷ್ಟಿಕೋಣ, ಎಲ್ಲರೂ ಬಾಳಿ ಬದುಕಬೇಕೆಂಬ ವಿಶಾಲವಾದ ಭಾವನೆ, ಸಕಲರೊಡನೆಯೂ ಸ್ನೇಹದಿಂದಿರುವ ಹಾರ್ದಿಕ ಆಕಾಂಕ್ಷೆ, ಪ್ರಗತಿ ಪಥದಲ್ಲಿ ಹೆಜ್ಜೆಯನ್ನಿಡುವ ಪರಮೋತ್ಸಾಹ, ಪ್ರಜಾಪ್ರಭುತ್ವದಲ್ಲಿ ಅಚಲ ವಿಶ್ವಾಸ—ಇನ್ನೆಲ್ಲವೂ ಕಾಂಗ್ರೆಸಿನ ಮುಂದಾಳುತನದಲ್ಲಿ ಸ್ಪಷ್ಟವಾಗಿ ಕಂಡುಬರುತ್ತವೆ. ಕಾಂಗ್ರೆಸ್ಸೇತರ ಪಕ್ಷಗಳನ್ನು ಇವತ್ತಿನ ದಿನವಲ್ಲಿ ಬೆಂಬಲಿಸಿದರೆ ಏನಾಗುತ್ತದೆಂದು ನಾವು ಕೇರಳದಲ್ಲಿಯೂ ಆಂಧ್ರದಲ್ಲಿಯೂ ನೋಡಿಯಾಗಿದೆ—ಅವುಗಳು ಕಾಂಗ್ರೆಸಿನಂತೆ ಏಕಪಕ್ಷವಾಗಿ ಯಾವ ಕೆಲಸವನ್ನೂ ಮಾಡಲಾರವು; ಸಂಯುಕ್ತ ಕಾರ್ಯಕ್ರಮವನ್ನು ರೂಪಿಸಿಕೊಳ್ಳುವುದಕ್ಕೆ ಅವುಗಳಲ್ಲಿ ಧೈರ್ಯ ಸಾಮ್ಯವಿಲ್ಲದ ದೆಸೆಯಿಂದ ಸಾಧ್ಯವಾಗುತ್ತಿಲ್ಲ. ಕತ್ಯಲವಾಗಿ, ಕೇರಳದಲ್ಲಿ ಇಂದಿಗೂ ರಾಷ್ಟ್ರಾಧ್ಯಕ್ಷರ, ಅಂದರೆ ಪಾರ್ಲಿಮೆಂಟಿನ, ನೇರವಾದ ಆಡಳಿತವೇ ನಡೆಯುತ್ತಿದೆ; ಹೊರತು ಶಾಸನಾಂಗದ ಪ್ರತಿನಿಧಿಗಳು ಕೇರಳದಲ್ಲಿ ಉಳಿದಿಲ್ಲ. ಪಾರ್ಲಿಮೆಂಟಿನಲ್ಲಿ ಯಾವುದೂ ಕಾಂಗ್ರೆಸಿನ ಬಹುಮತವಿದ್ದ ದೆಸೆಯಿಂದ ಹೀಗೆ ಪ್ರಜಾಪ್ರಭುತ್ವ ಸದ್ಧತಿಯ ಪ್ರಯೋಜನಕ್ಕೆ ಬಾಹಿರರಾಗಿ ಯಾದೂರೂ ಜನರು ಸಾಕಷ್ಟು ಸುಖವಾದ ಆಡಳಿತಕ್ಕೆ ಪಾತ್ರರಾಗುವಂತಾಯಿತು. ಪಾರ್ಲಿಮೆಂಟಿನಲ್ಲಿ ಸಹ ಪಕ್ಷೆ ದೌರ್ಬಲ್ಯವಿರುತ್ತಿದ್ದರೆ, ರಾಷ್ಟ್ರಾಧ್ಯಕ್ಷರ ಆಡಳಿತವಾದರೂ ಇಷ್ಟು ಸುಸೂತ್ರವಾಗುತ್ತಿರಲಿಲ್ಲ. ಆದುದರಿಂದ ಕೆಲವು ವರ್ಷಗಳ ವರೆಗಾದರೂ, ಅಂದರೆ ಈಗಿನ ಪ್ರತಿಪಕ್ಷಗಳು ಸುಸಂಘಟಿತವಾಗಿ ಬೆಳವಣಿಗೆಯನ್ನು ಹೊಂದಿ ಪ್ರಬುದ್ಧಾವಸ್ಥೆಯನ್ನು ಮುಟ್ಟುವ ವರೆಗೆ, ಕಾಂಗ್ರೆಸು ಸಂಸ್ಥೆಯೇ ರಾಜ್ಯಗಳಲ್ಲೂ, ಕೇಂದ್ರಗಳಲ್ಲೂ ಅಧಿಕಾರದಲ್ಲಿರುವುದು ಜನಹಿತದ ದೃಷ್ಟಿಯಿಂದ ಶ್ರೇಯಸ್ಕರ. ಅದೂ ಅಲ್ಲದೆ, ಪಕ್ಷಗಳ ಧ್ಯೇಯ ಘೋರಣೆಗಳಲ್ಲಿ ವ್ಯತ್ಯಾಸವಿರುವುದರಿಂದ ಪದೇ ಪದೇ ಸರಕಾರದ ಕಾರ್ಯಕಲಾಪಗಳ ನೀತಿಯು ಪರಿವರ್ತನೆಯನ್ನು ಹೊಂದುತ್ತಿದ್ದರೆ ಜನರು ಅದಕ್ಕೆ ಹೊಂದಿಕೊಂಡು ನಡೆಯುವುದು ಬಹಳ ಕಷ್ಟವಾಗುತ್ತದೆ. ಪಕ್ಷ ಒಂದೇಯಾದರೂ ಮಂತ್ರಿಮಂಡಲ ಬದಲಾವಣೆ ಹೊಂದಿದಂತೆಲ್ಲ ವೈಕ್ಷಣಿಕ ರಂಗದಲ್ಲಿ ತೀವ್ರ ಪರಿವರ್ತನೆಗಳು "ಸುಧಾರಣೆ"ಯ ಸೋಗಿನಲ್ಲಿ ನಡೆಯುದನ್ನು ನಾವು ಕಂಡಿದ್ದೇವೆ. ಪಕ್ಷವೇ ಬದಲಾವಣೆಗೊಂಡಲ್ಲಿ ಮತ್ತು ಇಂಥ ಬದಲಾವಣೆಗಳು ಸುನಃ ಪುನಃ ಸಂಭವಿಸಿದಲ್ಲಿ ರಾಷ್ಟ್ರದ ಶಿಕ್ಷಣ—"ಶಿಕ್ಷಣ"ವಾಗಿಯೇ ಉಳಿಯಲಾರದು; ಅದು ಹೊಲಸುಗೊಂಡು ಆ ರಂಗವೇ ನಾರತೊಡಗೀತು! ಇದೇ ಮಾತು ಉಳಿದಖಾತೆಗಳಿಗೂ ಅನ್ವಯಿಸುತ್ತದೆ. ಆದುದರಿಂದ ನಮಗೆ ಈಗ ಪ್ರತಿಪಕ್ಷಗಳು ಒಂದೊಂದೇ ಪ್ರಯೋಗವನ್ನು ನಡೆಸುವುದಕ್ಕೆ ಅವಕಾಶ ಕೊಡುವ ಆತುರವಿರುವುದು ಯೋಗ್ಯವಾದುದಲ್ಲ. ಆದರಲ್ಲಿ ಸಹ ಕಾಶ್ಮೀರ ಪ್ರಶ್ನೆಯಂಥ ವಿಷಯದಲ್ಲಿ ಪಾಕಿಸ್ತಾನೆಗೆ ಯುದ್ಧ ಘೋಷಣೆಗಳು ನಮ್ಮ ಕೆವಿಗೆ ನಿತ್ಯವೂ ಬೀಳುತ್ತಿರುವ ಈ ಸಂದಿಗ್ಧ ಕಾಲದಲ್ಲಿ ನಾವು ಇಪ್ಪತ್ತರ ನಂತರ ಅಧಿಕಾರದಲ್ಲಿದ್ದು ಕಾಶ್ಮೀರ ಸಮಸ್ಯೆಯನ್ನು ಎದುರಿಸುತ್ತಾ ಬಂದಿರುವ ಸರಕಾರದ ಕೈಯನ್ನೆ ಬಲಪಡಿಸಬೇಕಾದದ್ದು ನ್ಯಾಯೋಚಿತ. ಇದು ಮತದಾರರು ಮನೆಯಬಾಗಿಲದ ನಾಲ್ಕನೇ ಮುಖ್ಯಾಂಶವಾಗಿದೆ. ಕಾಶ್ಮೀರ ವಿಷಯದಲ್ಲಿ ಭಾರತವು ನ್ಯಾಯವಾದ ಘೋರಣೆಯನ್ನೆ ಅನುಸರಿಸುತ್ತಾ ಬಂದಿದೆ. ಈ ಘೋರಣೆಯನ್ನು ರೂಪಿಸಿದ ಪಕ್ಷ ಕಾಂಗ್ರೆಸು. ಆದುದರಿಂದ ಈ ನ್ಯಾಯ ಮಾರ್ಗದಲ್ಲಿ ಮುನ್ನಡೆಯುವ ಧುರೀಣತ್ವವಾದರೂ ಅದಕ್ಕೆನೆ. ಸ್ವಲ್ಪವೇ ಕಾದದ್ದಾದರೂ ಕ್ರಮ ಪ್ರಾಪ್ತ. ಪ್ರತಿಪಕ್ಷಗಳು ಇಲ್ಲದಿದ್ದರೆ ಪ್ರಜಾಪ್ರಭುತ್ವಕ್ಕೆ ಅರ್ಥವಿಲ್ಲ ಎನ್ನುವುದು ನಿಜ; ಆದರೆ ಅಪ್ರಬುದ್ಧ ಪಕ್ಷಗಳು ಪ್ರಜಾಪ್ರಭುತ್ವದ ನಾಶವನ್ನು ಮಾಡಿ ದೇಶವನ್ನು ಅರಾಜಕತೆಗೆ ದೂಡುತ್ತವೆ ಎನ್ನುವುದೂ ಅಷ್ಟೇ ಸತ್ಯವಾದ ಮಾತು. ಇದು ಮತದಾರರು ನೆನಪಿನಲ್ಲಿಟ್ಟುಕೊಳ್ಳಬೇಕಾದ ಐದನೇ ವಿಷಯ. ನಾವು ಇನ್ನೊಂದೆರಡು ದಶಕಗಳವರೆಗಾದರೂ ನೆಮ್ಮದಿಯ ರಾಜ್ಯಭಾರವನ್ನು ಅನುಭವಿಸೋಣ; ಈ ಅವಧಿಯಲ್ಲಿ ಪ್ರತಿಪಕ್ಷಗಳು ಶಾಸನರಂಗದಲ್ಲಿಯಲ್ಲ, ರಚನಾತ್ಮಕ ಕ್ಷೇತ್ರದಲ್ಲಿ ತಕ್ಕ ತರಬೇತಿಯನ್ನು ಹೊಂದಲಿ! ಹೀಗೆ ಪ್ರತಿಪಕ್ಷಗಳು ಪ್ರಬುದ್ಧಾವಸ್ಥೆಯನ್ನು ಮುಟ್ಟಲಿ! ಅಲ್ಲಿಯವರೆಗೆ ಕಾಂಗ್ರೆಸ್ಸನ್ನೆ ಅಧಿಕಾರಸ್ಥಾನದಲ್ಲಡಿಸಲು ಮತದಾರರು ಮರೆಯದಿರಲಿ! ಇದು ನಮ್ಮ ನಮ್ರ ವಿನ್ನಹ.

— ——

ಕಾಶ್ಮೀರದ ಸತ್ಯ ಚಿತ್ರ

(ಹಿನ್ನೆ ಸುಟದಿಂದ)

ಸೇರಿದ ವಿಷಯ; ಅಜಾದ್ ಕಾಶ್ಮೀರ್ ಸೈನ್ಯಗಳ ವಿಸರ್ಜನೆಯಾಗಬೇಕು; ಮತ್ತು ಪಾಕಿಸ್ತಾನವನ್ನು ಕಾಶ್ಮೀರ ವ್ಯವಹಾರದ ಪ್ರತಿಯೊಂದು ಘಟ್ಟದಲ್ಲೂ ಹೊರಗೇನೇ ಇಡಬೇಕು, ಹೊಸ ಅದರ ಕೈವಾಡಕ್ಕೆಂದೂ ಅವಕಾಶವಿರತಕ್ಕ ದ್ದಲ್ಲ.

ಇದನ್ನು ನೋಡಿದರೆ, ಪಾಕಿಸ್ತಾನದ ಸ್ಥಾನ ಯಾವುದೆಂದು ಬಹಳ ಜೆನ್ನಾಗಿ ಸ್ಪಷ್ಟವಾಗುವುದಿಲ್ಲವೆ? ಜನಮತಗಣನೆ ನಡೆಸುವುದಕ್ಕೆ ಪೂರ್ವಭಾವಿಯಾಗಿ ಕೊಟ್ಟ ಈ ಭರವಸೆಯನ್ನು ವಿಶ್ಲೇಷಿಸಿದರೆ, ಪಾಕಿಸ್ತಾನಕ್ಕೆಅಪರಾಧಿಗೆ ಯೋಗ್ಯವಾದ ಸ್ಥಾನವೇ ದೊರೆತಿದೆ ಎಂಬುದು ತಿಳಿದು ಬರುತ್ತದೆ. ಆದುದರಿಂದಲೇ ಪಾಕಿಸ್ತಾನವು ಜನಮತಗಣನೆಗೆ ಮುಂಚೆ ನೆರವೇರಬೇಕಾದ ತನ್ನ ಪಾಲಿನ ಕರ್ತವ್ಯಗಳನ್ನು ನೆರವೇರಿಸಲಿಲ್ಲ. ಈಗ ಅದು ಸಂಯುಕ್ತ ರಾಷ್ಟ್ರ ಸಂಘದ ಸೇನೆಯು ಕಾಶ್ಮೀರಕ್ಕೆ ಹೋಗಬೇಕು ಎನ್ನುತ್ತದೆ. ಆದರೆ, ಭಾರತದ ಅವಿಭಾಜ್ಯ ಅಂಗವೆಂದು ಘೋಷಿಸಿರುವ ಪ್ರದೇಶದಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಸೇನೆಯು ಬರಬೇಕಾದ ಅಗತ್ಯವೇನು? ಭಾರತವು ತನ್ನ ಸಾರ್ವ ಭೌಮಾಧಿಕಾರ ಕ್ಷೇತ್ರದಲ್ಲಿ ಇಂಥ ಅನ್ಯಾಯಕ್ಕೆ ಅವಕಾಶ ಕೊಡಲಾರೆನೆಂದು ಸಾರಿ ಹೇಳಿರುತ್ತದೆ.

"ಹಾಗಾದರೆ ನೀವು ಜನಮತಗಣನೆಗೆ ಒಪ್ಪಿದ್ದೀರಲ್ಲ?" ಎನ್ನುವಕುಹಕಿಗಳು ಇದ್ದಾರೆ. ಜನಮತಗಣನೆಗೆ ಒಪ್ಪಿದ್ದೇವೆಂದ ಮಾತ್ರಕ್ಕೆ ಕಾಶ್ಮೀರವು ಪಿವಾದಾಸ್ಪದ ಪ್ರದೇಶವೆಂದಾಗಲೀ ಅದು ಭಾರತದ ಅವಿಭಾಜ್ಯ ಪ್ರದೇಶವಲ್ಲವೆಂದಾಗಲೀ ಅರ್ಥ ಮಾಡಬಾರದು. ಭಧ್ರತಾ ಮಂಡಳದ ಇಷ್ಟು ದಿನಗಳ ಕಾರ್ಯಕಲಾಪದಲ್ಲಿ ಎಲ್ಲಿಯೇ ಆಗಲಿ—ಕಾಶ್ಮೀರವು ಭಾರತ ದೊಡನೆ ಸೇರ್ಪಡೆ ಹೊಂದಿಲ್ಲ; ಅದಿನ್ನೂ ವಾದಗ್ರಸ್ತಪ್ರದೇಶ ಎಂದೆ.ಎಂದಾದರೂ ಉಲ್ಲೇಖವಾದ್ದಿಲ್ಲ. ಆದುದರಿಂದ ವಾದ ಗ್ರಸ್ತ ಪ್ರದೇಶವಾಗಿ ಕಾಶ್ಮೀರವಿಲ್ಲ. ಜನಮತಗಣನೆ ನಡೆಸಲು ಭಾರತ ಒಪ್ಪಿದ ಮಾತ್ರದಿಂದ ಅದು ವಾದಗ್ರಸ್ತ ಪ್ರದೇಶವಾಗುವುದೂ ಸಾಧ್ಯವಿಲ್ಲ. ಉದಾಹರಣೆಗೆ ಭಾರತದಲ್ಲಿ ಫ್ರೆಂಚರಿದ್ದ ಚಂದ್ರನಾಗೋರಿನಂಥ ವಸಾಹತಿನಲ್ಲಿ ಜನಮತಗಣನೆ ನಡೆಯಿತು; ಜನರು ಭಾರತ ದೊಡನೆ ಸೇರ್ಪಡೆಕೊಂದುವುದರ ಪರವಾಗಿ ಮತವನ್ನಿತ್ತರು. ಆನಂತರವೇ ಕಾನೂನು ಪ್ರಕಾರ ಭಾರತಕ್ಕೆ ಆಡಳಿತವನ್ನು ವರ್ಗಾಯಿಸುವ ಕೆಲಸ ಪ್ರಾರಂಭವಾಯಿತು; ಸಂಪೂರ್ಣವಾಗಿ ಸಾರ್ವಭೌಮಾಧಿಕಾರವನ್ನು ವಿಧ್ಯುಕ್ತ ಕ್ರಮದಲ್ಲಿ ಶಾಸನಬದ್ಧವಾಗಿ ಒಪ್ಪಿಸುವ ಹೆಜ್ಜೆಗಳನ್ನು ಸಹ ಈಗ ಮುಂದಿಡಲಾಗುತ್ತದೆ. ಆನಂತರವೇ ಫ್ರಾನ್ಸಿನ ಸಂಬಂಧವನ್ನು ಸಂಪೂರ್ಣ ಕಡಿದುಕೊಂಡು ಫ್ರೆಂಚರ ಕೈಯಲ್ಲಿದ್ದ ಈ ಪ್ರದೇಶ ಭಾರತದ ಅವಿಭಾಜ್ಯ ನೆಲವಾಗುತ್ತದೆ. ಇದೇ ನೀತಿ ಕಾಶ್ಮೀರಕ್ಕೂ ಅನ್ವಯಿಸುತ್ತದೆ. ಜನಮತಗಣನೆಯ ಪರಿಣಾಮವಾಗಿ ಪಾಕಿಸ್ತಾನಕ್ಕೆ ಕಾಶ್ಮೀರ ಸೇರಿತಕ್ಕದ್ದೆಂಬ ತೀರ್ಮಾನವಾದರೆ, ಭಾರತವು ತನ್ನ ಘಟನೆಗೆ ವಿದ್ದಪಡಿಮಾಡಿಯೂ ಇತರ ಶಾಸನಕ್ರಮಗಳನ್ನು ಕೈಗೊಂಡೂ ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಕೊಡುತ್ತದೆ. ಅಲ್ಲಿಯ ವರೆಗೆ ಕಾಶ್ಮೀರವು ಭಾರತದ ನೆಲವಾಗಿಯೇ ಉಳಿಯುವುದು. ಅಂತಾರಾಷ್ಟ್ರೀಯ ನೀತಿ, ನಿಯಮ ಮತ್ತು ನ್ಯಾಯಗಳಿಗೆ ಸುಸಂಗತವಾಗಿರುವ ವಿಷಯ

ಸ್ಥಳೀಯ ಯೋಜನೆಯ ಕಾರ್ಯಾಚರಣೆಯಲ್ಲಿ ಸಾರ್ವಜನಿಕರು ಆಸಕ್ತಿಯಿಂದ ಭಾಗವಹಿಸುವ ದೃಶ್ಯವಿದು.

ಪಾಕಿಸ್ತಾನವು ಕಾಶ್ಮೀರವನ್ನು ಆಳ್ವಿ ಮುಸ್ಲಿಂ ಜನರೇ ಅಧಿಕಸಂಖ್ಯೆಯಿದ್ದಾರೆಂಬುದಕ್ಕಾಗಿ ಕೇಳುತ್ತದೆ. ಇದು ಶುದ್ಧ ಮೂರ್ಖತನ. ಭಾರತದಲ್ಲಿ ೪೦ ಲಕ್ಷ ಕ್ರೈಸ್ತರಿದ್ದಾರೆ; ೪ ಕೋಟಿ ಮುಸ್ಲಿಮರಿದ್ದಾರೆ; ನಮ್ಮೆದು ಜಾತ್ಯತೀತ ರಾಷ್ಟ್ರ. ಇಲ್ಲಿ ಎಲ್ಲ ಜಾತಿಗಳವರೂ ಸ್ನೇಹ, ಸೌಹಾರ್ದದಿಂದ ಬಾಳಬಹುದು. ಕಾಶ್ಮೀರದ ಮುಸ್ಲಿಮರು ಪಾಕಿಸ್ತಾನಕ್ಕೆ ಸೇರಲು ಬಯಸುತ್ತಿಲ್ಲವಾದರೆ, ಅವರನ್ನು ಒತ್ತಾಯದಿಂದ ಪಾಕಿಸ್ತಾನದ ಪ್ರಜೆಗಳಾಗಿ ಭದ್ರತಾ ಮಂಡಳ ಮಾಡಬೇಕೆಂದು ಪಾಕಿಸ್ತಾನದ ಇಚ್ಛೆಯಾಗಿದ್ದರೆ ಅದು ಚರಿತ್ರೆಯಲ್ಲಿಯೇ ಕ್ರೂರವಾದ ಒತ್ತಾಯ. ಇಂಥ ಅಚಾತುರ್ಯ ಎಂದಿಗೂ ನಡೆಯಬಾರದು.

ಕಾಶ್ಮೀರದ ಸತ್ಯ ಚಿತ್ರ ಇರುವುದು ಹೀಗೆ—ಜಗತ್ತು ಇದನ್ನು ಮಣಿಗಾಣಬೇಕೆಂದು ನನ್ನ ಆಶಯ.

ಉಡುಪಿ

ಅಕ್ಕಿ ಮುಹೂರ್ತ— ಮುಂಬರುವ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾಧೀಶ ತೀರ್ಥ ಸ್ವಾಮಿಗಳವರ ಪರ್ಯಾಯ ಮಹೋತ್ಸವದ ಪೂರ್ವ ಸಿದ್ಧತೆಯ ದ್ವಿತೀಯಾಂಗವಾದ 'ಅಕ್ಕಿ ಮುಹೂರ್ತ' ಸಮಾರಂಭವು ಇವೇ ತಾ. ೧೪ಲ್ಲು ಬೆಳಿಗ್ಗೆ ಸುಲಗ್ನತಾ ಸುಮುಹೂರ್ತದಲ್ಲಿ ಶ್ರೀ ಮದಾ ಚಾರ್ಯರ ಶುಭಸಂಪ್ರದಾಯಗಳಿಗನುಸಾರವಾಗಿ ವಿಧಿಪೂರ್ವಕ ವೈಭವದಿಂದ ಜರಗಿತು.

ಶಾಲಾ ವರ್ಧಂತಿ— ಸ್ಥಳೀಯ ಕ್ರಿಶ್ಚಿಯನ್ ಹಾಸ್ಟೆಲಿನ ವರ್ಧಂತಿ ಸಮಾರಂಭವು ತಾ. ೪೭ಲ್ಲು ಸಂಜೆ ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಪನವರ ಅಧ್ಯಕ್ಷತೆಯಲ್ಲಿ ಜರಗಿತು. ಹೆಡ್ಮಾಸ್ಟರ್ ಶ್ರೀ ಎಸ್. ಎನ್. ಸುಬ್ರಾಯಸರು ಶಾಲಾ ವರದಿಯನ್ನೋದಿದರು. ಡಾ. ಕೆ. ಬಿ. ದಾಸರು ಸ್ವಾಗತವಾಜನಮಾಡಿದರು. ಬಹುಮಾನ ವಿತರಣೆ, ಶಾಲಾ ಪತ್ರಿಕೆಯ ಉದ್ಘಾಟನೆ ಇತ್ಯಾದಿ ಕಾರ್ಯಕ್ರಮಗಳಾಗಿ ಸಮಾರಂಭ ಕೊನೆಗೊಂಡಿತು.

ಶ್ರೀ ಮಧ್ವನವಮಿ— ಶ್ರೀಕೃಷ್ಣನ ಕಿರಿದಲ್ಲಿ ಸರ್ಯಾಯ ಅದಮಾರು ಮಠದ ಶ್ರೀ ಪಾದಂಗಳವರು ತಾ. ೨ರಂದು ಶ್ರೀ ಮಧ್ವ ನವಮಿ ಮಹೋತ್ಸವವನ್ನು ಸಾಂಗವಾಗಿ ಆಚರಿಸಿದರು. ಶ್ರೀ ಪುತ್ತಿಗೆ, ಶ್ರೀ ಕಾಣಿಯೂರು, ಶ್ರೀ ಕೃಷ್ಣಾಪುರ, ಶ್ರೀ ಪೇಜಾವರ, ಶ್ರೀ ಸೋದೆ, ಶ್ರೀ ಫಲಿಮಾರು, ಶ್ರೀ ಭಂಡಾರ ಕೇರಿ ಸ್ವಾಮಿಗಳವರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ತಾಲೂಕು ಪಂಡಿತ ಸಂಘದ ಸಭೆ— ಉಡುಪಿ ತಾಲೂಕು ಭಾಷಾ ಪಂಡಿತ ಸಂಘದ ಸಾಹಾಸಭೆಯು ತಾ. ೧೦ರಲ್ಲಿ ಡಾ। ಪಿ. ಜಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಹೊಸವರ್ಷಕ್ಕೆ ಶ್ರೀಗಳಾದ ಹಿ. ಮುಖ್ಯಪ್ರಾಣ ತಂತ್ರಿ (ಅಧ್ಯಕ್ಷ) ಯು. ಕೆ. ಕೆವ್ಲಾಯ (ಕಾರ್ಯದರ್ಶಿ) ಕೆ. ಜೀವಾಸ್ ಪಿ. ಮಾಧವ ತಂತ್ರಿ, ಕೆ. ವೆಂಕಟೂಜಲು ಭಟ್ಟರು (ಇತರ ಸದಸ್ಯರು) ಕಾರ್ಯ ಕಾರಿಸಮಿತಿಗೆ ಆರಿಸಲ್ಪಟ್ಟರು.

ಎಂ. ಜಿ. ಎಂ. ಕಾಲೇಜಿನಲ್ಲಿ— ದಿನಾಂಕ ೬ರಂದು ಕಾಲೇಜಿನ ಅರ್ಥ ಶಾಸ್ತ್ರ ಸಂಘದ ಆಶ್ರಯದಲ್ಲಿ ಕಳೆದ ವರ್ಷದಂತೆಯೇ ಈ ವರ್ಷವೂ ದ್ವಿತೀಯ ಮೈತ್ರಿಕವಾದ ವಿವಾದಗಳು ಜರಗಿದುವು. ಈ ಸಲದ ವಿಷಯವು 'ಸಮತಾವಾದ ಆಧವಾ ಸ್ವಾಮವಾದ' ವಾಗಿತು. ಒಬಲ್ಟಟ್ಟ ಏದು ಭಾಷಣಗಳು ಸಮತಾವಾದವೆಂದರೇನು ಎಂದು ವಿಶದವಾಗಿ ತಿಳಿಸಿದವಲ್ಲದೆ ಅವುಗಳ ಬೆಳವಣಿಗೆಗಿಯಾವ ಯಾವ ನೇಶಗಳಲ್ಲಿ ಹೇಗೇಗಾಯಿತು ಎಂದು ತಿಳಿಸಿದುವು. ಮೈಸೂರು ವಿಶ್ವವಿದ್ಯಾನಿಲಯದ ಮಹೋಪಾಧ್ಯಾಯರಾದ ಡಾ. ಎಂ. ವಿ. ಕೃಷ್ಣರಾಯರು ಸಭೆಯ ಅಧ್ಯಕ್ಷತೆಯನ್ನು ನಹಿಸಿದ್ದರು.

ಪ್ರಾರ್ಥನೆಯೂವ ಬಳಿಕ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಎಚ್. ಸುಂದರರಾಯರು ಅತಿಥಿಗಳನ್ನು ಸ್ವಾಗತಿಸುವ ಜೊತೆಗೆ ಭಾಷಣಗಳ ಉದ್ಘಾಟನೆಯನ್ನೂ ನಡೆಸಿದರು. ಮುಂದೆ ಕೆನರಾ ಕಾಲೇಜು ಕೊಮಟಾದ ಪ್ರೊ। ಎನ್. ಆರ್. ರಾಯರು 'ಸಮತಾವಾದದ ವಿಚಾರಗಳ ಬೆಳವಣಿಗೆ', ಶ್ರೀಮತಿ ಯು. ಯನ್. ಶಾಲಿನಿ 'ಬ್ರಿಟಿಷ್ ಸಮತಾವಾದ, ಶ್ರೀ ಕೆ. ರಾಮಭಟ್ಟರು ರಷ್ಯದಲ್ಲಿ ಸಮತಾವಾದ; ಶ್ರೀ ಕು. ಶಿ. ಹರಿದಾಸ ಭಟ್ಟರು ಜೈನಾದಲ್ಲಿ ಸಮತಾವಾದ; ಹಾಗೂ ಓ ಶ್ರೀ ಸೇವಪಪಿಂರಾಜ ಮುದ್ದರು, ಭಾರತದಲ್ಲಿ ಸಮತಾವಾದದ ವಿಸ್ತರಣ, ಇವುಗಳ ಕುರಿತು ಬರೆದುಕೊಂಡು ಬಂದಿದ್ದ ಉತ್ತಮರೆದ ಭಾಷಣಗಳನ್ನು ಓದಿ ಹೇಳಿದರು.

ಅಧ್ಯಕ್ಷರು ಎಲ್ಲಾ ಭಾಷಣಗಾರರ ಲೇಖನಗಳೂ ಉತ್ತಮವಾಗಿವೆ ಎಂದು ಪ್ರಂಶಿಸಿದರಲ್ಲದೆ, ತಮಗೆ ಯುಕ್ತವೆನಿಸಿ ಕಂಡಷ್ಟು ಸೂಕ್ತವಾಗಿ ವಿವರಿಸುತ್ತಾ ಸುಮಾರು ಒಂದೂವರೆ ಗಂಟೆಗಳ ತನಕ ಭಾಷಣನಿತ್ತರು.

ಅವೇ ದಿನ ಸಾಯಂಕಾಲ ಕಾಲೇಜಿನ ಯೂನಿಯನ್ನಿನ ವಾರ್ಷಿಕ ಸಮಾರಂಭವು ಡಾ| ಎಂ. ವಿ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆಯೂವ ಬಳಿಕ ಶ್ರೀ ಕೆ. ದಿ. ರಾಮಕೃಷ್ಣರಾಯರು ಸ್ವಾಗತಭಾಷಣಗೂಡಿದರು. ವಿವಿಧ ಸಂಘಗಳ ನರದಿಗಳ ವಾಚನವಾದ ಬಳಿಕ ಕೆಲವು ವಿದ್ಯಾರ್ಥಿಗಳ ಪರವಾಗಿ ಶ್ರೀಮತಿ ಜೋಯ್ಸಿ ಫೆರ್ನಾಂಡಿಸ್ ಹಾಗೂ ಶ್ರೀ ಗಿಲ್ಬರ್ಟ್ ಜೋಸುವಾರವರು ಹಿರಿಯರಿಗೆ ರುಚೋದಯವನ್ನು ಕೋರಿದರು. ಹಿರಿಯ ವಿದ್ಯಾರ್ಥಿಗಳ ಪರವಾಗಿ ಶ್ರೀಗಳಾದ ಪ್ರೇಮಚಂದ್ರ ಹೆಗ್ಡೆ ಹಾಗೂ ವಿನೋದಕುಮಾರ ತಿಟ್ಟಿಯವರು ಉತ್ತರಿಸಿದರು.

ಅಧ್ಯಕ್ಷರ ಹಾಗೂ ಪ್ರಿನ್ಸಿಪಾಲರ ಭಾಷಣವಾದ ಬಳಿಕ ಯೂನಿಯನ್ನಿನ ಕಾರ್ಯದರ್ಶಿಗಳು ದನ್ಯವಾದ ನೆನುಬಾಣಿ ಗೈದರು. ರಾತ್ರಿ ವಿವಿಧ ವಿನೋದಾವಳಿಗಳೂ, 'ಯೂರ ಹೆಡ್ತಿ?' ಎಂಬ ನಾಟಕಪ್ರಾಸ್ತಾವರ್ತಿಸಲ್ಪಟ್ಟಿತು.

ದಿನಾಂಕ ೯ರಂದು ಸ್ಥಳೀಯ ಕಸ್ತೂರ್‌ಬಾ ಮೆಡಿಕಲ್ ಕಾಲೇಜು ಡೀನ್‌ರಾವಡಾ, ಆರ್. ಪಿ. ಕೊಸ್ಲಿಕಾರ್ ರವರ ಅಧ್ಯಕ್ಷತೆಯಲ್ಲಿ ಕಾಲೇಜ್ ಹಾಸ್ಟೆಲಿನ ವಾರ್ಷಿಕ ದಿನಾಚರಣೆಯು ಜರಗಿತು.

ಪ್ರಾರ್ಥನೆಯೂವ ಬಳಿಕ ಹಾಸ್ಟೆಲಿನ ರಕ್ಷಕರಾದ ಪ್ರಿನ್ಸಿಪಾಲ್ ಎಚ್. ಸುಂದರರಾಯರು ಸ್ವಾಗತಭಾಷಣಮಾಡಿದರು. ವರದಿವಾಚನ ಹಾಗೂ ಇತರ ಭಾಷಣಗಳಾದ ಬಳಿಕ, ಅಧ್ಯಕ್ಷರು ತಮ್ಮ ಭಾಷಣದಲ್ಲಿ ತಾನು ಕಂಡ ಹಾಗೂ ಅನುಭವಿಸಿದ ಹಾಸ್ಟೆಲಿನ ಸಣ ನೆನಪುಗಳನ್ನು ಸ್ಮರಿಸ್ಯವಾಗಿ ಹೇಳಿದರು. ಬಡು ಮೂನಿನಿರತೆಯೊಬಳಿಕ ಹಾಸ್ಟೆಲಿನ ಸಹಾಯಕ ರಕ್ಷಕರೊಬ್ಬರಾದ ಶ್ರೀ ಎಂ. ದೆ ಯೊನಂದ ನುಲ್ಕರು ದನ್ಯವಾದಗಳನ್ನು ಅರ್ಪಿಸಿದರು. 'ವ್ಯಾಧಿಗೆ ತಕ್ಕ ವೈದ್ಯ ಎಂಬ ಹಾಸ್ಯ ಭರಿತ ನಾಟಕವು ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು.

ಮುದ್ರಣಾಲಯಕ್ಕೆ

ಜನನ.	ಮರಣ:
24-1-1870	15-2-1901

ಕನ್ನಡದ ಸಾಹಿತ್ಯತ ತಲೆ ಬಗ್ಗಿಸೆ
ತನ್ನನು ಕಾಯುವ ಕವಿಯ ನಿರೀಕ್ಷಿಸೆ:
ನೀನೇ ಆ ಕವಿಯಾಗುತ ಬಾರದೆ
ನವ ಸಾಹಿತ್ಯದ ಹೊಸ್ತಿಲೆ ಆದೆ!
ನಂದಳಿಕೆಯಲಿ ನೀಂ ಜನಿಸಿದ್ದೆ!
ಕುಸ್ತೀ ಮಾಸ್ತರನಾಗಿದ್ದೆ!
ಹೊಸ ಸಾಹಿತ್ಯ ಮಹಾತಿಯಾದಿ
ಉಡುಪಿಯ ಊರಲಿ ವಾಸಿಸಿದೆ!
ಪ್ರಾಸಗಳನು ಕಾವ್ಯದಿ ಕುಣಿಸಿ;
ರತ್ನಾವತಿ ಕಲ್ಯಾಣ'ವ ರಚಿಸಿ;
'ಕುಮಾರ ವಿಜಯ'ವ ಚಂದದಿ ಚಿತ್ರಿಸಿ;
'ಶ್ರೀ ರಾಮನಾಶ್ವಮೇಧ'ವನು ವಿವರಿಸಿ;
'ಶ್ರೀ ರಾಮನ ಪಟ್ಟದ ಅಭಿಷೇಕ'ವ;
ಕನ್ನಡ ಜನಗಳ ಚಂದದಿ ತೋರಿಸಿ;
'ಅದ್ಭುತ ರಾಮಾಯಣ'ವನು ಪ್ರಕಟಿಸಿ;
ವರ್ಣನೆಯಲಿ ನೀ ಚತುರನು ಎನಿಸಿದೆ,
ಸಿಂಗರೆ ರಸವನ್ನೂ ಬಿಟ್ಟಿಸಿದೆ,
ಸರ್ವ ರಸಗಳಲ್ಲೂ ಜನಪದದೆ
ಕನ್ನಡ ಜನತೆಗೆ ಸುಖತೃನೆನಿಸಿನೆ
ಭಾರತ ದೇವದ ಕವಿಗಳತೋರ್ವನು
ಎನ್ನುತ ಲೆಕ್ಕಿಸಲಿಕೆ ನೀ ಯೋಗ್ಯನು.

—ಸಿ. ನಾರಾಯಣ ಬಲ್ಲಾಳ, ಉಡುಪಿ.

ಎಲ್ಲೆಲ್ಲಿ ಏನೇನು?

ಕುಂದಾಪುರ— ಬೈಂದೂರು ಮತದಾರಕ್ಷೇತ್ರದಿಂದ ಮೈಸೂರು ಶಾಸನಸಭೆಗೆ ಆರಿಸಿಬಂದ ಶ್ರೀ ವೈ. ಸುಂಜಯ್ಯ ಶೆಟ್ಟಿ, ಎಮ್. ಎಲ್. ಎ, ಅವರಿಗೆ ತಾ ೩೦ಲ್ಲು ಕುಂದಾಪುರ ಎಜ್ಯುಕೇಶನ್ ಮೆಮೋರಿಯಲ್ ಕ್ಲಬ್ಬಿನ ಸದಸ್ಯರು ಸತ್ಕಾರವಿತ್ತು ಗೌರವಿಸಿದರು.

ಕಾರ್ಕಳ— ಸ್ಥಳೀಯ ಜೋರ್ಡು ಹೈಸ್ಕೂಲಿನ ವರ್ಧಂತಿ ಉತ್ಸವವು ತಾ. ೩೦ಲ್ಲು ಡಿ| ಮುಸ್ಸಿಫ್ ಶ್ರೀ ಎ. ಎಮ್. ಜೇಸಾರವರ ಅಧ್ಯಕ್ಷತೆಯಲ್ಲಿ ಜರಗಿತು. ಹೆಡ್ಮಾಸ್ಟರ್ ಶ್ರೀ ಎಸ್. ಆರ್. ಆಚಾರ್ಯರು ವರದಿಯನ್ನೋದಿದರು. ಶ್ರೀ ಪಿ. ಗುರುರಾಜ ಭಟ್ಟರು ಸ್ವಾಗತವಚನ ನುಡಿದರು. ಶ್ರೀಮತಿ ಜೇಸಾರ್ ವಲ್ಲು ಬಹುಮಾನ ವಿತರಿಸಿದರು.

ಜೈನಮಹಿಳಾ ಪರಿಷತ್ತು— ಕಾರ್ಕಳದಶ್ರೀ ಬಾಯುಬಲಿ ಮಹಾಮಸ್ತಕಾಭಿಷೇಕ ಮಹೋತ್ಸವಸಂದರ್ಭದಲ್ಲಿ ಅಖಿಲಕರ್ನಾಟಕ ಜೈನಮಹಿಳಾ ಪರಿಷತ್ತು ನಲ್ಲಿಕಾರಿನ ಶ್ರೀಮತಿ ರಾಧಮ್ಮನವರ ಅಧ್ಯಕ್ಷತೆಯಲ್ಲಿ ಜರಗಿತು. ಧರ್ಮಸ್ಥಳ ಶ್ರೀಮತಿ ಕನಲಮ್ಮನವರು ಸ್ವಾಗತ ಭಾಷಣ ಮಾಡಿದರು. ಶ್ರೀಮತಿ ಕನಕಬೆಟ್ಟು ಲಕ್ಷ್ಮೀಅಮ್ಮನವರು ಅಧ್ಯಕ್ಷೆಯವರಿಗೆ ಅಭಿನಂದನ ಪತ್ರವನ್ನು ಅರ್ಪಿಸಿದರು. ಶ್ರೀಗಳಾದ ಧರ್ಮಸಾಲಇಂದ್ರ, ರತ್ನಮ್ಮ, ಧರ್ಮಾವತಮ್ಮ, ಕುಮಾರಿ ಯಶಸ್ವತಿ, ವಿಜಯಾ, ನೀಲಾವತಿ ಮುತ್ತು ಜಯಮ್ಮನವರುಸಂದರ್ಭೋಚಿತ ಮಾತುಗಳನ್ನಾಡಿದರು. ಅಧ್ಯಕ್ಷೆಯರ ಸಮಯೋಚಿತ ಭಾಷಣವಾದ ಬಳಿಕ ಶ್ರೀ ಎಸ್. ಚಂದ್ರರಾಜ ಜೈನರು ಧನ್ಯವಾದಗಳನ್ನಿತ್ತರು.

ಕೈಪಾಗಳ— ಸ್ಥಳೀಯ ಹಾ| ಎ| ಶಾಲಾ ವರ್ಧಂತಿ ಸಮಾರಂಭವು ಶ್ರೀ ಕೆ. ಆರ್ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಎನ್. ನಾರಾಯಣ ಭಟ್ಟರು ಧ್ವಜಾರೋಹಣ ಮಾಡಿದರು. ಶ್ರೀಗಳಾದ ಎ. ಜೆ. ತಿರುಮಲೇಶ್ವರ ಭಟ್ಟ, ಕೆ. ವಿಶ್ವನಾಥ ಭಟ್ಟ, ಟಿ ಎಸ್. ನಾರಾಯಣ ಭಟ್ಟ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು.

ಕಾಸರಗೋಡು — ಕೇರಳಕ್ಕೆ ಸೇರಲ್ಪಟ್ಟಿರುವ ಕಾಸರಗೋಡು ತಾಲೂಕಿನ ಮಂಜೇಶ್ವರ ಮತದಾರರ ಕ್ಷೇತ್ರದಿಂದ ಕರ್ನಾಟಕ ಏಕೀಕರಣ ಸಪ್ತಪದ ಉಸೇವಾಧುರಂಧರರಾಗಿ ನಾಮಪತ್ರ ಸಲ್ಲಿಸಿದ ಶ್ರೀ ಉಮೇಶರಾಯರು ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ.

ಬಜ್ಪೆ— ಇಲ್ಲಿಯ ಜೋರ್ಡು ಎಲಿಮೆಂಟರಿ ಶಾಲೆಯ ನೂತನ ಕಟ್ಟಡವನ್ನು ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಹಯ್ಯನವರು ಕಳೆದ ೩೧ರಂದು ಉದ್ಘಾಟಿಸಿದರು. ದ. ಕ. ಜಿಲ್ಲಾ ಜೋರ್ಡು ಅಧ್ಯಕ್ಷ ಹಾ! ಕೆ. ಕೆ. ಪೆಗ್ಡೆಯನರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಬಿ. ನಾಭರಾಜ ಇಂದ್ರರು ಸ್ವಾಗತ ಭಾಷಣ ಮಾಡಿದರು.

ಕಾಪು — ಸ್ಥಳೀಯ ಜೋರ್ಡು ಹಾ! ಎ! ಶಾಲೆಯ ವಾರ್ಷಿಕೋತ್ಸವವು ತಾ. ೬ರಂದು ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ಸಂಜೀವ ಶೆಟ್ಟರು ವರದಿವಾಚನಮಾಡಿದರು. ಶ್ರೀ ಸೈ. ಸದಾನಂದ ರಾಯರು ಸಂದೇಶವಾಚನ ಮಾಡಿದರು. ಶ್ರೀ ಎಫ್. ಎಕ್ಸ್. ಡಿ. ಸಿಂಟೋರವರು ಬಹುಮಾನವಿತರಣೆಮಾಡಿದರು. ಅಂದು ಬೆಳಿಗ್ಗೆ ಶಾಲಾ ಮಕ್ಕಳಿಗೆ ಶ್ರೀಮತಿ ಶೀಲಾವತಿ ಬಿ. ಶೆಟ್ಟರು ಸಿಹಿ ತಿಂಡಿ ಪಂಚಿದರು.

ಮೂಡಬಿದ್ರೆ— ಇಲ್ಲಿಯಜೋರ್ಡು ಹಾ| ಎ| ಶಾಲೆಯ ವರ್ಧಂತಿಯು ತಾ. ೭ರಲ್ಲಿ ಜೆಲ್ಲಾ ಜೋರ್ಡು ಅಧ್ಯಕ್ಷ ಡಾ. ಕೆ. ಕೆ. ಪೆಗ್ಡೆಯನರ ಅಧ್ಯಕ್ಷತೆಯಲ್ಲಿ ಜರಿಗಿತು. ಡಾ. ಉಮಾನಾಥ ರಾಯರು ಸ್ವಾಗತಮಾತುಗಳನ್ನಾಡಿದರು. ಹೆಡ್ಮಾಸ್ಟರ್ ಶ್ರೀ ಕೆ. ಸರ್ವೋತ್ತಮ ಪೈಗಳು ವರದಿಯನ್ನೋದಿದರು.

ಶಿರ್ಲ— ಇಲ್ಲಿಯ ಸೈಂಟ್ ಮೇರಿಸ್ ಹೈಸ್ಕೂಲಿನಲ್ಲಿ ತಾ ೧೮ರಲ್ಲಿ ಶ್ರೀ ಪಿ. ಗೋಪಾಲಕೃಷ್ಣನವರ ಅಧ್ಯಕ್ಷತೆಯಲ್ಲಿ ಸಾಹಿತ್ಯೋತ್ಸವ ಜರಗಿತು. ಶಾಲಾ ಹೆಡ್ಮಾಸ್ಟರ್ ಶ್ರೀ ಎಲ್. ಮೆಂಡೋಸರು ಸ್ವಾಗತಿಸಿದರು ಶ್ರೀ ಎಸ್. ತಿರುಮಲೇಶ್ವರ ಭಟ್ಟರು ಗತಿಗಿನ ಭಾರತದ ಕುರಿತು ಉಪನ್ಯಾಸವಿತ್ತರು. ಶ್ರೀ ಬಿ. ಎಮ್. ಇವಿನಬ್ಬನವರ ಕವಿತಾ ವಾಚನ ಮಾಡಿದರು. ಶ್ರೀ ಕೆ. ಎಮ್. ಹೊಳ್ಳರು ಧನ್ಯವಾದವಿತ್ತರು.

ತಾ. ೭ರಲ್ಲು ಶ್ರೀ ಶ್ರೀಪತಿ ಆಚಾರ್ಯರ ಅಧ್ಯಕ್ಷತೆಯಲ್ಲಿ ಜೋನ್ಸ್‌ಜೋಸ್ಸೇಸ್ ಮತ್ತು ಸೈಂಟ್ ಮೇರೀಸ್ ಹೈಸ್ಕೂಲಿನ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕ ದಿನಾಚರಣೆ ನಡೆಯಿತು. ಶ್ರೀ ಎಫ್. ಟಿ. ಎಡ್ರಾರ್ ರೋಡ್ರಿಸ್ಸರು ಧನ್ಯವಾದವಿತ್ತರು.

ತಾ ೩ರಲ್ಲಿ ಡಾ| ವಿ. ಆರ್. ಕೊಪ್ಪೀಕರರ ಅಧ್ಯಕ್ಷತೆಯಲ್ಲಿ ಶಾಲಾ ವರ್ಧಂತಿಯುತ್ಸವ ಜರಗಿತು. ಶಾಲಾ ಲೇಖಕ ರೆ| ಫಾ| ಎಜ್. ಗೋನ್ಸಾಲ್ವೀಸರು ಸ್ವಾಗತಿಸಿದರು. ಹೆಡ್ಮಾಸ್ಟರ್ ಶ್ರೀ ಎಲ್. ಮೊಂಜೋಸ್ಸರು ವರದಿ ವಾಚನ ಮಾಡಿದರು. ಕುಪಾರಿ ಕೆ. ಸುನಂದಾರಿಂದ ಸ್ವಾಗತ ವಾಚನ, ಶ್ರೀಮತಿ ಅನುಸೂಯಾ ಪಾಯಿಯನರಿಂದ ಬಹುಮಾನ ವಿತರಣೆ, ಶ್ರೀ ಎಫ್. ಎಕ್ಸ್. ಡಿ. ಸಿಂಟೋರ ನರಿಂದ ಹಿತೋಪದೇಶ ಮೊದಲಾದ ಕಾರ್ಯಕ್ರಮಗಳಾದುವು.

ವಿವಿಧೋಪಯೋಗಿ ಆಹಾರ

(ಉನೇ ಪುಟದಿಂದ)

ಮುಖ ಜನತೆಯೂ ಈ ಆಹಾರವನ್ನು ಬಹಳಖಾಗಿ ಶ್ಲಾಘಿಸಿದ್ದಾರೆ. ಇಲ್ಲದೆ ಪ್ರಧಾನಿ ನೆಹರು ಈ ಆಹಾರವು ಸಾವಾನ್ಯ ಜನರಿಗೆ ಕ್ಷೈಪ್ರದಲ್ಲಿ ಸಿಗುವಂತಾಗಲೆಂದು ಹಾರೈಸಿದರು.

ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನಾ ಸಂಸ್ಥೆಯ ಮುಖ್ಯಾಧಿಕಾರಿಗಳ ಪ್ರಯತ್ನದ ಫಲವಾಗಿ ಈ ಆಹಾರವನ್ನು ಹೆಚ್ಚಾಪ ಪರಿಮಾಣದಲ್ಲಿ ಉತ್ಪಾದಿ ಮಾಡುವ ಏರ್ಪಾಡು ನಡೆಯುತ್ತಿದೆ. ಧ್ಯದಲ್ಲೆ ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯದಲ್ಲಿ ದಿನವೊಂದಕ್ಕೆ ೫ ಟನ್ನುಗಳಷ್ಟು ವಿವಿಧೋಪಯೋಗಿ ಆಹಾರವನ್ನು ತಯಾರಿಸುವ ಒಂದು ಯಂತ್ರವನ್ನು ಸ್ಥಾಪಿಸಲಾಗುವುದಲ್ಲದೆ ಇನ್ನು ಬೇರೆ ೯ ಯಂತ್ರಗಳನ್ನು ದೇಶದಾದ್ಯಂತ ಸ್ಥಾಪಿಸುವ ಪ್ರಯತ್ನ ನಡೆದಿರುತ್ತದೆ.

—ಶ್ರೀ ವಿ. ಬಾಲು.
(ಪುಸ್ತಕ ಪ್ರಪಂಚ)

In the Court of the District Munsif of Mangalore

O P No 6 of 1957.

In the matter of the debts due to Kumble Yeshoda Bai

—Deceased

1 Kumble Gowri Bai 2 Kumble Appayya

—Petitioners

The above mentioned Petitioners have applied Under Section 372 and 373 of the Indian Succession Act for the grant of Succession Certificate to the debts due to Kumble Yeshoda Bai,who died on 19—7—1956 in Mangalore Town, and the Petition stands posted to 28—2—1957.

(By order of the Court)

J. O. B. A. Andrade,
Advocate for Petitioners.

Mangaloer, 2—2—1957.

ಅಮೇರಿಕದ ಪ್ರಸಿದ್ಧ ವಿಜ್ಞಾನಿ, ಹಾರ್ವರ್ಡ್ ವಿಶ್ವವಿದ್ಯಾಲಯದ ಕುಲಪತಿ
ಡಾ. ಜೇಮ್ಸ್ ಬಿ. ಕೊನೇಂಟರ



ಆಧುನಿಕ ವಿಜ್ಞಾನವು ಮನುಷ್ಯ ಜೀವನದ ಮೇಲೆ ಉಂಟುಮಾಡಿರುವ ಕ್ರಾಂತಿಕಾರಕ ಪರಿಣಾಮಗಳನ್ನು ಪರಿಶೀಲಿಸಿ ವಾಣಿಜ್ಯ, ಸರಕಾರ, ನೀತಿ, ಧರ್ಮ, ಮುಂತಾದ ಬದುಕಿನ ವಿವಿಧ ರಂಗಗಳಲ್ಲಿ ವಿಜ್ಞಾನವು ಬೀರಿರುವ ಪ್ರಭಾವವನ್ನು ಡಾ. ಕೊನೇಂಟ ಇಲ್ಲಿ ತಮ್ಮ ಸರಳ ಮತ್ತು ಓಜಸ್ವಿ ಶೈಲಿಯಲ್ಲಿ ಬಣ್ಣಿಸಿದ್ದಾರೆ. ಇಂದಿನ ವಿಜ್ಞಾನಿಯು ಕೇವಲ ಒಬ್ಬ ಕಲ್ಪನಾವಿಹಾರಿ ತಾತ್ತ್ವಿಕನಲ್ಲ, ವಿಶ್ವದ ಗೌಪ್ಯವನ್ನು ತೆರೆದು ತೋರಿಸಬಲ್ಲ ಮಂತ್ರವಾದಿಯೂ ಅಹ್ಲ. ಆತನು ಇತರ ವ್ಯಾವಹಾರಿಕ ಕ್ಷೇತ್ರಗಳಲ್ಲಿ ದುಡಿಯುವ ಜನರಷ್ಟೇ ಪ್ರಾಮಾಣಿಕನಾಗಿಯೂ ಕಷ್ಟಸಹಿಷ್ಣುವಾಗಿಯೂ ದುಡಿಯಬೇಕಾದ ವ್ಯವಹಾರಜ್ಞ. ತತ್ತ್ವಶಾಸ್ತ್ರ ಮತ್ತು ಮಾನವಿಚಾರಗಳಲ್ಲಿರುವ ಶಂಕೆ, ಮತ್ತು ನ್ಯೂನತೆ ಇಂದಿನ ವಿಜ್ಞಾನವನ್ನೂ ಆವರಿಸಿವೆ. ಇಂದಿನ ಪ್ರಪಂಚದಲ್ಲಿ ವಿಜ್ಞಾನದ ಪಾತ್ರವೇನೆಂದು ವಿಮರ್ಶಿಸುವ ಗ್ರಂಥಗಳಲ್ಲಿ ಡಾ. ಕೊನೇಂಟರ ಈ ಗ್ರಂಥದಷ್ಟು ವಿಚಾರ ಪ್ರಚೋದಕವಾದುದು ಬೇರೊಂದಿಲ್ಲ.

ಇವನ್ನು ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜಿನಲ್ಲಿ ಭೌತ ಶಾಸ್ತ್ರದ ಪ್ರಾಧ್ಯಾಪಕರಾದ ಉಡುಪಿ ಲಕ್ಷ್ಮೀನಾರಾಯಣಾಚಾರ್ಯ ಎಂ. ಎ. ಎಲ್. ಟಿ. ಇವರು ಅನುವಾದಿಸಿದ್ದಾರೆ. ಇವರು ಕನ್ನಡದಲ್ಲಿ ಹಲವು ವೈಜ್ಞಾನಿಕ ವಿಷಯದ ಲೇಖನಗಳನ್ನು ಬರೆದಿದ್ದಾರೆ. ಇವರು ಅನುವಾದಿಸಿದ (ಶ್ರೀ ಕು. ಶಿ. ಹರಿದಾಸ ಭಟ್ಟರೊಡನೆ) ಡಾ. ಕರೆಲರ 'ಅವ್ಯಕ್ತ ಮಾನವ' (Man, the Unknown) ಕನ್ನಡದಲ್ಲಿ ವಿಶೇಷ ಮನ್ನಣೆಯನ್ನು ಪಡೆದಿದೆ.

ಪ್ರಸ್ತುತ ಅನುವಾದದಲ್ಲಿ ಶ್ರೀಯುತರ ಗಂಭೀರ ಆದರೂ ಸರಳ ಮತ್ತು ವೈಜ್ಞಾನಿಕ ಶೈಲಿಯ ಪರಿಚಯವನ್ನು ಮಾಡಿಕೊಳ್ಳಬಹುದು.

ಉತ್ತಮ ಕಾಗದದಲ್ಲಿ ಉಜ್ಜ್ವಲಗಿರುವ ಈ ಪುಸ್ತಕದ ಬೆಲೆ ಬರೀ ರೂ.1-8-0ಮಾತ್ರ

ಪ್ರತಿಗಳಿಗೆ ಬರೆಯಿರಿ:—
ನವಯುಗ ಎಂಟರ್‌ಪ್ರೈಸಸ್ ಲಿಮಿಟೆಡ್, ಉಡುಪಿ.

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ, ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

ಪುಸ್ತಕ-ವಿಮರ್ಶೆ

ಉಡುಪಿ (ಕ್ಷೇತ್ರ ಪರಿಚಯ)

ಪ್ರಕಾಶಕರು: ಶ್ರೀ ಕೃಷ್ಣಾಪುರ ಮಠ ಉಡುಪಿ ಬೆಲೆ: ಐದಾಣೆ

ದಕ್ಷಿಣ ಭಾರತದ ಪ್ರಸಿದ್ಧ ಕ್ಷೇತ್ರಗಳಲ್ಲೊಂದಾದ ಉಡುಪಿಯ ಮಾಹಿತಿಯನ್ನು ಒದಗಿಸಿಕೊಡುವ ಉದ್ದೇಶದಿಂದ ಶ್ರೀ ಕೃಷ್ಣಾಪುರ ಮಠದವರು ಈ ಪುಸ್ತಕವನ್ನು ಪ್ರಕಟಿಸಿರುವುದು ಸ್ವಾಗತಾರ್ಹವಾದುದು. ಪರಶುರಾಮ ಕ್ಷೇತ್ರ ಮಯೂರನರ್ಮ ಇತ್ಯಾದಿ ಪ್ರಾಚೀನ ಇತಿವೃತ್ತಾಂತಗಳಾದಿಯಾಗಿ ಉಡುಪಿಯ... ಸುಮತ್ರರ ಸಾಹಸದಿಂದ ಇಂಜಿನಿಯರಿಂಗ್ ಕಾಲೇಜು, ಲಾ ಕಾಲೇಜುಗಳನ್ನೂ ಕಾಣಬಹುದಾಗಿದೆ ಎಂಬಲ್ಲಿಯ ವರೆಗಿನ ವಿಷಯಗಳು ಸಂಕ್ಷಿಪ್ತವಾಗಿಯೂ ಸ್ಪಷ್ಟವಾಗಿಯೂ ಈ ಪುಸ್ತಕದಲ್ಲಿ ವಿವರಿಸಲ್ಪಟ್ಟಿವೆ. ಉಡುಪಿಯ ಕುರಿತು ಆಸಕ್ತಿಯಿರುವ, ಉಡುಪಿಯನ್ನು ಸಂದರ್ಶಿಸುವ ಜನರಿಗೆ, ಭಕ್ತಾದಿಗಳಿಗೆ ಈ ಹೊತ್ತಗೆ ಪ್ರಯೋಜನಕಾರಿಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ಹಲವಾರು ಚಿತ್ರಗಳಲ್ಲೂ ಭಾವನೆಯನ್ನು ಪುಷ್ಟೀಕರಿಸಲು ನೆರವಾಗುತ್ತಿವೆ. ಭೌಗೋಲಿಕ ಸಕಾಶಯನ್ನು ಕೊಟ್ಟು ಉಡುಪಿಗೆ ಸಂಬಂಧಪಟ್ಟ ಪಾಜಕ ಕ್ಷೇತ್ರ ಇತ್ಯಾದಿ ಸ್ಥಳಗಳನ್ನು ಗುರುತಿಸುವುದರ ಸಾಧ್ಯತೆ — ಸಫಲತೆಗಳನ್ನು ಮುಂದಿನ ಮುದ್ರಣಗಳಲ್ಲಿ ಆಲೋಚಿಸಬಹುದು. ಮುದ್ರಣ, ಕಾಗದ ಎಲ್ಲವೂ ಚೆನ್ನಾಗಿದೆ.

ಭಾರತೀಯ ವಿವಾಹ ಶಾಸನಗಳು-

ಬರೆದವರು: ಬಿ. ಈಶ್ವರ ಭಟ್ಟ ಬಿ.ಎ., ಎಲ್. ಎಲ್. ಬಿ., ಪುತ್ತೂರು ಪ್ರಕಾಶಕರು: ಕನ್ನಡ ಪ್ರಪಂಚ ಪ್ರಕಾಶನ, ಕದ್ರಿ. ಮಂಗಳೂರು.

ಬೆಲೆ: ಹೆತ್ತಾಣೆ.

ಸ್ವಾತಂತ್ರ್ಯಾನಂತರ ಸ್ವೀಕೃತವಾದ ಭಾರತದ ಶಾಸನಗಳಲ್ಲಿ 1954ರ ವಿಶೇಷ ವಿವಾಹ ಶಾಸನ ಮತ್ತು 1955ರ ಹಿಂದೂ ವಿವಾಹ ಶಾಸನಗಳು ಜನಜೀವನದಲ್ಲಿ ಪರಿಣಾಮವನ್ನುಂಟುಮಾಡುವಷ್ಟು ಕ್ರಗತಿಪರವಾದ ಕಾನೂನುಗಳೆನ್ನಬಹುದು. ಈ ಕಾನೂನುಗಳ ರೂಪರೇಷೆಗಳನ್ನು ಕನ್ನಡದ ಜನಸಾವಾನ್ಯರು ತಿಳಿದುಕೊಳ್ಳುವಂತೆ ಸ್ಥೂಲ ರೂಪವಾಗಿ ಈ ಪುಸ್ತಕದಲ್ಲಿ ವಿವರಿಸಿದ್ದಾರೆ. ಬಿಡಿಸಿದಷ್ಟು ಸಿಕ್ಕು ಬೀಳುತ್ತಿರುವ ಕಾನೂನುಗಳ ಸವಿವರವಾದ, ಸಂಪೂರ್ಣವಾದ ಜ್ಞಾನವು ಆ ಕ್ಷೇತ್ರ ಪುಸ್ತಕದಿಂದ ಪಡೆಯುವುದು ಅಸಾಧ್ಯವಾದರೂ ಮೂಲ ಜ್ಞಾನವನ್ನು ನೀಡುವುದರಲ್ಲಿ ಇದು ಸಹಾಯಕವಾಗಿದೆ.

— ದಾಂತಿ.

ನಿಮಗಿದು ತಿಳಿದಿರಲಿ

(೧೪ನೇ ಪುಟದಿಂದ)

ರಿಂದ ಜನರಿಗೆ ಕೆಲವು ಮಟ್ಟಿನ ತೊಂದರೆಯಾಗಬಹುದೆಂಬ ಭಯವಿದೆ. ಉದಾಹರಣೆಗೆ, ಅಂಗಡಿಯಲ್ಲಿ ವ್ಯಾಪಾರ ಮಾಡುವಾಗ ಬೆಲೆಯನ್ನು ಅಂಗಡಿಕಾರನು ಯಾವ ಪದ್ಧತಿ ಪ್ರಕಾರ ಹೇಳುತ್ತಾನೆ. ಯಾವ ಪದ್ಧತಿ ಪ್ರಕಾರದ ನಾಣ್ಯದಲ್ಲಿ ಸರಕಿಗೆ ಎಷ್ಟು ಬೆಲೆಯಾಗುತ್ತದೆ ಎಂಬಂತಹ ಕಷ್ಟ ಕೆಲವು ಸಮಯದ ವರೆಗೆ ತಪ್ಪಿದ್ದಲ್ಲ. ಸರಕಾರವು ಇದನ್ನು ಮುಂಗಂಡು ಯಾವ ಪದ್ಧತಿಯಲ್ಲಿ ಬೆಲೆಯನ್ನು ಅಂಗೀಕಾರ ಹೇಳಿದರೂ ಗಿರಾಕಿಯು ತನ್ನ ಕೈಯಲ್ಲಿರುವ ನಾಣ್ಯದಲ್ಲಿಯೇ ಬೆಲೆಯನ್ನು ತೀರಿಸಲಾಗುವಂತೆ ಹೊಸ ಮತ್ತು ಹಳೆ ನಾಣ್ಯಗಳಿಗೆ ಪರಸ್ಪರವಾಗಿ ಬೆಲೆಯಲ್ಲಿರುವ ಸಂಬಂಧವನ್ನು ಸೂಚಿಸುವ ಪರಿವರ್ತನ ಕೋಷ್ಟಕಗಳನ್ನು ತಯಾರಿಸಿದೆ. ಇದರಲ್ಲಿರುವುದು ನಿತ್ಯವ್ಯವಹಾರಕ್ಕೆ ಬೆಲೆಯಲ್ಲವಾದರೂ -- ಪರಮಾವಧಿ ನ್ಯಾಯವನ್ನು ಉಭಯ ಪಕ್ಷದವರಿಗೂ ಈ ಕೋಷ್ಟಕವು ಮಾಡುತ್ತದೆ. ಒಂದು ಪಕ್ಷ ಕ್ಯಾಗಬಹುದಾದ ಹೆಚ್ಚಿನ ನಷ್ಟವೆಂದರೆ ಒಂದು ನಯಾಪೈಸೆಯಾಗಿಂತಲೂ ಕಡಿಮೆ — ಅಂದರೆ ಎರಡು ಪೈ ಸಹ ಇಲ್ಲ! ಈಗ ಪೈಗಳಲ್ಲಿ ಲೆಕ್ಕಾಚಾರ ನಡೆಯುವುದೇ ಆಪರೂಪ ವಾಮದರಿಂದ ಇದನ್ನು ಜನರ ಪಾಲಿನತೊಂದರೆ ಎಂದು ಭಾವಿಸಬೇಕಾಗಿಲ್ಲ. ಇಂಥದೊಂದು ಕೋಷ್ಟಕವನ್ನು ಮಗ್ಗುಲಲ್ಲಿ ಕೊಟ್ಟಿದ್ದೇವೆ. ಇದನ್ನು ನೀವು ನೆನಪಿನಿಂದ ಉಪಯೋಗಿಸಿರಿ.

ಹೊಸ ನಾಣ್ಯಗಳ ಬಳಕೆಯಿಂದ ಎಷ್ಟೋ ಸಂಘ ಸಂಸ್ಥೆಗಳು ವಿಪರೀತ ತಾಪತ್ರಯವನ್ನು ವಹಿಸಿ ಬೇಕಾಗಿ ಬಂದಿದೆ. ಉದಾಹರಣೆಗೆ, ಟಪ್ಪಾಲು ಕಟ್ಟೆಯಲ್ಲಿ ಮಾರಾಟವಾಗುವ ಅಂಚೆ ಚೀಟುಗಳ ಬೆಲೆಗೂ ನಯೆ ಪೈಸೆಯ ಪದ್ಧತಿಗೂ ಘರ್ಷಣೆಯಾಗದಂತೆ ಹೊಸ ವ್ಯವಸ್ಥೆಯಾಗಬೇಕಾಗಿದೆ. ರೈಟ್ಟಿಯವರೂ ಬಸ್ಸು ಕಂಪೆನಿಯವರೂ ನಯೆ ಪೈಸೆಯಲ್ಲಿ ಪ್ರಯಾಣದ ದರವನ್ನು ಗೊತ್ತುಪಡಿಸಬೇಕು. ಬ್ಯಾಂಕುಗಳಲ್ಲಿಯೂ ಲೆಕ್ಕಪತ್ರವಿಡುವ ಎಲ್ಲ ಕಡೆಗಳಲ್ಲಿಯೂ ರೂ. ಆ. ಪೈ ಎಂಬ ಕಾಲಮಿನೊಂದಿಗೆ ರೂ. ನಯೇ ಪೈಸೆ ಎಂಬ ಇನ್ನೊಂದು ಕಾಲಮನ್ನೂ ಸೇರಿಸಬೇಕಾಗುವುದು. ಆಲ್ಲದೆ ಬಡ್ಡಿ ದರವನ್ನು ಹೊಸ ಪದ್ಧತಿಗೆ ಪರಿವರ್ತಿಸಬೇಕಾಗುವುದು. ವಿಮಾ ಸಂಸ್ಥೆಯ ಕ್ಲೈಷ್ಟವಾಸ್ ಸ್ರೀಮಿಯಂ ದರಗಳನ್ನು ನಯೆ ಪೈಸೆಯಲ್ಲಿ ಗುಣಿಸಬೇಕಾಗುವುದು—ಹೀಗೆ ಒಂದೆಲ್ಲ ಹಲವು ಕ್ಷೇತ್ರದಲ್ಲಿ ರಭಸದಿಂದ ಪರಿವರ್ತನೆ ನಡೆಯುವುದು ಅವಶ್ಯ. ಆದಾಗ್ಯೂ ಒಂದುಸಲ ನಾವು ಹೊಂದಿಕೊಂಡರೆ, ಮತ್ತೆ ತೊಂದರೆ ಇಲ್ಲ. ಅಲ್ಲದೆ, ಹೊಸ ಪದ್ಧತಿಯು ನವ್ಯ ತೊಂದರೆಗಳೆಲ್ಲವಕ್ಕೂ ಅಮಿತಲಾಭವನ್ನು ಶ್ರೀಘ್ರದಲ್ಲೆ ತಂದುಕೊಡುತ್ತವೆ ಇದು ನಿಶ್ಚಯ!

ಕೋಷ್ಟಕ

ಆಣೆ	ಪೈ	ನಯೆ ಪೈಸೆ	ಆಣೆ	ಪೈ	ನಯೆ ಪೈಸೆ	ಆಣೆ	ಪೈ	ನಯೆ ಪೈಸೆ	ಆಣೆ	ಪೈ	ನಯೆ ಪೈಸೆ
0	3	2	4	3	27	8	3	52	12	3	77
0	6	3	4	6	28	8	6	53	12	6	78
0	9	5	4	9	30	8	9	55	12	9	80
1	0	6	5	0	31	9	0	56	13	0	81
1	3	8	5	3	33	9	3	58	13	3	83
1	6	9	5	6	34	9	6	59	13	6	84
1	9	11	5	9	36	9	9	61	13	9	86
2	0	12	6	0	37	10	0	62	14	0	87
2	3	14	6	3	39	10	3	64	14	3	89
2	6	16	6	6	41	10	6	66	14	6	91
2	9	17	6	9	42	10	9	67	14	9	92
3	0	19	7	0	44	11	0	69	15	0	94
3	3	20	7	3	45	11	3	70	15	3	95
3	6	22	7	6	47	11	6	72	15	6	97
3	9	23	7	9	48	11	9	73	15	9	98
4	0	25	8	0	50	12	0	75	16	0	100

ನೀವು ತೆರಬೇಕಾದ ಒಟ್ಟು ಬೆಲೆಯನ್ನು ಗೊತ್ತು ಪಡಿಸಿದ ಬಳಿಕ ನಿಮ್ಮ ಕೈಯಲ್ಲಿರುವ ನಾಣ್ಯಕ್ಕೆ ಅನುಸಾರವಾಗಿ ಒಟ್ಟು ಬೆಲೆಯನ್ನು ಪುನರ್ತಿಸಿರಿ.

ಮಂಗಳೂರು

ಜೀವವಿಮಾ ಕೆಲಸಗಾರರಿಗೆ ಸಲಹೆ

ರಾಷ್ಟ್ರೀಕೃತ ಜೀವ ವಿಮಾ ಕಾರ್ಪೊರೇಶನ್ ಉಡುಪಿ ವಿಭಾಗದ ವಿಭಾಜನಲ್ ಮೆನೇಜರ್ ಶ್ರೀ ಕೆ. ಆರ್. ಕೆ. ಭಟ್ಟರು ಈಚೆಗೆ ಮಂಗಳೂರು ಶಾಖೆಯ ಆನೇಕ ಕೇಂದ್ರಗಳಲ್ಲಿ ಜೀವವಿಮಾ ಕೆಲಸಗಾರರನ್ನು ಉದ್ದೇಶಿಸಿ ಭಾಷಣಮಾಡುತ್ತಾ, ಏಜಂಟರೂ ಇನ್ಸ್ಪೆಕ್ಟರ್ರೂ ಹಳ್ಳಿಗಳಿಗೆ ಜೀವವಿಮೆಯ ಸಂದೇಶವನ್ನು ಮುಟ್ಟಿಸಲು ಪ್ರಯತ್ನಿಸಬೇಕೆಂದು ಕೇಳಿಕೊಂಡರು. ಇಪ್ಪತ್ತೈದನೆಗೆ ವಿಮಾಕೆಲಸಗಾರರು ಮಧ್ಯಮವರ್ಗದ ಜನರನ್ನು ಮಾತ್ರ ವಿಮಾದಾರರಾಗಿಮಾಡಲು ಪ್ರಯತ್ನಿಸುತ್ತಿದ್ದರು. ಸರಕಾರದವರು ಬಡಜನರಿಗೆ ಸಹ ಜೀವವಿಮೆಯು ಒಸಗಿಸುವ ರಕ್ಷಣೆ, ಭದ್ರತೆ ಮತ್ತು ಪ್ರಯೋಜನಗಳು ಸಿಗುವಂತಾಗಬೇಕೆಂದು ಬಯಸಿ ಜೀವವಿಮೋದ್ಯಮವನ್ನು ರಾಷ್ಟ್ರೀಕರಿಸಿರುತ್ತಾರೆ. ಬಡಜನರಜೀವನಮಟ್ಟವು ಸರಕಾರಿ ಯೋಜನೆಗಳ ಫಲವಾಗಿ ಎತ್ತರಿಸಲ್ಪಡುತ್ತಿದ್ದು, ಜೀವವಿಮೋಪಾಲಿಸಿಯನ್ನು ತೆಗೆಸುಲು ಈ ಜನವರ್ಗವು ಹಿಂಜರಿಯಲಿತ್ತಿಲ್ಲ. ಜೀವವಿಮಾಯೋಗ್ಯರಾದ ಪ್ರತಿಯೊಬ್ಬರಿಗೂ ಜೀವವಿಮೆಯ ಸಂದೇಶವನ್ನು ಮುಟ್ಟುವಂತೆ ಮಾಡುವುದೇ ಕೆಲಸಗಾರರು ದೇಶಕ್ಕೆ ಸಲ್ಲಿಸಬಹುದಾದ ಸೇವೆ ಎಂದು ಮುಂತಾಗಿ ಶ್ರೀ ಭಟ್ಟರು ತಿಳಿಸಿದರು. ಕಾರ್ಪೊರೇಶನು ಇನ್ನೂ ಪೊಸತಾಗಿದ್ದು ಅದು ಸುವ್ಯವಸ್ಥಿತವಾಗಿ ಬೇರುಬಿಡುವ ವರೆಗೆ ಕೆಲಬಗೆಯತೊರೆದವಗಳ ಅಸುಖವನ್ನು ಸಾರ್ವಜನಿಕರಿಗೆ ಆಗಬಹುದಾದರೂ ಕೂಡ ಸಹನಶೀಲರಾಗಿ ವರ್ತಿಸಿ ಕಾರ್ಪೊರೇಶನಿನ ಅಧಿಕಾರಿಗಳಿಗೆ ಸಹಕಾರವನ್ನು ಜನರು ಇಡಬೇಕೆಂದೂ ತೊಂದರೆಗಳ ನಿವಾರಣೆಗೆ ಎಲ್ಲ ಪ್ರಯತ್ನ ಮಾಡಲಾಗುವುದೆಂದೂ ಅವರು ಹೇಳಿದರು.

ಜಿಲ್ಲಾ ಬೋರ್ಡು ಅಧ್ಯಕ್ಷರ ಕಾರ್ಯಕಲಾಪ

— ದ. ಕ. ಜಿಲ್ಲಾ ಬೋರ್ಡಿನ ಅಧ್ಯಕ್ಷ ಡಾ॥ ಕೆ. ಕೆ. ಹೆಗ್ಡೆಯವರು ಈಚೆಗೆ ಬೆಂಗಳೂರಿಗೆ ಪ್ರವಾಸ ಮಾಡಿ ಮೈಸೂರು ರಾಜ್ಯದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಮಂತ್ರಿಗಳನ್ನು ಭೇಟಿಯಾಗಿ ಈ ಬೋರ್ಡಿಗೆ ಅಡ್ವಾನ್ಸ್ ಗ್ರಾಂಟು ಕೊಡುವ ಮತ್ತು ಜಿಲ್ಲಾ ಬೋರ್ಡು ನೌಕರರಿಗೆ ಸರಕಾರಿ ಸ್ಕೇಲಿನಂತೆ ವೇತನ ಕೊಡುವ ಅವಶ್ಯಕತೆಯನ್ನು ನಿವೇದಿಸಿ ಕೊಂಡರು. ಅಲ್ಲದೆ ವಿದ್ಯಾ ಮಂತ್ರಿ ಆರೋಗ್ಯ ಸಚಿವ ಹಾಗೂ ಇತರ ಘನ ಆಧಿಕಾರಿಗಳನ್ನು ಕಂಡು ಜಿಲ್ಲಾ ಬೋರ್ಡಿನ ಆರ್ಥಿಕ ಪರಿಸ್ಥಿತಿಯನ್ನು ತಿಳಿಸಿದರು. ಅವರೆಲ್ಲರೂ ಅವರವರ ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ಮೈಸೂರು ರಾಜ್ಯ ಸರಕಾರದ ಸ್ಕೇಲಿನಂತೆಯೇ ಜಿಲ್ಲಾ ಬೋರ್ಡು ನೌಕರರಿಗೂ ವೇತನ ದೊರೆಯುವ ಕುರಿತು ಸರಕಾರದ ಆಜ್ಞೆ ಬೇಗನೆ ಹೊರಡಲಿದೆ.

ದ. ಕ. ಜಿಲ್ಲಾ ಬೋರ್ಡಿನ ಸಭೆಯು

— ತಾ. 4ರಲ್ಲು ಉಪಾಧ್ಯಕ್ಷ ಶ್ರೀ ಬಿ. ಆರ್. ಕರ್ಕೇರರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಭೆಯಲ್ಲಿ ಬೋರ್ಡಿನ ಸಮಾನ್ಯಪಾತೆ ಮತ್ತು ಪ್ರಾಥಮಿಕ ಶಿಕ್ಷಣ ಖಾತೆಗಳ 1956-57ನೆ ಸಾಲಿನ ತಿದ್ದಿದ ಅಂದಾಜು ಆಯವ್ಯಯ ಪಟ್ಟಿಯನ್ನು ಮಂಜೂರುಮಾಡಲಾಯಿತು. ಈ ಅಂದಾಜು ಪಟ್ಟಿಗಳಲ್ಲಿ ಜಲ್ಲಾ ಬೋರ್ಡಿನ ಆಫೀಸು ಸಿಬಂದಿ, ಹಿರಿಯ ಸ್ಕೂಲು ಉಪಾಧ್ಯಾಯರು, ಪ್ರಾಥಮಿಕ ಶಾಲಾ ಅಧ್ಯಾಪಕರು ಹೊದಲಾದ ಎಲ್ಲಾ ವರ್ಗದ ನೌಕರರಿಗೂ, ಮೈಸೂರು ಸರಕಾರದವರು ಘೋಷಿಸಿದ ಹೊಸ ಸಂಬಳದ ಪ್ರಮಾಣದಂತೆ ತಾ. 1-1-1957ರಿಂದ ಸಂಬಳ ಮತ್ತು ತುಟ್ಟಿಭತ್ತೆ ಕೊಡುವ ಬಗ್ಗೆ ಆವಕಾಶ ಒದಗಿಸಿಲಾಗಿದೆ. ಹೊಸ ಸಂಬಳ ಪ್ರಮಾಣಗಳು ಕಾರ್ಯರೂಪಕ್ಕೆ ಬರಲು ಮೈಸೂರು ಸರಕಾರದ ಒಪ್ಪಿಗೆ ಬೇಕಾಗಿದೆ. ಜಿಲ್ಲಾ ಬೋರ್ಡಿನ ಕಾಂಗ್ರೆಸ್ ಪಕ್ಷದ ನಾಯಕ ಶ್ರೀ ಬಿ. ಸುಂಜಯ್ಯ ಹೆಗ್ಡೆಯವರು ಮಾತನಾಡುತ್ತಾ, ಬೋರ್ಡಿನ ಆದಾಯ ಹೆಚ್ಚಿಸಲು ವಿವಾಹಾದಿ ಸಮಾರಂಭಗಳ ಮೇಲೆ ತೆರಿಗೆ ಹೊರಿಸಬಹುದು. ಪ್ರವಾಸಿಗಳ ಮೇಲೆ ತೆರಿಗೆ ಹೊರಿಸುವ ಕುರಿತೂ ಆಲೋಚಿಸಬಹುದೆಂದರು.

ನುಂದಿನ ವಾಲಾ ಜಹಗದಲ್ಲಿ ಬೈಲೂರು ಹೈಸ್ಕೂಲಲ್ಲಿ VI ಫಾರ್ಮು, ಪೇಣೂರು ಹೈಸ್ಕೂಲಲ್ಲಿ V ಫಾರ್ಮು, ಶಂಕರನಾರಾಯಣ ಹೈಸ್ಕೂಲಲ್ಲಿ V ಫಾರ್ಮು, ಹೆಬ್ರಿ ಹೈಸ್ಕೂಲಲ್ಲಿ V ಫಾರ್ಮು, ಉಪ್ಪಿನಂಗಡಿ ಸಿಂಧ್ ಸ್ಕೂಲನ್ನು ಹೈಸ್ಕೂಲಾಗಿ ಪರಿವರ್ತಿಸುವ ಬಗ್ಗೆ IV ಫಾರ್ಮು ತೆರೆಯುವ ಬಗ್ಗೆ ಸಮ್ಮತಿ ಕೇಳಲು ನಿರ್ಣಯವಾಯಿತು.

ಬಂಟ್ವಾಳ ತೋಕೆಲ್ ಫಂಡ್ ಆಸ್ಪತ್ರೆಗೆ ವಿದ್ಯುತ್ ಸಂಪರ್ಕ ಒದಗಿಸಬೇಕೆಂಬ ಶ್ರೀ. ಎ. ಲಕ್ಷ್ಮಿನಾರಾಯಣ ಆಳ್ವರ ನಿರ್ಣಯ ಪಾಸಾಯಿತು. ಬೆಳ್ತಣ್ಣು ಕೇಂದ್ರದಲ್ಲಿ ಬೋರ್ಡು ಹೈಸ್ಕೂಲೊಂದನ್ನು ತೆರೆಯುವ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕೆಂಬ ಶ್ರೀ. ಬಿ. ಎಸ್. ಭಾಸ್ಕರ ರೈಗಳ ನಿರ್ಣಯ ನುಂಜೂರಾಯಿತು.

ಮಲೆನಾಡಿಗೆ ಹಸಿಮೀನು ಸರಬರಾಯಿ

— ಮೈಸೂರು ಸರಕಾರದ ಮೀನುಗಾರಿಕೆಯ ಇಲಾಖೆಯವರು ಸಮುದ್ರದ ಮೀನನ್ನು ಒಳಪ್ರದೇಶಗಳಿಗೆ ಸರಬರಾಯಿ ಮಾಡುವಬಗ್ಗೆ ಹೊಳೆ ಯೋಜನೆಯೊಂದನ್ನು ರೂಪಿಸಿರುವರು. ದಕ್ಷಿಣ ಕನ್ನಡ ಜಿಲ್ಲಾ ಮೀನು ಮಾರಾಟ ಸಂಘ ಮಂಗಳೂರು ಇವರ ಅಪೇಕ್ಷೆಯಮೇರೆಗೆ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲಿದ್ದು, ಜಾಗತಿಕ ಆಹಾರ ಸಂಸ್ಥೆಯ ಮಾರಾಟ ವ್ಯವಸ್ಥೆಯ ತಜ್ಞರಾದ ಮಿ॥ ಬಾಲ್ಡಿಂಡ್ ಸುತ್ತು ಇಲ್ಲಿಯ ಮೀನುಗಾರಿಕೆ ಇನಾಪೆಯ ಮೇಲ್ವಿಚಾರಣೆಯಲ್ಲಿ ಮೀನು ಮಾರಾಟದ ವ್ಯವಸ್ಥೆ ಕೈಗೊಳ್ಳಲಾಗುವುದು. ಸಮುದ್ರದಿಂದ ಒಡಿದ ಹಸಿಮೀನನ್ನು ಮಂಜುಗಡ್ಡೆಯಲ್ಲಿರಿಸಿ ಇಲಾಖೆಯವರ ಶೀತಕರಣಯಂತ್ರ ಸಜ್ಜಿತವಾಹನದಲ್ಲಿ ಸುರಕ್ಷಿತವಾಗಿರಿಸಲಾಗುವುದು. ಈ ವಾಹನವು ಮಂಗಳೂರಿನಿಂದ ಹೊರಟು ಬಂಟ್ವಾಳ ಪಾಣೆಮಂಗಳೂರು, ಪುತ್ತೂರು, ಸುಳ್ಯ, ಮಡಿಕೇರಿಗಳಿಗೆ ತೆರಳಿ ಆ ಪ್ರದೇಶದ ಜನರಿಗೆ ಮತ್ತು ಚಿಲ್ಲರೆ ವ್ಯಾಪಾರಿಗಳಿಗೆ ಕಡಿಮೆ ಬೆಲೆಯಲ್ಲಿ ಮೀನನ್ನು ಒದಗಿಸುವುದು.

ಕುಂದಾಪುರ ಡಿ.ಮು. ಕೋರ್ಟಿನಲ್ಲಿ

ಕ್ರಮಸಂಖ್ಯೆ 662/1956.

ದೇವದಾಯ ನಾಯ್ಕ —ವಾದಿ

ಮತ್ತು

ಪೆಂಕಮ್ಮ ಶೆಟ್ತಿ ಕೂಡಾ —ಪ್ರತಿವಾದಿರು

೩ನೇ ನಾಗಯ್ಯ ಶೆಟ್ಟಿ. ಪೆಂಕಮ್ಮ ಶೆಟ್ತಿ ಮಗ. ೬ನೇ ಬೆಕ್ಕಯ್ಯ ಶೆಟ್ಟಿ. ಜಂದಮ್ಮ ಶೆಟ್ತಿ ಮಗ. ಕುಂದಾಪುರ ತಾಲೂಕು ತ್ರಾಸಿ ಗ್ರಾಮದವರಿರುವವರು.

ವಾದಿಯು ಸ್ಥಳಗಳ ಸ್ವಾಧೀನತೆಗೊ ಯಟ್ಟು ವಳಿ ಬಗ್ಗೂ ಮಾಡಿದ ಮೇಲೆ ಕಾಣಿಸಿದ ದಾವೆಯು ತಾ. 28-2-57ಕ್ಕೆ ಆಬೈರೆ ತನ್ನಿಗೆ ಇಟ್ಟಿರುತ್ತ ವೆಂಕಲೂ ಆ ದಿವಸ 9 ನೇ 6ನೇ ಪ್ರತಿವಾದಿರು ಸ್ವತಹಾ ಯೂ ವಕೀಲರ ಹಾಗು ಮುಖಾ ಪತಿಲು 10 ಘಂಟೆಗೆ ಕೋರ್ಟು ಮುಂದೆ ಹಾಜ್ರಾಗಲಿಕ್ಕೆ ತಪ್ಪಿದ್ರೆಆವರಪರೋಕ್ಷದಲ್ಲಿ ಸದ್ರಿ ದಾವೆಯ ಮುಂದಿನ ತನ್ಯಯು ನಡೆಯುವುದೆಂತಲೂ ಸಹಾ ಈ ಮೂಲಕ ಸದ್ರಿ 2-6ನೇ ಪ್ರತಿವಾದಿರಿಗೆ ತಿಳಿಸೋಣಾನು ತಿದೆ.

Sanjiva Rao.
vakil for Plff.

ತಾ. 9—2—57, ಕುಂದಾಪುರ.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮಸಂಖ್ಯೆ 593/1956.

ಉಡುಪಿ ಶ್ರೀ ಶೀರೂರುಮಠದ ಶ್ರೀ ಕೇಶವ ದೇವರ ಭಂಡಾರದ ಅಧಿಪತಿಗಳು ಶ್ರೀ ಲಕ್ಷ್ಮೀಂದ್ರತೀರ್ಥ ಸ್ವಾಮಿರು —ವಾದಿರು

ಮತ್ತು

ಮಡ್ತಿನ್ ಬ್ಯಾ ಕೂಡಾ —ಪ್ರತಿವಾದಿರು ಇವರೊಳಗೆ

6ನೇ ಪ್ರತಿವಾದಿ. ಶಾನೇರೆ ಸೋಜ. ದೂಜೆ ಸೋಜರ ಮಗ. ಉಡುಪಿ ತಾಲೂಕು ಉಪ್ಪೂರು ಗ್ರಾಮದ ಸರಕಾರಿಯಲ್ಲಿರುವವರು. ಇವರಿಗೆ

ವಾದಿರೊಳಗೆ ಪ್ರತಿವಾದಿರು ಮೂಲಗೇಣಿಗೆ ಆನುಭವಿಸಿಬರುವ ದಾವಾ ಆಸ್ತಿಗಳ ಮೂಲಗೇಣಿ ಗೇಣಿಬಗ್ಗೆ ಬಡ್ಡಿ ಕೂಡಾ ರೂ. 644-8-0ಕ್ಕೆ ವಾದಿರು ಮಾಡಿರುವ ಈ ದಾವೆಯು ತಾ. 22—2—1957ಕ್ಕೆ 6ನೇ ಪ್ರತಿವಾದಿಗೆ ನೋಟೀಸು ಬಗ್ಗೆ ಇಟ್ಟಿರುತ್ತದೆ. ಸದ್ರಿ ತಾರೀಕು 22-2-1957ನೇ ದಿವಸ ಬೆಳಿಗ್ಗೆ ಹತ್ತು ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ 6ನೇ ಪ್ರತಿವಾದಿಯು ಸ್ವತಹಾ ವ ವಕೀಲರ ಮುಕಾಂತ್ರ ಹಾಜ್ರಾಗಿ ಉದೆಹರಿಸಲಿಕ್ಕೆ ತಪ್ಪಿದ್ರೆ ಸದ್ರಿಯವರ ಗೈರು ಹಾಜರಿಯಲ್ಲಿ ಈ ದಾವೆಯನ್ನು ತೀರ್ಮಾನಿಸಲಾಗುವುದೆಂತಲು.

V. R. Kidiyur
Advocate for Plff.

ಉಡುಪಿ ತಾ. 5—2—1957.

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ವಾತಿಷ್ಟಸು: ಷಾ ಕಂಪೆನಿ, ಮಂಗಳೂರು—1.

ರೊಕ್ಕ ತರುವ ಪೈರು

(೩ನೇ ಪುಟದಿಂದ)

ದನ್ನು ಸ್ಥಾಪಿಸಲಾಗುವುದು. ೧೯೫೦ರಲ್ಲಿ ಸ್ಥಾಪಿತಗೊಂಡ ಮೂರನೆಯ ಕೇಂದ್ರವು ಉತ್ತರ ಮಲಬಾರಿನ ತಲಿ ಪರಂಬಾದ ಸವಿಸದಲ್ಲಿರುವ ಸಣ್ಣಿಯೂರಿನಲ್ಲಿ ಈಗಾಗಲೇ ಕಾರ್ಯಾಚರಣೆಯಲ್ಲಿದೆ. ಇಲ್ಲಿ ಮೆಣಸಿನ ಬೆಳೆಗೆ ಸಂಬಂಧಿಸಿದ ನಾನಾ ರೀತಿಯ ಸಂಶೋಧನಾ ಕಾರ್ಯಗಳನ್ನು ನಡೆಸಲಾಗುತ್ತಿದೆ.

ಮೈಸೂರು, ಅಂಡಮಾನ್ ಹಾಗೂ ನಿಕೋಬಾರ್ ದ್ವೀಪ ಸಮೂಹ, ಪಶ್ಚಿಮ ಬಂಗಾಳಗಳಲ್ಲಿ ಮೆಣಸನ್ನು ಬೆಳೆಯುವ ಸಾಧ್ಯತೆಯನ್ನು ಪರಿಶೀಲಿಸಲಾಗುತ್ತಿದೆ. ಮೇಲಿನ ಅಸ್ಸಾಂ ರಾಜ್ಯದ ಜೋರ್ಹಾಟ್‌ನ ಸವಿಸದಲ್ಲಿ ಮೆಣಸು ಸಂಶೋಧನಾ ಕೇಂದ್ರವೊಂದು ಕೆಲಸಮಾಡುತ್ತಿದೆ. ಮುಂಬೈ ರಾಜ್ಯವು ತನ್ನ ಮೆಣಸು ಉದ್ಯಮವನ್ನು ಪುನರ್ವ್ಯವಸ್ಥೆಗೊಳಿಸಿದೆ.

ಈ ಉದ್ದೇಶಕ್ಕಾಗಿ ರಾಜ್ಯ ಯೋಜನೆಗಳಲ್ಲಿ ೧೪.೮ ಲಕ್ಷ ರೂ.ಗಳ ಯೋಜನೆಗಳನ್ನು ಸೇರಿಸಲಾಗಿದೆ.

ಭಾರತ ಸರ್ಕಾರದವರು, ೧೯೫೭ — ೫೮ರ ಅವಧಿಗಾಗಿ ಮದರಾಸ್ ರಾಜ್ಯಕ್ಕಾಗಿ ಮೆಣಸು ಅಭಿವೃದ್ಧಿ ಯೋಜನೆಯೊಂದನ್ನೂ, ಅಸ್ಸಾಂ ರಾಜ್ಯಕ್ಕಾಗಿ ಸಂಶೋಧನಾ ಯೋಜನೆಯೊಂದನ್ನೂ ಮಂಜೂರುಮಾಡಿರುವರು. ಮುಂಬೈ ಸರ್ಕಾರವು ಮೆಣಸು ಉದ್ಯಮದ ಅಭಿವೃದ್ಧಿಗಾಗಿ ತನ್ನ ಪರಿಷ್ಕೃತ ಯೋಜನೆಯಲ್ಲಿ ೧೫೦ ಲಕ್ಷ ರೂಗಳ ಹಣವನ್ನು ಒದಗಿಸಿದೆ. ಅಸ್ಸಾಂ ಕೂಡ ತನ್ನ ಯೋಜನೆಯಲ್ಲಿ ಸೂಕ್ತ ರೀತಿಯಲ್ಲಿ ಅವಕಾಶಮಾಡಿದೆ.

ದ್ವಿತೀಯ ಯೋಜನಾವಧಿಯ ಅಂತ್ಯದ ವೇಳೆಗೆ ಕರಿಮೆಣಸಿನ ಸಾಗುವಳಿ ಕ್ಷೇತ್ರವು ಮೂಲಸ್ಥಾನವಾದ ನೈಋತ್ಯ ಭಾರತದಿಂದ ಅಸ್ಸಾಂ ಹಾಗೂ ಮುಂಬೈ ಗಳಿಗೆ ಹರಡುವ ನಿರೀಕ್ಷೆಯಿದೆ.

ಮೆಣಸು ಮಾತ್ರವೇ ಅಲ್ಲದೆ ಏಲಕ್ಕಿ, ಶುಂಠಿ, ಅರಿಸಿನ ಲವಂಗ ಮತ್ತು ಜಾಯಿಕಾಯಿ ಯಂತಹ ಸಂಭಾರ ಪದಾರ್ಥಗಳೂ ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಅತ್ಯಂತ ಮಹತ್ವಪೂರ್ಣ ಸ್ಥಾನಗಳಿಸಿವೆ.

ಏಲಕ್ಕಿ

ಸಂಭಾರ ಪದಾರ್ಥಗಳಲ್ಲಿ ಏಲಕ್ಕಿ ಮುಖ್ಯವಾದುದು ಈ ಬೆಳೆಯಿಂದ ಹೆಚ್ಚು ಹಣಗಳಿಸಬಹುದಾಗಿದೆ. ಏಲಕ್ಕಿಯನ್ನು ಮುಖ್ಯವಾಗಿ ಪಶ್ಚಿಮ ಘಟ್ಟಗಳಲ್ಲಿ ಬೆಳೆಯಲಾಗುತ್ತಿದೆ.

ಸುಮಾರು ೧೪೦,೦೦೦ ಎಕರೆಗಳ ವಿಸ್ತೀರ್ಣದಲ್ಲಿ ೨,೭೫೦ ಟನ್ನುಗಳ ಏಲಕ್ಕಿಯನ್ನು ಉತ್ಪಾದಿಸಲಾಗುತ್ತಿದೆ. ಮೈಸೂರು, ಕೇರಳ ಮತ್ತು ಮದರಾಸು ರಾಜ್ಯಗಳಲ್ಲಿ ಇದನ್ನು ಬೆಳೆಯಲಾಗುತ್ತಿದೆ. ೧೯೫೫-೫೬ರಲ್ಲಿ ೧,೫೫೨,೨೫೦ ರೂಗಳ ಬೆಲೆಬಾಳುವ ೮೯೪ ಟನ್ನುಗಳ ಏಲಕ್ಕಿಯನ್ನು ರಫ್ತು ಮಾಡಲಾಯಿತು.

ಏಲಕ್ಕಿಯ ಬಗ್ಗೆ ಬರುತ್ತಿರುವ ಬೇಡಿಕೆ ಹೆಚ್ಚಾಗುತ್ತಿದೆ. ಏಲಕ್ಕಿಯ ಉತ್ಪಾದನೆ ಹಾಗೂ ವ್ಯಾಪಾರದ ವಿಷಯದಲ್ಲಿ ಭಾರತಕ್ಕೆ ಏಕಾಧಿಕಾರ ಪ್ರಾಪ್ತಿಯಾಗಿದೆ.

ಜಂಗೀರಿಯಲ್ಲಿ ಈಚೆಗೆ "ಬಂಗೆ" ನಡೆದಾಗ ಭಾಗವಹಿಸಿದ್ದ "ದೇಶಪ್ರೇಮಿಗಳು" ರಕ್ಕಡಿಂದ ಹೊರ್ಟೆಸಲ್ಪಟ್ಟ ಕಮ್ಯುನಿಸ್ಟ್ ಸಾಹಿತ್ಯವನ್ನು ರಸ್ತೆಯಲ್ಲಿ ಸುಟ್ಟು ಭಸ್ಮ ಮಾಡುತ್ತಿರುವ ದೃಶ್ಯ. ರಕ್ಕದ ಸೈನ್ಯಗಳೀಗ ಅಲ್ಲಿ "ನ್ಯಾಯಬದ್ಧವಾಗಿ ಪ್ರತೀಕಿಸಿ" ದೇಶದ "ಶಾಂತಿ" ಕಾಪಾಡಿರುವುದು ಎಲ್ಲರಿಗೂ ಗೊತ್ತು.

ಕೇರಳ ಹಾಗೂ ಮೈಸೂರು ರಾಜ್ಯಗಳಲ್ಲಿ ಏಲಕ್ಕಿ ಸಂಶೋಧನಾ ಕೇಂದ್ರಗಳನ್ನು ಇತ್ತೀಚೆಗೆ ಮಂಜೂರುಮಾಡಲಾಗಿದೆ. ಏಲಕ್ಕಿ ಬೆಳೆಯನ್ನು ಸುಧಾರಿಸುವ ಬಗ್ಗೆ ಹಾಗೂ ಉತ್ತಮ ದರ್ಜೆಯ ಏಲಕ್ಕಿಯನ್ನು ಉತ್ಪಾದಿಸುವ ಬಗ್ಗೆ ಈ ಕೇಂದ್ರಗಳಲ್ಲಿ ಸಂಶೋಧನೆ ನಡೆಸಲಾಗುವುದು.

ಜೊತೆಗೆ ದಕ್ಷಿಣ ಭಾರತದ ಏಲಕ್ಕಿಯನ್ನು ಅಸ್ಸಾಮಿನಲ್ಲಿ ಬೆಳೆಯುವ ಸಂಬಂಧವಾದ ಯೋಜನೆಯೊಂದನ್ನು ಕಾರ್ಯರೂಪಕ್ಕೆ ತರಲಾಗುತ್ತಿದೆ. ಖಾಸ್ಸಿ ಹಾಗೂ ಜೆಯಂತಿಯಾ ಬೆಟ್ಟ ಪ್ರದೇಶಗಳಲ್ಲಿರುವ ನಾನ್‌ವೋದಲ್ಲಿ ಏಲಕ್ಕಿಯನ್ನು ಪರೀಕ್ಷಾರ್ಥವಾಗಿ ಬೆಳೆಯಲು ಪ್ರಾರಂಭಿಸಲಾಗಿದೆ.

ಶುಂಠಿ

೧೯೫೫-೫೬ರಲ್ಲಿ ೩೫,೪೦೦ ಎಕರೆಗಳ ವಿಸ್ತೀರ್ಣದಲ್ಲಿ ೧೪,೪೦೦ ಟನ್ನುಗಳ ಶುಂಠಿಯ ಬೆಳೆಯಾಗಿದೆ ೧೯೫೬ರಲ್ಲಿ ೩,೦೦೦ ಟನ್ನು ರಫ್ತಾಗಿದೆ. ೧೯೫೫ರಲ್ಲಿ ರಫ್ತಿನ ಪ್ರಮಾಣವು ೨,೬೦೦ ಟನ್ನುಗಳಿಗೆ ಏರಿತು. ಈಗ ೫೮,೬೫೫೦೦೬ ರೂಗಳ ಬೆಲೆಬಾಳುವ ಶುಂಠಿಯನ್ನು ಈಗ ರಫ್ತುಮಾಡಲಾಗುತ್ತಿದೆ.

ಶುಂಠಿ ಉದ್ಯಮದ ಅತ್ಯಂತ ತುರ್ತಿನ ಅಗತ್ಯತೆ ಎಂದರೆ, ಶುಂಠಿಯ ಬೆಳೆಯಲ್ಲಿ ಸುಧಾರಣೆ ತರುವುದು ಸಾರಿಲ್ಲದ ಶುಂಠಿಯನ್ನು ಬೆಳೆಯುವ ಬಗ್ಗೆ ಕ್ರಮ ಕೈಗೊಳ್ಳುವುದು.

ಮಲಬಾರಿನ ವೈನಾಡಿನ ಅಂಬಲವಯಲಲ್ಲಿರುವ ಕೃಷಿ ಸಂಶೋಧನಾ ಕೇಂದ್ರದಲ್ಲಿ ಕಳೆದ ಐದು ವರ್ಷಗಳಿಂದಲೂ ಶುಂಠಿ ಬೆಳೆ ಬಗ್ಗೆ ಸಂಶೋಧನೆ ಕೈಗೊಳ್ಳಲಾಗಿದೆ. ಈ ಬೆಳೆಯ ಸಾಗುವಳಿ ವಿಧಾನಗಳು, ಸಂಗ್ರಹಣೆ, ಈ ಬೆಳೆಗೆ ಕಾಡುವ ರೋಗಗಳ ನಿಯಂತ್ರಣ ಮುಂತಾದ ವಿಚಾರಗಳ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ.

ಅಸ್ಸಾಮಿನ ಖಾಸಿ ಹಾಗೂ ಜೆಯಂತಿಯಾ ಬೆಟ್ಟ ಪ್ರದೇಶಗಳಲ್ಲಿರುವ ನಯಾ ಬಂಗಲೋವಿನಲ್ಲಿ ಸಂಶೋಧನಾ ಕೇಂದ್ರವೊಂದನ್ನು ಸ್ಥಾಪಿಸಲಾಗಿದೆ. ಮೂರನೆಯ ಕೇಂದ್ರವನ್ನು ಕೇರಳದ ಕೋಡುಪುಷಾದಲ್ಲಿ ಸ್ಥಾಪಿಸಲಾಗುವುದು.

ಅರಿಸಿನ

ದೇಶದಲ್ಲಿ ಅರಿಸಿನವನ್ನು ಸಾಗುವಳಿ ಮಾಡುತ್ತಿರುವ ವಿಸ್ತೀರ್ಣವು ೧,೪೬೪೦೦ ಎಕರೆಗಳೂ ೧,೩೧,೨೦೦ ಟನ್ನುಗಳ ಅರಿಸಿನವನ್ನು ಉತ್ಪಾದಿಸಲಾಗುತ್ತಿದೆ.

ಆಂಧ್ರ ರಾಜ್ಯದ ಗುಂಟೂರು ಜಿಲ್ಲೆಯಲ್ಲಿರುವ ಪೆದ್ದಪಾಳ್ಯದಲ್ಲಿ ಅರಿಸಿನ ಸಂಬಂಧವಾದ ಸಂಶೋಧನಾ ಯೋಜನೆಯೊಂದನ್ನು ಕಾರ್ಯರೂಪಕ್ಕೆ ತರಲಾಗಿದೆ.

ಈ ಕೇಂದ್ರವಲ್ಲಿ ಅರಿಸಿನ ಬೆಳೆಗೆ ಸಂಬಂಧಿಸಿದ ನಾನಾ ವಿಷಯಗಳ ಬಗ್ಗೆ ಸಂಶೋಧನೆ ನಡೆಸಲಾಗುತ್ತಿದೆ.

ಲವಂಗ ಮತ್ತು ಜಾಯಿ ಕಾಯಿ

ವೈವಿಧ್ಯ ಸಂಭಾರ ಪದಾರ್ಥಗಳಲ್ಲಿ ಜಾಯಿಕಾಯಿ ಮತ್ತು ಲವಂಗ ಮಹತ್ವಪೂರ್ಣ ಸ್ಥಾನಗಳಿಸಿವೆ. ನಮ್ಮ ದೇಶದಲ್ಲಿ ಇವುಗಳ ಸಾಗುವಳಿ ಹಾಗೂ ಉತ್ಪಾದನೆ ಅತ್ಯಲ್ಪ. ಇವುಗಳನ್ನು ಅಭಿವೃದ್ಧಿಪಡಿಸುವುದು ಅತ್ಯಗತ್ಯವಾಗಿದೆ.

ಜಾಯಿಕಾಯಿ ಹಾಗೂ ಲವಂಗಗಳ ಸಾಗುವಳಿಗೆ ಅಗತ್ಯವಾದ ಭೂಮಿ ಹಾಗೂ ಹವಾಗುಣ ವಿಶಿಷ್ಟ ರೀತಿಯದಾಗಿದೆ. ದಕ್ಷಿಣ ಭಾರತದ ಜೀವವೈವಿಧ್ಯ ಪ್ರದೇಶಗಳಲ್ಲಿ ಇವು ಜೀನ್ನಾಗಿ ಬೆಳೆಯುತ್ತವೆ. ಸಮುದ್ರ ಮಟ್ಟದಿಂದ ೩,೦೦೦ ಅಡಿಗಳ ಎತ್ತರ ವರೆಗಿನ ಕ್ರಿದೇಶಗಳಲ್ಲಿ, ವರ್ಷಕ್ಕೆ ೬೦ ರಿಂದ ೧೦೦ ಅಂಗುಲಗಳ ಮಳೆಯಾಗುವ ಪ್ರದೇಶಗಳಲ್ಲಿ ಇವು ಜೀನ್ನಾಗಿ ಬೆಳೆಯುತ್ತವೆ. ಇವನ್ನು ಭಾರತದ್ವೀಪವೂ ಇದೇ ರೀತಿಯ ಅನುಕೂಲ ಆಸಕ್ತಿಯುಳ್ಳ ಪ್ರದೇಶಗಳಲ್ಲಿ ಬೆಳೆಯಬಹುದೆಂಬ ವಿಚಾರವು ಇದರಿಂದ ಸ್ಪಷ್ಟಪಡುವುದು.

ಮದರಾಸು ರಾಜ್ಯದ ನೀಲಗಿರಿಗಳ ಬರಲಿಯಾರ್ ಹಾಗೂ ಕಲ್ಲಾರ್‌ಗಳಲ್ಲಿರುವ ಫಲ ಮತ್ತು ಸಂಭಾರ ಪದಾರ್ಥಗಳ ಸಂಶೋಧನಾ ಕೇಂದ್ರಗಳಲ್ಲಿ ಲವಂಗ, ಜಾಯಿಕಾಯಿ ಮತ್ತು ಕೋ ಕೋ ಸಂಬಂಧವಾದ ಸಂಶೋಧನಾ ಕಾರ್ಯವನ್ನು ನಡೆಸಲಾಗುತ್ತಿದೆ.

— —

98 ವರ್ಷಗಳ ವ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ರಕ್ತದ್ವಯಗಳು

ಟ್ರೇಡ್ ಮಾರ್ಕ್



ಪಂ|| A. R. ಅಯ್ಯರ್

ಸಂತಾನ ಸಿಂಧೂರ (ಸ್ತ್ರೀಯರಿಗೆ: ಪ್ಯಾಕೆಟ್)

ಮದನ ವಿಲಾಸ (ಪುರುಷರಿಗೆ: ಗುಳಿಗೆ)

ಈ ಔಷಧವು ಬಹುಸ್ಥಿ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಸಿ, ನಪುಂಸಕತೆಯನ್ನು ನಾಮಾವಶೇಷ ಮಾಡುತ್ತದೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದಿನರೂ ತಾಯ್ತಂದೆಗಳಾಗಿದ್ದಾರೆ.

ಹೊಸ ಕ್ಯಾಟಲಾಗು, ಔಷಧದ ಬೆಲೆ ಇತ್ಯಾದಿಗಳಿಗೆ 3 ಆಣೆ ಸ್ಟ್ಯಾಂಪು ಕಳಿಸಿರಿ

ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ., (ನೆ. ಯು.)

628 ಸಂತಾನ ಸಿಂಧೂರ ಸದನ (ಪೋಸ್ಟ್ ಬೋಟ್ ೨) ಮೈಸೂರು S. I.

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕರ್ಮಸನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ. ಬೆಲೆ: ೦—೨—೦

ನವಯುಗ ಪ್ರೆಸ್, ಉಡುಪಿ.

ರಾಷ್ಟ್ರದ ಸೌಭಾಗ್ಯ

(೨ನೇ ಪುಟದಿಂದ)

ದ ಕಾಶ್ಮೀರದಲ್ಲಿ ಸಜ ವಾಲನ್ನು ಬೇಡಲು ದ್ಯುತ್ತವಾಯಿತು. ಶಾಂತಿ ಜನಕ ನೆಹರು ....ಈ ಸಮಸ್ಯೆಗೆ ಒಮ್ಮೆಲೆ ಗಂಭೀರ ರೂಪವನ್ನು ಕೊಡದೆ ಸೌಮ್ಯ ರೀತಿಯಲ್ಲಿ ಅದರ ವಿಚಾರವನ್ನು ಮಾಡಿದರು. ಪಾಕಿಸ್ತಾನದ ಪ್ರಧಾನ ಮಂತ್ರಿಗಳ ಜೊತೆಯಲ್ಲಿ ಶಾಂತಿಯ ಸಂಭಾಷಣೆಯನ್ನು ನಡೆಸಿದರು. ಆದರೆ ಅದರಿಂದ ಪ್ರಯೋಜನವಾಗಲಿಲ್ಲ. ಕೊನೆಗೆ ಆ ಸಮಸ್ಯೆಯನ್ನು ಅವರು ಯುಕ್ತ ರಾಷ್ಟ್ರದ ಕಡೆಗೆ ಒಪ್ಪಿಸಿದರು. ಅದಕ್ಕಾಗಿ ಯುಕ್ತ ರಾಷ್ಟ್ರದವರು—ಡಿಕ್ಸನ್ ಮತ್ತು ಫ್ರಾಂಕ್ ಗ್ರಾಮ್ ಎಂಬವರನ್ನು ಈ ಸಮಸ್ಯೆ ಪರಿಹಾರಕ್ಕಾಗಿ ನಿಯಮಿಸಿದರು. ೫ ವರ್ಷಗಳ ಮೇಲೆ ೫ ಕೋಟಿ ರೂಪಾಯಿ ವ್ಯಯ. ಕಾಶ್ಮೀರ ಸಮಸ್ಯೆ—ಆಯಾ ಸರಕಾರದ ಆಂತರಿಕ ಪ್ರಶ್ನೆಯಿದೆಯೆಂಬ ನುನವಿಯನ್ನು ಒಪ್ಪಿಸಿದರು. ಅದು ಏನೇ ಆಗಿದ್ದರೂ ನೆಹರೂರವರು ಈ ಸಮಸ್ಯೆಯನ್ನು ಶಾಂತತೆಯಿಂದಲೇ ಬಗೆಹರಿಸುವುದನ್ನು ನಿರ್ಧರಿಸಿರುವದರಿಂದ ಎಷ್ಟು ಹಾನಿಯಾದರೂ—ಸಹಿಸಿಕೊಂಡು ಬರುತ್ತಿದ್ದಾರೆ. ವಿರೋಧಿಪಕ್ಷದವರು ಟೀಕೆಯ ಸುರಿಮಳೆಯನ್ನೆ ಸುರಿಸಿದರು, ಧೂರ್ತರಾದ ಶ್ರೀ ನೆಹರೂರವರು- ಶಾಂತತೆಯೆ ಶೈಮ್ಯ ಧ್ಯೇಯವೆಂದು ನಿರ್ಧರಿಸಿದ ಶ್ರೀ ನೆಹರೂರವರು ಬಹು ಕೌಶಲ್ಯದಿಂದ ಕಾಶ್ಮೀರದ ಸಮಸ್ಯೆಯನ್ನು ಬಿಡಿಸಿ ಭಾರತದಲ್ಲಿಯಷ್ಟೇ ಅಲ್ಲದೆ—ಪ್ರಪಂಚದಲ್ಲಿಯು ಶಾಂತತೆಯನ್ನು ಕಾಯ್ದುಕೊಂಡು ಬರುವುದಕ್ಕೆ ಪ್ರಯತ್ನಿಸಿದ್ದಾರೆ.

ಬಾಂಡುಂಗ ಪರಿಷತ್ತು

(೨) ಕೊರಿಯಾ ಯುದ್ಧದಲ್ಲಿ—ಅಪರಿಮಿತ ಹಾನಿಯಾಗುತ್ತಿರುವಾಗ ಶ್ರೀ ನೆಹರೂರವರು ಅದನ್ನು ಸುಮ್ಮನೆ ನೋಡುತ್ತ ಕುಳಿತುಕೊಳ್ಳಲಿಲ್ಲ. ಚರ್ಚಿಲ್ಲರಂಥವರು ಸುಮ್ಮನೆ ಕುಳಿತುಕೊಳ್ಳಬಹುದಾಗಿದ್ದರು ಆದರೆ ಆಗಿನ ಸಮಯದಲ್ಲಿ ಶ್ರೀ ನೆಹರೂರವರು ಬಾಂಡುಂಗ ಪರಿಷತ್ತನ್ನು ಕರೆದು ಅದರ ಮುಖಾಂತರ ಕೊರಿಯಾದಲ್ಲಿ ನಡೆದ ಯುದ್ಧವನ್ನು ನಿಲ್ಲಿಸುವುದಕ್ಕೆ ಪ್ರಯತ್ನಿಸಿದರು. ಆವರ ವ್ಯಕ್ತಿತ್ವಕ್ಕೆ ಮಾರು ಹೋದ ಎಲ್ಲ ರಾಷ್ಟ್ರಗಳು ನೆಹರೂರವರ ವಿಚಾರಕ್ಕೆ ಒಪ್ಪಿದರು. ಶಾಂತಿಯನ್ನು ಪುನಸ್ಥಾಪಿಸುವದಕ್ಕಾಗಿ ಮುಂದಾಗಿ ಬಂದವು. ನೆಹರೂರವರ ಮಾತಿನ ಮೇರೆಗೆ ಬಾಂಡುಂಗ ಸರಿಷತ್ತಿನಲ್ಲಿ ಕೊರಿಯಾ ಯುದ್ಧವನ್ನು ನೆಹರೂರವರು ಸಂಪೂರ್ಣವಾಗಿ ನಿಲ್ಲಿಸಿ ಶಾಂತಿಯನ್ನು ಪ್ರಸ್ಥಾಪಿಸಿದರು.

ತಿಬೇಟ್—ಪಂಚಶೀಲ

(೩) ೧೯೫೪ರಲ್ಲಿ ಚೌ ಎನ್ ಲಾಯ್ ರವರು ತಿಬೇಟವು ಚೀನದ ಭಾಗವಿದೆಯೆಂದು ತಮ್ಮ ದೇಶದ ನಕಾತೆಯಲ್ಲಿ ತಿಬೇಟನ್ನು ಹಾಕಿದರು. ಈ ವಿಷಯದಲ್ಲಿ ಪಾರ್ಲಿಮೆಂಟಿನಲ್ಲಿ ಶ್ರೀ ನೆಹರೂರವರಿಗೆ ಅನೇಕ ಪ್ರಶ್ನೆ ಉಪಪ್ರಶ್ನೆಗಳನ್ನು ಕೇಳುವದಕ್ಕೆ ಬಂದಿತು. ತಿಬೇಟವು ಭಾರತದ ಅವಿಭಾಜ್ಯ ಭಾಗವಿದೆಯೆಂದು ನೆಹರೂ ಹೇಳಿದರೂ ಆ ಮೇಲೆ ಅವರಿಗೆ ತಿಬೇಟನ್ನು ಚೀನಾದವರು ತಮ್ಮ ದೇಶದ ನಕಾತೆಯಲ್ಲಿ ಹಾಕಿರುವುದು ತಿಳಿದು ಬಂದಾಗ —ಅವರು ಚೀನದ ಪ್ರಧಾನ ಮಂತ್ರಿಗಳಿಗೆ ಒಂದೋಲೆ ಬರೆದರು. ಅವರನ್ನು ಭಾರತಕ್ಕೆ ಬರಮಾಡಿಕೊಂಡರು. ತಿಬೇಟನ ವಿಷಯದಲ್ಲಿ ಚರ್ಚೆ ನಡೆಸಿ, ತಿಬೇಟವು ಭಾರತದ್ದು ಇತ್ತು, ಅಷೆ! ಎಂದು ಅವರು ಒಪ್ಪುವಂತೆ ಮಾಡಿದರು. ಈ ಸಮಯದಲ್ಲಿ 'ಪಂಚ ಶೀಲ'ಗಳ ಮಹತಿಯನ್ನು ನೆಹರೂರವರು ಪ್ರಪಂಚಕ್ಕೆ ಸಾರಿ ಹೇಳಿದರು. ಎರಡನೆಯ ದೇಶದ ನಾಯಕರಾದರೂ ಇದ್ದಲ್ಲಿ ಯುದ್ಧವನ್ನೆ ಆರಂಭಿಸಬೇಕಾಗಿದ್ದಿತು. ಆದರೆ ನೆಹರೂರವರು ಆಕ್ರಮಣ ಪ್ರಧಾನ ವೃತ್ತಿಯನ್ನು ಕೈಕೊಳ್ಳದೆ—ಶಾಂತ ರೀತಿಯಿಂದ—ಈ ಸಮಸ್ಯೆಯ ಪರಿಹಾರ ಮಾಡಿ – ಶಾಂತಿಯನ್ನು ಕಾದುಕೊಂಡು ಬಂದರು.

ಕೊಲಂಬೋ ಪರಿಷತ್ತು

(೪) ಇನ್ನೊಂದು ಮಹತ್ವದ ಸಂಗತಿಯ ವಿಷಯದಲ್ಲಿ ನೆಹರೂರವರು ತಮ್ಮ ಬುದ್ಧಿ ಮತ್ತೆಯ ಕೌಶಲದಿಂದಲೆ....ಶಾಂತಿಯನ್ನು ಕಾದುಕೊಂಡು ಬಂದರೆಂದು.. ಹೇಳಬಹುದು. ಪಾಕಿಸ್ತಾನವು ಅಮೇರಿಕೆಯಿಂದ ಎಲ್ಲ ರೀತಿಯಿಂದ ಸಹಾಯವನ್ನು ಪಡೆದು ಉನ್ಮತ್ತವಾಗಿ ವರ್ತಿಸುವಾಗಿನ ಸಂಗತಿ! ಆಗ ಪಾಕಿಸ್ತಾನವನ್ನು ಅಮೇರಿಕೆ ತನ್ನ ಕೈಗೊಂಬೆಯನ್ನಾಗಿ ಮಾಡಿದ್ದಿತೆಂದು...ಕೆಲವರು ಅಭಿಪ್ರಾಯಪಟ್ಟರು. ಇದರ ಮೂಲಕ....ಯುದ್ಧದ ಬೇಗೆಯು ಏಳುವ ಲಕ್ಷಣಗಳು ಕಾಣಿಸುವುದಕ್ಕೆ ಆರಂಭವಾದುವು. ಇದರ ನಿವಾರಣೆಯು ಮಹತ್ವೆದ್ದಿಂದು ನೆಹರೂರವರಿಗೆ ಅನಿಸಿ-ಅವರು ಆರು ರಾಷ್ಟ್ರಗಳ—ಪರಿಷತ್ತನ್ನು ಕೊಲೋಂಬೊದಲ್ಲಿ ಕರೆದರು. ಅವರಲ್ಲಿ ಅಮೇರಿಕೆ ಪಾಕಿಸ್ತಾನಕ್ಕೆ ಸಹಾಯಮಾಡಿಯುದ್ಧದ ವಾತಾವರಣವನ್ನು ಕಲ್ಪಿಸುವುದು ತೀರ ತಪ್ಪಾದ ಸಂಗತಿಯಾಗಿರುವದೆಂಬ ಕಠಾವನ್ನೆ ಅವರು ಮಂಡಿಸಿದರು. ಪಾಕಿಸ್ತಾನವು ಇದನ್ನು ವಿರೋಧಿಸಿತು. ಆದರೆಇಂಥಲದರಾಷ್ಟ್ರಗಳನ್ನು ಸಮ್ಮತಿಸಿ, ಸಹಾಯ ಸೌಹಾರ್ದಗಳನ್ನು ಶ್ರೀ ನೆಹರೂರವರು ಸಂಪಾದಿಸಿ ಉದ್ಭವಿಸಿರುವ ಆಶಾಂತಿಯನ್ನು ಹತ್ತಿಕ್ಕಿದರು. ಮತ್ತು ಶಾಂತತೆಯನ್ನು ಕಾದುಕೊಂಡು ಬಂದರು. ಕೊಲೊಂಬೋ ಪರಿಷತ್ತು ಶ್ರೀ ನೆಹರೂರವರ ಬುದ್ಧಿ ಮತ್ತೆಯ ಮತ್ತು ರಾಜಕಾರಣದ ಪ್ರತೀಕವಾಗಿರುವದೆಂದು ಹೇಳಬಹುದು.

ಗೋವಾ ಸಮಸ್ಯೆ

(೫) ಶ್ರೀ ನೆಹರೂರವರು 'ಗೋವಾ ಸಮಸ್ಯೆ'ಯನ್ನು ಸಹ ಬಹಳ ಶಾಂತತೆಯ ತಳಹದಿಯ ಮೇಲೆಯೆ ಬಗೆಹರಿಸಿದರು. ಭಾರತದಲ್ಲಿಯು ಸಣ್ಣ ಪಂಗಡಗಳು ಈ ಸಮಯದಲ್ಲಿ ಒಂದಾಗಿದ್ದವು ಪೋರ್ತುಗೀಸರು ಭಾರತದಲ್ಲಿರುವ ತಮ್ಮ ಪ್ರದೇಶವನ್ನು ಬಿಟ್ಟು ಹೋಗಬೇಕೆಂದು ಅವು ಏಕ ಕಂಠದಿಂದ ಘೋಷಣೆಯನ್ನು ಮಾಡಿದವು. ಹಿಂಸಾತ್ಮಕ ಅಹಿಂಸಾತ್ಮಕ ಮಾರ್ಗವನ್ನು ಅನುಸರಿಸುವ ಉಪಕ್ರಮಗಳು ನಡೆದುವು ಗೋವೆಯು ಕಾಶ್ಮೀರದಂತೆಯೆ ಭಾರತದ ಅವಿಭಾಜ್ಯ ಭಾಗವಿರುವದೆಂದು ಪಂಡಿತಜಿಯವರು ಒಪ್ಪಿದರು. ಆದರೆ ಇದು ಅವನ್ನು ಪಡೆಯುವ ಸರಿಯಾದ ಮಾರ್ಗವಲ್ಲವೆಂದು ಅವರು ಅಭಿಪ್ರಾಯಪಟ್ಟರು. ಹೀಗಾಗುವದರಿಂದ ಜಗತ್ತಿನ ಶಾಂತಿಗೆ ಭಂಗಬರಬಹುದೆಂದು ಅವರಿಗೆ ಅನಿಸಿ ಅವರು ಈ ಉಪಕ್ರಮವನ್ನು ನಿಷೇಧಿಸಿದರು. ತಮ್ಮ ದೇಶದ ಪ್ರಜೆಗಳೆಲ್ಲ ಒಂದಾಗಿರುವಾಗ ಅವರ ವಿರುದ್ಧವಾಗಿ ನೆಹರೂರವರು ಶಾಂತತೆಯನ್ನು ನೆಲೆಸುವುದಕ್ಕಾಗಿ ಪ್ರಯತ್ನಿಸಿದರು. ಭಾರತದ ಪ್ರಜೆಗಳೆಲ್ಲ ಅವರನ್ನು ಬೈದರು. ಆದರೂ ಶಾಂತಿಯನ್ನು ಕಾಪಾಡುವ ಧ್ಯೇಯವನ್ನಿಟ್ಟುಕೊಂಡ ಶ್ರೀ ನೆಹರೂರವರು ಯೋಗ್ಯ ರೀತಿಯ ವರ್ತನೆದಿಂದ ಅಶಾಂತಿಯ ವಾತಾವರಣದ ನಿವಾರಣೆಯನ್ನು ಮಾಡಿದರು. ಇದು ನೆಹರೂರವರ ರಾಜಕಾರಣದ ಕೌಶಲ್ಯದ, ಧೂರ್ತತನದ ದ್ಯೋತಕವೆಂದು ಅನೇಕ ರಾಜಕಾರಿಣಿಗಳು ಹಿಂದಿನಿಂದ ಒಪ್ಪಿಕೊಂಡಿದ್ದಾರೆ.

ಪೂರ್ವ ಪಶ್ಚಿಮ ಜರ್ಮನಿ

(೬) ಪೂರ್ವ ಜರ್ಮನಿ ರಶಿಯಾದ ವಶದಲ್ಲಿ ಮತ್ತು ಪಶ್ಚಿಮ ಜರ್ಮನಿ ಅಮೇರಿಕೆಯ ಕೈಯಲ್ಲಿರುವದು ಸರ್ವ ಶ್ರುತವಾದ ಸಂಗತಿಯಾಗಿರುವದು. ಜರ್ಮನಿಯು ಒಂದಾಗಬೇಕೆಂದು ಪೂರ್ವ ಪಶ್ಚಿಮ ಜರ್ಮನಿಯಲ್ಲಿ ಆಂದೋಲನವು ನಡೆದಿದ್ದಿತು. ರಶಿಯನ್ನರು ಅವರೆ ಆಂದೋಲನಕ್ಕೆ ಸೊಪ್ಪು ಹಾಕಲಿಲ್ಲ. ಮೊದ ಮೊದಲು ಅಮೇರಿಕನ್ನರೂ ಹಾಕಲಿಲ್ಲ ವಾದ್ದರಿಂದ ಆಂದೋಲನವು ಉಗ್ರಸ್ವರೂಪವನ್ನು ತಾಳಿತು. ರಶಿಯ ಮತ್ತು ಅಮೇರಿಕನ್ನರು ಆಗಿನ ಸಮಯದಲ್ಲಿ ಯೋಗ್ಯ ಮತ್ತು ಕಠೋರವಾದ ಕ್ರಮವನ್ನು ಕೈಕೊಳ್ಳುವದನ್ನು ನಿರ್ಧರಿಸಿದವು. ಆಶಾಂತಿಯ ಲಕ್ಷಣಗಳು—ತೋರುವುದಕ್ಕೆ ಅರಂಭವಾಯಿತು. ಆಗ ಶ್ರೀ ನೆಹರೂರವರು ಅಲ್ಲಿಗೆ ಹೋಗಿ ಆಶಾಂತಿಯ ಬುಗ್ಗೆಗೆ ಭದ್ರವಾದ ತಡೆಯನ್ನು ಹಾಕಿದರಷ್ಟೇ ಅಲ್ಲದೆ ಅವರ ಪ್ರಯತ್ನದಿಂದ ಪಶ್ಚಿಮ ಜರ್ಮನಿಯು ಸ್ವತಂತ್ರವಾಯಿತು. ಅಮೇರಿಕನ್ನರು ತಮ್ಮ ಅಧಿಕಾರವನ್ನು ಬಿಟ್ಟುಕೊಟ್ಟರು. ಆದರೆ ರಶಿಯನ್ನರು ಬಿಟ್ಟುಕೊಡುವುದಕ್ಕೆ ಸಿದ್ಧರಾಗಲಿಲ್ಲ. ಆದರೂ ಇಂದಲ್ಲ ನಾಳೆ ಅಮೇರಿಕನ್ನರಂತೆ ಬಿಟ್ಟುಕೊಡುವರು ಜರ್ಮನಿಯ ಪ್ರಶ್ನೆಯಲ್ಲ ಸಹ ಯೋಗ್ಯ ಕ್ರಮವನ್ನು ಶ್ರೀ ನೆಹರೂರವರು ತೆಗೆದುಕೊಂಡಿದ್ದಾರೆ. ಶಾಂತತೆಯು ವಾತಾವರಣವನ್ನು ಪ್ರಸ್ಥಾಪಿಸುವುದಕ್ಕೆ ಪ್ರಯತ್ನಿಸಿದ್ದಾರೆ.

ವಸಹಾತುವಾದ ವರ್ಣಭೇದ

ಯಾವುದೇ ರಾಷ್ಟ್ರವು ತನ್ನ ವಸಾಹತುಗಳನ್ನು ಇತರ ರಾಷ್ಟ್ರಗಳಲ್ಲಿ ಇಡಬಾರದು. ಬ್ರಿಟಿಷಾಗಲೀ, ಅಮೇರಿಕನ್ನರಾಗಲೀ, ಪೋರ್ತುಗಾಲ ಫ್ರೆಂಚರಾಗಲಿ—ಎಲ್ಲರೂ ತಂತಮ್ಮ ವಸಾಹತುಗಳನ್ನು ಬಿಟ್ಟುಕೊಡುವದರಿಂದ ಜಗತ್ತಿನಲ್ಲಿ ನಿಶ್ಚಯವಾಗಿ ಶಾಂತತೆಯು ನೆಲೆಗುವದೆಂದು ಶ್ರೀ ನೆಹರೂರವರು ಸಾರಿ ಹೇಳಿದರು.

ಒಂದು ಹೊಸ ಮಹಾ ಕಾದಂಬರಿ

ನಡುಹಗಲಿನ ಕಗತಲೆ

ಸಿಲ್ಲ ಪುಟಗಳು ಬೆಲೆ 2½ ರೂಪಾಯಿ

- ಯುರೋಪಿನಲ್ಲಿ ಈಗ ನಲ್ವತ್ತು ವರ್ಷಗಳ ಹಿಂದೆ ನಡೆದು ಇಡೀ ಪ್ರಪಂಚವನ್ನೇ ತಲ್ಲಣಗೊಳಿಸುತ್ತಿರುವ ಒಂದು ರಾಜನೈತಿಕ ಪದ್ಧತಿಯಿಂದ ಮನುಷ್ಯನ ಅತ್ಮವು ಸತತವಾಗುತ್ತಿರುವ ಮರಂತದ ಒಂದು ಮಾರ್ಮಿಕ ಕಾದಂಬರಿ.
- ರಶಿಯದ ರಕ್ತಮಯ ಕ್ರಾಂತಿಯು ವ್ಯಕ್ತಿಯ ಜೀವ ಮತ್ತು ನೆತ್ರರನ್ನು ನಿರ್ದಾಕ್ಷಿಣ್ಯವಾಗಿ ಹೀರುವ ಭೀಕರ ಚಿತ್ರಣ.
- ಇದರಲ್ಲಿ ಪ್ರಚಲಿತ ಪ್ರಪಂಚದ ರಾಜನೀತಿ, ಇತಿಹಾಸ, ಮತ್ತು ಅಂತಾರಾಷ್ಟ್ರೀಯ ರೀತಿ ನೀತಿಯ ಒಳನೋಟ ದೊರೆಯುತ್ತದೆ.
- ಪ್ರಖ್ಯಾತ ಲೇಖಕ ಆರ್ಥರ್ ಕೊಸ್ಲರ್ ಅವರ ಜರ್ಮನ್ ಕಾದಂಬರಿಯ ಮನೋಜ್ಞ ಕನ್ನಡವನ್ನು ಅನುವಾದಿಸಿದವರು ಕು. ಶಿ. ಹರಿದಾಸ ಭಟ್ಟರು.

ಪ್ರಕಾಶಕರು:

ನವಯುಗ ಎಂಟರ್‌ಪ್ರೈಸಸ್ ಲಿಮಿಟೆಡ್, ಉಡುಪಿ.

(ಪ್ರತಿಗಳು ನವಭಾರತ ಪುಸ್ತಕ ಭಂಡಾರ, ಉಡುಪಿ, ಇಲ್ಲಿಯೂ ದೊರೆಯುತ್ತವೆ)

ಅದರಂತೆ ಆಯಾ ರಾಷ್ಟ್ರಗಳ ಜೊತೆಯಲ್ಲಿ ಮಾತುಕತೆಗಳನ್ನಾಡಿದರಷ್ಟೇ ಅಲ್ಲದೆ ಅವರಿಗೆ ಆ ವಿಷಯದಲ್ಲಿ, ಒಳಿತಾಗಿ ತಿಳಿಯಹೇಳಿದರು. ಈ ರೀತಿಯಲ್ಲಿಯೂ ಪಂಡಿತಜಿಯವರು ಜಗತ್ತಿನಲ್ಲಿ ಶಾಂತತೆಯನ್ನು ನೆಲೆಸಿರುವುದಕ್ಕೆ ಪ್ರಯತ್ನಿಸಿದರು. ಪ್ರಯತ್ನಿಸುತ್ತಿದ್ದಾರೆ. ಆಫ್ರಿಕೆಯಲ್ಲಿ, ಅಮೇರಿಕೆಯಲ್ಲಿಯ ವರ್ಣಭೇದ ಅಳಿದು ಮಾನವ ಜನಾಂಗ ಒಂದಾಗಬೇಕೆಂದು ನೆಹರೂವರು ಜೋರಿನಿಂದ ಪ್ರಯತ್ನಿಸುತ್ತಿದ್ದಾರೆ. ಇವರ ಪ್ರಯತ್ನದಿಂದ ಆ ಪ್ರಭೇದವು ಎಷ್ಟೋ ಕಡಿಮೆಯಾಗುತ್ತಿದೆ. ಮಾನವ ಜನಾಂಗ ಒಂದೆಂಬ ಭಾವನೆಯೆಡೆಗೆ ಅವರು ಧಾವಿಸುತ್ತಿದ್ದಾರೆ. ಈ ವಿಚಾರವನ್ನು ಒಪ್ಪುತ್ತಿದ್ದಾರೆ.

ಇಜಿಪ್ತ ಯುದ್ಧ–ಸುಯೇಜ ಪ್ರಶ್ನೆ.

ಸುಯೇಜ್ ಕಾಲುವೆಗಳ ವಿಷಯದಲ್ಲಿ ಇಜಿಪ್ತ ಮತ್ತು ಫ್ರಾನ್ಸ್ ಇಂಗ್ಲೆಂಡ್‌ಗಳ ನಡುವೆ ಯುದ್ಧ ನಡೆದಿರುವದು ಯುದ್ಧವನ್ನು ತಡೆದು ಹಿಡಿಯುವುದಕ್ಕಾಗಿ ಶ್ರೀ ನೆಹರೂರವರಿಗೆ ಅನೇಕ ರಾಷ್ಟ್ರಗಳಿಂದ ಓಲೆಗಳು ಬಂದುವು. ಅದರಂತೆ ರಶಿಯವು ಹಂಗೇರಿಯಲ್ಲಿ ಆರಂಭಿಸಿದ ಯುದ್ಧವನ್ನು ತಡೆಹಿಡಿಯುವುದಕ್ಕೆ ನೆಹರೂರವರು ಮಧ್ಯಸ್ಥರಾಗಬೇಕೆಂದು–ಅನೇಕ ರಾಷ್ಟ್ರಗಳು ಸೂಚಿಸಿದವು. ಇದರಿಂದ-ಎಲ್ಲಿ ಮೂರನೆಯ ಮಹಾಯುದ್ಧವು ಆರಂಭವಾಗುವುದೊ ಎಂದು ಇತರ ಚಿಕ್ಕ ಪುಟ್ಟ ರಾಷ್ಟ್ರಗಳು ಅಂಜಿರುವಷ್ಟು, ಸುಯೇಜಿನ ಮೇಲಿನ ಅಧಿಕಾರ ಹೋದರೆ-ಹೊಟ್ಟೆನಿಲ್ಲದೆ ಸಾಯುವ ಪರಿಸ್ಥಿತಿಯಿಂದು ಇಂಗ್ಲೆಂಡ್ ಬಿದ್ದಿದೆ. ಹೊಟ್ಟೆಯಕಿಚ್ಚಿಗಾಗಿ ಮನಸ್ಸಿನಲ್ಲಿರದಿದ್ದರೂ ಇಂದು ಇಂಗ್ಲೆಂಡ್ ಫ್ರಾನ್ಸ್‌ಗಳು ಯುದ್ಧವನ್ನು ಹೂಡಿರುವವು. ಇವರಲ್ಲಿ ಎಷ್ಟರಮಟ್ಟಿಗೆ ಇಂಗ್ಲೆಂಡ್ ಜಯವನ್ನು ಸಂಪಾದಿಸೀತೆಂದು ಹೇಳುವುದು ಕಠಿಣ. ಅರಬ ರಾಷ್ಟ್ರಗಳು ಒಂದಾಗಿರುವವು. ಇವೆಲ್ಲವನ್ನು ನೋಡಿದರೆ ಮಹಾ ಯುದ್ಧದ ಅಂಜಿಕೆಯು ಎದ್ದು ಕಾಣಿಸುವುದು. ನೆಹರೂರಿಂದಲೇ ಇದನ್ನು ತಡೆದು ಹಿಡಿಯುವದು ಸಾಧ್ಯವಿದೆಯೆಂದು ಬಲ್ಲವರ ಅಭಿಪ್ರಾಯವಿದೆ

ಈ ಅಭಿಪ್ರಾಯದಂತೆ ಇಂಗ್ಲೆಂಡ್ ಪರಿಷತ್ತಿಗೆ ಶ್ರೀ ಮೆನನ್ನರನ್ನು ಪಂಡಿತ ಜೀಯವರು ಕಳಿಸಿದ್ದರು. ಆದರೆ ಅದರಿಂದ ಹೇಳಿಕೊಳ್ಳುವಷ್ಟು ಪ್ರಯೋಜನವಾಗಲಿಲ್ಲ. ಇಜಿಪ್ತವು ಕೂಡಾ ನಡುಕಟ್ಟಿ ಯುದ್ಧಕ್ಕೆ ಸಿದ್ಧವಾಗಿರುವುದು. ಇಜಿಪ್ತದ ಪ್ರಧಾನ ಮಂತ್ರಿಗಳಾದ ನೇಸರರು ಜೋರಿನಿಂದ ಈ ರಾಷ್ಟ್ರಗಳ ವಿರುದ್ಧವಾಗಿ ಘೋಷಣೆಯನ್ನು ಮಾಡಿರುವರು. ಮತ್ತು ಪ್ರತಿಭಟನೆಯನ್ನು ಯೋಗ್ಯ ರೀತಿಯಿಂದ ಮಾಡಿರುವರು. ಇಂಗ್ಲೆಂಡ್, ಫ್ರಾನ್ಸ್ ದೇಶಗಳ ಮತ್ತು ರಶಿಯನ್ನರ ಅಕಶ್ಯಾನುಣವನ್ನು ಶ್ರೀ ನೆಹರೂರವರು ಕಟುವಾಗಿ ಟೀಕಿಸಿರುವರು. ಅವರುಗಳಿಗೆ ಮೇಲಿಂದ ಮೇಲೆ ಮುನ್ನೆಚ್ಚರ ಕೊಡುತ್ತಿರುವರು. ಶಾಂತತೆಗಾಗಿ ಪಂಡಿತಜೀಯವರು ತಮ್ಮ ಶಕ್ತಿ, ಬುದ್ಧಿಗಳನ್ನು ವೆಚ್ಚ ಮಾಡುತ್ತಿರುವರು.

ಒಂದು ಸಮಾಜ, ಒಂದು ಸರಕಾರ

ಮಹಾಯುದ್ಧದ ಅನಿಷ್ಟ ಪರಿಣಾಮದ ಅನುಭವವಿದ್ದ ಕೆಲವರು ಯುದ್ಧನಾಗದೆಂತೆ ಪ್ರಯತ್ನಿಸುತ್ತಿರುವದು ಅಡಿಗಡಿಗೆ ಕಂಡುಬರುತ್ತಿರುವುದು. ವಾಶ್ವಿಮಾತ್ಯ ರಾಷ್ಟ್ರಗಳ ಇದುವರೆಗಿನ ಕೃತ್ಯಗಳ ಪುನರಾವಲೋಕನವನ್ನು ಮಾಡಿನೋಡಿದಾಗ ಯಾವುದೇ ರಾಷ್ಟ್ರ ತನ್ನ ಹಿರಿಮೆಯನ್ನು ಕಾಯ್ದುಕೊಂಡು ಬಂದುದು ಕಂಡು ಬರುವದಿಲ್ಲ. ಮೊದಲನೆಯ ಮಹಾಯುದ್ಧದ ನಂತರ ಕೇವಲ ಇಪ್ಪತ್ತೈದು ವರ್ಷಗಳಲ್ಲಿಯೆ ಎರಡನೆ ಮಹಾ ಯುದ್ಧವು ಆರಂಭವಾಗಿ—ಜಗತ್ತನ್ನೆ ನಡುಗಿಸಿತು. ರಾಷ್ಟ್ರ ರಾಷ್ಟ್ರಗಳಲ್ಲಿ ಇಂದು ಒಂದುಳಿಟ್ಟಿಲ್ಲ! ಪ್ರೇಮದ ಭಾವನೆಯಿಲ್ಲ! ವರ್ಣಭೇದ, ಜಾತಿಭೇದ ಇವೆಲ್ಲವೂ ಪೆಡಂಭೂತವಾಗಿರುವಾಗ ವಾಶ್ವಿಮಾತ್ಯ ರಾಷ್ಟ್ರದವರು ಒಂದು ಸಮಾಜವನ್ನು ಒಂದು ಸರಕಾರವನ್ನು ನಿರ್ಮಿಸುವುದು ಅಶಕ್ಯ ರೇಗಿಟುಬ್ಬಿಯ ಸಂಗತಿಯಾಗಿರುವದು ವಿಜ್ಞಾನವೇ ತಮ್ಮ ಭೌತಿಕ ಪ್ರಗತಿಯಿಂದು ಭಾವಿಸುವ ಅವರುಗಳು ಜಗತ್ತಿನಲ್ಲಿ ಒಂದು ಸಮಾಜವನ್ನು ನಿರ್ಮಿಸುವುದು ಶಕ್ಯವೇ ಇಲ್ಲ! ಇಂದು ಈಡನ್ನರಾಗಲೀ, ಏಸೆನ್‌ಹೋವರ್‌ರಾಗಲೀ ಯಾರೇ ಆಗಲೀ, ಬುಲ್ಗಾನಿನ್ನರಾಗಲೀ ಯಾರೇ ಆದರೂ ಜಗತ್ತಿನಲ್ಲಿ ಶಾಂತಿಯನ್ನು ಜನಿಸುವುದಕ್ಕೆ ಸಮರ್ಥರಿಲ್ಲ. ರಾಕ್ಷಸೀ ಮಕ್ಕತ್ವಾ ಕಾಂಕ್ಷೆಯು ಅವರಲ್ಲಿ ರಕ್ತಗತವಾಗಿರುವದರಿಂದ...ಅವರಿಂದಿಗೂ ಶಾಂತಿಯಿಂದ ನಡೆಯುವುದು ಶಕ್ಯವಿಲ್ಲ. ಆ ಶಾಂತಿಯ ನೆಲೆಯಾವ ಇವರು ಒಂದು ಸಮಾಜವನ್ನು ನಿರ್ಮಿಸುವುದಕ್ಕೆ ಅಸಮರ್ಥರೆಂದೇ ಹೇಳಬೇಕಾಗುವುದು ಆದರೆ ಭಾರತದ ಪರಿಸ್ಥಿಯು ಆದಿಯಿಂದಲೂ ಹಾಗಿಲ್ಲ. ಐತ್ಯಾತ್ಮಿಕ ತಳಹದಿಯು ಮೇಲೆ ಭಾರತೀಯ ಜನಾಂಗ ನಿಂತಿದೆ ಶಾಂತತೆ ಮಾನವ ಜನಾಂಗ ಒಂದು, ಮಾನವ ಸಮಾಜ ಒಂದೆ! ಎಂಬ ಭಾವನೆಯನ್ನು ಮೊದಲಿನಿಂದಲೂ ತಾಳಿರುವದು. ಆದ್ದರಿಂದಲೇ ಮೊದಲಿಗರು 'ಸರ್ವೇ ಜನಾ ಸುಖಿನೋಭವಂತು, ಸರ್ವೇ ವಿಶ್ವಾಃ ಸುಖಿನೋ ಭವಂತು' ಎಂದು ಮುಕ್ತ ಕಂಠದಿಂದ ಸಾರಿರುವರಷ್ಟೇ ಅಲ್ಲದೆ ಆ ರೀತಿಯಲ್ಲಿ ತಮ್ಮ ವರ್ತನೆಯನ್ನು ಇಟ್ಟುಕೊಂಡು ಬಂದುದೆ ಕಂಡು ಬರುವುದು. ಭಾರತೀಯರ ಈ ತತ್ವ ಜ್ಞಾನವೇ ಇಂದು...ಜಗತ್ತಿಗೆ ಶಾಂತಿಯನ್ನು ಒದಗಿಸುವ ಸಾಧನವೆಂದು ಎಲ್ಲ ಪಂಡಿತರು ಒಪ್ಪಿಕೊಳ್ಳುತ್ತಿದ್ದಾರೆ. ಪಂಚಶೀಲಗಳನ್ನು ಆಚರಣೆಯಲ್ಲಿ ಭಾರತ ತಂದು ವರ್ತಿಸುತ್ತಿದ್ದರೆ ಉಳಿದ ರಾಷ್ಟ್ರಗಳವರು ಅದರ ಉಲ್ಲಂಘನೆಯನ್ನು ನಡೆಸಿರುವರು.

ಆಶಾಂತಿಯು ಪರಿಸಿವ ಸಂದರ್ಭ ಕಂಡಕೂಡಲೇ ಶ್ರೀ ಪಂಡಿತಜಿಯವರಿಗೆ ವಾಶ್ವಿವಿಷಯ ಮತ್ತು ಸೂರ್ವಾತ್ಯ ರಾಷ್ಟ್ರಗಳಿಂದ ಅದನ್ನು ನಿವಾರಿಸುವುದಕ್ಕಾಗಿ ಕರೆಯು ಬರುವುದು. ಇದರರ್ಥವೇ ಹೀಗಿದೆ.—ಒಂದು ಸಮಾಜ, ಒಂದು ಸರಕಾರ



ದಕ್ಷಿಣಧ್ರುವ ಪ್ರದೇಶದಲ್ಲಿ ಮುನ್ನುಗ್ಗುತ್ತಿರುವ ಈ ಅಂಗ್ಲೋ ನೌಕೆಯನ್ನು ವಿಶೇಷ ರೀತಿಯಲ್ಲಿ ಕಟ್ಟಲಾಗಿರುತ್ತದೆ. ಹಿಮಬಂಡಗಳನ್ನು ಸೀಳಿ ದಾರಿಮಾಡಿಕೊಂಡು ಹೋಗುವುದಕ್ಕೆ ಸಾಧಾರಣ ನೌಕೆಗಳಿಗೆ ಸಾಧ್ಯವಾಗುವುದಿಲ್ಲ. ಬ್ರಿಟಿಷನ ಜಲಸೇನೆಯ ಬ್ರಾನ್ಸ್ ಫೀಲ್ಡ್ ಎಂಬವರ ಕಣ್ಣಿಗೆ ೧೮೨೦ರಲ್ಲಿ ಮೊದಲಾಗಿ ಬಿದ್ದ ದಕ್ಷಿಣ ಧ್ರುವಮಂಡವು ಅಸ್ಪೇಲಿಯಾ ಮತ್ತು ಯುರೋಪುಗಳನ್ನು ಒಟ್ಟುಗೂಡಿಸಿದ ಪಕ್ಕದಲ್ಲಿ ಅನುಸಪ್ಪು ವಿಸ್ತಾರವಾಗಿದ್ದು ಆತ್ಯಪೂರ್ವ ವಿನಿಜ ಸಂಪತ್ತಿನಿಂದಲೂ ಅದಕ್ಕಿಂತಲೂ ಹೆಚ್ಚಾಗಿ ಸೈನಿಕ ಮಹತ್ವದಿಂದಲೂ ಕೂಡಿದೆ. ಅದು ಅನೇಕ ರಾಷ್ಟ್ರಗಳ ಸಹಾಯಗಳಿಗೂ ವಿಜ್ಞಾನಿಗಳಿಗೂ ಆಹ್ವಾನವನ್ನಿತ್ತಿದೆ. ೧೯೧೧ರಲ್ಲಿ ಆಮುಂಡ್ ಸೇನ್ ಮತ್ತು ಮರ್.ವರ್ಸ ಕೇಪ್ಟನ್ ಸ್ಕಾಟ್ ದಕ್ಷಿಣ ಧ್ರುವದ ನೆತ್ತಿಯನ್ನು ಮುಟ್ಟಿದ್ದರು! ಈ ವರ್ಷ ಜಗತ್ತಿನ ಮಹತ್ವಾ ಕಾಂಕ್ಷಿ ರಾಷ್ಟ್ರಗಳು ಸಂಯುಕ್ತ ರಾಷ್ಟ್ರ ಸಂಘದ ನೇತೃತ್ವದಲ್ಲಿ ಈ ಭೂಖಂಡದ ವಿಶೇಷ ಪರಿಶೀಲನೆಯನ್ನು ನಡೆಸಿಕೊಡುತಿರುತ್ತದೆ.

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:

ADVERTISEMENT MANAGER,

'NAVAYUGA'

Post Box No. 22, UDIPI, S. K.

ವನ್ನು ಆಧ್ಯಾತ್ಮಿಕ, ಅಹಿಂಸೆ, ಸತ್ಯದ ತಳಹದಿಯ ಮೇಲೆ ನಿರ್ಮಿಸುವುದಕ್ಕೆ ಭಾರತವೇ ಸಮರ್ಥವಿದೆ. ಪ್ರಧಾನ ಮಂತ್ರಿ ಶ್ರೀ ನೆಹರೂರವರು—ಭಾರತೀಯ ಸಂಸ್ಕೃತಿ ತತ್ವಜ್ಞಾನವನ್ನು ಚಿಕ್ಕ ಪುಟ್ಟ ಕೃತಿಗಳಲ್ಲಿ ನಡೆಯಿಸಿಕೊಂಡು ಬರುತ್ತಿರುವುದು ಇತರ ರಾಷ್ಟ್ರಗಳಿಗೆ ಅಚ್ಚರಿಯನ್ನುಂಟುಮಾಡುತ್ತಿರುವುದು. ಅವರ ಧ್ಯೇಯ ನಿಷ್ಠೆ, ತತ್ವನಿಷ್ಠೆ, ಜೀವನನೀತಿ ಇಂದು ಅವರನ್ನು ಉಚ್ಚಮೆಟ್ಟಿಲಿಗೆ ಮುಟ್ಟಿಸಿವೆ. ಎಲ್ಲರ ಪ್ರೀತಿಗೆ ಪಾತ್ರವಾಗಿ ಮಾಡಿವೆ. ವಾಸನರೆಲ್ಲ ಒಂದು! ಜನಾಂಗಗಳೆಲ್ಲ ಒಂದು! ಎಂಬುದನ್ನು ಪ್ರತ್ಯಕ್ಷ ಕೃತಿಯಲ್ಲಿ ತರುವುದಕ್ಕೆ ಶ್ರೀ ನೆಹರೂರವರು ಪ್ರಯತ್ನಿಸುತ್ತಿದ್ದಾರೆ. ಎಲ್ಲಿಯಾದರೂ ಸಂಕಟವುಂಟಾದರೆ ಅಲ್ಲಿ ಧಾವಿಸುತ್ತಾರೆ. ಶಾಂತಿಯನ್ನು ನೆಲೆಸುವುದಕ್ಕೆ ಪ್ರಯತ್ನಿಸುತ್ತಾರೆ. ಶ್ರೀ ನೆಹರೂರವರು ಶಾಂತಿ ಜನಕರೆಂದು ಪ್ರಪಂಚದಲ್ಲಿಯ ಪಂಡಿತರೆಲ್ಲರೂ ಒಪ್ಪುತ್ತಿದ್ದಾರೆ. ಶ್ರೀ ಚರ್ಚಿಲ್ಲರು...ಶಾಂತಿ ಜನಕರಾಗಿರದೆ ಅಶಾಂತಿ ಜನಕರೆಂದು ಅವರ ಚಾಡ್ಕೆಯಿಂದ ಸಾರಿ ಹೇಳುವುದು ಯುದ್ಧದ ಪರಿಸ್ಥಿತಿಯು ಪ್ರಾಪ್ತವಾಯಿತೆಂದರೆ ಇಂಗ್ಲೆಂಡಿನ ಪ್ರಧಾನ ಮಂತ್ರಿಗಳು ಚರ್ಚಿಲ್ಲರಾಗಿ ಬರುತ್ತಿದ್ದರು. ಅಂಥವರಿಗೆ ಜಗತ್ತಿನ ಶಾಂತಿ ಜನಕರೆಂದು.....ನೋಬೆಲ್ ಪಾರಿತೋಷಕ' ಕೊಟ್ಟರು. ಗಾಂಧೀಜಿಯವರಿಗೆ ಕೊಡಲಿಲ್ಲ. ಎಷ್ಟೊಂದು ವಿರುದ್ಧ ಭೂವಿಕೆಯ ಮೇಲೆ ಇಂದು ಪ್ರಪಂಚದಲ್ಲೆಯ ರಾಷ್ಟ್ರಗಳು ರಾಜ್ಯ ಸೂತ್ರಗಳನ್ನು ನಡೆಸುತ್ತಿರುವದರ ಕಲ್ಪನೆ ಬರುವದು. ನೆಹರೂರವರು ಜಗತ್ಯಾಂತಿಗೆ ಹೆಣಗಾಡುತ್ತಿದ್ದಾರೆ. ಪ್ರಸಂಗೋಪಾತ್ ಅವರು ತನ್ನ ದೇಶ ಬಾಂಧವರನ್ನು ಸಹ ಲೆಕ್ಕಿಸಿಲ್ಲ ಕೆಲವೊಂದು ರಾಷ್ಟ್ರಗಳು ನೆಹರೂರವರ ಸ್ವಭಾವದ ಲಾಭವನ್ನು ಪಡೆಯುತ್ತಿರುವ ದೆಂಬುದನ್ನು ಅವರು ಅರಿಯದಿಲ್ಲ. ಇವೆಲ್ಲ ಸಂಗತಿಗಳನ್ನು ನೋಡಲಾಗಿ ಅನೇಕ ರಾಷ್ಟ್ರಗಳಲ್ಲಿಯ ಅನೇಕರ ಅಭಿಪ್ರಾಯದಂತೆ ಪ್ರಪಂಚದಲ್ಲಿ ಯಾವ ಜಾಗತಿಕ ಸಮಾಜವನ್ನು ಶ್ರೀ ನೆಹರೂರವರೋರ್ವರೇ ನಿರ್ಮಿಸುವ ಪ್ರಯತ್ನವನ್ನು ನಡಿಸಿರುವರು. ಇನ್ನುಳಿದ ಯಾವುದೇ ದೇಶದ ಪ್ರಧಾನ ಮಂತ್ರಿಗಳು ನಿರ್ಮಿಸುವ ಕಲ್ಪನೆಯನ್ನು ಸಹ ಕನಸು ಮನಸಿನಲ್ಲಿ ಮಾಡಿರುವದಿಲ್ಲ. ಜಾಗತಿಕ ಸಮಾಜದ ಪ್ರಜಾತಂತ್ರ ರಾಜ್ಯಕ್ಕೆ ಶ್ರೀ ನೆಹರೂರವರೇ ಪ್ರಧಾನಮಂತ್ರಿಗಳಾಗುವುದಕ್ಕೆ ಅರ್ಹರಿದ್ದಾರೆ. ಅಂಥ ನಮ್ಮ ನೆಹರೂರವರಿಗೆ ದೇವರು ಆಯುರಾರೋಗ್ಯವನ್ನು ದಯಪಾಲಿಸಲಿ.

ಜಯ ಭಾರತ.

ಶ್ರೀಮತಿ ರತ್ನಾ ಶಾಸ್ತ್ರಿ

ಸೂಚನೆ

'ನವಯುಗ'ದ ಚಂದಾ ಹಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇದರ ಯಾವುದೇ ಶಾಖೆಯಲ್ಲಿ ಯಾವುದೊಂದು ತರದ ಮಿರ್ಜೂ ಇಲ್ಲದೆ (ನವಯುಗ ವಾರಪತ್ರಿಕೆಯ ಖಾತೆಗೆ) ಪಾವತಿ ಮಾಡಬಹುದು.

ಮೆನೇಜರ್,

ನವಯುಗ, ಉಡುಪಿ.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

Licensed to Post without Prepayment.

ಕರ್ಮಯೋಗ

ಸಂಪುಟ ೩೬ ಸಂಚಿಕೆ ೨೪

VOL. 36 21—2—1957 NO. 24

ಮತದಾನ

ಕಾಂಗ್ರೆಸು ಸಂಸ್ಥೆಯ ಉಮೇದ್ವಾರರನ್ನೆ ನೀವೆಲ್ಲ ಬೆಂಬಲಿಸಿರಿ!!!

ಜಿಲ್ಲೆಯ ಅಭ್ಯುದಯಕ್ಕಿದು ಅವಶ್ಯ

"ಮಾನ್ಯ ಮತದಾರರೇ, ನಿಮ್ಮ ಅಮೂಲ್ಯವಾದ ಮತವನ್ನು ಕಾಂಗ್ರೆಸಿನ ಉಮೇದ್ವಾರರ ಪರವಾಗಿ ನೀಡಿರಿ; ನುತ್ತ ರಾಷ್ಟ್ರವನ್ನು ಸಮೃದ್ಧಿಯ ಮಾರ್ಗದಲ್ಲಿ ಮುನ್ನಡೆಸಲು ಹೀಗೆ ಸಹಾಯಕರಾಗಿರಿ!"—ಇವೇ ಈ ವಾರದ ಸಂದೇಶ.

ನಮ್ಮ ಜಿಲ್ಲೆಯಲ್ಲಿ ಇಂದಿನಿಂದ ಸುಮಾರು ಮೂರು ವಾರಗಳ ವರೆಗೆ ಚು. ನಾವಣೆಯ ಬಿಸಿ ತೀವ್ರತೆಯ ತುತ್ತ ತುದಿಯನ್ನೇರಿರುವುದು ಸಹಜ. ಏಕೆಂದರೆ ಮತದಾನವು ಪ್ರಾರಂಭವಾಗಲು ಇನ್ನು ವಿಳಂಬವಿಲ್ಲ. ಆದುದರಿಂದ ಪ್ರತಿಯೊಬ್ಬ ಉಮೇದ್ವಾರನ ಪಕ್ಷದಿಂದಲೂ ಮತದಾರರನ್ನು ಒಲಿಸುವ ಚಟುವಟಿಕೆಗಳ ವೇಗವನ್ನು ಕಿಚ್ಚಿಸಲಾಗುತ್ತಿದೆ.

ಜಿಲ್ಲೆಯ ಮತದಾರರು ನಿರ್ವಹಿಸಬೇಕಾದ ಕರ್ತವ್ಯವು ಗಾಢತರವಾದುದಾಗಿದೆ —ಅವರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ತಪ್ಪಬಾರದು. ಇನ್ನು ಐದು ವರ್ಷಗಳ ಅವಧಿಯಲ್ಲಿ ಜಿಲ್ಲೆಯು ಕ್ಷೇಮಾಭ್ಯುದಯಗಳ ಮಾರ್ಗವನ್ನು ಹಿಡಿದು ಸಾಗುವುದೂ ಬಿಡುವುದೂ ಮತದಾರರು ಮತದಾನದ ಸಂದರ್ಭದಲ್ಲಿ ತಮ್ಮ ಮತವನ್ನು ಉಪಯೋಗಿಸುವ ರೀತಿಯನ್ನೆ ಹೊಂದಿಕೊಂಡಿದೆ ಎಂಬುದನ್ನು ಒತ್ತಿ ಹೇಳಿದರೆ ಅಪ್ರಸ್ತುತವಾಗಲಾರದು.

ಜಿಲ್ಲೆಯ ೧೪ ಸ್ಥಾನಗಳಲ್ಲಿ ಎರಡು ಸ್ಥಾನಗಳು ಅವಿರೋಧವಾಗಿ ಕಾಂಗ್ರೆಸಿಗೆ ಸಿಕ್ಕಿವೆ. ಉಳಿದ ೧೨ ಸ್ಥಾನಗಳಲ್ಲಿ ಪ್ರತಿಯೊಂದಕ್ಕೂ ಕಾಂಗ್ರೆಸು ತನ್ನ ಉಮೇದ್ವಾರರನ್ನು ನಿಲ್ಲಿಸಿದೆ. ಕಾಂಗ್ರೆಸಿನ ಉಮೇದ್ವಾರರಿಗೆ ಇದಿರಾಗಿ ಕಮ್ಯುನಿಸ್ಟರೂ, ಪ್ರಜಾಸಮಾಜವಾದಿಗಳೂ, ಜನಸಂಘದವರೂ ಮತ್ತೆ ಕೆಲವರು ಸ್ವತಂತ್ರರೂ ಹೋರಾಟವನ್ನು ಕೊಡುತ್ತಿದ್ದಾರೆ. ಲೋಕಸಭೆಯ ಎರಡೂ ಸ್ಥಾನಗಳಿಗೆ ಕಾಂಗ್ರೆಸು ಉಮೇದ್ವಾರರನ್ನು ನಿಲ್ಲಿಸಿದೆ; ಇವರನ್ನು ಜಿಲ್ಲೆಯ ಉತ್ತರ ವಿಭಾಗದಲ್ಲಿ ಪ್ರಜಾಸಮಾಜವಾದಿಗಳೂ ದಕ್ಷಿಣ ವಿಭಾಗದಲ್ಲಿ ಕಮ್ಯುನಿಸ್ಟರೂ ಮತ್ತೊಬ್ಬ ಸ್ವತಂತ್ರರೂ ಇದಿರಿಸುತ್ತಿದ್ದಾರೆ. ಒಂಭೂ ಕಾಂಗ್ರೆಸಿನ ೧೪ ಮಂದಿಗೆ ಪ್ರತಿಸ್ಪರ್ಧಿಗಳಾಗಿ ಪ್ರಜಾಸಮಾಜವಾದಿ ಪಕ್ಷದಿಂದ ೮ ಕಮ್ಯುನಿಸ್ಟರಿಂದ ೫ ಜನಸಂಘದಿಂದ ೭ ಮತ್ತು ೫ ಸ್ವತಂತ್ರರು ಇದ್ದಾರೆಂದು ಮತದಾರರಿಗೆ ತಿಳಿದಿರಬಹುದು.

ಇವರಲ್ಲಿ ನಾವು ಯಾರನ್ನು ಆರಿಸುವುದು ಧರ್ಮ? ಮೈಸೂರಿನ ವಿಧಾನ ಸಭೆಯಲ್ಲಿ ನಮ್ಮ ಜಿಲ್ಲೆಗೆ ದೊರಕಿಸಿಕೊಳ್ಳಬೇಕಾದ ಸೌಕರ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ಈ ಪ್ರಶ್ನೆಗೆ ಉತ್ತರವನ್ನು ಕೊಡಲು ಪ್ರಯತ್ನಿಸಬೇಕು. ಮೈಸೂರಿನ ವಿಧಾನ ಸಭೆಯಲ್ಲಿ ೨೦೮ ಸ್ಥಾನಗಳಿವೆ. ಇವುಗಳಲ್ಲಿ ಕಾಂಗ್ರೆಸಿನ ಉಮೇದ್ವಾರರು ಎಲ್ಲೆಲ್ಲೂ ಕಂಡು ಬರುವಾಗ ಪ್ರಜಾಸಮಾಜವಾದಿಗಳು ನಿಲ್ಲಿಸಿದ ಉಮೇದ್ವಾರರಿರುವುದು ಕೇವಲ ೬೦ ಕಡೆಯಲ್ಲಿ ಮಾತ್ರ. ಕಮ್ಯುನಿಸ್ಟರ ಹಾಗೂ ಜನಸಂಘದ ಉಮೇದ್ವಾರರು ಮತ್ತೂ ಕಡಿಮೆ ಇದ್ದಾರೆ. ಎಂದರೆ, ಪ್ರಜಾಸಮಾಜವಾದಿಗಳಾಗಲೀ ಇತರ ಪ್ರತಿಪಕ್ಷಗಳ ಉಮೇದ್ವಾರರಾಗಲೀ ಪ್ರಚಂಡ ಯಶಸ್ಸನ್ನು ಸಂಪಾದಿಸಿದರೂ (ಇದು ನಿಜವಾಗಿಯೂ ಆಸಂಭವ!) ಅವರಿಗೆ ಸರಕಾರವನ್ನು ರಚಿಸಿಕೊಳ್ಳುವ ಯೋಗ್ಯತೆ ಬರುವುದಿಲ್ಲ. ಏಕೆಂದರೆ ಅವರಿಗೆ ಶಾಸನ ಸಭೆಯಲ್ಲಿ ನಿಸಂದಿಗ್ಧವಾದ ಬಹುಮತ ಸಿಗುವುದೇ ಇಲ್ಲ.

ಪ್ರತಿ ಪಕ್ಷಗಳು ಆರಿಸಿ ಬಂದ ಬಳಿಕ ಸಂಯುಕ್ತ ರಂಗಗಳನ್ನು ರಚಿಸಿಕೊಂಡು ಸರಕಾರವನ್ನು ನಡೆಸುತ್ತವೆಯೆ? ಇಷ್ಟರ ವರೆಗಿನ ವ್ಯವಹಾರದಿಂದ ಅಂಥ ಸೂಚನೆಯೇನೂ ಇದ್ದಂತಿಲ್ಲ. ಚುನಾವಣೆಯಲ್ಲಿ ಗೆದ್ದರೆ ಆ ಬಳಿಕ ಇಂಥ ಸೂಚನೆ ಮುಂಬರಬಹುದೇನೊ ನಿಜ. ಆದರೆ, ಸಂಯುಕ್ತರಂಗಗಳು ಎಲ್ಲೆಲ್ಲೂ ಕಾಲಾನುಕ್ರಮದಲ್ಲಿ ಉದಯಿಸುವ ಭಿನ್ನಾಭಿಪ್ರಾಯದ ದೆಸೆಯಿಂದ ಕುಸಿದು ಬಿದ್ದುದನ್ನು ಕಳೆದ ಐದು ವರ್ಷಗಳಲ್ಲಿ ನಾವು ಧಾರಾಳವಾಗಿ ನೋಡಿದ್ದೇವೆ. ಆದುದರಿಂದ ಇಂಥದಕ್ಕೆಲ್ಲ ಎಡೆ ಕೊಡುವ ರೀತಿಯಲ್ಲಿ ನಾವು ವರ್ತಿಸಬಾರದು. ನಮಗೊಂದು ಧೃಢ ಸರಕಾರವೇ ಬೇಕು; ಅದು ದಕ್ಷವಾಗಿರಲೂ ಬೇಕೆಂಬುದು ಸತ್ಯ.

ಕಳೆದ ಚುನಾವಣೆಯಲ್ಲಿ ಪ್ರತಿಪಕ್ಷಗಳು ಕಾಂಗ್ರೆಸನ್ನು ಉರುಳಿಸಿಬಿಡುವ ಮತ್ತು ತಾವೇ ಅಧಿಕಾರಕ್ಕೆ ಬಂದು, ಸರಕಾರವನ್ನು ರಚಿಸಿ, ಜನರನ್ನು ಕಷ್ಟಗಳಿಂದ ಪಾರುಮಾಡುವ ಧಾರಾಳ ಭರವಸೆಗಳನ್ನು ಉತ್ಸಾಹದಿಂದ ಕೊಡುತ್ತಿದ್ದುದು ಮತದಾರರಿಗೆ ಮರೆತು ಹೋಗಿರಲಿಕ್ಕಿಲ್ಲ. ಈ ಸಾರಿಯ ಚುನಾವಣೆಯ ಕಾಲದಲ್ಲಿ ಪ್ರತಿಪಕ್ಷಗಳು ಕಾಂಗ್ರೆಸನ್ನು ಅಧಿಕಾರ ಪೀಠದಿಂದ ಕೆಳಗೆ ಇಳಿಸುವ ಮಾತುಗಳನ್ನು ಆಡುವುದಕ್ಕಿಂತ ಹೆಚ್ಚಾಗಿ ಕಾಂಗ್ರೆಸಿನ ಆಡಳಿತವನ್ನು ವಿರೋಧಿ ಪಕ್ಷದ ಸ್ಥಾನದಲ್ಲಿದ್ದುಕೊಂಡು ಟೀಕಿಸಿ, ವಿಮರ್ಶಿಸಿ, ತಿದ್ದುವ ಕರ್ತವ್ಯವನ್ನು ಮಾಡುತ್ತೇವೆಂಬ ಹಾಗೆ ಹೇಳುತ್ತವೆ. ಇದರ ಅರ್ಥವೇನೆಂದರೆ, ತಮ್ಮಿಂದ ಸರಕಾರವನ್ನು ರಚಿಸಲು ಸಾಧ್ಯವಿಲ್ಲ; ನಾವು ಶಾಸನಾಂಗದಲ್ಲಿ ಅಲ್ಪಸಂಖ್ಯಾಕರಾಗಿಯೇ ಉಳಿದು ಸರಕಾರಕ್ಕೆ ಏನಾದರೂ ಸಲಹೆ ಸೂಚನೆಗಳನ್ನು ಕೊಟ್ಟು, ಟೀಕೆ ಮತ್ತು ವಿಮರ್ಶೆಯ ಅಸ್ತ್ರಗಳನ್ನು ಪ್ರಯೋಗಿಸಿ, ಅದು ತಪ್ಪಿದಾಗ ಸರಿದಾರಿಗೆ ತರುತ್ತೇವೆ ಎಂದು ಅವು ಬಹಿರಂಗವಾಗಿ ಒಪ್ಪಿಕೊಳ್ಳುತ್ತವೆ. ಪ್ರಬಲ ಪ್ರತಿಪಕ್ಷವಿಲ್ಲದೆ ಹೋದರೆ ಪ್ರಜಾಪ್ರಭುತ್ವ ಸಧೃಢತೆಗೆ ಕೋಟೆಕಿಲ್ಲ ಎನ್ನುವುದೂ ಅವುಗಳ ಪ್ರಚಾರ ತಂತ್ರ.

ಮತದಾರರು ಪ್ರತಿಪಕ್ಷಗಳ ಈ ನಿಲುಮೆಯನ್ನು ನೆಚ್ಚಿಕೊಳ್ಳಬೇಕೆ? ಇವತ್ತಿನ ದಿನವಲ್ಲಿ ಈಗಿನ ವಾತಾವರಣದಲ್ಲಿ ಸ್ವತಿಪಕ್ಷಗಳ ಈ ನಿಲುಮೆಯು ಮತದಾರರಿಗೆ ಸ್ವೀಕಾರಾರ್ಹವಾಗಲಾರದು. ಬಡತನದ ರೋಗದಿಂದ ಬಳಲುವವನ ಪಕ್ಕದಲ್ಲಿ ನಿಂತವನು ಸದ್ಯ ಉಪಚರಿಸುತ್ತಿರುವ ವೈದ್ಯನಿಂದ ಪ್ರಯೋಜನವಿಲ್ಲ; ಬೇರೊಬ್ಬನನ್ನು ತರಿಸಬೇಕು ಎನ್ನುವ ವಿಮರ್ಶಾತ್ಮಕವಾದ ಸೂಚನೆಯನ್ನು ಮಾತ್ರ ಕೊಟ್ಟರೆ ಸಾಲದು; ಬೇರೊಬ್ಬ ವೈದ್ಯನನ್ನು ಅಲ್ಲಿಗೆ ತರಿಸುವ ಯೋಗ್ಯತೆಯನ್ನು ತೋರಿದವನೂ ಆಗಿರಬೇಕು; ತಂದೂ ತೋರಿಸಬೇಕು. ಇದು ಸಾಧ್ಯವಿಲ್ಲವಾದರೆ, ಈ ವೈದ್ಯನಿಂದ ಪ್ರಯೋಜನವಾಗಲಾರದೆಂದು ಹೇಳಿದ್ದರಿಂದೇನು ಲಾಭ? ರೋಗ ನಿವಾರಣೆಗೆ ಇದೆಂದೂ ಸಹಾಯವಾಗಲಾರದು ಏಕೆಂದರೆ, ಈ ವೈದ್ಯನಿಗಿಂತ ಸಮರ್ಥನಾದ ಬೇರೆ ವೈದ್ಯನೇನೂ ಬರುವುದಿಲ್ಲ, ಈ ವೈದ್ಯನಲ್ಲಿ ರೋಗಿಗಿದ್ದ ವಿಶ್ವಾಸವು ನಿತ್ಯ ಟೀಕೆಯಿಂದ ಹಾರಿಹೋಗುತ್ತದೆ. ಹೀಗೆ ಯೋಗ್ಯತಾ ಹೀನರು ಮಾಡುವ ಟೀಕೆಯಲ್ಲಿ ಲಾಭಕ್ಕಿಂತ ನಷ್ಟವೇ ಹೆಚ್ಚು.

ಇಂದಿನ ನಮ್ಮ ಪ್ರತಿಪಕ್ಷಗಳು ಹೀಗೆ ಯೋಗ್ಯತಾ ಹೀನವಾಗಿರುತ್ತವೆ. ಬಡತನದ ರೋಗನಿವಾರಣೆಗೆ ವೈದ್ಯಸ್ಥಾನದಲ್ಲಿ ಕಾಂಗ್ರೆಸು ಸಂಸ್ಥೆಯಿದ್ದು ತನ್ನಿಂದ ಸಾಧ್ಯವಾದ ಚಿಕಿತ್ಸೆಯನ್ನು ನಡೆಸುತ್ತಿದೆ. ಪ್ರತಿಪಕ್ಷಗಳು ಆಕ್ಯಸಕ್ಯದಲ್ಲಿ ನಿಂತಿರುವ ಜನಸಾಧಾರಣರಂತಿದ್ದು ಈ ವೈದ್ಯನು ಪ್ರಯೋಜನವಿಲ್ಲ ಎನ್ನುತ್ತವೆ. ಆದರೆ ಸ್ವಂತ ಸರಕಾರವನ್ನು ರಚಿಸುವ ಯೋಗ್ಯತೆ ಈ ಪಕ್ಷಗಳಲ್ಲಿ ಯಾವುದಕ್ಕೂ ಇಲ್ಲ! ಹಾಗಿರುವಾಗ ಟೀಕೆಯು ಅಪಪ್ರಚಾರವೆಂದೇ ಪ್ರಸಿದ್ಧಿ ಹೊಂದಬಲ್ಲುದು; ಅದು ಸಕಾಲಿಕವೂ ಸೂಕ್ತವೂ ಆಗಲಾರದು. ರೋಗಕ್ಕೆ ಚಿಕಿತ್ಸೆ ನಡೆಸುವ ಬದಲಿಗೆ ನಮಗೊಬ್ಬ ವೈದ್ಯರಂತೂ ಬೇಕು—ರಾಷ್ಟ್ರವು ಸರಕಾರವಿಲ್ಲದೆ ಬಾಳ

(೧೨ನೇ ಪುಟ ನೋಡಿರಿ)

SEASON DEPOSITS

Are now accepted at the Head Office and branches of the Bank of a sum of Rs. 1000 and in multiples thereof, for periods varying between 2 to 6 months at 4% interest per annum. No such deposit will run beyond 31-7-1957.

Special rate will be allowed for Single Deposits of Rupees 25,000/- and above.

THE VIJAYA BANK LTD.

H. O. MANGALORE.

Total Resources of the Bank as on 31-12-1956. | **EXCEED RUPEES ONE CRORE**

ದಯಮಾಡಿ ಕಾಂಗೆಸಿಗೇ ಓಟು ಕೊಡಿರಿ

ಅಣುಯುಗ

ವಿಪನ್ನಾವಸ್ಥೆಯಿಂದ ರಕ್ಷಣೆ ನೀಡಲು ಭಾರತೀಯ ಸಂಸ್ಕೃತಿ ಮಾತ್ರವೇ ಶಕ್ತ

ಇಂದು ಜಗತ್ತು ದ್ವೇಷ ಭಾವನೆಗಳ ಕೇಂದ್ರವಾಗಿದೆ. ಪರಸ್ಪರ ವೈಮನಸ್ಸು ತನ್ನ ಆಟವನ್ನು ಆಡುತ್ತಾ ಇದೆ. ಈ ಪರಸ್ಪರ ತಿಕ್ಕಾಟಕ್ಕೆ ವಿಜ್ಞಾನವು ಕಾರಣವೆಂದು ಕೆಲವರು ಹೇಳುತ್ತಾರೆ. ಮತಗಳ ಗಲಿಬಿಲಿ ಎಂದೂ ಸಾಮ್ರಾಜ್ಯ ಶಾಹಿತ್ವವೆಂದೂ ಆಡುವವರಿಗೆ ಕೊರತೆಯಿಲ್ಲ. ಆದಾವ ಕಾರಣದಿಂದಲೇ ಆಗಲಿ, ಜಗತ್ತು—ಆದರಲ್ಲಿನ ಪ್ರತಿಯೊಬ್ಬನೂ—ಇಂದು ಸುಭಿಕ್ಷೆಯನ್ನು, ಪ್ರಶಾಂತಿಯನ್ನು ಅಪೇಕ್ಷಿಸುತ್ತಿದೆ. ಇದರಲ್ಲಿ ಇಬ್ಬಗೆ ಇರುವುದು ಆಸಾಧ್ಯ.

ಇಂದು ಜಗತ್ತಿನಲ್ಲಿ ಬೆಳೆದು ಬಂದ ದ್ವೇಷ ಶಾಂತಿಯನ್ನು ನಶಿಸಿಸಿ ತನ್ನ ಪ್ರಾಗಲ್ಭ್ಯವನ್ನು ವಿಜ್ಞಾನದ ದ್ವಾರಾ ಎರಡು ಮಹಾ ಯುದ್ಧಗಳಿಂದ ಲೋಕಕ್ಕೆ ತೋರಿಸಿ ಕೊಟ್ಟಿದೆ. ಒಬ್ಬನು ಜಗತ್ತಿನಲ್ಲಿ ಶಾಂತಿ ಎಂದು ನೆಲೆಗೊಳ್ಳುವುದು ಎಂದು ಕೇಳಿದ ಪ್ರಶ್ನೆಗೆ ಸಂಪಾದಕರೊಬ್ಬರು, ನ್ಯೂಯೋರ್ಕ್, ಲಂಡನ್, ಪ್ಯಾರಿಸ್ ಮತ್ತು ನೋಸ್ಕೋಗಳ ಮೇಲೆ ಏಕ ಕಾಲದಲ್ಲಿ ಅಣುಬಾಂಬು ಬಿದ್ದಾಗ ಎಂದು ಉತ್ತರಿಸಿದರು. ಎಂದರೆ, ಇಂದಿನ ಯುಗವನ್ನು —ಕಾಲವನ್ನು—ವಿಜ್ಞಾನದ ಯುಗವೆಂದೇ ಕರೆಯುವುದಾದರೂ ಅಭಿಜ್ಞಾನದ ಪ್ರಗತಿಯಲ್ಲಿ ನಮಗೆ ಗೋಚರವಾಗುವುದು ಅಣು ಶಕ್ತಿಯ ಶೋಧನೆ. ಅಣುವಿನಿಂದ ಆಗುವ, ಆಗ ಬಹುದಾದ ಕಾರ್ಯಗಳೇನು ಎಂಬುದರ ಸಂಶೋಧನೆಯೇ ಇಂದು ಜಗತ್ತಿನ ಸಕಲ ವಿಜ್ಞಾನಿಗಳ ತಲೆ ಸಿಡಿತಕ್ಕೆ ಬೀಜ ರೂಪವಾಗಿದೆ ಎಂದರೆ ಎಂದಿಗೂ ಅತಿಶಯೋಕ್ತಿಯಾಗಲಾರದು.

ನಮ್ಮ ಸುತ್ತು ವಾತಾವರಣ ಕಲುಷಿತವಾಗಿರುವಾಗ, ಪ್ರತಿಕ್ಷಣ ಕ್ಷಣದಲ್ಲೂ ಘಟಿಸಬಹುದಾದ ಘಟನೆಗಳನ್ನು ಊಹಿಸುವಾಗ, ನಮ್ಮ ಹೃದಯಸ್ತಂಭಿಸತೊಡಗುತ್ತವೆ. ಆದರಲ್ಲೂ ಅಣುಯುಗವೆನ್ನುವ ಈ ಕಾಲದಲ್ಲಿ ನಡೆದ ಮಹಾ ನಾಶಕ ಘಟನೆಗಳು ನಮಗೆ ಇನ್ನು ಅಂಕಿತ ಕಾರ್ಯ ಬೇಡವೆಂದು ಆಕ್ತವಾಗಿ ದೊರೆಯುತ್ತಿವೆ. ಹೀಗೆ ಈ ಕಾಲದಲ್ಲಿ ಯೋಗ್ಯ ಮಾರ್ಗ ದರ್ಶನವಿಲ್ಲದೆ ಜೋದರೆ, ಜಗತ್ತು ನಾಶವಾಗದೆ ಹೇಗೆ ಉಳಿದೀತು? ಆದುದರಿಂದ ಈ ಗುಣ ಕಾಲದಲ್ಲಿ—ಅಣುಯುಗದಲ್ಲಿ—ಲೋಕಕ್ಕೆನೇ ಮಾರ್ಗದರ್ಶನ ಮಾಡುವ ಒಂದು ವಿಧಾನವಿದೆಯೆ? ಇದ್ದರೆ, ಆ ವಿಧಾನವು ಅಣುವಿನೊಂದಿಗೆ ಮಲ್ಲ ಯುದ್ಧಕ್ಕೆ ನಿಂತು ಗೆದ್ದು ತಲೆಯೆತ್ತಿ ನಿಂತೀತೆ?

ಹೌದು. ಈ ಬೃಹದಾಕಾರದ ಪ್ರಾಕಾರದಂತಹ ಸಮಸ್ಯೆಗೆ—ಪ್ರಶ್ನೆಗೆ—ಉತ್ತರರೂಪವಾಗಿ ನೊಂದ ಹೃದಯದ, ತನ್ನ ನೆರೆಹೊರೆಯವರ ಅನ್ಯಾಯದಿಂದ ಪರಿತಪ್ತವಾದ ಹೃದಯದ ಭಾರತೀಯ ಸಂಸ್ಕೃತಿಯು ನಾನಿದ್ದೇನೆ ಎಂದು ಕೊರಳ ನೆರೆ ಬಿಗಿದು ಬರಲು ಪಿಲ್ಲನೆ ಕ್ಷೀಣ ಧ್ವನಿಯಿಂದ ಉಸುರ ಹತ್ತಿದೆ.

ಸಂಸ್ಕೃತಿಯೆಂದರೇನು? ಸಾಮಾನ್ಯವಾಗಿ ಯಾವನೊಬ್ಬ ಮಹಾ ವಿದ್ವಾಂಸನಾದರೂ ಈ ಪದಕ್ಕೆ ಸರಿಯಾದ ಅರ್ಥ ಬರೆದಿಲ್ಲ. ಒಟ್ಟಿಗೆ ಸ್ಥೂಲವಾಗಿ, ದೋಷಗಳನ್ನು ಹೊಡೆದೋಡಿಸಿ ಗುಣಗಳಿಗೆ ಅಧಾರ ಭೂತವಾದುದು ಸಂಸ್ಕೃತಿಯೆನ್ನಬಹುದು. ಮಾನವನ ಬಾಳುವೆಯನ್ನು ಉತ್ತಮ ಮಟ್ಟದಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಸಾಧನೀಭೂತವಾಗಿರುವುದು ಸಂಸ್ಕೃತಿ. ಇದು ನಾನಾ ಮುಖವಾಗಿ ಹರಿದಿದೆ—ಹರಿಯುತ್ತಿದೆ.

ಅಣುಯುಗದಲ್ಲಿ ಭಾರತೀಯ ಸಂಸ್ಕೃತಿಯ ಅಸ್ತಿತ್ವದ ಕುರಿತು ನಿಸ್ಸಂಶೆ ಮಾಡುವುದಕ್ಕೆ ಮೊದಲು, ಭಾರತೀಯ ಸಂಸ್ಕೃತಿಯ ಇತಿವೃತ್ತವನ್ನು, ಅದರ ಜರಿತ್ರೆಯನ್ನು ಆಲ್ಪಸ್ವಲ್ಪಗಾದರೂ ತಿಳಿಯುವುದು ಅತ್ಯಗತ್ಯ.

ಭಾರತೀಯ ಸಂಸ್ಕೃತಿಯು ಸುಮಾರು ಹತ್ತು ಸಾವಿರ ವರ್ಷಗಳ ಪ್ರಾಚೀನ ಇತಿಹಾಸವುಳ್ಳದು. ಜಗತ್ತಿನ ಜನರು ಅಂಧಕಾರದಲ್ಲಿ ಹೊರಳಾಡುತಿದ್ದಾಗ ಅವರ ಕೈಹಿಡಿದೆತ್ತಿ, 'ಇದು ಜೀವಪಥ'ವೆಂಬ ಪಲ್ಲವಿಯನ್ನು ನುಡಿಸಿದ ಕೀರ್ತಿ ಭಾರತದ್ದು. ಹರಪ್ಪ, ಮೊಹೆಂಜದಾರೋಗಳ ದ್ರಾವಿಡ ಸಂಸ್ಕೃತಿಯು ಮುಂದಕ್ಕೆ ಭಾರತವನ್ನು ಸೇರಿದ ಆರ್ಯರ ಸಂಸ್ಕೃತಿಯೊಂದಿಗೆ ಸಂಮಿಲನಗೊಂಡು ಯಥಾಯೋಗ್ಯವಾಗಿ ಬೆಳೆದು ಬಂದ ಹಿರಿಯ ಉದಾತ್ತ ಚರಿತ್ರೆ ಭಾರತೀಯ ಸಂಸ್ಕೃತಿಯದ್ದು. ಆಪೌರುಷೇಯವೆನಿಸಿಕೊಂಡ ವೇದದ ಮೊದಲ್ಗೊಂಡು ಇಂದಿನ ದಿನಚರಿಯೂ ಕೂಡಾ ಭಾರತದಲ್ಲಿ ಪ್ರಾಚೀನ ಸಂಸ್ಕೃತಿಯ ಪ್ರತೀಕವಾಗಿ ನೆಲೆಗೊಂಡಿದೆ. ವಿಶ್ವೇಶ್ವರನಿಂದ ರಾಮೇಶ್ವರನವರೆಗೆ, ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ಬಿಂದು ಮಾಧವನಿಂದ ಸೇತುಮಾಧವನವರೆಗೆ, ಪೂರ್ವದಿಂದ ಪಶ್ಚಿಮ ಸಮುದ್ರಗಳವರೆಗೆ, ಸಿಂಧೂರವಿನಿಂದ ಬ್ರಹ್ಮಪುತ್ರಗಳವರೆಗೆ ಭಾರತವು ಹೇಗೆ ಅಖಂಡವೋ, ಅದೇ ರೀತಿ ಭಾರತದ ಸಂಸ್ಕೃತಿಯೂ ಅಭೇದ್ಯ, ಅಚಲ.

ಭಾರತವು ಅನಾದಿಕಾಲದಿಂದಲೂ ಇತರ ದೇಶೀಯರ ಧಾಳಿಗೆ ಕುತ್ತಾಗಿದೆ. ಆರ್ಯ ದ್ರಾವಿಡರ ಸಂಮಿಲನದಿಂದ ಹೊನ್ನು ಕಮ್ಮಿತ್ತಾದಂತಾದ ಭಾರತೀಯ ಸಂಸ್ಕೃತಿ ಅನಂತರಿಬ್ಬರ ಗ್ರಂಥಾದಿಗಳಿಂದ ಪ್ರಕಟಗೊಂಡಿತು. ಆರ್ಯರು, ಪೊಗಲರು, ಕೈಸ್ತರೆಂಬ ಯಾವ ಭೇದಭಾವನೆಯನ್ನೂ ಗಮನಿಸದೆ, ಅವರೆಲ್ಲರನ್ನೂ ಸ್ವಾಗತಿಸಿದ ಭಾರತೀಯ ಸಂಸ್ಕೃತಿ ಅವರೆಲ್ಲರ ಸಂಸ್ಕೃತಿಯಿಂದ ತನ್ನ ಇರವಿಕೆಗೆ ಧಕ್ಕೆ ತಗಲುವಾಗಲೂ ಯೋಗ್ಯರೀತಿಯಿಂದ ನಡೆದುಕೊಂಡು ಬಾದಿದೆ. ಇಂದಿಗೂ ಅದು ಜೀವಂತವಾಗಿಯೆ ಇದೆ. ಭಾರತದಲ್ಲೇ ಆದಿಕಾಲದ ರಾಮಾಯಣ, ಮಹಾಭಾರತ, ಉಪನಿಷತ್ತುಗಳು, ಬ್ರಾಹ್ಮಣಗಳು, ಆರಣ್ಯಕಗಳು, ಸ್ಮೃತಿಸೂತ್ರಗಳು ಮಾನವನ ಜೀವನವು ಸುಖಮಯವಾಗಿ ಸಾಗಬೇಕಾದರೆ ನೀಕಾಗುವ ಸಾಧನಗಳನ್ನು ಉಪದೇಶಿಸುತ್ತವೆ. ಯಾವುದೇ ಗ್ರಂಥವಿರಲಿ, ಅದರಲ್ಲಿ ಭಾರತದ ನೀತಿ ಜೋಧೆಯು ಇದ್ದೇ ಇದೆ. ಇವುಗಳಿಂದಾಗಿ ಭಾರತದ ಸಂಸ್ಕೃತಿಗೂ ಪಾಶ್ಚಾತ್ಯ ಸಂಸ್ಕೃತಿಗೂ ಇರುವ ಮುಖ್ಯ ಒಂದು ವ್ಯತ್ಯಾಸವನ್ನು ತಿಳಿಯಬಹುದು. ಭಾರತವು ಪಾರಮಾರ್ಥಿಕ ಜ್ಞಾನಕ್ಕೆ, ಕೈಯೆಗೆ ಪ್ರಾಧಾನ್ಯವಿತ್ತಿದ್ದರೆ, ಪಾಶ್ಚಾತ್ಯರಾಷ್ಟ್ರಗಳು ಐಹಿಕ ವಿಜಾರಗಳಿಗೆ ಮಹತ್ತ್ವವಿತ್ತಿವೆ. ಇಹಪರಗಳಲ್ಲಿ ಪರನೇ ಉತ್ಕೃಷ್ಟವಾದುದು, ಆದುದರಿಂದ ನಾವು ಕ್ಷಣಿಕ ಲಾಭಕ್ಕಾಗಿ ಕ್ಷುಲ್ಲಕ್ಕಾಗಿ ಕಾರ್ಯಮಾಡಬಾರದು. ಪರದಲ್ಲಿ ಮೆಚ್ಚುಗೆ ಯಾಗ್ಯ ವಂಥವುಗಳನ್ನೇ ಆಚರಿಸಬೇಕು ಎಂದು ಭಾರತೀಯ ಸಂಸ್ಕೃತಿಯು ಎಂದೋ ಜಗತ್ತಿಗೆ ಸಾರಿದೆ

"ಈಶಾವಾಸ್ಯ ಮಿದಂ ಸರ್ವಂ |
ಯತ್ಕಿಂಚ ಜಗತ್ಯಾಂ ಜಗತ್ |
ತೇನತ್ಯಕ್ತೇನ ಭುಂಜೀಥಾಃ |
ಮಾಗೃಧಃ ಕಸ್ಯಸ್ವಿದ್ಧನಮ್ ||"

ಎಂಬ ಉಉನಿಷದ್ವಾಕ್ಯ ಜಗತ್ತಿಗೆ ಸುಮಾರು ನಾಲ್ಕು ಸಾವಿರ ವರ್ಷಗಳ ಹಿಂದೆ ನೀತಿ ಹೇಳಿದೆ.

"ಕರ್ಮಣ್ಯೇವಾಧಿಕಾರಸ್ತೇ |
ಮಾಫಲೇಷುಕದಾಚನ"

ಎಂಬುದಾಗಿ ಭಗವದ್ಗೀತೆಯಲ್ಲಿ ಇಂದಿಗೂ ಪರಗಳ ನಿೂಲಿತ ಸಖ್ಯಕ್ಕೆ ಕರ್ಮಯೋಗವೇ ಮುಕ್ತದ್ವಾರವೆಂದು ಘೋಷಿಸಿದೆ. ಐದು ಸಾವಿರ ವರ್ಷಗಳಿಗೆ ಪೂರ್ವದಲ್ಲಿ!

ಜೀವನ ನಾಶ—ಆತ್ಮನಾಶ ಎಂಬುದನ್ನು ಇದೇ ಗೀತೆಯಲ್ಲಿ ಸ್ಪಷ್ಟರೂಪ್ಯವಾಗಿ ಉಲ್ಲೇಖಿಸಿದೆ —

"ಸಂಗಾತ್ ಸಂಜಾಯತೇ ಕಾಮಃ |
ಕಾಮಾತ್ಕ್ರೋಧೋಭಿ ಜಾಯತೇ ||
ಕ್ರೋಧಾತ್ ಭವತಿ ಸಮ್ಮೋಹಃ |
ಸಮ್ಮೋಹಾತ್ ಸ್ಮೃತಿ ವಿಭ್ರಮಃ ||
ಸ್ಮೃತಿ ಭ್ರಂಶಾತ್ ಬುದ್ಧಿನಾಶೋ |
ಬುದ್ಧಿನಾಶಾತ್ ಪ್ರಣಶ್ಯತಿ ||"

ಹೀಗಿರುವಾಗ, ಯಾವಾಗ ಮನುಷ್ಯನ ತನ್ನ ಮನಸ್ಸನ್ನು ಯಮನಿಯಮ ಮಾಡಿಗಳಿಂದ ಬಿಗಿ ಪಿಡಿಯುವ ಮಲ್ಲಜನಂತೆ ಆವೇಕ್ಷಗಳಿಗೆ ಮನಸೋಯಿತ್ತಾನೋ ಅಂದು ಆತನ ಆತ್ಮವು ನಾಶವಾನಂತೆಯೇ ಇದೀಗ ಅಣುಯುಗದಲ್ಲಿ ಐಹಿಕ ಸುಖವನ್ನೇ ಎಮದು ನೋಡುತ್ತಿರುವ ಪಾಶ್ಚಾತ್ಯರ ಪರಿಸ್ಥಿತಿ!

ಧರ್ಮ, ಆರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥ ಚತುಷ್ಟಯವನ್ನು ಬೋಧಿಸಿ ಶಾಂತಿಯ ನೆಲೆವೀಡನ್ನು, ತೃಪ್ತಿಯ ತವರ್ಮನೆಯನ್ನು ಇತಿಹಾಸದ ಇಕ್ಕೆವನೆಯನ್ನು ಸ್ಥಾಪಿಸಿದ ಕೀರ್ತಿ ಭಾರತೀಯ ಸಂಸ್ಕೃತಿಯದ್ದು.

"ಉದ್ಧರೇದಾತ್ಮನಾತ್ಮಾನಂ ನಾತ್ಮಾನ ಮವಸಾದಯೇತ್" ಎಂಬ ಉಕ್ತಿ ಭಾರತೀಯರಿಗೆ ಹಿಂದೆಯೇ ತಿಳಿದಿತ್ತು. ಕಷ್ಟವನ್ನು ನೋಡಿತ್ತಿಕೊಳ್ಳಲೂ, ಕೆಳಗಿಳಿಸಿಕೊಳ್ಳಲೂ ತಾನೇ ಕಾರಣನೆಂದೂ, ತಪ್ಪು, ಬಂದು ಎಡರೂ ಆತ್ಮನೇ ಎಂದು ತಿಳಿದಿದ್ದರೂ ಸೀರೆ ಬುಗ್ಗೆಯಂತೆ ಕ್ಷಣಿಕವಾದ ಪಾರಿಜಾತ ಕುಸುಮದಂತೆ ಅಲ್ಪಕಾಲ ಮಧುಭರಿತವಾದ ಈ ಐಹಿಕ ಜೀವನಕ್ಕಿಂತ ಸತ್ಯವೂ ಸುಂದರವೂ ಮಂಗಳವೂ

(ಇದನೇ ಪುಟನೋಡಿರಿ)

ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಿಸೆನೋಡುವುದು
ಪ್ರತಿಯೊಬ್ಬರ ನೆಚ್ಚಿನ ಆಸೆ

* *

ಮೈಸೂರು

ಸ್ಯಾಂಡಲ್ ಸಾಬೂನು

ನಿಮ್ಮ ಸೊಬಗನ್ನು ಕಾಪಾಡಲು ವೃದ್ಧಿಮಾಡಲು
ಒಂದು ನಿಶ್ಚಿತ ಸಾಧನ

ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ ಇದರಲ್ಲಿ ಸೇರಿಸಲಾಗಿದೆ.

ಒಮ್ಮೆ ಉಪಯೋಗಿಸಿ ನೋಡಿ

ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ದೊರೆಯುತ್ತದೆ

* *

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು

ನಂಬರು: ಐ. ಎಸ್. ಟಿ. ಎಂ. ಎ.

ಉಡುಪಿ ಮತದಾರ ಕ್ಷೇತ್ರದ ಲೋಕಸಭಾ ಉಮೇದ್ವಾರಿ ಯು. ಯಸ್. ಮಲ್ಯ

ಬಾಪುವಿನ ಭಾರತ

ರಾಮರಾಜ್ಯದ ಕೇಂದ್ರ—ಸೇವಾಗ್ರಾಮ

"ಭಾರತದ ರಾಜಧಾನಿಯು ನವ ದೆಹಲಿಯಾಗಿದ್ದರೆ ಬಾಪು ಕಂಡ ಭಾರತದ ಅನಧಿಕೃತ ರಾಜಧಾನಿಯು ಸೇವಾಗ್ರಾಮವೆಂಬ ಒಂದು ಹಳ್ಳಿ" ಹೌದು. ಈ ಮಾತಿನಲ್ಲಿ ಎಳ್ಳಷ್ಟೂ ಉತ್ಪ್ರೇಕ್ಷೆಯಿಲ್ಲ. ಕ್ರಿ.ಶ. ೧೯೩೫ರಿಂದಲೇ ಬಾಪೂಜಿ ಸೇವಾಗ್ರಾಮವನ್ನೇ ತನ್ನ ಬಹುಮುಖ ಕಾರ್ಯಕಲಾಪ ಮತ್ತಿನ್ನಿತರ ಚಟುವಟಿಕೆಗಳ ಕೇಂದ್ರವನ್ನಾಗಿಸಿಕೊಂಡಿದ್ದರು. ನಮ್ಮ ದೇಶಕ್ಕೆ ಸ್ವಾತಂತ್ರ್ಯವು ಲಭಿಸುವುದರ ಮೊದಲು ತಾನು ಸಬರಮತಿ ಶಪ್ರಮಕ್ಕೆ ಹಿಂತಿರುಗಿ ಬರಲಾರೆನೆಂಬ ಭೀಷಣವಾದ ಪಣವನ್ನತೊಟ್ಟ ಗಾಂಧೀಜಿಯವರಿಗೆ ಅವರ ಪಟ್ಟ ಶಿಷ್ಯೆ ಮನೂ ಬೆನ್ "ಶೇಗಾವ್" ಎಂಬ ಒಂದು ಚಿಕ್ಕ ಹಳ್ಳಿಯಲ್ಲಿ ಒಂದು ಪರ್ಣಕುಟೀರವನ್ನು ರಚಿಸಿಕೊಟ್ಟರು. ಅಹಿಂಸೆಯ ಅವತಾರ ಮಹಾತ್ಮಾ ಗಾಂಧೀಜಿಯವರ ಈ ಸತ್ಯ ಶೋಧನೆಯ ಪ್ರಯೋಗ ಶಾಲೆಯೇ ಇಂದು ಪ್ರಪಂಚ ಪ್ರಖ್ಯಾತವಾದ 'ಸೇವಾಗ್ರಾಮ'ವೆಂಬ ಈ ಸ್ವಪ್ನ ನಗರದಿಂದ ಸೇವಾಗ್ರಾಮವು ಅನತಿದೂರದಲ್ಲಿದ್ದು ತನ್ನ ಹೆಸರಿನ ಔಚಿತ್ಯವನ್ನು ಸಾರ್ಥಕವನ್ನಿಸಿದೆ. ಸೇವೆಯು ಗ್ರಾಮ ಎಂಬುದೇ ಸೇವಾಗ್ರಾಮವೆಂಬುದರ ಅರ್ಥವಾಗಿದೆ.

ಮಹಾತ್ಮಾ ಗಾಂಧೀಜಿಯವರ ಅನೇಕ ಸಮಸ್ಯೆಗಳಿಗೆ ಉಚಿತವಾದ ಉತ್ತರಗಳು ದೊರಕಿದ್ದು ಈ ಸೇವಾಗ್ರಾಮದಲ್ಲಿಯೇ ಎಂಬುದನ್ನು ಮರೆಯುವಂತಿಲ್ಲ. ಗಾಂಧೀಜಿಯವರ ಸಬರಮತಿಯ ದಂತೆ ಅವರ ನಿರ್ದೇಶನದಲ್ಲಿ ಅಸಂಖ್ಯಾತ ಸಂಘ ಸಂಸ್ಥೆಗಳು ಇದೇ ಸ್ಥಳದಲ್ಲಿ ಹುಟ್ಟಿಕೊಂಡರೂ ಇಂದು ಅವುಗಳೆಲ್ಲಾ ಬೇರೆಡೆಗೆ ಸ್ಥಳಾಂತರಿಸಲ್ಪಟ್ಟಿವೆ. ಆದರೆ ಹಿಂದು ಸ್ಥಾನೀ ತಾಲೀಮು ಸಂಘ (All India Educational Board) ವೆಂದು ಕರೆಯಲ್ಪಡುವ "ನಯೀತಾಲೀಮು" ಎಂಬ ಸಂಸ್ಥೆಯು ಮಾತ್ರ ಸರ್ವೋದಯ ಸಮಾಜದ ಹುಟ್ಟೂರಾಗಿ ಸೇವಾಗ್ರಾಮದಲ್ಲಿಯೇ ತನ್ನ ಕಾರ್ಯಕಲಾಪ ಹಾಗೂ ನವೀನ ಪ್ರಯೋಗಗಳಿಂದ ಜಗತ್ತಿನ ಶಿಕ್ಷಣ ವಿಜ್ಞಾನಿಗಳನ್ನು ತನ್ನ ಕಡೆಗೆ ಆಕರ್ಷಿಸುತ್ತಿದೆ. ನಮ್ಮ ದೇಶದ ಶೈಕ್ಷಣಿಕ ಕ್ಷೇತ್ರದಲ್ಲಿ ಬುನಾದಿ ವೀತ್ಯಾ ಶಿಕ್ಷಣ ಕ್ರಮವೊಂದು ಹೊಸ ಕ್ರಾಂತಿ. ಈ ಬುನಾದಿ ಶಿಕ್ಷಣಕ್ರಮವು ಹಾಗೂ ಸರ್ವೋದಯ ತತ್ವ ಪ್ರತಿಪಾದನೆಯ ಏಕಮಾತ್ರಕೇಂದ್ರ ಪ್ರಾತಿನಿಧಿಕವಂಶ್ಯೆಯೇ ಸೇವಾಗ್ರಾಮದ ಈ 'ನಯೀ ತಾಲೀಮು' ಸಂಸ್ಥೆ! ಜೀವನದಲ್ಲಿ ಸಹಕಾರೀ ಸ್ವಾವಲಂಬೀ ಸಮಾಜವನ್ನು ನಿರ್ಮಿಸುವುದೇ ಇದರ ಮುಖ್ಯ ಗುರಿ.

ಸೇವಾ ಗ್ರಾಮದ ಸಮಾಜವು ಭಿನ್ನ ಶಿಕ್ಷಾರ್ಥಿಗಳಿಂದ ಕೂಡಿದೆ. ಇವರಲ್ಲಿ ಭಾರತದ ನಾನಾ ಪ್ರಾಂತ್ಯಗಳಿಂದ ವಿವಿಧ ಮೂಲೆಗಳಿಂದ ಭಿನ್ನ ಭಿನ್ನ ಮತದ, ಬೇರೆ ಬೇರೆ ಜಾತಿಯ ಮಹಿಳೆಯರೂ ಪುರುಷರೂ ಇದ್ದಾರೆ. ಇವರು ರೋಗಿಗಳ ಶುಶ್ರೂಷೆಯಿಂದ ಗದ್ದೆಗಳಲ್ಲಿ ಗೇಯುವ ವರೆಗಿನ ಎಲ್ಲ ದುಡಿಮೆಗಳಲ್ಲೂ ಭಾಗವಹಿಸುತ್ತಾರೆ. ಊಟ ಉಪಚಾರಗಳಂತೂ ಸಾಮೂಹಿಕ ಭೋಜನ ಶಾಲೆಯಲ್ಲಿಯೇ ಎಂದು ಬೇರೆ ಹೇಳಬೇಕಾಗಿಲ್ಲವಷ್ಟೆ. ಸೇವಾ ಗ್ರಾಮದ ಈ ಆದರ್ಶ ಸಮಾಜವು ಸಾಹಿತ್ಯ, ಸಂಗೀತ, ನಾಟಕ ಮೊದಲಾದ ಲಲಿತ ಕಲೆಗಳನ್ನೂ ಆಟೋಟಗಳನ್ನೂ ಕಡೆಗಣಿಸಿಲ್ಲ. ಜೀವನದಲ್ಲಿ ಇವುಗಳ ಸ್ಥಾನವನ್ನರಿತೇ ಇವಕ್ಕೆ ಪ್ರಾಶಸ್ತ್ಯವನ್ನೀಯಲಾಗಿದೆ. ವಿವಿಧ ದಿನಾಚರಣೆಗಳು, ಹಬ್ಬ ಹರಿದಿನಗಳು, ಜಯಂತ್ಯುತ್ಸವಗಳನ್ನು ಜರಗಿಸಿದಾಗ ಸೇವಾಗ್ರಾಮವು ಸುತ್ತು ಮುತ್ತಲಿನ ಜನಸಾಮಾನ್ಯರೂ ಬಂದು ಈ ವಿವಿಧ ಸಾರ್ವಜನಿಕ ಉತ್ಸವಗಳಲ್ಲಿ ಭಾಗವಹಿಸುತ್ತಾರೆ. ಹಳ್ಳಿಯ ಜನರಿಗೂ ಈ ಸೇವಾಗ್ರಾಮದ ಸಂಘಕ್ಕೂ ಅಂಥ ನಿಕಟ ಸಂಬಂಧವಿದೆ.

ಸಂಘವನ್ನು ವಿವಿಧ ಇಲಾಖೆಗಳನ್ನಾಗಿ ವರ್ಗೀಕರಿಸಿಕೊಳ್ಳಲಾಗಿದೆ. ಕೇವಲ ಎರಡು ವರ್ಷದ ಹಸುಳೆಗಳೂ ಇವೆ. ಅವುಗಳಿಗಾಗಿ ಪ್ರತ್ಯೇಕವಾದ, ಸುವ್ಯವಸ್ಥೆಯಿದೆ. ಸುಮಾರು ಒರಿಂದ ೧೪ ವರ್ಷ ಪ್ರಾಯದ ಸರಿಗಿನ ಮಕ್ಕಳಿಗಾಗಿ ವಸತಿಯೊಡಗೂಡಿದ ವಿದ್ಯಾಲಯಗಳ ವಿಭಾಗವಿದೆ. ಶುಚಿತ್ವದ ವ್ಯವಸ್ಥೆ, ವಿನೋದ ವಿಹಾರಗಳು, ಸಪ್ತ ಚೇತನಗಳ ವಿಕಾಸ, ಸದ್ಗುಣ ಸಚ್ಚಾರಿತ್ರ್ಯಗಳ ಬೆಳವಣಿಗೆ—ಈ ಎಲ್ಲ ವಿಚಾರಗಳನ್ನೂ ಯೋಜಿಸಿಕೊಂಡು ಈ ಮಕ್ಕಳಿಗೆ ಶಿಯಾವ ತರಬೇತಿಯನ್ನೀಯುವ ವಿಭಾಗವಿದೆ.

ಕ್ರಿ. ಶ. ೧೯೪೭ರಲ್ಲಿ ಸುಮಾರಿಂದ ೧೯ ವರ್ಷ ಪ್ರಾಯದ ಪ್ರೌಢ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗಾಗಿ ಒಂದು ಮೂಲ ಶಿಕ್ಷಣಕೇಂದ್ರವನ್ನು ಆರಂಭಿಸಲಾಯ್ತು. ವ್ಯವಸಾಯವನ್ನೇ ಮುಖ್ಯ ಕಸುಬನ್ನಾಗಿ ಆರಿಸಿಕೊಳ್ಳಲಾಗಿದ್ದು ಪಶುಪಾಲನೆ, ಕ್ಷೀರ ವ್ಯವಸಾಯ, ತೋಟಗಾರಿಕೆ ಮೊದಲಾದ ಇತರ ಉಪವೃತ್ತಿಗಳನ್ನೂ ಈ ಮುಖ್ಯ ಕಸುಬಿನೊಂದಿಗೆ ಜೊತೆಯಿಸಿಕೊಳ್ಳಲಾಗಿದೆ. ಇಲ್ಲಿ ತರಬೇತಿ ಪಡೆಯುತ್ತಿರುವ ಶಿಕ್ಷಾರ್ಥಿಗಳಲ್ಲಿ ಗ್ರಾಮಸೇವಕರಿದ್ದಾರೆ. ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರಿದ್ದಾರೆ, ತರಬೇತಿ ಶಾಲೆಗಳ ಉಪಾಧ್ಯಾಯರಿದ್ದಾರೆ, ಸಮಾಜ ಸೇವಾ ಕಾರ್ಯಕರ್ತರಿದ್ದಾರೆ. ನಮ್ಮ ದೇಶದ ವಿವಿಧ ರಾಜ್ಯಗಳಿಂದ ನಿಯೋಜಿಸಲ್ಪಟ್ಟ ಅನೇಕ ಶಿಕ್ಷಾರ್ಥಿಗಳು ಇಲ್ಲಿ ತರಬೇತಿ ಪಡೆದು ಮರಳುತ್ತಿದ್ದಾರೆ.

ಸೇವಾಗ್ರಾಮದ 'ನಯೀತಾಲೀಮು' ಸಂಘದ ಸಿಬಂದಿಯಲ್ಲಿ ಸುಮಾರು ೪೦ ಕ್ಕೂಂತಲೂ ಹೆಚ್ಚು ಮಂದಿ ಶಿಕ್ಷಣ ವಿಶಾರದರಿದ್ದಾರೆ. ನಮ್ಮ ದೇಶದ ಮಾತ್ರವಲ್ಲ, ಅಮೇರಿಕದ ಸಂಯುಕ್ತ ರಾಷ್ಟ್ರ, ಫ್ರಾನ್ಸು, ಜರ್ಮನಿ ಮತ್ತು ಜಪಾನ್ ದೇಶದ ಶಿಕ್ಷಣ ತಜ್ಞರೂ ಸೇವಾಗ್ರಾಮದಲ್ಲಿದ್ದಾರೆಂದರೆ, ನಿಜವಾಗಿಯೂ ಆಶ್ಚರ್ಯವಾಗಲೇಬೇಕು. ಅಮೇರಿಕದ ಚಿಕಾಗೋ ವಿಶ್ವವಿದ್ಯಾಲಯದ ಡಾ. ಇ. ಕ್ಯಾಸೆಲ್ ಮತ್ತು ಅವರ ಪತ್ನಿ ಶ್ರೀಮತಿ ಜೀನ್ ಇವರು ಸೇವಾಗ್ರಾಮದ ವೈದ್ಯಕೀಯ ಕೇಂದ್ರದ ಹೊಣೆಯನ್ನು ಹೊತ್ತಿದ್ದಾರೆ. ಜಪಾನಿನ ಡಾ. ವೈದಾ ಎಂಬವರು ಸಂಘದ ವ್ಯವಸಾಯ ಕ್ಷೇತ್ರದ ಅಧಿಕಾರಿಗಳೂ ಇನ್ನು ಶಾಸ್ತ್ರಜ್ಞರೂ ಆಗಿದ್ದಾರೆ. ಸೇವಾಗ್ರಾಮದ ಸಂಘದ ಕಾರ್ಯದರ್ಶಿಯಾಗಿ ಡಾ. ಆರ್ಯನಾಯಕಂ ರವರು ಎಲ್ಲ ಕಾರ್ಯಕಲಾಪಗಳ ಬಗ್ಗೆ ವಿಶೇಷ ಆಸಕ್ತಿ ವಹಿಸುವರಲ್ಲದೆ ಶ್ರೀಯುತರು 'ಭೂದಾನ ಜಲಪಥ'ಯಲ್ಲಿ ಭಾಗವಹಿಸಲು ದಕ್ಷಿಣ ದೇಶಗಳನ್ನು ಸುತ್ತುತ್ತಿರುವ ಸಂದರ್ಭದಲ್ಲಿ ಜಪಾನಿನ ಶ್ರೀಮತಿ ಅಶಾದೇವಿಯವರು ತನ್ನ ಪತಿಯ ಕರ್ತವ್ಯಗಳನ್ನು ಶಾಲಿಸುತ್ತಾರೆ.

ಭಾರತದ ಎಲ್ಲ ರಾಜ್ಯಗಳಲ್ಲೂ ಪ್ರಾಥಮಿಕ ಹಂತದಲ್ಲಿ ಬುನಾದಿ ಶಿಕ್ಷಣಕ್ರಮವೇ ಬಳಕೆಗೆ ಬಂದಿರುವುದರಿಂದ ಸೇವಾಗ್ರಾಮದಲ್ಲಿ ಬುನಾದಿ ಶಿಕ್ಷಣ ಕ್ಷೇತ್ರದಲ್ಲಿ ಸೇವೆಸಲ್ಲಿಸುವವರಿಗಾಗಿ ತರಬೇತಿ ಕಾರ್ಯಕ್ರಮವನ್ನು ಆರಂಭಿಸಬೇಕಾಯ್ತು. ಮಾಧ್ಯಮಿಕ ಮತ್ತು ಪ್ರೌಢ ವಿದ್ಯಾಭ್ಯಾಸದಹಂತಗಳಲ್ಲೂ ಬುನಾದಿ ವೀತ್ಯಾಶಿಕ್ಷಣ ಕ್ರಮವನ್ನೇ ಬಳಕೆಗೆ ತರುವ ಯೋಜನೆಯೂ ಕೆಲವೆಡೆ ಕಾರ್ಯಗತವಾಗುತ್ತಲಿದೆ. ಇದರಿಂದಾಗಿ ಬುನಾದಿ ಶಿಕ್ಷಣ ಕ್ಷೇತ್ರದಲ್ಲಿ ವಿಶೇಷ ಪ್ರಯೋಗಗಳನ್ನು ನಡೆಸುವುದಕ್ಕಾಗಿ ಕಳೆದ ೧೯೫೮ನೇ ಇಸವಿ ನವೆಂಬರ್‌ತಿಂಗಳಲ್ಲಿ ನಮ್ಮ ಪ್ರಧಾನಿ ಪಂಡಿತ ನೆಹರೂರವರು ಸೇವಾಗ್ರಾಮ ವಿಶ್ವವಿದ್ಯಾಲಯವನ್ನು ಉದ್ಘಾಟಿಸಿದರಲ್ಲದೆ ೧೯೫೯ರಲ್ಲಿ ಸೇವಾ ಗ್ರಾಮದ ವಿದ್ಯಾರ್ಥಿಗಳ ಅಂತರಾಷ್ಟ್ರೀಯ ವಸತಿಗೃಹವೊಂದು ಪಂಡಿತ ನೆಹರೂರವರಿಂದ ಉದ್ಘಾಟಿಸಲ್ಪಟ್ಟಿತು. ಈ ವಿದ್ಯಾರ್ಥಿ ನಿಲಯದ ಕಟ್ಟಡವು ಸಂಪೂರ್ಣವಾಗಿ ಬುನಾದಿ ಶಿಕ್ಷಣದಲ್ಲಿ ತರಬೇತಿ ಹೊಂದುತ್ತಿರುವ

(ಇಂದೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿ.,

ಸ್ಥಾಪನೆ: ೧೯೩೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಅಧಿಕೃತ ಬಂಡವಾಳ	...	ರೂ. 56,00,000
ಚಲಾವಣೆ ಬಂಡವಾಳ	...	ರೂ. 32,23,787
ವರ್ಗಣಿ (ಪಾಲು) ಬಂಡವಾಳ	...	ರೂ. 32,10,987
ತೆತ್ತ ಬಂಡವಾಳ	...	ರೂ. 27,80,579
ಕ್ಷೇಮನಿಧಿ	...	ರೂ. 18,00,000
ಠೇವಣಾತಿ	...	ರೂ 8·46 ಕೋಟಿ.

ತಾ. 30-9-1956ರಲ್ಲಿ ನಮ್ಮ ಚಲಾವಣೆ ನಿಧಿ 10 ಕೋಟಿಗೂ ಮಿಕ್ಕಿದೆ

(ನವೋದಿತ ರಾಜ್ಯಗಳಲ್ಲಿ) ನಮ್ಮ ಶಾಖೆಗಳು

(ವಿಶಾಲ) ನವಮೈಸೂರು	59
ಆಂಧ್ರ ಪ್ರದೇಶ	14
ಕೇರಳ	13
ಬೊಂಬಾಯಿ	8
ಮದ್ರಾಸು	2

ಟಿ.ಎ.ಪೈ ಬಿ ಕಾಂ.(ಬೊಂಬಾಯಿ)ಎಂ.ಎಲ್.ಎ., ಟಿ.ಎಂ.ಎ.ಪೈ,ಎಂ.ಬಿ.ಬಿ.ಎಸ್.
ಜನರಲ್ ಮೆನೇಜರ್. ಮೆನೇಜಿಂಗ್ ಡೈರೆಕ್ಟರ್.

The Canara Industrial & Banking Syndicate Ltd.

ಝುಂಝುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಉಸ್ತ್ರ, ಗೊರಟು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ. 6/8; ½ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಲೈಬ್ರೆ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ,
ಮದ್ರಾಸ್—3.

ಮಂಗಳೂರು ಮತದಾರ ಕ್ಷೇತ್ರದ ಲೋಕಸಭಾ ಉಮೇದ್ವಾರ ಕೆ.ಆರ್.ಆಚಾರ್

ಚುನಾವಣೆ ಬಂತು!

ಮತದಾರರೇ ನೀವು ಮಾಡಬೇಕಾದುದೇನು?

ನಿಮ್ಮ ಪವಿತ್ರ ಹಕ್ಕನ್ನು ನ್ಯಾಯವಾಗಿ ಉಪಯೋಗಿಸಿಕೊಳ್ಳಿರಿ!

ನಾವೆಲ್ಲರೂ ಸರ್ವತಂತ್ರ ಸ್ವತಂತ್ರ ಪ್ರಜಾಸತ್ತಾತ್ಮಕ ಗಣರಾಜ್ಯವಾದ ಭಾರತದ ಸ್ವತಂತ್ರ ನಾಗರಿಕರಾಗಿದ್ದೇವೆ. ಉದಾರವಾದ ನಮ್ಮ ರಾಜ್ಯಾಂಗ ಘಟನೆಯ ಪ್ರಕಾರ ರಾಷ್ಟ್ರಪತಿಯಲ್ಲಿ ಅತ್ಯುನ್ನತ ಪದವಿಗೇರಲು ಪ್ರತಿಯೊಬ್ಬ ಪ್ರಬುದ್ಧ ಭಾರತೀಯನಿಗೂ ಸಮಾನವಾದ ಅವಕಾಶ ಕೊಡಲಾಗಿದೆ. ಯಾವ ಪದವಿಯೂ ವಂಶಾನುಗತವಾಗಿಲ್ಲ.

ನಮ್ಮ ಶಾಸನಗಳೆಲ್ಲವನ್ನೂ ಇಡೀ ಭಾರತಕ್ಕೆ ಅನ್ವಯಿಸುವಂತೆ ಪಾರ್ಲಿಮೆಂಟು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ರೂಪಿಸುತ್ತದೆ. ಪ್ರತಿಯೊಂದು ರಾಜ್ಯಕ್ಕೂ ಆಯಾ ರಾಜ್ಯದ ವಿಧಾನ ಮಂಡಳವು ತನ್ನದೇ ಆದ ಅಧಿಕಾರ ವ್ಯಾಪ್ತಿಯಲ್ಲಿ ಶಾಸನಗಳನ್ನು ರೂಪಿಸುತ್ತದೆ. ಪಾರ್ಲಿಮೆಂಟು ರಾಜ್ಯಸಭೆ ಮತ್ತು ಲೋಕಸಭೆಗಳನ್ನು ಒಳಗೊಂಡಿರುತ್ತದೆ. ರಾಜ್ಯದ ಶಾಸನಾಂಗದಲ್ಲಿ ವಿಧಾನ ಮಂಡಳ ಮತ್ತು ವಿಧಾನ ಪರಿಷತ್ತುಗಳಿವೆ. ಇವುಗಳಲ್ಲಿ ಲೋಕ ಸಭೆಗೂ ವಿಧಾನ ಮಂಡಳಕ್ಕೂ ಭೂರಿ ಮತದಾನದ ಹಕ್ಕಿನ ದಿಂದ ಪ್ರತಿನಿಧಿಗಳನ್ನು ಆರಿಸಲಾಗುತ್ತದೆ. ಇದೇ ೨೫ನೇ ದಿನಾಂಕದಲ್ಲಿ ದೇಶದಲ್ಲೆಲ್ಲ ಇಂಥ ಮಹಾಚುನಾವಣೆಯು ನಡೆಯುತ್ತದೆ.

ಭಾರತದ ಪ್ರಜೆಯಾದ ಹಾಗೂ ೨೧ ವರ್ಷ ವಯಸ್ಸಿಗೆ ಕಡಿಮೆ ಇಲ್ಲದಿರುವ ಪ್ರಾಯದ ಎಲ್ಲ ಸ್ತ್ರೀ ಪುರುಷರೂ ಮತದಾರರಾಗಿರುತ್ತಾರೆ. ಇವರ ಪಟ್ಟಿಯನ್ನು ಆಗಿಂದಾಗ್ಗೆ ಸರಕಾರದ ಕಡೆಯಿಂದ ತಯಾರಿಸಿಡಲಾಗುತ್ತದೆ. ಚುನಾವಣೆಯು ಹತ್ತಿರ ಬಂತೆನ್ನುವಷ್ಟರೆಗೆ ಈ ಪಟ್ಟಿಯಲ್ಲಿ ತಿದ್ದುಪಡಿಯನ್ನು ಮಾಡಲು ಅವಕಾಶವಿದೆ; ಆದರೆ ಈಗ ಚುನಾವಣೆಯು ತೀರ ಸಮೀಪಿಸಿರುವುದರಿಂದ ಯಾರದಾದರೂ ಹೆಸರು ಬಿಟ್ಟುಹೋಗಿದ್ದರೆ ಅಥವಾ ವಿಳಾಸ ಪುತಪ್ಪಾಗಿದ್ದರೆ ಅಥವಾ ಇತರ ತಪಶೀಲುಗಳು ಸರಿಯಾಗಿಲ್ಲದಿದ್ದರೆ ನೀವೂ ಏನನ್ನೂ ಮಾಡುವುದು ಸಾಧ್ಯವಿಲ್ಲ. ಆದರೆ ಆದಷ್ಟು ಹೆಚ್ಚು ಜನರ ಬೆಂಬಲಪಡೆಯುವ ಉದ್ದೇಶವುಳ್ಳ ರಾಜಕೀಯ ಪಕ್ಷಗಳೆಲ್ಲವೂ ಮತದಾರರ ಪಟ್ಟಿಯನ್ನು ಪದೇ ಪದೇ ಪರಿಶೀಲಿಸಿ ನೋಡಿ ಹೇಳಿದ ಬಗೆಯ ಲೋಪದೋಷಗಳಿಗೆ ಎಡೆಇಲ್ಲದಂತೆ ಮಾಡುವ ಜಾಗರೂಕತೆಯನ್ನು ಇಷ್ಟರಲ್ಲಿಯೇ ವಹಿಸಿರುತ್ತವೆ. ಆದುದರಿಂದ ಸಾಮಾನ್ಯವಾಗಿ ೨೧ ವರ್ಷ ವಯಸ್ಸಾದ ಎಲ್ಲರೆ ಹೆಸರೂ ಮತದಾರ ಪಟ್ಟಿಯಲ್ಲಿದೆ ಎಂದು ನಂಬಬಹುದು.

ಮತದಾರರ ಪಟ್ಟಿಯಲ್ಲಿ ಯಾರ ಹೆಸರು ಕಾಣಿಸಿದೆಯೋ ಅವರು ಮಾತ್ರ ಮತದಾನಾಧಿಕಾರವನ್ನು ಚಲಾಯಿಸಲು ಅವಕಾಶವಿದೆ. ಆದುದರಿಂದ ನಿಮ್ಮ ಹೆಸರು ಪಟ್ಟಿಯಲ್ಲಿದೆಯೇ ಎಂದು ಮೊದಲು ನೋಡಿ. ಖಚಿತ ಮಾಡಿಕೊಳ್ಳುವುದು ಆಪೇಕ್ಷಣೀಯ. ಅದರಲ್ಲಿರತಕ್ಕ ವಿವರಗಳು ಸರಿಯಾಗಿವೆಯೇ—ಎಂದು ಸಹ ಪರಿಶೀಲಿಸುವುದು ಇಷ್ಟವಾಗಿದೆ. ಸಾಮಾನ್ಯವಾಗಿ ಪೇಟೆಗಳಲ್ಲಿ ವಾಸಿಸುವವರು ಹೆಚ್ಚಾಗಿ ಬಾಡಿಗೆ ಮನೆಯಲ್ಲಿರುವುದರಿಂದ, ಆಗಿಂದಾಗ್ಗೆ ಮೊದಲಿನ ಮನೆಯನ್ನು ಬಿಟ್ಟು ಹೊಸ ಮನೆಗೆ ಸ್ಥಳಾಂತರ ಹೊಂದಿರುವ ಸಂಭವವುಂಟು ಅವರು ಒಂದು ಬೀದಿಯ ಎಡ ಪಕ್ಕದಲ್ಲಿ ಮೊದಲಿದ್ದರೆ, ಈಗ ಬಲ ಪಕ್ಕದಲ್ಲಿರಬಹುದು—ಅಂದರೆ ಬದಲಾವಣೆಯು ಇಷ್ಟು ಕ್ಷುಲ್ಲಕವಾಮವಾಗಿರಲೂ ಬಹುದು. ಆದರೆ ಮತದಾರರ ಪಟ್ಟಿಯಲ್ಲಿ ಯಾವ ವಿಳಾಸ ಕಂಡು ಬರುತ್ತದೋ ಅಲ್ಲೇ ಸ್ಥಳಕ್ಕೆ ಸಂಬಂಧಪಟ್ಟ ಮತಕಟ್ಟೆಯಲ್ಲಿಯೇ ಅವರು ಮತದಾನವನ್ನು ಮಾಡಲು ಸಮರ್ಥರು; ಹೀಗೆ ಸ್ಥಳ ಬದಲಾವಣೆಯನ್ನು ಮಾಡಿಕೊಂಡವರು ತಮ್ಮ ಹೆಸರು ಯಾವ ಕೇಂದ್ರವ ಕಟ್ಟೆಯಲ್ಲಿ ಬರುತ್ತದೆ ಎಂಬುದನ್ನು ಮುಂಚಾಗಿ ತಿಳಿದು ಕೊಂಡಿದ್ದರೆ ಮಾತ್ರ, ಆ ಕೇಂದ್ರಕ್ಕೆ ಕ್ಲಪ್ತ ಕಾಲದಲ್ಲಿ ಹೋಗಿ ಮತದಾನವನ್ನು ಮಾಡಿ ಬರಬಹುದು. ಸಾಮಾನ್ಯವಾಗಿ ಚುನಾವಣೆಯಲ್ಲಿ ಭಾಗ ವಹಿಸುವವರು ಸ್ಥಳ ಬದಲಾವಣೆ ಹೊಂದಿದವರ ಪಟ್ಟಿಯನ್ನು ಮಾದಿಟ್ಟುಕೊಂಡು ಬಂದು ಸಂಬಂಧಪಟ್ಟವರಿಗೆ ಮುಂಚಾಗಿಯೇ ತಿಳಿಸುವುದು ಸಂಪ್ರದಾಯ. ಕಾರಣ, ಮತದಾರರಿಗೆ ಸ್ಥಳ ಬದಲಾವಣೆಯಿಂದಾಗಿ ತಮ್ಮ ಮತದಾನವನ್ನು ಮಾಡುವ ಅವಕಾಶವೇ ತಪ್ಪಿಹೋಗುವುದಿಲ್ಲ.

ಅಂತೂ ಮತದಾರರು ತಮ್ಮ ಮತದಾನ ಕೇಂದ್ರ, ಯಾವುದು, ಅಲ್ಲಿ ಯಾವ ದಿನ ಮತದಾನದ ವಿಶೇಷವಾಗಿದೆ ಎಂಬುದನ್ನು ಮೊದಲು ತಿಳಿದುಕೊಳ್ಳಬೇಕು. ಆ ದಿನ, ಆ ಮತದಾನ ಕೇಂದ್ರಕ್ಕೆ ಕ್ಲಪ್ತ ಸಮಯದಲ್ಲಿ ಹೋಗಬೇಕು. ಇದಕ್ಕೆ ಮುಂಚೆ ಮತವನ್ನು ಯಾರ ಪರವಾಗಿ ಉಪಯೋಗಿಸುವುದೆಂಬ ಬಗ್ಗೆ ಮತದಾರರು ಒಂದು ನಿರ್ಣಯಕ್ಕೆ ಬಂದಿರುವುದು ಸೂಕ್ತ. ದೇಶವನ್ನು ಯಾರು ಆಳಬೇಕು, ತೆರಿಗೆಗಳನ್ನು ಯಾರು ಹೊರಿಸಬೇಕು, ರಾಷ್ಟ್ರದ ಹಣವನ್ನು ವಿನಿಯೋಗಿಸಲು ಯಾರು ಅಧಿಕಾರ ಹೊಂದಿರಬೇಕು, ಯಾರು ಅಧಿಕಾರಕ್ಕೆ ಬಂದರೆ ವಿಶೇಷವಾದ ಲಾಭವು ತಮ್ಮ ಜಿಲ್ಲೆಗೂ, ತಾಲೂಕಿಗೂ, ಜಿಲ್ಲೆಗೂ ಆಗಬಹುದು; ದೇಶಕ್ಕೆ ಯಾರಿಂದ ಕ್ಷೇಮವಾದೀತು ಎಂಬುದನ್ನೆಲ್ಲ ಮುಂದಾಗಿ ಆಲೋಚಿಸಿ ಒಂದು ನಿರ್ಣಯಕ್ಕೆ ಬಂದೇ ಮತದಾನ ಕೇಂದ್ರಕ್ಕೆ ಮತದಾರರು ಹೋಗಬೇಕಲ್ಲದೆ, ಅಲ್ಲಿಗೆ ಹೋದ ಬಳಿಕ ಗೊಂದಲದಲ್ಲಿ ಬೀಳಬಾರದು. ಮತದಾರರು ನೀಡುವ ಮತಗಳೇ ರಾಷ್ಟ್ರದ ಭವಿಷ್ಯವನ್ನು ಬರೆಯುತ್ತವೆ; ದೇಶದ ಸರಕಾರವನ್ನು ನಿರ್ಧರಿಸುತ್ತವೆ. ಆದುದರಿಂದ ಚುನಾವಣೆಗಳಲ್ಲಿ ಭಾಗ ವಹಿಸಿ ಮತದಾನವನ್ನು ಮಾಡುವುದೂ ಅತ್ಯುತ್ತಮ ಉಮೇದ್ವಾರರನ್ನೇ ಪ್ರೋತ್ಸಾಹಿಸಿ ಅವರಿಗೆನೇ ಮತವೀಯುವುದೂ ನಮ್ಮೆಲ್ಲರ ಹಕ್ಕು ಹಾಗೂ ಕರ್ತವ್ಯವಾಗಿರುತ್ತದೆ. ಇದನ್ನು ಮತದಾರರು ಮರೆಯಬಾರದು.

ಮತದಾನ ಕೇಂದ್ರಕ್ಕೆ ಕ್ಲಪ್ತ ಸಮಯದಲ್ಲಿ ಹೋಗಬೇಕೆಂದೆವಷ್ಟೆ! ಅಲ್ಲಿ ನೀವು ಹೋಗುವುದಕ್ಕೆ ಮುಂಚೆಯೇ ಬಂದು ನಿಂತವರು ಅನೇಕರಿರಬಹುದು. ಆಗ ನೀವು ಅವರ ಹಿಂದೆಯೇ ಸಾಲಿನಲ್ಲಿ ನಿಂತುಕೊಳ್ಳಿರಿ. ಹೆಂಗಸರು ಬೇರೆ ಗಂಡಸರು ಬೇರೆ ಸಾಲಿನಲ್ಲಿ ನಿಲ್ಲುವುದು ಸಾಮಾನ್ಯ ಕ್ರಮ. ಹಾಗೆಯೇ ಸುಲಭ ಹಾಗು ಶೀಘ್ರ ಮತದಾನವನ್ನು ಏರ್ಪಡಿಸುವ ಸಲುವಾಗಿ ನಾಲ್ಕಾರು ಕೋಣೆಗಳಲ್ಲಿ ಮತದಾನದ ವ್ಯವಸ್ಥೆಯನ್ನು ಏರ್ಪಡಿಸುವುದು ಸಂಪ್ರದಾಯ. ಆದುದರಿಂದ ನೀವು ಯಾವಕೋಣೆಯಲ್ಲಿ ಮತದಾನ ಮಾಡಬೇಕಾಗಿದೆ ಎಂದು ತಿಳಿದುಆ ಕೋಣೆಗೆ ಹೋಗುವ ಸಾಲಿನಲ್ಲೆ ನಿಂತಿರಬೇಕಾಗಿದೆ. ಮಯಮಾಡಿ ಸಾಲುಗಟ್ಟಿ ನಿಲ್ಲುವ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸಬಾರದು. ಹೆಚ್ಚಾಗಿ, ತಮಗೆ ಬೇರೆ ಕೆಲಸವಿದೆ, ತಾವು ಮುಂದಾಗಿ ಹೋಗಬೇಕಾಗಿದೆ ಎಂಬುದಕ್ಕಾಗಿ ಶಿಸ್ತುಗೆಟ್ಟು ಕೆಲವರು ನಡೆಯುತ್ತಾರೆ—ಇದು ಸರಿಯಲ್ಲ.

ಮತದಾನ ದಿನದ ಮೊದಲೇ ಉಮೇದುವಾರರ ಕಡೆಯಿಂದ ನಿಮಗೆ ನಿಮ್ಮ ಹೆಸರನ್ನು ಮತದಾರ ಪಟ್ಟಿಯಲ್ಲಿ ಗುರುತಿಸಲು ಸಹಾಯಕವಾಗುವ ಚೀಟಿಯೊಂದನ್ನು ಕೊಟ್ಟಿರುತ್ತಾರೆ. ಈ ಚೀಟಿಯನ್ನು ನೀವು ಮತದಾನ ಮಾಡಲು ಹೋಗುವಾಗ ತೆಗೆದುಕೊಂಡು ಹೋದರೆ ಅಲ್ಲಿನ ಅಧಿಕಾರಿಗಳಿಗೆ ನಿಮ್ಮ ಹೆಸರನ್ನು ಸುಲಭದಲ್ಲಿ ಪಟ್ಟಿಯಲ್ಲಿ ಕಂಡು ಹಿಡಿಯಲು ಸಹಾಯಕವಾಗುತ್ತದೆ. ಆ ಪಟ್ಟಿ ಇಲ್ಲ ಎಂಬುದಕ್ಕಾಗಿಯೇ ನೀವು ಮತದಾನಕ್ಕೆ ಹೋಗದಾರದೆಂದಿಲ್ಲ—ಮತದಾರ ಪಟ್ಟಿಯಲ್ಲಿ ಹೆಸರಿರುವುದು ಖಂಡಿತವಾದರೆ, ನೀವು ಉಮೇದುವಾರರು ನಿಮಗೆ ಗುರುತಿನ ಚೀಟಿಯನ್ನು ಕೊಟ್ಟಿಲ್ಲದಿದ್ದರೂ ಮತದಾನ ಕೇಂದ್ರಕ್ಕೆ ಹೋಗಬಹುದು. ತುಸು ತಡವಾಗಿಯಾದರೂ, ನಿಮ್ಮ ಹೆಸರನ್ನು ಅಲ್ಲಿನ ಅಧಿಕಾರಿಗಳು ಹುಡುಕಿ ತೆಗೆಯಬಲ್ಲರು. ಅಂತೂ ನಿಮ್ಮ ಸರದಿಯು ಬಂದಾಗ ಒಬ್ಬ ಅಧಿಕಾರಿಯು ನಿಮ್ಮಿಂದ ಆ ಗುರುತಿನ ಚೀಟಿಯನ್ನು ಪಡೆದು ಮತದಾರ ಪಟ್ಟಿಯಲ್ಲಿ ನಿಮ್ಮ ಹೆಸರನ್ನು ಹುಡುಕಿ ಅನಂತರ ಅಧಿಕೃತವಾದ ಗುರುತಿನ ಚೀಟಿಯನ್ನು ಮೊದಲಿನ ಬೇಟೆಗೆ ಬದಲಾಗಿ ಕೊಡುತ್ತಾರೆ. ನೀವು ಅಲ್ಲಿಂದ ಮುಂದೆ ಮತದಾನಮಾಡುವ ಕೋಣೆಯನ್ನು ಪ್ರವೇಶಿಸಬೇಕು.

ಅಲ್ಲಿ ಒಬ್ಬ ಅಧಿಕಾರಿಯು ನಿಮ್ಮಿಂದ ಈ ಗುರುತಿನ ಚೀಟನ್ನು ತೆಗೆದುಕೊಳ್ಳುತ್ತಾರೆ; ಮತ್ತು ಅದರಲ್ಲಿ ನಮೂದಿಸಿರುವ ವ್ಯಕ್ತಿಯು ನೀವೇ ಎಂಬುದಾಗಿ ಖಾತ್ರಿ ಮಾಡಿಕೊಳ್ಳುತ್ತಾರೆ. ಕೆಲವರು ಸತ್ತವರ, ಅಥವಾ ಊರಲ್ಲಿ ಇಲ್ಲದಿದ್ದವರ ಹೆಸರಿನಲ್ಲಿ ಮತದಾನ ಮಾಡಲು ಬರುವಾದುದರಿಂದ ಇಲ್ಲಿ ಹೀಗೆ ನೀವು ನೀವೇ ಹೊರತು ಬೇರೆಯವರಂತೆ ನಟನೆ ವಹಿಸುವುದಿಲ್ಲವೆಂದು ನಿರ್ಧರಿಸಿಕೊಳ್ಳುವುದು ಅಧಿಕಾರಿಯ ಕರ್ತವ್ಯವಾಗಿರುತ್ತದೆ. ಹೆಚ್ಚಾಗಿ ಜನಸಂಖ್ಯೆ ಅಧಿಕವಿರುವ ಊರಿನಲ್ಲಿ ವ್ಯಕ್ತಿಯನ್ನು ಗುರುತು ಹಚ್ಚುವುದು ಕಷ್ಟವಾಗುವುದರಿಂದ ಪ್ರಶ್ನೆಗಳು ನಡೆಯುತ್ತವೆ; ಈ ಪ್ರಶ್ನೆಕರ ವರ್ತನೆಯಿಂದಾಗಿ ಚುನಾವಣೆಯು ನ್ಯಾಯವಾದ ರೀತಿಯಲ್ಲಿ ನಡೆಯುತೆಂಬ ಸಮಾಧಾನಕ್ಕೆ ವ್ಯತ್ಯಯವುಂಟಾಗುತ್ತದೆ. ಈಚೆಗೆ ಚುನಾವಣೆಯ ಸಮಿತಿಯು ಪ್ರಮುಖ ರಾಜಕೀಯ ಪಕ್ಷಗಳೊಡನೆ ಸಮಾಲೋಚನೆಯನ್ನು ನಡೆಸಿ ಇಂಥ ಪ್ರಶ್ನೆಗಳು ನಡೆಯದಂತೆ ಕ್ರಮ ಕೈಗೊಳ್ಳಬೇಕಾದ ಬಗೆಯನ್ನು ಸೂಚಿಸಲು ಕೇಳಿಕೊಂಡಿತು. ಎಲ್ಲ ಪಕ್ಷಗಳ ಪ್ರತಿನಿಧಿಗಳೂ ಈ ವಿಷಯದಲ್ಲಿ ಒಮ್ಮತದ ಸಲಹೆಯೊಂದನ್ನಿತ್ತರು—ಅದೇನೆಂದರೆ, ನಗರಗಳಲ್ಲಿ ಪ್ರತಿಯೊಬ್ಬ ಮತದಾರನು ಯಾವುದೇ ಮತಪತ್ರವನ್ನು ಪಡೆದುಕೊಳ್ಳುವುದಕ್ಕೆ ಮುಂಚೆ ತನ್ನ ರುಜುವನ್ನು ಇಲ್ಲವೆ ಹೆಬ್ಬೆಟ್ಟಿನ ಗುರುತನ್ನು ಹಾಳೆಪೇಕೆಂದು ವಿಧಾಯಕವಾಡಿದರೆ ಬೇರೆಯವರ ಹೆಸರಿನಲ್ಲಿ ಮತದಾನ ಮಾಡುವುದನ್ನು ತಡೆಯಬಹುದು.

ರಾಮತೀರ್ಥ
ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಪೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕೆ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. ೩—೪—೦
ಸಣ್ಣ ಬಾಟ್ಲಿಗೆ ರೂ. ೨—೦—೦

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಉಡುಪಿ ಮತದಾರ ಕ್ಷೇತ್ರದ ಎಸೆಂಬ್ಲಿ ಉಮೇದ್ವಾರ ಪಿ. ವಿ. ಆಚಾರ್

ಟ್ಟಲು ಕೆಲವಷ್ಟೆಗಾದರೂ ಇದರಿಂದ ಹಾಯವಾದೀತು ಎಂಬುದೇ ಈ ಸೂಚ . ಇದನ್ನು ಚುನಾವಣೆಯ ಸಮಿತಿಯು ೦ಗೀಕರಿಸಿದೆ; ಮತ್ತು ನೆನ್ನೆ ಜಿಲ್ಲೆಯ ಮಂಗಳೂರು ನಗರದ ಎರಡೂ ಮತ ಾನ ಕ್ಷೇತ್ರದಲ್ಲಿ ಮತದಾರರು ಮತದಾ ಮಾಡುವ ಕೋಣೆಯಲ್ಲಿರುವ ಅಧಿಕಾ ಯ ಮುಂದೆ ಅಧಿಕೃತವಾದ ಗುರುತಿನ ೀಟಿಯ ಮೇಲೆ ತಮ್ಮ ರುಜುವನ್ನಾ ಲೀ ಹೆಬ್ಬೆಟ್ಟಿನ ಷಾಯ್ಕೆಯನ್ನಾಗಲೀ ಾಕ ಬೇಕೆಂದು ವಿಧಿಸಿದೆ ಧಾನ ಸಭೆಗೆ ಮತಪೇಯಲು ಮತ ಪ ವನ್ನು ಪಡೆದುಕೊಳ್ಳುವುದಕ್ಕೆ ಮುಂ ೀ ಹೀಗೆ ಮಾಡಬೇಕಾಗುವುದು; ಲೋ ಸಭೆಯ ಸ್ಥಾನಕ್ಕೆ ಮತದೇಯುವುದ ಮುಂಚೆ ಇದು ಅಗತ್ಯವಿಲ್ಲ. ಏಕೆಂದ ಆ ನಡುವೆ ವ್ಯಕ್ತಿಯು ಬೇರೆಯಾಗು ೈದು ಸಾಧ್ಯವಿಲ್ಲ. ಆದುದರಿಂದ ಮಂಗ ೂರಿನ ನಗರದ ಮತದಾರರು ಇದೊಂ ು ಹೊಸ ವಿಷಯವನ್ನು ತಿಳಿದಿರುವು ೊಳಿತು.

ಮಂಗಳೂರು ನಗರದಲ್ಲೂ ಜಿಲ್ಲೆ ು ಇತರೆಡೆಯಲ್ಲೂ ನೀವೇ ಮತದಾರ ೆಂದು ಖಾತರಿಯಾದ ಬಳಿಕ, ಅಧಿಕಾರಿ ಗಳು ನಿಮ್ಮ ಎಡಗೈಯ ತೋರು ಬೆರಳಿ ಗೆ ಅಳಿಸಲಾಗದ ಶಾಯಿಯಿಂದ ಬೊಟ್ಟು ನ್ನು ಹಚ್ಚುತ್ತಾರೆ. ನೀವು ಯಾವಾದರೂ ಬ್ಬರ ಪ್ರೋತ್ಸಾಹದಿಂದ ಮತ್ತೊಮ್ಮೆ ಮತದಾನ ಮಾಡಲು ಬರಬಾರದು; ಬಂ ರೆ ಆಗ ನೀವು ಮತದಾನ ಮಾಡಿ ಯಾಗಿದೆ ಎಂದು ಸ್ಪಷ್ಟವಾಗಿ ತಿಳಿದುಕೊಳ್ಳುವುದಕ್ಕೆ ಈ ಬೊಟ್ಟು ನೆರ ವಾಗುತ್ತದೆ. ಹೀಗೆ ಬೊಟ್ಟು ಹಾಕಿದ ಬಳಿಕ, ವಿಧಾನಸಭೆಗೆ ಆ ಕ್ಷೇತ್ರದಿಂದ ಎಷ್ಟು ಸದಸ್ಯರನ್ನು ಆರಿಸಬೇಕಾಗಿದೆ ಯೋ ಅಷ್ಟು ಮತಪತ್ರಗಳನ್ನು ನಿಮ್ಮ ಗುರುತಿನ ಅಧಿಕೃತ ಬೇಟೆಯೊಟ್ಟಿಗೆ ನಿಮ ಗೆ ಕೊಡುತ್ತಾರೆ. ನಮ್ಮ ಜಿಲ್ಲೆಯ ಪು ತ್ತೂರಿನಲ್ಲಿ ಮಾತ್ರ ಇಬ್ಬರು ಉಮೇದ್ವಾ ರರನ್ನೂ ಉಳಿದೆಲ್ಲ ಕಡೆ ಒಬ್ಬೊಬ್ಬರನ್ನೂ ವಿಧಾನಸಭೆಗೆ ಚುನಾವಣೆಯ ಮೂಲಕ ಆರಿಸಬೇಕಾಗಿಬಂದಿದೆ ಆದುದರಿಂದ ಪು ತ್ತೂರು ಮತದಾನ ಕ್ಷೇತ್ರದಲ್ಲಿ ಮಾತ್ರ ಎರಡು ಮತಪತ್ರಗಳನ್ನೂ ಉಳಿದೆಡೆ ಒಂ ದು ಮತಪತ್ರವನ್ನೂ ಮತದಾರರಿಗೆ ಕೊ ಡಲಾಗುತ್ತದೆ. ಇವನ್ನು ಗುರುತಿನ ಚೀಟಿ ಯೊಡನೆ ಹಿಡಿದುಕೊಂಡು ನೀವು ನಿಮ್ಮ ಸರದಿ ಬಂದಾಗ ಮತದಾನ ಮಾಡುವ ಒಳಕೋಣೆಗೆ ಹೋಗಬೇಕು. ಅಲ್ಲಿ ಬಾಗಿ ಲ ಬಳಿ ಡ್ಯೂಟಿಯನ್ನು ಮಾಡುತ್ತಿರುವ ಜವಾನನ ಕೈಗೆ ನಿಮ್ಮ ಗುರುತಿನ ಚೀಟಿ ಯನ್ನು ಒಪ್ಪಿಸಬೇಕು. ಆಂದರೆ, ಮತ ಪೆಟ್ಟಿಗೆಗಳನ್ನಿಟ್ಟಿರುವ ಆ ಒಳಕೋಣೆ ಯಲ್ಲಿರುವಾಗ ನಿಮ್ಮ ಕೈಯಲ್ಲಿ ಉಳಿಯುವುದು ಮತಪತ್ರ ಮಾತ್ರ.

ಮತದಾನ ಮಾಡುವ ಆ ಕೋಣೆಯ ಲ್ಲಿ ಎಷ್ಟು ಮಂದಿ ಉಮೇದ್ವಾರಿದ್ದಾ ರೊ ಅಷ್ಟು ಪೆಟ್ಟಿಗೆಗಳಿರುತ್ತವೆ. ಆ ಪೆಟ್ಟಿ ಗೆಗಳ ಮೇಲೆ ಆಯಾ ಉಮೇದ್ವಾರರ ಚುನಾವಣೆಯ ಗುರುತನ್ನು ಅಂಟಿಸಿರು ತ್ತದೆ. ಉಮೇದ್ವಾರರು ಬಹಳ ದಿನಗಳಿಂ ದಲೇ ನಿಮಗೆ ತಮ್ಮ ಚುನಾವಣೆಯ ಗು ರುತು ಇದೇ ಎಂದು ಹೇಳಿರುತ್ತಾರೆ; ಉ ದಾಹರಣೆಗೆ, ಕಾಂಗ್ರೆಸಿನ ಪರವಾಗಿ ನಿಂ ತಿರುವ ಉಮೇದ್ವಾರರ ಚುನಾವಣೆಯ ಗುರುತು ನೊಗಕ್ಕೆ ಜೊತೆಯಾಗಿ ಕಟ್ಟಿ ನಿಲ್ಲಿಸಿನ ಜೋಡೆತ್ತುಗಳು! ಕಾಂಗ್ರೆಸಿಗೆ ಮತ ಕೊಡುವುದು ನಿಮ್ಮ ಇಚ್ಛೆಯಾಗಿ ದ್ದರೆ (ಆದರಲ್ಲಿ ನಮಗೇನೂ ಸಂದೇಹವಿ ಲ್ಲ) ನೀವು ನಿಮ್ಮ ಕೈಯಲ್ಲಿರುವ ಮತ ಪತ್ರವನ್ನು ಈ ಎತ್ತುಗಳ ಗುರುತನ್ನು ಅಂಟಿಸಿರುವ ಪೆಟ್ಟಿಗೆಯೊಳಕ್ಕೆ ಹಾಕಬೇ ಕು. ಪೆಟ್ಟಿಗೆಯ ಮೇಲೆ ಒಂದು ಬಿಳಿದಾದ ಪಟ್ಟಿಯನ್ನು ಎಳೆದಿದ್ದು ಆ ದು ಮತಪತ್ರವನ್ನು ಪೆಟ್ಟಿಗೆಯೊಳಕ್ಕೆ ಹಾಕ ಬೇಕಾದ ಕಂಡಿಯನ್ನು ತೋರಿಸುತ್ತದೆ.

ಹುತ್ತೂರಿನಲ್ಲಿ ವಿಧಾನಸಭೆಯ ಎರ ಡು ಸ್ಥಾನಗಳಿಗೆ ಇಬ್ಬರು ಉಮೇದ್ವಾರರ ನ್ನು ಆರಿಸಬೇಕಾಗಿದೆ ಎಂದೆವಷ್ಟೆ—ಬಿಲ್ಲಿ ಯ ಮತದಾರರಿಗೆ ಎರಡು ಮತಪತ್ರಗಳ ನ್ನು ಮುಂದಾಗಿಕೊಟ್ಟಿರುತ್ತಾರೆ. ಆ ಮ ತಪತ್ರಗಳನ್ನು ಒಂದೇ ಪೆಟ್ಟಿಗೆಯೊಳಕ್ಕೆ ಎಂದಿಗೂ ಹಾಕಬಾರದು. ಒಂದೊಂದು ಮತಪತ್ರವನ್ನು ಒಂದೊಂದು ಪೆಟ್ಟಿಗೆ ಯೊಳಕ್ಕೆ ಹಾಕಿದರೆ ಮಾತ್ರ ಎರಡೂ ಮ ತಗಳು ಲೆಕ್ಕಕ್ಕೆ ತೆಗೆದುಕೊಳ್ಳಲ್ಪಡುತ್ತ ವೆ. ಒಂದೇ ಪೆಟ್ಟಿಗೆಗೆ ಎರಡೂ ಮತ ಪ ತ್ರಗಳನ್ನು ಹಾಕಿದರೆ ಒಂದು ಮತಪತ್ರ ಮಾತ್ರ ಲೆಕ್ಕಕ್ಕೆ ಹಿಡಿದು ಇನ್ನೊಂದನ್ನು ರದ್ದುಪಡಿಸಲಾಗುತ್ತದೆ. ಇಲ್ಲಿ ಸಹ. ಯಾ ವುದಾದರೂ ಎರಡು ಪೆಟ್ಟಿಗೆಯೊಳಕ್ಕೆ ಈ ಎರಡು ಮತಪತ್ರಗಳನ್ನು ಹಾಕಿದರೆ ಪ್ರ ಯೋಜನವಿಲ್ಲ. ಎರಡು ಸ್ಥಾನಗಳೂ ಪ್ರ ತ್ಯೇಕವಾದುದರಿಂದ ಆಯಾ ಸ್ಥಾನದಿಂದ ಯಾರು ವಿಧಾನ ಸಭೆಗೆ ಹೋಗಬೇಕೆಂ ದು ನಿಮ್ಮ ಅಪೇಕ್ಷೆಯೋ ಅವರ ಪೆಟ್ಟಿಗೆ ಯೊಳಕ್ಕೆನೇ ಮತಪತ್ರವನ್ನು ಹಾಕಬೇ ಕು. ಚುನಾವಣೆಯ ಗುರುತು ಸ್ಪಷ್ಟವಾ ಗಿರುವುದರಿಂದ ಇದಕ್ಕೇನೂ ಆತಂಕ ವಾಗಲಾರದು. ಯಾವ ಸಂದರ್ಭದಲ್ಲೆ ಆಗಲಿ, ಮತಪತ್ರವನ್ನು ಉಪಯೋಗಿಸ ದೆ, ಅಂದರೆ ಪೆಟ್ಟಿಗೆಯೊಳಕ್ಕೆ ಹಾಕದೆ, ಹಿಂದೆ ತರಬಾರದು; ತಂದರೆ ಅದು ಅಸಿಂಧುವಾಗುತ್ತದೆ. ಇದನ್ನು ಚೆನ್ನಾಗಿ ಗ ಮನದಲ್ಲಿಡಿರಿ.

ಮತದಾನ ಮಾಡುವುದಕ್ಕೆ ತಡಮಾ ಡಬಾರದು. ಆಲ್ಲಿ ಹೋಗಿ ಯಾರಿಗೆ ಮತ ದಾನ ಮಾಡಲಿ ಎಂದು ಆಲೋಚಿಸುತ್ತಾ ಕುಳಿತಿರಬಾರದು. ಯಾರಿಗೆ ಎಂಬುದನ್ನು ಮೊದಲೇ ನಿರ್ಧರಿಸಿರುವುದು ಯೋಗ್ಯ. ಬೇಗನೇ ತಪ್ಪಿಲ್ಲದಂತೆ ಮತದಾನ ಮಾಡಿ ಕೋಣೆಯಿಂದ ಹೊರ ಬರಬೇಕು. ನೀವು ಮತದಾನ ಮಾಡುವಾಗ ಗೊಂದಲ ಅಥ ವಾ ಸಂಶಯಗಳಿಗೆ ಬಲಿಯಾಗಬೇಕಾಗಿ ಲ್ಲ. ನಿಮ್ಮ ಮತವು ಸಂಪೂರ್ಣವಾಗಿ ರಹಸ್ಯವಾದದ್ದು, ಅದು ಬಹಳ ಗುಟ್ಟಿನ ವಿಷಯ. ಆದುದರಿಂದಲೇ ಅವನ್ನು ನೀವು ಯಾರಿಗೆ ಕೊಟ್ಟಿದ್ದೀರೆಂಬುದನ್ನು ನೋಡಿ ತಿಳಿಯುವುದಕ್ಕೆ ಯಾರಿಗೂ ಅಧಿಕಾರವಿ ಲ್ಲ. ಮತದಾನ ಮಾಡುವ ಕೋಣೆಯೊ ಳಗೆ ನೀವಲ್ಲದೆ ಬೇರೆ ಯಾರೂ ಇರುವುದಿ ಲ್ಲ. ನೀವು ಯಾರಿಗೆ ಓಟು ಕೊಟ್ಟಿದ್ದೀರಿ ಎಂಬುದನ್ನು ತಿಳಿಯಲು ಯಾರಿಗೂ ಸಾ ಧ್ಯವಾಗುವುದಿಲ್ಲ. ಆದುದರಿಂದ ಯಾವ ತರದ ಭಯವಾಗಲೀ ಆತಂಕವಾಗಲೀ ಸಂಕೋಚವಾಗಲೀ ಇಲ್ಲದೆ ನೀವು ನಿಮ್ಮ ಇಚ್ಛಾನುಸಾರವಾಗಿ ನಿಮ್ಮ ಓಟನ್ನು ಕೊಡಬಹುದು. ನೀವು ಯಾರಿಗೆ ಓಟು ಕೊ ಟ್ಟಿದ್ದೀರೆಂಬುದನ್ನು ತಿಳಿಯಲು ಸಾಧ್ಯವಿ ದೆ ಎಂದು ಹೆದರಿರುವವರ ಮಾತಿನಲ್ಲಿ ನಂಬಿಕೆಯನ್ನು ಇಡಬೇಡಿರಿ. ಇತರರ ಕೋರಿಕೆಗೆ, ಪ್ರೇರಣೆಗೆ, ಸಲಹೆಗೆ, ಇಚ್ಛೆಗೆ ಅಥವಾ ಬೆದರಿಕೆಗೆ ಒಳಗಾಗಿ ಸ್ವಂತ ಇಚ್ಛೆ ಅಥವಾ ಅಭಿಪ್ರಾಯಕ್ಕೆ ವಿರುದ್ಧವಾಗಿ ಎಂದಿಗೂ ಮತದಾನ ಮಾಡಬೇಡಿರಿ. ನಿಮ್ಮ ಇಚ್ಛೆ ಮತ್ತು ಅಭಿಪ್ರಾಯದಂತೆ ಯೇ ಓಟು ಮಾಡಿರಿ. ಇದಕ್ಕೆ ಯಾವ ಅಡ್ಡಿಯೂ ಇರುವುದಿಲ್ಲ.

ವಿಧಾನಸಭೆಗೆ ಮತದಾನ ಮಾಡಿದ ಬಳಿಕ ನೀವು ಹೊರಬರುವಾಗ ಬಾಗಿಲ ಲ್ಲಿ ನಿಂತಿರುವ ಜವಾನನು ನಿಮ್ಮಿಂದ ಹಿಂ ದೆ ಪಡೆದುಕೊಂಡ ಗುರುತಿನ ಚೀಟನ್ನು ಮನಃ ನಿಮಗೆ ಕೊಡುತ್ತಾನೆ. ಅದನ್ನು ತೆಗೆದುಕೊಂಡು ನೀವು ಲೋಕಸಭೆಗೆ ಮತದಾನವಾಡುವ ಕೋಣೆಗೆ ಹತ್ತಿರದ ಟ್ಟಿರುವ ಇನ್ನೊಬ್ಬ ಅಧಿಕಾರಿಗಳ ಬಳಿಗೆ ಹೋಗಿ, ಅವನ್ನು ಅವರ ಕೈಗೆ ಒಪ್ಪಿಸ ಬೇಕು. ಅವರು ನಿಮ್ಮ ಗುರುತನ್ನು ಪರಿ ಶೀಲಿಸಿ ಮತಪತ್ರವನ್ನು ನಿಮ್ಮ ಕೈಗೆ ಕೊಡುತ್ತಾರೆ. ಇಲ್ಲಿ ನಿಮಗೆ ಗುರುತಿನ ಚೀಟನ್ನು ತಾಪಸುಕೊಡುವುದಿಲ್ಲ; ಮತ್ತು ನಿಮ್ಮ ತೋರು ಬೆರಳಿಗೆ ಶಾಯಿಯ ಗು ರುತನ್ನು ಸಹ ಮಾಡುವುದಿಲ್ಲ ಮಂಗ ಳೂರು ನಗರನವರು ಇಲ್ಲಿ ಪುನಃರುಜುವ ನ್ನು ಅಥವಾ ಹೆಬ್ಬೆಟ್ಟಿನ ಗುರುತನ್ನು ಮಾಡಬೇಕಾಗುವುದೂ ಇಲ್ಲ. ಇಷ್ಟುವಿ ನಾ ಉಳಿದೆಲ್ಲ ವಿಷಯಗಳಲ್ಲಿ, ನೀವು ವಿಧಾನಸಭೆಯ ಸ್ಥಾನ ಕ್ಕೆ ಹೇಗೆ ಮತದಾನ ಮಾಡಿದಿ ರೋ ಅದೇ ರೀತಿಯಲ್ಲಿ ಇಲ್ಲೂ ಮತದಾ ನ ಮಾಡಬೇಕು. ಒಳಕೋಣೆಯ ವ್ಯವ ಸ್ಥೆಗಳನ್ನು ಇದಕ್ಕೆ ತಕ್ಕಂತೆಯೇ ವಿವರಿ ಸಿರುತ್ತದೆ. ಇಲ್ಲಿ ಮತದಾನ ಮಾಡಿದ ಬಳಿಕ ನೀವು ಹೊರಗೆ ಹೋಗುವ ಬಾಗಿ ಲಿನಿಂದ ಹೊರಟು ನಿಮ್ಮ ಮನೆಗೆ ಹೋ ಬೇಕು. ಅಂತೂ ಮತದಾನ ಮಾಡಲು ಹೆಚ್ಚು ಸಮಯ ತೆಗೆದುಕೊಳ್ಳಬಾರದು. ನಿಮ್ಮಂತೆಯೇ ಕಾದಿರುವ ಜನರು ಅನೇಕ ರಿದ್ದಾರಾದುದರಿಂದ ಹೀಗೆ ಸಹಕಾರವನ್ನು ಅಧಿಕಾರಿ ವರ್ಗವು ನಿಮ್ಮಿಂದ ಬಯಸುತ್ತದೆ.

ಮತದಾರರು ಕೆಲವು ಉತ್ತಮ ನಡವಳಿಕೆಗಳಿಂದ ಕೂಡಿರಬೇಕಾಗಿದೆ. ಮತ ದಾನ ಮಾಡುವುದು ಪವಿತ್ರವಾದ ಅಧಿ ಕಾರವೆಂದು ತಿಳಿಯಲ್ಪಟ್ಟಿದೆ. ಆದುದ ರಿಂದ ಯಾರೇ ಆಗಲಿ ಚುನಾವಣೆಯ ಪವಿತ್ರತೆಯನ್ನು ಕಳಂಕಗೊಳಿ ಸುವ ಕೆಲಸಗಳಲ್ಲಿ ನಿರತರಾಗ ಬಾರದು. ನೀವು, ಮತದಾರರು, ಚುನಾವಣೆಯ ಪಾವಿತ್ರ್ಯವನ್ನು ಹೇಗೆ ಉಳಿಸಿಕೊಳ್ಳಬಹುದು? ಕೆಳಗಿನ ಸಪ್ತ ಸೂತ್ರಗಳನ್ನು ದಯವಾಡಿ ನೆನಪಿಟ್ಟು ಕೊಂಡು, ಅವುಗಳ ಆಶಯಕ್ಕೆ ಭಂಗ ಬಾರದಂತೆ ವರ್ತಿಸಿದರೆ ನೀವು ನಿಮ್ಮ ಆ ತ್ಮ ಸಾಕ್ಷಿಗೆ ನೆಡೆದುಕೊಂಡಂತಾಗುವುದಲ್ಲದೆ, ರಾಷ್ಟ್ರಕ್ಕೆ ನಿಷ್ಠೆಯನ್ನು ವ್ಯಕ್ತಪಡಿಸಿದಂತೆಯೂ ಆಗುತ್ತದೆ. ಆ ಸೂತ್ರಗಳೇ ನೆಂದರೆ—

೧. ಮತದಾನ ಕ್ಷೇತ್ರಕ್ಕೆ ಬರುವುದ ಕ್ಕಾಗಲೀ ಹಿಂದಿರುಗುವುದಕ್ಕಾಗಲೀ ಉ ಮೇದುವಾರರಿಂದಾಗಲೀ ಅವರ ಪ್ರತಿನಿ ಧಿಗಳಿಂದಾಗಲೀ ಉಚಿತವಾದ ವಾಹನ ಸೌಕರ್ಯಗಳನ್ನು ಪಡೆಯಬೇಡಿ—ನಡೆ ದು ಕೊಂಡೇ ನೀವು ಹೋಗಬಾರದೇಕೆ? ಅವರು ಕೊಡಿಸುವ ಕಾಫಿ, ಪಾನೀಯ ಇತ್ಯಾದಿಗಳನ್ನು ಕುಡಿಯಲೂ ಹೋಗ ಬೇಡಿ; ಕುಡಿಸುವಂತೆ ಒತ್ತಾಯಿಸಲೂ ಬೇಡಿ.

೨ ಬನಿಕರಿರುವ ಆಸ್ಥಾನ ಸಚಿವರುವ ಮತ್ತಾರದೋ ಹೆಸರಿನಲ್ಲಿ ಅಥವಾ ಸು ಳ್ಳು ಹೆಸರಿನಲ್ಲಿ ನೀವೆಂದಿಗೂ ಮತದಾನ ಮಾಡಬೇಡಿ.

೩. ಮತದಾನವನ್ನು ಮಾಡುವುದ ಕ್ಕಾಗಿ ಯಾರಿಂದಲೇ ಆಗಲಿ ಹಣವನ್ನು ಪಡೆಯಬೇಡಿ.

(ಇನೇ ಪುಟ ನೋಡಿರಿ)

ನಿಮ್ಮ ಆರ್ಥಿಕ ಸಮಸ್ಯೆಗಳಿಗೆ ಸಲಹೆಗಳು ಬೇಕೆಂದಿದ್ದಾಗ, ಅವುಗಳನ್ನು ಕೊಡಲು ಸದಾ ಸಿದ್ಧರಿದ್ದೇವೆ!

ಮೈಸೂರು, ಸುದರಾಸ್ಯು ಆಂಧ್ರ ಪ್ರದೇಶ, ಕೇರಳ ಮತ್ತು ಮುಂಬಯಿ ಸಂಸ್ಥಾನ ಗಳಲ್ಲಿ ಒಟ್ಟು 46 ಶಾಖೆಗಳಿವೆ. ಸಕಲ ವಿಧದ ಬೇಂಕಿಂಗ್ ವಹಿವಾಟುಗಳನ್ನು ಕೈಗೊಳ್ಳುತ್ತೇವೆ. ನಿಗಾಕೆಗಳ ತೃಪ್ತಿಯೇ ನಮ್ಮ ಧ್ಯೇಯ!

50 ವರುಷಗಳಲ್ಲಿ ನಾವು ಗಳಿಸಿದ ನಮ್ಮ ಅತ್ಯಮೂಲ್ಯ ಬೇಂಕಿಂಗ್ ಅನುಭವದ ಪ್ರಯೋಜನವನ್ನು ಇಂದಿನಿಂದಲೇ ಪಡೆಯಿರಿ!!

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

THE CANARA BANKING CORPORATION LIMITED

98 ವರ್ಷಗಳ ವ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯಂಗಾರವರ ರತ್ನತ್ವಯಗಳು

ಟ್ರೇಡ್ ಮಾರ್ಕ್

ಪಂ|| A. R. ಅಯ್ಯಂಗಾರ್

ಸಂತಾನ ಸಿಂಧೂರ (ಸ್ತ್ರೀಯರಿಗೆ: ಬ್ಯಾಕೆಟ್)

ಮದನ ವಿಲಾಸ (ಪುರುಷರಿಗೆ: ಗುಳಿಗೆ)

ಈ ಧನ್ವಂತರಿ ಸಂಬಂಧದ ಹೊಸ್ತಿಲು ನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತವೆ.

"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನವಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಸಿ, ನಪುಂಸಕತೆಯನ್ನು ನಾಮಾವಶೇಷ ಮಾಡುತ್ತವೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ ತಾಯ್ತಂದೆಗಳಾಗಿದ್ದಾರೆ.

ಹೊಸ ಕ್ಯಾಟಲಾಗು, ವಿಷಯದ ಬೆಲೆ ಇತ್ಯಾದಿಗಳಿಗೆ 3 ಆಣೆ ಸ್ಟ್ಯಾಂಪು ಕಳಿಸಿರಿ

ಎ. ರಾಮಸ್ವಾಮಿ ಅಯ್ಯಂಗಾರ್ ಸನ್ & ಕಂ., (ನ. ಯು.)

639 ಸಂತಾನ ಸಿಂಧೂರ ಸದನ (ಪೋಸ್ಟ್ ಬೋಕ್ಸ್ 9), ಮೈಸೂರು S. I.

ಕುಂದಾಪುರ ಮತದಾರ ಕ್ಷೇತ್ರದ ಎಸೆಂಬ್ಲಿ ಉಮೇದ್ವಾರ ಕೆ. ಎಸ್. ಎನ್. ಅಡಿಗ

NAVAYUGA

Popular Kannada Weekly

Founder:—

A. B. SHETTY, *M. L. A.*
Former Minister for Public Health,
Govt. of Madras.
At Present Minister for Health
Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೬	೨೧-೨-'೫೭	೨೪

ಕಾಂಗ್ರೆಸು ಮತ್ತು ಪ್ರತಿಪಕ್ಷ

ಈಚೆಗೆ ಕೆಲವು ದಿನಗಳಿಂದ ಚುನಾವಣೆಯಲ್ಲಿ ಹೆಚ್ಚಿನ ಮತ ಸಂಪಾದನೆಯ ಉದ್ದೇಶದಿಂದ ಪ್ರತಿಪಕ್ಷಗಳು ಕಾಂಗ್ರೆಸಿನ ವಿರುದ್ಧವಾಗಿ ಹಲವು ಬಗೆಯ ಆಪಾದನೆಗಳನ್ನು ತಮ್ಮ ಪ್ರಚಾರದ ಬೇಳೆ ಮಾಡಿರುವ ವಿಷಯ ಮತದಾರರ ಗಮನಕ್ಕೆ ಬಂದಿರಬಹುದು. ಇವುಗಳಲ್ಲಿ ಮುಖ್ಯವಾದ ಕೆಲವನ್ನು ಇಲ್ಲಿ ಎತ್ತಿ ಹೇಳಿ ಅವು ಕಾಂಗ್ರೆಸಿನ ಬಗ್ಗೆ ಆಪಪ್ರಚಾರವನ್ನು ಮಾಡುವ ಒಂದೇ ಉದ್ದೇಶವುಳ್ಳವುಗಳಾಗಿವೆಯಲ್ಲದೆ ಸತ್ಯಕ್ಕೆ ಹೊಂದಿಕೊಂಡಂಥವಲ್ಲ ಎಂದು ಸಿದ್ಧಪಡಿಸಲು ನಣ್ಣ ಪ್ರಯತ್ನವನ್ನು ನಾವೀಗ ಮಾಡುತ್ತೇವೆ. ಚುನಾವಣೆಯ ಪ್ರಚಾರ ಸಭೆಗಳು ಹೆಚ್ಚಾಗಿ ಆಯಾ ಪಕ್ಷದವರ ಕಡೆಯಿಂದಲೇ ವ್ಯವಸ್ಥಿತವಾಗುವುದರಿಂದ ಮತದಾರರ ಮುಂದೆ ಆ ಪಕ್ಷದವರು ಚಿತ್ರಿಸುವ ಚಿತ್ರವನ್ನೇ ಉಳಿಯುತ್ತವೆ; ಅವರು ಹೌದೆನ್ನುವಂತೆ ಈ ಚಿತ್ರಾಂಕನ ಕಾರ್ಯವನ್ನು ಮಾಡುತ್ತಿರುವುದರಿಂದ ಮತದಾರರಲ್ಲಿ ಹೆಚ್ಚಿನವರು ಸಮಯಸ್ಫೂರ್ತಿಯ ಪ್ರಭಾವ ಮತ್ತು ಪರಿಣಾಮದಿಂದಂತೆ ಈ ಕೀಳಿಕೆಗಳಿಗೆ ತಲೆದೂಗುವ ಹವ್ಯಾಸವನ್ನು ತೋರುತ್ತಾರೆ. ಇಂಥವರು ಮುಂದೆ ಮರುದಿನ ಕಾಂಗ್ರೆಸಿಗರು ಮಾಡುವ ಭಾಷಣದ ಫಲವಾದರೂ ಇದಕ್ಕೆಂತ ಹೆಚ್ಚು ಭಿನ್ನವಾಗಿ ಉಳಿಯುವುದಿಲ್ಲ- ಅಂದರೆ ಆಗ ಕಾಂಗ್ರೆಸಿಗರು ಹೇಳುವುದೂ ಸತ್ಯ ಎಂಬಂಥ ಭಾವನೆಗೆ ಈ ಜನರು ಬಲಿಯಾಗುತ್ತಾರೆ. ಆದರೆ ಎಂದಿಗೂ ಯಾರ ಹೇಳಿಕೆಯು ಸತ್ಯಕ್ಕೆ ತೀರ ಸವಿಸವಾದುದಾಗಿದೆ, ಯಾರ ನಿಲುಮೆಯು ಪ್ರತ್ಯಕ್ಷ ಪರಿಸ್ಥಿತಿಯಲ್ಲಿ ಹೆಚ್ಚು ಸಮರ್ಪಕವಾಗಿದೆ, ಯಾರು ಸದ್ಯ ನೆಮ್ಮಲ್ಲಿಗೆ ಧಾರಾಳ ಪ್ರಯೋಜನವನ್ನು ತರಬಲ್ಲವರಾಗಿದ್ದಾರೆ, ಯಾರಿಗೆ ಸ್ಪೋತ್ಸಾಹವನ್ನಿತ್ತರೆ ರಾಷ್ಟ್ರವು ತಲೆ ಎತ್ತಿ ನಿಲ್ಲುವಂತೆ ಮಾಡಬಹುದಾಗುತ್ತದೆ ಎಂದು ಮುಂತಾಗಿ ಪ್ರೌಢಿಗಳನ್ನು ತಮಗೆ ತಾವೇ ಪ್ರಾಕಿಕೊಂಡು, ವಿದ್ಯಮಾನಗಳನ್ನೆಲ್ಲ ನಿಷ್ಪಕ್ಷಪಾತತನದಿಂದ ವಿಮರ್ಶಿಸಿ, ಸ್ವಂತ ವಿಚಾರ ಶಕ್ತಿಯನ್ನೂ ವಿವೇಕವನ್ನೂ ಉಪಯೋಗಿಸಿ, ತೀರ್ಮಾನವೊಂದಕ್ಕೆ ಬರುವ ಉತ್ಸಾಹ ಮತ್ತು ಸಂಕಲ್ಪ ಪೂರ್ತಿ ಮತದಾರರಲ್ಲಿ ಹೆಚ್ಚಿನವರಿಗೆ ಇಲ್ಲ. ಆವರು ಭಾವನಾಪರವಶರಾಗುವುದೇ ಅಧಿಕ; ಮತ್ತು ಇದೇ ನಮ್ಮ ಪ್ರಜಾಸ್ವಭುತ್ವದ ಪ್ರಥಮ ದೌರ್ಬಲ್ಯ. ಇದರ ಡೆಸೆಯಿಂದಾಗಿಯೇ ನಾವು ಪ್ರತಿಪಕ್ಷಗಳು ಮಾಡುತ್ತಿರುವ ಹುರುಳಿಲ್ಲದ ಟೀಕೆಗಳಿಂದಲೂ ಪ್ರಭಾವಿತರಾಗುವಂತಾಗುತ್ತದೆ. ಉದಾಹರಣೆಗೆ, ಪ್ರಜಾಸಮಾಜವಾದಿ ಉಮೇದ್ವಾರರೊಬ್ಬರು ಮತದಾರರ ಮುಂದೆ ಹೀಗೆಂದರು— "ಕಾಂಗ್ರೆಸು ಸಂಸ್ಥೆಯ ಮುಖಂಡರೆಲ್ಲರೂ ಪ್ರಜಾಸ್ವಭುತ್ವದ ಬೆಳವಣಿಗೆಗೆ ಕ್ರಬಲ ಶಕ್ತಿಸಂಪನ್ನ ವಿರೋಧಿ ಪಕ್ಷ ಬೇಕೆಂದು ಹೇಳುತ್ತಾರೆ. ಆದರೆ ಎಲ್ಲೆಲ್ಲಿ ಪ್ರತಿಪಕ್ಷಗಳು ಉಮೇದ್ವಾರರನ್ನು ನಿಲ್ಲಿಸಿನೆಯೊ ಅಲ್ಲೆಲ್ಲ ಕಾಂಗ್ರೆಸಿನ ಉಮೇದ್ವಾರರನ್ನೂ ನಿಲ್ಲಿಸಿ ನಮ್ಮ ಪಕ್ಷಜೆಯೇ ಮತನನ್ನೀಯರಿ ಎನ್ನುತ್ತಾನೆ. ಪ್ರತಿಪಕ್ಷವು ಪ್ರಬಲವಾಗಿರಬೇಕೆಂಬ ಹೇಳಿಕೆಗೆ ಈ ನೀತಿಯು ವಿರುದ್ಧವೂ ಅಸಂಗತವೂ ಆಗಿರುತ್ತದೆ. ಇದೇ ಕಾಂಗ್ರೆಸಿನ ದ್ವಿಮುಖ ಧೋರಣೆ" ಹೀಗೆನ್ನುವ ಈ ಧುರೀಣರು ಸತ್ಯವನ್ನೆ ಆಡಿದರೆ? ಎಂದಿಗೂ ಇಲ್ಲ.

ಪ್ರಜಾಪ್ರಭುತ್ವ ಪದ್ಧತಿಯಂತೆ ನಡೆಯುವ ಚುನಾವಣೆಯಲ್ಲಿ ತಾನು ನಿಷ್ಪೆಯನ್ನು ವ್ಯಕ್ತಪಡಿಸುವ ಪಕ್ಷಕ್ಕೆ ಬೆಂಬಲವನ್ನು ಕೋರುವುದು ಮುಖಂಡನಾದವನ ಕರ್ತವ್ಯವೇ ಅಲ್ಲವೆ? ಆದುದರಿಂದ ಕಾಂಗ್ರೆಸು ಸಂಸ್ಥೆಯ ಧುರೀಣರು ಪ್ರಜಾ ಸಮಾಜವಾದಿಗಳನ್ನು ಪ್ರೋತ್ಸಾಹಿಸಿರಿ ಎಂದೋ ಕಮ್ಯುನಿಸ್ಟರನ್ನು ಬೆಂಬಲಿಸಿರಿ ಎಂದೋ ಹೇಳುತ್ತಾ ತಿರುಗಾಡಬಲ್ಲರೆ? ತಿರುಗಾಡಿದರೆ ಆದು ಆವರು ನಿಷ್ಠೆಯನ್ನು ವ್ಯಕ್ತಪಡಿಸುತ್ತಿದ್ದ ಕಾಂಗ್ರೆಸು ಸಂಸ್ಥೆಗೆ ದ್ರೋಹವಾಗುವುದೆಂತೂ ಸರಿಯೇ, ಅದಕ್ಕಿಂತ ಹೆಚ್ಚಾಗಿ ಪ್ರಜಾಪ್ರಭುತ್ವ ಸೂತ್ರದ ವಿಡಂಬನೆಯಾಗಸೆ? ಇಂಥ ಕೆಲಸಕ್ಕೆ ಕೋಗದೆ ಕಾಂಗ್ರೆಸು ಮುಖಂಡರು ಧರ್ಮ ಮಾರ್ಗವನ್ನೆ ಅವಲಂಬಿಸಿದ್ದಾರೆ. ಪ್ರತಿಯೊಂದೂ ಸ್ಥಾನಕ್ಕೆ ಉಮೇದ್ವಾರರನ್ನು ಆವರು ನಿಲ್ಲಿಸಿನ್ನಾರೆ, ಅದು ಆ ಸಂಸ್ಥೆಯ ಬಲವನ್ನು ತೋರಿಸುತ್ತದೆ. ಪ್ರತಿಪಕ್ಷಗಳು ಬೆಳವಣಿಗೆಯನ್ನು ಇನ್ನೂ ಹೊಂದಿಲ್ಲದಿರುವುದರಿಂದಲೇ ಅನೇಕ ಎಲ್ಲ ಸ್ಥಾನಗಳಿಗೆ ಸ್ಪರ್ಧಿಸುವುದು ಸಾಧ್ಯವಾಗುತ್ತಿಲ್ಲ. ಕಾಂಗ್ರೆಸು ಪ್ರತಿಪಕ್ಷಗಳ ಉಮೇದ್ವಾರರೆಲ್ಲರೂ ಅವಿರೋಧವಾಗಿ ಆರಿಸಿಬರುವಂತೆ ತನ್ನ ಪಕ್ಷದಿಂದ ಉಮೇದ್ವಾರರನ್ನು ನಿಲ್ಲಿಸಬಾರದೆಂದು ಸೂಚಿಸುವ ಮಾತನ್ನಾಡುವುದು ಪ್ರಜಾಪ್ರಭುತ್ವ ತತ್ವಜ್ಞನೇ ಕಲಂಕ; ಜನರು ಕಾಂಗ್ರೆಸಿನಲ್ಲಿ ಇಟ್ಟಿರಬಹುದಾದ ವಿಶ್ವಾಸವನ್ನು ಪ್ರತಿಪಕ್ಷದವರಲ್ಲಿ ಒತ್ತೆಯನ್ನಿಟ್ಟುದಕ್ಕೆ ಇಂಥ ಹೇಡಿತನವು ಸಮ. ಕಾಂಗ್ರೆಸು ಸಂಸ್ಥೆಯು ಈ ಬಗೆಯ ಮೌಢ್ಯವನ್ನೆಂದೂ ತೋರಿಸಲಾರದು. ಹೀಗೆ ಮೌಢ್ಯವನ್ನು ತೋರಿಸುವುದೆಂದರೆ ಸದಸ್ಯರ ನಾಮಕರಣ ಮಾಡಿ ಸ್ಥಾನಗಳನ್ನು ತುಂಬಿಸಿದಂತೆ; ಹೊರತು ಚುನಾವಣೆಯನ್ನು ನಡೆಸಿ ಜನಾಭಿಪ್ರಾಯವನ್ನು ತಿಳಿದುಕೊಂಡಂತಲ್ಲ. ಇಷ್ಟು ಕೃತ್ರಿಮವಾದ ರೀತಿಯಲ್ಲಿ ಪ್ರಜಾಪ್ರಭುತ್ವ ಪದ್ಧತಿಯನ್ನು ಬೆಳೆಸುವುದಕ್ಕೆ ಕಾಂಗ್ರೆಸು ಅವಕಾಶಕೊಡಲು ಇಷ್ಟಪಡುತ್ತಿಲ್ಲವೆನ್ನುವುದು ರಾಷ್ಟ್ರದ ಸೌಭಾಗ್ಯವೇ ಹೊರತು ಬೇರೆಯಲ್ಲ. ಪ್ರತಿಪಕ್ಷಗಳು ಸರ್ವಜ ಬೆಳವಣಿಗೆಯನ್ನು ಹೊಂದಬೇಕೆಂಬುದೇ ಕಾಂಗ್ರೆಸಿನ ಪ್ರಾಮಾಣಿಕವಾದ ಆಶ್ಚೆಯಾಗಿದೆ-ಅದಕ್ಕೆ ತಕ್ಕ ವಾತಾವರಣವನ್ನು ಆದುಸೃಷ್ಟಿಸಿದೆ. ಶಕ್ತಯುತವಾಗಿಯೇ ಇದು ವರ್ಷಗಳಿಗೊಮ್ಮೆ ಮಾತ್ರಾ ಚುನಾವಣೆಗಳು ನಡೆಯುತ್ತವೆ; ಅಲ್ಲದೆ ಸ್ಥಳೀಯ ಸಂಸ್ಥೆಗಳಿಗೆ ಸಹ ಆಗಾಗ್ಗೆ ಚುನಾವಣೆಗಳು ಏರ್ಪಡುತ್ತವೆ. ಕಾಂಗ್ರೆಸು ಸಂಸ್ಥೆಗೆ ತಾನೇ ಸದಾಕಾಲ ದೇಶದಲ್ಲಿ ಅಧಿಕಾರ ಸ್ಥಾನದಲ್ಲಿದ್ದುಕೊಂಡು ರಾರಾಜಿಸಬೇಕೆಂಬ ಇರಾದೆ, ಇರುತ್ತಿದ್ದರೆ ರಶ್ಯದಲ್ಲಿ ಮಾಡಿರುವಂತೆ ಪಾರ್ಟಿಯೆಂದರೆ ಕಮ್ಯುನಿಸ್ಟ್ ಪಾರ್ಟಿ-ಬೇರೆ ಪಾರ್ಟಿಯೇ ಇಲ್ಲ ಎಂದು ಘಟನೆಯಲ್ಲಿ ಹೇಳಬಹುದಿತ್ತೆಂಬುದನ್ನು ಮತದಾರರು ಮರೆಯಬಾರದು. ಹೀಗೇನೂ ಮಾಡದೆ ಭಾರತವನ್ನು ಪ್ರಜಾಸತ್ತಾತ್ಮಕ ರಾಷ್ಟ್ರವೆಂದು ಘೋಷಿಸಿರುವುದು ಕಾಂಗ್ರೆಸಿಗರದೇ ನಿಸ್ಸಂಧಿಗ್ಧ ಬಹುಮತವಿದ್ದ ಘಟನಾ ಸಮಿತಿಯು ವಹಿಸಿನ ಉದಾತ್ತವೂ ಉಚ್ಚವೂ ಆದ ನಿಲುಮೆಯನ್ನು ವ್ಯಕ್ತಪಡಿಸುತ್ತದೆ. ನಮ್ಮ ಘಟನೆಯಲ್ಲಿ ಹೀಗೆ ಹೇಳಿರುವುದರಿಂದಲೇ ಈ ವಾಕ್ಯದಲ್ಲಿ ರಕ್ಷಣೆ ದೊರೆತಿರುವುದರಿಂದಲೇ ಅನೇಕ ಪಕ್ಷಗಳು ಹುಟ್ಟಿಕೊಂಡು, ಅಥವಾ ತಮ್ಮ ಚಟುವಟಿಕೆಗಳನ್ನು ಬೆಳೆಸಿಕೊಂಡು ಇಂದು ಶಾಸನಾಂಗದ ಎಲ್ಲ ಸ್ಥಾನಗಳಿಗಲ್ಲದಿದ್ದರೂ ಕೆಲವು ಸ್ಥಾನಗಳಿಗಾದರೂ ಉಮೇದ್ವಾರರನ್ನು ನಿಲ್ಲಿಸಿ ಛರದಿಂದ ಪ್ರಚಾರವನ್ನು ಇವರ ಪರವಾಗಿ ನಿರ್ಭಯದಿಂದ ನಡೆಸಲು ಅವಕಾಶ ಸಿಕ್ಕಾರುತ್ತದೆ. ತಾನೇ ಆಳಬೇಕೆಂದು ಕಾಂಗ್ರೆಸಿನ ಅಭೀಷ್ಟವಾಗಿರುತ್ತಿದ್ದರೆ ಅಥವಾ ದೇಶದಲ್ಲಿ ರಾಜಕೀಯ ಪಕ್ಷ ವೆಂದರೆ ತಾನೊಂದೇ ಎಂಬ ಭಾವನೆ ಅವರಲ್ಲಿರುತ್ತಿದ್ದರೆ ಆದೆಂದೂ ಪ್ರಜಾಸತ್ತೆಯ ಮಾರ್ಗವನ್ನು ಹಿಡಿದು ಸಾಗುವ ಆನಿವಾರ್ಯತೆಬೀಳು ತ್ತಿರಲಿಲ್ಲ— ಮತ್ತು ರಾಷ್ಟ್ರಕ್ಕೆ ನಿಜಕ್ಕೂ ಘಾತಕವಾಗಿಜೆ ಎಂದರೆ ಭಾವಿಸುವ ಕಮ್ಯುನಿಸಂ ಮತ್ತು ಜಾತೀಯತೆಯ ವಿಷ ವಾತಾವರಣದಲ್ಲಿ ಪ್ರಾಬಲ್ಯಕ್ಕೆ ಬಂದಂಥ ಪಕ್ಷಗಳಿಗೆ ನೇರಾದ ಬಹುಸ್ಕಾರವನ್ನು ಹಾಕದೆ ಜನರನ್ನು ಆದುಪದೇಶದಿಂದ ಸರಿ ದಾರಿಗೆ ತರಲು ಕಾಂಗ್ರೆಸು ಹೆಣಗಬೇಕಾಗುತ್ತಿರಲಿಲ್ಲ. ಆದುದರಿಂದ ಕಾಂಗ್ರೆಸು ಪ್ರತಿಪಕ್ಷಗಳನ್ನೂ ಅವುಗಳ ಟೀಕೆಯನ್ನೂ ಸ್ವಾಗತಿಸುತ್ತದೆ; ಅದೇ ಹೊತ್ತಿಗೆ ತಾನೂ ಒಂದು ಪಕ್ಷವಾಗಿದ್ದುಕೊಂಡು ಪಕ್ಷ ನಿಲುಮೆಯನ್ನು ಜನರ ಮುಂದಿಡುವ ಮತ್ತು ಚುನಾವಣೆಗಳಲ್ಲಿ ಹೋರಾಟ ಕೊಡುವ ಸ್ವಾತಂತ್ರ್ಯವನ್ನು ಉಳಿದ ಪಕ್ಷಗಳಷ್ಟೇ —ಅದಕ್ಕೆಂತ ಹೆಚ್ಚಲ್ಲ—ಅನುಭವಿಸಲು ಅಧಿಕಾರವನ್ನು ಹೊಂದಿದೆ. ತನ್ನ ಉಮೇದ್ವಾರರು ನಿಂತಿರುವ ಕಡೆ ಪ್ರತಿಪಕ್ಷಗಳರಾರದೆಂದು ಕಾಂಗ್ರೆಸ್ಸೆಂದೂ ಜನರ ಮುಂದೆ ಹೇಳಿದ್ದಿಲ್ಲ. ಕಾಂಗ್ರೆಸಿಗರಿಗೆ ವಿರುದ್ಧವಾಗಿ ಸ್ಪರ್ಧೆಗೆ ಯಾರಾದರೂ ನಿಂತಿದ್ದಾದರೆ ಅವರ ಅರ್ಜಿಯು ಚುನಾವಣೆಯ ನಾನು ಪತ್ರಗಳನ್ನು ಸ್ವೀಕರಿಸುವ ಅಧಿಕಾರಿಗಳಿಂದ ನಿರಾಕರಿಸಲ್ಪಡುವುದಿಲ್ಲ—ಎಲ್ಲವೂ ಕ್ರಮ ಪ್ರಕಾರವಾಗಿದ್ದರೆ ಯಾರ ಅರ್ಜಿಯನ್ನು ಬೇಕಾದರೂ ಸ್ವೀಕರಿಸಲು ಚುನಾವಣೆಯ ಅಧಿಕಾರಿಗಳು ಸಿದ್ಧರಿದ್ದಾರು. ಪ್ರತಿಪಕ್ಷಗಳಲ್ಲಿ ಸಾಕಷ್ಟು ಶಕ್ತಿ ಮತ್ತು ಜನ ಬೆಂಬಲದ ಭರವಸೆ ಇಲ್ಲದಿದರಿಂದಲೇ ಅವುಗಳಿಗೆ ಎಲ್ಲ ಸ್ಥಾನಕ್ಕೆ ಸ್ಪರ್ಧೆ ಕೊಡುವುದಾಗಲಿಲ್ಲವೆನ್ನುವುದೇ ಸತ್ಯ ವಿಷಯ. ಇದನ್ನು ಮರೆಮಾಚಬಾರದು; ಮತದಾರರು ಸಣ್ಣ ತೀರ ದುರ್ಬಲವಾದ ಪಕ್ಷದಲ್ಲಿ ತಾವು ಎಷ್ಟು ವಿಶ್ವಾಸವನ್ನಿಟ್ಟು ಮತವನ್ನು ಕೊಡಬಹುದೆಂದು ಮತದಾನಕ್ಕೆ ಮುಂಜೆ ತೀವ್ರವಾಗಿ ಆಲೋಚಿಸಿ ಕೊಳ್ಳಬೇಕು. ಆದರಂತೆಯೇ "ಕಾಂಗ್ರೆಸು ಶ್ರೀಮಂತರ ಸಂಸ್ಥೆ; ನಮ್ಮದು ಬಡವರ ಪಾರ್ಟಿ" ಎನ್ನುವ ಪ್ರತಿಪಕ್ಷಗಳ ಮಾತಿನಲ್ಲಿರುವ ಸ್ವಾರಸ್ಯವನ್ನು ಸಹ ಮತದಾರು ಗುರುತಿಸಬೇಕು. ವ್ಯಕ್ತಿಶಃ ಶ್ರೀಮಂತರಾದವರೂ ಬಡವರಾದವರೂ ಎಲ್ಲ ಪಕ್ಷಗಳಲ್ಲೂ ಇದ್ದಾರೆ. ಇದು ಮುಖ್ಯವಾವ ವಿಷಯವಲ್ಲ. ಈ ವ್ಯಕ್ತಿಗಳು ಪಕ್ಷವನ್ನ ಧೋರಣೆಯಂತೆ ನಿಶ್ಯ ವರ್ತನೆಯನ್ನು ಇಟ್ಟುಕೊಂಡಿದ್ದಾರೆಯೆ, ಇಟ್ಟುಕೊಳ್ಳ ಬಲ್ಲರೆ ಎನ್ನುವುದೇ ಮುಖ್ಯ. ಕಾಂಗ್ರೆಸು ಸಂಸ್ಥೆಯಲ್ಲಿ ಶ್ರೀಮಂತರಿದ್ದಾರೆಂದು ಹೇಳಲೇನೊ ಹೇಳಬಹುದು—ಆದರೆ ಕಾಂಗ್ರೆಸು ಸರಕಾರವು ಇಸ್ಪರವರೆಗೆ ಮಾಡಿದ ಶಾಸನಗಳಲ್ಲಿ ಬಡವರ ಸೌಕರ್ಯಗಳನ್ನು ಹೆಚ್ಚಿಸುವ ಉದ್ದೇಶವೇ ಸ್ಪಷ್ಟವಾಗಿ ವ್ಯಕ್ತವಾಗಿದೆಯಲ್ಲದೆ, ಶ್ರೀಮಂತರ ಸ್ಥಾನಮಾನಗಳಿಗೆ ಚ್ಯುತಿ ಇಲ್ಲದಂತೆ ಮಾಡುವ ಪ್ರಯತ್ನವೆಂದಿಗೂ ನಡೆದುದಿಲ್ಲ. ಒಕ್ಕಲುಹಿತ ಮಸೂದೆಯಂಥ ಒಂದು ಕ್ಲಿಷ್ಟ ಸಮಸ್ಯೆಯನ್ನೇ ಎತ್ತಿಕೊಳ್ಳೋಣ. ಪ್ರತಿಪಕ್ಷದವರು "ಕಳೆದ ಹತ್ತು ವರ್ಷಗಳಲ್ಲಿ ಉಳುವವನನ್ನೆ ಭೂಮಿಯ ಒಡೆಯನಾಗಿ ಮಾಡುವ ಶಾಸನ ತಯಾರಿಸಲು ಸರಕಾರಕ್ಕೆ ಆಗಲಿಲ್ಲ; ಆದುದರಿಂದ ಅದು ಶ್ರೀಮಂತರ ಪಕ್ಷಪಾತಿ ಎಂಬುದು ಸ್ಪಷ್ಟ" ಎಂದು ಆರೋಪಿಸುತ್ತಾರೆ. ಆದರೆ ನಿಜವಾಗಿ ನಡೆದಿರುವುದೇನು? ಭೂಮಿಯ ಒಡೆತನವನ್ನ ಸಾಗುವಳಿದಾರನಿಗೆ ವರ್ಗಾಯಿಸುವಷ್ಟು ಪ್ರಗತಿಪರವಾದ ಹೆಜ್ಜೆಯನ್ನು ಮುಂದಿಟ್ಟಿಲ್ಲವಾದರೂ ನ್ಯಾಯವಾದ ನೇಣಿಯನ್ನು ತೀರ್ಮಾನಿಸಿ ಅಷ್ಟು ಮಟ್ಟಿಗೆ ಸಾಗುವಳಿದಾರರಿಗೆ ಹಿಂದಿಗಿಂತ ಹೆಚ್ಚಿನ ಭದ್ರತೆಯನ್ನು ಒದಗಿಸಿಕೊಟ್ಟಿ ವಾಖಲೆಯನ್ನು ಕಾಂಗ್ರೆಸು ಏರ್ಪಡಿಸಿದೆ. ಭೂಮಾಲಿಕರ ಪಕ್ಷಪಾತಿಯಾದ ಶಾಸನ ವಿದೆಂದು ವೈರಿಗಳು ಸಹ ಹೇಳುವಂತಿಲ್ಲವಲ್ಲ! "ಸರಕಾರವು ಮೆಲು ನಡೆಯಲ್ಲೋ ಧೋರಣೆವಹಿಸಿ,ನಮ್ಮ ಟೀಕಾಸ್ತ್ರ ಪ್ರಯೋಗದ ಫಲವಾಗಿ ಇಷ್ಟು ಬೇಗನೆ ಈ ರೂಪದಲ್ಲಿ ಯಾದರೂ ರಕ್ಷಣೆ ಸಿಕ್ಕಿತು" ಎಂದು ಪ್ರತಿಪಕ್ಷಗಳು ಮೊದಲು ನಂಜು ಕಾರಿದ ಬಾಯಿಯಲ್ಲೆ ಈಗ ಸಮರ್ಥನೆ ಮಾಡಿಕೊಳ್ಳಬಹುದು. ಇದಕ್ಕೂ ಆರ್ಥವಿಲ್ಲ—ಏಕೆಂದರೆ, ಸರಕಾರಕ್ಕೆ ಶಾಸನವೊಂದನ್ನು ಮಾಡುವುದು ಬೇಡವಾಗಿದ್ದರೆ, ಅದು ಹಾಗೆ ಮಾಡಹೋಗುವಂತೆ

ಬಹ್ಮಾವರ ಮತದಾರ ಕ್ಷೇತ್ರದ ಎಸೆಂಬ್ಲಿ ಉಮೇದ್ವಾರಿ **ಬಿ. ಜಗಜ್ಜೀವನದಾಸ ಶೆಟ್ಟಿ**

ಪ್ರತಿಪಕ್ಷಗಳ ಸದಸ್ಯರೆಂದೂ ಮಾಡಲು ಶಕ್ತರಲ್ಲ; ಏಕೆಂದರೆ ಅವರು ಶಾಸನಾಂಗದ ಸಭೆಯಲ್ಲಿ ಅಲ್ಪಸಂಖ್ಯಾಕರಾಗಿದ್ದಾರೆ; ಅವರು ಅವಿಶ್ವಾಸ ಸೂಚಕ ಗೊತ್ತುವಳಿಯನ್ನು ತಂದರೂ ಸರಕಾರ ನಡೆಸುವ ಕಾಂಗ್ರೆಸು ತನ್ನ ನಿಸ್ಸಂದಿಗ್ಧ ಬಹುಮತದ ಬಲದಿಂದ ಗೆದ್ದು ಬರಬಲ್ಲುದು. "ಮುಂದಿನ ಚುನಾವಣೆಯಲ್ಲಿ ಜನಸ್ವಿಯತೆಯನ್ನು ಸ್ವಲ್ಪವಾದರೂ ಸಂಪಾದಿಸಲಿಕ್ಕಾಗಿ ಈ ತೆರನಾಗು ಸುಧಾರಣೆ ತಂದರೆ," ಎಂದು ಪ್ರತಿಪಕ್ಷಗಳು ಮತ್ತೂ ಗೊಣಗಬಹುದು. ಇದು ನಮಗೂ ಒಪ್ಪಿಗೆ. ಏಕೆಂದರೆ, ಜನರ ಒಳಿತನ್ನೆ ಮಾಡುವುದ ಕಾಂಗ್ರೆಸಿನ ಧ್ಯೇಯ; ಜನರ ಇಚ್ಛೆಯನ್ನು ತಿಳಿದು ಆ ಇಚ್ಛೆಗೆ ರೂಪು ಕೊಡುವ ಶಾಸನವನ್ನು ತಯಾರಿಸಿ ಕಾಂಗ್ರೆಸು ಧನ್ಯನೇ ಆಯಿತು. ಇದರಿಂ ಜನರು ಸಂಪ್ರೀತರಾಗಿ ಮುಂದಿನ ಚುನಾವಣೆಯಲ್ಲೂ ಕಾಂಗ್ರೆಸನ್ನೆ ಬೆಂಬಲಿಸುವರಾದರೆ ಅದು ಜನತೆಯ ಪರವು ಹರ್ಷನನ್ನೂ ಕಾಂಗ್ರೆಸಿನಲ್ಲಿಟ್ಟಿರುವ ವಿಶ್ವಾಸವನ್ನೂ ಸೂಚಿಸುತ್ತದೆ. ಬಹುಜನರ ನಂಬಿಕೆಯನ್ನು ಪಡೆದ ಪಕ್ಷನೇ ಅಧಿಕಾರದಲ್ಲಿರಬಲ್ಲುದು. ಇದೆಂದೂ ಪ್ರಜಾಪ್ರಭುತ್ವ ತತ್ವಕ್ಕೆ ವಿರುದ್ಧವಾದುದಲ್ಲ. ಜದಿಕ್ಕಾಗಿ ಪ್ರತಿಪಕ್ಷಗಳು ಕೊರಗಿ ಫಲವೇನು: "ನಮಗೂ ಒಂದು ಅವಕಾಶ ಕೊಡಿ" ಎನ್ನುವುದು ಪ್ರತಿಪಕ್ಷಗಳ ಕೊನೆಯ ಪ್ರಜಾಸಾಸ್ತ್ರ, "ನಮ್ಮನ್ನು ಕಳಿಸಿ ಕೊಟ್ಟರೆ ಆ ಮೇಲೆ ನೋಡಿ...." ಎನ್ನುವಂಥ ಪೌರುಷ ಅವುಗಳದು. ಈಗಿನ ವಾತಾವರಣದಲ್ಲಿ ಇದು ವಾಸ್ತವಿಕ ಮೌಲ್ಯವೇನನ್ನೂ ಹೊಂದಿಲ್ಲವೆನ್ನುವುದು ಕಸ್ಪ. ೨೦೦ ಮಂದಿ ಸದಸ್ಯರುಳ್ಳ ಮೈಸೂರಿನ ಶಾಸನಾಂಗಕ್ಕೆ ೮೦ ಮಂದಿ ಪ್ರಜಾಸನಾಜವಾದಿಗಳೂ ೫೫ ಮಂದಿ ಕಮ್ಯುನಿಸ್ಟರೂ ೨೦ ಮಂದಿ ಜನಸಂಘದವರೂ ಕೋಗಿ ಏನನ್ನು ತಾನೆ ಮಾಡಬಲ್ಲರು? ಇಷ್ಟು ಸ್ವಲ್ಪ ಉಮೇದ್ವಾರರನ್ನು ಈ ಪಕ್ಷಗಳು ನಿಲ್ಲಿಸಿವೆ—ಎಂದೆ ಮೇಲೆ ಸರಕಾರದಲ್ಲಿ ಅವುಗಳ ಕೈ ಸಾಗಲಾರದು. ಇವರ ಸ್ಥಾನದಲ್ಲಿ ಕಾಂಗ್ರೆಸಿಗರನ್ನೆ ಆರಿಸಿ ಕಳಿಸಿದ ಪಕ್ಷದಲ್ಲಿ ಏನೆಲ್ಲ ಪ್ರಯೋಜನಗಳು ಆ ಮತಕ್ಷೇತ್ರಕ್ಕೆ ಸಿಗಬಹುದಾಗಿತ್ತೋ ಅವೆಲ್ಲವನ್ನೂ ಬುದ್ಧಿ ಪೂರ್ವಕವಾಗಿ ಕಳೆದುಕೊಳ್ಳುವ ದುರ್ದೈವವು ಪ್ರತಿಪಕ್ಷದ ಉಮೇದ್ವಾರನನ್ನು ಬೆಂಬಲಿಸಿದ ಜನರೇ ಅಧಿಕವಾಗುಳ್ಳ ಕ್ಷೇತ್ರದ್ದಾಗುತ್ತದೆ. ಈ ಮೂರ್ಖತನಕ್ಕೆ ಮತದಾರರೆಂದೂ ಗುರಿಯಾಗಬಾರದು, ಕಾಂಗ್ರೆಸಿನ ಉಮೇದ್ವಾರರು ಇರುವಾಗ, ಮತ್ತು ಕಾಂಗ್ರೆಸು ಸಂಸ್ಥೆಯೇ ಅಧಿಕಾರಾರೂಢವಾಗಿ ಮುಂದಿನ ಐದು ವರ್ಷಗಳಲ್ಲಿ ಉಳಿಯುವುದೆಂಬುದು ಗೋಡೆಯಲ್ಲಿ ಬರೆದಷ್ಟು ಸ್ಪಷ್ಟವಾಗಿ ಭೃಗ್ಗೋಚರವಾಗುತ್ತಿರುವಾಗ ಕಣ್ಣುಗಳನ್ನು ತೆರೆದುಕೊಳ್ಳದೆ ಪ್ರತಿಪಕ್ಷಗಳ ವಾಗ್ಜಾಲಕ್ಕೆ ಮರುಳಾಗಿ ಅಮೂಲ್ಯವಾದ ಮತವನ್ನು ಕಾಂಗ್ರೆಸಿನ ಉಮೇದ್ವಾರರ ನೊಗಕ್ಕೆ ಕಟ್ಟಿ ನಿಲ್ಲಿಸಿದ ಜೋಡೆತ್ತುಗಳ ಗುರುತಿನ ಜೆಟ್ಟಿಗೆಗೆ ಹಾಕದೆ ಹೋಗುವುದು ಬುದ್ಧಿವಂತಿಕೆಯ ಕಾರ್ಯವೆನಿಸಲಾರದು. ಆಹಾಗಾದರೆ ಇನ್ನು ಪ್ರತಿಪಕ್ಷಗಳು ಬೆಳೆಯುವುದೆಂತು? ಪ್ರಜಾಪ್ರಭುತ್ವಕ್ಕೆ ಪ್ರತಿಪಕ್ಷವು ಭೂಷಣವಷ್ಟೇಯಲ್ಲ, ಆಗತ್ಯವೂ ಹೌದಲ್ಲವೆ?" ಎಂಬ ಪ್ರಶ್ನೆ ಬರುತ್ತದೆ. ಇದಕ್ಕೆ ನಮ್ಮ ಉತ್ತರ ಈ ರೀತಿಯಲ್ಲಿದೆ—ಭಾರತವು ಪ್ರಜಾಪ್ರಭುತ್ವ ಮಾರ್ಗವಲಂಬಿಯಾಗಿದೆ ಎನ್ನಬಹುದೇ ಹೊರತು, ಈಗಲೇ ಪ್ರಜಾಪ್ರಭುತ್ವದ ಯೌವನಾವಸ್ಥೆಯನ್ನಿದು ಮುಟ್ಟಿದೆ ಎನ್ನಲಾಗದು. ಪ್ರಜಾಪ್ರಭುತ್ವ ತತ್ವದ ಬೀಜಾರೋಪಣೆಯು ನಡೆದಿದೆ; ಅದು ಅಂಕುರಿಸಿ, ಪಲ್ಲವಿಸುತ್ತಿದೆ, ಈಗಲೇ ಫಲವನ್ನು ಅಪೇಕ್ಷಿಸುವುದು ನೈಸರ್ಗಿಕ ಬೆಳವಣಿಗೆಯಲ್ಲಿ ವಿಶ್ವಾಸವಿರುವವರಿಗೆ ಹೇಳಿಸಿದ್ದಲ್ಲ. ಆದುದರಿಂದ ಇನ್ನು ಎರಡು ಮೂರು ದಶಕಗಳ ಅವಧಿಯಲ್ಲಿ ಪ್ರತಿಪಕ್ಷಗಳುಳಿಗಿಂತ ಹೆಚ್ಚಿನ ಬೆಳವಣಿಗೆಯನ್ನು ಹೊಂದಿ, ಪ್ರವರ್ಧಮಾನಗೊಳ್ಳಬಹುದು. ಕಾಂಗ್ರೆಸು ೮೦ ವರ್ಷಗಳಿಂದ ಸಜೀವವಾಗಿದ್ದು ಈ ಬೆಗಿನ ೪೦ ವರ್ಷಗಳಿಂದ ಭಾರತದ ಇತಿಹಾಸವನ್ನು ರೂಪಿಸಿದ ಸಂಸ್ಥೆ—ಆದುದರಿಂದ ಅದಕ್ಕೆ ಇಂಥ ಸ್ಥಾನ ಲಭಿಸಿದೆ; ಅದರ ಉದಾತ್ತವಾದ ಧ್ಯೇಯ ಧೋರಣೆಗಳೂ ಹತ್ತು ವರ್ಷಗಳ ಸಮರ್ಥ ಆಡಳಿತೆಯ ದಾಖಲೆಯೂ ಅದರ ಮಾನವನ್ನು ಹೆಚ್ಚಿಸಿವೆ; ಜನಸ್ವಿಯತೆಯನ್ನು ಸಂಪಾದಿಸಿಕೊಟ್ಟಿವೆ. ಪ್ರತಿಪಕ್ಷಗಳು ಸಹ ಇದಕ್ಕೆಂಕಲೂ ಉದಾತ್ತ ನೀತಿಗಳನ್ನು ಜನಸರಿಸಿ ಜನರ ನಡುವೆ ಬೆರೆತು, ಅವರ ಸುಖದುಃಖಗಳಲ್ಲಿ ಚುನಾವಣೆಯ ಹೊತ್ತಿಗಷ್ಟೆ-ಬೇರೆ ಸಮಯದಲ್ಲೂ ಭಾಗವಹಿಸಿ ರಚನಾತ್ಮಕ ಕ್ಷೇತ್ರದಲ್ಲಿ ದುಡಿದು ಆರ್ಥಿಕ ಪ್ರಗತಿಯ ಮಾರ್ಗದಲ್ಲಿ ಜನರನ್ನು ಮುನ್ನಡೆಯಲು ಉದ್ಯುಕ್ತವಾದರೆ ಮತ್ತು ಯಶಸ್ಸನ್ನು ಈ ಕೆಲಸದಲ್ಲಿ ಸಂಪಾದಿಸಿದರೆ, ಆವುಗಳಲ್ಲಿ ಯಾವುದಾದರೊಂದು ಪಕ್ಷವು ಕಾಂಗ್ರೆಸಿನ ಬದಲಿಗೆ ಅಧಿಕಾರವಲ್ಲಿ ಕೂತ್ತುಕೊಂಡು ಈಗಿಗಿಂತಲೂ ಹೆಚ್ಚು ವಿಚಕ್ಷಣತೆಯಿಂದ ಆಡಳಿತ ನಡೆಸಬಹುದು. ಆದರೆ ಇದಕ್ಕೆ ಸಾಕಷ್ಟು ದೀರ್ಘದ ಕಾಲ ಬೇಕು; ಮತ್ತು ಪ್ರತಿಪಕ್ಷಗಳು ನಿರಂತರ ಪರಿಶ್ರಮಪಡಬೇಕು ಎನ್ನುವುದು ಸ್ಪಷ್ಟ. ಕಾಂಗ್ರೆಸು ಸರಕಾರವು ಇಂಥ ಬೆಳವಣಿಗೆಗೆ ನಾಂದಿಯನ್ನು ಹಾಕಿದೆ—ಪ್ರತಿ ಐದು ವರ್ಷಗಳಿಗೊಮ್ಮೆ ದೊಡ್ಡ ಚುನಾವಣೆ ನಡೆಸಿ ಅಖಿಲ ಭಾರತ ಸ್ವರೂಪದಲ್ಲಿ ಪಕ್ಷಗಳಿಗೆ ತಮ್ಮ ಬಲಾಬಲವನ್ನು ತಿಳಿದುಕೊಂಡು ದೋಷದೋಷಗಳನ್ನು ತಿದ್ದುವುದಕ್ಕೆ ಸಂದರ್ಭವನ್ನು ಒದಗಿಸಿಕೊಟ್ಟಿದೆ. ಪ್ರತಿಪಕ್ಷಗಳ ಸಹಜ ಬೆಳವಣಿಗೆಗೆ ಕಾಂಗ್ರೆಸು ಇದಕ್ಕಿಂತ ಹೆಚ್ಚಿನದೇನನ್ನೂ ಮಾಡಲಾರದು. ಆದುದರಿಂದ ಪ್ರತಿಪಕ್ಷಗಳು ಕಾಂಗ್ರೆಸು ಸಂಸ್ಥೆಯು ಪ್ರಜಾಪ್ರತ್ವಕ್ಕೆ ವಿರುದ್ಧವಾಗಿ ಪ್ರತಿಗಾಮಿ ಧೋರಣೆ ವಹಿಸಿದೆ ಎಂದು ಕೂಗುವ ಮಾತಿನಲ್ಲಿ ಮತದಾರರು ದಯಮಾಡಿ ವಿಶ್ವಾಸವಿಡಬಾರದು. ಕಾಂಗ್ರೆಸು ಇಂದಿಗೆ ಬಲಿಷ್ಠ ಸಂಸ್ಥೆ—ಒರರ ರಕ್ಷಣೆಯೇ ಇಂದು ಅವಶ್ಯ ಎಂದು ಮನಗಂಡು ಜದು ನಿಲ್ಲಿಸಿದ ಉಮೇದ್ವಾರರಿಗೆ ಓಟು ಕೊಡಬೇಕು. ಆಪ

ಉಡುಪಿ

ಶ್ರೀ ಪುತ್ತಿಗಾ ಮಠದ ಶ್ರೀ ಸುಧೀಂದ್ರ ತೀರ್ಥ ಶ್ರೀಪಾದಂಗಳವರು

ತಾ. 14 ಗುರುವಾರ ಸೂರ್ಯೋದಯ ಕಾಲದಲ್ಲಿ ಶ್ರೀ ಕೃಷ್ಣ ಮಠದಲ್ಲಿ ಪರ್ಯಾಯ ಅದಮಾರು, ಕಾಣಿಯೂರು, ಕೃಷ್ಣಾಪುರ, ಸೋದೆ, ಫಲಿಮಾರು ಮತ್ತು ಪುತ್ತಿಗೆ ಮಠಪತಿಯ ಸ್ವಾಮಿಗಳವರು ಸರ್ವಹಿತಾರ್ಥ ಸಮಯ ವಿಶೇಷ ಸಾಯುಜ್ಯವನ್ನು ಹೊಂದಿದರು. ಶ್ರೀಗಳವರು ಕಳೆದ ನರ್ಷ ಮೂರ್ಜಿ ತಿಂಗಳಲ್ಲಿ ತಮ್ಮ ಶತಮಾನೋತ್ಸವವನ್ನು ಇತರ ಸ್ವಾಮಿಗಳವರ ಸಹಕಾರ ಬೆಂಬಲದಿಂದ ಸಾಂಗವಾಗಿ ಆಚರಿಸಿದ್ದರು ಶ್ರೀ ಶ್ರೀಗಳವರ ವೃಂದಾವನ ಯೂರ್ತಿಯಲ್ಲಿ ಇತರ ಎಲ್ಲಾ ಸ್ವಾಮಿಗಳ ವರೂ ಭಕ್ತ ವೃಂದವೂ ಭಾಗಿ ವಹಿಸಿತ್ತು. ವ್ಯಾಪಾರಿ ಬಂಧುಗಳು ಅತ್ಮ ಸಂತೋಷದಿಂದ ಲೇ ಮುಷರ್ಜಿಗಳ ಗೌರವಾರ್ಥ ವ್ಯಾಪಾರ ಪಹಿವಾಟುಗಳನ್ನು ಬಂದುಮಾಡಿ ಪರತಾಳ ಆಚರಿಸಿದ್ದರು. ಕೆಲವು ಕಾಲೇಜುಗಳಿಗೂ ರಜಾ ಕೊಡಲಾಗಿತ್ತು.

ಸಾರ್ವಜನಿಕ ಸಭೆಯಲ್ಲಿ ಶ್ರೀ ಶ್ರೀಗಳ ಸ್ಮರಣೆ—ತಾ 15ರಲ್ಲು ಸಂಜೆ ನಗರ ಸಭಾಪತಿ ಶ್ರೀ ಕೆ. ಕೆ ವೈಗಳು ನರ್ಪಡಿಸಿದ ಸಾರ್ವಜನಿಕ ಸಭೆಯಲ್ಲಿ ಹಲವಾರು ಮಂದಿ ಶ್ರೀ ಶ್ರೀಗಳವರ ಕುರಿತು ಗುಣಗಾನ ಮಾಡಿ ತಂತಮ್ಮ ನೇವೆ ಸಲ್ಲಿಸಿದರು ಶ್ರೀ ಟಿ. ಎ. ಪೈ, ಎಮ್. ಎಲ್. ಎ ಆವರು ಸಭಾಧ್ಯಕ್ಷತೆ ವಹಿಸಿದ್ದರು.

ಸ್ಥಳೀಯ ಸಂಸ್ಕೃತ ಕಾಲೇಜಿನ ಅಧ್ಯಾಪಕರೂ, ನಿದ್ಯಾರ್ಥಿಗಳೂ ತಾ 16ರಲ್ಲು ಬೆಳಿಗ್ಗೆ ವಕೀಲ್ ಶ್ರೀ ಸಿ. ವಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಸಭೆಸೇರಿ ಶ್ರೀ ಶ್ರೀಗಳವರಿಗೆ ತಮ್ಮ ಶ್ರದ್ಧಾಂಜಲಿಗಳನ್ನರ್ಪಿಸಿದರು.

ಎಂ. ಜಿ. ಎಮ್. ಕಾಲೇಜಿನ—ವಾರ್ಷಿಕ ವ್ಯಾಯಾಮ ಪ್ರಾಗೂ ಆಟಗಳ ಕಲೆಯುವಿಕೆಯು ದಿನಾಂಕ ೧೫ರಂದು ಕಾಲೇಜಿನ ಆವರಣದಲ್ಲಿ ಜರಗಿತು. ಪುಧ್ಯಾಹ್ನ ೩.೧೫ಕ್ಕೆ ಪ್ರಾರಂಭವಾದ ಈ ಆಟಗಳ ಅಧ್ಯಕ್ಷತೆಯನ್ನು ಕರ್ನಾಟಕ ಮೆಡಿಕಲ್ ಕಾಲೇಜಿನ (ಮಂಗಳೂರು ವಿಭಾಗ) ಪ್ರಿನ್ಸಿಪಾಲರಾದ ಡಾ. ಟಿ. ಜಿ. ವೇಲಿಯತ್, ಎಂ. ಡಿ; ಡಿ. ಟಿ. ಎಮ್. ರವರು ನಹಿಸಿದ್ದರು. ಎಲ್ಲಾ ಸ್ಪರ್ಧೆಗಳು ಮುಗಿದ ನಂತರ ಸಭೆಯು ಜರಗಿತು. ವಾರ್ಷಿಕ ವರದಿಯನ್ನು ಕಾಲೇಜಿನ ವ್ಯಾಯಾಮ ಶಿಕ್ಷಕರಾದ ಶ್ರೀ ಡಿ. ಸೋಮ ಸುಂದರರವರು ಓದಿದ ಬಳಿಕ ಶ್ರೀಮತಿ ವೇಲಿಯತರು ಸ್ಪರ್ಧೆಯಲ್ಲಿ ಗೆದ್ದ ವೀರರಿಗೆ ತಕ್ಕುದಾದ ಬಹುಮಾನಗಳನ್ನಿತ್ತರು. ಸುಡುಗರ ವಿಭಾಗದ ವೀರ ಪದಕ(Champion Ship) ಶ್ರೀಗಳಾದ ವಾಮೋದರ ಪ್ರಾಗೂ ಪ್ರಜಾರಾಗಳಿಗೆ ಎಂದಿಗೂ ಕಿವಿಗೊಡದ ಬಾರದು; ಸತ್ಯವನ್ನೆರಿತು ನಡೆಯುವುದೇ ಮತದಾರರ ಕರ್ತವ್ಯವೆಂದು ನವಯುಗ ತಿಳಿಯಿಂದ ಸೂಚಿಸುತ್ತೇನೆ.

ಈ ಸಂಚಿಕೆಯಲ್ಲಿ ಪ್ರಕಟವಾಗಿರುವ

ಕಾಂಗ್ರೇಸ್ ಉಮೇದ್ವಾರರಿಗೇ ನಿಮ್ಮ ಓಟುಗಳನ್ನು ಕೊಡಿರಿ.

ಬೆಳ್ತಂಗಡಿ—ಪಿ. ರತ್ನ ವರ್ಮ ಹೆಗ್ಡೆ

ಪುತ್ತೂರು——ಕೆ. ವಿ. ಗೌಡ (ಸಾಮಾನ್ಯ)

ಪುತ್ತೂರು—ಎಸ್. ಸುಬ್ಬಯ್ಯ ನಾಯಕ್ (ದಲಿತ ಸ್ಥಾನ)

ಪರ್ಚನ್ ಆಲ್ಮೇಡರವರಿಗೂ, ವಿದ್ಯಾರ್ಥಿನಿಯರ ವಿಭಾಗದ ವೀರ ಪದಕವು ಶ್ರೀಮತಿ ವತ್ಸಲಾ ನಂದಿಯೂರರವರಿಗೂ ದೊರೆಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಂತೋಷವನ್ನು ವ್ಯಕ್ತಪಡಿಸುತ್ತಾ—ತಾನು ಇಲ್ಲಿ ಕಳೆದ ೪ ವರ್ಷಗಳಲ್ಲಿ ನಿಮಿಸವನ್ನೂ ಸಂತೋಷದಿಂದಲೇ ಕಳೆದಿದ್ದೇನೆ ಎಂದು ತಿಳಿಸಿದರು. ಕಾರ್ಯದರ್ಶಿಗಳು ಕೊನೆಗೆ ಧನ್ಯವಾದವನ್ನರ್ಪಿಸಿದರು.

ಕಲಾಶಾಲೆಯ ಎಂಟನೆಯ ವಾರ್ಷಿಕೋತ್ಸವವು ಜಿಲ್ಲಾ ಮೆ ಜಿ ಸ್ಟ್ರೇಟ ಬರಾದ ಶ್ರೀ ನೊ ಟೋ ನ್ಸ, ಬಿ. ಎ. ಬಿ. ಎಲ್., ರವರ ಅಧ್ಯಕ್ಷತೆಯಲ್ಲಿ ದಿನಾಂಕ ೧೬ರಂದು ಜರಗಿತು. ಸ್ವಾರ್ಥನೆಯೊಪ ಬಳಿಕ ಕಾಲೇಜಿನ ಕರೆಸ್ಪೋಂಡೆಂಟರವರಾದ ಡಾ. ಟಿ. ಪೂಧವ ಪೈಗಳು ಸ್ವಾಗತ ಭಾಷಣ ಮಾಡಿದರು ಹಿಂದೆ ಇದೇ ಕಾಲೇಜಿನ ವಿದ್ಯಾರ್ಥಿಗಳಾಗಿದ್ದು, ಈಗ ಇಲ್ಲೇ ಅಧ್ಯಾಪಕರಾಗಿರುವ ಶ್ರೀ ಎನ್. ಶೇಷಗಿರಿ ಪ್ರಭುಗಳು ಕಾಲೇಜಿನ ಹಿತಚಿಂತನೆಯನ್ನು ಬಯಸಿ, ದತ್ತಿ ಭೋದನೆಯನ್ನು ಕೋರಿದರು. ಅದಕ್ಕೆ ಉತ್ತರವನ್ನು ಶ್ರೀ ಯು. ಎಲ್. ಆಚಾರ್ಯರು ಕೊಟ್ಟರು. ಕಾಲೇಜಿನ ವಾರ್ಷಿಕ ವರದಿಯನ್ನು ಪ್ರಿನ್ಸಿಪಾಲರಾದ ಶ್ರೀ ಎಚ್. ಸುಂದರ ರಾಯರು ಓದಿದ ಬಳಿಕ, ಬಹುಮಾನ ವಿತರಣೆಯಾಯಿತು. ಅಧ್ಯಕ್ಷರ ಭಾಷಣವಾದ ಬಳಿಕ, ಶ್ರೀಮತಿ ಯು. ಎನ್. ಶಾಲಿನಿಯವರು ಧನ್ಯವಾದಗಳನ್ನು ಅರ್ಪಿಸಿದರು. ಮನರಂಜನೆಯ ಅಂಗವಾಗಿ ಉತ್ತಮ ಸಂಗೀತದೊಡನೆ, ಡಾಗೋರರ "ಗೀತಾಂಜಲಿ"ಯಿಂದ ಆಯ್ದ ಪಠಣಾಮಕಾರಿ ದೃಶ್ಯಗಳು ಮೂಕವಾಗಿ ಕೆಲಾಶಾಲೆಯ ವಿದ್ಯಾರ್ಥಿನಿಯರಿಂದಲೂ, 'Man of arms'—ಎಂಬ ಬರ್ನಾರ್ಡ್ ಶಾರವರ ಆಂಗ್ಲ ನಾಟಕವು ಕಾಲೇಜಿನ ಅಧ್ಯಾಪಕರುಗಳಿಂದಲೂ ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು.

ಕವಿ ಮುದ್ದಣ ಪುಣ್ಯ ತಿಥಿಯು ತಾ. 15ರಲ್ಲು ಬೆಳಿಗ್ಗೆ ಸ್ವಥೇಯ ಜೋಡ್ಸ್ ಹ್ಯಾಸ್ಕೂಲಿನಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು ಶಾಲಾ ಹೆಡ್ಮಾಸ್ತರ್ ಶ್ರೀ ಬಿ. ಅನಂತಕೃಷ್ಣ ಕಾಮಕರು ಸ್ವಾಗತ ಭಾಷಣ ಮಾಡಿದರು. ಶ್ರೀ ಕು. ಕಿ. ಹರಿದಾಸ ಭಟ್ಟರು ಕವಿ ಮುದ್ದಣನ ಭಾವ ಚಿತ್ರ ಅನಾವರಣ ಮಾಡಿದರು.

ಕನ್ನಡದಲ್ಲಿ ಮೊದಲನೆಯದೆಂದೇ ಹೇಳಬಹುದಾದ

ಅಣು ಶಕ್ತಿಯ ಸಚಿತ್ರ ನಿವೇಚನಾ ಗ್ರಂಥ

ಹಿರೋಶಿಮಾದಿಂದ ಜಿನೇವ

ಬರೆದವರು:

ಶ್ರೀ. ಯು. ರಾಘವೇಂದ್ರ ಆಚಾರ್ಯ, ಎಂ. ಎ., ನವನೆಹಲಿ.

ಮುನ್ನುಡಿಕಾರರು: ಶ್ರೀ. ಶಿವರಾಮ ಕಾರಂತರು.

ಪ್ರತಿಯೊಬ್ಬರೂ ಓದಲೇಬೇಕಾದ ನವೀನ ಪುಸ್ತಕ.

ಉತ್ತಮ ಕಾಗದ ಬೆಲೆ: ರೂ. ೧--೮—೦.

ನವಯುಗ ಪ್ರೆಸ್, ಉಡುಪಿ.

ಕಾಪು ಮತದಾರ ಕ್ಷೇತ್ರದ ಎಸೆಂಬ್ಲಿ ಉಮೇದ್ವಾರ ಎಫ್. ಎಫ್. ಡಿ. ಪಿಂಟೋ

(ಹನೇ ಪುಟದಿಂದ)

೪. ಮತದಾನ ಕೇಂದ್ರದಿಂದ ಮತ ಪತ್ರವನ್ನು ಹಿಂದೆ ತೆಗೆದುಕೊಂಡು ಹೋಗಬೇಡಿ.

೫. ಮತದಾನ ಕೇಂದ್ರದಲ್ಲಿ ಗಲಭೆ ಗೊಂದಲಗಳನ್ನು ಎಬ್ಬಿಸಬೇಡಿ; ಅಶಿಸ್ತಿನಿಂದ ಎಂದೂ ವರ್ತಿಸಬೇಡಿ.

೬. ನಿಮ್ಮ ಮತದಾನ ಕೇಂದ್ರದ ಮುಖ್ಯಾಧಿಕಾರಿಯು ಕಾನೂನುಬದ್ಧವಾಗಿ ಕೊಡುವ ಆಜ್ಞೆಗಳಿಗೆ ಎಂದೂ ವಿರುದ್ಧವಾಗಿ ವರ್ತಿಸಬೇಡಿ.

ಈ ಮೇಲ್ಕಂಡ ನಿಷಿದ್ಧ ಕೆಲಸಗಳ ಪೈಕಿ ಯಾವುದನ್ನು ಮಾಡಿದರೂ ಅದು ಕಾನೂನು ರೀತ್ಯಾ ಶಿಕ್ಷಾರ್ಹವಾದ ಅಪರಾಧವಾಗುತ್ತದೆ. ಇದಲ್ಲದೆ ನೀವು ನೆನಪಿಡಬೇಕಾದ ಇನ್ನೊಂದು ಪಹತ್ವದ ವಿಷಯವಿದೆ. ಅದೇನೆಂದರೆ—

೭. ಮತ್ತೊಬ್ಬರ ಸೋರಿಕೆ, ಪ್ರಚೋದನೆ, ಉಪದೇಶ, ಇಚ್ಛೆ ಅಥವಾ ಬೆದರಿಕೆಗೆ ಒಳಪಟ್ಟು ನಿಮ್ಮ ಕ್ಷಿಂತ ಇಷ್ಟಕ್ಕೆ ಮತ್ತು ಅಭಿಪ್ರಾಯಕ್ಕೆ ವಿರುದ್ಧವಾಗಿ ಖಂಡಿತವಾಗಿಯೂ ಮತದಾನ ಮಾಡಬೇಡಿ; ಹಾಗೆ ಮಾಡುವುದು ಸ್ವತಂತ್ರನೂ ಹೊಣೆಯರಿತನನೂ ಆದ ಭಾರತೀಯ ಪ್ರಜೆಗೆ ಭೂಷಣವಲ್ಲ; ಜಿಲ್ಲೆಗೆ ಅದು ಸಮಾಜದ್ರೋಹವೂ ಪ್ರಜಾಸತ್ತೆಗೆ ವಿರುದ್ಧವೂ ರಾಷ್ಟ್ರಕ್ಕೆ ಘಾತಕವೂ ನ್ಯಾಯ ದೃಷ್ಟಿಗೆ ಅನುಚಿತವೂ ಆಗುತ್ತದೆ.

ನಿಮ್ಮ ಪವಿತ್ರವಾದ ಮತದಾನವನ್ನು ನಿಮ್ಮ ಅಚ್ಚುಮೆಚ್ಚಿನ ಹಕ್ಷವಾದ ಕಾಂಗ್ರೆಸು ಸಂಸ್ಥೆಯು ನಿಲ್ಲಿಸಿದ ಉಮೇದ್ವಾರರಿಗೆ ಕೊಡಿರೆಂಬುದು ನಾವು ಮಾಡುವ ನಮ್ರ ವಿನ್ನಹ. ಇದನ್ನು ಮನ್ನಿಸಬೇಕೆಂದೇ ನಮ್ಮ ಇಚ್ಛೆ—ಕಾಂಗ್ರೆಸಿನ ಗುರುತು ನೊಗಕ್ಕೆ ಜೊತೆಯಾಗಿ ಕಟ್ಟಿ ನಿಲ್ಲಿಸಿದ ಜೋಡೆತ್ತುಗಳು! ನಿಮಗಿದು ಅಳವಿರಲಿ; ಮತ್ತು ನೆನಪಿರಲಿ!

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 603/56.

ಪದ್ದಕ್ಕ ಸೆಟ್ತಿ ---ವಾದಿಳು

ಮತ್ತು

ಎಚ್. ಗೋಪಾಲಕೃಷ್ಣ ಪೈ ಕೂಡಾ

—ಪ್ರತಿವಾದಿರು.

ಇಂಜರೊಳಗೆ

ಮೇಲಿನ ಪಾನೆಯ 1ನೇ ಪ್ರತಿವಾದಿ ಎಚ್. ಗೋಪಾಲಕೃಷ್ಣ ಪೈ. 2ನೇ ಪ್ರತಿವಾದಿ ಎಚ್. ಸರ್ವೋತ್ತಮ ಪೈ.- ಎಚ್. ವಾಸುದೇವ ಪೈಗಳ ಮಗಂದಿರು ಯಿವರಿಗೆ ಸ್ವತಃ ಮತ್ತು 2ನೇ ಯವರು ಮೈನರ್ 4ನೇ ಪ್ರತಿವಾದಿಯ ಗಾರ್ಡಿಯರ್‌ರಾಗಿ ಕೂಡಾ. ಉಡ್ಡಿ ತಾಲ್ಲ್ಲ ಹೆಗ್ಗ ಗ್ರಾಮದ ಕರ್ಕಳದಲ್ಲಿ ರುವವರು. ಇವರಿಗೆ ಈ ಮೂಲ್ಕ ಕಿಳಿಯಪ ಡಿಸುವುದೇನೆಂದರೆ,

ವಾದಿಳಿಗೆ ನೀವ್ತೆ ಕೂಡಾ 6 ಜನರು ತಾ. 24—12—52 ರಲ್ಲು ರಿ. ನಂ ಬಿ. ಕೊಟ್ಟ ಈಡುಪತ್ರ ವೇಜನ ಬಾಬ್ತು ಪ್ಲೈಂಟ್ ಪ್ರಕಾರ ತಾ. 24—12—55ರ ವರೆಗೆ ಬರತಕ್ಕ ಬಡ್ಡಿ ಬಾಕಿಗೆ ವಾವಿಳು ದಾಕಲುಮಾಡಿದ ಸದ್ರಿ ಸಂಬ್ರಮ ತಾ. 1-9-57ಕ್ಕೆ ನಿಮ್ಮ ಸಮ್ಮನ್ಸ್ ಬಗ್ಗೆ ಇಟ್ಟರುವುದರಿಂದ ಸದ್ರಿ ದಾವೆಯಲ್ಲಿ ಉದಾಹರಿಸುವುದಿದ್ದರಿ ಸದ್ರಿ ದಿನ್ನ ಬೆಳಿಗ್ಗೆ ಗಂಟೆ 11ಕ್ಕೆ ಕೋರ್ಟುಮುಂದೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕ ದ್ದೆಂತ ಈ ಮೂಲ್ಕ ತಿಳಿಸೋಣಾಗಿಯದೆ.

Y. C. S. Hegde,
Advocate for Plff

ಉಡ್ಡಿ, ತಾ. 14-2-57.

ಎಲ್ಲೆಲ್ಲಿ ಏನೇನು?

ಕಟಪಾಡಿ ನೂತನ ಕಟ್ಟಡ ಉದ್ಘಾಟನೆ—

ಪೆಸರ್ಸ್ ಭುವನೇಂದ್ರ ಪ್ರಿಂಟಿಂಗ್ ಸ್ಟಾಯೆಟ್ ಲಿಮಿಟೆಡ್, ಇವರು ಕಟ್ಟಿಸಿದ "ರಾಮಚಂದ್ರ ಸದನ" ಎಂಬ ನೂತನ ಕಟ್ಟಡದ ಪ್ರವೇಶ ಉತ್ಸವವು ಶ್ರೀ ಗೋಕರ್ಣ ಪರ್ತಗಾಳೀ ಜೀವೋತ್ತಮ ಮುಮತಾಧೀಶ ಶ್ರೀಮಂತ ಪ್ರಾರಿಕಾನಾಥತೀರ್ಥ ಸ್ವಾಮೀಜಿಯವರ ದಿವ್ಯ ಆಶೀರ್ವಚನದಿಂದ ವಿಜೃಂಭಣೆಯಿಂದ ನೆರವೇರಿತು.

ಈ ಕಾರ್ಯಕ್ರಮದ ಸಂಬಂಧ ತಾ. 12—2—1957ರಂದು ರಾತ್ರಿ ೨ಣಕ್ಕೋತ್ಸವ, ವಾಸ್ತು, ನವಗ್ರಹ ಹೋಮ ಇತ್ಯಾದಿ ವಿಧಿಗಳು ಶಾಸ್ತ್ರೋಕ್ತ ರೀತಿಯಿಂದ ನೆರವೇರಿಸಲಾಯಿತು 13—2—1957ನೇ ಬೆಳಿಗ್ಗೆ ಗಂಟೆ 9—30ಕ್ಕೆ ಶ್ರೀಮತ್ ಪ್ರಾರಿಕಾನಾಥತೀರ್ಥ ಸ್ವಾಮೀಜಿಯವರನ್ನು ಸ್ವಗೃಹದಿಂದ ಶ್ರೀ ವೆಂಕಟ್ರಮಣ ದೇವಸ್ಥಾನದಿಂದ ಶ್ರೀ ಪಾಂಗಾಳ ಜನಾರ್ಧನ ನಾಯಕ್ ಮೆನೇಜಿಂಗ್ ಪ್ರಾಪ್ರೈಟರರು, ಆಡಳಿತ ಮಂಡಳಿಯ ಸದಸ್ಯರು, ಊರ ಪರವೂರ ಪ್ರಮುಖ ವ್ಯಕ್ತಿಗಳೂ ಹೆಗ್ಗೂಡಿ ಪೈಭವದಿಂದ ಸ್ವಾಗತಿಸಿದರು. ಪ್ರಾರಿಕಾಪೂಜೆಮಾಡಿ, ಶ್ರೀ ಪಾದಂಗಳವರೊಂದಿಗೆ ಲಕ್ಷ್ಮೀ ಧನ್ವಂತರೀನಾರಾಯಣ, ಶ್ರೀ ಮತ್ ಭುವನೇಂದ್ರ ಸ್ವಾಮಿಯವರ ಭಾವ ಚಿತ್ರ, ಔಷಧಗಳೊಂದಿಗೆ ಕಟ್ಟಡ ಪ್ರವೇಶವು ನಡೆಯಿತು.

ಶ್ರೀ ಲಕ್ಷ್ಮೀನಾರಾಯಣ ಶಾಮರ್, ಗಂಗೊಳ್ಳಿ ವೇದಮೂರ್ತಿ ವೆಂಕಟೇಶ ಭಟ್, ಕಟಪಾಡಿ ಮೊದಲಾದ ಮಹನೀಯರಿಂದ ಸಂದರ್ಭೋಚಿತ ಭಾಷಣಗಳಾಯಿತು. ಈ ಸಮಾರಂಭಕ್ಕೆ ಶ್ರೀ ಕಾಶೀ ಮಠಾಧೀಶ ಶ್ರೀಮತ್ ಸುಧೀಂದ್ರತೀರ್ಥ ಸ್ವಾಮೀಜಿಯವರು ತಮ್ಮ ಎನರ್ಜಿಕುಳ ಮೊಕ್ಕಾಮಿನಿಂದ ಶ್ರೀ ವ್ಯಾಸ ರಘೂಪತಿ ಸನ್ನಿಧಿಯಲ್ಲಿ ಪ್ರಾರ್ಥನಾ ಪೂರ್ವಕ ಕಳುಹಿಸಿದ ಆಶೀರ್ವಾದವನ್ನು ಶ್ರೀಯುತ ಕೆ. ವಾಸುದೇನ ಕಾನತರು ಓದಿ ಹೇಳಿದರು.

ಶ್ರೀಪಾದಂಗಳವರು ಆಶೀರ್ವಚನದಾನ ಮಾಡುತ್ತ "ಈ ಕಟ್ಟಡಕ್ಕೆ ರಾಮಚಂದ್ರ ಸದನ ವೆಂದು ಪೆಸರಿಟ್ಟಿರುವುದು ಸಂದರ್ಭೋಚಿತವಾಗಿಯೂ ಹಿರಿಯರ ಹಿರಿಮೆ, ಸದ್ವತನೆ, ಸೇವೆ ಮುಂತಾದ ವಿಶೇಷ ಗುಣಗಳು ನಮ್ಮಲ್ಲಿ ಅನುಷ್ಠಾನಕ್ಕೆ ಬರಬೇಕೆಂಬ ಭಾವನೆಯಿಂದಲೇ ಹಿರಿಯರ ನಾಮಕರಣಮಾಡುವ ಉದ್ದೇಶವಾಗಿರುತ್ತದೆ. ಈ ಸಂಸ್ಥೆಯ ಮೂಲ ಪುರುಷರಾದ ದಿವಂಗತ ಪಾಂಗಾಳ ರಾಮಚಂದ್ರ ಯಾನೆ ತಿಮ್ಮ ನಾಯಕರು ವಿಭೂತಿ ಪುರುಷರು. ವೈದ್ಯಕೀಯ ಸೇವೆಗಾಗಿ ತಮ್ಮ ತನುಮನದ ಸಮಸ್ತ ಆಸ್ತಿಯನ್ನು ವಿನಿಯೋಗಿಸಿದ ವ್ಯಕ್ತಿಗಳು. ಶ್ರೀಮತ್ ಭುವನೇಂದ್ರ ತೀರ್ಥ ಸ್ವಾಮಿಯವರ ಆಸ್ಥಾನಪಂಡಿತ್ ರಾದವರು. ಇಂತಹ ದಿವ್ಯ ವ್ಯಕ್ತಿಗಳ ಸ್ಮರಣಾರ್ಥವಾಗಿ ಈ ನೂತನ ಕಟ್ಟಡಕ್ಕೆ ರಾಮಚಂದ್ರ ಸದನವೆಂದು ನಾಮಕರಣಮಾಡಿರುವುದು ಸಂಸ್ಥೆಯವರಿಗೆ ಮೂಲಪುರುಷರ ಮೇಲೆ ಇರುವ ಭಕ್ತಿ ಗೌರವಗಳನ್ನು ಸೂಚಿಸುತ್ತದೆ. ಈ ಸಂಸ್ಥೆಯು ತಯಾರಿಸುವ ಔಷಧಿಗಳು ಸಮಗ್ರ ಭಾರತದಲ್ಲಿ ಮಾತ್ರವಲ್ಲದೆ ವಿದೇಶಗಳಲ್ಲಿ ಪ್ರಖ್ಯಾತವಾಗಲಿ, ಜನತೆಗೆ ಈ ಸಂಸ್ಥೆಯಿಂದ ಇನ್ನು ಹೆಚ್ಚಿನ ಪ್ರಯೋಜನ ಲಭಿಸಲಿ," ಎಂಬುದಾಗಿ ಸಂಸ್ಥೆಗೆ ಉತ್ತರೋತ್ತರ ಅಭಿವೃದ್ಧಿಯನ್ನು ಕೋರಿ ಆಶೀರ್ವಾದ ಮಾಡಿದರು.

ಈ ಕಾರ್ಯಕ್ರಮದ ಪ್ರೀತ್ಯರ್ಥ ನೂತನ ಕಟ್ಟಡದಲ್ಲಿ ಬ್ರಾಹ್ಮಣ ಸಂತರ್ಪಣೆಯು ನಡೆಯಿತು. ಶ್ರೀ ವಾದಂಗಳವರು ಸ್ವಗೃಹಕ್ಕೆ ನೂತನ ಕಟ್ಟಡದಲ್ಲಿ ಶ್ರೀ ವೆಂಕಟರಮಣ ದೇವ ಸ್ವಾನದಲ್ಲಿ ಸರ್ವರಿಗೂ ಫಲಮಂತ್ರಾಕ್ಷತೆ ಯಿತ್ತು, ಪ್ರವಚನ ನೆರವೇರಿಸಿ ಮಧ್ಯಾಹ್ನ ಘಂಟೆ 3ಕ್ಕೆ ಕುಂದಾಪುರ ತಾಲೂಕಿನ ಸಿದ್ದಾಪುರಕ್ಕೆ ತರಳಿದರು.

ಕುರುಕಾಲು ಶಾಲಾ ಕಟ್ಟೋಣ ಪ್ರವೇಶ ಸಮಾರಂಭ ಹಾಗೂ ವರ್ಧಂತ್ಯುತ್ಸವ—

ತಾ. 10-2 1957ನೇ ಪೂರ್ವಾಹ್ನ ಶ್ರೀ. ಬಿ. ಅನಂತಕೃಷ್ಣ ಸಾಮಗ. ಬಿ. ಎ. ಬಿ. ಟಿ.ಯವರಿಂದ ಧ್ವಜಾರೋಹಣವಾಗಿ ಶಾಲಾ ಮಕ್ಕಳ ಛದ್ಮವೇಷ ಸ್ಪರ್ಧೆಯು ಜರಗಿದ ಬಳಿಕ ಮಕ್ಕಳಿಗೆ ಸಿಹಿತಿಂಡಿ ಹಂಚಲಾಯ್ತು.

ಅಪರಾಹ್ನ 5 ಘಂಟೆಗೆ ಪಾದುಕಾ ಕ್ಷೇತ್ರ ಮಠದಿಂದ ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರನ್ನು ಅತಿಥಿಗಳ ಸಮೇತ ಬೀಂಡು, ವಾಲಗದೊಂದಿಗೆ ಮೆರವಣಿಗೆಯಲ್ಲಿ ಶಾಲಾ ವಠಾರಕ್ಕೆ ಕರೆತರಲಾಯಿತು. ನಂತರ ಶ್ರೀ ಟಿ. ಎ. ಪೈಗಳು ಶಿಲಾ ವಿಹಾರದ ಉದ್ಘಾಟನೆಯನ್ನು ಶ್ರೀಪಾದಂಗಳವರು ಶಾಲಾ ಹೊಸ ಕಟ್ಟಡದ ಉದ್ಘಾಟನೆಯನ್ನು ಮಾಡಲು ಮನ್ಮ ಕುಂವಾಪುರ ಡಿಸ್ಟ್ರಿ ಕಲೆಕ್ಟರರಾದ ಶ್ರೀ ಕೆ. ಸೂರ್ಯನಾರಾಯಣ ರಾವ್, ಬಿ. ಎ. ಬಿ. ಎಲ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಯು ಅನೇಕ ಉಚ್ಚ ಅಧಿಕಾರಿಗಳಿಂದಲೂ, ಉಚ್ಚ ಮಹನೀಯರಿಂದಲೂ ತುಂಬಿತ್ತು. ಶಾಲಾ ಮೆನೇಜರ್ ಶ್ರೀ ಕುರುಕಾಲು ಗಣಪಯ್ಯ ಶೆಟ್ಟರು ಶ್ರೀ ಪಾದಂಗಳವರಿಗೆ ಫಲತಾಣಿಕೆಗಳೊಂದಿಗೆ ಪಾದಪೂಜೆನೂಡಿ, ಶ್ರೀಪಾದಂಗಳವರ ಅಪ್ಪಣೆಯಮೇರೆಗೆ ಸಭೆಯು ಆ

ಶ್ರೀ ಟಿ. ಎ. ಪೈಯವರ ಸ್ಪಷ್ಟೀಕರಣಮತ್ತು ವಿನಂತಿ

೧.ಉಡುಪಿ ಮತ್ತು ಕಾಪು ಕಕ್ಷೆಯಿನ ಮತದಾರರು ನನ್ನ ಪೇಲಿಬ್ಬ ಅಪಾರ ಅಭಿಮಾನಕ್ಕೆ ನಾನು ಆಭಾರಿಯಾಗಿದ್ದೇನೆ ಈ ಸಲದ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲವೆಂದು ನಾನಾಗಿ ಕಾಂಗ್ರೆಸಿನ ಮುಂದಾಳುಗಳಲ್ಲಿ ಸಿನಂತಿಸಿದ್ದೆನು. ನನಗೆ ಕಾಂಗ್ರೆಸಿನ ಪರವಾಗಿ ಸ್ಪರ್ಧಿಸಲು ಟಿಕೇಟು ಸಿಗಲಿಲ್ಲವೆಂಬ ಟಿ. ಎ. ಪೈಗಳಿಗೆ ಕಾಂಗ್ರೆಸಿನಲ್ಲಿ ಸ್ಥಾನ ಕೊಡಲಿಲ್ಲ ಎಂಬ ನೂತುಗಳನ್ನು ಯಾರೂ ನಂಬಬಾರದು ಎಸೆಂಬ್ಲಿ ಸದಸ್ಯಸ್ಥಾನದಲ್ಲಿ ಇಲ್ಲದಿದ್ದರೂ ಕೆಲಸಮಾಡಲು ಸಾಧ್ಯವಿದೆ. ನಾನು ನನ್ನ ಮತದಾರ ಕ್ಷೇತ್ರದಲ್ಲಿ ಆಥವಾ ಇನ್ನಿತರ ಕಡೆಗಲ್ಲಿ ಏನಾದರೂ ಸೇವೆ ಸಲ್ಲಿಸಿದ್ದರೆ ಅದು ಕೇವಲ ಎಂ. ಎಲ್. ಎ. ಯ ಸ್ಥಾನಬಲದಿಂದಲ್ಲ. ಜನತೆ, ನಮ್ಮ ಸರಕಾರ ನನಗೆ ಕೊಟ್ಟು ಪ್ರೋತ್ಸಾಹಗಳೂ ಇದಕ್ಕೆ ಕಾರಣ.

ನಾನು ಎಂ. ಎಲ್. ಎ. ಸ್ಥಾನಕ್ಕೆ ಹುರಿಯಾಳುವಾಗಿ ನಿಲ್ಲದಿದ್ದುದರಿಂದ ನಾನು ನನ್ನ ಸಾರ್ವಜನಿಕ ಕಾರ್ಯಗಳನ್ನು ನಿಲ್ಲಿಸುವೆನೆಂದು ಯಾರೂ ಭಾವಿಸಬಾರದು. ಇನ್ನೂ ಹೆಚ್ಚು ಹೆಚ್ಚಾಗಿ ಜನತಾ ಸೇವೆಮಾಡಲು ನಾನು ಮಾಡುವಂತೆ ನೀವು ಪ್ರೋತ್ಸಾಹಪಡಿಸಬೇಕು. ನನ್ನ ಕಳೆದ ಬಾರಿಯ ಮತದಾರ ಕ್ಷೇತ್ರದ ಜನತೆಯಲ್ಲಿ ನಾನು ವಿನಂತಿಸುವುದೇನೆಂದರೆ ಕಾಂಗ್ರೆಸ್ ಸಂಸ್ಥೆಯ ಪರವಾಗಿ ಕಾಪು ಮತದಾರ ಕ್ಷೇತ್ರದಿಂದ ಹುರಿಯಾಳಾಗಿರುವ ಶ್ರೀ ಎಫ್. ಎಕ್ಸ್. ಡಿ. ಪಿಂಟೋರವರಿಗೂ ಉಡುಪಿಯಿಂದ ಶ್ರೀ ಪಿ. ವಿ. ಆಚಾರ್ಯರವರಿಗೂ ನಿಮ್ಮ ಓಟುಕೊಟ್ಟು ನಾವು ಮೂರು ಜನರಿಗೂ ಒಂದಾಗಿ ಈ ಕ್ಷೇತ್ರಗಳ ಮತದಾರರಿರುವ ನಿಮ್ಮೆಲ್ಲರ ಸೇವೆಯನ್ನು ಮಾಡುವಂತೆ ನೀವೆಲ್ಲರೂ ಸಹಕರಿಸಬೇಕು.

ಕಾಂಗ್ರೆಸ್ ಸಂಸ್ಥೆ ಪನಿತ್ರಸಾಪ ಸಂಸ್ಥೆ; ಜನತಾ ಸೇವೆನಾಡಲು ಈ ಸಂಸ್ಥೆಯ ಆಶ್ರಯದಲ್ಲಿ ಅನುಕೂಲತೆಗಳಿವೆ. ನಾನು ಬೇರೆ ಆಲ್ಲ; ಪಿಂಟ್ರೋ ಬೇರೆ ಆಲ್ಲ: ಆಚಾರ್ ಬೇರೆ ಆಲ್ಲ; ನಮ್ಮಲ್ಲರು ಬೇರೆ ಆಲ್ಲ- ಕಾಂಗ್ರೆಸ್ ಹುರಿಯಾಳುಗಳೆಲ್ಲರೂ ಒಂದೇ ನಂಸ್ಥೆಯ ಆಶ್ರಯದಲ್ಲಿ ದುಡಿಯುವ ಪ್ರತಿನಿಧಿಗಳು ಸೇವಕರು ಮಾತ್ರ ಎಂದು ತಿಳಿದು ತಮ್ಮ ಮತವನ್ನು ಕಾಂಗ್ರೆಸಿಗೇನೇ ಕೊಡಬೇಕೆಂದೂ ನಮ್ಮಿಂದ ಇನ್ನೂ ಹೆಚ್ಚು ಸೇವೆಯನ್ನು ಜನತೆ ಸ್ವೀಕರಿಸಬೇಕೆಂದೂ ಕೇಳಿಕೊಳ್ಳುತ್ತೇನೆ.

ನಾನು ಪ್ರತ್ಯಕ್ಷವಾಗಿ ಮತದಾರರರನ್ನು ಭೇಟಿನಾಡಲು ಪ್ರಯತ್ನಿಸುತ್ತಿರುವೆನಾದರೂ ಸಮಯಾಭಾವದಿಂದ ಎಲ್ಲರನ್ನೂ ಕಾಣಲು ಸಾಧ್ಯವಾಗಲಿಕ್ಕಿಲ್ಲ. ಈ ಸಂದರ್ಭವನ್ನು ಕಾಂಗ್ರೆಸ್ ವಿರೋಧಿಗಳು ದುರುಪಯೋಗ ಗೊಳಿಸಿಕೊಂಡು ನಾನಾರೀತಿಯ ಅಪಪ್ರಚಾರವನ್ನು ನಡಾಯಿಸುತ್ತಿರುವುದರಿಂದ ಈ ಹೇಳಿಕೆಯನ್ನು ಪತ್ರಿಕೆಯ ಮೂಲಕ ನನ್ನ ಮತದಾರ ಬಂಧುಗಳಿಗೆ ನುಟ್ಟಿಸುತ್ತಿದ್ದೇನೆ. ಈ ನನ್ನ ವಿನಂತಿಯನ್ನು ಸ್ವೀಕರಿಸಿ ಕಾಂಗ್ರೆಸ್ಸಿಗೆ ಸಂಪೂರ್ಣ ಬೆಂಬಲಕೊಡಬೇಕಾಗಿ ಪ್ರಾರ್ಥಿಸುತ್ತೇನೆ.

— ——

In the Court of the District Munsiff of Mangalore

R. E. P. 785/1956 in O. S. 15/52.

Narayana Bhatta —Petitioner

Sebastian Menezes & another Respondents

To

2nd defendant —Piad Menezes S/o Sebastian Menezes, Neermarga village, Mangalore Taluq.

Whereas plaintiff has made Application to this Court for execution of decree in O S No 15 of 1952, this is to give you notice that you are to appear before the Court at 11 A m on the 23 rd day of February 1957 to show cause why execution should not be granted.

Yours faithfully,

K. Balakrishna Rao,

Advocate for Petitioner.

ಕೆಲಂಡರ್ ಸ್ವೀಕಾರ

ರಾಮರಾಜ್ & ರಾಮ ಮಂಗೇಶ್, ಕಾರ್ನಾರ್ಡ್ ಕಾರ್ಸ್, ಬರ್ಮೂರೆಲ್ ವಿಜಂಟ್ಸ್, ಉಡುಪಿ.

ಯುನೈಟೆಡ್ ಸ್ಟೇಟ್ಸ್ ಇನ್‌ಫಾರ್ಮೇಶನ್ ಸರ್ವಿಸ್, ಮದರಾಸು.

ದಿ ತಾತಾ ಆಯಿಲ್ ಮಿಲ್ಸ್ ಕಂಪನಿ ಲಿಮಿಟೆಡ್ ಸೇಲ್ಸ್ ಆಫೀಸು, ಕೊಯಮತ್ತೂರು.

ಹಿಂದೂಸ್ತಾನ್ ವೇಪರ್ & ಸ್ಟೇಪರಿನೂರ್ಟ್ ಉಡುಪಿ.

ಮದ್ರಾಸ್ ಟ್ರಾನ್ಸ್‌ಫೌಂಡ್ರಿ, ಮದರಾಸು.

ವಸಂತ ಬೇಕರಿ, ಉಡುಪಿ.

ಲಕ್ಷ್ಮೀ ಕಾಫೀವರ್ಕ್ಸ್, ಉಡುಪಿ.

ಕೆನರಾ ಬೇಂಕ್ ಲಿಮಿಟೆಡ್, ಎಡ್ಮಿನಿಸ್ಟ್ರೇಟಿವ್ ಆಫೀಸು, ಬೆಂಗಳೂರು.

ಬ್ರಿಟಿಷ್ ಇನ್‌ಫಾರ್ಮೇಶನ್ ಸರ್ವಿಸಸ್, ಮದ್ರಾಸು.

ಜಂತರ ರಿಸ್ಟೋರೆಂಟ್ ನೆಂಕ್ರಮಗಾದಿ (ತಾಸಾ).

ಇಂಟರ್ ನೇಶನಲ್ ಪ್ರಿಂಟಿಗ್ ಪ್ರೆಸ್, ಕಾಪು.

ಎಸ್. ಆರ್. ಬೀಡಿ ವರ್ಕ್ಸ್, ಉಡುಪಿ.

ಪಾರೆಪಾ ಭಾಪಜಾನ್, ಮಂಗಳೂರು.

ಫೈಥಾರತ್ ಮಿಲ್ಸ್ ಪ್ರೈ. ಲಿಮಿಟೆಡ್, ಉಡುಪಿ.

ಶಂಜಸ್ ಪ್ರಿಂಟಿಂಗ್ ಇಂಕ್ಸ್ (ಸ್ಕೂಲ್ ಬುಕ್ ಕಂಪೆನಿಯನರಿಂದ.)

ನನೂಜ ಪುಸ್ತಕಾಲಯ: ಧಾರವಾಡ.

ನೋರ್ಟನ್ & ಕಂಪನಿ, ಮದರಾಸು.

ಮಂಗಳೂರು

ನಾರ್ಷಿಕೋತ್ಸವ — ಮಂಗಳೂರು ಕೇಂದ್ರ ಬುನಾದಿ ಅಧ್ಯಾಪಕರ ಸಂಘದ ವಾರ್ಷಿಕೋತ್ಸವವು ತಾ. ೨೮ರಲ್ಲು ಜಿಲ್ಲಾ ವಿದ್ಯಾಧಿಕಾರಿ ಶ್ರೀ ಬಿ. ಎಸ್. ಕುಡುಬಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಡಿಸ್ಟ್ರಿಟ್ ಇನ್ಸ್‌ಪೆಕ್ಟರ್ ಶ್ರೀ ಪೈ. ಗೋಪಾಲನವರು ಪರಿಚಯಭಾಷಣಮಾಡಿದರು. ಅಧ್ಯಕ್ಷರು ವಸ್ತು ಸ್ಪರ್ಧಾವಿವನ್ನು ಉದ್ಘಾಟಿಸಿದ ಬಳಿಕ ಶ್ರೀ ಗಳಾದ ಎಸ್. ಯು. ರಾಮಚಂದ್ರರಾವ್, ನಾರಾಯಣ ಸೆಟ್ಟಿ, ಕಾಂತ ಪೈ, ಯು. ದೇಜು ಮೊದಲಾದವರು ನಿನಿಧ ವಿಷಯಗಳನ್ನೆತ್ತಿ ಭಾಷಣವಿತ್ತರು. ಅರಂಭದಲ್ಲಿ ಕಾರ್ಯದರ್ಶಿ ಶ್ರೀ ಪಿ. ರಾಮಂರಾವರು ವರದಿಯನ್ನೋದಿದರು.

ಮೈಸೂರು ಸೋಲೀಸ್ ಐ. ಜಿ. ಯವರ ಆಗಮನ— ಮೈಸೂರು ರಾಜ್ಯದ ಸೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಶ್ರೀ ಪಿ ಕೆ. ಮೋನಪ್ಪನವರು ತಾ. ೧೩ರಲ್ಲು ಡಿಸ್ಟ್ರಿಟ್ ಇನ್ಸ್‌ಪೆಕ್ಟರ್ ಜನರಲ್ ಶ್ರೀ ಕಾದರ್ ಅಲಿಯವರೊಡನೆ ಮಂಗಳೂರಿಗೆ ಆಗಮಿಸಿದರು. ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಶಿಂಹನವರೊಡನೆ ಶ್ರೀ ಮೋನಪ್ಪನವರು ಹಂದಿತ ನೆಹರೂರವರು ತಾ. ೨೬ರಲ್ಲು ಮಂಗಳೂರಿಗೆ ಆಗಮಿಸುವ ವೇಳೆ ಕೈಕೊಳ್ಳಬೇಕಾದ ಭದ್ರತಾ ಕಾರ್ಯಗಳ ಕುರಿತು ವಿಚಾರವಿನಿಮಯ ನಡೆಸಿದರು.

ವರ್ಧಂತ್ಯುತ್ಸವ — ಮಂಗಳೂರು ಮಹಿಳೆಯರ ಸರಕಾರಿ ಪ್ರೌಢ ಶಾಲೆಯ ತೃತೀಯ ವರ್ಧಂತ್ಯುತ್ಸವವು ತಾ. ೧೫ರಲ್ಲು ಮೈಸೂರು ರಾಜ್ಯದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್‌ಟ್ರಕ್ಷನ್ ಶ್ರೀ ಸಿ ನರಶಿಂಹ ಮೂರ್ತಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಮುಮ್ಮೊಣಾಧ್ಯಾಯಿನಿ ಕುಮಾರಿ ಬ್ರಿಟ್ಟೋರವರು ಸ್ವಾಗತಿಸಿ ಶಾಲಾವರದಿಯನ್ನೋದಿದರು ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ ಸುರುಪರಂತೆ ಸ್ತ್ರೀಯರಿಗೂ ಸಮಾನ ಶಿಕ್ಷಣ ಪಡೆಯಲು ಅವಕಾಶಗಳಿಸಬೇಕು ಎಂದು ಮಂತಾಗಿ ಹೇಳಿದರು. ಶ್ರೀಮತಿ ಎಡ್. ಪುನರ್ವತಿಯವರು ಧನ್ಯವಾದಗಳನ್ನಿತ್ತರು.

ಕರ್ನಾಟಕ ಪೊಲಿಟೆಕ್ನಿಕ್‌ಗೆ ವಿದ್ಯುತ್ ಸಂಪರ್ಕ— ಮಂಗಳೂರಿನ ಕೆದ್ರಿ ಗುತ್ತೆಯಲ್ಲಿರುವ ಕರ್ನಾಟಕ ಪೊಲಿಟೆಕ್ನಿಕ್‌ಗೆ ಜೋಗ್ ವಿದ್ಯುತ್ ಸಂಪರ್ಕವನ್ನು ಜೋಡಿಸಿ ಬೆಳಗಿಸುತ್ತಾ ಮೈಸೂರು ರಾಜ್ಯ ಡೈರೆಕ್ಟರ್ ಆಫ್ ಟೆಕ್ನಿಕಲ್ ಎಜ್ಯುಕೇಶನ್ ಶ್ರೀ ಸಿ ನರಶಿಂಪ ಮೂರ್ತಿಯವರು 'ತಾಂತ್ರಿಕ ಶಿಕ್ಷಣದ ಪ್ರಗತಿಯಲ್ಲಿ ವಿದ್ಯುತ್ ಒಂದು ಅನಿವಾರ್ಯ ಪೂರಕಾಂಗವಾಗಿದೆ. ಇಂದು ತಾಂತ್ರಿಕ ಶಿಕ್ಷಣ ಹಾಗೂ ಕೈಗಾರಿಕಾ ಕ್ಷೇತ್ರದಲ್ಲಿ ವಿದ್ಯುಚ್ಛಕ್ತಿಗೆ ಅಗ್ರ ಪಯರ್ಾದೆ ಸಲ್ಲುತ್ತದೆ. ಈ ಸಂಸ್ಥೆಯ ತಾಂತ್ರಿಕ ವಿಕ್ಷಣ ಕ್ಷೇತ್ರದಲ್ಲಿ ಇನ್ನೂ ಮುನ್ನಡೆಯಬೇಕಾಗಿದೆ ಎಂದು ತಾ. 15 ರಲ್ಲು ಹೇಳಿದರು. ಶ್ರೀ ವಿ. ಎಸ್. ಕುಡ್ತರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಪ್ರಿನ್ಸಿಪಾಲ್ ಶ್ರೀ ಎಸ್. ಎಸ್. ಜತ್ತನ್ನರು ವರದಿಯನೋದಿದರು. ಶ್ರೀ ಅಲ್ವಿನ್ ಗೋನ್ಸಾಲ್ವಿಸರು ವಂದನೆಗಳನ್ನರ್ಪಿಸಿದರು.

ಸರಕಾರಿ ಆರ್ಟ್ಸ್ ಕಾಲೇಜಿನ ವಾರ್ಷಿಕ ದಿನಾಚರಣೆಯು — ತಾ. 14ರಲ್ಲು ಮೈಸೂರು ರಾಜ್ಯದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್‌ಟ್ರಕ್ಷನ್ ಶ್ರೀ ಸಿ. ನರಶಿಂಹಮೂರ್ತಿಯವರ ಅಧ್ಯಕ್ಷತೆಯಲ್ಲಿ ಜರಗಿತು. ವಿದ್ಯಾರ್ಥಿನಿಯಾದ ಬಳಿಕ ಪ್ರಿನ್ಸಿಪಾಲ್ ಶ್ರೀ ಸಿ. ವಿ. ಯೋಜೋರವರು ಕಾಲೇಜಿನ ವರದಿಯನ್ನೂ. ಸಂದೇಶಗಳನ್ನೂ ಓದಿದರು. ಕಾಲೇಜಿನ ಹಳೆ ವಿದ್ಯಾರ್ಥಿ ಮೈಸೂರಿನ ಅಸಿಸ್ಟಾಂಟ್ ಆಕೌಂಟಾಂಟ್ ಜನರಲ್ ಶ್ರೀ ಕೆ ಕರುಣಾಕರಿ ರಾಯರು ಸ್ವಸ್ತಿವಾಚನಮಾಡಿದರು. ಕಾಲೇಜಾ ಯೂನಿಯನ್ ಆಧ್ಯಕ್ಷೆ ಕು ಸೂರಿ ಇಂದಿರಾ ಕಾಮತರು ಆದಕ್ಕೆ ಉತ್ತರವಿತ್ತರು. ವಿದ್ಯಾರ್ಥಿಗಳಲ್ಲಿ ಸಾಮಾನ್ಯ ಜ್ಞಾನದ ಅಭಾವ ಹೋಗಲಾಡಿಸಲು ಪ್ರತಿಯೆತ್ತಿ ಸಭೆಗಳು ಎಂದು ಮುಂತಾಗಿ ಸಭಾಧ್ಯಕ್ಷರು ಹೇಳಿದರು. ಶ್ರೀ ಎ. ರಶೀದ್‌ಖಾನರು ಧನ್ಯವಾದ ಗಳನ್ನಿತ್ತರು. ನಂತರ ನಾಟಕ, ನೃತ್ಯ ಕಾರ್ಯಕ್ರಮಗಳಾದುವು.

ಜಿಲ್ಲೆಯಲ್ಲಿ ಭೂದಾನದ ತತ್ವ ಪ್ರಚಾರ— ಕಳೆದ ತಾ. 31೦ರಿಂದ ಇಂದೆ ತಾ. 12ರ ತನಕೆದ ಸರ್ವೋದಯ ಪಕ್ಷದಲ್ಲಿ ದ. ಕ. ಜಿಲ್ಲೆಯಲ್ಲಿ ನಿನೋಬಾಜಿಯವರೆ ಭೂದಾನದ ತತ್ವ ಪ್ರಚಾರ ಮತ್ತು ಭೂದಾನ ಯಾಸ್ತಿಯ ಕಾರ್ಯವು ನಡೆಯಿತು. ನೂಲ್ಚಿ ತೋಕೂರು ಗ್ರಾಮದಲ್ಲಿ ಹೊಸತಾಗಿ ಸ್ರಿ ರಂಭಿಸಿರುವ ತಪೋವನ,ಬೆಂಬ ಜೆನಿನಿನ ಸರ್ವೋದಯ ಗ್ರಾಮ ಸೇವಾ ಕೇಂದ್ರದಲ್ಲಿ ಸಾಮೂಹಿ ಪ್ರಾರ್ಥನಾದಿಗಳಿಂದ ಸರ್ವೋದಯ ದಿನ ಆಚರಿಸಲಾಯಿತು. ಮೂಲ್ಚಿ, ಕಾರ್ನಾಡು, ಚಿತ್ರಾಪು, ಹಳ್ಳಆಂಗಡಿ, ತೋಕೂರು, ಕೆಮ್ರೂಲು, ಕಿನ್ನಿಗೋಳಿ, ಸಂಕಲಕರಿಯ, ಮುಂದ್ಕೂರು, ಶಿರ್ವ, ಕಾರ್ಕಳ, ಉಮ್ಯಾನರ, ಆಲೆಪ್ಪೊನು, ಮಣಿಪಾಲ, ಉಡುಪಿ, ನಡ್ತ ಭಾಂಡೇಶ್ವರ ಮೊದಲಾದ ಸ್ಥಳಗಳಲ್ಲಿ ಪಾದ ಯಾತ್ರಿ ಕಾರ್ಯಕರ್ತರು ವ್ಯಾಪಾರ ಕಾರ್ಯವೆಸಗಿದರು.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 567/56.

ಜಗನ್ನಾಥಪೆಟ್ಟಿ —ವಾದಿ

ಮತ್ತು

ಗಣಪಯ್ಯ ಸೆಟ್ಟಿ ಕೂಡಾ —ಪ್ರತಿವಾದಿರು ಯಿನರೊಳಗೆ

8ನೇ ಪ್ರತಿವಾದಿ ಸದಾಶಿವ ಸೆಟ್ಟಿಗೆ

ವಾದಿಗೆ ಪ್ರತಿವಾದಿಯು ರೂಪಾ 800/- ಕ್ಕೆ ತಾ. 8—6—50 ರಲ್ಲು ಬಪ್ಪಿಕೊಟ್ಟ ದಿನಾಂಡ ನೋಟು ಸ್ಕಕಾರ ಬರತಕ್ಕ ಆಸಲು ಬಡ್ಡಿ ಕೂಡಾ ರೂಪಾ 1077—4—0 ಕ್ಕೆ ವಾಪಸು ಮಾಡಿದ ನೋಟಿನ ಜವಾಬು 8ನೇ ಪ್ರತಿವಾದಿಯ ನೋಟೀಸಿನ ಬಗ್ಗೆ ತಾ. 22—2—57ಕ್ಕೆ ಇಟ್ಟಿದೆ. 8ನೇ ಪ್ರತಿವಾದಿಯು ಸದ್ರಿ ತಾ. 22 -2 -57ಕ್ಕೆ ಮೂವಾಸ್ಟ ಫೊಟಿ 10ಕ್ಕೆ ಮೇಲ್ಪಂಡ ಕೋರ್ಟಿನುಂದೆ ಹಾಜರಾಗುವಂತೆ ತಪ್ಪಿದ್ದಲ್ಲಿ 8ನೇ ಪ್ರತಿವಾದಿಯ ಸೈರು ಹಾಜ್ರಾಯಿಂದೆ ಸದ್ರಿ ಸ್ಯಾಜ್ಯ ಕ್ಕಾಯಂದೆ ತೀರ್ಮಾನಿಸಲ್ಪಡುವದು.

(Sd) Gratian C. Rego,

Vakil for Plff.

ಉಡ್ಪಿ, ತಾ. 12—2—57.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳಗೊಳ್ಳಬೇಕೆ?

ಮನೆಯಲ್ಲೇ "ನುನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ.ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ನಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟಿ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸುರತ್ಕಲ್ ಮತದಾರ ಕ್ಷೇತ್ರದ ಎಸೆಂಬ್ಲಿ ಉಮೇದ್ವಾರಿ **ಬಿ. ಆರ್. ಕರ್ಕೇರ**

ಬಾಪುವಿನ ಭಾರತ

(೩ನೇ ಪುಟದಿಂದ)

ಅಭ್ಯರ್ಥಿಗಳ ಸ್ವಯಂ ಪ್ರೇರಿತ ಐಚ್ಛಿಕ ಶ್ರಮದಾನದಿಂದಲೇ ರೂಪುಗೊಂಡಿದೆಯೆಂಬುದನ್ನು ಈ ಸಂದರ್ಭದಲ್ಲಿ ಮರೆಯಬಾರದು.

ಸೇವಾಗ್ರಾಮದ ಈ ಸಂಘದ ವಾರ್ಷಿಕ ಸರಾಸರಿ ವೆಚ್ಚವು ಸುಮಾರು ೧,೫೦,೦೦೦ ರೂಪಾಯಿಗಳಷ್ಟಾಗುತ್ತದೆ. ಇದರಲ್ಲಿ ಸುಮಾರು ೫೦,೦೦೦ ರೂಪಾಯಿಗಳಷ್ಟು ಅಭ್ಯರ್ಥಿಗಳ ಶ್ರಮದ ಫಲದಿಂದಲೇ ದೊರಕುತ್ತಲಿದೆಯೆಂದರೆ ಎಷ್ಟರ ಮಟ್ಟಿಗೆ ಸ್ವಾವಲಂಬೀ ಸಮಾಜದ ಗುರಿ ಮುಟ್ಟಿದೆಯೆಂಬ ಸ್ಥೂಲ ಕಲ್ಪನೆಯುಂಟಾಗಬಹುದು. ಉಳಿದ ೧,೦೦,೦೦೦ ರೂಪಾಯಿಗಳಷ್ಟು ಮೊತ್ತವು ಗಾಂಧೀ ಸ್ಮಾರಕ ನಿಧಿಯಿಂದ ಸಿಗುವುದು. ಈ ವರೆಗೆ ಸೇವಾಗ್ರಾಮದಲ್ಲಿ ನಮ್ಮ ದೇಶದ ವಿವಿಧ ರಾಜ್ಯಗಳಿಂದ ನಿಯೋಜಿಸಲ್ಪಟ್ಟ ೧೦೦೦ಕ್ಕಿಂತಲೂ ಹೆಚ್ಚು ಮಂದಿ ಶಿಕ್ಷಣ ತಜ್ಞರು ಬುನಾದಿ ರೀತ್ಯಾ ಶಿಕ್ಷಣ ತರಬೇತಿಯನ್ನು ಮುಗಿಸಿ ತಮ್ಮ ರಾಜ್ಯಗಳಿಗೆ ಮರಳಿದ್ದಾರೆ.

ಮಹಾತ್ಮಾ ಗಾಂಧೀಜಿಯವರಿಂದಲೇ ಪ್ರಾರಂಭಿಸಲ್ಪಟ್ಟ ಕಸ್ತೂರ್‌ಬಾ ಆಸ್ಪತ್ರೆಯು ಇನ್ನೂಂಸು ಆದರ್ಶ ಸಂಸ್ಥೆಗಳಿಗಿಂತ ಭಿನ್ನವಾಗಿರಲ್ಲಿ ಹೊರವಲಯದ ಚಿಕ್ಕ ಆಸ್ಪತ್ರೆಯಾಗಿ ಆರಂಭವಾದ ಈ ಸಂಸ್ಥೆಯು ಇಂದು ೩೫ ಹಾಸುಗೆಗಳುಳ್ಳ, ಹೆರಿಗೆ ಕೇಂದ್ರದಿಂದ ದೊಡಗೂಡಿದ ಉತ್ತಮ ಮಟ್ಟದ ಹಾಗೂ ಸುವ್ಯವಸ್ಥಿತ ಗ್ರಾಮೀಣ ಆಸ್ಪತ್ರೆಯೆನ್ನಿಸಿಕೊಂಡು ಪ್ರತಿನಿತ್ಯ ಸರಾಸರಿ ೧೦೦ ಮಂದಿ ರೋಗಿಗಳಿಗೆ ಉಚಿತ ಚಿಕಿತ್ಸೆಯನ್ನು ಒದಗಿಸಿ ಕೊಡುತ್ತಲಿದೆ. ಒಂದಾನೊಂದುಕಾಲದಲ್ಲಿ ಯಾವುದೋ ಒಂದು ಕಟ್ಟಡದ ಹೊರ ಜಗಲಿಯಲ್ಲಿ ಆರಂಭವಾದ ಈ ಆಸ್ಪತ್ರೆಗೆ ಈಗ ಸ್ವಂತ ಕಟ್ಟಡಗಳಿವೆ. "ಕಸ್ತೂರ್‌ಬಾ ಸ್ಮಾರಕ ನಿಧಿ" ಯ ವತಿಯಿಂದ ಗ್ರಾಮಗಳಲ್ಲಿ ಈ ಆಸ್ಪತ್ರೆಯು ದಾದಿಯರ ತರಬೇತಿ ಕೇಂದ್ರವಾಗಿ ರೂಪಾಂತರ ಗೊಂಡಿದೆ. ಸೇವಾಗ್ರಾಮದ ಸುತ್ತ ಮುತ್ತಲಿರುವ ಸುಮಾರು ೫೫ ಹಳ್ಳಿಗಳ ಶುಚಿತ್ವದ ಹಾಗೂ ನಿರ್ಮಲೀಕರಣದ ಜೀವ್ರೋಪಚಾರಕೆಯನ್ನು ಈ ಆಸ್ಪತ್ರೆಯು ನಿರ್ವಹಿಸುತ್ತಲಿದೆ. ಅಷ್ಟೇ ಅಲ್ಲ. ಇಡಿಯ ವರ್ಧಾ ತಾಲೂಕಿನಲ್ಲಿ ಕುಷ್ಠ ರೋಗವನ್ನು ನಿರೋಧಿಸುವಹೋಣೆಯನ್ನೂ ಹೊತ್ತಿದೆ. ಮಲೇರಿಯಾ ಪ್ರತಿಬಂಧ, ಮಕ್ಕಳ ಕ್ಷೇಮ ಚಿಂತನೆ, ಸಿಡುಬು, ವಾಂತಿ ಭೇದಿ ಮೊದಲಾದ ಸಾಂಕ್ರಾಮಿಕ ರೋಗಗಳು ಬಾರದಂತೆ ನಿಗಾವೆ ವಹಿಸುವಿಕೆ, ಇವೆ ಮೊದಲಾದವುಗಳು ಈ ಆರೋಗ್ಯ ಕೇಂದ್ರದ ಇನ್ನಿತರ ಚಟುವಟಿಕೆಗಳು. ಇಲ್ಲಿ ಆಸ್ಪತ್ರೆಯಲ್ಲಿರುವ ಹಲವು ರೋಗಗಳಿಗೂ ಸಮಾಜ ಶಿಕ್ಷಣವನ್ನೀಯಲಾಗುತ್ತದೆ. ಈ ಆರೋಗ್ಯ ಕೇಂದ್ರವೇ ಸೇವಾಗ್ರಾಮದಗ್ರಾಮಾಂತರ ವಿಶ್ವವಿದ್ಯಾಲಯದ ವೈದ್ಯಕೀಯ ಇಲಾಖೆಯಾಗಿ ಪರಿವರ್ತಿಸಲ್ಪಡಲಿದೆಯೆಂದು ತಿಳಿದರೂ ತಪ್ಪಾಗಲಾರದು.

ಸೇವಾಗ್ರಾಮದ 'ಬಾಪುಕುಟಿ' ಯು ಇಂದು ರಾಷ್ಟ್ರೀಯ ಪುಣ್ಯಕ್ಷೇತ್ರವಾಗಿ ಪರಿಗಣಿಸಲ್ಪಟ್ಟಿದೆ. ಅಸಂಖ್ಯಾತ ಯಾತ್ರಾರ್ಥಿಗಳನ್ನು ತನ್ನೆಡೆಗೆ ಆಕರ್ಷಿಸುತ್ತಲಿದೆ. ಬಿದಿರು, ಮಣ್ಣುಗಳಿಂದಲೇ ಕಟ್ಟಲ್ಪಟ್ಟು ಕೇವಲ ಎರಡೇ ಎರಡು ಕೋಣೆಗಳುಳ್ಳ ಈ ಚಿಕ್ಕ ಗುಡಿಸಲಿಗೆ ಇರುವ ಪಾವಿತ್ರ್ಯತೆ ಅಪಾರವಷ್ಟು! ಇದರಲ್ಲಿ ಅಡಗಿರುವ ಅನಂತ ಶಕ್ತಿ ಸಾಮರ್ಥ್ಯವೋ? ವರ್ಣಿಸಲಸಾಧ್ಯ. ಕಾಲಾತೀತದಿಂದ ಈ ಕುಟೀರವನ್ನು ಕಾಪಾಡುವುದಕ್ಕೆ ಸೂಕ್ತ ಏರ್ಪಾಡುಗಳನ್ನು ಮಾಡಲಾಗಿದೆ. ದಿನಂಪ್ರತಿ ಮುಂಜಾನೆ ಮತ್ತು ಸಂಧ್ಯಾಕಾಲದಲ್ಲಿ ಸೇವೋಜಿತ ಕಾಲದಲ್ಲಿ ಈ ಕುಟೀರದೆಸರು ಸಾಮೂಹಿಕ ಪ್ರಾರ್ಥನೆಗಾಗಿ ಜನರು ನೆರೆಯುತ್ತಾರೆ. ಬಾಪೂಜಿ ಕುಳಿತುಕೊಳ್ಳುತ್ತಿದ್ದ ಆ ಪೀಠ ಆದೇ ಮರದ ಪಟ್ಟಿ, ದಿಂಬು— ಹೌದು. ಬಾಪೂ ಬದುಕಿದ್ದಲ್ಲಿ ಆಮರರಾಗಿದ್ದಾರೆ. ಸತ್ತು ಬದುಕಿದ್ದಾರೆ. ಆವರ ಜಪವೇ ಇಂದು ಅಲ್ಲಿಲ್ಲ. ಆದರೆ ಅವರು ತೋರಿಸಿರುವ ಆ ದಾರಿ. ಆ ದಾರಿಯಲ್ಲಿ ಮುನ್ನಡೆಯುತ್ತಿರುವ ಅವರ ಶಿಷ್ಯಕೋಟಿ! ಇಂದು ಸೇವಾಗ್ರಾಮವನ್ನು ಸಂದರ್ಶಿಸಿದ ಯಾರೇ ಆದರೂ ಬಾಪು ಕಂಡ ಭಾರತದ ಅನಧಿಕೃತ ರಾಜಧಾನಿ ನವದೆಹಲಿಯಲ್ಲ, ಸೇವಾಗ್ರಾಮ ಎಂದು ಕಂಠೋಕ್ತವಾಗಿ ಸಾರಬಹುದು. ಹಾಗೆ ಹೇಳಿದರೆ ಅದರಲ್ಲಿ ಉತ್ಪ್ರೇಕ್ಷೆಯೂ ಇರಲಾರದು. ಬಾಪು ಕಂಡ ಭಾರತದ ಈ ಸೇವಾಗ್ರಾಮದ ದಿವ್ಯ ಜ್ಯೋತಿಯು ನಮ್ಮ ನಾಡಿನ್ನು ಬೆಳಗಿ ನಂದಾದೀಪವನ್ನಾಗಿಸಲಿ.

(ಸಾಧಾರ)

ಶ್ರೀ ಶ್ರೀಪತಿರಾವ್ ಪಲಿಮಾರ್ಕಾರ್

ಬಿ.ಎ.,ಬಿ.ಟಿ., (ಕೊಡಗು)

ಇದೇನು ಜೋಡಲ್ಲ—ಅಣುಶಕ್ತಿಯನ್ನು ಉತ್ಪಾದಿಸುವ ಯಂತ್ರವನ್ನು ನೆಲೆಗೊಳಿಸಲಿಕ್ಕಾಗಿ ಸಿದ್ಧ ಪಡಿಸುತ್ತಿರುವ ಕಟ್ಟಡದ ಬಾಹ್ಯ ರೂಪ. ಪಾಪವಾಸನೆಯನ್ನು ತಗ್ಗಿಸುವ ಅವಶ್ಯಕತೆಯನ್ನು ದೂರೀಕರಿಸಿ, ತತ್ಫಲವಾಗಿ ಅಣುಶಕ್ತಿಯ ಉತ್ಪಾದನೆಯನ್ನು ಅಧಿಕಗೊಳಿಸುವ ಹೊಸ ಮಾದರಿಯ ಯಂತ್ರವನ್ನು ಬ್ರಿಟನು ಈ ಕಟ್ಟಡದಲ್ಲಿ ಇಡುತ್ತದೆ.

ನುಡಿಚಿತ್ರ:—

ದಿವಂಗತ ಮಹಾದೇವ ಗೋವಿಂದ ರಾನಡೆಯವರು

ದಿವಂಗತ ಮಹಾದೇವ ಗೋವಿಂದ ರಾನಡೆಯವರು ಸುಪ್ರಸಿದ್ಧ ಸಮಾಜ ಸುಧಾರಕ ಹಾಗೂ ಕಾಂಗ್ರೆಸಿನ ಪ್ರಮುಖ ಮುಖಂಡರಾಗಿದ್ದರು. ಇವರು ತಮ್ಮ ಜೀವನದ ಕಂತ್ಯದ ವರೆಗೆ ಸಮಾಜ ಹಾಗೂ ಕಾಂಗ್ರೆಸಿನ ಸೇವೆಯನ್ನು ಮನಃಪೂರ್ವಕವಾಗಿ ಮಾಡಿದ್ದರು. ಇವರ ವಿವಿಧ ಸೇವೆಗಳ ಸ್ಮೃತಿಯು ಇವರ ಭಕ್ತರ ಹೃದಯದಲ್ಲಿ ಇಂದಿಗೂ ಪ್ರಭುಲ್ಲಿತವಾಗಿದೆ. ಇವರು ಪ್ರಧಾನ ನ್ಯಾಯಾಲಯದ ಜಡ್ಜ್ ಹಾಗೂ ಅರ್ಥಶಾಸ್ತ್ರ, ರಾಜನೀತಿ ಮತ್ತು ಇತಿಹಾಸದ ಪ್ರಕಾಂಡ ಲೇಖಕರಾಗಿದ್ದರು.

ಇವರು ಪೂನಾದಲ್ಲಿ 18ನೇ ಫೆಬ್ರವರಿ, 1842ರಲ್ಲು ದಿವಂಗತ ಗೋವಿಂದ ಅಮ್ಮತ ರಾನಡೆಯವರಲ್ಲಿ ಹುಟ್ಟಿದರು. ಪೂನಾದಲ್ಲೇ ಪ್ರಾರಂಭಿಕ ಶಿಕ್ಷಣವನ್ನು ಪೂರ್ತಿಮಾಡಿ, ಇವರು ಕೊಲ್ಲಾಪುರದ ಕೈಕ್ಲೂಲಿನ ಪ್ರಧಾನಾಧ್ಯಾಪಕರಾದರು. ಪ್ರಾರಂಭದಿಂದಲೂ ಇವರ ಅಭಿರುಚಿ ಗಂಭೀರವಾದ ಅಧ್ಯಯನದ ಕಡೆಗಿತ್ತು. ಹೈಸ್ಕೂಲಿನಲ್ಲಿ ಸರ್. ಅಲೆಗ್ಜಾಂಡರ್ ರಂತಹ ವಿದ್ವಾನ್ ಅಧ್ಯಾಪಕರ ಸಂಪರ್ಕಕ್ಕೆ ಬಂದ ಬಳಿಕ ಇವರ ಅಧ್ಯಯನ ಕಾರ್ಯವು ಇನ್ನಷ್ಟು ಪ್ರಗತಿ ಪಥದಿಂದ ಮುಂದರಿಯಿತು. ಮುಂತಾದ ಇತಿಹಾಸದ ಗೌರವ ಪೂರ್ಣ ವಿದ್ವಲತೆಯ ನಮಸ್ಕಾರನೆಯನ್ನು ಮಾಡಿದ ಕಾರಣ 6 ತಿಂಗಳುಗಳ ತನಕ ಇವರ ಭ್ರಾತೃ ವೃತ್ತಿಯನ್ನು ನಿಷ್ಪಸಲಾಗಿತ್ತು.

ಇವರು ಪ್ರಥಮ ಶ್ರೇಣಿಯಲ್ಲಿ ಬಿ. ಎ. ಪಾಸಾದುದಲ್ಲದೆ ಎಂ. ಎ.ಯಲ್ಲಿ ಸ್ವರ್ಣ ಪದಕ ಪಡೆದರು. ವಕಾಲತು ಪಾಸು ಮಾಡಿದ ಬಳಿಕ ಇವರು ಶಿಕ್ಷಣ ವಿಭಾಗದ ಮಂತ್ರೀ ಅನುವಾದಕರಾಗಿ ನಿಯುಕ್ತರಾದರು. 1868ರಲ್ಲಿ ಮುಂಬಾಯಿ ವಿಶ್ವವಿದ್ಯಾಲಯದ 'ಫೆಲೋ' ಆಗಿ ಚುನಾಯಿಸಲ್ಪಟ್ಟ ನಂತರ ಇವರು ಎಲಿಫಿನ್‌ಸ್ಟನ್ ಕಾಲೇಜಿನಲ್ಲಿ ಪ್ರೊಫೆಸರಾಗಿ ನೇಮಿಸಲ್ಪಟ್ಟರು. ಇವರ ನಂತರ ಇವರು ಪ್ರಧಾನ ನ್ಯಾಯಾಲಯದ ಜಡ್ಜ್ ರಾದರು.

ಸಮಾಜ ಸುಧಾರಣೆ

ಸಮಾಜ ಸುಧಾರಣೆಯು ಕಡೆಗೆ ಇವರಿಗೆ ವಿಶೇಷವಾದ ಅಭಿರುಚಿ ಇತ್ತು. 1897ರಲ್ಲಿ ದೇಶವಿದೇ ಸಿಡುಬು ರೋಗ ಹಬ್ಬಿದಾಗ ಇವರು ಜನತೆಯ ಯಾವ ಸೇವೆ ಮಾಡಿದ್ದರೋ, ಅದನ್ನು ಎಂದಿಗೂ ಮರೆಯಲಾಗುವುದಿಲ್ಲ.

ದೇಹಾವಸಾನ

16ನೇ ಜನವರಿ, 1910ರಂದು ಈ ಮಹಾನ್ ದೇಶ ಸೇವಕನ ದೇಹಾವಸಾನವಾಯಿತು. ಈ ಪ್ರಕಾರ ಮಹಾನ್ ಆತ್ಮಗಳ ಸ್ಮರಣೆ ಹಾಗೂ ಸನ್ಮಾನಕ್ಕಾಗಿ ಅನೇಕ ಸ್ಮಾರಕಗಳು ಮಾಡಲ್ಪಡುತ್ತಿವೆ. ಆದರೆ ಅವರ ಐತಿಹಾಸಿಕ ಪ್ರಯತ್ನಗಳನ್ನು ಜ್ಞಾಪಿಗೆ ತರುವುದು ಹಾಗೂ ಅವರ ವಿಚಾರ ಭಾರೆಗಳನ್ನು ರಾಷ್ಟ್ರೀಯ ಉನ್ನತಿಗಾಗಿ ಕ್ರಿಯಾಶೀಲವನ್ನಾಗಿ ಮಾಡಿಕೊಳ್ಳುವುದೇ, ಅವರ ಪ್ರತಿ(towards) ನಿಜವಾದ ಸನ್ಮಾನ ಮಾಡುವುದಾಗಿದೆ.

—ಶ್ರೀ ನಿ. ನಾರಾಯಣ ಬಲ್ಲಾಳ, ಉಡುಪಿ.

ಕುಮಾರಿ ಬಿಲ್ಲಿಗಳು

Govt. Regd.

ಹೆಂಗಸರ ಹಿತನಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ವಾಕೆಸ್ಸರು: ಷಾ ಕಂಪೆನಿ, ಮಂಗಳೂರು—1.

ಮುದ್ರಣ ಕಾರ್ಯದಗಳಿಗೆ—

ನವಯುಗ ಪ್ರೆಸ್,

ಸಂತೆಕಟ್ಟೆ .... ಉಡುಪಿ

ಮಂಗಳೂರು 1 ಮತದಾರ ಕ್ಷೇತ್ರದ ಎಸೆಂಬ್ಲಿ ಉಮೇದ್ವಾರಿ **ಬಿ. ವಿ. ಬಾಳಿಗ**

ಅಣುಯುಗ

(೨ನೇ ಪುಟದಿಂದ)

ಆದ ಪರಮೇ ಶ್ರೇಯಸ್ಕರ ಎಂದು ಭಾರತೀಯ ಸಂಸ್ಕೃತಿ ಸಾರಿ ಹೇಳಿದೆ.

"ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ" ಇದಾ-ಪರಮಾತ್ಮನು ಅವತರಿಸಿ ಧರ್ಮ ಸಂಸ್ಥಾಪನೆಯನ್ನು ಮಾಡುವನೆಂಬ ನಂಬುಗೆ ಭಾರತೀಯ ಸಂಸ್ಕೃತಿಯದ್ದು. ಆದುದರಿಂದಲೇ ಬುದ್ಧ ಜಿನ ಮೊದಲಾದ ಮತ ಪ್ರಚಾರಕರೂ, ಆ ಶೋಕ, ಕನಿಷ್ಕಾದಿ ಮಹಾರಾಜರೂ ಅಳಿಯುತ್ತಿದ್ದ ಸಂಸ್ಕೃತಿಯನ್ನು ಸನ್ನಿರೂಜ್ಜೀವಿಸಿ, ನವೀನ ಧರ್ಮಗಳಿಗೆ ಆಶ್ರಯ ಕೊಟ್ಟರು. ಭಾರತದಲ್ಲಿ ಹುಟ್ಟಿದ ಮತಗಳಿಗೆ ಲೆಕ್ಕವಿಲ್ಲ. ಶಂಕರ ರಾಮಾನುಜ ಮಧ್ವಾಚಾರ್ಯರು, ಬಸವೇಶ್ವರರು, ಚೈತನ್ಯರು, ತುಕಾರಾಮರು ಯಾರೇ ಇರಲಿ, ಅವರೆಲ್ಲರೂ ಭಾರತೀಯ ಸಂಸ್ಕೃತಿಯೇ ಜೇರಾಗಿರುವ ವೃಕ್ಷದಲ್ಲಿ ಶಾಖೋಪಶಾಖೆಗಳಾಗಿ ಬೆಳೆದರೇ ವಿನಃ ತಮ್ಮ ಮೂಲ ಸಂಸ್ಕೃತಿಗೆ ಕುಠಾರ ಪ್ರಾಯರಾಗಿರಲಿಲ್ಲ. ಎಂಬುದನ್ನು ಗಮನಿಸಬೇಕು. ವ್ಯಾಯಶಃ ಯೇಸುಕ್ರಿಸ್ತನು ಅಥವಾ ಪೈಗಂಬರನು ಒಬ್ಬೊಬ್ಬನು ಪಾಶ್ಚಾತ್ಯ ರಾಷ್ಟ್ರದಲ್ಲಿ ಹುಟ್ಟಿದರೆ, ನಮ್ಮಲ್ಲಿ ಅದೇ ಕಾಲದಿಂದ ಇಂದಿನ ವರೆಗೆ-ರಾಮಕೃಷ್ಣ ಪರಮಹಂಸ, ವಿವೇಕಾನಂದ ಮಹಾತ್ಮಾ ಗಾಂಧಿಜೀಯವರಿಗೆ – ಅದೆಷ್ಟು ಮಂದಿ ಜೀವನದ ಉದ್ದೇಶವನ್ನು, ಅದು ಸಚ್ಚಿದಾನಂದವೆಂಬುದನ್ನು ಬೋಧಿಸಿಲ್ಲ ? ಇವಕ್ಕೆ ಕಾರಣವೇನು?

ಕತ್ತಲೆಯಲ್ಲಿ ಗಿಡಬೆಳೆಯದು, ಬೆಳಕು ಧಾರಾಳವಿರುವಲ್ಲಿ ಗಿಡ ಹುಲುಸಾಗಿ ಶಾಖೆಗಳನ್ನು ತಾಳಿ ಪುಷ್ಪಿಯಾಗಿ ಬೆಳೆಯುತ್ತದೆ. ಕಾರಣ ಅದಕ್ಕೆ ಸ್ವಾತಂತ್ರ್ಯವಿದೆ. ಸ್ವಾತಂತ್ರ್ಯವನ್ನು ಅಪಹರಿಸಿದ ಸಂಸ್ಕೃತಿ ತನ್ನ ಉದ್ದೇಶವನ್ನು ಸರಿಯಾಗಿ ಪೂರೈಸಲಾರದು. ಇದಕ್ಕೆ ಪಾಶ್ಚಾತ್ಯ ಸಂಸ್ಕೃತಿಯೇ ಲಕ್ಷ್ಯ. ಅದು ಎಂದಿಗೂ ಯಾವ ಕಾಲಕ್ಕೂ ಯಾರಿಂದಲೂ ಸರ್ವತೋಮುಖವಾಗಿ ಹರಿಯದು ಏಕೆ? ಅದರಲ್ಲಿ ವ್ಯಕ್ತಿ ಸ್ವಾತಂತ್ರ್ಯವಿಲ್ಲ. ಆದರ ಗುರಿ ಸೀರನ!

ನಮ್ಮ ಭಾರತದ ಸಂಸ್ಕೃತಿಯಲ್ಲಿ ಪ್ರತಿಯೊಬ್ಬನಿಗೂ ಸ್ವಾತಂತ್ರ್ಯ. ಆಷ್ಟು ಸ್ವತಂತ್ರನಾಗಿರುವುದರಿಂದಲೇ ಭಾರತೀಯ ಸಂಸ್ಕೃತಿಯು ಎಷ್ಟೊ ಗುರಿಯಾದ ಪಾರಮಾರ್ಥಿಕವಾದ ಮೋಕ್ಷಸಾಧನವನ್ನು ಕಂಡುಹಿಡಿಯಲು ದಾರಿಗಳನ್ನು ಕಲ್ಪಿಸಿಕೊಳ್ಳಲು ಎಡೆಮಾಡಿಕೊಟ್ಟಿತು. ಆಂಗ್ಲ ಭಾಷೆಯಲ್ಲಿ ಒಂದು ಗಾದೆಯಿದೆ: "Allroads Lead Rome"ಎಂದು. ಅದೇ ಮಾತನ್ನು ನಮ್ಮ ವಿಷಯದಲ್ಲಿ ಯೂ ಅನ್ವಯಿಸಿಕೊಳ್ಳಬಹುದು. "ಗುರಿ ಯೊಂದೆ, ನಿಧಾನ ಹಲವು" ಆ ಗುರಿಗಾಗಿ ಋಷಿಗಳು, ಮುನಿಗಳು, ರಾಜರು, ಬುದ್ಧಜನರು, ಆಚಾರ್ಯತ್ರಯರು, ದಾಸಾದಿಗಳು ಅನವರತ ಪಡಿಪಾಡಿದ್ದಾರೆ- ಕ್ರಿ. ಪೂ. ೪-೧೦ ಸಾವಿರ ವರ್ಷಗಳಿಂದ ಇಂದಿನವರೆಗೂ ದೇಶದ ಮೂಲೆ ಮೂಲೆಯಲ್ಲಿ – ಜನಜನದಲ್ಲಿ – ಆವಿಚ್ಛಿನ್ನವಾಗಿ, ಏಕಪ್ರಕಾರವಾಗಿ ಹರಿದು ಬಂದಿದೆ ಭಾರತೀಯ ಸಂಸ್ಕೃತಿ.

ಮೊಗಲರ ತುಗ್ಲಕ್ ಕಾಯಭಾರದಲ್ಲಾದರೂ, ಕ್ರೈಸ್ತರ ನಿಯಮಿತ ಆಡಳಿತೆಯಲ್ಲಾದರೂ ಭಾರತದ ಸಂಸ್ಕೃತಿಯು ಕೆಲವುಕಾಲ ಅಜ್ಞಾತವಾಸವನ್ನು ಅನುಭವಿಸಿರಬಹುದು. ಆದರೆ, ನಾಶವಾಗಿಲ್ಲ ವೆಂಬುದನ್ನು, ಬೂದಿಮುಚ್ಚಿದ ಕೆಂಡದಂತಿದ್ದಿತೆಂಬುದನ್ನು ತಳಿಯಬೇಕು.

ಭಾರತೀಯ ಸಂಸ್ಕೃತಿಯ ಸೂಕ್ಷ್ಮ ಪರಿಚಯವಾದನಂತರ ಇಂದಿನದುಗಳ್ಕೆ ತಿರುಗೋಣ, ಇಂದು ಭಾರತದಲ್ಲೇ ಆಗಲೀ, ನವ್ಯ ಸಂಸ್ಕೃತಿಯ ಮೂಲರೂಪ ವಾದ ಮೋಕ್ಷ ಸಾಧನವನ್ನು ನಂಬುವರೆಷ್ಟುಮಂದಿ? ಪ್ರಪಂಚದಲ್ಲಿ ಎಷ್ಟು ಮಂದಿ ಎಂದು ಹೃಷ್ಟಿಸಿದರೆ, ಬಾಯಿಮಾತಿನಲ್ಲಿ ಯಾರೂ ಒಪ್ಪದಿದ್ದರೂ ಅಂತರಾಳದಲ್ಲಿ ಒಸ್ಪದಿರುವವರು ವಿರಳ! ಮೋಕ್ಷದ ಬದಲು, ಶಾಂತಿಯನ್ನಾದರೂ ಅಪೇಕ್ಷಿಸುವರೆಲ್ಲಾ ಜನರು. ಜಗತ್ತಿನ ಪ್ರತಿಯೊಂದು ವಸ್ತುವಿನಿಂದಲೂ ಉತ್ತಮ–ಅಧಮ ಎಂಬೆರಡು ಕಾರ್ಯಗಳಾಗುವುದು. ಅಣುವಿನಿಂದಲೂ ಉತ್ತಮ, ಲೋಕಕಲ್ಯಾಣಕಾರಕ ಕಾರ್ಯವೂ, ಅಧಮ—ಲೋಕಕ್ಷಯಾಂತಕ ಕಾರ್ಯವೂ ಆಗುವುವು. ಆದರೆ ಏಹಿಕ ಭಾವನೆಯು ಪಾಶ್ಚಾತ್ಯ ಸಂಸ್ಕೃತಿಯ ಪ್ರತೀಕಗಳಾದ ರಾಷ್ಟ್ರಗಳು ಅವರಿಂದ ರಾಷ್ಟ್ರವಿಘಾತುಕ ಚರ್ಯೆಗಳಿದರೆ, ಅದರಲ್ಲಿ ತಪ್ಪೇನು? 'ಕೊಲುವಾಕಾಕೂಟವು ಸಪ್ಪ ಉಪಯುಕ್ತ ಕಾಲಗಳೂ ಸನ್ನಿವೇಶಗಳೂ ಬಪ್ಪ ಕೆಲಸಕ್ಕೆ' ಫಲದ ಭ್ರಾಂತಿಯನ್ನು ತೋರಿಸುತ್ತವೆಂದು ಸೋಮನಾಥ ಸುಡಿದಿದ್ದಾನೆ. ಹಾಗೆ ಏಕಪಕ್ಷದೃಷ್ಟಿಯುಳ್ಳವರ ಮುಂದೆ ಪಾರಮಾರ್ಥಿಕ ವಿಚಾರವು ಸಿಂತೀತೆ? ಎಂಬುದು ಕಂದೇಹಾಸ್ಪದ.

ಎರಡನೆ ಮಹಾಯುದ್ಧಾನಂತರ ಮೆಕ್ ಆರ್ಥರರು ಒಂದು ಲೇಖನವನ್ನು ಬರೆದು ಆದರಲ್ಲಿ "ಜಾಗತಿಕಶಾಂತಿಗೆ ಏಹಿಕ ಶಾಶ್ವತಸುಖಕ್ಕೆ ವಿಜ್ಞಾನವು ನೆರವಾಗದು, ವಿಜ್ಞಾನವನ್ನು ನಾವು ಮುಂದುವರಿಸುತ್ತಾ ಹೋಗಿ ಅಧ್ಯಾತ್ಮಿಕವನ್ನು ಜಗಲಿ ತುಂಬ ದೂರನ್ನೈದಿದ್ದೇವೆ." ಎಂದಿದ್ದಾರೆ. "ಆದುದರಿಂದ ನಾವು ಸದ್ಯಕ್ಕೆ ಮಲಗಿದ್ದೆ ಆಧ್ಯಾತ್ಮಿಕ ವಿಚಾರವನ್ನು ಮುನ್ನಡೆಸಬೇಕು. ಈ ವಿಚಾರದಲ್ಲಿ ದೀರ್ಘ ಪರ್ಯಾಲೋಚನೆ ಮಾಡಬೇಕು" ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ.

ಇಂದು ಯಾರೊಬ್ಬನೂ ನಿಮಿಷಕಾಲದ ಸುಖಕ್ಕೆ ಆಸೆಪಡುವುದಿಲ್ಲ. ಶಾಶ್ವತ ಶಾಂತಿಗಾಗಿ ಹಂಬಲಿಸುವ ಮನೋವೃತ್ತಿ ಪ್ರತಿಯೊಬ್ಬ ಮನುಜನಲ್ಲೂ ಪ್ರತಿಯೊಂದು ರಾಷ್ಟ್ರದಲ್ಲೂ ಬೆಳೆಯುತ್ತಿದೆ. ಆನೈಕ್ಯದಲ್ಲಿ ಐಕ್ಯವನ್ನು, ದ್ವೇಷದಲ್ಲಿ ಸೌಹಾರ್ದವನ್ನು ಮೂಡಿಸುವ, ಭಿನ್ನ ಭಿನ್ನಗಳನ್ನು ಒಂದುಗೂಡಿಸುವ ಭಾರತೀಯ ಸಂಸ್ಕೃತಿಯ ವಿಶಿಷ್ಟ ಲಕ್ಷಣಗಳು ಇಂದು ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ತನ್ನ ಪ್ರಭಾವವನ್ನು ಬೀರುತ್ತಿವೆ. ಲೋಕಾಸಮಸ್ತಾ ಸುಖಿನೋ ಭವಂತು" ಎಂಬ ಅನೋಖೆ ವಾಣಿ ಭಾರತೀಯ ಸಂಸ್ಕೃತಿಯ ಹೆಗ್ಗುರುತು. ಇದರಲ್ಲಿ ಸ್ವಾರ್ಥ, ದ್ವೇಷ, ಅಸೂಯೆ, ಸಂಕುಚಿತ ಮನೋವೈತ್ತಿಗಳಿಗೆ ಎಳ್ಳಷ್ಟೂ ಅವಕಾಶವಿಲ್ಲ. ಯಾರ ಗೋಜಿಗೂ ಹೋಗದೆ, ಯಾರನ್ನೂ ಹಾಳುಮಾಡದೆ, ಯಾರಿಗೂ ಉಪದ್ರವಕಾರಿಯಾಗಿರದೆ, ಸಕಲರ ಹಿತವನ್ನೇ ಸದಾಕಾಲವೂ ಚಿಂತಿಸುವ, ನಾರೈಸುವ, ಹಾರುವ ಭಾರತೀಯ ಸಂಸ್ಕೃತಿ—ಸಾವಿರಾರು ವರ್ಷಗಳಿಂದ ಜಗತ್ತಿನ ನಾನಾ ಸಂಸ್ಕೃತಿಗಳೊಂದಿಗೆ ಹೊಂದಿಕೊಂಡು, ಹಿತಸ್ಫೂರ್ತವಾಗಿ ಸುಗ್ಯಾವೆಯಿಂದ ಬಾಳಿದ ಸಂಸ್ಕೃತಿ—ವಿನಾಶಕ್ಕೆ ಸಾಕಷ್ಟು ಉಪಯುಕ್ತ ಕಾಲಗಳೂ ಸನ್ನಿವೇಶಗಳೂ ಒದಗಿದಾಗ ತಾನು ತನ್ನ ನೈಜಸ್ಥಿತಿಯನ್ನು ತ್ಯಜಿಸಿ ಗುಣಗ್ರಾಹಿಯಾಗಿ, ಗುಣದತ್ತವಾಗಿ ಬೆಟ್ಟದ ಬದಿಯ ಜರಿಮಂತೆ ಕಲಕಲರವದಿಂದ ತಲೆಯೆತ್ತಿ ನಿಂತು ಬೆಳೆದ ಸಂಸ್ಕೃತಿ—ಅದು ಇಂದು ನಿಂತೀತೆ? ಬಾಳೀತೆ? ಎಂಬ ಸಂದೇಹವೆಲ್ಲಿಂದ ಬರಬೇಕು? ಅದು ಉಳಿದೀತೆ? ಎಂದರೆ....

ಆದರ್ಶ ಧ್ಯೇಯದಿಂದ ಆದರ್ಶ ಚರಿತ್ರೆಯಿಂದ ಆದರ್ಶ ನೀತಿಯಿಂದ ಇಹಪರಗಳೆರಡಕ್ಕೂ ಉಪಾದೇಯವನ್ನು ಬೋಧಿಸುವ ಆತ್ಮೋದ್ಧಾರಕ್ಕೆ ನಾನಾಂದಿಯಿಡುವ ಜಗತ್ತಿನ ಪ್ರತಿಯೊಂದು ಜೀವನವನ್ನೂ ಮುಕ್ತಕಂಠದಿಂದ ತುಂಬು ಹೃದಯದಿಂದ ಹರಸುವ, ವಿಕೃತಿಯ ನಡುವೆ ಪ್ರಕೃತಿಯನ್ನು ಪ್ರತಿಬಿಂಬಿಸಿ ಮೆರೆಯುವ ಭಾರತೀಯ ಸಂಸ್ಕೃತಿಯೇ ಇಂದಿನ ಈ ಅಣುಯುಗದಲ್ಲಿ ಉಳಿಯುವುದು ಸಂದೇಹಾಸ್ಪದವಾದರೆ, ಜಗತ್ತಿನ ಇನ್ನಾವ ಸಂಸ್ಕೃತಿಯು ಉನ್ನತವಾದೀತು?

ಕಾಲಬಂದಂತೆ ಕೋಲಶಟ್ಟುವ, ಮಳೆ ಬಂದಂತೆ ಕೊಡೆ ಹಿಡಿಯುವ, ಗೊಬ್ಬರದ ಗುಂಡಿಯಿಂದೆದ್ದು ಆವರಿಸಿ ತೊಳಕಿನ ಉಡುಗೆಯನ್ನು ತೊಟ್ಟ ಅಣಬೆಗಳಂತೆ, ಕ್ಷಣಿಕ ಆನಂದವನ್ನು; ಸ್ವಾರ್ಥವನ್ನು ಅಸೂಯೆಯನ್ನು ಮೇಲಾಗಿ ಸಂಕುಚಿತ ಮನೋವೃತ್ತಿಯನ್ನು ಪ್ರದರ್ಶಿಸುವ, ಕಮ್ಯೂನಿಸಂ ಅಖಂಡ ಜಗತ್ತನ್ನೂ ನೀರಿನಲ್ಲಿ ಅದ್ದುವ ಇತರ ಸಂಸ್ಕೃತಿಯು ಬಾಳುವೆಯನ್ನು ಹೇಗೆ ತಾನೇ ಸೂಚಿಸಿತು?

ಕುರುಕ್ಷೇತ್ರದಲ್ಲಿ ಯುದ್ಧ ನಡೆದರೂ ಅದು ಧರ್ಮಕ್ಷೇತ್ರವೆಂದು ಹೆಸರುಪಡೆದಿದೆ ಏಕೆ? ಧರ್ಮಸ್ಥಾಪನೆಯನ್ನು ಮಾಡಿದುದರಿಂದ ಅದುದರಿಂದ ಭಾರತೀಯ ಸಂಸ್ಕೃತಿಯು ಅಚ್ಯುತನಂತೆ ಅಚ್ಯುತವಾದುದು.

ಅಸತೋಮಾ ಸದ್ಗಮಯ!

ತಮಸೋಮಾ ಜ್ಯೋತಿರ್ಗಮಯ!

ಮೃತ್ಯೋರ್ಮಾ ಅಮೃತಂಗಮಯ ಎಂಬುದಾಗಿ ನೀಚವಾದುದನ್ನು ಉಚ್ಚವನ್ನಾಗಿಯೂ, ಅಂಧಕಾರವನ್ನು ಪ್ರಕಾಶವಾಗಿಯೂ, ವಿಷವನ್ನು ಅಮೃತವನ್ನಾಗಿಯೂ ಮಾಡುವಂತೆ ಪ್ರಾರ್ಥಿಸುವ, ಮಾಡುವ ಭಾರತೀಯ ಸಂಸ್ಕೃತಿ 'ಓಂ

(೧೨ನೇ ಪುಟದಿರಿ)

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಪಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.	
24 ತಿಂಗಳಿಗೆ	4%
12 ,,	3½%
6 ,,	3¼%
3 ,,	3%
ಸೇವಿಂಗ್ಸ್ ಬೇಂಕ್ ಲೆಕ್ಕ	2%
ಕರೆಂಟ್ ಎಕೌಂಟು	½%

THE MOOLKY BANK. LTD. MULKI

ಮಂಗಳೂರು 2. ಮತದಾರ ಕ್ಷೇತ್ರದ ಎಸೆಂಬ್ಲಿ ಉಮೇದ್ವಾರಿ ಗಜಾನನ ರಾವ್ ಪಂಡಿತ್

ಮತದಾನ

(೧ನೇ ಪುಟದಿಂದ)

ಲಾರದು. ತಜ್ಞ ವೈದ್ಯರನ್ನು ತರಿಸುವ ವ್ಯಾಮೋಹ ಎಷ್ಟೇ ಇರಲಿ—ಅವರನ್ನು ತರಿಸುವುದು ಅಸಾಧ್ಯವೆಂದಾದ ಮೇಲೆ, ಹಳ್ಳಿಯ ವೈದ್ಯರನ್ನಾದರೂ ಆಶ್ರಯಿಸಲೇ ಬೇಕು. ಇಂಥ ಹಳ್ಳಿ ವೈದ್ಯರ ಯೋಗ್ಯತೆಯೂ ಪ್ರತಿಪಕ್ಷದವರಿಗೆ ಬಂದಿಲ್ಲವೆನ್ನುವಾಗ ಅವರ ಮಾತಿಗೆ ಕಿವಿಗೊಡುವುದು ವ್ಯರ್ಥ.

ನನಗೆ ನೈಸೂರು ಸರಕಾರಿಂದ ಹೆಚ್ಚಿನ ಕೆಲಸಗಳನ್ನು ಮಾಡಿಸಿಕೊಳ್ಳಬೇಕಾಗಿದೆ. ಇದಕ್ಕಾಗಿ ನಾನೇನು ಮಾಡಬೇಕು? ನೈಸೂರಿನಲ್ಲಿ ಕಾಂಗ್ರೆಸಿನ ಸರಕಾರವೇ ಅಧಿಕಾರಕ್ಕೆ ಬರುತ್ತದೆ ಎನ್ನುವುದನ್ನು ಹಿಂದೆಯೇ ಸೂಚಿಸಿದ್ದೇನೆ. ಏಕೆಂದರೆ ಪ್ರತಿಪಕ್ಷಗಳಲ್ಲಿ ಒಂದೇ ಒಂದು ಸಸ ಪ್ರಾಂತ ಯಶಸ್ಸನ್ನು ಹೊಂದಿದರೂ ಸರಕಾರವನ್ನು ರಚಿಸುವಷ್ಟು ಬಹುಮತವನ್ನು ಹೊಂದಿಲ್ಲ. ಆದುದರಿಂದ ಕಾಂಗ್ರೆಸು ಸರಕಾರದಿಂದ ಹೆಚ್ಚಿನ ಸೌಕರ್ಯಗಳನ್ನು ಪಡೆಮಕೊಳ್ಳಬೇಕಾದರೆ, ಅದು ನಮ್ಮ ಸಂಕಷ್ಟಗಳಿಗೆ ಕಿವಿಗೊಡುವಂತಾಗಬೇಕಾದರೆ, ಅದು ಪ್ರಸನ್ನಗೊಂಡು ನಮಗೆ ಬೇಕಾದ ಅನುಕೂಲತೆಗಳನ್ನು ನೀಡುವಂತಾಗಬೇಕಾದರೆ, ಕಾಂಗ್ರೆಸು ಉಮೇದ್ವಾರರೇ ಆರಿಸಿ ಬರುವಂತೆ ನಾವು ಮಾಡುವುದು ಅಗತ್ಯ. ವಿರೋಧಿ ಪಕ್ಷಕ್ಕೆ ಲಾಭವಾಗಲಿ ಎಂದು ಯಾರೂ ಬಯಸುವುದಿಲ್ಲ. ಹಾಗೆಯೇ ಟೀಕಾಕಾರನ ಪ್ರತಿಷ್ಠೆ ಹೆಚ್ಚಲಿ ಎಂಬುದಕ್ಕಾಗಿ ಸರಕಾರವು ಕೆಲಸವನ್ನು ಮಾಡುವುದಿಲ್ಲ. ಇದನ್ನು ಮತದಾರರು ತಿಳಿದುಕೊಂಡಷ್ಟಿ ಷ್ಟೇ ಸಾಕು.

ಹಿಂದಿನ ಪುರಾಣಗಳಲ್ಲಿ ನಾವು ಹರಿ ಹರ ಬ್ರಹ್ಮಾದಿ ದೇವತೆಗಳನ್ನು ಮೆಚ್ಚಿಸುವ ಸಲುವಾಗಿ ತಪಸ್ಸನ್ನು ಮಾಡಿ ವರಗಳನ್ನು ಪಡೆದ ಕತೆಗಳ ಉಲ್ಲೇಖವಿದೆ; ಹಾಗೆಯೇ ಅನುಜಿತ ಟೀಕಾಕಾರರು ತಾ ಪಕ್ಕೊಳ್ಳಗಾದ ನಿದರ್ಶನಗಳೂ ಆದರಲ್ಲಿವೆ. ಸ್ತೋತ್ರಗೈಯುವ ಉಪಾಯವೊಂದರಿಂದಲೇ ಪ್ರಸನ್ನತೆಯನ್ನು ಸಂಪಾದಿಸಲು ಸಾಧ್ಯವೆಂದು ನಮ್ಮ ಸಂಸ್ಕೃತಿ ಬೋಧಿಸುತ್ತದೆ. "ನೀನು ಅಂಥವನು.... ನೀನು ಇಂಥವನು... ನೀನೇ ರಕ್ಷಕನು ... ನೀನೇ ಸರ್ವಾರ್ಥನು....ಎಂದು ಮುಂತಾಗಿ ನಿರಂತರ ಸ್ತುತಿಗೈದಾಗಲೇ ಎಲ್ಲ ದೇವತೆಗಳೂ ತುಷ್ಟರಾಗಿ, ಹರಿಸಿ ಅಭೀಷ್ಟಗಳನ್ನು ಕೈಗೂಡಿಸಿ ಕೊಟ್ಟುದನ್ನು ನಾವು ಓದಿದ್ದೇವೆ. ಪ್ರಷ್ಟ ಪ್ರಾಬಲ್ಯವಿರುವ ಸರಕಾರದಿಂದ ಕೆಲಸವನ್ನಾಡಿಸಿಕೊಳ್ಳುವುದಕ್ಕಾದರೂ ಇದೇ ವಿಧಾನವನ್ನು ಅನುಸರಿಸಬೇಕಾಗುತ್ತದೆ. ಜನರು ತಮಗೆ ಬೇಂಬಲಿಗರೆಂದು ತಿಳಿದರೆ, ಮತ್ತದು ಖಚಿತವಾದರೆ ಮಾತ್ರ ಸರಕಾರವು ಆ ಜನರ ಹಾಲಹವಾಲೆಗಳನ್ನು ವಿಶೇಷ ಮುತುವರ್ಜಿಯಿಂದ ಕೇಳಿಕೊಂಡು, ಅವುಗಳ ನಿವಾರಣೆಗೆ ಶೀಘ್ರ ಪ್ರಯತ್ನಗಳನ್ನು ಮಾಡುತ್ತದೆ. ಅದು ಹೊರತು, ಬೈಯುವವರು ಹೆಚ್ಚಾಗಿದ್ದಾರೆಂದು ಹೆದರಿ ಆದೇನೂ ಅನುಕೂಲತೆಗಳನ್ನು ಒದಗಿಸಿಕೊಡಲಾರದು.

ಮಾನ್ಯ ಮತದಾರರು ಈ ಸಂಗತಿಯನ್ನು ತಿಳಿದುಕೊಂಡು ತಮ್ಮ ಮತದಾನವನ್ನು ಮಾಡಬೇಕು. ಜಿಲ್ಲೆಯ ಜನರ ಆಕಾಂಕ್ಷೆಗಳು ಸರಕಾರದಿಂದ ಹೆಚ್ಚಿನ ಕೆಲಸವನ್ನು ಮಾಡಿಸಿಕೊಳ್ಳುವ ಕೆಚೆಗೆನೇ ಮಾಲಿರಬೇಕಲ್ಲದೆ ವೈಕ್ತಿಸ್ಪರ್ಧೆಯನ್ನು ಸಾರ್ಥಕಗೊಳಿಸುವ ಕ್ಷುಲ್ಲಕ ಧ್ಯೇಯಕ್ಕೆವು ಬಲಿಯಾಗಕೂಡದು. ಆದುದರಿಂದ ದಕ್ಷಿಣ ಕನ್ನಡದ ಮತದಾರರು ಮಾಡಬೇಕಾದ ಕೆಲಸವೆಂದರೆ ಒಂದೇ—ಒಂದೇ ಮನಸ್ಸಿನಿಂದ ಕಾಂಗ್ರೆಸಿಗೆನೇ ನುತವನ್ನಿತ್ತು ಆ ಪಕ್ಷದ ಉಮೇದ್ವಾರರೇ ಗೆದ್ದು ಬರುವಂತೆ ಮಾಡುವುದೇ ಆ ಕರ್ತವ್ಯ. ಕಾಂಗ್ರೆಸಿನ ಜಯಾವಹಿಯು ಗುರುತು ಜೊತೆಯಾಗಿ ನೊಗಕ್ಕೆ ಕಟ್ಟಿ ನಿಲ್ಲಿಸಿದ ಎತ್ತುಗಳನ್ನ! ತಮಗಿದ ಯಾವಾಗಲೂ ನೆನಪಿರಲಿ! ತಮ್ಮೆಲ್ಲರ ಮತದಾನಾಧಿಕಾರದ ಸದುಪಯೋಗವಾಗಿ ಜಿಲ್ಲೆಯ ಭವಿಷ್ಯ ಬೆಳಗಲಿ! ಇದೇ ನಮ್ಮ ಸದಾಶಯ.

ಐದು ವರ್ಷಗಳ ಬಳಿಕ ಪುನಃ ಮಹಾಜನಾದೇಶವು ಬಂದಿದೆ. ಮತದಾರರು ತಮ್ಮ ಅಮೂಲ್ಯವಾದ ಮತವನ್ನು ತಮ್ಮ ದೃಷ್ಟಿಯ ಯೋಗ್ಯರೆಂದು ಕಂಡುಬಂದ ಉಮೇದ್ವಾರರಿಗೆ ನೀಡುವ ಸುಸಮಯವಿದು.

ಆಯಾ ಉಮೇದ್ವಾರರ ಜುನಾವಣೆಯ ಚಿಹ್ನೆಯನ್ನು ಮತ ಪೆಟ್ಟಿಗೆಯಲ್ಲಿ ಕಾಣಬಹುದು. ಈ ಮತಪೆಟ್ಟಿಗೆಗಳು ಒಡೆಯಲ್ಪಡಬಹುದೆಂದೂ ಅವುಗಳೊಳಗೆ ಹಾಕಲಾದ ಮತ ಪತ್ರಗಳನ್ನು ಬದಲಾಯಿಸಲು ಸಾಧ್ಯವೆಂದೂ ಜನರಲ್ಲಿ ಕೆಲವು ಕುಶಂಕೆಗಳು ಸಂಶಯದ ಬೀಜವನ್ನು ಬಿತ್ತಿದ್ದಾರೆ. ಅದರೆ ಜುನಾವಣೆಯ ಅಧಿಕಾರಿಗಳು ಅನೇಕ ಸಲ ಇದು ಸುಳ್ಳೆಂಬುವನ್ನು ಸಿದ್ಧಪಡಿಸಿದ್ದಾರೆ. ಕ್ರಮಪ್ರಕಾರ ಮತ ಪೆಟ್ಟಿಯನ್ನು ಸೀಲು ಮಾಡಿದ್ದಾದರೆ, ಅವನ್ನು ಕುಟಿಲೋಪಾಯಗಳಿಂದ ಒಡೆಯುವುದಾಗಲೀ ಅವುಗಳೊಳಗಿನ ಪತ್ರಗಳನ್ನು ವರ್ಗಾಯಿಸುವುದಾಗಲೀ ಸಾಧ್ಯವಿಲ್ಲ.

ಚಿತ್ರದಲ್ಲಿ ಮತದಾನಕಟ್ಟೆಯ ಎರಡು ದೃಶ್ಯಗಳನ್ನು ಕಾಣಬಹುದು.

(೧ನೇ ಪುಟದಿಂದ)

ಶಾಂತಿಃ ಶಾಂತಿಃ ಶಾಂತಿಃ' ಎಂದು ಉಚ್ಚರಿಸಿದರೆ, ಅದು ಅದರ ಫಲನೆತೆಗೆ, ಹಿರಿಮೆಗೆ ಕುಂಯಾದುದು.

ಆದುದರಿಂದಲೇ ಜಗತ್ತು ತನ್ನ ಧ್ಯಾತವನ್ನು ಕಳೆದು ಜ್ಞಾನಜ್ಯೋತಿಯಿಂದ ಪ್ರಕಾಶಿಸಲ್ಪಟ್ಟು ಬಾಳಿ ಬೆಳಗಬೇಕಾದರೆ ಅದು.

"ಅನ್ಯಥಾ ಶರಣಾನಾಸ್ತಿ!
ತ್ವಮೇವ ಶರಣಾಮಮ!!"

ಎಂಬುದಾಗಿ ಭಾರತೀಯ ಸಂಸ್ಕೃತಿ ತಲೆವಾಗಬೇಕು.

ಇದರಿಂದಾಗಿ ಭಾರತೀಯ ಸಂಸ್ಕೃತಿಯು ವಿಶ್ವದಲ್ಲಿಯೇ ಅಣುಅಗದಲ್ಲಿ ಮಾರ್ಗದರ್ಶನವಾಗಿ ಅಣುವಿನಿಂದ ಸರ್ವಸೃಷ್ಟಿಗಳನ್ನು ಮಾಡಿಸಿ ವಿಶ್ವದ ಸರ್ವತೋಮುಖ ಅಭಿವೃದ್ಧಿಗೆ, ವಿಶ್ವವಿಶ್ವೇಶ್ವರ ಶಕ್ತಿಯನ್ನು ಕಾರಣವಾಗಬಹುದು.

ಹಾರಲಿಸ್ಮೆ ನೆತ್ತರು ಚೀರಿ!
ಹೋದರೆ ಹೋಗಲಿ ತಲೆಹಾರಿ
ಸಂಸ್ಕೃತಿಯನ್ನುಳಿಸಲು ನಾವ್ ಹೋರಿ!
ಬಾಳುವ ವಿಶ್ವನೆ ನೆಪದಿ ನೇರಿ

"ನಾನ್ಯಸಂಥಾ ವಿದ್ಯತೇ ಅಯನಾಯ" ಎಂಬಂತೆ ಭಾರತೀಯ ಸಂಸ್ಕೃತಿಯೊಂದೇ ಜಗತ್ತಿನಲ್ಲಿ ಬಾಳಿಬಲ್ಲುದು, ಬೆಳಗಬಲ್ಲುದು, ಬದುಕಬಲ್ಲುದು, ಉಳಿಯಬಲ್ಲುದು, ಉಳಿಸಬಲ್ಲುದು.

—ಶ್ರೀ ಗೋಪೀಚಂದ, ಉಡುಪಿ



ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:— ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No 466 N/50 date 12-12-1950 of the Director of public Instruction Madras.

ಪಾಣೆ ಮಂಗಳೂರು ಮತದಾರ ಕ್ಷೇತ್ರದ ಎಸೆಂಬ್ಲಿ ಉಮೇದ್ವಾರಿ ಡಾ| ನಾಗಪ್ಪ ಆಳ್ವ

Edited, Printed & Published by K. H. Shetty, at the Navayuga press, Udipi S. India

REGD. NO. M. 3618

Licensed to Post without Prepayment.

ಸಮಯ

ಸಂಪುಟ ೩೬ VOL. 36

28—2—1957

ಸಂಚಿಕೆ ೨೫ NO.25

ನೆನಪಿರಲಿ!

ಕಾಂಗ್ರೆಸ್ಸೊಂದೇ ಶಿಸ್ತು, ಸಂಘಟನೆ ಹಾಗು ಸರಕಾರವನ್ನು ರಚಿಸುವ ಶಕ್ತಿಯುಳ್ಳ ಪಕ್ಷ

ನಿಮ್ಮ ಮತವನ್ನು ಕಾಂಗ್ರೆಸಿಗೆ ಕೊಡಿರಿ!!!

ಮತದಾರರು ಮತದಾನದಿಂದ ಉತ್ತಮವಾದ ಸಮರ್ಥ ಸರಕಾರವನ್ನು ಆರಿಸುವುದಿರುತ್ತದೆ. ಆದುದರಿಂದ ಮತಾಧಿಕಾರದ ಮಹತ್ತ್ವವನ್ನು ಮನವರಿಕೆ ಮಾಡಿಕೊಂಡ ಬಳಿಕ, ತಾವು ಯಾವ ಪಕ್ಷದ ಹುರಿಯಾಳನ್ನು ಆರಿಸಿದರೆ ಸಮರ್ಥವಾದ ಸೇವಾದಕ್ಷತೆಯುಳ್ಳ ಸರಕಾರವನ್ನು ರಚಿಸಲು ಸಾಧ್ಯವಾದೀತೆಂಬುದನ್ನು ನೋಡಿಕೊಳ್ಳಬೇಕು. ಮತದಾನವು ಹುಡುಗಾಟಿಕೆಯ ವಿಷಯವಲ್ಲ. ಅದು ಉತ್ತಮ ರಾಜ್ಯರಚನೆಯ ಒಂದು ಅಗತ್ಯದ ಸಾಧನ ವಿಕಾಲವಶರಾಗಿ ಜಾತಿ-ಮತಗಳ ಜಗ್ಗಾಟಕ್ಕೆ ಬಲಿಬಿದ್ದು, ಮತದಾರರು ತಮ್ಮ ವಿವೇಕವನ್ನು ಕಳೆದುಕೊಳ್ಳಲಾಗದು ಚುನಾವಣೆಗಳಲ್ಲಿ ವ್ಯಕ್ತಿಗಿಂತ, ಒಬ್ಬ ಹುರಿಯಾಳಿಗಿಂತ, ಆತನು ಪ್ರತಿನಿಧಿಸುವ ಪಕ್ಷವು ಮುಖ್ಯ ಎಂಬುದನ್ನು ಎಂದಿಗೂ ಮರೆಯಬಾರದು.

ಒಂದು ಚಿಕ್ಕ ಉದಾ ಹರಣೆಯಿಂದ ನಾವು ಈ ಮುಖ್ಯ ವಾತನ್ನು ತಿಳಿದುಕೊಳ್ಳಬಹುದು ಹುರಿಯಾಳುಗಳ ಆಯ್ಕೆಯಾದ ಮೇಲೆ ರಾಜ್ಯ ಸರಕಾರದ ಮಂತ್ರಿ ಸಂಪುಟವನ್ನು (Cabinet) ಆರಿಸಬೇಕಾಗುತ್ತದೆ ಆದಕ್ಕಾಗಿ ಶಾಸನ ಸಭೆಯ ನಾಯಕನನ್ನು ಮುಂಚೆ ಆರಿಸಬೇಕಾಗುವದು. ಹೊಸ ಮೈಸೂರು ರಾಜ್ಯದ ಶಾಸನ ಸಭೆಯ ೨೦೮ ಸ್ಥಾನಗಳಿಗೆ ಪ್ರ. ಸ. ವಾ. ಪಕ್ಷವು ಕೇವಲ ೮೦ ಹುರಿಯಾಳುಗಳನ್ನು ನಿಲ್ಲಿಸಿರುತ್ತವೆ ಕಮ್ಯೂನಿಸ್ಟ್, ಜನಸಂಘ, ಸಮಾಜವಾದಿ, ಲೋಕ ಸೇವಾಸಂಘ ಮುಂತಾದ ಇತರ ಪಕ್ಷಗಳು ೭೩ಕ್ಕಿಂತ ಹೆಚ್ಚು ಹುರಿಯಾಳುಗಳನ್ನು ನಿಲ್ಲಿಸಿಲ್ಲ ಸ್ವತಂತ್ರ ಹುರಿಯಾಳುಗಳು ೨೦೨ ಇದ್ದರೂ ಅವರದೊಂದು. ಪಕ್ಷವಿಲ್ಲ ಅವರಲ್ಲಿ ಐಕ್ಯವಿಲ್ಲ, ಎಲ್ಲರಿಗೂ ಒಪ್ಪಿಗೆಯಾದ ಒಂದು ಕಾರ್ಯಕ್ರಮವಿಲ್ಲ-ಧೋರಣೆಯಿಲ್ಲ. ಮಾಲಿಲ್ಲ ಬಟ್ಟೆಯಿಲ್ಲ ಗುಟುಕು ಎಂದರಂತೆ" ಎಂಬಂತಿದೆ-ಅವರ ಅವಸ್ಥೆ. ಅವರಲ್ಲಿ ಒಬ್ಬಿಬ್ಬರೂ ಯಾವ ನಿಯಮ ನಿರ್ಬಂಧಗಳಿಗೂ ಒಳಗಾಗದವರಿದ್ದಾರೆ. ಮತದಾರರಿಗೆ ಅವರ ಹುರಿಯಾಳ್ತನದ ಅರ್ಥವೇ ಆಗುವದಿಲ್ಲ. ಹೀಗಾಗಿ ಎಷ್ಟೋ ಸ್ವತಂತ್ರರು ಚುನಾವಣೆಗೆ ನಿಲ್ಲಬೇಕಾಗುವುದನ್ನು ಮತದಾರರು ಗಮನಿಸಿರಿ. ಚುನಾವಣೆಗಳಿಂದಲೆ ತಿಳಿದುಕೊಂಡಿದ್ದಾರೆ ಒಂದು ವೇಳೆ ಒಟ್ಟು ೮೦—೧೦ ಜನರು ಆರಿಸಿಬಂದರೂ ಅವರಲ್ಲಿ ಒಬ್ಬನ ಮುಖ ಸೌರ್ವಕ್ಕೆ ಇನ್ನೊಬ್ಬನದು ಶಿಷ್ಟಿಮಕ್ಕೆ ಆಗುವುದು ಸಹಜ ಇಷ್ಟೂ ಮೀರಿ ಅವರು ಒಮ್ಮತದ ಧೋರಣೆ ಕಾರ್ಯಕ್ರಮಗಳನ್ನು ಇಟ್ಟುಕೊಂಡು ಅಗಿನ ಮಟ್ಟಿಗೆ ಒಂದು ಗುಂಪಾದರೂ, ಅದಕ್ಕೆ ದೃಢತೆ ಕಾರ್ಯಕ್ಷಮತೆಗಳು ಬರಲಾರವು ಎಷ್ಟೋ ವರ್ಷಗಳ ವರೆಗೆ ಒಂದೇ ಸಂಘಟನೆಯ ಆಶ್ರಯದಲ್ಲಿ ಇದ್ದವರು ಸಹ ಹತ್ತು ಕಡೆಗೆ ಮುಖಮಾಡಿನಿಲ್ಲುವುದನ್ನು ನಾವು ನೋಡಿದಾಗ, ಸ್ವತಂತ್ರರೆಂಬ ಈ ಚುನಾವಣಾ ಪ್ರವಾಸಿಕರು ಒಡೆಯಲಾರದ ಒಕ್ಕಟ್ಟನಲ್ಲಿರುವುದು ಅಸಾಧ್ಯ. ಇವರು ಒಬ್ಬೊಬ್ಬರೂ ಬಿಡಿಕಾಳಾಗಿ ಉಳಿಯಬಲ್ಲರಲ್ಲದೆ ಇಡಿಯ ಪಕ್ಷಕ್ಕೆ ಹೊಂದಿಕೊಂಡಿರಲಾರರು. ಇಂತಹ ಸ್ವಚ್ಛಂದ ವೃತ್ತಿಯು ಸದಸ್ಯರಿಂದ ಆರಿಸಿಕೊಟ್ಟ ಮಂತ್ರಿಮಂಡಲಕ್ಕೂ ಪ್ರಯೋಜನವಾಗದು. ಅಂದ ಬಳಿಕ ಇಂತಹ ಬಿಡಿಬಿಡಿದುರೆಗಳ ಬೆನ್ನುಹತ್ತಿದರೆ ಮತದಾರರು ಕೊನೆಗೆ ನಿರಾಶರಾಗುವ ಅನಿಷ್ಟ ಪ್ರಸಂಗವು ಬರುವುದು. ಇದೇ ಮಾತು ಸಾಕಷ್ಟು ಸಂಖ್ಯಾಬಲವಿಲ್ಲದ ಇತರ ಪಕ್ಷಗಳ ವಿಷಯಕ್ಕೂ ಅನ್ವಯಿಸುತ್ತದೆ ಅದಲ್ಲದೆ ಕಮ್ಯೂನಿಸ್ಟರು ಸರ್ವಾಧಿಕಾರ ಸ್ವರೂಪ (Authoritarianism) ಉಳ್ಳವರೆಂಬುದು ಹಲವು ವಿದೇಶಗಳ ರಾಜಕಾರಣದ ಚರಿತ್ರೆಯೇ ಸಾರುತ್ತದೆ. ಇವರು ಹಿಂಸಾ ಮಾರ್ಗಪ್ರಿಯರು ಧ್ಯೇಯ ಸಾಧನೆಗಾಗಿ ಇವರಿಗೆ ಸಾಧನಮಾರ್ಗವು, ಶುದ್ಧವಾಗಿ ಸತ್ಯ ಅಹಿಂಸೆಗಳಿಗೆ ಸಮ್ಮತವಾಗಿ ಇರಬೇಕೆಂಬ ಕಟ್ಟು ಸಿಟ್ಟಲ್ಲ. ಎಂತಹ ಸಾಧನವನ್ನು ಬಳಸುವುದಕ್ಕೂ ಇವರು ಅಸಿಮಿಸಿ ಮಾಡುವುದಿಲ್ಲ. ಒಂದು ಶತಮಾನದ ಹಿಂದಿನ ಯುರೋಪದ ಪರಿಸ್ಥಿತಿಗೆ ಸರಿಹೋದ ಸಾಮ್ಯವಾದದ (ಕಮ್ಯೂನಿಜಂ) ರೀತಿನೀತಿಗಳನ್ನೇ ಇಂದಿನ ಪಲ್ಲಟವಾದ ಜಾಗತಿಕ ಪರಿಸ್ಥಿತಿಗೂ ಹಚ್ಚುವ ಹುಚ್ಚು ಕಮ್ಯೂನಿಸ್ಟರಿಗೆ ಬಿಟ್ಟಲ್ಲ ಮೇಲಾಗಿ, ಇವರ ಹಿತೋಪದೇಶವೆಲ್ಲ ಹೊರನಾಡುಗಳಿಂದ ಹರಿದು ಬರುತ್ತಿದೆಯೆನ್ನುವುದು ಎಲ್ಲರಿಗೂ ಗೊತ್ತು ನಮ್ಮ ಕಮ್ಯೂನಿಸ್ಟರ ತಲೆ ಬುರುಡೆಗಳೆಲ್ಲ ವಿದೇಶೀಯ ಕಮ್ಯೂನಿಜಮ್ಮು ಹೆಣೆಯುವ ಜೇಡರಬಲೆಗಳು. ಸೂತ್ರಧಾರಿಗಳು ಹೊರಗಿನವರು. ಇವರು ಕೇವಲ ಗೊಂಬೆ ಜನರ ತಾಳಕ್ಕೆ ತಕ್ಕಂತೆ ಇವರ ಕುಣಿತಮಾಡಿತಗಳು. ಒಟ್ಟಿದೆ ವರ್ಗಭೇದ ವೈಷಮ್ಯಗಳನ್ನು ಹುಟ್ಟಿಸಿ ಕಲಹ ಕೋಲಾಹಲಗಳನ್ನೆಬ್ಬಿಸುವುದೇ ಇವರ ತುರುಸಿನ ತಂತ್ರ. ಕಮ್ಯೂನಿಜಮ್ಮು ದೇವರು ದಿಂಡರನ್ನು ಗುರುತಿಸುವುದಿಲ್ಲ. ಇವರು ನಾಸ್ತಿಕವಾದಿಗಳು. ದೇಶದ ಪ್ರಗತಿಯು ಶಾಂತಿಯ ವಾತಾವರಣದಲ್ಲಿ ನಡೆಯಬಲ್ಲುದು. ಆದರೆ ಕಮ್ಯೂನಿಸ್ಟರು ಹುಟ್ಟುವ ಪ್ರಕ್ಷುಬ್ಧ ಪರಿಸ್ಥಿತಿಯು ಬಾಳಿಗೆ ಭದ್ರತೆಯನ್ನು ಕೊಡಲಾರದು. ಇತ್ತೀಚಿನ ಕಮ್ಯೂನಿಸ್ಟರ ಚುನಾವಣೆಯ ಸಖ್ಯ ಸಂಬಂಧಗಳನ್ನು ವಿಷ್ಟು ಇತರ ವ್ಯವಹಾರಗಳನ್ನು ನೋಡಿದರೆ, ಆ ಪಕ್ಷದ ಮುಂಪಾಳುಗಳ ತಲೆಯಲ್ಲಿಯೇ ಗೊಂದಲವೆದ್ದಂತೆ ಕಾಣುವುದು.

ನಾವು "ಸ್ವತಂತ್ರ" ಹುರಿಯಾಳುಗಳು ದೇಶಕ್ಕೊಂದು ಧೋರಣವನ್ನು ಕೊಡುವು ಒಂದು ನಿರ್ದಿಷ್ಟ ಕಾರ್ಯಕ್ರಮದ ಯೋಜನೆಯನ್ನು ಹೆಮ್ಮುವ ಸಂಘಟಿತ ಪಕ್ಷವನ್ನು ಕಟ್ಟಲಾರೆಂಬುದೆಷ್ಟು ಸತ್ಯವೋ ಕಮ್ಯೂನಿಸ್ಟರು ಅಷ್ಟೇ ಅಪಾಯಕಾರಿಯೆಂದು ಹೇಳಿದರಿಲಾಗದು ಹಿಂಸಾಚಾರ ಪ್ರಚುರವಾದ, ದೇವರ ಅಸ್ತಿತ್ವವನ್ನು ಅಲ್ಲಗಳೆಯುವ, ವರ್ಗ ವೈಷಮ್ಯವನ್ನು ಹುಟ್ಟಿಸುವ ಮತ್ತು ಸರ್ವಾಧಿಕಾರ ಪ್ರಿಯವಾದ ಕಮ್ಯೂನಿಸ್ಟ್ ಪಕ್ಷವು ಪ್ರಜೆಗಳ ಪ್ರೀತಿಗೆ ಕಾರಣನಾಗುವದೆಂತು? ಕಮ್ಯೂನಿಸ್ಟ ಆಡಳಿತದ ರಾಷ್ಟ್ರಗಳಲ್ಲಿ ವ್ಯಕ್ತಿ ಸ್ವಾತಂತ್ರ್ಯಕ್ಕೆ, ವ್ಯಕ್ತಿ ವಿಕಾಸಕ್ಕೆ ಎಡೆಯೇ ಇಲ್ಲ ಕಮ್ಯೂನಿಜಂ (ಸಾಮ್ಯವಾದ)ದ ಪ್ರಜಾರವೇ ಇವರ ಧ್ಯೇಯ. ಈ ಹುಚ್ಚಿಗಾಗಿ ಇವರು ದೇಶಹಿತವನ್ನೆ ಸಹ ಕೆಲವು ಸಂದರ್ಭಗಳಲ್ಲಿ ಬಲಿಕೊಡುವರೆಂಬುದು ಎಲ್ಲರಿಗೂ ತಿಳಿದ ವಿಷಯ. ಕಾಂಗ್ರೆಸ್ಸಿನ ದ್ವೇಷವೇ ಇವರಿಗೊಂದು ವೇದ. ಬೇನಿನ ಮಂತ್ರಕ್ಕೆ ಮಾವಿನ ಫಲ ಅಗಲಾರದು. ಇವರ ಹಿಂಸಾಚಾರದ ಸಾಧನೆಗೆ 'ಅಮೃತ' ಸಿದ್ಧಿಯಾದೀತೇ? ಪ್ರಜಾಪ್ರಭುತ್ವ ಪದ್ಧತಿಯು ಕೊಲೆಗಾರರು ಇವರು ಎಂದು ಶ್ರೀ ಗೋವಿಂದ ವಲ್ಲಭ ಪಂತರು ಸಾರಿದುದು ಸರಿಯಾಗಿದೆ.

ಇನ್ನು ಪ್ರಜಾ ಸಮಾಜವಾದೀ ಪಕ್ಷದ ವರ ಸಮಾಚಾರ. ಇದು ದೇಶದಲ್ಲಿ ಕಾಂಗ್ರೆಸ್ಸಿನ ತರುವಾಯ, ದೊಡ್ಡ ಪಕ್ಷವೆಂದು ಹೇಳಬಹುದು ಆದರೆ ಇವರ ಕಾರ್ಯಕ್ರಮವು ಕಾಂಗ್ರೆಸ್ಸಿನ ಕಾರ್ಯಕ್ರಮವನ್ನು ಒಟ್ಟು ತೀರ ಭಿನ್ನವಾದುದೆಂದು ಹೇಳಲಿಕ್ಕೆ ಬಾರದು. ಆದರೆ ಪ್ರ. ಸ. ವಾ. ಪಕ್ಷದ ಸಂಘಟನೆಯು ತೀರ ನಿರ್ಬಲವಾಗಿದೆ. ಇದರ ನಾಯಕರಲ್ಲಿ ಏಕಾಭಿಪ್ರಾಯವಿಲ್ಲ. ಆದುದರಿಂದ ತಕ್ಕ ಮುಂದಾಳುಗಳಿಲ್ಲದೆ ಮನಬಂದತ್ತ ಹೊಯ್ದಾಡುವ ಇದರ ಕಾರ್ಯಕರ್ತರಿಗೆ ಯಾವ ವರ್ಜಸ್ಸೂವೂ ಉಳಿದಿಲ್ಲ ಅಲ್ಲದೆ ಈ ಪಕ್ಷದವರು ಕೇರಳ ನುಂತಾದ ಪ್ರದೇಶಗಳ

(೧೨ನೇ ಪುಟ ನೋಡಿರಿ)

SEASON DEPOSITS

Are now accepted at the Head Office and branches of the Bank of a sum of Rs. 1000 and in multiples thereof, for periods varying between 2 to 6 months at 4% interest per annum. No such deposit will run beyond 31-7-1957

Special rate will be allowed for Single Deposits of Rupees 25,000/- and above

THE VIJAYA BANK LTD.

H O. MANGALORE.

Total Resources of the Bank as on 31-12-1956. | EXCEED RUPEES ONE CRORE

ಸಮಯವಾಡಿ ಕಾಂಗ್ರೆಸ್ಸಿಗೇ ಕೊಡಿರಿ

ಹೊಸ ನಾಣ್ಯದ ಬಳಕೆ

ಬದಲಾವಣೆಗಾಗಿ ಮಾಡಿರುವ ಏರ್ಪಾಡುಗಳು

ಏಪ್ರಿಲ್ ೧, ೧೯೫೭ರಿಂದ ಎಲ್ಲ ಸರಕಾರಿ ಲೆಕ್ಕಪತ್ರಗಳನ್ನು ರೂಪಾಯಿ, ಆಣೆ, ಪೈಗಳಿಗೆ ಬದಲಾಗಿ ರೂಪಾಯಿ ಮತ್ತು ನಯೆ ಪೈಸೆಗಳಲ್ಲಿ ಇಡಬೇಕೆಂದು ಭಾರತ ಸಂಕಾರವು ನಿರ್ಧರಿಸಿರುವದಾಗಿ ಭಾರತದ ಕಾಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಅವರು ಒಂದು ಪರಿಪತ್ರದ ಮೂಲಕ ಸಿರ್ದೇಶಿಸಿದ್ದಾರೆ. ಆದರನ್ವಯ ಏಪ್ರಿಲ್ ೧, ೧೯೫೭ರಿಂದ ದಶಾಂಶ ನಾಣ್ಯ ಪದ್ಧತಿಗೆ ಬದಲಾವಣೆ ಮಾಡಲು ಏರ್ಪಾಡುಗಳನ್ನು ಮಾಡಲಾಗುತ್ತಿದೆ. ಅಂದಿನಿಂದ ಹೊಸ ನಾಣ್ಯಗಳು ಚಲಾವಣೆಗೆ ಬರುವವು.

ಸರಕಾರಕ್ಕೆ ಹಣ ಸಲ್ಲಿಸಿದುದನ್ನು ತೋರಿಸುವ ಚಲನುಗಳನ್ನೂ, ಸರಕಾರದಿಂದ ಹಣ ಪಡೆಯಲು ಒಪ್ಪಿಸುವ ಬಿಲ್ಲುಗಳನ್ನೂ ಆ ದಿನದಿಂದ ರೂಪಾಯಿ ಮತ್ತು ನಯೆ ಪೈಸೆಗಳ ಹೊಸ ನಾಣ್ಯ ಪದ್ಧತಿಯಲ್ಲಿ ಬರೆಯಬೇಕಾಗುವದು.

ಸರಕಾರಿ ಇಲಾಖೆಗಳಲ್ಲಿ ಬಳಸುವ ಬಿಲ್ಲುಗಳು, ಚಲನುಗಳು ಮತ್ತು ಇತರ ಲೆಕ್ಕದ ಪುಸ್ತಕಗಳ ನಮೂನೆಗಳನ್ನು ಬದಲಾಯಿಸಿ ಅವುಗಳಲ್ಲಿ ರೂಪಾಯಿ ಮತ್ತು ನಯೆ ಪೈಸೆಗಳನ್ನು ಸೂಚಿಸುವ ಎರಡೇ ಕಾಲಮುಗಳನ್ನು ಇಡುವಂತೆ ವ್ಯವಸ್ಥೆ ಮಾಡಲಾಗುತ್ತಿದೆ. ಆದರೂ ಹೊಸ ನಮೂನೆಗಳು ಮತ್ತು ಬಿಲ್ಲುಗಳು ಮುಂತಾದವು ಅಚ್ಚಾಗಿ ಬರುವ ವರೆಗೆ ಈಗಿದ್ದ ನಮೂನೆಗಳನ್ನೆ ಸೂಕ್ತ ಬದಲಾವಣೆಗಳೊಂದಿಗೆ ಉಪಯೋಗಿಸಲಾಗುವದು.

ಹೊಸ ನಾಣ್ಯ ಪದ್ಧತಿಯಲ್ಲಿ ನೋಟ್ಟಗಳನ್ನು ವಿವರಿಸುವ ನಿರ್ದಿಷ್ಟ ರೀತಿಯನ್ನು ಪರಿಪತ್ರದಲ್ಲಿ ಸೂಚಿಸಲಾಗಿದೆ. ಉದಾಹರಣೆಗಾಗಿ, ೩೫ ರೂಪಾಯಿ ಮತ್ತು ೫ ನಯೆ ಪೈಸೆಗಳನ್ನು ೩೫.೦೫ ರೂಪಾಯಿಯೆಂದು ಬರೆಯಬೇಕು. (೩೫.೫ ರೂಪಾಯಿ ಅಲ್ಲ; ೩೫ ರೂಪಾಯಿ ಮತ್ತು ೫೦ನಯೆಪೈಸೆಗಳನ್ನು ೩೫.೫೦ ರೂ. ಎಂದು (೩೫.೫೦ ರೂ. ಅಲ್ಲ) ಬರೆಯುವೇಕು ಮತ್ತು ೨೫೫ರೂ.ಹಾಗೂ ೭೫ ನಯೆ ಪೈಸೆಗಳನ್ನು ೨೫೫.೭೫ ರೂ. ಎಂದು ಬರೆಯಬೇಕು.

೩೫ ರೂಪಾಯಿ ಮತ್ತು ೫ ನಯೆ ಪೈಸೆಗಳನ್ನು ನಿರ್ದಿಷ್ಟ ನಮೂನೆಗಳ ಕಾಮುಗಳಲ್ಲಿ ತುಂಬುವಾಗ ರೂಪಾಯಿ ಕಾಲಮಿನಲ್ಲಿ ೩೫ನ್ನೂ, ನಯೆ ಪೈಸೆ ಕಾಲಮಿನಲ್ಲಿ ೦೫ ಎಂದೂ ತುಂಬೇಕು. ಆಣೆ ಮತ್ತು ಪೈಗಳಲ್ಲಿದ್ದ ಹಣವನ್ನು ಲೆಕ್ಕದ ಪುಸ್ತಕದಲ್ಲಿ ಬರೆಯುವದಕ್ಕೂ ಅದನ್ನು ಪರಿವರ್ತಿಸಿ ಪಟ್ಟಿಯ ಪ್ರಕಾರ ನಯೆ ಪೈಸೆಗಳ ಪೂರ್ಣಾಂಕಗಳಿಗೆ ಪರಿವರ್ತಿಸಿ ಬರೆಯಲಾಗುವುದು. ನಯೆ ಪೈಸೆಗಳ ಸಂಕ್ಷಿಪ್ತ ರೂಪವು ನಯೆ ಪೈ. (ಎನ್. ಪಿ.) ಎಂದು ಬರೆಯಕ್ಕು.

ಹಣವನ್ನು ಕೊಡುವಾಗ ಅಥವಾ ಪಡೆಯುವಾಗ ಮಾತ್ರ ಪೂರ್ಣಾಂಕಗಳನ್ನು [illegible] ಪತ್ರ, ಕಾಯಿದೆ ಮುಂತಾದುವುಗಳಲ್ಲಿ ದರಗಳನ್ನು ನಿರ್ದಿಷ್ಟಪಡಿಸಿದಾಗ ಒಂದೇ ವ್ಯವಹಾರದಲ್ಲಿ ಕೊಡಬಹುದಾದ ಅಥವಾ ತೆಗೆದುಕೊಳ್ಳಬಹುದಾದ ಒಟ್ಟು ಹಣದ ಬಗೆಗೆ ಮಾತ್ರ ಪೂರ್ಣಾಂಕವನ್ನು ಮಾಡಬೇಕು. ಹಣಕಾಸಿನ ಮುಂಜೂರಿ, ಸಿಯನು, ಅಜ್ಜಿ, ಪ್ರಕಟಣೆ, (ನೋಟಿಫಿಕೇಶನ್ಸ್) ಗುತ್ತಿ, ದಸ್ತಾವೀಜು ಅಥವಾ ಇನ್ನಿತರ ಕಾನೂನುಗಳಲ್ಲಿ ರೂಪಾಯಿ, ಆಣೆ ಮತ್ತು ಪೈಗಳಲ್ಲಿ ನಿರ್ದಿಷ್ಟಪಡಿಸಿದ ಹಣವು ಪೂರ್ಣಾಂಕ ಗೊಳಿಸಲ್ಪಡದೆ ದಶಾಂಶ ನಾಣ್ಯ ಪದ್ಧತಿಯ ಪ್ರಕಾರ ಸಮಾನ ಬೆಲೆಯುಳ್ಳಿ ಹೇಳಲಾಗಿದೆಯೆಂದೇ ಗಣಿಸಲಾಗುವದು.

ಸರಕಾರದ ಬಾಕಿ ಸಲ್ಲಿಸುವಾಗ, ಬಾಕಿ ಹಣವನ್ನು ಯಾವ ನಾಣ್ಯದಲ್ಲಿ ಬರೆದಿದ್ದರೂ ಸ್ವೀಕರಿಸಲಾಗುವದು. ಆದರೂ ಅದನ್ನು ಹೊಸ ನಾಣ್ಯಗಳಲ್ಲಿಯೇ ಕೊಡಲು ಪ್ರಯತ್ನ ಮಾಡಲಾಗುವುದು

ಈಗಿನ ನಾಣ್ಯಗಳನ್ನು ಹಿಂದಕ್ಕೆ ತೆಗೆದುಕೊಳ್ಳುವ ವರೆಗೆ ಅವು ಹೊಸ ನಾಣ್ಯಗಳ ಜೊತೆಗೆ ಕ್ರಮಬದ್ಧ ನಾಣ್ಯಗಳೆಂದೇ ಚಲಾವಣೆಯಲ್ಲಿರುವವು. ಆದರೂ ಈಗಿನ ನಾಣ್ಯಗಳನ್ನು ಸಾಧ್ಯವಿದ್ದಷ್ಟು ಬೇಗ ಹಿಂತೆಗೆದುಕೊಳ್ಳಲಾಗುವದು.

ಆರಂಭದಲ್ಲಿ ಒಂದು ನಯೆ ಪೈಸೆ, ಎರಡು ನಯೆ ಪೈಸೆ, ಐದು ನಯೆ ಪೈಸೆ ಮತ್ತು ಹತ್ತು ನಯೇ ಪೈಸೆ ನಾಣ್ಯಗಳನ್ನೂ, ಆ ಮೇಲೆ ೨೫ ಮತ್ತು ೫೦ ನಯೆ ಪೈಸೆ ನಾಣ್ಯಗಳನ್ನೂ ಮತ್ತು (೧೦೦ ನಯೆ ಪೈಸೆ ನಾಣ್ಯಗಳಿಗೆ ಸಮಾನವಿರುವ) ಹೊಸ ರೂಪಾಯಿಯನ್ನು ಚಲಾವಣೆಯಲ್ಲಿ ತರಲಾಗುವುದು.

ಆರಂಭದಲ್ಲಿ ಹತ್ತು ನಯೆ ಪೈಸೆ ಮತ್ತು ಅದಕ್ಕೆಂತ ಕಡಿಮೆ ನಯೆ ಪೈಸೆ ನಾಣ್ಯಗಳನ್ನು ಸಾಕಷ್ಟು ಪ್ರಮಾಣದಲ್ಲಿ ಚಲಾವಣೆಯಲ್ಲಿ ತರಲಾಗುವುದರಿಂದ ಮೊದಲು ಎರಡು ಆಣೆ ಮತ್ತು ಅದಕ್ಕಿಂತ ಕಡಿಮೆ ಬೆಲೆಯ ನಾಣ್ಯಗಳನ್ನು ಹಿಂದಕ್ಕೆ ತೆಗೆದುಕೊಳ್ಳಲಾಗುವದು.

ಭಾರತೀಯ ನಾಣ್ಯ ಪದ್ಧತಿ (ತಿದ್ದುಪಡಿ) ಶಾಸನ, ೧೯೫೫ರ ಅನ್ವಯ ಎರಡು ಆಣೆ ಮತ್ತು ಅದಕ್ಕಿಂತ ಕಡಿಮೆ ಬೆಲೆಯ [illegible] ನಾಣ್ಯಗಳಿಗೆ ನಯೆ ಪೈಸೆಗಳಲ್ಲಿ ಅಸ್ಪಸ್ಟ ನಾಣ್ಯಗಳು ಇಲ್ಲ. ಆದುದರಿಂದ ಅವುಗಳನ್ನು ಪ್ರತ್ಯೇಕವಾಗಿ ಅಥವಾ ಇತರ ನಾಣ್ಯಗಳ ಜೊತೆಗೆ ಬದಲಿ ಮಾಡಿಸಿಕೊಂಡರೆ ಕೊಡುವವರಿಗಾಗಲಿ, ಪಡೆಯುವವರಿಗಾಗಲಿ ಒಟ್ಟಿನಲ್ಲಿ ಸ್ವಲ್ಪ ಲಾಭ ಇಲ್ಲವೆ ಹಾನಿಯಾಗುವುದು.

ಈಗಿನ ನಾಣ್ಯಗಳು ಚಲಾವಣೆಯಲ್ಲಿರುವವರೆಗೆ ಈ ಲಾಭ ಅಥವಾ ಹಾನಿಯಾಗಬಹುದು. ಆದರೆ ಹೊಸ ನಾಣ್ಯಗಳ ಚಲಾವಣೆ ಹೆಚ್ಚಿದಂತೆ ಈ ಲಾಭ ಅಥವಾ ಹಾನಿ ಕಡಿಮೆಯಾಗುವುದು. ಆದರೂ ಈಗಿನ ನಾಲ್ಕಾಣೆ ಮತ್ತು ಅದರ ಗುಣಕಗಳಿಗೆ ಸಮಾಧಾನವಾದ ಹೊಸ ನಾಣ್ಯಗಳು ಸಿಕ್ಕುವದರಿಂದ ಸಾರ್ವಜನಿಕರು ತಮ್ಮಲ್ಲಿರುವ ಈಗಿನ ಎಲ್ಲ ನಾಲ್ಕಾಣೆ ಮತ್ತು ಅದರ ಗುಣಕಗಳನ್ನು ಕೊಟ್ಟು ಹೊಸ ನಾಣ್ಯಗಳನ್ನು ತೆಗೆದುಕೊಂಡರೆ ಲಾಭ ಅಥವಾ ಹಾನಿಯ ಅಂಶವನ್ನು ತೀರ ಕಡಿಮೆಯಾಗುವಂತೆ ಮಾಡಬಹುದು. ಇದೇ ಆಧಾರದ ಮೇಲೆ ಈಗಿನ ನಾಣ್ಯಗಳನ್ನು ತೆಗೆದುಕೊಂಡು ಹೊಸ ನಾಣ್ಯಗಳನ್ನು ಕೊಡಬೇಕೆಂದು ಟ್ರಿಝರಿ ಮುಂತಾದವುಗಳಿಗೆ ಆದೇಶಿಸಲಾಗಿದೆ.

ಈಗಿನ ನಾಣ್ಯಗಳನ್ನು ದಶಾಂಶ ನಾಣ್ಯಗಳಿಗೆ ಪರಿವರ್ತಿಸಿಕೊಳ್ಳುವ ಎರಡು ಕೋಷ್ಟಕಗಳನ್ನು ಸರಕಾರವು ಸಾರ್ವಜನಿಕರ ಜಿವಗಾಹನೆಗಾಗಿ ಪ್ರಕಟಿಸಿದೆ. ಇವುಗಳಲ್ಲಿ ಈಗಿನ ನಾಣ್ಯಗಳಿಗೆ ಸಮಾನವಾಗುವ ದಶಾಂಶ ನಾಣ್ಯಗಳನ್ನು ತೋರಿಸಲಾಗಿದೆಯಲ್ಲದೆ ಅವುಗಳನ್ನು ಹೇಗೆ ಮತ್ತು ಯಾವಾಗ ಬಳಸಬೇಕೆಂಬುದನ್ನೂ ತಿಳಿಸಲಾಗಿದೆ. ಇವುಗಳಲ್ಲಿ ಸಣ್ಣ ಕೋಷ್ಟಕವೇ ಜನರಿಗೆ ಹೆಚ್ಚು ಉಪಯುಕ್ತವಾದುದರಿಂದ ಅದನ್ನು ಪುನಃ ಈ ಲೇಖನದ ಕೊನೆಗೆ ಪ್ರಕಟಿಸಿದ್ದೇವೆ.

ಈಗಿನ ನಾಣ್ಯಗಳಿಗೆ ಹೊಸ ನಾಣ್ಯಗಳ ವಿನಿಮಯ ದರದ ಪ್ರಮಾಣವು ತೀವ್ರ ಗಣಿತಬದ್ಧವಾಗಿಲ್ಲ. ಉದಾಹರಣೆಗಾಗಿ ಒಂದು ಬಿಲ್ಲಿಗೆ (ಈಗಿನ ಕಾಲಾಣೆ ನಾಣ್ಯ) ಎರಡು ನಯೆ ಪೈಸೆ ಸಮಾನವೆಂದಿದ್ದರೆ ಎರಡು ಬಿಲ್ಲಿಗಳಿಗೆ ಮೂರು ನಯೇ ಪೈಸೆ ಸಮಾನವೆಂದು ತೋರಿಸಲಾಗಿದೆ. ಅದರಂತೆ ಒಂದು ಆಣೆಗೆ ಆರು ನಯೇ ಪೈಸೆ ಮತ್ತು ಎರಡು ಆಣೆಗಳಿಗೆ ಹನ್ನೆರಡು ನಯೇ ಪೈಸೆ ಸಮಾನನೆಂದಿದ್ದರೆ, ಮೂರು ಆಣೆಗಳಿಗೆ ೧೯ ನಯೇ ಪೈಸೆ ಸಮಾನವೆಂದು ತೋರಿಸಲಾಗಿದೆ.

ಇದೇ ಪ್ರಕಾರ ೧೦ ಆಣೆಗಳಿಗೆ ೬೨ ನಯೇ ಪೈಸೆ ಮತ್ತು ೧೦ ಆಣೆ, ಒಂದು ಬಿಲ್ಲಿಗೆ ೬೪ ನಯೇ ಪೈಸೆ ಬಂದರೆ ಹನ್ನೊಂದು ಆಣೆಗಳಿಗೆ ೬೯ ನಯೇ ಪೈಸೆ ಮತ್ತು ಹನ್ನೊಂದು ಆಣೆ ಒಂದು ಬಿಲ್ಲಿಗೆ ೭೦ ನಯೇ ಪೈಸೆ ಬರುತ್ತವೆ. ಇದು ವಿಚಿತ್ರವಾಗಿ ಕಾಣಬಹುದು. ಆದರೆ ದಶಾಂಶ ನಾಣ್ಯಪದ್ಧತಿಗೆ ಸಂವರ್ತನೆಯಾಗುವಾಗ ಇದು ಸಹಜವೆನಿಸುವದು.

(೧೧ನೇ ಪುಟ ನೋಡಿರಿ)

ವಿನಿಮಯದ ಸೌಕರ್ಯಗಳು

ದಶಾಂಶ ನಾಣ್ಯಗಳ ಚಲಾವಣೆ ಏಪ್ರಿಲ್ ೧, ೧೯೫೭ನೆಯ ದಿನ ಆಚರಣೆಯಲ್ಲಿ ಬರುವುದರಿಂದ ಅಂದಿನಿಂದ ಹೊಸ ನಾಣ್ಯಗಳನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸುವ ನಿರ್ಪಾಡುಗಳನ್ನು ಮಾಡಲಾಗಿದೆ. ಭಾರತದ ರಿಜರ್ವ ಬ್ಯಾಂಕಿನ ಎಲ್ಲ ಕಛೇರಿಗಳಲ್ಲಿಯೂ, ರಿಜರ್ವ ಬ್ಯಾಂಕಿನ ಪರವಾಗಿ ಕೆಲಸ ಮಾಡುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸ್ಟೇಟ್ ಬ್ಯಾಂಕ್ ಆಫ್ ಸೌರಾಷ್ಟ್ರ ಮತ್ತು ಬ್ಯಾಂಕ್ ಆಫ್ ಮೈಸೂರು ಇವುಗಳ ಎಲ್ಲ ಶಾಖೆಗಳಲ್ಲೂ ಈಗಿನ ನಾಣ್ಯಗಳ ಬದಲು ಹೊಸ ನಾಣ್ಯಗಳನ್ನು ಕೊಡುವ ವ್ಯವಸ್ಥೆಯನ್ನು ಮಾಡಲಾಗುವುದು. ಇದಲ್ಲದೆ ಟ್ರೆಜರಿ ಮತ್ತು ಸಬ್-ಟ್ರೆಜರಿಗಳಲ್ಲಿಯೂ ಈ ವಿನಿಮಯ ಸೌಕರ್ಯಗಳನ್ನೊದಗಿಸಲಾಗುವುದು.

ಆದರೂ ಕೆಲವು ಸ್ಥಳಗಳಲ್ಲಿ ಹೊಸ ನಾಣ್ಯಗಳಿಗೆ ಜನತೆಯಿಂದ ಹೆಚ್ಚಿನ ಬೇಡಿಕೆ ಬಂದು, ಹೊಸ ನಾಣ್ಯಗಳ ಸಂಗ್ರಹ ಕಡಿಮೆ ಬೀಳುವ ಸಂಭವವಿದೆ. ಆದುದರಿಂದ ಕ್ರಯ ವನ್ನು ಹೊಸ ನಾಣ್ಯಗಳಲ್ಲಿ ಗೊತ್ತು ಪಡಿಸಿದ್ದರೂ ಹೊಸ ನಾಣ್ಯಗಳಲ್ಲಿಯೆ ಹಣ ಸಲ್ಲಿಸಬೇಕೆಂಬ ನಿರ್ಬಂಧವಿಲ್ಲವೆಂದು ಸರಕಾರವು ಜನರಿಗೆ ಸ್ಪಷ್ಟಪಡಿಸಬಯಸುತ್ತದೆ.

ಆರಂಭದಲ್ಲಿ ಕೇವಲ ಒಂದು ನಯೂ ಪೈಸಾ, ಎರಡು ನಯೆ ಪೈಸೆ, ಐದು ನಯೆ ಪೈಸೆ ಮತ್ತು ಹತ್ತು ನಯೆ ಪೈಸೆ ಬೆಲೆಯ ನಾಣ್ಯಗಳನ್ನೂ ಆ ಮೇಲೆ ೨೫ ನಯೆ ಪೈಸೆ, ೫೦ ನಯೆ ಪೈಸೆ ಮತ್ತು ನೂರು ನಯೆ ಪೈಸೆ ಹೊಸ ರೂಪಾಯಿ ನಾಣ್ಯಗಳನ್ನೂ ಹೊರಡಿಸಲಾಗುವುದು. ವಿನಿಮಯ ಮಾಡುವಾಗ ಕೇವಲ ಈಗಿನ ನಾಲ್ಕಾಣೆ ಮತ್ತು ಅವರ ಗುಣಕಗಳಿಗೆ ಪ್ರತಿಯಾಗಿ ಹೊಸ ನಾಣ್ಯಗಳನ್ನು ಕೊಡಲಾಗುವುದು. ಸಾರ್ವಜನಿಕರು ಸರಕಾರ ದೊಡನೆ ಸಹಕರಿಸಬೇಕಾಗಿ ವಿನ್ನಹ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿ.,

ಸ್ಥಾಪನೆ: ೧೯೩೩] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಅಧಿಕೃತ ಬಂಡವಾಳ	...	ರೂ. 56,00,000
ಚಲಾವಣೆ ಬಂಡವಾಳ	...	ರೂ. 32,23,787
ವರ್ಗಣಿ (ಷೇರು) ಬಂಡವಾಳ	...	ರೂ. 32,10,987
ತೆಪ್ಪ ಬಂಡವಾಳ	...	ರೂ. 27,80,579
ಕ್ಷೇಮನಿಧಿ	...	ರೂ. 18,00,000
ಠೇವಣಾತಿ	...	ರೂ 8.46 ಕೋಟಿ.

ತಾ. 30-9-1956ರಲ್ಲಿ ನಮ್ಮ ಚಲಾವಣೆ ನಿಧಿ 10 ಕೋಟಿಗೂ ಮಿಕ್ಕಿದೆ

(ನವೋದಿತ ರಾಜ್ಯಗಳಲ್ಲಿ) ನಮ್ಮ ಶಾಖೆಗಳು

(ವಿಶಾಲ) ನವಮೈಸೂರು	59
ಆಂಧ್ರ ಪ್ರದೇಶ	14
ಕೇರಳ	13
ಬೊಂಬಾಯಿ	8
ಮದ್ರಾಸು	2

ಟಿ. ಎ. ಪೈ ಬಿ ಕಾಂ.(ಬೊಂಬಾಯಿ)ಎಂ. ಎಲ್. ಎ., ಟಿ.ಎಂ ಎ. ಪೈ,ಎಂ.ಬಿ.,ಬಿ.ಎಸ್, ಜನರಲ್ ಮೆನೇಜರ್. ಮೆನೇಜಿಂಗ್ ಡೈರೆಕ್ಟರ್.

The Canara Industrial & Banking Syndicate Ltd.

ಸುಖಾನುಭವ

ತ್ಯಾಗ ಪ್ರೇಮಗಳೇ ಬಾಳ್ವೆಯಲ್ಲಿ ಸಂತೃಪ್ತಿಯ ತಳಗಟ್ಟು

ಮನ ಮತ್ತು ಇಂದ್ರಿಯಗಳಿಗೆ ಯಾವುದು ಅನುಕೂಲವೆಂದು ತೋರುವುದೋ ಅದೇ ಸುಖ. ಪ್ರತಿಕೂಲವೆನಿಸುವುದೇ ದುಃಖ—ಇದು ಸುಖ ದುಃಖಗಳ ಅರ್ಥವಾಗಿದೆ ಸಾಮಾನ್ಯ ಜನರ ದೃಷ್ಟಿಯಲ್ಲಿ!

ನಮಗೆ ಆಹಾರ, ಬಟ್ಟೆ, ಭೂಮಿ, ಮನೆ, ಗದ್ದೆ, ನ್ಯಾಯ, ವಿದ್ಯೆ ಮೊದಲಾದುವುಗಳು ಸುಲಭವಾಗಿ ಬೇಕಷ್ಟು ದೊರಕಿದರೆ ನಾವು ಸುಖಿಗಳೆಂದು ಎಣಿಸುವೆವು. —ಆದರೆ ವಿಚಾರಿಸಿದರೆ— ಯಾರೊಡನೆ ಈ ಎಲ್ಲಾ ವಿಷಯಗಳಿದೆಯೋ ಅವರು ನಿಜವಾಗಿ ಸುಖಿಗಳೇ? ಅಲ್ಲ ಎಂದಿಗೂ ಅಲ್ಲ—ಕಾರಣ, ವಸ್ತುಗಳ ಸಂಗ್ರಹದಿಂದ ಲಾಲಸೆಯು ಹೆಚ್ಚುವುದು. ಈ ಲಾಲಸೆಯೇ ದುಃಖದ ಮೂಲ ಕಾರಣ. ಗೀತೆಯಲ್ಲಿ ಕೂಡಾ ಶ್ರೀ ಕೃಷ್ಣ ಪರಮಾತ್ಮನು ಈ ಲಾಲಸೆ (ಕಾಮ)ಯೇ ಪಾಪಾಚರಣೆಯ ಮೂಲವೆಂದು ಹೇಳಿದ್ದಾನೆ. ಜಗತ್ತಿನಲ್ಲಿ ಎಲ್ಲೆಡೆಗಳಲ್ಲೂ ಲಾಲಸೆಯು ತಾಂಡವವಾಡುವುದನ್ನೂ, ಅದರಿಂದಾಗುವ ಅನಾಹುತಗಳನ್ನೂ ಊಹಿಸುವುದೇ ಅಸಾಧ್ಯ. ಆದರೆ ಲಾಲಸೆಯಿಂದ ಒಂದು ವಸ್ತುವು ಪ್ರಾಪ್ತವಾಗುವುದಿಲ್ಲ.

ಒಬ್ಬ ವ್ಯಕ್ತಿಗೆ ಸಾಂಸಾರಿಕ ಸುಖೋಪಭೋಗಗಳಿಗೆ ಬೇಕಾದ ಸರ್ವ ವಸ್ತುಗಳು ದೊರಕಿದರೂ, ಅವನಿಗೆ ತೃಪ್ತಿಯಾಗುವುದು ಅನುಮಾನ ಬದಲಿಗೆ ಅವನ ಲಾಲಸೆಯು ಉತ್ತರೋತ್ತರ ಅಭಿವೃದ್ಧಿ ಹೊಂದುವುದು. ಈ ಲಾಲಸೆಯು ವೃದ್ಧಿಯಾಗುವುದರ ಅರ್ಥ — ನನ್ನುಳಿದಿರುವ ಕೊರತೆಯು ಜ್ಞಾನುಭವ. ಎಲ್ಲಿಯ ವರೆಗೆ ಕೊರತೆಗಳಿವೆಯೋ, ಅಲ್ಲಿಯ ವರೆಗೆ ಕ್ಲೇಶ ಸುಖ ದೊರಕೀತು? ದುಃಖವೇ ಅಧಿಕವಾಗುವುದು ನಿಶ್ಚಯ. ಭೂಮಿಯಲ್ಲಿರುವ ಸರ್ವ ಭೋಗ ಪದಾರ್ಥಗಳನ್ನು ಭೋಗಿಸುವುದರಿಂದ ಕಾಮನೆಯ ತೃಪ್ತಿಯಾಗದು. ಘೃತದ ಆಹುತಿಯಿಂದ ಅಗ್ನಿಯು ಪ್ರಜ್ವಲಿಸುವಂತೆ ಭೋಗ ವಾಸನೆಯು ಪ್ರಬಲವಾಗುವುದು. ಜಾಗ್ರತೆ! ಒಂದು ವೇಳೆ ಈ ತಕ್ಷರ ವಸ್ತುಗಳ ಸಂಯೋಗದಿಂದ ಯಾವುದನ್ನು ನಾವು ಸುಖವೆಂದು ತಿಳಿಯುವೆವೋ ಅದನ್ನೇ ಸುಖವೆಂದು ಎಣಿಸುವ. ಅದು ಶಾಶ್ವತವೇನು? ಕ್ಷಣಕ್ಷಣಕ್ಕೂ ಪರಿವರ್ತನಶೀಲ ಹಾಗೂ ನಶ್ವರವಾದ ಈ ಜಡ ವಸ್ತುಗಳು, ನಿತ್ಯ ಹಾಗೂ ಅವಿನಾಶಿಯಾದ ಜೀವನ ಇವುಗಳ ಶಾಶ್ವತ ಸಂಯೋಗವಾಗುವುದೆಂತು. ಹಾಗೆಂದು ಬಾಹ್ಯ ವಸ್ತುಗಳಿಂದ ಸುಖ ದೊರಕದೆಂದಾದ ಮೇಲೆ ಸುಖಿಗಳಾಗುವುದು ಹೇಗೆ? ಸುಖವೆಲ್ಲಿದೆ?

ಸುಖಕ್ಕಾಗಿ ಒಂದು ಉಪಾಯವಿದೆ—ಚಿನ್ಮಯ ಪರಮಾತ್ಮ ಪ್ರಾಪ್ತಿಯ ಲಕ್ಷ್ಯ ಮತ್ತು ಧರ್ಮ ಹಾಗೂ, ನ್ಯಾಯಗಳ ಆಚರಣೆ. ಎಂದರೆ ನಮ್ಮ ಆಚರಣೆಯು ಧರ್ಮಯುಕ್ತವಾಗಿರಬೇಕು. ನ್ಯಾಯದಿಂದ ಸಿಗುವ ವಸ್ತುಗಳಲ್ಲದೆ ಬೇರೆ ಏನನ್ನೂ ಇಚ್ಛಿಸಬಾರದು. ಇದರಿಂದ ನಿಜವಾದ ಸುಖವು ಉಷಲಬ್ಧವಾಗುವುದು. ಇದು ತ್ಯಾಗ, ಉದಾರತೆಗಳಿಂದ ಸಾಧ್ಯವಾಗುವುದು. ಈ ರೀತಿಯ ಭಾವನೆಗಳಿಂದ ನಮ್ಮ ಮನಸ್ಸು ಬಾಹ್ಯ ಜಡ ವಸ್ತುಗಳಿಂದ ದೂರವಾಗಿ, ಜೀವನ ಸ್ವರೂಪ ಪರಮಾತ್ಮನ ಕಡೆಗೆ ಹೊರಳುವುದು—ಆಗ ಬಾಹ್ಯ ವಸ್ತುಗಳಿಂದ ಸುಖ ಸಿಗುವುದೆಂಬ ಮಿಥ್ಯ ಕಲ್ಪನೆಯು ದೂರವಾಗುವುದು. ಹಾಗೆಯೇ ಬೋಧಸ್ವರೂಪಿ ಆನಂದ ಸ್ವರೂಪಿಯಾದವನು ಜೀವನ ಪರಮಾತ್ಮನೆಂಬುದನ್ನು ತಿಳಿದು ಆ ಕಡೆಗೆ ಲಕ್ಷ್ಯವು ದೃಢವಾಗಿ ಜೀವವು ಸ್ವಯಂ ಜ್ಞಾನಿ ಹಾಗೂ, ಆನಂದ ಸ್ವರೂಪಿಯಾಗುವುದು. ಆ ಸ್ಥಿತಿಯಲ್ಲಿರುವ ಮಹಾತ್ಮನ ದರ್ಶನ, ಭಾಷಣ, ಸ್ಪರ್ಶಗಳಿಂದ ಇತರರು ಸುಖಿಗಳಾಗುವರು, ಅಲ್ಲದೆ ಪ್ರತಃ ಸುಖಿಯಾಗುವನು. ಏಚ್ಚೇಕೆ? ಯಾರು ತಮ್ಮ ಸ್ವಾರ್ಥತ್ಯಾಗದಿಂದ ಜನಹಿತವನ್ನು ಸಾಧಿಸುವನೋ, ಯಾರು ಫಲಾಪೇಕ್ಷೆ ಇಲ್ಲದೆ ಉತ್ತಮ ಕರ್ಮಗಳನ್ನು ಮಾಡುವನೋ ಅವನೇ ನಿಜವಾದ ಸುಖಿಯು.

ಕೆಲವು ಮಹಾನುಭಾವರು ಧನವಂತರೊಡನೆ ಇದ್ದ ಧನವನ್ನೆಲ್ಲಾ ಸೆಳೆದುಕೊಂಡು ಬಡವರಿಗೆ ಹಂಚಿದರೆ ಎಲ್ಲರೂ ಸುಖಿಗಳಾಗಬಹುದು ಎಂಬ ಕಲ್ಪನಾ ಸಾಮ್ರಾಜ್ಯವನ್ನು ಕಟ್ಟುವರು. ಆದರೆ ಅವೆಷ್ಟು ಸತ್ಯ? ಶ್ರೀಮಂತರಿಗೆ ಯಾವ ತರವು ಸುಖವಿದೆ ಎಂದು ಎಣಿಸುವೆವೋ ಅದೂ ದುಃಖಪೂರ್ಣವಾದ ಸುಖ. ಇದರಿಂದ ಅವರು ದಿನ-ರಾತ್ರಿ ಪರಿತಪಿಸಿದರೂ ಶಾಂತಿಸಿಗುವುದಿಲ್ಲ. ಅನಂತರದಿಂದ ಯಾವ ಸುಖವು ಸಿಗುವುದೋ ಅದೂ ದುಃಖದಾಯಕವಾಗುವುದು. ಅವರಿಗೆ ದುಃಖವನ್ನುಂಟುಮಾಡಿ ದ್ರವ್ಯವನ್ನು ಪಡೆಯುವವರಿಗೂ ಸುಖವೆಲ್ಲಿಯದು? ಆ ಧನವು ಎಲ್ಲೆಲ್ಲಿ ಹೋಗುವುದೋ ಅಲ್ಲೆಲ್ಲಾ ದುಃಖ, ಶಾಂತಿ, ತಾಪಗಳೇ ಉದ್ಭವಿಸುವು.

ಕೊಡುವವರು ಉದಾರ ಮನಸ್ಸಿನಿಂದ ಕೊಡಬೇಕು. ಪಡೆಯುವವರು ತ್ಯಾಗಬುದ್ಧಿಯಿಂದ ಪಡೆಯಬೇಕು. ಇದರಿಂದ ಇಬ್ಬರಿಗೂ ಸಂತಸವಾಗುವುದು ಅಲ್ಲದೆ ಆ ಅನ್ಯತಮಯ ಪದಾರ್ಥವು ಹೋದಲ್ಲೆಲ್ಲಾ ಸುಖ, ಶಾಂತಿ ಆನಂದದ ವಾತಾವರಣವು ಉತ್ಪನ್ನವಾಗುವುದು. ಆಗ ಸರ್ವರಿಗೂ ಸುಖಸಿಗುವುದು, ಎಲ್ಲರ ಹೃದಯವೂ ಉದಾರವಾಗುವುದು. ಕಾರಣ ಸುಖವು ಬಾಹ್ಯವಸ್ತುಗಳಲ್ಲಿಲ್ಲ. ಹೃದಯದ ಉದಾರತೆಯಲ್ಲಿದೆ. ಶಾಸ್ತ್ರವಚನವು ಹೀಗೆದೆ.

ಯಚ್ಚಕಾಮಸುಖಂ ಲೋಕೇ ಯಚ್ಚ ದಿವ್ಯಂ ಮಹತ್ಸುಖಂ।
ತೃಷ್ಣಾಕ್ಷಯಸ್ಯ ಸುಖಸ್ಯೈತೇ ನಾರ್ಹತಃ ಷೋಡಶೀ ಕಲಾಂ॥

"ಲೋಕದಲ್ಲಿ ಕಾಮೋಪಭೋಗದ ಸುಖವೂ, ಸ್ವರ್ಗೀಯ ಮಹಾಸುಖವೂ, ತೃಷ್ಣಾ ನಾಶದಿಂದ ಸಿಗುವ ಸುಖದ ಹದಿನಾರನೆ ಒಂದು ಪಾಲೂ ಆಗಲಿಕ್ಕಿಲ್ಲ" ಉದಾರತೆಯೂ, ತ್ಯಾಗವೂ, ಸುಖದ ಮೂಲವಾಗಿದೆ.

ಎಂದ ಮೇಲೆ ವಸ್ತುಗಳ ಅಭಾವವು ದುಃಖದ ಕಾರಣವಲ್ಲ. ಅವುಗಳ ಅಭಾವದ ಅನುಭವವೇ ದುಃಖದ ಕಾರಣವೆನ್ನಬಹುದು. ಉದಾಹರಣೆಗೆ ಒಂದು ವಿಷಯವನ್ನು ತೆಗೆದುಕೊಳ್ಳುವ. ಒಬ್ಬನು ಸ್ವಯನು ಏಕಾದಶಿಯ ನಿರಾಹಾರ ವ್ರತದಿಂದ ದಿನವಿಡೀ ಉಪವಾಸವಿರುವನು, ಇನ್ನೊಬ್ಬನು ಆ ದಿನ ಸಂಪಾದನೆ ಇಲ್ಲದೆ ಉಪವಾಸವಿರಬೇಕಾಯಿತು. ಇಲ್ಲಿ ಎರಡು ಕಡೆಗಳಲ್ಲೂ ಆಹಾರ ಪದಾರ್ಥಗಳ ಸಂಯೋಗದ ಅಭಾವವಾಗಿದೆ. ಆದರೆ ಒಬ್ಬನು ಪ್ರಸನ್ನತಾ ಪೂರ್ವಕ ವ್ರತವನ್ನಾಚರಿಸಿ ಸುಖಿಯಾಗುವನೆ, ಇನ್ನೊಬ್ಬನು ಕೂಟ್ಟೆಗೆ ಅನ್ನವಿಲ್ಲದ್ದರಿಂದ ದುಃಖಾನುಭವವನ್ನು ಹೊಂದುವನು. ಆದ್ದರಿಂದ ಅಭಾವದ ಅನುಭವವೇ ದುಃಖದ ಮೂಲ ಕಾರಣ.

ಅಲ್ಲದೇ, ಭಾವವೇ ದುಃಖಕ್ಕೆ ಕಾರಣವಾದರೆ ವಿರಕ್ತ ಸಾಧು ಸನ್ಯಾಸಿಗಳಿಗೂ ದುಃಖಿಯಾಗಬೇಕಿತ್ತು. ಅವರೊಡನೆ ಸ್ತ್ರೀ, ಧನ, ಕಟ್ಟಡ, ಬಟ್ಟೆ, ವಾಹನ, ಅಲ್ಲದೆ ಕೂಡಿಟ್ಟ ಧಾನ್ಯಗಳೂ ಇಲ್ಲ. ಇವೆ ಯಾವುದೂ ಇಲ್ಲದೆಯೂ ಅವರು ಸುಖಿಗಳಾಗಿರುವರು. ದೊಡ್ಡ ದೊಡ್ಡ ಶ್ರೀಮಂತರೂ ಅವರಲ್ಲಿಗೆ ಬಂದು ತಮ್ಮ ಅಂತಃಕರಣದ ಪರಿತಾಪವನ್ನು ಹೊರಿಸಿಕೊಂಡು ತೆರಳುವರು. ಆದರ ಕಾರಣ ಅವರು ವಸ್ತುಗಳ ಅಭಾವದಲ್ಲಿಯೂ, ಭಾವರೂಪ, ಸಚ್ಚಿದಾನಂದ ಪರಮಾತ್ಮನ ಅನುಭೂತಿ ಮಾಡಿ ಆನಂದ ಮಗ್ನರಾಗಿರುವರು.

ನಿಜವಾಗಿ ಅಭಾವದ ಅನುಭವವಾಗುವುದು ಮೂರ್ಖತೆಯಿಂದ. ಆದ್ದರಿಂದ ಮಾನವನು ಎಷ್ಟೇ ಅಭಾವವಿದ್ದರೂ, ಅದರ ಅನುಭವವನ್ನು ಮಾಡದೆ ಪರಿಪೂರ್ಣನಾದ ಪರಮಾತ್ಮನ ಚಿಂತನೆಯನ್ನು ಮಾಡಬೇಕು. ಆಗ ವಸ್ತುಗಳ ಅಲ್ಪತೆ ಅಥವಾ ಅಭಾವದಿಂದ ದುಃಖವಾಗಲಾರದು, ಆಗ ಭಗವಂತ ಮಂಗಲಮಯ, ವಿಶ್ವನನ್ನೂ ಅನುಸರಿಸಿ ಬಂದ ದುಃಖಗಳಿಂದ ದುಃಖವಾಗದೆ, ತನ್ನ ಪೂರ್ವಕೃತ ಪಾಪಗಳ ನಾಶವೂ ಪರಮಾತ್ಮನ ಕೃಪೆಯೂ ಎಂದು ತಿಳಿದು ಸುಖವಾಗುವುದು.

ಯಾರು ಧನಕ್ಕೆ ಮಹತ್ವವನ್ನು ಕೊಟ್ಟು ಅದರಿಂದ ಸಿಗುವ ವಸ್ತುಗಳಲ್ಲಿ ಸುಖವನ್ನು ಕಾಣುವರೋ ಅವರು ದೊಡ್ಡ ತಪ್ಪನ್ನು ಮಾಡುವರು. ಜಡಕ್ಕೆ ಮಹತ್ವವನ್ನು ಕೊಡುವುದರಿಂದ ಅಧರ್ಮವು ಹೆಚ್ಚುವುದು. ಅಧರ್ಮ ಆಚರಣೆಯಿಂದ ಸುಖ ಸಿಗಲಾರದು. ಇದು ಬದಲಿಗೆ, ಸತ್ಯ, ಜೀವನ, ಹಾಗೂ ಅಕ್ಷಯ ಸುಖದ ಭಂಡಾರವಾದ ಪರಮಾತ್ಮನ ಮಹಿಮೆಯನ್ನು ತಿಳಿದು ಅದರಿಂದ ಸುಖಪಡಲು ಪ್ರಯತ್ನಿಸಿದರೆ ಸದಾ ಸುಖಿಸಿಗುವುದರಲ್ಲಿ ಸಂಶಯವಿಲ್ಲ.

ಇದರಿಂದ ನಾವು ಪರಮಾತ್ಮ ಪ್ರಾಪ್ತಿಯ ಲಕ್ಷ್ಯವನ್ನಿಡಬೇಕು. ಸಾಂಸಾರಿಕ ಪದಾರ್ಥಗಳಿಂದ ವಿರಕ್ತರಾಗಬೇಕು. ಅಥವಾ ಆವುಗಳ ಲಾಲಸೆಯು ಉತ್ಪನ್ನವಾಗದಂತೆ ಪ್ರಯತ್ನಿಸಬೇಕು. ಜೊತೆಯಲ್ಲೇ ಎತ್ತರತೆಯಿಂದ ಪರಮಾತ್ಮನ ಚಿಂತನೆಯನ್ನು ಮಾಡಬೇಕು ಸತ್ ಶಾಸ್ತ್ರಗಳ ಅಧ್ಯಯನ, ಸತ್ಯಂಗ ಪರಮಾತ್ಮನ ಸ್ತುತಿ, ಪ್ರಾರ್ಥನೆ, ನಿರಂತರ ನಾಮ ಜಪ ಇತ್ಯಾದಿ ಸಾಧನೆಗಳನ್ನು ನಿಷ್ಕಾಮ ಭಾವನೆಯಿಂದ ಮಾಡಬೇಕು.

ಈ ಕಲಿಯುಗದಲ್ಲಿ ಯಾವು ಗುಪ್ತವಾಗಿ, ನಿಷ್ಕಾಮ ಭಾವ ಪೂರ್ವಕ, ನಿರಂತರ, ಧ್ಯಾನಸಹಿತ, ಆನಂದ ಹಾಗೂ ಆದರದಿಂದ ಯಾರು ಪರಮಾತ್ಮನ ನಾಮ ಜಪ ಮಾಡುವರೋ, ಅವರಿಗೆ ಪರಮಾನಂದ ಸ್ವರೂಪ ಪರಮಾತ್ಮನ ಪ್ರಾಪ್ತಿ ಶೀಘ್ರ ಹಾಗೂ ಸಹಜವಾಗಿ ಆಗುವುದು.

ಗುಪ್ತ, ಅಕಾಮ, ನಿರಂತರ, ಧ್ಯಾನ ಸಹಿತ, ಸಾನಂದ |
ಆದರಯುತ ಜಪದಿಂದ ಬೇಗನೇ
ದೊರೆಯುದು ಪರಮಾನಂದ ॥

—ಶ್ರೀ ಕೆ. ಪುರುಷೋತ್ತಮ ನಾಲ್ಕ.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಬಾಲ ಸುಧ

ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣವಾಗುವಿಕೆ, ಲಿವರ್ ವಿಕೆಯುವುದನು, ಈ ಎಲ್ಲಾ ವ್ಯಾಧಿಗಳಿಗೆ ನಿಜವಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೫೦ ಮಾತ್ರೆಗಳ ಸೀಸೆ ೧ ಕ್ಕೆ ರೂ. 1—0—0.

ನಮ್ಮ ಸ್ಟಾಕಿಸ್ಟರು:
(1) ಸುದರ್ಶನ ಆಯುರ್ವೇದ ವೈದ್ಯಶಾಲ—ಬೆಂಗಳೂರು-2.
(2) ಷಾ ಕಂಪೆನಿ—ಮಂಗಳೂರು-1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.



ಕಾಶ್ಮೀರ

ಪಾಕಿಸ್ತಾನಿ ತಾಳಕ್ಕೆ ಪಾಶ್ಚಾತ್ಯ ರಾಷ್ಟ್ರಗಳು ಕುಣಿಯುತ್ತವೆ! ಸತ್ಯದತ್ತ ಅವಕ್ಕೆ ದೃಷ್ಟಿಯಿಲ್ಲ

ಕಾಶ್ಮೀರ ಸಮಸ್ಯೆಯಿಂದು ಭಾರತ-ಪಾಕಿಸ್ತಾನಗಳಿಗೆ ಮಾತ್ರವಲ್ಲ, ಜಗತ್ತಿಗೇ ಜಟಿಲವೆನಿಸಿದೆ. ಈ ಸಮಸ್ಯೆಯ ಕುರಿತು ಮೇಲೆ ಹೇಳಿದ ಎರಡು ರಾಷ್ಟ್ರಗಳ ಪ್ರತಿನಿಧಿಗಳಿಗೆ ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಸಮಿತಿಯಲ್ಲಿ ಪ್ರಬಲವಾಗ್ಯುದ್ಧವೇ ನಡೆಯಿತು. ಪಾಕಿಸ್ತಾನವು ತನ್ನ ಭೂಭಾಗವಾಗಿದೆ ಕಾಶ್ಮೀರ ಎಂದು ವಾದಿಸಿದರೆ, ತನ್ನೊಡನೆ ಈ ಹಿಂದೆಯೇ ಕಾಶ್ಮೀರ ವಿಲೀನವಾಗಿದೆಯೆಂದು ವಿಶದೀಕರಿಸಿದೆ ಭಾರತ. ಪಾಕಿಸ್ತಾನದ ಪ್ರತಿನಿಧಿ ಪರರಾಷ್ಟ್ರ ಸಚಿವ ಪುಲಿಕ್ ಫಿರೋಜ್ ಖಾನ ನೂನರು ಭಾರತದ ಮೇಲೆ ಹಲವು ಆಪಾದನೆಗಳನ್ನು ಹೊರಿಸಿದ್ದಾರೆ. ಕಾಶ್ಮೀರದ ಘಟನೆ ಕಳೆದ ಜನವರಿ ೭ರಿ ಭಾರತೀಯ ಗಣರಾಜ್ಯ ದಿನೋತ್ಸವದಂದು ಆಸ್ತಿತ್ವಕ್ಕೆ ಬಂದು, ಭಾರತದೊಡನೆ ಕಾಶ್ಮೀರದ ವಿಲಯನ ಸಂಪೂರ್ಣವಾಗಿದೆ. ಬ್ರಿಟನಿನ ಪ್ರತಿನಿಧಿ ಪಿಯರ್ಸನ್ ಡಿಕ್ಸನ್ ಹಾಗೂ ಅಮೇರಿಕದ ಪ್ರತಿನಿಧಿ ಹೆನ್ರಿ ಕೇಬಟ್ ಲಾಜ್‌ರವರು ಪಾಕಿಸ್ತಾನದ ನೂನರ ಆರೋಪಗಳಿಗೆ ಬೆಂಬಲವಿತ್ತು, ಕಾಶ್ಮೀರದ ಘಟನೆಯನ್ನು ವಿರೋಧಿಸಿ, ಭಾರತಕ್ಕೆ ದ್ರೋಹವೆಸಗಿದ್ದಾರೆ. ಈ ವಿರೋಧವು ಏಕ್-ನೆಹರೂ ಛೇಟೆಯ ಫಲಿತಾಂಶವೇ?

ಭಾರತದ ಅಧೀನವಿರುವ ಕಾಶ್ಮೀರದ ಭೂಭಾಗದಲ್ಲಿನ ಜನತೆಗೆ ಸ್ವಾತಂತ್ರ್ಯವಿಲ್ಲವೆಂದು ನೂನರ ಆರೋಪಣೆ! ಸಚಿವರು ತನ್ನ ರಾಷ್ಟ್ರವನ್ನೇ ಪ್ರತ್ಯಕ್ಷವಾಗಿ ದೂರಲಾರದೆ, ಪರೋಕ್ಷವಾಗಿ ನಿಂದಿಸಿರಬಹುದೇ? ಪಾಕಿಸ್ತಾನ ಕಾಶ್ಮೀರವನ್ನು ಕ್ರಮಿಸಿದೆ. ಆ ಭೂಭಾಗಕ್ಕೆಗ 'ಆಜಾದ್ ಕಾಶ್ಮೀರ'ವೆಂಬ ಹೆಸರಿದೆ. ಅಲ್ಲಿನ ಜನರು ಎಷ್ಟು ಸ್ವಾತಂತ್ರ್ಯವನ್ನನುಭವಿಸುತ್ತಿರುವರೋ ಭಗವಂತನೇ ಬಲ್ಲ! ಸ್ವತಃ ಕಾಶ್ಮೀರ ಪ್ರಧಾನಿ ಮಿ। ಬಕ್ಷಿ ಗುಲಾಂ ಮಹಮ್ಮದರ ಮಾತಿನಿಂದಲೇ ಇದರ ಅರಿವು ನಮಗಾಗುತ್ತದೆ. ಪಾಕ್ ಆಕ್ರಮಿತ ಕಾಶ್ಮೀರದ 'ಆಜಾದ್' ಜನತೆಯ ಸ್ಥಿತಿಗೆ ಕನಿಕರಿಸಿ, ಅವರ ಬಗ್ಗೆ ತನ್ನ ಸಹಾನುಭೂತಿ ವ್ಯಕ್ತಮಾಡಿದ್ದಾರೆ ಮಿ। ಬಕ್ಷಿ.

ಭಾರತವು ಜಾತ್ಯತೀತ ರಾಷ್ಟ್ರ. ಇಲ್ಲಿ ಸಕಲ ಧರ್ಮೀಯರಿಗೂ ಸಮಾನ ಸ್ವಾತಂತ್ರ್ಯವಿದೆ. ಪಾಕಿಸ್ತಾನವಾದರೋ ಮತಾಂಧತೆಯ ವಿಷಬೀಜದಿಂದ ಅಂಕುರಿಸಿ ಬಂದ ರಾಷ್ಟ್ರ. ಇಲ್ಲದೇ ಇಸ್ಲಾಂ ಧರ್ಮದ ಮಾತ್ಸರ್ಯಂತಹ ತತ್ವಗಳನ್ನು ರಾಜಕೀಯದಲ್ಲಿ ವ್ಯವಹಾರಕ್ಕೆ ತಂದು, ಧರ್ಮದ ಹೆಸರಿನಲ್ಲಿ ಜನ್ಯಾಯವೆಸಗುತ್ತಿದೆ ಅಲ್ಲಿನ ಸರಕಾರ. ಇದಕ್ಕೆ ಸಾಕ್ಷಿ ಕಾಶ್ಮೀರದ ಮಹಮ್ಮದೀಯ ಧರ್ಮಗುರುಗಳ ಈ ಕುರಿತಾದ ಹೇಳಿಕೆ. ಮಿ। ಬಕ್ಷಿಯವರೆಂದಂತೆ, ಸಂಪತ್ಸನ್ಮುದ್ಧ ಕಾಶ್ಮೀರವು ಭಾರತದೊಡನೆ ವಿಲೀನವಾದಲ್ಲಿ ಮಾತ್ರ ಆದು ಅಭಿವೃದ್ಧಿ ಕೊಂಬಬಹುದು. ಪಾಕಿಸ್ತಾನಕ್ಕೆ ಸೇರಿದಲ್ಲಿ ಆದು ಬಡತನದ ಹೀನ ಗತಿಗಿಳಿಯಬೇಕಾದೀತು!

ಭದ್ರತಾ ಸಮಿತಿಯು ನ್ಯಾಯ ಪಕ್ಷಪಾತಿಯೊದಲ್ಲಿ, ಕಾಶ್ಮೀರ ಸಮಸ್ಯೆಯನ್ನು ದು ನಿಷ್ಪಕ್ಷ ಪಾತ ರೀತಿಯಲ್ಲಿ ಬಗೆಹರಿಸಲಿ! ಸಮಿತಿಯು ಯಾವ ರಾಷ್ಟ್ರಕ್ಕೇ ನುಅಧೀನವಾಗಿಲ್ಲ. ಶಾಂತಿಪ್ರಿಯ ರಾಷ್ಟ್ರಗಳ ಒಕ್ಕೂಟವೇ ಈ ಸಮಿತಿಯ ಅಸ್ತಿತ್ವ. ಅಮೇರಿಕಸಾಗಲೀ, ಬ್ರಿಟನ್ ಆಗಲೀ ಈ ಸಂಸ್ಥೆಯ ಸರ್ವಾಧಿಕಾರಿ ರಾಷ್ಟ್ರಗಳಾಗಿಲ್ಲ. ಅವುಗಳ ಮಾತೇ ಇದರಲ್ಲಿ ನಡೆಯ ಬೇಕೆಂದು ನಿಯಮವೇನಿಲ್ಲ. ಸುಯೇಜ್‌ನ ಮೇಲೆ ಆಕ್ರಮಣಗೈದು, ಜಗತ್ತಿನ ಶಾಂತಿ ಸಮುದ್ರವನ್ನು ಆಲ್ಲೋಲ ಕಲ್ಲೋಲ ಗೊಳಿಸಿರುವ ಬ್ರಿಟನು ಶಾಂತಿಪ್ರಿಯ ಭಾರತಕ್ಕೆ ಬುದ್ಧಿಹೇಳ ಹೊರಟಿರುವುದು ಕೌತುಕವೇ ಸರಿ!

ನ್ಯಾಯವಾದ ನಿಷ್ಪಕ್ಷಪಾತ ಜನಮತಗಣನೆಯ ಪ್ರಕಾರ ಕಾಶ್ಮೀರದ ಭವಿಷ್ಯವನ್ನು ನಿರ್ಧರಿಸಿಬೇಕೆಂದು ಪಾಕಿಸ್ತಾನದ ಛಲ. ಅದಕ್ಕೆ ಅಮೇರಿಕ, ಬ್ರಿಟನುಗಳ ಬೆಂಬಲ! ಆದರೆ ಈ ಹಿಂದೆ ಹಲವು ವರ್ಷಗಳ ಮೊದಲು ಜನಾಭಿಪ್ರಾಯವ ಕೂಡಿಸಿ ಭಾರತದಿಂದ ಪಾಕಿಸ್ತಾನಕ್ಕೆ ಕೂಡಿತವಾಗಿ ಪಾಕಿಸ್ತಾನವು ಯಾಕೆ ಒಪ್ಪಲಿಲ್ಲ? ಈಗ ಮಾತ್ರ ಆದರ ಛಲಕ್ಕೆ ಕಾರಣವೇನು? ಕಾಶ್ಮೀರದ ಕೆಲಭಾವನ್ನಾಕ್ರಮಿಸಿ, ಅದಕ್ಕೆ "ಆಜಾದ್ ಕಾಶ್ಮೀರ್" ಎಂದು ಹೆಸರಿಟ್ಟು, ಅಲ್ಲಿ ತನ್ನ ಸೇನೆಯನ್ನಿರಿಸಿ, ದಬ್ಬಾಳಿಕೆ ವಡೆಯುತ್ತಿರುವ ಪಾಕಿಸ್ತಾನ ಅಮೇರಿಕದ ಶಸ್ತ್ರ ಸಹಾಯದಿಂದ ಕೊಬ್ಬಿಕೊಂಡು, ಈ ಅಸಂಬದ್ಧ ಪ್ರಲಾಪ ಕ್ಯಾರಂಭಿಸಿರುವುದಲ್ಲವೇ? ಆದರೆ ಕಮ್ಯೂನಿಸ್ಟ್ ಆಕ್ರಮಣವ ಹೊರತು, ಇತರರ ದಾಳಿಯನ್ನು ವಿರೋಧಿಸುವುದರಲ್ಲಿ, ಅಮೇರಿಕ ಪಾಕಿಸ್ತಾನದ ನೆರವಿಗೆ ಬಾರದೆಂಬ ಅಮೇರಿಕದ ರಾಯಭಾರಿ ಹೆಲ್ಡೈಸ್‌ರ ಮಾತಿನ ಕಡೆಗೆ ಪಾಕಿಸ್ತಾನದ ಗಮನ ಹರಿಯಲಿ! ಈಗ ಇನ್ನೊಮ್ಮೆ ಜನಾಭಿಪ್ರಾಯ ಗಣನೆಗೆ ಭಾರತ ನಿಶ್ಕರ್ತವಾಗಿ ಒಪ್ಪುವಂತಿಲ್ಲ. ಅಲ್ಲದೇ ಕಾಶ್ಮೀರದ ಜನತೆ ತನ್ನ ಭವಿಷ್ಯದ ನಿರ್ಧಾರ—ಭಾರತದೊಂದಿಗೆ ಸೇರ್ಪಡೆ—ಈ ಮೊದಲೇ ಮಾಡಿದೆ. ಅಲ್ಲಿನ ಜನಮತದ ಪ್ರತೀಕವಾಗಿರುವ ಕಾಶ್ಮೀರದ ಘಟನಾ ಸಮಿತಿಯೇ ಭಾರತದೊಂದಿಗೆ ಕಾಶ್ಮೀರದ ವಿಲಯನವನ್ನು ಘೋಷಿಸಿದೆ ಎಂದಮೇಲೆ, ಇನ್ನು ಜನಮತಗಣನೆಯ ಪ್ರಶ್ನೆಯಾದರೂ ಏಕೆ? "ತನಗೆ ಸ್ವಾತಂತ್ರ್ಯ ದೊರೆತಂದಿನಿಂದ ಈ ತನಕ ಪಾರ್ವತ್ರಿಕ ಚುನಾವಣೆ ನಡೆಸದ ಪಾಕಿಸ್ತಾನ ಕಾಶ್ಮೀರಕ್ಕದನ್ನು ಕೇಳುವುದು ವಿಚಿತ್ರ" ನೆಂದಿವ್ವಾರೆ ಭಾರತ ಪ್ರಧಾನಿ ಪಂಡಿತ್ ನೆಹರು. ಭಾರತವು ಸ್ವತಂತ್ರವಾದ ನಂತರ ಐದು ವರ್ಷಗಳಲ್ಲೇ ಪ್ರಥಮ ಮಹಾ ಚುನಾವಣೆಯನ್ನು ಜರಗಿಸಿ, ಇದೀಗ ಫೆಬ್ರುವರಿ ತಿಂಗಳಿಂದ ದ್ವಿತೀಯ ಚುನಾವಣೆಗೆ ಪ್ರಾರಂಭಿಸಿದೆ!

ಇಷ್ಟು ಮಾತ್ರವಲ್ಲ, ಪಾಕಿಸ್ತಾನ ಸೂಚಿಸಿದ ಜನಮತಗಣನೆಯು ವಿಶ್ವಸಂಸ್ಥೆಯ ಜವಾಬ್ದಾರೀ ವ್ಯಕ್ತಿಗಳ ಹಾಗೂ ಅಂತರರಾಷ್ಟ್ರೀಯ ದಳವೆ ಮೇಲ್ವಿಚಾರಣೆಯಲ್ಲಿ ನಡೆಯಬೇಕಂತೆ! ಆದರೆ ಭಾರತ ವಿದನ್ನು ಒಪ್ಪುವುದಿಲ್ಲವೆಂದು ಶ್ರೀ ವೆಂಗಲೀಲ ಕೃಷ್ಣನ್ ಕೃಷ್ಣಮೆನೊನ (ವಿ. ಕೆ. ಕೆ. ಮೆನೊನ್)ರು ಸರ್ವವಿದಿತಗೊಳಿಸಿದ್ದಾರೆ. ಅಲ್ಲದೇ, ಭಾರತವು ಹಲವು ಶತ ಮಾನಗಳ ತನಕ ವಿದೇಶೀ ಸೇನಾಡಳಿತೆಯ ಕಗ್ಗಟ್ಟಿನಲ್ಲಿ ಬಿಗಿಯಲ್ಪಟ್ಟು ಸ್ವಾತಂತ್ರ್ಯಕ್ಕಾಗಿ ಪರಕೀಯರೊಡನೆ ಹೋರಾಡಿ, ಎಷ್ಟು ಕಷ್ಟಪಟ್ಟರೂ ಬಿಡದೇ, ತನ್ನ ಉದ್ದೇಶವನ್ನು ಸಾಧಿಸಿತೆಂದೂ, ಇನ್ನು ಪರಕೀಯ ಸೇನಾಡಳಿತೆಗೆ ಭಾರತವೆಂದೂ ಬಿಡದೆಂದಿದ್ದಾರೆ, ಭಾರತದ ಪ್ರಭೃತಿಗಳು. ಆದರೆ ಪಾಕಿಸ್ತಾನ ಮಾತ್ರ ಎಂದು ಭಾರತದ ವಿಭಜನೆಯಾಯಿತೋ, ಅಂದಿನಿಂದಲೇ ತಪ್ಪು ಸಹೋದರ ರಾಷ್ಟ್ರವಾದ ಭಾರತದ ಮೇಲೆ ನಂಜಿನ ದಸ್ಕರಿ ಕಾರತೊಡಗಿದೆ. ಅಲ್ಲದೇ ಭಾರತವು ತನ್ನ ಮೇಲೆ ದಾಳಿ ನಡೆಯಬಹುದೆಂಬ 'ಸಂದೇಹ'ದಿಂದ ತಾನು ಸೇನಾ ಒಪ್ಪಂದಗಳ ಕೋರಿ ದಾಡಿಯ ಬೇಲಿಯೊಳಗೆ ಸುರಕ್ಷಿತವಾಗಿದೆಯಂತೆ! ಅಮೇರಿಕದ ಶಸ್ತ್ರ ಸಹಾಯದಿಂದ ಕೊಬ್ಬಿಹೋದ ಪಾಕಿಸ್ತಾನ, ಅಮೇರಿಕದ ರಾಯಭಾರಿಯ ಮಾತನ್ನು ಇನ್ನೊಮ್ಮೆ ನೆನಪಿಗೆ ತಂದುಕೊಳ್ಳಲಿ! ಪಾಕಿಸ್ತಾನದ ಹಲವೆಡೆಗಳಲ್ಲಿ 'ಜೇಹಾದ್' (ಧರ್ಮಯುದ್ಧ)ದ ಕೂಗು ಕೇಳಿಬರುತ್ತಲಿನೆ. ಮಾತ್ರವಲ್ಲ, ಅಲ್ಲಲ್ಲಿ ಗುಡ್ಡಗಾಡು ಜನರನ್ನು ಭಾರತದ ವಿರುದ್ಧ ಬಂಡಾಯ ಹೂಡಲು ಅವನ್ನು ಆದು ಉದ್ರೇಕಿಸುತ್ತಿದೆ. ಶಸ್ತ್ರ ಸಹಾಯದಿಂದ ಉನ್ಮತ್ತವಾಗಿದ್ದರೂ, 'ಶಕ್ತಿಯುತ ಭಾರತ'ದ ಹೆದರಿಕೆ ಮಾತ್ರ ಅದಕ್ಕೆ ಇದ್ದೇ ಇರುವುದಂತೆ! ಈ ಕಪಟ ನಾಟಕವನ್ನು ನಟಿಸಿ, ಯಾರನ್ನು ಮರುಳು-ಗೊಳಿಸಲು ಈ ಪಾಕಿಸ್ತಾನದ ಹೆಂಚಿಕೆ? ದೇಶದ್ರೋ

(ಇನ್ನೆ ಪುಟನೋಡಿರಿ)

THE MOOLKY BANK LIMITED, MULKI.

NOTICE

The 27th Ordinary Annual General Body meeting of the Bank will be held at the Registered Office of the Bank on Thursday the 14th March, 1957, at 3 P.M.

The Register of Members & Transfer Books of the Bank will be closed from 7—3—1957 to 16—3—1957 (both days inclusive)

(Sd.) **M. R. H. Punja,**
Manager.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳನೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: **ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್**

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟಿ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

In the Court of the District Munsiff, Puttur.

R. E. P. No. 643/1956.
O. S. No. 500/55.

B. Govinda Panganayya.
—Petitioner

Deyyakku and others.
—Respondents

Respts:

1) Deyyakku-grand neice of Ramanna Shetty 2)Sheshappa Shetty grand son of Ramanna Shetty.

Both residing at Ulithottu of Nellvadi Village, Beltangady Taluk.

Take notice that the petitioner has filed the above execution petition for sale of immoveable property and R. E. A. 723/1956 for leave to bid at sale and the said execution petition and the bid application stand posted to 14—3—57 for settling the terms of the proclamation of sale and hearing respectively.

(By order of the Court)

(Sd M. Sadashiva Rao,
Vakil for petr.

Puttur 25—2—57.

ಮಹಾಚುನಾವಣೆಗಳು

ಮತದಾರರ ಅಧಿಕಾರ ಹಾಗೂ ಹೊಣೆಗಾರಿಕೆ

ಭಾರತವು ಪ್ರಜಾತಂತ್ರ ಮಾರ್ಗವನ್ನು ಅಂಗೀಕರಿಸಿದೆ. ಈ ಪ್ರಜಾಸತ್ತೆಯು ವಯಸ್ಕರ ಮತಾಧಿಕಾರವನ್ನೇ ಅವಲಂಬಿಸಿರುವುದು. ಪ್ರತಿಯೊಬ್ಬ ಮತದಾರರು ತಮ್ಮ ಜವಾಬ್ದಾರಿಯನ್ನು ಸಕಾಲದಲ್ಲಿ, ಮುಖ್ಯವಾಗಿ, ನಾಗರಿಕನ ಮೂಲಭೂತ ಕರ್ತವ್ಯಗಳಲ್ಲೊಂದೆನಿಸಿದ ಮತ ಕೊಡುವ ಚುನಾವಣಾ ಸಮಯದಲ್ಲಿ, ಅರಿತುಕೊಳ್ಳುವುದರಲ್ಲಿ ಪ್ರಜಾಸತ್ತೆಯ ಸಫಲತೆಯು ಅಡಗಿದೆ.

ಮುಂಬರುವ ಚುನಾವಣೆಗಳಲ್ಲಿ ಸುಮಾರು ೧೯೫೦ ಲಕ್ಷ ವಯಸ್ಕ ನಾಗರಿಕರು, ಮತದಾನದ ಮೂಲಕ ಕೊಡುವ ತೀರ್ಪು, ಕೇಂದ್ರ ಹಾಗೂ ರಾಜ್ಯಗಳಲ್ಲಿ ಮುಂದಿನ ೫ ವರ್ಷಗಳಿಗಾಗಿ ಏರ್ಪಡುವ ಸರ್ಕಾರದ ಸ್ವರೂಪವನ್ನು ನಿರ್ಧರಿಸುವುದು. ಈ ತಿಂಗಳು ಮತ್ತೆ ಮುಂದಿನ ತಿಂಗಳು ಮತದಾನ ಕೇಂದ್ರಗಳಿಗೆ ಹೋಗಿ ಮತದೀಯರ ಜನರು ತಮ್ಮ ಆಪೇಕ್ಷೆಗನುಸಾರವಾದ ಸರ್ಕಾರವನ್ನು ಆರಿಸುವರು ೧೯೫೧-೫೨ರಲ್ಲಿ ನಡೆದ ಮಹಾಚುನಾವಣೆಯಲ್ಲಿ ಮತಾಧಿಕಾರವಿದ್ದ ಸುಮಾರು ೧೭೫೦ ಲಕ್ಷ ಜನರಲ್ಲಿ ಸುಮಾರು ೪೫೦ ಲಕ್ಷ ಜನರು ತಮ್ಮ ಮತಗಳನ್ನು ಕೊಟ್ಟರು. ಆ ಸಮಯದಲ್ಲಿ ಹೆಚ್ಚು ಜನರಿಗೆ ಮತದಾನವೆಂಬುದು ಹೊಸದೆನಿಸಿತ್ತು. ಜನತೆಯಲ್ಲಿ ನಿರಕ್ಷರತೆ, ಕಷ್ಟದೆಸೆ ಇತ್ಯಾದಿಗಳಿದ್ದರೂ ಭಾರತದ ಜನತೆಯು ಮತನಿರ್ಣಯ ಪ್ರಕಾರವು ಜಗತ್ತನ್ನೇ ಅಚ್ಚರಿಗೊಳಿಸಿತು.

ಈ ಬಾರಿ, ಮತದಾರರ ಸಂಖ್ಯೆ ಹೆಚ್ಚಿದೆ. ಆದರ ಜೊತೆಗೆ ಜನತೆಯು ರಾಜಕೀಯ ಪ್ರಜ್ಞೆಯೂ ಗಮನಾರ್ಹವಾಗಿ ಹೆಚ್ಚಿದೆ. ಆದ್ದರಿಂದ ಈ ಸಲದ ಚುನಾವಣೆಯು ಕಳೆದ ಮಹಾಚುನಾವಣೆಗಿಂತಲೂ ಹೆಚ್ಚು ಯಶಸ್ವಿಯಾಗುವುದು ಸಹಜ.

ಮತದಾರರು ಯಾರು? ಅವರ ಅರ್ಹತೆಗಳೇನು? ಕಾನೂನಿನ ಪ್ರಕಾರ ಅವರು ಕೈಗೊಳ್ಳಬೇಕಾದ ಕರ್ತವ್ಯಗಳೇನು? ಕೈಗೊಳ್ಳಬಾರದ ಕೆಲಸಗಳಾವುವು? ನಮ್ಮ ಸಂವಿಧಾನದ ಪ್ರಕಾರ ೨೧ ವರ್ಷ ವಯಸ್ಸಿನ ಸ್ತ್ರೀ-ಪುರುಷರಿಗೆಲ್ಲ ಲೋಕಸಭೆ ಹಾಗೂ ವಿಧಾನ ಸಭೆಗೆ ಮತದೀಯರುವ ಅಧಿಕಾರವಿರುವುದು. ಆದರೆ, ಹರಚ್ಚೆರು, ಕಾನೂನಿನ ವಿರುದ್ಧ ಕಾರ್ಯ ಅಥವಾ ಮತದಾನ ಸಂಬಂಧ ಅಪರಾಧಗಳು ನ್ಯೆಸಗಿ ಸಜಾ ಅನುಭವಿಸಿದವರಿಗೆ ಮತಾಧಿಕಾರವಿರುವುದಿಲ್ಲ. ಆದರೆ ಮತದಾರರು ತಮ್ಮ ಹೆಸರು, ಸಂಬಂಧಪಟ್ಟ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿದ್ದರೆ ಮಾತ್ರ, ಮತದೀಯರಬಹುದು. ಅವರು ಯಾವ ಕ್ಷೇತ್ರದಲ್ಲಿ ವಾಸಿಸುತ್ತಿರುವರೊ ಆ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಅವರ ಹೆಸರು ದಾಖಲಾಗಿರುವುದು.

ಚುನಾವಣೆಗಳಿಗಾಗಿ ಪ್ರತಿಯೊಂದು ರಾಜ್ಯದಲ್ಲಿಯೂ ಚುನಾವಣಾ ಪಟ್ಟಿಯನ್ನು ಸರಿಪಡಿಸಿ ಪ್ರಕಟಿಸಲಾಗಿದೆ. ಮತದಾರರು ಮತ ನೀಡಬೇಕೆಂಬ ಒತ್ತಾಯವೇನಿಲ್ಲ. ಆದರೆ ಸಜವಾದ ನಾಗರಿಕನು ಮೂಲಭೂತ ಹಕ್ಕಾದ ಮತ ನೀಡುವುದನ್ನು ನೈತಿಕ ಹೊಣೆಯೆಂದು ಭಾವಿಸುವನು. ಮತದಾನ ಕೇಂದ್ರಗಳಲ್ಲಿ ಅವನ ಬೆಂಬಲವನ್ನು ಆಪೇಕ್ಷಿಸುವ ಪಕ್ಷಗಳ ಕಾರ್ಯನೀತಿ ಪುಸ್ತು, ಕಾರ್ಯಕ್ರಮಗಳ ಬಗೆಗೆ ಮತದಾರರು ಅನುಮತಿ ಅಥವಾ ಅನನುಮತಿಯನ್ನು ನೀಡುವ ವಿಕಲ್ಪ ಸಾಧನವೆಂದರೆ ಮತ.

ಲೋಕಸಭೆ ಮತ್ತು ರಾಜ್ಯಗಳ ವಿಧಾನ ಸಭೆಗಳಿಗೆ ಚುನಾವಣೆಗಳು ಏಕಕಾಲದಲ್ಲಿ ನಡೆಯುತ್ತವೆ. ಇದಕ್ಕಾಗಿ ದೇಶದಾದ್ಯಂತ ಸುಮಾರು ೨ ಲಕ್ಷ ಮತದಾನ ಕೇಂದ್ರಗಳನ್ನು ರಚಿಸಲಾಗುವುದು. ಮತದಾರರು ತಮ್ಮ ಮತವನ್ನು ನೀಡಲು, ಮತದಾನ ಕೇಂದ್ರಕ್ಕೆ ಬಹಳ ದೂರ ಹೋಗದಂತಹ ರೀತಿಯಲ್ಲಿ ಈ ಮತದಾನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಮತದಾನ ನಡೆಯುವ ಕಡೆಗಳಲ್ಲಿ ಮತದಾರರು ತಮಗನುಕೂಲವಾದಾಗ ಹೋಗಿ ಮತ ನೀಡುವುದಕ್ಕಾಗಿ ಆ ದಿನ ರಜೆ ನೀಡಲಾಗುವುದು. ಮತದಾರರು ತಮ್ಮ ಮತದಾನ ಕೇಂದ್ರಕ್ಕೆ ತಾವೇ ವಾಹನಗಳ ಏರ್ಪಾಟು ಮಾಡಿಕೊಂಡು ಹೋಗುವುದು ಒಳ್ಳೆಯದು. ಅಭ್ಯರ್ಥಿಯಾಗಲು ಅಥವಾ ಅವರ ಪಕ್ಷ ಅಥವಾ ಇನ್ನಾರೇ ಮತದಾನ ಏರ್ಪಾಡುವುದಕ್ಕಾಗಿ ವಾಹನಗಳನ್ನೊದಗಿಸುವುದು ಚುನಾವಣಾ ಕಾನೂನು ನಿಷೇಧಿಸಿರುವುದು. ಎರಡು ಸಂಸಾರವು ಒಟ್ಟು ಸೇರಿ ಹಣವನ್ನು ಕೊಟ್ಟರ ದಿದ್ದ ಕಕ್ಷಿದಲ್ಲಿ. ಒಂಬೇ ವಾಹನದಲ್ಲಿ ಹೋಗಕೂಡದು. ವ ತದಾರರು ಮತ್ತೊಬ್ಬ ಮತದಾರರಿಗೆ, ಅಥವಾ ಅವರ ಕುಟುಂಬಕ್ಕೆ ಕಮ್ಮ ವಾಹನ ಸೌಕರ್ಯವನ್ನು ಒದಗಿಸಬಾರದು.

ಚುನಾವಣಾ ಸಮಯದಲ್ಲಿ ಮತದಾರರು ಕೆಲವು ಕೃತ್ಯಗಳು ಕಾನೂನು ಬಾಹಿರವೆನಿಸುವುವು. ಮತದಾರರು ಈ ನಿಯಮಗಳನ್ನು ಪಾಲಿಸದೆ ಹೊರತು ಚುನಾವಣೆಯು ಸ್ವತಂತ್ರವಾಗಿಯೂ, ನಿಷ್ಪಕ್ಷಪಾತದಿಂದಲೂ ನಡೆಯಲಾರದು.

ಮೊದಲನೆಯದು, ಮತದಾರರು ಒಂಕ್ಕಿಂತ ಹೆಚ್ಚಿನ ಕಡೆಗಳಲ್ಲಿ ಹೆಸರನ್ನು ಸೇರಿಸಿ, ಮತದಾನ ಮಾಡಬಾರದು. ತನ್ನ ಅಮೂಲ್ಯ ಮತವನ್ನು ಮತ್ತೊಬ್ಬರಿಗಾದರೂ ಮಾರಿ ಬಿಡಬಾರದು. ಅದರಂತೆ, ಮತ್ತೊಬ್ಬ ಮತದಾರನನ್ನು ಇಂಥವರಿಗೆ ಅಥವಾ ಇಂಥ ಪಕ್ಷಕ್ಕೆ ಮತ ಕೊಡಿರೆಂದು ಹೇಳುವುದು ಅಪರಾಧವಾಗುವುದು. ಮತದಾನ ಕೇಂದ್ರದಲ್ಲಿ ಇನ್ನೊಬ್ಬರ ಹೆಸರಿನಲ್ಲಿ ಮತಕೊಡುವುದು, ತಾನೇ ಎರಡು ಸಾರಿ ಮತಕೊಡುವುದು ಅಪರಾಧ. ಅವುಗಳಿಗೆ ತೀವ್ರವಾದ ಶಿಕ್ಷೆ ವಿಧಿಸಲಾಗುವುದು. ಮತದಾರರು ತಾನು ಯಾರಿಗೆ ಮತವಿತ್ತರೆಂಬುದನ್ನು ಕೇಳಬಾರದು. ಮತದಾನದ ಗೋಪ್ಯತೆಯನ್ನು ರಕ್ಷಿಸುವ ಆದ್ಯತೆಗೆ ಮೂರು ತಿಂಗಳ ಸಾಧಾರಣ ಸಜೆಯನ್ನು ಅದಕ್ಕೆ ವಿಧಿಸಲಾಗುವುದು.

ಮತದೀಯರುವ ಸ್ಥಳದಲ್ಲಿ ಮತದಾರರು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳಬಾರದು. ಮತದಾನ ಪೆಟ್ಟಿಗೆಗಳನ್ನು ಇಟ್ಟಿರುವ ವ್ಯವಸ್ಥೆಯನ್ನು ಬದಲಾಯಿಸಬಾರದು. ಪೆಟ್ಟಿಗೆಯು ಮೇಲೆ ಹಚ್ಚಿರುವ ಚುನಾವಣಾ ಚಿಹ್ನೆಯನ್ನು ಕೆಡಿಸಬಾರದು.

ಚುನಾವಣಾ 'ಟೂತ್'ನಿಂದ ಮತಪತ್ರ (ಬ್ಯಾಲೆಟ್ ಪೇಪರ್) ವನ್ನು ತೆಗೆಯಕೂಡದು. ಅದನ್ನು ಯಾವುದೇ ರೀತಿಯಲ್ಲಿ ಕೆಡಿಸಬಾರದು. ಈ ಅಪರಾಧಕ್ಕೆ ಒಂದು ವರ್ಷ ಸಜ ಅಥವಾ ೫೦೦ ರೂಗಳ ದಂಡ. ಯಾವುದೇ ಮತಪತ್ರವನ್ನು ತೆಗೆಯಲು ನೆವಾಗುವುದೂ ಸಹ ಅಪರಾಧವೇ.

ಈ ಅಪರಾಧಗಳನ್ನು ಮಾಡಿದವರು, ಕಾನೂನಿನ ರೀತ್ಯಾ ಶಿಕ್ಷೆಗೊಳಗಾಗುವುದೇ ಅಲ್ಲದೆ ಮುಂದಿನ ಚುನಾವಣೆಗಳಲ್ಲಿ ಮತದಾನ ಮಾಡುವ ಹಕ್ಕನ್ನು ಕಳೆದುಕೊಳ್ಳುವರು. ಅವರ ಹೆಸರನ್ನು ಮತದಾರರ ಪಟ್ಟಿಯಿಂದ ಹೊಡೆದುಹಾಕಲಾಗುವುದು.

ಮಹಿಳೆಯರು ಮತ್ತು ಅಶಕ್ತ ಮತದಾರರಿಗೆ ಚುನಾವಣೆಯ ಸೌಕರ್ಯಗಳು

ಭಾರತದ ಚುನಾವಣಾ ಸಂಬಂಧ ಕಾನೂನನ್ನು, ಅಕ್ಷರಸ್ಥರು, ಅನಕ್ಷರಸ್ಥರು, ಆರೋಗ್ಯವಂತರು, ಅಥವಾ ಅಂಗವಿಕಲರು ಈ ಎಲ್ಲ ಮತದಾರರೂ ತಮ್ಮ ಮತದೀಯುವುದಕ್ಕೆ ಅನುಕೂಲವಾಗಿಸುವಂತೆ ರಚಿಸಲಾಗಿದೆ. ಅದಲ್ಲದೆ, ಮತದಾರರಲ್ಲಿ ಅರ್ಧದಷ್ಟು ಮಂದಿ ಮಹಿಳೆಯರಾಗಿರುವುದರಿಂದ ಅವರಿಗೆ ಮತದೀಯಲು ಸುಲಭವಾಗುವಂತೆ ಹಲವು ವಿಶೇಷ ಸೌಲಭ್ಯಗಳನ್ನು ಮಾಡಿಕೊಡಲಾಗಿದೆ.

ಅಶಕ್ತ ಅಥವಾ ನಿರಕ್ಷರಸ್ಥ ಮತದಾರರು ತಮ್ಮ ಮತವನ್ನು ಆಂಟೆಯ ಮೂಲಕ ಕೊಡಲಪೇಕ್ಷಿಸಿದರೆ, ಅದಕ್ಕಾಗಿ ಚುನಾವಣಾ ಕಾನೂನಿನಲ್ಲಿ ವಿಶೇಷ ನಿಯಮಗಳನ್ನು ರಚಿಸಲಾಗಿದೆ. ಅಂತಹ ಮತದಾರರು ಅಂಚೆಯ ಮೂಲಕ ಕಳುಹಿಸುವ ಮತ ಪತ್ರಕ್ಕೆ ನ್ಯಾಯಾಧಿಸ್ಟ್ರೇಟರೇ ಸಾಕ್ಷ (ಅಟೆಸ್ಟ್) ಹಾಕಬಹುದು.

ಸ್ಥಾನಬದ್ಧತೆಯಲ್ಲಿರುವ ಮತದಾರರಿಗೆ ವಿಶೇಷ ಸೌಲಭ್ಯವನ್ನು ಕಲ್ಪಿಸಿಕೊಡಲಾಗಿದೆ. ಅವರು, ಅಂಚೆಯ ಮೂಲಕ, ಮತ ಪತ್ರವನ್ನು ನೀಡಬಹುದು. ಸೆರೆಮನೆಯ ಮುಖ್ಯಾಧಿಕಾರಿ ಅಥವಾ ಸ್ನಾನಬದ್ಧ ಶಿಬಿರದ ಮುಖಂಡರು ಅವರ ಮತ ಪತ್ರಕ್ಕೆ 'ಸಾಕ್ಷ್ಯ' ವನ್ನೀಯುವರು

ಉಮೇದುವಾರರಿಗೆ ಚುನಾವಣಾ ಚಿಹ್ನೆಗಳನ್ನು ನೀಡುವುದರ ಮೂಲಕ ನಿರಕ್ಷರಸ್ಥ ಮತದಾರರ ತೊಂದರೆಯನ್ನು ಪರಿಹರಿಸಲಾಗಿದೆ. ಈ ಪದ್ಧತಿಯು ಅಕ್ಷರಸ್ಥ ಮತದಾರರು ಮತ ಕೊಡುವ ಸಮಯದಲ್ಲಿ ಆಗಬಹುದಾದ ತಪ್ಪುಗಳನ್ನು ತಪ್ಪಿಸಿದೆ. ತಾವು ಮತ ನೀಡಲು ಆಪೇಕ್ಷಿಸುವ ಉಮೇದುವಾರರ 'ಮತದಾನ ಪೆಟ್ಟಿಗೆ'ಯನ್ನು ಗುರುತು ಹಿಡಿಯಲು ತನ್ನ ಮತವನ್ನು ಗೋಪ್ಯ ರೀತಿಯಲ್ಲಿ ತನ್ನ ಉಮೇದುವಾರರಿಗೆ ನೀಡಲು ಇದು ಸಹಾಯಕವಾಗುವುದು.

ಮಹಿಳಾ ಮತದಾರರಿಗೂ ಸಹಜೊಂದರೆಯನ್ನು ತಪ್ಪಿಸಲು ಹಲವು ವಿಶೇಷ ವ್ಯವಸ್ಥೆಗಳನ್ನು ಮಾಡಲಾಗಿದೆ. ಘೋಷಾಪದ್ಧತಿಯು ಈಗಲೂ ಜಾರಿಯಲ್ಲಿರುವ ಕ್ಷೇತ್ರಗಳಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕವಾದ ಮತದಾನ ಕೇಂದ್ರಗಳನ್ನು, ಸಾಧ್ಯವಾದ ಕಡೆಗಳಲ್ಲಿ ಸ್ಥಾಪಿಸಲಾಗುತ್ತಿದೆ. ಕಳೆದ ಮಹಾಚುನಾವಣೆಗಳಲ್ಲಿಯೂ ಸಹ ಸುಮಾರು ೨೬೦೦೦ ಮತದಾನ ಕೇಂದ್ರಗಳನ್ನು ಮಹಿಳೆಯರಿಗಾಗಿ ವಿಂಗಡಿಸಲಾಗಿತ್ತು. ಒಂದೇ ಮತದಾನ ಕೇಂದ್ರದಲ್ಲಿ ಮಹಿಳೆಯರೂ ಹಾಗೂ ಪುರುಷರಿಬ್ಬರೂ ಮತದಾನವೀಯಬೇಕಾದಾಗ, ಅವರನ್ನು ಪರ್ಯಾಯ ತಂತಿಗಳಲ್ಲಿ ಮತದೀಯಲು ಬಿಡುವಂತೆ ಸಂಬಂಧಪಟ್ಟ ಚುನಾವಣಾ ಅಧಿಕಾರಿಗಳಿಗೆ ತಿಳಿಸಲಾಗಿದೆ. ಅದರ ಜೊತೆಗೆ ಸಾಧ್ಯವಾದ ಕಡೆ ಮತದಾನ ಕೇಂದ್ರಗಳಲ್ಲಿ, ಮಹಿಳಾ ಮತದಾರರಿಗೆ ಸಹಾಯ ನೀಡಲು ಮಹಿಳೆಯರನ್ನೇ ನೇಮಿಸಬೇಕೆಂದು ಚುನಾವಣಾಧಿಕಾರಿಗಳಿಗೆ ಸೂಚಿಸಲಾಗಿದೆ.

ಅಶಕ್ತತೆಯಿಂದ, ಸಂವಿಧಾನದ ಸ್ಪರ್ಶಕಾರ, ನಾಗರಿಕ ವರ್ಗಕ್ಕೆ ಕುಂದು ಬರುವುದಿಲ್ಲ. ಆದ್ದರಿಂದ ಅಶಕ್ತರ ಕಡೆಗೂ ಗಮನವೀಯಲಾಗುವುದು ಅಂಧತೆ ಮತ್ತು ಅಂಗವಿಕಲತೆ, ಮತ ನೀಡುವುದಕ್ಕೆ ಅಡ್ಡಿಯಾದಲ್ಲ. ಚುನಾವಣಾಧಿಕಾರಿಯು ಅವರ ಜೊತೆಯಲ್ಲಿ ಮತದಾನ ಪೆಟ್ಟಿಗೆಯನ್ನಿಟ್ಟಿರುವ ಸ್ಥಳಕ್ಕೆ ಹೋಗಿ, ಅವರು ಗೋಪ್ಯವಾಗಿ ಮತ ನೀಡುವುದಕ್ಕೆ ಸಹಾಯ ಮಾಡಬೇಕು. ಅಂತಹ ಸಂದರ್ಭದಲ್ಲಿ ಚುನಾವಣಾಧಿಕಾರಿಗಳು ಅವರು ಮತ ನೀಡಬೇಕೆಂದಿರುವ ಉಮೇದುವಾರರ ಹೆಸರನ್ನು ಗೋಪ್ಯವಾಗಿ ತಿಳಿದು, ಅವರು ಕೂಡಿಸಿದ ಉಮೇದುವಾರನ ಪೆಟ್ಟಿಗೆಗೆ ಮತ ನೀಡಬೇಕು.

TENDER NOTICE

Sealed tenders are invited by the undersigned from the registered contractors up to 4 P. M. on 13—3—1957 for the work shown below. Tenderers can peruse the conditions and Estimate in the office of the undersigned.

Name of Work	Amount of Estimate	Earnest money deposit
Constructing two Shop Buildings Perdoor,	Rs. 2850/-	Rs. 75/-

Date 22-2-57.

K. B. SHETTY.
Executive Officer,
Sri Ananthapadmanabha Temple, Perdur.

NAVAYUGA

Popular Kannada Weekly

Founder:—

A. B. SHETTY, *M. L .A.*

Former Minister for Public Health, Govt. of Madras.

At Present Minister for Health Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೬	೨೮–೨–೧೯೬೭	೨೫

ಮತದಾರರೇ, ಕಿವಿಗೊಡಿರಿ!!

ನಮ್ಮ ಜಿಲ್ಲೆಯ ಮತದಾರರು ಪ್ರಧಾನಿ ಶ್ರೀ ನೆಹರೂರವರ ಉಪದೇಶಾತ್ಮಕ ವಾಣಿಯನ್ನು ಕಿವಿಗೊಟ್ಟು ಆಲಿಸಿದ್ದಾರೆಂದು ನಾವು ನಂಬುತ್ತೇವೆ. ಜಿಲ್ಲೆಯ ಮುಖ್ಯ ಪಟ್ಟಣವಾದ ಮಂಗಳೂರಿನಲ್ಲಿ ಇದೇ ಸೋಮವಾರ ಸಂಜೆ ಪ್ರಧಾನಿಯವರು ನೂರು ನಿಮಿಷಗಳಷ್ಟು ದೀರ್ಘಕಾಲ ಭಾಷಣವನ್ನು ಮಾಡಿ, ದೇಶದ ಏಳಿಗೆಯನ್ನು ಸಾಧಿಸಬೇಕಾದರೆ ನಾವು ಯಾವಬಗೆಯ ಮನೋಭಾವವನ್ನು ಹೊಂದಿರಬೇಕಾಗಿದೆ ಎಂದು ಮನಮುಟ್ಟುವಂತೆ ವಿವರಿಸಿದ್ದರು. ಆನುಷಂಗಿಕವಾಗಿ ಅವರು ಈಗ ನಡೆಯುತ್ತಿರುವ ಮಹಾ ಚುನಾವಣೆಯಲ್ಲಿ ಮತದಾರರ ಕರ್ತವ್ಯವೇನೆಂಬುದನ್ನೂ ತಿಳಿಸಿ ಹೇಳಿದ್ದರು. ಕಾಂಗ್ರೆಸಿನ ವಿಕಲ್ಪವೇ ಇಲ್ಲದ ರಾಷ್ಟ್ರೀಯ ಮುಖಂಡನೆಂಬ ನೆಲೆಯಿಂದ ಕಾಂಗ್ರೆಸಿಗೇ ಏಕೆ ಮತಕೊಡಬೇಕಾಗಿದೆ ಎಂದು ಸಹ ಅವರು ಸ್ಪಷ್ಟಪಡಿಸಿದ್ದರು. ಶಾಂತಿ, ಸುಭಿಕ್ಷೆ ಮತ್ತು ಸರ್ವತೋಮುಖ ಅಭಿವೃದ್ಧಿಯ ಜೀವನವನ್ನು ಜನತೆಗೆ ತಂದುಕೊಡಬಲ್ಲ ಸುಭದ್ರವಾದ ಸರಕಾರವು ಬೇಕಾಗಿದ್ದರೆ – ಅದು ಬೇರೆಂಬುದಂತೂ ನಿರ್ವಿವಾದ—ಎಲ್ಲ ಮತದಾರರೂ ಕಾಂಗ್ರೆಸಿಗೆನೇ ಮತವೀಯುವಷ್ಟು ಬುದ್ಧಿವಂತಿಕೆಯಿಂದ ನಡೆದುಕೊಳ್ಳಬೇಕೆಂದು ನೆಹರು ಉಪದೇಶಿಸಿದರು. ಅವರು ಕಾಂಗ್ರೆಸಿನ ಪೂರ್ವ ಚರಿತ್ರೆಯನ್ನು ಪ್ರಸ್ತಾಪಿಸುತ್ತಾ ಜನರ ಸ್ವೀತ್ಯಾದರಗಳನ್ನು ಸಂಪಾದಿಸಿದ ಪಕ್ಷವು ಭಾರತದಲ್ಲಿ ಇಂದು ಬೇರೆ ಯಾವುದೂ ಇಲ್ಲವೆಂಬುದನ್ನು ನೆನಪಿಗೆ ತಂದುಕೊಟ್ಟರು. ಎರಡು ತಲೆಮಾರುಗಳಿಗಿಂತಲೂ ದೀರ್ಘವಾದ ಪವಿತ್ರವೂ ಚಿರಸ್ಮರಣೀಯವೂ ಆದ ಇತಿಹಾಸವಿರುವ ಪಕ್ಷವೆಂದರೆ ಇಂದಿನ ಭಾರತದಲ್ಲಿ ಕಾಂಗ್ರೆಸ್ಸೊಂದೇ–ಅದಕ್ಕೆರುವ ಅನುಭವ, ಆದಕ್ಕೆರುವಷ್ಟು ದೇಶಹಿತದ ಚಿಂತೆ, ಆದರಷ್ಟು ಉದಾರವಾದ ಮತ್ತು ಉದಾತ್ತವಾದ ಧ್ಯೇಯ ಧೋರಣೆ--ಬೇರೆ ಯಾವ ಪಕ್ಷಕ್ಕೂ ಇಲ್ಲವೆಂದು ನೆಹರು ಉದಾಹರಣೆಗಳಮೂಲಕ ಜನರಿಗೆ ಆರ್ಥವಾಗುವಂತೆ ಹೇಳಿದರು. ಮೊದಲನೆಯದಾಗಿ, ನೆಹರೂರ ಮುಂದಾಳುತನದಲ್ಲಿ ಕಾಂಗ್ರೆಸಿನ ನೇತೃತ್ವದಲ್ಲಿ ಭಾರತವು ಪಂಚವಾರ್ಷಿಕ ಯೋಜನೆಗಳನ್ನು ಕೈಗೊಂಡು, ಅದ್ಭುತವಾದಬಭಿವೃದ್ಧಿ ಕಾರ್ಯಗಳನ್ನು ಮಾಡಿರುತ್ತದೆ. ಎರಡನೇ ಯೋಜನೆಯು ಮೊದಲನೆಯದರ ಇಮ್ಮಡಿ ವೆಚ್ಚವನ್ನು ಒಳಗೊಳ್ಳುವಷ್ಟು ದೊಡ್ಡದಿದೆಯಲ್ಲದೆ, ನಾಲ್ಕಡಿ ಪ್ರಮಾಣದಲ್ಲಿ ಕೃಷಿ ಮತ್ತು ಕೈಗಾರಿಕೆಗಳ ಅಭಿವೃದ್ಧಿಯನ್ನು ಸಾಧಿಸಬೇಕಾಗಿದೆ. ಇಡೀ ದೇಶದ ಮೂಲ ಭೂತ ಅವಶ್ಯಕತೆಗಳ ಪೂರೈಕೆಗೆ ಬುನಾದಿಯನ್ನು ಹಾಕಬಲ್ಲ ರೀತಿಯಲ್ಲಿದೆ. ಪ್ರತಿಪಕ್ಷದವರು ಈ ಯೋಜನೆಗಳಂತೆ ನಡೆಯುವ ಕಾರ್ಯಗಳನ್ನು ಸುಳ್ಳೆಂದು ಸಾಧಿಸಲುರವ ಕರ್ಮಕ್ಕೆ, ಇದೇನು ಮಹಾ? ನಮ್ಮ ಅಂದರೆ ಜನತೆಯ ಹಣದಿಂದ ಸರಕಾರ ಈ ಕೆಲಸ ಮಾಡಿದೆ. ಮನೆಯ ಯಜಮಾನನು ಮನೆಯವರ್ತೆಯನ್ನು ನಡೆಸಲಿಕ್ಕಾಗಿ ಅಕ್ಕಿ, ಬೇಳೆ, ವಸ್ತ್ರ, ಕಾಯಿಗಳನ್ನು ತಂದು ಹಾಕಿದರೆ ಅದು ಅವನ ಕರ್ತವ್ಯ. ಅದಕ್ಕಾಗಿ ಹೆಗ್ಗಳಿಕೆ ಪಡುವುದೇನು?" ಎನ್ನುವ ಕುತ್ಸಿತ ಟೀಕೆಗೆ ಇಳಿದಿರುತ್ತವೆ. ಪ್ರತಿಪಕ್ಷಗಳಿಗೆ ಬೆಂಬಲ ಕೋರಿ ಹೀಗೆನ್ನುವ ಮಹಾನುಭಾವರ ಅನುಭವಕ್ಕೆ, ಕುಟುಂಬದ ಯಜಮಾನನಾಗಿದ್ದೂ ಕರ್ತವ್ಯ ನಿರ್ವಹಣೆಗೆ ತಪ್ಪುವ, ಮನೆಯವರಿಗೆ ಅಕ್ಕಿ, ಬೇಳೆ, ವಸ್ತ್ರ, ಕಾಯಿಗಳನ್ನು ಪೂರೈಸದೆ ದ್ರೋಹ ಬಗೆಯುವ ಕೆಲವು ಯಜಮಾನರೂ ಇದ್ದಾರೆಂಬ ವಿಷಯ ಬಂದಿರಬಹುದೆಂದು ನಾವು ಭಾವಿಸುತ್ತೇವೆ; ಒಂದೊಮ್ಮೆ ಅವರ ಅನುಭವವು ಹೀಗಿಲ್ಲದಿದ್ದರೂ, ಅಂಥ ಅನುಭವವಾವ ಜನರು ಅನೇಕರಿದ್ದಾರೆಂಬುದು ಸುಳ್ಳಲ್ಲ. ಹೀಗೆ ಕರ್ತವ್ಯ ನಿರ್ವಹಣೆಗೂ ತಪ್ಪುವ ಜನರಿದ್ದಾರೆಂದ ಮೇಲೆ, ಕರ್ತವ್ಯದಕ್ಷತೆಯನ್ನು ವ್ಯಕ್ತಪಡಿಸುವಷ್ಟು ಸ್ಪೃತಿಕ ಯೋಗ್ಯತೆಯುಳ್ಳವರನ್ನು ನಾವು ಗೌರವಿಸಲೇ ಬೇಕು – ಕಾಂಗ್ರೆಸ್ಸು ಇಂಥ ಗೌರವಕ್ಕೆ ಅರ್ಹವಾಗಿದೆ ಎಂಬುದನ್ನು ಪ್ರತಿ ಪಕ್ಷೀಯರೇ ತಮ್ಮ (ಅಹ) ಪ್ರಜಾರದ ಮೂಲಕ ಕೇಳಿಕೊಂಡಂತಾಗಿದೆ. ತನ್ನನ್ನು ಕುಟುಂಬದ ಯಜಮಾನ ಸ್ಥಾನದಲ್ಲಿರಿಸಿದುದಕ್ಕೆ ಪ್ರತಿಯಾಗಿ ಕಾಂಗ್ರೆಸು ಕಳೆದ ಹತ್ತು ವರ್ಷಗಳಲ್ಲಿ ಯಜಮಾನನ ಕರ್ತವ್ಯಗಳಿಗೆ ಚ್ಯುತಿ ಬಾರದಂತೆ ನಡೆದುಕೊಂಡಿರುವ ವಿಷಯವೇ ಕಾಂಗ್ರೆಸಿನ ಹೆಗ್ಗಳಿಕೆ. ಮತದಾರ ಮಹಾಶಯರು ಈ ಸೂಕ್ಷ್ಮ ವಿಮರ್ಶೆಯ ಸ್ವಾರಸ್ಯವನ್ನು ತಿಳಿದುಕೊಂಡು ಕಾಂಗ್ರೆಸ್ಸನ್ನು ಬೆಂಬಲಿಸಬೇಕೆಂದು ನಾವು ಪುನಃ ಪ್ರಾರ್ಥಿಸಿಕೊಳ್ಳುತ್ತೇವೆ. ಇನ್ನು ಅಂತರಾಷ್ಟ್ರೀಯ ಕ್ಷೇತ್ರದಲ್ಲಿ ಕಾಂಗ್ರೆಸು ವಹಿಸಿದ ನಿಲುವಿನ ಮೌಲ್ಯವನ್ನು ನೋಡಿದರೆ—ಕಾಶ್ಮೀರದಂತಹ ಜ್ವಲಂತ ಪ್ರಶ್ನೆಯಲ್ಲಿ ಎಲ್ಲ ಪಕ್ಷಗಳೂ ಸರಕಾರಕ್ಕೆ "ನಮ್ಮ ಬೆಂಬಲವುಂಟು; ಕಾಶ್ಮೀರದ ಮೇಲಾಗಲೀ ಭಾರತದ ಮೇಲಾಗಲೀ ಪರಕೀಯ ಆಕ್ರಮಣ ನಡೆದಿದ್ದಾರೆ ನಾನೆಲ್ಲರೂ ಸರಕಾರಕ್ಕೆ ಸಹಕಾರವನ್ನು ಕೊಟ್ಟು ಸ್ವಾತಂತ್ರ್ಯ ರಕ್ಷಣೆಗೆ ಹೆಣಗುತ್ತೇವೆ" ಎಂದಿರುವುದನ್ನು ಸ್ಮರಿಸಬಹುದು. ಕಾಶ್ಮೀರವು "ರಾಷ್ಟ್ರೀಯ" ಪ್ರಶ್ನೆಯಾಗಿದೆ ಎನ್ನುವುದು ನಿಜ; ಆದನ್ನು ಚುನಾವಣೆಯ "ಲಾಭ"ಕ್ಕಾಗಿ ಯಾವ ಪಕ್ಷದವರೂ ಬಳಸಿಕೊಳ್ಳಬೇಕಾದುದಿಲ್ಲ ಎನ್ನುವುದೂ ಸತ್ಯ—ಆದಾಗ್ಯೂ ಕಾಶ್ಮೀರ ಪ್ರಶ್ನೆಯಲ್ಲಿ ಭಾರತದ ಧೋರಣೆಯನ್ನು ರೂಪಿಸಿದ ಶ್ರೇಯಸ್ಸು ಭಾರತ ಸರಕಾರಕ್ಕೆ – ಅಂದರೆ ಕಾಂಗ್ರೆಸಿನ ಧುರೀಣತ್ವಕ್ಕೆ— ಸಲ್ಲುತ್ತದೆ. ಕಾಂಗ್ರೆಸು ಅನುಮೋದಿಸಿದ ಈ ನೀತಿಗೆ ಸಕಲ ಪಕ್ಷಗಳಬದೂ ಬೆಂಬಲವಿದೆ ಎಂದಾದ ಮೇಲೆ, ಕಾಂಗ್ರೆಸಿನ ವಿದೇಶ ನೀತಿಯಲ್ಲಿ ಯಾವುದರಿಂದ ವಿಮುಖರಾಗುವ ಪ್ರಶ್ನೆ ಏಳುವುದಿಲ್ಲ. ಇದರ ಅರ್ಥವೇನೆಂದರೆ ಕಾಂಗ್ರೆಸಿಗೆ ವಿದೇಶ ಧೋರಣೆಯು ಮಟ್ಟಿಗೂ ನಮ್ಮ ಬೆಂಬಲವನ್ನು ವ್ಯಕ್ತಪಡಿಸುವುದು ಮತದಾರರಾದವರ ಕರ್ತವ್ಯ. ಕೆಲವು ಸುಧಾರಣೆಗಳನ್ನು ಇನ್ನೂ ಮಾಡಿಲ್ಲ—ಎನ್ನುವುದೊಂದು ಟೀಕೆ ಇದೆ. ಇನ್ನು ನೂರುವರ್ಷಗಳು ಕಳೆದರೂ, ಜನರ ಅವಶ್ಯಕತೆಗಳಾಗಲೀ ಸುಧಾರಣೆಯ ಅವಕಾಶವಾಗಲೀ ಮುಗಿದು ಹೋದ ವೆಂದಾಗದು. ಅಮೇರಿಕದಂತಹ ಸಮೃದ್ಧ ದೇಶವನ್ನು ನೋಡಿದರೆಸಾಕು—ಇನ್ನೂ ಅನೇಕ ಕೆಲಸಗಳು ಆಗಬೇಕಾಗಿವೆ ಎಂದು ಅಲ್ಲಿನಜನರು ಹೇಳುತ್ತಿರುವುದನ್ನು ಕಾಣಬಹುದು. ಆದುದರಿಂದ ಮಾಡಿರುವ ಕೆಲಸಗಳ ಪಟ್ಟಿ ಧೀರ್ಘವಾಗಿರುವುದೇ ಕಾಂಗ್ರೆಸನ್ನು ಬೆಟ್ಟು, ಬೇರೆ ಪಕ್ಷಗಳಿಗೆ ಮತಕೊಡಲು ಸಬಲ ಕಾರಣವಾಗಲಾರದು. ಕಾಂಗ್ರೆಸ್ಸು ಸಾಧಿಸಿ ತೋರಿಸಿರುವ ಕೆಲಸಗಳು ಯುದ್ಧಧ್ವಸ್ತವಾದ ರಾಷ್ಟ್ರಗಳಲ್ಲಿ ನಡೆದಿರುವ ಪುನರಾಜನೆಯ ವೇಗಕ್ಕೆ ಯಾವ ರೀತಿಯಲ್ಲೂ ಕಡಿಮೆ ಇಲ್ಲ. ಯುದ್ಧಧ್ವಸ್ತವಾದ ರಾಷ್ಟ್ರಗಳ ಜನರ ವಿಕ್ಷೇ, ಯೋಗ್ಯತೆ, ಅನುಭವ ಪಕ್ವತೆ ಮತ್ತು ರಾಷ್ಟ್ರಾಭಿಮಾನಗಳು ಭಾರತದಲ್ಲಿರುವ ದಕ್ಕಿಂತ ಎಷ್ಟೋ ಉನ್ನತ ಮಟ್ಟದಲ್ಲಿವೆ ಎಂಬುದನ್ನು ನೆನೆದರಾದರೆ ಕಾಂಗ್ರೆಸು ಸಂಸ್ಥೆಯು ಭಾರತದಲ್ಲಿ ತನ್ನ ಧ್ಯೇಯ ಧೋರಣೆಗಳನ್ನು ಸರಕಾರಿ ಮಾಧ್ಯಮದ ಮೂಲಕ – ಜನರಿಗೆ ಹಿಂದೆ ನೀಡಿದ ಭಾಷೆಯಂತೆ–ರೂಪಿಸಿರುವುದು ಪ್ರಶಂಸಾರ್ಹವಾದ ಪ್ರಗತಿಯೆಂದೇ ಹೇಳಬೇಕಾಗುತ್ತದೆ. ಇದನ್ನು ಸಾಧಿಸಿದ್ದಾದರೂ ಹೇಗೆ? ಅಚ್ಚ ಪ್ರಜಾಸ್ಪಭುತ್ವವಾದಿ ಪದ್ಧತಿಯ ಮೂಲಕ! ಬೃಹತ್ ದೇಶವು ಮೂವತ್ತು ವರ್ಷಗಳಲ್ಲಿಯೇ ಸಮೃದ್ಧಿಯನ್ನು ಹೊರಬರುವುದು—ಅದರೆ ಅಲ್ಲಿ ಹಿಂಸೆಯ ಬಲದಿಂದ, ಕಡ್ಡಾಯ ಮತ್ತು ಒತ್ತಾಯದ ಕ್ರಮಗಳಿಂದ ಜನರನ್ನು ಕೆಲಸಕ್ಕೆ ಹಚ್ಚಿ ರಾಷ್ಟ್ರದ ಸಂಪತ್ತನ್ನು ಹೆಚ್ಚಿಸಲಾಗುತ್ತದೆ. ಅಲ್ಲಿ ಪ್ರಜಾಸ್ಪಭುತ್ವವಿಲ್ಲ; ಚೀನದಲ್ಲೂ ಪ್ರಜಾಸ್ಪಭುತ್ವವಿಲ್ಲ—ಪಕ್ಷ ಪ್ರತಿಪಕ್ಷಗಳೆಂಬುದಿಲ್ಲ. ಕಮ್ಯುನಿಸಂ ತತ್ವವನ್ನು ಅವರುಅನುಸರಿಸುತ್ತಿದ್ದಾರೆ – ಅಲ್ಲಿಕಮ್ಯುನಿಸ್ಟರಲ್ಲದೆ ಯಾರೂ ಬೇರೆಪಕ್ಷದವರೂ ಇರುವುದಿಲ್ಲ. ಸರಕಾರ ಬೇಗೆ ಪಕ್ಷಗಳನ್ನು ತಲೆಎತ್ತಲಿಕ್ಕೆ ಬಿಡದೆ, ಬಹಿಷ್ಕಾರವನ್ನು ಹಾಕಿರುತ್ತದೆ! ಕಮ್ಯುನಿಸಂ ಪದ್ಧತಿಯಂತೆ ನಡೆಯುವೆವೆನ್ನುವ ಕಮ್ಯುನಿಸ್ಟರಿಗೆ ಬೆಂಬಲವನ್ನಿತ್ತುದಾದರೆ, ನಾಳೆ ನಮ್ಮ ದೇಶದಲ್ಲೂ ಪ್ರಜಾಸ್ಪಭುತ್ವವನ್ನು ನಿರ್ನಾಮಗೊಂಡು ಸರ್ವಾಧಿಕಾರ ಸ್ಥಾಪನೆಗೊಂಡೀತು! ಹೇಗಾದರೂ ಮಾಡಿ ಅಧಿಕಾರ ಸ್ಥಾನಕ್ಕೆ ಬರಬೇಕೆಂಬ ಒಂದೇ ಉದ್ದೇಶದಿಂದ ನಮ್ಮ ಕಮ್ಯುನಿಸ್ಟರು ಪ್ರಜಾಕರ್ತೃತ್ವಕ್ಕಾಗಿ ನಡೆಯುವ ಚುನಾವಣೆಗಳಲ್ಲಿ ಸ್ಪರ್ಧಿಸಿ, ಮತದಾರರೊಡನೆ ಮತಯಾಚನೆ ಮಾಡುತ್ತಿದ್ದಾರೆ. ಒಮ್ಮೆಗೆ ಈ ಕಮ್ಯುನಿಸ್ಟರನ್ನೇ ಬಹುಮತವಾಯಿತೆಂದರೆ, ವತ್ತೆ ನಮ್ಮ ಘಟನೆಗೆ ತಿದ್ದುಪಡಿಮಾಡಿಯೋ, ಘಟನೆಯನ್ನೆ ರದ್ದುಪಡಿಸಿಯೋ–ಸರ್ವಾಧಿಕಾರವನ್ನು ಹೇರಿ ಪ್ರಜಾಸ್ಪಭುತ್ವವನ್ನು ಕಮ್ಯುನಿಸ್ಟರು ಜೀವಸಲಿಕ್ಕಿಲ್ಲ. ಆದುದರಿಂದ ಕಮ್ಯುನಿಸ್ಟರಿಗೆ ಕೊಡುವ ಪ್ರತಿಯೊಂದೂ ಮತವು ನಮ್ಮ ಸಮಾಧಿಯನ್ನು ನಾವೇ ಕಟ್ಟಿಕೊಳ್ಳಲು ಕೂಡ ಹಾಕಿದ ಇಟ್ಟಿಗೆಯಂತಿದೆ ಎಂಬುದನ್ನು ಮರೆಯಬಾರದು. ಎಷ್ಟ ಮಾತ್ರಕ್ಕೂ ಕಮ್ಯುನಿಸ್ಟರನ್ನು ನಾವಾ ಬೆಂಬಲಿಸಬಾರದು. ಪ್ರಜಾಪ್ರಭುತ್ವದಲ್ಲಿ ಶ್ರದ್ಧೆಯುಳ್ಳ ನಾವು ಅವರಿಗೂ ತಮ್ಮ ಅಭಿಪ್ರಾಯ ಪ್ರಕಟಣೆಗೆ ಅವಕಾಶವನ್ನು ಕೊಡುವಷ್ಟು ಉದಾರಿಗಳಾಗಿದ್ದೇವೆ. ಆದರೆ, ಅವರ ಅಭಿಪ್ರಾಯಗಳಿಗೆ ಮಾರುಹೋಗುವಂತಹ ದೌರ್ಬಲ್ಯ ನಮ್ಮಲ್ಲಾಗಬಾರದು. ನೆಹರು ಇದನ್ನೆ ಮಂಗಳೂರಿನಲ್ಲಿ ಒತ್ತಿ ಹೇಳಿದ್ದಾರೆ. ಅವರು ಪ್ರಜಾಸಮಾಜವಾದಿ ಪಕ್ಷದ ಬಗ್ಗೆಯೂ ಕೆಲವು ಮಾತುಗಳನ್ನು ಆಡಿದರು. ಏನೆಂದರೆ, ಬೇರೆ ಪಕ್ಷಗಳೊಡನೆ ಸ್ನೇಹವನ್ನು ಈ ಪ್ರಜಾಸಮಾಜವಾದಿಗಳು ಬೆಳೆಸಿಕೊಂಡಿದ್ದಾರೆ, ಎಂದು. ತಮ್ಮ ಸ್ವಂತ ಪಕ್ಷದ ಪ್ರತಿಷ್ಠೆ ಬತ್ತು ಯೋಗ್ಯತೆಗಳ ಬಲದಲ್ಲಿ ನಿಂತಿರುವಷ್ಟು ಆತ್ಮವಿಶ್ವಾಸವಿಲ್ಲದೆ ಬೇರೆ ಪಕ್ಷಗಳ ಬೆಂಬಲದ ಊರುಗೋಲನ್ನಾಧರಿಸಿ ಚುನಾವಣೆಗೆ ನಿಂತಿರುವ ಪ್ರಜಾ ಸಮಾಜವಾದಿಗಳ ದಡ್ಡತನಕ್ಕೆ ಮತದಾರರೆಂದೂ ಮೆರುಗುಕೊಡದು. ಜಾತೀಯ ವಿಷಯ ಧೂರತದ ಸ್ವಾತಂತ್ರ್ಯಕ್ಕೆ ಬಹಳ ವಿಧದಲ್ಲಿ ಆತಂಕವನ್ನುಂಟುಮಾಡಿತು; ಬೇಗನೆ ದೊರೆಯಬಹುದಾಗಿದ್ದ ಸ್ವಾತಂತ್ರ್ಯವು ೧೯೪೭ರವರೆಗೆ ತಡವಾಗಿ ಸಿಗುವಂತೆ, ಈ ಉಪ ಭೂಖಂಡವು ಎರಡು ಹೋಳಾಗಿ ಹೋಗುವಂತೆ ಮಾಡಿದ ಅಪರಾಧ ಮುಸ್ಲಿಂ ಲೀಗಿನಂತಹ ಜಾತ್ಯಂಧ ಪಕ್ಷದ ತಲೆಯನ್ನೇರಿದೆ. ಹಾಗಾಗುತ್ತಾ ಲೀಗಿನೊಡನೆಯೂ, ಅದರದೇ "ಹಿಂದೂ" ರೂಪಾಂತರವಾಗಿರುವ ಜನಸಂಘದೊಡನೆಯೂ ಚುನಾವಣೆಯ ಸ್ನೇಹ ಮಾಡಿಕೊಂಡಿರುವ ಪ್ರಜಾಸಮಾಜವಾದಿ ಪಕ್ಷಕ್ಕೆ ಧ್ಯೇಯವೆಂಬುದೊಂದಿದೆಯೆ? ಈ ಪಕ್ಷದ ಉಪದೇಷ್ಟಾರರು ಆರಿಸಿಹೋದ ದ್ದಾಗಲಿ ಅವರು ಯಾರ ತಾಳಿದಂತೆ ಕುಣಿಯುವವರು? ಪ್ರಜಾಸಮಾಜವಾದಿ ಪಕ್ಷದ ಸಿದ್ಧಾಂತವಂತೆಯೇ? ಜನಸಂಘದವರು ಹೇಳಿದಂತೆಯೆ? ಲೀಗಿನ ಆದೇಶದಂತೆಯೆ? ಅಥವಾ ಎಲ್ಲರೂ ಹೇಳಿದಂತೆಯೆ? ಅಂತೂ ಗೆಂಡಲದ ಪರಮಾನಧಿಗೆ ಎಡೆಮಾಡಿಕೊಟ್ಟಂತಾಗುತ್ತದೆ. ಈ ಪ್ರಜಾಸಮಾಜವಾದಿಗಳನ್ನು ಕಳಿಸಿಕೊಟ್ಟರೆ–ಎನ್ನುವುದು ಸ್ಪಷ್ಟ. ಇದನ್ನು ಮತದಾರರು ತಿಳಿದುಕೊಂಡು, ಯಾವ ಕಾಲಕ್ಕೂ ಶ್ರೇಯಸ್ಸನ್ನೇ ರಾಷ್ಟ್ರಕ್ಕೆ ಮಾಡಬಲ್ಲ ಕಾಂಗ್ರೆಸಿನಲ್ಲಿ ವಿಶ್ವಾಸವಿಟ್ಟು ಮತದಾನ ಸಮಯದಲ್ಲಿ ಕಾಂಗ್ರೆಸಿನನೊಗಕ್ಕೆ ಕಟ್ಟಿಸಿಲ್ಲಿಸಿದ ಜೋಡೆತ್ತುಗಳ ಚಿಹ್ನೆಯಿರುವ ಪೆಟ್ಟಿಗೆನೇ ತಮ್ಮ ಮತವನ್ನಿತ್ತು ಸಹಕರಿಸ ಬೇಕೆಂದೂ ಆತ್ಮಕಲ್ಯಾಣವನ್ನೂ ಮಾಡಿಕೊಳ್ಳಬೇಕೆಂದೂ ಮರಳಿ ವಿನಂತಿಸುತ್ತೇನೆ.

ಕಾಂಗ್ರೆಸ್ಜೋಡೆತ್ತುಗಳ ಚಿಹ್ನೆ

ನಿಮಗಿದು ತಿಳಿದಿರಲಿ!

ಮತ ಪಡೆಯುವ ಯೆಚ್ಚಿನ ಅರ್ಹತೆಯುಳ್ಳ ಪಕ್ಷವೆಂದರೆ ಕಾಂಗ್ರೆಸು

ಈ ಬಾರಿ ಚುನಾವಣೆಗೆ ನಿಂತ ಪಕ್ಷಗಳಲ್ಲಿ ಕಮ್ಯೂನಿಸ್ಟ್, ಪ್ರ. ಸ. ಪಾ., ಜನಸಂಘ, ಲೋಕಸೇವಾಸಂಘ ಮುಂತಾದ ಪಕ್ಷಗಳ ಹೊಳ್ಳುತನವನ್ನು ಬಯಲಿಗೆಳೆವ ಪ್ರಬಲ ಕಾರಣಗಳನ್ನು ಮತದಾರರ ಗಮನಕ್ಕೆ ಬೇರೆಡೆ ತಂದುಕೊಡಲಾಗಿದೆ. ಮುಖ್ಯವಾಗಿ ರಾಜ್ಯದ ಸರಕಾರದ ಸೂತ್ರಗಳನ್ನು ವಹಿಸುವ ಶಕ್ತಿಯಿಲ್ಲದ ಇಂತಹ ಪಕ್ಷಗಳಿಗೆ ಮತಕೊಟ್ಟರೆ ಅದು ಸಾರ್ಥಕವಾಗಲಾರದು. ಸ್ವತಂತ್ರ ಪುರಿಯಾಳುಗಳ ಕತೆಯೇ ಬೇರೆ. ಅವರು ತಮ್ಮಷ್ಟಕ್ಕೆ ತಾವೇ ತಾವಾಗಿ ನಿಲ್ಲಬೇಕಲ್ಲದೆ, ಅವರಿಂದ ಮತದಾರರು ಯಾವ ಪ್ರಯೋಜನವನ್ನೂ ಪಡೆಯಲಾರರು. ಸ್ವತಂತ್ರರಿಗೆ ಕೊಟ್ಟ ಮತವು ನಿರರ್ಥಕವಾಗುವುದು. ಒಟ್ಟಿನಲ್ಲಿ ಕಾಂಗ್ರೆಸ್ಸಿಂದ ಸ್ಪರ್ಧೆಯನ್ನು ಬಿಟ್ಟು ಉಳಿದ ಪಕ್ಷಗಳು ವ್ಯಾಧಿ ಪ್ರದರ್ಶನಾಲಯದ ಒಂದೊಂದು ಭಾಗ (Museum Pieces) ದಂತೆ ತೋರುತ್ತವೆಯೆಂದು ರಾಷ್ಟ್ರನಾಯಕ ನೆಹರು ರವರು ಕೀಳಿಮ್ದ ಯಥಾಯೋಗ್ಯವಾಗಿದೆ. ಈ ಪಕ್ಷಗಳಲ್ಲಿ ಜನಸಂಘದಂತಹ ಪುರಿಗಿ—ಗಿಜನೆಯ ಶತಮಾನದ ನಾತಾವರಣವನ್ನೇ ಉಸಿರಾಡುತ್ತಿದ್ದರೆ, ಕಮ್ಯೂನಿಸ್ಟರಂತಹರು ೧೯ನೆಯ ಶತಮಾನದ ಅಂಜನವನ್ನು ಇನ್ನೂ ದಾಟಿಲ್ಲ. ಸ್ವತಂತ್ರರು ಬಡಪೇರುಗಳಲ್ಲದ ಪ್ರತಿಂಕು ಸ್ವರ್ಗದವರು. ಇಂದು ಮಾರ್ಕ್ಸ್-ಎಂಜೆಲ್ಲರು ಪುನಃ ಅವತರಿಸಿ ಭಾರತದ ಕಮ್ಯೂನಿಸ್ಟರನ್ನು ನೋಡಿದರೆ ನಾಚಿಕೆಯಿಂದ ತಲೆತಗ್ಗಿಸುವರು. ತಲೆಯಲ್ಲಿ ಗೊಂದಲ, ವಿಚಾರದಲ್ಲಿ ಗಲಭೆ, ಆಚಾರದಲ್ಲಿ ಗಲಾಟಿ ಇವುಗಳನ್ನು ಪ್ರದರ್ಶಿಸುವ ವಿಕಾರ ವಿಶ್ವವಗಳ ಈ ಬಂಟರು ರಾಷ್ಟ್ರದ ಹೊಣೆಯನ್ನು ಹೊರಲು ಎಷ್ಟು ಮಾತ್ರಕ್ಕೂ ಸಮರ್ಥರಲ್ಲ. ಇದೇ ಮಾತು ಪ್ರಜಾಸಮಾಜವಾದೀ ಪಕ್ಷಕ್ಕೂ ಒಪ್ಪುತ್ತದೆ.

ಆದರೆ ಕಾಂಗ್ರೆಸ್ಸು ಅನುಭವ ಪರಂಪರೆಗಳುಳ್ಳ ಸಂಸ್ಥೆ. ಇದರಲ್ಲಿ ಶಿಸ್ತಿದೆ, ಸಂಘಟನಾ ಬಲವಿದೆ, ಬುದ್ಧಿಮತ್ತೆಯಿದೆ. ಕಾಂಗ್ರೆಸ್ಸು ಲೋಪದೋಷಗಳಿಲ್ಲದ ಪಕ್ಷವೆಂದು ನಾವು ಹೇಳುತ್ತಿಲ್ಲ. ಇತರ ಪಕ್ಷಗಳಲ್ಲಿಯೂ ಕೈಬೆರಳಿನ ಮೇಲೆ ಎಣಿಸಬಹುದಾದ ಉತ್ತಮ ಮೇಧಾವಿಗಳಿದ್ದಾರೆ. ದೇಶಕ್ಕಾಗಿ ದುಡಿದ ವ್ಯಕ್ತಿಗಳೂ ಕೆಲವರಿದ್ದಾರೆ. ಕಾಂಗ್ರೆಸ್ಸು ತನ್ನ ಲೋಪ ದೋಷಗಳನ್ನು ನಿರ್ಮೂಲಿಸಲು ನಿಷ್ಠಾಪೂರ್ವಕ ಪ್ರಯತ್ನಗಳನ್ನು ನಡೆಸಿದೆ. ಅದಕ್ಕೆ ಉಜ್ವಲ ಪರಂಪರೆಗಳ ಮೇಲ್ಪಂಕ್ತಿಯಿದೆ. ಅದು ೧೯೩೨ರಿಂದಲೇ ಶಾಸನ ಸಭೆಗಳ ಕಾರ್ಯ ಕಲಾಪಗಳ ಅನುಭವ ಪೊರೆದಿದೆ. ಅಷ್ಟೇ ಅಲ್ಲದೆ ಅದು ತಾನು ಭವವನ್ನು ಪಡೆದಿದೆ. ಕಳೆದ ೧೦ ವರ್ಷಗಳಿಂದಲೂ ಆಡಳಿತದ ಸರ್ವ ಸಮಸ್ಯೆಗಳ ಪರಿಚಯವೂ ಕಾಂಗ್ರೆಸ್ಸಿನ ಮುಂದಾಳುಗಳಿಗಿದೆ. ಕಾಂಗ್ರೆಸ್ಸಿಗೆ ದೊಡ್ಡ ಯೋಜನೆಗಳನ್ನು ಜಸ್ಸುವ ಧೈರ್ಯವಿದೆ, ಅವುಗಳನ್ನು ನೆರವೇರಿಸುವ ಸಾಹಸಸಿದ್ಧತೆಗಳಿವೆ. ರಾಷ್ಟ್ರದ ಕಠಿಣ ಸಮಸ್ಯೆಗಳನ್ನು ಬಿಡಿಸುವ ಬುದ್ಧಿ ಮತ್ತೆಯಿದೆ. ಅದರ ಸದಸ್ಯ ಸಂಪತ್ತು ಬಹು ದೊಡ್ಡದಿದೆ. ತನ್ನ ಅಖಾತ ತ್ಯಾಗ ಸೇವೆಗಳಿಂದ ದೇಶದ ಸ್ವಾತಂತ್ರ್ಯವನ್ನು ಸಂಪಾದಿಸಿ, ಈಗ ಆರ್ಥಿಕ ಸಾಮಾಜಿಕ ಕ್ರಾಂತಿಗಳಿಗೆ ಕೈಹಾಕಿದೆ. ಕಳೆದ ಪಂಚವಾರ್ಷಿಕ ಯೋಜನೆಯಿಂದ ಭಾರತದ ರಾಷ್ಟ್ರೀಯ ಉತ್ಪನ್ನ ಆಥವಾ ಆದಾಯವು ಎರಡು ಸಾವಿರ ಕೋಟಿ ರೂಪಾಯಿಗಳಷ್ಟು ಅಧಿಕವಾಗಿದೆ. ಕಾಂಗ್ರೆಸ್ಸಿಗೆ ಹೊಳ್ಳು ವಜನೆಗಳನ್ನು ಕೊಡುವ ಅಭ್ಯಾಸವಿಲ್ಲ. ಅದು ನುಡಿದಂತೆ ನಡೆದು ತೋರಿಸುತ್ತದೆ. ಅಡಿದಂತೆ ಮಾತುವುದು. ಹೊಣೆ ಹಂಗುಗಳಿಲ್ಲದ ಇತರ ಪಕ್ಷಗಳು ಚುನಾವಣೆಯಲ್ಲಿ ತಮ್ಮಿಂದ ನೀಗಲಾರದ ಆಶ್ವಾಸನೆಗಳನ್ನು ಕೊಡುತ್ತಿವೆ. ಅರಿಸಿಬಂದು ಸರಕಾರ ನಡೆಸುವ ಯೋಗವೇ ಅವುಗಳಿಗಿಲ್ಲದ್ದರಿಂದ ಮನಬಂದಂತೆ ವಚನಗಳನ್ನು ಕೊಡಲ್ಲವು. ಆದರೆ ಕಾಂಗ್ರೆಸ್ಸು ತನ್ನ ಸೇವಾ ಸಂಪತ್ತನ್ನು ಕಾಯ್ದುಕೊಳ್ಳಲು ಸತ್ಯವಾದುದನ್ನ—ತನ್ನಿಂದ ಸಾಧ್ಯವಾಗುವುದನ್ನು ಮಾತ್ರ ಹೇಳುತ್ತದೆ. ಅದು ಉಚ್ಚ ನೀಚ ಭೇದಭಾವಗಳನ್ನು ಮಾಡದೆ ಜನತೆಗೆಲ್ಲ ಸರಿಸಮಾನ ಹಕ್ಕು ಹೊಣೆ-ಸಮಾನಾವಕಾಶಗಳನ್ನು ಕೊಟ್ಟು ಶಾಂತಿ ಸಧ್ಭಾವಗಳ ಮಾರ್ಗದಿಂದ ಸರ್ವರ ಏಳ್ಗೆಗಾಗಿಯೂ ದುಡಿಯುತ್ತಿದೆ.

ಹೀಗೆ ರಾಜ್ಯವಾಳಲು ಅವಶ್ಯವಿರುವ ಅನುಭವ, ಬುದ್ಧಿಮತ್ತೆ, ಸಾಹಸ, ಸಂಘಟನೆಗಳುಳ್ಳ ಕಾಂಗ್ರೆಸ್ಸು ಪಕ್ಷವನ್ನೇ ಅಧಿಕಾರದಲ್ಲಿರಿಸುವುದು ಜಾಣರಾದ ಮತದಾರರ ಕರ್ತವ್ಯವಾಗಿದೆ. ಪಂಡಿತ ನೆಹರೂರವರ ಮಾರ್ಗದರ್ಶನ ಬಯಸುವ ಜನರು ಕಾಂಗ್ರೆಸ್ಸುಹುರಿಯಾಳುಗಳನ್ನೇ ಆರಿಸಬೇಕು.

(ಕರ್ನಾಟಕ ಪ್ರದೇಶ ಕಾಂಗ್ರೆಸಿನ ಪ್ರಚಾರ ಕಾರ್ಯದರ್ಶಿಗಳಿಂದ)

ಮಂಗಳೂರಲ್ಲಿ ಪಂಡಿತ ನೆಹರೂರವರು

ಪ್ರಧಾನ ಮಂತ್ರಿ ಪಂಡಿತ ನೆಹರೂರವರು ತಾ. ೨೬ರಲ್ಲು ಸಂಜೆ ಮಂಗಳೂರಿಗೆ ಆಗಮಿಸಿದರು. ರೈಲ್ವೆ ನಿಲ್ದಾಣದಲ್ಲಿ ಬೀರೋಗೈ ಮಂತ್ರಿ ಶ್ರೀ ಎ. ಬಿ. ಶೆಟ್ಟಿ, ನಗರಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗ, ಶ್ರೀ ಯು. ಎಸ್. ಮಲ್ಯ, ಎಮ್. ಪಿ. ಮೊದಲಾದವರು ಸ್ವಾಗತಿಸಿದರು. ಬಳಿಕ ಅವರು ಕೇಂದ್ರ ಮೈದಾನಿಗೆ ಬಂದು ಅಲ್ಲಿ ನೆರೆದ ಬೃಹತ್ ಸಭೆಯುದ್ದೆ 100 ನಿಮಿಷ ಮಾತನಾಡುತ್ತಾ ನಾವಿಂದು ಅಣುಯುಗದ ಹೊಸ್ತಿಲಲ್ಲಿ ನಿಜ್ದೇವೆಂಬುದನ್ನು ಗಮನದಲ್ಲಿರಿಸಿಕೊಳ್ಳಬೇಕಾ. ಈಗ ನಾವು ಬಯ ಸ್ವೀಪ್ರತೆಯಿಂದ ಪ್ರಯಿಸಿ ಮುಂದುನರಿದು ಸರಾಹತೆಯಿಂದ ಸ್ಥಗಿತವಾದ ನಮ್ಮ ಆರ್ಥಿಕ, ಸಾಮಾಜಿಕ, ಬೌದ್ಧಿಕ ಚಕ್ರಗಳನ್ನು ಚಲಿಸುವಂತೆ ಮಾಡಬೇಕು. ಹಾಗಾದಲ್ಲಿ ಮಾತ್ರ ನಾವು ಇತರ ಮುಂದುವರಿದ ದೇಶಗಳೊಡನೆ ಸಮ ಹೆಜ್ಜೆಯಿರಿಸಲು ಸಾಧ್ಯ ನಮ್ಮ ದೇಶದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದಕ್ಕಾಗಿ ನಾವು ಭಾರತವನ್ನು ಆರ್ಥಿಕ ಮತ್ತು ಔದ್ಯೋಗಿಕ ಕ್ಷೇತ್ರಗಳಲ್ಲಿ ಪುರೋಗಮಿಸಬೇಕು. ಭಾರತ ದೇಶವನ್ನು ನಿಶ್ಚಿತ ಕೆಲವು ರಾಷ್ಟ್ರಗಳು ಮೆಚ್ಚಿತ್ತವೆ. ಕೆಲವು ಸಹಿಸುತ್ತವೆ. ಕೆಲವು ಮತ್ಸರಿಸುತ್ತವೆ. ಮತ್ತು ಇನ್ನು ಕೆಲವು ದ್ವೇಷಿಸುತ್ತವೆ. ಇವರೆಲ್ಲರಿಗೂ ನಮ್ಮ ಪರಿಸ್ಥಿತಿಯನ್ನು ಚೆನ್ನಾಗಿ ಅರ್ಥಮಾಡಿಕೊಡಬೇಕಾದುದು ಅವಶ್ಯ. ಜಗತ್ತು ಇಂದು ನಮ್ಮ ದೇಶದ ಈ ಮಹಾ ಚುನಾವಣೆಯ ಕಡೆಗೆ ಆಸಕ್ತಿಯಿಂದ ನೋಡುತ್ತಿದೆ. ಈ ಚುನಾವಣೆಯ ಫಲಿತಾಂಶದ ಮೇಲೆಯೇ ಪಲವು ವಿಚಾರಗಳು ಕೇಂದ್ರೀಕೃತವಾಗಿವೆ. ನಮ್ಮ ಐಕ್ಯವು ಎಂತಿದೆ ಎಂಬುದನ್ನು ಈ ಚುನಾವಣೆಯ ಫಲಿತಾಂಶ ತೋರಿಸುವುದು. ಜಗತ್ತಿನ ರಾಷ್ಟ್ರಗಳ ಈ ಪ್ರಶ್ನೆಗೆ ನಮ್ಮ ದೇಶವು ಶಕ್ತಿಯುತವಾದ ಉತ್ತರವನ್ನು ಕೊಡಲಿಬಹುದೇ ನಿಜ ಅರ್ಥ. ಇದು ರಾಷ್ಟ್ರನ್ಯಾಯೀ ಶಾಂತಿಯುತ ಸುಭದ್ರ ಧೋರಣೆಯುಳ್ಳ ಪಕ್ಷವು ಭಾರತದಲ್ಲಿ ಕಾಂಗ್ರೆಸ್ಸೊಂದೇ ಎಂದು ನಾನು ಧೃಢವಾಗಿ ಹೇಳಬಲ್ಲೆ. ಆದುದರಿಂದ ರಾಷ್ಟ್ರದಲ್ಲಿ ಸುಭದ್ರ ಸರಕಾರ ರಚನೆಗೆ ಅನುಕೂಲಪೂರ್ಣವಾದಂತೆ ನೀವೆಲ್ಲರೂ ಕಾಂಗ್ರೆಸ್ ಉಮೇದ್ವಾರರಿಗೇ ಅಧಿಕ ಸಂಖ್ಯೆಯಲ್ಲಿ ಮತ ಕೊಡಿಸಿ ಸಹಕರಿಸುವಿರೆಂದು ನಾನು ಪೂರ್ಣ ಭರವಸೆಯಿಟ್ಟಿದ್ದೇನೆ" ಎಂದರು. ಅವರು ಮುಂದುವರಿಯುತ್ತ "ಮಹಾ ಚುನಾವಣೆಯಿಂದಾಗಿ ಎರಡು ಕಾರ್ಯಗಳು ಸಾಧಿಸುವುದೆಂದು ನನ್ನ ಅಭಿಮತ. ನನ್ನ ದೇಶದ ನಾಡಿ ನೆರೆಗಳಲ್ಲಿ ಮಹಾ ಜನತೆಯೊಡನೆ ಸಂಪರ್ಕ ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ. ಅಂತೆಯೇ ದೇಶದ ಯಾವ ಯಾವ ಭಾಗದಲ್ಲಿ ನನೇನು ನಡೆಯುತ್ತಿದೆ ಹಾಗೂ ಲೋಕದ ಪರಿಸ್ಥಿತಿ ನಿಜವೆಂಬ ಸಂವೇದನವನ್ನು ಜನತೆಯತ್ತಿಗೊಯ್ಯುವಂತೆ ಸಾಧ್ಯವಾಗುತ್ತದೆ. ಸಾರ್ವತ್ರಿಕ ಚುನಾವಣೆಯನ್ನು ಸರಿಯಾಗಿ ನಡೆಸಿದರೆ ಅದರಿಂದ ದೇಶಕ್ಕೆ ಹಿತವಾಗುವುದು, ಹಾಗಾಗದಿದ್ದಲ್ಲಿ ಅದರಿಂದ ಕಷ್ಟ ಬವಗುವುದು. ಚುನಾವಣೆಯು ಪ್ರಜಾಪ್ರಭುತ್ವ ಸರಕಾರದ ಒಂದು ಅವಿಭಾಜ್ಯ ಹಾಗೂ ಅತ್ಯಾವಶ್ಯಕ ಅಂಗವಾಗದೆ" ಎಂದು ನುಡಿದಾಗಿ ಹೇಳಿದರು.

ರಾತ್ರಿ ಜೋನ್ ಟೋಸ್ಟೋ ಮಂದಿರದಲ್ಲಿ ಏರ್ಪಡಿಸಲಾಗಿದ್ದ ಶ್ರೀ ಮಂದಾರ್ತಿ ಮೇಳದವರ "ಕರ್ಣಾರ್ಜುನ ಕಾಳಗ" ಯಕ್ಷಗಾನ ಬಯಲಾಟವನ್ನು ನೋಡಿ ಸಂತೋಷಪಟ್ಟರು.

ಉಡುಪಿ

ನುನಿಸಿಪಲ್ ಕೌನ್ಸಿಲು ಸಭೆಯು

ತಾ. ೨೬ರಲ್ಲು ಸಂಜೆ ಚೆಯರ್‌ಮೆನ್ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಚಾಲ್ತಿ ವರ್ಷದ ತಿದ್ದಿದ ಹಾಗೂ ಮುಂದಿನ ವರ್ಷದ ಬಜೆಟ್ ಪರೀಕ್ಷಣೆಯನ್ನು ಮುಂದಿನ ಸಭೆಗೆ ಬಾಕಿಯಿಡಲಾಯಿತು. ನುನಿಸಿಪಾಲಿಟಿಯೊಳಗೆ ಚಿಕ್ಕ ಮಕ್ಕಳ ಮರಣ ಸಂಖ್ಯೆಯನ್ನು ಕಡಿಮೆಮಾಡಲು ಈಗ ಇರುವ ಶಿಬಂಧಿಯ ಸಹಾಯದಿಂದಲೇ ಕಾರ್ಯ ಮಾಡಿಮೊತ್ತು ವಂತೆ ನುನಿಸಿಪಲ್ ಹೆಲ್ತ್ ಆಫೀಸರರನ್ನು ಕೇಳಿಕೊಳ್ಳಲಾಯಿತು. ಪೈಸೂರು ಸರಕಾರವು ಸಹಾಯಧನವನ್ನು ಮುಂದಿನ ಕಾಲಕ್ಕೆ ಹೆಲ್ತ್ ಆಫೀಸರರು ಸೂಚಿಸಿದ ಯೋಜನೆಯನ್ನು ಕಾರ್ಯರೂಪಕ್ಕೆ ತರಬಹುದೆಂದು ಕಾನೂನಿನ ಅಧಿಕಾರವಿರುವುದು. ಭಾರತ ಸೇವಕ ಸಮಾಜದವರು ಬಡಗಬೆಟ್ಟುನಲ್ಲಿ ನಿರ್ಮಿಸಿದ ಮಕ್ಕಳ ಆಟದ ಬಯಲನ್ನು ನಗರ ಸಭೆಯು ಸ್ವಾಧೀನಪಡಿಸಿಕೊಳ್ಳಲು ತಖಾರಿದೆ ಎಂದು ತಪಶೀಲ್ದಾರರಿಗೆ ತಿಳಿಸಬೇಕೆಂದು ನಿರ್ಣಯವಾಯಿತು.

ತೈಲಚಿತ್ರ ಅನಾವರಣ— ನಿವೃತ್ತ ಜಿಲ್ಲಾ ಸಿವ್ಹಿಲ್ ಜಡ್ಜರಾದ ಶ್ರೀ ಬಿ. ಎಲ್. ಎನ್. ರೈಗಳು ತಾ. ೨೬ರಂದು ಪೂರ್ವಾಹ್ನ ಸ್ಥಳೀಯ ಜೋಡು ಪ್ಯಾಸ್ಕೂಲಲ್ಲಿ ವಿದ್ವತ್ ಕವಿ ಟಿಪಗೋಪರ ತೈಲಚಿತ್ರವನ್ನು ಅನಾವರಣಗೊಳಿಸಿದರು. ಮುಖ್ಯೋಪಾಧ್ಯಾಯ ಶ್ರೀ ಬೆಳ್ಳೆ ಅನಂತಕೃಷ್ಣ ಸಾಮಕರು ಸ್ವಾಗತಭಾಷಣ ಮಾಡಿದರು. ವಿದ್ಯಾರ್ಥಿ ನಾಯಕ ಶ್ರೀ ಯಮ್. ಸುಬ್ರಹ್ಮಣ್ಯ ಹೆಬ್ಬಾರರು ಧನ್ಯವಾದಗಳನ್ನರ್ಪಿಸಿದರು.

ಗುರುಸಮಾರಾಧನೆ— ಯದುಕುಲ ಜೆಗ್ರನ್ಮಿತ್ರ ಎಂದು ರಾಜಾಜಿಸುತ್ತಿದ್ದ ಒಂದು ನೂರ ಒಂದು ವರ್ಷ ಪ್ರಾಯದಲ್ಲಿ ಪರಿಪೂರ್ಣ ಸ್ವಾಸ್ಥ್ಯವನ್ನು ಸೇರಿದ ಪುತ್ತಿಗೆ ಮಠದ ಶ್ರೀ ಸುಧೀಂದ್ರತೀರ್ಥ ಮಹಾರಾಜಸ್ವಾಮಿಗಳವರ ಆರಾಧನಾ ಮಹೋತ್ಸವವು ತಾ. ೨೬ರಂದು ಪೂರ್ವಾಹ್ನ ಶ್ರೀಕೃಷ್ಣ ಮಠದಲ್ಲಿ ಪರ್ಯಾಯ ಅಧಮಾರು ಸ್ವಾಮಿಗಳವರ ಹಿರಿತನದಲ್ಲಿ, ಕಾಣಿಯೂರು, ಶೀರೂರು, ಕೃಷ್ಣಾಪುರ, ಪೇಜಾವರ, ಸೋದೆ, ಫಲಿಮಾರು, ಭಂಡಾರಕೇರಿ ಸ್ವಾಮಿಗಳವರ ಕೂಡುವಿಕೆಯಲ್ಲಿ, ಪುತ್ತಿಗೆ ಮಠದ ಶ್ರೀ ಸುಜ್ಞಾನೇಂದ್ರ ತೀರ್ಥ ವಿದ್ಯಾವಲ್ಲಭತೀರ್ಥ ಸ್ವಾಮಿಗಳವರಿಂದ ಆಚರಿಸಲ್ಪಟ್ಟಿತು. ಸಾಂಚೆ ಗುರುವರ್ಯರ ಭಾವಚಿತ್ರ ಮೆರವಣಿಗೆ, ಸಾರ್ವಜನಿಕ ಸಭೆಗಳಾಗಿ ರಾತ್ರಿಪ್ರಸ್ಮೋತ್ಸವ ನಡೆಯಿತು. ಗೌಡ ಸಾರಸ್ವತ, ಸಾರಸ್ವತಬ್ರಾಹ್ಮಣರಿಗೆ ಅನದಿನದ ವೇತನಸ್ಥಾನದಲ್ಲೂ ಬಡಬಗ್ಗರಿಗೆ ಪಣಿಯಾದಿ ಶಾಲೆಯಲ್ಲೂ ವಿಶೇಷ ಅನ್ನದಾನ ನಡೆಯಿತು. ಗುರುಗಳ ಪ್ರೀತ್ಯರ್ಥವಾಗಿ ತಾ. ೨೪ರಲ್ಲು ಶೀರೂರು ಮಠದ ಶ್ರೀ ಲಕ್ಷ್ಮೀವೇಂದ್ರತೀರ್ಥ ಸ್ವಾಮಿಗಳವರೂ ತಾ ೨೭ರಲ್ಲು ಕೃಷ್ಣಾಪುರ ಮಠದ ಶ್ರೀ ವಿದ್ಯಾವಲ್ಲಭತೀರ್ಥ ಸ್ವಾಮಿಗಳವರು ತಂತಮ್ಮ ಮತಗಳಲ್ಲಿ ಅನುಕ್ರಮವಾಗಿ ಗುರು ಕಾರಾರಾಧನೆಯನ್ನು ಮಾಡಿ ಗುರು ಪ್ರಸಾದಾನುಗ್ರಹಕ್ಕೆ ಪಾತ್ರರಾದರು.

ಆಂಧ್ರದಲ್ಲಿ ಕಾಂಗ್ರೆಸು ಗೆದ್ದಿತು!!

ಕಾಂಗ್ರೆಸಿಗೆ ಬೇರೆಡೆಯಲ್ಲೂ ವಿಜಯ

ಆಂಧ್ರದಲ್ಲಿ ಕಾಂಗ್ರೆಸು ಸರಕಾರದ ಸ್ಥಾಪನೆಗೆ ಅವಶ್ಯವಿರುವ ಬಹುಮತವನ್ನೇ ನಿಷ್ಕೆ ನಡೆದ ಗುತದಿನದ ಫಲಿತಾಂಶವಾಗಿ ಈಗ ಸಿಕ್ಕಿರುತ್ತದೆ. ಪಂಜಾಬು, ಉತ್ತರ ಪ್ರದೇಶ, ರಾಜಸ್ಥಾನ, ಬಿಹಾರಗಳಲ್ಲಿ ಕಾಂಗ್ರೆಸಿನ ಉಮೇದ್ವಾರರೇ ಹೆಚ್ಚಾಗಿ ಚುನಾವಣೆ ಗೊಂಡಿರುವ ಸುದ್ದಿ ಬಂದಿದೆ. ಕಾಂಗ್ರೆಸ್ಸನ್ನು ವಿರೋಧಿಸಿದ ಸ್ವತಂತ್ರ, ಜನಸಂಘದವರ, ಕಮ್ಯೂನಿಸ್ಟರು ಹಾಗೂ ಪ್ರಜಾಸಮಾಜವಾದಿಗಳ ಠೇವಣಾತಿಯು ಜಪ್ತಾಗಿ ಕೋಗುವಷ್ಟು ಪ್ರಚಂಡ ಬಹುಮತವು ಕಾಂಗ್ರೆಸಿಗೆ ತನೇಕ ಮತದಾರರ ಪ್ರೇತ್ರಗಳಲ್ಲಿ ಸಿಕ್ಕಿರುವುದು ಕಾಂಗ್ರೆಸಿನ ಮೇಲೆ ಜನತೆಗಿರುವ ಅಭಿಮಾನದ ಮತ್ತು ಕೃತಿಪತ್ವಗಳ ಧ್ಯೇಯ ಧೋರಣೆಗಳ ಬಗ್ಗೆ ಜನರಿಗಿರುವ ದೃಗುಸ್ಸೆ ಮತ್ತು ತಿರಸ್ಕಾರದ ಪ್ರತ್ಯಕ್ಷ ನಿದರ್ಶನವೆಂದರೆ ತಪ್ಪಾಗಲಾರದು. ನಮ್ಮ ಜಿಲ್ಲೆಯ ಮತದಾರರ ಭಾವನೆ ಸಹ ಸರಿಯಾದ ಇದೇ ರೀತಿಯಲ್ಲಿ ಹರಿಯುತ್ತಿದೆ ಎಂದು ಆಶಿಸುತ್ತೇವೆ

ಮುದ್ರಣ ಕಾರ್ಯಗಳಿಗೆ—
ನವಯುಗ ಪ್ರೆಸ್,
ಸಂಕೇತಿ. .... ಉಡುಪಿ

ಎಲ್ಲೆಲ್ಲಿ ಏನೇನು?

ನಿಂಜೂರು— ಶ್ರೀ ವಿವೇಕಾನಂದ ಸೇವಾಸಂಘದ ಸ್ಥಳೀಯ ವಿಸ್ತರಣಾ ಯೋಜನೆಯ ನೆರವಿನಿಂದ ಕಟ್ಟಲ್ಪಟ್ಟ ನೂತನ ಭವನದ ಪ್ರವೇಶೋತ್ಸವವು ತಾ. ೨೮ರಲ್ಲು ಶ್ರೀ ಟಿ. ಎ ಪೈ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೆನೇಜರ್ ಶ್ರೀ ಸಂಜೀವ ಶೆಟ್ಟರು ಸ್ವಾಗತಿಸಿದ ಬಳಿಕ ಶ್ರೀ ಶ್ಯಾಮ ಶೆಟ್ಟರು ಸಂದೇಶವಾಚನ ಮಾಡಿದರು. ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಹನವರು ಕಟ್ಟಡದ ಉದ್ಘಾಟನೆ ಮಾಡಿದರು. ಜಿಲ್ಲಾ ಬೋರ್ಡು ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರು ಸಮಾಜವಿಕಾಸ ಯೋಜನೆಯನ್ನು ಆಗೆಯಲಾದ ಬಾವಿಯನ್ನೂ, ಶ್ರೀ ರಾಮಕೃಷ್ಣ ಮಂಠದ ಸ್ವಾಮಿ ಆದಿ ದೇವಾನಂದಜೀಯವರು ಶ್ರೀ ಗುಂಡಕೃಷ್ಣ ಪರಮಹಂಸರ ಮತ್ತು ಶ್ರೀ ಸ್ವಾಮಿ ವಿವೇಕಾನಂದರ ಛಾಯಾಚಿತ್ರಗಳನ್ನೂ ಕುನೂರು ವಿಠಲಾಕ್ಷಯ್ಯನವರು ಸಮಾಜವಿಕಾಸ ಯೋಜನೆಯಿಂದ ಮೊರೆತ ರೇಡಿಯೋವನ್ನು, ಗಾಂಧಿಜೀಯವರ ಛಾಯಚಿತ್ರವನ್ನು ಶ್ರೀ ಕೆ. ಸದಾನಂದ ಹೆಗ್ಡೆ, ಎಮ್. ಪಿ. ಯವರೂ, ಪಂಡಿತ ನೆಹರೂರವರ ಛಾಯಚಿತ್ರವನ್ನು ಡಾ. ಎ. ಕೆ. ಲಕ್ಷ್ಮೀನಾರಾಯಣ ರಾಯರೂ ಅನಾವರಣಮಾಡಿದರು. ಪಂಚಾಯತ ಬೋರ್ಡು ಅಧ್ಯಕ್ಷ ಶ್ರೀ ಎನ್. ರಾಜು ಶೆಟ್ಟರ ಛಾಯಚಿತ್ರವನ್ನು ಸಭಾಧ್ಯಕ್ಷರು ಅನಾವರಣಮಾಡಿದರು. ಶ್ರೀ ವಿಠಲ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಕೋಟೆ—ಸ್ಥಳೀಯ ವಿವೇಕ ಹೈಸ್ಕೂಲಿನ ವಾರ್ಷಿಕೋತ್ಸವವು ತಾ.16ರಲ್ಲು ಶ್ರೀ ಟಿ. ಎ. ಪೈ, ಎಮ್. ಎಲ್. ಎ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕೋಟ ವಿವೇಕಸಂಘದ ಅಧ್ಯಕ್ಷ ಶ್ರೀ ಎಮ್. ವಿ ಉರಾಳರು ಅಧ್ಯಕ್ಷರಿಗೆ ಪರಿಚಯ ಮಾಡಿ ಕೊಟ್ಟರು. ಮುಖ್ಯೋಪಾಧ್ಯಾಯ ಶ್ರೀ ಕೆ. ಎಲ್. ಕಾರಂತರು ವರದಿಯನ್ನೋದಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶ್ರೀಕಾರಂತರು ವಿದ್ಯಾ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಸೇವೆಯನ್ನು ಪ್ರಶಂಸಿಸಿದರು. ಬಳಿಕ ಮನರಂಜನ ಕಾರ್ಯಕ್ರಮಗಳಾದುವು.

ಮಣಿಪುರ— ಸ್ಥಳೀಯ ಅಭಿವೃದ್ಧಿ ಸೋಜನೆಯ ಸಹಾಯದಿಂದ ಮಣಿಪುರ ಗ್ರಾಮ ಸೇವಾಸಂಘವು ಕಟ್ಟಿಸಿದ ಜೊಸ ಕಟ್ಟಡವನ್ನು ಶ್ರೀ ಶ್ರೀಪತಿ ಆಚಾರ್ಯರು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಟಿ. ಎ. ಪೈಗಳು ವಹಿಸಿದ್ದರು. ಮಣಿಪುರ ಪಂಚಾಯತ ಬೋರ್ಡು ಅಧ್ಯಕ್ಷೆ ಶ್ರೀ ಸಿ. ಬಿ. ಆಣ್ಣಾಜಿ ಬಲ್ಲಾಳರು ಸ್ವಾಗತ ತೂತುಗಳನ್ನಾಡಿದರು. ಶ್ರೀ ಎಮ್ ರಂಗನಾಥರು ಹೊಸಕಾಗಿರಚಿಸಿ ಸ್ಥಳಸಹಿತ ಮಣಿಪುರ ಪಂಚಾಯತ ಬೋರ್ಡಿಗೆ ವಾನಪಿತ್ತ ರಂಗಮಾಗ್ ರಸ್ತೆಯನ್ನು ಸಭಾಧ್ಯಕ್ಷರು ಉದ್ಘಾಟಿಸಿದರು.

ಮಲ್ಪೆ— ಗವರ್ನಮೆಂಟ್ ಫಿಶರೀಸ್ ಹೈಸ್ಕೂಲಿನ ವಾರ್ಷಿಕೋತ್ಸವವು ತಾ. 18 ರಲ್ಲು ನವತ್ತ ಜಿಲ್ಲಾ ಜಡ್ಜರಾದ ಶ್ರೀ ಬಿ. ಎಲ್. ಎನ್. ರೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ರೈಗಳು ಬಹುಮಾನವಿತರಣೆ ಮಾಡಿದರು. ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸಾರಾ ಎಸ್. ಅವಿನಿಯರು ವರದಿಯನ್ನೋದಿದರು. ನಂತರ ವಿವಿಧ ಕಾರ್ಯಕ್ರಮಗಳಾದುವು. ಮುಖವಿನಲ್ಲಿ ಈ ಶಾಲೆಯ ಹಳೆವಿದ್ಯಾರ್ಥಿ ಸಂಘದ ದಿನಾಚರಣೆಯು ಜರಗಿತು. ಯು. ಬಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು.

ಮೊಳ್ಳಿ— ಸ್ಥಳೀಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಜರಗತಕ್ಕ ಕಾಲಾವಧಿ ಜಾತ್ರೆಯು ತಾ. 15-3-57ರಲ್ಲು ಧ್ವಜಾರೋಹಣದಿಂದ ಪ್ರಾರಂಭವಾಗಿ ತಾ. 21ರಲ್ಲು ಮಹಾರಥೋತ್ಸವ ಆಯಿತ್ತು ತಾ. 22ರಲ್ಲು ಅವಭೃತಸ್ನಾನದೊಡನೆ ಮುಕ್ತಾಯವಾಗಲಿರುವುದೆಂದೂ ಭಕ್ತಾದಿಗಳು ಬಂದು ಶ್ರೀ ದೇವಿ ಅನುಗ್ರಹಕ್ಕೆ ಪಾತ್ರರಾಗಬೇಕೆಂದೂ ಮೇನೆಜ್ಮೆಂಟ್ ಟ್ರಸ್ಟಿ ಶ್ರೀ ಎಮ್. ರಾಮಣ್ಣ ಶೆಟ್ಟರು ತಿಳಿಸುತ್ತಾರೆ.

ಬೈಂದೂರು— ಸ್ಥಳೀಯ ಬೋರ್ಡು ಹೈಸ್ಕೂಲಿನ ವಾರ್ಷಿಕೋತ್ಸವವು ಇದೇ ತಾ 10 ರಲ್ಲು ಕುಂದಾಪುರ ಡಿ. ಸು ಶ್ರೀ ಎಚ್. ಲಕ್ಷ್ಮಿನಾರಾಯಣರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ಈ ಶಾಲಾ ಸ್ಥಾಪನೆಗೆ ಕಾರಣಭೂತರಾದ ಶ್ರೀ ಸೈ. ಮಂಜಯ್ಯ ಶೆಟ್ಟರ ತೈಲಚಿತ್ರ ಅನಾವರಣ ಮಾಡಲಾಯಿತು. ಶಾಲಾ ಹೆಡ್ಮಾಸ್ತರರು ವರದಿನಾಜನೆಮಾಡಿದ ಬಳಿಕ ಶ್ರೀ ಸೋಮಪ್ಪ ಭಟ್ಟರು ಸ್ವಸ್ತಿವಾಚನಮಾಡಿದರು. ಅಧ್ಯಕ್ಷೆ ಭಾಷಣ, ಜನಮನರಂಜನ ಕಾರ್ಯಕ್ರಮದಿಂದ ಸಮಾರಂಭ ಕೊನೆಗೊಂಡಿತು. ಇದೇ ಹೈಸ್ಕೂಲಿನ ವಾರ್ಷಿಕ ಕ್ರೀಡೋತ್ಸವವು ತಾ. 4ರಲ್ಲು ಸಬ್ ರಿಜಿಸ್ಟ್ರಾರ್ ಶ್ರೀ ನುಹಾಲಿಂಗಯ್ಯನವರ ನೇತೃತ್ವದಲ್ಲಿ ಜರಗಿ ಪಾರಿತೋಷಿಕ ರಕೆಗಳಾದುವು.

ಹರಿಯಾಳ ಸಮಾಜ ಸುಧಾರಕ ಸಂಘ

ಬಾರಕೂರು ಹೋಬಳಿ ಹರಿಯಾಳ ಸಮಾಜ ಸುಧಾರಕ ಸಂಘದ ಕಾರ್ಯ ನಿರ್ವಾಹಕ ಸಮಿತಿ ಸಭೆಯು ಶ್ರೀ ಬಿ. ಟಿ ಸಾಲಿಯಾನರ ಅಧ್ಯಕ್ಷತೆಯಲ್ಲಿ ಜರಗಿತು. ಸಮಾಜ ಬಂಧುಗಳ ಶುಭ ಕೋಷಣಾದಿಗಳು ಮತ್ತು ಶವಪಾಸ್ಸ ಸ್ಕಾರ್ಯ ಮೊದಲಾದ ಕಾರ್ಯಗಳಲ್ಲಿ ಸಹಕರಿಸಲು ಸಂಘದ ವತಿಯಿಂದ 11 ಜನರಿರುವ ಉಪಸಮಿತಿ ನೇಮಿಸಲಾಯಿತು. ಹರಿಯಾಳ ಸಮೂಹವನ್ನು ಹಿಂದುಳಿದ ಸಮಾಜವೆಂದು ಸರಕಾರವು ನಿರ್ಧರಿಸಿದ ಬಗ್ಗೆ ಸರಕಾರವನ್ನು ಆ ಬಗ್ಗೆ ಪ್ರಯತ್ನಿಸಿದ ಶ್ರೀ ಟಿ. ಎ. ಪೈಗಳನ್ನೂ ಅಭಿನಂದಿಸಲಾಯಿತು.

ಕಾರ್ಕಳ— ದಕ್ಷಿಣ ಭಾರತ ದಿಗಂಬರ ಜೈನ ಸುಹಾಸಭೆಯು ತಾ. 11ರಲ್ಲು ಕಾರ್ಕಳದಲ್ಲಿ ಧರ್ಮಸ್ಥಳದ ಶ್ರೀ ರತ್ನವರ್ಮರಾಜ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ವೀರೇಂದ್ರ ಆಣ್ಣಾರಾಯರು ಮಹಾ ಸಭೆಯ ಕೆಲವು ಏಳಿಮಿ ನರ್ಸಗಳ ನರಡಿಯನ್ನೋದಿದರು. ಶ್ರೀ ಲಕ್ಷ್ಮೀಸೇನ ಭಟ್ಟಾರಕ ಸ್ವಾಮಿಗಳು, ಶ್ರೀಗಳಾದ ಎಚ್. ಪಿ. ಶಾಸ್ತ್ರಿ, ಕೆ. ಬಿ ಜಿನರಾಜ ಹೆಗ್ಡೆ ವಿ. ಟೋಕನಾಥ ಶಾಸ್ತ್ರಿ, ಮೊದಲಾದವರು ಸಂದರ್ಭೋಚಿತ ಭಾಷಣಗಳಿತ್ತರು. ಜೈನರ ಪ್ರಮುಖ ಕ್ಷೇತ್ರವಾಗಿರುವ ಕಾರ್ಕಳದ ಶ್ರೀ ಗೋಮಟೇಶ್ವರ ಬೆಟ್ಟದ ಜೀರ್ಣೋದ್ಧಾರ ಕಾರ್ಯದಲ್ಲಿ ಮತ್ತೆ ಕಾಳಜೀಕ ಸಮಿತಿಯುನರೊದನೆ ಭಾರತ ಸರಕಾರದ ಸಹಾಯ ಸಹಕಾರಗಳನ್ನು ಕೋರುವ ನಿರ್ಣಯವಾಯಿತು.

ಹಾವುಂಜೆ— ಜಿಲ್ಲಾ ಬೋರ್ಡು, ತಾಲೂಕು ಬೋರ್ಡುಗಳಲ್ಲಿ ಹಲವಾರು ವರ್ಷ ಸದಸ್ಯರಾಗಿದ್ದು ಜನಪ್ರೀಯತೆಯನ್ನು ಗಳಿಸಿದ ಹಾವುಂಜೆ ಪಟೇಲ್ ಶ್ರೀ ಇನ್ನಾಡಿ ಮಂಗ್ಗಪ್ಪ ಶೆಟ್ಟರು ತಮ್ಮ 87ನೇ ವಯಸ್ಸಿನಲ್ಲಿ ಇದೇ ತಾ. 15ರಲ್ಲು ಪರಲೋಕವಾಸಿಗಳಾದರು. ಮೃತರ ಆತ್ಮಕ್ಕೆ ಚಿರಶಾಂತಿ ಕೋರುವೆವು.

ಕಿನ್ನಿಗೋಳಿ—ಸ್ಥಳೀಯ ಅಧ್ಯಾಪಕ ಕೇಂದ್ರದ ವರ್ಷಾಂತಿ ಸಮಾರಂಭವು ತಾ.16ರಲ್ಲು ಜಿಲ್ಲಾ ವಿದ್ಯಾಧಿಕಾರಿ ಶ್ರೀ ಬಿ. ಎಮ್. ಕುಡುಬಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ವೈ. ಗೋಪಾಲಯ್ಯನವರು, ನವಮೈಸೂರ ಲ್ಲಿಉಪಾಧ್ಯಾಯರ ಏಳಿಗೆಯನ್ನು ಹೇಗೆಸಾಧಿಸಬಹುದೆಂಬುದನ್ನು ವಿವರಿಸಿದರು.

ಮಣಿಪಾಲ—ಶ್ರೀ ರಾಮಕೃಷ್ಣ ಪರಮಹಂಸರ ಜನ್ಮ ದಿನೋತ್ಸವವು ತಾ. 18ರಲ್ಲು ಗೀತಾಮಂದಿರದಲ್ಲಿ ಪಾಟಿ. ಮೂಧವಜ್ಜಿಗಳಅಧ್ಯಕ್ಷತೆಯಲ್ಲಿ ಜರಗಿತು. ಸಭಾರಂಭದಲ್ಲಿ ದೈನಂದಿನ ಭಜನೆ ನಡೆಯಿತು ಬಳಿಕ ಶ್ರೀ ಗಳಾದ ಲಕ್ಷ್ಮಿನಾರಾಯಣರ್ ಮತ್ತು ಆಜ್ಞೆತ ಬಾಳಿಗರು ಕಾರ್ಯೋಚಿತ ಸ್ಮರಣೆಗಳನ್ನಾಡಿದರು. ನಂತರ ಸಂಗೀತ ಕಾರ್ಯಕ್ರಮ ಗಳಾದುವು.

ಇನ್ನಂಜೆ - ಸ್ಥಳೀಯ ಎಸ್. ಜಿ. ಎಚ್. ಹೈಸ್ಕೂಲಿಗೆ ಶ್ರೀ ಸೋದೆ ಮಠದ ಶ್ರೀ ವಿಶ್ವೇತ್ತಮತೀರ್ಥ ಸ್ವಾಮಿಗಳವರನ್ನು ಮತ್ತು ಶ್ರೀಕರ್ಣಾ ಮಠದ ಶ್ರೀ ವಾದೀಕನಾಥ ತೀರ್ಥ ಸ್ವಾಮಿಗಳವರನ್ನು ತಾ 7ರಲ್ಲು ಪಾದ್ಯಾ ಭೋಷಣೆಯಿಂದ ಸ್ವಾಗತೀಕರಿಸಲಾಯಿತು. ಬಳಿಕ ಜರಗಿದ ಸಭೆಯಲ್ಲಿ ಶ್ರೀ ಶ್ರೀನಿವಾಸ ಮಿತ್ತೂರ ತಾಯರು ಸ್ವಾಗತ ಮಾತುಗಳನ್ನಾಡಿ ಶ್ರೀ ವಾದೀಕನಾಥತೀರ್ಥ ಸ್ವಾಮಿಗಳವರಿಗೆ ಪಾದ ಪೂಜೆ ಮಾಡಿದರು. ಶ್ರೀ ಸೋದೆ ಸ್ವಾಮಿಗಳವರು ಇನ್ನಂಜೆ ಶಾಲೆಯ ಕಾರ್ಯಕಲಾಪಗಳನ್ನು ವಿವರಿಸಿ ಭಾಷಣವಿತ್ತರು. ಶ್ರೀ ವಾದೀಕನಾಥ ತೀರ್ಥರು ವಿದ್ಯಾರ್ಥಿಗಳಿಗೆ ಉಪದೇಶ ಪರ ಮಾತುಗಳನ್ನಾಡಿ ಆಶೀರ್ವದಿಸಿದರು. ಡಾ. ಎಸ್ ಆರ್. ಪೈಗಳೂ ಕಾರ್ಯೋಚಿತ ವಾತುಗಳನ್ನಾಡಿದರು. ಶಾಲಾ ಕರೆಸ್ಪೊಂಡೆಂಟ್ ಶ್ರೀ ಶ್ರೀಪತಿ ಆಚಾರ್ಯರು ಧನ್ಯವಾದಗಳನ್ನರ್ಪಿಸಿದರು.

ಕಟಪಾಡಿ— ಸ್ಥಳೀಯ ಎಸ್. ವಿ. ಎಸ್. ಹೈಸ್ಕೂಲಿನ ನರ್ವಾಂತಿ ಸಮಾರಂಭವು ತಾ. 28ರಲ್ಲು ಶ್ರೀ ಕು. ಶಿ. ಹರಿದಾಸ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಹೆಡ್ಮಾಸ್ಟರ್ ಶ್ರೀ ಪಿ. ರಾಮದಾಸ ನಾಯ್ಕರು ವರದಿ ಓದಿದರು. ಶ್ರೀ ಕೆ. ಆರ್. ತೆಜೈಯವರು ಧನ್ಯವಾದಗಳನ್ನರ್ಪಿಸಿದರು. ಬಳಿಕ ವಿವಿಧ ಮನರಂಜನಾ ಕಾರ್ಯಕ್ರಮಗಳಾದುವು.

ಬಾರ್ಕೂರು— ಇಲ್ಲಿಯ ನೇಶನಲ್ ಹೈಸ್ಕೂಲಿನ ವಾರ್ಷಿಕೋತ್ಸವವು ತಾ. 24 ರಲ್ಲು ಶ್ರೀ ಕು. ಶಿ. ಹರಿದಾಸ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ಭೋಜರಾಯರು ಸ್ವಾಗತಿಸಿದರು. ಶ್ರೀ ಪುಟ್ಟಣ್ಣ ಐತಾಳರು ವರದಿಯನ್ನೊಪ್ಪಿಸಿದರು. ಬಳಿಕ ವಿವಿಧ ವಿನೋದಾವಳಿಗಳಾಗಿ ಸಮಾರಂಭ ಕೊನೆಗೊಂಡಿತು.

ದ. ಕ. ಜಿಲ್ಲೆಯಲ್ಲಿ ಮತಗಣನೆಯ ದಿನಗಳು

ಪುತ್ತೂರು, ಬಾಣೆಮಂಗಳೂರು ಮತ್ತು ಬೆಳ್ತಂಗಡಿ ಕ್ಷೇತ್ರಗಳ ಮತ್ತಗಣನೆಯು ಮಾರ್ಚ್ ತಾ 18ರಲ್ಲೂ, ಮಂಗಳೂರು I ಮಂಗಳೂರು II ಮತ್ತು ಸುರತ್ಕಲ್ ಕ್ಷೇತ್ರಗಳ ಮತಗಣನೆಯು ಮಾರ್ಚ್ ತಾ 19ರಲ್ಲಿಯೂ, ಕಾರ್ಕಳ ಕಾಸು, ಉಡುಪಿ, ಬ್ರಹ್ಮಾವರ ಮತ್ತು ಕುಂದಾಪುರ ಕ್ಷೇತ್ರಗಳ ಮತಗಣನೆಯು ಮಾರ್ಚ್ ತಾ 18ರಂದೂ ನಡೆಯುವುದಾಗಿ ತಿಳಿದು ಬರುತ್ತದೆ.

ಇನ್ನೂ ಚಂದಾಹಣವನ್ನು

ಕಳುಹಿಸದವರು ದಯವಾಡಿ ಕೂಡಲೇ ಕಳುಹಿಸಿಕೊಡುವಂತೆ ಇನ್ನೊಮ್ಮೆ ಕೇಳಿಕೊಳ್ಳುತ್ತೇನೆ. ಅಂತೂ ಸಕಾಲದಲ್ಲಿ ಚಂದಾ ಪಾವತಿಯಾಗದಿದ್ದರೆ ನಾವು ಅನಿವಾರ್ಯವಾಗಿ ಕಳುಹಿಸುವ ವಿ. ಪಿ. ಪಿ. ಯನ್ನಾದರೂ ಪಡೆಕೊಳ್ಳುವಂತೆ ವಿಜ್ಞಾಪಿಸುತ್ತೇನೆ.

ಮೆನೇಜರ್, ನವಯುಗ.

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇನ್ನು ಚಿಕ್ಕದಿರ ಬೇಕಲ್ಲದೆ, ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

ಕನ್ನಡದಲ್ಲಿ ಮೊದಲನೆಯದೆಂದೇ ಹೇಳಬಹುದಾದ
ಅಣು ಶಕ್ತಿಯ ಸಚಿತ್ರ ವಿವೇಚನಾ ಗ್ರಂಥ

ಹಿರೋಶಿಮಾದಿಂದ ಜಿನೇವ

ಬರೆದವರು:

ಶ್ರೀ. ಯು. ರಾಘವೇಂದ್ರ ಆಚಾರ್ಯ, ಎಂ. ಎ., ನವದೆಹಲಿ.

ಮುನ್ನುಡಿಕಾರರು: ಶ್ರೀ. ಶಿವರಾಮ ಕಾರಂತರು.

ಪ್ರತಿಯೊಬ್ಬರೂ ಓದಲೇಬೇಕಾದ ನವೀನ ಪುಸ್ತಕ.

ಉತ್ತಮ ಕಾಗದ. ಬೆಲೆ: ರೂ. ೧—೮—೦.

ನವಯುಗ ಪ್ರೆಸ್, ಉಡುಪಿ.

ಫಂಟಿ ಮಾರಾ

ಇಗ್ನೇಸಿಯೋ ಸಿಲೋನೆಯ ಇಟಾಲಿಯನ್ ಕಾದಂಬರಿಯ ತಿನುವಾದ

ಅನುವಾದಕರು:— ಕು. ಶಿ. ಹರಿದಾಸ ಭಟ್ಟ, ಎಂ. ಎ.

—ಕೆಲವು ಅಭಿಪ್ರಾಯಗಳು—

"ಈ ಶತನಾಸದ ಅತ್ಯಂತ ಮರ್ಮಸ್ಪರ್ಶಿ ಕಾದಂಬರಿಗಳಲ್ಲೊಂದು"
—ಕರ್ಮವೀರ.

"ಮೂಲಗ್ರಂಥದ ಪ್ರತಿಪ್ಪಗಳೆಲ್ಲ ಸಮರ್ಪಕವಾಗಿ ಕನ್ನಡಿಸಲ್ಪಟ್ಟರು ವುದನ್ನು ನೋಡುವಾಗ ಅನುವಾದವು ಸರ್ವೋತ್ತಮವೆಂದು ಹೇಳಲು ಅಡ್ಡಿ ಇಲ್ಲ. ಅಕುವಾದ ಮಾಡಿದ ಶ್ರೀ ಭಟ್ಟರೂ ಸಾರಿಸಿದ ಪ್ರಕಾಶಕರೂ ಅಭಿನಂದನಾರ್ಹರು." —ಇಂಡಿಯನ್ ಎಕ್ಸ್‌ಪ್ರೆಸ್.

200 ಪುಟಗಳ ಈ ಕಾದಂಬರಿಯ ಬೆಲೆ ರೂ.2—0—0

ಏಶಿಯದ ಸಂಪತ್ತು

(ಏಶಿಯದ ಆರ್ಥಿಕ ಸ್ಥಿತಿಯ ಚಿತ್ರ)

ಬರೆದವರು: ಕು. ಶಿ. ಹರಿದಾಸ ಭಟ್ಟ, ಎಂ. ಎ.

ಇಂದಿನ ರಾಜಕೀಯದಲ್ಲಿ ಜರ್ಜಾಸ್ಪದ ಭೂಖಂಡವಾದ ಏಶಿಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ, ವಿಶದವಾಗಿಯೂ, ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ

ಏಶಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ, ಓದಬೇಕಾದ ಪುಸ್ತಕ. ಬೆಲೆ: ಎರಡು ರೂಪಾಯಿ.

ಪ್ರತಿಗಳಿಗೆನಿನ್ನೂರ ಪುಸ್ತಕ ವ್ಯಾಪಾರಿಗಳಲ್ಲಿ ವಿಚಾರಿಸಿರಿ.

ಮಂಗಳೂರು

ನಗರ ಸಭೆಯು— ತಾ. 18ರಲ್ಲಿ ಶ್ರೀ ಸಿರಿಲ್ ಗೊನ್ಸಾಲ್ವೀಸರ ಅಧ್ಯಕ್ಷತೆಯಲ್ಲಿ ಜರಗಿತು. ಪೋಗಿಗಳನ್ನು ಪ್ರತ್ಯೇಕವಿರುವ ಅಸ್ಪತ್ರೆಯೊಂದನ್ನು ಅಳಪೆಯಲ್ಲಿ ರೂಪಾಯಿ 50,000 ವೆಚ್ಚದಲ್ಲಿ ಕಟ್ಟಿಸುವ ಇತ್ಯಾದಿ ಕಾರ್ಯಗಳನ್ನು ಸ್ಥಳೀಯ ಅಭಿವೃದ್ಧಿ ಯೋಜನೆ ಮೇರೆಗೆ ಮಾಡಲು ಶಿಫಾರಸು ಮಾಡಲಾಯಿತು. ನಗರದಲ್ಲಿ ಅಕ್ಕಿಯ ಕ್ರಯವು ಏರುತ್ತಿರುವುದನ್ನು ಹತೋಟಿಗೆ ತರಲು ನ್ಯಾಯ ಬೆಲೆಯ ಅಂಗಡಿಗಳನ್ನು ತೆರೆಯುವಂತೆ ಕಲೆಕ್ಟರರನ್ನು ವಿನಂತಿಸುವ ಹಾಗೂ ನ್ಯಾಯ ಬೆಲೆ ಅಕ್ಕಿಯು ಗೋದಾಮುಗಳನ್ನು ಮಂಗಳೂರಲ್ಲಿ ತೆರೆಯಬೇಕೆನ್ನುವ ನಿರ್ಣಯಗಳನ್ನು ಶ್ರೀ ಎ. ಶಾಂತಾರಾಂ ಪೈಗಳು ಮಂಡಿಸಿದರು. ಶ್ರೀ ಬಿ. ಎಸ್. ಭಾಸ್ಕರ ರೈಗಳು ಅನುಮೋದಿಸಿದ ಬಳಿಕ ನಿರ್ಣಯಗಳು ಮಂಜೂರಾಯಿತು. ಸಾಧಾರಣ ಒಂದು ಕೋಟಿ ರೂಪಾಯಿ ವೆಚ್ಚದ ಭೂಗತ ಚರಂಡಿ ಯೋಜನೆ ಮತ್ತು ನೀರು ಸರಬರಾಜು ಯೋಜನೆಯನ್ನು ಮಂಗಳೂರಲ್ಲಿ ಮೈಸೂರು ಸರಕಾರವು ಕೈಕೊಳ್ಳಲಿರುವುದಾಗಿ ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು. ಮೈಸೂರು ಸರಕಾರವು ಇತ್ತೀಚೆಗೆ ಪ್ರಕಟಿಸಿದ ಹೊಸ ವೇತನವನ್ನು ಮಂಗಳೂರು ನಗರ ಸಭೆಯ ಎಲ್ಲಾ ನೌಕರರಿಗೂ ಅನ್ವಯಿಸುವ ಏರ್ಪಾಡು ಮಾಡುವುದಕ್ಕಾಗಿ 1957-58ರ ಮುಂಗಡ ಪತ್ರದಲ್ಲಿ ಸಾಮಾನ್ಯವಾಗಿ ಮತ್ತು ಶಿಕ್ಷಣವಾಗಿಯೆ ಹಣದಿಂದ ರೂಪಾಯಿ 36,000 ವನ್ನು ಉಳಿಸಿ ನೌಕರರಿಗೆ ಮುಂದಿನ ಏಪ್ರಿಲ್ ತಿಂಗಳಾರಂಭದಿಂದ ಹೊಸವೇತನ ಸ್ಕೇಲನ್ನು ಕೊಡುವುದಾಗಿ ನಿರ್ಣಯಿಸಲಾಯಿತು.

ಡಿಯೂಲ್ ಡ್ರಿನ ಚಿಮಿಕಿಸುವಿಕೆ — ಮುಂದಿನ ಮೂರ್ ತಿಂಗಳ ತಾ. 4ರಿಂದ ಹತ್ತು ದಿನಗಳ ತನಕ ಸಾಧಾರಣ 130 ಜನರಿಂದ ಕೂಡಿದ ತಜ್ಞರ ಶಿಬಂಧಿಯು ಬೆಂಗಳೂರಿನಿಂದ ಮಂಗಳೂರಿಗೆ ಬಂದು ನಗರದ 20,000 ಮನೆಗಳ ಗೋಡೆಗಳಿಗೆ 'ಡಿಯೂಲ್ ಡ್ರಿನ್' ಎಂಬ ಹೊಸ ಶಕ್ತಿಯುತ ಡಿ. ಡಿ. ಟಿ. ಯನ್ನು ಉಚಿತವಾಗಿ ಚಿಮುಕಿಸಿ ನುಸಿಗಳ ಮತ್ತು ಅನೇಕಾಲು ರೋಗದ ನಿವಾರಣೆಯನ್ನು ಮಾಡಲಿರುವರು. ನಗರವಾಸಿಗಳು ಈ ಸಂದರ್ಭವನ್ನು ಸದುಪಯೋಗ ಗೊಳಿಸಿಕೊಳ್ಳಲು ಶಿಬಂದಿಯವರೊಡನೆ ಸಹಕರಿಸಬೇಕಾಗಿದೆ.

ವಾರ್ಷಿಕೋತ್ಸವ— ಕೊಡಿಯಾಲ ಬೈಲಲ್ಲಿರುವ ಸರಕಾರಿ ಬುನಾದಿ ತರಬೇತಿ ಶಾಲಾ ವರ್ಷಂತಿಯು ತಾ. 19ರಲ್ಲು ಸೈಂಟ್ ಎಲೋಸಿಯಸ್ ಕಾಲೇಜಿನ ಪ್ರಾಧ್ಯಾಪಕ ಶ್ರೀ ಭುಜಂಗ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಹೆಡ್ಮಾಸ್ಟರ್ ಶ್ರೀ ಭುಜಂಗ ರಾಯರು ವರದಿಯನ್ನೋದಿದರು. ಹಳೆ ವಿದ್ಯಾರ್ಥಿ ಶ್ರೀ ರಂಗ ಕಕ್ಕೇರರು ಸ್ವಾಗತಾಚಿಸಿದರು. ಬುನಾದಿ ಶಿಕ್ಷಣವು ಯಶಸ್ವಿಯಾಗಲು ಸರಕಾರವು ಕೈಕೊಳ್ಳಬೇಕಾದ ಕಾರ್ಯಕ್ರಮಗಳೇನಿಂಬುದನ್ನು ಅಧ್ಯಕ್ಷರು ತಿಳಿಸಿದರು.

ಕರ್ನಾಟಕ ಸಂಘ— ಸ್ಥಳೀಯ ಸೈಂಟ್ ಎಲೋಸಿಯಸ್ ಕಾಲೇಜಿನ ಕರ್ನಾಟಕ ಸಂಘದ ವಾರ್ಷಿಕೋತ್ಸವವು ತಾ. 16ರಲ್ಲು ಕುಮಟಾ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ಬಿ. ಎಚ್. ಶ್ರೀಧರನವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ಶ್ರೀ ಟಿ. ಗೋಪಾಲಕೃಷ್ಣ ಭಟ್ಟರು ಸ್ವಾಗತಮಾತುಗಳ ನ್ನಾಡಿದರು. ಕಾರ್ಯದರ್ಶಿ ಶ್ರೀ ಕೆ. ಎಚ್. ವಾಸುದೇವರಾಯರು ವರದಿಯನ್ನೋದಿದರು ಶ್ರೀ ಎಸ್. ಸುಬ್ಬರಾಯರು 'ಕನ್ನಡ ನುಡಿಯ ಹಿರಿಮೆ' ಕುರಿತು ಭಾಷಣವಿತ್ತರು. ಶ್ರೀ ಎ. ಮಹಾಲಿಂಗ ನಾಯ್ಕರು ಧನ್ಯವಾದಗಳನ್ನಿತ್ತರು.

ತರಬೇತಿ ಕಾಲೇಜು ಮತ್ತು ಹೈಸ್ಕೂಲುಗಳ ವಾರ್ಷಿಕೋತ್ಸವ— ಸ್ಥಳೀಯ ಸರಕಾರಿ ತರಬೇತು ಕಾಲೇಜು ಮತ್ತು ಹೈಸ್ಕೂಲುಗಳ ವಾರ್ಷಿಕೋತ್ಸವವು ತಾ 21ರಲ್ಲು ದ ಕ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಡಾ. ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಬಿ. ಎಸ್. ಆಂಚೆಯರು ವರದಿಯನ್ನೋದುತ್ತಾ ಕಾಲೇಜಿಗೆ ಉತ್ತಮ ಕಟ್ಟಡ, ಪಾಠಶಾಲೆ ಕಟ್ಟಡ ನುತು ಆಟದ ಬಯಲಿನ ಅಪೇಕ್ಷಕತೆಯನ್ನು ಸೂಚಿಸಿದರು ಅಧ್ಯಕ್ಷರು ಬುನಾದಿ ವಿದ್ಯಾಭ್ಯಾಸವನ್ನು ಎಷ್ಟೆಯನ್ನು ಕೋಡುವುದು ಮಾತ್ರ ವಿದ್ಯಾ ಸಂಸ್ಥೆಗಳ ಗುರಿಯಲ್ಲವೆಂದೂ ಅವರಿಗೆ ಒಳ್ಳೆಯ ಗುಣ ನಡತೆಗಳನ್ನು ಕಲಿಸಿಕೊಡುವುದು ಅತಿ ಪ್ರಾಮುಖ್ಯವಾಗಿದೆ ಎಂದೂ ನೀಳಿದರು. ಶ್ರೀ ಬಿ. ವಿ. ರಮಣನವರು ಸಂದೇಶಗಳನ್ನೋದಿದರು. ತಾಲೂ ಹೆಡ್ಮಾಸ್ಟರ್ ಶ್ರೀ ಎಸ್. ಡಿ. ಲೋಬೋರವರು ಧನ್ಯವಾದಗಳನ್ನಿತ್ತರು. ಬಳಿಕ ವಿವಿಧ ವಿನೋದಾವಳಿಗಳಾದುವು.

ಶೈಕ್ಷಣಿಕ ಸ್ಪರ್ಧೆ— ಸರಕಾರೀ ತರಬೇತಿ ಕಾಲೇಜಿನ ವಾರ್ಷಿಕೋತ್ಸವದ ಅಂಗವಾಗಿ ಏರ್ಪಡಿಸಿದ ಶೈಕ್ಷಣಿಕ ಸ್ಪರ್ಧೆಗಳನ್ನು ತಾ. 23ರಲ್ಲು ಬೆಳಿಗ್ಗೆ ಕೆನರಾ ಹೈಸ್ಕೂಲು ಹೆಡ್ಮಾಸ್ಟರ್ ಶ್ರೀ ಯು. ಶ್ರೀನಿವಾಸ ಕಿಣಿಯರು ಉದ್ಘಾಟಿಸಿದರು. ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಬಿ. ಎಸ್. ಆಂಚೆಯರು ಅಧ್ಯಕ್ಷತೆ ವಹಿಸಿದ್ದರು.

ದ. ಕ. ಜಿಲ್ಲಾ ನಾಟಕ ಸ್ಪರ್ಧೆ— ದ. ಕ. ಜಿಲ್ಲೆಯ ಸ್ಥಳೀಯ ನಾಟಕ ಸ್ಪರ್ಧೆಯನ್ನು ಇದೇ ಲರುವ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ದ. ಕ. ನಾಟ್ಯ ಕಲೋತ್ಸವ ಸಮಿತಿ, ಮಂಗಳೂರು—1, ಅವರು ಏರ್ಪಡಿಸಲಿರುವರು. ಜಿಲ್ಲೆಯ ಎಮೆಚ್ಯೂರ್ ಸಂಘಗಳು ರೂಪ್ಯ ೫/— ಪ್ರವೇಶ ಧನದೊಂದಿಗೆ ತಾವು ಸ್ಪರ್ಧೆಗೆ ಕಳುಹಿಸಲಿಚ್ಚಿಸುವ ಮೂರು ತಾಸಿಗೆ ಮೀರದ ನಾಟಕ ಪ್ರತಿಯೊಂದನ್ನು ಅದಕ್ಕಾಗಿ ಯೋಚಿಸಿದವರೂ ಆಡ್ಯ ಮಹಿಷೀಯರೆ ಪರಿಚಯ ಪತ್ರಗಳೊಂದಿಗೆ ತಾ. 5-3-57ರೊಳಗೆ ತಲ್ಪುವಂತೆ ಮೇಲೆ ಹೇಳಿದ ಸಮಿತಿ ಕಾರ್ಯದರ್ಶಿಯರಿಗೆ ಕಳುಹಿಸಿಕೊಡಬೇಕಾಗಿ ಪ್ರಕಟಣೆ ಹೊರಟಿದೆ.

ಕಾಶ್ಮೀರ

(೪ನೇ ಪುಟದಿಂದ)

ಹಿ ಶೇಕ್ ಅಬ್ದುಲ್ಲಾನ ನೆರವು ಪಡೆದು ಪ್ರಕೃತ ಸೌಂದರ್ಯದ ತವರೂರಾದ ಸಂಪತ್ತಿನ ನೆಲೆ ಕಾಶ್ಮೀರವನ್ನು ಅಕ್ರಮಿಸಿ ಅದನ್ನಿಪ್ಪು ದುರವಸ್ಥೆಗೀಡುಮಾಡಲೆಂದು ಪಾಕ್ ನಾಯಕರ ನಿರ್ಧಾರವೇನು?

ಕಾಶ್ಮೀರದಲ್ಲಿ ಬಹುಸಂಖ್ಯಾತರಾಗಿರುವುದರಿಂದ ಆದು ತಮಗೆ ಸೇರಬೇಕೆಂದು ಜಾತೀಯತಾ ಧೋರಣೆಯ ಪ್ರತಿವಾದಕರಾದ ಪಾಕ್ ಪ್ರಭೃತಿಗಳ ಪ್ರಲಾಪ. ಆದರೆ ಕಾಶ್ಮೀರ ತನ್ನ ಕಲವಾರು ಹೂರೈಕೆಗಳಿಗೆ ಭಾರತವನ್ನೇ ಹೊಂದಿಕೊಂಡಿದ್ದು, ಭಾರತಕ್ಕೆ ಕೈತಜ್ಞವಾಗಿರುವುದು ಪಾಕಿಸ್ತಾನಕ್ಕೆ ತಿಳಿದಿಲ್ಲವೇ? ಒಟ್ಟಾರೆ ಪಾಕಿಸ್ತಾನದಲ್ಲೀಗ ಜಾತೀಯತೆಯ ಬೀಜ ಆಳಕ್ಕೆ ಬೇರು ಬಿಟ್ಟು, ಹೆಮ್ಮರವಾಗಿ ಬೆಳೆದು ಬಿಟ್ಟಿದೆ! ತಮ್ಮ ಧೋರಣೆಯು ಪರಿಶೀಲನೆಗಾಗಿ ಕೆಲವರು ಪಾಕ್ ನಾಯಕರು ಭಾರತದ ಪ್ರಧಾನಿ ನೆಹರುರವರಿಗೆ 'ಕೆಲವು ದಿನಗಳ ಅವಧಿ'ಯನ್ನು ಕೊಟ್ಟಿರುತ್ತಾರೆ. ಅಲ್ಲಿಂದೆ ಜಿ ಅವಧಿಯೊಳಗಾಗಿ ಅವರೆ ಅಪೇಕ್ಷಿಸಿ ಕಾರ್ಯವು ಕೈಗೂಡಿ ಬರದಿದ್ದಲ್ಲಿ 'ತಕ್ಕ ಕಾರ್ಯೂಚರಣೆ'ಯನ್ನು ಕೈಕೊಳ್ಳುವುದಾಗಿಯೂ ಬೆದರಿಕೆ ಹಾಕಿದ್ದಾರೆ. ಈ ತರದ ಹೊಳ್ಳು ಬೆದರಿಕೆಗೆಂದೂ ಭಾರತೀಯರು ಹೆದರಲಾರರೆಂಬುದನ್ನು ಪಾಕ್ ನೇತೃಗಳು ಮನಗಂಡಿರಲಿ! ಭಾರತದ ಮೇಲೆ ಆಕ್ರಮಣ ನಡೆಯುವುದೆಂತಿರಲಿ, ಪ್ರಕೃತ ಭಾರತದ ಅಂಗವಾದ ಕಾಶ್ಮೀರದ ಒಂದುಗುಲ ನೆಲದ ಮೇಲೆ ಪಾಕಿಸ್ತಾನದ ದಾಳಿ ನಡೆದಲ್ಲಿ, ಕಾಶ್ಮೀರ ಮೇಕೆ, ಅಖಿಲ ಭಾರತವೇ ಅದನ್ನು ಏಕ ಚಿತ್ತದಿಂದ ವಿರೋಧಿಸುವುದು ಶತಸ್ಸಿದ್ಧ. ಪ್ರಧಾನಿ ನೆಹರುರವರು ಜಗತ್ತು ಇದನ್ನು ತಿಳಿದುಕೊಂಡಿರಬೇಕೆಂದು ಪದೇ, ಪದೇ ಸಾರಿದ್ದಾರೆ. ಕಾಶ್ಮೀರ ಬೇರೆ ನಲ್ಲ; ಭಾರತ ಬೇರೆಯಲ್ಲ ಎಂದಿದ್ದಾರೆ.

ಕಾಶ್ಮೀರ ವಿಚಾರದಲ್ಲಿ ನ್ಯಾಯಾನ್ಯಾಯಗಳ ವಿಮರ್ಶೆಮಾಡದೇ, ಪಾಕಿಸ್ತಾನಕ್ಕೆ ನೆರವಿತ್ತು, ಅದರ ದುರ್ನೀತಿಯನ್ನು ಪ್ರೋತ್ಸಾಹಿಸುತ್ತಿರುವ ಕೆಲವು ಮಹಾರಾಷ್ಟ್ರಗಳಿಗೇನು ಹೇಳಬೇಕೋ ತಿಳಿಯದಾಗಿದೆ. ದೊಡ್ಡ ಜನತಂಗಗಳೇ ಈ ಹೇಯ ಕೃತ್ಯವನ್ನು ನಡೆಸುತ್ತಿರುವಾಗ ಇತರರ ಪಾಡೇನು? ಜಂತೂ ಕಾಶ್ಮೀರದ ಪ್ರಶ್ನೆ ನ್ಯಾಯವಾಗಿ ಪರಿಹರಿಸಲ್ಪಡದಿದ್ದಲ್ಲಿ ವಿಶ್ವ ಸಂಸ್ಥೆ ಅನ್ಯಾಯ ಪಕ್ಷಪಾತಿಯೆಂಬುದೇ ಸಾಬೀತಾದೀತು! ಇನ್ನು ಮೇಲೆ ನ್ಯಾಯವು ಕೇಳಿ ಪೆರಿಲ್ಲದಂತಾದೀತು! ಹಾಗಾಗಬಾರದೆಂಬುದೇ ಭಾರತೀಯರೆಲ್ಲರ ಆಶಯ.

ಶ್ರೀ ಎಮ್. ರಘುನಂದನ ರಾವ್,
ಕಲ್ಲೂರು.

ಪುತ್ತೂರು ಡಿ. ಮು ಕೋರ್ಟಿನಲ್ಲಿ
R.E.P. 606/56 O.S. 481/55.
R. E. A. No. 678/56.

ಪಿ. ನರಶಿಂಹ ನ್ಯಾಕ —ಆರ್ಜಿದಾರ
ಮತ್ತು
ಶಂಕರ ಶೆಟ್ಟಿ —ಎದ್ರಿ

ಸದ್ರಿ ಎದ್ರಿ-ಶಂಕರ ಶೆಟ್ಟಿ, ನೆಕ್ಕಾಜೆ ಸಜ್ಜಿ ರಾಮಣ್ಣ ರೈಗಳ ಆಳಿಯ, ನ ದುಗ್ಗಮ್ಮ ಪೆಂಗ್ಣಿನ ಮಗ, ಕಾಸರಗೋಡು ತಾಲೂಕು ನೆಕ್ಕಾಜೆ ಗ್ರಾಮದಲ್ಲಿ,
ಇರಲಿಕೆ

ನೀಲ್ಯಂಡ ದಿಕ್ಕಿ ಅವರ್ಲಾರಿಯಲ್ಲಿ ಜವಾಬ್ದಾರಿ ಆಸ್ತಿ ಮಾರಾಟದ ಬಗ್ಗೆ ಆರ್ಜಿದಾರನು ಏಲಂ ಮಸ್ತಿಹಾರು ಡಾಕ್ಲುಮೆಂಟು ನಿಲಂಗೆ ನಿಜ್ಲುವರೆ ಬಿಡ್‌ಸರ್ಟಿರ್ಫಸ್ ಕೊಡಿಕಬೇಕೆಂತ ಆರ್ಜಿಮಾಡಿರುತ್ತಾನೆ. ಸದ್ರಿ ಅಮಲ್ದಾರಿಯಲ್ಲಿ ಮಿಸ್ತಿಹಾರಿನ ಶರ್ತ ನಿರ್ಣಯಿಸುವರೆಗೆ ತಾ. 7-3-1957ಕ್ಕೆ ಕ್ಯಾದೆಯುವುದರಿಂದ ನಿಮಗೇನಾದರೂ ಅಕ್ಷೇಪಣೆಯಿದ್ದಲ್ಲಿ ಆ ದಿವ್ಸ ಬೆಳಗ್ಗೆ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಉವಾಹರಿಸಿಕೊಳ್ಳತಕ್ಕದ್ದೆಂತಲೂ, ತಪ್ಪಿದರೆ ನಿಮ್ಮನ್ನು ಏಕಪಕ್ಷೀಯವಾಗಿ ನುಂಬರಿಸಲಾಗುವುದೆಂತಲೂ ಕೋರ್ಟು ಹುಕುಂಪ್ರಿಕಾರ ನಿಮಗೆ ಈ ಮೂಲಕ ತಿಳಿಸೋಣಾಗಿಯಿದೆ.

(Sd) P. Krishna Bhat,
Vakil for Petr.
Puttur Date 16—2—1957.

ದಿ| ಕಿಲ್ಲೆಯವರ ಪುಸ್ತಕಗಳು

ಪ್ರಾಚೀನ ತುಳುನಾಡು

(ಎನ್. ಎಸ್. ಕಿಲ್ಲೆ ಮತ್ತು ಎನ್. ಎ ಶೀನಪ್ಪ ಹೆಗ್ಡೆ)

ಪಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.

150 ಪುಟಗಳು. ಬಿಳಿ ಕಾಗದ, ಆಕರ್ಷಕ ರಂಗ್ವಾ ಪತ್ರ ಬೆಲೆ 2-0-0

ಭಾರತದ ಕರ್ಣ

ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0.

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ.

ಬೆಲೆ: 0-12-0.

ಮೂರೂ ಪುಸ್ತಕಗಳನ್ನು ದಿ| ಕಿಲ್ಲೆಯವರ ಧರ್ಮಪತ್ನಿ ಇಂದಿರಾ ಕಿಲ್ಲೆ, ಅವರು ಪ್ರಕಟಿಸಿವ್ವಾರೆ.

ನಿಮಗೆ ಬೇಕಾವ ಪ್ರತಿಗಳಿಗೆ ಬರೆಯಿರಿ:

ನವಭಾರತ ಪುಸ್ತಕ ಭಂಡಾರ ಉಡುಪಿ.

ಕೆಲವು ಉತ್ತಮ ಪುಸ್ತಕಗಳು.

ಬದುಕುಬಂಗಾರ	(ಕುಮಾರಸ್ವಾಮಿ)	1 8
ಯುಗವಾಣಿ	(ಕು. ಶಿ. ಹರಿದಾಸಭಟ್ಟ)	0 8
ಫಂಟಮಾರಾ	(,,)	2 0
ಏಶಿಯದ ಸಂಪತ್ತು	(,,)	2 0
ಆಂತರಂಗದ ಕತೆಗಳು	(ಸಂಕಲನ)	1 4
ಸ್ವಪ್ನಲೋಕ	(ಕಾರ್ತಿಕೇಯ)	0 8
ನೀತಿವಿನೋದ ಕತೆಗಳು		0 12
ಸೇವಾಪಥ	(ಸೇಟ್ ಗೊವಿಂದಾಸ್)	0 8
ಸರಸ್ವತಿ	(ಡಾ| ಎಂ. ಮಾಧವಾಚಾರ್ಯ)	0 12
ಗೀತೆಯ ಕೈಗನ್ನಡಿ	(ಚಿದಂಬರಯ್ಯ)	0 12
ಭಾರತದ ಕರ್ಣ	(ಎನ್. ಎಸ್. ಕಿಲ್ಲೆ)	0 6
ಪ್ರಾಚೀನ ತುಳುನಾಡು	(,,)	2 0
ಮುರಲಿ	(,,)	0 12
ಮಧುವನ	(ಸಂಕಲನ)	3 0
ಕಾವ್ಯಸಾಮ್ರಾಜ್ಯ	(,,)	1 8
ಶವಗಳ ಸಾಗಾಟ	(ಕಳ್ಳ ಪೇಟೆ)	0 12
ಕವಿತಾಕಾಮಿನಿ	(ಎಸ್. ವೆಂಕಟರಾಜ)	3 8
ಆಕಾಶಗಂಗೆ		1 10
ಜೀವನ ಸಂನ್ಯಾಸ	(ಪಿ. ಶೀನ ಶೆಟ್ಟಿ)	1 8
ದೇಶಭಕ್ತ	(ಕೆ. ಕೆ. ಶೆಟ್ಟಿ)	1 4
ಪ್ರೇಮವಿಜಯ	,,)	1 0

ನಿಜಂಟನು ಬೇಕು. ಶರ್ತಗಳಿಗೂ ನಮ್ಮಲ್ಲಿ ದೊರೆಯುವ ಇತರ ಕತೆಗಳ ಪುಸ್ತಕಗಳ ಕೆಟಲಾಗಿಗೂ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಹೊಸಕೆರೆ
ಚಿದಂಬರಯ್ಯನವರು
ಅನುವಾದಿಸಿವ

ಭಗವದ್ಗೀತೆಯ

ಸಮೂಲ ಭಾಷಾಂತರ

ಪೊಕೆಟ್ ಎಡಿಷನ್.

ಸುಮಾರು 450 ಪುಟಗಳು

ಕ್ರಯ 0—12—0

ನವಯುಗ ಪ್ರೆಸ್, ಉಡುಪಿ.

ಸುಧಾರಣೆ

ಪ್ರಾಯೋಗಿಕ ಶಿಕ್ಷಣ

ಜನರನ್ನು ಉದ್ಯೋಗ ಶೀಲರನ್ನಾಗಿಸಲು ಅಗತ್ಯ

ಶೈಕ್ಷಣೀಕ ವಿಷಯದ ಮೇಲೆ ಬರೆ ಾಗಲೆಲ್ಲ. ಮತ್ತು ಬರೆಯುತ್ತಿರುವಾಗ ೆಲ್ಲ 'ಪ್ರಾಯೋಗಿಕ ಶಿಕ್ಷಣ'ದ ಬಗ್ಗೆ ಸ್ಪಷ್ಟಿಲ್ಲಿ ವಿಶೇಷಾಸಕ್ತಿ ಉಂಟಾಗಿ ನಮ್ಮ ೀವನದಲ್ಲಿ ಇದಕ್ಕೆ ಪ್ರಮುಖವಾದ ಜಾ ಕೊಡಬೇಕೆಂದೂ, ಅದು ಸದ್ಯದ ಪರಿ ತಿಯಲ್ಲಿ ಆವಶ್ಯಕವೆಂದೂ ಅನ್ನುವವ ಲ್ಲಿ ನಾನೂ ಒಬ್ಬನಾಗಿದ್ದೇನೆ. ಕೇಂದ್ರ ರಕಾರವಾಗಲೀ, ರಾಜ್ಯ ಸರಕಾರಗಳಾ ಲೀ ಈ ದಿಶೆಯಲ್ಲಿ ಕೆಲವೊಂದು ಪ್ರೇತ್ರ ಗಳಲ್ಲಿ ಮುಂದಡಿಯಿಟ್ಟುದನ್ನು ನಾವು ೋಡಬಹುದಾಗಿದೆ. ಜರ್ಮ ಹನಮಾ ುವುದು, ಕೋಳಿಗಳನ್ನು ಸಾಕುವುದು ೀಶ್ಮೆ ಕೈಗಾರಿಕೆ ಮೊದಲಾದವುಗಳಲ್ಲಿ ರಕಾರವು ವಿದ್ಯಾರ್ಥಿ ವೇತನಗಳನ್ನು ೊಟ್ಟು ಶಿಕ್ಷಣ ಕೊಡುತ್ತಿರುವುದನ್ನು ಾವು ಕಂಡುಕೊಳ್ಳುತ್ತಿದ್ದೇವೆ. ಆವರೂ ಜನರಿಗೆ ಇದರಿಂದ ಸಮಾಧಾನವಾಗಿಲ್ಲ ೆಂದೆನ್ನಿಬಹುದಾಗಿದೆ. ಇದು ಸರಕಾರದ ಕ್ಷೆಪಿಂದು ಅನ್ನಲಾಗದಿದ್ದರೂ ಇನ್ನೂ ನೇಕ ಕ್ಷೇತ್ರಗಳಲ್ಲಿ ನಾವು ಪ್ರಾಯೋ ಿಕ ಶಿಕ್ಷಣದ ಆವಶ್ಯಕತೆಯನ್ನು ೂರೈಸುವುಸವಶ್ಯವೆಂಬುದನ್ನು ಮರೆಯ ಾಗದು. ಸರಕಾರಗಳು ಸಹಕಾರಿ ಸ್ಪೇತ್ರ ಮೊದಲಾದವುಗಳಲ್ಲೂ ಶಿಕ್ಷಣ ಕೊಡಲು ಸಹಾಯ ನೀಡಿದುದೂ ಅಭಿ ಂದನಾರ್ಹವಾದುದೇ ಸರಿ! ಆದರೆ ಈ ಪ್ರಾಯೋಗಿಕ ಶಿಕ್ಷಣ ಒಟ್ಟಾಗಿ ಕಲಿಯು ಿರುವ ಜನಮಾನದಿಂದ ತೀರ ಅಶ್ಯಕ್ತ ವೆಂಬುದಾಗಿ ಹೇಳಬಹುದಾಗಿದೆ.

ಪ್ರಾಥಮಿಕ ಶಾಲೆಯಿಂದಾರಂಭಿಸಿ, ಕಾಲೇಜು ಶಿಕ್ಷಣದ ವರೆಗೂ ವಿಶೇಷವಾದ ಸ್ರಯೋಗಾತ್ಮಕ ಶಿಕ್ಷಣದ ಅನುಕೂಲತೆ ಯಿಲ್ಲವೆಂದು ಹೇಳಬಹುದು. ವೈಜ್ಞಾನಿಕ ಶಾಕ್ತ್ರವನ್ನಭ್ಯಸಿಸುವ ವಿದ್ಯಾರ್ಥಿಗಳಾದ ರೂ ಕಲಿತವನ್ನೇ ಕಲಿಯುವರಲ್ಲದೆ ಅವ ರಿಗೂ ಕೂಡ ಹೇಳಿಕೊಳ್ಳುವಂತಹ ವಿಶೇ ಷತೆಯೇನೂ ಇರುವುದಿಲ್ಲ. ಆದರೂ ಕೂ ಡ ಮುಂದೆ ಇಂಜಿನೀಯರಿಂಗ್, ಮೆಡಿಕ ಲ್ ಮೊದಲಾದ ಇತರೆಡೆಗಳಲ್ಲಿ ಶೈಕ್ಷಣೀ ಕ ಟಸಿಲಿಗಳು ಒಡೆದು ಉಪಯುಕ್ತವಾ ದ ಕೆಲವೊಂದು ಮಾರ್ಗಗಳು 'ಪ್ರಾಯೋ ಗಿಕ ಶಿಕ್ಷಣ' ದೃಷ್ಟಿಯಿಂದಲೂ ಉಪಯು ಕ್ತವೂ ಮಹತ್ವದವೂ ಆಗಿವೆ. ಆದರೆ ಕ ಲೆಯ (Arts) ವಿದ್ಯಾರ್ಥಿಗಳ ದೃಷ್ಟಿ ಯ ಲ್ಲೇನು?

ಕಲಿತದ್ದನ್ನೇ ಕಲಿಯುವ, ಹೇಳಿದ್ದನ್ನೇ ಹೇಳುವ, ಇದ್ದುದನ್ನೇ ಬರೆಯುವ ಒಂದು ವೃತ್ತಿಯೇ ಇಂದಿನ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಲ್ಲೂ, ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳಲ್ಲೂ ಇದರಂತೆ ಕಾಲೇಜಿನ ಆರ್ಟ್ಸ್ ವಿಭಾಗದವರಲ್ಲೂ ಬೆಳೆದುಬಂದಿ ದೆ. ಇದರಿಂದಾಗಿ ಅವರು ಯಾವುದರ ಲ್ಲೇ ವಿಶೇಷ ತಜ್ಞತೆ ಸಜೆಯುಡೆ ಅಲಸ್ಯ ತನದ ಆಶ್ರಯಿಗಳಾಗುತ್ತಾರೆ. ಇದರಿಂ ದಾಗಿ ಅವರು ಎಲ್ಲಿಯಾದರೂ ಕೆಲಸಕ್ಕೆ ಹೋದರೂ ಈ ವೃತ್ತಿಯೇ ಜೆಳೆಬು ಬಂದು ಕಾರ್ಯದಲ್ಲಿ ಜಡತೆಜಡೆಯುಂಟಾಗ ಬಹುದಾದ ಸಂಭವವೂ ಹೆಚ್ಚಾಗಿದೆ. ಈ ಕಾರಣದಿಂದ ವಿದ್ಯಾರ್ಥಿಗಳಲ್ಲೆ ಂದರಿ ಭಿ ದ್ದಿಂ ದಲೂ ಕೃತಿಯಲ್ಲಿ ಬರ ಬಹುದಾದಂತಹ ಹಾಗೂ ವಿದ್ಯಾರ್ಥಿಗ ಳಿಂದ ಪ್ರಯೋಗಿಸಲ್ಪಡಲನುಕೂಲವಾ ಗುವಂತಹ ಪಾಠ್ಯಕ್ರಮದ ಆವಶ್ಯಕತೆ ಬಹಳಷ್ಟಿದೆ. ಇದಕ್ಕಾಗಿ ಸರಕಾರಕ್ಕೆ ವಿ ಶೇಷ ವೆಚ್ಚ ಬರುವುದೆಂದು ಅನ್ನಬೇಕಾ ದುದಿಲ್ಲ; ಬರುವುದೂ ಇಲ್ಲ.

ಆಂದರೆ ಈಗಿನ ಪಾಠ್ಯಕ್ರಮವನ್ನು ತೆಗೆಯಬೇಕೆಂದು ಅರ್ಥವಲ್ಲ; ತೆಗೆಯ ಲೂ ಬಾರದು. ಜಗತ್ತಿನ ಸಾವಗಸ್ಯ ಚ್ಛಾಸಿದ್ಧಿಅನಿವಾರ್ಯಕತೆಯ ದೃಷ್ಟಿಯಿಂದ, ನಮ್ಮ ಸಂಸ್ಕೃತಿಯು ಹಿನ್ನೆಲೆಯ ಮಹತ್ವದ ದೃಷ್ಟಿಯಿಂದ, ವಿದ್ಯಾರ್ಥಿಗಳ ಉತ್ಸಾಹದ ದೃಷ್ಟಿಯಿಂದ ಸದ್ಯದ ವಿಷಯಗಳಲ್ಲಿ ಬದಲಾವಣೆ ಅನಿವಾರ್ಯ. ಆದರೆ ಸದ್ಯದಲ್ಲಿ ಆ ವಿಷಯಗಳಿಗಾಗಿ ಹಾಕುತ್ತಿರುವ ವೇಳೆಯಲ್ಲಿ ಕಡಿತಮಾಡಿ ಆ ವೇಳೆಯಲ್ಲಿ ಪ್ರಾಯೋಗಿಕ ಶಿಕ್ಷಣಕ್ಕೆ ಅನುಕೂಲ ಮಾಡಿಕೊಡಬೇಕು. ಹೀಗಾದರೆ ವಿದ್ಯಾರ್ಥಿಗಳ ಮೇಲೆ ಕಿಚ್ಚಿನ ವಿಷಯದ ಭಾರವಾಗಲಿಕ್ಕಿಲ್ಲವೇ ಎಂದೂ ಪ್ರಯತ್ನಿಸಬಹುದು. ಇದನ್ನು ನಾವು ಒಪ್ಪಿಕೊಳ್ಳಬಹುದಾದರೂ ಕೆಲ ವೊಂದು ವಿಷಯಗಳ ಅನಿವಾರ್ಯತೆಯೂ ಇರುತ್ತದೆ. ವಿದ್ಯಾರ್ಥಿಗಳು ತಮ್ಮ ಮನ ಸ್ಸಿಗಿದ್ದರೂ ಕೂಡ ಒತ್ತಾಯವಾಗಿ ನಿರ್ದಿಷ್ಟಪಡಿಸಲ್ಪಟ್ಟ ಕೆಲವೊಂದು ವಿಷ ಯಗಳನ್ನು ಈಗ ಕಲಿಯಬೇಕಾಗುತ್ತದೆ. ಇದನ್ನು ನಾವು ಹೆಚ್ಚಾಗಿ ಪ್ರಾಥಮಿಕ ಮಾಧ್ಯಮಿಕ ಶಾಲೆಗಳಲ್ಲಿ ಕಾಣಬಹುದು. ವಿದ್ಯಾರ್ಥಿಗಳಿಗೆ ಆರುಚಿಯೆನಿಸಬಹುದಾದ ವಿಷಯಗಳನ್ನು ತೆಗೆದು ಅವರ ಇಚ್ಛೆಯಂತೆ ಇತರ ವಿಷಯಗಳನ್ನು ಹಾಕುವುದೊಳಿತು.

ಪ್ರಾಯೋಗಿಕ ಶಿಕ್ಷಣವನ್ನಾರಂಭಿಸು ವುದಾದರೂ ಹೇಗೆ? ಎನ್ನುವ ಒಂದು ಪ್ರಶ್ನೆಯೂ ನಮ್ಮೆದುರಿಗೆ ಬರುತ್ತದೆ. ಇದನ್ನು ಸರಕಾರದವರಾಗಲೀ ಆಥವಾ ಸಂಬಂಧಿಸಿದ ಅಧಿಕಾರಿವರ್ಗದವರಾಗಲೀ ಸೇರಿ ನಿರ್ಧರಿಸಬಹುದು. ಪ್ರಾಯೋಗಿಕ ಶಿಕ್ಷಣದಿಂದ ವಿದ್ಯಾರ್ಥಿಗಳು ಚಿಕ್ಕವಯಸ್ಸಿನಲ್ಲಿ ನುರಿತವರಾಗಿ ಬರಲಿಲ್ಲದೆ, ಉಭಾ ವನಾಗಿರುವ ಸಂಸ್ಥೆಗಳಲ್ಲಿ ಅವಶ್ಯಕತೆಯ ವರಾಗುತ್ತಾರೆ. ಭಾರತೀಯ ಕೆಲಸಗಾ ರರು ಅನನುಭವಿಗಳೆಂದೂ, ಅದಕ್ಕಾಗಿ ನಮ್ಮ ನಾಮಾನುಗಳ ತರಗತಿಯೂ ಅಯೋಗ್ಯವಾದುದೆಂದೂ ವಿದೇಶಿಯರು ಅದರಲ್ಲೂ ವಿಶೇಷವಾಗಿ ಪಾಶ್ಚಿಮಾತ್ಯರು ಹೇಳುತ್ತಾರೆ. ಈ ಎಲ್ಲ ಆಪಾದನೆಗಳನ್ನು ಹೊಡೆದೋಡಿಸಲಿಕ್ಕೆ ಆರಂಭದಿಂದಲೇ ಪ್ರಾಯೋಗಿಕ ಶಿಕ್ಷಣದ ಯೋಜನೆಯು ನ್ಯಾಯಬದ್ಧವೆನಿಸಿ ಯೋಗ್ಯವಾಗು ದಾಗಿದೆ.

ಹೆಚ್ಚಿನ ಶಿಕ್ಷಣದಲ್ಲಿ ಆಸ್ಥೆಯಿಲ್ಲದವರೂ ಕೂಡ ಜೀವನದಿನಲ್ಲಿಯ ಆಥವಾ ತನ್ನು ಅಲ್ಪ ಶಿಕ್ಷಣದಲ್ಲೇ ನುರಿತ ವ್ಯಕ್ತಿ ಗಳಾಗಿ ಕೆಲಸದಲ್ಲಿ ಸಂಯೋಗ್ಯ ವ್ಯಕ್ತಿ ಯಾಗಬಹುದು. ಇದರಿಂದಾಗಿ ನಮ್ಮ ಸರಕಾರಗಳಿಗೂ, ವಿವಿಧ ತರಹದ ಸಂಸ್ಥೆ ಗಳಿಗೂ ಸರ್ವ ವಿಧವಾದ ಸರ್ವತೋ ಮುಖದ ಅನುಭವಿತ ವ್ಯಕ್ತಿಗಳು ದೊರೆ ಯುವರಲ್ಲದೆ, ನಮ್ಮು ಕೆಲಸಗಳಲ್ಲೂ, ನಿರ್ದಿಷ್ಟತೆ, ನಿಶ್ಚಯತೆ, ವಿಶ್ವಾಸಗಳು ಅವಿರತವಾಗಿ ಉಳಿಯುವಂತಾಗುತ್ತದೆ. ಆದ್ದರಿಂದ ಸರಕಾರವೂ, ಇತರ ಪ್ರಮುಖ ರೂ ಪ್ರಾಯೋಗಿಕ ಶಿಕ್ಷಣದ ಮಹತ್ವವ ನ್ನರಿತು ಆ ದಿಶೆಯಲ್ಲಿ ಕಾರ್ಯನಾಡಿದ್ದಾ ದರೆ, ರಾಷ್ಟ್ರದ ದೊಡ್ಡ ಸಮಸ್ಯೆಗಳ ಲ್ಲೊಂದಾದ ನಿರುದ್ಯೋಗತೆಯು ನಿವಾ ರಣೆಗೂ ಎಷ್ಟೋ ವರ್ಷಗಳ ಮಟ್ಟಿಗೆ ಸಹಾಯವಾ ಗುತ್ತದೆ; ರಾಷ್ಟ್ರಕ್ಕೆಷ್ಟು, ಜನತೆಗೂ ಉಪಯೋಗವಾಗುತ್ತದೆ.

—ಶ್ರೀ ಮೋಹನ ಮುತಾಲಿಕ.

In the Court of the District Munsif of Mangalore.

O. S. 184/1943.
R. E. P. 493/1956.

Between:—
Somu Hengsu ... Petitioner.
and
Manjakke & others ... Respondents.

To

1st respt Manjakke, daughter of Linga Gowda, and wife of Aithappa Gowda, residing in Kuriya Village, Puttur Tq.

The abovenamed petitioner has applied for sale of immoveable property described in the decree, and for permission to bid and set off in R. E. A. 757/1956 you are hereby informed that the 4th day of March 1957 has been fixed for settling the terms of the proclamation of sale and granting permission.

Yours faithfully.
K Balakrishna Rao,
Advocate for Petr.
Mangalore, 20-2-57.

ಸೆಕೆಂಡರಿ ಶಾಲೆಗಳು

ತಮ್ಮ ಉಪಯೋಗಾರ್ಥವಾಗಿ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು Rec. No. 466-N/50 ತಾ. 12-12-50ನೇ ಪ್ರೊಸಿಡಿಂಗ್ಸಿನಂತೆ ಮದ್ರಾಸು ಸರಕಾರದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ನವರು ಮಂಜೂರು ಮಾಡಿದ್ದಾರೆ.

ಈ ವರೆಗೆ ಚಂದಾದಾರರಾಗದ ಯಾವ ತ್ತೂ ಸೆಕೆಂಡರಿ ಶಾಲೆಗಳೂ 'ನವಯುಗ'ಕ್ಕೆ ಚಂದಾದಾರರಾಗಿ ತರಿಸಿಕೊಂಡು ಪ್ರೋತ್ಸಾಹಿಸುವಂತೆ ಈಮೂಲಕ ವಿನಂತಿಸಿಕೊಳ್ಳಲಾಗಿದೆ.

ಮೆನೇಜರ್.

ಒಂದು ಹೊಸ ಮಹಾ ಕಾದಂಬರಿ

ನಡುಹಗಲಿನ ಕಗತ್ತಲೆ

ಸಿಲ್ಕ್ ಪುಟಗಳು ಬೆಲೆ 2½ ರೂಪಾಯಿ

- ಯುರೋಪಿನಲ್ಲಿ ಈಗ ನಲ್ವತ್ತು ವರ್ಷಗಳ ಹಿಂದೆ ನಡೆದು ಇಡೀ ಪ್ರಪಂಚವನ್ನೇ ತಲ್ಲಣಗೊಳಿಸುತ್ತಿರುವ ಒಂದು ರಾಜನೈತಿಕ ಪದ್ಧತಿಯಿಂದ ಮನುಷ್ಯನ ಆತ್ಮವು ಪತನವಾಗುತ್ತಿರುವ ದುರಂತದ ಒಂದು ಮಾರ್ಮಿಕ ಕಾದಂಬರಿ.
- ರತಿಯದೆ ರಕ್ತಮಯ ಕ್ರಾಂತಿಯು ವ್ಯಕ್ತಿಯ ಜೀವ ಸುತ್ತು ನೆತ್ತರನ್ನು ನಿರ್ದಾಕ್ಷಿಣ್ಯವಾಗಿ ಹೀರುವ ಭೀಕರ ಚಿತ್ರಣ.
- ಇದರಲ್ಲಿ ಪ್ರಚಲಿತ ಪ್ರಪಂಚದ ರಾಜನೀತಿ, ಇತಿಹಾಸ, ಮತ್ತು ಅಂತಾರಾಷ್ಟ್ರೀಯ ರೀತಿ ನೀತಿಯ ಒಳನೋಟ ದೊರೆಯುತ್ತದೆ.
- ಪ್ರಖ್ಯಾತ ಲೇಖಕ **ಆರ್ಥರ್ ಕೊಸ್ಲರ್** ಅವರ ಜರ್ಮನ್ ಕಾದಂಬರಿಯ ಮನೋಜ್ಞ ಕನ್ನಡವನ್ನು ಅನುವಾದಿಸಿದವರು **ಕು. ಶಿ. ಹರಿದಾಸ ಭಟ್ಟರು.**

ಪ್ರಕಾಶಕರು:

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.

(ಪ್ರತಿಗಳು ನವಭಾರತ ಪುಸ್ತಕ ಭಂಡಾರ, ಉಡುಪಿ, ಇಲ್ಲಿಯೂ ದೊರೆಯುತ್ತವೆ)

98 ವರ್ಷಗಳ ವ್ಯಾತಿಗೆನಿಸಿದ ಂ|| ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ರತ್ನದ್ವಯಗಳು

ಟ್ರೇಡ್ ಮಾರ್ಕ್



ಸಂತಾನ ಸಿಂಧೂರ | ಮದನ ವಿಲಾಸ
(ಸ್ತ್ರೀಯರಿಗೆ: ಖ್ಯಾತಿಯ) | (ಪುರುಷರಿಗೆ: ಗುಳಿಗೆ)

ಈ ಔಷಧವು ಬ್ರಹ್ಮಚರ್ಯ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಆಮ್ಲಜನಕವನ್ನು ಶರೀರದಲ್ಲಿ ಹೆಚ್ಚುವಂತೆ ಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನ ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಸಿ, ನಪುಂಸಕತೆಯನ್ನು ನಿವಾರಿಸಿ ಪುರುಷತ್ವವನ್ನು ಹೆಚ್ಚಿಸುತ್ತದೆ.

ಪಂ|| A. R. ಆಯ್ಯರ್

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ ತಾಯ್ತಂದೆಗಳಾಗಿದ್ದಾರೆ.
ಹೊಸ ಕ್ಯಾಟಲಾಗು, ರೋಷಧದ ಬೆಲೆ ಇತ್ಯಾದಿಗಳಿಗೆ 3 ಆಣೆ ಸ್ಟ್ಯಾಂಪು ಕಳಿಸಿರಿ

ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ., (ನ. ಯು.)
628 ಸಂತಾನ ಸಿಂಧೂರ ನಿವಾಸ (ಪೋಸ್ಟ್ ಬೀಟ್ 9) ಮೈಸೂರು S. I.

ಹೊಸ ನಾಣ್ಯದ ಬಳಕೆ

(೨ನೇ ಪುಟದಿಂದ)

ತಿದ್ದುಪಡಿಯಾದ ಭಾರತೀಯ ನಾಣ್ಯ ಪದ್ಧತಿ ಶಾಸನದ ಪ್ರಕಾರ ರೂಪಾಯಿಯನ್ನು ೧೬ ಆಣೆ ಅಥವಾ ೬೪ ಬಿಲ್ಲಿ ಅಥವಾ ೧೯೨ ಪೈಗಳಿಗೆ ಬದಲಾಗಿ ೧೦೦ ಭಾಗಗಳಲ್ಲಿ ಹಂಚಬೇಕಾಗುತ್ತದೆ. ಅದುದರಿಂದ ಈ ಆಧಾರದ ಮೇಲೆ ಈಗಿನ ನಾಣ್ಯಗಳು ದಶಾಂಶ ನಾಣ್ಯಗಳಿಗೆ ಪರಿವರ್ತನೆಯಾಗ ಬೇಕಾಗಿದೆ.

ಅರ್ಧ ರೂಪಾಯಿ ಮತ್ತು ಕಾಲು ರೂಪಾಯಿ ನಾಣ್ಯಗಳಿಗೆ ದಶಾಂಶ ನಾಣ್ಯಗಳಲ್ಲಿ ತತ್ಸಮ ನಾಣ್ಯಗಳು ಸಿಕ್ಕುತ್ತವೆ. ಆದರೆ ಕಾಲಾಣೆಗಿಂತ ಕಡಮೆ ಬೆಲೆಯ ನಾಣ್ಯಗಳಿಗೆ ತೀರ ಸಮಾನವಾದ ಹೊಸ ನಾಣ್ಯಗಳು ಸಿಕ್ಕುವದಿಲ್ಲ. ಆದುದರಿಂದ ಅವುಗಳನ್ನು ದಶಾಂಶ ನಾಣ್ಯ

ಪರಿವರ್ತನೆ ಮಾಡುವಾಗ ಅಪೂರ್ ನಯೆಪೈಸೆಗಳು ಬರುವಪೆಂಬುದು ನ ತಪ್ಪುದಿಂದ ಗೊತ್ತಾಗುವದು.

ಪದ್ಧತಿಯಲ್ಲಿ ನಯಾ ಪೈಸಾಕ್ಕಿಂ ಕ್ಷ ನಾಣ್ಯಗಳಿರುವದಿಲ್ಲವಾದ್ದರಿಂದ ವು ಪ್ರತ್ಯಕ್ಷ ವ್ಯವಹಾರಗಳಲ್ಲಿ ರ್ಣಾಂಕಗೊಳಿಸುವ ರೀತಿಯನ್ನು ಸಿದೆ.

ತತ್ವದ ಮೇರೆಗೆ ಅರ್ಧ ನಯಾ ನುತ್ತು ಅನಂರ ಕೆಳಗಿನ ಭಾಗವನ್ನು ಬಿಡಲಾಗುವದು ಮತ್ತು ಅರ್ಧ ಪೈಸಾಕ್ಕೆಂತ ಹೆಚ್ಚಿನ ಭಾಗವನ್ನು ಒಂದು ನಯಾ ಪೈಸಾ ಎಂದು ಗಣಿಸಿ ಪೂರ್ಣಾಂಕಗೊಳಿಸಲಾಗುವದು.

ದಶಾಂಶ ನಾಣ್ಯಪದ್ಧತಿಯ ಮೇರೆಗೆ ಪದ್ಧತಿ ಒಂದು ಬಿಲ್ಲಿಗೆ ತತ್ಸಮ ಅಂಕೆ ಎಂದರೆ ೧.೫೬೨೫ ನಯಾ ಪೈಸಾ ಆಗುತ್ತದೆ. ಪೂರ್ಣಾಂಕಗೊಳಿಸುವ ಮೇರಿನ ತತ್ವದ ಪ್ರಕಾರ ಇದು ೨ ನಯೇ ಪೈಸೆ ಎಂದು ಗಣಿಸಲಾಗಿದೆ. ಪರಿವರ್ತನಾ ಪಟ್ಟಿಗಳಲ್ಲಿ ತೋರಿಕೆಗೆ ಕಂಡುಬರುವ ಅಸಮಾನತೆಯ ಅಭಾಸಕ್ಕೆ ಇದೇ ಮುಖ್ಯ ಕಾರಣವಾಗಿದೆ.

ಯಾವದೇ ಒಂದು ವ್ಯವಹಾರದ ಕಾಲಕ್ಕೆ ಸದ್ಯದ ನಾಣ್ಯಗಳನ್ನು ಕೊಡುಕೊಳ್ಳುವ ಸಂದರ್ಭದಲ್ಲಿ ಮಾತ್ರ—ಅಂದರೆ ಆ ವ್ಯವಹಾರಕ್ಕೆ ಸಂಬಂಧಿಸಿದ ಒಟ್ಟು ಮೊಬಲಗನ್ನು ಕೊಡುವಾಗ ಅಥವಾ ಸಡೆಯುವಾಗ ಮಾತ್ರ—ಪರಿವರ್ತನಾ ಪಟ್ಟಿಗಳನ್ನು ಉಪಯೋಗಿಸಬೇಕು.

ಉದಾಹರಣೆಗಾಗಿ ಯಾವದೋ ಒಂದು ಖರೀದಿಯ ಕಾಲಕ್ಕೆ ಒಬ್ಬನು ೪೩ ಬಿಲ್ಲೆಗಳನ್ನು ಕೊಡಬೇಕಾಯಿತೆಂದಿಟ್ಟುಕೊಳ್ಳಿರಿ. ಪರಿವರ್ತನಾ ಪಟ್ಟಿಯ ಪ್ರಕಾರ, ೪೩ ಬಿಲ್ಲೆಗೆ (೧೦ ಆಣೆ ೯ ಪೈ) ೬೭ ನಯೆ ಪೈಸೆ ಎಂದಿದೆ. ಅದೇ ಪಟ್ಟಿಯಲ್ಲಿ ೧ ಬಿಲ್ಲೆಗೆ ೨ ನಯೆ ಪೈಸೆ ಎಂದು ಹೇಳಿರುವುದರಿಂದ ೪೩ ಬಿಲ್ಲೆಗೆ ೮೬ ನಯೆ ಪೈಸೆ ಕೊಡಬೇಕೆಂದು ಹೇಳುವದು ಸರಿಯಾಗಲಾರದು.

ಪ್ರತ್ಯಕ್ಷ ಹಣ ಸಂವಾಯವನ್ನೊಳಗೊಂಡ ವ್ಯವಹಾರಗಳಲ್ಲಿ ಸದ್ಯದ ನಾಣ್ಯಗಳಿಗೆ ಹೊಸ ನಾಣ್ಯಗಳಲ್ಲಿ ಸಮಾನ ಬೆಲೆ ಎಷ್ಟೆಂಬುದನ್ನು ಕಂಡು ಹಿಡಿಯಲು ಮಾತ್ರ ನಾಣ್ಯ ಪದ್ಧತಿ ಕಾನೂನಿನಲ್ಲಿ ಲೆಕ್ಕದ ಪದ್ಧತಿಯನ್ನು ನಿರ್ದಿಷ್ಟಪಡಿಸಲಾಗಿದೆ.

ಆದರೆ ಪ್ರತ್ಯಕ್ಷ ಹಣ ಸಲ್ಲಿಸುವ ಸಂದರ್ಭವಿಲ್ಲದಲ್ಲಿ ಉದಾಹರಣೆಗೆ ದರಗಳನ್ನು ಲೆಕ್ಕ ಹಾಕುವದು, ಕಾನೂನು ಮುಂತಾದವುಗಳಲ್ಲಿ ಹೇಳಲಾದ ಬೆಲೆಗಳನ್ನು ಪರಿವರ್ತಿಸುವಾಗ—ಸಮಸ್ತರಿವಾದ ಪರಿವರ್ತನಾಸಪ್ಪೆ ಅವಶ್ಯವಿಲ್ಲ. ೧೬ ಆಣೆ ಅಥವಾ ೬೪ ಬಿಲ್ಲೆ ಇಲ್ಲವೆ ೧೯೨ ಪೈಗಳಿಗೆ ೧೦೦ ನಯೆ ಪೈಸೆ ಎಂದು ನೇರವಾಗಿ ಲೆಕ್ಕ ಹಾಕಬೇಕು.

ದಶಾಂಶ ನಾಣ್ಯಗಳಲ್ಲಿ ಸರಿಸಮಾನವಾದವುಗಳನ್ನು ಲೆಕ್ಕ ಹಾಕುವಲ್ಲಿ ಆಗುವ ಅನಾನುಕೂಲತೆಗಳನ್ನು ತಪ್ಪಿಸುವ ದೃಷ್ಟಿಯಿಂದ ಸದ್ಯ ಅಸ್ತಿತ್ವದಲ್ಲಿದ್ದ ದರಗಳ ಮೇರೆಗೆ ಪೂರ್ಣ ಲೆಕ್ಕ ಮಾಡಿ ನಂತರ ಒಟ್ಟು ಹಣವನ್ನು ದಶಾಂಶ ಪದ್ಧತಿಗೆ ಪರಿವರ್ತಿಸಬೇಕು.

ಉದಾಹರಣೆಗಾಗಿ, ಒಂದು ಬೆಂಕಿ ಪೆಟ್ಟಿಗೆಗೆ ಮೂರು ಬಿಲ್ಲೆ ಬೆಲೆ. ಆರು ಬೆಂಕಿ ಪೆಟ್ಟಿಗೆಗಳನ್ನು ನಾವು ತೆಗೆದು ಕೊಂಡೆವೆನ್ನೋಣ. ಅದಕ್ಕಾಗಿ ಅಂಗಡಿಕಾರನಿಗೆ ಕೊಡಬೇಕಾದ ದುಡ್ಡು ಎಷ್ಟು? ಪ್ರತಿಯೊಂದಕ್ಕೆ ಮೂರು ಬಿಲ್ಲೆಯ ಪ್ರಕಾರ ನಾವು ೧೮ ಬಿಲ್ಲೆಗಳನ್ನು ಈ ವ್ಯವಹಾರದಲ್ಲಿ ಕೊಡಬೇಕಾಗುತ್ತದೆನ್ನುವುದು ಸ್ಪಷ್ಟ. ಆದರೆ ಹೊಸ ನಾಣ್ಯದಲ್ಲಿ ಇದನ್ನು ಲೆಕ್ಕ ಮಾಡುವ ಬಗೆ ಹೇಗೆ?

ಕೋಷ್ಟಕವನ್ನು ತೆಗೆದುಕೊಂಡರೆ ೧೮ ಬಿಲ್ಲೆ ಅಂದರೆ ನಾಲ್ಕುವರೆ ಆಣೆಯು ೨೮ ನಯೇ ಪೈಸೆಗೆ ಸಮ. ನಾವು ೨೮ ನಯೇ ಪೈಸೆಗಳನ್ನು ಕೊಟ್ಟರೆ ಒಟ್ಟು ಲೆಕ್ಕ ಸರಿಯಾಗುತ್ತದೆ. ಇದನ್ನು ಬಿಟ್ಟು, ಬೆಂಕಿ ಪೆಟ್ಟಿಗೆಗೆ ಮೂರು ಬಿಲ್ಲೆ: ಮೂರು ಬಿಲ್ಲೆಯು ಕೋಷ್ಟಕದ ಪ್ರಕಾರ ೫ ನಯೆ ಪೈಸೆಗೆ ಸಮ; ಆದುದರಿಂದ ಪ್ರತಿಯೊಂದಕ್ಕೆ ೫ ನಯೆ ಪೈಸೆಯಂತೆ ೬ ಬೆಂಕಿ ಪೆಟ್ಟಿಗೆಗೆ ೩೦ ನಯೆ ಪೈಸೆಯಾಯಿತು ಎಂದು ಲೆಕ್ಕ ಹಾಕಿದರೆ ತಪ್ಪಾಗುತ್ತದೆ. ಹೀಗೆ ಮಾಡಬಾರದು. ಅದೇ ಪ್ರಕಾರ ಬೆಂಕಿ ಪೆಟ್ಟಿಗೆಗೆ ಮೂರು ಬಿಲ್ಲೆ; ಒಂದು ಬಿಲ್ಲೆಗೆ ಕೋಷ್ಟಕದಂತೆ ೨ ನಯೆ ಪೈಸೆ; ಅಂದರೆ ಒಂದು ಬೆಂಕಿ ಪೆಟ್ಟಿಗೆಗೆ ೬ ನಯೆ ಪೈಸೆ; ೬ ಬೆಂಕಿ ಪೆಟ್ಟಿಗೆಗೆ ೩೬ ಎಂದು ಲೆಕ್ಕ ಹಾಕುವುದೂ ಸರಿಯಲ್ಲ. ಏಕೆಂದರೆ ಇದೇ ಕೋಷ್ಟಕದ ಪ್ರಕಾರ ೬ ನಯೆ ಪೈಸೆಗೆ ೧ ಆಣೆ ಸಮ; ಮುಕ್ಕಾಲಾಣೆ (ಮೂರು ಬಿಲ್ಲೆ) ಅಲ್ಲ. ೩೬ ನಯೆ ಪೈಸೆಯು ಐದೂ ಮುಕ್ಕಾಲಾಣೆಗೆ ಸಮ; ಅಂತಾಣೆಗಲ್ಲ! ನಾಲ್ಕೂವರೆ ಆಣೆಗಂತೂ ಹೊದಲೇ ಸಮವಲ್ಲ!

ಆದುದರಿಂದ ನಾವು ವ್ಯವಹಾರಮಾಡುವುದೆಲ್ಲ ಮಾಡಿಯಾದ ಮೇಲೆ ಯಾವ ಪದ್ಧತಿಯಂತೆ ಬೆಲೆಯನ್ನು ಹೇಳಲಾಗಿದೆಯೋ ಆ ಪದ್ಧತಿಯಲ್ಲಿ ಎಲ್ಲ ಗುಣಾಕಾರ, ಭಾಗಹಾರಾದಿಗಳನ್ನು ಮಾಡಿ ವ್ಯವಹಾರದಲ್ಲಿ ಸಲ್ಲಬೇಕಾದ ಮೊತ್ತವನ್ನು ಕಂಡುಹಿಡಿದು ಆ ನಂತರವೇ ಕೋಷ್ಟಕವನ್ನು ನೋಡಲು, ಮತ್ತು ಸಲ್ಲಬೇಕಾದ ಒಟ್ಟು ಮೊತ್ತಕ್ಕೆ ಸಮ್ಮುಖದಲ್ಲಿರುವ ನಾಣ್ಯದ ಪ್ರಕಾರ ಎಷ್ಟು ಬೆಲೆಯನ್ನು ತೆತ್ತರೆ ಲೆಕ್ಕ ಸಮವಾಯಿತೆಂದು ಕೋಷ್ಟಕದಲ್ಲಿ ಹೇಳಿರುತ್ತದೋ ಅಷ್ಟು ಹಣವನ್ನು ಪಾವತಿ ಮಾಡಲು ಹೋಗಬೇಕು. ಇದೇನು ಕಷ್ಟದ ಕೆಲಸವಲ್ಲ. ಸೂತ್ರವನ್ನೊಮ್ಮೆ ಜಿನ್ನಾಗಿ ಕಲಿತುಕೊಂಡರೆ ಮುತ್ತೈದೆ ಎಷ್ಟೂ ಸುಲಭ.

ಕೋಷ್ಟಕ

ಆಣೆ	ಪೈ	ನಯೆ ಪೈಸೆ	ಆಣೆ	ಪೈ	ನಯೆ ಪೈಸೆ	ಆಣೆ	ಪೈ	ನಯೆ ಪೈಸೆ	ಆಣೆ	ಪೈ	ನಯೆ ಪೈಸೆ
0	3	2	4	3	27	8	3	52	12	3	77
0	6	3	4	6	28	8	6	53	12	6	78
0	9	5	4	9	30	8	9	55	12	9	80
1	0	6	5	0	31	9	0	56	13	0	81
1	3	8	5	3	33	9	3	58	13	3	83
1	6	9	5	6	34	9	6	59	13	6	84
1	9	11	5	9	36	9	9	61	13	9	86
2	0	12	6	0	37	10	0	62	14	0	87
2	3	14	6	3	39	10	3	64	14	3	89
2	6	16	6	6	41	10	6	66	14	6	91
2	9	17	6	9	42	10	9	67	14	9	92
3	0	19	7	0	44	11	0	69	15	0	94
3	3	20	7	3	45	11	3	70	15	3	95
3	6	22	7	6	47	11	6	72	15	6	97
3	9	23	7	9	48	11	9	73	15	9	98
4	0	25	8	0	50	12	0	75	16	0	100

ರೀಕದ ಪ್ರಸಿದ್ಧ ವಿಜ್ಞಾನಿ, ಹಾರ್ವರ್ಡ್ ವಿಶ್ವವಿದ್ಯಾಲಯದ ಕುಲಪತಿ

ಡಾ. ಜೇಮ್ಸ್ ಬಿ. ಕೊನೇಂಟರ



ಆಧುನಿಕ ವಿಜ್ಞಾನವು ಮನುಷ್ಯ ಜೀವನದ ಮೇಲೆ ಉಂಟುಮಾಡಿರುವ ತಿಕಾರಕ ಪರಿಣಾಮಗಳನ್ನು ಪರಿಶೀಲಿಸಿ ವಾಣಿಜ್ಯ, ಸರಕಾರ, ನೀತಿ, ಧರ್ಮ, ತಾದ ಬದುಕಿನ ವಿವಿಧ ರಂಗಗಳಲ್ಲಿ ವಿಜ್ಞಾನವು ಬೀರಿರುವ ಪ್ರಭಾವವನ್ನು ಕೊನೇಂಟ ಇಲ್ಲಿ ತಮ್ಮ ಸರಳ ಮತ್ತು ಓಜಸ್ವಿ ಶೈಲಿಯಲ್ಲಿ ಬಣ್ಣಿಸಿದ್ದಾರೆ. ನೆ ವಿಜ್ಞಾನಿಯು ಕೇವಲ ಒಬ್ಬ ಕಲ್ಪನಾವಿಹಾರಿ ತಾತ್ತ್ವಿಕನಲ್ಲ, ವಿಶ್ವದ ೃವನ್ನು ತೆರೆದು ತೋರಿಸಬಲ್ಲ ಮಂತ್ರವಾದಿಯೂ ಅಲ್ಲ. ಆತನು ಇತರ ವಹಾರಿಕ ಕ್ಷೇತ್ರಗಳಲ್ಲಿ ದುಡಿಯುವ ಜನರಷ್ಟೇ ಪ್ರಾಮಾಣಿಕನಾಗಿಯೂ ಸಹಿಷ್ಣುವಾಗಿಯೂ ಮಡಿಯಬೇಕಾದ ವ್ಯವಹಾರಜ್ಞ. ತತ್ತ್ವಶಾಸ್ತ್ರ ಮತ್ತು ವಿಚಾರಗಳಲ್ಲಿರುವ ಶಂಕೆ, ಮತ್ತು ನ್ಯೂನತೆ ಇಂದಿನ ವಿಜ್ಞಾನವನ್ನೂ ಯಿಸಿದೆ. ಇಂದಿನ ಪ್ರಪಂಚದಲ್ಲಿ ವಿಜ್ಞಾನದ ಪಾತ್ರವೇನೆಂದು ವಿಮರ್ಶಿಸುವ ಥಗಳಲ್ಲಿ ಡಾ. ಕೊನೇಂಟರ ಈ ಗ್ರಂಥದಷ್ಟು ವಿಚಾರ ಪ್ರಚೋದಕವಾದುದು ೀಂದಿಲ್ಲ.

ಇದನ್ನು ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜಿನಲ್ಲಿ ಭೌತ ಪ್ರಾಧ್ಯಾಪಕರಾದ ಉಡುಪಿ ಲಕ್ಷ್ಮೀನಾರಾಯಣಾಚಾರ್ಯ ಎಂ. ಎ. ಟಿ. ಅವರು ಅನುವಾದಿಸಿದ್ದಾರೆ. ಅವರು ಕನ್ನಡದಲ್ಲಿ ಹಲವು ವೈಜ್ಞಾನಿಕ ನ ಲೇಖನಗಳನ್ನು ಬರೆದಿದ್ದಾರೆ. ಅವರು ಅನುವಾದಿಸಿದ (ಶ್ರೀ ಕು. ಶಿ. ಭಟ್ಟರೊಡನೆ) ಡಾ. ಕೆರೆಲರ 'ಅವ್ಯಕ್ತ ಮಾನವ' (Man, the known) ಕನ್ನಡದಲ್ಲಿ ವಿಶೇಷ ಮನ್ನಣೆಯನ್ನು ಪಡೆದಿದೆ. ಪ್ರಸ್ತುತ ಅನುವಾದದಲ್ಲಿ ಶ್ರೀಯುತರ ಗಂಭೀರ ಆದರೂ ಸರಳ ಮತ್ತು ನಿಕ ಶೈಲಿಯ ಪರಿಚಯವನ್ನು ಮಾಡಿಕೊಳ್ಳಬಹುದು.

ಾಗದದಲ್ಲಿ ಒಜ್ಜಾಗಿರುವ ಈ ಪುಸ್ತಕದ ಬೆಲೆ ಬರೇ ರೂ.1-8-0 ಮಾತ್ರ

ಪ್ರತಿಗಳಿಗೆ ಬರೆಯಿರಿ:—

ನವಯುಗ ಎಂಟರ್‌ಪ್ರೈಸಸ್ ಲಿಮಿಟೆಡ್, ಉಡುಪಿ.



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ಥಾನಿಕರು: ಸಾ ಕಂಪನಿ, ಮಂಗಳೂರು—1.

ನೆನಪಿರಲಿ!

(ನಿನ್ನೆ ಸುಟ್ಟದಿಂದ)

ಲ್ಲಿ ಮುಸ್ಲಿಂ ಲೀಗು, ಜನಸಂಘಗಳಂತಹ ಜಾತೀಯವಾದೀ ಪ್ರತಿಗಾಮೀ ಪಕ್ಷಗ ಕೊಡನೆ ಮಾಡಿಕೊಂಡ ಚುನಾವಣಾ ಮೈತ್ರಿಯಿಂದ ಇವರ ಕೀರ್ತಿಗೆ ಕಳಂಕ ಹತ್ತಿದೆ. ಜನಪ್ರಿಯ ಮುಂದಾಳಿನ ಮಾ ರ್ಗದರ್ಶನವಿಲ್ಲದೆ ಗಾಳಿಬೀಸಿದತ್ತ ಗೋ ತೀ ಹೊಡೆಯುತ್ತಿರುವ ಈ ಪಕ್ಷವು ಬೆಳೆ ಯುವ ಲಕ್ಷಣವಿಲ್ಲ. ಇದನ್ನೆಲ್ಲ ತಿಳಿದು ಶ್ರೀಮತಿ ಸುಚೇತಾ ಕೃಪಲಾನಿಯವರಂ ತಹ ಶ್ರೇಷ್ಠ ಕೆಲಸಗಾರರು ಪ್ರ ಸ. ವಾ. ಪಕ್ಷವನ್ನು ತೊರೆದು ಕಾಂಗ್ರೆಸ್ಸಿನಲ್ಲಿ ಸೇರಿ ದ್ದಾರೆ. ಶ್ರೀ ರಾಮಮನೋಹರ ಲೋಹಿ ಯಾ ಒಂದೆರಡು ವರ್ಷಗಳ ಹಿಂದೆಯೇ ಈ ಪಕ್ಷದಿಂದ ಹೊರಬಿದ್ದು, ತಮ್ಮದೇ ಆದ ಬೇರೊಂದು ಪಕ್ಷವನ್ನು ಸ್ಥಾಪಿಸಿದ ರು. ಹೀಗೆ ಅಧಃಪ್ರ ವಾತಾವರಣದಲ್ಲಿ ನ ರಳುತ್ತಿರುವ ಈ ಪಕ್ಷವು ಇನ್ನಷ್ಟು ಸೊರ ಗಿ ಕ್ಷೀಣವಾಗುವುದು ಖಂಡಿತ.

ಜನಸಂಘವು ಆರ್. ಎಸ್. ಎಸ್. ಮತ್ತು ಹಿಂದೂ ಮಹಾಸಭೆಗಳ ವಿಚಾರ ಪ್ರಣಾಲಿಯನ್ನಿಟ್ಟು ಕೊಂಡಿದೆ. ಜನ ಸಂಘದವರು ಜಾತೀಯವಾದಿಗಳು ಅಥ ವಾ ಹಿಂದೂ ರಾಷ್ಟ್ರ ಸ್ಥಾಪನೆಗಾಗಿ ಹೋ ರಾಡುವವರು. ೧೯೪೭ರ ವಿಭಜನೆಯ ಪೂರ್ವದಲ್ಲಿದ್ದಂತಹ ಅಖಂಡ ಭಾರತವ ನ್ನು ಪುನ: ಕಟ್ಟಬೇಕೆಂದು ಗುಡಿಯು ವವರು. ಧರ್ಮಾಂಧತೆಯು ಇವರ ಸೃಷ್ಟಿ. ಜನಸಂಘವು ಪಾಕಿಸ್ತಾನದ ಮು ಸ್ಲಿಂ ಲೀಗಿದ್ದಂತಿದೆ. ಗೋವಾ ಕಾಶ್ಮೀರ ಗಳಿಗಾಗಿ ತುಮುಲವನ್ನೆಬ್ಬಿಸಿ ಯುದ್ಧ ಹೂಡುವ ತುರುಸಿನ ಮಾತುಗಳನ್ನು ಜ ನಸಂಘದ ಮುಂದಾಳುಗಳು ಆಲ್ಲಲ್ಲಿ ಆ ಡುತ್ತಾರೆ. ಆಧುನಿಕ ಯುದ್ಧಗಳ ಸಿದ್ಧತೆ ಯ ಅವಶ್ಯಕತೆಗಳನ್ನು ತಿಳಿಯದ ಈ ಜನಸಂಘದವರು ಭೈಮಿಷ್ಟರಂತೆ ಆಡಿ ಬಾಯ್ತಿಂಡಿಯನ್ನು ಮಾತ್ರ ತೀರಿಸಿಕೊ ಳ್ಳುತ್ತಿದ್ದಾರೆ ಸಮರ್ಥವಾದ ಆರ್ಥ ವ್ಯವ ಸ್ಥೆ ಉದ್ಯಮಗಳ ಉನ್ನತಿಗಳಲ್ಲದೆ ಯು ದ್ಧದ ಹೆಸರಿತ್ತುವುದು ಸಹ ಸಮಂಜಸವ ಲ್ಲ. ಶಾಂತಿ ಸದ್ಭಾವಗಳಿಂದ, ವಿಚಾರವಿನಿ ಮಯಗಳಿಂದ, ರಾಷ್ಟ್ರದ ಐಕ್ಯಬಲದಿಂದ ಬಿಡಿಸಬಹುದಾದ್ದ ಸಮಸ್ಯೆಗಳಿಗಾಗಿ ಸಶ್ಲ ದ ವಿಕಾರವಿಪ್ಲವಗಳನ್ನೆಬ್ಬಿಸಿ ತಪ್ಪು ಹಾದಿ ಯನ್ನು ತುಳಿಯುತ್ತಿದ್ದಾರೆ. ಈ ಜನಸಂಘ ದವರು ಇಂತಹ ಜಾತೀಯ ವಾದವು ಭಾ ರತದ ಐಕ್ಯಕ್ಕೆ ವಿರೋಧಿಯಾಗುವ ಶಕ್ತಿ ಗಳನ್ನು ಹುಟ್ಟಿಸುತ್ತಿದೆ. ಭಾರತದ ಪ್ರಗತಿ ಯನ್ನು ಬಯಸುವವರು, ಪ್ರಗತಿಗಾಮೀ ಧೋರಣವುಳ್ಳ ಜನಸಂಘದಂತಹ ಪಕ್ಷ ಗ ಳಿಗೆ ಎಷ್ಟು ಮಾತ್ರಕ್ಕೂ ಪ್ರೋತ್ಸಾಹ ಕೊಡಬಾರದು. ಆಲ್ಲದೆ ತಕ್ಕ ಕಾರ್ಯ ಕ್ರಮ ಧೋರಣೆಗಳಿಲ್ಲದ ಜನಸಂಘದ ಹುರಿಯಾಳುಗಳಿಗೆ ಕೊಡುವ ಒಂದೊಂ ದು ಓಟೂ ಭಾರತದೆಹಿತ ವಿರೋಧಿಯಾ ಗುವುದೆಂಬುದನ್ನು ಮತದಾರರು ನೆನಪಿ ನಲ್ಲಿಡಬೇಕು.

ಉತ್ತರ ಕರ್ನಾಟಕದಲ್ಲಿ ಲೋಕಸೇವಾ ಸಂಘವು ಹೊಸದಾಗಿ ಚುನಾವಣೆಯ ಕಣಕ್ಕಿಳಿದಿದೆ ಇದರ ನಾಮನಿರ್ದೇಶನ ಜನತೆಗಿನ್ನೂ ಗೊತ್ತಿಲ್ಲ; ಗೊತ್ತುಗುರಿಗಳ ಮಾತು ದೂರ ಉಳಿಯಿತು. ಚುನಾವ ಣಾ ಕಾಲದಲ್ಲಿ ಹುಟ್ಟುವ ಅಥವಾ ಅದ ಕ್ಕಾಗಿಯೇ ಸ್ವೆಲ್ಪಕಾಲ ಮುಂಚಿತವಾಗಿ ಹುಟ್ಟುವ ನಾಯಿ ಕೊಡೆಗಳಂತಹ ಇಂತ ಹ ಪಕ್ಷಗಳು ವಿಚಿತ್ರವಾಗಿರುತ್ತವೆ. ಈ ಪಕ್ಷದವರು ಕರ್ನಾಟಕ ಏಕೀಕರಣ ಕ್ಕಾಗಿ ದುಡಿದವರೆಂದು ಹೇಳುತ್ತಿ ರುವುದು ಕೇಳಿಬರುತ್ತದೆ. ಕರ್ನಾ ಟಕ ರಾಜ್ಯ ನಿರ್ಮಾಣಕ್ಕಾಗಿ ಕನ್ನಡಿಗರೆ ಲ್ಲರೂ ಏಕಕಂಠದಿಂದ ಕೂಗಿದ್ದಾರೆ. ನಿಜ ವಾಗಿ ಅನೇಕ ವರ್ಷಗಳ ವರೆಗೆ ಇದಕ್ಕಾ ಗಿ ಜನತೆಯನ್ನು ಸಂಘಟಿಸಿ ಹೋರಾಡಿ ದ ಸಂಸ್ಥೆಯೆಂದರೆ ಕಾಂಗ್ರೆಸ್ಸು. ನೂತನ ಮೈಸೂರು ರಾಜ್ಯಕ್ಕೆ, ಕರ್ನಾಟಕ ರಾಜ್ಯ ವೆಂಬ ಕೀರ್ತನವನ್ನು ಅಥವಾ ಎಲ್ಲ ಸದಸ್ಯರಿಗೆ ಸಮ್ಮತವಾಗುವ ಹೆಸರನ್ನಿಡುವ ಯೋಗ್ಯ ತೆಯು ಕಾಂಗ್ರೆಸ್ ಪಕ್ಷಕ್ಕೆ ಮಾತ್ರ ಇರು ವುದು. ಆ ಬಗೆಗೆ ತಕ್ಕ ಪ್ರಯತ್ನಗಳನ್ನು ಮಾಡುವುದಾಗಿ ಮುಖ್ಯಮಂತ್ರಿ ಶ್ರೀ ನಿಜ ಲಿಂಗಪ್ಪನವರು ಆಶ್ವಾಸನವಿತ್ತಿದ್ದಾರೆ. ಆಂದಬಳಿಕ ಹಿಂದಿನ ಒಳ್ಳೆಯ ಸಂಪರಂ ಪರೆಯಿಲ್ಲದೆ, ಮುಂದಿನ ನಡತೆಯ ನಂಬಿಕೆ ಯಿಲ್ಲದೆ ಇರುವ ಇಂತಹ ಪಕ್ಷದ ಆಪಂ ಬರದ ಮಾತುಗಳಿಗೆ ಬೆಲೆಯಿಲ್ಲ.

—ಶ್ರೀ ಮಳಿಯೆ ಗೋವರ್ಧನ ರಾವ್
ಹುಬ್ಬಳ್ಳಿ.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದು ವರಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿ ಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.	
24 ತಿಂಗಳಿಗೆ	4%
12 ,,	3½%
6 ,,	3¼%
3 ,,	3%
ಸೇವಿಂಗ್ಸ್ ಬೇಂಕ್ ಲೆಕ್ಕ	2%
ಕರೆಂಟ್ ಎಕೌಂಟು	½%

THE MOOLKY BANK. LTD. MULKI

ರೋಗ ನಿವಾರಣೆ

ಮಾನವನ ನೆರವಿಗೆ ಇಲಿಗಳು ಬಂದಿವೆ!

ಇಲಿ! ಹಾಯ್ದು ಸರಿಯೂದ ತಳಿಯು ಇಲಿ ಮಾನವನ ರೋಗ ನಿರೋಧ ಕಾರ್ಯದಲ್ಲಿ ಹೋರಾಡುವ ಯೋಧ! ಇಂದಿನ ಚಿಕಿತ್ಸಾ ಧಗಳಲ್ಲಿ ಬಹು ಪಾಲಿನ ಸಂಶೋಧನೆಗೆ ಈ ಇಲಿಯೇ ಆಧಾರ. ಇವುಗಳನ್ನು ಬೆಳೆಸುವುದು ಸಾಮಾನ್ಯವಲ್ಲ. 64 ಪದರ ತಳಿಗಳ ಕೋ ಟ್ಯಾಂತರ ಇಲಿಗಳನ್ನು ಬೆಳೆಸಿ ಸಂಶೋಧನಾ ಲಯಗಳಿಗೆ ಒದಗಿಸುವ ಜಾಕ್ಸನ್ ಪ್ರಯೋಗ ಶಾಲೆಯಕತೆ, ಕಾರ್ಯ ಅತ್ಯಂತ ಸ್ವಾರಸ್ಯ ಕರವಾದುದು.

ಮಾಂಸಾರ್ಬುದ (ಕ್ಯಾನ್ಸರ್) ಹೃದ ಯ ವ್ಯಾಧಿಗಳು, ಮೂರ್ಛಾ ರೋಗ (ಎಪಿಲೆಪ್ಸಿ), ಆರ್ತರೈಟಿಸ್ ಇತ್ಯಾದಿ ಮಾನವ ಜನಾಂಗದ ಶತ್ರುರೋಗಗಳ ವಿರುದ್ಧ ಹೋರಾಟ ನಡೆಸುವ ಸಲುವಾ ಗಿ, ಇತ್ತೀಚಿನ ಒಂದು ತಿಂಗಳಲ್ಲಿ 40 ಸಹಸ್ರ "ವ್ಯಾಧಿ ಕೋಟಾಟಗಾರ"ರನ್ನು ಮೈನ್ ನ ಬಾರ್ ಹಾರ್ಬರ್‌ನಿಂದ ಜಗ ತ್ತಿನ ಎಲ್ಲ ಕಡೆಗಳಿಗೂ ಕಳುಹಿಸಿ ಕೊಡಲಾಯಿತು

ಈ 40 ಸಹಸ್ರ, ರಾಸ್ಕೊ ಬಿ. ಜಾಕ್ ಸನ್ ಸ್ಮಾರಕ ಪ್ರಯೋಗ ಶಾಲೆಯಲ್ಲಿ ಬೆಳೆಸಲಾದ ಅಸಂಖ್ಯಾತಕ ಇಲಿಗಳು. ಜ ಗತ್ತಿನಾದ್ಯಂತದ ವೈದ್ಯ ಸಂಶೋಧಕರು ಗಳಿಗೆಲ್ಲಾ ಈ ಸೌಕರ್ಯವನ್ನು ಒದಗಿ ಸುವ ಈ ಶಾಲೆ ತೆಗೆದುಕೊಳ್ಳುವ ಬೆಲೆ, ಈ ಇಲಿಗಳನ್ನು ಬೆಳೆಸುವುದಕ್ಕೆ ಆಗುವ ವೆಚ್ಚದಲ್ಲಿ ಒಂದಂಶ ಮಾತ್ರ.

1956ರ ದ್ವಿತೀಯಾರ್ಧದಲ್ಲಿ ಈ ಪ್ರ ಯೋಗ ಶಾಲೆ ಇತರ ದೇಶಗಳಿಗೆ 250,000 ಇಲಿಗಳನ್ನು ರವಾನಿಸಿತು ಈ ಆರೋಗ್ಯ ರಕ್ಷಕ ಹೋರಾಟಗಾರ ಪ್ರಾಣಿಗಳು ಐದು ಖಂಡಗಳ ತೀರಗಳ ನ್ನೂ ಮುಟ್ಟಿ ಸಿಯೋಲ್‌ನಿಂದ ಜೆಲ್ಸಿಂ, ಕಿ, ಓಟ್ಟಾವಾದಿಂದ ರಯೋಡಿಜ ನೈ ರೋ, ಹಾಕಾಂಗ್‌ನಿಂದ ಜೊಹಾನ್ಸ್ ಬರ್ಗ್‌ಗಳ ವರೆಗಿನ ಇನ್ನೂರು ಪ್ರಯೋಗ ಶಾಲೆಗಳನ್ನು ಪ್ರನೇಕಿಸಿದವು.

ಪ್ರಪಂಚದಲ್ಲಿ ಲಭ್ಯವಿರುವ, ವೈದ್ಯ ಸಂಶೋಧನೆಗೆ ಬೇಕಾದ ಮಟ್ಟದ ಪ್ರಾಣಿ ಗಳಲ್ಲಿ ಪ್ರಧಾನ ಭಾಗ ಒದಗುತ್ತಿರುವ ದು ಈ ಜಾಕ್ಸನ್ ಪ್ರಯೋಗ ಶಾಲೆಯೇ ದಲೇ. ಈ ಶಾಲೆ ಅನುಸರಿಸುವ ವಿಧಾನ ಗಳು, ವೈದ್ಯ ಸಂಶೋಧನೆಗೆ ಪ್ರಾಣಿಗಳ ನ್ನು ಬರಪರಾಜು ಮಾಡುವ ಇತರ ಸಂ ಸ್ಥೆಗಳಿಗೆ ಮಾದರಿಯೆಂದು ಪರಿಗಣಿಸ ಲಾಗಿದೆ.

ಬಹುವಾಗಿ ವಿಸ್ತರಿಸಿರುವ ತನ್ನ ಸಂ ಶೋಧನಾ ಕಾರ್ಯಕ್ರಮವನ್ನು ಸಿದ್ಧಿ ಗೊಳಿಸಲು, ಅದರಲ್ಲೂ ಮಾಂಸಾರ್ಬುದ ದ ವಿರುದ್ಧ ಗುಣಕಾರಿಯಾಗಬಹುದಾದ ರಸಾಯನಿಕ ಪರಿಶೋಧನೆ ನ ಡೆಸಲು, ಅಮೇರಿಕದ ಸಾರ್ವ ಜನಿಕಾರೋಗ್ಯ ಶಾಖೆ, ಇತ್ತೀಚೆಗೆ ಈ ಕಾ ರ್ಯಕ್ರಮಕ್ಕೆಂದು ಪ್ರಾಯೋಗಿಕ ಪ್ರಾಣಿ ಗಳನ್ನು ಸಿದ್ಧಿಗೊಳಿಸುತ್ತಿರುವ ಇತರ ಸಂ ಸ್ಥೆಗಳ "ಕಾರ್ಯ ವಿಧಾನದ ಮೇಲೆ ಮೇ ಲ್ವಿಚಾರಣೆ ನಡೆಸಿ, ಗುಣಮಟ್ಟಗಳ ಮಾ ನದಂಡವೊಂದನ್ನು ನಿರ್ಮಿಸುವಂತೆ ಜಾ ಕ್‌ಸನ್ ಪ್ರಯೋಗ ಶಾಲೆಯನ್ನು ಕೇ ಳಿತು.

1948ರಲ್ಲಿ ವಿಧ್ವಂಸಕ ಬಾರ್ ಹಾ ರ್ ಹಾರ್ಬರ್ ಬೆಂಕಿ ಪ್ರಸಂಗದಿಂದ ಪ್ರಯೋಗ ಶಾಲೆಯು ಕಟ್ಟಡಗಳು ನಾಶ ವಾದಾಗ, ಸಂಸ್ಥೆಯು 27 ವರ್ಷಗಳ ಇ ತಿಹಾಸದ ಅತ್ಯಂತ ಸ್ವಾರಸ್ಯಕರ ಘಟನೆಗ ಳಲ್ಲೊಂದು ಸಂಭವಿಸಿತು.

ಈ ಬೆಂಕಿಯ ಸುದ್ದಿ ಜಗತ್ತಿನ ಇತರ ಭಾಗಗಳ ವಿಜ್ಞಾನಿಗಳ ಕಿವಿ ಮುಟ್ಟಿದಾ ಗ ಅವರು ಒಡನೆ ತಮ್ಮಲ್ಲಿದ್ದ ಪ್ರಯೋಗ ಶಾಲೆಯ ಇಲಿಗಳ ವಾಸ್ತವ್ಯವನ್ನು ವಾಸ ಸ್ಯ ಕಳಿಸಲು ಆರಂಭಿಸಿದರು. ಅತ್ಯಗತ್ಯ ವಾಗಿ ಬೇಕಾಗಿದ್ದ ಗುಣಧರ್ಮಗಳುಳ್ಳ ಪ್ರಾಯೋಗಿಕ ಇಲಿಗಳ ತಳಿಗಳನ್ನು ಅಭಿ ವೃದ್ಧಿಪಡಿಸುವ ಸರ್ವ ಪ್ರಾಧಾನ್ಯ ಕಾ ರ್ಯವನ್ನು ಪ್ರಯೋಗಶಾಲೆ ಮುಂದುವ ರಿಸಲೆಂಬ ಒಂದೇ ಈ ಕೃಪದ ಉದ್ದೇಶ ವಾಗಿತ್ತು.

ಈ ವಿಶ್ವವ್ಯಾಪಕ ಸಹಕಾರ ಪ್ರಯತ್ನ ದ ಫಲವಾಗಿ ಸುಮಾರು 60 ವಿಧದ ತಳಿ ಗಳಲ್ಲಿ ಬಹುಪಾಲಿನವನ್ನು ಉಳಿಸಿ ಬೆ ಳೆಸಲು ಸಫಲವಾಯಿತು. ಇವುಗಳಲ್ಲಿ ಕೆಲ ಇಲಿಗಳು 4000 ವರ್ಷಗಳ ಮಾನವ ಜೀವನಕ್ಕೆ ಪರಮಾವಶ್ಯವಾದ ಪ್ರಾತಿನಿಧಿಕ ಸ್ವರೂಪದವು.

ಪ್ರಕೃತ, ವರ್ಷಕ್ಕೆ 12,000-ದಿಂ ದ ಚ್ಚು ಸುಮಾರು 3500 ಇಲಿಗಳು ಈ ಪ್ರ ಯೋಗಶಾಲೆಯಲ್ಲಿ ಬೆಳಕು ಕಾಣುತ್ತಿವೆ ಈ ಶಾಲೆಯೇ ತಾನು ನಡೆಸುತ್ತಿರುವ ಅ ನೇಕ ರೋಗಗಳ ನಿವಾರಣೆಗೆ ಸಂಬಂಧಿ ಸಿದ ಸಂಶೋಧನೆಗಳಿಗೆ ವರ್ಷಕ್ಕೆ 700,000 ಇಲಿಗಳನ್ನು ಉಪಯೋಗಿ ಸುತ್ತದೆ.

ಪ್ರಪಂಚದ ಸಕಲ ವಿಭಾಗದ ಜನತೆ ಯ ಸಹಾಯಾರ್ಥವಾಗಿ ಪ್ರಯೋಜಕ ವಾದ ಸಂಶೋಧನೆಗಳನ್ನು ನಡೆಸಲು ಅಗ ತ್ಯವಾದ ಪ್ರಯೋಗ ಶಾಲೆಯ ಇಲಿಗಳ ಉತ್ಪನ್ನದಲ್ಲಿ ಜಾಕಸನ್ ಪ್ರಯೋಗ ಶಾ ಲೆಯು 1956—57ನೇ ಸಾಲು ಎಲ್ಲಾ ಹಿಂದಿನ ವರ್ಷಗಳನ್ನು ಮೀರಿಸುವುದೆಂದು ನಿರೀಕ್ಷಿಸಲಾಗಿದೆ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ

ಬೆಲೆ:— ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

ಕಮ್ಯುನಿಸ್ಟ್

ಸಂಪುಟ ೩೬ VOL. 36

7—3—1957

ಸಂಚಿ NO. 26

ಹೀಗಿದೆ ಚುನಾವಣೆ!

ಪ್ರಜಾ ಸೋಶಲಿಸ್ಟರಿಗೆ ಕಮ್ಯುನಿಸ್ಟರ ಸ್ನೇಹ

ಹಳೆಯೆ ಗಾಪೆ ನೆನಪಿಗೆ ತರುವ ಗೆಳೆತನ

"ಮಗಳು ವಿಧವೆಯಾದರೂ ಚಿಂತಿಲ್ಲ; ತಳಿಯ ನಾಯಬೇಕು"—ಎಂಬಂತಹ ಸ್ಥಿತಿಯನ್ನು ತೊಟ್ಟು ಪೃಥ್ವಿರಾಜನ ವಿರುದ್ಧ ಯುದ್ಧ ಗೈಯಲು ಮಹಮ್ಮದ ಘೋರಿಯನ್ನು ೧೨ನೇ ಶತಮಾನದ ಕೊನೆಯಲ್ಲಿ ಜಯಚಂದನೆಂಬ ರಜಪೂತ ಅರಸರು ಆಮಂತ್ರಿಸಿದ್ದನೆಂಬ ವಿಷಯ ನಮ್ಮ ಓದುಗರಲ್ಲಿ ಅನೇಕರ ನೆನಪಿನಲ್ಲಿ ಉಳಿದಿರಬಹುದು. ಘೋರಿಯನ್ನು ಆಮಂತ್ರಿಸಿದ ಪರಿಣಾಮವಾಗಿ ಪೃಥ್ವಿರಾಜನ ಕೋಟೆಯೇನೋ ನಡೆಯಿತು; ಆದರೆ ಜಯಚಂದನೂ ಇಂಥದೇ ದುರ್ಗತಿಯಿಂದ ಪಾರಾಗಲಿಲ್ಲ. ಮಾತ್ರವಲ್ಲ, ಭಾರತವನ್ನೆ ಪಂಕೇಯಾಡಳತೆಯ ದುರ್ಗತಿಗೆ ಸೇರಿಸಿದ ಪಾಪವೂ ಅವನದಾಯಿತು.

ಚುನಾವಣೆಯ ಕಾವು ಏರಿರುವ ಈ ಕಾಲದಲ್ಲಿ ಮೇಲಿನ ಸಾದೃಶ್ಯವನ್ನು ಉದ್ದೇಶಪೂರ್ವಕವಾಗಿಯೇ ಎತ್ತಿಕೊಂಡಿದ್ದೇವೆ. ನಮ್ಮ ಜಿಲ್ಲೆಯಲ್ಲಿ ಕಾಂಗ್ರೆಸಿಗೆ ಎರಡನೆಯದಾಗಿ ಚುನಾವಣೆ ಕೊಡುವ ಪಕ್ಷವೆಂದರೆ ಪ್ರಜಾಸಮಾಜವಾದಿಗಳದು. ಆದರೆ ಅವರು ಚುನಾವಣೆಯಲ್ಲಿ "ಗೆದ್ದುಬರಲಿಕ್ಕೋಸ್ಕರ"ನಡೆಸುವತಂತ್ರಗಳು ಮಾತ್ರ ಪಕ್ಷದ ಘನತೆಗೂ ಮರ್ಯಾದೆಗೂ ಹೇಳಿಸಿದ್ದಲ್ಲ. ಪ್ರಜಾ ಸಮಾಜವಾದಿಗಳಿಗೆ ಕಾಂಗ್ರೆಸ್ಸೇತರ ಪಕ್ಷಗಳೊಡನೆ ಬಹಳ ಸ್ನೇಹ ಉಂಟಾಗಿದೆ; ಮತ್ತು ಈ ಪಕ್ಷಗಳ ಬೆಂಬಲವನ್ನು ಪ್ರತ್ಯಕ್ಷವಾಗಿ ಪಡೆಯಲಿಕ್ಕೆ ಪ್ರಜಾ ಸಮಾಜವಾದಿ ಧುರೀಣರು ಹೇಸದೆ, ಮುಂದೆ ಬಂದಿದ್ದಾರೆ. ಪರಿಣಾಮವಾಗಿ ಕಮ್ಯುನಿಸ್ಟರು ಉಡುಪಿ ಮತದಾರ ಕ್ಷೇತ್ರದಲ್ಲಿ ಬಹಿರಂಗವಾಗಿ ಪ್ರಜಾ ಸಮಾಜವಾದಿಗಳಿಗೆ ಬೆಂಬಲಕೊಡಿರೆಂದು ಪ್ರಚಾರ ಮಾಡುತ್ತಾ ತಿರುಗುತ್ತಿರುವುದನ್ನು ಇಂದು ಕಾಣುತ್ತಿದ್ದೇವೆ.

ಕಮ್ಯುನಿಸ್ಟರ ಪ್ರಚಾರ ವೈಖರಿಯನ್ನು ನೋಡಿದ್ದಾದರೆ ಯಾರಿಗಾದರೂ ನಗು ಬರುವಂತಹ ರೀತಿಯದೆಂದು ಸ್ಪಷ್ಟವಾಗುತ್ತದೆ-ಮೋಟಾರುಗಳಲ್ಲಿ ಧ್ವನಿ ವರ್ಧಕದ ಮೂಲಕ ಅವರು ವಿತ್ತರಿಸುವ ಮಾತುಗಳನ್ನು ಕೇಳಿದ್ದೀರಾ? "ನಮ್ಮ ಓಟು ಯಾರಿಗೆ—ಪ್ರಜಾಸೋಶಲಿಸ್ಟಿಗೆ". ಕಮ್ಯುನಿಸ್ಟರು ಪ್ರಜಾಸೋಶಲಿಸ್ಟರಿಗೆ ಮತವನ್ನು ಕೊಡಿರೆಂದು ಹೇಳುತ್ತಾರೆ! ಇವರಿಗೆ ಮಾನಮೆಂಬುದಿದ್ದರೆ? ಇಂಥ ಅಪಹಾಸ್ಯಕರ ಮಾತು ಬರುತ್ತಿದ್ದಿಲ್ಲ. ಇರಲಿ, ಪ್ರಜಾಸೋಶಲಿಸ್ಟರಿಗೆ ಮತದಾನ ಕೊಡಿರಿ ಎಂದು ಹೇಳಿದ ಬೆನ್ನಲ್ಲೆ "ಕಮ್ಯೂನಿಸ್ಟ್ ಪಾರ್ಟಿ ಜಿಂದಾಬಾದ್" ಎಂದೂ ಘೋಷಿಸುತ್ತಿದ್ದಾರೆ. ಇದಕ್ಕೇನೆನ್ನೋಣ? ಓಟು ಪ್ರಜಾ ಸೋಶಲಿಸ್ಟರಿಗೆ, ಜಿಂದಾಬಾದ್ ಕಮ್ಯುನಿಸ್ಟರಿಗೆ ಎಂದಾಗುತ್ತದೆ ಅವರ ಪ್ರಚಾರದ ಸಾರಾಂಶ. ಈ ಬಗೆಯ ವಿರೋಧಾಭಾಸ ದಿಕ್ಕುಗೆಟ್ಟ ಪಕ್ಷಗಳಿಗೆ ಒಪ್ಪುವ ಸಂಗತಿಯೇ ಹೊರತು, ಸಂಘಟಿತವಾದ, ಸ್ಪಬಲ ಶಕ್ತಿ ಸಂಪನ್ನ ಪಕ್ಷಕ್ಕೆ ಹೇಳಿಸಿದ್ದಲ್ಲ. ಪ್ರತಿ ಪಕ್ಷಗಳು ತಮ್ಮ ಪ್ರಚಾರ ವೈಖರಿಯಿಂದಲೇ ತಮ್ಮ ದೌರ್ಬಲ್ಯವನ್ನೂ ಅಸಂಬದ್ಧ ಕ್ರಮಗಳಿಂದಲೇ ತಮ್ಮ ಹೀನಸ್ಥಿತಿಯನ್ನೂ ತೋರ್ಪಡಿಸುತ್ತವೆ ಎಂದು ಹೇಳಿದರೆ ತಪ್ಪಾಗಲಾರದು.

ಯಾವ ಕಾಲಕ್ಕೆಯೇ ಆಗಲಿ, ಕಮ್ಯುನಿಸಮನ್ನು ಪ್ರಜಾಸೋಶಲಿಸ್ಟರು ಮನ್ನಿಸಿದುದಿದೆಯೆ? ತಾತ್ವಿಕ ಕ್ಷೇತ್ರದಲ್ಲಿ ಇಬ್ಬರು ಪಕ್ಷಗಳು ಎಣ್ಣೆ ಸೀಗೆಯಂಥ ವೈರಕ್ಕದಿಂದಿವೆ. ಕಮ್ಯುನಿಸ್ಟರ ಪತ್ರಿಕೆಗಳೂ ಸ್ವತಃ ಕಮ್ಯುನಿಸ್ಟರೂ ಪ್ರಜಾ ಸಮಾಜವಾದಿಗಳ ಬೈದುದಕ್ಕೆ, ಹಂಗಿಸಿದುದಕ್ಕೆ ಲೆಕ್ಕಮಿತಿಯಿಲ್ಲ. ಪ್ರಜಾ ಸಮಾಜವಾದಿಗಳ ಉಚ್ಚ ಧುರೀಣರಾದರೂ ಕಮ್ಯೂನಿಸ್ಟರನ್ನು ಅಂಗೀಕರಿಸಿದವರಲ್ಲ. ಹೀಗಿರುತ್ತಾ ನಮ್ಮ ಕಣ್ಣಮುಂದಿರುವ ಪ್ರಜಾ ಸಮಾಜವಾದಿಗಳಿಗೆ ಕಮ್ಯುನಿಸ್ಟರೊಡನೆ ಸ್ನೇಹ ಸಂಬಂಧ ಉಂಟಾಗಿದೆ. ನಿಜಕ್ಕೂ ಇದು ಆಚ್ಚರ್ಯ! ಅಗತ್ಯವೇ ಸಂಶೋಧನೆಯ ಮಾತೃಸ್ಥಾನದಲ್ಲಿದೆ ಎಂಬ ಆಂಗ್ಲ ಗಾದೆಯಂತೆ, ಕಾಂಗ್ರೆಸ್ಸನ್ನು ಸೋಲಿಸುವ ಅಗತ್ಯವೇ ಪ್ರಜಾ ಸಮಾಜವಾದಿಗಳಿಗೆ ಕಮ್ಯುನಿಸ್ಟರ ನಂಟು ಬೆಳೆಸುವುದರಿಂದ ಲಾಭವಿದೆಯೆಂಬ ಸಂಶೋಧನೆಗೆ ದಾರಿ ಮಾಡಿಕೊಟ್ಟಿತೇದುಭಾವಿಸಬೇಕೆ! ಆದರೆ ಈಗ ಕಂಡುಹಿಡಿದ ಈ ಉಪಾಯವು ತುಂಬ ಅಪಾಯ ಕಾರಿಯೂದುದೆಂಬುದೇ ಮುಖ್ಯವಾದ ಕೊರಗು.

ನಾಚಿಕೆ ಬಿಟ್ಟು, ಧ್ಯೇಯಘೋರಣೆಗಳನ್ನು ಮೂಲೆಗೆ.ಪುನಾಡಿಕಾಂಗ್ರೆಸ್ಸನ್ನು ಸೋಲಿಸುವ ಒಂದೇ "ಧ್ಯೇಯ" ದಿಂದ ಕಮ್ಯುನಿಸ್ಟರೂ ಪ್ರಜಾಸೋಶಲಿಸ್ಟರೂ ಒಟ್ಟಾದರು ಇದರಿಂದ ಪ್ರಜಾಸೋಶಲಿಸ್ಟರಿಗೆ ಲಾಭವಾದೀತೆ? ವಿನೇಕಿಗಳಾದ ಮತದಾರರು ಸ್ವಂತ ಶಕ್ತಿಯಿಂದ ನಿಲ್ಲಲು ಕಾಲಿನಲ್ಲಿ ಬಲವಿಲ್ಲದ ಕುಂಟ ಪಕ್ಷದವರೆಂದು ಪ್ರಜಾಸೋಶಲಿಸ್ಟರಿಂದ ವಿಮುಖರಾಗುವುದು ಸಹಜ, ಪ್ರಜಾಸೋಶಲಿಸ್ಟರಲ್ಲಿ ಸ್ವಲ್ಪಮಟ್ಟಿನ ಸ್ನೇಹವಿದ್ದವರಿಗಾದರೂ ಈಗ ನೇಚಿನ ಪ್ರಸಂಗವನ್ನು ಎದುರಿಸಬೇಕಾಗಿ ಬಂದಿದೆ; ಏಕೆಂದರೆ ಪ್ರಜಾ ಸೋಶಲಿಸ್ಟರಿಗೆ ಬೆಂಬಲವನ್ನಿತ್ತರೆ, ಅದು ಕಮ್ಯುನಿಸ್ಟರ ಕೈಯನ್ನು ಬಲಪಡಿಸಿದಂತೆಯೂ ಆಗುತ್ತದೆ; ನಿಷ್ಕಾಮಂತ ಪ್ರಜಾ ಸೋಶಲಿಸ್ಟರು ತನ್ನ ಮತವನ್ನು ಜುನಾಯಿರದೆಯಾದರೂ ಬಿಟ್ಟಾರು, ಕೂರತು ಕಮ್ಯುನಿಸ್ಟರ ಕೈಗಳನ್ನು ಬಲಪಡಿಸುವಂತಹ ಅಪಹಾಸ್ಯಕರಕಾರ್ಯಕ್ಕೆ ಕೈಹಾಕಲಾರರು. ಹೀಗಾಗಿ ಪ್ರಜಾಸೋಶಲಿಸ್ಟರು ಬೇಕೆಂದೇ ತಮ್ಮ ಪಕ್ಷದಲ್ಲಿ ಬಿಕ್ಕಟ್ಟನ್ನು ಹುಟ್ಟಿಸಿದಂತಾಗಿದೆ. ಎಲ್ಲಿ ಪ್ರತಿಪಕ್ಷಗಳೂ ಕಾಂಗ್ರೆಸ್ಸನ್ನು ಸೋಲಿಸುವ ಮಟ್ಟಿಗೆ ಒಂದೇ ಧ್ಯೇಯದಿಂದ ಕೂಡಿವೆ; ಸೋಲಿಸಿದ ಬಳಿಕ ಮಾಡಬೇಕಾದ ಕಾರ್ಯಗಳ ಮಟ್ಟಿಗೆ ಮಾತ್ರ ಅವುಗಳ ಧೋರಣೆಯಲ್ಲಿ ವ್ಯತ್ಯಾಸವಿದೆ ಎಂಬ ನೊಂದು ನೆಪದಿಂದ ಕಮ್ಯುನಿಸ್ಟರೂ ಪ್ರಜಾಸೋಶಲಿಸ್ಟರೂ ಒಟ್ಟಾಗಿಬೆಂಬಲ ಬೇಡುತ್ತಾ ಬರುವುದುಂಟು. "ಇದರೆ, ಸ್ವಾಮಿ, ಗೆದ್ದುಕೊಂಡ ಬಳಿಕ ನಿಮ್ಮಲ್ಲಿರುವ ಭಿನ್ನಾಭಿಪ್ರಾಯದ ದೆಸೆಯಿಂದ "ನಾನು ಹೇಳಿದಂತಿ ನೀನು ಕೇಳಬೇಕು" ಎಂದು ಜಗಳಾಡುವುದೆಂಬ್ಲಿ ಉಭಯ ಪಕ್ಷಗಳೂ ಅಸಕ್ತಿ ತೋರಿಸಿದರೆ ನಮ್ಮ ಗತಿ ಏನು?" ಎನ್ನುವ ಮತದಾರರ ಸಂಶಯಕ್ಕೆ ಯೋಗ್ಯ ಸಮಾಧಾನ ಸಿಗುತ್ತಿಲ್ಲ.

ಇವೆಲ್ಲವನ್ನೂ ಮತದಾರರು ಅಗತ್ಯವಾಗಿ ಗಮನಕ್ಕೆ ತಂದುಕೊಳ್ಳಬೇಕು. ಪ್ರಜಾಸೋಶಲಿಸ್ಟರಿಗೆ ಕೊಡುವ ಓಟು ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿಲ್ಲದೆ ಹಿಂಸಾತ್ಮಕ ಸರ್ವಾಧಿಕಾರತ್ವದಲ್ಲೆ ನಿಜವಾದ ನಂಬಿಕೆಯಿರುವ ಕಮ್ಯುನಿಸ್ಟರ ಕೈಗಳನ್ನು ಬಲಪಡಿಸುತ್ತದೆ. ಕಮ್ಯುನಿಸ್ಟರಿಗೂ ಪ್ರಜಾ ಸೋಶಲಿಸ್ಟರಿಗೂ ವಾಸ್ತವ ಸ್ನೇಹವೇನೂ ಇಲ್ಲ. ಚುನಾವಣೆಯ ಸಲುವಾಗಿ ಉಂಟಾದ ಈ ಗೆಳೆತನವಿದು. ತಾತ್ಕಾಲಿಕಸ್ವರೂಪದ ಈ ಸ್ನೇಹ ಏನಾದರೂ ಒಕ್ಕೆಯ ಕೆಲಸ ನಡೆಸುವ ಪ್ರಸಂಗ ಬಂದಾಗ ಅದರ ಕೀರ್ತಿ ಯಾರಿಗೆ ಸಲ್ಲುವೇಕೆನ್ನುವಂಥ ಕ್ಷುಲ್ಲಕ ವಿವಾದದ ದೆಸೆಯಿಂದಲೇ ಮುರಿದು ಹೋಗಬಹುದು. ಕೇರಳದಲ್ಲಿ ಸರಕಾರವನ್ನು ನಡೆಸಿಕೊಂಡು ಬರುವ ವರೆಗೂ ಮುಂದಿಂದ ಸ್ನೇಹದ ಗತಿ ಏನಾಯಿತೆಂಬುದು ಎಲ್ಲರಿಗೂ ನೊತ್ತು. ಆದುದರಿಂದ ಕಮ್ಯುನಿಸ್ಟರು ಪ್ರಜಾಸೋಶಲಿಸ್ಟರ ಬೆಂಬಲಕ್ಕೆ ಇವ್ವದ ದೆಸೆಯಿಂದ ಪ್ರಜಾಸೋಶಲಿಸ್ಟರ ಶಕ್ತಿ ಹೆಚ್ಚಿತೆಂಬ ಭ್ರಮೆ ಯಾರಲ್ಲೂ ಕರಬಾರದು.

ನಿಜವನ್ನು ಹೇಳಬೇಕಾದರೆ, ಈ ತಾತ್ಕಾಲಿಕ ಸ್ನೇಹವನ್ನು ಕಮ್ಯುನಿಸ್ಟರು ತಮ್ಮ ಸ್ವಾರ್ಥಕ್ಕಾಗಿ ಉಪಯೋ

(೧೨ನೇ ಪುಟ ನೋಡಿರಿ)

SEASON DEPOSITS

Are now accepted at the Head Office and branches of the Bank of a sum of Rs. 1000 and in multiples thereof, for periods varying between 2 to 6 months at 4% interest per annum. No such deposit will run beyond 31-7-1957.

Special rate will be allowed for Single Deposits of Rupees 25,000/- and above.

THE VIJAYA BANK LTD.

H. O. MANGALORE.

Total Resources of the Bank as on 31-12-1956. | EXCEED RUPEES ONE CRORE

ದೇಶಹಿತವಾಗಿ ಕಾಂಗ್ರೆಸಿಗೆ ಮತ ಕೊಡಿರಿ

ಪಾಠೇತರ ಚಟುವಟಿಕೆ

ಮಕ್ಕಳ ಪ್ರವೃತ್ತಿಯನ್ನು ತಿದ್ದುವುದೇ ಶಿಕ್ಷಣದ ಧ್ಯೇಯ

ಶಾಲೆಗೆ ಮಗುವು ಏಕೆ ಹೋಗುತ್ತದೆ ಎಂಬ ಪ್ರಶ್ನೆಗೆ ಸುಲಭವಾದ ಉತ್ತರವು ಎಲ್ಲರಿಗೂ ತಿಳಿದಿದೆ—'ಕಲಿಯುವುದಕ್ಕೆ'. ಏನನ್ನು ಕಲಿಯುವುದಕ್ಕೆ ಎಂದರೆ-'ಓದು ಬರಹ' ಎಂಬ ಉತ್ತರವೂ ಸುಲಭವಾಗಿ ಲಭಿಸುವುದು. ಓದು—ಬರಹವು ವಿದ್ಯೆಯ ತಳಹದಿ. ಆಂದರೆ ತನ್ನ ಮನಸ್ಸಿನಲ್ಲಿರುವ ಭಾವನೆಯನ್ನು ಅನ್ಯರು ಅರಿಯಂತೆ ಮಾಡಲೂ ಅನ್ಯರಿಂದ ಕೊಡಬಂದ ಭಾವನೆಗಳನ್ನು ತಾನು ತಿಳಿದುಕೊಳ್ಳಲೂ ಇವು ಅತ್ಯಗತ್ಯ. ಎಂದ ಮಾತ್ರಕ್ಕೆ ಇಷ್ಟರಲ್ಲೇ ವಿದ್ಯಾಭ್ಯಾಸದ ಗುರಿ—ಮಗುವಿನ ವಿದ್ಯೆಯ ಉದ್ದೇಶ-ಸಂಪೂರ್ಣವಾಗಲಾರದು. ಮಗುವು ತುಂಬಿದ ಚಟುವಟಿಕೆಯಿಂದ ಶಾಲೆಯನ್ನು ಪ್ರವೇಶಿಸುವುದು. ಅನು ಆಟಗಳಲ್ಲಿ, ಗುಂಪಿನ ಚಟುವಟಿಕೆಗಳಲ್ಲಿ ನೈಸರ್ಗಿಕವಾಗಿ ವಿಶೇಷ ಆಸಕ್ತಿಯನ್ನು ತೋರುವುದು. ಗೊತ್ತುಗುರಿ ಇಲ್ಲದ ಪ್ರವೃತ್ತಿಗಳಿಂದ ತುಂಬಿದ್ದು ಏನು? ಏಕೆ? ಎಂದರಿಯದೆ ಕಾರ್ಯಗತವಾಗಿರುವುದು. ಇಂತಲ್ಲಿ ಆ ಮಗುವನ್ನು ಕಲಿಸುವ (ತಿದ್ದುವ) ಅಧ್ಯಾಪಕರ ಕೊಣೆಗಾರಿಕೆಯು ಅಸಾಮಾನ್ಯವಾದುದು. ಮಗುವಿನ ಮನೋವೇಗ, ಆಳ, ಪ್ರವೃತ್ತಿಗಳನ್ನು ತಿಳಿದುಕೊಂಡು ಅದನ್ನು ಎಚ್ಚರದಿಂದ ಸುರಕ್ಷಿತವಾದ ಮಾರ್ಗದಿಂದ ಮುನ್ನಡೆಸಬೇಕು. ಇಂತಲ್ಲಿ ಅಧ್ಯಾಪಕನಿಗೆ ಕೇವಲ ನಿಯಮಿತ ಪಾಠ ಪ್ರವಚನವು ಸಾಮರ್ಥ್ಯವೊಂದೇ ಸಾಲದು. ಪಾಠೇತರ ಚಟುವಟಿಕೆಗಳನ್ನು ಆತನು ಉತ್ತಮ ಸಾಧನವನ್ನಾಗಿರಿಸಿಕೊಂಡು, ಶಾಲೆಯನ್ನು ಮಗುವು ಸೆಚ್ಚುವ ಆಟದ ಕೇಂದ್ರವನ್ನಾಗಿಯೂ, ಕಲಿಯುವ ಕೇಂದ್ರವನ್ನಾಗಿಯೂ ಮಾಡಿಕೊಳ್ಳಬೇಕು.

ನಿಶ್ಚಿತವಾದ ಪಾಠ ಪ್ರವಚನಗಳನ್ನು ಅದು ನೂಡುವ ಇತರ ಎಲ್ಲಾ ಕಾರ್ಯಕ್ರಮಗಳನ್ನೂ ಪಾಠೇತರ ಚಟುವಟಿಕೆಗಳೆನ್ನುತ್ತೇವೆ. ಇದು ಪಾಠೇತರವೆಂಬ ನಾಮಾಂಕಿತವಾದರೂ ಪಾಠಗಳ ಮೂಲವೆಂಬುದನ್ನು ಮರೆಯುಬಾರದು. ಕೇವಲ ಮಾನಸಿಕ ವಿಕಾಸ ಮಾರ್ಗವಾದ ವಿಷಯ ಸಂಕಲೆಯ ಪುಸ್ತಕಗಳ ಪಾಠಗಳ ಪ್ರತಿಚರಣಗಳನ್ನೂ ಕ್ರಮದಿಂದ ನೆಮರು ಹಾಕಿ ಕಲಿಯುವುದೇ ವಿದ್ಯಾಭ್ಯಾಸವೆಂದು ಎಷ್ಟರ ತನಕ ನಮ್ಮ ಭಾವನೆಯಿದೆಯೋ ಅಂದಿನ ತನಕ ಇದನ್ನು ಪಾಠೇತರವೆಂದೇ ಸಿರುಪಾಯರಾಗಿ ಕರೆಯುವೆ.

ವಿದ್ಯಾಭ್ಯಾಸವೆಂದರೆ; ಅರ್ಥಾತ್ ಪಾಠವೆಂದರೆ ಕೇವಲ ಪುಸ್ತಕಗಳಲ್ಲಿ ಉಲ್ಲೇಖಿಸಿರುವ; ಅಧ್ಯಾಪಕನು ಯೋಜನೆ ಹಾಕಿಟ್ಟ ಒಂದಿಷ್ಟು ವಿಷಯಗಳನ್ನು ಪುಸ್ತಕೆದುರು ಸುರಿದು, ಅವುಗಳದನ್ನು ದಕ್ಕದಿದ್ದರೂ ಹೆಕ್ಕುವಂತೆ ಮಾಡುವುದಲ್ಲ. ಮಗುವಿನ ಮುಂದಿನ ಜೀವನವನ್ನು ನಿರೂಪಿಸುವುದೇ ವಿದ್ಯಾಭ್ಯಾಸ. ಮುಂದಿನ ಜೀವನದಲ್ಲಿ ಬರಬಹುದಾದ ಪ್ರತಿಯೊಂದು ಘಟನೆಗಳನ್ನು ನಿವಾರಿಸುವ; ಸಮಾಜದಲ್ಲಿ ವ್ಯವಹರಿಸುವ ಜ್ಞಾನ, ಧೈರ್ಯ, ತರಬೇತಿಯನ್ನುಂಟುಮಾಡುವುದೇ ವಿದ್ಯಾಭ್ಯಾಸ. ಆದರಿಂದಲೇ ಅಧ್ಯಾಪಕನನ್ನು ಸಮಾಜ ನಿರ್ಮಾಪಕನೆಂದೆನ್ನಬಹುದಲ್ಲದೆ ಅನ್ಯಥಾ ಅಲ್ಲ.

ಮಕ್ಕಳು ಮೂಲತಃ ಚಟುವಟಿಕೆಯಿಂದ ತುಂಬಿರುತ್ತವೆ. ಆವುಗಳಲ್ಲಿ ಹುದುಗಿರುವ ಪ್ರವೃತ್ತಿಗಳ ಪ್ರಜೋದನೆಯೇ ಚಟುವಟಿಕೆ ಎನ್ನಬಹುದು. ಮಕ್ಕಳಲ್ಲಿ ಕಾಣುವ ಚಟುವಟಿಕೆಯು ನೈಸರ್ಗಿಕವಾಗಿರದೆ, ಗೊತ್ತುಗುರಿ ಇಲ್ಲದೆ ಕ್ಷಣಕ್ಷಣ ಕ್ಕೂ ಮಗುವಿನ ಪ್ರತಿಯೊಂದು ಕ್ರಿಯೆಗಳಲ್ಲಿಯೂ ಹೊರಹೊಮ್ಮುತ್ತಿರುತ್ತದೆ. ಮಕ್ಕಳ ಮನಃಶಾಸ್ತ್ರವನ್ನು ಕರಿತ ಅಧ್ಯಾಪಕರಿಗಿದು ನೇದ್ಯವಿದೆ.

ಹೆತ್ತವರು ತಮ್ಮಲ್ಲಿ ಒಪ್ಪಿಸುವ ಕೊರಡಿನಂತಿರುವ ಶಿಶುವೊಂದನ್ನು ಉತ್ತಮವೂ ಜನಾದರಣೀಯವೂ ಆದ ಪ್ರತಿಮೆಯಂತೆ ರೂಪುಕೊಡುವ ಶಿಲ್ಪಿ ಜವಾಬ್ದಾರಿಕೆಯು ಅಧ್ಯಾಪಕರಿಗಿದೆ. ಮಗುವಿನ ಮನಸ್ಸನ್ನೂ ಪ್ರವೃತ್ತಿಗಳನ್ನೂ ಕುಂಠಿಸದೆ, ಅದು ಬಾಳ ಹಾದಿಯಲ್ಲಿ ಮೈದು ಹೆಜ್ಜೆಯನ್ನಿಡುವಾಗಲೇ ಮೊನಚು ಮುಳ್ಳುಗಳಿನ್ನಿಟ್ಟು ಪಥ ಕೆಡಿಸದಂತೆ; ಅಧ್ಯಾಪಕರು ಸರ್ವ ವಿಧವಾದ ಎಚ್ಚರಿಕೆಯಿಂದಿದ್ದು ಮಗುವಿನಲ್ಲಿ ಯಾವುದೇ ಉದ್ದೇಶ ಸಾಧನೆಯ ಕಡೆಗೆ ಲವಲೇಶವೂ ಅನಾದರ, ಜುಗುಪ್ಸೆ, ಅಸಡ್ಡೆಗಳು ಬಾರದಂತೆ ಎಚ್ಚರಿಕೆ ಗಬೇಕು.

ಮಕ್ಕಳ ಸಹಜ ಪ್ರವೃತ್ತಿಗಳೆಲ್ಲವನ್ನೂ ಪ್ರಚೋದಿಸಿ ವಾಸ್ತವಿಯಂತೆ ಕೈಲಿ ಹಿಡಿದು ಕೊಂಡರೆನೆ ಅಧ್ಯಾಪಕನು ಉದ್ದೇಶದ ಕಡೆಗೆ ನಿರಾತಂಕವಾಗಿ ಮುಂದರಿಯಬಹುದು. ಕುಂಟುವ ಕುದುರೆಯನ್ನು ಓಟದಲ್ಲಿ ಮುನ್ನಡೆಸಲಾರದಂತೆ, ನಿರುತ್ಸಾಹಿಯಾದ ಮಗುವಿನಲ್ಲಿ ಎಷ್ಟೇ ಉತ್ತಮ ವಿಷಯವನ್ನಾದರೂ ಬಲಾತ್ಕಾರದಿಂದ ತುಂಬಿಸಲು ಸಾಧ್ಯವಿಲ್ಲ.

ಚಿಕ್ಕ ಮಕ್ಕಳು ಸಹಜವಾಗಿ ಮೂರ್ತಿಗಳಂತೆ ಕುಳಿತು, ಅಧ್ಯಾಪಕರ ವಿಷಯ ಸೂಚೀ ಭಾಷಣಕ್ಕೆ ತಲೆತೂಗುವುದಕ್ಕಿಂತಲೂ ಆಟಗಳಲ್ಲಿ, ದೈಹಿಕ ನಟನೆಗಳಲ್ಲಿ, ಹಾವಭಾವಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರುತ್ತವೆ. ಮಕ್ಕಳಲ್ಲಿ ಶಿಸ್ತನ್ನು ನೆಲೆಯಾಗಿರಿಸುವುದಕ್ಕೂ ಅಡಕತೆಯ ಕ್ರಮವನ್ನು ಕಲಿಸುವುದಕ್ಕೂ ಯಾವುದೇ ಸಾಮಾಜಿಕ, ಲೌಕಿಕ ಹಾಗೂ ಇನ್ನಿತರ ಯಾವುದೇ ವಿಷಯಗಳ

(೧೧ನೇ ಪುಟ ನೋಡಿರಿ.)

ಭಾರತದ ಜೀವನ ಮಟ್ಟದಲ್ಲಿ ನಿರಂತರವಾದ ಸುತ್ತು ಪ್ರಗತಿಪರವಾವ ಹೆಜ್ಜೆಗಳಿಯಾಗ ಬೇಕಾದರೆ, ಸ್ಥಳಿಕ ಸಾಧನ ಸಂಪತ್ತುಗಳನ್ನು, ಪರಿಣಾಮಕಾರಿಯಾಗಿ ಉಪಯೋಗಿಸುವುದು, ಅರಿತಿರುವ ತಾಂತ್ರಿಕ ಜ್ಞಾನವನ್ನು ಉತ್ತಮರೀತಿಯಲ್ಲಿ ಬಳಸುವುದು ಮಾತ್ರವಲ್ಲ. ಹೊಸ ಉತ್ಪಾದನಾ ತಂತ್ರಗಳನ್ನು ಪರಿಶೋಧಿಸಿ ಆಚರಣೆಗೆ ತರಬೇಕಾಗುವುದು.

ಭಾರತದ ಜನ ಸಾಂದ್ರತೆಯಲ್ಲಿ ನೂರಕ್ಕೆ ೭೦ರಷ್ಟು ಮಂದಿ ಬೇಸಾಯ ಹಾಗೂ ತತ್ಸಂಬಂಧ ವೃತ್ತಿಗಳನ್ನು ಅನುಸರಿಸುತ್ತಿರುವರು ಈ ಆಗಾಧವಾದ ಬಲವನ್ನು ಸ್ಥಳಾಂತರಿಸುವುದು. ಅಭಿವೃದ್ಧಿ ಸಾಧನೆಯಲ್ಲಿ ಅಗತ್ಯ. ಆದರೆ ಅಭಿವೃದ್ಧಿ ಗೊಳ್ಳುತ್ತಿರುವ ಆರ್ಥಿಕ ವ್ಯವಸ್ಥೆಯಲ್ಲಿ ಅಗತ್ಯವಾದ ಆಹಾರ ಮತ್ತು ಕಚ್ಚಾವಸ್ತುಗಳು ಸೂಕ್ತ ಪ್ರಮಾಣದಲ್ಲಿ ದೊರೆಯ ಬೇಕಾದರೆ — ಬೇಸಾಯ ಉತ್ಪಾದನೆಯು ಆದಕ್ಕನುಗುಣವಾಗಿ ಹೆಚ್ಚ ಬೇಕಾಗುತ್ತದೆ.

ಆಂದರೆ, ಬೇಸಾಯಗಾರರು ಶೀವ್ರವಾದ ಪ್ರಯತ್ನ ಕೈಗೊಳ್ಳುವುದು, ಭೂಸುಧಾರಣೆ, ನೀರಾವರಿ, ಕೃತಕ ಗೊಬ್ಬರಗಳು ಉತ್ತಮ ಬೀಜಗಳ ಪೂರೈಕೆ, ಉತ್ತಮ ಬೇಸಾಯ ತಂತ್ರ ವಿಧಾನ ಇವುಗಳನ್ನು ಕೈಗೊಳ್ಳ ಬೇಕಾಗುತ್ತದೆ.

ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಬೇಸಾಯ ಉತ್ಪಾದನೆಯಲ್ಲಿ ಶಾಶ್ವತವಾದ ಹೆಚ್ಚಿನ ಅಭಿವೃದ್ಧಿಯು ರಾಷ್ಟ್ರದ ಆರ್ಥಿಕ ವ್ಯವಸ್ಥೆಯನ್ನು ಸ್ಥಿರಗೊಳಿಸಿದೆ. ಇದು ಎಲ್ಲಾ ಆಹಾರ ವಸ್ತುಗಳ ಮೇಲಿನ ಎಲ್ಲಾ ನಿಯಂತ್ರಣಗಳನ್ನೂ ತೆಗೆದುಹಾಕಲು ಸಹಾಯ ಮಾಡಿದೆ. ದೇಶದ ಆಹಾರ ವಸ್ತುಗಳಿಗಾಗಿ ವಿದೇಶೀ ಅವಲಂಬನೆಯನ್ನು ಅವಲಂಬಿಸುವುದನ್ನು. ಕಡಿಮೆಮಾಡಿದೆ.

ಅದೂ ಅಲ್ಲದೆ, ಬೇಸಾಯ ಉತ್ಪಾದನೆಯಲ್ಲಿ ಹೆಚ್ಚುವರಿಯೂಮಾಡುವುದು, ದ್ವಿತೀಯ ಯೋಜನೆಯಲ್ಲಿ ಅಭಿವೃದ್ಧಿಯ ವೇಗವನ್ನು ತ್ವರಿತಗೊಳಿಸಲು ಸಹಾಯವಾಗಿದೆ. ದ್ವಿತೀಯ ಯೋಜನೆಯಲ್ಲಿ ಆಹಾರಧಾನ್ಯಗಳ ಉತ್ಪಾದನೆಯನ್ನು 1955-1956ರಲ್ಲಿದ್ದ ಸ್ಥಿತಿಕಂತ 155ಲಕ್ಷ ಟನ್ನುಗಳಷ್ಟು ಹೆಚ್ಚಾಗಬೇಕೆಂದು ಗುರಿಯನ್ನಿಟ್ಟುಕೊಳ್ಳಲಾಗಿದೆ.

ಚಿತ್ರ. 1 ಪಂಜಾಬಿನ ಗ್ರಾಮವೊಂದರಲ್ಲಿ ಬೇಸಾಯಗಾರರು ತಪಸೀಲದಾರ ಹಾಗೂ ಪಟವಾರಿಗಳೊಂದಿಗೆ ಕುಳಿತುಕೊಂಡು ಭೂ ಕ್ರೋಢೀಕರಣ ಕಾರ್ಯದಲ್ಲಿ ನಿರತರಾಗಿರುವುದನ್ನು ಮೊದಲನೆಯ ಚಿತ್ರವಲ್ಲಿ ಕಾಣಬಹುದು. ಇತರ ರಾಜ್ಯಗಳಲ್ಲಿನಂತೆ ಪಂಜಾಬಿನಲ್ಲಿ ಭೂ ಕ್ರೋಢೀಕರಣ ಕಾರ್ಯವು ಪ್ರಗತಿ ಗಳಿಸಿದೆ.

ಚಿತ್ರ. 2 ದಕ್ಷಿಣ ಭಾರತದಲ್ಲಿ ಬೇಸಾಯಗಾರರು ಬೇಸಾಯವಲ್ಲಿ ನಿರತರಾಗಿರುವುದನ್ನು ಎರಡನೆಯ ಚಿತ್ರವು ತೋರಿಸುವುದು. ದ್ವಿತೀಯ ಯೋಜನೆಯಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯನ್ನು 1955-56ರಕ್ಕಿಂತ 155ಲಕ್ಷ ಟನ್ನುಗಳಷ್ಟು ಹೆಚ್ಚಿಸಬೇಕೆಂಬ ಗುರಿಯನ್ನು ಹೊಂದಲಾಗಿದೆ.

ಚಿತ್ರ. 3 ಬಂಜರು ಭೂಮಿಯಲ್ಲಿ ಟ್ರಾಕ್ಟರುಗಳ ತಂಡವೊಂದು ಕೆಲಸಮಾಡುತ್ತಿರುವುದನ್ನು ಮೂರನೆಯ ಚಿತ್ರವು ತೋರಿಸುವುದು. 1947ರಲ್ಲಿ ಪ್ರಾರಂಭಿಸಿದಾಗಿನಿಂದಲೂ ಕೇಂದ್ರ ಟ್ರಾಕ್ಟರ್ ಸಂಸ್ಥೆಯು ಏಷಿಯೊದಲ್ಲೇ ಅತಿ ಹಿರಿದಾದ ಪ್ರಮಾಣದಲ್ಲಿ ಬಂಜರು ಭೂಮಿಯನ್ನು ಕೃಷಿಯೋಗ್ಯವನ್ನಾಗಿ ಮಾಡುವ ಕಾರ್ಯವನ್ನು ಕೈಗೊಂಡಿದೆ. ಈಗಾಗಲೇ ಸುಮಾರು 14ಲಕ್ಷ ಎಕರೆಗಳ ಭೂಮಿಯನ್ನು ಕೃಷಿ ಯೋಗ್ಯವನ್ನಾಗಿ ಮಾಡಲಾಗಿದೆ.

ಚಿತ್ರ. 4 ಸುಗ್ಗಿಯ ದೃಶ್ಯವೊಂದನ್ನು ನಾಲ್ಕನೆಯ ಚಿತ್ರದಲ್ಲಿ ಕಾಣಬಹುದು. ಬೇಸಾಯಗಾರರು ತಮ್ಮ ಅವಿರತ ಪರಿಶ್ರಮದ ಫಲವಾಗಿ ದೊರೆತ ಉತ್ಪನ್ನಗಳನ್ನು ಸಂಗ್ರಹಿಸುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಆಫ್ರಿಕದ ಮುನ್ನಡೆ

ಘಾನಾ ಅಥವಾ ಸುವರ್ಣತೀರ

ಸ್ವತಂತ್ರ ರಾಷ್ಟ್ರಗಳ ಸಾಲಿನಲ್ಲಿ ಸೇರಿದ ಹೊಸ ನಕ್ಷತ್ರ

ಈ ಪ್ರದೇಶವು ಆಫ್ರಿಕದ ಪಶ್ಚಿಮ ಕರಾವಳಿಯಲ್ಲಿದೆ. ಇದರ ಕರಾವಳಿಯ ಉದ್ದವು ೩೫೨ ಮೈಲು. ಇಲ್ಲಿಯ ಬಂಗಾರ ಬಣ್ಣದ ಮರಳನ್ನು ನೋಡಿ ಪಾಶ್ಚಾತ್ಯರು ಇದಕ್ಕೆ ಗೋಲ್ಡ್‌ಕೋಸ್ಟ್ (ಸುವರ್ಣತೀರ) ಎಂದು ಹೆಸರಿತ್ತರು. ಹದಿನಾಲ್ಕನೆಯ ಶತಮಾನದಲ್ಲಿ ಪೋರ್ಚುಗೀಸ್ ನಾವಿಕರಿದನ್ನು ಮೊದಲು ಕಂಡು ಹಿಡಿದಿದ್ದರು. ಆದರೂ ಮುನ್ನೂರು ವರ್ಷಗಳು ಉರುಳಿದ ಬಳಿಕವೇ ಬ್ರಿಟಿಷರೂ ಡಚ್ಚರೂ ಇದರ ಕರಾವಳಿಯನ್ನು ವ್ಯಾಪಾರೋದ್ಯಮಕ್ಕಾಗಿ ಉಪಯೋಗಿಸಿದರು. ಅಂದಿನಿಂದ ವ್ಯಾಪಾರ ರೀತಿಯು ಒಂದೇ ರೂಪದಲ್ಲಿ ನಡೆದು ಬಂದರೂ ಈಗ ಪಾಶ್ಚಾತ್ಯರಿಗೆ ಅಲ್ಲಿಯ ವ್ಯಾಪಾರದಲ್ಲಿ ವಿಶೇಷ ಸ್ಥಾನವಿಲ್ಲ. ಈಗ ಹೆಚ್ಚಾಗಿ ಎಲ್ಲ ವ್ಯಾಪಾರ ಸಂಸ್ಥೆಗಳೂ ಆಫ್ರಿಕೀಯರ ಕೈಯಲ್ಲಿಯೇ ಉಳಿದಿವೆ. ಕೆಲ ಸಿರಿಯನ್ನರೂ ಲೆಬನೀಸರೂ ಇವರ ಜೊತೆಯಲ್ಲಿ ವ್ಯಾಪಾರವನ್ನು ಮಾಡುತ್ತಿದ್ದಾರೆ. ಈ ಪ್ರದೇಶದ ಸಂಸ್ಕೃತಿಯು ತಕ್ಕ ಮಟ್ಟಿಗೆ ಪುರಾತನವೆನ್ನಬಹುದು. ಅಲ್ಲಿಯ ಪಂಗಡ (ಜಾತಿ)ಗಳಲ್ಲಿ 'ಆಶಾಂತಿ'ಯೆಂಬುದೊಂದು. ಇವರಲ್ಲಿ ಅಳಿಯಕಟ್ಟು ಪರಂಪರಾಗತವಾದ ಪದ್ಧತಿ. ಹೆಂಗಸರು ಹೆಚ್ಚು ಕೆಲಸವನ್ನು ಮಾಡಿ ಹಣ ಸಂಪಾದನೆ ಮಾಡುತ್ತಾರೆ ಇವರೇ ಅಂಗಡಿಗಳನ್ನು ನಡೆಸುತ್ತಾರೆ ಕೆಲವರು ಟೇಕ್ಸಿಗಳನ್ನೂ ಇಟ್ಟುಕೊಂಡು ಬಾಡಿಗೆಗೆ ಕೊಡುತ್ತಾರೆ. ಚಿಲ್ಲರೆ ವ್ಯಾಪಾರವೆಲ್ಲವೂ ಹೆಚ್ಚಾಗಿ ಹೆಂಗುಸರಿಂದಲೇ ನಡೆಸಲ್ಪಡುತ್ತದೆ. ಉದ್ಯೋಗ ಶೀಲತೆಯಿಂದ ಹೆಂಗುಸರು ಬಹಳ ಧನಾರ್ಜನೆಯನ್ನು ಮಾಡಿ ಉತ್ತಮ ಸುವರ್ಣಾಭರಣಗಳನ್ನೂ ಬಟ್ಟೆಗಳನ್ನೂ ಧರಿಸುತ್ತಾರೆ. ಇಲ್ಲಿಯ ಅಕ್ಕಸಾಲಿಗರು ಒಳ್ಳೆಯ ಬಂಗಾರದ ಸರಗಳನ್ನೂ ಕರ್ಣಾಭರಣಗಳನ್ನೂ ಮಾಡುತ್ತಾರೆ. ಇವನ್ನು ನಾನು ಕಣ್ಣಾರೆ ನೋಡಿದ್ದೇನೆ. ರೇಶ್ಮೆಯನ್ನೂ ಹತ್ತಿಬಟ್ಟೆಯನ್ನೂ ಜೆನ್ನಾಗಿ ನೇಯುವ ನೇಕಾರರಿಲ್ಲಿದ್ದಾರೆ. ಹೆಂಗುಸರ ಬಣ್ಣ ಬಣ್ಣದ ಬಟ್ಟೆಗಳನ್ನು ನಮ್ಮಲ್ಲಿಗಂಡುಸರು ಮುಂಡಿಸ್ನುಡಿಯಂತೆ ಉಡುತ್ತಾರೆ. ರವಕೆಯನ್ನು ಧರಿಸಿ ಸೆಂಟಿಗೆ ಒಂದು ಕಾಲನ್ನು ಬಿಗಿಯುತ್ತಾರೆ. ನಾನು ನೋಡಿದ ರೇಶ್ಮೆ ಬಟ್ಟೆಗಳು ಬಲು ಜೆನ್ನಾಗಿದ್ದುವು. ಹತ್ತಿಬಟ್ಟೆಗಳು ದಪ್ಪವಾಗಿ ನಮ್ಮ ಹೊದಿಕೆಯನ್ನು ಹೋಲುತ್ತಿದ್ದುವು. ಕೆಲವರ ಮನೆಯಲ್ಲಿ ಎಂಟು—ಹತ್ತು ಮಗ್ಗಗಳಿರುತ್ತವೆ. ಇಂತಹ ಸ್ಥಳಗಳಲ್ಲಿ ಬೇರೆಯವರನ್ನು ಸಂಬಳಕ್ಕೆಟ್ಟುಕೊಳ್ಳುತ್ತಾರೆ. ಈಗ ಶಾಲೆಗೆ ಹೋಗುವ ಬಡ ಹುಡುಗರು ಬಿಡುವಿದ್ದಾಗ ಇಂತಹ ಮಗ್ಗಗಳಲ್ಲಿ ಕೆಲಸ ಮಾಡಿ ದೊರೆತ ಝಿಡ್ಡಿನಿಂದ ತಮ್ಮವಿದ್ಯಾಭ್ಯಾಸವನ್ನು ಮಾಡುತ್ತಿದ್ದಾರೆ.

ಇದು ಸ್ವರ್ಣ ಭೂಮಿಯಾದ್ದರಿಂದ ಮೊದಲಿಂದಲೇ ಇಲ್ಲಿರುವ ಜನರಲ್ಲಿ ತುಂಬ ಧನವಿದ್ದಿತು. ಈಗಲೂ ಕೆಲವರು ತಮ್ಮ ಆಢ್ಯತೆಯನ್ನು ತೋರಿಸುವುದಕ್ಕಾಗಿ ನೋಟುಗಳನ್ನೆ ಸಿಗರೆಟ್ಟಿನ ಹಾಗೆ ಮಾಡಿ ಸುಡುತ್ತಾರಂತೆ. ಹಿಂದೆ ಅರಬ ವ್ಯಾಪಾರಿಗಳು ಇಲ್ಲಿಗೆ ಬಂದು ಉಪ್ಪನ್ನು ಕೊಟ್ಟು ಬಂಗಾರವನ್ನು ತೆಗೆದುಕೊಂಡು ಹೋಗುತ್ತಿದ್ದರು. ಹಿಂದೆ ಇಲ್ಲಿಯ ಅರಸನೊಬ್ಬನು ಬಂಗಾರದ ಮರದ ಕೆಳಗೆ ಬಂಗಾರದ ಸಿಂಹಾಸನದಲ್ಲಿ ಕುಳಿತು ಬಂಗಾರದ ಪೀಡಿಯನ್ನು ತನ್ನ ಬಂಗಾರದ ಕವಚದ ಮೇಲೂ ಬೈನೇಲೂ ಸವರಿ ದಶ ನವನ್ನು ಕೊಡುತ್ತಿದ್ದನಂತೆ ಇವನೊಮ್ಮೆ ಮಕ್ಕಳ್ಕೆ ಹೋಗುವಾಗ ಲಂಡನ್ ಒಂಟೆಗಳ ಮೇಲೆ ಬಂಗಾರವನ್ನು ಹೇರಿಸಿಕೊಂಡು ಹೋಗಿದ್ದನೆಂದು ಐತಿಹ್ಯವಿದೆ.

ಇಲ್ಲಿ ವಿದ್ಯಾಭ್ಯಾಸವು ಮೇಲ್ಮಟ್ಟದಲ್ಲಿದೆ. ಇಲ್ಲಿಯ ವಿಶ್ವವಿದ್ಯಾಲಯವು ನೂರು ವರ್ಷಗಳ ಹಿಂದೆ ಸ್ಥಾಪಿತವಾಯಿತು. ಇಲ್ಲಿಯ ಹೈಕೋರ್ಟು ನ್ಯಾಯಾಧೀಶರಲ್ಲಿ ಹಲವರು ಆಫ್ರಿಕೀಯರೇ ಆಗಿದ್ದಾರೆ. ಐದು ವರ್ಷಗಳ ಹಿಂದೆ ಇಲ್ಲಿಯೂ ಸಾರ್ವತ್ರಿಕ ಚುನಾವಣೆಯು ನಡೆದಿತ್ತು. ನಮ್ಮಲ್ಲಿರುವಂತೆ ಅಲ್ಲಿಯೂ ಹಲವು ಪಕ್ಷಗಳಿವೆ. ಇವುಗಳಿಗೆ ತಮ್ಮದೇ ಆದ ಚಿಹ್ನೆಗಳೂ ಇವೆ. ಈಗ ಪ್ರಧಾನ ಸಚಿವನಾದ ಶ್ರೀ ಕ್ವಾಮೆ ಎಂಕ್ರೂಮಾ ಇವನ ಪಕ್ಷದ ಚಿಹ್ನೆಯು ಕೋಳಿ. ಇದನ್ನೆಲ್ಲ ಇವರು ನಮ್ಮ ದೇಶದ ಕಾರ್ಯಗಳಂದ ಕಲಿತರು ಎಂಕ್ರೂಮನು ಬ್ರಹ್ಮಚಾರಿಯು, ಜನಪ್ರಿಯನು. ಇವನು ಹೆಂಗುಸರಿಗೆ ಆದರ್ಶನಾಗಿರುವುದರಿಂದ ಅವರು ತಮ್ಮ ರವಕೆಯನ್ನು "ಎಂಕ್ರೂಮಾ ಸ್ಟೈಲ್" ಎಂದು ಹೆಸರಿಸಿದ್ದಾರೆ. ಇವನನ್ನು ಗೋಲ್ಡ್‌ಕೋಸ್ಟಿನ ನೆಹರೂ ಎಂದೂ ಕರೆಯುತ್ತಾರೆ. ಘಾನಾ ಎಂಬುದು ಒಂದು ಊರಿನ, ಪಂಗಡದ ಹೆಸರು. ಇದು ಹಳೆಯ ಹೆಸರು. ಇಲ್ಲಿ ಬಂಗಾರವು ತುಂಬ ಇದ್ದುದರಿಂದ

ಬ್ರಿಟಿಷರು ಸುವರ್ಣ ತೀರದ ಜನರಿಗೆ ಆಡಳಿತಾನುಭವವನ್ನು ಕೊಡಿಸುವಂತೆ ಅನೇಕ ಕ್ರಮಗಳನ್ನು ಕೈಗೊಂಡರು. ಇತ್ತಗಳಲ್ಲಿ ಸ್ಥಳೀಯ ಸಂಸ್ಥೆಗಳ ಜನನವೂ ಒಂದು. ೧೯೫೦ರಲ್ಲಿ ಆ ಪ್ರಕಾರವೇ ಆಫ್ರಿಕರಲ್ಲಿ ಈ ಸಂಸ್ಥೆಗಳು ತಲೆ ಎತ್ತಿ, ಇಂದು ಸ್ವತಂತ್ರ ರಾಷ್ಟ್ರಗಳ ಪಾಲಿಕೆಯಲ್ಲಿ ಈ ರಾಷ್ಟ್ರವು ಸೇರುವಂತಾಗಿದೆ. ಚಿತ್ರದಲ್ಲಿ ಆಫ್ರಿಕೀಯ ಧುರೀಣನೊಬ್ಬನು ನಗರ ಸಭೆಯ ಸದಸ್ಯರನ್ನು ಉದ್ದೇಶಿಸಿ ಭಾಷಣ ಮಾಡುತ್ತಿರುವುದನ್ನು ನೋಡಬಹುದು.

ಲೂ ಈ ಬಂಗಾರದಿಂದಲೇ ಯೂರೋಪಿನಲ್ಲಿ ನಾಣ್ಯಗಳನ್ನು ಮಾಡಿದುದರಿಂದಲೂ ಈ ಶಿಲಿಂಗು ಬೆಲೆಯುಳ್ಳ ನಾಣ್ಯಕ್ಕೆ "ಗಿನೀ" ಎಂದು ಹೆಸರಾಯಿತು. ಸ್ವತಂತ್ರವಾಗುವ ಈ ನಾಡು ತನ್ನ ಹಳೆಯ ಹೆಸರನ್ನೆ ಇಟ್ಟುಕೊಳ್ಳಲು ಬಯಸಿದೆ.

ವಿದೇಶಗಳೊಡನೆ ಇದರ ವ್ಯಾಪಾರ ಸಂಬಂಧವು ಉತ್ತಮವಾಗಿರುವುದರಿಂದ ವರ್ಷಕ್ಕೆ ಗಾ ಮಿಲಿಯ ಪೌಂಡುಗಳಷ್ಟು ಆದಾಯವಿದೆ. ಇಲ್ಲಿ ಸುವರ್ಣವಿಲ್ಲದೆಯುವುದಲ್ಲದೆ ವಜ್ರವೂ ಇತರ ಖನಿಜಗಳೂ ದೊರೆಯುತ್ತವೆ. ಇವರ ಆರ್ಥಿಕ ಸಂಪತ್ತು ಜೆನ್ನಾಗಿದೆ. ಇಲ್ಲಿಯ ಭೂಮಿಯು ಫಲವತ್ತಾಗಿ ಸಂಪತ್ತಿನಿಂದ ಕೂಡಿದೆ. ಕೋಕೋ ಒಂದೇ ವರ್ಷಕ್ಕೆ ೪೪ ಮಿಲಿಯ ಪೌಂಡುಗಳನ್ನು ಸಂಪಾದಿಸಿ ಕೊಡುತ್ತದೆ ಇವರ ಇತಿಹಾಸವು ಸ್ವಾರಸ್ಯವುಳ್ಳದ್ದಾಗಿದೆ. ಹಿಂದೆ ಸ್ಪೈನಿನವರು ಇಲ್ಲಿಯ ಆಫ್ರಿಕೀಯರನ್ನು ತಮ್ಮ ಕೋಕೋ ತೋಟಗಳಲ್ಲಿ ಕೆಲಸಕ್ಕೆ ತೆಗೆದೊಯ್ಯುತ್ತಿದ್ದರು. ಅವರನ್ನು ಹಡಗಿನಲ್ಲಿ ಹಿಂದೆ ತಂದು ಬಿಡುವಾಗ ಅವರು ಕೋ ಕೋ ಬೀಜಗಳನ್ನು ಕದ್ದೊಯ್ಯದಂತೆ ಬಹಳ ಜಾಗರೂಕತೆಯಿಂದಿದ್ದರು. ಆದರೂ ಒಬ್ಬನು ಇದನ್ನರಿತು ಊರಿಗೆ ಬರುವಾಗ ಒಂದು ಬೀಜವನ್ನು ತನ್ನ ಕೂದಲಿನೊಳಗೆ ಅಡಗಿಸಿಟ್ಟುಬ್ಬನು. ಇದು ಯೂರ ಕಣ್ಣಿಗೂ ಬೀಳಲಿಲ್ಲ. ಆ ಒಂದು ಬೀಜದಿಂದ ಕ್ರಮೇಣ, ಹಲವು ಮರಗಳಾಗಿ ಅದು ಈಗ "ಸುವರ್ಣ ತೀರ"ದ ಸಂಪತ್ತಿಗೆ ಒಂದು ಆಧಾರ ಸ್ತಂಭದಂತಾಗಿದೆ.

ಹೀಗೆ ಸಂಪೆಕ್ಷವೃದ್ಧವಾದ "ಸುವರ್ಣ ತೀರವು" ಇಂದೇ ಮಾರ್ಚ್ ತಿಂಗಳ ೬ನೆಯ ತಾರೀಕು ಮುಂಗಳವಾರ ಮಧ್ಯರಾತ್ರಿಯು ಹೊತ್ತಿಗೆ ಸ್ವತಂತ್ರವಾಗಿ ಕಾಮನ್‌ವೆಲ್ತ್ ರಾಷ್ಟ್ರಗಳ ಕೂಟದಲ್ಲಿ ಘನ ಸದಸ್ಯತ್ವವನ್ನು ಗಳಿಸಿತು. ಪ್ರಜಾತಂತ್ರವ್ಯವಸ್ಥೆಯೂ ಇದಕ್ಕೆ ಇಷ್ಟರಲ್ಲಿಯೆ ಸಾಕಷ್ಟು ಅನುಭವವೂ ಬಂದಿದೆ. ೧೯೫೨ರಲ್ಲಿ ಈ ದೇಶಕ್ಕೆ ಬ್ರಿಟಿಷ್ ಸರಕಾರವು ಹೊಸ ಸಂವಿಧಾನವನ್ನಿತ್ತಿತ್ತು. ಇದರಂತೆ ೩೨ ಮಂದಿ ಸದಸ್ಯರುಳ್ಳ ನ್ಯಾಯ ವಿಧಾಯಕ ಸಭೆಯು ಅನಕ್ಕೆ ದೊರೆಯಿತು. ಈ ಸಭೆಯಲ್ಲಿ ಹೆಚ್ಚಿನ ಸದಸ್ಯರು ಜನತೆಯ ಪ್ರತಿನಿಧಿಗಳಾಗಿದ್ದರು. ಐದು ವರ್ಷಗಳ ಮೇಲೆ ಈ ನ್ಯಾಯ ವಿಧಾಯಕ ಸಭೆಯ ಸ್ಥಾನದಲ್ಲಿ ಲಳ

(೦೦ನೇ ಪುಟ ನೋಡಿರಿ.)

ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಿಸಲೇಬೇಕು ಪ್ರತಿಯೊಬ್ಬರ ನೆಚ್ಚಿನ ಆಸೆ

* *

ಮೈಸೂರು

ಸ್ಯಾಂಡಲ್ ಸಾಬೂನು

ನಿಮ್ಮ ಸೊಬಗನ್ನು ಕಾಪಾಡಲು ವೃದ್ಧಿಮಾಡಲು

ಒಂದು ನಿಶ್ಚಿತ ಸಾಧನ

ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ ಇವರಲ್ಲಿ ಸೇರಿಸಲಾಗಿದೆ.

ಒಮ್ಮೆ ಉಪಯೋಗಿಸಿ ನೋಡಿ

ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಗಳಲ್ಲೂ ದೊರೆಯುತ್ತದೆ

* *

ಗವರ್ನ್‌ಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು

ಮೆಂಬರು: ಐ. ಎಸ್. ಟಿ. ಎಂ. ಎ.

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷವ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.	
24 ತಿಂಗಳಿಗೆ	4%
12 ,,	3½%
6 ,,	3½%
3 ,,	3%
ಸೇವಿಂಗ್ಸ್ ಬೇಂಕ್ ಲೆಕ್ಕ	2%
ಕರೆಂಟ್ ಎಕೌಂಟು	½%

THE MOOLKY BANK, LTD. MULKI.

ಮತದಾರರ ಅವಗಾಹನೆಗೆ

ಕಾಂಗ್ರೆಸಿನ ವಿರುದ್ಧ ಪ್ರತಿಪಕ್ಷಗಳ ಸುಳ್ಳು ಪ್ರಚಾರ

ರಸ್ತೆಯಿಂದ ಹಳ್ಳಕ್ಕೆ ಜನರನ್ನು ಒಯ್ಯುವ ಕುತಂತ್ರ

ಉಡುಪಿ, ಕಾಸರಗೋಡು, ಕುಂದಾಪುರ ಮತ್ತು ಬ್ರಹ್ಮಾವರಗಳಲ್ಲಿ ಮಾತ್ರ ಇನ್ನು ಚುನಾವಣೆ ನಡೆಯುವುದು ಬಾಕಿ ಉಳಿದಿದೆ—ಅದಕ್ಕೆ ಸಹ ವಾರ ವಾರಗಳಷ್ಟು ಸಮಯ ಉಳಿದಿಲ್ಲ. ದಿನ ಲೆಕ್ಕ ಹಾಕುತ್ತಿದ್ದಂತೆಯೇ ಚುನಾವಣೆ ಮುಗಿದು ಹೋಗುತ್ತದೆ. ಆದುದರಿಂದ ಇಲ್ಲಿಯ ಮತದಾರರು ಕೊನೆಯ ಕ್ಷಣದ ನಿರ್ಧಾರವನ್ನು ಕೈಗೊಳ್ಳುವ ಸಮಯವೀಗ ಬಂದಿದೆ ಎನ್ನಬಹುದು.

ಮತದಾರರ ಮುಂದೆ ಈಗ ಅಧಿಕಾರದಲ್ಲಿರುವ ಪಕ್ಷವಾದ ಕಾಂಗ್ರೆಸಿನ ಉಮೇದ್ವಾರಿಗಳೂ ಕಾಂಗ್ರೆಸಿಗೆ ಅನಂತರ ಅತಿಹೆಚ್ಚಿನ ಸ್ಥಾನಗಳಿಗೆ ಸ್ಪರ್ಧಿಸಿರುವ ಪ್ರಜಾ ಸಮಾಜವಾದಿ ಪಕ್ಷದ ಪ್ರತಿನಿಧಿಗಳೂ ತಂತಮ್ಮ ನಿಲುಮೆಯನ್ನು ಈಗಾಗಲೇ ವಿವರಿಸಿ ಹೇಳಿರಬಹುದು; ಮತ್ತು ಮತದಾರರು ತಮ್ಮ ಓಟನ್ನು ಯಾವ ಪಕ್ಷಕ್ಕೆ ಕೊಡಬೇಕೆಂದು ಇಪ್ಪರಲ್ಲಿ ನಿರ್ಧಾರವನ್ನು ಮಾಡಿರಲೂ ಸಾಕು.

ನಾವು ಮತದಾರರೊಡನೆ ಕಾಂಗ್ರೆಸ್ಸಿಗೆ ಬೆಂಬಲ ಕೊಡಿರೆಂದು ಪುನಃ ಕೇಳಿಕೊಳ್ಳುತ್ತೇವೆ. ಕಾಂಗ್ರೆಸ್ಸನ್ನೆ ಬೆಂಬಲಿಸುವುದರಿಂದ ಜನರಿಗೆ ಎಷ್ಟರಮಟ್ಟಿನ ಲಾಭವಾಗುತ್ತದೆಂದು ಹಿಂದಿನ ಕೆಲವು ಸಂಚಿಕೆಗಳಲ್ಲಿ ವಿವರಿಸಿದ್ದೇವೆ. ಜಾಣರಾದ ಮತದಾರರು ನಮ್ಮ ವಾದ ಸರಣಿಯನ್ನು ಮೆಚ್ಚಿ, ಕಾಂಗ್ರೆಸ್ಸಿನ ಯೋಗ್ಯತೆಯನ್ನು ಗುರುತಿಸಿರಬಹುದೆಂದು ನಂಬುತ್ತೇವೆ.

ಸೂಕ್ಷ್ಮ ವಿಮರ್ಶೆಯನ್ನು ಮೆಚ್ಚುವ ಮತದಾರ ವರ್ಗವು ಕಾಂಗ್ರೆಸಿನ ಪರವಾಗಿ ಇತರ ಮತದಾರರನ್ನೂ ಒಲಿಸಬೇಕೆಂಬುದು ನಮ್ಮ ಈಗಿನ ಸಮ್ರ ಸೂಚನೆಯಾಗಿದೆ. ನಮ್ಮ ಈ ಪತ್ರಿಕೆಯನ್ನು ಓದುವ ಮಹಾನುಭಾವರು ಕೇವಲ ಸಾವಿರ ಸಂಖ್ಯೆಯಲ್ಲಿದ್ದಾರೆ; ಆದರೆ ಮತದಾರರ ಸಂಖ್ಯೆ ಲಕ್ಷಗಟ್ಟಿಗೆಯಲ್ಲಿದೆ. ಮತದಾರರಲ್ಲಿ ಹೆಚ್ಚಿನ ಜನರು ಸಿರಸ್ಸರಿಗಳಾದ ದೆಸೆಯಿಂದ, ಅವರಿಗೆ ಯೋಗ್ಯರೀತಿಯಲ್ಲಿ ವಾದ—ಪ್ರತಿವಾದಗಳು ಪತ್ರಿಕೆಗಳಲ್ಲಿ ನಡೆದಿದ್ದರೂ ಅವುಗಳ ಸಾರವನ್ನರಿತು ಕೊಳ್ಳುವ ಶಕ್ತಿ ಉಂಟಾಗಿಲ್ಲ. ನಮ್ಮ ಹಿರಿಯರು ಇಂಥ ವಿಷಯಗಳನ್ನು ಬಡ ಜನರಿಗೆ, ಮುಖ್ಯವಾಗಿ ನಿರಕ್ಷರಿಗಳಿಗೆ ತಿಳಿಸಿ ಹೇಳುವ ಕೆಲಸದಲ್ಲಿ ಸಹಾಯಕವಾಗಬೇಕೆಂದು ನಾವು ಬಯಸುತ್ತೇವೆ.

ಪ್ರತಿಪಕ್ಷಗಳವರು ಈಗ ಒಟ್ಟಾಗಿ ಕೆಲಸ ಮಾಡುವಂತಿದೆ. ಉದಾಹರಣೆಗೆ, ಜೆಲ್ಲೆಯಲ್ಲಿ ಇನ್ನು ಮತದಾನವಾಗಲಿರುವ ನಾಲ್ಕು ಕ್ಷೇತ್ರಗಳಲ್ಲಿ ಕಾಂಗ್ರೆಸಿನ ಇದಿರಾಗಿ ಸ್ಪರ್ಧೆಗೆ ನಿಂತಿರುವುದು ಕೇವಲ ಪ್ರಜಾಸಮಾಜವಾದಿಪಕ್ಷವಾದರೂ ಈ ಪಕ್ಷವನ್ನು ಕಮ್ಯುನಿಸ್ಟರೂ ಮತ್ತಿತರ ರಾಜಕೀಯ ಗುಂಪುಗಳವರೂ ಬೆಂಬಲಿಸುತ್ತಿದ್ದಾರೆ. ಕಮ್ಯುನಿಸ್ಟರೊಡನೆ ಪ್ರಜಾ ಸೋಶಲಿಸ್ಟರು ಸ್ನೇಹವನ್ನು ಬೆಳೆಸಿಕೊಂಡು ತಮ್ಮ ಗೋರಿಯನ್ನು ತಾವೇ ಹೇಗೆ ಕಟ್ಟಿಕೊಳ್ಳುತ್ತಿದ್ದಾರೆಂದೂ ಕಮ್ಯುನಿಸ್ಟರು ಹೇಗೆ ಸಮಯ ಮತ್ತು ಸಂದರ್ಭ ನಾಧಕತೆಯ ಕುತಂತ್ರವನ್ನು ತಮ್ಮ ಸ್ವಾರ್ಥಕ್ಕಾಗಿ ಹೇಗೆ ಬಳಸಿಕೊಂಡಿದ್ದಾರೆಂದೂ ನಾವು ಬೇರೆ ಹುಟದಲ್ಲಿ ವಿವರಿಸಿದ್ದೇವೆ. ತಪ್ಪು ಹೆಜ್ಜೆಯನ್ನು ಇಟ್ಟಿರುವ ಪ್ರಜಾಸಮಾಜವಾದಿ ಪಕ್ಷಕ್ಕೆ ಬೆಂಬಲ ಕೊಟ್ಟು ಅವರನ್ನೂ ತಪ್ಪಿನಿಂದ ತಪ್ಪಿಸಿದವರಾಗುವುದು ಜಿಲ್ಲೆಯ ಹಿತದೃಷ್ಟಿಯಿಂದ ನಾವು ಇಲ್ಲಿ ಹೇಳಲಿಚ್ಛಿಸುತ್ತೇವೆ.

ಒಂಭತ್ತು ವರ್ಷಗಳ ಆಡಳಿತ ಕಾಲದಲ್ಲಿ ಕಾಂಗ್ರೆಸ್ಸು ಏನೂ ಕೆಲಸವನ್ನು ಜನಸಾಧಾರಣರ ಒಳ್ಳೆಯದಕ್ಕಾಗಿ ಮಾಡಲಿಲ್ಲ ಎಂದು ಪ್ರಜಾ ಸೋಶಲಿಸ್ಟರೂ ಈಗ ಅವರ ಬೆಂಬಲಿಗರಾಗಿ ಬಂದಿರುವ ಕಮ್ಯುನಿಸ್ಟರೂ ಹೇಳುತ್ತಿದ್ದಾರೆ. ಈ ಸಂಚಿಕೆಯ ಬೇರೊಂದೆಡೆ ಕಾಂಗ್ರೆಸ್ಸು ಸರಕಾರವು ಬಡ ಜನರಿಗಾಗಿ ಏನೆಲ್ಲ ಕೆಲಸ ಮಾಡಿದೆ ಎಂಬುದನ್ನು ಸಂಕ್ಷೇಪವಾಗಿ ಹೇಳಿದ್ದೇವೆ. ಅವು "ಕೆಲಸ"ಗಳೇ ಅಲ್ಲವೆ ಮಹತ್ವದ ಸಾಧನೆಗಳಲ್ಲವೆ ಅಲ್ಲವೆಂದು ಯಾರಾದರೂ ಹೇಳುವರಾದರೆ ಅವರು ಹಟಕ್ಕಾಗಿ ಹಾಗೆ ಹೇಳುವರೆಂದು ಭಾವಿಸುವುದೇ ವಿಹಿತ; ಹಟಮಾರಿಗಳಾಗಿ ಸತ್ಯ ಸಂಗತಿಗಳನ್ನು ಗಮನಿಸದಿರುವುದು ವಿವೇಕವಲ್ಲ.

ಕಮ್ಯುನಿಸ್ಟರು ಭಾಷಣಗಳಾಗಿ ಹೆಸರಾಗಿರುವ ಕಮ್ಯುನಿಸ್ಟರ ಧುರೀಣರೊಬ್ಬರು ಪ್ರಜಾ ಸೋಶಲಿಸ್ಟ ಉಮೇದ್ವಾರಿಗೆ ಬೆಂಬಲವನ್ನು ಕೋರುತ್ತಾ ಜನತೆಯನ್ನು ಉದ್ದೇಶಿಸುವ ಮತ್ತು ಜನರ ಆತ್ಮಪ್ರಿಯನ್ನು ಕೆರಳಿಸುವ ಹಾಗು ನಂಜಿನಂತೆ ಕೆಲಸ ಮಾಡುವ ಸುಳ್ಳು ಮಾತುಗಳನ್ನಾಡಲು ಹೇಸುತ್ತಿಲ್ಲವೆನ್ನುವುದು ತುಂಬ ವಿಷಾದಕರ; ಆದರೂ ಮತದಾರರು ಗಮನಿಸಬೇಕಾದವಿಷಯ. ಕಾಂಗ್ರೆಸು ಸರಕಾರವು ಜೋಳ ಮುತ್ತು ರಾಗಿಗಳನ್ನು ತಿನ್ನಿಸಿತೆಂದು ಈಗ, ೧೯೫೭ನೇ ಇಸವಿಯ ಮಾರ್ಚಿ ತಿಂಗಳಲ್ಲಿ, ಈ ಕಮ್ಯುನಿಸ್ಟ ಪ್ರಭೃತಿಗಳು ಜನರ ನೆನಪು ಹುಟ್ಟಿಸುತ್ತಿದ್ದಾರೆ. ಕಾಂಗ್ರೆಸು ಸರಕಾರವು ಅಧಿಕಾರಕ್ಕೆ ಬರುವ ಮೊದಲೇ ನಿಯಂತ್ರಣವನ್ನು (ರೇಶನ್ನನ್ನು) ಬ್ರಿಟಿಷರು ಹೇರಿದ್ದರಿಂದ ಕಳೆದ ಚುನಾವಣೆಯ ಬಳಿಕ ಕೆಲವೇ ತಿಂಗಳುಗಳಲ್ಲಿ ಮದ್ರಾಸಿನಲ್ಲಿ ಕಾಂಗ್ರೆಸು ಸರಕಾರದ ಸೂತ್ರಧಾರರಾಗಿದ್ದ ಶ್ರೀ. ಸಿ. ರಾಜಗೋಪಾಲಾಚಾರಿಯವರು ಮುಂದಿಟ್ಟ ಧೈರ್ಯದ ಹೆಜ್ಜೆಯನ್ನು ನುಸರಿಸಿ ನಿಯಂತ್ರಣಗಳನ್ನು ಕಾಂಗ್ರೆಸು ಸರಕಾರವು ತೆಗೆದು ಹಾಕಿತೆಂದೂ ಎಲ್ಲರೂ ಬಲ್ಲರು. ಕಾಂಗ್ರೆಸು ಸರಕಾರವು ತನ್ನ ಪ್ರಥಮ ಪಂಚ ವಾರ್ಷಿಕ ಯೋಜನೆಯಲ್ಲಿ ಅಧಿಕ ಆಹಾರೋತ್ಪಾದನೆಯನ್ನು ಧ್ಯೇಯವಾಗಿ ಇಟ್ಟುಕೊಂಡು, ಕಾಳ ಸಂತೆಯ ವ್ಯಾಪಾರವನ್ನು ನಿರ್ಬಲಿಸಿ, ಪೇಟೆಯಲ್ಲಿ ಬಹಿರಂಗವಾಗಿಯೇ ನ್ಯಾಯವಾದ ಬೆಲೆಗೆ ಬೇಕಾದಷ್ಟು ಆಹಾರ ಧಾನ್ಯಗಳು ಸಿಗುವಂತೆ ಮಾಡಿರುವುದೂ ಜನರ ಅನುಭವಕ್ಕೆ ಬಾರದ ವಿಷಯವಲ್ಲ. ಹಾಗಿದ್ದೂ ಕಮ್ಯುನಿಸ್ಟರು ಗತಕಾಲದ ಚಿತ್ರವನ್ನೆ ಬಣ್ಣಿಸಲು ಹೋಗಿ, ಜನರನ್ನು ತಪ್ಪು ತಿಳಿವಳಿಕೆಗೆ ದೂಡುತ್ತಿದ್ದಾರೆ; ತಪ್ಪು ಚಿತ್ರವನ್ನು ಅವರ ಮುಂದೆ ರೇಖಿಸುತ್ತಿದ್ದಾರೆ. ಪ್ರಜಾಕಾರ್ಯಕ್ಕೂ ಪಕ್ಷಕ್ಕೂ ವೈತ್ಯಾಸವಿದೆ ಎಂಬುದನ್ನು ತಿಳಿಯದ ಜನರು ಈಗ ಸಹ ನಮ್ಮಲ್ಲಿ ಅಧಿಕ ಸಂಖ್ಯೆಯಲ್ಲಿರುವುದರಿಂದ ಸುಲಭವಾಗಿ ಕಮ್ಯುನಿಸ್ಟರ ಅಪಪ್ರಚಾರಕ್ಕೆ ಅವರು ಪೋಷಕರಾಗುತ್ತಾರೆ. ನಮ್ಮ ಓದುಗರು ಇಂಥ ಜನರನ್ನು ಸರಿದಾರಿಗೆ ಹಚ್ಚುವರೆಂದು ನಂಬುತ್ತೇವೆ.

"ನಾವು ಬದೇಬದೇ ಟೀಕಿಸಿದ ದೆಸೆಯಿಂದ ನಿಯಂತ್ರಣ ತೆಗೆಯಲ್ಪಟ್ಟಿತು" ಎಂದು ಪ್ರತಿಪಕ್ಷಗಳು ಹೇಳಬಹುದು. ಸರಕಾರವು ಏನೇ ಒಳ್ಳೆಯ ಕೆಲಸ ಮಾಡಲಿ, ಆದನ್ನು ತಾವೇ ಮಾಡಿಸಿದ್ದೆಂದು ಹೇಳಿಕೊಳ್ಳುವುದು ಪ್ರತಿಪಕ್ಷಗಳ ಪಾಲಿನ ಆಸ್ತಿಯಾಗಿ ಬಿಟ್ಟಿದೆ. ಕಾಂಗ್ರೆಸಿನ ಬಹುಮತವು ಪ್ರತಿ ರಾಜ್ಯದಲ್ಲೂ ಎಷ್ಟರ ಮಟ್ಟಿಗೆ ಈಗ ಇದೆ ಎಂದರೆ, ಕಾಂಗ್ರೆಸು ಪ್ರತಿನಿಧಿಗಳಿಗೆ ಹಾದೆಂದು ತೋರಿದ್ದೆ ಪಕ್ಷದಲ್ಲಿ ಪ್ರತಿಪಕ್ಷಗಳವರು ಎಷ್ಟೇ ಕೈಕಾಲು ಬಡಿದುಕೊಂಡರೂ ಯಾವ ಕೆಲಸಕ್ಕೂ ಸರಕಾರಿ ಮನ್ನಣೆ ಸಿಗುವಂತಿಲ್ಲ; ಮತ್ತು ಕಾನೂನನ್ನು ತರುವಂತಹ ಪಕ್ಷವೇ ಸರಕಾರಿ ಪಕ್ಷ. ಪ್ರತಿಪಕ್ಷಗಳ ಸದಸ್ಯರು ಮಸೂದೆಗಳನ್ನು ತಯಾರಿಸಬಹುದು; ಸೋಡ್ತಿಯಲ್ಲಿ (ನಿಜವಾಗಿ ಸೋಡ್ತಿಯನ್ನೆ ತೆಗೆಯತ್ತಾರೆ, ನಾವು ತಮಾಷೆಗೆ ಈ ಶಬ್ದವನ್ನು ಉಪಯೋಗಿಸಿದುದ್ದು!) ಯಾವ ಮಸೂದೆಯ ಮೇಲೆ ಚರ್ಚೆ ನಡೆಯಬಹುದೆಂದು ಸೂಚಿಸಲ್ಪಡುತ್ತದೋ ಆ ಮಸೂದೆಯ ಮೇಲೆ ಒಂದೆರಡು ತಾಸುಗಳ ವರೆಗೆ ಚರ್ಚೆ ನಡೆಸಿ ಅಲ್ಲಿಗೇನೇ ಅದನ್ನು ಬಿಟ್ಟು ಬಿಡಲಾಗುತ್ತದೆ. ಅದೆಂದೂ ಶಾಸನವಾಗಿ ಜಾರಿಗೆ ಬರುವುದಿಲ್ಲ. ಪಾರ್ಲಿಮೆಂಟರಿ ಆಡಳಿತ ಕ್ರಮವನ್ನು ತಿಳಿದವರಿಗೆ ಇವೆಲ್ಲ ಗೊತ್ತು; ಆದರೆ, ಜನಸಾಧಾರಣರಿಗೆ ಆಡಳಿತದ ಮರ್ಮಗಳೇನೂ ತಿಳಿಯದ ದೆಸೆಯಿಂದ ಪಕ್ಷಪ್ರತಿಪಕ್ಷಗಳವರು "ನಿನಗೆ ಅದು ಮಾಡುತ್ತೇನೆ; ಇದು ಮಾಡುತ್ತೇನೆ" ಎನ್ನುವಾಗ "ಹಾಂ, ಹೌದೇ!" ಎಂದು ತಲೆಯಾಡಿಸುವಂತಾಗುತ್ತದೆ. ಈಗಿನ ಈ ಪಾರ್ಲಿಮೆಂಟರಿ ವ್ಯವಹಾರಕ್ರಮ ತಪ್ಪು ಎಂದು ಯಾವ ಪ್ರತಿಪಕ್ಷದ ಮುಖಂಡನೂ ಸಾರ್ವಜನಿಕವಾಗಿ ಕೇಳಿದುದಿಲ್ಲ. ಆದರೂ ಜನರನ್ನು ನಂಬಿಸಲು "ತಾನು ಮನೆ ಬಾಡಿಗೆ ಇಳಿಸುವಂತೆ ಕಾನೂನು ಮಾಡುತ್ತೇನೆ, ಬೇರೆ ಕಡಿಮೆ ಯಾಗುವಂತೆ ಶಾಸನ ತರುತ್ತೇನೆ, ಅಕ್ಕಿಗೆ ಕೆಜಿಯ ಏರದಂತೆ ಕಾಯಿದೆಯ ಮೂಲಕ ತಡೆ ಹಾಕುತ್ತೇನೆ; ಭೂಮಿ ಉಳುವವನದಾಗುವಂತೆ ಮಾಡುತ್ತೇನೆ" ಎಂದು ಘೋಷಿಸುತ್ತಾರಲ್ಲ ಈ ಪ್ರತಿಪಕ್ಷದ ಪ್ರಭೃತಿಗಳು! ಇವರೊಳಗೆ ಮೋಸಗಾರರು, ಸುಳ್ಳುಗಾರರು ಮತ್ತು ಅಪಪ್ರಚಾರಕರು—ಎಂಬುದನ್ನು ಜನರು ಇನ್ನಾದರೂ ತಿಳಿದರೆಸ್ಸೇಸು.

ಕಾಂಗ್ರೆಸು ಸರಕಾರವು ಒಕ್ಕೆಯ ಬೆಲೆ ಏರಿಸಿದೆ ಎಂದು ಹೇಳಲಾಗುತ್ತದೆ. "ನಿಮಗೆ ಮುಡಿಗೆ ಹತ್ತು ರೂಪಾಯಿ ಕೈಯ್ಯ ವಾಗಬೇಕೆ ಮನೆಯ ಗುರುತಿಗೆ ಓಟು ಹಾಕಿರಿ; ಮೂವತ್ತು ರೂಪಾಯಿಯಾದರೂ ಬೇಕಿಲ್ಲವಾದರೆ ಎತ್ತಿನ ಪೆಟ್ಟಿಗೆಗೇ ಓಟು ಹಾಕಿರಿ" ಎಂದು ಜನರನ್ನು

98 ವರ್ಷಗಳ ಖ್ಯಾತಿಗೆ ಕಸಿವ ಪಂ|| ಅಂಬಳಿ ರಾಮಸ್ವಾಮಿ ಅಯ್ಯರ್‌ರವರ ರಕ್ಷಪ್ಪ ಯಗಳು

ಟ್ರೇಡ್ ಮಾರ್ಕ್

ಸಂತಾನ ಸಿಂಧೂರ (ಸ್ತ್ರೀಯರಿಗೆ; ಪ್ಯಾಕೆಟ್) | ಮದನ ವಿಲಾಸ (ಪುರುಷರಿಗೆ; ಗುಳಿಗೆ)

ಈ ಔಷಧವು ಬಹುಪಾಲು ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ಪರಿಹರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಸಿ, ನಪುಂಸಕತೆಯನ್ನು ನಾಪಾವಶೇಷ ಮಾಡುತ್ತದೆ.

ಸಂ|| A. R. ಅಯ್ಯರ್

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ ತಾಯ್ತಂದೆಗಳಾಗಿದ್ದಾರೆ. ಹೊಸ ಕ್ಯಾಟಲಾಗು, ಔಷಧದ ಬೆಲೆ ಇತ್ಯಾದಿಗಳಿಗೆ 3 ಆಣೆ ಸ್ಟಾಂಪು ಕಳಿಸಿರಿ

ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ., (ನೆ. ಯು.)

628 ಸಂತಾನ ಸಿಂಧೂರ ಸದನ (ಪೋಸ್ಟ್ ಬೀಟ್ 9) ಮೈಸೂರು S. I.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.,

ಸ್ಥಾಪನೆ: ೧೯೫೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಅಧಿಕೃತ ಬಂಡವಾಳ	...	ರೂ. 56,00,000
ಚಲಾವಣೆ ಬಂಡವಾಳ	...	ರೂ. 32,23,787
ವರ್ಗಣಿ (ಪಾಲು) ಬಂಡವಾಳ	...	ರೂ. 32,10,987
ತೆತ್ತ ಬಂಡವಾಳ	...	ರೂ. 27,80,579
ಕ್ಷೇಮನಿಧಿ	...	ರೂ. 18,00,000
ಠೇವಣಾತಿ	...	ರೂ 8·46 ಕೋಟಿ.

ತಾ. 30-9-1956ರಲ್ಲಿ ನಮ್ಮ ಚಲಾವಣೆ ನಿಧಿ 10 ಕೋಟಿಗೂ ಮಿಕ್ಕಿದೆ

(ನವೋದಿತ ರಾಜ್ಯಗಳಲ್ಲಿ) ನಮ್ಮ ಶಾಖೆಗಳು

(ವಿಶಾಲ) ನವಮೈಸೂರು	59
ಆಂಧ್ರ ಪ್ರದೇಶ	14
ಕೇರಳ	13
ಬೊಂಬಾಯಿ	8
ಮದ್ರಾಸು	2

ಟಿ. ಎ. ಪೈ ಬಿ. ಕಾಂ. (ಬೊಂಬಾಯಿ) ಎಂ. ಎಲ್. ಎ., ಟಿ. ಎಂ. ಎ. ಪೈ, ಎಂ. ಬಿ., ಬಿ. ಎಸ್.
ಜನರಲ್ ಮೇನೇಜರ್. ಮೇನೇಜಿಂಗ್ ಡೈರೆಕ್ಟರ್.

The Canara Industrial & Banking Syndicate Ltd.

ಹಂಗಿಸಿ, ಕಾಂಗ್ರೆಸ್ಸನ್ನು ತುಚ್ಛೀಕರಿಸಿ ತಮಗೆ ಬೆಂಬಲವನ್ನು ಸೋಶಲಿಸ್ಟರೂ ಅವರ ಪರವಾಗಿ ಕಮ್ಯೂನಿಸ್ಟರೂ ಕೇಳುತ್ತಿದ್ದಾರೆ. ಆದರೆ ಆಕ್ಕಿಯ ಜೆಲೆಯು ಸಾಮಾನ್ಯವಾಗಿ ಮುಡಿಗೆ ಹದಿನೈದು ರೂಪಾಯಿಯಾಗಿದ್ದಾಗ ಇದೇ ಪ್ರತಿಪಕ್ಷಗಳವರು ಎಸೆಂಬ್ಲಿ ಸಭೆಯಲ್ಲೂ ವಾರ್ಡಿಮೆಂಟಿನಲ್ಲೂ "ಕೃಷಿಕನಿಗೆ ಉತ್ಪತ್ತಿಗೆ ತಕ್ಕ ಕ್ರಯ ಸಿಗುತ್ತಿಲ್ಲ—ಧಾರಣೆ ಇಳಿದು ಆತನಿಗೆ ನಷ್ಟವಾಗುತ್ತಿದೆಯಲ್ಲ" ಎಂದು ಕೂಗಿನ್ನು ಎಬ್ಬಿಸಿದ್ದಾರೆ ಎಂಬುದನ್ನು ಜನರು ಈಗಲಾದರೂ ನೆನಪಿಗೆ ತಂದುಕೊಳ್ಳಬೇಕಾಗಿದೆ. ಇವರು ಹೀಗೆ ಬೊಬ್ಬೆ ಹಾಕಿದ್ದರಿಂದ ಸರಕಾರ ಧಾರಣೆ ಏರಿಸಿತು ಎಂದೇನಲ್ಲ- ಧಾರಣೆ ಏರಲಿಕ್ಕೆ ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ಉಂಟಾದ ಕೆಲವೊಂದು ಬದಲಾವಣೆಗಳೇ ಕಾರಣ. ಪ್ರತಿಪಕ್ಷಗಳು ಎರಡು ತಾಲಗೆಯಿಂದ ಮಾತನಾಡುವುದನ್ನೆ ಹೇಗೆ ಅಭ್ಯಾಸವಾಗಿ ಮಾಡಿಕೊಂಡಿವೆ ಎಂದು ಸ್ಪಷ್ಟಗೊಳಿಸಲಿಕ್ಕಾಗಿ ಈ ಉದಾಹರಣೆಯನ್ನು ಎತ್ತಿಕೊಂಡಿದ್ದೇನೆ.

ಒಂಭತ್ತು ವರ್ಷಗಳ ಆಡಳಿತ ಕಾಲದಲ್ಲಿ ಕಾಂಗ್ರೆಸ್ಸು ಒಕ್ಕಲು ಹಿತ ಮಸೂದೆಯನ್ನು ತರಲಿಲ್ಲ— ಹಾಗಿದು ತರಲಿಲ್ಲ— ಎಂದೇ ಪ್ರಜಾಸೋಶಲಿಸ್ಟರೂ ಕಮ್ಯುನಿಸ್ಟರೂ ಹೇಳುತ್ತಾ ತಿರುಗುತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಶ್ರೀ ರಂಜಡಗೋಪಾಲಾಚಾರಿಯವರು ಮದ್ರಾಸಿನ ಮುಖ್ಯಮಂತ್ರಿಯಾಗಿರುವಾಗಲೇ ಗೇಣಿ ಕೊಡುತ್ತಾ ಬಂದಿರುವ ಒಕ್ಕಲನ್ನು ಎಬ್ಬಿಸಬಾರದೆಂಬ ಕಾನೂನನ್ನು ಜ್ಯಾರಿಗೆ ತಂದಿದ್ದರು. ಆ ಮೇಲೆ ಕಳೆದ ವರ್ಷ ಗೇಣಿ ನಿರ್ಣಯ ಮಾಡುವ ಶಾಸನವನ್ನು ಕಾಂಗ್ರೆಸ್ಸಿನ ಸರಕಾರ ಜ್ಯಾರಿಗೆ ತಂದಿತು. ಒಕ್ಕಲು ಹಿತ ಶಾಸನವು ಇದಲ್ಲವಾದರೆ ಬೇರೆ ಏನು? ಮತ್ತೆ ಇದರಲ್ಲೂ ಸ್ವಾರ್ಥವಿದೆ— ಯಾರು ಭಾಷಣಗಳಲ್ಲಿ ಒಕ್ಕಲು ಹಿತ ಶಾಸನವು ಇನ್ನೂ ಬರಲಿಲ್ಲ ಎನ್ನುತ್ತಾರೋ ಆ ಪ್ರಜಾಸೋಶಲಿಸ್ಟರ. ಮುಖಂಡರ ಅಭಿಪ್ರಾಯವನ್ನು ಸರಕಾರದವರು ಅಧಿಕೃತವಾಗಿ ಕೇಳಿದಾಗ ಏನು ಹೇಳಿದ್ದರು ಗೊತ್ತೆ? "ನಮ್ಮ ಜಿಲ್ಲೆಯಲ್ಲಿ ಭಿನ್ನಗೇಣಿ ಒಕ್ಕಲುಗಳೂ ಬಹಳ ಪ್ರೀತಿಯಿಂದ ನಡೆದುಕೊಳ್ಳುತ್ತಾ ಬಂದಿದ್ದಾರೆ; ಅವರ ನಡುವೆ ಮಧುರ ಸಂಬಂಧವಿದೆ; ಹೊಸ ಶಾಸನಗಳು ಬಂದರೆ ಈ ಪ್ರೀತಿಯ ಕಟ್ಟು ಹರಿದು ಹೋಗಬಹುದು; ಆದುದರಿಂದ ಈಗ ಇದ್ದಂತೆಯೇ ಇರುವುದು ಲೇಸು" ಎಂದು ಹೇಳಿದ್ದರು. ಹೀಗಿತ್ತು ಪ್ರಜಾಸೋಶಲಿಸ್ಟರು ಸರಕಾರದ ಅಧಿಕೃತ ಪ್ರತಿನಿಧಿಗಳ ಮುಂದೆ ಮಂಡಿಸಿದ ವಾದ! ಇವರೇ ಈಗ ಬಡ ರೈತರ ಮತ್ತು ಕೃಷಿಕರ ಬೆಂಬಲಿಗರೆಂದು ಸಾರಿಕೊಳ್ಳುತ್ತಿದ್ದಾರೆ ನಾಚಿಕೆಗೇಡು!

ಮಂತ್ರಿ ಶ್ರೀ ಎ. ಬಿ. ಶೆಟ್ಟರು ಒಕ್ಕಲು ಹಿತಮಸೂದೆ ತರಲು ಆಡ್ಡಿಯಿರುವ ಬಂಡೆಗಲ್ಲು ಎಂದು ನಮ್ಮ ಪ್ರಜಾಸಮಾಜವಾದಿ ಪಕ್ಷದ ಹಾಗು ಕಮ್ಯುನಿಸ್ಟರ ಪತ್ರಿಕೆಗಳು ಎಷ್ಟು ಉದ್ದುದ್ದ ಲೇಖನ ಬರೆಯಲಿಲ್ಲ? ಆದರೆ ಪ್ರಜಾಸೋಶಲಿಸ್ಟರಲ್ಲೂ ಕಮ್ಯುನಿಸ್ಟರಲ್ಲೂ ಇರುವ ಭೂಮಾಲಿಕ ವರ್ಗದವರು ತಮ್ಮ ಜಾಲಗೇಣಿ ಒಕ್ಕಲುಗಳ. ವಿಷಯದಲ್ಲಿ ಎಷ್ಟು ಕರುಣೆಯಿಂದ ವರ್ತಿಸಿದರು? ಶಾಸನವಾಗುವುದನ್ನು ಕಾಯದೆ, ಅದಕ್ಕೆ ಮೊದಲೇ ತಮ್ಮ ಜಾಲಗೇಣಿ ಒಕ್ಕಲುಗಳನ್ನು ಮೂಲಗೇಣಿ ಒಕ್ಕಲುಗಳನ್ನಾಗಿ ಪರಿವರ್ತಿಸಲಿಲ್ಲವೆ? ಉಳುವವನಿಗೆ ನೇ ತಮ್ಮ ಭೂಮಿಯನ್ನು ಬಿಟ್ಟುಕೊಟ್ಟು ತಾವೇಕೆ ಮಾದರಿಯನ್ನು ಹಾಕಿಕೊಡಲಿಲ್ಲ? ತಮ್ಮ ಸ್ವಾರ್ಥಕ್ಕೆ ಧಕ್ಕೆಬರುತ್ತದೆ ಎಂದೇ ಅಲ್ಲವೆ? ಒಕ್ಕಲುಗಳಿಂದ ಕೋರ್ಜಿಗಟ್ಟಲೆ ಗೇಣಿಯನ್ನು ಪಡೆದು ವರ್ಷಕ್ಕೆ ಮೂವತ್ತು-ಮೂವತ್ತೈದು ಮುಡಿ ಅಕ್ಕಿಯನ್ನೂ ಕೆಲವು ನೂರು ರೂಪಾಯಿಗಳನ್ನೂ "ದಾನ" ಮಾಡಿಬಿಟ್ಟ ಮಾತ್ರಕ್ಕೆ ಒಬ್ಬರು ಉದಾರಿಗಳೂ ಧರ್ಮಾತ್ಮರೂ ಆದರೆಂದು ಹೇಳುವುದು ಕೇವಲ ವಿಡಂಬನೆ! ಬಡಜನರ ಮಕ್ಕಳ ವಿದ್ಯಾಭ್ಯಾಸಕ್ಕೆ ಮತ್ತು ಬಡಜನರ ಉಪಯೋಗಕ್ಕಾಗಿ ಇರುವ ಕೆಲಸಗಳಿಗೆ ತನ್ನೆಲ್ಲ ಸಂಪಾದನೆಯನ್ನು ವಿನಿಯೋಗಿಸಿದ ವ್ಯಕ್ತಿಯ ತ್ಯಾಗವನ್ನು ಮುಂದೆ ಈ ಒಣ ಆಡಂಬರಕ್ಕೇನು ಬೆಲೆ? ವಿವೇಕಿಗಳೂ ಸೂಕ್ಷ್ಮ ಪ್ರಜ್ಞರೂ ಈ ತತ್ವವನ್ನು ಒಂಥನದ ಸ್ವಾಂಶವನ್ನಾಗಿ ಸ್ವೀಕರಿಸುವುದಿಲ್ಲವೆ, ತಪ್ಪು ಕಲ್ಪನೆಯನ್ನು ಹೊಂದಿದವರ ಅನುಮಾನ ಸಂಶಯ ಮತ್ತು ಭ್ರಾಮಕ ತಿಳಿವಳಿಕೆಯನ್ನು ಹೋಗಲಾಡಿಸಿ, ಸತ್ಯವನ್ನೆ ಜನರು ಮೆಚ್ಚುವಂತೆ ಮಾಡಬೇಕಾದದ್ದು ಕರ್ತವ್ಯ.

ಮದ್ಯವ್ಯಾನ ಪ್ರತಿಬಂಧವನ್ನು ಕಾಂಗ್ರೆಸು ಸರಕಾರವು ತಂದ ಕುರಿತು ಬಡವರ ವರ್ತಮಲದಲ್ಲಿ ಪ್ರತಿಪಕ್ಷಗಳು ಗಾಬರಿಯುತ್ತಿರುವ ಅಪಪ್ರಚಾರವು ಗಾಂಧಿ ತತ್ತ್ವಾನುಯಾಯಿಗಳೆಂದು ತಮ್ಮ ಪ್ರಕಟಣೆಗಳಲ್ಲಿ ಕೊಚ್ಚಿಕೊಳ್ಳುತ್ತಿರುವ ಪ್ರಜಾಸೋಶಲಿಸ್ಟರಿಗೆ ಎಷ್ಟು ಮಾತ್ರಕ್ಕೂ ಶೋಭೆ ತರುವ ವಿಷಯವೆಲ್ಲ ಹಳ್ಳಿಜನರ ಮುಂದೆ ಇವರು ಮಾಡುವ ಭಾಷಣಗಳ ವೈಖರಿ ನೋಡಿ— "ಬಡವನೊಬ್ಬನು ಮೂರಾಣೆಕೊಟ್ಟು ಕಳ್ಳು ಕುಡಿದರೆ ಕಾಂಗ್ರೆಸಿನ ಪೋಲೀಸರು ಬಂದು ಆತನನ್ನು ಹಿಡಿದು ಮೂವತ್ತು ರೂಪಾಯಿ ಜುಲ್ಮಾನೆಯನ್ನೆನ್ನು ಮೂರು ತಿಂಗಳು ಜೈಲಿನ ಶಿಕ್ಷೆಯನ್ನೂ ವಿಧಿಸುತ್ತಾರೆ; ಅದೇ ಶ್ರೀಮಂತನು ಕ್ಲಬ್ಬಿನಲ್ಲಿ ಕುಳಿತು ಸರಾಯಿ ಸೇವಿಸಿದಾಗ ಕೇಳುವವರಿಲ್ಲ!" ಈ ಆರೋಪದ ವಿಮರ್ಶೆ ಮಾಡೋಣ- ಮದ್ಯವ್ಯಾನವು ಒಳ್ಳೆಯದೆಂದು- ಈ ಗಾಂಧಿ ಅನುಯಾಯಿ ಪ್ರಜಾಸೋಶಲಿಸ್ಟರು ಎಂಬೋಣವೆ? ಅಚಾರ್ಯ ಕೃಪಲಾನಿಯವರು ಹಾಗೆಲ್ಲೂ ಹೇಳಿಲ್ಲ- ನಮ್ಮ ಜಿಲ್ಲೆಯ ಶ್ರೀ ಕಾಂತರೂ ಹಾಗೆ ಹೇಳಿದ್ದು ನೆನಪಿಲ್ಲ. ಕಾನೂನನ್ನು ಮುರಿದವನಿಗೆ ಶಿಕ್ಷೆ ವಿಧಿಸುವುದು ಸರಕಾರದ ತಪ್ಪೆ? ಯಾವ ನಾಗರಿಕನೂ ಅವನ್ನು ತಪ್ಪೆಂದು ಹೇಳಲಾರ; ಯಾವುವಾನರೂ ಪಕ್ಷವು ಅದು ತಪ್ಪೆನ್ನುತ್ತದಾದರೆ ಅದು ಸರಕಾರವನ್ನು ನಡೆಸುವ ಯೋಗ್ಯತೆಯನ್ನೆ ಹೊಂದಿಲ್ಲ ಅಲ್ಲವೆ ಸರಕಾರಕ್ಕೆ ದ್ರೋಹ ಬಗೆದಂತೆಯೇ ಆಗಿ, ಶ್ರೀಮಂತನನ್ನು ಪೋಲೀಸರು ಹಿಡಿಯುವುದಿಲ್ಲ ಎನ್ನುವುದೇ ಅವರ ನಿಜ ಆರೋಪವಾಗಿರಬಹುದು— ಪೋಲೀಸರು ಶ್ರೀಮಂತನನ್ನು ಸುಳಿಯುವುದಿಲ್ಲ; ಹೀಗೆ ಕರ್ತವ್ಯ ಲೋಪ ಮಾಡುತ್ತಾರೆ. ಇವು ಶಿಥಿಲ ಆಡಳಿತ ಎಂಬುದೇ ಪ್ರತಿಪಕ್ಷಗಳ ದೂರಾಗಿರಬಹುದು. ಒಪ್ಪಿಕೊಳ್ಳೋಣ —ಆದರೆ, ಆ ಶ್ರೀಮಂತ ಸುತ್ತ ಯಾರು? ಆತನು ಯಾವ ಕ್ಲಬ್ಬಿನಲ್ಲಿ ಸರಾಯಿ ಸೇವಿಸುತ್ತಿದ್ದಾನೆ ಎಂಬ ಪ್ರತಿಪಕ್ಷಗಳವರು ಎಂದಾದರೂ ಪೋಲೀಸರ ಗಮನಕ್ಕೆ ತಂದಿದಿವೆಯೆ? ಆ ಶ್ರೀಮಂತನ ಭಂಡಣ ಶಾಸ್ತಿಯಾಗಬೇಕೆಂದು ತಮ್ಮ ರಚನಾತ್ಮಕ ಸಹಕಾರವನ್ನು ಸಲ್ಲಿಸಿದ್ದು ಇನೆಯೆ? ಇಲ್ಲವೆಂದಾದ ಮೇಲೆ ಆ ಶ್ರೀಮಂತ ಸುತ್ಕಸು ಪ್ರತಿಪಕ್ಷಗಳ ಕಲ್ಪನಾಲೋಕದ ಸೃಷ್ಟಿಯಾಗಿರುವುದೇ ನಿಜ; ಕೊರತು ವಾಸ್ತವದಲ್ಲಿ ಹಾಗೆ ಯಾರೂ ಮಾಡಿರಲಿಕ್ಕಿಲ್ಲ. ಶ್ರೀಮಂತರನ್ನು ಪೋಲೀಸರು ಬಿಟ್ಟು ಬಿಡುತ್ತಾರೆಂಬುದೇ ದೌದಾದರೆ ಮುಂಬಯಿ ಪತ್ರಿಕೆಗಳಲ್ಲಿ ಸುದ್ದಿಗಳ ನಟ— ನಟಿಯರ ಮನೆಗಳ ಪೋಲೆ ಮದ್ಯವ್ಯಾನ ಪ್ರತಿಬಂಧಕ್ಕೆ ಪೂರಿಗೊರಾದ ಪೋಲೀಸರು ದಾಳಿ ನಡೆಸುತ್ತಿರುವ ವರ್ತಮಾನ ಪ್ರಕಟವಾಗುತ್ತಿರಲಿಲ್ಲ? ಜನರಿದನ್ನು ತಿಳಿದುಕೊಳ್ಳಲಿ; ಮತ್ತು ಪ್ರತಿಪಕ್ಷಗಳು ಸುಳ್ಳು ಸುಳ್ಳೇ ಟೀಕೆ ಮಾಡುತ್ತಿರುವುದೆಲ್ಲದೆ ರಚನಾತ್ಮಕವಾದ ಯಾವ ಕೆಲಸವಲ್ಲೂ ನಿರತವಾಗುತ್ತಿಲ್ಲವೆಂದೂ ನೆನಪಿಡಲಿ.

Notice

ಪಡುಬಿದ್ರಿ ಪಂಚಾಯತ್ ಬೋರ್ಡ್ ಪ್ರೆಸಿಡೆಂಟ್ ಶ್ರೀ ಕೆ. ಗೋಪಾಲ ಹೆಗ್ಡೆ ಮೃತಪಡಿಸುವುದೀನೆಂದ್ರೆ ನಮ್ಮ ಪಂಚಾಯತ್ ಬೋರ್ಡು ತಾಬೆಯಲ್ಲಿರುವ ಹಪ್ಪನಾರು ಮಾರ್ಕೆಟು ಮತ್ತು ದಿನವಹಿ ಮಾರ್ಕೆಟು ಕೂಡಾ 1957-1958ನೇ ಇಸ್ವಿಯ ಬಾಬ್ತು ತಾ. 1—4—1957 ರಿಂದ ತಾ. 31-3-1958 ರ ವರೆಗಿನ ವರ, ವ, ಸುಂಕ ವಸೂಲುಮಾಡುವ ಸ್ವತಂತ್ರವನ್ನು ಇದೇ ತಿಂಗಳ ತಾ. 15-3-1957ನೇ ಶುಕ್ರವಾರ ಅಪರಾಹ್ನ ಗಂಟೆ 3.30ಕ್ಕೆ ಸರಿಯಾಗಿ ಪಂಚಾಯತ್ ಬೋರ್ಡು ಆಫೀಸಿನಲ್ಲಿ ಬಹಿರಂಗವಾಗಿ ಏಲಂಮಾಡಲಾಗುವುದು. ಏಲಂ ಶರ್ತ ವಗೈರೆ ಆಗತ್ಯವಿದ್ದವರು ಆಫೀಸಿಗೆ ಬಂದು ತಿಳಿದುಕೊಳ್ಳುವುದು.

ಕೆ. ಗೋಪಾಲ ಹೆಗ್ಡೆ,
ಪ್ರೆಸಿಡೆಂಟ್ ಪಂಚಾಯತ್‌ಬೋರ್ಡು, ಪಡುಬಿದ್ರಿ
1-3-1957.



ಝಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ¼ ರಾತಲಿಗೆ ರೂ. 1/13

ಪ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಪೈಚೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ,

ವಿವರವಾದ ಕಿಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ.
ಮದ್ರಾಸ್—3.

NOTICE

Notice is hereby given that Share Certificate No. 462 for 5 shares numbered 2568 to 2572 issued by The Vijaya Bank, Limited, to Sri. P. Thabura Shetty, S/o Sesu Shetty, New General Hindu Restaurant, Sewri, Bombay 15, is reported to be lost and an application has been received for the issue of a fresh Share Certificate in the place of the original. Any person having any objection whatsoever for the issue of a fresh Share Certificate in the applicant's name, should communicate immediately the same to the undersigned. If no objection is filed with the undersigned within 15 days from this date, a fresh Share Certificate in the place of the said Share Certificate No. 462 for five shares, will be issued in the name of Sri. P. Thabura Shetty

The Vijaya Bank, Ltd., (Sd) B. Mahabala Shetty.
Head Office, Secretary.
MANGALORE—3
Dated: 2—3—1957

NAVAYUGA

Popular Kannada Weekly

Founder:—

A. B. SHETTY, *M. L. A.*
Former Minister for Public Health, Govt. of Madras.
At Present Minister for Health Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೬	೭-೩-'೫೭	೨೬

ಮತದಾನಾಧಿಕಾರ

ನಮ್ಮದು ಪ್ರಜಾಪ್ರಭುತ್ವ ಪದ್ಧತಿಯಂತೆ ಕಾರ್ಯ ನಿರ್ವಹಿಸುವ ರಾಷ್ಟ್ರ. ಭೂರಿ ಚುನಾವಣೆಯನ್ನು ಐದು ವರ್ಷಗಳಿಗೊಮ್ಮೆ ನಡೆಸುವುದೂ ಎಲ್ಲ ಬಗೆಯ ರಾಜಕೀಯ ವಿಚಾರಗಳಿಗೂ ಬೆಳನಡಿಗೆಯನ್ನು ಕೊಂದಲು ಮುಕ್ತ ಅವಕಾಶವನ್ನು ಕಲ್ಪಿಸಿಕೊಟ್ಟಿರುವುದೂ ಪ್ರಜಾಪ್ರಭುತ್ವ ಪದ್ಧತಿಯ ಮುಖ್ಯ ವೈಶಿಷ್ಟ್ಯ. ಈ ಪದ್ಧತಿಯನ್ನು ನವಯುಗದ ಸಂಪೋಷಾನುಸಾರ ಕಾಂಗ್ರೆಸು ಪಕ್ಷದ್ದೇ ಸಿಸ್ಟಂ ದಿಗ್ಧ ಬಹುಮತವಿದ್ದ ಘಟನಾ ಸಮಿತಿಯು ಭಾರತೀಯರಿಗೆ ರಾಜ್ಯಘಟನೆಯ ಮೂಲಕ ನೀಡಿತು. ಕಾಂಗ್ರೆಸಿಗೆ ತಾನೇ ಅಧಿಕಾರದಲ್ಲಿ ಉಳಿಯಬೇಕೆಂಬ ಸಂಕಲ್ಪ ವಿರುತ್ತಿದ್ದರೆ ಆದು ಪ್ರಜಾಪ್ರಭುತ್ವ ಪದ್ಧತಿಯನ್ನು ಘಟನಾ ಸಮಿತಿಯಲ್ಲಿ ಎತ್ತಿ ಹಿಡಿಯುತ್ತಿರಲಿಲ್ಲ: ತಾನೇ ಸರಾಕಾಲ ಅಧಿಕಾರದಲ್ಲಿರಬೇಕೆಂಬುದು ಕಾಂಗ್ರೆಸಿನ ಇಚ್ಛೆಯಾಗಿರಲಿಲ್ಲ; ಅತ್ಯಧಿಕ ಜನರ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿರುವ ಪಕ್ಷವೇ ರಾಜಕೀಯಾಧಿಕಾರವನ್ನು ಚಲಾಯಿಸಬೇಕು, ಆ ಪಕ್ಷವೇ ಸರಕಾರವನ್ನು ನಡೆಸುವಂತಾಗಬೇಕು, ಇದರಿಂದಲೇ ಜನರಿಗೆ ತೃಪ್ತಿ, ಜನಸಾಂಗಕ್ಕೆ ಶ್ರೇಯಸ್ಸು ಎಂಬುದನ್ನು ಕಂಡುಕೊಂಡಂತಹ ಉದಾತ್ತ ಬುದ್ಧಿ ಕಾಂಗ್ರೆಸ್ಸಿನದು. ಆದುದರಿಂದಲೇ ಕಾಂಗ್ರೆಸಿನ ನಾಯಕರ ಕೈಯಲ್ಲಿಯೇ ಈಗ ಸರಕಾರಿ ಸೂತ್ರವಿದ್ದರೂ ಸಹ, ಅವರು ಯಾವುದೇ ರಾಜಕೀಯ ಪಕ್ಷವನ್ನು—ಆತ್ಮಗಳ ವಿಷಯದಲ್ಲಿ ತಮ್ಮ ತಿರಸ್ಕಾರ ಎಷ್ಟೇ ಇದ್ದರೂ—ಬಹಿಷ್ಕರಿಸುವುದಕ್ಕೆ ಹೋಗಿಲ್ಲ. ಹೀಗಾಗಿ ಇಂದು ತಮ್ಮ ಮುಂದೆ ಕಮ್ಯುನಿಸ್ಟರೂ ಜನಸಂಘ, ರಾಮರಾಜ್ಯ ಪರಿಷತ್ತು, ಹಿಂದೂಮಹಾಸಭೆ, ರಾಷ್ಟ್ರೀಯ ಸ್ವಯಂಸೇವಕ ಸಂಘ ಇತ್ಯಾದಿ ಜಾತೀಯ ಗುಂಪುಗಳೂ ರಾಜಕೀಯ ರಂಗದಲ್ಲಿ ಅಭಿನಯಿಸುತ್ತಿರುವಂತಾಗಿದೆ. ನಮ್ಮ ದೇಶಕ್ಕೆ ಈ ಪಕ್ಷಗಳ ಧ್ಯೇಯ ಧೋರಣೆ ಯಿಂದಾಗಲೀ ಕಾರ್ಯ ವಿಧಾನದಿಂದಾಗಲೀ ಎಳ್ಳಷ್ಟೂ ಪ್ರಯೋಜನ ಲಭಿಸದೆಂದು ಕಾಂಗ್ರೆಸಿನ ಮುಖಂಡರುಗೆ ಖಚಿತವಾಗಿದ್ದರೂ ಈ ರಾಜಕೀಯ ಗುಂಪುಗಳ ಚಟುವಟಿಕೆಗೆ ಅವಕಾಶ ಕಲ್ಪಿಸಿಕೊಟ್ಟಿರುವುದು ಪ್ರಜಾಪ್ರಭುತ್ವದಲ್ಲಿಟ್ಟ ಶ್ರದ್ಧೆಯ ಮೂಲಕವಲ್ಲದೆ ಬೇರೆಯಲ್ಲ. ಜನರಿಗೆ ತಿಳಿಸಿ ಹೇಳಿದರೆ, ಅವರು ಒಳಿತು—ಕೆಡುಕಗಳ ತಾರತಮ್ಯ ಜ್ಞಾನವನ್ನು ನಿಜಕ್ಕೂ ಹೊಂದಬಲ್ಲರು — ಎಂಬುದೇ. ಪ್ರಜಾಪ್ರಭುತ್ವದಲ್ಲಿ ಮುಕ್ತ ಪ್ರಚಾರಕ್ಕೆರುವ ಸ್ವಾತಂತ್ರಾನಂತರ ಗುಟ್ಟು. ನ್ಯಾಯ ಸ್ಥಾನದ ಮುಂದೆ ಹೇಗೆ ವಾದಿ—ಪ್ರತಿವಾದಿಗಳಿಗಿಬ್ಬರಿಗೂ ತಂತಮ್ಮ ಪಕ್ಷ ಮಂಡನೆಗೆ ಅವಕಾಶವನ್ನು ನೀಡಲಾಗುತ್ತದೋ ಮತ್ತು ನ್ಯಾಯಾಧಿಪತಿಯ ಪಾಲಿಗೆ ಈ ಪಕ್ಷಗಳಲ್ಲಿ ಯಾವುದರ ಕಡೆಗುಲ್ಲಿ ಸತ್ಯ—ನ್ಯಾಯಗಳಿವೆ ಎಂಬುದನ್ನು ನಿರ್ಧರಿಸಲು ಬಿಡಲಾಗುತ್ತದೋ ಅದೇ ರೀತಿ ಜನತಾ ನ್ಯಾಯಾಲಯದ ಮುಂದೆ ಎಲ್ಲ ಪಕ್ಷಗಳವರೂ ತಂತಮ್ಮ ಧ್ಯೇಯ ಧೋರಣೆಗಳನ್ನು ವಿವರಿಸಿ ಹೇಳ ವುದೂ ಜನರು ತಪ್ಪುಗೆ ನ್ಯಾಯವೆಂದೂ ಯೋಗ್ಯವೆಂದೂ ಕಂಡ ಪಕ್ಷವನ್ನೆ ಸುರಸ್ಕರಿಸುವುದೂ ಪ್ರಜಾಪ್ರಭುತ್ವದ ಉತ್ತಮ ಸಂಪ್ರದಾಯ. ತನ್ನ ನಿಲುವೆಯು ನ್ಯಾಯ ಯುಕ್ತವಾದುದೆಂಬ ವಿಶ್ವಾಸವೆಷ್ಟೇ ಇರಲಿ, ಇದಿರಾಳಿಯೊಬ್ಬನಿದ್ದಾನೆಂದ ಮೇಲೆ ಆತನಿಗೂ ಮಾತನಾಡುವ ಅವಕಾಶ ಕೊಡುವುದು ಪ್ರಜಾಪ್ರಭುತ್ವಕ್ಕೆ ಒಪ್ಪುವ ಕ್ರಮ. ಚುನಾವಣೆಗಳನ್ನು ಕಾಲಕಾಲಕ್ಕೆ ನಡೆಸುವುದು ಜನತೆಗೆ ಎಲ್ಲರೂ ತಮ್ಮ ಪಕ್ಷದ ಧ್ಯೇಯ ಧೋರಣೆಗಳನ್ನು ಜೆನ್ನಾಗಿ ಮತ್ತು ಸ್ಪಷ್ಟವಾಗಿ ವಿವರಿಸಲಿ ಎಂಬುದಕ್ಕಾಗಿ; ಹೀಗೆ ಬಹಿರಂಗ ಜರ್ಚೆ ನಡೆದು ಜನರೇ ಒಳ್ಳೆಯದನ್ನು ಗುರುತಿಸಲಿ ಎಂಬುದಕ್ಕಾಗಿ. ಮೊದಲೇ ಹೇಳಿದಂತೆ ಜನಸಾಧಾರಣರಿಗೆ ಸಹ ಎಲ್ಲ ವಿಷಯಗಳನ್ನೂ ಸೂಕ್ಷ್ಮವಾಗಿ ವಿವರಿಸಿ ಹೇಳಲಲ್ಲಿ ನ್ಯಾಯಸಮ್ಮತವಾದ ನಿರ್ಣಯವನ್ನು ಕೊಡುವ ಶಕ್ತಿ ಇದೆ ಎಂಬ ನಂಬಿಕೆಯೇ ಚುನಾವಣೆಗಳ ನಿಜವಾದ ತಳಹದಿಯಾಗಿದೆ. ನ್ಯಾಯಾಧಿಪತಿಯ ಸ್ಥಾನದಲ್ಲಿಯಲ್ಲವಾದರೂ ಜ್ಯೂರಿಗಳ ಸ್ಥಾನದಲ್ಲಿ ಸದ್ಗೃಹಸ್ಥರು ಇರಬಲ್ಲರು; ಮತ್ತು ನ್ಯಾಯಾತಿಕ್ರಮವು ಯಾವ ಪಕ್ಷದಿಂದಾಗಿದೆ ಎಂದು ಕಂಡುಕೊಳ್ಳಬಲ್ಲರು ಎಂಬ ತತ್ವದ ಮೇಲಿಂದ ಇಂದು ಜನತೆಯ ಕೈಗೆ ಮತದಾನಾಧಿಕಾರವನ್ನು ಕೊಡಲಾಗಿದೆ. ಜನಸಾಧಾರಣರು ರಾಜಕೀಯ ರಂಗದ ಜಟಿಲ ತೊಡಕುಗಳಿಗೆ ಪರಿಹಾರವನ್ನು ಹೇಳಿ ತಕ್ಕ ಯೋಗ್ಯತೆ ಮತ್ತು ಪ್ರತಿಭಾಸಂಪನ್ನ ವ್ಯಕ್ತಿಗಳಾಗಿಲ್ಲ; ಆವರು ನ್ಯಾಯೋಧೀಶರಂತೆ ಕಾಸೂನಿನ ಒಳ ಹೊರಗೆಲ್ಲವನ್ನೂ ಹೊಕ್ಕು ಬರಬಲ್ಲವರಲ್ಲ—ನಿಜ. ಆದರೆ, ಎಲ್ಲ ಪಕ್ಷಗಳವರೂ ಬಿಡಿ ಬಿಡಿಯಾಗಿ ತಮ್ಮ ವಿಚಾರಗಳನ್ನು ಚರ್ಚಿಸಿ ಬರೆ ಮತ್ತು ಸಮಸ್ಯೆಯನ್ನು ವಿವಿಧವಾಗಿ ವಿಶ್ಲೇಷಿಸಿ ಆದರ ಮೇಲೆ ನಾಲ್ಕೂ ಹಿಟ್ಟಿನಿಂದ ಪ್ರಕಾಶವನ್ನು ಜೆಲ್ಲುವಲ್ಲಿ ಸಹಕರಿಸಿದ್ದರೆ ಸಭ್ಯ ಗೃಹಸ್ಥರ ಯೋಗ್ಯತೆಯಿಂದ ಇವರು ಆ ವಸ್ತುವಿನ ಗುಣದೋಷಗಳ ಬಗ್ಗೆ ತಮ್ಮ ತೀರ್ಪನ್ನು ಹೇಳಲು ಶಕ್ತರಾಗಿಯೇ ಇದ್ದಾರೆ. ಆದುದರಿಂದ ಪ್ರಜಾಪ್ರಭುತ್ವವು ಜನಸಾಧಾರಣರ ತೀರ್ಮಾನದ, ವಿವೇಕದ ಮತ್ತು ವಿಚಾರದ ಒರೆಗಲ್ಲಿನ ಮೇಲೆ ಅಧಂಸಿ ನಿಂತಿದೆ ಪ್ರಜಾಪ್ರಭುತ್ವದಲ್ಲಿ ಜನರು ತಪ್ಪಿ ನಡೆದರೆ ಮತ್ತೆ ಪ್ರತಿಭಾಸಂಪನ್ನ ಧುರೀಣನು ಸಹ ಏನೂ ಮಾಡುವಂತಿಲ್ಲ. ಭಿಕ್ಷೆ ಬೇಡುತ್ತಾ ತಿರುಗುತ್ತಿರುವ ಕುರುಡನಿಗೂ ಇರುವುದು ಒಂದೇ ಓಟು; ಜಗತ್ತಿನ ಎಲ್ಲ ಮುಕ್ತಿದ್ಯಾಗಳೆಂದಲೂ ಮನ್ನಣೆ ಪಡೆದ ವ್ಯಕ್ತಿತ್ವ ವುಳ್ಳ ಜವಾಹರಲಾಲ ನೆಹರುವಿಗಿರುವುದು ಸಹ ಒಂದೇ ಓಟು. ನೆಹರುಗಳ ಪಾಂಡಿತ್ಯ, ಪ್ರತಿಭೆ, ಬುದ್ಧಿವಂತಿಕೆ ಕಾರ್ಯಶಕ್ತಿ ಮುಂತು ರಾಜಕೀಯ ಪ್ರಜ್ಞೆಯ ಮುಂದೆ ಆ ಕುರುಡನ ಸ್ಥಾನವೆಲ್ಲಿಯದು? ಆದರೂ ಪ್ರಜಾಪ್ರಭುತ್ವವು ಕಲಿಗೊಂದು ಓಟಿನ ಅಧಿಕಾರವನ್ನು ಕೊಟ್ಟಿರೆ, ಹೆಚ್ಚಲ್ಲ. ಆದು ಓಟು ಮಾಡುವ ವ್ಯಕ್ತಿಯು ವಿಧ ವಿಧವಾದ ಯೋಗ್ಯತೆಯಗಳನ್ನು ಆಧರಿಸಿ ಎಷ್ಟು ಓಟುಗಳನ್ನು ಆತನು ಹಾಕಬಹುದೆಂದು ಹೇಳುವುದಿಲ್ಲ. ಎಲ್ಲರಲ್ಲೂ ಬದ್ಧಿವಂತಿಕೆಯನ್ನೂ ಒದು ಒಂದೇ ಎಂದು ತಿಳಿದು, ಪ್ರತಿಯೊಬ್ಬನಿಗೂ ಒಂದೇ ಓಟನ್ನು ಕೊಟ್ಟಿರುತ್ತದೆ. ಇದು ಪ್ರಜಾಪ್ರಭುತ್ವ ಪದ್ಧತಿಯ ಬಹುದೊಡ್ಡ ದೋಷವೆಂದು ಅನೇಕರು ಕೇಳುತ್ತಾರೆ. ವಿದ್ಯೆ, ಸ್ಥಾನಮಾನ, ಪಾಂಡಿತ್ಯ, ಪ್ರತಿಭೆಗಳನ್ನಾಧರಿಸಿ ಓಟುಗಳಲ್ಲಿ ತಾರತಮ್ಯ ಮಾಡಿದರೆ ಸ್ವಲ್ಪವಾದರೂ ಒಳ್ಳೆಯದಾಗಬಹುದಾದರೂ ಇದ್ದಾರೆ. ಆದರೆ, ಜನಸಾಧಾರಣರೂ ಹೆಮ್ಮೆಪಟ್ಟುಕೊಳ್ಳಬಹುದಾದ, ತಳಿ ಮಾನವನ್ನು ಇಟ್ಟಿರಬಹುದಾದ ರಾಜ್ಯ ಭಾರ ಭಾರತದಲ್ಲಿ ನಡೆಯಬೇಕೆಂಬ ಹಂಬಲವಿಂದ, ನೆಹರುಗಳಿಗೂ ಬೋರೇಗೌಡನಿಗೂ ಒಂದೊಂದೇ ಓಟನ್ನು ಚಲಾಯಿಸುವ ಅಧಿಕಾರವನ್ನು ಕಾಂಗ್ರೆಸ್ಸು ರಾಜ್ಯ ಘಟನೆಯ ಮೂಲಕ ನೀಡಿರುತ್ತದೆ. ಈ ಅಧಿಕಾರವನ್ನು ಚಲಾಯಿಸುವಾಗ ಜನರು ಕಪ್ಪಿದರೆ ಮತ್ತೆ ಯಾರೂ ಏನೂ ಮಾಡುವಂತಿಲ್ಲ—ನಮ್ಮ ಜನರು ವಿಚಾರಮಾಡಿ ಮತದಾನಾಧಿಕಾರವನ್ನು ಚಲಾಯಿಸುವರೆಂಬ ನಿರೀಕ್ಷೆಯಿಂದ ಕೊಡಮಾಡಿದ ಓಟಿನ ಹಕ್ಕನ್ನು ಹಾಗೆ ವಿಚಾರವೇನನ್ನೂ ಮಾಡದೆ ಅವರವರು ಹೇಳಿದರೆಂದಾಗಲೀ ಹಣ ಮತ್ತಿತರ ಕ್ಷುಲ್ಲಕ ಪ್ರತಿಫಲಕ್ಕಾಗಲೀ ಒತ್ತಾಯ ಮತ್ತು ದಾಕ್ಷಿಣ್ಯಗಳಿಗಾಗಲೀ ಹಂಗು ಬಿದ್ದರೆಗಳಿಗಾಗಲೀ ಕಟ್ಟುಬಿದ್ದು ಆ ವಿವೇಕದಿಂದ ಚಲಾಯಿಸಿದ್ದಾದರೆ ಅದು ಅಧಿಕಾರದ ದುರುಪಯೋಗವೆನಿಸುತ್ತದೆ; ಮತ್ತು ರಾಷ್ಟ್ರ ಘಾತಕಕೃತ್ಯವೂ ಆಗುತ್ತದೆ. ನಮ್ಮಲ್ಲಿ ಇಂಥ ವಿವೇಕ ಇನ್ನೂ ಮೂಡಿಬಂದಿಲ್ಲ; ಪ್ರಜಾಪ್ರಭುತ್ವ ಪದ್ಧತಿಯ ಗುಣದೋಷಗಳ ವಿವೇಚನೆ ಮಾಡುವಷ್ಟು ನುತ್ತು ತಮ್ಮ ಕರ್ತವ್ಯಸೇನೆಂಬುದನ್ನು ತಿಳಿದುಕೊಳ್ಳುವಷ್ಟು ನಮ್ಮವರು ವಿದ್ಯಾಬುದ್ಧಿ ಸಂಪನ್ನರಾಗಿಲ್ಲ; ಆದುದರಿಂದ ಪ್ರಜಾಪ್ರಭುತ್ವ ಪದ್ಧತಿಯು ಭಾರತದ ಇಂದಿನ ಸ್ಥಿತಿಗತಿಗೆ ಹಿತವಾದುದಲ್ಲವೆನ್ನುವ ರಾಜಕೀಯ ನಿಶಾರದರೂ ಇಲ್ಲದಿಲ್ಲ. ಪ್ರಜಾಪ್ರಭುತ್ವದಲ್ಲಿ ಬಹುಮತದ ಇಚ್ಛೆಗೆ ತಲೆ ತಗ್ಗಿಸುವ ಕಟ್ಟಳೆಯೊಂದಿದೆ; ಬಹುಮತದ ನಿರ್ಣಯವೇ ನ್ಯಾಯವಾದುದಾಗಬೇಕಾಗಿಲ್ಲ ಎನ್ನುವ ಸೂಕ್ಷ್ಮ ಮತಿಗಳೂ ನಮ್ಮಲ್ಲಿದ್ದಾರೆ. ಇವರ ವಾದವಲ್ಲಿ ತಥ್ಯವಿಲ್ಲವೆಂದೇನಲ್ಲ—ಎಲ್ಲರ ಮನಸ್ಸಿಗೂ ನಾಟಿರಬಹುದಾದ ಉದಾಹರಣೆಯನ್ನೆ ಎತ್ತಿಕೊಳ್ಳೋಣ: ಭದ್ರತಾಮಂಡಲದಲ್ಲಿ ಸದಸ್ಯತ್ವ ಪಡೆದಿರುವ ರಾಷ್ಟ್ರಗಳಲ್ಲಿ ಹೆಚ್ಚು ರಾಷ್ಟ್ರಗಳು ಜಾಕೆನ್ತಾನವ ನಿಲುವೆಯನ್ನು ಪುರಸ್ಕರಿಸಿದವು; ಪಾಕೆಸ್ತಾನವ ಹೇಳುವುದೇ ನ್ಯಾಯವೆಂದು ಹೆಚ್ಚು ರಾಷ್ಟ್ರಗಳು ಅಭಿಪ್ರಾಯಪಟ್ಟು, ಹಾಗೆ ಮತದಾನ ಮಾಡಿದರೆ. ನಿಸ್ಸಂದಿಗ್ಧ ಬಹುಮತದಿಂದ ಸ್ವೀಕಾರವಾಗುತ್ತಿದ್ದ ನಿರ್ಣಯವು ರಶ್ಯದ ಪ್ರತಿಷೇಧಾಧಿಕಾರ ಪ್ರಯೋಗದ ಮೂಲಕ ಬಿದ್ದು ಹೋಯಿತು. ರಶ್ಯಕ್ಕೆ ಓಟು ಮಾಡುವ ಅಥವಾ ಮಾಡದಿರುವ ಅಧಿಕಾರವಲ್ಲದೆ, ನಿರ್ಣಯವನ್ನು ತಡೆ ಹಿಡಿಯುವ ವಿಶೇಷ ಅಧಿಕಾರ ಸಹ ಇದ್ದ ದೆಸೆಯಿಂದ ಭಾರತದ ಪಾಲಿನ ಘೋರ ವಿಪತ್ತು ತಪ್ಪಿತು. ಪಾಕಿಸ್ತಾನದ ನಿಲುಮೆಯು ನ್ಯಾಯುವಾದುದೆಂದೂ ಯಾವನೇ ವಿವೇಕಿಯು ಹೇಳಬಲ್ಲನೆ? ಎಂದಿಗೂ ಇಲ್ಲ—ಹಾಗಿದ್ದರೂ ಸಹ ಭದ್ರತಾ ಮಂಡಳದಲ್ಲಿ ಹನ್ನೊಂದರಲ್ಲಿ ಹತ್ತು ಮಂದಿ ಪಾಕಿಸ್ತಾನದ್ದೇ ನ್ಯಾಯವೆಂದು ಹೇಳ ಆದಕ್ಕೆ ಓಟು ಕೊಟ್ಟರು! ಭಾರತದ ನಿಲುಮೆಯನ್ನು ಅರ್ಥ ಮಾಡಿಕೊಳ್ಳಲಿಕ್ಕಾಗಲೀ ತಿಳಿದುಕೊಳ್ಳಲಿಕ್ಕಾಗಲೀ ವಿಚಾರಿಸಲಿಕ್ಕಾಗಲೀ ವಿಶ್ಲೇಷಿಸಲಿಕ್ಕಾಗಲೀ ಆ ಹತ್ತು ರಾಷ್ಟ್ರಗಳು ಹೋಗಲೇ ಇಲ್ಲವೆಂಬಂತೆ ಅವುಗಳ ವರ್ತನೆಯಾಯಿತು. ಬಹುಮತದ ನಿರ್ಣಯವು ನ್ಯಾಯ ಪಕ್ಷಪಾತಿಯಾಗಿಯೇ ಇರಬೇಕಾಗಿಲ್ಲ, ಒಳ್ಳೆಯದನ್ನೆ ಪುರಸ್ಕರಿಸುವಂತಿರಬೇಕಾಗಿಲ್ಲ ಎಂಬುದಕ್ಕೆ ಇದಕ್ಕಿಂತ ಹೆಚ್ಚು ವಿವರಣೆಯ ದಾಹರಣೆ ಅಗತ್ಯವಿಲ್ಲ. ಇದು ಬಹುಮತದ ತೀರ್ಮಾನವನ್ನೆ ಎತ್ತಿ ಹಿಡಿಯುವ ಸಂಪ್ರದಾಯವುಳ್ಳ ಪ್ರಜಾಪ್ರಭುತ್ವ ಪದ್ಧತಿಯ ದೊಡ್ಡ ದೋಷ. ಈ ಹೆದರಿಕೆಯಿಂದಲೇ ಮತದಾನರು ಕರ್ತವ್ಯ ಜ್ಞಾನವುಳ್ಳವರಾಗಿ ಪೂರ್ಣ ಪ್ರಜ್ಞೆಯಿಂದ ವಿಚಾರ ಮಾಡಿ, ಜೆನ್ನಾಗಿ ಆಲೋಚಿಸಿ ಮತದಾನ ಮಾಡಬೇಕು ಎನ್ನುವುದು ಜನರು ತಪ್ಪಿ ಬಿದ್ದರೆ ಆದನ್ನು ಸರಿಪಡಿಸುವ 'ವಿಶೇಷ' ಅಧಿಕಾರ ನಮ್ಮ ಚುನಾವಣೆಯ ಮಟ್ಟಿಗೆ ಇಲ್ಲವೆಂಬುದು ಇನ್ನೊಂದು ಕೊರತೆ. ಹೀಗೆಲ್ಲವಿರುವುದರಿಂದ ಮತದಾನ ಮಾಡುವ ಪ್ರಾಯಪ್ರಭುದ್ಧರ ಜವಾಬ್ದಾರಿಯು ಬಹಳ ಹೆಚ್ಚಿನದಾಗಿದೆ. ತಾವು ಮಾಡುವ ಕೆಲಸದ ಪರಿಣಾಮ ಮತ್ತು ಲಾಭ ಹಾನಿಗಳ ಸಂಪೂರ್ಣ ತಿಳಿವಳಿಕೆಯು ಮತದಾರರಿಗಿರಬೇಕಾಗಿದೆ. ಪ್ರತಿಪಕ್ಷದ ಸದಸ್ಯರನ್ನು ಆರಿಸಿ ಕಳಿಸುವುದೇ ದೊಡ್ಡ ಸಂಗತಿಯಲ್ಲ ಮೈ ಜಾರಿನಲ್ಲಿ ಸರಕಾರವನ್ನು ಕಾಂಗ್ರೆಸು ಪಕ್ಷವೇ ಸಾಧಿಸುವುದು ಖಂಡಿತ ವೆಂದಾದ ಮೇಲೆ ನಮ್ಮ ಮತದಾರ ಕ್ಷೇತ್ರದ ಮಟ್ಟಿಗೆ ಪ್ರತಿಪಕ್ಷದ ಉಮೇದ್ವಾರಿಯನ್ನು ಬೆಂಬಲಿಸಿದರೆ-ಅದರಿಂದಾಗುವ ಅವಗುಣಗಳ ಆಲೋಚನೆ ಇರುವುದೇ ದೊಡ್ಡ ವಿಷಯ. ಪ್ರತಿಪಕ್ಷಗಳಿಗೆ ಪ್ರೋತ್ಸಾಹವನ್ನು ಕೊಡುವುದೇ ಮುಖ್ಯ ಮಾತಲ್ಲ--ಇಂದಿನ ಸರಿಸ್ಥಿತಿಯಲ್ಲಿ ಸ್ವೋತ್ಸಾಹವನ್ನಿತ್ತು ನಾವು ಪಡೆಯಬಹುದಾದ ಸುಖವಾದರೂ ಏನೆಂಬುದೇ ಗಮನಾರ್ಹವಾದ ಅಂಶ. ಉಮೇದ್ವಾರಿಯಾಗಿ ನಿಂತ ಯಾವದೇ ಪಕ್ಷದ ವ್ಯಕ್ತಿಯಾಗಲೀ ತನ್ನ ವ್ಯಕ್ತಿಗತಸಂಪತ್ತಿನಿಂದಲೇ ತನ್ನ ನುತದಾರ ಕ್ಷೇತ್ರಕ್ಕೆ ಲಾಭವನ್ನು ತರಬಲ್ಲ ಜಳಿನೈದ್ಧಿ ಕಾರ್ಯಗಳಲ್ಲಿ ನಿರತನಾಗಲಾರನೆಂಬುದು ಸ್ಪಷ್ಟ. ಸರಕಾರದ ಸಹಕಾರವನ್ನು ಪಡೆದೇ ಆತನು ಜನಹಿತದ ಕಾರ್ಯಗಳಲ್ಲಿ ಪ್ರವೃತ್ತನಾಗಬೇಕಾಗುತ್ತದೆ. ಪ್ರತಿಪಕ್ಷದ ಉಮೇದ್ವಾರಿಯ ಮೇಲೆ ಸರಕಾರಕ್ಕೆ ಎಷ್ಟು ಪ್ರೇಮವಿರಬಹುದೆಂದು ಮತದಾರರು ತಿ

ಳದುಕೊಳ್ಳಬೇಕೆಂದು ನಮ್ಮ ನನ್ನ ಸೂಚನೆ. ಜನಸಾಧಾರಣರ ಅನುಭವಕ್ಕೆ ಇದು ಹೊರತಾದ ವಿಷಯವಾಗದು. ರಾಜಕೀಯ ವೈರಿಗಳಿಗೆ ಯಾವ ರಾಜಕೀಯ ಪಕ್ಷವೂ ಪ್ರೋತ್ಸಾಹವನ್ನು ಕೊಡುವುದಿಲ್ಲ—ಇದು ತೀರ ಸ್ಪಷ್ಟ. ಆದುದರಿಂದ ನಮಗೆ ಒಳ್ಳೆಯದಾಗಬೇಕಾದರೆ ವ್ಯಕ್ತಿಯನ್ನು ನಂಬಿ, ಆತನನ್ನು ನಿಲ್ಲಿಸಿದ ಕೆಲಸಕ್ಕೆ ಜಾರದ ದುರ್ಬಲ ಪ್ರತಿಪಕ್ಷವನ್ನು ನಂಬಿ—ಮನೆಯ ಗುರುತಿಗೆ ಓಟು ಕೊಡುವುದು ನಿಷ್ಪ್ರಯೋಜಕ. ಕಾಂಗ್ರೆಸಿನ ಉಮೇದ್ವಾರಿಯನ್ನೆ ಬೆಂಬಲಿಸಿ, ಆತನ ಚುನಾವಣಾ ಚಿಹ್ನೆಯಾದ ನೊಗಕ್ಕೆ ಕಟ್ಟು ನಿಲ್ಲಿಸಿದ ಜೋಡೆತ್ತುಗಳ ಗುರುತುಳ್ಳ ಪೆಟ್ಟಿಗೆಗೇನೇ ಮತವೀಯುವುದು ಬುದ್ಧಿವಂತ ಮತದಾರರಿಗೆ ಹೇಳಿಸಿದ ಕೆಲಸ. ಬಹು ಮತದಿಂದ ಕಾಂಗ್ರೆಸನ್ನು ಬೆಂಬಲಿಸಿದ್ದಾವರೆ ಅನರ್ಥವಾಗಲಾರದೆ ಎಂಬ ಸಂಶಯ ಕೆಲವರಿಗಿರಬಹುದು. ಆದರೆ ಇದಕ್ಕೆ ಆಧಾರವಿಲ್ಲ—ಏಕೆಂದರೆ ಕಾಂಗ್ರೆಸು ಸರಕಾರವು ಕಳೆದ ಒಂಭತ್ತು ವರ್ಷಗಳಲ್ಲಿ ಅನೇಕ ಒಳ್ಳೆಯ ಕೆಲಸಗಳನ್ನು ಮಾಡಿರುತ್ತದೆ. ಅಭಿವೃದ್ಧಿ ಪ್ರಯತ್ನಗಳನ್ನು ಕೈಗೊಂಡಿರುತ್ತದೆ, ಹೀಗೆ ಕಾಂಗ್ರೆಸ್ಸು ತನ್ನ ಕಾರ್ಯ ಸಾಧನೆಗಳ ಬಲದಿಂದ ಜನರಲ್ಲಿ ವಿಶ್ವಾಸವನ್ನು ಹುಟ್ಟಿಸಿರುತ್ತದೆ. ಆದರೆ ಪ್ರತಿಪಕ್ಷಗಳವರು ಕೇವಲ ಬಾಯಿ ಬಡಾಯಿಯಲ್ಲಿಯೇ ಒಂಭತ್ತೂ ವರ್ಷಗಳನ್ನು ಕಳೆದರು. ಹೊರತು ಬೇರೆ ನೂ ಒಳ್ಳೆಯ ಕೆಲಸ ಮಾಡಲಿಲ್ಲ. ಒಳ್ಳೆಯದಕ್ಕಾಗಲೀ ಕೆಟ್ಟದಕ್ಕಾಗಲೀ ಪ್ರಜಾ ಪ್ರಭುತ್ವದಲ್ಲಿ ಬಹುಮತದ ನಿರ್ಧಾರವೇ ಸಿಂಧುವಾಗಿರುವುದರಿಂದ ನಾವು ನಾಲ್ಕಾರು ಮಂದಿಯನ್ನು ಪ್ರತಿಪಕ್ಷದ ಕಡೆಯಿಂದ ಆರಿಸಿ ಕಳಿಸಿದರೂ ಅದರಿಂದ ಯಾವದೇ ಪರಿಣಾಮವಾಗುವುದಿಲ್ಲ. ಅವರು ಮಾತನಾಡುತ್ತಾರೆ; ವಿರೋಧಿಸುತ್ತಾರೆ—ಆದರೆ ಹಾಗೆ ವಿರೋಧಿಸಿ ಸರಕಾರವನ್ನು ಆದು ಮಾಡಬೇಕೆಂದಿರುವ ಕೆಲಸದಿಂದ ಪರಾವೃತ್ತಗೊಳಿಸಲು ಈ ಪ್ರತಿ ಪಕ್ಷಗಳಿಗೆ ಸಾಧ್ಯವಿಲ್ಲ. ಹಾಗೆಯೇ ಪ್ರತಿ ಪಕ್ಷಗಳು ಒಂದು ಕೆಲಸವಾಗಬೇಕೆಂದು ಒತ್ತಾಯಿಸಬಹುದು; ಬೇಡಿಕೆ ಮುಂದಿಡಬಹುದು—ಸರಕಾರಿ ಪಕ್ಷವು ಜಪ್ಪೆನ್ನದಿದ್ದರೆ, ಅದಕ್ಕೆ ಒಪ್ಪಿಗೆಯನ್ನು ಕೊಡಿಸದಿದ್ದರೆ ಎಲ್ಲ ಪ್ರಯತ್ನಗಳೂ ಹೊಳೆಯಲ್ಲಿ ಹುಣಿಸೆ ಕಣ್ಣು ತೊಳೆದಂತಾಗುತ್ತವೆ. ಆದುದರಿಂದ ನಮ್ಮ ಕೆಲಸ ಮಾಡಿಸಿಕೊಳ್ಳಬೇಕಾದರೆ ಸರಕಾರಿ ಪಕ್ಷದಲ್ಲಿರುವುದೇ ಶ್ರೇಯಸ್ಕರ ಪ್ರಜಾಪ್ರಭುತ್ವದ ಉಚ್ಚ ಗುಣಾದರ್ಶಗಳನ್ನು ಮೆಚ್ಚಿಕೊಳ್ಳುತ್ತಿದ್ದಂತೆಯೇ ಅದರ ಕೆಲವು ದೌರ್ಬಲ್ಯಗಳನ್ನೂ ಮತದಾರರು ಕಂಡುಕೊಂಡು, ಸೂಕ್ಷ್ಮವಾದ ರೀತಿಯಲ್ಲಿ ನಡೆದುಕೊಳ್ಳುವುದು ವಿಹಿತ. ಇಷ್ಟೀವನ್ನು ಆಲೋಚಿಸಿದ ಪಕ್ಷದಲ್ಲಿ ಪ್ರತಿಪಕ್ಷಗಳನ್ನು ಬೆಂಬಲಿಸಿ ಜೋಗುವುದಲ್ಲ—ಕಾಂಗ್ರೆಸು ಉಮೇದ್ವಾರಿಗಳಿಗೆ ಬೆಂಬಲ್ವಿ ಕ್ಕು ಮತದಾನಾಧಿಕಾರವನ್ನು ಉಪಯೋಗಿಸುವುದೇ ಯೋಗ್ಯವೆಂಬ ವಿವೇಕೋದಯ ಆಗಿಯೇ ಆಗುತ್ತದೆ.

ಕೊನೆಯ ನಿವೇದನೆ

ಕಾಂಗ್ರೆಸ್ಸಿಗೆ ಮತ ಕೊಡಿರಿ

ಉಡುಪಿ ಮತದಾರ ಕ್ಷೇತ್ರದಿಂದ ಕಾಂಗ್ರೆಸಿನ ಪರವಾಗಿ ಶ್ರೀ ಪಿ. ವಿ. ಆಚಾರ್ಯರು ನಿಲ್ಲಿಸಲ್ಪಟ್ಟಿದ್ದಾರೆ. ಆದೇಸು? ಶ್ರೀ ಟಿ. ಎ. ಪೈಗಳು ನಿಲ್ಲಲಿಲ್ಲಿ ಎಂದು ಈಗಲೂ ಆಶ್ಚರ್ಯಪಡುವವರಿದ್ದಾರೆಂದು ನಾವು ಕೇಳಿದ್ದೇವೆ. ಶ್ರೀ ಪೈಗಳು ಕಾಂಗ್ರೆಸಿನಲ್ಲಿದ್ದಿಲ್ಲವೆ? ಆದರಂತಹ ಯೋಗ್ಯತಾವಂತರಿಗೆ ಟಿಕೇಟು ಕೊಡಬಹುದು ಕಾಂಗ್ರೆಸಿನ ತಲೆ ಕೆಟ್ಟದೆಯೇ? ಎಂಬ ಮಾತೆ ತಾಗಿ ಕೆಲವರು ಆಡಿಕೊಳ್ಳುತ್ತಿದ್ದಾರೆಂದೂ ನಾವು ತಿಳಿದಿದ್ದೇವೆ.

ಇವರೆಲ್ಲರ ಅವಗಾಹನೆಗಾಗಿ ಕೆಲವು ಸಂಗತಿಗಳನ್ನು ಸ್ಪಷ್ಟಗೊಳಿಸುವುದು ಸೂಕ್ತವೆಂದು ನಾವು ಬಗೆದಿದ್ದೇವೆ. ಮೊದಲನೆಯದಾಗಿ ಶ್ರೀ ಟಿ. ಎ. ಪೈಗಳು ಕಾಂಗ್ರೆಸಿನಲ್ಲಿಯೇ ಇದ್ದಾರೆ; ರಚನಾತ್ಮಕ ರಂಗದಲ್ಲಿ ವಿಶೇಷವಾಗಿ ಪಡಿಯುವ ಇಚ್ಛೆಯಿಂದ ಅವರು ಶಾಸನ ರಂಗದ ಸ್ಥಾನಕ್ಕೆ ಸ್ಪರ್ಧಿಯಾಗಿ ನಿಲ್ಲಲಿಲ್ಲ. ಕೊಡಮಾಡಿದ ಕಾಂಗ್ರೆಸು ಟಿಕೇಟನ್ನು ಅವರು ಸ್ವೇಚ್ಛೆಯಿಂದಲೇ ನಿರಾಕರಿಸಿದರು. ಆದರೆ ನಿಷ್ಠಾವಂತ ಕಾಂಗ್ರೆಸಿಗನೆಂಬ ನೆಲೆಯಿಂದ ಉಡುಪಿ ಮತದಾರ ಕ್ಷೇತ್ರದ ಹಾಲಿ ಪ್ರತಿನಿಧಿ ಎಂಬ ಸ್ಥಾನದಿಂದಲೂ ಅವರು ಆಡಿಸ್ಸು ಹೆಜ್ಜು ಮತದಾರರನ್ನು ಕಂಡು ಕಾಂಗ್ರೆಸ್ಸಿಗೆ ಬೆಂಬಲ ಕೊಡಿರೆಂದು ಹೇಳುತ್ತಿದ್ದಾರೆ. ಇದನ್ನು ಮಹಾ ಜನರು ಗಮನಿಸಿರಬಹುದು.

ಶ್ರೀ ಪೈಗಳೇ ಕಾಂಗ್ರೆಸಿನ ಉಮೇದ್ವಾರಿಯಾಗಿ ನಿಂತಿದ್ದರೆ ಆದು ಒಳ್ಳೆಯದಿತ್ತು—ಆ ವರಿಗೆನೇ ಆಗ ನಾವು ಬೆಂಬಲ ಕೊಡಬಹುದಿತ್ತು.—ಈಗ ನಿಂತವರು ಯಾರೋ ನಮಗೆ? ಎಮರ್ಜೆನ್ಸಿಯಾಗಿ ನಿಂತಿರುವ ಪ್ರಜಾ ಸಮಾಜವಾದಿ ಪಕ್ಷದ ಉಮೇದ್ವಾರಿಗಳನ್ನು ಕೀರ್ತಿವಂತರೂ ಯೋಗ್ಯತಾವಂತರೂ ಆವರೆಲ್ಲ ಎನ್ನುವ ಒಂದು ಖಂಗದವೂ ಜನರಲ್ಲಿದೆ ಎಂಬ ನಮ್ಮ ತಿಳಿವಳಿಕೆಗೆ ಬಂದಿಸೆ. ಇಂಥವರು ಸಮೂಹಾನಕ್ಕಾಗಿ ನಾವು ಒಂದು ಸಿಸಯವನ್ನು ಸ್ಪಷ್ಟಪಡಿಸಬೇಕೆಂದಿದ್ದೇವೆ: ಏನೆಂದರೆ ಶ್ರೀ. ಪಿ. ವಿ. ಆಚಾರ್ಯರು ಗಣ್ಯ ವಕೀಲರು; ಉಡುಪಿ ನಗರ ಸಭೆಯ ಸದಸ್ಯರಾಗಿಯೂ ಸೆದ್ದಿ ಅವರ ಉಪಾಧ್ಯಕ್ಷರಾಗಿಯೂ ಕೆಲಸ ಮಾಡುತ್ತಿದ್ದಾರೆ; ಅವರಿಗೆ ಕಾಂಗ್ರೆಸು ಸಂಸ್ಥೆಯ ಬೆಂಬಲವಿದೆ; ಅಲ್ಲದೆ ಸ್ವತಃ ಶ್ರೀ ಟಿ. ಎ. ಪೈಗಳ ಸಹಕಾರವೂ ಇದೆ. ಆದುದರಿಂದ ಕಾಂಗ್ರೆಸು ನಿಲ್ಲಿಸಿದ ಪ್ರತಿನಿಧಿಯ ಯೋಗ್ಯತೆಯ ಬಗ್ಗೆ ಸಂದೇಹಸುವುದು ಅವಶ್ಯಕತೆಯ ಅವಶ್ಯಕತೆಯೂ ಇಲ್ಲ.

ಅವಶ್ಯ ಹೆಚ್ಚು ಮಂದಿಗೆ ಪ್ರಜಾಸತ್ತೆಯ ಕಾರ್ಯನಿರ್ವಹಣೆಗಳಲ್ಲಿ ತರಬೇತಿಯನ್ನು ಕೊಡಬೇಕೆಂಬ ಕಾಂಗ್ರೆಸ್ಸಿನ ಧ್ಯೇಯದಂತೆ ಈ ಸಲ ಕಾಂಗ್ರೆಸು ಪಕ್ಷವು ಅನೇಕ ಹೊಸಬರಿಗೆ ಅವಕಾಶವನ್ನಿತ್ತಿದೆ—ಆದರಂತೆ ಶ್ರೀ ಆಚಾರ್ಯರಿಗೂ ಜುನಾವಣೆಯಲ್ಲಿ ಸ್ಪರ್ಧಿಸಲು ಸಂದರ್ಭ ಸಿಕ್ಕಿತು. ಈಗಿನ ಸಲ ಶ್ರೀ ಪೈಗಳು ಕಾಂಗ್ರೆಸಿನ ಉಮೇದ್ವಾರಿ ಎಂದು ಘೋಷಿಸಲ್ಪಟ್ಟಿದ್ದಾಗ ಹಳೆಯ ಕಾಂಗ್ರೆಸಿನ ಹುಲಿಯನ್ನು ಬಿಟ್ಟು, ಇವರಿಗೆ ಏಕಪ್ಪಾ ಕಾಂಗ್ರೆಸು ಟಿಕೇಟು ಕೊಟ್ಟಿತು ಎಂದ ಜನರೂ ಇದ್ದರು. ಆ ಹಳೆಯ ಪುಲಿಯಂತೂ ಈ ಸೆಲದಿಂದಲೇ ಕಾಂಗ್ರೆಸನ್ನು ಬಿಟ್ಟು, ಪ್ರಜಾಪಕ್ಷಕ್ಕೆ ಸೇರಿ, ಈ ಸಲದ ಚುನಾವಣೆಯಲ್ಲಿ ಪ್ರಜಾಸಮಾಜವಾದಿ ಪಕ್ಷದ ಪತಿಯಿಂದ ಸ್ಪರ್ಧೆಗೆ ನಿಂತಿದ್ದಾರೆ. ಆ ಸಲ ಮತದಾರರು ಕಾಂಗ್ರೆಸ್ಸನ್ನೆ ಬೆಂಬಲಿಸಿದರು. ಹಳೆಯ ಪುಲಿಯ ಹೊಸ ರಾಗಕ್ಕೆ ತಾಳಹಾಕಲಿಲ್ಲ.

ಕಾಂಗ್ರೆಸ್ಸನ್ನು ಬೆಂಬಲಿಸಿ, ನಷ್ಟಪೊಂದಲಿಲ್ಲ. ಏಕೆಂದರೆ ಇದೀ ಜಿಲ್ಲೆಯಲ್ಲಿ, ಅದೇಕೆ ಕರ್ನಾಟಕದಲ್ಲಿ ಶ್ರೀ ಟಿ. ಎ. ಪೈಗಳಿಂಪಾದಷ್ಟು ಒಳ್ಳೆಯ ಅಭಿವೃದ್ಧಿ ಕೆಲಸಗಳು ಬೇರೆ ಯಾವನೇ ರಾಜಸಭಾಸಭೆಯ ಪ್ರತಿನಿಧಿಯು ಮತದಾರ ಕ್ಷೇತ್ರ ಪಲ್ಲಂ ಆಗಿಲ್ಲ ಎಂದು ಎದೆತಟ್ಟಿ ಹೇಳುವ ಸ್ಥೈರ್ಯವಿಲ್ಲ ಬಂದಿಸೆ. ಜನರೂ ಒಪ್ಪುವ ಮಾತಿದು.

ಈಗ ಶ್ರೀ ಪೈಗಳು ಪ್ರಾರಂಭಿಸಿದ ಕೆಲಸಗಳು ಮುಂದೆಯಬೇಕಾದರೆ, ಅವರು ಹಾಕಿಕೊಟ್ಟ ಮಾರ್ಗದಲ್ಲಿ ನುಗ್ಗಿನ್ನೆಯಬಲ್ಲ ಮತ್ತು ಇಸ್ಟೇರವರೆಗೆ ಆ ಕೆಲಸಗಳ ಬಸ್ಸಿ ಅಭಿವೃದ್ಧಿಸಾವನ್ನು ಇಟ್ಟುಕೊಂಡು ಅವುಗಳನ್ನು ಊರ್ಜಿತವಲ್ಲಿಟ್ಟುಕೊಂಡು ಹೋಗಬಲ್ಲ ವ್ಯಕ್ತಿಯನ್ನೆ ಆರಿಸುವುದು ಮತದಾರರ ಹಿತಚಿಂತನೆಯ ದೃಷ್ಟಿಯಿಂದ ಅತ್ಯಾವಶ್ಯಕ. ಕಾಂಗ್ರೆಸಿನ ಪ್ರತಿನಿಧಿಯಸ್ಸಲ್ಲದೆ, ಶ್ರೀ ಪೈಗಳಿಗೆ ವಿಶ್ವಾಸವಿರುವ ಶ್ರೀ ಪಿ. ವಿ. ಆಚಾರ್ಯರನ್ನೆ ಬಲ್ಲದೆ ಪ್ರತಿಸ್ಪರ್ಧಿಯನ್ನು ಆರಿಸಿವಾದರೆ ಈ ಉದ್ದೇಶ ಎಂದಿಗೂ ಕೈಗೂಡಿ ಬರಲಾರದು ಇದು ನಮ್ಮ ಸ್ಪಷ್ಟ ಅಭಿಪ್ರಾಯ.

ಆದುದರಿಂದ ಉಡುಪಿ ಮತದಾರ ಬಂಧುಗಳು ದಯವಾಡಿ ಇವೆಲ್ಲ ಸಂಗತಿಗಳನ್ನು ಆಲೋಚಿಸಿ ಕಾಂಗ್ರೆಸಿನ ಉಮೇದ್ವಾರಿಯಾಗಿ ನಿಲ್ಲಿಸಿದ ಶ್ರೀ ಪಿ. ವಿ. ಆಚಾರ್ಯರನ್ನೆ ಬೆಂಬಲಿಸುವುದು ಕರ್ತವ್ಯ. ಇದೇ ನೂತನ ಉಳಿವೆಯೆಯ ಕಾಂಗ್ರೆಸು ಉಮೇದ್ವಾರಿಗೆ ಪಾಲಿಗೂ ಅನ್ವಯಿಸುತ್ತದೆ. ಅಂತೂ ಎಲ್ಲರೂ ಕಾಂಗ್ರೆಸಿನ ಜೋಡೆತ್ತಿನ ಗುರುತುಳ್ಳ ಪೆಟ್ಟಿಗೆಗೇ ತಮ್ಮ ಅಮೂಲ್ಯವಾದ ಮತಗಳನ್ನು ಹಾಕಬೇಕೆಂದು ನಾವು ಅಗ್ರಹಪೂರ್ವಕ ವಿನಂತಿಸಿಕೊಳ್ಳುತ್ತೇವೆ.

ಡಾ. ನಾಗಪ್ಪಾಳ್ವರ ವಿಜಯ—ಪಾಣೆಮಂಗಳೂರು ಕ್ಷೇತ್ರದಿಂದ ಕಾಂಗ್ರೆಸ್ ಪುರಿಯೊಳು ಡಾ. ಕೆ. ನಾಗಪ್ಪ ಆಳ್ವರು ತಮ್ಮ ಪ್ರತಿಸ್ಪರ್ಧಿ ಕಮ್ಯೂನಿಸ್ಟ್ ಶ್ರೀ ಎಮ್. ಎಚ್. ಕೃಷ್ಣಪ್ಪ ನವರನ್ನು 5751 ಅಧಿಕ ಮತಗಳಿಂದ ಸೋಲಿಸಿ ವಿಜಯಿಗಳಾದರು.

ಮತದಾರ ಸಂಖ್ಯೆ 54,150. ಸುತಪತ್ರ ದರ ಸಂಖ್ಯೆ 33,315. ಡಾ ಕೆ. ನಾಗೆಪ್ಪ ಆಳ್ವ (ಕಾ) 19,533 ಮತಗಳು. ಕಮ್ಯೂನಿಸ್ಟ್ ಶ್ರೀ ಎಮ್. ಎಚ್. ಕೃಷ್ಣಪ್ಪ 13,782 ಮತಗಳು. ಡಾ. ನಾಗಪ್ಪ ಆಳ್ವರ ವಿಜಯದಿಂದಾಗಿ ಈ ತನಕದ ದಕ್ಷಿಣಕನ್ನಡ ಜಿಲ್ಲೆಯಲ್ಲಿ 4 ಸ್ಥಾನಗಳು ಕಾಂಗ್ರೆಸಿಗೆ ದೊರೆತಂತಾಯಿತು.

ಪುತ್ತೂರಿನಲ್ಲಿಯೂ ಕಾಂಗ್ರೆಸ್ ಜಯಗಳಿಸುವ ನಿರೀಕ್ಷೆಯಿದೆ ತಾ. 5ರಲ್ಲಿ ಸುತಗಣನೆ ಪೂರ್ತಿಯಾಗದೆ ಮುದಿನಕ್ಕೆ ಮುಂದೂಡಲ್ಪಟ್ಟಿದ್ದಾರೆ.

ಉಡುಪಿ

ಟೀಚರ್ಸ್ ಯೂನಿಯನ್ ಸಭೆ—ಉಡುಪಿ ತಾಲೂಕು ಬಾಸಗಿ ಶಾಲಾ ಟೀಚರ್ಸ್ ಯೂನಿಯನ್ ಮಹಾ ಸಭೆಯು ಕಳೆದ ತಾ. 24ರಲ್ಲು ಮೋರ್ನ್ಸ್ ಹಾ ಎ. ಶಾಲೆಯಲ್ಲಿ ಶ್ರೀ ಫೆರ್ನಾಂಡೀಸರ ಅಧ್ಯಕ್ಷತೆಯಲ್ಲಿ ಜರಗಿತು. ನವ ಪೈಸೂರು ಸರಕಾರದ ವೇತನಸ್ಕೇಲು ಬಾಸಗಿ ಶಾಲೆಗಳಿಗೂ ಅನ್ವಯಿಸುವಂತೆ ಸರಕಾರವನ್ನು ಕೇಳಿಕೊಳ್ಳಲಾಯಿತು. ಅರಂಭದಲ್ಲಿ ಶ್ರೀ ರಾಮು ಸೆಟ್ಟಿರು ವರದಿಯನ್ನೊಪ್ಪಿಸಿದರು. ಶ್ರೀ ಎಸ್ಸ್. ದಾಂತಿ ಫೆಡಿಲಾವರು ಸಂಸ್ಥೆಭೋಚಿತ ಪೂಚನೆಗಳನ್ನಾಡಿದರು. ಶ್ರೀ ಟಿ. ಎ. ಪೈ, ಎಮ್. ಎಲ್. ಎ, ಗಳವರು ಕಾಂಗ್ರೆಸ್ ಪುರಿಯೊಳುಗಳಿಗೆ ಬೆಂಬಲವೀಯಬೇಕೆಂದೂ ಆವರ ಮೂಲಕ ಅಧ್ಯಾಪಕ ವರ್ಗದ ಎದರು ತೊದರುಗಳ ಸಮಸ್ಯೆ ಬಗೆಹರಿಸಲಾಗುವುದೆಂದೂ ಹೇಳಿದರು.

ಕ್ರಿಶ್ಚಿಯನ್ ಹೈಸ್ಕೂಲಿನ ಹೊಸ ಇಂಟಿಸಿಯೆಟಿಂಗ್ ಕಟ್ಟಡದ ಪ್ರಾರಂಭೋತ್ಸವವು ಕಳೆದ ತಾ. 1ರಂದು ಡಾ! ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಬಾಸೆಲ್ ಮಿಶನಿನ ಕಾರ್ಯದರ್ಶಿ ರೆ! ಎಚ್. ವಿಟ್ಸ್‌ಲಿ ಯವರಿಂದ ನೆರವೇರಿಸಲ್ಪಟ್ಟಿತು.

ಮಣಿಪಾಲ— ತಾ. 3—3—57ರಂದು ಡಾ! ಟಿ. ಎಂ. ಎ. ಪೈಗಳ ಪುತ್ರ ಚಿ! ನಾರಾಯಣ ಪೈಗೆ ಬ್ರಹ್ಮೋಪದೇಶ ಸಮಾರಂಭವು ಯಥಾಸಾಂಗವಾಗಿ ನೆರವೇರಿತು.

ಕಾಂಗ್ರೆಸಿಗೆ ಓಟು ಕೊಟ್ಟು ನಹರೂಶಕ್ತಿ ಪೆಚ್ಚಿಸಿರಿ

ಉಡುಪಿ ಮತದಾರ ಕ್ಷೇತ್ರದ
ಕಾಂಗ್ರೆಸ್ ಉಮೇನಾ್ವರರು

ಶ್ರೀ. ಯು. ಶ್ರೀನಿವಾಸ ಮಲ್ಯ
(ಲೋಕ ಸಭೆಗೆ)

ಶ್ರೀ ಪಿ. ವಿ. ಆಚಾರ್
(ವಿಧಾನ ಸಭೆಗೆ)

ಬ್ರಹ್ಮಾವರ
ಶ್ರೀ ಬಿ. ಜಗಜ್ಜೀವನದಾನ ಶೆಟ್ಟಿ

ಕಾಪು
ಶ್ರೀ ಎಫ್. ಎಕ್ಸ್. ಡಿ. ಪಿಂಟೊ

ಇವರಿಗೇನೇ ನಿಮ್ಮ ಅಮೂಲ್ಯ ಮತಗಳನ್ನು ಕೊಡಿರಿ.

ಮತದಾನದ ತಾ. 9—3—1957

ಇನ್ನೂ ಚಂದಾಪಣಿವನ್ನು

ಕಳುಹಿಸದವರು ದಯವಾಡಿ ಕೂಡಲೇ ಕಳುಹಿಸಿಕೊಡುವಂತೆ ಇನ್ನೊಮ್ಮೆ ಕೇಳಿಕೊಳ್ಳುತ್ತೇವೆ. ಅಂತೂ ಸಕಾಲದಲ್ಲಿ ಚಂದಾ ಪಾವತಿಯಾಗದಿದ್ದರೆ ನಾವು ಅನಿವಾರ್ಯವಾಗಿ ಕಳುಹಿಸುವ ವಿ. ಪಿ. ಪಿ. ಯನ್ನಾದರೂ ಪಡೆಕೊಳ್ಳುವಂತೆ ವಿಜ್ಞಾಪಿಸುತ್ತೇವೆ.

ಮೆನೇಜರ್, ನವಯುಗ.

ರಾಮತೀರ್ಥ ಬ್ರಾಹ್ಮೀ ತೈಲ



ಸೈಕಲ್ ನಂ ೧] [ಮೆಡಿಕೇಟೆಡ್

ಸೈರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ನಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಎಲ್ಲೆಲ್ಲಿ ಏನೇನು?

ಬಾರ್ಕೂರು— ಸ್ಥಳೀಯ ಸೇಶನಲ್ ಹೈಸ್ಕೂಲಿನ ವರ್ಧಂತಿ ಸಮಾರಂಭವು ಕಳೆದ ತಾ. 23ರಲ್ಲು ಡಿ. ಮು. ಶ್ರೀ ಕೆ. ಚಂದ್ರಶೇಖರ ಪೆಡ್ಡಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೆನೇಜರ್ ಡಾ. ಎ. ಎಸ್. ಹೆಬ್ಬಾರರು ಸ್ವಾಗತಮಾತುಗಳನ್ನಾಡಿದರು. ಹೆಡ್ಮಾಸ್ಟರ್ ಶ್ರೀ ಪಿ. ಎನ್. ಭೋಜರಾಯರು ಶಾಲಾ ವರದಿಯನ್ನೊಪ್ಪಿಸಿದರು. ವಿದ್ಯಾಸಚಿವರಾದ ವರದಿಯನ್ನು ಶಾಲಾ ಮುಖಂಡ ಶ್ರೀ ಟಿ. ಸೀನಪ್ಪ ಸೆಟ್ಟರು ಒಪ್ಪಿಸಿದರು. ಬಹುಮಾನ ವಿತರಣೆ, ವಿವಿಧವಿನೋದಾವಳಿಗಳಾದ ಬಳಿಕ ಶ್ರೀ ಕೆ. ರಾಜೀವ ಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಕಳದ ಸಂಚಿಕೆಯಲ್ಲಿ ಶ್ರೀ ಕು. ಶಿ. ಹರಿದಾಸ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿದುದು ಸದ್ರಿ ಶಾಲೆಯ ಹಳೆವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವೆಂದು ತಿದ್ದಿ ಓದಬೇಕಾಗಿದೆ.

(ಸಂ. ನ.)

ಕೋಟ— ಇಲ್ಲಿಯ ಗಾಂಧಿ ಮೈದಾನದಲ್ಲಿ ಕಳೆದ ತಾ. 23ರಲ್ಲು ಶ್ರೀ ಆಟ್ಮಲ್ ಸತಾರ್ ಸಾಹೇಬರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಆರೋಗ್ಯಮಂತ್ರಿ ಶ್ರೀ ಎ. ಬಿ. ಸೆಟ್ಟಿರು, ಶ್ರೀಗಳಾದ ಕೆ. ಎಸ್. ಹೆಗ್ಡೆ, ಎಸ್. ಪಿ; ಪೈ ಮುಂಜಯ್ಯ ಸೆಟ್ಟಿ, ಎಮ್. ಎಲ್. ಎ; ಮತ್ತು ಕೆ. ಸೂರ್ಯನಾರಾಯಣ ಆಡಿಗರು ಕಾಂಗ್ರೆಸ್ ಸರಕಾರವು ಸಾಧಿಸಿದ ಕಾರ್ಯಗಳನ್ನು ನಿವರಿಸಿ, ಕಾಂಗ್ರೆಸ್ ಉಮೇದ್ವಾರರಿಗೆ ಬೆಂಬಲ ಇಡುವ ಆವಶ್ಯಕತೆಯನ್ನು ವಿವರಿಸಿದರು. ಶ್ರೀ ಯು. ಶ್ರೀನಿವಾಸ ಮಲ್ಯ, ಎಮ್. ಪಿ, ಆವರು ಸಭೆಯಲ್ಲಿ ಉಪಸ್ಥಿತರಿದ್ದರು.

ಕುಂದಾಪುರ—ಕಳದ ತಾ. 17ರಂದು ಕಾಮತ್ ಟೈಲ್ ವರ್ಕ್ಸಿನ ಉದ್ಘಾಟನೆಯನ್ನು ಡಾ. ಟಿ. ಮಾಧವ ಪೈಗಳು ನೆರವೇರಿಸಿದರು. ಪಂಚಾಯತಬೋರ್ಡು ಅಧ್ಯಕ್ಷ ಶ್ರೀ ನೆಂಕಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿದ ಈ ಸಮಾರಂಭದಲ್ಲಿ ಶ್ರೀಗಳಾದ ಪೈ. ಮುಂಜಯ್ಯ ಸೆಟ್ಟಿ, ಎಮ್. ಎಲ್. ಎ, ಕೆ. ಎಸ್. ಎನ್. ಆಡಿಗ, ಎಜ್. ಎಲ್. ಕಾಮತ್ ಮೊದಲಾದವರು ಭಾಷಣಮಾಡಿದರು.

ಕೋಚಕೀಯ ನಿಧನ— ಕುಂದಾಪುರ ತಾಲೂಕಿನ ಜಾಪೂಜೆ ತತ್ಕರಿಪಾಲಕರಾದ ಶ್ರೀ ಎ. ಕೃಷ್ಣರಾಯ ಕೊಡಗಿಯವರು ಕಳದ ತಾ. 23ರಂದು ಹೃದಯಸ್ತಂಭನದಿಂದ ನಿಧನ ಹೊಂದಿದರೆನ್ನಲು ವಿಷಾದಿಸುತ್ತೇವೆ. ಹಲವಾರು ಸಾರ್ವಜನಿಕ ಸಂಸ್ಥೆಗಳಿಗೆ ಸೇವೆಸಲ್ಲಿಸಿದ್ದ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವೆವು.

ಹಿರಿಯಡಕ— ಸ್ಥಳೀಯ ಬೋರ್ಡು ಹೈಸ್ಕೂಲಿನ ವಾರ್ಷಿಕ ಬಹುಮಾನವಿತರಣಾ ಸಮಾರಂಭವು ಕಳದ ತಾ. 23ರಲ್ಲು ಜಿಲ್ಲಾ ಬೋರ್ಡು ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಪಂಚಾಯತ ಬೋರ್ಡು ಅಧ್ಯಕ್ಷ ಶ್ರೀ ಜಗಂಜೀವ ಹೆಗ್ಡೆಯವರು ಆಂದಿನ ಕ್ರೀಡೋತ್ಸವವನ್ನು ಉದ್ಘಾಟಿಸಿದರು. ಹೆಡ್ಮಾಸ್ಟರ್ ಶ್ರೀ ಯಂ. ಅಣ್ಣಪ್ಪನವರು ಸ್ವಾಗತವಿತ್ತು ನರದಿಯನ್ನೀಡಿದರು. ಅಧ್ಯಕ್ಷರು ಬಹುಮಾನವಿತರಣೆ ಮಾಡಿದ ಶ್ರೀ ಟಿ. ರೆನಾನಾಥ ಪೈಗಳು ದಾನವಿತ್ತ ಬಾಪೂಜಿ ಮತ್ತು ಪ್ರಭಾನಿ ದೇವರೊರವರ ಭಾವಚಿತ್ರಗಳನ್ನು ಡಾ. ಬಿ ಚಂದಯ್ಯ ಹೆಗ್ಡೆಯವರು ದಾನವಿತ್ತ ಸ್ವಾಮಿ ನಿವೇಕಾನಂದರ ಭಾವಚಿತ್ರವನ್ನು ಅನಾವರಣಮಾಡಿದರು. ನಂತರ ವಿನೋದಾವಳಿಗಳಾಗಿ ವಿದ್ಯಾರ್ಥಿ ನಾಯಕ ಶ್ರೀ ಚಂದ್ರಶೇಖರ ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದರು. ಮರುದಿವಸ ರಾತ್ರಿ ಶಾಲಾ ಹಳೆವಿದ್ಯಾರ್ಥಿಗಳು 'ಸತ್ಯವಿಜಯ ನಾಟಕವನ್ನಭಿನಯಿಸಿದರು.

ಬಿಕ್ಕಲುಬೆಟ್ಟು— ಶ್ರೀ ಕನಲ ಸಾಬ್ಬಯ್ಯ ಸೆಟ್ಟರು ಬಿಕ್ಕಲ್ ಬೆಟ್ಟುನಲ್ಲಿ ಶಾಲಾ ಮಕ್ಕಳಿಗೆ ಬೇಕಾಗುವಷ್ಟು ಸ್ಥಳ ಒದಗಿಸುವುದಕ್ಕಾಗಿ ಬಳಿ ಕಟ್ಟೋಣವನ್ನು ದುರುಸ್ತಿಪಡಿಸಿ ಅದಕ್ಕೆ ಹೊಸ ಕಟ್ಟೋಣವನ್ನು ಕೂಡಿಸಿ ಆ ಇಡೀ ಕಟ್ಟೋಣವನ್ನು ಜಿಲ್ಲಾ ಬೋರ್ಡಿಗೆ ತಾ. 31-1-57ರಲ್ಲಿ ಶ್ರೀ ಬಿ. ಎಸ್. ಭಾಸ್ಕರ ರೈ, ಆವರ ಅಧ್ಯಕ್ಷತೆಯಲ್ಲಿ ಡಾ|| ಯು. ಕೃಷ್ಣಾನ್‌ನವರಿಂದ ಉದ್ಘಾಟಿಸಿ, ಬಾಡಿಗೆ ನಯೇ ಏನೂ ಪ್ರತಿಫಲವಿಲ್ಲದೆನೇ ಬಿಟ್ಟು ಕೊಟ್ಟರು. ಈ ಸಮಾರಂಭಕ್ಕೆ ಮುಂಗಳೂರು, ಕಾರ್ಕಳ, ಬೈಲೂರು, ಹೆಬ್ರಿ ಮೊದಲಾದ ಕಡೆಗಳಿಂದ ಆನೇಕ ಅಧ್ಯ ಮುಪನೀಯರು ಬಂದಿದ್ದರು.

ಡಾ|| ಯು. ಕೃಷ್ಣ, ಕಾರ್ಕಳ ಬ್ಲೋಕ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ರಮ್ಮಾನ್ ಸಾಹೇಬ್, ಶ್ರೀಗಳಾದ ಪೂನಗೆ ಕೆಟ್ಟಿ ಮುದ್ರಾಡಿ ಕೃಷ್ಣಯ್ಯ ಸೆಟ್ಟಿ ಮೊದಲಾದವರು ಶ್ರೀ ಕನಲ ಸುಬ್ಬಯ್ಯ ಸೆಟ್ಟರ ಕೊಡುಗೈಯನ್ನು ಧಾರಾಳವಾಗಿ ಪ್ರಶಂಸಿಸಿ ಇತರ ಗ್ರಾಮಸ್ಥರು ಕೂಡಾ ಆವರನ್ನು ಅನುಸರಿಸಬೇಕಾಗಿದೆ ಎಂದು ಹೇಳಿದರು. ಸಭಾಧ್ಯಕ್ಷರು ಕೂಡಾ ಶ್ರೀ ಸುಬ್ಬಯ್ಯ ಸೆಟ್ಟರ ಗುಣಗಾನ ಮಾಡಿ ಆವರು ಇತರ ಗ್ರಾಮಸ್ಥರಿಗೆ ಮಾರ್ಗದರ್ಶನ ಮಾಡಿದುದು ಅಕ್ಷರಶಿನಂದಪೀಯ ವೆಂದು ಹೇಳಿದರು ಸಭಿಕರಿಗೆ ಉಪಾಹಾರ, ಮಕ್ಕಳಿಗೆ ಸಿಹಿತಿಂಡಿ ಪಂಚೋಣ ಕಾರ್ಯಕ್ರಮಗಳಾಗಿ ಸಮಾರಂಭ ಕೊನೆಗೊಂದಿತು.

ಹೆರ್ಡೂರು- ಮಹತೋಭಾರ ಶ್ರೀ ಅನಂತಪದ್ಮನಾಭ ಸ್ವಾಮಿಸನ್ನಿಧಿಯಲ್ಲಿ ಕಾಲಂ ಪ್ರತಿ ಜರಗುವ ಉತ್ಸವವು ಇದೇ ತಾ. 12 ರಲ್ಲು ರಾತ್ರಿ ಪ್ರಾರಂಭವಾಗಿ ತಾ. 19ರಲ್ಲು ಬ್ರಹ್ಮಕುಂಭಾಭಿಷೇಕದೊಂದಿಗೆ ಸುಕ್ತಾಯ ವಾಗಲಿರುವುದು. ಶ್ರೀ ಮನ್ಮಹಾರಥೋತ್ಸವವು ತಾ. 16ನೇ ಶನಿವಾರ ಜರಗಲಿರುವುದು. ಭಕ್ತಾದಿಗಳು ಬಂಮ ಶ್ರೀಯುತ ಗಂಧಪ್ರಸಾದ ಸ್ವೀಕರಿಸಿ ಶ್ರೀ ದೇವಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ ಕೆ. ಭೋಜರಾಜ ಸೆಟ್ಟರು ಅಪೇಕ್ಷಿಸುತ್ತಾರೆ.

ದೇವಲ್ಕುಂದ--ವಿಜಯ ಪ್ರಾಥಮಿಕ ಶಾಲೆಯ ನೂತನ ಕಟ್ಟಡದ ಉದ್ಘಾಟನೆಯನ್ನು ಶ್ರೀ ರಾಮನೋಹನ ನ್ಯಾಕರು ಕಳೆದ ತಾ. 20ರಲ್ಲು ನೆರವೇರಿಸಿದರು ಶ್ರೀ. ಸ್ವೆ. ಮುಂಜಯ್ಯ ಸೆಟ್ಟಿ, ಎಮ್. ಎಲ್. ಎ., ಆವರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ವೆಂಕಟ್ರಮಣಾಚಾರ್ಯರು ಧ್ವಜಾರೋಹಣ ಮಾಡಿದರು. ಸಂಜೆ ಶಾಲಾ ವರ್ಧಂತಿಯುತ್ಸವವು ಶ್ರೀ ಎಚ್. ಗಣಪತಿ ಕೆದ್ಲಾಯರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು.

ಬೆಳ್ಳಾರೆ: ಸ್ಥಳೀಯ ಹೈಸ್ಕೂಲಿನ ವಿದ್ಯಾರ್ಥಿ ಭವನದ ರಂಕುಸ್ಥಾಪನೆಯನ್ನು ಕಳದ ತಾ. 22ರಲ್ಲು ಸಂಜೆ ಜಿಲ್ಲಾ ಕಲೆಕ್ಟರ್ ಶ್ರೀ ಎಚ್ ನರಸಿಂಹನವರು ನೆರವೇರಿಸಿದರು.

ಶಿರ್ವ—ಇಲ್ಲಿಯ ಹಿಂದೂ ಹೈಸ್ಕೂಲಿನ ವರ್ಧಂತ್ಯುತ್ಸವವು ತಾ 21ರಲ್ಲು ಸಂಜೆ ಡಾ|| ಟಿ. ಎಸ್. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಿಗಿತು. ತಾ 3ರಲ್ಲು ಗಂಗೊಳ್ಳಿ ಹೈಸ್ಕೂಲಿನ ಹೆಡ್ಮಾಸ್ಟರ್ ಶ್ರೀ ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಅದೇ ಶಾಲೆಯ ವಿದ್ಯಾರ್ಥಿ ಹೆತ್ತವರ ಬಳಗದ ಸಮಾರಂಭವು ಶ್ರೀ ಕುಂಟ್ಯಾರು ಗುತ್ತು ಗಣಪಯ್ಯ ಸೆಟ್ಟರು ಉದಾರ ದಾನ ಮಾಡಿದ ನೂತನ ಕಟ್ಟಡದ ಉದ್ಘಾಟನಾ ಸಮಾರಂಭವು ನಡೆಯಿತು. ಶಾಲಾ ಕರೆಸ್ಪಾಂಡೆಂಟ್ ಶ್ರೀ ಎಸ್. ಅಣ್ಣಯ್ಯ ಹೆಗ್ಡೇರು ಸ್ವಾಗತಭಾಷಣಮಾಡಿದರು. ಬಳಿಕ ವಿವಿಧ ವಿನೋದಾವಳಿಗಳಾದುವು.

ಹಿರೇಬೆಟ್ಟು- ಸ್ಥಳೀಯ ಎಜ್ಯೂಡ್ ಹಾ. ಎ. ಶಾಲೆಯ ವಾರ್ಷಿಕೋತ್ಸವವು ಕಳದ ತಾ. 23ರಲ್ಲು ಉಡುಪಿ ಉತ್ತರವೃತ್ತ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಜೇಜು, ಉಚ್ಚಿಲ್, ಆವರ ಅಧ್ಯಕ್ಷತೆಯಲ್ಲೂ ಮರುದಿವಸ ಶಾಲಾ ಹೆತ್ತವರ ಕೂಟವು ಶ್ರೀಟಿ ಎ. ಪೈ, ಎಮ್. ಎಲ್. ಎ, ಆವರ ಅಧ್ಯಕ್ಷತೆಯಲ್ಲೂ ಜರಗಿ ವಿವಿಧ ಕಾರ್ಯಕ್ರಮಗಳಾದುವು.

-- ——

ಬೊಂಬಾಯಿ

ವಾರ್ಷಿಕ ಕೂಟ- ಬೊಂಬಾಯಿ ಮಾತುಂಗವಲ್ಲಿರುವ ರೂಪರೇಲ್ ಕಾಲೇಜಿನ ಕನ್ನಡ ಸಂಘದ ವಾರ್ಷಿಕ ಕೂಟ' ಸಮಾರಂಭವು ಕಳದ ತಾ. 16ರಲ್ಲು. ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಸಿ. ಬಿ. ಜೋಶಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಬೊಂಬಾಯಿ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶ ಶ್ರೀ ಆರ್. ಎ. ಜಯಕೀರ್‌ರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದು, 'ಬೊಂಬಾಯಿಯಲ್ಲಿ ಕನ್ನಡ ವಿದ್ಯಾರ್ಥಿಗಳ ಪಾತ್ರ' ಎಂಬ ವಿಷಯದ ಮೇಲೆ ಭಾಷಣಮಾಡಿದರು. ಬಳಿಕ ಶ್ರೀಮತಿ ಜಯವಂತಿದೇವಿ, ಹಿರೇಬೆಟ್ಟು, ಆವರ ಸಂಗೀತಸಾಯಿತು ಕಾರ್ಯದರ್ಶಿ ಶ್ರೀ ಎಸ್. ಎಮ್. ಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಶೋಕ ನಾಟಕದ ಸಾಮಾನುಗಳು



ನಾಟಕಗಳಿಗೆ ಬೇಕಾಗುವ ಸಾದಾ ಮತ್ತು ಶ್ರೇಷ್ಠ ತರದ ಎಲ್ಲ ಮತ್ತು ಪ್ರತಿ ಜೊಂದು ತರದ ನಾವಾನುಗಳ ದೊಡ್ಡ ಸಂಗ್ರಹವಿದೆ.

FILM WIG

ಕನ್ನಡ ಕಟಲಾಗಿ ಬರೆಯಿರಿ.

ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿ ಬುಲ್ಲಿ.

DHARAMSHI MULJI, DRESSWALA,

132—C, Bhagatwadi, Bhuleshwar Road BOMBAY-2.

ಈ ಟೆಂಡರು ನೋಟೀಸು

ಪಡುಬಿದ್ರಿ ಪಂಚಾಯತ ಬೋರ್ಡಿನಿಂದ ಪಂಚಾಯತ ಸೀಮೆಗೆ ಸೇರಿದ ಪಡು ಪಾರ್ಶ್ವದಲ್ಲಿ ಕಟ್ಟಿಸಲ್ಪಡುವ ಬ್ಲೋಕ್ ನಂಬ್ರ I ಕಟ್ಟೋಣಕ್ಕೆ ಎಸ್ಟಿಮೇಟು ರೂಪ್ಯ 3650/-ರ ಕೆಲಸಕ್ಕೆ ಉಮೇದ್ವಾರಿ ರಿಜಿಸ್ಟರ್ಡ್ ಕಂಟ್ರಾಕ್ಟರುಗಳು ರೂಲ್ಸಿಗೆ ಸರಿಯಾಗಿ ಡೆಪೊಸಿಟು ಪಣ ರೂಪ್ಯ 185—0—0ರ ಸಹಿತ ಬೋರ್ಡು ರಕ್ಷಿದಿ ಸಿಲ್ಕ್ ಟೆಂಡರುಗಳನ್ನು ತಾರೀಕು 15-3-57ರ ಸಳಗೆ ಸ್ವೀಕರಿಸಲಾಗುವುದು. ತಾರೀಕು 16-3-57ನೇ ಶನಿವಾರ ಬೆಳಗ್ಗೆ ಗಂಟೆ 10ಕ್ಕೆ ಸದ್ರಿ ಟೆಂಡರುಗಳನ್ನು ಪಂಚಾಯತ ಬೋರ್ಡು ಆಫೀಸಿನಲ್ಲಿ ಪರಿಶೀಲಿಸಲಾಗುವುದೆಂಲು ಸಂಗ್ತಿ ಯೊ ಮೂಲಕ ತಿಳಿಸೋಣಾಗುತ್ತದೆ.

ಕೆ. ಗೋಪಾಲ ಹೆಗ್ಡೆ,
ಪ್ರೆಸಿಡೆಂಟ್.
ಪಂಚಾಯತ ಬೋರ್ಡು, ಪಡುಬಿದ್ರಿ.
ತಾ. 1-3-1957

ಉಡುಪಿ ಡಿ. ಮು ಕೋರ್ಟಿನಲ್ಲಿ

S. E. P. 688/56.

U. ನರಸಿಂಗ ಜಾವ್ —ಅರ್ಜಿದಾರ.
ಮತ್ತು
ಬಾಬ ಸೂಜಾರಿ ಕೂಡಾ —ಎದ್ರಿರು.
1, 4, 7ನೇ ಎದ್ರಿರಿಗೆ.

ಅರ್ಜಿದಾರರು ದಾಖಲು ಮಾಡಿದ ಮೇಲಿನ ಅಮಲಜ್ಯಾರಿಯು 1, 4, 7ನೇ ಎದ್ರಿರ ನೋಟೀಸಿನ ಬಗ್ಗೆ ತಾರೀಕು 13-3-57ಕ್ಕೆ ಇಟ್ಟಿದೆ. ಸದ್ರಿ ದಿನಾಂಕ 1, 4, 7ನೇ ಎದ್ರಿರು ಪೂರ್ವಾಹ್ನ ಗಂಟೆ 10ಕ್ಕೆ ಮೇಲಿನ ಅಮಲಜ್ಯಾರಿಯಲ್ಲಿ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗುವರೇ ತಪ್ಪಿದರೆ ಸದ್ರಿಯನರ ಸೈರು ಹಾಜ್ರಾಯಿಂಪೆ ಮೇಲಿನ ಅಮಲ ಜ್ಯಾರಿಯನ್ನು ತೀರ್ಮಾನಿಸಲ್ಪಡುವುದು.

(Sd·) Gratian C. Rego·

ನೋಟೀಸು

ಈ ಮೂಲಕ ತಿಳಿಯಪಡಿಸುವುದೇನೆಂದರೆ 1957—58ನೇ ಪರ್ಸಾದ ಜಾಬ್ತು ಕಟ್ಟಾಡಿ ಪಂಚಾಯತ ಬೋರ್ಡಿನ ಆಡಳಿತಕ್ಕೆ ಒಳಪಟ್ಟ ಮಾರ್ಕೆಟ್ಟು ಇಳಿಯುವ ಸ್ಥಳ (Jetty) ನುಟ್ಟು ಕಡವು ಇವುಗಳಲ್ಲಿ ನರಿ ವಸೂಲು ಮಾಡುವ ಹಕ್ಕನ್ನು ಪಂಚಾಯತ ಬೋರ್ಡಿನ ಪ್ರೆಸಿಡೆಂಟರು ತಾ. 14—3—1957ನೇ ಗುರುವಾರ ಅಪರಾಹ್ನ ಗಂಟೆ 3ಕ್ಕೆ ಪಂಚಾಯತ ಬೋರ್ಡು ಆಫೀಸಿನಲ್ಲಿ, ಆ ಕುರಿತು ಜ್ಯಾರಿಯಲ್ಲಿರುವ ನಿಯಮಗಳಿಗನುಸಾರವಾಗಿ ಪ್ರತ್ಯೇಕ ಪ್ರತ್ಯೇಕವಾಗಿ, ಬಹಿರಂಗವಾಗಿ ಏಲಂ ಮೂಲಕ ಸಾರಾಟ ಮಾಡುವರು.

ಈ ಟೆಂಡರ್ ಹೆಚ್ಚಿನ ಮಾಹಿತಿಯನ್ನು ಆಫೀಸು ಸಮಯ ಪಂಚಾಯತ ಬೋರ್ಡು ಆಫೀಸಿಗೆ ಬಂದು ತಿಳಿದುಕೊಳ್ಳಬಹುದು.

P. Venkatraya Nayak, B. Sc.
President, Panchayat Board,
Katapadi, S. Kanara.
ಪಂಚಾಯತ ಬೋರ್ಡು ಆಫೀಸು,
ಕಟ್ಟಾಡಿ, ತಾ. 5—3—1957

ಮಂಗಳೂರು

ವಾರ್ಷಿಕೋತ್ಸವ— ಕಸ್ತೂರ್ಬಾ ಮಹಿಳಾ ಕಾಲೇಜಿನ ಕ್ಲಿನಿಕಲ್ ಸೆಕ್ಷನಿನ ವಿದ್ಯಾರ್ಥಿ ಯೂನಿಯನ್ನಿನ ವಾರ್ಷಿಕೋತ್ಸವು ಕಳೆದ ತಾ. 27ರಲ್ಲು ಸಂಜೆ ಶ್ರೀ ಕೆ. ಮಾಧವಾನಂದ ಹೆಗ್ಡೆ, ಎಮ್. ಪಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಯೂನಿಯನ್ ಅಧ್ಯಕ್ಷೆ ಶ್ರೀ ಸಾಮ್. ಎ. ಭಾಕ್ಯಾರವರು ಸ್ವಾಗತ ಭಾಷಣಗಳನ್ನಾಡಿದರು. ಪ್ರಭಾರ ಕಾರ್ಯದರ್ಶಿ ಶ್ರೀ ವಿ. ಜಿ. ರೇಗೇಯವರು ವರದಿ ವಾಚನಮಾಡಿದರು. ಪ್ರಿನ್ಸಿಪಾಲ್ ಡಾ. ಜೆ. ಎ. ವೆಲಿಯತರು ಹಿತವಚನಗಳನ್ನಾಡಿದರು. ಕೋಶಾಧಿಕಾರಿ ಶ್ರೀ ಪ್ರಭಾಕರ ಎಸ್. ಪಾಯರು ಧನ್ಯವಾದಗಳನ್ನಿತ್ತರು.

ಶಿವರಾತ್ರಿ ಉತ್ಸವ— ಕಳೆದ ತಾ. 27ರಲ್ಲು ಕುದ್ರೋಳಿ ಶ್ರೀ ಗೋಕರ್ಣನಾಥೇಶ್ವರ ಸ್ವಾಮಿ ದೇವಸ್ಥಾನ, ಕದ್ರಿ ಶ್ರೀ ಮಂಜುನಾಥ ದೇವಸ್ಥಾನ ಮೊದಲಾದ ಸ್ಥಳಗಳಲ್ಲಿ ಶಿವರಾತ್ರಿ ಉತ್ಸವ ಜರಗಿತು.

ಭರತನಾಟ್ಯ ಪ್ರದರ್ಶನ – ಸುರತ್ಕಲ್ ವಿದ್ಯಾದಾಯಿನಿ ಶಾಲಾ ಬಾಲ ವಿದ್ಯಾರ್ಥಿನಿಯ ಸಹಾಯಾರ್ಥವಾಗಿ ಕಳೆದ ತಾ. 24ರಲ್ಲು ಸಂಜೆ ಕೆನರಾ ಪ್ರಾಸ್ಕೂಲಿನ ಶ್ರೀ ರವೀಂದ್ರ ಸಭಾಸದನದಲ್ಲಿ ಶ್ರೀ ಕೆ. ಎಸ್. ನಾರಾಯಣ ಸ್ವಾಮಿಯವರ ಭರತನಾಟ್ಯ ಮತ್ತು ವೃಂದವರ ಭರತನಾಟ್ಯ ಮತ್ತು ಭಾರತೀಯ ನೃತ್ಯಗಳ ಪ್ರದರ್ಶನ ನಡೆಯಿತು. ಶ್ರೀ ಕುದ್ಪಿ ಶ್ರೀನಿವಾಸ ಕಿಣಿಯವರು ಅಧ್ಯಕ್ಷತೆಯಲ್ಲಿ ಜರಗಿತು.

ಸಂಗೀತ ಶಾಲೆಯ ರಜತೋತ್ಸವ — ಕಳೆದ 30 ವರ್ಷಗಳಿಂದ ಸಂಗೀತ ಕ್ಷೇತ್ರದಲ್ಲಿ ಸೇವೆಯನ್ನು ಸಲ್ಲಿಸುತ್ತಿರುವ ಮತ್ತು ಶ್ರೀ ಎಮ್. ಎಸ್. ವೇಣುವಾಡಿಗರ ಸಂಗೀತ ಶಾಲೆಯ ವಿದ್ಯಾರ್ಥಿಗಳ ಹಾಗೂ ಹಿತೈಷಿಗಳ ಸಭೆಯೊಂದು ಕಳೆದ ತಾ. 24ರಲ್ಲು ಶ್ರೀ ಡಿ. ಪುಟ್ಟುಸ್ವಾಮಿ, ಎಡ್ವೋಕೇಟ್, ರವರ ಅಧ್ಯಕ್ಷತೆಯಲ್ಲಿ ಜರಗಿ, ಶಾಲೆಯ ರಜತೋತ್ಸವವನ್ನು ವಿವಿಧ ಕಾರ್ಯಕ್ರಮಗಳಿಂದ ಸಂಗತಿಸಿ ಆಚರಿಸಲು ನಿರ್ಧರಿಸಲಾಯಿತು. ಆ ಸಂಗ್ಗೆ ಜಿಲ್ಲೆಯ ಆಸ್ಥಿ ಮಹನೀಯರುಗಳಿಂದ ಕೂಡಿದ 21 ಮಂದಿ ಸದಸ್ಯರಿರುವ ಕಾರ್ಯಕ್ರಮಿತಿ ರಚಿಸಲಾಯಿತು. ಶ್ರೀ ಎಮ್. ಎಮ್. ವೇಣುವಾಡಿಗರು ಕನ್ವೀನರ್‌ರಾಗಿರುವರು.

ನಾಟ್ಯ ಪ್ರದರ್ಶನ— ಶಿವಮೊಗ್ಗೆಯ ಸುಪ್ರಸಿದ್ಧ ನಾಟ್ಯಶಾಲೆಯ ಶ್ರೀ ಡಿ. ಜನಾರ್ದನ ಮತ್ತು ಆವರ ಶಿಷ್ಯೆಯರಾದ ಕುಮಾರಿ ಕುಸುಮಾ ಮತ್ತು ಕುಮಾರಿ ಕಮಲಾ ಇವರ ನಾಟ್ಯ ಪ್ರದರ್ಶನವು ತಾ. 18ರಂದು ಸಂಜೆ ಪೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಸ್ಥಳೀಯ ಕೃತ್ಯಕಲಾನಿಧಿ ಸಂಘದ ಆಶ್ರಯದಲ್ಲಿ ಜರಗಿತು.

ಶಾಲಾವಾರ್ಷಿಕೋತ್ಸವ— ಬೋಳಾರ ರೂರಲ್ ಎಲಿಮೆಂಟರಿ ಶಾಲಾ ವಾರ್ಷಿಕೋತ್ಸವವು ಕಳೆದ ತಾ. 24ರಂದ ಶ್ರೀ ಕೆ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್‌ಮಾಸ್ಟರ್ ಶ್ರೀ ಬಿ. ಶಿವರಾಯರು ವರದಿಯನ್ನೋದಿದರು. ಶ್ರೀ ಎಚ್. ಸುಬ್ರಹ್ಮಣ್ಯಂ, ಅವರು ಸ್ವಾಗತ ವಾಚನವನ್ನಾಡಿದರು.

ಬೆಳ್ತಂಗಡಿ ಕ್ಷೇತ್ರದಿಂದ ಶ್ರೀ ಧರ್ಮಸ್ಥಳ ರತ್ನವರ್ಮ ಹೆಗ್ಡೆಯವರ ವಿಜಯ — ನ್ಯೂಸೊರು ನಿಧಾನ ಸಭೆಯ ಬೆಳ್ತಂಗಡಿ ಮತಕ್ಷೇತ್ರದ ಕಾಂಗ್ರೆಸ್ ಉಮೇದ್ವಾರರಾದ ಶ್ರೀ ಧರ್ಮಸ್ಥಳ ರತ್ನವರ್ಮ ಹೆಗ್ಡೆಯವರು ತಮ್ಮ ಪ್ರತಿಸ್ಪರ್ಧಿಯಾದ ಸ್ವತಂತ್ರ ಉಮೇದ್ವಾರ ಶ್ರೀ ಕೆ. ರಮಾನಾಥ ಶೆಟ್ಟಿಯವರನ್ನು 11617 ಅಧಿಕ ಮತಗಳಿಂದ ಸೋಲಿಸಿ ವಿಜಯಿಗಳಾದರು.

ಬೆಳ್ತಂಗಡಿ ಮತದಾರ ಸಂಖ್ಯೆ 56721 ಒಟ್ಟು ಮತದಾನವಾದದ್ದು 29501 ಶ್ರೀ ಧರ್ಮಸ್ಥಳ ರತ್ನವರ್ಮ ಹೆಗ್ಡೆ (ಕಾ) 20537 ಶ್ರೀ ಕೆ. ರಮಾನಾಥ ಶೆಟ್ಟಿ (ಸ್ವ) 8920 ಅಸಿಂಧುವಾದ ಮತಗಳು 44 ಈ ಮೊದಲು ಬೈಂದೂರಿನಿಂದ ಶ್ರೀ ವೈ. ಮಂಜಯ್ಯ ಶೆಟ್ಟಿ (ಕಾ), ಕಾರ್ಕಳದ ಪರಿಜನ ಕಾದಿಟ್ಟ ಸ್ಥಾನ

ನಿಮಗಿದು ತಿಳಿದಿರಲಿ

ಒಂಭತ್ತು ವರ್ಷಗಳಲ್ಲಿ ಕಾಂಗ್ರೆಸ್ ಸರಕಾರ ಬಡವರಿಗಾಗಿ ಏನು ಮಾಡಿದೆ?

ಬಡವರ ಮಕ್ಕಳಿಗೆ ಎಂಟನೇ ದರ್ಜೆಯ ವರೆಗೆ ಧರ್ಮಾರ್ಥ ವಿದ್ಯಾಭ್ಯಾಸ ಕೊಡುತ್ತಿದೆ.

ಬಡ ನೌಕರರಿಗೆ ಮತ್ತು ಅವರ ಕುಟುಂಬಕ್ಕೆ ಧರ್ಮಾರ್ಥ ಔಷಧೋಪಚಾರ ನೀಡುತ್ತಿದೆ.

ಬಡವರಿಗಾಗಿ ಧರ್ಮಾರ್ಥ ಆಸ್ಪತ್ರೆಯಲ್ಲಿ ಹೆಚ್ಚಿನ ಅನುಕೂಲತೆ ಒದಗಿಸುತ್ತಿದೆ.

ಬಡವರ ಹೆಂಗಸರ ಹೆರಿಗೆಗಾಗಿ ಸೂಲಗಿತ್ತಿಯನ್ನು ನೇಮಿಸಿದೆ.

ಹಳ್ಳಿಗರ ಸೌಕರ್ಯಕ್ಕಾಗಿ ಹೊಸ ರಸ್ತೆ, ಸಂಕ, ನೋರಿ ಇತ್ಯಾದಿ ರಚಿಸಿಯದೆ.

ಕಳ್ಳಿ ಹಳ್ಳಿಗಳಲ್ಲಿ ಬಡವರಿಗಾಗಿ ಶಾಲೆ ಒದಗಿಸಿಯದೆ.

ಹಳ್ಳಿಗಳಲ್ಲಿ ಕೂಡಾ ಶಾಲೆಗಳಿಗೆ ಹೊಸ ಕಟ್ಟಡಗಳಿಗೆ ಸಹಾಯ ನೀಡಿದೆ.

ಜಮೀನಾರ್ದಾರಿಗಳ ಜಮೀನ ಗೇಣನ್ನು ಕಿತ್ತುಕೊಂಡು ಬಡ ರೈತರಿಗೆ ಕೊಟ್ಟಿದೆ.

ಒಕ್ಕಲು ಎಬ್ಬಿಸದಂತೆ ಕಾನೂನು ಮಾಡಿದೆ.

ಗೇಣಿ ಏರಿಸದಂತೆ ತಡೆ ಹಾಕಿದೆ.

ಗೇಣಿ ಕೊಟ್ಟುದಕ್ಕೆ ರಶೀದಿ ಕೊಡುವಂತೆ ಕಾಯಿದೆ ಮಾಡಿದೆ.

ಭೂಮಿ ಬಿಟ್ಟು ಒಕ್ಕಲೆದ್ದು ಹೋಗುವ ಒಕ್ಕಲಿಗೆ ಕೃತಕೊಡಿಸುತ್ತಿದೆ.

ಬಡವರಿಗೆ ಮನೆಕಟ್ಟಲು, ಕೃತವಾಗಲು ಭೂಮಿ ದರಖಾಸ್ತಿಗೆ ಕೊಡುತ್ತಿದೆ.

ಬಡವರಿಗೆ ಮನೆಕಟ್ಟಲು, ಕಡಿಮೆ ಬಡ್ಡಿಯಲ್ಲಿ ಕಂತಿನ ಮೇಲೆ ಸಾಲ ಕೊಡುತ್ತಿದೆ.

ಬಡವರಿಗೆ ಕೃತವಾಗಲು, ಕೃಷಿ ಉಪಕರಣ ಪಡೆಯಲು ಸಾಲಕೊಡುತ್ತಿದೆ.

ತಮ್ಮ ಬೆಳೆಗಳನ್ನು ಅಡವಿಟ್ಟು ಸಾಲ ಪಡೆಯುವ ಏರ್ಪಾಡು ಮಾಡಿದೆ.

ಜೀನ್ನಾಗಿ ಕಲಿಯುವ ಬಡವರ ಮಕ್ಕಳಿಗೆ ಹಣಸಹಾಯ ಮಾಡುತ್ತಿದೆ.

ಕೃಷಿ ಮತ್ತು ಕೈಗಾರಿಕೆಗಳಿಗೆ ಅಗ್ಗದ ರದಲ್ಲಿ ವಿದ್ಯುತ್ ಒದಗಿಸುತ್ತಿದೆ.

ಬಡವರು ಮನೆಗಳಲ್ಲಿ ಚಿಕ್ಕಪುಟ್ಟ ಕೈಗಾರಿಕೆ ನಡೆಸುವುದಾದರೆ, ಬೇಕಾದ ಸಾಲ, ಸಹಾಯ ದ್ರವ್ಯ ಒದಗಿಸುತ್ತಿದೆ.

ಶೇ 5ಕ್ಕಿಂತ ಹೆಚ್ಚು ಬಡ್ಡಿಯಿರಬಾರದೆಂದು ಕಾನೂನು ಮಾಡಿದೆ.

ಬಡವರು ಬೆಳೆಸಿದ ಅಕ್ಕಿ, ತೆಂಗಿನಕಾಯಿ, ಧಾನ್ಯ, ಬೆಲ್ಲ, ಮೆಣಸು ಇತ್ಯಾದಿ ಬೆಳೆಗಳಿಗೆ ಉತ್ತಮ ಬೆಲೆ ಸಿಗುವಂತೆ ಮಾಡಿದೆ.

ಬ್ರಿಟಿಷರು ಹೇರಿದ್ದ ಕಂಟ್ರೋಲ್ ತೆಗೆದು ಹಾಕಿದೆ.

ಬಡವರನ್ನು ಶೋಷಣೆಮಾಡುತ್ತಿದ್ದ ಕಳ್ಳು, ಶರಾಬಿನ ಅಂಗಡಿಗಳನ್ನು ಮುಚ್ಚಿಬಿಟ್ಟಿದೆ.

ಬಡವರಾದ ನೇಕಾರರಿಗೆ ಸಹಾಯ ದ್ರವ್ಯ, ರೀಬೇಟುಕೊಟ್ಟು ಸಹಾಯಮಾಡುತ್ತಿದೆ.

ಕೈಯಿಂದ ಕುಟ್ಟಿಅಕ್ಕಿ ತಯಾರಿಸಿಕೊಡುವವರಿಗೆ ಸಹಾಯ ದ್ರವ್ಯಕೊಡುತ್ತಿದೆ.

ಬಡ ಕೂಲಿಗಾರರಿಗಾಗಿ ಲೇಬರ್ ಆಫೀಸ್ ಜಾರಿಗೆ ತಂದಿದೆ.

ಬಡ ಕೂಲಿಗಾರರ ಕೆಲಸದ ಸಮಯ ಕಡಿಮೆ ಮಾಡಿದೆ.

ಅನೇಕ ತರದ ಕೆಲಸಗಳಿಗೆ ಕೂಲಿ ನಿರ್ಣಯ ಮಾಡಿದೆ

ಜೀತ್ಥ ಶಿಶುಗಳಿಗಾಗಿ ಶಿಶುವಿಹಾರ, ಸಮಾಜಕಲ್ಯಾಣಕೇಂದ್ರ ಒದಗಿಸಲಾಗಿದೆ.

ಕಳ್ಳಿಯ ಜನರಿಗೆ ಹೊಲಿಗೆ, ಕಸೂತಿ, ಸಂಗೀತ ಇತ್ಯಾದಿ ಕಲಿಸುವ ಶಾಲೆ ತೆರೆದಿದೆ.

ಬಡವರ ಮಕ್ಕಳಿಗೆ ಧರ್ಮಾರ್ಥ ಹಾಲು ಒದಗಿಸಿ ಕೊಡುತ್ತದೆ.

ಎಲ್ಲರಿಗೂ ಆಹಾರ, ಬಟ್ಟೆ, ಧಾರಾಳವಾಗಿ ಸಿಗುವಂತೆ ಮಾಡಿದೆ.

ಬ್ಲೇಕ್ ಮಾರ್ಕೆಟ್‌ನ್ನು ನಿಲ್ಲಿಸಿಯದೆ.

ಬಡ ಕೂಲಿಗಾರರಿಗೆ ಸಂಬಳ ಸಹಿತ ರಜೆ ಸಿಗುವಂತೆ ಕಾನೂನು ಮಾಡಿದೆ.

ಬಡ ಕೂಲಿಗಾರರಿಗೆ ಇನ್ಶೂರೆನ್ಸ್‌ನ ಅನುಕೂಲ ಒದಗಿಸುತ್ತಾ ಬರುತ್ತಿದೆ.

ಆಹಾರ ಮತ್ತು ಗಳಿಗೆ ಬೆಲೆಯೇರಿದಾಗ ಅಗ್ಗದರದ ಅಂಗಡಿಗಳನ್ನು ತೆರೆದು ಸಹಾಯ ಮಾಡಿದೆ.

ಬಡವರಿಗಾಗಿ ಕಡಿಮೆ ಕ್ರಯಕ್ಕೆ ಜೋನುಗೂಡು, ಅಂಬರ ಚರಕ ಇತ್ಯಾದಿ ಒದಗಿಸಲಾಗುತ್ತಿದೆ.

ಸೇಲ್ ಟೇಕ್ಸ್, ಇನ್‌ಕಮ್ ಟೇಕ್ಸ್, ಸೂಪರ್ ಟೇಕ್ಸ್ ಮೊದಲಾದ ತೆರಿಗೆಗಳಿಂದ ಬಡವರನ್ನು ವಿನಾಯಿತಿಗೊಳಿಸಲಾಗಿದೆ.

ಬಡವರಿಗಾಗಿ ಧರ್ಮಾರ್ಥ ವಾಜನಾಲಯ ತೆರೆದಿದೆ.

ರಂಪನಿ ಬಲೆಗಳ ಮೇಲಿನ ಸೇಲ್ಸ್ ಟೇಕ್ಸನ್ನು ವಿನಾಯಿತಿಗೊಳಿಸಿ ಬಡ ಬೆಸ್ತರಿಗೆ ಸಹಾಯ ಮಾಡಿದೆ.

ಹಳ್ಳಿ ಹಳ್ಳಿಗಳಲ್ಲಿ ಬಡವರಿಗೆ ಕುಡಿಯುವ ನೀರಿನ ಸೌಕರ್ಯಕ್ಕಾಗಿ ಬಾವಿಗಳನ್ನು ತೋಡಿಸಿಯದೆ.

ಬಡ ಮುರ್ತೆಕಟ್ಟುವವರಿಗೆ ತಾಳೆಬೆಲ್ಲ ನೀರಾ ತಯಾರಿಕೆಗೆ ಅನುಮತಿ ಕೊಟ್ಟಿದ್ದಲ್ಲದೆ ಇನ್ನೂ ಹೆಚ್ಚಿನ ಸಹಾಯ ಮಾಡುವ ಆಶ್ವಾಸನೆ ಕೊಟ್ಟಿದೆ.

ಬಡ ಹರಿಜನ ವಿದ್ಯಾರ್ಥಿಗಳಿಗೆ ಧರ್ಮಾರ್ಥ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಿಯದೆ.

ಹರಿಜನ ಹುಡುಗ ಹುಡುಗಿಯರಿಗೆ ವಿದ್ಯಾರ್ಥಿ ನಿಲಯಗಳನ್ನು ತೆರೆದು ಊಟ, ವಸತಿ, ಸೌಕರ್ಯಗಳನ್ನು ಒದಗಿಸಿಕೊಡುತ್ತಿದೆ.

ಬಡ ಹರಿಜನರಿಗೆ ವಸತಿ ಬಗ್ಗೆ ಅಲ್ಲಲ್ಲಿ ಮನೆಗಳನ್ನು ಕಟ್ಟಿಸಿಕೊಡುತ್ತದೆ. ಇನ್ನು ವರ್ಷವರ್ಷವೂ ಹೆಚ್ಚೆಚ್ಚು ಮನೆಗಳನ್ನು ಕಟ್ಟಿಸಿಕೊಡುವ ಯೋಜನೆ ಮಾಡಿಯದೆ—

ಇತ್ಯಾದಿ. ಇತ್ಯಾದಿ. ಇತ್ಯಾದಿ.

ಇನ್ನೂ ಮಾಡಲಿಕ್ಕಿರುವ ಕೆಲವು ಪ್ರಾಮುಖ್ಯ ಕೆಲಸಗಳು.

ಯೋಗ್ಯ ಗೇಣಿಯ ನಿರ್ಣಯಮಾಡಿ ಜಾಲಗೇಣಿ ಒಕ್ಕಲುಗಳಿಗೆ ಯಾವರೀತಿಯಿಂದಲೂ ಅನ್ಯಾಯವಾಗದಂತೆ ನೋಡುವದು.

ಮೈಸೂರು ಸಂಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಒಂದೇ ತರದ ವಕ್ಕಲು ಹಕ್ಕು ಮಸೂದೆ ತರುವದು.

ಹಳ್ಳಿಹಳ್ಳಿಗಳಲ್ಲಿ ಉದ್ಯೋಗಗಳನ್ನು ಕಲ್ಪಿಸಿ ಬಡ ಕುಟುಂಬಗಳ ಸಂಪಾದನೆಯನ್ನು ಹೆಚ್ಚಿಸಿ ಬಡತನವನ್ನು ಹೋಗಲಾಡಿಸುವದು.

ಕೃಷಿಗೆ ಬೇಕಾಗುವ ಸಾಲ, ಸಹಾಯ ಗಳನ್ನು ಸರಕಾರದಿಂದ ಒದಗಿಸಿಕೊಟ್ಟು ಹೆಚ್ಚಿನ ಅನುಕೂಲತೆಗಳನ್ನು ರೈತರಿಗೆ ಒದಗಿಸಿಕೊಡುವದು.

ಉಪಾಧ್ಯಾಯರಿಗೆ ಯೋಗ್ಯ ಸ್ಥಾನಮಾನಗಳನ್ನು ಕಲ್ಪಿಸಿ ಅವರ ಜೀವನ ಮಟ್ಟವನ್ನು ಸುಧಾರಿಸುವದು.

ಹಳ್ಳಿ ಕಳ್ಳಿಗಳಲ್ಲಿ ವೈದ್ಯಕೀಯ ಅನುಕೂಲತೆಗಳನ್ನು ಹೆಚ್ಚಿಸಿ, ಸಾರಿನೆ ಸಂಸ್ಕರ್ಗಳ ಅನುಕೂಲತೆಗಳನ್ನು ಹೆಚ್ಚಿಸಿ ಜನರಿಗೆ ಇರುವ ಕಷ್ಟಗಳನ್ನು ಬಿಡಿಸುವದು.

ಪ್ರತಿಯೊಬ್ಬನು ಕಷ್ಟಪಟ್ಟು ಸಂಪಾದಿಸಿದಲ್ಲಿ, ಆ ಸಂಪಾದನೆಯ ಹೆಚ್ಚಿನ ಅಂಶ ಅವನಿಗೇ ಸಿಗುವಂತೆ ಮಾಡುವದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೀನುಗಾರಿಕೆಗೆ ಬೇಕಾದ ಸಹಾಯಮಾಡಿ ಬಡ ಮೊಗವೀರರಿಗೆ ಸಹಾಯ ಮಾಡುವದು.

ಇದೆಲ್ಲಾ ಸಾಧಿಸಬೇಕಾದರೆ ಕಾಂಗ್ರೆಸ್ ಸರಕಾರವೇ ಅಧಿಕಾರಕ್ಕೆ ಬರಬೇಕು.

ಬಡವರಿಗಾಗಿ ಇನ್ನೂ ಇತರ ಕೆಲಸಗಳನ್ನು ಸಾಧಿಸುವುದಕ್ಕಾಗಿ ನಿಮ್ಮ ಓಟನ್ನು ಕಾಂಗ್ರೆಸ್ಸಿಗೆ ದಯಮಾಡಿ ಕೊಡಿರಿ.

ಕೃ ಶ್ರೀ ಯು ಮಂಜಪ್ಪ (ಕಾ) ಅವಿರೋಧವಾಗಿ ಆರಿಸಲ್ಪಟ್ಟಿರುವರು.

ನೇಮಕ— ಇಲ್ಲಿ ಮುನ್ಸಿಫರಾಗಿದ್ದ ಶ್ರೀ ಪಿ. ಕೃಷ್ಣಪ್ಪ ಶೆಟ್ಟಿ, ಬಿ.ಎ.,ಬಿ.ಎಲ್. ಇವರು ಹೊನ್ನಾವರದ ಜ್ಯೂನಿಯರ್ ಸಿವಿಲ್ ಜಡ್ಜ್ ಮತ್ತು ಜ್ಯುಡಿಸಿಯಲ್ ಮೆಜಿಸ್ಟ್ರೇಟ್, ಫಸ್ಟ್ ಕ್ಲಾಸ್, ಆಗಿ ನೇಮಕಹೊಂದಿರುವರು.



ಆಫ್ರಿಕದ ಮುನ್ನಡೆ

(೯ನೇ ಪುಟದಿಂದ)

ಮಂದಿ ಸದಸ್ಯರುಳ್ಳ ಪ್ರತಿನಿಧಿ ಸಭೆಯು ಊರ್ಜಿತವಾಯಿತು. ಈ ಸಭೆಯ ಪ್ರತಿನಿಧಿಗಳೇ ಕಾರ್ಯಕಾರಿ ಸಮಿತಿಯಲ್ಲಿ ಕೆಲಸ ಮಾಡಿದರು. ಈ ಪ್ರತಿನಿಧಿ ಸಭೆಯ ಸದಸ್ಯರೆಲ್ಲರೂ ಚುನಾವಣೆಯಿಂದ ಆರಿಸಿ ಬಂದವರಾಗಿದ್ದಾರೆ. ಇಲ್ಲಿ ಪ್ರಾಯಕ್ಕೆ ಬಂದವರಿಗೆಲ್ಲರಿಗೂ ಮತದಾನದ ಅಧಿಕಾರವಿದೆ.

ಎಂಕ್ರೂಮಾ ಸರಕಾರವು ದೇಶದ ಸರ್ವತೋಮುಖವಾದ ಅಭ್ಯುದಯವನ್ನು ಸಂಪಾದಿಸುವುದಕ್ಕಾಗಿ ಮಾನವ ಸಂಪತ್ತನ್ನೂ ಪಾರ್ಥಿವ ಸಂಪತ್ತನ್ನೂ ಶೇಖರಿಸಲು ನಿರ್ಧರಿಸಿದೆ. ೧೯೫೦–೧೯೬೦ ಹತ್ತು ವರ್ಷಗಳ ಸಂಕಲ್ಪದ ಮುನ್ನುಡಿಯು ಹೀಗಿದೆ– "ಅಭ್ಯುದಯ ಕಾರ್ಯವು ಕೇವಲ ಸರಕಾರಗಳ ಕರ್ತವ್ಯವಲ್ಲ. ವ್ಯಾಪಾರಿಗಳೂ ಪಾಸಗಿ ಉದ್ಯಮಿಗಳೂ ವೈಯಕ್ತಿಕವಾಗಿ ತಂತಮ್ಮ ಕಾರ್ಯಗಳನ್ನು ಮಾಡುವವರೂ ಸಾಧಿಸುವ ಪ್ರಗತಿಗೆ ಪೆಚ್ಚಿನ ಜೆಲೆಯುಂಟು. ಆಯಾ ವಿಭಾಗದ ಹೊಗಡೆ ಸರಕಾರವು ಮಾಡಬಹುದಾದ ಕಾರ್ಯಗಳಲ್ಲಿ ಅತ್ಯಧಿಕವೇನೆಂದರೆ, ಜನರ ಉತ್ಸಾಹವನ್ನೂ ಪ್ರಯತ್ನವನ್ನೂ ಹೊಸತನ್ನು ಆರಂಭ ಮಾಡುವ ಜನತಾ ಶಕ್ತಿಯನ್ನೂ ಉದ್ದೀಪನಗೊಳಿಸಲು ಪ್ರಯತ್ನಿಸುವುದು".



ಘಾನಾ ಅಥವಾ ಸುವರ್ಣ ತೀರದ ಠೀವಿಯ ಚಿತ್ರ. ಈ ರಾಷ್ಟ್ರ ಆಫ್ರಿಕದಲ್ಲಿ ಎದ್ದಿದೆ ಎಂಬುದನ್ನು ಬಲ ಭಾಗದ ಕೆಳ ಮೂಲೆಯಲ್ಲಿ ಕಾಣಬಹುದು.

ಈ ದೇಶವು ವಿವಿಧೋದ್ದೇಶದ ಗಣಿಯಂತಿರುವ "ವೋಲ್ಟಾ ಸಂಕಲ್ಪ"ವನ್ನೂ ತಯಾರಿಸಿದೆ. ಇದರಿಂದ ವೋಲ್ಟಾ ನದಿಗೆ ಅಣೆಕಟ್ಟನ್ನು ಕಟ್ಟಿ ಅದರಿಂದ ವಿದ್ಯುಚ್ಛಕ್ತಿಯನ್ನುಂಟು ಮಾಡಲಾಗುವುದು. ಆಗ ಕಡಿಮೆ ಬೆಲೆಯಲ್ಲಿ ವಿದ್ಯುಚ್ಛಕ್ತಿಯು ದೊರಕಿ ಯಂತ್ರೋದ್ಯಮದ ಅಭಿವೃದ್ಧಿಗೂ ಮನೆಮಾರುಗಳ ಉಪಯೋಗಕ್ಕೂ ಸಹಕಾರಿಯಾಗುವುದು. ಇದರ ಜೊತೆಗೆ ಒಂದು ಹೊಸ ಒಂದು ರನ್ನೂ ರೈಲ್ವೆಯನ್ನೂ ಸ್ಥಾಪಿಸಲು ಸನ್ನಾಹವನ್ನು ನಡೆಯುತ್ತಿದೆ. ಹೀಗಾಗಿ ದೇಶದ ಕೈಗಾರಿಕೆಯು ಹೆಚ್ಚುವುದರಲ್ಲಿ ಸಂಶಯವಿಲ್ಲ. ಸಮಾಜ ಕಲ್ಯಾಣಕ್ಕಾಗಿ ಇಷ್ಟಕಲ್ಲಿಯೇ ಕಾರ್ಯಕ್ರಮವು ಜ್ಯಾರಿಗೆಬಂದಿದೆ. ದೇಶದ ಎಲ್ಲೆಡೆಗಳಲ್ಲಿಯೂ ಸಹಕಾರ ಸಂಘದ ಅಂಗಡಿಗಳು ತೆರೆಯಲ್ಪಡುತ್ತಿವೆ; ಒಳ್ಳೆಯ ಮನೆಗಳು ನಿರ್ಮಾಣಗೊಳ್ಳುತ್ತಿವೆ; ವಿದ್ಯಾಭ್ಯಾಸದ ಅನುಕೂಲಗಳೂ ಹೆಚ್ಚುತ್ತಿವೆ ಆಫ್ರಿಕ ಖಂಡದಲ್ಲಿರುವ ಹಲವು ರಾಷ್ಟ್ರಗಳು ಸ್ವಾತಂತ್ರ್ಯಕ್ಕಾಗಿ ಹಾತೊರೆಯುತ್ತಿವೆ. ಭಾರತವು ಸ್ವತಂತ್ರವಾದುದನ್ನು ನೋಡಿ ಅಲ್ಲಿಯ ಜನರಿಗೆ ಆತ್ಮವಿಶ್ವಾಸವೂ ಭವಿಷತ್ತಿನಲ್ಲಿ ಆಸೆಯೂ ಉಂಟಾಗಿವೆ. ಅವರು ಸಾಂಸ್ಕೃತಿಕವಾಗಿ ಭಾರತದತ್ತ ದೃಷ್ಟಿಯನ್ನು ಸರಿಸುತ್ತಾರೆ. ಅವರಿಗೆ ಭಾರತದ ನ್ಯಾಯಕತ್ವದಲ್ಲಿ ತುಂಬ ಭರವಸೆಯಿದೆ. ಅದಂದಲೇ ಯುಗಾಂತರದಲ್ಲಿಯೂ ಮಕ್ಕಳನ್ನು ಉಚ್ಚ ವಿದ್ಯಾಭ್ಯಾಸಕ್ಕಾಗಿ ಭಾರತಕ್ಕೆ ಕಳುಹುವುದೇ ಲೇಸೆಂದು ಅಲ್ಲಿಯ ಆಫ್ರಿಕೀಯರು ಮನಗಂಡಿದ್ದಾರೆ ಈಗ ಆಫ್ರಿಕದ ನಾನಾ ಭಾಗಗಳಿಂದ ಬಂದ ಹಲವು ವಿದ್ಯಾರ್ಥಿಗಳು ನಮ್ಮ ವಿಶ್ವವಿದ್ಯಾಲಯಗಳಲ್ಲಿ ಉತ್ತಮ ವಿದ್ಯಾಭ್ಯಾಸವನ್ನು ಹೊಂದುತ್ತಿದ್ದಾರೆ. ದಿಲ್ಲಿ ವಿಶ್ವವಿದ್ಯಾಲಯದಲ್ಲಿಯೂ, "ಆಫ್ರಿಕೀಯಾಧ್ಯಯನ ಸಂಸ್ಥೆ"ಯೆಂಬ ಒಂದು ಹೊಸ ಶಿಕ್ಷಣವಿಭಾಗವನ್ನು ಕಳೆದ ವರ್ಷ ತೆರೆದಿದ್ದಾರೆ. ನಮ್ಮ ಆಕಾಶವಾಣಿಯಲ್ಲಿಯೂ ಕೂಡ ನಿತ್ಯವೂ 'ಸ್ವಹೀಲಿ' ಭಾಷೆಯಲ್ಲಿ ವಾರ್ತಾ ಪ್ರಸಾರವು ಆಫ್ರಿಕೀಯರನಿಂದಲೇ ನಡೆಯುತ್ತಿದೆ. ಹಲವು ವಿದೇಶೀಯ ವಿದ್ಯಾರ್ಥಿಗಳಿಗೆ ಭಾರತ ಸರಕಾರವು ಸಂಸ್ಕೃತಿ ಸಂಬಂಧ ವಿದ್ಯಾರ್ಥಿ ವೇತನವನ್ನಿತ್ತು ಸಹಾಯಮಾಡುತ್ತಿದೆ. ಭವಿಷ್ಯದ್ಯುಗದಲ್ಲಿ ಆಫ್ರಿಕ ಖಂಡವು ಪ್ರಮುಖ ಸ್ಥಾನವನ್ನು ಎಲ್ಲ ದೃಷ್ಟಿಯಿಂದಲೂ ವಹಿಸುವಂತೆ ತೊರುತ್ತಿದೆ. ಭಾರತಕ್ಕೆ ಅದರ ಸರ್ವಾತ್ಮನಾ ಸಹಕಾರವೂ ಸಹಾನುಭೂತಿಯೂ ಅವಶ್ಯವಾಗಿದೆ. ಈಜಿಪ್ಟ್, ಸುಡಾನ್, ಈಥಿಯೋಪಿಯ ಮೊದಲಾದ ರಾಷ್ಟ್ರಗಳು ಈಗಾಗಲೇ ನಾಕಷ್ಟು ಭಾರತಕ್ಕೆ ಸೌಹಾರ್ದವನ್ನು ತಳೆದಿವೆ. ಆಫ್ರಿಕದಲ್ಲಿ ರಾಷ್ಟ್ರಗಳು ಸ್ವಾತಂತ್ರ್ಯವನ್ನು ಗಳಿಸಿದ ಹಾಗೆ ಭಾರತದ ಬಲವು ಹೆಚ್ಚುವುದೆಂದರೆ ಅತಿಶಯೋಕ್ತಿಯಾಗದು. ಆದರಿಂದ ಸ್ವರ್ಣತೀರ ಅಥವಾ ಘಾನಾ ರಾಷ್ಟ್ರವು ಸ್ವಾತಂತ್ರ್ಯವನ್ನು ಗಳಿಸಿದ ಈ ಸುಮುಹೂರ್ತದಲ್ಲಿ ಭಾರತೀಯರಾದ ನಾವು ಉದಕ್ಕೆ ಮೈತ್ರಿಯನ್ನು ತೋರುವುದಲ್ಲದೆ ಉದರ ಅಭಿವೃದ್ಧಿಯನ್ನು ಕೋರಿ ಒಳ್ಳೆಯ ತುಂಬಿದ ಹೃದಯದಿಂದ ಆಶೀರ್ವಾದವನ್ನು ಕೊಡಬೇಕು.

[ರಾಷ್ಟ್ರಮತ]—ಪ್ರೊ. ಎಂ. ಆರ್. ಭಟ್ಟ

NOTICE

In the Court of the District Munsif of Mangalore

S. E. A. No. 18/57 in
S. C. 623/53

Between:—

The Kaliyanpur Milagres Church by Administrator Rev. D. J. D' Souza —Plaintiff.
—Petitioner.

and

Henry Sequiera and others
—Respondents.

To Respondents 1 to 3.

1. Henry Sequiera, 2. Miss Ethel Sequiera, 3. Marvin Sequiera.
—children of the deceased defendant Gregory David Sequiera.
All residing in Lower Bendoor Mangalore Town.

Whereas the petitioner has filed the above execution petition praying to transfer the decree to the original side of this Court, to proceed against the properties of the deceased in the —hands of the respondents.

You are hereby warned to appear in this Court in person or by a pleader duly instructed on the 29th March 1957 at 11 O'Clock in the fore—noon to show cause against the execution petition—failing wherein the said petition will be heard and determined ex-parte.

(By order of the Court)

B. Ananth Rao,
Advocate for petitioner.

Mangalore 1—3—1957

Statement about ownership and other particulars about Newspaper: **NAVAYUGA.**

FORM IV (Rule 8)

1. *Place of Publicatin*	...	UDIPI
2. *Periodicity of its Publication*	...	WEEKLY
3. *Printers' Name*	...	K. H. SHETTY, Navayuga Press.
Nationality	...	INDIAN
Address	...	Palukote, Udipi (S. K.)
4. *Publishers' Name*	...	K. H. SHETTY
Nationality	...	INDIAN
Address	...	Palukote, Udipi (S. K.)
5. *Editors' Name*	...	K. H. SHETTY
Nationality	...	INDIAN
Address	...	Palukote, Udipi (S. K.)
6. *Names and addresses of individuals who own the newspaper and partners or shareholders holding more than one per cent of the total capital.*		K. H. SHETTY, Palukote, Udipi (S. K.)

I, K. H. Shetty, hereby declare that the particulars given above are true to the best of my knowledge and belief.

(Sd.) **K. H. SHETTY**

Date: 7—3—1957. *Signature of Publisher.*

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತವಿಮತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ಥಾನಿಕರು: **ಷಾ ಕಂಪೆನಿ, ಮಂಗಳೂರು—1.**

ಪಾಠೇತರ ಚಟುವಟಿಕೆ

(೨ನೇ ಪುಟದಿಂದ)

ಳನ್ನು ಕಲಿಸುವುದಕ್ಕೂ ನಟನೆ, ಸಾಮೂಹಿಕ ಕೆಲಸ, ಶಿಸ್ತಿನ ಚಟುವಟಿಕೆಗಳು ಹೆಚ್ಚು ಫಲಕಾರಿಯಾಗಿವೆ.

ಇತ್ತೀಚೆಗೆ ನಮ್ಮ ವಿದ್ಯಾಕ್ಷೇತ್ರದಲ್ಲಾದ ಬದಲಾವಣೆಯ ಕಡೆಗೂಮ್ಮೆ ನೋಟವನ್ನು ಹರಿಯಿಸಿದರೆ ಇದರ ಮಹತ್ವದ ಅರಿವಾಗದಿರದು. ನಮ್ಮ ವಿದ್ಯಾತಜ್ಞರು ಮಕ್ಕಳನ್ನು ಯೋಗ್ಯ ನಾಗರಿಕರನ್ನಾಗಿ ಮಾಡಲುದ್ಯುಕ್ತರಾಗಿ ಸಿರೂಪಿಸಿದ ವಿದ್ಯಾಕ್ರಮಗಳೆಲ್ಲವೂ ಇದೇ ನಿಜುವನ್ನು ಆವರ್ತಿಸಿವೆ. ಶಾಲೆಗಳಲ್ಲಿ ಕಲಿಸಲ್ಪಡುತ್ತಿರುವ ಸಾಮಾಜಿಕ ಅಧ್ಯಯನವೆಂಬ ವಿಷಯದ ಅನುಭಾಗಗಳಾದ ನಾಗರಿಕತನ ತರಬೇತಿ ಅಥವಾ ಪೌರತನ ಶಿಕ್ಷಣ ಕ್ರಮಗಳೂ ಇದನ್ನೇ ಅನುಸರಿಸಿವೆ. ಸೂಜ್ಯ ಬಾಪೂಜಿಯವರಿಂದ ಸಿರೂಪಿಸಲ್ಪಟ್ಟ ಬುನಾದಿ ವಿದ್ಯಾಪದ್ಧತಿಯು ಇದನ್ನೆ ಕೇಂದ್ರವಾಗಿರಿಸಿದೆ. ಅಮೇರಿಕದಂತಹ ಮುಂದರಿದ ರಾಷ್ಟ್ರದ ವಿದ್ಯಾತಜ್ಞರು ಬಂದು ನಮ್ಮ ದೇಶದ ವಿದ್ಯಾಜೋಧಕರಿಗೆ ಕೊಟ್ಟ ತಾತ್ಕಾಲಿಕ ತರಬೇತಿಯಾದ 'Work shop Method' ಎಂಬ ಪದ್ಧತಿಯೂ ಇದೇ ಆಗಿದೆ. Learning by doing ಮತ್ತು 'Learning for living' ಎಂಬ ಕ್ರಮಗಳೆಲ್ಲವೂ ಮಕ್ಕಳನ್ನು ಕೆಲಸದ ಮೂಲಾಂತರ ವಿಷಯ ಸಂಗ್ರಹಕ್ಕೆ ಮುಂದೂಡುತ್ತದೆ.

ಮಗುವು ಕೆಲಸದಿಂದ ಅಂದರೆ ಇಂದ್ರಿಯಗಳೆಲ್ಲವುಗಳ ಅನುಭವನದಿಂದ ಕಲಿತ ಯಾವುದೇ ವಿಷಯವು ಸ್ಥಿರ ಹಾಗೂ ಉತ್ತಮ ಫಲದಾಯಕವೆಂಬುದನ್ನು ಮನಃಶಾಸ್ತ್ರಜ್ಞರ ಪರಿಶೀಲನೆಯಿಂದ ತಿಳಿದಿರುತ್ತೇವೆ. ಪ್ರಕೃತ ನಾವು ಎಲ್ಲ ವಿಷಯಗಳನ್ನೂ ಚಟುವಟಿಕೆಗಳಿಂದಲೇ ಕಲಿಸಲು ಸಾಧ್ಯವಿಲ್ಲದ ದರಿಂದಲೂ ಆದಕ್ಕೆ ಬೇಕಾದ ಏರ್ಪಾಡು ನಮ್ಮಲ್ಲಿ ಒಗಡಿ ಬರಲಿಲ್ಲವಾದುದರಿಂದಲೂ ಪಾಠೇತರ ಚಟುವಟಿಕೆಯಿಂದಲಾದರೂ ನಮ್ಮ ಯಂತ್ರಕ್ಕೆ ತುಕ್ಕು ಹಿಡಿಯದಂತೆ ಗ್ಲಿಸರಿನ್ ಸವರಬಹುದು, ಆಗಿಂದಾಗ ತಕ್ಕ ಸಂದರ್ಭಗಳನ್ನು ಏರ್ಪಡಿಸಿಕೊಂಡು ಮಕ್ಕಳಲ್ಲಿ ಆಡಗಿರುವ ಸಹಜವಾದ ಪ್ರವೃತ್ತಿಗಳನ್ನು ಕಿಡ್ದಿಕೊಂಡು, ಅವರನ್ನೇ ಮುಂದೆ ತಂದು ಅವರಿಂದಲೇ ಹಲವಾರು ಕಾರ್ಯಕಲಾಪಗಳನ್ನು ಮಾಡಿಸಲು ಸಾಧ್ಯವಿದೆ. 'ಸ್ಕೌಟ್', 'ರೆಡ್ ಕ್ರಾಸ್', 'ಸಮಾಜ ಸೇವಾ ಸಂಘ', 'A. C. C.'ಯೇ ಮೊದಲಾದ ಗುಂಪಿನ ತರಬೇತಿಗಳೂ ತಿಂಗಳಹಬ್ಬ, ಯಾವುದೇ ದಿನಾಚರಣೆಗಳು, ವರ್ಧಂತ್ಯುತ್ಸವ—ಇವುಗಳೆಲ್ಲವೂ ಮಕ್ಕಳಲ್ಲಿ ಸಹಜವಾದ ಉತ್ಸಾಹವನ್ನು ತುಂಬಿ, ತುಂಬಿದ ಚಟುವಟಿಕೆಯಿಂದ ಕೆಲಸ ಮಾಡುವಂತೆ ನೂಡುತ್ತವೆ. ಇದರಿಂದಲೇ ಮಕ್ಕಳಿಗೆ ಯೋಗ್ಯವಾದ ಶಿಸ್ತಿನ ತರಬೇತಿಯನ್ನು ಕೊಡಬಹುದು. ಮಕ್ಕಳ ಸರಕಾರವು ಪ್ರಚಲಿತ ವಾತಾವರಣದಲ್ಲಿ ಒಂದು ಯೋಗ್ಯ ಕ್ರಮವಾಗಿದೆ. ಇಂದಿನ ಮಕ್ಕಳಿಗೆ ನಮ್ಮ ರಾಜ್ಯಾಡಳಿತ ಕ್ರಮವನ್ನು ಈಗಿದೀಗಲೇ ತರಬೇತಿಕೊಟ್ಟು ಅವರಲ್ಲಿ ಹಕ್ಕು ಮತ್ತು ಬಾಧ್ಯತೆಗಳ ಅರಿವನ್ನುಂಟು ಮಾಡಿ ಯೋಗ್ಯ ನಾಗರಿಕರನ್ನಾಗಿ ಮಾಡಲು ಇದು ತುಂಬಾ ಸಹಾಯಕ.

ಭಾರತವು ಟೀ, ಸೆಣಬು, ಕಾಫಿ ಮತ್ತು ತಂಬಾಕುಗಳಂತಹ ನಗದು ಬೆಳೆಗಳ ಉತ್ಪಾದನೆಯಲ್ಲಿ ವಿಶ್ವದಲ್ಲಿ ಉನ್ನತ ಸ್ಥಾನಗಳಿಸಿದೆ.

ಈ ಬೆಳೆಗಳು ಭಾರತೀಯ ಆರ್ಥಿಕ ವ್ಯವಸ್ಥೆಯಲ್ಲಿ ಮಹತ್ವ ಸೂರಿತವಾಗಿವೆ. ದೇಶದೊಳಗಿನ ಬಳಕೆ ಹಾಗೂ ಅಗತ್ಯವಾದ ವಿದೇಶೀ ಧನ-ವಿನಿಮಯದ ಗಳಿಕೆಗಳ ವಿಚಾರದಲ್ಲಿ ಈ ಬೆಳೆಗಳು ಗಣನೀಯವಾದ ಸ್ಥಾನವಹಿಸಿವೆ.

ದ್ವಿತೀಯ ಯೋಜನಾವಧಿಯಲ್ಲಿ 6000 ಕೋಟಿ ರೂಪಾಯಿಗಳ ಬೆಲೆಯನ್ನು ರಫ್ತು ಮಾಡುವ ಗುರಿಯನ್ನು ಹೊಂದಲಾಗಿದೆ. ವಿದೇಶೀ ಧನ-ವಿನಿಮಯಗಳಿಸುವ ಉಳಿದ ಬೆಳೆಗಳಿಂದರೆ ಕಾಫಿ ಮತ್ತು ತಂಬಾಕು. ಈ ಎರಡು ಬೆಳೆಗಳ ಬಗ್ಗೆ ವಿಶಾದಾಯಕವಾದ ಅಭಿವೃದ್ಧಿ ಕಾರ್ಯಕ್ರಮ ರಿರುವುದು. ತಂಬಾಕು ಸಂಬಂಧವಾದ ಸಂಶೋಧನಾ ಕಾರ್ಯವನ್ನು ನೃದ್ಧಿಸುವುದಕ್ಕಾಗಿ ಹಾಗೂ ದೇಶದಲ್ಲಿ ತಂಬಾಕನ್ನು ಬೆಳೆಯುವ ಪ್ರದೇಶಗಳಲ್ಲಿ ಅತಿ ಮುಖ್ಯವಾದ ಆಂಧ್ರ ಪ್ರದೇಶದ ಗುಂಟೂರು ಜಿಲ್ಲೆಯಲ್ಲಿ ತಂಬಾಕು ವಿಸ್ತರಣಾ ಸೇವೆಯನ್ನು ವ್ಯವಸ್ಥೆಗೊಳಿಸುವುದಕ್ಕಾಗಿ 31 ಲಕ್ಷ ರೂಗಳ ಹಣವನ್ನು ಒದಗಿಸಲಾಗಿದೆ.

ಕಾಫಿಪಲ್ಯಗಳು ವಿದೇಶೀ ಧನ ವಿನಿಮಯವನ್ನು ಗಳಿಸುವುದಿಲ್ಲವಾದಾಗ್ಯೂ ದೇಶದೊಳಗಿನ ಬಳಕೆಗೆ ಅತ್ಯಗತ್ಯ ವಸ್ತುಗಳಾಗಿವೆ. ಇವು ನಮ್ಮ ಬೇಸಾಯಗಾರರಿಗೆ ಲಾಭದಾಯಕವಾದ ವಸ್ತುಗಳಾಗಿವೆ. ಹಣ್ಣುಗಳು ಮತ್ತು ತರಕಾರಿಯ ಉತ್ಪಾದನೆಯನ್ನು ಉತ್ತೇಜಿಸುವ ಸಂಬಂಧ ಬ್ರಿಟಿಷ್ ಕಾರ್ಯಕ್ರಮದಲ್ಲಿ ಅನೇಕ ಯೋಜನೆಗಳಿವೆ. ಹೊಸ ಹಣ್ಣು ತೋಟಗಳು ಮತ್ತು ಬೀಜದ ನರ್ಸರಿಗಳನ್ನು ಸ್ಥಾಪಿಸುವುದು, ಸಾಲದ ಮೇಲೆ ತರಕಾರಿ ಬೆಳೆಯುವವರಿಗೆ ಬೀಜಗಳು ಮತ್ತು ಸಸಿಗಳನ್ನು ಒದಗಿಸುವುದು, ಹಣ್ಣು ಮತ್ತು ತರಕಾರಿ ಬೆಳೆಗಾರರಿಗಾಗಿ ಮಾರಾಟ ಸಹಕಾರ ಸಂಘಗಳನ್ನು ಏರ್ಪಡಿಸುವುದು ಮುಂತಾದ ವಿಷಯಗಳ ಬಗ್ಗೆ ಈ ಯೋಜನೆಗಳನ್ನು ಸಿದ್ಧಗೊಳಿಸಲಾಗಿದೆ.

ಪ್ರಥಮ ಯೋಜನೆಯಲ್ಲಿ ಹತ್ತಿ ಉತ್ಪಾದನೆ ಬಗ್ಗೆ ಹೊಂದಿದ್ದ ಗುರಿಯನ್ನು 1954-55ರಲ್ಲಿಯೇ ಮೀರಲಾಯಿತು. 1954-55ರಲ್ಲಿ 4298 ಲಕ್ಷ ಬೇಲುಗಳ ಹತ್ತಿ ಉತ್ಪಾದನೆಯಾಗಿದೆ. ಈ ಅಧಿಕ ಉತ್ಪಾದನೆಯಿಂದ ಹತ್ತಿ ವಸ್ತ್ರದ ಉತ್ಪನ್ನಕ್ಕೆ ಅತ್ಯಗತ್ಯವಾದ ಉತ್ತೇಜನ ದೊರೆತಂತಾಯಿತು.

ಹತ್ತಿ ನಸ್ತ್ರದ ಉದ್ಯಮನು ನಂತರ ಸೆಣಬಿನ ಉದ್ಯಮವು ಪ್ರಾಮುಖ್ಯ ಗಳಿಸಿದೆ. ವೃದ್ಧಿಸುತ್ತಿರುವ ಈ ಉದ್ಯಮದ ಅಗತ್ಯಗಳನ್ನು ಪೂರೈಸುವುದಕ್ಕಾಗಿ ದ್ವಿತೀಯ ಯೋಜನೆಯಲ್ಲಿ 10 ಲಕ್ಷ ಬೇಲುಗಳ ಸೆಣಬನ್ನು ಉತ್ಪಾದಿಸಬೇಕೆಂಬ ಗುರಿಯನ್ನು ಹೊಂದಲಾಗಿದೆ.

ಚಿತ್ರ 1 ತರಕಾರಿ ಬೆಳೆಗಾರನೊಬ್ಬನು ತಾನು ಬೆಳೆದ ಕಾಯಿಪಲ್ಲೆಯನ್ನು ಹೆಸ್ಕೊಯಿಂದ ಮಾರುಕಟ್ಟೆಗೆ ಒಯ್ಯುತ್ತಿರುವುದನ್ನು ಮೊದಲ ನೆಯ ಚಿತ್ರವು ತೋರಿಸುವುದು.

ಚಿತ್ರ 2 ಕೊಯ್ಲಿಗೆ ಬಂದಿರುವ ಸೆಣಬಿನ ಬೆಳೆಯನ್ನು ಎರಡನೆಯ ಚಿತ್ರದಲ್ಲಿ ಕಾಣಬಹುದು.

ಚಿತ್ರ 3 ಟೀ ತೋಟದ ದೃಶ್ಯವೊಂದನ್ನು ನೂರನೆಯ ಚಿತ್ರವು ತೋರಿಸುವುದು.

ಚಿತ್ರ 4 ಕಾಫಿ ತೋಟದಲ್ಲಿ ಮಹಿಳೆಯರು ಕಾಫಿ ಗಿಡಗಳಿಂದ ಹಣ್ಣನ್ನು ಕೀಳುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಇಷ್ಟುಮಾತ್ರವಲ್ಲದೆ ಶಾಲೆಯು ಯಾವಾಗಲೂ ಸಮಾಜದ ಒಂದು ಕೇಂದ್ರವಾಗಿರಬೇಕು. ಹೀಗಾಗಬೇಕಾದರೆ ಊರವರೂ, ಹೆತ್ತವರೂ ಆಗಿಂದಾಗ್ಗೆ ವಿಶೇಷ ಸಂದರ್ಭಗಳಲ್ಲಿ ಬಂದು ಸೇರುವ ಸಂದರ್ಭಗಳು ಒದಗಬೇಕು. ಸುಮ್ಮನೆ ಬಂದು ಸೇರುವ ಅಸಕ್ತಿ ಹೆತ್ತವರಿಗಿರಲಾರದು. ಯಾವುದೇ ಚಟುವಟಿಕೆಗಳಿದ್ದರೆ ಅವರು ಸುಲಭದಲ್ಲಿ ಬಂದು ಸಂತೋಷದಿಂದ ಭಾಗವಹಿಸಿ ಶಾಲೆಯ ಸರ್ವ ಏಳಿಗೆಯ ಕಡೆಗೆ ಸಹಕರಿಸುವ ಮನಸ್ಸಾಗುವುದು.

ಹೇಗಾದರೂ ವಿದ್ಯಾಕ್ಷೇತ್ರದಲ್ಲಿ ಅಧ್ಯಾಪಕನ ಉದ್ದೇಶ ಸಫಲವಾಗಬೇಕಾದರೆ, ಮುಂದಿನ ಜನಾಂಗವನ್ನು ಉಜ್ವಲ ನಾಗರಿಕರನ್ನಾಗಿ ಮಾಡಿ ಸಮಾಜ ಕಲ್ಯಾಣವನ್ನೆಸಗಬೇಕಾದರೆ ಮಕ್ಕಳ ಸುನಃಪ್ರೇರಣೆಗಳಾದ ಚಟುವಟಿಕೆಗಳಿಂದ ಪಾಠಕ್ರಮವನ್ನು ಅಳವಡಿಸಿ ಕೊಂಡರೇನೇ ಸಾಧ್ಯ-ಯೋಗ್ಯ.

—ಡೀ ಬಿ. ಸುಂದರ ಶೆಟ್ಟಿ.

ಹೀಗಿದೆ ಚುನಾವಣೆ!

(ನಿನ್ನೆ ಮುಂದುವರಿದಿದೆ)

ಗಿಸಿಕೊಂಡಿದ್ದಾರೆ. ಕಮ್ಯುನಿಸ್ಟರು ಉಡುಪಿಯ ಮಟ್ಟಿಗೆ ಮುನಿಸಿಪಾಲಿಟಿಯ ಕ್ಷೇತ್ರದ ಹೊರಗೆ ಯಾವ ಚಟುವಟಿಕೆಯನ್ನೂ ಇಷ್ಟರವರೆಗೆ ತೋರಿಸಿದವರಲ್ಲ. ಹೊರಗಿನ ಯಾವುದೇ ದೊಡ್ಡ ಸಭೆಯಲ್ಲಿ ಅವರ ಮುಖಂಡರು ಭಾಷಣವನ್ನು ಮಾಡಿದ್ದು ಇಲ್ಲ. ಹೀಗಾಗಿ ಮುನಿಸಿಪಾಲಿಟಿಯ ಹೊರಗೆ ಕಮ್ಯುನಿಸ್ಟರ ಪ್ರಚಾರವೇ ಇಲ್ಲ. ಈ ಕಾರಣದಿಂದಾಗಿಯೇ ಜನರಿಗೆ ಕಮ್ಯುನಿಸ್ಟರ ಪರಿಚಯವೂ ಆಗಿಲ್ಲ. ಉಡುಪಿ ಮುನಿಸಿಪಾಲಿಟಿಯ ಹೊರಗೆ ಎನೇನೂ ಸಂಪರ್ಕ ಇಲ್ಲದ ದೆಸೆಯಿಂದಲೇ ಕಮ್ಯುನಿಸ್ಟರು ತಮ್ಮ ಪಕ್ಷದ ಪರವಾಗಿ ಶ್ರದ್ಧೆಯಿಂದ ಉಡುಪಿ ಮತದಾರ ಕ್ಷೇತ್ರದಿಂದ ಯಾರನ್ನೂ ನೇಮಿಸಲಿಲ್ಲ. ಇದು ಎಲ್ಲರ ಅನುಭವಕ್ಕೆ ಬಂದಿರುವ ಸತ್ಯಸಂಗತಿ ಈಗ ಚುನಾವಣೆಯಲ್ಲಿ ಗೆದ್ದುಬರಲಿಕ್ಕಾಗಿ ಪ್ರಜಾಸೋಶಲಿಸ್ಟರು ಕಮ್ಯುನಿಸ್ಟರ ಸಹಾಯವನ್ನು ಯಾಚಿಸಿದ ಬಳಿಕ, ಕಮ್ಯುನಿಸ್ಟರಿಗೆ ಎರಡು ರೆಕ್ಕೆಗಳು ಬಂದಂತಾಗಿದೆ. ಏಕೆಂದರೆ ಈಗ ತಮ್ಮ ತುಳುಭಾಷಣವನ್ನು ಕಮ್ಯುನಿಸ್ಟರ ಘರ್ಜನೆರು ಮುನಿಸಿಪಾಲಿಟಿಯ ಹೊರಗೆ (ಉದಾಹರಣೆಗಾಗಿ ಪರ್ಕಳದಲ್ಲಿ) ಏರ್ಪಡಿಸಿದ ಸಭೆಗಳಲ್ಲೂ ಬಿಗಿಯಬಹುದಾಗಿದೆ. ಹಾಗೆ ತಮ್ಮ ಪಕ್ಷದ ಪ್ರಚಾರವನ್ನು ಪ್ರಜಾ ಸೋಶಲಿಸ್ಟರಿಗೆ ಬೆಂಬಲ ಕೋರುವ ನೆಪದಿಂದ ಮಾಡಬಹುದಾಗಿದೆ. ವಿಪರೀತ ಬುದ್ಧಿಯಿಂದ ವಿಚಾರ ಹೀನರಾದ ಪ್ರಜಾ ಸೋಶಲಿಸ್ಟರು ಈ ಸೌಕರ್ಯವನ್ನು ಗ್ರಹಿಸದಂತಿಲ್ಲ. ಆದರೆ ಕಮ್ಯುನಿಸ್ಟರಿಂದೂ ನಮ್ಮ ಪಕ್ಷದ ಪ್ರಚಾರಕ್ಕೆ ಬಹಳ ಜಿನ್ನಾಗಿಯೇ ನಡೆಯಲು ಸಾಧ್ಯವಾಯಿತೆಂಬ ತೃಪ್ತಿಯನ್ನು ವ್ಯಕ್ತ ಪಡಿಸುತ್ತಿದ್ದಾರೆಂದರೆ ತಪ್ಪಲ್ಲ. ಮೂಡಿದ ಉಳುಮೆ ಕೆಲಸವು ಮುಂದಿನ ಚುನಾವಣೆಯ ಹೊತ್ತಿಗೆ ಬೀಜವನ್ನು ಬಿತ್ತಲು ಹದವಾದ ಕ್ಷೇತ್ರವನ್ನು ಸಿದ್ಧಪಡಿಸಬಹುದೆಂದು ಕಮ್ಯುನಿಸ್ಟರ ವಿಶ್ವಾಸ. ಅಂದರೆ, ಆಗ ಉಡುಪಿ ಮತದಾರ ಕ್ಷೇತ್ರದಿಂದ ಕಮ್ಯುನಿಸ್ಟರಲ್ಲದೆಯೇ ಒಬ್ಬನನ್ನು ಸ್ಪರ್ಧೆಗೆ ನಿಲ್ಲಿಸುವ ಧೈರ್ಯ ಆ ಪಕ್ಷಕ್ಕೆ ಬರುತ್ತದೆ. ಆಗ ಈ ಬಡ ಪ್ರಜಾ ಸೋಶಲಿಸ್ಟರೇನು ಮಾಡುವರು? ಈಗ ಪಡೆದ ಋಣವನ್ನು ಸಂತಾಯ ಮಾಡುವುದರಿಂದಲೇ ಅವರಿಗೆ ತೃಪ್ತಿಯಾದೀತೆ? ತಾವೇ ಕೊಬ್ಬಿಸಿದ ಗಾಳ್ಪಸನ ವಿರುದ್ಧ ಹೋರಾಟ ಕೂಡುವ ಶಕ್ತಿ ಪ್ರಜಾಸೋಶಲಿಸ್ಟರಲ್ಲಿ ಆಗಲೂ ಉಳಿದೀತೆ? ಕಮ್ಯುನಿಸ್ಟರ ತಂತ್ರಗಳನ್ನು ಬಲ್ಲವರಿಗೆ ಪ್ರಜಾಸೋಶಲಿಸ್ಟರ ವಿನಃಶದ ಚಿತ್ರವೇ ದೃಗ್ಗೋಚರವಾಗುತ್ತದಲ್ಲದೆ, ಬೇರೆಯಲ್ಲ.

ಮೇಲಿನೆಲ್ಲ ವಿಷಯಗಳನ್ನು ಪ್ರಜಾಸೋಶಲಿಸ್ಟರೇ ಆಲೋಚಿಸಬೇಕಾಗಿದ್ದರೂ ಅವರೂ ಅವರ ಮುಖಂಡರೂ ಕೆಲವಷ್ಟಕ್ಕೆ ತಪ್ಪು ದಾರಿಯನ್ನು ತುಳಿದು ನಡೆದಾಗಿರುವುದರಿಂದ ಮತದಾರರಾದ ನಾವೂ ತಮ್ಮಲ್ಲಿ ಆಲೋಚಿಸಿಕೊಂಡು ಯೋಗ್ಯ ರೀತಿಯಲ್ಲಿ ವರ್ತಿಸಬೇಕೆಂಬ ಸದಾಶಯದಿಂದ ನಾವು ಈ ಲೇಖನವನ್ನು ಬರೆದಿದ್ದೇವೆ. ಪ್ರತಿಪಕ್ಷಗಳ ಬೆಳವಣಿಗೆಯಾಗಬೇಕು ಎಂಬ ಆಶಯವೂ ಎಷ್ಟೇ ಪವಿತ್ರವಾಗಿದ್ದರೂ— ಅದು ಎಷ್ಟೇ ಮಹತ್ವದಿಂದ ಕೂಡಿದ್ದರೂ— ನಮ್ಮ ಕಣ್ಣಮುಂದೆ ಪ್ರಜಾ ಸೋಶಲಿಸ್ಟರು ಅನುಸರಿಸುತ್ತಿರುವ ನೀತಿಯು ಎಷ್ಟು ಮಾತ್ರಕ್ಕೂ ಮೆಚ್ಚುವಂಥದಲ್ಲ ಎಂಬ ವಿಷಯ ಕಣ್ಣಿಗೆ ಕಟ್ಟುವಂತಿದೆ. ನಿಮ್ಮ ಓಟು ಪ್ರಜಾಸೋಶಲಿಸ್ಟರಿಗೆ ಕೊಡಿರಿ ನಮಗೆ ಜಿಂದಾಬಾದಿನಿಂದಲೇ ತೃಪ್ತಿ ಎನ್ನುವ ಕಮ್ಯುನಿಸ್ಟರ ಮಾತಿನಲ್ಲಿ ಅಡಗಿರುವ ಸುಳ್ಳನ್ನು ಸೂಕ್ಷ್ಮ ವಿಮರ್ಶೆಯು ಕಂಡುಕೊಂಡಿರುತ್ತದೆ. ಆದುದರಿಂದ ಮತದಾರರು ಕಾಂಗ್ರೆಸಿಗೆ ಬೆಂಬಲವಿತ್ತು ಪ್ರೋತ್ಸಾಹಿಸುವುದೊಂದೇ ಸೂಕ್ತವಾದ ಮಾರ್ಗ. ಕಾಂಗ್ರೆಸಿಗೆ ಹೇಗೆ ಮತ ಕೊಡಲಿ ಎನ್ನುವ ಪ್ರಶ್ನೆ ದ್ಧಾಂತ ಪ್ರಜಾ ಸೋಶಲಿಸ್ಟರು ತಾನು ಕಮ್ಯುನಿಸ್ಟರ ಕೈಗಳನ್ನು ಬಲಪಡಿಸುತ್ತಿರುವುದು ಸರಿಯೇ ಎಂದಾದರೂ ಆಲೋಚಿಸಲಿ! ಆಗ ಆತನಿಗೆ ತಟಸ್ಥನಾಗಿ ಉಳಿಯುವುದೇ ಲೇಸೆಂದು ತೋರಿತು. ಮತದಾನದ ಸವಲತ್ತಾವನ್ನು ಕಲ್ಪಿಸಿಕೊಡದೆ, ಚುನಾವಣೆಯ ಜವಾಬ್ದಾರಿಯನ್ನು ಕೆಡಿಸಿವ್ಯಕ್ತಿಗೆ ತನ್ನ ಪಕ್ಷವನ್ನೆ ಆಕ್ಷೇಪಿಸುವ ಪ್ರಸಂಗ ಇಂದು ಬಂದಿರುವುದೂ ಆತನಿಗೆ ತಿಳಿದೀತು. ಇಂಥ ಪಕ್ಷವನ್ನು ನಂಬಿಕೊಂಡುದಕ್ಕೆ ಆತನು ಪಶ್ಚಾತ್ತಾಪ ಪಡಲೂಬಹುದು. ಇದೇ ಪ್ರತಿಪಕ್ಷಗಳ ಬೆಳೆದು ಬಂದಿಲ್ಲವೆನ್ನುವುದರ ಗುಟ್ಟು

ನೀವು ಮತ್ತು ಕಾನೂನು

ಊಟಮಾಡಿದನಂತರ, ಹಣ ಕೊಡಲು ಕಾಸಿಲ್ಲದಾಗ

. ಈ ಬರಹದಿಂದ ಜನರು ಕಾನೂನಿನ ಜ್ಞಾನವನ್ನು ಪಡೆಯಲಿಚ್ಛಿಸಬೇಕೇ ವಿನಹ ಇಷ್ಟನ್ನು ತಿಳಿದು, ಅದನ್ನು ಜಲಾಯಿಸಿ ಪಡೆಯಬಹುದಾದ ಅನೈತಿಕ ಪ್ರಾಗೂ ಅಲ್ಪ ಲಾಭಕ್ಕಾಗಿ ಜನರು ಇಚ್ಛಿಸುವುದಿಲ್ಲವೆಂದು ನಂಬಿ ನಾನು ಈ ಬರಹವನ್ನು ಬರೆಯುತ್ತಿದ್ದೇನೆ.

ಊಟವನಾಡಿಲೋಕ್ಕುಗ ನೀವು ಹೋಟೆಲೊಂದನ್ನು ಹೊಕ್ಕು, ಊಟವನ್ನು ಬಡಿಸಲು ಹೇಳುವಿರಿ. ನಿಮ್ಮ ಟೊಪ್ಪಿಯನ್ನು ನೀವು ಬದಿಯಲ್ಲಿಯೇ ಇರುವ ಸ್ಟೇಂಡ್ ಒಂದಕ್ಕೆ ತೂಗು ಹಾಕುವಿರಿ. ಮತ್ತು ಕೊಡೆಯನ್ನು ಗೋಡೆಯ ಬದಿಗೆ ಒರಗಿಸಿ ಇಡುವಿರಿ.

ಊಟದ ಹಣ ಕೊಡಲು ಕಾಸಿಲ್ಲ!-ನಿಮ್ಮ ಊಟದ ನಂತರ ಸೇವಕನು ನಿಮ್ಮ ಮುಂದೆ ಬಿಲ್ಲನ್ನು ನೀಡುತ್ತಾನೆ- ಆದರೆ ಕಿಸೆಗೆ ಕೈಹಾಕಿ ನೋಡಿದಾಗ ಕಾಸಿಲ್ಲದಿರುವುದನ್ನು ನೋಡಿ ನಿಮಗೆ ಆಶ್ಚರ್ಯವಾಗುತ್ತದೆ. ನಿಮ್ಮ ಪಾಕೇಟಿನಲ್ಲಿ ನೀವು ಮನೆಯಲ್ಲೋ, ಆಫೀಸಿನಲ್ಲೋ ಮರೆತು ಬಂದಿರಬಹುದೆನ್ನಿ. ಈಗ ನಿಮ್ಮನ್ನು ಹೊರಗೆಹೋಗಲು ಬಿಡದಿರುವ ಅಧಿಕಾರ ಹೊಟೇಲಿನ ಮಾಲೀಕನಿಗೆ ಇದೆಯೇ? ಇಲ್ಲ. "ದುಡ್ಡು ಕೊಟ್ಟು ಹೋಗು, ಇಲ್ಲದಿದ್ದಲ್ಲಿ ಹೋಗಲು ಸಾಧ್ಯವಿಲ್ಲವೆನ್ನುವ ಅಧಿಕಾರ ಆತನಿಗಿಲ್ಲ. ಯಾಕೆಂದರೆ, ನಿಮ್ಮನ್ನು ಆತ ತಡೆದಲ್ಲಿ ಕಾನೂನಿನ ಪ್ರಕಾರ, ನಿಮ್ಮನ್ನು ನ್ಯಾಯಬಾಹಿರವಾಗಿ ಬಂಧಿಸಿದ ಅಪರಾಧಕ್ಕೆ ಗುರಿಯಾಗುತ್ತಾನೆ. ನೀವು ಹೊರಟಾಗ ನಿಮ್ಮ ಟೋಪಿಯನ್ನು ಹಿಡಿದು ಆತ ನಿಲ್ಲಿಸಲಾರ, ಯಾಕೆಂದರೆ ಅವನು ಹಾಗೆ ಮಾಡಿದಲ್ಲಿ ಕಾನೂನಿನ ಪ್ರಕಾರ ನಿಮ್ಮ ಮೇಲೆ ಹಲ್ಲೆ (criminal assault) ಮಾಡಿದ ಅಪರಾಧಿಯಾಗುತ್ತಾನೆ. ಬೇರೆಯವರ ಎದುರಿಗೆ ನಿಮಗೆ ಹೀನವಾದ ಮಾತುಗಳನ್ನಾಡಿ ನಿಮಗೆ ಅವಮಾನ ಮಾಡಿದಲ್ಲಿ ಆತ ಮಾನನಷ್ಟದ ಅಪರಾಧಕ್ಕೆ ಗುರಿಯಾಗುತ್ತಾನೆ. ನಿಮ್ಮನ್ನು ಬೇರೆಯವರ ಎದುರಿಗೆ ಅವಮಾನಪಡಿಸುವ ಹಕ್ಕು ಆತನಿಗಿಲ್ಲ.

ಜವಾಬ್ದಾರಿಗಾಗಿ ಸೊತ್ತನ್ನು ಇಟ್ಟುಕೊಳ್ಳುವ ಹಕ್ಕು ಆತನಿಗಿದೆಯೇ?:—ನೀವು ಹಣಕೊಡದೆ ಇನ್ನದ್ದಕ್ಕಾಗಿ ನಿಮ್ಮ ಕೈಗಡಿಯಾರವನ್ನಾಗಲೀ, ಗೋಡೆಗೆ ತಾಗಿಸಿಟ್ಟ ಕೊಡೆಯನ್ನಾಗಿಲೀ, ಸ್ಟೇಂಡ್‌ನಲ್ಲಿಟ್ಟ ಟೋಪಿಯನ್ನಾಗಲೀ, ಭದ್ರತೆಗಾಗಿ ಇಟ್ಟುಕೊಳ್ಳುವ ಹಕ್ಕು ಮೂಲಕನಿಗಿದೆಯೇ? ಇಲ್ಲ. ಜೀವನಕ್ಕೆ ಆ ವಸ್ತುಗಳ ಮೇಲೆ ನ್ಯಾಯವಾದ ಹಕ್ಕು ಸ್ಥಾಪನೆಯಾಡುವ ಅಧಿಕಾರ ಇಲ್ಲದಕಾರಣ ಆತನು ಹಾಗೆಮಾಡಲು ಸಾಧ್ಯವಿಲ್ಲ. ಇದಕ್ಕಾಗಿ ಪೋಲಿಸರನ್ನು ಕರೆದು ನಿಮ್ಮನ್ನು ಬಂಧಿಸುವ ಅಧಿಕಾರ ಆತನಿಗಿಲ್ಲ. ಇದು ಸಿವಿಲ್‌ನ ವಿಷಯ. ಕ್ರಿಮಿನಲ್ ವಿಷಯವಲ್ಲ. ಆದುದರಿಂದ ಪೋಲೀಸರು ಈ ವಿಷಯದಲ್ಲಿ ಕೈ ಹಾಕಲಾರರು. ಇದಿರಲಿ, ನೀವು ಕೊಡಬೇಕಾದ ಹಣಕ್ಕಾಗಿ ನಿಮ್ಮಿಂದ ಡಿಮಾಂಡ್ ನೋಟು ಬರೆಯಿಸಿಕೊಳ್ಳುವ ಅಧಿಕಾರ ವಿದೆಯೇ? ಇಲ್ಲ.

ಒಂದುವೇಳೆ ನೀವಾಗಿ, ಭವ್ಯತೆಗಾಗಿ ನಿಮ್ಮ ಕೊಡೆಯನ್ನು ಆಥವಾ ಕೈ ಗಡಿಯಾರವನ್ನು ಗೋಲೀಕನಿಗೆ ಕೊಟ್ಟಲ್ಲಿ ಆತ ಅದನ್ನು ಸ್ವೀಕರಿಸಬಲ್ಲ. ಆದರೆ ನೀವು ಕೊಟ್ಟವಸ್ತುವಿಗೆ ಮಾಲೀಕನಿಂದ ರಶೀದಿ ಪಡೆಕೊಳ್ಳಲು ಮರೆಯಬೇಡಿರಿ (ಮಳೆಬಂದ ಕೂಡಲೇ ಕೊಡೆಯ ನೆನಪಾಗಿ, ನೀವು ಹಣಕೊಟ್ಟು ಬಿಡಿಸಿಕೊಂಡು ಬರುವಿರಿ)

ಹಾಗಾದರೆ ಮಾಲೀಕನಿಗಿರುವ ಉಪಾಯವೇನು?:—ಮಾಲೀಕನು ನಿಮ್ಮಿಂದ ಬರಬೇಕಾದ ಹಣಕ್ಕಾಗಿ ನಿಮ್ಮಿಂದ ಒಂದು ಚೀಟಿಯನ್ನು ಹೆಸರು ವಿಳಾಸದೊಂದಿಗೆ ಕೇಳಬಹುದು. ಆಗ ನೀವು ಆವನಿಗೆ ಎಷ್ಟು ಹಣಕೊಡಬೇಕೋ ಅಷ್ಟಕ್ಕಾಗಿ ಒಂದು ತುಂಡು ಕಾಗದದಲ್ಲಿ ಚೀಟಿ ಬರೆಯುವಂತೆ ಬರೆದು ಕೊಡಿರಿ. ನಿಮ್ಮ ಹೆಸರು ಮತ್ತು ವಿಳಾಸವನ್ನು ಬರೆದುಕೊಡಿರಿ. ಇಲ್ಲದಿದ್ದಲ್ಲಿ ನಿಮ್ಮ ಪ್ರಾಮಾಣಿಕತೆಯನ್ನು ಬೇರೆಯವರು ಅನುಮಾನಿಸಬಹುದು. ಸಕಾಲದಲ್ಲಿ ಕೊಡಬೇಕಾದ ಹಣವನ್ನು ಕೊಟ್ಟುಬಿಡಿ. ಒಂದುವೇಳೆ ಸಕಾಲದಲ್ಲಿ ಹಣವನ್ನು ಕೊಡಲು ತಪ್ಪಿದಲ್ಲಿ ನಿಮ್ಮ ಚೀಟಿನ ಆಧಾರದ ಮೇಲೆ ನಿಮ್ಮ ಮೇಲೆ ಸಿವಿಲ್ ಮೊಕದ್ದಮೆಯನ್ನು ಹೂಡಿ ಆತ ಹಣವನ್ನು ವಸೂಲುಮಾಡಬಲ್ಲ. ನಿಮ್ಮ ಚೀಟು ಇಲ್ಲದಿದ್ದರೂ ಕೂಡಾ, ಆವನ ಸೇವಕರ ಸಾಕ್ಷಿಯ ಆಧಾರದಿಂದ ಆತನು ಕೇಸನ್ನು ಗೆಲ್ಲಬಲ್ಲ.

ಒಂದುವೇಳೆ ನೀವು ಹೋಟೆಲನ್ನು ಹೊಕ್ಕು, ನಿಮ್ಮ ಟೊಪ್ಪಿ ಮತ್ತು ಕೊಡೆಯನ್ನು, ಅದನ್ನು ಕಾಯುವ ಸೇವಕನ ವಶಕ್ಕೆ ಕೊಟ್ಟು ಎಂದು ಎಣಿಸಿರಿ. (ಕೆಲವು ಹೊಟೇಲುಗಳಲ್ಲಿ ಗಿರಾಕಿಗಳ ವಸ್ತುಗಳನ್ನು ಕಾಯಲು ಪ್ರತ್ಯೇಕ ಸೇವಕರಿರುತ್ತಾರೆ) ಹಾಗಿರುವಲ್ಲಿ "ನೀನು ಹಣಕೊಟ್ಟೆ ಹೊರತು ನಿಮ್ಮ ವಸ್ತುಗಳನ್ನು ಕೊಡುವುದಿಲ್ಲ"ವೆಂದು ಆತ ನಿಮ್ಮ ವಸ್ತುಗಳನ್ನು ಇಟ್ಟುಕೊಳ್ಳಬಹುದು. ಆತನಿಗೆ ವಸ್ತುಗಳ ಮೇಲೆ ಹಕ್ಕು (lien) ಇದೆ. ಯಾಕೆಂದರೆ ಈ ವಸ್ತುಗಳನ್ನೆ ಈತ ಜಾರ್ಜು ಕೂಡಾ ನಿಮ್ಮ ಬಿಲ್ಲಿನಲ್ಲಿ ಬೇರಿ ಬರುತ್ತವೆ ನೀವು ಬಿಲ್ಲುಕೊಡದೆ ಕಾರಣ ಅವುಗಳನ್ನು ಇಟ್ಟುಕೊಳ್ಳುವ (lien) ಹಕ್ಕು ಆತನಿಗಿದೆ ನಿಮ್ಮ ಸಾಮಗ್ರಿಗಳನ್ನು ಆತನು ಕಾಯದೇ ಇರಲಿಲ್ಲ. ಆದರೆ ನೀವು ನಿಮ್ಮ ಸಾಮಗ್ರಿಗಳನ್ನು ಆತನ ವಶಕೊಡದೆ, ನಿಮ್ಮ ಹತ್ತಿರವೇ ಇಟ್ಟುಕೊಂಡಿರೆನ್ನಿ ಆಗ ಆವುಗಳನ್ನು ಇಟ್ಟುಕೊಳ್ಳುವ ಹಕ್ಕು ಮಾಲಿಕನಿಗಿಲ್ಲ.

ಹೇಗಿದ್ದರೂ ಊಟಮಾಡಿದ ಮೇಲೆ, ಉಂಡ ಮನೆಗೆ ಎರಡು ಬಗೆಯದೇ ಹಣವನ್ನು ಕೊಡಬೇಕು. ಕಾನೂನು ಬೇರೆ, ನ್ಯಾಯ ಬೇರೆ. ನ್ಯಾಯವಾಗಿ ಕೊಡಲೇಬೇಕು. ಕಾನೂನಿಗನುಸಾರವಾಗಿಯೂ ಕೊಡಲೇಬೇಕು ಅದರೆ ಇರುವ ಸಾಧನೆಗಳು ಬೇರೆಬೇರೆ ಕೆಸೆಯಲ್ಲಿ ಇಪ್ಪುದಿದ್ದರೆ ಮಯುನಿನ :ಒಂದು ಹೋಟೆಲಿನವನಿಗೆ ಅವಶ್ಯವಾಗಿ, ತಪ್ಪದೆ ಹಣಕೊಡಿರಿ.

(ಇಂಡಿಯನ್ ಪೀನಲ್ ಕೋಡ್, ಸೆಕ್ಷನ್ 340.

ಕೆ. ಭಾಸ್ಕರ ಶೆಟ್ಟಿ, ಬಿ. ಎ.
"ಟೈಮ್ಸ್ ಆಫ್ ಇಂಡಿಯಾ"ದಿಂದ.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ
ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ.ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟಪಾಲು ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

REGD. NO. M. 3618

LICENCE NO. 31
Licensed to Post without Prepayment.

ಕನ್ನಡಿಗ

ಸಂಪುಟ ೩೬ VOL. 36

14—3—1957

ಸಂಚಿಕೆ ೨೭ NO. 27

ರಾಜಕೀಯ

ಕಮ್ಯುನಿಸ್ಟರ ಜಗತ್ತಿನಲ್ಲಿ ಬಗೆಹರಿಸಲಾರದ ಒಡಕು

ಸಮರ್ಥ ಮಾರ್ಗದರ್ಶನ ಅಭಾವವೇ ಇದರ ಕಾರಣ

ಕಮ್ಯುನಿಸ್ಟ್ ಜಗತ್ತಿನಲ್ಲಿ ಇಂದು ಬಿಡಿಸಲಾಗದ ಬಿಕ್ಕಟ್ಟು ಇಂದು ಎಲ್ಲೆಲ್ಲೂ ಎದ್ದು ನಿಂತಿದೆ. ಮಾರ್ಕ್ಸ್‌ನಿಂದ ಉದಯವಾಗಿ, ಲೆನಿನ್ ಸ್ಟೇಲಿನರಿಂದ ಬೆಳೆದು ಬಂದ ಪಕ್ಷ ಇಂದು ಅಳಿಯ ಹೊರಟಿವೆ. ಇಂದು ಜಗತ್ತಿನಲ್ಲಿ ಕಮ್ಯುನಿಸ್ಟ್ ಪಂಗಡಕ್ಕೆ ಒಬ್ಬ ಸಮರ್ಥ ಮುಖಂಡನಿಲ್ಲ. ಆ ನುಮಾನವನ್ನು ನಿವಾರಿಸುವ ಮುಖಂಡನಿಲ್ಲ. ಕ್ರಾಂತಿಯನ್ನಡಗಿಸಬಲ್ಲ ಉಕ್ಕಿನ ನಾಯಕನಿಂದಿಲ್ಲ. ಜಗತ್ತಿನ ಮೂರನೇ ಒಂದಂಶ ಜನರನ್ನು ಕಮ್ಯುನಿಸ್ಟ್ ನಾಯಕತ್ವದಿಂದ ಸಾಗಿಸಿಕೊಂಡು ಹೋಗುತ್ತಿದ್ದ ಸ್ಟೇಲಿನ್ ಇಂದಿಲ್ಲ. ಪ್ರೇಗು (Prague)ಯಿಂದ ಪಿಕಿಂಗ್‌ನ ವರೆಗಿರುವ ಕಮ್ಯುನಿಸ್ಟರಿಗೆ ಇಂದು ದಾರಿ ತೋರಿಸುವ ಮುಖಂಡನೊಬ್ಬನಿಲ್ಲ. ಇಂತಹ ಕಮ್ಯುನಿಸ್ಟ್ ಪಕ್ಷಕ್ಕೆ ಒಂದೊನ್ಮೈಯು ಗೋಸ್ಲಾವಿಯಾ ಮಾತ್ರ ಅವಿಧೇಯವಾಗಿತ್ತು. ಆದರೆ ಇಂದು ಈ ವಿಧೇಯ ಕುಟುಂಬ ಒಡೆದು ಚೂರಾಗಿದೆ. ಸ್ಟಾಲಿನನ ಮರಣದ ಬರೀ ಮೂರು ವರುಷಗಳ ಒಳಗೆ ಈ ಕುಟುಂಬವಲ್ಲಿ ಕಲಹವೆದ್ದಿದೆ. ಜಗತ್ತಿನ ಯಾವ ಒಂದು ಕಮ್ಯುನಿಸ್ಟ್ ದೇಶವು, ಕಮ್ಯುನಿಸ್ಟರ ತಂದೆಯ ಮನೆಯಂತಿರುವ ರಶ್ಯಾದೊಡನೆ ಅತೀ ಹತ್ತಿರದ ಸಂಬಂಧ, ಸಂಪರ್ಕಗಳನ್ನು ಇಟ್ಟುಕೊಳ್ಳಲು ಬಯಸುವುದಿಲ್ಲ. ಯಾವ ಒಂದು ಸ್ನೇಹಮಯವಾದ ಮೈತ್ರಿ ಒಡಂಬಡಿಕೆಗಳಿಗೆ ಒಪ್ಪಲು ತಯಾರಿಲ್ಲ. ಯುಗೋಸ್ಲಾವಿಯಾವು ಒಂದು ಕಡೆಯಲ್ಲಿ ಮಾ ಖಂಡತ್ವವನ್ನು ನೆಳೆದುಕೊಳ್ಳಲಿಕ್ಕಿದರೆ, ರಶ್ಯಾವು, ಮುಖಂಡತ್ವವನ್ನು ಉಳಿಸಿಕೊಳ್ಳಲು ಹೋರಾಡುತ್ತಿದೆ. ಆದರೆ ಸಾಂಪ್ರದಾಯಿಕ ಕಮ್ಯುನಿಸ್ಟರು ಚೀನಾದ ಕಡೆಗೆ ನಿಜವಾಗಿ ಒಲಿಯುತ್ತಿದ್ದಾರೆ. ಕಮ್ಯುನಿಸ್ಟ್ ರಾಷ್ಟ್ರವಾದ ಪೋಲೆಂಡು ಇಂದು ಸ್ವಾತಂತ್ರ್ಯದತ್ತ ತೀವ್ರವಾಗಿ ಪ್ರೆರ್ಯಯುತವಾದ ಹೆಜ್ಜೆಯಿಡುತ್ತಿದೆ. ಆದರೆ ಕಮ್ಯುನಿಸ್ಟ್ ರಾಷ್ಟ್ರಗಳಲ್ಲದ ರಾಷ್ಟ್ರಗಳಲ್ಲಿ ಕಮ್ಯುನಿಸ್ಟರು ಮಾತ್ರ ರಶ್ಯಾದ ಕಡೆಗೆ ಕೈಯೊಡ್ಡಿ ನಿಂತಿದ್ದಾರೆ. "ತೀವ್ರ ನಡೆ, ಬೇಗ ಸಾಗು, ದಾರಿ ತೋರು" ಎಂದು ತಂದೆಯೊಡನೆ ಮಕ್ಕಳು ಬೇಡುವಂತೆ ಬೇಡುತ್ತಿದ್ದಾರೆ. ಆದರೂ ಕೂಡಾ ಎಲ್ಲೆಲ್ಲೂ ಬಿಡಿಸಲಾಗದ ಬಿಕ್ಕಟ್ಟು, ಎಲ್ಲೆಲ್ಲೂ ಅಭಿಪ್ರಾಯ ಭೇದಗಳು.

"ಸಾಮ್ರಾಜ್ಯ ಶಾಹಿವಾದ ಎಲ್ಲಿ ಇದೆಯೋ, ಅಲ್ಲಿ ನಾವು ಸ್ಟೇಲಿನ್ ವಾದಿಗಳು" ಎಂದು ರಶ್ಯಾದ ಕಮ್ಯುನಿಸ್ಟ್ ನಾಯಕ ನಿಕಿತಾ ಕ್ರುಶ್ಚೇನರು ಒಂದು ಕಡೆಯಲ್ಲಿ ನುಡಿದರೆ, ಇನ್ನೊಂದು ಕಡೆಯಲ್ಲಿ ಕಮ್ಯುನಿಸ್ಟ್ ರಾಷ್ಟ್ರವಾದ ಯುಗೋಸ್ಲಾವಿಯದ ಅಧ್ಯಕ್ಷ ಮಾರ್ಷಲ್ ಟೀಟೋರವರು ಇನ್ನೊಂದು ತರವಾಗಿ ಹೇಳುತ್ತಿದ್ದಾರೆ "ಬಂಧುಗಳೇ, ಕಮ್ಯುನಿಸ್ಟ್ ಪಕ್ಷದ ಮುಖಂಡತ್ವವು ಯುಗೋಸ್ಲಾವಿಯಾದೆ ನ್ಯಾಯ ಯುತವಾದ ತತ್ವಕ್ಕೆ ಬರುತ್ತದೆಯೋ, ಅಥವಾ ಸ್ಟೇಲಿನ್ ವಾದಕ್ಕೆ ಕೋಗುತ್ತದೆಯೋ ಎಂದು ನಾವು ಇಂದು ನೋಡಬೇಕಾಗಿದೆ" ಎನ್ನುತ್ತಾರೆ ಟೀಟೋ, ಟೀಟೋ ಹೀಗೆಂದರೆ ಪೋಲೆಂಡಿನ ನಾಯಕ ಗೋಮುಲ್ಕರು ಇನ್ನೊಂದುತರ ಹೇಳುತ್ತಿದ್ದಾರೆ "ಸಮತವಾದ ಧ್ಯೇಯವನ್ನು ಸಾಧಿಸಲು ಹಲವು ದಾರಿಗಳಿವೆ ಈ ಮಾರ್ಗಗಳನ್ನು, ದೇಶ, ಕಾಲ, ಸಂದರ್ಭಗಳನ್ನು ನೋಡಿ ಅನುಸರಿಸಬೇಕಾಗಿದೆ. ಸಮತಾವಾದ ಮಾದರಿಯು, ಇವೆಲ್ಲಕ್ಕನುಗುಣವಾಗಿ ಮಹಾ ಮಾರ್ಪಾಟನ್ನು ಕೂಡಾ ಹೊಂದಬಹುದು. ಅದು ರಶ್ಯಾದ ತತ್ವಕ್ಕೆ ಅನುಗುಣವಾಗಬಹುದು. ಇನ್ನೊಮ್ಮೆ ಯುಗೋಸ್ಲಾವಿಯಾದ ತತ್ವಕ್ಕೆ ಅನುಗುಣವಾಗಬಹುದು. ಮತ್ತೊಮ್ಮೆ ಇವೆರಡೂ ತತ್ವಗಳಿಗೆ ಪ್ರತಿಕೂಲವಾಗಿ, ಇನ್ನೊಂದು ತರವಾಗಿ ಮಾರ್ಪಾಟು ಹೊಂದಬಹುದು. ಇವೆಲ್ಲದಕ್ಕೂ, ದೇಶ, ಕಾಲ, ಸಂಧರ್ಭಗಳೇ ಕಾರಣ" ಎಂದು ಗೋಮುಲ್ಕರು ಹೇಳುತ್ತಿದ್ದಾರೆ.

"ಕಮ್ಯುನಿಸ್ಟ್ ಧ್ಯೇಯದಲ್ಲಾದ ಅಭಿಪ್ರಾಯ ಬಿನ್ನತೆಯೇ ಹಂಗೇರಿಯಲ್ಲಿ ಗಲಭೆಗೆ ಕಾರಣವೆಂದು ಕಮ್ಯುನಿಸ್ಟ್ ಮುದೀಣ ಎನ್‌ವರ್ ಹೋಕ್ಷ (Enver Hozha)ರು ಅಭಿಪ್ರಾಯಪಡುತ್ತಾರೆ.

"ಸ್ಟೇಲಿನರು ತಮ್ಮ ಸಮರ್ಥ ಮುಖಂಡತ್ವದಿಂದ ಸೋವಿಯಟ್ ರಶ್ಯಾವನ್ನು ಏಳಿಗೆಗೆ ತಂದರು. ಜಾಗತಿಕ ಕಮ್ಯುನಿಸ್ಟ್ ಪಕ್ಷಕ್ಕೆ ಆಪಾರ ಸೇವೆಯನ್ನು ಸಲ್ಲಿಸಿದರು. ಆದರೆ ನಮ್ಮ ಯುಗೋಸ್ಲಾವಿಯಾದ ಬಂಧುಗಳು, ಬೇಕಾದುದಕ್ಕಿಂತ ಹೆಚ್ಚು ಮಂದುನರಿದು, ಕಮ್ಯುನಿಸ್ಟ್ ಪಕ್ಷದ ಧ್ಯೇಯ ಧೋರಣೆಗಳನ್ನು ಅವನತಿಗೆ ತರುತ್ತಿದ್ದಾರೆ" ಎಂದು ಚೀನಾದ "ಪೀಪಲ್ಸ್ ಡೈಲಿ ಪತ್ರಿಕೆಯು ಬರೆಯುತ್ತಿದೆ.

"ಪ್ರತಿಯೊಂದು ಭಿನ್ನಾಭಿಪ್ರಾಯಗಳನ್ನು ಶಾಂತರೀತಿಯಿಂದಲೇ ಬಗೆಹರಿಸಿಕೊಳ್ಳಬೇಕೆಂದು ನಾವು ಮನಗಾಣುತ್ತೇವೆ. ನಮ್ಮ ಭಾಂದವ್ಯವನ್ನುಳಿಸಿಕೊಂಡು ಒಬ್ಬರೊಡನೊಬ್ಬರು ಸಹಕರಿಸಿ ಭಿನ್ನ ಭೇದತೆಗಳನ್ನು ನಿವಾರಿಸಿಕೊಳ್ಳಬೇಕೆಂದು" ರಶ್ಯಾದ "ಪ್ರಾವ್ದಾ" ಪತ್ರಿಕೆಯು ಹೇಳುತ್ತಿದೆ.

ಮೇಲೆ ಹೇಳಿದ ಎಲ್ಲಾ ಮಾತುಗಳು ವಿವಿಧ ಕಮ್ಯುನಿಸ್ಟ್ ರಾಷ್ಟ್ರಗಳಲ್ಲಿರುವ ಅಭಿಪ್ರಾಯ ಭಿನ್ನಭೇದತೆಗಳನ್ನು ಎತ್ತಿ ತೋರಿಸುತ್ತವೆ." ಮೇಸ್ಕೊದಿಂದ ಹಿಡಿದು, ಪೆಕಿಂಗ್, ಬೆಲ್‌ಗ್ರೇಡ್, ವಾರ್ಸಾವಾದವರೆಗೆ ನಡೆಯುವ ಎಲ್ಲಾ ಕಾರ್ಯ, ಧೋರಣೆಗಳಿಂದ ವಿಧಿತವಾಗುತ್ತದೆ. ಕಮ್ಯುನಿಸಂನ ಮೂಲಸ್ಥಾನ ರಶ್ಯಾವಾದರೂಕೂಡಾ, ಧ್ಯೇಯ ಧೋರಣೆಗಳಿಗಾಗಿ ಇತರ ಕಮ್ಯುನಿಸ್ಟ್ ರಾಷ್ಟ್ರಗಳು ನೋಸ್ಕೋವಿನತ್ತ ಗಮನವಿಡುವುದಕ್ಕಿಂತ ಹೆಚ್ಚು. ಪೇಕಿಂಗಿನ ಕಡೆಗೆ ಹೆಚ್ಚು ಲಕ್ಷವಿಡುತ್ತಿದ್ದಾರೆ.

ಇಟೆಲಿಯಲ್ಲಿ ಕಳೆದ ದಶಂಬರ ತಿಂಗಳಲ್ಲಿ ನಡೆದ ಕಮ್ಯುನಿಸ್ಟ್ ಅಧಿವೇಶನದಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಒಡಕು ಮತ್ತಷ್ಟು ಬೆಳೆಕಿಗೆ ಬಂತು. ಅಲ್ಬೇನಿಯಾದಿಂದ ಬಂದ ಪ್ರತಿನಿಧಿಯು ಟೀಟೋ ವಾದವನ್ನು ಖಂಡಿಸಿದರೆ, ಯುಗೋಸ್ಲಾವಿಯಾದ ಪ್ರತಿನಿಧಿಯು ಸ್ಟೇಲಿನ್ ವಾದವನ್ನು ಕಟುವಾಗಿ ಟೀಕಿಸಿದರು. ಪೋಲೆಂಡಿನ ಪ್ರತಿನಿಧಿಯು ಪೂರ್ವ ಯುರೋಪಿನ ಮುಖಂಡತ್ವವನ್ನು ಖಂಡ ತುಂಡವಾಗಿ ಖಂಡಿಸಿದರು. ಹಂಗೇರಿಯ ಗಲಭೆಗೆ ಅವರೇ ಕಾರಣವೆಂದರು. ರಶ್ಯಾವು, ಸಾಮ್ರಾಜ್ಯಶಾಹಿ ವಾದವನ್ನು ಖಂಡಿಸಿತು. ಅಂತೂ ಎಲ್ಲೂ ಒಮ್ಮತವಿರಲಿಲ್ಲ. ಎಲ್ಲೆಲ್ಲೂ ಭಿನ್ನಾಭಿಪ್ರಾಯಗಳು, ಸಂಶಯದ ಸುರುಳಿಗಳು. ಹಲವು ವರುಷಗಳಿಂದ ಕಮ್ಯುನಿಸ್ಟ್ ಪಕ್ಷದ ವಿಳಿಗೆಗಾಗಿ ಶ್ರಮಪಟ್ಟು ನುಡಿದ ಧಾರೀಣ ಮಿ. ಟೊಗಿಲಾಯೆಟ್ಟಿ (Mr. Togliatee) ಯವರು ಇಂದು ಪಕ್ಷವನ್ನು ತೊರೆದಿದ್ದಾರೆ. ಪಕ್ಷದ ಬಗ್ಗೆ ಮಡಿಯುತ್ತಿದ್ದ ಹಲವು ತರುಣ ಸಮರ್ಥ ಮುಖಂಡರು ಸಂಶಯಕ್ಕೊಳಗಾಗಿ ಪಕ್ಷವನ್ನು ತ್ಯಜಿಸಿದ್ದಾರೆ. ಕ್ರಾಂತಿಯ ಕಿಡಿಯನ್ನು ಎಬ್ಬಿಸತೊಡಗಿದ್ದಾರೆ.

ಹಂಗೇರಿಯ ಗಲಭೆಯ ನಂತರ ನಡೆದ ಈ ಅಧಿವೇಶನದಿಂದ ಕಮ್ಯುನಿಸ್ಟ್ ಪಂಗಡದಲ್ಲಿನ ಬಿಕ್ಕಟ್ಟು ಮತ್ತಷ್ಟು ಹೆಚ್ಚಿದೆ. ಈ ಅಧಿವೇಶನವಾದ ಸ್ವಲ್ಪ ಸಮಯದ ಒಳಗೆ ಒಂದೊನ್ಮೈ ಜನರಿಂದ ಪೂಜಿಸಲ್ಪಡುತ್ತಿದ್ದ, ಸ್ಟೇಲಿನರನ್ನು ಅವರ ಅನುಯಾಯಿಗಳೇ ಖಂಡಿಸತೊಡಗಿದರು. ಅದೇ ಸಮಯದಲ್ಲಿ ಚೀನಾವು ಸ್ಟೇಲಿನರನ್ನು ಮಹಾ ಮುಖಂಡನೆಂದು ಸಾರಿತು.

ಸ್ಟೇಲಿನರ ಮರಣಾನಂತರ ಬಂದ ನಾಯಕರು, ಇಂದು ಬದಲಾವಣೆ ಹೊಂದುತ್ತಿರುವ ರಶ್ಯಾ ಮತ್ತು ಪೂರ್ವಯುರೋ

(೨೩ನೇ ಪುಟ ನೋಡಿರಿ)

SEASON DEPOSITS

Are now accepted at the Head Office and branches of the Bank of a sum of Rs. 1000 and in multiples thereof, for periods varying between 2 to 6 months at 4% interest per annum. No such deposit will run beyond 31-7-1957.

Special rate will be allowed for Single Deposits of Rupees 25,000/- and above.

THE VIJAYA BANK LTD.

H. O. MANGALORE.

Total Resources of the Bank as on 31-12-1956. | EXCEED RUPEES ONE CRORE

ಕಾಶ್ಮೀರ

ಮತಗಣನೆ ನಡೆಸುವುದು ನಿಷ್ಪ್ರಯೋಜಕ ಶ್ರಮ

ಬ್ರಿಟನ್ನಿನ ಕೂಲಿಕಾರ ಪತ್ರಿಕೆಯ ಅಭಿಪ್ರಾಯ

ಬ್ರಿಟಿಶ ಕೂಲಿಕಾರ ಪಕ್ಷದ ಧುರೀಣರಾದ ಅನುರಿನ್ ಬೆವಾನರ ಟ್ರಬ್ಯೂನ ವಾರಪತ್ರಿಕೆಯು ಕಾಶ್ಮೀರ ಪ್ರಶ್ನೆಯ ಬಗ್ಗೆ ಬರೆದ ಅಗ್ರಲೇಖದಲ್ಲಿ ಯಾವ ಪ್ರಶ್ನೆಯನ್ನೂ ಜನತೆಯ ನಿರ್ಣಯದಂತೆ ಬಿಡಿಸದವರು ಕಾಶ್ಮೀರ ಪ್ರಶ್ನೆಯನ್ನು ಜನತೆಯ ನಿರ್ಣಯದಂತೆ ಬಿಡಿಸಬೇಕು ಎಂಬುದಾಗಿ ಗುಲ್ಲೆಬ್ಬಿಸಿದ್ದಾರೆ. ಇದನ್ನು ಬ್ರಿಟಿಶ ಜನತೆಯು ಗಮನಿಸಬೇಕು. ಕಾಶ್ಮೀರದ ಭವಿತವ್ಯವನ್ನು ನಿರ್ಧರಿಸಲು ಅಲ್ಲಿ ಪಾಕಿಸ್ತಾನದ ಬೇಡಿಕೆಯನ್ವಯ ಸಾರ್ವತ್ರಿಕ ಮತಗಣನೆ ನಡೆಸಿದರೂ ಅದನ್ನು ತೃಪ್ತಿಕರವಾಗಿ ಬಿಡಿಸಿದಂತಾಗದು. ಯಾಕೆಂದರೆ ಸಾರ್ವತ್ರಿಕ ಮತಗಣನೆಯಲ್ಲಿ ಕುತಂತ್ರದಿಂದ ಒಂದು ಪೇಳೆ ಪಾಕಿಸ್ತಾನವು ಗೆದ್ದರೆ ಇಡೀ ಪಾಕಿಸ್ತಾನ ಪ್ರಜಾರಾಜ್ಯದಲ್ಲಿರುವ ಸೇಡು ತೀರಿಸಿಕೊಳ್ಳುವ ಭಾವನೆ ಧಾರ್ಮಿಕ ಅಸಹಿಷ್ಣುತೆ ಹಾಗೂ ಲಂಚಗುಳಿತನವು ಅಡಳಿತ ಇವುಗಳಿಂದ ಗಾಬರಿಪಡಿಸುವಂತಾಗುವದು. ಇದರ ಫಲವಾಗಿ ಪಾಕಿಸ್ತಾನದಿಂದ ಮುಸಲ್ಮಾನೇತರರೂ ಭಾರತದಿಂದ ಮುಸಲ್ಮಾನರೂ ಗುಳೇಕೆತ್ತಿ ಹೋಗುವ ಹಾಗೂ ಈ ಎರಡೂ ದೇಶಗಳಲ್ಲಿಯ ಲಕ್ಷಾಂತರ ಜನರ ವಿತ್ತ ಜೀವಿತಗಳಿಗೆ ಗಂಡಾಂತರ ಪ್ರಾಪ್ತವಾಗುವಂಥ ಪರಿಸ್ಥಿತಿಯನ್ನು ನಿರ್ಮಿಸಿದಂತಾಗುವದು" ಎಂದು ಬರೆದಿದೆ.

ಈ ಪತ್ರಿಕೆಯು ಬರೆದ ಅಗ್ರಲೇಖದಲ್ಲಿ ಇನ್ನೂ ಹೇಳಿರುವದೇನೆಂದರೆ: —

ಕಾಶ್ಮೀರ ಪ್ರಶ್ನೆಯ ಬಗ್ಗೆ ಭದ್ರತಾ ಮಂಡಲವು ತಳೆದ ನಿಲುವಿಗೆ ಅಕ್ಷೇಪಿಸಿದ ಬಗ್ಗೆ ಭಾರತವನ್ನು ತೆಗಳುವ ಅನೇಕರನ್ನು ಬ್ರಿಟಿಶ ಕೂಲಿಕಾರ ಪಕ್ಷದಲ್ಲಿಯೂ ಕಾಣಬಹುದು. ಭಾರತದ ನಿಲುಮೆಯು ಬ್ರಿಟಿಶ ಜನತೆಯ ಮುಂದೆ ಸರಿಯಾಗಿ ಮಂಡಿಸಲ್ಪಟ್ಟಿಲ್ಲವೆಂದು ಟ್ರಬ್ಯೂನದ ಅಭಿಪ್ರಾಯವಾಗಿದೆ. ಜಗತ್ತಿನ ಇನ್ನಿತರ ಕೆಲ ದೇಶಗಳು ತಮ್ಮ ಪ್ರಚಾರದ ಸಂಘಟನೆಗೆ ಹೆಚ್ಚಿನ ಗಮನ ಕೊಟ್ಟಂತೆ ಭಾರತವು ಕೊಟ್ಟಿಲ್ಲ ಅಂತೆಯೇ ಭಾರತದಲ್ಲಿ ಸಾಧಿಸಿದ ಮಹತ್ತರ ಸಾಮಾಜಿಕ ಸುಧಾರಣೆಗಳು ಜಗತ್ತಿನ ಗಮನಕ್ಕೆ ಬಾರದೆ ಹೋಗಿರುವವು ವೇಲಾಗಿ ಭಾರತೀಯ ಧುರೀಣರಿಗೆ ಪಾಕಿಸ್ತಾನದ ವಿರುದ್ಧ ಪ್ರಚಾರ ನಡೆಸುವದು ಬೇಕಿಲ್ಲ. ಕಾಲಾಂತರದಲ್ಲಿ ಪಾಕಿಸ್ತಾನವು ಸ್ವೇಚ್ಛೆಯಿಂದ ಭಾರತದಲ್ಲಿ ಪುನಃ ಕೂಡಿಕೊಳ್ಳುವ ಸಂಭವವಿರುವದೆಂದು ಭಾರತೀಯ ಮುತ್ಸದ್ದಿಗಳು ಭಾವಿಸಿರುವರು. ಆಂಥ ಸೇರ್ಪಡೆಗೆ ವಿಘಾತಕವಾಗುವಂತೆ ಪಾಕಿಸ್ತಾನದ ವಿರುದ್ಧ ಪ್ರಚಾರ ಆನರಿಂದ ನಡೆಯಲಾರದು. ಪಾಕಿಸ್ತಾನೀ ಧುರೀಣರು ತಮ್ಮ ಆಡಳಿತವು ಸಂಪೂರ್ಣವಾಗಿ ಅಯಶಸ್ವಿಯಾಗಿ ದೇಶದ ಆಂತರಿಕ ಸಮಸ್ಯೆಗಳನ್ನು ಬಿಡಿಸುವಲ್ಲಿ ಅಸಮರ್ಥರಾಗಿರುವದು. ಜಗತ್ತಿನ ಕಣ್ಣಿಗೆ ಬೇಳಬಾರದೆಂದು ಭಾರತದ ವಿರುದ್ಧ ದ್ವೇಷದ ವಾತಾವರಣವನ್ನು ಹುಟ್ಟಿಸುವ ಭಾಷೆಯನ್ನೇ ಆಡುತ್ತ ಬಂದಿರುವರು.

ಏತಿಯದಲ್ಲಿ ಹೊಸದಾಗಿ ಸ್ವಾತಂತ್ರ್ಯ ಪಡೆದ ರಾಷ್ಟ್ರಗಳು ಪೂರ್ವ—ಪಶ್ಚಿಮ ರಾಷ್ಟ್ರಗಳ ಬಣಗಳಲ್ಲಿ ಯಾವ ಬಣಕ್ಕೂ ಸೇರದೆ ತಟಸ್ಥವಾಗಿ ಉಳಿದು ಜಾಗತಿಕ ಶಾಂತಿ ರಕ್ಷಣೆಗೆ ನೆರವಾಗಲು ಭಾರತವು ಪ್ರಯತ್ನ ನಡೆಸಿದೆ ಇದರಿಂದ ಕಮ್ಯುನಿಸ್ಟ ಹಾಗೂ ಕಮ್ಯುನಿಸ್ಟೇತರ ರಾಷ್ಟ್ರಗಳೊಡನೆ ಸ್ನೇಹದಿಂದ ಇರುವ ಅವರೆ ಇವೆರಡರಲ್ಲಿ ಯಾವ ಗುಂಪಿಗೂ ಸೇರದಿರುವ ಧೋರಣವನ್ನು ಈ ತಟಸ್ಥ ಸ್ವತಂತ್ರ ರಾಷ್ಟ್ರಗಳು ಅನುಸರಿಸುತ್ತಿವೆ. ಹೀಗಿರುವಾಗ ಪಾಕಿಸ್ತಾನವು ಬಗದಾದ ಮತ್ತು ಸೀಟೋ ಒಡಂಬಡಿಕೆಯಲ್ಲಿ ಸೇರಿ ಈ ತಟಸ್ಥ ನೀತಿಯನ್ನು ಧಿಕ್ಕರಿಸಿದೆ.

ಏಶಿಯದ ರಾಷ್ಟ್ರಗಳಲ್ಲಿಯ ಒಕ್ಕಟ್ಟನ್ನು ಮುರಿದು ಅವು ಪಶ್ಚಿಮ ರಾಷ್ಟ್ರಗಳ ಗುಂಪಿನಲ್ಲಿ ಸೇರುವಂತೆ ಅಮೇರಿಕೆಯ ವಿದೇಶ ಮಂತ್ರಿ ಡಲೇಸರು ನಡೆಸಿದ ಪ್ರಯತ್ನದ ಅಂಗವಾಗಿ ಅಮೇರಿಕೆಯು ಉಪಾಧ್ಯಕ್ಷ ನಿಕ್ಸನ್ನರು ಏಶಿಯದ ರಾಷ್ಟ್ರಗಳಿಗೆ ಭೆಟ್ಟಿಕೊಟ್ಟರು ಅವರು ಎಷ್ಟೇ ಪ್ರಯತ್ನ ಮಾಡಿದರೂ ಭಾರತದಲ್ಲಿ ಅವರು ಯಶಸ್ವಿಯಾಗಲಿಲ್ಲ. ಅಮೇರಿಕೆಯು ಇದರಿಂದ ಹತಾಶವಾಗದೆ ತನ್ನ ಧೋರಣವನ್ನು ಬದಲಿಸಿ ಏಶಿಯದಲ್ಲಿ ತನ್ನ ವರ್ಚಸ್ಸಿನಲ್ಲಿ ಕೆಲವೊಂದು ರಾಷ್ಟ್ರಗಳು ಬಂದು ತಟಸ್ಥ ನೀತಿಯು ಖಂಡನೆ, ಹಾಗೂ ಕಮ್ಯುನಿಸ್ಟ ರಾಷ್ಟ್ರಗಳ ದ್ವೇಷ ಈ ಧೋರಣವನ್ನು ಅಂಗೀಕರಿಸುವಂತೆ ಮಾಡಲು ಪ್ರಯತ್ನ ನಡೆಸಿತು. ಪಾಕಿಸ್ತಾನವು ಇದನ್ನು ಸ್ವಾಗತಿಸಿತು ಪಾಕಿಸ್ತಾನ, ಸಯಾಮ, ಫಿಲಿಪಾಯಿನ್ಸ ಅರ್ಧ ಇಂಡೋಚೀನ ಅರ್ಧಕೋರಿಯಾ ಮತ್ತು ಫಾರ್ಮೋಸಾ ಇವುಗಳನ್ನು ಈ ಯೋಜನೆಯಲ್ಲಿ ಸೇರಿಸಿಕೊಂಡು ಅಮೇರಿಕೆಯು ಇವುಗಳಿಗೆ ಬೇರಳೆವಾದ ಶಸ್ತ್ರಾಸ್ತ್ರ ಯುದ್ಧ ಸಾಮಗ್ರಿಗಳನ್ನು ಒದಗಿಸಿದೆ.

ಪಾಕಿಸ್ತಾನಕ್ಕೆ ಅಮೇರಿಕೆಯು ಯುದ್ಧ ವಿಮಾನಗಳನ್ನೆ ಹಾಗೂ ಹೇರಳ ಶಸ್ತ್ರಾಸ್ತ್ರಗಳನ್ನು ಒದಗಿಸಿದೆ.

ಕಮ್ಯುನಿಸ್ಟರ ಆಕ್ರಮಣವನ್ನು ಎದುರಿಸಲು ತನಗೆ ಕೊಡಲಾದ ಶಸ್ತ್ರಾಸ್ತ್ರಗಳನ್ನು ಇಸ್ರೇಲದ ವಿರುದ್ಧ ಉಪಯೋಗಿಸುವದಾಗಿ ಅರಬ ರಾಷ್ಟ್ರಗಳ ಸುಲ್ತಾನರು ಬಹಿರಂಗವಾಗಿ ಹೇಳುತ್ತಿರುವಂತೆಯೇ ಪಾಕಿಸ್ತಾನೀ ಧುರೀಣರೂ ಅಮೇರಿಕೆಯು ತನಗೆ ಒದಗಿಸಿದ ವಿಮಾನಗಳು, ಶಸ್ತ್ರಾಸ್ತ್ರಗಳನ್ನೂ ಭಾರತದ ವಿರುದ್ಧ ಯುದ್ಧದಲ್ಲಿ ಉಪಯೋಗಿಸುವದಾಗಿ ವಿದೇಶದ ಪತ್ರಿಕಾ ಪ್ರತಿನಿಧಿಗಳ ಮುಂದೆ ಬಹಿರಂಗವಾಗಿಯೇ ಹೇಳುತ್ತಿರುವರು.

ಏತಿಯದಲ್ಲಿಯ ರಾಷ್ಟ್ರಗಳ ತಟಸ್ಥ ಧೋರಣವನ್ನು ಬಗ್ಗುಬಡಿಯಲು ಪಶ್ಚಿಮ ರಾಷ್ಟ್ರಗಳ ಜೊಬಲಕ್ಕೆ ಪಾಕಿಸ್ತಾನವು ಬಂದಿರುವದು ಕಾಶ್ಮೀರ ಪ್ರಶ್ನೆಯಲ್ಲಿ ಅಮೇರಿಕೆ ಮತ್ತು ಬ್ರಿಟಿಶ ಧೋರಣಗಳು ಪಾಕಿಸ್ತಾನಕ್ಕೆ ಜೊಬಲ ನೀಡುತ್ತಿರುವುದಕ್ಕೆ ಮುಖ್ಯ ಕಾರಣವಾಗಿದೆ.

ಕಾಶ್ಮೀರ ತಂಟೆಯಲ್ಲಿ ಅಡಕವಾದ ಮೂಲಭೂತ ಪ್ರಶ್ನೆಗೆ ಉತ್ತರ ಕೊಡಬೇಕಾಗಿದೆ. ಇದರಲ್ಲಿ ಟ್ರಬ್ಯೂನ ಪತ್ರಿಕೆಯ ಬಂದ ಸತ್ಯಗಳಲ್ಲಿ ಎತ್ತಿದ ಮುಖ್ಯ ಪ್ರಶ್ನೆ ಎಂದರೆ ಸಾರ್ವತ್ರಿಕ ಮತಗಣನೆಯನ್ನು ನಡೆಸುವದಾಗಿದೆ.

ಈ ಪ್ರಶ್ನೆಯಲ್ಲಿ ಲಕ್ಷಿಸಬೇಕಾದ ಮುಖ್ಯವಾದ ಅಂಶವೆಂದರೆ ಭಾರತವು ಸಾರ್ವತ್ರಿಕ ಮತಗಣನೆಗೆ ಎಂದೂ ಒಪ್ಪಿದ್ದು ಸಾರ್ವತ್ರಿಕ ಮತಗಣನೆಯು ಯೋಗ್ಯವಾದ ವಾತಾವರಣದಲ್ಲಿ ನಡೆಯತಕ್ಕದ್ದೆಂದು ಭಾರತ ಆಗ್ರಹಿಸಿದೆ. ಸಂ. ರಾ. ಸಂಘವು ೧೯೪೯ ಮತ್ತು ೧೯೫೧ ರಲ್ಲಿ ಅಂಗೀಕರಿಸಿದ ಗೊತ್ತುವಳಿಗಳಲ್ಲಿ ಸಾರ್ವತ್ರಿಕ ಮತಗಣನೆ ನಡೆಸುವ ಮುನ್ನ ಪೂರೈಸಬೇಕಾದ ಕೆಲವೊಂದು ಕರಾರುಗಳನ್ನು ನಿರ್ದೇಶಿಸಿದೆ. ೧೯೫೨ ರಲ್ಲಿ ಕಾಶ್ಮೀರದಲ್ಲಿ ನುಗ್ಗಿದ ಪಾಕಿಸ್ತಾನಿ ಸೈನಿಕರು ಹಾಗೂ ಗುಡ್ಡಗಾಡು ಜನರ ಆಕ್ರಮಣ ತಂಡಗಳು ಕಾಶ್ಮೀರದಿಂದ ಹೊರಟುಹೋಗತಕ್ಕದ್ದು ಎಂಬುದು ಸಂ. ರಾ. ಸಂಘವು ಹಾಕಿದ ಮೊದಲನೇ ಕರಾರು ಆಗಿದೆ. ಪಾಕಿಸ್ತಾನೀ ಸೈನಿಕರು ಮತ್ತು ಗುಡ್ಡಗಾಡು ಜನರು ಕಾಶ್ಮೀರದ ಮೇಲೆ ಆಕ್ರಮಕ ದಾಳಿ ನಡೆಸಿದ ಬಗ್ಗೆ ಸಂದೇಹವೇ ಉಳಿದಿಲ್ಲ. ಈ ಆಕ್ರಮಣ ವಿರುದ್ಧ ಭಾರತವು ಸಂ. ರಾ. ಸಂಘಕ್ಕೆ ಕೂಡಲೇ ದೂರು ಕಳಿಸಿದ್ದುಂಟು.

ಪಾಕಿಸ್ತಾನೀ ಸೈನ್ಯವೆಲ್ಲ ಕಾಶ್ಮೀರದಿಂದ ಹೊರಟುಹೋದ ನಂತರ ಕಾಶ್ಮೀರದ ಸಂರಕ್ಷಣೆಗೆ ಅವಶ್ಯವಿದ್ದಷ್ಟು ಸೈನ್ಯವನ್ನು ಉಳ್ಳಿಟ್ಟು ಕೆಚ್ಚಿನ ಸೈನ್ಯವನ್ನು ಭಾರತವು ಹಿಂದಕ್ಕೆ ಕರೆಸಿಕೊಳ್ಳಬೇಕೆಂದು ಭದ್ರತಾ ಮಂಡಲವು ಭಾರತಕ್ಕೆ ತಿಳಿಸಿದೆ ಇದರಿಂದ ಕಾಶ್ಮೀರದ ಸಂರಕ್ಷಣೆಯು ಹೊಣೆಯು ಭಾರತದ ಬೇಲಿಯುವದೆಂದೂ ಕಾಶ್ಮೀರದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ ಹಕ್ಕು ಭಾರದೆಂದೂ ಭದ್ರತಾ ಮಂಡಲವು ಒಪ್ಪಿಕೊಂಡಿದೆ. ಪಾಕಿಸ್ತಾನೀ ಸೈನ್ಯವೆಲ್ಲ ಕಾಶ್ಮೀರದಿಂದ ಹೊರಟು ಹೋದನಂತರ ಭಾರತದ ಕೆಚ್ಚಿನ ಸೈನ್ಯವು ಕಾಶ್ಮೀರದಿಂದ ಹಂತೆಗೆದುಕೊಂಡ ನಂತರ ಅಲ್ಲಿ ಸಾರ್ವತ್ರಿಕ ಮತಗಣನೆ ನಡೆಸಬೇಕು ಎಂಬುದು ಸಂ. ರಾ. ಸಂಘದ ಗೊತ್ತುವಳಿಯು ಆದೇಶವಾಗಿದೆ.

ಕಾಶ್ಮೀರದಿಂದ ಪಾಕಿಸ್ತಾನದ ಎಲ್ಲ ಸೈನಿಕರೂ ಹೊರಟು ಹೋಗಬೇಕೆಂದು ಸಂ. ರಾ. ಸಂಘದ ಗೊತ್ತುವಳಿಯು ನಿರ್ದೇಶಿಸುತ್ತಿದ್ದರೂ ಅದಕ್ಕೇ ಅಕ್ಷರಶಃ ಅಂಟಿಕೊಳ್ಳದೆ ಶ್ರೀ ನೆಹರೂರು ಪಾಕಿಸ್ತಾನದ ಕೆಲ ಸೈನಿಕರು ಇರುವದಕ್ಕೆ ಒಪ್ಪಿಕೊಂಡರು. ಆದರೆ ಪಾಕಿಸ್ತಾನಿಗಳು ಭಾರತದ ಸೈನ್ಯಬಲದಷ್ಟೇ ಪಾಕಿಸ್ತಾನೀ ಸೈನ್ಯವನ್ನೂ ಕಾಶ್ಮೀರದಲ್ಲಿಡುವ ಬಗ್ಗೆ ಹಟಹಿಡಿದರು. ಸಂ. ರಾ. ಸಂಘದ ಗೊತ್ತುವಳಿಯನ್ನು ಪಾಕಿಸ್ತಾನವು ಧಿಕ್ಕರಿಸಿದೆ. ಇಷ್ಟೇ ಅಲ್ಲ ಕಾಶ್ಮೀರದಲ್ಲಿ ತನ್ನ ಸೈನ್ಯಬಲವನ್ನೂ ಸೈನ್ಯ ತಾಣಗಳನ್ನೂ ಹೆಚ್ಚಿಸಿ ಸಂ. ರಾ. ಸಂಘದ ಗೊತ್ತುವಳಿಗೆ ವಿರುದ್ಧವಾಗಿ ವರ್ತಿಸುತ್ತ ಬಂದಿದೆ.

ಪಾಕಿಸ್ತಾನವು ಆಕ್ರಮಕ ದಾಳಿ ಮಾಡಿದಾಗ ಕಾಶ್ಮೀರವನ್ನು ವಶಪಡಿಸಿಕೊಳ್ಳಲು ಸಮರ್ಥವಾಗಿದ್ದರೆ ಕಾಶ್ಮೀರದ ಭವಿತವ್ಯವನ್ನು ಅಲ್ಲಿ ಸಾರ್ವತ್ರಿಕ ಮತಗಣನೆ ನಡೆಸಿ ನಿರ್ಧರಿಸಲಾಗುತ್ತಿದ್ದಿತೆಂದು ಯಾರೂ ಭಾವಿಸಿಲ್ಲ. ಪಾಕಿಸ್ತಾನವು ಆಕ್ರಮಿಸಿದ ಕಾಶ್ಮೀರದ ಭಾಗದಲ್ಲಿಯೂ ಚುನಾವಣೆ ನಡೆದಿಲ್ಲ. ಅಷ್ಟೇಕೆ ಪೂರ್ವ ಪಾಕಿಸ್ತಾನವನ್ನು ಬಿಟ್ಟರೆ ಪಾಕಿಸ್ತಾನದ ಯಾವ ಭಾಗವನ್ನೆಯೂ ಚುನಾವಣೆಗಳನ್ನೇ ನಡೆಸಲಾಗಿಲ್ಲ.

ಭಾರತದಲ್ಲಿ ಸೇರ್ಪಡೆ ಹೊಂದಿಗ ಕಾಶ್ಮೀರದ ಭಾಗದಲ್ಲಿ ೧೯೫೧ರಲ್ಲಿ ಚುನಾವಣೆಗಳು ನಡೆದುವು. ಈಗ ಸುನಃ ಕಾಶ್ಮೀರ ವಿಧಾನ ಸಭೆಯ ಪ್ರತಿನಿಧಿಗಳನ್ನು ಆರಿಸಲು ಚುನಾವಣೆಗಳು ನಡೆಯುತ್ತಿವೆ- ಈ ಚುನಾವಣೆಗಳು ನಡೆಯದಂತೆ ಆತಂಕವನ್ನು ಒಡ್ಡುವುದೇ ಪಾಕಿಸ್ತಾನವು ನಡೆಸಿದ ಪ್ರಚಾರದ ಉದ್ದೇಶವಾಗಿತ್ತೆ. ಕಾಶ್ಮೀರವು ಭಾರತದಲ್ಲಿ ಸೇರ್ಪಡೆ ಹೊಂದುವನಕ್ಕೆ ತಡೆಹಾಕಿರಿ ಎಂದು ಹೇಳುವ ಪಾಕಿಸ್ತಾನವು ಕಾಶ್ಮೀರ ವಿಧಾನ ಸಭೆಯು ವಿಸರ್ಜನೆ ಹಾಗೂ ವಿಧಾನಸಭೆಗೆ ಪ್ರತಿನಿಧಿಗಳನ್ನೂ ಆರಿಸುವದಕ್ಕೆ ತಡೆ ಹಾಕಿರಿ ಎಂದು ಆಗ್ರಹಪಡಿಸಿದೆ. ಇದಕ್ಕೆ ಒಪ್ಪಿದರೆ ದಿಲ್ಲಿಯಿಂದ ನೇರವಾಗಿ ಕಾಶ್ಮೀರನ ಅಡಳಿತ ನಾಗಿರುವದೊಂದೇ ಮಾರ್ಗ ಉಳಿಯುವದು.

ಪಾಕಿಸ್ತಾನದಂತೆ ಭಾರತವು ಭದ್ರತಾ ಮಂಡಲದ ಗೊತ್ತುವಳಿಯನ್ನು ಧಿಕ್ಕರಿಸಿಲ್ಲ. ಹೋದ ತಿಂಗಳು ಭದ್ರತಾ ಮಂಡಲವು ಸ್ವೀಕರಿಸಿದ ಗೊತ್ತುವಳಿಯಲ್ಲಿ

(೧೧ನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.,

ಸ್ಥಾಪನೆ: ೧೯೩೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಅಧಿಕೃತ ಬಂಡವಾಳ	...	ರೂ. 56,00,000
ಚಲಾವಣೆ ಬಂಡವಾಳ	...	ರೂ. 32,23,787
ವರ್ಗಣಿ (ಪಾಲು) ಬಂಡವಾಳ	...	ರೂ. 32,10,987
ತೆತ್ತ ಬಂಡವಾಳ	...	ರೂ. 27,80,579
ಕ್ಷೇಮನಿಧಿ	...	ರೂ. 18,00,000
ಠೇವಣಾತಿ	...	ರೂ 8·46 ಕೋಟಿ.

31-12-1956ರಲ್ಲಿ ನಮ್ಮ ಚಲಾವಣೆನಿಧಿ 10·64 ಕೋಟಿಗೂ ಮಿಕ್ಕಿದೆ

(ನವೋದಿತ ರಾಜ್ಯಗಳಲ್ಲಿ) ನಮ್ಮ ಶಾಖೆಗಳು

(ವಿಶಾಲ) ನವಮೈಸೂರು	59
ಆಂಧ್ರ ಪ್ರದೇಶ	14
ಕೇರಳ	13
ಬೊಂಬಾಯಿ	8
ಮದ್ರಾಸು	2

ಟಿ. ಎ. ಪೈ ಬಿ ಕಾಂ.(ಬೊಂಬಾಯಿ)ಎಂ. ಎಲ್. ಎ., ಜನರಲ್ ಮೆನೇಜರ್.
ಟಿ. ಎಂ ಎ. ಪೈ, ಎಂ. ಬಿ., ಬಿ ಎಸ್. ಮೆನೇಜಿಂಗ್ ಡೈರೆಕ್ಟರ್.

The Canara Industrial & Banking Syndicate Ltd

ಹುತಾತ್ಮರ ಸಮಾಧಿಸ್ಥಳ

ಅಮೃತಸರದಲ್ಲಿ ಚಿನ್ನದ ದೇವಸ್ಥಾನವಿದೆ— ಅದು ಸಿಕ್ಖರ ಪವಿತ್ರ ಕ್ಷೇತ್ರವೂ ಹೌದು

ಭಾರತವು ಹಲವು ಸುತಾಸುಯಾಯಿಗಳ ನೆಲೆವೀಡಾದ ಪುಣ್ಯಭೂಮಿ. ಸಂಜಾತಿನಲ್ಲಿ ಗುರುನಾನಕರು ಜನ್ಮನೆತ್ತಿ ಹಿಂದೂ-ಮುಸ್ಲಿಮ್ ಮತಕಗಳಲ್ಲಿ ಒತ್ತಟ್ಟನ್ನುಂಟುಮಾಡಲು ಹೆಣಗಾಡಿದರು. ಅವರು ಸ್ಥಾಪಿಸಿದ ಸಿಖ್ ಮತದ ಪ್ರಧಾನ ಕೇಂದ್ರವೇ ಅಮೃತಸರ. 'ಚಾಕ್' ಎಂಬ ಹೆಸರಿನಿಂದಲೂ ಇದು ಪ್ರಸಿದ್ಧವಾಗಿದೆ. ಈ ನಗರವು ಸಿಖ್ಖರ ನಾಲ್ಕನೆಯ ಗುರು ರಾಮದಾಸರಿಂದ ಸ್ಥಾಪಿಸಲ್ಪಟ್ಟಿತು. ಇದಕ್ಕೆ ರಾಮದಾಸಪುರವೆಂಬುದಾಗಿಯೂ ಕರೆಯುತ್ತಿದರು. ರಾಮದಾಸರು ಈ ನಗರದಲ್ಲಿ "ಅಮೃತಸರ" ಅಥವಾ "ಅಮೃತದ ಸರಸ್ಸು"ನ್ನು ರಚಿಸಿದುದರಿಂದ ಈ ನಗರವು ಅಮೃತಸರವೆಂದು ಪ್ರಸಿದ್ಧವಾಗಿದೆ.

ಗುರು ನಾನಕ, ಗುರು ಅಂಗದ, ಗುರು ಅಮರದಾಸ, ಗುರು ರಾಮದಾಸ, ಗುರು ಅರ್ಜುನ. ಗುರು ಹರ್‌ಗೋವಿಂದ ಸಿಂಘ್, ಗುರು ಹರಿರಾಯ್, ಗುರು ಹರಿಕೃಷ್ಣ, ಗುರು ತೇಜ್ ಬಹಾದೂರ್, ಗುರು ಗೋವಿಂದ ಸಿಂಘ್— ಇವರು ಸಿಖ್ಖ್ ಮತಾನುಯಾಯಿಗಳ ಹತ್ತು ಮಂದಿ ಧರ್ಮಗುರುಗಳು, ೪, ೫, ೬, ೭ನೆಯ ಗುರುಗಳು ಅಮೃತಸರದಲ್ಲಿಯೇ ನೆಲಸಿದ್ದರು. ಗುರು ಹರ್ ಗೋವಿಂದ ಸಿಂಘ್— ಅಮೃತಸರದಿಂದ ಮೂರು ಮೈಲು ದೂರದ ಗುರುದ್ವಾರ ಸಾಹೀಬ್ ಎಂಬಲ್ಲಿಯೂ, ಗುರು ತೇಜ್ ಬಹಾದೂರ್— ರಾಮದಾಸಪುರದಲ್ಲಿಯೂ ಜನಿಸಿದವರು.

ನಾಲ್ಕನೆಯ ಗುರು ರಾಮದಾಸರು ಕ್ರಿ. ಶ. ೧೫೭೭ರಲ್ಲಿ ಸಿಖ್ಖರ ಈ ಧಾರ್ಮಿಕ ಮುಖ್ಯ ಪಟ್ಟಣದ ಸ್ಥಾಪನೆಗೈದರು. ಮುಘಲ್ ಬಾದಶಹ ಅಕ್ಬರನಿಂದ ಬಿಟ್ಟುಕೊಡಲ್ಪಟ್ಟ ಸ್ಥಳದ ಮೇಲೆ ಇದು ರಚಿತವಾಯಿತು. ಪವಿತ್ರವಾದ ಸರಸ್ಸಿನ ಸನಿಯವೇ ಇದ್ದುದರಿಂದ ಇದಕ್ಕೆ "ಅಮೃತಸರ" ಎಂದು ಹೆಸರಾಯಿತು ೧೬೯೯ರಲ್ಲಿ ತಮ್ಮ ದ್ ಶಾ ದುರಾಸಯ. ದಾಳಿಗೆ ಈ ನಗರವು ತುತ್ತಾದಾಗ ಅವನು ಅಪಾರ ಕೊಳ್ಳೆ ಹೊಡೆದು, ಇಲ್ಲಿನ ದೇಗುಲಗಳೆಲ್ಲವನ್ನು ಅಪವಿತ್ರಗೊಳಿಸಿದನು. ಕ್ರಿ. ಶ. ೧೭೬೪ರಲ್ಲಿ ಈ ನಗರದ ಪುನರ್ನಿರ್ಮಾಣವಾಯಿತು. ಕ್ರಿ. ಶ. ೧೭೯೫ರಲ್ಲಿ ಮಹಾರಾಜಾ ರಣಜಿತ್ ಸಿಂಘರು ಪ್ರಸಿದ್ಧ ದೇವಾಲಯವೊಂದನ್ನು ಬಂಗಾರದ ಹಾಳೆಗಳಿಂದ ಹೊದಿಸಿದರು. ಇದು ಮುಂದೆ "ಸುವರ್ಣ ದೇವಾಲಯ"ವೆಂದು ಪ್ರಸಿದ್ಧವಾಯಿತು. ಮಹಾರಾಜರು ಗೋವಿಂದಘರ್ ಎಂಬ ದುರ್ಗವನ್ನೂ ರಚಿಸಿದರು.

ಅಮೃತಸರ ನಗರಕ್ಕೆ ಹದಿನೆರಡು ಮಹಾದ್ವಾರಗಳಿದ್ದುವು. ಸುವರ್ಣ ದೇವಾಲಯಕ್ಕೂ ರೈಲ್ವೆ ನಿಲ್ದಾಣಕ್ಕೂ ಮಧ್ಯೆ ಕೈಸರ್‌ಬಾಗ್ ಇದೆ. ದೇವಾಲಯದ ಪ್ರವೇಶದ ಹತ್ತಿರವೇ ಗಡಿಯಾರದ ಗೋಪುರವೊಂದಿದೆ. ಇದ್ದಿಂದ ಪೂರ್ವಕ್ಕೆ ವಾಗಾ ರ್ವ—ರ್ಗರ್ ಗೋಳಿ ಬಾರಿನಲ್ಲಿ ಹುತಾತ್ಮರಾದವರ ಸಮಾಧಿ ಸ್ಥಳವಾದ ಜಲಿಯನ್ ವಾಲಾ ಬಾಗಿಗೆ ಹೋಗುತ್ತದೆ. ಏಪ್ರಿಲ್ ತಿಂಗಳ್ಲಿ (೧೯೧೯) ಸಾರ್ವಜನಿಕ ಸಭೆಯೊಂದ ಜಲಿಯನ್‌ವಾಲಾ ಬಾಗ್‌ನಲ್ಲಿ ನೆರೆದಾಗ, ಜ. ಡಾಯರ್ ಎಂಬ ಅಧಿಕಾರಿಯಿಂದ ಅಜ್ಞೆ ಕೊಂಡಿವ ಸಶಸ್ತ್ರ ಸೇನೆಯೊಮ್ಮ ಜನರ ಮೇಲೆ ಗುಂಡಿನ ಮಳೆಗರೆದು, ದೊಡ್ಡ ಹತ್ಯಾಕಾಂಡವನ್ನೇ ನಡೆಸಿತು. ಜಲಿಯನ್ ವಾಲಾ ಬಾಗಿನ ಈ ಅತ್ಯಾಜಾರವು ಬ್ರಿಟಿಷ್ ಸರಕಾರದ ಮುಖಕ್ಕೆ ಮಸಿಬಳಿಯಿತು.

ನಗರ ಮಧ್ಯದಲ್ಲಿರುವುದು ಪವಿತ್ರ ಸರೋವರ—ಅಮೃತಸರ. ಇದರ ಉದ್ದಳತೆ ತಡಿಗಳಾಗಿಯೂ, ಅಗಲವೂ ಇಪ್ಪತ್ತೇ ಇರುವುದು. ಸರೋವರದ ನಾಲ್ಕು ಬದಿಗಳಲ್ಲಿಯೂ ಹಾಲ್ಗಲ್ಲಿನ ಪಾವಟಿಗೆಗಳಿವೆ. ಕೇಂದ್ರದಲ್ಲಿ ಗುರುದ್ವಾರವೂ, ದರ್ಬಾರ್ ಸಾಹೀಬ್ ಎಂದು ಕರೆಯಲಾಗುವ ಸುವರ್ಣ ದೇವಾಲಯವೂ ಇವೆ. ಸರಸ್ಸಿನ ಪಶ್ಚಿಮ ವಾರ್ಶ್ವದಲ್ಲಿ ೩೦೦ ಅಡಿ ಉದ್ದದ ಸೇತುವೆಯೊಂದಿದೆ. ಸುವರ್ಣ ದೇವಾಲಯತ್ತ ಮಹಾ ಕೌತುಕಗಳಲ್ಲೊಂದಾಗಿದೆ. ಅದರ ರಚನೆಯಲ್ಲಿ ಉಪಯೋಗಿಸಲ್ಪಟ್ಟಿರುವಷ್ಟು ಬಂಗಾರವು ಬೇರಾವ ದೇಗುಲದ ರಚನೆಯಲ್ಲಿ ಉಪಯೋಗಿಸಲ್ಪಟ್ಟಿಲ್ಲವಂತೆ! ಸರಸ್ಸಿನ ವಾಯುವ್ಯ ಭಾಗದಲ್ಲಿ ಬಂಗಾರದ ಒಪ್ಪವಿಟ್ಟಿರುವ ಗೋಲಾಕಾರದ ಶಿಖರ—ತಖ್ತಾ ಅಕಾಲ ಸಾಹೀಬ್ ಇದೆ. ಸುವರ್ಣ ದೇವಾಲಯಕ್ಕೆ ಹರ್ ಮುದಿರ್ ಎಂಬುದು ಇನ್ನೊಂದು ಹೆಸರು. ಕಟ್ಟಡದ ಇಡೀ ಭಾಗ-ಮುಖ್ಯವಾಗಿ ಮೇಲ್ಚಾಗವು ಒಪ್ಪಹಾಕಿದ ಹಾಳೆಗಳಿಂದಾವೃತವಾಗಿಯೂ, ಅವುಗಳ ಮೇಲೆ "ಗ್ರಂಥಸಾಹಿಬ್"ದಿಂದ ಪವಿತ್ರವಾಕ್ಯಗಳು ಕೆತ್ತಲ್ಪಟ್ಟಿವೆ. ಉಚ್ಚರೀತಿಯಲ್ಲಿ ಅಲಂಕೃತವಾದ ಚಿಕ್ಕ "ತಿಖ್ ಮಂಕೆಲ್"-ಗುಮ್ಮಟವು ಕುಳಿತುಕೊಳ್ಳಲು ಉಪಯೋಗಿಸುತ್ತಿದ್ದ ಸ್ಥಳ—ಇದೆ. ಕಾರ್ತಿಕ ಮಾಸದಲ್ಲಿ ಅಮೃತಸರದಲ್ಲಿ ದೊಡ್ಡ ಹಬ್ಬ ಆ ಚರಿಸಲ್ಪಡುತ್ತದೆ.

ಗುರು ನಾನಕರು ಸಿಖ್ ಮತಾನ್ಯಾಯಕರು; ಸಿಖ್ಖರ ಪ್ರಥಮ ಧರ್ಮಗುರು. ಅವರ ಜನ್ಮ ಪಂಜಾಬಿನ ನಂಕಾನಾ ಸಾಹಿಬ್ ಎಂಬಲ್ಲಿ; ೧೪೬೯ರಲ್ಲಿ. ಹಿಂದೂ—ಮುಸ್ಲಿಮ್ ಐಕ್ಯತೆಗಾಗಿ ತಂಬಾ ಪ್ರಯಿಸಿದವರು ನಾನಕರು. ಇವರು ಹಲವು ಸ್ತೋತ್ರಗಳ ಹಾಗೂ ಧಾರ್ಮಿಕ ಗ್ರಂಥಗಳ ಮತ್ತು "ಗ್ರಂಥಸಾಹಿಬ್" ಎಂಬ ಸಿಖ್ ಧರ್ಮ ಗ್ರಂಥಕರ್ತರು. ಗುರು ರಾಮದಾಸರು ಸಿಖ್ಖರ ನಾಲ್ಕನೆಯ ಗುರು. ಇವರಿಂದ ಅಮೃತಸರದ ರಚನೆಯಾಯಿತು. ಆಲ್ಲದೇ ಸುವರ್ಣ ದೇವಾಲಯದ ರಚನಾ ಕಾರ್ಯವೂ ಇವರಿಂದಲೇ ಆರಂಭವಾಯಿತು. ಗುರು ಅರ್ಜುನರು "ಆದಿ ಗ್ರಂಥ", ಕರ್ತರು. ಒಂಭತ್ತನೆಯ ಗುರು ತೇಜ್ ಬಹಾದೂರರು ಆವರಂಗ ಜೇಬನಿಂದ ೧೬೭೫ರಲ್ಲಿ ವಧಿಸಲ್ಪಟ್ಟರು.

ಅವರ ನಂತರ ಅವರ ಪುತ್ರ ಗುರು ಗೋವಿಂದ ಸಿಂಘರು ಸಿಖ್ಖರ ಹತ್ತನೆಯ ಹಾಗೂ ಕೊನೆಯ ಗುರುವಾದರು. ಗುರು ಗೋವಿಂದರು ಮುಘಲರ ವಿರುದ್ಧ ಕಾದಾಡಲು ಸಿಖ್ಖರ ಸೈನ್ಯವೊಂದನ್ನು ನಿರ್ಮಾಡಿಸಿದರು. ಇವರಿಂದ ಸಿಖ್ಖರು ಧಾರ್ಮಿಕವಾಗಿಯೂ, ಸಾಮಾಜಿಕವಾಗಿಯೂ ಸಂಘಟಿಕರಾದರು. ಇವರು ಗುರು ಪಾರಂಪರ್ಯವನ್ನು ರದ್ದುಪಡಿಸಿ, ಪವಿತ್ರ "ಗ್ರಂಥಸಾಹಿಬ್"ನ್ನು ಗುರು ಸ್ಥಾನದಲ್ಲಿ ರಿಸಿದರು. "ಗ್ರಂಥ ಸಾಹಿಬ್"—ಹೆಚ್ಚಾಗಿ ಎಲ್ಲಗುರುಗಳಿಂದಲೂ ರಚಿತವಾದ ಸ್ತೋತ್ರಗಳಿಂದ ಕೂಡಿದುದಾಗಿದೆ. ಅದು ಹಿಂದೂ ಹಾಗೂ ಮುಹಮ್ಮದೀಯ ಧರ್ಮಗುರು ಗುರುಗಳಿಂದ ಸಹ ರಚಿತವಾದ ಪದ್ಯ ಹಾಗೂ ಸ್ತೋತ್ರಗಳಿಂದ ಕೂಡಿದೆ. ಗ ರೂಪದೇಶಗಳೂ ಇದರಲ್ಲಿ ಅಡಕವಾಗಿವೆ. ಸ್ತೋತ್ರಗಳನ್ನು ಬೇರೆ ಬೇರೆ ರಾಗಗಳಲ್ಲಿ ಹಾಡಬಹುದು. ಗುರು ಗೋವಿಂದ ಸಿಂಘರು ಸಿಖ್ಖರನ್ನು ರಾಜಕೀಯ ಹಾಗೂ ಧಾರ್ಮಿಕ ಅಂಧಾಜಾರಗಳ ದಾಸ್ಯದಿಂದ ವಿಮುಕ್ತಗೊಳಿಸಿ, ನಾನಕರಿಂದ ಪ್ರಾರಂಭವಾದ ಸಂಘಟನಾ ಕಾರ್ಯವನ್ನು ಪರಿಪೂರ್ಣಗೊಳಿಸಿ, ಜನತೆಯಲ್ಲಿ ರಾಷ್ಟ್ರೀಯ ಜೈತನ್ಯವನ್ನು ತುಂಬಿಸಿದರು. ಭಾರತದ ಮಹಾ ನಗರಗಳಲ್ಲಿ ಹತ್ತನೆಯದಾದ ಅಮೃತಸರವು ಅವರ ಹುತಾತ್ಮರ ಮಹಾ ಸಮಾಧಿ;

ಸಿಖ್ಖರ ಪವಿತ್ರ ಕ್ಷೇತ್ರ.

—ಎಂ. ರಘುನಂದನ ರಾವ್,
ತಲ್ಲೂರು.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.
ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3½%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%
ಕರೆಂಟ್ ಎಕೌಂಟು ½%

THE MOOLKY BANK. LTD. MULK

ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಣೆಮಾಡುವುದು
ಪ್ರತಿಯೊಬ್ಬರ ನೆಚ್ಚಿನ ಆಸೆ

* * *

ಮೈಸೂರು

ಸ್ಯಾಂಡಲ್ ಸಾಬೂನು

ನಿಮ್ಮ ಸೊಬಗನ್ನು ಕಾಪಾಡಲು ವೃದ್ಧಿಮಾಡಲು
ಒಂದು ನಿಶ್ಚಿತ ಸಾಧನ
ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ ಇದರಲ್ಲಿ ಸೇರಿಸಲಾಗಿದೆ.
ಒಮ್ಮೆ ಉಪಯೋಗಿಸಿ ನೋಡಿ

ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ದೊರೆಯುತ್ತವೆ

* *

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು
ಮೆಂಬರು: ಐ. ಎಸ್. ಟಿ. ಎಂ. ಎ.

Notice
In the Court of District Munsif of Mangalore

S. C. No. 711/1956.

Between:

Jai Hind Trading Co. (Canara) Ltd, represented by its Liquidator sri. M. Jayarama Shetty

—Plaintiff.

and

Palethadi Ibrayi Beary Son of Hasakunhi Beary. Kinya village, Mangalore taluk

—Defendant.

Please take notice that the plaintiff has filed the above suit for recovery of the amount due on account of dealings carried on by the defendant with the plaintiff's Company and the said suit is posted to 19—3—1957. You are requested to appear on the said date and file objections if any, failing which the suit will be derided in your absence.

(By order)

(Sd) K. M. Shenoy,
Advocate for Plaintiff.

Mangalore 1—3—1957.

ಸಂಶೋಧಕರ ಸಾಹಸ

ಕಪ್ಪು ಸಮುದ್ರ ತೀರದಲ್ಲಿ ವಿಚಿತ್ರ ಹಣ್ಣುಗಳ ತೋಟ

ಒಂದೇ ಮರದಲ್ಲಿ ೨೩ ಜಾತಿಯ ಫಲ!!

ಈ ಕಣ್ಣಿನ ತೋಟವು ಕಪ್ಪು ಕಡಲಿನ ಮೇಲೆ ಉಷ್ಣತ ಮಟ್ಟದಲ್ಲಿ, ವಿಸ್ತಾರವಾದ ಪ್ರಸ್ಥ ಭೂಮಿಯು ಮೇಲೆ ಇದೆ. ಇದು ಸಾಧಾರಣವಾದ ಫಲ-ವನವಲ್ಲ. ಹೆಚ್ಚು ಕಡಿಮೆ ಉಷ್ಣ ವಲಯದ ಸಸ್ಯಗಳ ಸಲುವಾಗಿ, ಇದು ಸೋಚಿ ವೈಜ್ಞಾನಿಕ ಕೇಂದ್ರದ ವಿಜ್ಞಾನಿಕ ಸಿದ್ಧಾಂತದ ಪ್ರಯೋಗ ಶಾಲೆಯಾಗಿದೆ. ಈಗ್ಗೆ ೬೦ ವರ್ಷಗಳ ಹಿಂದೆ ಈ ಹಣ್ಣಿನ ತೋಟದಲ್ಲಿ ಮೊದಲಿನ ನಿಂಬೆಯ ಗಿಡವು ನೆಡಲ್ಪಟ್ಟಿತು. ಅದನ್ನು ಅಗ್ನೇಯ ದಿಕ್ಕಿಯದಿಂದ ತರಲಾಗಿತ್ತು. ಎರಡು ಅಥವಾ ಮೂರು ವರ್ಷಗಳ ತರುವಾಯ ಈ ಹಣ್ಣಿನ ತೋಟವು ತನ್ನ ಮೊದಲನೆಯ 'ಮಂದಾರಿನ್' (ಚಪ್ಪಟೆಯಾದ ಕಿರು ಕಿತ್ತಳೆಯ) ಗಿಡಗಳನ್ನು ಪಡೆಯಿತು, ಈ ಸಸಿಗಳು ಚೀಣಾದಿಂದ ತರಲ್ಪಟ್ಟಿದ್ದುವು. ಸೋಚಿ ಕ್ಷೇತ್ರದಲ್ಲಿ ನಿಂಬೆ ಜಾತಿಯ ಹಣ್ಣುಗಳ ಬೆಳೆಯ ಇತಿಹಾಸಕ್ಕೆ ಸೇರಿದ ವಿಷಯಗಳಿವು.

ಜಂಬೀರ ಜಾತಿಯ ಫಲವೃಕ್ಷಗಳ ತೋಟಗಳು ಬಾತೂಮಿಯಿಂದ ಹಿಡಿದು ಯಾಲ್ಟಾದ ವರೆಗೆ ಸರಿ ಸುಮಾರು ಇಡೀ ಕಡಲ ತೀರದಲ್ಲೆಲ್ಲಾ ಬೆಳೆಯುತ್ತಿವೆ. ಸೋಚಿ ವೈಜ್ಞಾನಿಕ ಕೇಂದ್ರದ ವಿಜ್ಞಾನಿ ಕಾರ್ಯಕರ್ತರಿಂದ—ಅವರಲ್ಲಿ ಮುಖ್ಯವಾಗಿ ವೃವಸಾಯ ವಿಜ್ಞಾನ ಪಾಂಡಿತ್ಯವುಳ್ಳ ಡಾ॥ ಯೆಲಿಜವೇತಾ ಗುಸೇವಾರವರಿಂದ, ಈ ಹಣ್ಣಿನ ತೋಟಗಳ ನಿರ್ಮಾಣದಲ್ಲಿ ತುಂಬಾ ಶ್ರಮವು ವಿನಿಯೋಗಿಸಲ್ಪಟ್ಟಿದೆ 'ಮಂದಾರಿನ್' ಕಿರುಗಿತ್ತಳೆಯ ಜೀವ ವಿಜ್ಞಾನದಲ್ಲಿ ಆಕೆಯು ನಡೆಸಿದ ಮೂಲ ಸಂಶೋಧನೆಗಳು ಸೋವಿಯಟ್ ಒಕ್ಕೂಟದಲ್ಲಿಯೂ, ಹೊರದೇಶಗಳಲ್ಲಿಯೂ ಸುಪರಿಚಿತವಾಗಿವೆ.

ಸೋಚಿನಗರದಲ್ಲಿನ ಸಮಿಪೋಷ್ಣ ವಲಯ ಫಲವನದ, ಹೆಬ್ಬಾಗಿಲಿನ ಬಳಿ ಉತ್ಸಾಹಭರಿತವಾದ ನೀಲಿಗಣ್ಣುಗಳ, ಬಿಳಿಗೂದಲಿನ ಬಿಸಿಲು—ಗಂದು ಬಣ್ಣದ ಮಹಿಳೆಯೊಬ್ಬಾಕೆಯು ನಮ್ಮನ್ನು ಸ್ವಾಗತಿಸಿದರು. ಆಕೆಯೇ ಯೆಲಿಜವೇತಾಗು ಸೇವಾ ಆಗಿದ್ದರು ಆಕೆಗೆ ಎಂಭತ್ತು ವರ್ಷ ವಯಸ್ಸಾಗಿದೆಯೆಂದು ನಂಬುವುದಕ್ಕೆ ಸಾಧ್ಯವಾಗದು. ಆಕೆಯು ದೃಢವಾದ ಪುಟಾಣಿಯವ-ಹೆಜ್ಜೆ ಹಾಕುತ್ತ ನಡೆದರು ಆಕೆಯು ಹಣ್ಣಿನ ತೋಟದಲ್ಲಿ ತನ್ನ ಪ್ರಾತಃಪರ್ಯಟನೆಯಲ್ಲಿ ತೊಡಗಿದ್ದರು.

ಎಳೆಯ 'ಮಂದಾರಿನ್' ಕಿರುಗಿತ್ತಳೆಯ ಗಿಡವೊಂದರ ಬಳಿ ಆಕೆಯು ನಿಂತುಕೊಂಡರು. ಗಿಡದ ಕೆಂಬೆಗಳು ಹಣ್ಣಿಯ ಬಣ್ಣದ ದೊಡ್ಡ ಹಣ್ಣುಗಳ ಭಾರಕ್ಕೆ ಬಗ್ಗಿದ್ದುವು.

"ನಿಮಗೆ ಯಾವುದು ಬೇಕೋ ಅದು ತೆಗೆದುಕೊಳ್ಳಿ, ದಯವಿಟ್ಟು—ಎಂದು ಅವರು ನಮಗೆ ಹೇಳಿದರು.

ನಾವು ಪ್ರತಿಯೊಬ್ಬರೂ ಒಂದೊಂದು 'ಮಂದಾರಿನ್' ಕಿರುಗಿತ್ತಳೆ ಹಣ್ಣನ್ನು ಕಿತ್ತುಕೊಂಡೆವು.

"ನೀವು ಅದನ್ನೇನೂ ಸುಲಿಯಬೇಕಾದ ಅವಶ್ಯಕತೆಯಿಲ್ಲ. ಈ "ಮಂದಾರಿನ್" ಹಣ್ಣುಗಳನ್ನು ಸಿಪ್ಪೆ ಸಹಿತವಾಗಿ ತಿನ್ನಬಹುದು"

ನಿಜ, ಸಿಪ್ಪೆಯು ಅಸಾಧಾರಣವಾಗಿ ಮೃದುವಾಗಿತ್ತು. ಸಿಹಿಯಾಗಿಯೂ ಇತ್ತು.

"ಇದೊಂದು ಹೊಸ ಬಗೆಯ ಹಣ್ಣು, ಮಿಚುರಿನ್ ಪದ್ಧತಿಯಿಂದ ಬೆಳೆಸಿದುದು."

ಮಹಾ ಪ್ರಕೃತಿ ಶಾಸ್ತ್ರಜ್ಞ ರಷಿಯನ್ ಮೇಧಾವಿ ಐ. ವಿ. ಮಿಚುರಿನ್‌ರವರ ಮುಂದುವರಿದ ಜೀವ ವಿಜ್ಞಾನ ಸಿದ್ಧಾಂತವು "ಪವಾಡ"ಗಳನ್ನು ಮಾಡಲು ಸಾಧ್ಯತೆಯನ್ನು ಉಂಟುಮಾಡುತ್ತದೆ. ಗುಸೇವಾರವರು ಈ ಸಿದ್ಧಾಂತದ ಮಾರ್ಗದರ್ಶನವನ್ನೇ ಸಡೆದಿದ್ದಾರೆ.

ನಾವು ಈ ಹಣ್ಣಿನ ತೋಟದಲ್ಲಿ "ಎರಡು ಅಂತಸ್ತುಗಳ" ಮರವೊಂದನ್ನು ಕಂಡೆವು ಅದರ ತುದಿಯ ಕೆಳಭಾಗದಲ್ಲಿ ಕಿತ್ತಳೆ ಹಣ್ಣುಗಳು ಇದ್ದುವು; ಮೇಲ್ಭಾಗದಲ್ಲಿ ನಿಂಬೆಹಣ್ಣುಗಳಿದ್ದುವು.

ಅದರಂತೆಯೆ ಇನ್ನೂ ಹೆಚ್ಚು ಸ್ವಾರಸ್ಯಕರವಾದ ಗಿಡವಿತ್ತು. ಆ ಒಂದು ಗಿಡವೇ ಒಂದು ಇಡೀ ಹಣ್ಣಿನ ತೋಟವಾಗಿತ್ತು! ಈ ಒಂದು ಗಿಡದಲ್ಲಿಯೇ 'ಜೊಂಪೆಲ್ಯಸ್' ಹಣ್ಣುಗಳೂ, ಅಮೆರಿಕದ ಚಕ್ಕೋತದ ಜಾತಿಯ 'ಗ್ರೇಪ್ ಫ್ರುಟ್' ಗಳೂ, ಸ್ಪೈಯಿನ್ ದೇಶದ ಕಿತ್ತಳೆ ಹಣ್ಣುಗಳೂ, ಇಟಲಿಯ ನಿಂಬೆ ಹಣ್ಣುಗಳೂ ಮತ್ತು ಜಪಾನಿನ 'ಮಂದಾರಿನ್' ಕಿರುಗಿತ್ತಳೆ ಹಣ್ಣುಗಳೂ ಬೆಳೆದಿದ್ದುವು. ಈ ಹಣ್ಣುಗಳು ಸೋಚಿ ಕೇಂದ್ರದಲ್ಲಿ ವಿಕಾಸಗೊಳಿಸಲ್ಪಟ್ಟ ಹೊಸಬಗೆಗಳ ಹಣ್ಣುಗಳೆಂದಿಗೆ, ಒಂದರ ಬದಿಯಲ್ಲಿನ್ನೊಂದು, ಒಂದೇ ಗಿಡದ ಮೇಲೆ ಬೆಳೆಯುತ್ತಿದ್ದುವು. ಒಂದೇ ಒಂದು ಮರದ ಮೇಲೆ ಇಪ್ಪತ್ಮೂರು ವಿಧಗಳ ನಿಂದೆ ಜಾತಿಯ ಹಣ್ಣುಗಳು!

ಆದರೂ ಕೂಡ, ಒಂದೇ ಗಿಡದ ಮೇಲೆ ಅನೇಕ ಬಗೆಗಳ ಜಂಬೀರ ಜಾತಿಯ ಹಣ್ಣುಗಳನ್ನು ಬೆಳೆಸುವುದೇ ಏಕ ಮಾತ್ರ ಲಕ್ಷ್ಯವೇನೂ ಇಲ್ಲ ಆಗಿಲ್ಲ. ಹೊಸ ಮಾದರಿಗಳನ್ನು ಬೆಳೆಸುವುದಕ್ಕೆ, ಇದು ಮಿಚುರಿನ್‌ರವರ ಪದ್ಧತಿಗಳಲ್ಲಿ ಒಂದು ಪ್ರಯೋಗವಾಗಿದೆ ಮಾತ್ರ.

ಕಳೆದ ವರ್ಷದಲ್ಲಿ, ಈ ನಿಲ್ದಾಣದಲ್ಲಿ ಕೆಲಸಮಾಡುತ್ತಿರುವ ವಿಜ್ಞಾನಿಗಳು ಈ ಗಿಡ-ತೋಟದ ಒಂದು ರೆಂಬೆಗೆ ಕಿತ್ತಳೆ-ನಿಂಬೆಯ ಮಿಶ್ರತಳಿಯ ಮೊಗ್ಗನ್ನು ಕಸಿ ಮಾಡಿದರೆಂದು ಯೆಲಿಜವೇತಾ ಗುಸೇವಾರವರು ನಮ್ಮೊಡನೆ ಹೇಳಿದರು.

"ನೀವು ಈ ಪರಿಣಾಮವನ್ನು ಈಗ ನೋಡಬಹುದು," ಎನ್ನುತ್ತಾ ಆಕೆಯು ಉಬ್ಬಿಕೊಂಡಿದ್ದ ಹೊಂಬಣ್ಣದ ಕಿತ್ತಳೆ ಸಿಪ್ಪೆಯಿದ್ದ ಹಣ್ಣನ್ನು ತೋರಿಸಿದರು. "ಒಂದು ಮರದ ಮೇಲೆ ಬೆಳೆದ ಇಪ್ಪತ್ತೂರು ವಿಧವಾದ ಜಂಬೀರ ಫಲಗಳ ಪೋಷಣೆಯನ್ನು ಪಡೆದು, ಈ ಹೊಸ ಹಣ್ಣು ತನ್ನ ಅನೇಕ "ಪಾಕು-ಮರಗಳ" (ನರ್ಸರಿಸ್) ಗುಣಗಳನ್ನು ಪಡೆಯಿತು. ನಿಂಬೆ ಜಾತಿಯ ಹಣ್ಣುಗಳ ಹೊಸ, ಸ್ವಾರಸ್ಯಕರವಾದ ರೂಪಗಳನ್ನು ವಿಕಾಸ ಗೊಳಿಸುವುದರ ಸಲುವಾಗಿ ಇದರ ಬೀಜವು ಬಳಸಲ್ಪಡುವುದು"—ಎಂದು ಆಕೆಯು ನಮಗೆ ಹೇಳಿದರು.

ಗುಸೇವಾರವರು ನವಗೊಂಡು 'ಮಂದಾರಿನ್' ಗಿಡವನ್ನು ತೋರಿಸಿದರು. ಆ ಗಿಡದಲ್ಲಿದ್ದ ಎಲೆಗಳು, ಅಂಕೆಗಳಂದ ತುಂಬಿದ್ದ ಚೀಟಿಗಳಿಗಿಂತ (ಲೇಬೆಲ್ಸ್) ಕಡಿಮೆಯಾಗಿದ್ದುವು.

"ಇದು ನನ್ನ ಪ್ರಯೋಗ ಪರೀಕ್ಷೆಯ ಗಿಡ" ಎಂದು ಆಕೆ ವಿವರಿಸಿದರು.

'ಮಂದಾರಿನ್' ಗಿಡದ ಜೀವವಿಜ್ಞಾನ ಅಭ್ಯಾಸಕ್ಕೆ ಯೆಲಿಜ ವೇತಾಗು ಸೇವಾರವರು ಮಹತ್ವ ಪೂರ್ಣವಾದ ಕೊಡುಗೆಯನ್ನು ನೀಡಿದ್ದಾರೆಂಬುದನ್ನು ನಾವು ತಿಳಿದಿದ್ದೆವು. ಆಕೆಯು ತನ್ನ ಸಂಶೋಧನೆಯನ್ನು ಹೇಗೆ ಸಾಧಿಸಿದ ರೆಂಬುದನ್ನು ನಾವು ತಿಳಿದುಕೊಳ್ಳಲು ಆಕೆಯನ್ನು ಕೇಳಿದೆವು.

"ಅದೊಂದು ದೊಡ್ಡ ಕತೆ" ಎಂದು ಆಕೆ ನಿಧಾನವಾಗಿ ಪ್ರಾರಂಭಿಸಿದರು.

ಅದು ನಿಜವಾಗಿಯೂ ನಿಶ್ಶಕ್ತಿಯಿಂದಿಯೇ ಇದ್ದಿತು. ಹೊಸತರ ಶೋಧನೆ ಯಲ್ಲಿನಡೆದ ಶ್ರಮ ಪೂರ್ಣವಾದ ಸಂಶೋಧನೆ, ಅನೇಕ ವರ್ಷಗಳ ವರೆಗೆ....

ಳುವರ್ಷ ವಯಸ್ಸಾಗುವ ವರೆಗೂ ಯೆಲಿಜವೇತ ಗುಸೇವಾರವರು ಒಬ್ಬ ಸಾಮಾನ್ಯ ರೈತ ಮಹಿಳೆಯಾಗಿದ್ದರು. ಆಕೆಯು ರಶಿಯದ ಒಂದು ಹಳ್ಳಿಯಲ್ಲಿದ್ದರು. ಆದರೆ ಜ್ಞಾನಾರ್ಜನೆಗಾಗಿ ಆಕೆಯು ತುಂಬಾ ಹಸಿದಿದ್ದರು. ಶಿಕ್ಷಣದ ಸಲುವಾಗಿ ಸೋವಿಯತ್ ಸರಕಾರವು ಅವಕಾಶವನ್ನು ಆಕೆಗೆ ತೆರೆದಾಗ, ಯೆಲಿಜವೇತಾಗುಸೇವಾರವರು ಕಾರ್ಮಿಕರ ಶಿಕ್ಷಣಾಲಯವನ್ನೂ (ಕ್ರಾಂತಿ ಯೂದೊಡನೆಯೇ ವಯಸ್ಕರ ಸಲುವಾಗಿ ತೆರೆಯಲಾದ ವಿಶೇಷ ಉಚ್ಚ ವಿದ್ಯಾಲಯ ಸಿದ್ಧತಾ ಪಾಠಶಾಲೆಗಳು) ಸೇರಿದರು. ಮತ್ತು ಆಮೇಲೆ ತಿಮಿರ್ಯಾಜೇವ್ ವೃವಸಾಯ ವಿದ್ಯಾಮಂದಿರದಲ್ಲಿ ವ್ಯಾಸಂಗವನ್ನು ನಡೆಸಿದರು. ಆಕೆಯು ಇನ್ನೂ ವಿದ್ಯಾಮಂದಿರದಲ್ಲಿ ಇದ್ದಾಗಲೇ ಐ. ವಿ. ಮಿಚುರಿನ್‌ರವರ ಕೈ ಕೆಳಗೆ ಕ್ರಿಯಾತ್ಮಕ ತರಬೇತನ್ನು ಪಡೆಯುವ ಸದವಕಾಶವು ಆಕೆಗೆ ದೊರೆಯಿತು. ಈ ನಡುವಯಸ್ಸಿನ ವಿದ್ಯಾರ್ಥಿನಿಯು ಹೆಸರಾಂತ ಪ್ರಕೃತಿ ಶಾಸ್ತ್ರಜ್ಞರ ಗಮನವನ್ನು ಆಕರ್ಷಿಸಿದರು ಒಂದು ದಿನ ಅವರಿಬ್ಬರೂ ಮಾತನಾಡುತ್ತಿದ್ದಾಗ, ಗಿತಗಳನ್ನು ಸಮರುತ್ತ (ಪ್ರೂನಿಂಗ್), ಹಣ್ಣಿನ ಬೆಳೆಗಳನ್ನು ತೆಗೆಯುವ ವಿಷಯದಲ್ಲಿ ತನಗಿದ್ದ ಅಭಿಪ್ರಾಯಗಳನ್ನು ಆಕೆಯು ವಿಜ್ಞಾನವೇತ್ತರಿಗೆ ತಿಳಿಸಿದರು.

"ತುಂಬಾ ಸ್ವಾರಸ್ಯಕರವಾಗಿದೆ!" ಎಂದು ಉತ್ತೇಜನಕೊಡುತ್ತಾ ಮಿಚುರಿನ್‌ರವರು ತಮ್ಮ ಒಪ್ಪಿಗೆಯನ್ನು ಸೂಚಿಸಿ, ಹೀಗೆಂದರು:

"ಅದಕ್ಕೆ ಹತ್ತಾರು ವರ್ಷಗಳ ಪರಿಶ್ರಮ ಬೇಕು. ನಿಮಗೆ ಈಗಾಗಲೇ ಕೂದಲು ಬಿಳುಪಾಗುತ್ತಿದೆಯಲ್ಲಾ."

ಗುಸೇವಾರವರಿಗೆ ಏನೂ ಹೇಳುವ ಧೈರ್ಯವಾಗಲಿಲ್ಲ. ಆದರೆ ಆಕೆಯು ತಮ್ಮ ನುನಸ್ಸಿನಲ್ಲಿ ದೃಢ ಸಂಕಲ್ಪ ಮಾಡಿಕೊಂಡಿದ್ದರು: "ನಾನು ಬದುಕಿರುವೆನು. ಆದನ್ನು ಸಾಧಿಸುವೆನು. ಸಾಧಿಸುವುದಕ್ಕಾಗಿ ನಾನು ಉಳಿಯಲೇ ಬೇಕು!"

ವರ್ಷಗಳ ಗಟ್ಟಲೆ ತಾಳ್ಮೆಯ ಸಮೀಕ್ಷೆಗಳು ನಡೆದುವು. 'ಮಂದಾರಿನ್' ಗಿಡದ ಹಲವು ಮುಖ್ಯ ರಹಸ್ಯಗಳನ್ನು ಹುಡುಕಿ ಆಳವಿಂದ ಹೊರದೆಗೆಯಲು ಆಕೆ ಸಮರ್ಥರಾದರು. ಹಣ್ಣು ಬಿಡುವುದಕ್ಕೆ ಸಂಬಂಧಪಟ್ಟ ನಿಯಮಗಳನ್ನು ಆಕೆಯು ಕಂಡು ಹಿಡಿದರು. 'ಮಂದಾರಿನ್' ಕಿರುಗಿತ್ತಳೆ ಗಿಡದ ಪ್ರತಿಯೊಂದು ರೆಂಬೆಯಲ್ಲಿಯೂ ಹಣ್ಣು ಬಿಡದು, ಹೂ ಬಿಡುವುದಿಲ್ಲ ಸಹ ಎಲ್ಲಾ ರೆಂಬೆಗಳಲ್ಲೂ ಅಲ್ಲ ಇತರ ರೆಂಬೆಗಳು ಕೆಲವು ಹಣ್ಣುಗಳನ್ನು ಮಾತ್ರವೇ ಬಿಡುವಲ್ಲಿ, ಇನ್ನೂ ಕೆಲವು ರೆಂಬೆಗಳು ಅತ್ಯುನ್ನತ ಸಂಖ್ಯೆಯ ಹಣ್ಣುಗಳನ್ನು ಬಿಡುತ್ತವೆ. ಇವು ನಾಲ್ಕನೆಯ ಶ್ರೇಣಿಯ ರೆಂಬೆಗಳಾಗಿವೆ. ಅವು ಸ್ವಲ್ಪ ಹೆಚ್ಚು ಕಡಮೆ ತುದಿಯ ಮಧ್ಯ ಭಾಗದಲ್ಲಿ ಇರುತ್ತವೆ.

ತಮ್ಮ ಪ್ರಯೋಗ ಪರೀಕ್ಷೆಗಳ ತಳಹದಿಯು ಮೇಲೆ, ಗುಸೇವಾರವರು ಹೊಸ ವಿಧಾನಗಳಿಂದ ಗಿಡಗಳನ್ನು ಬೆಳೆವಣಿಗೆಗಾಗಿ ಕುಡಿ ಕತ್ತರಿಸುವ ಪದ್ಧತಿಯನ್ನು ವಿಕಾಸಗೊಳಿಸಿದರು. ಈ ಪದ್ಧತಿಯ ಪರಿಣಾಮವಾಗಿ ಅತ್ಯಂತ ಫಲವತ್ತಾಗಿರುವ

(ಇನ್ನೇ ಪುಟ ನೋಡಿರಿ)

ಶ್ರೀವಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಆನಂದ ಸುಧ



ನಮ್ಮ "ಆನಂದ ಸುಧ" ಸಮಸ್ತ ಜನಗಳಿಗೆ ಬಲವನ್ನು ಖಂಡ ಪುಷ್ಟಿಯನ್ನು ಹೆಚ್ಚಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿಹೋಗುವ ಒ ಬಾಟ್ಲಿನ್ಸ್ ಸೀಸೆಗಿಕ್ಕೆ ರೂ. ೩—೦—೦.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ಫೈಮ್ಯಶಾಲಾ—ಬೆಂಗಳೂರು 2.
(2) ಸಾ ಕಂಪೆನಿ—ಮಂಗಳೂರು 1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

ಸುಧಾರಣೆ

ನಾಣ್ಯಗಳ ಹೊಸ ಸ್ವರೂಪ

ಭಾರತದಲ್ಲಿ ಹೊಸ ದಶಾಂಶ ನಾಣ್ಯಗಳನ್ನು ಇದೇ ೧ನೇ ಏಪ್ರಿಲಿನಿಂದ ಚಲಾವಣೆಗೆ ತರಲಾಗುತ್ತದೆ.

ಈಗ ಚಲಾವಣೆಯಲ್ಲಿರುವ ಒಂದು ರೂಪಾಯಿ, ಅರ್ಧ ರೂಪಾಯಿ ಮತ್ತು ಕಾಲು ರೂಪಾಯಿಯ ನಾಣ್ಯಗಳು ಮುಂದೆ ಸಹ ಚಲಾವಣೆಯಲ್ಲಿ ಉಳಿದು ಹೊಸ ಹಾಗು ಹಳೆಯ ಎರಡೂ ಪದ್ಧತಿಗಳಿಗೂ ಸಾಮಾನ್ಯವೆನಿಸುತ್ತವೆ.

ಸದ್ಯ ಬಳಕೆಯಲ್ಲಿರುವ ಎಲ್ಲ ನಾಣ್ಯಗಳೂ ಇನ್ನು ಸುಮಾರು ಮೂರು ವರ್ಷಗಳ ವರೆಗೆ, ಕಾನೂನಿನ ದೃಷ್ಟಿಯಲ್ಲಿ ಮನ್ನಣೆಯನ್ನು ಹೊಂದಿದ ನಾಣ್ಯಗಳಾಗಿಯೇ ಭಾವಿಸಲ್ಪಟ್ಟು, ಚಲಾವಣೆಯಲ್ಲಿ ಹೊಸ ನಾಣ್ಯಗಳ ಜೊತೆಗೆನೇ ಉಳಿಯುತ್ತವೆ. ಆದರೆ ಮಧ್ಯಂತರದ ಈ ಮೂರು ವರ್ಷಗಳ ಕಾಲಪಲ್ಲಿ ಹೊಸ ನಾಣ್ಯಗಳನ್ನು ಹೆಚ್ಚು ಹೆಚ್ಚಾಗಿ ಚಲಾವಣೆಗೆ ತಂದಂತೆಲ್ಲ ಹಳೆಯ ನಾಣ್ಯಗಳನ್ನು ಚಲಾವಣೆಯಿಂದ ಹಿಂದೆಗೆದು ಕೊಳ್ಳುವ ಏರ್ಪಾಟನ್ನು ಸರಕಾರವು ಮಾಡುತ್ತದೆ.

ಎರಡಾಣೆ ಮತ್ತು ಅದಕ್ಕಿಂತ ಕಡಿಮೆ ಬೆಲೆಯ ಈಗಿನ ನಾಣ್ಯಗಳನ್ನೆಲ್ಲ ಮೊದಲಾಗಿ ಚಲಾವಣೆಯಿಂದ ಹಿಂದೆಗೆಯಲಾಗುತ್ತದೆ. ದಶಾಂಶ ಪದ್ಧತಿಯಂತೆ ೧೦ ನಯೇ ಪೈಸೆ ಮತ್ತು ಅದಕ್ಕಿಂತ ಕಡಿಮೆ ಬೆಲೆಯ ೫ ನಯೇ ಪೈಸೆ, ೨ ನಯೇ ಪೈಸೆ ಮತ್ತು ಒಂದು ನಯಾ ಪೈಸಾವೆಂಬ ಒಟ್ಟು ನಾಲ್ಕು ಬಗೆಯ ಹೊಸ ನಾಣ್ಯಗಳನ್ನು ಮೊದಲಿಗೆ ಚಲಾವಣೆಗೆ ಸಾಕಷ್ಟು ಹೆಚ್ಚು ಪ್ರಮಾಣದಲ್ಲಿ ಹೊಸ ಪದ್ಧತಿ ಪ್ರಕಾರ ತರಲಾಗುತ್ತದೆ.

ಹೊಸ ನಾಣ್ಯಗಳ ಒಂದು ಮುಖದಲ್ಲಿ ಅಶೋಕಸ್ತಂಭದ "ಸಿಂಹ ಮುಖವನ್ನೂ" "ಭಾರತ" ಎಂದು ಹಿಂದಿಯಲ್ಲಿ ಹಾಗು "ಇಂಡಿಯಾ" ಎಂದು ಇಂಗ್ಲಿಷಿನಲ್ಲಿ ಕೆತ್ತಲಾಗಿರುತ್ತದೆ. ಮತ್ತೊಂದು ಬದಿಯಲ್ಲಿ ನಾಣ್ಯವನ್ನು ಮುದ್ರಿಸಿದ ವರ್ಷ ಮತ್ತು ನಯೇ ಪೈಸೆ ಲೆಕ್ಕದ ಪ್ರಕಾರ ಅದರ ಬೆಲೆ ಎಷ್ಟು ಎಂಬುದನ್ನು ಬರೆಯಲಾಗಿದೆ. ಇಲ್ಲಿ ಅಕ್ಷರಗಳು ಹಿಂದಿಯಲ್ಲೂ ಅಂಕೆಗಳು ಅಂತಾರಾಷ್ಟ್ರೀಯ ಸ್ವರೂಪದಲ್ಲೂ (ಅಂದರೆ ಇಂಗ್ಲಿಷ್) ಇರುತ್ತವೆ.

ಇನ್ನು ಮುಂದೆ ಒಂದು ರೂಪಾಯಿ (೧೦೦ ನಯೆ ಪೈಸೆ), ಅರ್ಧ ರೂಪಾಯಿ (೫೦ ನಯೆ ಪೈಸೆ) ಮತ್ತು ಕಾಲು ರೂಪಾಯಿ (೨೫ ನಯೇ ಪೈಸೆ) ನಾಣ್ಯಗಳು ಶುದ್ಧ ನಿಕ್ಕೆಲಿನಿಂದ ತಯಾರಿಸಲ್ಪಡುತ್ತವೆ ೧೦, ೫ ಮತ್ತು ೨ ನಯೆ ಪೈಸೆ ನಾಣ್ಯಗಳನ್ನು ೭೫% ತಾಮ್ರ ಮತ್ತು ೨೫% ನಿಕ್ಕೆಲಿನಿಂದ ತಯಾರಿಸಲಾಗುತ್ತದೆ. ೧ ನಯಾ ಪೈಸಾ ನಾಣ್ಯವು ಕಂಚಿನದು.

ಹೊಸ ನಾಣ್ಯಗಳನ್ನು ರಿಜರ್ವ್ ಬೇಂಕ್, ಸ್ಟೇಟ್ ಬೇಂಕ್ ಮತ್ತು ಟ್ರೆಜರಿ, ಸಬ್ ಟ್ರೆಜರಿಗಳ ಮೂಲಕ ಸಾರ್ವಜನಿಕರ ಕೈಗೆ ಮುಟ್ಟಿಸಲಾಗುತ್ತದೆ.

ಲೆಕ್ಕಪತ್ರಗಳನ್ನು ಇನ್ನು ಮುಂದೆ ಹೊಸ ಕ್ರಮದಲ್ಲಿ ಇಡಲಾಗುತ್ತದೆ. ಸರಕಾರಕ್ಕೆ ಸಲ್ಲಬೇಕಾದುದನ್ನು ಸರಕಾರದಿಂದ ಸಲ್ಲತಕ್ಕದ್ದನ್ನು ರೂಪಾಯಿ ಮತ್ತು ನಯೆ ಪೈಸೆಗಳಲ್ಲಿ ನಮೂದಿಸಲಾಗುತ್ತದೆ.



ಎಲ್ಲ ಚಲನವಲನಗಳನ್ನೂ ಹೊಸ ನಾಣ್ಯ ಪದ್ಧತಿಯಂತೆಯೇ ಬರೆಯ ಬೇಕಾಗುತ್ತದೆ.

ನಾಣ್ಯ ಪದ್ಧತಿಯನ್ನು ದಶಾಂಶಕ್ಕೆ ಪರಿವರ್ತನೆ ಮಾಡುವ ಮೂಲಕ ಭಾರತವು ಜಗತ್ತಿನಲ್ಲಿ ನಾಣ್ಯಗಳನ್ನು ಹೊರಡಿಸುತ್ತಿರುವ ೧೪೦ ರಾಷ್ಟ್ರಗಳಲ್ಲಿ ದಶಾಂಶ ಪದ್ಧತಿಯನ್ನು ಈಗಾಗಲೇ ಸ್ವೀಕರಿಸಿದ ರಾಷ್ಟ್ರಗಳ ಮಾಲಿಕೆಗೆ ೧೦೬ನೇ ಮಣಿಯಾಗಿ ಸೇರಿತೆಂದು ಹೇಳಬಹುದು.

ಚಿತ್ರದಲ್ಲಿ ಮೇಲಿನ ಎರಡು ಅಂಕಣಗಳು ಹೊಸ ನಾಣ್ಯಗಳನ್ನು ತೋರಿಸುತ್ತವೆ. ಬಲಭಾಗದ ಅಂಕಣದಲ್ಲಿ ಒಂದನೇ ಎಪ್ರಿಲಿನಂದು ಜ್ಯಾರಿಗೆ ಬರಲಿರುವ ನಾಲ್ಕು ಹೊಸ ನಾಣ್ಯಗಳನ್ನು ಕಾಣಬಹುದು. ಎಡಭಾಗದಲ್ಲಿ ಹಿಂದಿನಿಂದ ಚಲಾವಣೆಗೆ ಬರಲಿರುವ ಮೂರು ಹೊಸ ನಾಣ್ಯಗಳ ಮುಖವನ್ನೂ ಅವುಗಳೆಲ್ಲದ ಕ್ಕೂ ಸಮಾನವಾದ "ಸಿಂಹ ಮುಖ"ದ ಬೆನ್ನನ್ನೂ ಕಾಣಬಹುದು.

ಚಿತ್ರದ ಕೆಳ ಅಂತಸ್ತಿನ ಎಡಭಾಗದಲ್ಲಿ ಅರ್ಧಾಣೆ, ಒಂದಾಣೆ ಮತ್ತು ಎರಡಾಣೆಗೆ ಹೊಸ ಪದ್ಧತಿ ಪ್ರಕಾರ ಎಷ್ಟು ನಯೆ ಪೈಸೆಗಳಾಗುತ್ತವೆಂಬುದನ್ನೂ ಬಲ ಭಾಗದಲ್ಲಿ ಮೂರಾಣೆಗೆ ಎಷ್ಟು ನಯೆ ಪೈಸೆಗಳೆಂಬುದನ್ನೂ ಆ ನಾಣ್ಯಗಳನ್ನು ಮುದ್ರಿಸಿ ಕಾಣಿಸಿರುತ್ತದೆ.

ಮಕ್ಕಳ ಸಾಹಿತ್ಯ ಸ್ಪರ್ಧೆ

ಭಾರತ ಸರ್ಕಾರದ ಶಿಕ್ಷಣ ಶಾಖೆಯವರು 'ಶಿಶು ಸಾಹಿತ್ಯಕ್ಕೆ ಉತ್ತೇಜನ' ವೀಯುವ ಯೋಜನೆಯ ಪ್ರಕಾರ ನಡೆಸುತ್ತಿರುವ ಮೂರನೆಯ ಸ್ಪರ್ಧೆಗೆ ಪುಸ್ತಕಗಳನ್ನೂ ಹಸ್ತ ಪ್ರತಿಗಳನ್ನೂ ಸ್ವಾಗತಿಸಲಾಗಿದೆ. ಹಿಂದಿ, ಸಿಂಧಿ ಮತ್ತು ಉರ್ದು ಭಾಷೆಗಳಲ್ಲಿನ ಪುಸ್ತಕ ಮತ್ತು ಹಸ್ತ ಪ್ರತಿಗಳನ್ನು ಸಂಬಂಧಪಟ್ಟ ರಾಜ್ಯ ಸರ್ಕಾರಗಳಿಗೆ ಸಲ್ಲಿಸಬೇಕು.

ವಿವಿಧ ಭಾರತೀಯ ಭಾಷೆಗಳಲ್ಲಿ ಬರೆದ ಉತ್ತಮ ಪುಸ್ತಕಗಳು ಮತ್ತು ಹಸ್ತ ಪ್ರತಿಗಳ ಕರ್ತೃಗಳಿಗೆ ಒಟ್ಟು ಸುಮಾರು 30 ಬಹುಮಾನಗಳನ್ನು ಪಂಚಲಾಗುವುದು. 500 ರೂಗಳ 25 ಬಹುಮಾನಗಳನ್ನೂ 1,000 ರೂ.ಗಳ 5 ಬಹುಮಾನಗಳನ್ನೂ ನೀಡಲಾಗುವುದು. 3 ರಿಂದ 6 ಮತ್ತು 7 ರಿಂದ 14 ರ ವರೆಗಿನ ವಯಸ್ಸಿನ ಬಾಲಕರಿಗೆ ಅನುಕೂಲವಾಗುವ ಪುಸ್ತಕಗಳನ್ನು ಬಹುಮಾನಗಳಿಗಾಗಿ ಆರಿಸಲಾಗುವುದು.

1,000 ರೂ. ಗಳ ಎರಡು ಬಹುಮಾನಗಳನ್ನು ಹಿಂದಿಗಾಗಿ ವಿಶಿಷ್ಟವಾಗಿಡಲಾಗುವುದು. ನಿರೀಕ್ಷಿಸಿರುವ ಮಟ್ಟದ ಪುಸ್ತಕ ಹಾಗೂ ಹಸ್ತಪ್ರತಿ ಬರದಿದ್ದರೆ ನಾತ್ಕ

(ಎನೇ ಪುಟ ನೋಡಿರಿ)

ನಿಮ್ಮಷ್ಟಕ್ಕೆ ನೀನೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಕ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:— ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಪ್ರತಿಗಳು ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಗೋ ವಿಜಯ
(ಗೋವಿನ ಕಥೆ)
ಶ್ರೀ ಮುಷ್ಯಸ್ಥಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಕ್ರಮಂಗ.
ತಮ್ಮಷ್ಟಕ್ಕೆ ತಾನೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗು ತಾರೀಕಿಕ ಶಿಕ್ಷಣ ಮೊದಲಾದುವನ್ನು ಏಕ ಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ
60 ಪುಟಗಳು: ಬೆಲೆ 0—8—0.
ನವಯುಗ ಪ್ರೆಸ್, ಉಡುಪಿ.

NAVAYUGA

Popular Kannada Weekly

Founder:—

A. B. SHETTY, *M. L. A.*

Formet Minister for Public Health, Govt. of Madras.

At Present Minister for Health Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೬	೧೪–೩–೧೯೫೬	೨೭

ಕಾಂಗ್ರೆಸಿನ ಪ್ರಚಾರ

ಈ ಸಲದ ಚುನಾವಣೆಗಳ ಸಲುವಾಗಿ ನಡೆಸಬೇಕಾಗಿದ್ದ ಪ್ರಚಾರ ಕಾರ್ಯಕ್ಕೆ ಈಗ ನಮ್ಮ ಜಿಲ್ಲೆಯಲ್ಲಿ ವಿರಾಮ ಬೀರೆತಿದೆ; ಏಕೆಂದರೆ ಎಲ್ಲ ಕೇಂದ್ರಗಳಲ್ಲೂ ಚುನಾವಣೆಯು ನಡೆದಾಗಿದ್ದು ಇನ್ನು ಶಾಸನಾಂಗದ ಐದು ಸ್ಥಾನಗಳ ಮತ್ತು ಲೋಕ ಸಭೆಯ ಎರಡು ಸ್ಥಾನಗಳ ಫಲಿತಾಂಶ ಸಾರಲ್ಪಡುವುದು ಮಾತ್ರ ಬಾಕಿ ಇದೆ. ಆ ಫಲಿತಾಂಶಗಳು ಹೇಗೆಯೇ ಇರಲಿ—ಚುನಾವಣೆಯ ಕಾಲದಲ್ಲಿ ಸಂಪಾದಿಸಿದ ಅನುಭವವನ್ನು ವಿಮರ್ಶಿಸಿದ್ದಾದರೆ ಕಾಂಗ್ರೆಸ್ಸು ಎಚ್ಚೆತ್ತುಗೊಳ್ಳಬೇಕಾದ ಪರಿಸ್ಥಿತಿ ಇದೆ ಎಂಬುದಾಗಿ ಹೇಳಬಹುದು. ಈಗಾಗಲೇ ಫಲಿತಾಂಶ ವ್ಯಕ್ತವಾಗಿರುವ ಮತದಾರ ಕ್ಷೇತ್ರಗಳಿಗೂ ಈ ಮಾತು ಅನ್ವಯಿಸುತ್ತದೆ. ಕಾಂಗ್ರೆಸು ಇಷ್ಟರ ವರೆಗೆ ವ್ಯಕ್ತವಾದ ಫಲಿತಾಂಶಗಳ ಪುಟ್ಟಿಗೆ ಪ್ರತಿಸ್ಪರ್ಧಿಗಳನ್ನು ಸೋಲಿಸಿತೇನೊ ನಿಜ—ಆದರೆ ಈ ಪ್ರತಿಸ್ಪರ್ಧಿಗಳಿಗೆ ಬಿದ್ದಿರುವ ಓಟನ್ನ ಲೆಕ್ಕವನ್ನು ಹಾಕಿದರೆ ಅದೇನೂ ಹೆಮ್ಮೆಪಟ್ಟುಕೊಳ್ಳಬಹುದಾದ ವಿಜಯವೆನಿಸಲಾರದು. ಸಾಮಾನ್ಯವಾಗಿ ಕಾಂಗ್ರೆಸು ಉಮೇದ್ವಾರಿಗೆ ಸಿಕ್ಕಿದ ಮತಗಳ ಮೂರರಲ್ಲಿ ಎರಡಂಶದಷ್ಟು ಮತವು ಪ್ರತಿಸ್ಪರ್ಧಿಗಳ ಪಾಲಿಗೆ ಹೋಗಿತ್ತೆಂದು ಸ್ಥೂಲವಾಗಿ ಲೆಕ್ಕ ಹಾಕಬಹುದು. ಪ್ರತಿಸ್ಪರ್ಧಿಗಳಿಗೆ ಇಷ್ಟು ಹೆಚ್ಚು ಮತಗಳು ಬಿದ್ದುವಾದರೂ ಹೇಗೆ? ಇದನ್ನು ಕಾಂಗ್ರೆಸಿಗರೆಲ್ಲರೂ ಆಲೋಚಿಸಬೇಕಾಗಿದೆ. ಐದು ವರ್ಷಗಳ ಹಿಂದಿನ ಚುನಾವಣೆಯೊಡನೆ ಈಗಿನ ಚುನಾವಣೆಯನ್ನು ಹೋಲಿಸಿದ್ದಾದರೆ ಪ್ರತಿಸ್ಪರ್ಧಿಗಳು ಹಿಂದಿಗಿಂತ ಇನ್ನೂಡಿ ಮತಗಳನ್ನು ಒಟ್ಟಿನಲ್ಲಿ [ಪಡೆದಿದ್ದಾರೆಂದು ಹೇಳಿದರೂ ತಪ್ಪಾಗಲಾರದೆಂದು ತೋರುತ್ತದೆ. ಐದು ವರ್ಷಗಳ ಈ ಅಂತರದಲ್ಲಿ ಪ್ರತಿಸ್ಪರ್ಧಿಗಳ ಶಕ್ತಿಯು ಇಷ್ಟು ಹೆಚ್ಚಬೇಕಾಗಿದ್ದರೆ ಅದಕ್ಕೆ ಬಲವಾದ ಕಾರಣಗಳಿರಲೇ ಬೇಕೆಂದು ಭಾವಿಸುವುದು ನ್ಯಾಯ. ಜನರಲ್ಲಿ ಪ್ರಜಾಪ್ರಭುತ್ವದ ತಾರ್ಕಿಕ ಪ್ರಜ್ಞಾಶಯವು ಬಗ್ಗೆ ಈ ಐದು ವರ್ಷಗಳಲ್ಲಿ ಹೆಚ್ಚಿನ ತಿಳಿವಳಿಕೆಯುಂಟಾಯಿತೆ? [ಹಾಗೆ ಹೇಳುವುದು ಕಷ್ಟವೆಂದು ನಮಗೆ ತೋರುತ್ತದೆ ಏಕೆಂದರೆ ಜನರು ಯಾವುದಾದರೊಂದು ಪಕ್ಷವನ್ನು ಪೆಟ್ಟಿಗೆ ಆಶ್ರಯಿಸಿ ಅದನ್ನು ಬೆಂಬಲಿಸುವಷ್ಟು ಸಮರ್ಥವಾದ ರಾಜಕೀಯ ಸ್ಥಿತಿಗತಿ ಪ್ರತಿಪಕ್ಷಗಳ ನಿಟ್ಟಿಗೆ ಉಳಿದಿದ್ದಿಲ್ಲ. ಕಳೆದ ಮಹಾ ಚುನಾವಣೆಯ ಬಳಿಕ ಕೆಸಾನ್ ಮಜದೂರ್ ಪ್ರಜಾಪಾರ್ಟಿ ಮತ್ತು ಸೋಶಲಿಸ್ಟ್ ಪಾರ್ಟಿಯ ಸರಿಸಕ್ತಿಯ ಕೊಂಡು ಹುಟ್ಟಿಸಿದ ಪ್ರಜಾಸೋಶಲಿಸ್ಟ್ ಪಾರ್ಟಿಯು ಮೇಲೆ ಜನರಿಗೆ ಅತ್ಯಧಿಕ ಪ್ರೇಮವಿರುವುದು ಸ್ವಾಭಾವಿಕವೆನಿಸುವುದಿಲ್ಲ; ತಿರಸ್ಕಾರ ಜುಗುಪ್ಸೆಗಳಿರಬೇಕಾಗಿದ್ದ ಈ ಪಕ್ಷದ ಪಾಲಿಗೆ ಗಣ್ಯ ಪ್ರಮಾಣದಲ್ಲಿ ಮತಗಳು ಸಿಕ್ಕಿದವೆಂಬುದನ್ನು ನೋಡಿ ಆಲೋಚಿಸಿದರೆ, ಕಾರಣಗಳು ಬೇರೆಯೇ ಇರಬೇಕೆಂದು ಹೊಳೆಯುತ್ತದೆ. ಕಮ್ಯುನಿಸ್ಟರಾದರೂ ಕಳೆದ ಐದು ವರ್ಷಗಳಲ್ಲಿ ಜನಪ್ರಿಯರಾದರೆಂದು ಹೇಳಲು ಬಾರದು. ಅವರ ಧ್ಯೇಯ ಧೋರಣೆಗಳನ್ನು ಜನರು ಮೆಚ್ಚಿರುವರೆಂದು ಸಹ ಹೇಳುವಂತಿಲ್ಲ. ಹಾಗಿದ್ದರೂ ಅವರು ಸಾಕಷ್ಟು ದೊಡ್ಡ ರೀತಿಯಲ್ಲಿ ಮತ ಸಂಪಾದಿಸಿದರು–ಇದು ಹೊರ ನೋಟಕ್ಕೆ ಆಶ್ಚರ್ಯಕರವಾಗಿ ಕಾಣಿಸುತ್ತದೆ. ಆದರೆ ಕಾರಣಗಳನ್ನು ನಾವು ಒಳ ಹೊಕ್ಕು ಸೂಕ್ಷ್ಮವಾಗಿ ವಿಮರ್ಶಿಸಿ ಸ್ಥಿತಿಗತಿಗಳನ್ನು ವಿಶ್ಲೇಷಿಸಿ ಕಂಡುಕೊಳ್ಳಬೇಕಾಗಿದೆಯಷ್ಟೆ! ಹಾಗೆ ಮಾಡುವಾಗ ನಮಗೆ ಕೆಲವು ವಿಷಯಗಳು ಗೋಚರಿಸುತ್ತವೆ—ಒಂದನೆಯದಾಗಿ ತೋರುವ ವಿಷಯವೆಂದರೆ ಮೊದಲೇ ಹೇಳಿದಂತೆ ಪ್ರತಿಪಕ್ಷಗಳು ಕಳೆದ ಐದು ವರ್ಷಗಳಲ್ಲಿ ತಮ್ಮ ಧ್ಯೇಯ ಧೋರಣೆ ಮತ್ತು ಉನ್ನತ ನಡವಳಿಕೆಯಿಂದ ಹಾಗು ರಚನಾತ್ಮಕ ಕಾರ್ಯಕ್ರಮಗಳಿಂದ ಜನರಲ್ಲಿ ವಿಶ್ವಾಸ ಪ್ರೇಮಗಳನ್ನೇನೂ ಹುಟ್ಟಿಸಿಲ್ಲ ಎಂಬುದೊಂದು ಮುಖ್ಯವಾದ ವಿಷಯ. ಎರಡನೆಯ ವಿಷಯವನ್ನೇನೆಂದರೆ, ಪ್ರತಿಪಕ್ಷಗಳ ಪಾಲಿಗೆ ಕಳೆದ ಚುನಾವಣೆಯ ಕಾಲದಲ್ಲಿ ಅಪಪ್ರಚಾರ ಮಾಡುವುದಕ್ಕೆ ಸಿಕ್ಕಿದಷ್ಟು ಸುಲಭದ ಮಾರ್ಗವು ಈ ಸಲ ತೆರೆದಿರಲಿಲ್ಲ ಎಂಬುದಾಗಿದೆ. ಉದಾಹರಣೆಗೆ ಹಿಂದಿನ ಸಲ ಕಮ್ಯುನಿಸ್ಟರೂ ಇತರ ಪ್ರತಿಪಕ್ಷಗಳವರೂ "ಕಲ್ಲುಮಣ್ಣು ಬೆರೆತ ಜೋಳ ತಿನ್ನಿಸಿದ ಸರಕಾರಕ್ಕೆ ಧಿಕ್ಕಾರ!" ಎನ್ನುತ್ತಾ ತಿರುಗುತ್ತಿದ್ದರು. "ಕಳಸಂತೆಯ ಕದೀಮರು" ಎಂದು ಕಾಂಗ್ರೆಸಿಗರನ್ನು ಹಂಗಿಸುತ್ತಿದ್ದರು. "ಜನರು ಹಸಿನೆಯಿಂದ ಕಂಗಾಲಾಗಿದ್ದಾರೆ" ಎಂದು ಸಾರುತ್ತಾ ತಿರುಗುತ್ತಿದ್ದರು. "ಇಂಗ್ಲೆಂಡಿನಲ್ಲಿ ಮಕ್ಕಳಿಗೆ ಕಿತ್ತಳೆ ಹಣ್ಣಿನ ರಸವನ್ನು ಕೊಡುತ್ತಾರೆ; ಇದನ್ನು ನಾನು ಸ್ವತಃ ಕಣ್ಣಿನಿಂದ ನೋಡಿ ಬಂದಿದ್ದೇನೆ. ನಮ್ಮಲ್ಲಿ ಗಂಜಿ ನೀರಿಗೂ ಗತಿಯಿಲ್ಲ. ಈ ಸರಕಾರ ಇರುವ ವರೆಗೆ ನಮ್ಮ ಸ್ಥಿತಿಗತಿ ಸುಧಾರಿಸಲಿಕ್ಕಿಲ್ಲ" ಎಂದು ಅಗತಾನೆ ವಿದೇಶ ಪ್ರವಾಸದಿಂದ ತಮ್ಮೂರಿಗೆ ಮರಳಿದ್ದ ಕೆಸಾನ್ ಮಜದೂರ್ ಪ್ರಜಾಪಕ್ಷದ ಧುರೀಣ ಶ್ರೀ ಕಾರಂತರು ಭಾಷಣ ಮಾಡುತ್ತಿದ್ದರು. ನಮ್ಮಲ್ಲಿ ಕಿತ್ತಳೆಯು ಹುಷ್ಕಳವಾಗಿ ಬೆಳೆಯುವುದಿಲ್ಲ— ಬದಲಿಗೆ ಗೇರು ಹಣ್ಣು, ಮಾವಿನ ಹಣ್ಣುಗಳಿವೆ; ಅವನ್ನು ನಾಕ್ಕು ತಿನ್ನುತ್ತಿದ್ದಾರೆ; ಯಾರದೂ ಆತಂಕ ವಿಲ್ಲ ಎನ್ನುವಷ್ಟು ತಾರತಮ್ಯ ಜ್ಞಾನವಿಲ್ಲದ ಜನರು ಆ ಟೀಕೆಗೂ ವ್ಯಾಖ್ಯಗೊಂಡು ಮರುಳಾಗುತ್ತಿದ್ದರು. ಅಂತೂ ಆಗ ಸರಕಾರವನ್ನು ಟೀಕಿಸುವುದು ಬಹಳ ಸುಲಭವಾಗಿತ್ತೆಂದು ಹೇಳಬಹುದು. ಆದರೆ ಈಗ ಸರಕಾರವು ಅನೇಕ ಒಳ್ಳೆಯ ಕೆಲಸಗಳನ್ನು ಮಾಡಿದೆ; ಮುಖ್ಯವಾಗಿ ರಾಷ್ಟ್ರದ ಅನ್ನವಸ್ತ್ರಗಳ ಸಮಸ್ಯೆಯನ್ನು ಸರಿಹರಿಸಿ ರಾಷ್ಟ್ರವನ್ನು ಸಮೃದ್ಧಿ ನುತ್ತು ಶಾಂತಿಯ ಪಥದಲ್ಲಿ ಮುನ್ನಡೆಸುತ್ತಿದೆ. ಮೊದಲನೇ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಾಚರಣೆಗಿಳಿಸಿ ದೇಶದೊಳಗೂ ಹೊರಗೂ ಮುಕ್ತಕಂಠದ ಪ್ರಶಂಸೆಯನ್ನು ಪಡೆದಿದೆ. ಜನ ಜೀವನದ ಮೇಲೆ ದೀರ್ಘ ಕಾಲದ ವರೆಗೆ ಈ ಸತ್ಪರಿಣಾಮವನ್ನು ಮಾಡಬಲ್ಲ ಕಾನೂನು, ಕಾಯಿದೆಗಳನ್ನು ಮಾಡಿದೆ. ಲೋಕ ಶಾಂತಿಗಾಗಿ ಅನುದಿನ ದುಡಿದಿದೆ. ಅನುದಿನದಿಂದ ಹಿಂದಿನ ಸಲವಷ್ಟು ಸುಲಭದಲ್ಲಿ ಜನರನ್ನು ಮರುಳು ಮಾಡಿಸುವುದು ಟೀಕೆಯ ನೊನೆಯಿಂದ ಚುಚ್ಚುವುದು ಈ ಸಲ ಸಾಧ್ಯವಾಗುತ್ತಿದ್ದ ವಿಷಯವಲ್ಲ—ಇದು ನಮಗೆ ಹೊಳೆಯುವ ಮೊದಲನೇ ವಿಷಯ. ಹೀಗೆ ಪ್ರತಿಯೊಂದು ದೃಷ್ಟಿಯಿಂದ ನೋಡಿದಾಗಲೂ ಪ್ರತಿಕೂಲ ವಿದ್ಯಮಾನವಿದ್ದರೂ ಪ್ರತಿ ಪಕ್ಷಗಳಿಗೆ ಹೆಚ್ಚು ಮತ ಸಿಕ್ಕಿವೆ? ಇದು ಆಶ್ಚರ್ಯವೇ ನಿಜ. ಇದರ ಒಳಗುಟ್ಟು ಏನೆಂದು ವಿಚಾರಿಸಿದಾಗ ಮಾತ್ರ ಕಾಂಗ್ರೆಸಿನ ದೌರ್ಬಲ್ಯವು ವ್ಯಕ್ತವಾಗುತ್ತದೆ. ಅದೇ ಪ್ರಚಾರ ಯಂತ್ರವನ್ನಿಟ್ಟುಕೊಂಡು ಕಾಂಗ್ರೆಸಿನ ಪ್ರಚಾರಯಂತ್ರವು ಏನೂ ಕೆಲಸವನ್ನು ಮಾಡುವಂತಿಲ್ಲ. ಹೀಗಾಗಿ ಒಂದೇ ಮಾತಿನಲ್ಲಿ ಹೇಳುವುದಾದರೆ ಸರಕಾರದ ಕಡೆಯಿಂದ ಕಾಂಗ್ರೆಸು ಪಕ್ಷವು ಸಾಧಿಸಿದ ಯಾವುದೇ ಕೆಲಸದ ಪ್ರಚಾರವೂ ಜನರ ಕಿವಿಗೆ ಬೀಳಲಿಲ್ಲ. ಚುನಾವಣೆಗೆ ಒಂದು ತಿಂಗಳ ಮೊದಲೇನೊ ಭಾಷಣಗಳ ಮೇಲೆ ಭಾಷಣವನ್ನು ಕಾಂಗ್ರೆಸು ಪಕ್ಷದವರು ಬಿಗಿದರು. ಆದರೆ ಅವರು ಸತ್ಯವನ್ನೆ ತಮ್ಮ ಭಾಷಣದಲ್ಲಿ ಹೇಳಿದರೂ ಎದುರಾಳಿಗಳ ವಾಗ್ದಾಳಿಕ್ಕೆ ಮೋಸ ಹೋದ ಜನರಲ್ಲಿ ವಿಶ್ವಾಸ ಹುಟ್ಟಿಸಲು ಕಾಂಗ್ರೆಸಿಗರು ಸಮರ್ಥರಾಗಲಿಲ್ಲ. ಉದಾಹರಣೆಗೆ, ಗೇಣಿನಿರ್ಣಯ ಕಾಯಿದೆ ಬಂದಿದೆ ಎಂದು ಕಾಂಗ್ರೆಸು ಧುರೀಣರು ಚುನಾವಣೆಯ ಭಾಷಣದಲ್ಲಿ ಹೇಳಿದರು — ಸಾಮಾನ್ಯ ಕೃಷಿಕನ ಪಾಲಿಗೆ ಇದೊಂದು ನವೀನ ಸುದ್ದಿ; ಪ್ರತಿಪಕ್ಷದವರ ಟೀಕೆಯ ಮುಂದೆ ಹೋಲಿಸಿದಾಗ ಸಂಬಲಾರದ ಸುದ್ದಿ ಆದು! ಏಕೆಂದರೆ ಒಕ್ಕಲೆಬ್ಬಿಸಬಾರದೆಂದು ೧೯೫೨ರಷ್ಟು ಹಿಂದೆ ಶ್ರೀ ರಾಜಗೋಪಾಲಾಚಾರಿಯವರು ಮುಖ್ಯ ಮಂತ್ರಿಯಾಗಿದ್ದಾಗ ಮಾಡಿದ್ದ ಶಾಸನದ ತಿಳಿವಳಿಕೆಯನ್ನು ೧೯೫೬ನೇ ಇಸವಿಯ ಜನವರಿ ತಿಂಗಳಲ್ಲೂ ಜನರಿಗೆ ಮಾಡಿಕೊಟ್ಟ ಕಾಂಗ್ರೆಸಿಗನಿರಲಿಲ್ಲ! ಮಾಡಿ ಕೊಟ್ಟವರಾದರೂ ಅದೇ ವಿಷಯದ ನೋಲೆ ಭಾಷಣ ಮಾಡದೆ, ಆ ವಿಷಯವನ್ನು ಚೆನ್ನಾಗಿ ಮಂದಟ್ಟುಪಡಿಸದೆ, ಬೇರೆ ಬೇರೆ ವಿಷಯಗಳ ವಿಹಂಗಮ ಅವಲೋಕನ ಮಾಡುತ್ತಾ ಈ ಕಾಯಿದೆಯ ವಿಷಯವನ್ನು ಒಂದೆರಡು ಮಾತುಗಳಲ್ಲಿ ಪ್ರಸ್ತಾಪಿಸಿದವಂತಿದ್ದರು; ಆಗ ಅದನ್ನು ಕಛೇರಿಯಲ್ಲಿ (ಅವರಲ್ಲಿ ರೈತರೆಷ್ಟು ಮಂದಿ ಇದ್ದಾರೋ, ತಿಳಿಯದು! ಕೈಬೆರಳಿಂದೆಣಿಸುವಷ್ಟೂ ಇರಲಾರದು) ಕೇಳಿದವರೆಷ್ಟೊ, ಬಿಟ್ಟವರೆಷ್ಟೊ! ಆದುದರಿಂದ ಜನರ ಪಾಲಿಗೆ ಪ್ರತಿಪಕ್ಷದವರ ಚುನಾವಣಾ ಪ್ರಚಾರವೇ ಆಪ್ಯಯಮಾನವೆನಿಸಿತು; ಕಾಂಗ್ರೆಸಿನ ಸತ್ಯ ಪ್ರಚಾರವೇ ಸುಳ್ಳು ಪ್ರಚಾರವಾಯಿತು. ಕಾಂಗ್ರೆಸಿಗರು ಚುನಾವಣಾ ಭಾಷಣವಲ್ಲಿ ಪ್ರಜಾಸಮಾಜವಾದಿ ಪಕ್ಷದಲ್ಲಿರುವ ಭೂಮಾಲಿಕರು ಭೂಸುಧಾರಣೆಗೆ ಆತಂಕವನ್ನು ವ್ಯಕ್ತಪಡಿಸಿದ ವಿಷಯವನ್ನು ಹೊರಗೆಡಹಿದಾಗ, ಆಡೊಂದು "ಇಲೆಕ್ಶನ್ ಸ್ಟಂಟ್" ಎನಿಸಿಕೊಂಡಿತಲ್ಲದೆ, ಬೇರೇನೂ ಪರಿಣಾಮವನ್ನು ಜನರ ಮೇಲೆ ಉಂಟುಮಾಡಲಿಲ್ಲ. ಉದ್ಯಾವರ ಹೊಳೆಗೆ ಸಂಕ ಕಟ್ಟಿದುದರಿಂದ ಕಟಪಾಡಿಯಿಂದ ಉದ್ಯಾವರಕ್ಕೆ ಬಂದು ಕೂಲಿ ಕೆಲಸ ಮಾಡಿ ಹೋಗುವ ಜನರು ತಮ್ಮ ಹನ್ನೆರಡಾಣೆ ಕೂಲಿಯಲ್ಲಿ ಮೂರಾಣೆ ಕಡಮೆಗೆ ಕೊಡುವುದನ್ನು ಉಳಿಸಿದಂತಾಯಿತೆಂದೂ ಇದರಿಂದಾಗಿ ಒಂಭತ್ತಣೆಯಷ್ಟೆ ಸಂಪಾದನೆಯಾಗಿ ಕೈಯಲ್ಲುಳಿಯುವ ಬದಲಿಗೆ ಪೂರ್ತಿ ಹನ್ನೆರಡಾಣೆ ಉಳಿದು, ಜೀವನಮಟ್ಟವು ೩೩% ಏರಿತೆಂದೂ ಆಯಾ ಊರಿನ ಬಡ ಕೂಲಿಕಾರ ವರ್ಗದ ಸಭೆ ಸೇರಿಸಿ ಹೇಳಿದವರಿಲ್ಲ; ಸಮಾಜದ ಇತರ ವರ್ಗದ ಜನರೇ ಹೆಚ್ಚಿಗಿದ್ದ ಸಭೆಯಲ್ಲಿ ಈ ಪ್ರಯೋಜನವನ್ನು ತಿಳಿಸಲಾಯಿತು; ಹೀಗಾಗಿ ಭಾಷಣವಿಂದಾವ ಪರಿಣಾಮವೂ ಆಗಲಿಲ್ಲ. ಇದೇ ಮಾತು ಹಳ್ಳಿಗಳಿಗೆ ವಿದ್ಯುಚ್ಛಕ್ತಿ ದೊರೈಸಲ್ಪಟ್ಟ ವಿಷಯಕ್ಕೂ ಒಪ್ಪುತ್ತದೆ — ಕೃಷಿಕರು ಪಂಪುಗಳನ್ನು ಇಟ್ಟುಕೊಂಡು ಒಂದು ಬೆಳೆಯಾಗುವಲ್ಲಿ ಎರಡು, ಎರಡು ಬೆಳೆಯಾಗುವಲ್ಲಿ ಮೂರು ಬೆಳೆ ತೆಗೆಯಲು ವಿದ್ಯುಚ್ಛಕ್ತಿಯು ಅನುಕೂಲಮಾಡಿಕೊಡುತ್ತದೆ ಎಂದು ರೈತರ ಮನೆ ಮನೆಗೆ ಹೋಗಿ ಹೇಳಿದ ಕಾಂಗ್ರೆಸು ಸ್ವಯಂ ಸೇವಕರಿದ್ದಾರೆಯೆ? ಹೇಳಿದ ಸ್ವಯಂ ಸೇವಕರಾದರೂ ವಿದ್ಯುಚ್ಛಕ್ತಿ ಬರುವುದಕ್ಕೆ ಮುಂಚೆ, ಅಥವಾ ಬಂದ ಒಡನೆಯೇ ಹಾಗೆ ಮಾಡಿದ್ದುಂಟೆ? ಪಂಪು ಸೆಟ್ಟನ್ನು ಪಡೆದುಕೊಳ್ಳುವ ಬಗೆ ಏನೆಂಬುದನ್ನು ಸಂಬಂಧಪಟ್ಟ ಜನರ ಕಿವಿಗೆ ಅರ್ಥವಾಗುವಂತೆ ವಿವರಿಸಿ ಹೇಳಿದ್ದಾದ್ದರೂ ಇದೆಯೇ? ಕಾಂಗ್ರೆಸು ಪತ್ರಿಕೆಗಳು ಕೆಲವು ಲೇಖನಗಳನ್ನೂ ಸುದ್ದಿಗಳನ್ನೂ ಪ್ರಕಟಿಸಬಹುದು–ಇಷ್ಟವೆನ್ನಲು ಬರುವುದಿಲ್ಲ. ಆದರೆ ಈ ಪತ್ರಿಕೆಗಳ ಪ್ರಸಾರವೆಷ್ಟು? ಈ ಪತ್ರಿಕೆಗಳನ್ನು ಓದುವ ಜನರಾದರೂ ಯಾರು? ಆದುದರಿಂದ ಪತ್ರಿಕೆಗಳ ಮೂಲಕ ನಡೆಸಿದ ಪ್ರಚಾರವನ್ನೆ ಪ್ರಚಾರವೆಂದು ಹೇಳುವುದರಿಂದ ಯಾವುದೇ ಲಾಭವಿಲ್ಲದು ಪತ್ರಿಕೆಗಳಲ್ಲಿ ಲೇಖನ ಬಂದರೆ, ಸುದ್ದಿ ಪ್ರಕಟವಾದರೆ ಅದೊಂದು ದಾಖಲೆ ಮಾತ್ರವಾಗಿ ಕೆಲಸ ಮಾಡಬಹುದು; ಆದಕ್ಕಿಂತ ಹೆಚ್ಚಿನ ಸತ್ಪರಿಣಾಮವಾದೀತೆಂದು ಹೇಳುವುದು ಕಷ್ಟ. ಹೀಗೆ ಪ್ರಚಾರವು ಸಾಕಷ್ಟು ವೈಜ್ಞಾನಿಕರವಾದ ರೀತಿಯಲ್ಲಿ, ಕೃಮ ಪ್ರಕಾರವಾದ ರೀತಿಯಲ್ಲಿ ನಡೆಯದ ದೆಸೆಯಿಂದಲೇ

ಇನ್ನೊ ಚಂದಾಹಣವನ್ನು

ಕಳುಹಿಸದವರು ದಯವಾಡಿ ಕೂಡಲೇ ಕಳುಹಿಸಿಕೊಡುವಂತೆ ಇನ್ನೊಮ್ಮೆ ಕೇಳಿಕೊಳ್ಳುತ್ತೇವೆ. ಅಂತೂ ಸಕಾಲದಲ್ಲಿ ಚಂದಾ ಪಾವತಿಯಾಗದಿದ್ದರೆ ನಾವು ಅನಿವಾರ್ಯವಾಗಿ ಕಳುಹಿಸುವ ವಿ. ಪಿ. ಪಿ. ಯನ್ನಾದರೂ ಪಡೆಕೊಳ್ಳುವಂತೆ ವಿಜ್ಞಾಪಿಸುತ್ತೇವೆ.

ಮೆನೇಜರ್, ನವಯುಗ.

ಚುನಾವಣೆ

ಎಲ್ಲೆಲ್ಲೂ ಕಾಂಗ್ರೆಸಿನ ಅಪ್ರತಿಮ ಯಶಸ್ಸು

ಭಾರತದಲ್ಲಿ ನಡೆದಿರುವ ದ್ವಿತೀಯ ಮಹಾಚುನಾವಣೆಯಲ್ಲಿ ಕಾಂಗ್ರೆಸು ಸಂಸ್ಥೆಯು ಜನಪ್ರಿಯತೆಯನ್ನು ಜೀರ್ಣಿಸಿಯೇ ಉಳಿಸಿಕೊಂಡು ಬಂದಿರುವುದರ ದ್ಯೋತಕವಾಗಿ ಅತ್ಯಧಿಕ ಬಹುಮತದಿಂದ ಆ ಸಂಸ್ಥೆಯು ನಿಲ್ಲಿಸಿದ್ದ ಉಮೇದ್ವಾರರು ಶಾಸನಾಂಗದ ಹಾಗೂ ಸಂಸತ್ತಿನ ಸ್ಥಾನಗಳಿಗೆ ಆಯ್ಕೆಹೊಂದಿದ್ದಾರೆ. ಪ್ರತಿ ಪಕ್ಷಗಳಲ್ಲಿ ಸ್ವಲ್ಪಮಟ್ಟಿನ ಯಶಸ್ಸನ್ನು ಸಂಪಾದಿಸಿದವುಗಳೆಂದರೆ ಪ್ರಜಾ ಸೋಶಲಿಸ್ಟ್ ಮತ್ತು ಕಮ್ಯುನಿಸ್ಟ್ ಪಕ್ಷಗಳು. ಜನಸಂಘ ಮತ್ತಿತರ ಜಾತೀಯವಾದಿ ಪಕ್ಷಗಳು ಜನ ಬೆಂಬಲವನ್ನು ಸಂಪೂರ್ಣವಾಗಿ ಕಳೆದುಕೊಂಡಿವೆ. ಇದಕ್ಕೆ ಈ ಪಕ್ಷಗಳ ಉಮೇದ್ವಾರರಲ್ಲಿ ಹೆಚ್ಚಿನವರ ತೀನೆಣಾತೀಯ ಕಣವು ಜವ್ವಾದುದೇ ನಿದರ್ಶನ.

ಪ್ರತಿಪಕ್ಷಗಳು ಕಾಂಗ್ರೆಸಿನ ಉಮೇದ್ವಾರರನ್ನು ವ್ಯಕ್ತಿಗತ ದ್ವೇಷ ಸಾಧನೆಯ ದೃಷ್ಟಿಯಿಂದ ಎರೋಧಿಸಿದಲ್ಲಿ ಕೆಲವಷ್ಟೆನ ವಿಜಯ ಸಂಪಾದನೆ ಮಾಡಿದ್ದಾರೆ-ಹೊರತು ತತ್ವ, ಧ್ಯೇಯಗಳ ನೆಲೆಯಿಂದ ಅವರು ಸ್ಪರ್ಧೆ ಹೂಡಿದಲ್ಲಿ ಜಯ ಮಾಲೆ ಲಭಿಸಿಲ್ಲ. ಕಾಂಗ್ರೆಸಿನ ಪಾಲಿಗೂ ಕೆಲವು ಗಣನೀಯ ಪರಾಭವಗಳು ಒದಗಿರುವುದು ನಿಜ; ಮುಖ್ಯವಾಗಿ ಉತ್ತರ ಪ್ರದೇಶದಲ್ಲಿ ಕಾಂಗ್ರೆಸಿನ ವರ್ಚಸ್ವಿ ಮಂತ್ರಿಯೊಬ್ಬರು ಪ್ರಜಾಸೊಶಲಿಸ್ಟ್ ಪಕ್ಷದ ಕಾರ್ಯದರ್ಶಿಯ ವಿರುದ್ಧ ಸೋತುದು, ಮುಂಬಯಿಯಲ್ಲಿ ಕೆಲವರು ಮಂತ್ರಿಗಳು ಮಹಾ ಗುಜರಾತ ಪರಿಷತ್ತಿನ ಸಾಮಾನ್ಯ ಉಮೇದ್ವಾರರ ಮುಂದೆ ಸೋತುದು ಇವು ಧ್ಯೇಯ ವ್ಯತ್ಯಾಸದತಳಗಟ್ಟಿನ ನೇರ ಲೆ ನಡೆದ ಸೋಲುಗಳಲ್ಲಿಗಿದ್ದು ಕಾಂಗ್ರೆಸ್ಸಿಗರು ನಿಜಕ್ಕೂ ವಿಚಾರಿಸಬೇಕಾಗಿರುವಂತಹ ವಿಷಯ ಆದರೆ, ಮುಂಬಯಿಯ ಮುಖ್ಯ ಮಂತ್ರಿ ಶ್ರೀ ಚವನರು ಪ್ರಜಾತ ಪೂಜವಾದಿ ಉಮೇದ್ವಾರರನ್ನು ದ್ವಿಭಾಷಾ ಮುಂಬಯಿ ರಾಜ್ಯದ ಪ್ರಶ್ನೆಯ ಮೇಲಿಂತ ಎದುರಿಸಿ ಸೋಲಿಸಿದ್ದು ಕಾಂಗ್ರೆಸ್ಸು ಹೆಮ್ಮೆಪಟ್ಟು ಕೊಳ್ಳಬಹುದಾದ ವಿಜಯ. ಅವಕ್ಕಿನಲ್ಲೂ ಇದೊಂದು ಸಂಪತ್ತು.

ಕಾಂಗ್ರೆಸು ಸಂಸ್ಥೆಯು ತೀವ್ರವಾಗಿ ಪರ್ಯಾಲೋಚಿಸತಕ್ಕ ವಿದ್ಯಮಾನವೆಂದರೆ ಕೇರಳದಲ್ಲಿ ಕಮ್ಯುನಿಸ್ಟರು ಗಳಿಸಿರುವ ಮನ್ನಣೆ. ದೇಶದಲ್ಲಿಯೇ ಅತಿ ಹೆಚ್ಚಿನ ರಭಸದಿಂದ ಇಲ್ಲಿ ಮತದಾನ ನಡೆದಿದೆ; ಇಪ್ಪರ್ತು ವರೆಗಿನ ಫಲಿತಾಂಶವು ಕಾಂಗ್ರೆಸಿಗಿಂತಲೂ ಕಮ್ಯುನಿಸ್ಟರೇ ಇಲ್ಲಿ ಜನಪ್ರಿಯರಾಗಿರುವುದನ್ನು ವ್ಯಕ್ತಪಡಿಸುತ್ತಿದೆ. ಇನ್ನು ಮುಂದೆ ವ್ಯಕ್ತವಾಗಲಿರುವ ಫಲಿತಾಂಶಗಳಲ್ಲಿ ಕಾಂಗ್ರೆಸ್ಸಿಗೆ ಹೆಚ್ಚಿನ ಜಯ ಲಭಿಸುವ ನಿರೀಕ್ಷೆ ಇವೆ ಎನ್ನಲಾಗುತ್ತಿದ್ದರೂ ಅಲ್ಲಿ ಭದ್ರವಾದ ಸರಕಾರವನ್ನು ರಚಿಸುವಷ್ಟು ನಿಟ್ಟಿನ ಬಹುಮತವು ಸ್ವತಃ ಕಾಂಗ್ರೆಸ್ಸಿಗಾಗಲೀ ಇತರ ಜೊತೆ ಯಾವುದೇ ಒಂದು ಪಕ್ಷಕ್ಕಾಗಲೀ ಸಿಗುವಂತೆ ತೋರುತ್ತಿಲ್ಲ. ರಾಷ್ಟ್ರದಲ್ಲಿಯೇ ವಿದ್ಯಾಬುದ್ಧಿ ಸಂಪನ್ನರಾದ ಕೇರಳೀಯರು ಭದ್ರವಾದ ಸರಕಾರವನ್ನು ರಚಿಸುವುದಕ್ಕೆ ಅನುಕೂಲವಾದ ರೀತಿ ಮಲ್ಲಿ ತಮ್ಮ ಮತದಾನದ ಪಕ್ಕನ್ನು ಉಪಯೋಗಿಸುತ್ತಿಲ್ಲ ವೇತಕ್ಕೆ ಎಂದು ತಿಳಿಯದು. ಅಂತೂ ಕಾಂಗ್ರೆಸಿನ ವರ್ಚಸ್ಸು ಅಲ್ಲಿ ಕಳೆಗುಂದುತ್ತಿರುವುದು ನಿಜಕ್ಕೂ ಶೋಚನೀಯ.

ನಮ್ಮ ಜಿಲ್ಲೆಯಲ್ಲಿ ಇಪ್ಪರ ವರೆಗೆ ಕಾಂಗ್ರೆಸು ಉಮೇದ್ವಾರರೇ ಪ್ರತಿಶ್ಪರ್ಧಿಗಳನ್ನು ಸೋಲಿಸಿ, ಗೆದ್ದು ಬಂದಿದ್ದಾರೆ ಚುನಾವಣೆಯ ಫಲಿತಾಂಶ ವ್ಯಕ್ತವಾಗಲಿರುವ ಉಳಿದ ಕ್ಷೇತ್ರಗಳಲ್ಲೂ ಕಾಂಗ್ರೆಸಿಗೆ ನೇ ಜಯ ಲಭಿಸುವ ನಿರೀಕ್ಷೆ ಉಂಟು. ಅಂತೂ ಈಗಿನ ಸ್ಥಿತಿಗತಿ ಪ್ರಕಾರ ಪಂಜಾಬು, ಆಂಧ್ರ, ಅಸ್ಸಾಂ ಮತ್ತು ಮಧ್ಯ ಪ್ರದೇಶಗಳಲ್ಲಿ ಕಾಂಗ್ರೆಸು ಸರಕಾರವನ್ನು ರಚಿಸಬಲ್ಲಷ್ಟು ಹೆಚ್ಚಿನ ಸ್ಥಾನಗಳಿಗೆ ಬಹುಮತ ಸಂಪಾದಿಸಿದೆಯಲ್ಲದೆ, ಕೇರಳವನ್ನು ಬಿಟ್ಟು ಉಳಿದೆಲ್ಲ ಕಡೆ ಇದೇ ರೀತಿ ಮುನ್ನಡೆಯುವುದೂ ನಿಶ್ಚಿತ.

ಕಾಂಗ್ರೆಸಿನ ಸಾಧನೆಗಳ ಯಾವುದೇ ಸ್ಪಷ್ಟ ಚಿತ್ರವು ಜನರ ಕಣ್ಣು ಮುಂದೆ ನಿಲ್ಲಲಿಲ್ಲ. ವಾರಕ್ಕೊಂದರಂತೆ ಯಾದರೂ ಸಾರ್ವಜನಿಕ ಪ್ರಚಾರ ಸಭೆಯನ್ನೇರ್ಪಡಿಸಿ, ಕಾಂಗ್ರೆಸಿನ ಕಾರ್ಯ ಸಾಧನೆಗಳನ್ನು ವಿವರಿಸುತ್ತಾ ಊರಿನ ಸಮಸ್ಯೆಗಳ ಪರಿಹಾರ ಮಾರ್ಗಗಳನ್ನು ವಿಮರ್ಶಿಸುತ್ತಾ ಜನಜಾಗೃತಿಯನ್ನೂ ಜನಸಂಪರ್ಕವನ್ನೂ ಊರ್ಜಿತಪಡಿಸುವೆವೆಂದು ಕನೆದ ಚುನಾವಣೆಯಲ್ಲಿ ವಿಜಯಿಯಾದ ಕಾಂಗ್ರೆಸಿನ ಉಮೇದ್ವಾರರು ಹೇಳಲೀನೊ ಹೇಳಿದರು ಅವರಿ ಸ್ಫೂರ್ತಿ ಉತ್ಸೇರಿ ಹರಿದಿದ್ದ ಆ ಕಾಲದಲ್ಲಿ ನೀಡಿದ ಭರವಸೆಯಂತೆ ಮುಂಡೆ ಅವರು ನಡೆದುಕೊಂಡದ್ದಿಲ್ಲ ಅವರನ್ನು ನಿಲ್ಲಿಸಿದ ಪಕ್ಷವಿವರೂ ಮಾತನ್ನು ನಡುಸಿಕೊಡಲಿಲ್ಲ. ಮಂತ್ರಿ ಮಹಾಶಯರು ಬಂದಾಗಲೆಲ್ಲ ಔಪಚಾರಿಕವಾಗಿ ನಡೆದ ಸಭೆಗಳೆಷ್ಟೋ ಅಷ್ಟೇ: ಅದಕ್ಕಿಂತ ಹೆಚ್ಚಿನದೇನನ್ನೂ ಕಾಂಗ್ರೆಸಿಗರು ಮಾಡಲಿಲ್ಲ. ಜನರನ್ನು ಹೀಗೆ ಆಜ್ಞಾನದಲ್ಲಿಯೂ ಸಂಶಯಲ್ಲಿಯೂ ತಿರಸ್ಕಾರದಲ್ಲಿಯೂ ದೂಡಿದ್ದರಿಂದಲೇ ಪ್ರತಿಪಕ್ಷಗಳು ಹೇಳುವುದು ಸುಳ್ಳಲ್ಲ ಎಂಬ ಭಾವನೆಯು ಜನರ ಲ್ಲಿ ಹುಟ್ಟುವಂತೆ ಕಾಂಗ್ರೆಸ್ಸಿಗರು ಮಾಡಿದರು ಎನ್ನಬೇಕಾಗುತ್ತದೆ. ರಚನಾತ್ಮಕ ಕಾರ್ಯಕ್ರಮವು ತೀರ ಆಪರೂಪವಾಗಿರುವುದರ ಜೊತೆಗೆ ಈಗ ಪ್ರಚಾರ ಯಂತ್ರದ ನಿಷ್ಕ್ರಿಯತೆ ಎಂಬ ಜಾಡ್ಯವೂ ಕಾಂಗ್ರೆಸಿನ ಪಾಲಿಗೆ ಅಂಟಿಕೊಂಡಿದೆ. ಹೇಳಬೇಕಾದ ಮಾತನ್ನು ಹೇಳಬೇಕಾದ ಸಮಯದಲ್ಲಿ ಹೇಳಬೇಕಾದ ಜನರ ಮುಂದೆ ಹೇಳಬೇಕಾದ ರೀತಿಯಲ್ಲಿ ಹೇಳಿರುವುದೇ ಕಾಂಗ್ರೆಸಿನ ಪ್ರಚಾರ ಯಂತ್ರದ ಮುಖ್ಯ ದೋಷವೆಂದು ಸಾರಾಂಶವಾಗಿ ಹೇಳಬಹುದು. ಕಾಂಗ್ರೆಸಿನ ಪ್ರಮುಖರು ಇದನ್ನು ಗಮನಿಸಿ, ದೋಷನಿವಾರಣೋಪಾಯಗಳನ್ನು ಕೈಗೊಂಡು, ಕಾಂಗ್ರೆಸಿನ ಮೇಲೆ ಜನರ ಸ್ಥೈರ್ಯವಿಶ್ವಾಸಗಳು ಹೆಚ್ಚುವ ಹಾಗೆ ತಮ್ಮ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವರೆ? ತಮ್ಮನ್ನು ಹೀಗೆ ಸುಧಾರಿಸಿಕೊಳ್ಳಲಿ ಎಂದು ನಾವಂತೂ ನಿರೀಕ್ಷಿಸಿಕೊಳ್ಳುತ್ತೇವೆ. ಅನ್ಯಥಾ, "ಕಾಮುಕೊಟ್ಟು ಕಡವನನ್ನು ಈಸಿಜೋದಂತೆ," ಕಾಂಗ್ರೆಸಿನ ಪಾಡಾಗುತ್ತದೆ.

ಸೂಚನೆ

'ನವಯುಗ'ದ ಚಂದಾ ಹಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಏಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇವರ ಯಾವುದೇ ಶಾಖೆಯಲ್ಲಿ ಯಾನಡೊಂದು ತರದ ಖರ್ಚೂ ಇಲ್ಲದೆ (ನವಯುಗ ಪಾರಪತ್ರಿಕೆಯ ಖಾತೆಗೆ) ಜಮಾಯಿಸಬಹುದು.

ಮೆನೇಜರ್.

ಒಂದು ಹೊಸ ಮಹಾ ಕಾದಂಬರಿ

ನಡುಹಗಲಿನ ಕಗ್ಗತ್ತಲೆ

ಸಿಲ್ಕ್ ಪುಟಗಳು ಬೆಲೆ 2·50 ರೂಪಾಯಿ

- ಯುರೋಪಿನಲ್ಲಿ ಈಗ ನಲ್ವತ್ತು ವರ್ಷಗಳ ಹಿಂದೆ ನಡೆದು ಇಡೀ ಪ್ರಪಂಚವನ್ನೇ ತಲ್ಲಣಗೊಳಿಸುತ್ತಿರುವ ಒಂದು ರಾಜಕೀಯ ಪದ್ಧತಿಯಿಂದ ಮನುಷ್ಯನ ಆತ್ಮವು ಪತನವಾಗುತ್ತಿರುವ ದುರಂತದ ಒಂದು ಮಾರ್ಮಿಕ ಕಾದಂಬರಿ.
- ರಕ್ತಮಯ ಕ್ರಾಂತಿಯು ವ್ಯಕ್ತಿಯ ಜೀವ ಮತ್ತು ತ್ಯರನ್ನು ನಿರ್ದಾಕ್ಷಿಣ್ಯವಾಗಿ ಹೀರುವ ಭೀಕರ ಚಿತ್ರಣ.
- ಇದರಲ್ಲಿ ಪ್ರಚಲಿತ ಪ್ರಪಂಚದ ರಾಜಕೀತಿ, ಇತಿಹಾಸ ಮತ್ತು ಅಂತಾರಾಷ್ಟ್ರೀಯ ರೀತಿ ನೀತಿಯ ಒಳನೋಟ ದೊರೆಯುತ್ತದೆ.
- ಪ್ರಖ್ಯಾತ ಲೇಖಕ ಆರ್ಥರ್ ಕೊಸ್ಲರ್ ಅವರ ಜರ್ಮನ್ ಕಾದಂಬರಿಯ ಮನೋಜ್ಞ ಕನ್ನಡವನ್ನು ಅನುವಾದಿಸಿದವರು ಕು. ಶಿ. ಹರಿದಾಸ ಭಟ್ಟರು.

ಪ್ರಕಾಶಕರು:

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.

(ಪ್ರತಿಗಳು ನವಭಾರತ ಪುಸ್ತಕ ಭಂಡಾರ, ಉಡುಪಿ, ಇಲ್ಲಿಯೂ ದೊರೆಯುತ್ತವೆ)

ಉಡುಪಿ

ಮುನಿಸಿಪಲ್ ಕೌನ್ಸಿಲು ಸಭೆ ಯು— ತಾ. 11ರಲ್ಲು ನಡೆದ ಚೀಫ್‌ಮೆನ್ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಚಲಿತ ವರುಷದ ಮತ್ತು ಹೊಸ ವರುಷದ ಬಜೆಟ್ ಆಗೀಕಾರ ಪ್ರತ್ಯೆಯು ಕೆಲವೊಂದು ಟೀಕೆಗಳೊಳಗಾಗಿ ತೀರ್ಮಾನಕ್ಕೆ ಬಾಕಿಇಡಲಾಯಿತು. ಲಾಟಾನುಕಂಬದೀಪಗಳ ಟೆಂಡರುಗಳನ್ನು ವಾರ್ಷಿಂ ನೂರು ವಾಗಿ ಬಯೆತೀಕ ಪಡೆಸುರು ಈಗ ಬೊರೆಯು ವ ದೀಪಗಳಿಗೆ ಕುರಿತು ದೋಷಗಳನ್ನೆತ್ತಿದರು. ಈಗ ಇರುವ ಎಲ್ಲಾ ಲಾಟಾನು ದೀಪಗಳನ್ನು ಪರೀಕ್ಷಿಸಿ ಪರಿಹಾರಮಾಡುವು ದುರಸ್ತಿಗೊಳಿಸಿ ಲಾಟಾನು ದೀಪಗಳ ಬಗ್ಗೆ ನುಂಡಿಸ ಸಭೆಗೆ ವರದಿಮಾಡಲು ಕಮಿಷನರನ್ನು ವಿನಂತಿಸುವ ನಿರ್ಧಾರವಾಯಿತು. ಮುನಿಸಿಪಲ್ ಹೌತ್ ಶಾಲೆಯ ಸೌಕರ್ಯದ ಬಗ್ಗೆ ತಕ್ಕೆ ವ್ಯವಸ್ಥೆ ನೂಡಬೇಕೆಂದು ಅಭಿಪ್ರಾಯವಾಯಿತು. ಗುಂಡಿಬೈಲು ಪಾರ್ಕಿನ ಎರಡು ತೋಡುಗಳಿಗೆ ಸಂಕ ಹಾಕಿಸಲು ಹಣ ಮಂಜೂರಾಯಿತು.

ಮತಗಣನೆ— ಈ ತನಕ ದ. ಕ. ಜಿಲ್ಲೆಯ ಕ್ಷೇತ್ರಗಳಲ್ಲಿಯ ಮತಗಣನೆ ನಡೆದುವರಲ್ಲಿ ಎಲ್ಲೂ ಅಶಾಸಗಳೂ ಕಾಂಗ್ರೆಸಿಗೇನೇ ರೂ ರಕೆವೆ ಕುಂದಾಪುರ ಸರ್ಕಲಿನ ಮತಗಣನೆಯು ತಾ. 14ರಲ್ಲೂ ಉಡುಪಿ ಸರ್ಕಲಿನ ಮತಗಣನೆಯು ತಾ. 15ರಲ್ಲೂ ಕಾರು ಸರ್ಕಲಿನ ಮತಗಣನೆಯು ತಾ. 16ರಲ್ಲೂ ಬ್ರಹ್ಮಾವರ ಸರ್ಕಲಿನ ಮತಗಣನೆಯು ತಾ. 18ರಲ್ಲೂ ಕಾರ್ಕಳ ಸರ್ಕಲಿನ ಮತಗಣನೆಯು ತಾ. 20ರಲ್ಲೂ ನಡೆಯಲಿರುವುದು. ಉಡುಪಿ ಲೋಕಸಭಾ ಸ್ಥಾನದ ಮತಗಣನೆಯು ತಾ. 18ರಲ್ಲಿ ನಡೆಯಲಿರುವುದು.

ಕುಂದಾಪುರದಲ್ಲಿ ಮತದಾನವು— ತಾ. 12ರಂದು ನಡೆಯಿತು. ಲೋಕಸಭೆಗೆ ಶ್ರೀ ಯು. ಶ್ರೀನಿವಾಸ ಮಲ್ಯ (ಕಾಂ) ಶ್ರೀ ಟಿ. ಪೋಷನ ರಾವ್ (ಪಿ. ಎಸ್. ಪಿ) ವಿಧಾನ ಸಭೆಗೆ ಶ್ರೀ ಕೆ. ಸೂರ್ಯನಾರಾಯಣ ಆಡಿಗ (ಕಾಂ) ಶ್ರೀ ವಿ. ಶ್ರೀನಿವಾಸ ಶೆಟ್ಟಿ (ಪಿ. ಎಸ್. ಪಿ.) ಇವರೊಳಗೆ ತೀವ್ರ ಸ್ಪರ್ಧೆಯಿತ್ತು. ಸುಮಾರು ಸೇಕಡಾ 55ರಷ್ಟು ಮತದಾನವಾಗಿದ್ದು ಹೆಚ್ಚಿನ ಮತಗಳು ಕಾಂಗ್ರೆಸಿಗೇ ಬಿದ್ದಿವೆ ಎಂದು ನಿರೀಕ್ಷಿಸಲಾಗಿದೆ.

ಒಂದು ಪತ್ರಿಕೆಯನ್ನು ನಡೆಸಿ, ಹಿಂದು ಪುಸ್ತಕವನ್ನಾಗಲೀ ಕೊಳ್ಳದಿರುವ ಪುಣ್ಯಾತ್ಮನು "ಇಕ್ಕಲಾರದ ಕೈ ಎಂಜಲು" ಎನ್ನುವಂತೆ ತನ್ನಲ್ಲಿ ಹಣವಿಲ್ಲವೆನ್ನುವ ನೆವವನ್ನು ಮುಂದೆ ಮಾಡುತ್ತಾನೆ.

ದೇವರೇ, ಅವನು ಪತ್ರಿಕೆ ಪುಸ್ತಕ ಕೊಂಡು ಜ್ಞಾನ ಸಂಗ್ರಹ ಮಾಡಿಕೊಳ್ಳದಿದ್ದರೂ ಚಿಂತೆಯಿಲ್ಲ; ತನ್ನಲ್ಲಿ ಪತ್ರಿಕೆ, ಪುಸ್ತಕಕೊಳ್ಳಲು ಹಣವಿಲ್ಲವೆಂದು ಸುಳ್ಳು ನೆಪ ಹೇಳುವ ಕಪ್ಪವನ್ನು ಮಾತ್ರ ಅವನಿಗೆ ಎಂದೂ ತಂದು ಕೊಡಬೇಡ.

ಪುಸ್ತಕ ಓದದಿದ್ದರೂ, ಪತ್ರಿಕೆ ಓದದಿದ್ದರೂ ದೇವರೇ, ಅವನ ತಲೆಯನ್ನು ಎಂದೂ ಬರಡಾಗಿ ಇರಿಸಬೇಡ. ಆವತ್ತೆ, ನಿನಗೆ ನನ್ನ ದೊಂದು ಆಹ್ವಾ! ಪುಸ್ತಕ ಪತ್ರಿಕೆಗಳಿಗೆ ಇಲ್ಲ ನೆಂದು ಹೇಳುವ ಅತನ ಪಣ ಬರಿ ಬೀಜಿ ನಿಗಾರೇಟಿಗೆ, ಚಹಾ ಕಾಫಿಗೆ ನೂತ್ರ ಹೋಗದಂತೆ ನೋಡಿಕೊ!

—ಪಾಟೀಲ ಪುಟ್ಟಪ್ಪ.

(ಸಂಗಮ'ದಿಂದ)

ಸೆಕೆಂಡರಿ ತಾಲೆಗಳು

ತಮ್ಮ ಉಪಯೋಗಾರ್ಥವಾಗಿ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು Roc. No. 466-N /50 ತಾ. 12-12 50ನೇ ಪ್ರೊಸಿಡಿಂಗ್ಸಿನಂತೆ ಮದ್ರಾಸು ಸರಕಾರವು ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ನವರು ಮಂಜೂರು ಮಾಡಿದ್ದಾರೆ.

ಈ ವರೆಗೆ ಚಂದಾದಾರರಾಗಿದ್ದ ಯಾವ ತ್ತೂ ಸೆಕೆಂಡರಿ ತಾಲೆಗಳವರು: ನವಯುಗಕ್ಕೆ ಚಂದಾದಾರರಾಗಿ ತರಿಸಿಕೊಂಡು ಪ್ರೋತ್ಸಾಹಿಸುವಂತೆ ಈಮೂಲಕ ವಿನಂತಿಸಿಕೊಳ್ಳಲಾಗಿದೆ.

ಮೆನೇಜರ್.

ಉಡುಪಿ, ಕಾಪು, ಬ್ರಹ್ಮಾವರ ಕ್ಷೇತ್ರಗಳಲ್ಲಿ ಮತದಾನವು— ತಾ. ೨ ರಂದು ಶಾಂತರೀತಿಯಲ್ಲಿ ನಡೆಯಿತು. ಸೇಕಡಾ 60ರಿಂದ 60ಕ್ಕಿನ್ನು ಮತದಾನವಾಗಿವೆ ಎನ್ನಲಾಗಿದೆ. ಉಡುಪಿಯಲ್ಲಿ ಕಾಂಗ್ರೆಸ್ ಪುರಿಯಾಳು ಶ್ರೀ ಸಿ. ವಿ. ಆಚಾರ್ಯರು ಮತ್ತು ಪ್ರಸವಾ ಪಕ್ಷದ ಶ್ರೀ ಯು. ಎಸ್. ನಾಯಕ್, ಅವರೊಳಗೆ ನೇರವಾದ ಸ್ಪರ್ಧೆಯಿತ್ತು. ಕಾಪು ಕ್ಷೇತ್ರದಲ್ಲಿ ಶ್ರೀನಿವಾಸ ಎಚ್. ಎಕ್ಸ್. ಡಿ. ಪಿಂಟೋ (ಕಾ) ಶ್ರೀ ಎಸ್. ನವೀನ ಚಂದ್ರ (ಪ್ರಸವಾ) ಮತ್ತು ಶ್ರೀ ಆರ್. ಆರ್. ಕುಂಜೂರು (ಸ್ವ) ಅವರೊಳಗೆ ತ್ರಿಕೋಣಾತ್ಮಕ ಸ್ಪರ್ಧೆಯಿತ್ತು. ಬ್ರಹ್ಮಾವರದಲ್ಲಿ ಶ್ರೀ ಬಿ. ಜಗಜೀವನದಾಸ ಸೆಟ್ಟಿ (ಕಾ) ಮತ್ತು ಶ್ರೀ ಬೈಕಾಡಿ ಶೀನಪ್ಪ ಸೆಟ್ಟಿ (ಪ್ರಸವಾ) ಅವರೊಳಗೆ ಸ್ಪರ್ಧೆಯಿತ್ತು.

ಲೋಕಸಭಾ ಸ್ಥಾನಕ್ಕೆ ಶ್ರೀ ಯು. ಶ್ರೀನಿವಾಸ ಮಲ್ಯ (ಕಾ) ಮತ್ತು ಶ್ರೀ ಡಿ. ಮೋಹನರಾವ್ (ಪ್ರಸವಾ) ಇವರೊಳಗೆ ನೇರವಾದ ಸ್ಪರ್ಧೆಯಿದೆ.

ಕಾರಂಜೆತ್ತಾರ— ಶ್ರೀ ಲಕ್ಷ್ಮೀನಾರಾಯಣ ಎಡೆಡ್ ಎಲಿಮೆಂಟರಿ ಶಾಲಾ ವರ್ಧಂತ್ಯುತ್ಸವವು ತಾ. 6 ಮತ್ತು 7ರಲ್ಲಿ ಸಾಂಗವಾಯಿತು. ಮೊದಲ ದಿನ ಕಡಬ ಕೇಂದ್ರದ ರಾಷ್ಟ್ರೀಯ ವಿಸ್ತರಣಾ ಯೋಜನೆಯವರ ನೇತೃತ್ವದಲ್ಲಿ ಪಂದ್ಯಾಟ ಸ್ಪರ್ಧೆ ನಡೆಯಿತು. ಎರಡನೆ ದಿನ ಬೆಳಿಗ್ಗೆ ಕಡಬ ಬಿ. ಡಿ. ಓ. ಶ್ರೀ ಎಮ್. ಆರ್. ನಾರಾಯಣನವರು ಧ್ವಜಾರೋಹಣಗೈದರು. ಅಪರಾಹ್ನ ಛದ್ಮವೇಶ ಸ್ಪರ್ಧೆ ನಡೆಯಿತು. ಬಳಿಕ ಸಾರ್ವಜನಿಕ ಸಭೆಯು ಶ್ರೀ ಕೆ. ವೆಂಕಟ್ರಮಣ ಗಾಣಿಗ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ತರರು ವರದಿಯನ್ನೋದಿದ ಬಳಿಕ ಶ್ರೀಗಳಾದ ವಾಸು, ಜಿ. ಸತ್ಯನಾರಾಯಣ, ಅಬ್ದುಲ್ ಅಜೀಜ್, ನಾಗಭೂಷಣ, ಶ್ರೀಮತಿ ವಾಸು ಮೊದಲಾದವರು ಕಾಲೋಚಿತ ಸೂತುಗಳನ್ನಾಡಿದರು. ಬಹುಮಾನವಿತರಣೆ, ವಿವಿಧ ವಿನೋದಾವಳಿಗಳಾಗಿ ಸಮಾರಂಭವು ಶ್ರೀ ಕೆ. ಗಣಪತಿ ಭಟ್ಟರ ವಂದನಾರ್ಪಣೆಯೊಂದಿಗೆ ಕೊನೆಗೊಂಡಿತು.

ಬಾಕ್ರೂರು— ಇಡ್ಲಿಯ ನೇಪಸಲ್ ಹೈಸ್ಕೂಲಿನ ಎಸ್. ಎಸ್. ಎಲ್. ಸಿ. ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭವು ತಾ 6ರಲ್ಲು ಹೆಡ್ಮಾಸ್ತರ್ ಶ್ರೀ ಪಿ. ಎನ್. ಭೋಜರಾಯರ ಅಧ್ಯಕ್ಷತೆಯಲ್ಲಿ ಜರಗಿತು ಉಪಾಧ್ಯಾಯ ವೃಂದಕ್ಕೆ ಮಾನಪತ್ರ ಅರ್ಪಣೆ ಇತ್ಯಾದಿ ಕಾರ್ಯಕ್ರಮಗಳಾದ ನಂತರ ಉಪಾಧ್ಯಾಯರಲ್ಲಿ ಶ್ರೀಗಳಾದ ಎಚ್. ಮಹಾಬಲ ಶೆಟ್ಟಿ, ಯು. ಕೃಷ್ಣ ಭಟ್, ಎನ್. ಸುಬ್ಬಣ್ಣ ಹೆಗ್ಡೆ, ಬಿ ಆನಂಕ್ಯ ವೈ. ನಾಯಕ್, ಕೆ. ರಾಜೀವ ಶೆಟ್ಟಿ ಮೊದಲಾದವರು ಹಿತವಚನಗಳನ್ನಾಡಿದರು. ಶಾಲಾವಿದ್ಯಾರ್ಥಿನಾಯಕ ಶ್ರೀ ಬಿ. ನಾಗೇಶ ಭಟ್ಟರು ಧನ್ಯವಾದಗಳ ಸ್ನಿತ್ತರು.

ಕಾರ್ಕಳ—ಶ್ರೀ ರಂಜಾಳ ಸಿದ್ದಪ್ಪ ಹೆಗ್ಡೆಯವರು ಜೀರ್ಣೋದ್ಧಾರ ಮಾಡಿಸಿದ ಸ್ಥಳೀಯ ಬಹು ಪುರಾತನವಾದ ಗುರುರಾಯರಾಯನೆ ಶ್ರವಣ ಬಸದಿಯಲ್ಲಿ ಶ್ರೀ ಚಂದ್ರಪ್ರಭ ತೀರ್ಥಂಕರರ ಸಂಪ್ರೋಕ್ಷಣೆಗೆ ಸಂಬಂಧಿಸಿ ತಾ 4ರಿಂದು ಇಂದ್ರ ಪ್ರತಿಷ್ಠೆಯೊಂಗಿ ತಾ. 5ರಿಂದ 8ರ ತನಕ ಯಕ್ಷ ಪ್ರತಿಷ್ಠೆ, ಬ್ರಹ್ಮಶಾಂತಿ, ನವಗ್ರಹ ಯೋಗ ಮುಂತಾದ ಆರಾಧನೆ ಮತ್ತು ಅಷ್ಟಬಂಧಕ್ಕು ಸಂಪ್ರೋಕ್ಷಣೆ ಮೊದಲಾದವು ವಿದ್ಯುಕ್ತವಾಗಿ ನಡೆದು ತಾ 9ರಿಂದು ಶ್ರೀಮತಿ ಲಕ್ಷ್ಮಿಸುತಿ ಅಮ್ಮನವರಿಂದ 501 ಕಲಶಗಳ ಅಭಿಷೇಕ, ನುಹೋತ್ಸವ, ಪಾದಪೂಜಾದಿ ಕಾರ್ಯಕ್ರಮಗಳಾದುವು. ಪ್ರತಿದಿನವೂ ಧರ್ಮೋಪದೇಶ ಮೊದಲ್ಗೊಂಡ ಕಾರ್ಯಕ್ರಮಗಳಿದ್ದುವು.

ವೇಣೂರು— ಸ್ಥಳೀಯ ಬೋರ್ಡು ಹೈಸ್ಕೂಲಿನಪ್ರಥಮ ವರ್ಧಂತಿಸಮಾರಂಭವು ತಾ. 2ರಲ್ಲು ಬೆಲ್ಲಾ ಬೋರ್ಡು ಅಧ್ಯಕ್ಷೆ ಡಾ! ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ವಿಠಲರಾಯರು ಅಂದು ಬೆಳಿಗ್ಗೆ ಧ್ವಜಾರೋಹಣ ಮಾಡಿದರು, ಸಂಜೆಯ ಸಭೆಯಲ್ಲಿ ಹೈಸ್ಕೂಲು ಕಮಿಟಿ ಅಧ್ಯಕ್ಷ ಶ್ರೀ ಎಮ್. ಧರ್ಣಪ್ಪ ಅಧಿಕಾರಿಗಳು ಸ್ವಾಗತ ಭಾಷಣ ಮಾಡಿದರು. ಹೆಡ್ಮಾಸ್ತರ್ ಶ್ರೀ ಕೆ. ಎಮ್. ಭಂಡಾರಿಗಳು ವರದಿ ವಾಚನ ಮಾಡಿದರು. ಹೈಸ್ಕೂಲು ಕಮಿಟಿ ಕಾರ್ಯದರ್ಶಿ ಶ್ರೀ ಕೆ. ನಾರಾಯಣ ಹೆಗ್ಡೆಯವರು ಧನ್ಯವಾದ ಸಮರ್ಪಣೆಗೈದರು. ನಂತರ ಜನ ಮನರಂಜನ ಕಾರ್ಯಕ್ರಮಗಳಾದುವು

ಮದ್ರಾಸು

ಬಾನುಲಿಯಲ್ಲಿ ಯಕ್ಷಗಾನ- ಇದೇ ತಾ. 17ನೇ ಆದಿತ್ಯವಾರ ಬೆಳಿಗ್ಗೆ 8.45ರಿಂದ 9.15ರ ತನಕ ಮದ್ರಾಸು ಬಾನುಲಿಯಿಂದ 'ಶ್ರೀ ರಾಮ ಪಟ್ಟಾಭಿಷೇಕ' ಎಂಬ ಯಕ್ಷಗಾನವು ಪ್ರಸಾರನಾಗಲಿರುವುದು. ಇದರಲ್ಲಿ ಶ್ರೀಗಳಾದ ಎಮ್. ಆರ್. ಶಾಸ್ತ್ರಿ, ಡಿ. ಎಸ್. ತಂತ್ರಿ, ಮತ್ತು ವಿಜಯರಾಮ್, ನಾರಾಯಣ ರಾವ್, ಎ. ವಿ. ಭಟ್ ಮತ್ತು ಎನ್ ವಿ. ಮೂರ್ತಿಗಳು ಭಾಗವಹಿಸುವರು.

ಪರಿಶೀಲನೆ ಹಾಗು ವಿಚಾರಣೆಗಾಗಿ ದೂರು ಕಳುಹಿಸುವವರಿಗೆ ಸೂಚನೆ

ಲಂಚ ಅಥವಾ ಇತರ ಅಕ್ರಮಗಳ ಆರೋಪಣೆಗಳನ್ನೊಳಗೊಂಡ ಅರ್ಜಿಗಳನ್ನು ಸರಕಾರಕ್ಕಾಗಲಿ ವಕ್ಷತಾ ಲೆಕ್ಕ ತನಿಖೆಯ ವಿಶೇಷ ಅಧಿಕಾರಿಗಳಿಗಾಗಲಿ ಕಳುಹಿಸುವ ಅರ್ಜಿದಾರರು ತಮ್ಮ ಅರ್ಜಿಗಳ ಪ್ರತಿಗಳನ್ನು ಇತರ ಅನೇಕ ಕಚೇರಿಗಳಿಗೂ ಕಳುಹಿಸುತ್ತಿರುವದು ಸರಕಾರದ ಗಮನಕ್ಕೆ ಬಂದಿದೆ. ಈ ಕಚೇರಿಗಳಿಗೆ ಯಾರ ಮೇಲೆ ಇಂಥ ಆರೋಪಣೆಗಳು ಇರುತ್ತವೆಯೊ ಅವರಿಗೆ ಪ್ರತಿಕೂಲವಿರುವ ಸಂಭವವಿರುವದರಿಂದ ಆವರು ಈ ಪ್ರತಿಗಳ ಮುಖಾಂತರ ತಮ್ಮ ಮೇಲಿನ ಆರೋಪಣೆಗಳನ್ನು ಮುಂದಾಗಿಯೇ ತಿಳಿದುಕೊಂಡು ವಿಚಾರಣೆಗೆ ಅವಶ್ಯವಿರುವ ಉಪಯುಕ್ತ ಮಾಹಿತಿಯನ್ನು ಅಡಗಿಸಿಡುವದು ಅಥವಾ ಸಂಬಂಧಪಟ್ಟ ಪಕ್ಷವರೊಂದಿಗೆ ರಾಜಿಗೆ ಬರುವದು ಇತ್ಯಾದಿ ಕ್ರಮ ಕೈಗೊಳ್ಳುವ ಪ್ರಯತ್ನ ಅನೇಕ ಸಲ ವಿಚಾರಣೆಯು ನಿಷ್ಫಲವಾಗುವುದೆಂದು ಎಷ್ಟೋ ಸಂದರ್ಭಗಳಲ್ಲಿ ಅನುಭವಕ್ಕೆ ಬಂದಿದೆ. ಆದ್ದರಿಂದ ಯೋಗ್ಯ ಪರಿಶೀಲನೆ ಹಾಗು ವಿಚಾರಣೆಗಾಗಿ ದೂರುಕೊಟ್ಟ ಅರ್ಜಿಗಳನ್ನು ಸಂಬಂಧಪಟ್ಟ ಇಲಾಖೆಯ ಕಾರ್ಯದರ್ಶಿಗಳಿಗಾಗಲಿ ವಕ್ಷತಾ ಲೆಕ್ಕ ತನಿಖೆಯ ವಿಶೇಷ ಅಧಿಕಾರಿಗಳಿಗಾಗಲಿ ಕಳುಹಿಸಬೇಕೇ ಹೊರತು ಅದರ ಪ್ರತಿಗಳನ್ನು ಇತರ ಕಚೇರಿಗಳಿಗೆ ಕಳುಹಿಸಕೂಡದೆಂದು ಸಲಹೆ ಮಾಡಲಾಗಿದೆ. ಇದರಿಂದ ಅರ್ಜಿಯಲ್ಲಿಯ ವಿಷಯಗಳನ್ನು ವಿಚಾರಣೆಗೆ ಪ್ರಗತಿಹೊಂದುವವರೆಗೆ ಸಾಧ್ಯವಿದ್ದಷ್ಟು ಗುಪ್ತವಾಗಿಡಲು ಅನುಕೂಲವಾಗುವದು.

(ಮೈಸೂರು ಸರಕಾರದ ವಾರ್ತಾ ಇಲಾಖೆಯ ಪತ್ರಿಕಾ ಪ್ರಕಟಣೆ)

ಕಲಾವಿದರಿಗೆ ಸಾಂಸ್ಕೃತಿಕ ವ್ಯಾಸಂಗ ವೇತನಗಳು

ವಿವಿಧ ಸಾಂಸ್ಕೃತಿಕ ಕ್ಷೇತ್ರಗಳಲ್ಲಿರುವ ಯುವಕ ಕಲಾವಿದರಿಗೆ ಅಥವಾ ಕಾರ್ಯಕರ್ತರಿಗೆ ವ್ಯಾಸಂಗ ವೇತನಗಳನ್ನು ನೀಡುವ ಸಂಬಂಧವಾದ ಯೋಜನೆಯ ಪ್ರಕಾರ ಈ ವರ್ಷ ಮತ್ತೆ ಕೆಲವು ವ್ಯಾಸಂಗ ವೇತನಗಳನ್ನು ನೀಡಲು ಭಾರತ ಸರ್ಕಾರದರು ನಿರ್ಧರಿಸಿರುವರು. ಮೂರನೆಯ ತಂಡಕ್ಕಾಗಿ 31ಮಂದಿ ಉಮೇದುವಾರರನ್ನು ಆರಿಸಲಾಯಿತು. ನಾಲ್ಕನೆಯ ತಂಡದ ಬಗ್ಗೆ ಶಿಕ್ಷಣ ಮಂತ್ರಿ ಶಾಖೆಯವರು ಈಗ ಅರ್ಜಿಗಳನ್ನು ಆಹ್ವಾನಿಸಿರುವರು.

ವ್ಯಾಸಂಗ ವೇತನಗಳ ಸಂಖ್ಯೆಯನ್ನು ಆಯೈಯ ಕಾಲದಲ್ಲಿ ನಿರ್ಧರಿಸಲಾಗುವುದು. ಪ್ರತಿ ವ್ಯಾಸಂಗ ವೇತನದ ಮೌಲ್ಯವೂ ತಿಂಗಳಿಗೆ 250ರೂ. ಗಳು

1957ರ ಏಪ್ರಿಲ್ 15ರಿಂದ, 18 ರಿಂದ 35 ವರ್ಷಗಳ ವಯೋಪರಿಮಿತಿಯಲ್ಲಿರುವ ಭಾರತೀಯರು ಈ ವ್ಯಾಸಂಗ ವೇತನಗಳಬಗ್ಗೆ ಅರ್ಜಿಸಲ್ಲಿಸಲು ಅರ್ಹರಾಗಿರುವರು. ಅಭ್ಯರ್ಥಿಗಳಿಗೆ ಸಾಕಷ್ಟು ವಿದ್ಯಾಭ್ಯಾಸ ಎಂಗಿರಬೇಕು. ನಾವು ಆಯಾಯಿಸಿರುವ ಕ್ಷೇತ್ರವಲ್ಲಿ ಪ್ರತಿಭೆ ತೋರಿರಬೇಕು.

ಅರ್ಜಿ ನಮೂನೆಗಳನ್ನು ಶಿಕ್ಷಣ ಮಂತ್ರಿ ಶಾಖೆ (ವ್ಯಾಸಂಗ ವೇತನಗಳ ವಿಭಾಗ, ಎಸ್–6 ಸೆಕ್ಷನ್) ಭಾರತ ಸರ್ಕಾರ, ನವದೆಹಲಿ—ಎಂಬ ವಿಳಾಸದಿಂದ ಪಡೆಯ ಬಹುದು. ಅರ್ಜಿಗಳನ್ನು ಶಿಕ್ಷಣ ಮಂತ್ರಿ ಶಾಖೆಯಲ್ಲಿ ಸ್ವೀಕರಿಸಲು 1957ರ ಏಪ್ರಿಲ್ 15 ಕೊನೆಯ ದಿನಾಂಕ

ತುಂಗಭದ್ರಾ ವಿದ್ಯುತ್ ಉತ್ಪಾದನಾ ಕೇಂದ್ರಗಳು

ತುಂಗಭದ್ರಾ ಆಣೆಕಟ್ಟಿನ ಸಮೀಪದಲ್ಲಿ ನಿರ್ಮಿತವಾಗುತ್ತಿರುವ ಹಂಪೆ ವಿದ್ಯುತ್ ಉತ್ಪಾದನಾ ನಿಲಯವು ಈ ವರ್ಷ ಏಪ್ರಿಲ್ ತಿಂಗಳ ವೇಳೆಗೆ ಕ್ಷಕಾರ್ಯಾಚರಣೆಗೆ ಬರುವುದು. ಆಣೆಕಟ್ಟಿನ ಬಲ ಭಾಗದಲ್ಲಿ ನಿರ್ಮಿತವಾಗುತ್ತಿರುವ ವಿದ್ಯುತ್ ಉತ್ಪಾದನಾ ನಿಲಯಗಳಲ್ಲಿ ಇದು ಎರಡನೆಯದು. ಮೊದಲನೆಯನು ಈ ವರ್ಷ ಜನವರಿ ತಿಂಗಳಲ್ಲಿ ಕಾರ್ಯಾಚರಣೆಗೆ ತೊಡಗಿತು.

ಹಂಪೆ ವಿದ್ಯುತ್ ಉತ್ಪಾದನಾ ನಿಲಯವು ತುಂಗಭದ್ರಾ ಜಲ ಜನಿಕ ವಿದ್ಯುಚ್ಛಕ್ತಿ ಯೋಜನೆಯ ಒಂದು ಭಾಗವಾಗಿರುವುದು. ಈ ನಿಲಯವೆಲ್ಲೆ ಸೇರಿದಂತೆ ಪ್ರಾರಂಭದಲ್ಲಿ ಎರಡು ಕೇಂದ್ರಗಳಿರುವುವು. ಒಂದೊಂದು ಕೇಂದ್ರದ ವಿದ್ಯುತ್ ಉತ್ಪಾದನಾ ಸಾಮರ್ಥ್ಯವು 9,000 ಕಿಲೋ ವ್ಯಾಟ್‌ಗಳು.

36,000 ಕೆ. ವ್ಯಾ. ಗಳ ವಿದ್ಯುಚ್ಛಕ್ತಿ ಉತ್ಪಾದನೆಯು ಸಾಮರ್ಥ್ಯವನ್ನು ಪಡೆದಿರುವ ವಿದ್ಯುಚ್ಛಕ್ತಿ ಉತ್ಪಾದನಾ ನಿಲಯ ವೊಂದನ್ನು ತುಂಗಭದ್ರಾ ಆಣೆಕಟ್ಟಿನ ಎಡಭಾಗದಲ್ಲಿ ನಿರ್ಮಿಸಲಾಗುವುದು. ಈ ಬಗ್ಗೆ ನಿರ್ಮಾಣಕಾರ್ಯವು ನಡೆಯುತ್ತಿದೆ. ಮೊದಲನೆಯ ಘಟ್ಟದಲ್ಲಿ ಒಂದೊಂದೂ 9,000 ಕೆ. ವ್ಯಾ ಗಳ ಶಕ್ತಿಯುಳ್ಳ, ಎರಡು ವಿದ್ಯುಜ್ಜನಕ ಯಂತ್ರಗಳನ್ನು ಸ್ಥಾಪಿಸ ಲಾಗುವುದು. ಈ ವಿದ್ಯುತ್ ಉತ್ಪಾದನಾ ನಿಲಯ 1959ರಲ್ಲಿ ಕಾರ್ಯಾಚರಣೆಗೆ ತೊಡಗುವ ನಿರೀಕ್ಷೆಯಿದೆ.

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ. ಬೆಲೆ: ೦—೨—೦

ಮಕ್ಕಳ ಮಗ್ಗಿಪುಸ್ತಕ

ಬೆಲೆ: ೦ ೧—೦

ನವಯುಗ ಪ್ರೆಸ್, ಉಡುಪಿ.



ಗೀತೆಯ ಕೈಗನ್ನಡಿ

ಹೊಸಕೆರೆ ಚಿದಂಬರಯ್ಯನವರು ಅನುವಾದಿಸಿದ

ಭಗವದ್ಗೀತೆಯ

ಸಮೂಲ ಭಾಷಾಂತರ

ಪೊಕೆಟ್ ಎಡಿಷನ್.

ಸುಮಾರು 450 ಪುಟಗಳು

ಕ್ರಯ 0—12—0

ನವಯುಗ ಪ್ರೆಸ್, ಉಡುಪಿ.

ಕನ್ನಡದಲ್ಲಿ ಮೊದಲನೆಯದೆಂದೇ ಹೇಳಬಹುದಾದ ಅಣು ಶಕ್ತಿಯ ಸಚಿತ್ರ ವಿವೇಚನಾ ಗ್ರಂಥ

ಹಿರೋಶಿಮಾದಿಂದ ಜಿನೇವ

ಬರೆದವರು:

ಶ್ರೀ. ಯು. ರಾಘವೇಂದ್ರ ಆಚಾರ್ಯ, ಎಂ. ಎ., ನವದೆಹಲಿ.

ಮುನ್ನುಡಿಕಾರರು: ಶ್ರೀ. ತಿವರಾಮು ಕಾರಂತರು.

ಪ್ರತಿಯೊಬ್ಬರೂ ಓದಲೇಬೇಕಾದ ನವೀನ ಪುಸ್ತಕ.

ಉತ್ತಮ ಕಾಗದ. ಬೆಲೆ: ರೂ. ೧—೮—೦.

ನವಯುಗ ಪ್ರೆಸ್, ಉಡುಪಿ.

ಮಂಗಳೂರು

ದ. ಕ. ಜಿಲ್ಲೆಯಲ್ಲಿ ಕಾಂಗ್ರೆಸಿಗೆ ಯಶಸ್ಸು— ಮೈಸೂರು ವಿಧಾನ ಸಭೆಗೆ ಪುತ್ತೂರು ದ್ವಿಸದಸ್ಯ ಮತದಾರ ಕ್ಷೇತ್ರದಿಂದ ಕಾಂಗ್ರೆಸ್ ಹುರಿಯಾಳಾಗಿ ನಿಂತ ಶ್ರೀ ವೆಂಕಟ್ರಮಣ ಗೌಡರು ಜನಸಂಘದ ಸ್ಪರ್ಧಿ ಶ್ರೀ ಉರಿಮಜಲು ರಾಮ ಭಟ್ ಮತ್ತು ಕಮ್ಯೂನಿಸ್ಟ್ ಸ್ಪರ್ಧಿ ಶ್ರೀ ಕೆ. ಸಂಜೀವ ರೈಗಳನ್ನೂ, ಗುಡ್ಡೆಗಾಡು ಪಂಗಡಗಳ ಕಾದಿಟ್ಟ ಸ್ಥಾನದ ಕಾಂಗ್ರೆಸ್ ಉಮೇದ್ವಾರ ಶ್ರೀ ಪಿ. ಸುಬ್ಬಯ್ಯ ನಾಯ್ಕರು ಜನಸಂಘದ ಶ್ರೀ ಐತಪ್ಪ ನಾಯ್ಕರನ್ನು ಅಧಿಕ ಮತಗಳಿಂದ ಸೋಲಿಸಿ ವಿಜಯಿಗಳಾದರು.

ಮತದಾನಗಳ ವಿವರಗಳು ಶ್ರೀ ಕೆ. ವಿ. ಗೌಡ (ಕಾ) 48,691. ಶ್ರೀ ಯು. ರಾಮ ಭಟ್ಟ (ಜ) 11,684. ಶ್ರೀ ಕೆ. ಸಂಜೀವ ರೈ (ಕಮ್ಯೂ) 8881. **ಕಾದಿಟ್ಟ ಸ್ಥಾನ** ಶ್ರೀ ಪಿ. ಸುಬ್ಬಯ್ಯ ನಾಯ್ಕ್ (ಕಾ) 39,763. ಶ್ರೀ ಐತಪ್ಪ ನಾಯ್ಕ (ಜ) 10,759.

ಮಂಗಳೂರು 1 ನೇ ಮತದಾರ ಕ್ಷೇತ್ರದಿಂದ — ಕಾಂಗ್ರೆಸ್ ಸ್ವಾತಂತ್ರ್ಯ ಶ್ರೀ ಬಿ. ವೈಕುಂಠ ಬಾಳಿಗರು ಕಮ್ಯೂನಿಸ್ಟ್ ಪ್ರತಿಸ್ಪರ್ಧಿ ಶ್ರೀ ಎ. ಶಾಂತಾರಾಮ ಪೈಗಳನ್ನು ಅಧಿಕ ಮತಗಳಿಂದ ಸೋಲಿಸಿ ವಿಜಯಿಗಳಾದರು. ಮತಗಳು ಶ್ರೀ ಬಿ. ವಿ. ಬಾಳಿಗ (ಕಾ) 16,366. ಶ್ರೀ ಎ. ಎಸ್. ಪೈ (ಕಮ್ಯೂ) 10,864. ಶ್ರೀಮತಿ ಲೋರಾ ಪ್ರಾಸ್ (ಸ್ವತಂತ್ರ) 4766. ಶ್ರೀ ಪ್ರಭಾಕರ ಫಾಟೆ (ಜನಸಂಘ) 1945. ಸ್ವತಂತ್ರ ಮತ್ತು ಜನಸಂಘದ ಹುರಿಯಾಳುಗಳು ಇಡು ಗಂಟು ಕಳಕೊಂಡರೂ.

ಮಂಗಳೂರು 2 ನೇ ಮತದಾರ ಕ್ಷೇತ್ರದಿಂದ— ಕಾಂಗ್ರೆಸ್ ಹುರಿಯಾಳು ಶ್ರೀ ಗಜಾನನರಾವ್ ಪಂಡಿತರು ತಮ್ಮ ಪ್ರತಿಸ್ಪರ್ಧಿ ಕಮ್ಯೂನಿಸ್ಟ್ ಪಕ್ಷದ ಶ್ರೀ ಬಿ. ವಿ. ಕಕ್ಕಿಲ್ಲಾಯರನ್ನು 5806 ಅಧಿಕ ಮತಗಳಿಂದ ಸೋಲಿಸಿ ವಿಜಯಿಗಳಾದರು. ಮತದಾರರ ಸಂಖ್ಯೆ 59113. ಮತದಾನ ಮಾಡಿದವರ ಸಂಖ್ಯೆ 34,859. ಶ್ರೀ ಗಜಾನನರಾವ್ ಪಂಡಿತ್ (ಕಾ) 20,332. ಶ್ರೀ ಬಿ. ವಿ. ಕಕ್ಕಿಲ್ಲಾಯ (ಕಮ್ಯೂ) 14,526.

ಸುರತ್ಕಲ್ ಮತದಾರ ಕ್ಷೇತ್ರದಿಂದ ಶ್ರೀ ಬಿ. ಆರ್. ಕರ್ಕೇರರ ವಿಜಯ— ಮೈಸೂರು ವಿಧಾನ ಸಭೆಗೆ ಸುರತ್ಕಲ್ ಮತದಾರರ ಕ್ಷೇತ್ರದಿಂದ ಕಾಂಗ್ರೆಸ್ ಉಮೇದ್ವಾರ ಶ್ರೀ ಬಿ. ಆರ್. ಕರ್ಕೇರರು 15,621 ಮತಗಳನ್ನು ಪಡೆದು ವಿಜಯಿಯಾದರು ಇವರ ಪ್ರತಿಸ್ಪರ್ಧಿ ಪ್ರ. ಸ. ನಾ. ಉಮೇದ್ವಾರ ಡಾ. ಕೆ. ಸಂಜೀವನಾಥರು 11765 ಮತಗಳನ್ನು ಪಡೆದು ಸೋತಿರುವರು.

ಅರ್ಚಕರೇ ತಮ್ಮನವರ ಐದನೇ ಶತಮಾನೋತ್ಸವ— ಅರ್ಚಕರೇ ತಮ್ಮನವರ ನಿಧನದ ಐದನೇ ಶತಮಾನೋತ್ಸವದ ಸ್ಮಾರಕವಾಗಿ ಈಚೆಗೆ ಮಂಗಳೂರು ನಗರದಲ್ಲಿ ಅವರ ಸೆಸರಿನ ಏಕಸಾತ್ರ ದೇವಮಂದಿರವಾದ ಕಾಸಿಯಾ ಇಗರ್ಜಿಯಲ್ಲಿ ವಿಜೃಂಭಣೆಯಿಂದ ಉತ್ಸವ ನಡೆಸಲಾಯಿತು. ತಾ. 24ರಿಂದ 28ರ ತನಕ ಸ್ಥಳೀಯ ಎಲ್ಲಾ ಕಥೋಲಿಕರಿಗೂ ಆತ್ಮೀಕ ಪುನರುಜ್ಜೀವನದ ನಂತರ ಇದೇ ತಾ. 1ರಲ್ಲು ಬೆಳಿಗ್ಗೆ ಎಲ್ಲರೂ ದಿವ್ಯ ಸತ್ಪ್ರಸಾದವನ್ನು ಸ್ವೀಕರಿಸಿದರು. ತಾ. 1ರಲ್ಲು ಬೆಳಿಗ್ಗೆ ಸುಮಾರು ೨೦೦೦ ಬಿಡೀಸಿಂದ ಕಟ್ಟಿಸಿದ ಸುಜ್ಞಾನೀತವನ್ನು ಮಂಗಳೂರಿನ ಬಿಶೋಪರಾದ ಡಾ. ಬಿ. ಎಸ್. ಟಿ. ಪೀರೀಸರು ಪ್ರತಿಷ್ಠಾಪನೆಮಾಡಿದರು. ಮಧ್ಯಾಹ್ನ ಸಾಧಾರಣ 1000ಕ್ಕೆ ಮಿಕ್ಕಿದ ಜನರಿಗೆ ಅನ್ನದಾನವಾಯಿತು. ತಾ. 3ರಲ್ಲು ಬೆಳಿಗ್ಗೆ ಬಿಶೋಪರು ಅರ್ಚಕರೇ ತಮ್ಮನವರಿಗೆ ತಿರುಪೂಜೆ ಹೇರಿದರು. ಸಂಜೆ ಮಂಗಳೂರಿನ ವಿಕಾರ್ ಜನರಲ್ ಅರ್ಚಕರೇ ತಮ್ಮನವರ ವಿಚಾರದಲ್ಲಿ ಭಾಷಣಮಿತ್ತರು.

ನಿಧನ— ಮಂಗಳೂರಿನ ಹಂಚು ಕಾರ್ಖಾನೆ ಸೂಲಿಕೆರಾದ ಶ್ರೀ ಎಸ್. ಎಫ್. ತಿಯೋಡು ರೆಂಬೆಯನ್ನೂ ನಾನು ಜಾಗ ರೂಳಕೆಯಿಂದ ಸಮೊಕ್ಷೆಸುತ್ತಿರುತ್ತೇನೆ. ಇಲ್ಲಿ ಬನ್ನಿ ಈ ಗಿಡದ ತುದಿ ಭಾಗವನ್ನು ನೋಡೋಣ. ಇದನ್ನು ನನ್ನ ವಿಧಾನ ದಿಂದಲೇ ರೂಪುಗೊಳಿಸಿದ್ದೇನೆ ಎನ್ನುತ್ತಾ ಆಕೆಯು ನಮ್ಮನ್ನು ಕರೆದರು.

ನಾವು ನೋಡಿದ ಆ ಎತ್ತರವಾದ ಮರದ ಮೇಲೆ ಅತಿ ದೊಡ್ಡದಾದ ಹಣ್ಣುಗಳಿದ್ದುವು. ತುಂಬಾ ಗಟ್ಟಿಯಾದ, ಫಲವತ್ತಾದ ಆ ಗಿಡವು ಪ್ರತಿವರ್ಷವೂ ಹೆಣ್ಣುಗಳ ಉನ್ನತ ಬೆಳೆಯನ್ನು ನೀಡುತ್ತದೆ. ಸೋವಿಯತ್ತಿನ ಹೆಚ್ಚು ಕಡಿಮೆ ಉಷ್ಣವಲಯದಲ್ಲಿ ಇರುವ ಸಾಮೂಹಿಕ ಕೃಷಿ ಕ್ಷೇತ್ರಗಳಲ್ಲಿಯೂ ಮತ್ತು ಪ್ರಭುತ್ವ ವ್ಯವಸಾಯ ಕ್ಷೇತ್ರಗಳಲ್ಲಿಯೂ 'ಮಂದಾರಿನ್" ಗಿಡಗಳನ್ನು ಸಮರುವುದರಲ್ಲಿ ಹೊಸ ಪದ್ಧತಿಗಳನ್ನು ಬಳಸಲಾಗುತ್ತಿದೆ. ಅದರ ಪರಿಣಾಮವಾಗಿ ಹಣ್ಣುಗಳ ಬೆಳೆಗಳೂ ಹೆಚ್ಚಾಗಿ ವೃದ್ಧಿಯಾಗಿವೆ.

ಆ ಹಣ್ಣಿನ ತೋಟದ ಸುಂದರ ದೃಶ್ಯದ ಮೇಲೆ ತನ್ನ ನೋಟವನ್ನು ಹಾಯಿಸುತ್ತಾ "ಈ ಹಣ್ಣಿನ ತೋಟದಿಂದ ಹೊರಗೆ ಹೋಗಿ ಒಂದು ದಿನವನ್ನು ಕಳೆಯುವುದನ್ನು ಕೂಡ ನಾನು ಊಹಿಸಿಕೊಳ್ಳಲಾರೆನು" ಎಂದು ಉದ್ಗರಿಸುತ್ತಾ, ಆವರು ಹೀಗೆ ಹೇಳಿದರು: "ಇಲ್ಲಿ ನೋಡಿ, ಸೃಕೃತಿಯು ಎಸ್ಟು ಸೊಂಪಾಗಿ ಬೆಳೆದಿದೆ! ಇಲ್ಲಿ ಜನರೂ ಕೂಡ ದೀರ್ಘಕಾಲದ ವರೆಗೆ ಜೀವಿಸುತ್ತಾರೆ. ನನ್ನ ವಯಸ್ಸೇ ಈಗ ಎಂಭತ್ತು ದಾಟಿ ಹೋಗಿದೆ. ಆದರೆ ನನಗೆ ವಿರಮಿಸುವ ಉದ್ದೇಶವೇನೂ ಇಲ್ಲ. ಅದಕ್ಕೆ ವ್ಯತಿರೇಕವಾಗಿ, ನಮ್ಮ ಸಮೂಹೋದ್ಯಮವಲಯದ ಹಣ್ಣಿನ ತೋಟಗಳನ್ನು ಇನ್ನೂ ಹೆಚ್ಚು ಸುಂದರವಾಗಿಯೂ ಮತ್ತು ಹೆಚ್ಚು ಸಮೃದ್ಧವಾಗಿಯೂ ಮಾಡುವುದರ ಸಲುವಾಗಿ ನಾನು ಇನ್ನೂ ಕೆಲಸ ಮಾಡಬಯಸುತ್ತೇನೆ.

—ಶ್ರೀ ಜಿ. ಸಿದಿರೋವ್, ಎಂ. ಎಸ್ಸಿ.

[ನಮ್ಮ ರೈತರು ಎಂತು ಇಷ್ಟು ಉತ್ಸಾಹವನ್ನು ಸಂಶೋಧನೆ ಮತ್ತು ಹೊಸ ಪ್ರಯೋಗಗಳಲ್ಲಿ ತಾಳಿಯಾರು? —ಸಂ. ನ.]

ಬೊಂಬಾಯಿ

ಕರ್ನಾಟಕ ಯುವಕ ಸಂಘ — ಬೊಂಬಾಯಿ ಕರ್ನಾಟಕ ಯುವಕ ಸಂಘದ ಆಶ್ರಯದಲ್ಲಿ 'ವಿಶ್ವಶಾಂತಿಗೆ ಮತಗಳಿಂದಲೇ ಹಾನಿ, ಎಂಬ ವಿಷಯದ ಕುರಿತು ಬೊಂಬಾಯಿ ಆಂಕರ್ ರಾತ್ರಿ ಶಾಲಾ ಕನ್ನಡ ವಿದ್ಯಾರ್ಥಿನಿಲಯ ಚರ್ಚಾ ಸಭೆಯೊಂದು ಇತ್ತೀಚೆಗೆ ಸಂಘದ ಅಧ್ಯಕ್ಷ ಶ್ರೀ ಸುರೇಶ್ ಹೊಸಬೆಟ್ಟು ಆವರ ಅಧ್ಯಕ್ಷತೆಯಲ್ಲಿ ಜರಿಗಿತು. ಎಂಟು ಶಾಲೆಗಳ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದು ಈ ಕೆಳಗಿನವರು ವಿಜಯಿಗಳಾದರು. ಪ್ರಥಮ ಬಹುಮಾನ ಶ್ರೀ ಎನ್. ಎನ್. ಆದಿ ಶಾರದಾ ವಿಜಯ ಫ್ರೀನ್ಯಾಟ್ ಹ್ಯಾಸ್ಕೂಲು) ದ್ವಿತೀಯ ಬಹುಮಾನ ಶ್ರೀ ಸುಬ್ಬರಾವ್ (ಜವಾಹರ್ ಫ್ರೀನ್ಯಾಟ್ ಹ್ಯಾಸ್ಕೂಲು) ತೃತೀಯ ಬಹುಮಾನ ಸಂಜೀವ ಎಸ್. ಹೆಗ್ಡೆ (ಮದರ್ ಇಂಡಿಯಾ ಫ್ರೀನ್ಯಾಟ್ ಹ್ಯಾಸ್ಕೂಲು), ಚತುರ್ಥ ಬಸುಮಾನ ಶ್ರೀ ವಿಶ್ವನಾಥ ನೆಟ್ಟಿ (ಜವಾಹರ್ ಫ್ರೀನ್ಯಾಟ್ ಹ್ಯಾಸ್ಕೂಲು) ಶ್ರೀಗಳಾದ ಕೆ. ಕೆ. ಶಾಲಿಯಾನ್, ನಾಗೇಶ ಕೋಟಿಯಾನ್, ಟಿ. ಎಸ್. ಹೆಗ್ಡೆ ಯವರು ಸ್ಪರ್ಧೆಯ ನ್ಯಾಯಾಧೀಶರಾಗಿದ್ದರು ಶ್ರೀ ಎಸ್. ಕೆ. ಪಲೆಯಂಗಡಿಯವರು ಧನ್ಯವಾದ ಗಳನ್ನಿತ್ತರು.

ಮದ್ರಾಸು

ಶ್ರೀ ಮಧ್ವನವಮಿ ಸಮಾರಂಭ— ಮದ್ರಾಸಿನ ಮಾಧ್ವ ಸಂಘದ ಆಶ್ರಯದಲ್ಲಿ ಕಳೆದ ತಾ. 9 ಮತ್ತು 10 ರಲ್ಲು 'ಮಾಸಸ್ಯ ಸಾದನ' ಭವನದಲ್ಲಿ ಸಾಂಗವಾಯಿತು. ಉಡುಪಿಯ ಶ್ರೀ ವೆಂಕಟ್ರಮಣಾಚಾರ್ಯತ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ವೆಂಗಳೂರಿನ ಶ್ರೀ ಬಿ. ವೆಂಕಟೇಶಾಚಾರ್ಯರು ಸಂದರ್ಭೋಚಿತ ಉಪನ್ಯಾಸವಿತ್ತರು. ಸಭಾಕಾರ್ಯದರ್ಶಿ ಶ್ರೀ ಪಿ. ರಾಘವೇಂದ್ರಾಚಾರ್ಯರು ವಿದ್ವಾಂಸರಿಗೆ ಸಂಭಾವನೆಗಳನ್ನು ಕೊಡಿಸಿದರು. ವಿದ್ವಾಂಸರು ತಮಗೆ ದೊರೆತ ಸಂಭಾವನೆಗಳಲ್ಲಿ ಅರ್ಧಾಂಶವನ್ನು ಪುತ್ತಿಗೆ ಮಠದ ಹಿರಿಯ ಶ್ರೀ ಸುಧೀಂದ್ರತೀರ್ಥ ಸ್ವಾಮಿಗಳವರ ಶತಮಾನೋತ್ಸವ ಸ್ಮಾರಕವಾಗಿ ನಿರ್ಮಾಣವಾಗುತ್ತಿರುವ ಬೆಳ್ಳಿ ರಥದ ನಿಧಿಗೆ ಕಾಣಿಕೆಯನ್ನರ್ಪಿಸಿದರು. ದಾಸಸ್ಪಸಾದ ಬಡಿಯರಾಜ ಶ್ರೀ ಕೆ. ಸೀತಾರಾಮರಾವ್ ಮತ್ತು ಸಹೋದರರು ಭಕ್ತಿರಸಪೂರ್ಣವಾದ ಭಜನೆಯನ್ನು ಮಾಡಿ ಸಭಿಕರನ್ನು ಆನಂದಸಿಳಿಸಿದರು.

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc· No 466 N/50 date 2-12-1950 of the Directors of public Instruction Madras·

ಸಂಶೋಧಕರ ಸಾಹಸ

(ಉಳಿದ ಪುಟದಿಂದ)

ರೆಂಬೆಗಳು ಮಾತ್ರವೇ ಗಿಡದಲ್ಲಿ ಉಳಿಯ ತೊಡಗಿದುವು, ಗುಸೇವಾರವರು ಈ ಪ್ರಯೋಗಗಳ ಬಗ್ಗೆ ಹೆಲವು ವಿಜ್ಞಾನಿಗಳು ಸಂದೇಹ ಪ್ರದವಾದ ದೃಕ್ಪಥವನ್ನು ಹೊಂದುವಪ್ರವೃತ್ತಿಯವರಾಗಿದ್ದರು. ಆದರೆ, ಕಡೆಯಲ್ಲಿ ಅವರು ಕೂಡ, ಗುಸೇವಾರವರ ಮಾರ್ಗವು ಸರಿಯಾದುದೆಂದು ಭರವಸೆ ಮಾಡಿಕೊಂಡರು. ಹನ್ನೆರಡು ವರ್ಷಗಳ ಹಿಂದೆ, ತಿಮಿರ್ಯಾ ಜೇವ್ ವೈವಸಾಯ ವಿದ್ಯಾಮಂದಿರದ ವೈಜ್ಞಾನಿಕ ಸಮೀತಿಯವರು,—ಮೊಸ್ಕೋ ನಗರದಲ್ಲಿ ಈ ಮಂಡಲವು ಅತ್ಯಂತ ಗಣ್ಯರಾದ ಹಣ್ಣು ಬೆಳೆಯ ಶಾಸ್ತ್ರಜ್ಞರನ್ನು (ಪೊನೋಲ ಜಿಸ್ಟ್ಸ್) ಹೆಲವನ್ನು ಒಳಗೊಂಡಿದೆ, ಗುಸೇವಾರವರ ವರದಿಯನ್ನು ಕಿವಿಗೊಟ್ಟು ಕೇಳಿದರು. ನಿಂಬೆ ಜಾತಿಯ ಹಣ್ಣುಗಳ ಬಗ್ಗೆ ಅಕೆಯು ನೀಡಿದ ಸಮೃದ್ಧವಾದ ಕೊಡುಗೆಗೆ ಅವರು ಮನ್ನಣೆಯನ್ನಿತ್ತು, ಆಕೆಗೆ ವೃವಸಾಯ ವಿಜ್ಞಾನ ಶಾಸ್ತ್ರದಲ್ಲಿ ಪಾಂಡಿತ್ಯದ "ಡಿ. ಎಸ್ಸಿ" ಪದವಿಯನ್ನಿತ್ತು ಗೌರವಿಸಿದರು.

"ಮಂದಾರಿನ್" ಗಿಡದ ಜೀವ ವಿಜ್ಞಾನ ಶಾಸ್ತ್ರದಲ್ಲಿ ನಾನು ಇನ್ನೂ ನನ್ನ ಸಂಶೋಧನೆಗಳನ್ನು ಮುಂದುವರಿಸ ತ್ತಿದ್ದೇನೆ. ಸಮೊಕ್ಷೆಗಳನ್ನು ನಡೆಸಲು ತುಂಬಾ ಶ್ರಮಪೂರ್ಣ ಪ್ರಯತ್ನ ಬೇಕಾಗುತ್ತದೆ. ನಾನು ಮುದುಕಿಯಾಗಿದ್ದೇನಾದರೂ ಕೂಡ, ನನ್ನ ಕೆಲಸವನ್ನು ನಾನು ಬಿಟ್ಟಿಲ್ಲ. ಹೊಸ ಹೊಸ ಮಾರ್ಗಗಳನ್ನು ನಾನು ಹುಡುಕುತ್ತಲೇ ಇರುತ್ತೇನೆ. ಪ್ರ

ನೋರೋನ್ಸಾರ ಪತ್ನಿ ಮತ್ತು ಪ. ಕ. ಜಿಲ್ಲಾ ಪೊಜಿಸ್ಟ್ರೇಟ್ ಶ್ರೀ ಡಿ. ನೋರೋನ್ಸಾರ ತಾಯಿ ಶ್ರೀಮತಿ ಜುಲಿಯೊನ್ ನೊರೋನ್ಸಾರವರು ತಾ. 5ರಲ್ಲು ರಾತ್ರಿ ನಿಧನರಾದರು ಕಳೇಬರದ ಶ್ಮಶಾನ ಯಾತ್ರೆಯಲ್ಲಿ ಜೆಚ್ಚು ಜನ ಸೇರಿದ್ದರು.

ಫಂಟಮಾರಾ

ಇಗ್ನೇಸಿಯೋ ಸಿಲೋನೆಯ ಇಟಾಲಿಯನ್ ಕಾದಂಬರಿಯ ಅನುವಾದ

ಅನುವಾದಕರು:— ಕು. ಶಿ. ಹರಿದಾಸ ಭಟ್ಟ, ಎಂ. ಎ.

—ಕೆಲವು ಅಭಿಪ್ರಾಯಗಳು—

"ಈ ಶತಮಾನದ ಅತ್ಯಂತ ಮರ್ಮಸ್ಪರ್ಶಿ ಕಾದಂಬರಿಗಳಲ್ಲೊಂದು" —ಕರ್ಮವೀರ.

"ಮೂಲಗ್ರಂಥದ ವೈಶಿಷ್ಟ್ಯಗಳೆಲ್ಲ ಸಸರ್ಪಕವಾಗಿ ಕನ್ನಡಿಸಲ್ಪಟ್ಟಿರುವುದನ್ನು ನೋಡುವಾಗ ಅನುವಾದವು ಸಪ್ತೋತ್ತಮವೆಂದು ಹೇಳಲು ಅಡ್ಡಿ ಇಲ್ಲ. ಅನುವಾದ ಮಾಡಿದ ಶ್ರೀ ಭಟ್ಟರೂ ಮಾಡಿಸಿದ ಪ್ರಕಾಶಕರೂ ಅಭಿನಂದನೀಯರು." —ಇಂಡಿಯನ್ ಎಕ್ಸ್‌ಪ್ರೆಸ್.

200 ಪುಟಗಳ ಈ ಕಾದಂಬರಿಯ ಬೆಲೆ ರೂ.2—0—0

ವಿಶಿಯದ ಸಂಪತ್ತು

(ವಿಶಿಯದ ಆರ್ಥಿಕ ಸ್ಥಿತಿಯ ಚಿತ್ರ)

ಬರೆದವರು: ಕು. ಶಿ. ಹರಿದಾಸ ಭಟ್ಟ, ಎಂ. ಎ.

ಇಂದಿನ ರಾಜಕೀಯವಲ್ಲಿ ಚರ್ಚಾಸ್ಪದ ಭೂಖಂಡವಾದ ವಿಶಿಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ ವಿಶದವಾಗಿಯೂ, ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ

ವಿಶಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ, ಓದಬೇಕಾದ ಪುಸ್ತಕ. ಬೆಲೆ: ಎರಡು ರೂಪಾಯಿ.

ಪ್ರತಿಗಳಿಗೆ ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ವಿಚಾರಿಸಿರಿ.

ಅಮೃತಾಂಜನ

ಎಲ್ಲಾ ನೋವುಗಳಿಗೆ ನಿಶ್ಚೆತ ಔಷಧ



ಎಲ್ಲಾರದು ಸಿದಿತ ಮತ್ತು ನೋವುಗಳಿಗೆ

50 ವರ್ಷ ವ್ಯಾಯದ

ಮಾ ಕೆಲವೇ ಔಷಧಾಲಯಗಳಲ್ಲಿ ಮಾತ್ರ ಲಭ್ಯ

ಪುಸ್ತಕ ಭಂಡಾರಗಳಿಗೆ ಯೋಗ್ಯವಾದ ಕೆಲವು ಪುಸ್ತಕಗಳು

ಜೋಡಿಸಿ	ಶರಚ್ಚಂದ್ರ ಚಟ್ಟೋಪಾಧ್ಯಾಯ	೨ ೮
ಮಹಾಪುರುಷ	ನಾರಾಯಣ ಶಾಸ್ತ್ರಿ	೨ ೪
ಹೂರ್ಣಿಮಾರಜನಿ	ಎಚ್. ವಿಠಲ ಶೆಣೈ	೧ ೦
ವಿಕಸಿತ ಸೌಭಾಗ್ಯ	,,	೦ ೧೩
ನರಾಧಮ	ಎಂ. ಕೆ. ಆನಂತರಾಜು	೧ ೦
ಸವಿಮೊಪ್ಪೆ	ಶಿವರಾಮ ಕಾರಂತ	೨ ೮
ನಮ್ಮ ಸುತ್ತಲಿನ ಕಡಲು	,,	೧ ೧೨
ಮತ್ಸ್ಯನಗರ	ಕೆ. ವೆಂಕಟ	ರಾಮಪ್ಪ ೧ ೪
ಮಾರಾಪಾರಿ	ಎಚ್ಚಾರ್ಕೆ	೦ ೧೪
ಕೊಲೆಗಡಲ ಕಂಠೀರವ	ಯು. ವಿ. ನ್ಯಾಕ	೦ ೧೦
ಅಂಬುಜಾಕ್ಷಿ	ಎಸ್. ವೆಂಕಟರಾಜ	೦ ೧೪
ತುಂಗಮ್ಮನ ತವರುಮನೆ	,,	೦ ೧೪
ಧರ್ಮಶಾಲೆ	,,	೦ ೧೪
ಬಲಿದಾನೀ ಹುಸೇನ್ ಎಸ್. ಕೆ. ಕರೀಂಖಾನ್		೧ ೦
ಆಕ್ಟೊಪಾಲಿನ ಕೊಲೆ	ಉತ್ತರಧ್ವ	೦ ೪
ರಾಜಯೋಗಿ	ಆನಂದ ಕಂದ	೨ ೦
ಪವಿತ್ರವಾದ ಹೆಣ್ಣು	ಕೊ. ಶ್ರೀ. ನಾ.	೧ ೦
ದೀನಬಂಧು	ಕಡಬ ದೊರೆಸ್ವಾಮಿ	೧ ೪
ಕುಟುಂಬ ಸೌಖ್ಯ	ಎಲ್. ಗುಂಡಪ್ಪ	೨ ೪
ಕಾಮಳ್ಳುಂಡದಲ್ಲಿ	ಎಚ್ಚಾರ್ಕೆ	೦ ೧೨
ಬೇಡಾದ ಬಾಳು	ರಸಿಕ ಪುತ್ತಿಗೆ	೦ ೧೦
ಕೈಹಿಡಿದವಳು	ಎಚ್ಚಾರ್ಕೆ	೦ ೬
ಕಲಾಜ್ಯೋತಿ	ಕು. ಬೆಂಗುಮಾಧವ	೧ ೮
ಮಾಯಾಪ	ಎಂ. ವೆಂಕಟಾಪ್ರಿ ಶಾಸ್ತ್ರಿ	೧ ೪
ಮೃಣಾಳಿನಿ	ಬಿ. ಪುಟ್ಟಸಾಮಯ್ಯ	೦ ೧೫
ಅಮರನಾಥ	ವಿ. ಗುರುರಾಜನ್	೧ ೦
ಪ್ರತಿಜ್ಞೆ	ಎಂ. ಸಿದ್ಧರಾಮೇಶ	೧ ೨
ಪಾಪ ಪುಣ್ಯ	ಎ. ಸೀತಾರಾಮಯ್ಯ	೦ ೬
ಚಿತೆಯೊ ಸಮಾಧಿಯೊ	ತಿರುಕ	೨ ೪
ಚೆಂಗೂಲಿ ಚೆಲುವ	ನಾ.ಕಸ್ತೂರಿ	೨ ೪
ಸರೋಜ ರಮಣಿ	ಬಿ. ವಿ. ವೆಂಕಟೇಶಯ್ಯ	೦ ೪
ಕಾಲೇಜು ಹುಡುಗಿ	ಎಂ. ಜೀವನ	೦ ೪
ಮಿಸ್ ರೋಜ	ಎಂ. ಸಿದ್ಧರಾಮೇಶ	೦ ೬
ನಗಬೇಕೊ ಅಳಬೇಕೊ	ಬಾಲಚಂದ್ರ ಹೊಸಮನಿ	೦ ೪
ಸೆನ್ಯಾಪಿ ದಿಬ್ಬ	ಸಿಂ. ಪಿ. ಲಿಂಗಣ್ಣ	೦ ೧೨
ಅಜೆಕಲ್ಲು	ಕಥಾ ಸಂಕಲನ	ಭಾಗ ೧ ೦ ೧೨
,,	,,	ಭಾಗ ೨ ೦ ೧೨
ಬಾಳಿನ ಬೆಳೆ	ಪಿ. ಯಶೋದ	೦ ೧೨
ಅಷ್ಟಸೂರ್ಣ	ನಿರಂಜನ	೧ ೦
ಕಾಲಿಂಗ್ ಬೆಲ್	ಎ. ಜಿ. ಸುಬ್ಬರಾಮ	೦ ೧೦
ಕಲಾವಿದ	ಪ್ರಕಾಶ	೦ ೪
ಹುಚ್ಚರ ರಾಜ್ಯ	ಶಿವಳ್ಳಿಮಾರ್	೦ ೪
ಪ್ರಗತಿ ಸಂಪಾರ	ರವೀಂದ್ರನಾಥ ಠಾಗೋರ್	೨ ೪
ಪತಂಗ	ಯಮುನಾ ಲಿಂಗಪ್ಪ	೧ ೦
ನಾತಿನ ಮಲ್ಲಿ	ಜಿ. ಪಿ. ರಾಜರತ್ನಂ	೧ ೧೨
ದೇವರ ಉಪವಾಸ	ತಿರುಕ	೧ ೪
ಒಲಿದು ಬಂದ ಸರಸ್ವತಿ	ಹಿ. ಮ. ನಾಗಯ್ಯ	೧ ೪
ಚಿತ್ರ ವಿಮರ್ಶೆ ಮತ್ತಿತರ ಕಥೆಗಳು	ವೆಂಕಟರಾಮಯ್ಯ	೧ ೧೨
ಸ್ತ್ರೀಕರ ಕತೆಗಳು	ಬಿ. ವಿ. ವೆಂಕಟೇಶಯ್ಯ	೧ ೪
ಸಹಸ್ರಯೋಗ	ಎಮ್. ಆರ್. ಭಟ್	೩ ೦
ಬ್ರಹ್ಮಚರ್ಯವೇ ಜೀವನ	ಶಿವಾನಂದ ಸ್ವಾಮಿ	೩ ೦
ಕನ್ನಡದ ನೆಲೆ	ಶಂ. ಭಾ. ಜೋಶಿ	೩ ೦
ದೃಷ್ಟಿಯೋಗ	ಶ್ರೀ ಸ್ವಾಮಿರಾಮ	೦ ೧೨
ಆವಿವಾಹಿತೆ	ಶ್ರೀನಿವಾಸ ಹಾವನೂರ	೧ ೪
ಸಂಪೂರ್ಣ ರಾಮಾಯಣ	ರಾಜೇಶ	೦ ೧೦
ಗೃಹಿಣಿ	ಕೆ. ವಿ. ಸಾವಿತ್ರಮ್ಮ	೦ ೧೨
ಭಾಗ್ಯತಿಲ್ಲಿ	ಡಿ. ಕೀಣುಕಾಜಾರ್ಯ	೧ ೦
ಜೀವಜ್ಯೋತಿಗಳು	ರಾಮಸ್ವಾಮಿ ಅಯ್ಯಂಗಾರ್	೧ ೪
ಹರಿಹರನರಗಳೆಯ ಕತೆಗಳು	ಬಿ. ನಂಜುಂಡಪ್ಪ	೧ ೦
ನಿಗ್ರೊ	ಅಮೇರಿಕದ ಜೀವನದಲ್ಲಿ	೦ ೩
ಲಲಿವರ್ ಟ್ವಿಸ್ಟ್	ಜಿ. ಪಿ. ರಾಜರತ್ನಂ	೧ ೬
ವಕ್ರದೃಷ್ಟಿ	ಎನ್. ವಿ. ರಾವ್	೧ ೦
ಅಪರೋಕ್ಷಾನುಭೂತಿ	ಹೊ. ಅನಂತಮೂರ್ತಿ ಶಾಸ್ತ್ರಿ	೦ ೪
ಆದರ್ಶರಾಷ್ಟ್ರಭಕ್ತರು	ರು.ನಾ. ಗುಂಡುರಾಮಯ್ಯ	೧ ೪
ವಿಶ್ವಮೇಧ	ಡಿ. ರೇಣುಕಾಚಾರ್ಯ	೧ ೪
ಸಾಹಿತ್ಯ ಶಿಲ್ಪಿಗಳು	ಟಿ. ಮಹಾಬಲೇಶ್ವರ ಭಟ್ಟ	೧ ೪
ಹಿರೋಶಿಮಾದಿಂದ ಜಿನೇವ	ಯು. ರಾಘವೇಂ ದ್ರಾಚಾರ್ಯ	೧ ೪
ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ	ಯು. ಲಕ್ಷ್ಮೀನಾರಾಯಣಾಚಾರ್ಯ	೧ ೪
ನಡುಹಗಲಿನ ಕಗ್ಗತ್ತಲೆ	ಕು.ಶಿ. ಹರಿದಾಸಭಟ್ಟ	೨ ೪
ಗೋವಿಜಯ	ಮುಖ್ಯಪ್ರಾಣ ಉಪಾಧ್ಯಾಯ	೦ ೪
ಕನ್ನಡ ಸಾಹಿತ್ಯ ಚಿತ್ರಗಳು	ಎಲ್. ಗುಂಡಪ್ಪ	೧ ೦
ಕನ್ನಡ ಸಾಹಿತ್ಯಪಾಹನಿ	ಎನ್. ಕೆ. ಕುಲಕರ್ಣಿ	೨ ೪
ಕರ್ನಾಟಕ ಹಿತಚಿಂತನೆ	ಆ. ನ. ಕೃಷ್ಣರಾಯ	೧ ೦
ಸಂಸ್ಕೃತ ನಾಟಕ ಕಥೆಗಳು	ಎಂ. ಎಸ್. ಸುಬ್ಬ ಹ್ಮಣ್ಯ ಶಾಸ್ತ್ರಿ	೧ ೪
ದೇವರು ಯಾರು?	ಶ್ರೀಮೂರ್ತಿ	೧ ೪
ಶ್ರೀ ಕುವೆಂಪು ಸಂದರ್ಶನ	ಕೋ. ಚನ್ನಬಸಪ್ಪ	೧ ೧೨
ಅಣ್ಣನ ಬದುಕು	ಶಿವಾಚಾರ್ಯರು	೨ ೪
ರಾಮರಾಜ್ಯ	ಜಿ. ಪಿ. ರಾಜರತ್ನಂ	೧ ೪
1857 ದೊಡ್ಡ ದಂಗೆ	ಅಶೋಕಾ ಮೆಹತಾ	೧ ೪
ಭೀಷ್ಮಾಚಾರ್ಯ	ಮ. ಪ್ರ. ಪೂಚಾರ	೦ ೫
ಕಾಂಸೂಷನ ಚರಿತ್ರೆ	ಎಂ. ಎಸ್. ಪುಟ್ಟಣ್ಣ	೦ ೧೦
ಆಬ್ರಹಾಂಲಿಂಕನ್	ಅನಂತನಾರಾಯಣ	೧ ೪
ಬಂದುಗಳ ಉತ್ತರಾಧಿಕಾರಶಾಸನ		೧ ೪
ಜೀಕುವ ಜೀವ	ಶ್ರೀ ರಾಮಪಾಟೀಲ	೦ ೬
ಅಮ್ಲೆಲೊ ಸಮಾಜು	ಜಿ ಎನ್. ಲಕ್ಷ್ಮಣಶೆಟ್ಟಿ	೦ ೬
ಆಪರಾಜಿ	ಕೆ ಗವಿ ಸೆಟ್ಟಿ	೦ ೧೦
ದುರ್ಗಾದಾಸ	ಪಿ. ಎಸ್. ರಾಮಪ್ಪ	೧ ೪
ಸೀತಾದೇವಿ	ಡಿ. ಕೆ. ಬಾರದ್ವಾಜ	೧ ೪
ಅಭಿಸಾರ	ಕೆ. ವಿ. ಸುಬ್ಬಣ್ಣ	೧ ೦
ಕೈಲಾಸದಲ್ಲಿ ಕಮ್ಯೂನಿಸ್ಟರು	ಎಸ್. ವೆಂಕಟ ರಾಜ	೧ ೦
ಆಧಾಗಿನಿ	ಸದಾನಂದ ಆರ್. ಸುವರ್ಣ	೧ ೦
ವಿಷಮಘಳಿಗೆ	Do	೦ ೪
ದ್ರೋಹ	ಹರಿದಾಸ ವಿದ್ವಾನ್	೧ ೦
ಉದ್ಧಾರ	ತಿರುಕ	೧ ೪
ಗಾಂಧೀಜಿ ಸ್ವರ್ಗದಲ್ಲಿ	ಎಚ್ಚಾ. ರಾಮಕೃಷ್ಣ ರಾವ್	೧ ೪
ರಜಪೂತ ಲಕ್ಷ್ಮಿ	ಆ. ನ. ಕೃಷ್ಣರಾಯ	೧ ೧೨
ಕಾಶ್ಮೀರ ಯಾತ್ರೆ	ಎ. ಆರ್. ಶ್ರೀಕಾಂತ	೦ ೧೨
ಅಭಿಷೇಕ ನಾಟಕ	ಸುಂದರ ಶಾಸ್ತ್ರಿಗಳು	೦ ೬
ಶಾಪ್ರಮುನಿ	ಸಿ. ಕೆ. ನಾಗರಾಜರಾವ್	೦ ೬
ಗೃಹಪತಿ	ಕೆ. ಗುಂಡಣ್ಣ	೦ ೪
ಪುಟಜೆಂಡು	ಕವಿತಾ ಸಂಕಲನ ಭಾಗ	೧ ೦ ೧೨
ಪುಟಚೆಂಡು	,,	ಭಾಗ ೨ ೦ ೧೨
ಮಿಂಚುಹುಳ	ಹ ರಾ. ಕಿವಿಯೂರು	೧ ೦
ಅಮರನಾಥೈ ತಂದೆ	ಪ. ಸು ಭಟ್ಟ	೧ ೪
ನೂರು ಪುಟಾಣಿ	ಜಿ. ಪಿ. ರಾಜರತ್ನಂ	೦ ೪
ವಿಜಿಷ್ಣುನ ವಿಶ್ವಾಮಿತ್ರ	ಎನ್. ಎಸ್. ವೀರಪ್ಪ	೦ ೪
ಪೂಜೆ	ತಿರುಕ	೧ ೪
ವೈಕಾಖಶುಲ್ಲ ಪೂರ್ಣಿಮಾ	ಜಿ.ಪಿ. ರಾಜರತ್ನಂ	೦ ೧೦
ಬಳ್ಳಾರಿಯ ಬೆಡಗು	ಹಿ. ಮ. ನಾಗಯ್ಯ	೧ ೦
ಹಾಸ್ಯರಸಾಯನ	ನಾಡಿಗೇರ ಕೃಷ್ಣರಾಯ	೧ ೦
ಶಿಕ್ಷಣ ಶಿಕ್ಷಕ ದರ್ಶನ	ಶ್ರೀ ನಿಂಬಾಳ	
ಕಲ್ಯಾಣಪ್ಪ ಶ್ರೀಮತಿ ನೀಲಾಂಬಿಕೆ ನಿಂಬಾಳ		೩ ೦
ಆರು ಕತೆಗಳು	ಸಂಕಲನ	೧ ೪
ಆಕಾಶದೀಪ	ಎಸ್. ಆರ್. ಚಂದ್ರ	೧ ೦
ಕಲ್ಪನಾವಿಲಾಸ	ಪಿ. ವೇಣುಗೋಪಾಲ	೦ ೧೨
ಕುಂಕುಮಬಲ	ಶಾಂತಾದೇವಿ	೧ ೦
ರುಕ್ಮಿಣಿ	ವೆಂಕೋಬಾಚಾರ್ಯ	೧ ೪
ಮುಡಿಯದ ಹೂ	,,	೦ ೧೨
ಗಾಯದ ನೋವು	,,	೧ ೪
ನೋಪಾಸನ ಓಲೆಗಳು	,,	೧ ೪
ಬದುಕಿನ ಚಿತ್ರಗಳು	ಎನ್. ವಿ. ರಾವ್	೧ ೦
ದಾಸರ ಹುಡುಗೆ	ಟೇಂಗ್ಸ್ ಗೋವಿಂದರಾವ್	೧ ೪
ಕೊನೆಯ ಹಾಡು	ಎಮ್. ಎಸ್. ಸೆಟ್ಟಿ	೧ ೪
ಗುಯ್. ಡಿ. ಮೋಪಾಸನ ಕತೆಗಳು	ಗೊ. ನೆ. ಚುಳುಕಿ	೧ ೦
ನಮ್ಮ ಬದುಕು	ಆನಂದ ಕಂದ	೦ ೧೪
ಪ್ರತಿಫಲ ಮತ್ತಿತರ ಕತೆಗಳು	ಜಯಲಕ್ಷ್ಮಿ ಆರ್. ಶ್ರೀನಿವಾಸರಾವ್	೧ ೪
ಭಾವಸಂಧಿ	ರಾಮಲಿಂಗಯ್ಯ	೦ ೪
ಲೀಲಾಜಾಲ	ಶಂಕರನಾಯ್ಕ	೦ ೧೪
ನೃಷ್ಟಿದಾರೆ	ಧನ್ವಂತ	೦ ೧೨
ಮೂರಿಯೌತಣ	ಇಂದಿರಾತನಯ	೧ ೦
ಚಕಮಕಿ	ಬೇಂದ್ರೆ ಲಕ್ಷ್ಮಣರಾಯ	೨ ೦
ಚಂದ್ರತಾರೆ	ವರದರಾಜ ಹುಯಿಲಗೋಳ	೧ ೪
ಛಾಟೀಮುದುಕ	ದೇವುಡು	೧ ೪
ಹೊಸ ಬೆಳಕು	ವೆಂ. ಮು. ಜೋಶಿ	೧ ೪
ಚಿನ್ನದ ಪದಕ	,,	೧ ೪
ಪುತ್ರೋತ್ಸವ	ಚಿದಂಬರ ದೀಕ್ಷಿತ	೧ ೦
ಜಪಾನ್ ಬೆಳಕು	ಕುದ್ಪಿ ವಾಸುದೇವ ಶೆಣೈ	೧ ೦
ವಿೂರೆ ಮತ್ತು ನಾನು	,,	೧ ೦
ಕಸದ ಡಬ್ಬಿಗಳು	,,	೧ ೦
ಸೈಮನನ ತಂದೆ	ಸಂಕಲನ	೧ ೧೨
ದೋರಾ ಮತ್ತಿತರ ಕತೆಗಳು	ಗೋವಿಂದ ವೆಂಕಟೇಶ ಚುಳಕಿ	೧ ೦
ಉರ್ದು ಕಥಾವಳಿ	ಗುರುನಾಥಜೋಶಿ	೦ ೪
ಪಂಜರದ ಹಕ್ಕಿ	ಮಲ್ಲಾರಿ	೦ ೧೪
ಮದಗಜಮಲ್ಲ ವೇನಾಯಿ	ಖಾಂಡುರಂಗರಾವ್	೧ ೪
ಬಾಳಗೀತೆ	ಪ್ರಹ್ಲಾದ	೦ ೪
ಕಸ್ತೂರಿ	ಶ್ರೀಮತಿ ವಾಣಿ	೧ ೪
ಬೇಬಿ ಮತ್ತಿತರ ಚಿತ್ರಗಳು	ಎನ್. ಸೂರಪ್ಪ	೦ ೧೨
ನ್ಯಾಯಕ್ಷಮೆ	ಬಿ. ಆರ್. ಭಾಗವತ	೦ ೪
ಮೃಗಜಲ	,,	೦ ೧೨
ಬಾಳ್ನೋಟಗಳು	ಹಾ. ಮಾ. ನಾಯಕ	೦ ೬
ಗಡೀಪಾರು	ಕೊ. ಜೆನ್ನಪ್ಪ	೧ ೪
ಪುಣ್ಯಸ್ಮೃತಿ	ಸಂಕಲನ	೧ ೪
ಮುದ್ದಿನಕಣಿ	ಗೊ. ವೆಂ. ಚುಳಕಿ	೦ ೧೨
ಕಾಮನಸೋಲು	ಅ. ನ ಕೃ.	೧ ೪
ದೇಶಾಂತರದ ಕತೆಗಳು	ದೇವುಡು	೧ ೦
ಮಾದಯ್ಯನು ಮತ್ತು ವೇ ಇವರ ಕೊನೆಯದಿನಗಳು	ಭಾರತೀಸುತ	೧ ೪
ಗೊಡೆಯೊಳಗೆ ಕಿಂಡಿ	ಮಲ್ಲಾರಿ	೦ ೧೨
ಮಗಳಲ್ಲ ಹೆಂಡತಿ	ಪ. ಯೋಗೀಶ್ವರಾವ್	೦ ೧೨
ದೇವರ ಮನೆ	ತ. ಸು. ವೆಂಕಟರಾಯ	೦ ೧೦
ರೂಪರಾತಿಗಳ ಸಂತೆ	ಎಂ. ಬಿ. ಮರಕಿಣಿ	೦ ೧೫
ತಾಪತ್ರಯ	ಸಂಕಲನ (ಜೋಕೆ)	೦ ೬
ಭಾವಚಿತ್ರ	ಯು. ನಾರಾಯಣ ಭಟ್ಟ	೧ ೦
ಹೆಂಗುಸರ ಕತೆಗಳು	ಸಂಕಲನ	೨ ೦
ಕಾಲಯಾನ	ಧಾರತೀಸುತ	೧ ೧೦
ಪ್ರಳಯಪ್ರೇಮ	ಛಾಯಾಪತಿ ಸೂರ್ಯನಾರಾಯಣ	೦ ೧೦
ಬದಲಾವಣೆ ಮತ್ತು ಜೇರೆ ಕತೆಗಳು	ಚುಳಕಿ	೦ ೫
ಶ್ರೇಷ್ಠದಾನ	ಗುರುನಾಥ ಜೋಶಿ	೧ ೦
ಅನ್ನಪೂರ್ಣಾಮಂದಿರ	ಮ. ಗ. ಸೆಟ್ಟಿ	೨ ೦
ಅನಘ ಋಣ	ಮುರಲೀಧರ	೧ ೪
ಆಶಾ	ರಾಜ	೧ ೪

ಪ್ರತಿಗಳಿಗೆ ನಿಜಾರಿಸಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕಾಶ್ಮೀರ

(೨ನೇ ಪುಟದಿಂದ)

ಭಾರತವು ಹೀಗೇ ವರ್ತಿಸಬೇಕೆಂದು ನಿರೀಕ್ಷಿಸಿಲ್ಲ. ಕಾಶ್ಮೀರವು ಭಾರತದ ಸಾಮಾನೆಂದು ಭದ್ರತಾಮಂತಲವು ಮನ್ನಿಸುವದಿಲ್ಲ ಎಂದಿಷ್ಟೇ ಈ ಗೊತ್ತುವಳಿಯಲ್ಲಿ ಹೇಳಿದೆ. ಭಾರತ ಪಾಕಿಸ್ತಾನಗಳಿಗೆ ಸ್ವಾತಂತ್ರ್ಯ ಕೊಡುವ ಬಗ್ಗೆ ಬ್ರಿಟಿಶ ಪಾರ್ಲಿಮೆಂಟು ಪಾಸು ಮಾಡಿದ ಕಾಯಿದೆಯನ್ವಯ ಕಾಶ್ಮೀರ ಮಹಾರಾಜರು ಸೇರ್ಪಡೆ ಪತ್ರಕ್ಕೆ ಅಂಕಿತ ಹಾಕಿದ ಕ್ಷಣಕ್ಕೇ ಕಾಶ್ಮೀರವು ಭಾರತದ ಭಾಗವಾಗಿದೆ. ಆದರೆ ತನ್ನ ಪಕ್ಷವನ್ನು ಹೆಚ್ಚು ಪ್ರಬಲಪಡಿಸಿಕೊಳ್ಳಲು ಕಾಶ್ಮೀರದಲ್ಲಿ ಜನಾವಣಿ ನಡೆಸಲು ಭಾರತ ಒಪ್ಪಿಕೊಂಡಿತು. ೧೯೫೧ರಲ್ಲಿ ಕಾಶ್ಮೀರದಲ್ಲಿ ಸ್ವಥಮ ಬಾರಿಗೆ ಜನಾವಣೆಗಳು ನಡೆಸಲ್ಪಟ್ಟವು ಕಾಶ್ಮೀರ ರಾಜಧಾನಿಯಿಂದ ಕೆಲವೇ ಮೈಲುಗಳ ಅಂತರದಲ್ಲಿ ಆಕ್ರಮಣಕಾರರ ಸೈನ್ಯಗಳು ಕಾಶ್ಮೀರದ ಕೆಲ ಭಾಗ ಆಕ್ರಮಿಸಿಕೊಂಡು ಬಿಟ್ಟಿದ್ದರೂ ಭಾರತವು ಜನಾವಣೆ ನಡೆಸಿತು. ಅನೇಕ ಸ್ಥಳಗಳಿಗೆ ಪ್ರತಿನಿಧಿಗಳು ಸ್ಪರ್ಧಿಸಿದರು. ಈಗ ನಡೆಯುತ್ತಿರುವ ಜನಾವಣೆಗಳಲ್ಲಿ ಜಗತ್ತಿನ ಅನೇಕ ದೇಶಗಳ ಪತ್ರಿಕಾ ಪ್ರತಿನಿಧಿಗಳು ನಿರೀಕ್ಷಕರಾಗಿರುವರು. ಭಾರತವು ಕಾಶ್ಮೀರದಲ್ಲಿ ಸಾರ್ವತ್ರಿಕ ಮತಗಣನೆ ನಡೆಸಲು ಒಪ್ಪಿಕೊಂಡಿದ್ದರೂ ಅದು ಸಮಂಜಸವಾದ ಕ್ರಮವಲ್ಲವೆಂಬುದಾಗಿ ಅವರು ಭಾವಿಸಿರುವರು. ಟ್ರಿಬ್ಯೂನಿನ ಅಭಿಪ್ರಾಯವಾದರೂ ಅದೇ ಆಗಿದೆ.

ಸಾರ್ವತ್ರಿಕ ಮತಗಣನೆಯು ಒಂದು ರಾಷ್ಟ್ರೀಯ ಪ್ರಶ್ನೆಯನ್ನು ಒಂದೇ ದಿನದಲ್ಲಿ ಶಾಶ್ವತವಾಗಿ ಬಿಡಿಸುವ ಉಪಾಯವಾಗಿದ್ದರೂ ಅದು ಸೂಕ್ತವಾದ ಉಪಾಯವಲ್ಲ. ಬ್ರಿಟಿಶ ಶಕಾರರು ಆಳುರಂಭಿಸಿದಲ್ಲಿ ನೀವು ಬ್ರಿಟಿಶರಾಗಿರ ಬಯಸುವಿರಾ—ಅಥವಾ ಇಲ್ಲವೆ? ಎಂಬ ಪ್ರಶ್ನೆಯನ್ನು ಜನತೆಯಮುಂದಿಟ್ಟು ಬಹುಮತ ಪಡೆಯಬಹುದು. ಆದರೆ ಆರ್ಯಂಡದಲ್ಲಿಯ ರಾಷ್ಟ್ರೀಯ ಭಾವನೆಯಿಂದ ಪ್ರೇರಿತವಾದ ಪ್ರದೇಶಗಳಲ್ಲಿ ಆಂದೋಲನವು ಅವ್ಯಾಹತವಾಗಿ ನಡೆದು ಜನತೆಯು ಸಮ್ಮತಿಯಿಂದ ಆಯರ್ಲಂಡದ ಒಕ್ಕೂಟ ಸಾಧಿಸುವ ಕ್ರಮಕ್ಕೆ ಅಥಾತವಾಗುವದು ಮಾತ್ರ ಖಂಡಿತ. ಹಿಟ್ಲರನು ಜರ್ಮನರ ವರ್ಣಶ್ರೇಷ್ಠ ಭಾವನೆಯನ್ನು ಕೆರಳಿಸಿ ಸಾರ್ರ್, ಸುಡೆಟಾನ್, ಡಾಂಯಿಗಳಲ್ಲಿನ ಸಾರ್ವತ್ರಿಕ ಮತಗಣನೆ ನಡೆಸಿ ಜಯ ಸಂಪಾದಿಸಿದ್ದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು. ಸೈಪ್ರಸದಲ್ಲಿ ಗ್ರೀಸೊಡನೆ ಯುನಿಯನ್ನನ್ನೈಕ್ಯ ಸಮ್ಮತಿ ಅಥವಾ ಅಸಮ್ಮತಿ ಈ ಪ್ರಶ್ನೆಯನ್ನು ಮುಂದಿಟ್ಟು ಮತಗಣನೆ ನಡೆಸಿದರೆ ತುರ್ಕರಿಗೆ ನ್ಯಾಯವಾಗಿ ಅನ್ಯಾಯ ಬಗೆದಂತಾಗಬಹುದು. ಸೈಪ್ರಸದ ಪ್ರಶ್ನೆಯನ್ನು ಬಹುಮತದ ಪಕ್ಷದ ಅಭಿಪ್ರಾಯದಂತೆ ಬಿಡಿಸುವದೇ ಸೂಕ್ತವಾದ ಮಾರ್ಗವೆಂದು ಟ್ರಿಬ್ಯೂನಿನ ಅಭಿಪ್ರಾಯ ಪಡುತ್ತದೆ. ವಿಧಾನಸಭೆಯ ಚುನಾವಣೆ ನಡೆಸಿ ಅದರಲ್ಲಿ ತರ್ಕೀ ಜನರ ಹಕ್ಕು ಭಾಧ್ಯತೆಗಳ ಸಂರಕ್ಷಣೆಯು ಏರ್ಪಾಟುಳ್ಳ ಗ್ರೀಸೊಡನೆ ಯೂನಿಯನ್ನನ್ನದ ಕಾಯುದೆ ಮಾಡುವದು ಈ ಸಮಸ್ಯೆಯ ಸೂಕ್ತವಾದ ಪರಿಹಾರವಾಗಿದೆ.

ಪಾಕಿಸ್ತಾನ—ಭಾರತಗಳಲ್ಲಿ ಸುತ್ತುವಾರಿರುವ ಜಾತೀಯ ದ್ವೇಷದ ಭಾವನೆಯು ಹತ್ತು ವರ್ಷಗಳ ಹಿಂದೆ ಉಗ್ರ ಸ್ವರೂಪದಲ್ಲಿ ತನ್ನ ಕರಾಳ ರೂಪವನ್ನು ಹಿಂದೂ-ಮುಸ್ಲಿಂರ ಹತ್ಯಾಕಾಂಡದಲ್ಲಿ ತೋರಿಸಿಕೊಂಡಿದೆ. ನೆಹರೂರಂಥ ಧುರೀಣರು ಈ ಜಾತೀಯ ದ್ವೇಷದ ಭಾವನೆಯನ್ನು ಹತ್ತಿಕ್ಕಿ ಅವು ನಾಮಶೇಷವಾಗಲು ಅಗತ್ಯವಿದ್ದ ಕಾಲಾವಕಾಶ ಕೊಡಬಯಸುವರು. ಇಂಥ ಪರಿಸ್ಥಿತಿಯಲ್ಲಿ ಕಾಶ್ಮೀರದಲ್ಲಿ ಸಾರ್ವತ್ರಿಕ ಮತಗಣನೆ ನಡೆಸುವದರಿಂದ ಜಾತೀಯ ದ್ವೇಷಕ್ಕೆ ಪುಟಿ ಕೊಟ್ಟು ಅನಿಷ್ಟ ಪರಿಣಾಮಗಳುಂಟಾಗಬಹುದು.

ಜಾತಿನಿರಪೇಕ್ಷ ಭಾವನೆಯು ಜನರಲ್ಲಿ ಬೇರೂರುವಂತೆ ನೆಹರೂರು ಭಾರತದಲ್ಲಿ ಪ್ರಯತ್ನಿಸುತ್ತಿರುವರು. ಜಾತಿ—ಧರ್ಮ—ಮತ ಪಂಥ ಏನೇ ಇದ್ದರೂ ಅವರೆಲ್ಲರಿಗೂ ಸಮಾನಾವಕಾಶವಿದೆ ಎಂದು ಭಾರತ ಸಂವಿಧಾನದಲ್ಲಿ ನಿರ್ದೇಶಿಸಲಾಗಿದೆ. ಆದರೆ ಭಾರತವು ಹಿಂದೂ ರಾಜ್ಯ ಆಗಿರುವ ಇತರ ಧರ್ಮದವರು ಹಿಂದೂಗಳ ಕೈಸೆಯನ್ನನುಭವಿಸಬೇಕೆಂಬ ಅಭಿಪ್ರಾಯದ ಕೆಲ ಸನಾತನ ವಾದಿಗಳೂ ಭಾರತದಲ್ಲಿದ್ದಾರೆ. ಪಾಕಿಸ್ತಾನದಲ್ಲಿರುವ ಮುಸಲ್ಮಾನರು ಧರ್ಮವು ನಾಗರಿಕತ್ವದ ತಳಹದಿಯಾಗಿದೆ. ಪಾಕಿಸ್ತಾನವು ಮುಸ್ಲಿಂ ಪ್ರಜಾರಾಜ್ಯವೆಂದು ಅದರ ಸುವಿಧಾನದಲ್ಲಿ ಹೇಳಲಾಗಿದೆ. ಭಾರತದ ಉಪಖಂಡದಲ್ಲಿ ವಾಸಿಸುವ ಮುಸಲ್ಮಾನರೆಲ್ಲ ಪಾಕಿಸ್ತಾನಕ್ಕೆ ನಿಷ್ಕ್ರಯಿಸಬೇಕೆಂದು ಅದು ಆಕ್ಷೇಪಿಸುತ್ತದೆ.

ಭಾರತದಲ್ಲಿ ಮುಸಲ್ಮಾನರು ಅತ್ಯುಚ್ಚ ಅಧಿಕಾರ ಸ್ಥಾನಗಳಲ್ಲಿ ಇರುವರು. ಮಂತ್ರಿ ಮಂಡಲದಲ್ಲಿ ಮುಸಲ್ಮಾನರಿರುವರು. ಪಾಕಿಸ್ತಾನದಲ್ಲಿ ಅತ್ಯುಚ್ಚ ಅಧಿಕಾರ ಸ್ಥಾನಕ್ಕೆ ಮುಸಲ್ಮಾನೇತರರು ಅನರ್ಹರೆಂದು ಕಾಯದೆ ಮಾಡಲಾಗಿದೆ. ಮುಸಲ್ಮಾನೇತರು ಎರಡನೇ ದರ್ಜೆಯ ನಾಗರಿಕರೆಂದೂ ಆರ್ಥಿಕ ರಾಜಕೀಯ ಕ್ಷೇತ್ರಗಳಲ್ಲಿ ಮುಸಲ್ಮಾನರಿಗಿಂತ ಕೀಳಾಗಿ ನಡೆಸಿಕೊಳ್ಳಲಾಗಿದೆ.

ಭಾರತದಲ್ಲಿ ೪ ಕೋಟಿ ಮುಸಲ್ಮಾನರು, ಕೋಟ್ಯಂತರ ಕ್ರೈಸ್ತಿಯನ್ನರೂ ಶೇಖರೂ ಇದ್ದು ಅವರೆಲ್ಲ ಶಾಂತ ರೀತಿಯಲ್ಲಿ ಜೀವನ ಸಾಗಿಸುವದು ಧಾರ್ಮಿಕ ಸಹಿಷ್ಣುತೆ ಅಲ್ಲಿ ಬೇರೂರಿದ್ದರಿಂದಲೇ ಸಾಧ್ಯ. ಕಾಶ್ಮೀರದಲ್ಲಿಯೂ ಭೌದ್ಧರೂ ಹಿಂದುಗಳೂ ಇದ್ದು ಅಲ್ಲಿಯ ಬಹುಸಂಖ್ಯಾತ ಮುಸಲ್ಮಾನರಲ್ಲಿ ಧಾರ್ಮಿಕ ಸಹಿಷ್ಣತೆಯು ಭಾರತದಲ್ಲಿರುವಷ್ಟೇ ಪ್ರಯಾಣದಲ್ಲಿದ್ದುದು ಕಂಡು ಬರುವದು

೧೯೪೭ರ ವರೆಗೆ ಕಾಶ್ಮೀರದಲ್ಲಿ ಸರಂಜಾಮು ಪದ್ಧತಿಯು ಮಧ್ಯ ಯುಗದ ಸಮಾಜ ವ್ಯವಸ್ಥೆ ಇದ್ದುದು ಈಗ ಭರದಿಂದ ಬದಲಾಗುತ್ತ ನಡೆದಿದೆ. ಆರೋಗ್ಯ, ಶಿಕ್ಷಣ, ವಸತಿ ಸೌಕರ್ಯ, ಇವುಗಳಲ್ಲದೆ ಪ್ರಜಾಪ್ರಭುತ್ವ ರಾಜ್ಯ ವ್ಯವಸೆಗಳಿಂದ ಅಲ್ಲಿ ಆಧುನಿಕ ಸಮಾಜ ವ್ಯವಸ್ಥೆಯು ರೂಪುಗೊಳ್ಳತ್ತಿದೆ. ಭಾರತವು ಕಾಶ್ಮೀರದಲ್ಲಿ ಬಂಡವಲ ತೊಡಗಿಸಿ ಅಲ್ಲಿ ವಿದ್ಯುತ್ ಉತ್ಪಾದನೆಯ ಯೋಜನೆಗಳನ್ನು ಕಾರ್ಯರೂಪಕ್ಕೆ ಇಟ್ಟು ಕೈಗಾರಿಕಾ ಅಭಿವೃದ್ಧಿ ಸಾಧಿಸುತ್ತಿರುವದು, ಅಲ್ಲಿಯ ಜನರ ಜೀವನದ ಉಚ್ಚಾಟನೆ ಮಾಡಿ ಜೀವನ ಮಟ್ಟ ಸಾಧಿಸುವ ಉದ್ದೇಶದಿಂದ ಪಾಕಿಸ್ತಾನಿಗಳು ಆಸಪ್ರಚಾರ ಮಾಡುವಂತೆ ಕಾಶ್ಮೀರಿಗಳಿಗೆ ಭಾರತದಲ್ಲಿ ಉಳಿಯಲು ಆಮಿಷತ್ಯಾಗಿ ಅಲ್ಲ. ಆಜ್ಞಾನ, ಜಡತನ, ಇವು ದ್ವೇಷಭಾವನೆಯ ಬೆಳವಣಿಗೆಗೆ ಒಳ್ಳೇ ಅನುಕೂಲ ಪರಿಸ್ಥಿತಿಯನ್ನು ಒದಗಿಸುವುವು. ಅಜ್ಞಾನ ಜಡತನಗಳ ಉಚ್ಚಾಟನೆಯೇ ಭಾರತದ ಉದ್ದೇಶವಾಗಿದೆ. ಈ ಉಚ್ಚ ಧ್ಯೇಯ ಸಾಧಿಸಲು ಸುದೀರ್ಘ ಕಾಲದ ಪ್ರಯತ್ನದ ಅಗತ್ಯ ಏದೆ, ಹೀಗಿರುವಾಗ ಒಮ್ಮೆಲೆ ಕಾಶ್ಮೀರದ ಜನತೆಯ ಭಾವನೆಯನ್ನು ಕೆರಳಿಸಿ ಅವರು ಅಜ್ಞ ಕುರಿಗಳಂತೆ ಸಾರ್ವತ್ರಿಕ ಮತಗಣನೆಯಲ್ಲಿ ಭಾಗವಹಿಸುವಂತೆ ಒತ್ತಾಯಪಡಿಸುವದು ಸರಿಯಲ್ಲ.

ಸಾರ್ವತ್ರಿಕ ಮತಗಣನೆ ನಡೆದರೆ ಪಾಕಿಸ್ತಾನವು ಗೆಲ್ಲಲಾರದು. ಪಾಕಿಸ್ತಾನವು ಕಾಶ್ಮೀರದ ಮೇಲೆ ಸೈನ್ಯ ಪಡೆಗಳ ಸಹಾಯದಿಂದ ದಾಳಿಮಾಡಿ ಅದನ್ನು ಆಕ್ರಮಿಸದೆ ಅದು ಪಾಕಿಸ್ತಾನಕ್ಕೆ ಸಿಗಲಾರದು. ಪ್ರಜಾಪ್ರಭುತ್ವವು ಅಲ್ಲಿ ಬೇರೂರಿದರೆ ಅದೆಂದಿಗೂ ಪಾಕಿಸ್ತಾನಕ್ಕೆ ಸಿಗಲಾರದು. ಒಂದು ವೇಳೆ ಸಾರ್ವತ್ರಿಕ ಮತಗಣನೆಯಲ್ಲಿ ಪಾಕಿಸ್ತಾನವು ಗೆದ್ದರೆ ಆದರ ಪರಿಣಾಮ ಇನ್ನೂ ಭೀಕರವಾಗುವದು. ಪಾಕಿಸ್ತಾನದಲ್ಲಿರುವ ಸೇಡುತೀರಿಸಿಕೊಳ್ಳುವ ಭಾವನೆ. ಹಾಗೂ ಲಂಚಗುಳಿ ಆಡಳಿತ ವ್ಯವಸ್ಥೆ ಇವು ಕಾಶ್ಮೀರದ ಮೇಲೆ ಹೇರಲ್ಪಟ್ಟು ಜನರು ಗೇಲಿಕೆತ್ತಿ ದೋಗುವದು ಪ್ರಾರಂಭವಾಗುವದು. ಇದರಿಂದ ಜನರ ಭಾವನೆಗಳು ಉದ್ರಿಕ್ತವಾಗಿ ೧೯೪೭ರಲ್ಲಿ ನಡೆದ ಘಟನೆಗಳ ಪುನರಾವೃತ್ತಿಯಾಗಿ ಭಾರತದಿಂದ ಲಕ್ಷಾಂತರ ಮುಸಲ್ಮಾನರೂ ಪಾಕಿಸ್ತಾನದಿಂದ ಲಕ್ಷಾಂತರ ಹಿಂದುಗಳೂ ಗುಳೇ ಕಿತ್ತಿ ಹೋಗುವ ಗಂಡಾಂತರಕ್ಕೆ ಅವಮಂತ್ರಣವಿತ್ತಂತಾಗುವದು. ಆದುದರಿಂದ ಜನರ ಇಚ್ಛೆಯಂತೆ ಕಾಶ್ಮೀರ ಭವಿತವ್ಯವು ನಿರ್ಧರಿಸಲ್ಪಡಲಿ ಎಂಬ ಕೂಗು ಎಬ್ಬಿಸುವವರು ಪಾಕಿಸ್ತಾನದಲ್ಲಿ ಜೂವ ಪ್ರಶ್ನೆಯನ್ನು ಜನರ ಇಚ್ಛೆಯಂತೆ ಬಿಡಿಸಿಲ್ಲ ಎಂಬದನ್ನು ಗಮನಿಸಬೇಕು ಸಮಾಜವಾದಿಗಳು ಈ ಕೂಗಿನ ಬಗ್ಗೆ ಜಾಗ್ರತರಾಗಿರಬೇಕು. ಪ್ರಜಾಸ್ರಭುತ್ವ ಸಮ್ಮತ ತತ್ವಗಳ ವರೆಗೆ ಹಚ್ಚಿ ಕಾಶ್ಮೀರದ ಮೇಲೆ ಭಾರತದ ಹಕ್ಕು ಹೆಚ್ಚಿಗಿರುವುದೋ ಪಾಕಿಸ್ತಾನದ ಹಕ್ಕು ಹೆಚ್ಚಿಗಿರುವುದೋ ಇದನ್ನು ವಿಚಾರಮಾಡಬೇಕು. ಸಂ. ರಾ ಸಂಘದ ಗೊತ್ತುವಳಿಯಲ್ಲಿ ಕಾಣಿಸಿದ ಕರಾರುಗಳ ಉಲ್ಲಂಘನೆ ಮಾಡಿ ದ್ವೇಷ ಭಾವನೆಗೆ ಪುಟ ಕೊಡುವ ರೀತಿಯಲ್ಲಿ ಮತಗಣನೆ ನಡೆಸುವದು ಪ್ರಜಾಸ್ರಭುತ್ವ ತತ್ವಕ್ಕೆ ಸಮ್ಮತವೆನಿಸುವುದೇ? ಇದು ವಿಚಾರಾರ್ಹವಾಗಿದೆ.

(ಸಂಯುಕ್ತ ಕರ್ನಾಟಕ)

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ, ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

ಜನಪ್ರಿಯ ಪುಸ್ತಕದ ನೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಡಿಲ್ ವೆಂಕಟ್ರಾವ್, ಎಲ್. ಐ.ಎಂ.

ಮಕ್ಕಳಿ, ಹೆಂಗಸರು, ಗರ್ಭಿಣಿಯರು, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟಿ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. ೫/- ದೀರ್ಘಕಾಲದ ಬಾಧೆಗೆ ರೂ. ೮/- ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ವಾಕಿಸ್ತರು: ಪೈ ಕಂಪೆನಿ, ಮಂಗಳೂರು—1.

ರಾಜಕೀಯ

(ನಿನ್ನೆ ಮುಟದಿಂದ)

ಪನ್ನು ಸಾಗಿಸಿಕೊಂಡು ಹೋಗಬೇಕಾದ ಅಸಾಧ್ಯ ಕಾರ್ಯವನ್ನು ಎದುರಿಸಬೇಕಾಯ್ತು. ಸ್ಟೇಲಿನರಲ್ಲಿದ್ದ ಧೈರ್ಯ, ಸ್ಥೈರ್ಯ, ನಿರಂಕುಶತ್ವ ಇಂದಿನ ಮುಖಂಡರಲ್ಲಿ ಇಲ್ಲದಕಾರಣ ಇಂದು ಅವರು ಗಂಡಾಂತರವನ್ನು ಎದುರಿಸಬೇಕಾಗಿದೆ. ಸ್ಟೇಲಿನರ ಕೊನೆಯ ಕಾಲದಲ್ಲಿ ಅವರ ಸ್ಥಾನವೇ ಗಂಡಾಂತರದಲ್ಲಿತ್ತು. ಅತನಿಂದಲೇ ಕಮ್ಯುನಿಸ್ಟ್ ಪಕ್ಷವು ಅವಸಾನ ಹೊಂದುತ್ತಿರುವುದನ್ನು ನೋಡಿದ ನವಮುಖಂಡರು, ಬಹಳವಾಗಿ ಪ್ರಯತ್ನಪಟ್ಟರು. ಆದರೂ ಕೂಡಾ ಕಷ್ಟವಾದ ನವನ್ಯೆಯನ್ನು ಎದುರಿಸಬೇಕಾಯ್ತು. ಸ್ಟೇಲಿನರ ನಿರಂಕುಶ ಪ್ರಭುತ್ವದಿಂದ ಅಸಮಾಧಾನ ಹೊಂದಿದ ಜನತೆ, ಅವನ ಮರಣಾನಂತರ ಬಡುಗಡೆ ಪಡೆಯಲಿಚ್ಛಿಸುವ ಜನತೆಯನ್ನು ಸುಧಾರಿಸಿಕೊಂಡು ಹೋಗುವುದು ನವ ಮುಖಂಡರಿಗೆ ಸುಲಭವಾಗಲಿಲ್ಲ. ತಮ್ಮ ಧ್ಯೇಯ ಧೋರಣೆಯನ್ನು ಕೊಂಚ ನುಟ್ಟಿಗೆ ಬದಲಾಯಿಸಿ, ಜನರನ್ನು, ಲೋಕವನ್ನು ಸಮಾಧಾನ ಮಾಡಲೆತ್ನಿಸಿದರು. ಸ್ಟೇಲಿನರ ಮರಣದ ಕೇವಲ ಎರಡು ವರುಷಗಳ ನಂತರ, ಸ್ಟೇಲಿನರನ್ನು ರಶ್ಯಾದಲ್ಲಿ ಹಾಗೂ ಇತರ ಯುರೋಪಿನ ದೇಶಗಳಲ್ಲಿ ಖಂಡಿಸತೊಡಗಿದರು. ಆದರು ಕೂಡಾ ಮಾರ್ಶಲ್ ಟಿಟೋರವರ ಪಕ್ಷವು ಹೆಚ್ಚಿನ ಜನಮತವನ್ನು ಪಡೆಯುತ್ತಿತ್ತು.

ಎರಡನೇ ಜಾಗತಿಕ ಯುದ್ಧದ ನಂತರ ಅಧಿಕಾರಕ್ಕೆ ಬಂದ ಹೆಚ್ಚಿನ ಮುಖಂಡರನ್ನು ಸ್ಟೇಲಿನರು ಮರಣಕ್ಕೀಡು ಮಾಡಿದರು. ಕೆಲವೇ ಜನ ಕೈಗೊಂಬೆಗಳನ್ನು ಇಟ್ಟುಕೊಂಡು ನಿರಂಕುಶ ಪ್ರಭುತ್ವವನ್ನು ನಡೆಸತೊಡಗಿದರು. ಈ ಅನುಯಾಯಿಗಳು ಬರೇ ಕೈಗೊಂಬೆಗಳಾಗಿದ್ದರೇ ಹೊರತು ಸಮತಾವಾದದ ಉತ್ಕ್ರೀಜಕರಾಗಿರಲಿಲ್ಲ. ಇದರಿಂದ ಜನತೆಯು ಕ್ರಮೇಣ ಕಮ್ಯುನಿಸಂನ ಮೇಲಿನ ಭರವಸೆಯನ್ನು ಕಳೆದುಕೊಂಡು, ನಿಷ್ಪ್ರಯೋಜಕ ಮುಖಂಡರನ್ನೊಳಗೊಂಡ ಪಕ್ಷದಲ್ಲಿ ಜಿಗುಪ್ಸೆ ತಾಳಿತು.

ಪೋಲೆಂಡಿನಲ್ಲಿ ಇಂದು ಕಮ್ಯುನಿಸ್ಟರು ಬಲಗೊಳ್ಳುತ್ತಿದ್ದರೆ, ಜನಮತ ಬೆಂಬಲ ಪಡೆಯುವರಿದ್ದರೆ ಅದು ಗೋಮುಲ್ಕರು ಮಾಡುತ್ತಿರುವ ಸ್ಟೇಲಿನ್ ವಾದದ ಖಂಡನೆಯ ಪರಿಣಾಮದಿಂದ. ಗೋಮುಲ್ಕರು ಟಿಟೋ ವಾದಕ್ಕೆ ಸೇರಿದವರು. ಅವರು ಅಧಿಕಾರಕ್ಕೆ ಬಂದನಂತರ ಕಡಿಮೆಯೆಂದರೆ ಅರ್ಧ ಡಜನು ಸ್ಟೇಲಿನ್ ವಾದಿ ಉನ್ನತ ಅಧಿಕಾರಿಗಳನ್ನು ಪದವಿಯಿಂದ ಕಿತ್ತೊಗೆದಿದ್ದಾರೆ. ಮುಖಂಡ ಬೀರೇಟ್ (Bierut)ರು ಕಳೆದ ವರುಷ ಸತ್ತನಂತರ ಪೋಲೆಂಡಿನಲ್ಲಿ ಸ್ಟೇಲಿನ್ ಪಕ್ಷ, ಟಿಟೋ ಪಕ್ಷಗಳೆಂದು ಎರಡು ಪಂಗಡಗಳಾದುವು. ಗೋಮುಲ್ಕರು ಅಧಿಕಾರಕ್ಕೆ ಬಂದನಂತರ, ಉನ್ನತ ಪದವಿಯಲ್ಲಿದ್ದ ಸ್ಟೇಲಿನ್ ವಾದಿಗಳಾದ ಎಡ್ವರ್ಡ್ ಓಚೆಬ್ (Edward Ochab), ಬರ್ಮನ್ (Berman), ಮಿಂಕ್ (Mink) ಮತ್ತು ಸೇನಾನಾಯಕ ರೋಕೋಸ್ಸೊವಸ್ಕಿ (Rokossovesky) ಇವರೆಲ್ಲರನ್ನು ಅಧಿಕಾರದಿಂದ ತಳ್ಳಿ ಹಾಕಲಾಯ್ತು.

ರಶ್ಯಾಕ್ಕೆ ಇಂದು ಅತೀ ವಿಧೇಯವಾಗಿರುವ ರುಮೇನಿಯಾದಲ್ಲಿ ಕೂಡಾ ಇಂದು ಬಿಕ್ಕಟ್ಟಿಲ್ಲದೇ ಇಲ್ಲ. ಜನನಾಯಕ ಅನಾ ಪಾವ್‌ಕರ್ (Ana Pavkar) ಇಂದು ನಿವೃತ್ತಿ ಹೊಂದಿದ್ದಾರೆ. ಸ್ವಕೃತದ ಮುಖಂಡ ಗೇರೋಗಿಯಾ ಡೇಜ್ (Gheroghia Dej)ರವರನ್ನೇ ಅವರು ಟೀಟೋ ವಾದಿಗಳೆಂದು ಸಂಶಯಪಡಲಾಯ್ತು. ಬಲ್ಗೇರಿಯಾದ ತರುಣ ಸಮರ್ಥ ಮುಖಂಡ, ಚರಂಕೋವ್ (Cheronkov)ರವರು, ಅವರನ್ನು ಟೀಟೋ ವಾದಿಯೆಂದು ಸಂಶಯಿಸಿದಾಗ ಕಳೆದ ಜಳಿಗಾಲದಲ್ಲಿ ರಾಜಿನಾಮೆಯನ್ನಿತ್ತಿಯಬೇಕಾಯ್ತು.

ಎಲ್ಲೆಲ್ಲೂ ಸಂಶಯ, ಎಲ್ಲೆಲ್ಲೂ ಬಿಕ್ಕಟ್ಟು ಇಂದು ಕಮ್ಯುನಿಸ್ಟ್ ಪಕ್ಷವನ್ನು ಸುತ್ತಿ ನಿಂತಿದೆ. ಬಲ್ಗೇರಿಯಾದ ಪ್ರಧಾನಿ ಎಂಟನ್ ಲುಗೋವ್ (Anton Lugov) ರವರನ್ನು ಸ್ಟೇಲಿನ್ ವಾದದ ಕೈಗೊಂಬೆಯೆಂದು, ಯುಗೋಸ್ಲಾವಿಯಾವು ಟೀಕಿಸುತ್ತಿದೆ. ಜೆಕೋಸ್ಲೊವಾಕಿಯಾ ಮತ್ತು ಪೂರ್ವ ಜರ್ಮನಿಯಲ್ಲಿ ಮಾತ್ರ ಹೆಚ್ಚಿನ ಬದಲಾವಣೆಯೇನೂ ಆಗಲಿಲ್ಲ. ಜೆಕ್ಕದಾದ ಅಲ್ಬೇನಿಯಾ ಮಾತ್ರ ಇಂದು ರಶ್ಯಾಕ್ಕೆ ಅತೀ ವಿಧೇಯವಾಗಿರುವ ಏಕಮಾತ್ರ ರಾಷ್ಟ್ರವಾಗಿದೆ. ಪೂರ್ವ ಐರೋಪ್ಯ ದೇಶಗಳಲ್ಲಿ ಇಂತಹ ಬಿಕ್ಕಟ್ಟು ಬಂದಿರುವಾಗ ಹಂಗೇರಿಯಾ ಘಟನೆಯಲ್ಲಿ ತಮ್ಮದು ನ್ಯಾಯವೆಂದು ಜಗತ್ತಿಗೆ ತೋರಿಸಲು ವಿಧೇಯವಾಗಿರುವ ಆರು ಕಮ್ಯುನಿಸ್ಟ್ ರಾಷ್ಟ್ರಗಳ ಸಹಾಯವನ್ನು ರಶ್ಯಾವು ಪಡೆಯಲೆತ್ನಿಸುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಕಮ್ಯುನಿಸ್ಟ್ ಪಕ್ಷದ ದುರ್ಬಲತೆಗೆ ಮೇಲೆ ಹೇಳಿದ ಕಾರಣಗಳು ಪ್ರಮುಖ್ಯವಾದರೂ ಕೂಡ ಜೇರೆ ಕಾರಣಗಳಿಲ್ಲಿದೇ ಇಲ್ಲ. ಮಾನವನು ಸ್ವಾತಂತ್ರ್ಯ ಪ್ರಿಯನು. ಸ್ವಾತಂತ್ರ್ಯಕ್ಕಾಗಿ ಹೋರಾಡುವುದು ಮಾನವನ ಸ್ವಭಾವ. ನಿರಂಕುಶವಾದ ಎದುರಿಗೆ ಜನ್ಮಸಿದ್ದವಾದ ಹಕ್ಕಿಗಾಗಿ ಕಮ್ಯುನಿಸ್ಟ್ ರಾಷ್ಟ್ರಗಳ ಜನತೆಯು ಹೋರಾಡುವುದು ಸ್ವಾಭಾವಿಕ.

ಪೂರ್ವ ಯುರೋಪಿನಲ್ಲಿ [ಸ್ಟೇಲಿನ್ ವಾದವು ಮಾಯವಾಗಿ ಸಮರ್ಥ ಮುಖಂಡತ್ವದ ಅಗತ್ಯವಿದೆಯೆಂದು ಮಾರ್ಶಲ್ ಟೀಟೋರವರು ಇತ್ತೀಚೆಗೆ ಹೇಳಿದರು. ಈ ಟೀಕೆಗೆ ಉತ್ತರವಾಗಿ ರಶ್ಯಾದ "ಪ್ರಾವ್ದ" ಪತ್ರಿಕೆಯಲ್ಲಿ ಎನ್‌ವರ್ ಹೋಕ್ಸರು ಉತ್ತರವನ್ನೀಯುತ್ತಾ 'ಟೀಟೋರವರ ಟೀಕೆ ಟಿಪ್ಪಣಿಗಳಿಗೆ ಆಧಾರವಿಲ್ಲ. ಸ್ಟೇಲಿನ್ ವಾದವೆಂದು ಕಮ್ಯುನಿಸ್ಟ್ ತತ್ವವನ್ನು ಟೀಕಿಸುವುದರಲ್ಲಿ ಅರ್ಥವಿಲ್ಲ. ಟೀಟೋರವರು ತಾಟಸ್ಥ್ಯ ಧೋರಣೆಯನ್ನು ತಳೆಯುವುದರ ಬದಲಿಗೆ ಇತರ ಎಲ್ಲಾ ರಾಷ್ಟ್ರಗಳು ಯುಗೋಸ್ಲಾವಿಯವನ್ನು ಅನುಸರಿಸಬೇಕೆಂಬ ಕುರುಡು ವಾದವನ್ನು ಹೂಡಿದ್ದಾರೆ. ಆದರೆ ಯುಗೋಸ್ಲಾವಿಯಾದ ಮಾದರಿಯು ಇತರರಿಗೆ ಮಾದರಿಯಾಗಲಾರದು. ಯಾಕೆಂದರೆ ಯುಗೋಸ್ಲಾವಿಯಾವನ್ನು ಟೀಟೋರವರು ಭಂಡವಾಳ ಶಾಹಿ ಅಮೇರಿಕದ ಸಹಾಯದಿಂದಲೇ ಕಟ್ಟಿ ಬೆಳೆಸುತ್ತಿದ್ದಾರೆ. ಇದು ಕಮ್ಯುನಿಸ್ಟ್ ಮಾದರಿಯೇ?" ಎಂದು ಉತ್ತರವಿತ್ತರು.

ಇಂತಹ ಬಿಕ್ಕಟ್ಟಿನ ಸಮಯದಲ್ಲಿ ಚೀನಾದ ಮಾವೋತ್ಸೆಂಗ್‌ರು ಪೇಕಿಂಗಿನ "ಪೀಪಲ್ಸ್ ಡೈಲಿ" ಪತ್ರಿಕೆಯಲ್ಲಿ ಪಕ್ಷದ, ತತ್ವ ಧ್ಯೇಯದೋರಣೆಗಳನ್ನು ಬರೆದು, ಜಾಗತಿಕ ಕಮ್ಯುನಿಸ್ಟ್ ಪಕ್ಷಕ್ಕೆ ಉಪಕಾರವನ್ನೆಸಗಿದರು. ಅವರ ಈ ಬರಹವು ಕಮ್ಯುನಿಸ್ಟ್ ಬರಹಗಳಲ್ಲೆಲ್ಲಾ ಉತ್ತಮ ಬರಹಗಳೆಂದು ಹೆಸರು ಪಟ್ಟ ಬರಹಗಳ ಸಾಲಿನಲ್ಲಿ [ಚಿಳಗುವಂತಹ ಬರಹವಾಗಿದೆ. ಈ ಬರಹವು ತರ್ಕಬದ್ಧವಾಗಿದ್ದು ಟಿಟೋವಾದ, ಸ್ಟೇಲಿನ್ ವಾದಗಳ ನಡುವೆ ಸಮತೂಕವನ್ನು ತಂದೊಡ್ಡಿದೆ. ಸ್ಟೇಲಿನನ ಸತ್ಕಾರ್ಯಗಳನ್ನು ಹೊಗಳಿದ ರುಕೂಡಾ, ಅವನ ಕೊನೆಯ ಕಾಲದಲ್ಲಿ ಮಾಡಿದ ಕ್ರೂರ ಕೃತ್ಯಗಳಿಗಾಗಿ ಅತನನ್ನು ಕಟುವಾಗಿ ಟೀಕಿಸಿದೆ. ತರ್ಕವು ಅವಶ್ಯ. ಆದರೆ ತರ್ಕವು ಜಗಳಕ್ಕೆ ಹೋಗಬಾರದು. ಟೀಟೋರವರ ಕೆಲವು ಟೀಕೆಗಳು ಸರಿಯೆಂದು ಪರಿಗಣಿಸಿದರು ಕೂಡಾ, ಅವರ ಅಸಂಬದ್ಧನಿಸ್ಸಿಷ್ಟುವ ಟೀಕೆ ಟಿಪ್ಪಣಿಗಳನ್ನು ಖಂಡಿಸಿದೆ. ಪೂರ್ವ ಯುರೋಪಿನಲ್ಲಿ ಬೆಳೆಯುತ್ತಿರುವ ರಾಷ್ಟ್ರೀಯ ವಾದವನ್ನು ಕೂಡಾ ಖಂಡಿಸಿದೆ. ರಶ್ಯಾದ ಸೈನ್ಯ ಮತ್ತಿತರ ಬಲಗಳಿಲ್ಲದಿದ್ದರೆ, ಭಂಡವಾಳ ಶಾಹಿಗಳು ಕಮ್ಯುನಿಸಂನನ್ನು ನಾಶಮಾಡುತ್ತಿದ್ದರು. ಒಗ್ಗಟ್ಟು ಅತೀ ಮುಖ್ಯ ತಾಂಥನ್ಯ, ಸಹೋದರತ್ವ, ಪರಸ್ಪರ ಅನ್ಯೋನ್ಯತೆಗಳಿಂದ ನಮ್ಮಲ್ಲಿರುವ ವಾದ ವಿವಾದ, ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಂಡು, ಕಮ್ಯುನಿಸಂನ ಏಳಿಗೆಗಾಗಿ ನಾವು ದುಡಿಯಬೇಕೆಂದು ಮಾವೋತ್ಸೆಂಗರು ಜಗತ್ತಿನ ಕಮ್ಯುನಿಸ್ಟರಿಗೆ ಮಾರ್ಗ ತೋರಿಸಿದ್ದಾರೆ.

ಚೀನಾದ ಪ್ರಧಾನಿ ಚೌ-ಎನ್ ಲಾಯರವರ ರಶ್ಯಾ ಸಂದರ್ಶನವು ಕಮ್ಯುನಿಸ್ಟ್ ಪಕ್ಷದ ಬಿಕ್ಕಟ್ಟಿಗೆ ಎರಕವನ್ನು ಹೊಯ್ಯಬಹುದು. ಜಾಗತಿಕ ಮುಖಂಡನೊಬ್ಬನ ಅಗತ್ಯವಿರುವ ಪಕ್ಷಕ್ಕೆ ಒಂದು ಮುಖಂಡತ್ವವನ್ನು ಒದಗಿಸಿಕೊಡಬಹುದು ಇಂತಹ ಕಷ್ಟಕಾರ್ಯಕ್ಕೆ ಚೀನಾವು ಕೈಹಾಕಿರುವುದಂದಲೇ ಅದು ಸಾಧ್ಯವಾಗಬಲ್ಲದು. ಅಂತೂ ಬಿಕ್ಕಟ್ಟಿನಿಂದ ಒಡೆದಿರುವ ಪಕ್ಷವನ್ನು ಒಂದುಗೂಡಿಸಲು ಚೀನಾವು ಎಷ್ಟರ ಮಟ್ಟಿಗೆ ಸಮರ್ಥವಾಗಬಲ್ಲದು ಎನ್ನುವುದನ್ನು ನಾವು ನಿರೀಕ್ಷಿಸಬೇಕಾಗಿದೆ.

— "ಟೈಮ್ಸ್ ಆಫ್ ಇಂಡಿಯಾ"ದ ಆಧಾರದಿಂದ.

ಶ್ರೀ ಕೆ. ಬಿ. ಶೆಟ್ಟಿ, ಬಿ. ಎ.

ಶೋಕ ನಾಟಕದ ಸಾಮಾನುಗಳು

FILM WIG

ನಾಟಕಗಳಿಗೆ ಬೇಕಾಗುವ ಸಾದಾ ಮತ್ತು ಶ್ರೇಷ್ಠ ತರದ ಎಲ್ಲ ಮತ್ತು ಪ್ರತಿಯೊಂದು ತರದ ಸಾಮಾನುಗಳ ದೊಡ್ಡ ಸಂಗ್ರಹವಿದೆ. ಕನ್ನಡ ಕೆಟಲಾಗಿಗೆ ಬರೆಯಿರಿ.

ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ.

DHARAMSHI MULJI, DRESSWALA,

132—C, Bhagatwadi, Bhuleshwar Road BOMBAY-2.

ಮುದ್ರಣ ಕಾರ್ಯಗಳಿಗೆ—

ನವಯುಗ ಪ್ರೆಸ್,

ಸಂತೆಕಟ್ಟೆ ;.... ಉಡುಪಿ.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

ಕರ್ನಾಯುಗ

ಂಪುಟ ೩೬
VOL. 36

21—3—1957

ಸಂಚಿಕೆ ೨೮
NO. 28

ಹಿತನುಡಿ

ುನಾವಣೆಗಳಲ್ಲಿ ಕಿರಿಯರ ಪಾತ್ರ

ಲ್ಲರೂ ಶಾಲೆಯ ಬಾಲಕರನ್ನು ುರುಪಯೋಗಪಡಿಸಿಕೊಂಡರು

ದ್ವಿತೀಯ ಮಹಾ ಚುನಾವಣೆ ಈಗಾ ಲೇ ಮುಗಿದಿದೆ. ಜಯಾಪಜಯದ ಗುಂಗಿ ಲ್ಲಿ ಪಕ್ಷೀಯ ರಾಜಕಾರಣವು ತನ್ನ ದೃ ಕೇಂದ್ರೀಕರಿಸಿದೆ. ಆಡಳಿತೆಯ ಅಧಿ ೀಶದ ಮೇಲೆ ಚುನಾಯಿತರ ದೃಷ್ಟಿ ದ್ದಿದೆ. ಇಂತಹ ಸಂದರ್ಭದಲ್ಲಿ ಚುನಾ ಣೆಯಲ್ಲಿ ನಡೆದ ವಿಚಾರಗಳ ಪ್ರಥಕ್ಕರ ಯಾರ ಲಕ್ಷ್ಯವನ್ನೂ ಸೆಳೆಯಲಾರ ು. ಚುನಾವಣೆಯು ಕಾಲನಲ್ಲಿ ತತ್ವ, ೋರಣೆ, ನ್ಯಾಯ, ನೀತಿ, ಧರ್ಮ, ಗೌ ವಗಳನ್ನು ಕಡೆಗಣಿಸಿ ಎಲ್ಲ ಪಕ್ಷಗಳೂ ೋರಾಡಿದವು. ಜೀವನದ ಪ್ರಬಲ ಧ್ಯೇ ುವಾಗಿ ಜಯವೊಂದೇ ಎಲ್ಲರ ಹೆಗ್ಗುರಿ ಯಾಗಿತ್ತು. ಆ ಒಂದು 'ಜಯ'ಕ್ಕಾಗಿ ಂತಹ ಮಾನ ಮಾರ್ಗವನ್ನು ತಳೆಯ ಾ ಹೇಸಲಿಲ್ಲ. ಮನೆ ಮನೆಯಲ್ಲೂ ತ್ತಂಡಗಳಾದುವು. ಚುನಾವಣಾ ದ್ವೇ ವು ಜೀವನದ ಉನಾತ್ತ ಸಂದೇಶಕ್ಕೇ ುನಿ ಬಳೆಯುವಂತಹ ಎಷ್ಟೋ ಸಂಭವ ಯ ಘಟನೆಗಳಿಗೆ ಕಾರಣವಾಯಿತು.

ಇದೀಗ ಚುನಾವಣೆ ಮುಗಿದಿದೆ. ಚು ುವಣೆಯ ಸಮಯದಲ್ಲಿ ತಾವು ಮಾಡಿ ಕಾರ್ಯಕ್ರಮ, ನಿರ್ಧರಿಸಿದ ಧೋರ ಕಾರ್ಯ ಪ್ರವೃತ್ತಿಗೊಳಿಸಿದ ನೀತಿ ುನ್ನು ಒಮ್ಮೆ ಆವಲೋಕಿಸಿದರೆ ಅವರ ೀಕದ ಒರೆಗಲ್ಲಲ್ಲಿ ಚುನಾವಣಾ ಕಾಲ ತಮ್ಮ ವ್ಯಕ್ತಿತ್ವವನ್ನು ನೆನಸಿಕೊಂಡರೆ ಗೆ ಅವರ ಮುಖದ ಬಣ್ಣ ಖಂಡಿತ ಾಷುತ್ತದೆ.

ಪಕ್ಷೀಯ ರಾಜಕಾರಣದಲ್ಲಿ ಇದು ಭವನೀಯವೆನಿಸಿದರೂ ನಮ್ಮ ದೇಶ ಯ ತನಕ ನಿರಕ್ಷರತೆಯಿಂದ ತುಂಬಿ ತ್ತದೋ—ಎಲ್ಲಿಯ ತನಕ ಅಜ್ಞಾನ ಮುಂದರಿಯುತ್ತ ಹೋಗುತ್ತದೋ— ಯ ತನಕ ಬಡತನ, ಅನಾರೋಗ್ಯ, ಮತೆಗಳು ತಾಂಡವವಾಡುತ್ತದೋ— ಯ ತನಕ ಚುನಾವಣಾ ವಿದ್ವೇಷ ಟ್ಟಿ ವಾತು.

ಚುನಾವಣೆಯ ಕಾಲದಲ್ಲಿ ಹುಟ್ಟಿ ಂಡ ಈ ವಿದ್ವೇಷದ ಜ್ವಾಲಾಮುಖಿ ಕಿರಿಯರೂ ಬಲಿ ಬೀಳುತ್ತಿರುವುದನ್ನು ಮಾತ್ರ ನಾವು ತೀವ್ರ ರೀತಿಯಲ್ಲಿ ಯೋ ಚಿಸಬೇಕಾಗಿದೆ. ಸಾವಿರ ಪಾಲು ಹೆಚ್ಚಿನ ಪ್ರತಿಧ್ವನಿ ನೀಡಬಲ್ಲ ಧ್ವನಿವರ್ಧಕ ಯಂ ಕ್ಕಿಂತಲೂ ಹುಡುಗರ ಕೆರಾತರ ಗುಂ ಪಿಗೆ ನಮ್ಮ ಚುನಾವಣಾ ಪ್ರಭೃತಿಗಳು ಹೆಚ್ಚಿನ ಮಹತ್ವ ಕೊಡುತ್ತಿದ್ದಾರೆ. ಚು ನಾವಣೆಯಲ್ಲಿ ಹುಡುಗರನ್ನು—ಎಳೆಯ ಅಸಕ್ತ ಜೀವಿಗಳನ್ನು—ಉಪಯೋಗಿಸುವು ದು ನ್ಯಾಯ ಸಮ್ಮತಿಶವಲ್ಲವೆಂಬುದನ್ನು ಎ ಲ್ಲರೂ ತಿಳಿದು ಆದನ್ನೇ ಮಾಡುತ್ತಿದ್ದಾರೆ. ಆನ್ಯಾಯಕ್ಕೆ ನ್ಯಾಯದ ವೇಷ ತೊಡಿಸಿ ಕುಣಿಸುವುದು ಇಂದಿನ ಲೋಕ ರೂಢಿ ಯಾಗಿದೆ.

ಆದರೆ ವಿದ್ಯಾರ್ಥಿಗಳು-ಎಳೆಯ ಕರು ಣರು—ಈ ಚುನಾವಣಾ ರಂಗದಲ್ಲಿ ಪ್ರ ವೇಶಿಸುವುದು ಸರಿಯೇ?-ಇದನ್ನು ಇಂ ದು ಯೋಚಿಸಬೇಕು.

ಮತದಾನವು ದೇಶದ ಭದ್ರ ಭವಿಷ್ಯ ವನ್ನು ನಿರೂಪಿಸಲು ಜನತೆಗೆ ಕೊಟ್ಟ ಒಂದು ಅಸ್ತ್ರ. ಈ ಅಸ್ತ್ರಪ್ರಯೋಗದಿಂದ ಮುಂದಿನ ಅವಧಿಯ ತನಕ ಜನತೆ ತನ್ನ ಪ್ರತಿನಿಧಿಯನ್ನು ನಿರ್ಮಿಸುವುದು. ಆ ಪ್ರ ತಿನಿಧಿ ದೇಶದ ಸರ್ವಾಂಗೀಣ ಪ್ರಗತಿಗಾ ಗಿ ದುಡಿಯುವನು. ಇದು ಚುನಾವಣಾ ಸತ್ಯ. ಈ ಪ್ರತಿನಿಧಿಯು ದೇಶದ ಕೋ ಟ್ಯಾಂತರ ಜನರ ಪ್ರತಿನಿಧಿತ್ವದಿಂದ ಆರಿ ಸಲ್ಪಡುವವನು. ಕೇವಲ ವಯಸ್ಕರಿಂದ ಆರಿಸಲ್ಪಟ್ಟರೂ ಅವನು ಈಗ ತಾನೇ ಜ ನಿಸಿದ ಶಿಶುವಿನ ಕಲ್ಯಾಣಕ್ಕೂ ಶ್ರಮಿಸ ಬೇಕಾದ್ದು ಸತ್ಯ. ಹಾಗೆಯೇ ಮುಂದಿನ ಜನಾಂಗದ ಸರ್ವಾಂಗೀಣ ಕಲ್ಯಾಣಕ್ಕಾ ಗಿಯೂ ರಾಷ್ಟ್ರದ ಹಿತಾಭಿವೃದ್ಧಿಗಾ ರ್ಯಗಳಲ್ಲಿ ಆಸ್ಥೆ ವಹಿಸುತ್ತಾರೆ. ಹಾಗಿ ರುವುದರಿಂದ ಆಯ್ಕೆಗೊಳ್ಳುವ ಪ್ರತಿನಿಧಿ ಯ ಕುರಿತು ಕಿರಿಯರು ಆಸಕ್ತಿ ವಹಿಸು ವುದು ಸಮಂಜಸವಲ್ಲವೇ?

ಆದರೆ ನಾವು ಮೊದಲೇ ಹೇಳಿರುತ್ತೇ ನೆ. ಎಷ್ಟೆಂದರೂ ಕಿರಿಯರ ಮನಸ್ಸು ಎ ಳೆತನದ್ದು. ಅವರ ಜೀವನ ಅಪ್ರಬುದ್ಧ ವಸ್ಥೆಯದ್ದು. ಅವರು ಪರಾವಲಂಬಿಗಳು ಹಿರಿಯರ ಆಶ್ರಯದಲ್ಲೇ ತಮ್ಮ ಜೀವನ ನಿರೂಪಿಸಲು ತಯಾರಾಗುತ್ತಿರುವವರು. ಹೀಗಿರುವಾಗ ಇಂತವರು ದೇಶದ ಮಹ ತ್ವನ ಪ್ರಶ್ನೆಯಲ್ಲಿ ತಲೆ ಹಾಕುವುದು ಸರಿ ಎನಿಸಲಾರದು. ಅವರ ಹಿರಿಯರ ಮಾನ ಸಿಕ ಬುದ್ಧಿಗೆ ಈ ಪ್ರಶ್ನೆ ಬಿಟ್ಟು ಕೊಡು ವುದು ಸಾಧುವಾಗಿದೆ. ಇಂತಹ ಸಂದರ್ಭ ಪ್ರಾಯಬದ್ಧರಾದಾಗ ಬರುವುದೆಂಬುದು ಘಟನೆಯ ಮೂಲಕ ಸತ್ಯವೆನಿಸಿರುವಾಗ ಉತ್ಸಾಹದ ದುಡುಕುತನವೇಕೆ? ಎಳೆಯ ಹೃದಯದಲ್ಲಿ ಚಪಲತೆ ಜಾಸ್ತಿ. ಸಾರಾ ಸಾರ ವಿವೇಚನೆಗಿಂತಲೂ ಹೋರಾಟದ ಮನೋಭಾವಕ್ಕೆ ಪ್ರಾಶಸ್ತ್ಯ ಜಾಸ್ತಿ. ಜೀವಕ್ಕೆಂತ—ಜೀವನಕ್ಕೆಂತ ತಮ್ಮ ಹು ರುಪಿನ ಪ್ರದರ್ಶನಕ್ಕೆ ಎಳೆಯ ಜೀವ ಬಲಿ ಯಾಗುವುದು ನೋಡುತ್ತಿರುವ್ಯಮಾತಾ ಗಿದೆ. ಇಂತಹ ಲಂಗು—ಲಗಾಮಿಲ್ಲದ ಉತ್ಸಾಹವು ಹಾದಿತಪ್ಪಿ ಮುಂದೆ ಎಳೆತನ ದಲ್ಲೇ ಅಧೋಗತಿಯ ಜೀವನಕ್ಕೆ ನಾಂ ದಿಯಾಗುತ್ತದೆ. ಚುನಾವಣೆಯ ಹೆಸರಲ್ಲಿ ಇಂದು ಇಕ್ಕಡೆಯವರೂ ಹುಡುಗರ ಮೂಲಕ ತಮ್ಮ ಬಾಯ ಚಪಲವನ್ನು, ಹೃದಯ ವಿಷವನ್ನು, ವಿರೋಧಿಗಳ ಸೆಣ ಸಾಟವನ್ನು ತೀರಿಸಿಕೊಳ್ಳುತ್ತಾರೆ. ಇವರೆ ದುಷ್ಟ ಮನೋವೃತ್ತಿಗೆ ಮುಂಬಾಲಕರು —ಹುಡುಗರು. ಹುಡುಗರ ಮನೋವೃ ುವನ್ನು ಸಂಕುಚಿತಗೊಳಿಸಿ, ಅವರ ನಿ ರ್ಮಲ ಚಿತ್ತದಲ್ಲಿ ದ್ವೇಷದ ವಿಷ ಬಿತ್ತಿ, ಅವರಲ್ಲಿ ಸಂಗಡ-ಮನೋಭಾವ ಬೆಳೆಸಿ ಜನಾಂಗದ ಐಕಮತ್ಯವನ್ನು ಸಡಿಲುಗೊ ಳಿಸುವ ಪಾಪ ಇಂದು ರಾಜಕೀಯ ಪಕ್ಷ ಗಳಿಂದಾಗುತ್ತಿದೆ. ಚುನಾವಣಾ ವೇಳೆ ಶಾಲೆ ಬಿಟ್ಟು ಬಳಿಕ ಹುಡುಗರು ವಿರೋ ಧಿ ಪಕ್ಷದ ಬಗ್ಗೆ ಅಶ್ಲೀಲ ಬೈಯ್ಯುವುದು, ಅವರ ಭಿತ್ತಿ ಪತ್ರ ಮಲಿನಗೊಳಿಸುವುದು, ಅವರ ಮನೆ ಅಥವಾ ಪಂಗಡದ ಮುಂ ಭಾಗದಲ್ಲಿ ಗೇಲಿ ಮಾಡುವುದು, ಆ ಪಕ್ಷೀ ಯ ಹುಡುಗರ ಗುಂಪಿನೊಂದಿಗೆ ಕಾದಾ ಟ ನಡೆಸುವುದು ಸಾಮಾನ್ಯವಾಗಿದೆ. ಇದು ಹಿರಿಯರ ದುಷ್ಪ್ರೇರಣೆಯು ಫಾಲಿಯಾಗಿದೆ. ಇಂದು ತಮ್ಮ ಸ್ವಾರ್ಥ ಸಾಧನೆಗಾ ಗಿ ನಿಷ್ಕಳಂಕ ಹೃದಯದ ಎಳೆಯರನ್ನು 'ಧೂ' ಬಿಟ್ಟು ಜಿಂದನೋಡುವ ಹಿರಿಯ ರು ತಮ್ಮ ಕೈಯಿಂದಲೇ 'ಮುಂದಿನ ಜ ನಾಂಗ'ದ ಭವಿತವ್ಯಕ್ಕೆ ವಾರಕಠಾರಿಗುತ್ತಿ ದ್ದಾರೆ. ಇದು ಪೇಶಾಚಿಕ ಮನೋಭಾವ ವೆಂದು ಕಠಿಣ ಶಬ್ದಗಳಿಂದ ಖಂಡಿಸಿದರೆ ತಪ್ಪಾಗಲಾರದು.

ಚುನಾವಣಾ ಮೆರವಣಿಗೆಗಳಲ್ಲಿ ಕಿರಿ ಯರಿಗೇ ಅಗ್ರಸ್ಥಾನ. ಶಾಲೆಗೆ ಸಂಬಂಧ ಪಟ್ಟವರು ತಾವು ಬೆಂಬಲಿಸುತ್ತಿರುವ ಪ ಕ್ಷದ ಮೆರವಣಿಗೆಗಾಗಿ ಹುಡುಗರನ್ನು ಕ ಡ್ಡಾಯವಾಗಿ ಬಾಹೇಳಿ, ಅವರನ್ನು ಚು ನಾವಣೆಯ ಮೆರವಣಿಗೆಗೋ, ಘೋಷ ಣೆಗಳನ್ನು ಹಾಕಲಿಕ್ಕೂ ನಿರ್ಬಂಧಿಸಿದ್ದುಂ ಟು. ಇದನ್ನು ಪ್ರತ್ಯಕ್ಷ ಪ್ರಮಾಣದಲ್ಲಿ ನಿರ್ದಾಕ್ಷೀಕರಿಸಲು ಅಸಾಧ್ಯವಾದರೂ, ಈ ಸತ್ಯವು ಜನಜನಿತ ವಿಚಾರವಾಗಿದೆ. ಇದನ್ನು ಯಾವ ರೀತಿ ತಡೆಗಟ್ಟಬಹುದು? ಚುನಾವಣಾ ಕಾಯಿದೆಯಲ್ಲಿ ಕಿರಿಯರನ್ನು ಉಪಯೋಗಿಸುವ ಕುರಿತು ನಿರ್ಬಂ ಧದ ಶಾಸನ ಮಾಡೋಣವೆಂದರೆ ನಾಗರಿ ಕ ಹಕ್ಕಿನ ಪ್ರಶ್ನೆ ಮುಂದೆ ಬರಬಹುದು.

ಇದು ಕಿರಿಯರ ಎಳೆ ವ್ಯಕ್ತಿತ್ವದಲ್ಲೇ ಇಂತಹ ಹೊಲಸು ರಾಜಕಾರಣದ ವಿರು ದ್ಧ ಜಿಗುಪ್ಸೆ ಮೊಳೆಯಬೇಕು. ಎಳೆಯ ರು ಜಾಗೃತರಾಗಬೇಕು. ತಮ್ಮನ್ನು ರಮಿ ಸಿ, ತಮ್ಮನ್ನು ಭ್ರಮಿಸಿ, ಇಲ್ಲದ ಆಮಿಷ ತೋರಿಸಿ ತಮ್ಮ ಕಾರ್ಯ ಸಾಧನೆಗಾಗಿ ಕುರಿಗಳಂತೆ ಹೇಗೆ ಬೇಕೋ ಹಾಗೆ ಉ ಪಯೋಗಿಸುವ ಶಾಲಾ ಮೇನೇಜರರ, ಉ ಪಾಧ್ಯಾಯರ ಹಾಗೂ ಪಕ್ಷೀಯ ವ್ಯಕ್ತಿಗ ಳ ಬಗ್ಗೆ ಎಚ್ಚರಾಗಬೇಕು. ಅದಕ್ಕಾಗಿ

(೧೨ನೇ ಪುಟ ನೋಡಿರಿ)

SEASON DEPOSITS

ಸೀಸನ್ ಠೇವಣಾತಿಗಳು

ಸೇ. 4% ದರ ಬಡ್ಡಿಯಲ್ಲಿ ಸೀಸನ್ ಠೇವಣಾತಿಗಳನ್ನು ಈಗ ಸ್ವೀಕರಿಸಲಾಗುವುದು.

ದೊಡ್ಡ ಡಿಪೊಜಿಟು ಮೊಬಲಗುಗಳಿಗೆ ಸ್ಪೆಶಲ್ ಬಡ್ಡಿ ದರಗಳು.

ಹೆಚ್ಚಿನ ವಿವರಗಳಿಗೆ ನಮ್ಮನ್ನು ವಿಚಾರಿಸಿರಿ.

ದಿ ವಿಜಯ ಬೇಂಕ್ ಲಿಮಿಟೆಡ್

ಪ್ರಧಾನ ಕಛೇರಿ ಮತ್ತು ಶಾಖೆಗಳು.

ಜುಮ್ಲಾ ಸಂಪತ್ತು (31—12—1956) ರೂಪ್ಯಾ 1 ಕೋಟಿಗೂ ಮಿಕ್ಕಿದೆ.

ನಾಣ್ಯ ಪದ್ಧತಿಯ ಪರಿಷ್ಕಾರ

ನಯಾ ಪೈಸಾವು ಪ್ರಗತಿಯ ಪ್ರತೀಕ

ಪ್ರಜೆಗಳಿಗೆ ಅತ್ಯಧಿಕ ಪ್ರಯೋಜನವನ್ನು ಈ ನಾಣ್ಯ ನೀಡಬಲ್ಲುದು

ನಮ್ಮ ದೇಶದಲ್ಲಿ ೧೯೫೭ರ ಏಪ್ರಿಲ್ ೧ರಿಂದ ಹೊಸ ನಾಣ್ಯಗಳು ಚಲಾವಣೆಗೆ ಬರುವುವು. ರೂಪಾಯಿಯ ನುಲ್ಯವನ್ನು ಯಾವ ರೀತಿಯಿಂದಲೂ ಬದಲಾಯಿಸದೆ, ಭಾರತದಲ್ಲಿ ದಶಮಾಂಶ ನಾಣ್ಯ ಪದ್ಧತಿಯನ್ನು ಈ ಹೊಸ ನಾಣ್ಯಗಳು ಬಳಕೆಗೆ ತರುವುವು. ಅದೇ ಸಮಯದಲ್ಲಿ ಈಗಿನ ಪದ್ಧತಿಯಲ್ಲಿರುವ ಕೆಲವು ವ್ಯತಿಕ್ರಮ (ಅನಾಮಲಿ)ಗಳನ್ನೂ ಅವು ಕೊನೆಗಾಣಿಸುವುವು.

'ರೂಪಾಯಿ' ನಾಣ್ಯವನ್ನು ಈಗ ೧೬ ಆಣೆಗಳನ್ನಾಗಿಯೂ, ಪ್ರತಿ ಆಣೆಯನ್ನು ೪ ಕಾಲಾಣೆಗಳನ್ನಾಗಿಯೂ, ಪ್ರತಿ ಕಾಲಾಣೆಯನ್ನು ೩ ಕಾಸುಗಳನ್ನಾಗಿಯೂ ವಿಭಾಗಿಸಲಾಗಿದೆ. ಆದರೆ ಈಗಿರುವ ವಸ್ತುಗಳ ಬೆಲೆಗಳ ಮಟ್ಟಗಳಿಗೆ ಹೋಲಿಸಿದಾಗ ಕಾಸಿನ ಬೆಲೆಯು ತೀರಾ ಕಡಿಮೆಯೆನಿಸುವುದು.

ನಮ್ಮ ನಿತ್ಯ ಜೀವನದಲ್ಲಿ ಸಣ್ಣ ಸುಟ್ಟ ವ್ಯವಹಾರದಲ್ಲಿಯೂ ಕಾಸನ್ನು ಉಪಯೋಗಿಸಲಾಗುತ್ತಿಲ್ಲ. ವಾಸ್ತವವಾಗಿ, ೧೯೪೬ರಿಂದೀಚೆಗೆ ಟಂಕಸಾಲೆಯಲ್ಲಿ ಕಾಸನ್ನು ತಯಾರಿಸಿಯೇ ಇಲ್ಲ; ಅದು ಚಲಾವಣೆಯಿಂದಲೂ ಅದೃಶ್ಯ ಗೊಂಡಿರುವುದು.

ನಮ್ಮ ತರುಣರಲ್ಲಿ ಒಂದು ಕಾಸನ್ನು ನೋಡಿರುವವರ ಸಂಖ್ಯೆಯೂ ಕಡಿಮೆ. ವಾಸ್ತವವಾಗಿ ಚಲಾವಣೆಯಲ್ಲಿರುವ ಸಣ್ಣ ನಾಣ್ಯವೆಂದರೆ ಕಾಲಾಣೆ, ಅಥವಾ ರೂಪಾಯಿಯ ೬ಳನೇ ಒಂದುಭಾಗ ಅನುಭವದ ಬಳಕೆಯಲ್ಲಿ ಕಾಲಾಣೆಯೇ ಹೆಚ್ಚಾಗಿ ಬೇಕಾಗುತ್ತದೆ. ಜನನಿಬಿಡ ಗ್ರಾಮಾಂತರ ಪ್ರದೇಶಗಳಲ್ಲಿ, ಜನಭರಿತ ನಗರಗಳಲ್ಲಿ, ಬಸ್ಸು ಮತ್ತು ಟ್ರಾಮುಗಳಲ್ಲಿ ಜನಸಾಮಾನ್ಯರ ಉಪಯೋಗಕ್ಕೆ ಬರುತ್ತಿರುವುದೆಂದರೆ ಕಾಲಾಣೆಯ ನಾಣ್ಯವೇ. ಒಂದು ಕಾಸಿನ ನಾಣ್ಯವು ಚಲಾವಣೆಯಿಂದ ದೂರವಿದೆ. ಅದು ತನ್ನ ಪಾತ್ರವನ್ನು ವಹಿಸುತ್ತಿದೆ ಎಂದಾದರೆ, ದರಗಳನ್ನು ಗೊತ್ತು ಮಾಡುವವರು, ಲೆಕ್ಕಾಚಾರ ಮಾಡುವ ಕಾರಕೂನರು ಮುಂತಾದವರ ಮಧ್ಯದಲ್ಲಿ ಮಾತ್ರ. ಆದು ಪುಸ್ತಕದಲ್ಲಿ ಮತ್ತು ಪಾಪಲೆ ಪತ್ರಗಳಲ್ಲಿ ಮಾತ್ರ ಉಳಿದಿರುವ ಒಂದು ನಾಣ್ಯವಲ್ಲದೆ ವ್ಯವಹಾರದಲ್ಲಿ ಅದಕ್ಕೇನೂ ಸ್ಥಾನ ಈಚೆಗೆ ಕೆಲವು ವರ್ಷಗಳಿಂದ ಲಭಿಸಿದ್ದಿಲ್ಲ.

ಕಾಸು ಜನತೆಯ ಹಾಗು ಕಾಲದ ತೀರ್ಮಾನದ ವಿರುದ್ಧವಾಗಿ ಲೆಕ್ಕಪತ್ರಗಳಲ್ಲಿ ತನ್ನ ಸ್ಥಾನ ಮಾನವನ್ನು ಭದ್ರಪಡಿಸಿಕೊಂಡಿದೆ. 'ಉಳುವವನಿಗೆ ಜಮೀನು' ಎಂಬುದಕ್ಕೆ ಸಮನಾದ ಪ್ರಮುಖ್ಯವನ್ನು ನಯಾ ಪೈಸಾಗೆ ಕೊಡಲಾಗಿದೆ. ಅತಿ ಹೆಚ್ಚಾಗಿ ಚಲಾವಣೆಯಲ್ಲಿರುವ ನಯಾ ಪೈಸಾಗೆ ರೂಪಾಯಿಯ ಪಕ್ಕದಲ್ಲಿ ಸ್ಥಾನ ಕೊಡಲಾಗಿದೆ. ರೂಪಾಯಿಗೂ ನಯಾ ಪೈಸಾಗೂ ಮಧ್ಯೆ ಯಾವ ಮಧ್ಯಂತರ ನಾಣ್ಯಗಳೂ ಇರುವುದಿಲ್ಲ.

ಆಣೆ, ಲೆಕ್ಕಪತ್ರಗಳ ಕ್ಷೇತ್ರದಲ್ಲಿ ಜಮಾ ನುದಾರನಂತೆ ಅದೃಶ್ಯವಾಗುತ್ತದೆ. ನಯಾ ಪೈಸಾದ ಸಂಬಂಧವನ್ನು ನೇರವಾಗಿ ಸರಳ ರೀತಿಯಲ್ಲಿ ಮುಖ್ಯ ನಾಣ್ಯವಾದ ರೂಪಾಯಿಯೊಂದಿಗೆ ಸೇರಿಸಲಾಗಿದೆ. ೧೦೦ ನಯೇ ಪೈಸೆಗಳು ಒಂದು ರೂಪಾಯಿ ಕಾಸು, ಆಣೆಗಳು ಅದೃಶ್ಯವಾಗುವುದಕ್ಕೆ ಮೂರು ವರ್ಷಗಳ ಕಾಲವನ್ನೀಯಲಾಗಿದೆ. ನಮ್ಮ ಪರಂಪರೆಗನುಸಾರವಾಗಿ ಆ ನಾಣ್ಯಗಳಿಗೆಲ್ಲ ಪೂರ್ಣ ಪರಿಹಾರವನ್ನು ನಯೇ ಪೈಸೆಗಳಲ್ಲಿ ಕೊಡಲಾಗುವುದು.

ಪರಿಹಾರದ ಪ್ರಮಾಣವನ್ನು, ನಮ್ಮ ಪಾರ್ಲಿಮೆಂಟ್ ಅಂಗೀಕರಿಸಿರುವಂತೆ, ಸರ್ಕಾರದವರು ಪರಿವರ್ತನೆ ಪಟ್ಟಿ (ಕನ್ವರ್ಷನ್ ಟೇಬಲ್)ಯ ರೂಪದಲ್ಲಿ ಪ್ರಕಟಿಸುವರು. ಸಾರ್ವಜನಿಕರಿಗಾಗಿ ಅದನ್ನು ಹೆಚ್ಚಿನ ಪ್ರಮಾಣದಲ್ಲಿ ಪ್ರಚಾರಕ್ಕೆ ತರಲಾಗಿದೆ. ಆಗಿಂದಾಗ್ಗೆ ವೃತ್ತ ಪತ್ರಿಕೆಗಳು ಆವುಗಳನ್ನು ತಮ್ಮ ಪುಟಗಳಲ್ಲಿ ಪ್ರಕಟಿಸುತ್ತಿವೆ. ಜಿಲ್ಲರೆ ವ್ಯವಹಾರಗಳಿಗೆ ಕೋಷ್ಟಕವು ಉಪಯೋಗಕ್ಕೆ ಬರುವುದಾದರೂ ಸಾರ್ವಜನಿಕರು ನಾಲ್ಕಾಣೆಯನ್ನು ೨೫ ನಯೇ ಪೈಸೆಗಳಿಗೆ ಪರಿವರ್ತಿಸಿಕೊಳ್ಳ ಬಹುದೆಂಬುದನ್ನು ಗಮನದಲ್ಲಿಟ್ಟುಕೊಂಡಿರಬೇಕು. ಅವೇ ಈಗ ಹೊಸ ಮತ್ತು ಹಳೆಯ ಪದ್ಧತಿ ನಾಣ್ಯಗಳಿಗೆ ನಡುವಿನ ಕರಾರು ವಾಕ್ಕಾದ ವಿನಿಮಯ ಸೂತ್ರವಾಗಿರುವುದು. ಸಾಮಾನ್ಯ ವ್ಯವಹಾರಗಳಲ್ಲಿ ಹಳೆಯ ಎರಡು ಕಾಲಾಣೆಗಳು ಮೂರು ನಯಾ ಪೈಸಾಗಳಿಗೆ ಸಮನೆಂದು ಪರಿಗಣಿಸಬಹುದು.

ಹಳೆಯ ಪದ್ಧತಿಯ ೨ ಕಾಲಾಣೆಗಳನ್ನು ೩ ನಯಾ ಪೈಸಾಗಳೆಂದು ಅಥವಾ ಒಂದಾಣೆಗೆ ೬ ನಯಾ ಪೈಸಾಗಳೆಂದೂ ಪರಿಗಣಿಸಿದರೆ, ಸಣ್ಣ ಪುಟ್ಟ ವ್ಯವಹಾರಗಳಲ್ಲಿ ಆಗುವ ಲಾಭ ಅಥವಾ ನಷ್ಟ ಅತ್ಯಲ್ಪವೆನ್ನಬಹುದು. ಜಂಗಡಿಯವರು ಮತ್ತು ಕೊಳ್ಳುವ ಜನರ, ತಮ್ಮ ಅನುದಿನದ ವ್ಯವಹಾರದಲ್ಲಿ ನಾಲ್ಕಾಣೆಗಿಂತ ಕಡಿಮೆ ನಾಣ್ಯಗಳ ವಿಷಯ ಬಂದಾಗ ಒಂದಾಣೆಗೆ ೬ ನಯಾ ಪೈಸಾಗಳೆಂದು ಅಂಗೀಕರಿಸಿದರೆ ಯಾವ ರೀತಿಯ ಪರಿವರ್ತನೆಯ ತೊಡಕೂ ಇರುವುದಿಲ್ಲ. ಅನುದಿನದ ಮಾರುವ ಹಾಗೂ ಕೊಳ್ಳುವ ವ್ಯವಹಾರವು ದ್ವಿಮಾರ್ಗ ವ್ಯವಹಾರವಾಗಿರುವುದರಿಂದ ಒಂದು ವ್ಯವಹಾರದಲ್ಲಿ ಆದ ನಷ್ಟವನ್ನು ಇನ್ನೊಂದು ವ್ಯವಹಾರದಲ್ಲಿ ಭರ್ತಿ ಮಾಡಿಕೊಳ್ಳಲು ಸಾಧ್ಯ.

ನಯಾ ಪೈಸಾ ನಾಣ್ಯವು ಮೌಲ್ಯದಲ್ಲಿ ಈಗಿನ ನಾಣ್ಯಕ್ಕಿಂತಲೂ ಕಡಿಮೆಯಿದ್ದು, ಮುಖ್ಯವಾಗಿ ಬಡವರ್ಗದವರಿಗೆಹೆಚ್ಚು ಉಪಯುಕ್ತವಾಗಿರುವುದು. ಒಂದು ಉದಾಹರಣೆಯಿಂದ ಇದನ್ನು ಸ್ಪಷ್ಟಪಡಿಸಬಹುದು. ಆದರೆ ಈಗ ಕಾಲಾಣೆಯು ಚಲಾವಣೆಯಲ್ಲಿ ಕಾಣಸಿಗದ ಕಾಸಿನ ಮೂರು ನಾಣ್ಯಗಳನ್ನು ಕೊಂದಿರುವುದು ಪ್ರತಿಯೊಬ್ಬ ರೋಗಿಗೂ ಒಬ್ಬ ದಾಯಿಯಿರುವರೆಂದು ಹೇಳಿದ ಆಸ್ಪತ್ರೆಯಲ್ಲಿ ವಸ್ತುತಃ ಮೂವರಿಗೊಬ್ಬ ದಾಯಿಯನ್ನು ಒದಗಿಸಿದಂತಿರುವುದು. ಈಗ, ಪ್ರತಿ ರೋಗಿಗೂ ಒಬ್ಬ ದಾಯಿಯ ಅಗತ್ಯ ವಿಲ್ಲದಿರಬಹುದು. ರೋಗಿಗಳಿಗೆ ಆರೈತಿಯಲ್ಲಿ ನಿಕಟ ಶುಶ್ರೂಷೆಯ ಅಗತ್ಯವಿಲ್ಲದಿರಬಹುದು. ಆದ್ದರಿಂದ ದಾಯಿಯರು ಹೆಚ್ಚು ಸಮಯದಲ್ಲಿ ಸೇವಾನಿರತಳಾಗಿರಲು ಸಾಕು. ಅದೂ ಅಲ್ಲದೆ, ಅಗತ್ಯವಾದುದಕ್ಕಿಂತ ಹೆಚ್ಚು ದಾಯಿಯರು, ಅನಗತ್ಯ ಆತಂಕ ತೊಂದರೆಗಳನ್ನೂ ಕೊನೆಯಿಲ್ಲದ ವೆಚ್ಚವನ್ನೂ ಉಂಟುಮಾಡಬಹುದು.

ಆದಕ್ಕೆ ಬದಲು ಮೂವರು ರೋಗಿಗಳಿಗೆ ಒಬ್ಬರು ದಾಯಿಯರು ಸಾಲದೆಂದೂ, ರೋಗಿಗಳ ಕಡೆಗೆ ಅಗತ್ಯ ಗಮನವನ್ನು ಕೊಡಲು ಇಚ್ಛಿಸುವ ರೋಗಿಗಳಿಗೆ ಒಬ್ಬ ದಾಯಿ ಬೇಕಾಗುವುದೆಂದೂ ನಮ್ಮ ಅನುಭವದಿಂದ ತಿಳಿದುಕೊಳ್ಳ ಬಹುದು. ಆದ್ದರಿಂದ ಈ ಪುನರ್ವ್ಯವಸ್ಥೆಯಿಂದ ನಾವು ಎಲ್ಲವನ್ನೂ ಸಾಧಿಸಬಹುದು. ನಮ್ಮ ನಾಣ್ಯ ಪರಿವರ್ತನೆಯು ಇದನ್ನೇ ಹೋಲುವುದು, ಹೊಸ ದಾಯಿಯನ್ನು, ಅಂದರೆ, ನಯಾ ಪೈಸಾವನ್ನು ಅಬರಣಿಗೆ ತರುವುದರಿಂದ, ಹಿಂದಿನ ಕೆಲಸದ

(೧೦ನೇ ಪುಟನೋಡಿರಿ)

ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಣೆಮಾಡುವುದು
ಪ್ರತಿಯೊಬ್ಬರ ನೆಚ್ಚಿನ ಆಸೆ

* *

ಮೈಸೂರು
ಸ್ಯಾಂಡಲ್ ಸಾಬೂನು

ನಿಮ್ಮ ಸೊಬಗನ್ನು ಕಾಪಾಡಲು ವೃದ್ಧಿಮಾಡಲು
ಒಂದು ನಿಶ್ಚಿತ ಸಾಧನ

ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ ಇದರಲ್ಲಿ ಸೇರಿಸಲಾಗಿದೆ.
ಒಮ್ಮೆ ಉಪಯೋಗಿಸಿ ನೋಡಿ

ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ದೊರೆಯುತ್ತದೆ

* *

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು
ಮೆಂಬರು: ಐ. ಎಸ್. ಟಿ. ಎಂ. ಎ.



ಸಮಸ್ಯೆಗೆ ಮದ್ದು

ಸಾಶ್ಚಾತ್ಯರು ಬುದ್ಧಿಯನ್ನು ತಿದ್ದಿಕೊಂಡರೆ ಕಾಶ್ಮೀರ ಪ್ರಶ್ನೆ ಕ್ಷಣಮಾತ್ರದಲ್ಲಿ ಬಿಡಿಸಲ್ಪಟ್ಟೀತು— ಈಗಿನ ಕುರುಡು ಧೋರಣೆಯಿಂದಲ್ಲ

ಭರತ ಖಂಡವನ್ನು ತೊರೆದು ಆಂಗ್ಲರು ತೊಲಗಿದರೇನೋ ಹೌದು. ಆದರೆ ಅವರು ಬಂದು ಮಹಮ್ಮದೀ ಜನತೆಯ ಮನಸ್ಸೆ ಎಷಬೀಜವೊಂದನ್ನು ಬಿತ್ತಿ ಹೋಗಿದ್ದಾರೆ. ಆ ಬೀಜವೇ ಜಾತೀಯತೆ. ಇದೇ ಭರತ ಖಂಡದ ವಿಭಜನೆಗೆ ಕಾರಣವಾದದ್ದು. ಇದರ ಮೂಲಕ ಅವರೇ (ಆಂಗ್ಲರೇ) ಈ ಎರಡು ರಾಷ್ಟ್ರಗಳಿಗೆ ಸಮಸ್ಯೆಯೊಂದನ್ನು ಬಿಟ್ಟುಹೋಗಿದ್ದಾರೆ. ಅದೇ ಕಾಶ್ಮೀರದ ಸಮಸ್ಯೆ. ಭದ್ರತಾ ಸಮಿತಿಯಲ್ಲಿ ಇದರ ಕುರಿತಾಗಿ ನಡೆದ ವಾದ ವಿವಾದ ಗಳಲ್ಲಿ ಬ್ರಿಟನ್, ಅಮೇರಿಕಗಳೇ ಮೊದಲಾದವ ಮಹಾ ರಾಷ್ಟ್ರಗಳು ಪಾಕಿಸ್ತಾನದ ಬೆಂಬಲಕ್ಕೆ ಮುಂದಾಗಿ ಚತುರ್ರಾಷ್ಟ್ರಗಳ (ಬ್ರಿಟನ್, ಅಮೇರಿಕ, ಕ್ಯೂಬಾ, ಆಸ್ಟ್ರೇಲಿಯಾ) ನಿರ್ಣಯದ ಮೂಲಕ ತಮ್ಮ ಕುತಂತ್ರದ ಸಾಧನೆಗೆ ಯತ್ನಿಸಿದುವು. ಆದರೆ ರಶ್ಯದ ಪ್ರತಿನಿಧಿ ಮಿ। ಆರ್ಕ್ ಡಿಸೊಜೋರೇವರು ವಿಶೇಷ ಅನುತಾಧಿಕಾರ (Veto) ಪ್ರಯೋಗದಿಂದ ಈ ಕುತಂತ್ರದ ನಿರ್ಣಯವನ್ನು ವಿಫಲ ಗೊಳಿಸಿ ಭಾರತದ ಪಾಲಿಗೊದಗುತ್ತಿದ್ದ ಮಹದನ್ಯಾಯವನ್ನು ತಪ್ಪಿಸಿದರು.

ಪಾಶ್ಚಾತ್ಯರು ಪಾಕಿಸ್ತಾನಕ್ಕೆ ಬೆಂಬಲವಿತ್ತು, ಹಿಂದಿನಿಂದಲೂ ಭಾರತದ ಅವನತಿಯ ಕಡೆಗೆ ಅಶಾದೃಷ್ಟಿಯಿಂದ ನೋಡುತ್ತಿದ್ದಾರೆ. ಕೆಲವು ತಿಂಗಳುಗಳ ಹಿಂದೆ ಬ್ರಿಟನು ಸುಯೇಜ್ ಪ್ರದೇಶದ ಮೇಲೆ ಆಕ್ರಮ ದಾಳಿಯಿಟ್ಟಾಗ ಭಾರತವು ಆದರ ದುರ್ನೀತಿಯನ್ನು ಖಂಡಿಸಿದುದರ ಪರಿಣಾಮವಾಗಿ ಅದು ಕಾಶ್ಮೀರ ಪ್ರಶ್ನೆಯಲ್ಲಿ ಪಾಕಿಸ್ತಾನದ ಸಹಕಾರಿಯಾಯಿತು. ಅಲ್ಲದೇ ಹಂಗೇರಿಯಲ್ಲಿ ರಶ್ಯದ ಹಸ್ತಕ್ಷೇಪ ನಡೆದಾಗ ಭಾರತವು ಆರ್ಧಂಬರ್ಧ ರಶ್ಯನ್ ಸಹಕಾರಿ ಧೋರಣೆಯನ್ನು ತಳೆದಿತು. ಇದುವಂದಾಗಿ ಅಮೇರಿಕನರು ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಪಾಕಿಸ್ತಾನ ಪಕ್ಷಪಾತಿಯಾದರು. ಕಾಶ್ಮೀರದ ಸಮಸ್ಯೆಯಲ್ಲಿ ಭಾರತದ ಧೋರಣೆಯ ವಿರೋಧಕ್ಕೆ ಕಾರಣವಾವುದೇ ಈ ಒಳಗುಟ್ಟು! ಅಂದ ಮೇಲೆ ನ್ಯಾಯಕ್ಕೆ ಬೆಲೆಯೇ ಇಲ್ಲವೇ? ಸುಯೇಜ್‌ನ ಮೇಲೆ ಆಕ್ರಮಣ ನಡೆದಾಗಲೇ, ಭಾರತದ ಹಲವೆಡೆಗಳಲ್ಲಿ-ಕಾಮನ್‌ವೆಲ್ತ್‌ನ್ನು ಭಾರತವು ತ್ಯಜಿಸಬೇಕೆಂದು ಕೂಗು ಕೇಳಿಬಂದಿತ್ತು. ಈಗಲೂ ಬ್ರಿಟನ್ನು ಕಾಶ್ಮೀರದ ಮೇಲಿನ ತನ್ನ ನಿಲುವಿನಿಂದ ತನ್ನ ಸಾಮ್ರಾಜ್ಯಶಾಹಿತನವನ್ನು ಪ್ರದರ್ಶಿಸುತ್ತಿದೆ.

ಬ್ರಿಟನಿನ ಎಡಪಕ್ಷದ ಕೂಲಿಕಾರ ಮುಖಂಡ ಮಿ। ಎನ್ಯೂರಿನ್ ಬೇವಾನ್ ತಮ್ಮ ಪಕ್ಷದ ಸಾಪ್ತಾಹಿಕ 'ಟ್ರಿಬ್ಯೂನಿ'ನ ಅಗ್ರ ಲೇಖನದಲ್ಲಿ ಕಾಶ್ಮೀರದ ಕುರಿತಾದ ತನ್ನ ಸ್ಪಷ್ಟ ಧೋರಣೆಯನ್ನು ಹೊರಗೆಡವಿದ್ದಾರೆ. ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸಲೋಸುಗ ಅಲ್ಲಿ ಸಾರ್ವತ್ರಿಕ ಮತಗಣನೆ ನಡೆಸುವುದು ಅಸಫಲ ಶ್ರಮವೆಂದು ಅವರು ಖಡಾಖಂಡಿತವಾಗಿ ನುಡಿದಿದ್ದಾರೆ. ಜನಮತಗಣನೆಯಿಂದಾಗಿ ಹಿಂದೆ ರಾಷ್ಟ್ರದ ವಿಭಜನೆಯ ಕಾಲದಲ್ಲಿ ನಡೆದಂತೆ ಜಾತೀಯ ಗದ್ದಲ ನಡೆಯಲೂಬಹುದೆಂದು ಅವರು ಎಚ್ಚರಿಕೆಯನ್ನಿತ್ತಿದ್ದಾರೆ. ಹಾಗಾಗಬಾರದೆಂದರೆ ಕಾಶ್ಮೀರದ ಸಮಸ್ಯೆ ಅಂಗ್ಲರೆದುರು ಸರಿಯಾಗಿ ಮಂಡಿಸಲ್ಪಡಲಿಲ್ಲವೆಂದು ಅವರ ಅಭಿಪ್ರಾಯ. ಸಂಯುಕ್ತ ರಾಷ್ಟ್ರಸಂಘದ ನಿಯಮೋಲ್ಲಂಘನೆ ಮಾಡಿತೆಂದು ಭಾರತವನ್ನು ದೂರುವ ಪಾಕಿಸ್ತಾನವು, ತಾನೇ ಹೇಗೆ ಸಂ. ರಾ. ಸಂಘದ ಶರ್ತಗಳನ್ನು ಅತಿಕ್ರಮಿಸಿ ವರ್ತಿಸಿತೆಂಬುದನ್ನು ಮಿ। ಬೇವಾನ್ ಎತ್ತಿ ತೋರಿಸಿದ್ದಾರೆ. ಭಾರತವಲ್ಲಿ ಧರ್ಮನಿಷ್ಪಕ್ಷತೆಯಿದ್ದಂತೆಯೇ ಪಾಕಿಸ್ತಾನದಲ್ಲಿ ತದ್ವಿರುದ್ಧ ಸ್ಥಿತಿಯಿರುವುದು 'ಟ್ರಿಬ್ಯೂನ್'ನ ಅಗ್ರಲೇಖನದಿಂದ ತಿಳಿದು ಬರುತ್ತದೆ. ಹಾಗೂ ಹಿಂದಿನ ಈ ಜಾತೀಯತಾ ಭಾವನೆಯನ್ನು ಕೆರಳಿಸುವುದರಿಂದ ಪಾಕಿಸ್ತಾನವು ಸಾರ್ವತ್ರಿಕ ಮತಗಣನೆಯಲ್ಲಿ ವಿಜಯಿಯಾಗಲಾರದ ; ಕಾಶ್ಮೀರವನ್ನು ವಶಪಡಿಸಿಕೊಳ್ಳುವುದಾದರೆ ಬಲಾತ್ಕಾರವೊಂದೇ ಅದಕ್ಕೆ ಉಳಿದ ಹಾದಿ. ಹಾಗೂ "ಜನಮತದಂತೆ ಕಾಶ್ಮೀರದ ಭವಿಷ್ಯದ ನಿರ್ಧಾರವಾಗಲಿ ಎನ್ನುವ ಹುಯಿಲೆಬ್ಬಿಸುವ ಪಾಕ್ ಪ್ರಭೃತಿಗಳು ತಮ್ಮ ಜನಮತದಂತೆ ವರ್ತಿಸಿದುದುಂಟೆ!" ಎಂಬುದು ಬೇವಾನರ ಮುಖ್ಯ ಪ್ರಶ್ನೆ. ಆದರೆ ಇದನ್ನು ಬ್ರಿಟನು ಸರಿಯಾಗಿ ವಿಚಾರಿಸಿದಂತೆ ಕಾಣುವುದಿಲ್ಲ. ಅಲ್ಲದೇ ಕೆಲವು ತಿಂಗಳುಗಳ ಹಿಂದೆ ಭಾರತವನ್ನು ಸಂದರ್ಶಿಸಿದ ಬ್ರಿಟನಿನ ಕೂಲಿಕಾರ ಪಕ್ಷದ ಮಾಜಿ ಪ್ರಧಾನಿ ಕ್ಲೆಮೆಂಟ್ ರಿಚರ್ಡ್ ಎಟ್ಲಿಯವರು ಕಾಶ್ಮೀರದ ಕುರಿತಾದ ತಮ್ಮ ಸ್ಪಷ್ಟ ಅಭಿಪ್ರಾಯವನ್ನು ಹೊರಗೆಡವಿದ್ದಾರೆ "ಕಾಶ್ಮೀರವು ಪ್ರಜಾ ಪ್ರಭುತ್ವ ತತ್ವಗಳಿಗನುಗುಣವಾಗಿ ಭಾರತದೊಡನೆ ವಿಲೀನವಾಗಿದೆ"ಯೆಂದು ಎಟ್ಲಿಯವರು ಘೋಷಿಸಿದ್ದಾರೆ. ಆದರೆ ಎಟ್ಲಿಯವರ ಅಭಿಪ್ರಾಯಕ್ಕೆ ಕನ್ಸರ್‌ವೇಟಿವ್ ಸರಕಾರ ಯಾಕೆ ಮಾನ್ಯತೆಯನ್ನೀಯುವುದಿಲ್ಲ? ಎಡಪಕ್ಷದವರ ಮಾತನ್ನು ಏನೊಂದೂ ವಿವೇಚಿಸದೇ ಸಂಪೂರ್ಣವಾಗಿ ತಿರಸ್ಕರಿಸುವುದು ಬ್ರಿಟನಿನಂತಹ ಪ್ರಜಾಪ್ರಭುತ್ವವಾದೀ ಸರಕಾರಕ್ಕೆ ಭೂಷಣವೇ? ಕಾಶ್ಮೀರದ ಪ್ರಶ್ನೆಯು ವಿಚಾರದಲ್ಲಿ ಏನೊಂದೂ ವಿಮರ್ಶೆ ನಡೆಸದೇ ಅನೈತಿಕ ಫ್ರಾನ್ಸ್‌ಗಳ ವಿದೇಶ ಮಂತ್ರಿಗಳೊಡನೆ ಬ್ರಿಟನು ವಿಚಾರ ವಿನಿಮಯಮಾಡಿ, ಜಕ್ರಾರ್ತಾಸ್ಥ ನಿರ್ಣಯದ ಮೂಲಕ ಅದು ತನ್ನ ಭಾರತ ವಿರೋಧಿ ಧೋರಣೆಯನ್ನು ಸ್ಪಷ್ಟಪಡಿಸಿತು. ಎಂತಹ ಅನ್ಯಾಯ! ನ್ಯಾಯಾನ್ಯಾಯಗಳ ವಿವೇಚನೆ ಮಾಡದೇ, ಭಾರತದ ಪ್ರತಿನಿಧಿಯ ಅಭಿಪ್ರಾಯವನ್ನು ಕೇಳದೇ ತನ್ನ ನಿರ್ಣಯವನ್ನು ಹೊರಗೆಡಹಿದ ಬ್ರಿಟನಿನ ಹಾಗೂ ಅದರ ಬೆಂಬಲಿಗ ರಾಷ್ಟ್ರಗಳ ಉದ್ದಟತನ ಎಷ್ಟಕ್ಕೂ ನ್ಯಾಯಸಮ್ಮತವಾಗದು. ಕಾಶ್ಮೀರದಲ್ಲಿ ಜನಮತದಂತೆ ಅದರ ಭವಿಷ್ಯ ನಿರ್ಧಾರವಾಗಬೇಕೆಂದು ಹೇಳುವ ಆಂಗ್ಲ ಸರಕಾರೀ ನೇತೃಗಳು ಸೈಪ್ರಸ್ಸಿನಲ್ಲಿ ಜನಮತಗಣನೆ ನಡೆಸಲು ಒಪ್ಪುವರೇ?

ಕಾಶ್ಮೀರ ಸಮಸ್ಯೆಯ ಪರಿಹಾರಕ್ಕೆ ಜಾರಿಂಗರ ರಾಯಭಾರ ಸಹಾಯಕವಾಗಬಹುದೆಂದು ಪಾಕಿಸ್ತಾನದ ಬೆಂಬಲಿಗರ ಆಸೆ. ಹಾಗೂ ರಾಯಭಾರದ ಪ್ರಥಮ ಅಂಗನಾಗಿ ಜಾರಿಂಗರು ಪಾಕಿಸ್ತಾನಕ್ಕೆ ಆಗಮಿಸಿದ್ದಾರೆ. ಆದಾಗ್ಯೂ ಜಾರಿಂಗ್ ರಾಯಭಾರದಲ್ಲಿ ಸ್ವತಹ ಪಾಕ್ ನಾಯಕರಿಗೇ ನಂಬಿಕೆವಿದೆ, ಭರವಸೆವಿದೆ. ಜಾರಿಂಗರು ರಾಯಭಾರ ನಡೆಸಿದಲ್ಲಿ ಅದೊಂದು ಸಫಲಯತ್ನವಾಗದೆಂದೆಣಿಸಿದರೂ, ಭಾರತವು ಅವರಂತಹ ಗೌರವಾನ್ವಿತ ವ್ಯಕ್ತಿಗೆ ಗೌರವಪೂರ್ವಕವಾದ ಸ್ವಾಗತ ನೀಡಿ, ತನ್ನ ಸ್ಪಷ್ಟ ನಿಲುವಿನಿಂದ ಅವರೊಡನೆ ವಿಚಾರ ವಿನಿಮಯ ನಡೆಸುವುದು.

ಬ್ರಿಟನಿನಿಂದ ಶಸ್ತ್ರ ಸಹಾಯವನ್ನು ಪಡೆದುಕೊಂಡು, ಅದಕ್ಕೇ ವಿರುದ್ಧವಾಗಿ ವರ್ತಿಸುವುದೆಂದು ಭಾರತದ ಮೇಲೆ ಪಾಕಿಸ್ತಾನದ ವಿದೇಶ ಮಂತ್ರಿ ನೂರ್ ಖಂಜುಕಾರುದ್ದಾರೆ. ಆದರೆ ಭಾರತವು ಪಾಕಿಸ್ತಾನದಂತೆ ಪರಾಶ್ರಯಕ್ಕಗಿ ಬೆದರಿಕೆಯು ಹಿಡಿತಕ್ಕೆ ಸಿಕ್ಕಿ ಬೀಳದೆ ನ್ಯಾಯ ಮಾರ್ಗವನ್ನು ಶರಣ ಮಾಡಿದೆಯೆಂಬುದು ಶಚಿವರು ತಿಳಿದಿಲ್ಲವೆಂದು ಕಾಣುತ್ತದೆ. 'ಕಾಲಕ್ಕೆ ತಕ್ಕ ಕೋಲ' ನಡೆಸುವ ಪಾಕ್ ಪ್ರಭೃತಿಗಳು ಸುಯೇಜಿನ ಕಾಲುವೆಯ ಮೇಲೆ ಆಕ್ರಮಣ ನಡೆದಾಗ ಮೊದಲು ಆಕ್ರಮಣಕಾರಿ ರಾಷ್ಟ್ರ ಬ್ರಿಟನನ್ನು ಖಂಡಿಸಿದ್ದರು. ಆನಂತರ ಪಾಕ್ ಪ್ರಧಾನಿಯ ಸಂಪರ್ಕನಕ್ಕೆ ಐಸೆನ್‌ಹೌರ್ ಸರಕಾರ ಹಾಗೂ ಅಂತರಾಷ್ಟ್ರೀಯ ವಲಯದಲ್ಲಿ ಪಾಕ್ ಸೈನಿಕರ ಇರುವಿಕೆಗೆ ಐಗುಪ್ತದ ವಿರೋಧದಿಂದ ಪಾಕ್ ಸರಕಾರವು ಧೋರಣೆ ಬದಲಾಯಿತೆ! ಅದು ಬ್ರಿಟನಿನ ಪಕ್ಷಕ್ಕೆ ಧಾವಿಸಿ, ಸಂದರ್ಭಕ್ಕೆ ಸರಿಯಾಗಿ ಬಣ್ಣ ಬದಲಾಯಿಸುವ ಓಕಿಯ ನೆನಪು ಹುಟ್ಟಿಸಿತು!

ಈಗಿನ ಯುದ್ಧಾಪಾಯದ ಆಣು ಯುಗದಲ್ಲಿ ತಟಸ್ಥ ಧೋರಣೆಯೆಂಬುದು ಮೂರ್ಖತನವೆಂದು ಪಾಕ್ ಪ್ರಧಾನಿ ಅಲಾಪಿಸಿ, ಪರೋಕ್ಷವಾಗಿ ಭಾರತಕ್ಕೆ ಚುಚ್ಚು ಮಾತನಾಡಿದ್ದಾರೆ. ಭಾರತದ ತಟಸ್ಥ ನೀತಿಯಿಂದ ಪಾಕಿಸ್ತಾನಕ್ಕೆ ಕೆಡಕುಂಟಾಯಿತೇ? ಆದರೆ ಪಾಕಿಸ್ತಾನವಂತೆ ಭಾರತವು ಪರಕೀಯರಿಂದ ಗುಪ್ತ ಶಸ್ತ್ರ ಸಹಾಯವನ್ನು ಪಡೆದು, ಸೇನಾ ಬಣಗಳಲ್ಲಿ ಸೇರಿಕೊಂಡು ತನ್ನ ಸಹೋದರ ರಾಷ್ಟ್ರದ ಮೇಲೆ ಕೈಮಾಡಲ್ಲಿಸಿಲ್ಲವಷ್ಟೆ! ಇದನ್ನೆಲ್ಲ ಮನಗಂಡಿದ್ದೂ, ಪಾಶ್ಚಾತ್ಯರು ಪಾಕಿಸ್ತಾನಕ್ಕೆ ಬೆಂಬಲವೀಯುತ್ತಿರುವುದು ವಿಷಾದನೀಯ ಇಷ್ಟಿ ನಾವೊಂದು ಮಾತನ್ನು ನೆನಪಿಗೆ ತಂದೇಕಾಗುತ್ತದೆ. ಅದೇನೆಂದರೆ—ನೆಹರೂರ ಜೀಳಕೆಯಂತೆ—"ಜವಾಹರನು ಮಗ್ಗಾಲೂರುವುದನ್ನು ಕಂಡು ಆನಂದಿಸಬೇಕೆಂಬ ಪಾಶ್ಚಾತ್ಯರ ಬಯಕೆ. ಆಹಾ! ನೆಹರೂರವರೆ ಅವನತಿ ಪಾಶ್ಚಾತ್ಯರಿಗೆಷ್ಟೊಂದು ಆನಂದ ದಾಯಕ ಕಂಗತ! ಆದರೆ ನೆಹರೂರವರಂತಹ ಶಾಂತಿ ದೂತನು ಸಫಲ ವಿಜಯಿಯಾಗಿ, ಚಿರಾಯುವಾಗಿ ಬಾಳಬೇಕೆಂಬುದಾಗಿ ಭಾರತದ ಜನತೆ ಭಗವಂತನಿಗೆ ಪ್ರಾರ್ಥನೆ ಸಲ್ಲಿಸುತ್ತದೆ.

"ಕಾಶ್ಮೀರವು ಭಾರತದ ಅವಿಭಾಜ್ಯ ಅಂಗ; ಜಗತ್ತಿನ ಯಾವ ಶಕ್ತಿಯೂ ಕಾಶ್ಮೀರದ ಜನತೆಯ ನಿರ್ಣಯವನ್ನು ತಡೆಗಟ್ಟಲಾರದು" ಸತ್ಯಕ್ಕೆ ಜಯವಾಗಲಿ!

-ಶ್ರೀ ಎಸ್. ರಘುನಂದನ ರಾವ್, ತಲ್ಲೂರು.

ಸೂಚನೆ

'ನವಯುಗ'ದ ಜಂಟಿ ಪಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇತರ ಯಾವುದೇ ಶಾಖೆಯಲ್ಲಿ ಯಾವತ್ತೊಂದು ತರೆದ ಖಾತೆಗೆ ಇಲ್ಲವೆ (ನವಯುಗ ವಾರಪತ್ರಿಕೆಯ ಖಾತೆಗೆ) ಪಾವತಿ ಮಾಡಬಹುದು.

ಮೆನೇಜರ್.

ರುಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/S; ½ ರಾತಲಿಗೆ ರೂ. 1/15

ಇ. ಕನ್ನಡವ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ.

ವಿವರವಾವ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ,
ಮದ್ರಾಸ್—3.



ಸುಲಭದಲ್ಲಿ ಭವಿಷ್ಯಕಥನ

ಹದಿಮೂರನೆ ಶತಮಾನದ ಕವಿಯ ಸೂಚನೆಗಳು

ರಟ್ಟಮತ ಒಂದು ಹಳೆಗನ್ನಡ ಗ್ರಂಥ, ಪದ್ಯರೂಪದಲ್ಲಾಗಿರುವದು. ಇನೀನೇ ಶತಕದಲ್ಲಿ ಬರೆಯಲ್ಪಟ್ಟದ್ದು. ಬರೆದವನ ಹೆಸರು ಮಾಚಯ್ಯ, ವೈಸೂರು ಪ್ರಾಂತದವ ರಟ್ಟನೆಂಬ ಹೆಸರೂ ಇರುವದು ಇದು ಸಂಹಿತಾ ಗ್ರಂಥ ಶಾಖೆಗೆ ಸೇರಿದ್ದು. ದಿವ್ಯಜ್ಞ ಶಾಸ್ತ್ರದಲ್ಲಿ ೩ ಮುಖ್ಯ ಶಾಖೆಗಳು 'ಸ್ಕಂದತ್ರಯಾತ್ಮಕಂ ಜ್ಯೋತಿಷಂ ಹೋರಾ ಸಿದ್ಧಾಂತ ಸಂಹಿತಾ' ಹೋರಾ ಯೆಂದರೆ ಜಾತಕ ಶಾಸ್ತ್ರ ಸಿದ್ಧಾಂತ ವೆಂದರೆ ಗಣಿತ ಗ್ರಂಥಗಳು ಸೂರ್ಯ ಸಿದ್ಧಾಂತ ತಾಸ್ಕರ ಸಿದ್ಧಾಂತ ಮೊದಲಾದವುಗಳು. ಸಂಹಿತಾ ಎಂದರೆ ಮೇದಿನೀ ಜ್ಯೋತಿಷ ಮಳೆ ಬೆಳೆಗಳ ಭವಿಷ್ಯ ದೇಶ ವಿದೇಸಗಳ ಭವಿತವ್ಯವನ್ನು ಸೂಚಿಸುವ ಗ್ರಂಥಗಳು.

ವರಾಹಮಿಹಿರನ ಬೃಹತ್ಸಂಹಿತೆ ಭದ್ರ ಬಾಹುವಿನ ಸಂಹಿತೆ ನಾರದನ ಸಂಹಿತೆ ಇವು ಮುದ್ರಿತವಾಗಿರುವವು. ರಟ್ಟಮತವನ್ನು ಪ್ರಕಟಿಸಿದವರು ಮದ್ರಾಸ ಒರಿಯೆಂಟಲ್ ಲಾಯಬ್ರರಿಯವರು. ಸಂಪಾದಕರಾದ ಶೇಷ ಅಯ್ಯಂಗಾರರು ರಟ್ಟಮತದ ಪ್ರಸ್ತಾವನೆಯಲ್ಲಿ ರಟ್ಟಮತಕ್ಕೆ ಆಧಾರಭೂತವಾದ ವರಾಹಸಂಹಿತೆ ದೊರಕುವದಿಲ್ಲವೆಂದು ಹೇಳಿದ್ದಾರೆ. ಇದೊಂದು ಆಶ್ಚರ್ಯ. ವರಾಹಮಿಹಿರನ ಬೃಹತ್ ಸಂಹಿತೆ ಬನಾರಸದಲ್ಲಿ ಮುದ್ರಿತವಾಗಿ ಹಲವು ವರ್ಷಗಳಾದವು. ರಟ್ಟನು ತನ್ನ ಗ್ರಂಥಕ್ಕೆ ಆಧಾರ ಭೂತವಾದ ಇನ್ನು ಕೆಲವು ಸಂಹಿತೆಗಳನ್ನು ಹೇಳಿರುವನು. ರತ್ನೋಜ್ವಲ ಧನ ಕೀರ್ತಿ, ನವಕೀರ್ತಿ ವರಾಹಮಿಹಿರ ಗಾರ್ಗ್ಯ ಕಪಿಲ ಪಿಂಗಳ-ವರಾಹ ಮಿಹಿರ ಭದ್ರಬಾಹುವಿನ ಸಂಹಿತೆಗಳು ಈಗ ಉಪಲಬ್ಧವಾಗಿವೆ.

ಸಂಸ್ಕೃತದಲ್ಲಿ ವರ್ಷಪ್ರಬೋಧವೆಂಬ ಗ್ರಂಥವಿರುವದು. ಅದು ಇದೇ ವಿಷಯವನ್ನು ಬೋಧಿಸುವದು. ಅದನ್ನು ರಟ್ಟಮತವೆಂದೇ ಕರೆವರು. ಅದಕ್ಕೂ ಇದಕ್ಕೂ ಏನಾದರೂ ಸಂಬಂಧವುಂಟೇನೋ. ನವಕರ್ನಾಟಕದಲ್ಲಿ ಸಂಶೋಧಿಸಬೇಕಾದ ಮಹಾನುಭಾವರು ಸಂಶೋಧನಾತ್ಮಕ ಪ್ರಕಾಶವನ್ನು ಬೀರಬೇಕು. ಇರಲಿ.

ರಟ್ಟಮತವು ಉಪಯುಕ್ತ ಗ್ರಂಥ. ಹಳೆಯಕಾಲದಲ್ಲಿ ಇಲ್ಲಿಯ ಕೆಲವು ವಾತುಗಳನ್ನು ಬಲ್ಲವರು ಹಳ್ಳಿಯ ಒಕ್ಕಲಿಗರಲ್ಲಿಯೂ ಇದ್ದರು. ಈಗ ಈ ಜ್ಞಾನವು ಲುಪ್ತವಾಗುತ್ತ ನಡೆದಿದೆ. ಇಂದಿನ ನವಯುಗದಲ್ಲಿ ಹಳೆಗನ್ನಡದಲ್ಲಿದ್ದ ಈ ಗ್ರಂಥವು ಹಳ್ಳಿಯ ಜನರಿಗೆ ತಿಳಿಯದು. ಕಾರಣ ಈ ಬಗ್ಗೆ ಕೆಲಮಟ್ಟಿಗಾದರೂ ಪರಿಚಯ ಮಾಡಿಕೊಟ್ಟ ಸೂರ್ಯ ಕವಿಯ ಋಣವನ್ನು ತೀರಿಸಬೇಕು. ಮಳೆಬೆಳೆಯ ಭವಿಷ್ಯ ಜ್ಞಾನವು ಹಳ್ಳಿ [illegible]

ಮಧ್ಯಾಸ ಒರಿಯೆಂಟಲ್ ಲಾಯಬ್ರರಿಯವರು ಇಂತಹ ಗ್ರಂಥಗಳನ್ನು ಬೆಳಕಿಗೆ ತಂದು ಸ್ತುತಿಗೆ ಪಾತ್ರರಾಗಿರುವರು. ಅವರು ತಾವೇ ಗ್ರಂಥಗಳನ್ನು ಪ್ರಕಟಿಸಹತ್ತಿರುವರು.

ವರಾಹಮಿಹಿರಾಚಾರ್ಯರು ಹೇಳಿದ ವಿಷಯಗಳೇ ಪ್ರಾಯಶಃ ಇಲ್ಲಿ ತೋರಿ ಬರುವವು. ವರಾಹಮಿಹಿರಾಚಾರ್ಯರು ಮುಂದಿನ ವರ್ಷದ ಬೆಳೆಯ ಬಗ್ಗೆ ಹೇಳುವಾಗ 'ಅಶ್ವತ್ಥಃ ಸರ್ವ ಸಾಸ್ಯಾನಾಂ' ಅರಳೀ ಗಿಡವು ಚೆನ್ನಾಗಿ ಸ್ನಿಗ್ಧವಾಗಿ ಛಿದ್ರವಿಲ್ಲದ ಎಲೆಗಳಿಂದ ಕೂಡಿ ಬೆಳೆದ ವರ್ಷ ಎಲ್ಲ ಬೆಳೆಗಳು ಸರಿಯಾಗಿ ಬರುವವೆಂದು ಹೇಳಿರುವರು. ಜೈತ್ರಮಾಸದಲ್ಲಿ ಈ ವರ್ಷ ಚೆನ್ನಾಗಿತ್ತು. ಅರಳೀ ಮರವನ್ನು ನೀವೇ ನೋಡಿರಿ. ಸ್ಥಾನಿಕ ಭವಿಷ್ಯಕ್ಕೆ ಈ ಮಾತುಗಳು ಉಪಯುಕ್ತವಾಗಿವೆ. ಇಲ್ಲಿ ಗಣಿತದ ಶ್ರಮವಿಲ್ಲ. ರಟ್ಟನು ಜೋರಾಧ್ಯಾಯದಲ್ಲಿ ಈ ವಿಷಯವನ್ನು ವಿವರಿಸಿರುವನು.

ಅರಳೆಯ ಶೋಭೆಯುಂ ಸಕಲ ಧಾನ್ಯ ಮನಿಂಗುಳದಿಂ ಸಣಂಬುನುಜ್ಜಳಪದಿರ್ಮ್ಮತ್ತೆ ಪಲ್ತಗಳನೇರಿಳೆವಾಳೆಯ ಪೆಚ್ಚು ಗುಂಜೆಯಂ। ತಳರದೆ ಬಯ್ಸಿ ಮಿಕ್ಕಗಸೆಯಂ ಬೆಳೆಯಿಪ್ಪದು ಕೃಷ್ಣೆ (ಕೆಂಪು) ವರ್ಣದಿಂತೊಳಗುವ ಶೋಭೆ ಹೊಂಬೆಸರನೊಪ್ಪುವ ಹಾಲಿಯ ಗ್ರಂಥ ಶಾಲಿಯಂ ॥

ರಟ್ಟನು ಭೂಜಾತ ಫಲ ನಿಮಿತ್ತವನ್ನು ಚೆನ್ನಾಗಿ ವಿವರಿಸಿರುವನು ಇದನ್ನೆಲ್ಲ ಇಂದಿನವರು ಪರೀಕ್ಷಿಸಿ ನೋಡಬೇಕು. ಇದರಿಂದ ನಿರೀಕ್ಷಣೆಯ ಪಾಠಪ್ರಾ ಪಾಠ ಕರಿಗೆ ದೊರಕುವದು ಅರುಣವಾದ ಅಶೋಕವು (ಅಸುಗೆ) ಚೆನ್ನಾಗಿ ಸ್ನಿಗ್ಧವಾಗಿ ಶೋಭಿಸಿದರು ತೋರಿದಲ್ಲಿ ೮ ವರ್ಷ ಕಳವೆ (ಭತ್ತ) ಬೆಳೆಯುವದು. ಅಶದ ಗಿಡವು ಸ್ನಿಗ್ಧವಾಗಿ ಅರುಣ್ಣವಾಗಿ ತೋರಿದಲ್ಲಿ ನೆಜ್ಜೆಮು ಆ ವರುಷ ಭರದಿಂದ ಬೆಳೆಯುವದನ್ನು ಸೂಚಿಸುವದು. ಸಿರಿಸಲು ಹೆಸರಿನ ಭವಿಷ್ಯ ಸೂಚಕವಾಗಿರುವದು. ಇಪ್ಪೆ ಮರವು (ಮಧೂಕ) ಗೋದಿಯ ಭವಿತವ್ಯವನ್ನು ಸೂಚಿಸುವದು. ನೇರಿಲವು ಎಳ್ಳು, ಉದ್ದು ಬೆಳೆವುದನ್ನು ಸೂಚಿಸುವದು. ಫಲ್ಗುತಕದಿಂದ (ಕೇರು) ತೊಗರಿ ಬೆಳೆಯುವದು.

. ಬಸರೀಗಿಡವು ಸಮೃದ್ಧವಾಗಿ ತೋರಿದಲ್ಲಿ ಅಶ್ವಗಳ ಅಭಿವೃದ್ಧಿ; ಬಾಳೆ ಗಿಡದಿಂದ ಕುರಿಗಳ ಹೆಚ್ಚಳವನ್ನು ಊಹಿಸಬೇಕು. ಹಸ್ತಿ ಕರ್ಣದಿಂದ ಅನೆಗಳಿಗೆ ಕ್ಷೇಮ. ಪಾದರಿಯು ಅಕಳುಗಳ ಕ್ಷೇಮಕ್ಕೆ ಕಾರಣವಾಗುವದು. ಆರುಣೋತ್ಪಲಗಳು ರಾಜನ ಉನ್ನತಿ ಸೂಚಕ. ನೈದಿಲೆ ವ್ಯಾಪಾರಿ ವರ್ಗಕ್ಕೆ ಉನ್ನತಿಯನ್ನುಂಟು ಮಾಡುವವು.

ಮಾವು ಬರೆ ನವಣೆ ಬೆಳೆಗುಂ।
ಜೇವಿನೊಳೆಳ್ಳಕ್ಕುಮಂತೆ ಹು(ಪ್ಪು)ಣಿಸಿಗ ಳೊದವೆಂ–
ಭಾವಿಸೆ ನೆಲ್ಲುಂ ಬೆಳಗು ಮ (ಬೆಳೆ)
ದಾ (ಯಾ)ವುದು ಮೆಕ್ಕೆ ಯೊಳೆ ಬೆಳಗು
ಮೊಪ್ಪಿನ ರಟ್ಟಾ।

ಮಾವಿನ ಗಿಡವು ಸ್ನಿಗ್ಧವಾಗಿ ಸಚ್ಛಿದ್ರವಾದ ಎಲೆಗಳಲ್ಲದೆ ತೋರಿದಲ್ಲಿ ೮ ವರುಷ ನವಣೆ ಬೆಳೆಯುವದು. ಜೇವಿನ ಗಿಡವಾಗ ಚೆನ್ನಾಗಿ ತೋರಿದಲ್ಲಿ ಎಳ್ಳು ಬೆಳೆಯುವದು.

ಅಡವಿಯ ಗಿಡಗಳು ಹೂವಾಗಿ ಕಾಯಾಗಿ ಚೆನ್ನಾಗಿ ಬೆಳೆದಲ್ಲಿ ಭೂಮಿಗೆ ಸುಭಿಕ್ಷವೆಂದು ಊಹಿಸಬೇಕು.

ಯಾವತಾ ಕೋದಂಡಾ ಮೇಘಾಃ
ಯಾವಚ್ಚಂದ್ರಸೂರ್ಯೌ ರವಿಃ ॥
ಯಾವನ್ನೈಋತಿ ಕೋವಾಯುಃ
ತಾವದ್ವೋವೋ ನವರ್ಷಕಃ॥

ಇದೇ ಪದ್ಯದ ರಟ್ಟನ ಅನುವಾದವನ್ನು ನೋಡಿರಿ.

ದಿವಸಪತಿ ದೀಪ್ತಿಗೆಟ್ಟಂ ಸುವಿನವೋ
ಲಿರೆಳೆನಾಳಿ ಕಾಗೆಯು ಬಸಿರಂ। ದವನೊ
ಳಕೊಂಡಿರೆಯುಂ ತೀಡುವ ಪವನಂ ನಿ
ಮಿತಿಯೊಳಗೆ ಮಳೆಯಿಲ್ಲೆಂದಂ ॥

ಸೂರ್ಯನು ಚಂದ್ರನಂತೆ ನಿಸ್ತೇಜನಾಗಿರುವ ವರೆಗೆ ಕಾಗೆಯ ಹೊಟ್ಟೆಯ ಬಣ್ಣವ ಮೋಡಗಳಿರುವ ವರೆಗೆ ನೈಋತ್ಯದ ಗಾಳಿ ಬೀಸುವ ವರೆಗೆ ಮಳೆಯಾಗುವದಿಲ್ಲವೆಂದು ತಿಳಿಯಬೇಕು.

ಜಳಜಸಖಬಿಂಬವತ್ಯುಜ್ಜಲಮಪ್ಪೊ
ಡೆ ನಾಯು ಪವನನೊಳ್ ಬೀಸುವಡೆಂ
ಜಳಜಂಗುಳ ರುಚಿ ನಿರ್ಮೂಲ ಮೆಲ್ಲೊ
ಡೆ ಅಧಿಕ ವೃಷ್ಟಿಯಕ್ಕುಂ ರಜ್ಜಾ ।

ಸೂರ್ಯಬಿಂಬವು ಅತ್ಯುಜ್ಜ್ವಲವಾಗಿ ಥಳಥಳಿಸಬೇಕು ಹಂಚದ ಉವರಿದಂತೆ ಮೋಡಗಳ ಬಣ್ಣ ವಿರಬೇಕು. (ಹೆಂಸೊದರೊ ಮೇಘಃ) ಉತ್ತರ ದಿಕ್ಕಿನ ಗಾಳಿ ಮಳೆಗೆ ಅನುಕೂಲವಾದವುಗಳೆಂದು ರಟ್ಟನು ಹೇಳುವನು.

ಜ್ಯೇಷ್ಠಮಾಸದ ಹುಣ್ಣಿಮೆಯ ದಿವಸ ಸಪ್ತಮ ದಿಕ್ಕಿನಲ್ಲಿ ಕೊರಡು ಸೂಡಿದರೆ ಬರದ ಲಕ್ಷಣ.

ಶಬ್ದಾನುಶಾಸನ ಕಾರನಾದ ಭಟ್ಟಾಕಲಂಕನು ತನ್ನ ಶಾಸನದಲ್ಲಿ ಉದಾಹರಣೆ ಕೊಡುವಾಗ: ಜರಕ್ಕೆ ಬೆಳ್ಳಂಡು ಕಪ್ಪೆಯ ಚಂಡಿಕೆ ಎಂದು ಉದಾಹರಿಸಿರುವನು. ಇದು ರಟ್ಟನಂತಹ ನಿಮಿತ್ತಜ್ಞರ ಮತ. ಕಾಗೆ ಬಿಳಿದಾಗಿ ತೋರಿದಲ್ಲಿ ರಾಜ್ಯಾಯಲ್ಲಿ ಇಂದ್ರಜಾಪವು. ತೋಂದರೆ ಕಪ್ಪಿಗೆ ಜೊಂಡಿಕೆ ತೋರಿದಲ್ಲಿ ಅನಾವೃಷ್ಟಿಯ ಲಕ್ಷಣ. ವಧ್ಯ ರಾತ್ರಿಯಲ್ಲಿ ಮೂಡಿದ ಧೂಮಕೇತು ಅರಳರಿಗೆ ಅನಿಷ್ಟ ಸೂಚಕ "ಉತ್ಪಾತ ಇವಲೋಕಾನಾಂ ಧೂಮಕೇತು ರಿವೋತ್ಥಿತಃ"–ಕಾಳಿದಾಸ)

ಸೂರ್ಯ ಚಂದ್ರರಿಗೆ ಹಸಿರು ಬಣ್ಣದ ಪರಿವೇಷವುಂಟಾಗಲ್ಲಿ ಮಳೆಯಾಗುವದು. ಉಳದ ಬಣ್ಣದ ಪರಿವೇಷಗಳು ಭಯವನ್ನುಂಟುಮಾಡುವವು. ಕೆರೆ ಕಟ್ಟುವದು ಋಣಕಟ್ಟುವದು ಎಂದು ಒಕ್ಕಲಿಗರಲ್ಲಿ ಶಬ್ದಗಳು ರೂಢವಾಗಿರುವವು. ಸೂರ್ಯ ಚಂದ್ರರಿಗೆ ಇನೀ ಯಾಮದಲ್ಲಿ ಉಂಟಾವ ಪರಿವೇಷವು ವೃಷ್ಟಿಗೆ ಕಾರಣವಾಗುವದೆಂದು ಹೇಳುವರು. ಇನೀ ಯಾಮದಲ್ಲಿ ರೋಗಕ್ಕೆ ಕಾರಣವಾಗುವದು. ಇನೀ ೩ನೀ ಯಾಮಗಳ ಅರ್ಥವು ಸ್ಪಷ್ಟವಾಗುವಂತೆ ಪದ್ಯವು ಇಲ್ಲಿ ಮುದ್ರಿತವಾಗಿಲ್ಲ. "ಎರಡುಂ ಮೂರುಂ ನಾಲ್ಕುಂ ಸರಿನೇಸುಂ ಚಂದ್ರಸೂರ್ಯರುಂ ಬಳಸಿ ನಿಲಲ್ ಪಿರಿಯ ಮಳೆಯು ಕ್ಕುಂ ಅಲ್ಲದೊಡೆ ಅರಕುಗಳೊಂ ಕೊಡು ತಪ್ಪು ಅಪ್ಪಂದಾ ಗಾ"

ನಮ್ಮ ಯಾವತ್ತೂ ಗ್ರಾಹಕರಿಗೆ

ರಂಗಭೂಮಿಯ ನಟನಟಿಯರಿಗೆ ಬೇಕಾಗುವ ಜರಿ ಶಾಲು, ಜರಿ ಜಲ್ಲರಿ, ಜರಿ ರವಳಿ, ಇತ್ಯಾದಿ ಜರಿ ಖಚಿತ ಪೋಷಾಕುಗಳೂ ಜೋಪನ್, ಪಾಗೂ ಇತರ ಕಾಣಿತ, ನರ್ತನ ವಿವಿಧ ಪಲ್ಲಟಧಾರಿಗಳಿಗೆ ಬೇಕಾಗುವ ಸರ್ವ ವಿಧದ ಪೋಷಾಕುಗಳೂ ದೊರಿಯುತ್ತವೆ.



ಇಂದೇ ನವಿವರ ಕ್ರಯದ ಪಟ್ಟಿಗೆ ಬರೆಯಿರಿ:

DHARAMSHI MULJI, DRESSWALA,
132–C. Bhagatwadi, Bhuleshwar Road BOMBAY-2

ಚಂದ್ರ ಸೂರ್ಯರ ಪರಿವೇಷವು ಬಿಳಿ ಬಣ್ಣದಿದ್ದರೆ ಮಳೆಯಿಲ್ಲ.

ಗುರುವಿಗೆ ಪರಿವೇಷ ಕಟ್ಟಿದಲ್ಲಿ ಬ್ರಾಹ್ಮಣರಿಗೆ ಅನಿಷ್ಟ. ಶುಕ್ರನಿಗೆ ಉಂಟಾದರೆ ಮಳೆಯ ಅಭಾವ. ಬುಧನಿಗೆ ಪರಿವೇಷ ಉಂಟಾದರೆ ಬಾಲಕರಿಗೆ ಹಾನಿ. ಮಂಗಳನಿಗೆ ಪರಿವೇಷ ಕಟ್ಟಿದಲ್ಲಿ ಬರ, ಶನಿಗೆ ಪರಿವೇಷ ಕಟ್ಟಿದಲ್ಲಿ ಸಟ್ಟಿಬದ್ಧರು ಉಡುಳುವರು.

ಶ್ವೇತವರ್ಣದ ಇಂದ್ರಚಾಪದಿಂದ ಬ್ರಾಹ್ಮಣರಿಗೆ ಅಳಿಗಾಲ. ಅರುಣ ವರ್ಣದ ಇಂದ್ರಚಾಪದಿಂದ ಕ್ಷತ್ರಿಯರಿಗೆ, ಕಳದೀ ಬಣ್ಣದಿಂದ ವೈಶ್ಯರಿಗೆ, ಕಪ್ಪು ವರ್ಣದಿಂದ ಶೂದ್ರರಿಗೆ ಹಾನಿ. ಪಶ್ಚಿಮ ದಿಕ್ಕಿನಲ್ಲಿ ಮಿಂಚು ಮಿಂಚಿ ಕೂಡಲ್ಲ ಇಂದ್ರಚಾಪವು ಹುಟ್ಟಿದಲ್ಲಿ ಮಳೆಗಾಲ ಚೆನ್ನಾಗಿರುವದೆಂದು ಭಾವಿಸಬೇಕು.

ವಾಜಾಯು ಕಪಿಲಾ ವಿದ್ಯುತ್ ಆತಾ
ಪಾಯಾತಿ ರೋಹಿಣಿ |
ಪೀತಾವರ್ಷಾಯ ವಿಜ್ಞೇಯಾ
ಮರ್ಘಕ್ಷಾಯ ಸಿತಾಭವೇತ್

ಮಿಂಚಿನ ಬಣ್ಣ ಕವಿಲಾದೊಡೆ ಗಾಳಿಯಕ್ಕುಂ ಮಿಂಚಿನ ಬಣ್ಣ ಮರುಣವಾದೊಡೆ ಡಾಮರಮಕ್ಕುಂ (ಕೆಂಪು ಬಣ್ಣದಿಂದ ಬಿಸಿಲು ಹೆಚ್ಚಾಗುವದೆಂದು ಮೂಲದಲ್ಲಿರುವದು.) ಬಂಗಾರದ ಹಳದೀವರ್ಣವಿದ್ದರೆ ಮಳೆಯಾಗುವದು. ಬಿಳಿಯ ವರ್ಣದ ಮಿಂಚುಬರಕ್ಕೆ ಕಾರಣವಾಗುವದು. "ಸಿರಿಸದಗುಳ್ಳದ ಪೂವಿನ ಹರಿಣಾಂಕನ ರುಚಿಯ ಮಿಂಚಿನಿಂದ ಮಳೆ ಕೊಳ್ಳುಂ ವರುಷಂಕೊಳ್ಳವದುಂ" ನೆತ್ತರ ಜೊರಸಿನಸೊಗೆಯ ಭಸ್ಮರುಚಿಗಳ ಮಿಂಚೆಂಬಾರ್ಹಸ್ಪತ್ಯ ವರ್ಷದಿಂದ ಮಳೆ ಬೆಳೆಗಳು ಶಾಲಿವಾಹನಶಕದ ೬೦ ಸಂವತ್ಸರದ ಪ್ರಭವ ವಿಭವಾದಿ ಹೆಸರುಗಳೇ ಬಾರ್ಹಸ್ಪತ್ಯ ಸಂವತ್ಸರಗಳಿಗೂ ಇರುವವು. ೬೦ ವರ್ಷಗಳಲ್ಲಿ ೧೨ ಭಾಗ ಮೂಡಿಗೆ ವರುಷಗಳ ಒಂದು ಯುಗವೆಂದು ಕಲ್ಪಿಸಿ ಈ ವರುಷಗಳ ಮಳೆ ಬೆಳೆಗಳ ಭವಿಷ್ಯವು ಅತೀವ ಸುಂದರವಾಗಿ ವರಾಹಮಿಹಿರಾಚಾರ್ಯರ ಬೃಹತ್ ಸಂಹಿತೆಯಲ್ಲಿ ಬಣ್ಣಿಸಲ್ಪಟ್ಟಿರುವದು. ಬಾರ್ಹಸ್ಪತ್ಯ ಮಾನದ ಗಣಿತವನ್ನೂ ವರಾಹಮಿಹಿರರೂ ಹೇಳಿರುವರು. ಈ ಬಗ್ಗೆ ಒಂದು ವಿವೇಚನಾತ್ಮಕ ಲೇಖನವೂ ಹೈದರಾಬಾದಿನ ಪ್ರಾಧ್ಯಾಪಕರಾಗಿದ್ದ ಕೃಷ್ಣಮೂರ್ತಿಯವರು ಇನ್ಸ್ಟಿಟ್ಯೂಟ್ ಆಫ್ ಜಾಜಿಕಲ್ ಸೈನ್ಸಸ್ ಮೈಸೂರಿನಲ್ಲಿ ಬರೆದಿದ್ದರು. ಆ ವೇರೆಗೆ ಗಣಿತಮಾಡಿ ಬಾರ್ಹಸ್ಪತ್ಯವರ್ಷಗಳಿಂದ ವರಾಹಮಿಹಿರರ ಫಲಿತವನ್ನು ಯಾರೂ ನಿರೀಕ್ಷಿಸಿದಂತೆ ಕಂಡುಬರುವದಿಲ್ಲ. ಜ್ಯೋತಿರ್ವಿದರು ಈ ಭಾಗವನ್ನು ಪರೀಕ್ಷಿಸಿ ನೋಡಬೇಕು. ರಟ್ಟನು ೭ನೇ ಅಧ್ಯಾಯದಲ್ಲಿ ಇದೇ ವಿಷಯವನ್ನು ವಿವೇಚಿಸಿರುವನು.

ಐದನೇಯ ಯುಗಕ್ಕೆ "ಆದಿ ಸರ್ವಜಿತು ಸರ್ವಜಿತು ಸರ್ವಧಾರಿ ಎರಡು ಶುಭವಾದವು ಉಳಿದ ಮುಂದಿನ ಮೂರು ವರ್ಷ ಬರದುರ್ಮುಖಿ ಕನಿಷ್ಟನುಕ್ಕುಂ ರಟ್ಟಾಆನಂದದೆ ಕರಂ ಸುಭಿಕ್ಷಂ" ಆನಂದಾಬ್ಧಿಯಲ್ಲಿ ೬ನರಿಗೆ ಆನಂದವಾಗುವದು ಸಿಂಗಳಾಬ್ದದಲ್ಲಿ ಮಳೆಯಿಲ್ಲ ಕಳ್ಳರು ಹೆಚ್ಚುವರು ದುಂದುಭಿಸಂವತ್ಸರೋದ್ಗಾರಿಗಳ ಆಂತರಿಕದ ಬಾಧೆ ಅರಸರ ಯುದ್ಧ

(ಭೂಭುಜರಿಂದ)

"ಭಾವಿಸೆ ಕೇಳ್ ರಕ್ತಾಕ್ಷಿಯೊಳ್ ಭೂ
ವಳಯಕೆ ಕಷ್ಟಂ ಸಾವಕ್ಕು ಬೆಳಸುಪರಿ
ದಿಲ್ಲ. ದುರ್ಭಿಕ್ಷತಾವಘಿಕವೆಂದಯ್ಯ
ರಟ್ಟಯ್ಯ"

ನಾವು ಎಣಿಸುವ ಪ್ರಭವ ವಿಭವಾದಿಗಳಲ್ಲ. ಇವು ಇವನ್ನು ಬಾರ್ಹಸ್ಪತ್ಯಮಾನದಿಂದ ಗಣಿತ ಮಾಡಿ ತೆಗೆಯಬೇಕು. ಕೃಷ್ಣಮೂರ್ತಿಯವರು ನಿರ್ದೇಶಿಸಿದಂತೆ ನಮ್ಮಲ್ಲಿಯ ಗಣಿತ ತಜ್ಞರು ಈ ಭಾಗದ ಮೇಲೆ ತಮ್ಮ ಕೃಪಾದೃಷ್ಟಿಯನ್ನು ಚೆಲ್ಲಿ ಸಾಮಾನ್ಯರಿಗೂ ಕೂಡ ತಿಳಿವಂತೆ ಪ್ರಭವವಿಭವಾದಿಗಳನ್ನು ಪ್ರಕಟಿಸಬೇಕು. ಅಂದರೆ ರಟ್ಟನ ಮಿಹಿರರ ಫಲಿತದ ಪ್ರಯೋಜನ ಸಾಮಾನ್ಯರಿಗೂ ತಿಳಿಯುವದು. ನಮ್ಮ ಪ್ರಾಚೀನರ ಎಷ್ಟೋ ಜ್ಞಾನವು ಸುಪ್ತಾವಸ್ಥೆಯಲ್ಲಿರುವಂತೆ ಈ ಬಾರ್ಹಸ್ಪತ್ಯ ವರ್ಷದ ಫಲಿತ ಜ್ಞಾನವೂ ಸುಪ್ತಾವಸ್ಥೆಯಲ್ಲಿರುವದು. ಗಗನಸರ ಸಪ್ತಾನಲ (೩೭೫೦) ಸಂಖ್ಯೆಗಳಿಂದಂ ಕೊಂಡು ಪಡೆದು ವಂಶಕನೊಳ್। ಕೂಡುಗೆ ಬಳಿಕ ರುವತ್ತರಿಂದೆತ್ತುಗೆ ಶೇಷಂ ಭವಭವದೆ ವರ್ಷಂಬಕ್ಕುಂ" ರಟ್ಟನುಗ್ರಹಗಳ ಮಿತಿ ಪ್ರತಿ ಮಿತಿಗಳ ಫಲವನ್ನು ಹೇಳಿರುವನು.

ಬುಧ ಗುರುಪೊಡನಿರೆ ಮಳೆಯತ್ಯಧಿಕಂ ಆದರೆ ಇದ ಲ್ಲಿ ತಾರತಮ್ಯವಿರುವದು. ಬುಧಗುರು ಯುತಿ ಪುಷ್ಕರ (ಮಳೆ) ಗಾಲದಲ್ಲಿ ಆಗಬೇಕು. ಜಲರಾಶಿಯಲ್ಲಿ ಆಗಬೇಕು. ಮಳೆಗೆ ಅನುಕೂಲವಾದ ದಿಕ್ಕು ವಾಯುರಾಶಿ ಕ್ಷುತಿಯಲ್ಲಿ ಆದರೂ ಅನುಕೂಲ. ಈ ಬಗ್ಗೆ ವೆಂಕಟಪ್ರಿಡಿಕ್ಕನ್, ಎಂಬ ಇಂಗ್ಲೀಜಿ ಗ್ರಂಥವನ್ನು ಮಳೆಯ ಭವಿಷ್ಯವನ್ನು ಹೇಳುವವರು ಅವಶ್ಯವಾಗಿ ಅಭ್ಯಾಸ ಮಾಡುವದು ಹೆಚ್ಚು ಒಳ್ಳೆಯದು. ನಮ್ಮ ನವಕರ್ನಾಟಕದ ಭವಿಷ್ಯವನ್ನು ನಿರ್ಮಿಸುವ ಜ್ಯೋತಿರ್ವಿದರು ಅಭ್ಯಾಸ ಮಾಡದೆ ಬಾಯಿಗೆ ಬಂದಂತೆ ಭವಿಷ್ಯವನ್ನು ಹೇಳುವ ಚಟವನ್ನು ಇನ್ನು ಬಿಡಬೇಕು. ಶುಕ್ರಂ ಬುಧನಿಂದಂ ಮುಂದೆ ನಡೆಯೆ ಒಳ್ಳೆಗೆ ಸುಕ್ಕುಂ "ಜಗ್ರೇಯಾತಿ ದಿವೋನಾಥಃ ಪೃಷ್ಠ್ಯಾತೋ ಭೃಗುನಂದನಃ ಮಧ್ಯೇ ಸೋಮಸುತೋ ಯಾತಿ" ರವಿ ಬುಧ ಶುಕ್ರ ಯುತಿ ಚೆನ್ನಾಗಿ ಮಳೆಯನ್ನು ಕೊಡುವದು.

ದೌಗ್ರಹೌನ್ಯಪ ಸಂಕ್ಲೇಷಂ ತ್ರಯೋ ಹಂತಿ ನರಾಧಿಪಂ ಚತ್ವಾರೋ ರಾಜ್ಯನಾಶಾಯ ಹನ್ಯಾತ್. ಪಂಚ ಗತ್ರ್ಯಯಂ ಪಡ್ಗ್ರಹಾಃ ಮಹಾವಾಯುಃ ಸಪ್ತಕಂ ಚಜಲಪ್ಲವಂ।

ಪಾಪಗ್ರಹಗಳಯುತಿ ಅಂಶಾತ್ಮಕವಾಗಿ ಒಂದೇ ರಾಶಿಯಲ್ಲಾದರೆ ಇಂತಹ ಅನರ್ಥ. ಒಂದೇ ರಾಶಿಯಲ್ಲಿ ದೂರ ದೂರ ಇದ್ದರೆ ಅನರ್ಥ ಕಡಿಮೆ. ಜಲರಾಶಿಯಲ್ಲಿ ಯುತಿ ಆತಿ ವೃಷ್ಟಿಗೆ ಕಾರಣ. ಬರಿ ರಾಶಿಯಲ್ಲಿ ಪಂಚಗ್ರಹಗಳು ಕೂಡಿದರೆ ಅನಿಷ್ಟ ಭವಿಷ್ಯ ಹೇಳಬಾರದು.

ತಾರತಮ್ಯ ಜ್ಞಾನವಿಲ್ಲದೆ ಹೋದರೆ ಜ್ಯೋತಿಷಿಗಳು ವಿಡಂಬನೆಗೆ ಪಾತ್ರರಾಗುವರು.

ಶನಿಮಂಗಳ ಯುತಿ ಅನಿಷ್ಟವಾದುದೆಂದು ಎಲ್ಲ ಜ್ಯೋತಿರ್ವಿದರ ಅಭಿಪ್ರಾಯವಿರುವದು ವರಾಹಮಿಹಿರರು "ಯಮಾರಯೋಃ ಪವನಹುತಾ ಶಜಂ ಭಯಂ" ಎಂದು ಹೇಳಿರುವರು. ೧೯೫೮ ಜನವರಿಯಲ್ಲಿ ಸೌರ್ಯ ಧನು ರಾಶಿಯಲ್ಲಿ ಶನಿಮಂಗಳ ಯುತಿಯಾಯಿತು. ಧನು ಭಾಷಾಭವನ ಧನುವಿನ ಅಧಿಕಾರವು ಮಹಾ ರಾಷ್ಟ್ರದ್ದೆಂದು ಅನೇಕರ ಅಭಿಪ್ರಾಯ ಅಂತೂ ಈ ಯುತಿ ಭಾಷಾಕಲಹದಿಂದ ದಂಗೆಗೆ ಕಾರಣವಾದ ಸಂಗತಿ ಎಲ್ಲರಿಗೂ ನೂತನವಾದದ್ದಿರುವದು, ರಟ್ಟನು ಗುರು ಮಂಗಳರ ದೃಷ್ಟಿ ಫಲವನ್ನು ಹೀಗೆ ಬಣ್ಣಿಸುವನು:

ಸೌರಿ ಮಂತ್ರಿ(ಗುರು)ಗಳೋರ್ವರೋರ್ವರನೇಕಚಿತ್ತದೆ ತಮ್ಮ ಕ।
ಣ್ಣಾರೆ ನೋಡುವೊಡಂತೆ ರಾಜ ಕುಮಾರರುಂಶುಭಟಕರ್ಕಳುಂ |
ತೀರೆಗೂಳುವ ಮಗ್ಗುರುಂ ಹಿಮಸೇತು
ಮಧ್ಯದೆ ವೃಷ್ಟಿಸೇಂ-
ಹಾರದಂದಿನೆ ಘೋರದಂತತಿ ಘೋರ
ಮಕ್ಕುಮಿಳಾಗ್ರದೊಳ್ ॥

ಗುರುಮಂಗಳ ಕೇಂದ್ರ ಪ್ರತಿ ಯುತಿಗಳು ಅನಿಷ್ಟವಾದವು. ಮುಖ್ಯವಾಗಿ ಧಾರ್ಮಿಕ ಕಲಹಕ್ಕೆ ಕಾರಣವಾಗುವವು. ಗುರುಮಂಗಳ ಯುತಿ, ಜಲರಾಶಿಯಲ್ಲಾದರೆ ಆತಿವೃಷ್ಟಿ ಮಾಡುವದು. ಇವರಿಬ್ಬರ ಅಶುಭಯೋಗಕ್ಷಾತ್ರವೃತ್ತಿಯ ಬ್ರಾಹ್ಮ ವೃತ್ತಿಯ ಜನರ ದ್ವೇಶಕ್ಕೆ ಕಾರಣವಾಗುವದು. ವಿವರ ಇವರ (Mundan Astrology), ನೋಡಿರಿ.

THE
CANARA INDUSTRIAL & BANKING SYNDICATE LTD.
Estd.: 1925, H. O.: UDIPI, S. India.

GROWING

RESOURCES
as on
31-12-1926 - Rs. 17,355
31-12-1936 - Rs. 35,45,544
31-12-1946 - Rs. 4,26,07,093
31-12-1956 - Rs. 10,64,10,312

THANKS
to
our thousands of customers all over the country for their confidence and good-will.

K. A. PAI, B. Com. (Bom.), A.I.I.B., F.R.E.S. (Lond)
General Manager.

DR. T. M. A. PAI, M. B., B. S.,
Managing Director.

ಶನಿಮಂಗಳ ಯುತಿ ಅನಿಷ್ಟವಾದದ್ದೆಂದು ರಟ್ಟನೂ ಹೇಳುವನು. ಭೂಮಿಜನು ಮೀನ ಸುತನುಂ ತಾ ನೊಸೆದೊಂದೆಡೆಯೊಳಿರ್ದರಪ್ಪೊಡೆ ಜಗದೊಳ್ ಕ್ಷಾಮ ಮಣಿ ಮಾಡುಗುಂ. ಸಂಗ್ರಾಮ ಮುಪಡರಿಸಿಗುಂ ಅರಸು ಮಕ್ಕಳ್ಗೆಲ್ಲಂ ॥ ಗುರು ಶುಕ್ರ ಚಂದ್ರಸೋಹನಿರೆ ಸಿರಿದುಂ ಮಳೆಯಕ್ಕುಂ ಇವನೆ ಸೌಮ್ಯನೆ ನಡುವಿಂ ಭದ ಭೃಗು ನಡೆಯೆ ವಿಶ್ವಂಭರೆಯು ಜನಂ ನೀರರಸಿ ತಿರ್ವನೆ ತಿಯಗುಂ ।

ಸೂರ್ಯ ಬುಧರ ನಡುವೆ ಶುಕ್ರನಿದ್ದರೆ ಮಳೆಯ ಅಭಾವವೆಂದು ರಟ್ಟನು ಹೇಳುವನು. ಪರೀಕ್ಷಿಸಿ ನೋಡಿ ರವಿ ಬುಧ ಯುತಿ ರವಿ ಶುಕ್ರ ಯುತಿ ಮಳೆಯನ್ನು ಕೊಡುತ್ತವೆ. ನಡುವೆ ಶುಕ್ರನಿದ್ದರೆ ಏಕೋ ತಿಳಿಯದು.

ಗುರು ಶನಿ ಯುತಿ ಇದು ಪರಿವರ್ತನ ಸೂಚಕವಾಗಿರುವದು. ಯಾವ ರಾಶಿಯಲ್ಲಿ ಆಗುವದೋ ಆ ರಾಶಿಯ ಅಧಿಕಾರವಿದ್ದ ದೇಶದಲ್ಲಿ ೩೦ ವರ್ಷಗಳಲ್ಲಿ ಪರಿವರ್ತನವುಂಟಾಗುವದು. ಇದನ್ನು ಲೀಯೋ, ರಾಫೆಲ ಮೊದಲಾದ ಜ್ಯೋತಿರ್ವಿದರು ಸೋದಾಹರಣವಾಗಿ ತಮ್ಮ ಗ್ರಂಥಗಳಲ್ಲಿ ವಿವರಿಸಿದ್ದಾರೆ. ಇದು ೩೦ ವರ್ಷಕ್ಕೊಮ್ಮೆ ಉಂಟಾಗುವದು. ೧೯೬೦-೬೧ರಲ್ಲಿ ಇದು ಮಕರ ರಾಶಿಯಲ್ಲಿ ಆಗುವದು. ಮಕರದ ಅಧಿಕಾರ ಹಿಂದುಸ್ತಾನದ ಮೇಲೆ ಇರುವದು. ರಟ್ಟನು ಸುಂದರ ಶ್ಲೋಕದಲ್ಲಿ ಈ ಯುತಿಯ ಫಲವನ್ನು ವಿವರಿಸುವನು

"ಗುರು ಸೌರಿ ಸಮಾಗಮದೊಂದು ಗಡಾ
ಸಿರಿವಂಜುವದು ಅಂಜುವದಂ ಗಡಾ|
ವರುಷತ್ರಯ ಧಾನ್ಯವ ಮಾಡು ಗಡಾ ।
ಹನ್ನಾದೊಡೆ ಕಾಯಲು ಪೂರ ಗಡಾ ।

ಗುರುಂ ಸೌರಿಯು ನೊರ್ಮಳಿ ! ನೆರೆ ದಿರ್ದೊಡೆ ಮೂರು ವರ್ಷ ಮರ್ಭಂಕಿತು ಗುಂ ಭರಣಿಯೊಳಸ್ತಮಿಸೆ ವಸುಂದರೆಯಿಸುತಂ ಫಣಿಯೊಳಗುದಿಸಲ್ ಬರಕ್ಕುಂ|

ರಟ್ಟನ ಗ್ರಂಥವು ಸ್ವತಂತ್ರವಲ್ಲವಾದರೂ ಅನೇಕ ಅನುಪಲಬ್ಧ ಗ್ರಂಥಗಳ ಸಾರವಿಲ್ಲಿ ಸಿಕ್ಕುವುದು. ತರುಣರು ಅಭ್ಯಾಸ ಮಾಡಬೇಕು.

—ಪಂ. ಕೇಶವ ಕರ್ಮ,
ಗಲಗಲಿ, ಧಾರವಾಡ.
(ಕರ್ಮವೀರ)

ಪ್ರಕಟಣೆ

ಈ ಮೂಲಕವಾಗಿ ತಿಳಿಯಪಡಿಸುವದೇನಂದರೆ—

ನಮ್ಮ ವಿಶಾಲ ಮೈಸೂರು ಪ್ರಾಂತದಲ್ಲಿ ಸಾಕಷ್ಟು ಸಿಮೆಂಟಿನ ಸರಬರಾಜು ಆಗುತ್ತಿಲ್ಲ. ಸಾರ್ವಜನಿಕರಿಂದ ಹಾಗೂ ಸರಕಾರಿ ಇಲಾಖೆಯವರಿಂದ ಸಿಮೆಂಟಿನ ಬಗ್ಗೆ ಕಡಿಮೆಯು ವ್ಯತ್ಯಯಾಗುತ್ತಾ ಇದೆ. ಆದರೆ ನಮ್ಮ ಪ್ರಾಂತ್ಯದ ಸಿಮೆಂಟು ಮ್ಯಾಂಗಳೂರಲ್ಲಿರುವ ಸಿಮೆಂಟಿನ ಪಾಸ್ತಾನು ಇವರೆಲ್ಲರನ್ನು ತೃಪ್ತಿಪಡಿಸುವಷ್ಟು ಸುಟ್ಟಿದಲ್ಲಿರುವದಿಲ್ಲ.

ಆದುದರಿಂದ ಸಾರ್ವಜನಿಕರೆಲ್ಲರೂ ಸಿಮೆಂಟನ್ನು ಈ ಕೆಳಗಿನ ಕಾಮಗಾರಿಗಳಿಗಾಗಿ ಮಾತ್ರ ಉಪಯೋಗಿಸತಕ್ಕದ್ದೆಂತ ನಮ್ಮ ವಿಶಾಲ ಮೈಸೂರು ಸರಕಾರವವರು ವಿಜ್ಞಾಪಿಸಿಕೊಳ್ಳುತ್ತಾರೆ.

೧. ಮಾಡು ಸರಿಪಡಿಸಲಿಕ್ಕೆ, ೨. ನೆಲ ಸರಿಪಡಿಸಲಿಕ್ಕೆ, ೩. ಬದಿಹಾಕಲಿಕ್ಕೆ, ಹೊಸಮನೆ ಪಂಚಾಂಗ, ಇಟ್ಟಗೆ ಗೋಡೆ, ಗಾರೆ ವಗೈರೆ ಕಾಮಗಾರಿಗಳಿಗೆ ಸಿಮೆಂಟು ಒದಗಿಸಲಾಗುವುದಿಲ್ಲ.

ಸಾರ್ವಜನಿಕರೆಲ್ಲರೂ ಸಿಮೆಂಟಿನ ಅಭಾವ ವಿರುವ ಈ ಸ್ಥಿತಿಯಲ್ಲಿ ಸರಕಾರವೊಡನೆ ಸಹಕರಿಸಬೇಕಾಗಿ ಅಪೇಕ್ಷಿಸೋಣಾಗುತ್ತವೆ.

ಕೆ. ಮಹಮ್ಮದ್ ಬ್ಯಾರಿ, ಬಿ. ಎ.
ಉಡುಪಿ ತಾಲೂಕು ತಹಶೀಲ್ದಾರ್ರವರು.
ಮೊಕ್ಕಾಂ: ಉಡುಪಿ, ತಾ. 19-2-1957

NAVAYUGA

Popular Kannada Weekly

Founder:—

A. B. SHETTY, *M. L. A.*

Former Minister for Public Health, Govt. of Madras.

At Present Minister for Health Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೩	೨೧-೩-೧೯೫೭	೨೪

ಕಾಂಗ್ರೆಸಿನ ಶಕ್ತಿ

ಜಿಲ್ಲೆಯಲ್ಲಿ ನಡೆದ ಚುನಾವಣೆಗಳ ಫಲಿತಾಂಶವು ಇದೀಗ ಸ್ಪಷ್ಟವಾಗಿ ಪ್ರಕಟವಾಗಿದೆ: ಪರಿಣಾಮದಲ್ಲಿ ಕಾಂಗ್ರೆಸಿಗೆ ಪ್ರಚಂಡ ಯಶಸ್ಸು ಸಿಕ್ಕಿರುವುದು ಕಂಡು ಬಂದಿದೆ. ಮತದಾರರು ಕಾಂಗ್ರೆಸ್ಸಿಗೆ ಈ ಪ್ರಕಾರದ ಬೆಂಬಲವನ್ನು ವ್ಯಕ್ತಪಡಿಸಿದುದಕ್ಕಾಗಿ ನಾವು ಹೃತ್ಪೂರ್ವಕವಾದ ಕೃತಜ್ಞತೆಯನ್ನು ಅರ್ಪಿಸಬಯಸುತ್ತೇವೆ. ಕಾಂಗ್ರೆಸಿನ ಉಮೇದ್ವಾರಿಗಳು ಗೆದ್ದಲ್ಲೆಲ್ಲ ಅತ್ಯಧಿಕ ಬಹುಮತದಿಂದಲೇ ಗೆದ್ದು ಬಂದಿದ್ದಾರೆ. ಇದು ಜನತೆಯು ಕಾಂಗ್ರೆಸು ಸಂಸ್ಥೆಯ ಮೇಲಿಟ್ಟ ಪ್ರೀತಿಯ ಸಂಕೇತವಾಗಿದೆ ಎನ್ನಬಹುದು; ಜನತೆಯ ಸೇವೆಯನ್ನು ಶ್ರದ್ಧೆಯಿಂದಲೂ ನಿಷ್ಠೆಯಿಂದಲೂ ಮಾಡುತ್ತಾ ಬಂದುದಕ್ಕಾಗಿ ಮತದಾರರು ವ್ಯಕ್ತಪಡಿಸಿದ ಕೃತಜ್ಞತೆಯೇ ಈ ಬಹುಮತದ ಬೆಂಬಲವಾಗಿದೆ ಎಂದೂ ಭಾವಿಸಬಹುದು. ಕಾಂಗ್ರೆಸು ಸಂಸ್ಥೆಯೂ ಅದರ ಪ್ರತಿನಿಧಿಗಳೂ ಜನತೆಯು ತೋರ್ಪಡಿಸಿದ ಈ ವಿಶ್ವಾಸವನ್ನು ಕಾಯ್ದುಕೊಂಡು ಹೋಗುವ ಭಾರಕ್ಕೆ ಹೆಗಲುಕೊಡಬೇಕಾಗಿದೆ. ಮತಸಂಖ್ಯಾದ ನೆಯೇ ಕಾಂಗ್ರೆಸಿನ ಧ್ಯೇಯವಾಗಿ ಉಳಿದಿದೆ; ಮತದಾನದ ಬಳಿಕ ಮತದಾರರನ್ನು ಕೇಳುವ ಕಾಂಗ್ರೆಸಿಗನಿಲ್ಲ—ಎಂಬುದು ಮತದಾರರಿಂದ ಬರುವ ಪೂರುಗಳಲ್ಲಿ ಮುಖ್ಯವಾದುದು. ಕಳೆದ ಚುನಾವಣೆಯ ಬಳಿಕ ಇದೇ ದೂರು ಜನರಿಂದ ಬಂದಿತು, ಮತ್ತು ನಾವಾದರೂ ಜನತೆಯ ನುಡಿಯನ್ನೆ ಪ್ರತಿಧ್ವನಿಸುವವರಾಗಿ ಜನತಾ ಸಂಪರ್ಕವನ್ನು ಕಾಂಗ್ರೆಸು ಊರ್ಜಿತದಲ್ಲಿ ಇಟ್ಟುಕೊಳ್ಳಬೇಕೆಂದು ಹಲವು ಬಾರಿ ಒತ್ತಾಯಿಸಿದ್ದೆವು. ಇಂದು ಮರಳಿ ಈ ಮಾತನ್ನು ಜೋರು ಕೊಟ್ಟು ಹೇಳಬೇಕಾಗಿದೆ: ತಮ್ಮನ್ನು ಜನತಾ ಪ್ರತಿನಿಧಿಗಳೂ ಕಾಂಗ್ರೆಸಿನ ಪ್ರತಿನಿಧಿಗಳೂ ಆಗಾಗ್ಗೆ ಕಂಡು ಮಾತನಾಡಿಸುತ್ತಿರಬೇಕು ಎಂಬ ಸೊಲ್ಲಿನಿಂದ, ಜನರು ಕಾಂಗ್ರೆಸಿನೊಡನೆ ವಿಶೇಷವಾಗಿ ಸಹಕರಿಸಲು ಬಯಸುತ್ತಿರುವರೆಂದೂ ಆತ್ಮೀಯತೆಯನ್ನು ಸ್ಥಾಪಿಸುವ ಇಚ್ಛೆಯುಳ್ಳವರಾಗಿದ್ದಾರೆಂದೂ ಕಾಂಗ್ರೆಸಿನ ಸಾಧನೆಯ ವಿವರಣೆಯನ್ನು ಆ ಧಿ ಕೃ ತ ವಾ ಗಿ ಕೇಳಿ ತಿಳಿದುಕೊಳ್ಳಲು ಮತ್ತು ಅಪಪ್ರಚಾರದ ಸಂಗತಿಗಳಲ್ಲಿ ಕಾಂಗ್ರೆಸಿನಿಂದ ಸತ್ಯ ವಿಷಯದ ವಿವರಣೆ ಪಡೆಯಲು ತೀವ್ರಾಪೇಕ್ಷೆಯನ್ನು ಹೊಂದಿದ್ದಾರೆಂದೂ ಪರಿಭಾವಿಸಬಹುದಾಗುತ್ತದೆ. ಜನ ಸಾಧಾರಣರು ಇಷ್ಟು ಹೆಚ್ಚಿನ ರಾಜಕೀಯ ಜಾಗೃತಿಯ ನ್ನೂ ಸೂಕ್ಷ್ಮ ಪ್ರಜ್ಞೆಯನ್ನು ತೋರಿಸುತ್ತಿರುವರೆಂದಾದ ಮೇಲೆ, ಕಾಂಗ್ರೆಸು ಸಂಸ್ಥೆಯು ರಾಷ್ಟ್ರದಲ್ಲಿಯೇ ಅತಿ ಹಿರಿಯ ರಾದ ಮತ್ತು ಸುಸಂಘಟಿತವಾದ ರಾಜಕೀಯ ಪಕ್ಷವಾಗಿದ್ದು ಕೊಂಡೂ ಉದಾಸೀನತೆಯಿಂದ ವರ್ತಿಸಿದರೆ, ಅದು ಪ್ರೀತಿ ಭಾವನೆಯನ್ನು ವಿನಿಮಯ ಮಾಡಿಕೊಂಡಂತಾಗದು; ಮಾತ್ರವಲ್ಲ ಅದು ಜನರಲ್ಲಿ ತಾತ್ಸಾರವನ್ನೂ ಜುಗುಪ್ಸೆಯನ್ನೂ ಹುಟ್ಟಿಸಿ, ಅವರು ಅನ್ಯಾಕ್ತರಾಗುವಂತೆ ಮಾಡಲೂಬಹುದು. ಕಾಂಗ್ರೆಸಿಗೆ ಇರುವ ಜನ ಬೆಂಬಲವನ್ನು ಸಂಪೂರ್ಣವಾಗಿ ನಷ್ಟಗೊಳಿಸಬೇಕೆಂದು ಪ್ರತಿಪಕ್ಷಗಳು ಕಡ್ಡಿಯನ್ನು ಸಹ ಗುಡ್ಡದಷ್ಟು ದೊಡ್ಡ ಪಾಗಿ ಮಾಡಿ ತೋರಿಸುತ್ತವೆ. ಉದಾಹರಣೆಗೆ ಗೌರಮ್ಮನ "ಸತ್ಯಾಗ್ರಹ" ದಂಥ ಒಂದು ಪ್ರಸಂಗವು ಉಡುಪಿಯ ಮೂಡಲಾಗಿನ ಕಲವಾರು ಗ್ರಾಮಗಳಲ್ಲಿ ಕಾಂಗ್ರೆಸಿನ ಬಗ್ಗೆ ಎಂಥ ಕೆಂಪ್ರೇಥವನ್ನು ಬಡಿದೆಬ್ಬಿಸಿದೆ ಎಂಬ ವಿಷಯವು ಈಗ — ಚುನಾವಣೆಯ ಫಲಿತಾಂಶವನ್ನು ನೋಡಿದ ಬಳಿಕ—ಚೆನ್ನಾಗಿ ಗುರುತಿಸಲ್ಪಡುವಷ್ಟು ಅಲ್ಲಿ ಕಾಂಗ್ರೆಸಿಗೆ ಸಿಕ್ಕಿದ ಮತಗಳು ಅಲ್ಪ ಸಂಖ್ಯೆಯಲ್ಲಿದ್ದವು. ಕಾಂಗ್ರೆಸು ಜನತೆಯು ನೀಡಿ ಬಡಿತವನ್ನು ಸಮರ್ಪಕವಾದ ರೀತಿಯಲ್ಲಿ ಗ್ರಹಿಸಿಕೊಳ್ಳಲು ಅಸಮರ್ಥವಾದುದರಿಂದಲೇ ಅಸಪ್ರಜಾರದ ಸೋನೆ ಮಳೆಯೇ ಕರೆಯುವಂತಾಯಿತು. ಕಾಂಗ್ರೆಸಿನ ಇನ್ನೊಂದು ದೌರ್ಬಲ್ಯವೆಂದರೆ ಸಂಘಟನೆಯಲ್ಲಿ ಶೈಥಿಲ್ಯ. ಅಖಿಲ ಭಾರತ ಸ್ವರೂಪದಲ್ಲಿ ವೀಕ್ಷಿಸುವಾಗ ಕಾಂಗ್ರೆಸ್ಸು ಸಂಸ್ಥೆಯೇ "ಸುಸಂಘಟಿತ"ವಾದುದೆಂಬ ಬಗ್ಗೆ ಹಣೆ ಪಟ್ಟಿಯನ್ನು ಕಟ್ಟಿಕೊಳ್ಳಬಹುದಾಗಿದ್ದರೂ ನಮ್ಮಲ್ಲಿ ಕಾಂಗ್ರೆಸಿನ ಸಂಘಟನಾ ಕಾರ್ಯಕ್ರಮ ಎನ್ನೇನೂ ಕ್ರಮಬದ್ಧವಾಗಿಲ್ಲ. ಕಳೆದ ಚುನಾವಣೆಯಲ್ಲಿ ಕಾಂಗ್ರೆಸಿನ ವಿರುದ್ಧ ನಿಂತವರು ಇಂದು ಕಾಂಗ್ರೆಸಿನ ಬೆಂಬಲಿಗರಾಗಿದ್ದಾರೆ: ಅಷ್ಟರ ಮಟ್ಟಿಗೆ ಕಾಂಗ್ರೆಸು ಮನವೊಲಿಸುವಿಕೆಯಲ್ಲಿ ಸೋತು, ಸಮಜಾಯಿಸುವಿಕೆಯಲ್ಲಿ ಜಯಶೀಲವಾಗಿದೆ ಎಂಬ ಆತ್ಮ ಸಮಾಧಾನ ಕೆಲವರಲ್ಲಿರಬಹುದು. ಆದರೆ ಮುನಿಸಿಪಾಲಿಟಿ ಮತ್ತು ಜಿಲ್ಲಾ ಬೋರ್ಡು ಚುನಾವಣೆಗಳಲ್ಲಿ ಕಾಂಗ್ರೆಸಿಗೆ ಸಹಾಯ ಮಾಡಿದ ಮಹನೀಯರೇ ಇಂದು ಕಾಂಗ್ರೆಸಿನ ವಿರುದ್ಧ ನಿಂತಿದ್ದಾರೆ ಎಂಬುದನ್ನು ನೋಡಿದರೆ ಸಂಸ್ಥೆಯ ಸಂಘಟನೆಯು ಶಿಥಿಲವಾಗಿದೆ ಎಂದೇ ಹೇಳಬೇಕಾಗುತ್ತದೆ. ಕೆಲವರು ಒಳಬರುವುದು, ಕೆಲವರು ಹೊರ ಹೋಗುವುದು, ಈಗ ಒಳಬಂದವರೇ ಮತ್ತೊಂದು ಕ್ಷಣದಲ್ಲಿ ಹೊರ ಸಾಗುವುದು—ಈ ಪ್ರಕಾರ ಕಾಂಗ್ರೆಸಿನ ಸಂಘಟನೆಯು ಮುಂದರಿದದ್ದಾದರೆ "ಕಾಂಗ್ರೆಸು ಒಂದು ಸಂತೆಯ ಸ್ಥಳವಾಗಿ ಕಂಗೊಳಿಸೀತು; ಅಲ್ಲಿ "ಕಾಂಗ್ರೆಸು" ಎಂಬ ಮೂರಕ್ಷರವಲ್ಲದೆ ಮತ್ತೆ ಏನೂ ಶಾಶ್ವತವಾಗಿ ಉಳಿಯಲಾರದ. ಇದರಿಷ್ಟು ಶೋಚನೀಯವಾದ ಸ್ಥಿತಿ ಬೇರೆನಿದೆ? ಎಲ್ಲರಿಗೂ ಸ್ವಾಗತವನ್ನು ಕೋರುವ, ಸಕಲರಿಗೂ ಸ್ವಾತಂತ್ರ್ಯವನ್ನು ನೀಡುವ ಭರದಲ್ಲಿ ಕಾಂಗ್ರೆಸು ಸಂಸ್ಥೆಯ ನಿಷ್ಕಾಮವಂತ ಕಾರ್ಯಕರ್ತರ ಮೂಲಬಲದ ರಚನೆಗೂ ಮನಸ್ಸನ್ನು ಮಾಡದೆ ಹೋದದ್ದಾದರೆ, ನಮ್ಮ ಮುಖಂಡರು ಕಾಂಗ್ರೆಸನ್ನು ಅಪಾಯಕಾರಿ ಮಾರ್ಗದಲ್ಲಿ ಮುನ್ನಡೆಸುತ್ತಿದ್ದಾರೆ ಎನ್ನುವ ಪ್ರಸಂಗ ಬರುತ್ತದೆ. ಕುಂದಾಪುರದಲ್ಲಿ ಗೆದ್ದುಬಂದ ಸ್ವಜಾಸೇವಾಜವಾದಿ ಉಮೇದ್ವಾರರು ಜನತೆಯೊಡನೆ ಒಬ್ಬ ವ್ಯಕ್ತಿಯಾಗಿ ಎಷ್ಟು ನಿಕಟ ಸಂಪರ್ಕವನ್ನು ಇಟ್ಟುಕೊಂಡಿದ್ದಾರೆ ಎನ್ನುವುದನ್ನು ನೋಡಿದರೆ, ಆದೇ ಅವರ ಪಕ್ಷದ ಬಲ ವಲ್ಲವೆ ಎಂದು ತೋರುತ್ತದೆ. ನಮ್ಮ ಉಡುಪಿಯಲ್ಲಿ ಕಾಂಗ್ರೆಸಿನ ನೆರಳಲ್ಲಿ ಉಪಕೃತರಾದ ಜನರಿಷ್ಟೇ ಸಹಸ್ರ ಸಂಖ್ಯೆಯಲ್ಲಿದ್ದರೂ ಸಹ ಚುನಾವಣೆಯ ಹೊತ್ತಿಗೆ ತಿರುಗಿ ಬೀಳಲಿಕ್ಕೆ ಅವರನ್ನು ಬಿಟ್ಟುದು ಕಾಂಗ್ರೆಸಿನ ಜಾಡ್ಯವಾಗಿ ಪರಿಣಮಿಸಿರುವ ಶಿಸ್ತಿನ ಮತ್ತು ಸಂಘಟನೆಯ ಅಭಾವ. ಇದುದರಿಂದ ರಾಜಕೀಯ ಮುಖದಿಂದ ಪ್ರತ್ಯೇಕವಾದ, ವಿಧಾಯಕ ಮುಖವನ್ನೆ ಹೊಂದಿದ, ಶಿಸ್ತು ಮತ್ತು ಸಂಘಟನೆಯ ಪ್ರಯತ್ನಗಳನ್ನು ಗೈದು ಜನತಾ ಸಂಪರ್ಕವನ್ನು ಊರ್ಜಿತದಲ್ಲಿಟ್ಟು ಅವಿರತ ಪ್ರಚಾರದ ಮೂಲಕ ಜನ ಮನವನ್ನು ಗೆದ್ದು ಕಾಂಗ್ರೆಸಿನ ಶಕ್ತಿಯನ್ನು ಹೆಚ್ಚಿಸಬಲ್ಲ ರೀತಿಯಲ್ಲಿ ಈ ಸಂಸ್ಥೆಯ ಪುನರ್ಘಟನೆಯನ್ನು ಜಿಲ್ಲೆಯಲ್ಲಿ ನಡೆಸಬೇಕಾದುದು ಅಗತ್ಯವಾಗಿದೆ. ಕಾಂಗ್ರೆಸು ಸಂಸ್ಥೆಯ ಪ್ರತಿನಿಧಿಗಳು ಎಲ್ಲಿ ನೋಡಿದ್ದಾರೋ ಅಲ್ಲಿಯ ಮಟ್ಟಗಾಂತೂ ಈ ಸೂಚನೆಯನ್ನು ಕೂಡಲೇ ಅನ್ವಯಿಸುವುದು ಅವಶ್ಯ. ಹೊಡೆತ ತಿಂದಮೇಲಾದರೂ ಬುದ್ಧಿ ಬರಬೇಡವೆ? ಕೇವಲ ಕಾಂಗ್ರೆಸಿನ ಹೆಸರು ಹೇಳಿ, ನೆಹರುಗಳ ನಾಮಸ್ಮರಣೆ ಮಾಡಿ ಮತಗಳಿಸಬಹುದೆಂಬ ಅಂಧ ವಿಶ್ವಾಸ ಕಾಂಗ್ರೆಸಿಗರಲ್ಲಿ ಇನ್ನೂ ಮುಂದಕ್ಕೂ ಉಳಿದದ್ದಾದರೆ, ಮತ್ತು ಮತದಾರರಿಗೆ ಕೃತಜ್ಞತೆಗಳನ್ನು ಮುಖತಃ ಕಂಡು ಮಾತನಾಡಿಸಿಯಲ್ಲ, ಪತ್ರಿಕೆಯ ಮೂಲಕ ಕೊಟ್ಟೇ ತೀರಿಸಿ ಗೆದ್ದ ಕಾಂಗ್ರೆಸು ಪ್ರತಿನಿಧಿಗಳು ಸಂತೃಪ್ತರಾದರೆ-ಅನಂತರ ಸಂಸ್ಥೆಗೆ ಕೇಡುಂಟು.

ಹೊಸ ಸರಕಾರಗಳ ರಚನೆ

ಕಾಂಗ್ರೆಸಿನ ಅಪ್ರತಿಮ ಯಶಸ್ಸು

ಪ್ರಜೆಗಳ ವಿಶ್ವಾಸದ ಪ್ರತೀಕ

ದೇಶದಲ್ಲಿ ನಡೆದ ಚುನಾವಣೆಗಳಲ್ಲಿ ಹೆಚ್ಚಿನ ಫಲಿತಾಂಶವು ಈಗಾಗಲೇ ಪ್ರಕಟವಾಗಿದೆ; ಮತ್ತು ಕಾಂಗ್ರೆಸಿಗೆ ಇರುವ ಜನ ಬೆಂಬಲವು ಸುಗುದೊಮ್ಮೆ ವ್ಯಕ್ತವಾಗಿದೆ. ಇದೇ ತಿಂಗಳ ದಿನಾಂಕದಂದು ಕಾಂಗ್ರೆಸಿನ ವರಿಷ್ಠರೆಲ್ಲರೂ ಸಮಾಲೋಚನೆ ನಡೆಸಿ ಮುಂದಿನ ಕಾರ್ಯಕ್ರಮವನ್ನು ಗೊತ್ತುಪಡಿಸುವರೆಂದು ತಿಳಿದು ಬರುತ್ತದೆ.

ಪ್ರಧಾನಿ ನೆಹರುರವರು ತಮ್ಮ ಮೂವರು ಪ್ರತಿಸ್ಪರ್ಧಿಗಳೂ ಇಡು ಗಂಟು ಕಳೆಯುವಂತೆ ಮಾಡಿ ಸುಮಾರು ೨ ಲಕ್ಷ ಬಹು ಮತದಿಂದ ಗೆದ್ದು ಬಂದಿದ್ದಾರೆ ಅದುದರಿಂದ ಪುನಃ ನೆಹರುರವರೇ ಲೋಕ ಸಭೆಯ ಧುರೀಣನಾಗಿ ಆಯ್ಕೆಗೊಂಡು, ಭಾರತೀಯರ ಪ್ರಧಾನ ಮಂತ್ರಿಯಾಗಿ ಸೇವೆ ಸಲ್ಲಿಸುವ ಅವಕಾಶ ಬಂದಿದೆ. ನೆಹರುರವರೇ ನಾಯಕರಾಗಬೇಕೆಂಬ ಬಗ್ಗೆ ಯಾವುದೇ ಭಿನ್ನಾಭಿಪ್ರಾಯ ಕಾಂಗ್ರೆಸಿನಲ್ಲಿಲ್ಲವೆಂದು ತಿಳಿದು ಬರುತ್ತದೆ.

ರಾಜ್ಯಗಳಲ್ಲಿಯೂ— ಎರಡನ್ನುಳಿದು ಬೇರೆ ಎಲ್ಲ ಕಡೆ— ಕಾಂಗ್ರೆಸು ಸರಕಾರವೇ ಸ್ಥಾಪನೆಯಾಗುತ್ತದೆ. ಮೈಸೂರು ನಲ್ಲಿ ಕಾಂಗ್ರೆಸು ಅಸ್ಪತಿಮ ಯಶಸ್ಸನ್ನು ಪಡೆದಿರುತ್ತದೆ; ಮತ್ತು ಮೈಸೂರಿನ ಮಾಜಿ ಮುಖ್ಯ ಮಂತ್ರಿ ಶ್ರೀ ಕೆ. ಹನ್ಮಂತಯ್ಯನವರು ಗೆದ್ದುಬಂದಿರುವುದರಿಂದ, ರಾಜ್ಯದ ಮುಂದಿನ ಮುಖ್ಯ ಮಂತ್ರಿ ಯಾರಾದಾರೆಂಬ ಬಗ್ಗೆ ಊಹಾಪೋಹೆಗಳು ನಡೆದಿವೆ. ಹನ್ಮಂತಯ್ಯನವರೋ ನಿಜಲಿಂಗಪ್ಪನವರೋ ಎಂಬುದೇ ಜಿಜ್ಞಾಸೆಯ ತಿರುಳಾಗಿರುವಂತೆ ಕಾಣುತ್ತದೆ. ಹೆಚ್ಚಿನ ಮಟ್ಟಿಗೆ ನಿಜಲಿಂಗಪ್ಪನವರೇ ಮುಂದರಿಯುವುದು ಸಂಭವನೀಯ; ಆದೇ ಕ್ಷೇಮವೂ ಹೌದು.

ಕೇರಳದಲ್ಲಿ ಕಮ್ಯುನಿಸ್ಟರಿಗೆ ಸರಕಾರವನ್ನು ರಚಿಸುವಷ್ಟು ನಿಸ್ಸಂಧಿಗ್ಧ ಬಹುಮತವಲ್ಲದಿದ್ದರೂ ಪಕ್ಷಕ್ಕೆ ಸಿಕ್ಕಿದಷ್ಟು ಹೆಚ್ಚು ಸ್ಥಾನಗಳು ಬೇರೆ ಯಾವುದೇ ಪಕ್ಷಕ್ಕೆ ಸಿಕ್ಕಿಲ್ಲ. ಸ್ಥಾನ ಬಲದಿಂದ ಕಾಂಗ್ರೆಸಿಗೆ ಎರಡನೇ ಸ್ಥಾನ ಬರುತ್ತದೆ; ಆದರೆ ಅದು ಸರಕಾರವನ್ನು ರಚಿಸಲು ಸಧ್ಯಕ್ಕೆ ಬಯಸಲಾರದೆಂದು ತಿಳಿದಿದೆ. ಕಮ್ಯುನಿಸ್ಟರನ್ನೆ ಸರಕಾರದ ರಚನೆಗಾಗಿ ಆಮಂತ್ರಿಸಬೇಕೆಂಬ ಸೂಚನೆಯು ರಾಜ್ಯದ ಗವರ್ನರರಿಗೆ ಹೋಗಿದೆಯೆಂದೂ ಕಮ್ಯುನಿಸ್ಟರಿಗೆ ಭದ್ರ ಸರಕಾರವನ್ನು ರಚಿಸುವುದು ಅಸಾಧ್ಯವಾದರೆ, ಮತ್ತೆ ಬೇರೆ ಸೂಚನೆಗಳನ್ನು ಪರ್ಯಾಲೋಚಿಸಬಹುದೆಂದೂ ಹೊಸ ದೆಹಲಿಯ ವಾರ್ತೆಗಳು ಹೇಳುತ್ತವೆ. ತಮಗೆ ಕೆಲವು ಸ್ವತಂತ್ರರ ಬೆಂಬಲ ವಿದೆ; ಹೀಗೆ ತಮಗೆ ನಿಸ್ಸಂದಿಗ್ಧ ಬಹುಮತವಿದೆ; ತಮಗೆ ಸರಕಾರ ರಚಿಸಲು ಬಿಡಿರಿ; ತಮ್ಮ ಸರಕಾರವು ಭಾರತದ ಸಂವಿಧಾನಕ್ಕೆ ವ್ಯತಿರಿಕ್ತವಾಗದಂತೆಯೇ ಸರಕಾರಿ ಸೂತ್ರ ಜಾಲನೆಯನ್ನು ಮಾಡುತ್ತದೆ-ಎಂಬುದಾಗಿ ಕಮ್ಯುನಿಸ್ಟರ ಧುರೀಣರು ಹೇಳಿದ್ದಾರೆ.

ಅನಿಶ್ಚಿತ ಪರಿಸ್ಥಿತಿ ಇರುವ ಇನ್ನೊಂದು ರಾಜ್ಯವೆಂದರೆ ಒರಿಸ್ಸ: ಅಲ್ಲಿ ಕಾಂಗ್ರೆಸಿಗೆ ಹೆಚ್ಚು ಮತಗಳು ಸಿಕ್ಕಿದ್ದರೂ ಅದು ನಿಸ್ಸಂದಿಗ್ಧ ಬಹುಮತವಲ್ಲ. ಇದುದರಿಂದ ಯಾವ ಕ್ರಮವನ್ನು ಅಲ್ಲಿ ಕೈಗೊಳ್ಳಲಾಗುವುದೋ ತಿಳಿದಿಲ್ಲ.

ಸಾಮಾನ್ಯವಾಗಿ ಮುಂದಿನ ತಿಂಗಳಲ್ಲಿ ಎಲ್ಲ ರಾಜ್ಯಗಳಲ್ಲೂ ಹೊಸ ಸರಕಾರವ ರಚನೆಯಾಗಿ ಸುಧಾರಿತ ಆಡಳಿತವು ನಡೆಯಬಹುದೆಂದು ಇಂದಿನ ನಂಬಿಕೆ. ಪದ್ಯಕ್ಕೆ ಮೈಸೂರಿನಲ್ಲಿ ಮುಂಗಡ ಪತ್ರದ ಅಧಿವೇಶನ ಜರಗಿದೆ. ಹೊಸದೆಹಲಿಯಲ್ಲೂ, ಹಾಗೆಯೇ ಪ್ರಚಲಿತ ಸಭೆಯು ನಡೆಯುವ ಬರ್ಖಾಸ್ತುಗೊಳ್ಳಲಿದೆ; ಮತ್ತು ಹೊಸ ಸಭೆ ಬೇಗನೆ ಸೇರ್ಪಡೆಗೊಳ್ಳಲಿಕ್ಕಿದೆ.

ಮೈಸೂರಿನ ರಾಜ್ಯಪಾಲರು ತಮ್ಮ ಭಾಷಣದಲ್ಲಿ, ಮಲ್ಪೆಯನ್ನು ಪ್ರಬುದ್ಧ ಬಂದರವಾಗಿ ಮಾಡುವ ಬಗ್ಗೆ ಹೆಚ್ಚಿನ ಪರಿಶೀಲನೆ ನಡೆಸಲಾಗುವುದೆಂದೂ ಮಂಗಳೂರನ್ನು ಸರ್ವತೋಮುಖ ಬಂದರವಾಗಿ ರೂಪಿಸಲು ಕ್ರಮ ತೆಗೆದುಕೊಳ್ಳಲಾಗುವುದೆಂದೂ ಹೇಳಿದ್ದಾರೆ. ರಾಷ್ಟ್ರಾಧ್ಯಕ್ಷರು ತಮ್ಮ ಭಾಷಣದಲ್ಲಿ ಕಾಶ್ಮೀರ ಪ್ರಶ್ನೆಯನ್ನು ಪ್ರಸ್ತಾಪಿಸಿ, ಭಾರತವ ಇತರ ರಾಜ್ಯಗಳ ಸ್ಥಾನಮಾನದಂತೆಯೇ ಕಾಶ್ಮೀರದ ಸ್ಥಿತಿಗತಿಯೂ ಇದೆ: ಆಂದರೆ ಅದು ಭಾರತದ ಅವಿಭಾಜ್ಯ ಅಂಗ. ಪಾಕಿಸ್ತಾನವು ಕಾಶ್ಮೀರದ ಮೇಲೆ ಆಕ್ರಮಣ ನಡೆಸಿದ ಆಗಂತುಕ ರಾಷ್ಟ್ರ. ಇದನ್ನು ಕಾಶ್ಮೀರ ಸಮಸ್ಯೆಗೆ ಪರಿಹಾರವನ್ನು ಹುಡುಕುವವರೆಲ್ಲ ಮರೆಯದೆ ನೆನಪಿಟ್ಟುಕೊಳ್ಳಲಿ ಎಂದು ಸ್ಪಷ್ಟವಾಗಿ ಭಾರತ ಸರಕಾರದ ಘೋಷಣೆಯನ್ನು ವಿವರಿಸಿದ್ದಾರೆ.

ಮೈಸೂರು ವಿಧಾನ ಸಭೆಗೆ ಕುಂದಾಪುರ ಡಿವಿಜನ್ ನಲ್ಲಿಯ ವಿಜಯಿಗಳು

ಕುಂದಾಪುರ ಕ್ಷೇತ್ರದಿಂದ– ಮೈಸೂರು ವಿಧಾನ ಸಭೆಯ ದಕ್ಷಿಣಕನ್ನಡ ಜಿಲ್ಲೆಯ ಕುಂದಾಪುರ ಮತದಾರ ಕ್ಷೇತ್ರದಿಂದ ಪ್ರಜಾಸೋಶಿಯಲಿಸ್ಟ್ ಪಕ್ಷದ ಸ್ವತಂತ್ರ ಅಭ್ಯರ್ಥಿ ದ. ಕ. ಜಿಲ್ಲಾ ಪ್ರಜಾ ಸೋಶಿಯಲಿಸ್ಟ್ ಪಕ್ಷದ ಕಾರ್ಯದರ್ಶಿ ಶ್ರೀ ವಿ. ಶ್ರೀನಿವಾಸ ಶೆಟ್ಟರು ಕಾಂಗ್ರೆಸಿನ ಉಮೇದ್ವಾರಿಯಾದ ಮಂಗಳೂರು ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರನ್ನು ನೇರವಾದ ಸ್ಪರ್ಧೆಯಲ್ಲಿ 427 ಮತಗಳಿಂದ ಸೋಲಿಸಿ ವಿಜಯಿಗಳಾಗಿರುವರು

ಮತದಾರರ ಸಂಖ್ಯೆ 55,437. ಮತವಿತ್ತವರ ಸಂಖ್ಯೆ 33,008. ಶ್ರೀ ವಿ. ಶ್ರೀನಿವಾಸ ಶೆಟ್ಟಿ (ಪ್ರ. ಸ. ವಾ.) 16,693. ಶ್ರೀ ಕೆ. ಸೂರ್ಯನಾರಾಯಣ ಅಡಿಗ (ಕಾಂಗ್ರೆಸ್) 16,266. ಆಸಿಂಧು ಮತಗಳು 44.

ಉಡುಪಿ ಕ್ಷೇತ್ರದಿಂದ– ಪ್ರಜಾಸೋಶಲಿಸ್ಟ್ ಪಕ್ಷದ ಶ್ರೀ ಉಪೇಂದ್ರ ಶ್ರೀನಿವಾಸ ನಾಯ್ಕರು ಕಾಂಗ್ರೆಸ್ ಸ್ಥಾನಾರ್ಥಿ ಶ್ರೀ ಪಿ. ವಿ. ಆಚಾರ್ಯರಿಗಿಂತ 4307 ಅಧಿಕ ಮತಗಳನ್ನು ಪಡೆದು ವಿಜಯಿಗಳಾದರು.

ಮತದಾರರ ಸಂಖ್ಯೆ 44585. ಮತವಿತ್ತವರು 30911. ಶ್ರೀ ಯು. ಎಸ್. ನಾಯಕ್ (ಪ್ರಸವಾ) 17598. ಶ್ರೀ ಪಿ. ವಿ. ಆಚಾರ್ಯ (ಕಾ)13291. ಆಸಿಂಧು ಮತಗಳು 22.

ತಾ 15ರಂದು ಮತಗಣನೆಯಾಗಿ ವಿಜಯೀ ಸದಸ್ಯರ್ ಪುರಮೆರವಣಿಗೆ ಜರಗಿತು.

ಬ್ರಹ್ಮಾವರ ಕ್ಷೇತ್ರದಿಂದ– ಕಾಂಗ್ರೆಸ್ ಉಮೇದ್ವಾರಿ ಶ್ರೀ ಬಿ. ಜಗಜ್ಜೀವನದಾಸ ಸೆಟ್ಟರು ತನ್ನ ಎಮರಾಳಿ ಪ್ರಜಾಸೋಶಲಿಸ್ಟ್ ಪಕ್ಷಾಭ್ಯರ್ಥಿ ಶ್ರೀ ಬೈಕಾಡಿ ಶೀನಪ್ಪ ಶೆಟ್ಟರಿಗಿಂತ 6585 ಹೆಚ್ಚು ಮತಗಳನ್ನು ಗಳಿಸಿ ವಿಜಯಶೀಲರಾದರು.

ಮತದಾರರ ಸಂಖ್ಯೆ 50882. ಮತದಾನ ಮಾಡಿದವರು 27,303. ಶ್ರೀ ಬಿ. ಜಗಜ್ಜೀವನದಾಸ ಶೆಟ್ಟಿ (ಕಾ) 16964 ಶ್ರೀ ಬೈಕಾಡಿ ಶೀನಪ್ಪ ಶೆಟ್ಟಿ (ಪ್ರ. ಸೊ.) 10429. ಆಸಿಂಧು ಮತಗಳು ಯಿಲ್ಲಾ.

ತಾ 18ರಂದು ಮತಗಣನೆಯೊಳಗಿ ಫಲ ತುಂಬ ತಿಳಿದೊಡನೆ ವಿಜಯೀ ಸದಸ್ಯರ ಪುರ ಮೆರವಣಿಗೆ ನಡೆಯಿತು.



ಭಾರತವನ್ನು ನೋಡಲೆಂದು ವಿದೇಶಗಳ ಅನೇಕ ಸಂದರ್ಶಕರು ಬಂದು ಇತ್ತೀಚೆಯ ಅಭಿವೃದ್ಧಿ ಕ್ಷೇತ್ರಗಳಲ್ಲಿ ತಿರುಗಾಡಿದರು. ಚಿತ್ರದಲ್ಲಿ ೧ನೇಯದು ಇರಾನಿನ ಅರಸರು ಬೆಂಗಳೂರಿನ ವಿಮಾನ ಕಾರ್ಖಾನೆಯಲ್ಲಿ ವಿಮಾನವೊಂದನ್ನು ಪರೀಕ್ಷಿಸುತ್ತಿರುವುದನ್ನು ತೋರಿಸುತ್ತದೆ. ೨ನೇ ಚಿತ್ರವು ಚೀನದ ಪ್ರಧಾನಿ ಚಾ ಎನ್ ಲ್ಯಾಯವರು ಸಿಂಧ್ರಿಯ ಗೊಬ್ಬರ ಕಾರ್ಖಾನೆಯನ್ನು ನೋಡುತ್ತಿರುವಾಗ ತೆಗೆದುದಾಗಿದೆ. ಇತಿಯೋಪಿಯದ ಅರಸರು ಟ್ರಾಂಬೆಯಲ್ಲಿರುವ ಅಣುಶಕ್ತಿ ಜನಕಯಂತ್ರದ ನಿರೀಕ್ಷಣೆಗೈದಾಗ ತೆಗೆದುದೇ ಮೂರನೇ ಚಿತ್ರ. ಅರಿಯ ಹಾಲಿನ ವಸಾಹತನ್ನು ಬಿಬೀಟಿನ ಲಾಮಾಧ್ಯರು ಸಂದರ್ಶಿಸಿದಾಗ ನಾಲ್ಕನೇ ಚಿತ್ರವನ್ನು ತೆಗೆಯಲಾಯಿತು. ಐದನೇ ಚಿತ್ರವು ನೇಪಾಳದ ಪ್ರಧಾನಿ ಶ್ರೀ ಟಿ. ಪಿ. ಆಚಾರ್ಯರು ಅಂಬರನಾಥದಲ್ಲಿರುವ ಯಂತ್ರೋಪಕರಣಗಳ ಕಾರ್ಖಾನೆಯನ್ನು ವೀಕ್ಷಿಸಿದಾಗ ತೆಗೆಯಲ್ಪಟ್ಟಿತು. ಅಂತೂ ಈ ಐದು ಚಿತ್ರಗಳು ಭಾರತದ ಪ್ರಗತಿಯ ಪಂಚ ಮುಖಗಳನ್ನು ತೋರಿಸುತ್ತದೆ ಎನ್ನಬಹುದು.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. 605/1956.

1. ಪರಮೇಶ್ವರಿ ಶೆಟ್ತಿ (ಪಾತಿ) 2. ಮುಕಾಂಬಿಕೆ ಸೆಟ್ತಿ —ವಾದಿರು

ಮತ್ತು

ರಾಮಣ್ಣ ಸೆಟ್ಟಿ ಕೊಡಾ— ಪ್ರತಿವಾದಿರು ಇವರೊಳಗೆ

2ನೇ ಪ್ರತಿವಾದಿ: ದಿಗ್ಗಮ್ಮ ಶೆಡ್ತಿ. ಸಾಂತು ಶೆಟ್ರ ಹೆಂಡ್ತಿ, ಉಡ್ಪಿತಾಲ್ಲೂಬಡಾಗ್ರಾಮದ ಯರ್ಮಾಳ ವೇಟೆಮನೆ. ಯವರಿಗೆ,

ನಾದಿರ ಬಿಯ ವೀರಣ್ಣ ಶೆಟ್ರು ಪ್ರತಿವಾದಿರ ಪೂರ್ವಾಧಿಕಾರಿ ಕಾಮೇರ ಶೆಡ್ತಿಗೆ ರಿ. ಏತಿ. ತಾ. 14.2.1873ರಲ್ಲಿ ಬರೆಕೊಟ್ಟ ಮೂಲಗೇಣಿ ಚೀಟಿಗೆ ಕಾರಣವಾದ ಆಸ್ತಿಯ ಬಾಬ್ತು ಪ್ರತಿವಾದಿಯಿಂದ ಈಗ 2ನೇ ಪಾವಿಳಿಗೆ ಬರತಕ್ಕ ಬಾವಾ ವಿಜಯ ಮತ್ತು ಜಯ ಸಂಗರಗಳ ಬಾಬ್ತು ಗೇಣಿ ನ ಬಡ್ಡಿ ಕೂಡಾ ರೂಪ್ಯಾ 40.18.8 ಕ್ಕೆ ವಾದಿರು ಪ್ರತಿವಾದಿರಮೇಲೆ ಮೂಡಿದ ಸದ್ರಿ ದಾವೆಯು ತಾ. 26.8.1957ಕ್ಕೆ ತನ್ನಬಗ್ಗೆ ಯಿಡೋಣಾಗಿದೆ ಆ ದಿವ್ಸ ಸದ್ರಿ 2ನೇ ಪ್ರತಿವಾದಿಳು ಸ್ವತಹಾ ಯಾ ವಕೀಲರ ಮುಖಾಂತರ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಉದಾಹರಿಸದಿದ್ದಲ್ಲಿ ಅವಳ ಗೈರು ಹಾಜರಿಯಿಂದ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವಪೆಂದು ಸದ್ರಿ 2ನೇ ಪ್ರತಿವಾದಿಳಿಗೆ ಈ ಮೂಲಕ ತಿಳಿಯಪಡಿಸೋಣಾಗಿಯದೆ.

P. N. Krishnamurthi Rao,
Advocate for Plff

Udipi S. K. 19—3—1957.

ಕಾಪು ಕ್ಷೇತ್ರದಿಂದ– ಕಾಂಗ್ರೆಸ್ ಹುರಿಯಾಳು ಶ್ರೀ ಎಫ್ ಎಕ್ಸ್. ಡಿ. ಪಿಂಟೋರವರು ಆತ್ಯಧಿಕ ಮತಗಳನ್ನು ಪಡೆದು ವಿಜಯಿಗಳಾದರು.

ಮತದಾರರ ಸಂಖ್ಯೆ 49,701. ಮತವಿತ್ತವರ ಸಂಖ್ಯೆ 29,890. ಶ್ರೀ ಎಫ್. ಎಕ್ಸ್. ಡಿ ಪಿಂಟೋ (ಕಾ) 18,761. ಶ್ರೀ ಎಮ್. ನಬೀಸಜಂದ್ರ (ಪ್ರಸವಾ) 7170. ಶ್ರೀ ಆರ್. ಆರ್. ಕೆಂಜೂರು (ಸ್ವತಂತ್ರ)3950 ಆಸಿಂಧು ಮತಗಳು 9 ಶ್ರೀ ಕುಂಜೂರರ ಡಿ ಪೊಜಿಟ್ ಹೋಯಿತು.

ಮತಗಳ ಎಣಿಕೆಯಾದ ತಾ. 16ನೇ ಸಂಜೆ ಕಾಂಗ್ರೆಸ್ ವಿಜಯೀ ಸದಸ್ಯರ ವೈಭವ ಪೂರ್ಣ ಪುರಮೆರವಣಿಗೆಯಾಗಿ ರಥಬೀದಿಯಯಲ್ಲಿ ಶ್ರೀ ಟಿ. ಎ. ಪೈ, ಎಂ. ಎಲ್. ಎ. ರವರ ಅಧ್ಯಕ್ಷತೆಯಲ್ಲಿ ಪ್ರಚಂದ ಸಭೆ ಜರಗಿತು. ಶ್ರೀ ಎಫ್. ಎಕ್ಸ್. ಡಿ. ಪಿಂಟೋರವರು ಪೂತನಾಡಿದ ಮೇಲೆ ಅಧ್ಯಕ್ಷ ಶ್ರೀ ಪೈಗಳು ಚುನಾವಣಾರಂಗದ ಕೆಲವೊಂದು ಒಳನೋಟಗಳನ್ನು ಪ್ರಸ್ತಾಪಿಸಿ ಕಾಂಗ್ರೆಸ್ ಸುದೃಢವಾಗಿಯೇ ಇದೆ ಎಂಬುದನ್ನು ಉದಾಪಿ ಕ್ಷೇತ್ರದಲ್ಲಿ ಕಾಂಗ್ರೆಸ್ ಹೇಗೆ ಸೋತಿತೆಂಬುದನ್ನೂ ವಿವರಿಸಿ ಭಾಷಣವಿತ್ತರು. ಶ್ರೀ ಎ. ಜೆ. ಆಲ್ಪೆಯವರು ಧನ್ಯವಾದಗರ್ಪಣ ನಿತ್ತರು.

ವಾರ್ಷಿಕ ಅಧಿವೇಶನ— ಪೋಸ್ಟ್ ಮೇನ್ ಮತ್ತು ಕ್ಲಾಸ್ IV ನೌಕರರ ಉಡುಪಿ ಡಿವಿಜನಿನ ವಾರ್ಷಿಕ ಅಧಿವೇಶನವು ತಾ. 17ರಲ್ಲು ಮೊದರ್ಸ್ ಹಾಲ್ ಎ ಶಾಲೆಯಲ್ಲಿ ಶ್ರೀ ಕೊಚ್ಚಿಕಾರ್ ವರದರಾಯ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಟಿ. ಎ. ಪೈ, ಎಮ್. ಎಲ್. ಎ ಅವರು ಅಧಿವೇಶನವನ್ನು ಉದ್ಘಾಟಿಸಿದರು. ಕಾರ್ಯದರ್ಶಿ ಶ್ರೀ ಕೆ. ರಘು ಶೆಟ್ಟರು ವರದಿ ವಾಚನ ಮಾಡಿದರು. ಶ್ರೀ ಅಲ್ಲಿ ಸಾಹೇಬರು ಲೆಕ್ಕಪತ್ರಗಳನ್ನು ಒಪ್ಪಿಸಿದರು. ಸಭಿಕರ ಭಾಷಣಗಳಾಗಿ ಪೂರ್ವಾಹ್ನದ ಕಾರ್ಯಕ್ರಮ ಮುಗಿಯಿತು. ಅಪರಾಹ್ನದಲ್ಲಿ ಪುನಃ ಸಭೆಜರಗಿತು. ಪೋಸ್ಟ್‌ಮೇನ್ ಮತ್ತು ಕೆಳ ನೌಕರರ ಮಕ್ಕಳಿಗೆ ಎಸ್. ಎಸ್. ಎಲ್. ಸಿ. ವರೆಗೆ ಧಾರ್ಥಿ ವೇತನ ಕೊಡಲಿಯಬೇಕು. ವೈದ್ಯಕೀಯ ಸೌಕರ್ಯಗಳು ಧರ್ಮಾರ್ಥ ಸಿಕ್ಕಬೇಕು. ಈ ಡಿವಿಜನಿನ ಪೋಸ್ಟ್‌ಮೇನ್‌ಗಳಿಗೆ ಕೊಸ್ಟಲ್ ಟೀಲಗಳನ್ನು ಒದಗಿಸಬೇಕು. ಕ್ಲಾಸ್ ಟು ವರ್ಸಿಯರ್ಸ್ ಮತ್ತು ಮೈಲ್‌ಜಿವರ್ಕಿಯರ್ಸ್ ರವರಿಗೆ ಈಗ ದೊರೆಯುವ ಭತ್ತೆ ರೂಪಾಯಿ 15/- ನ್ನು 30/- ಕ್ಕೆ ಏರಿಸಬೇಕು. ಇತ್ಯಾದಿ ವಿಷಯಗಳಲ್ಲಿ ನಿರ್ಣಯಗಳು ಪಾಸಾದುವು. ಬಳಿಕ ಕಾರ್ಯವಾಹಕ ಮಂಡಳಿಗೆ 20 ಜನರನ್ನು ಆರಿಸಲಾಯಿತು. ಅಧಿಕಾರಿ ವರ್ಗಕ್ಕೆ ಶ್ರೀಗಳಾದ ಕೊಚ್ಚಿಕಾರ್ ವರದರಾಯ ಪೈ, ಅಧ್ಯಕ್ಷರು, ಯು ಶ್ರೀನಿವಾಸರಾವ್ ಮತ್ತು ಅಲ್ಲಿ ಸಾಹೇಬ್ಸ್, (ಉಪಾಧ್ಯಕ್ಷರು), ಆರ್. ಇ. ಸೋನ್ಸ್ (ಮುಖ್ಯ ಕಾರ್ಯದರ್ಶಿ), ಯು. ಎಸ್. ಮೈದಿನ್ ಮತ್ತು ಎಚ್. ಪ್ರೇಮಾನಂದ ಶೆಣೈ (ಸಹಾಯಕ ಕಾರ್ಯದರ್ಶಿಗಳು) ಗೋವಾಲಕೃಷ್ಣ ಶೇಟ್ (ಖಜಾನ್ಜಿ) ಏ. ಎಸ್. ಕುಂದರ್ ಕೆ. ಶಿವರಾಮ ಮತ್ತು ಕೆ. ಟಿ. ನಾಯಕ್ (ಆಡಿಟರ್ಸ್) ಆರಿಸಲ್ಪಟ್ಟರು.

ನೇರಂಬಳ್ಳಿ- ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾಧೀಶ್ವ ತೀರ್ಥ ಸ್ವಾಮಿಗಳವರು ತಾ 16ರಂದು ನೇರಂಬಳ್ಳಿಯ ತಮ್ಮ ಮಠದಲ್ಲಿ ತಮ್ಮ ಗುರುಗಳ ಆರಾಧನೆಯನ್ನು ಮಹಾ ವೈಭವದಿಂದ ನೆರವೇರಿಸಿದರು. ಬ್ರಾಹ್ಮಣರಿಗೆ ಮಹಾ ಸಮಾರಾಧನೆ ಯದ್ದುದಲ್ಲದೆ ಬಡಬಗ್ಗರಿಗೂ ವಿಶೇಷರೀತಿಯಲ್ಲಿ ಅನ್ನದಾನವಾದುದು ಈ ಧಾರ್ಮಿಕ ಸಮಾರಂಭದ ವೈಶಿಷ್ಟ್ಯ.

ಶಿವ್ಕ— ಕಾಪು ಮತದಾರ ಕ್ಷೇತ್ರದಿಂದ ಮೈಸೂರು ವಿಧಾನ ಸಭೆಗೆ ಕಾಂಗ್ರೆಸ್ ಹುರಿಯಾಳು ಶ್ರೀ ಎಫ್. ಎಕ್ಸ್. ಡಿ. ಪಿಂಟೋರವರು ಚುನಾಯಿತರಾದ ಬಗ್ಗೆ ಮೆರವಣಿಗೆ, ಸಭೆಗಳಾಗಿ ಶ್ರೀಗಳಾದ ರೋಕ್ಕಿ ಫೆರ್ನಾಂಡಿಸ್, ಎಸ್. ಅಣ್ಣಯ್ಯ ಹೆಗ್ಡೆ, ಡಾ। ಕುಸ್ಟಣ್ಣಾಚಾರ್ ಮತ್ತು ಸ್ಥಳೀಯ ಚರ್ಚಿನ ಗುರುಗಳ ಭಾಷಣಗಳಾದುವು.

ಕನ್ನಡದಲ್ಲಿ ಮೊದಲನೆಯದೆಂದೇ ಹೇಳಬಹುದಾದ
ಅಣು ಶಕ್ತಿಯ ಸಚಿತ್ರ ವಿವೇಚನಾ ಗ್ರಂಥ

ಹಿರೋಶಿಮಾದಿಂದ ಜಿನೇವ

ಬರೆದವರು:

ಶ್ರೀ. ಯು. ರಾಘವೇಂದ್ರ ಆಚಾರ್ಯ, ಎಂ. ಎ., ನವದೆಹಲಿ.

ಮುನ್ನುಡಿಕಾರರು: **ಶ್ರೀ. ಶಿವರಾಮ ಕಾರಂತರು.**

ಪ್ರತಿಯೊಬ್ಬರೂ ಓದಲೇಬೇಕಾದ ನವೀನ ಪುಸ್ತಕ.

ಉತ್ತಮ ಕಾಗದ. ಬೆಲೆ. ರೂ. ೧—೪—೦.

ನವಯುಗ ಪ್ರೆಸ್, ಉಡುಪಿ.

ಗೇಣಿದಾರಿಕೆಯ ಜರೂರು ಕಾನೂನು

ಹಿಂದಿನ ಮೈಸೂರು, ಮುಂಬಯಿ ನುತ್ತು ಹೈದರಾಬಾದು ಹಾಗೂ ಮದ್ರಾಸು ರಾಜ್ಯಗಳಿಂದ ಹೊಸ ಮೈಸೂರು ರಾಜ್ಯಕ್ಕೆ ಸೇರಿರುವ ಭಿನ್ನಭಿನ್ನ ಭಾಗಗಳಲ್ಲಿರುವ ಗೇಣಿ ಕಾನೂನುಗಳಲ್ಲಿ ಏಕರೂಪತೆ ಇರುವುದಿಲ್ಲ. ಕೊಡಗಿನಲ್ಲಿ ಗೇಣಿ ಕಾನೂನೇ ಇರಲಿಲ್ಲ. ರಾಜ್ಯದ ಎಲ್ಲ ಭಾಗಗಳಿಗೂ ಅನ್ವಯಿಸುವಂತೆ ಸಾಧ್ಯವಿದ್ದಷ್ಟು ಮಟ್ಟಿಗೆ ಏಕಪ್ರಕಾರವಿರುವ ಗೇಣಿದಾರಿಕೆ ಕಾಯಿದೆಯೊಂದನ್ನು ಜಾರಿಗೆ ತರುವ ಪ್ರಶ್ನೆಯು ಸರಕಾರದ ಪರಿಶೀಲನೆಯಲ್ಲಿದೆ. ಇದಾಗುವ ವರೆಗೆ ಕೊಡಗನ್ನು ಹೊರತುಪಡಿಸಿ ಉಳಿದೆಲ್ಲ ಭಾಗಗಳಲ್ಲಿ ಈಗಿದ್ದ ಸ್ಥಿತಿಯನ್ನೇ (ಸ್ಟೇಟಸ್‌ಕೋ) ಕಾಪಾಡುವ ಮತ್ತು ಅದೇ ಕಾಲಕ್ಕೆ ಗೇಣಿದಾರರ ಸಾಗುವಳಿ ಹಕ್ಕು ಬಾಧ್ಯತೆಗಳಿಗೆ ಧಕ್ಕೆಬಾರದ ರೀತಿಯಲ್ಲಿ ಏರ್ಪಾಡು ಮಾಡುವುದು ಅವಶ್ಯವೆನಿಸಿದೆ. ಅದೇ ಪೇರೆಗೆ ಕೊಡಗಿನ ಗೇಣಿದಾರರಿಗೂ ರಕ್ಷಣೆ ಒದಗಿಸುವಂತೆ ಮತ್ತು ಯೋಗ್ಯ ಗೇಣಿಯನ್ನು ನಿರ್ಧರಿಸುವಂತೆ ಕನಿಷ್ಠ ಪ್ರಮಾಣದ ಏರ್ಪಾಡುಗಳ ನ್ನೊಳಗೊಂಡ ಒಂದು ಗೇಣಿ ಕಾನೂನನ್ನು ಜಾರಿಗೆ ತರುವುದೂ ಅವಶ್ಯವೆನಿಸಿದೆ. ಈ ಪೇರೆಗೆ ಈ ಕೆಳಗಿನ ನಾಲ್ಕು ಗೇಣಿದಾರಿಕೆಯ ಜರೂರು ಕಾನೂನುಗಳನ್ನು ಮಾರ್ಚ್ ೧೧, ೧೯೫೭ರಂದು ಹೊರಡಿಸಲಾಗಿದೆ.

೧. ೧೯೫೭ನೇ ಇಸ್ವಿಯ ಮುಂಬಯಿ ಟೆನೆನ್ಸಿ (ಸಸ್ಪೆನ್‌ಷನ್ ಆಫ್ ಪ್ರಾಸಿಜನ್ಸ್ ಆ್ಯಂಡ್ ಅಮೆಂಡ್‌ಮೆಂಟ್) ಆರ್ಡಿನೆನ್ಸ್.

೨. ೧೯೫೭ನೇ ಇಸ್ವಿಯ ಹೈದರಾಬಾದು ಮತ್ತು ಮದ್ರಾಸ್ ಪ್ರದೇಶಗಳ ಟೆನೆನ್ಸಿ (ಸಸ್ಪೇಷನ್ ಆಫ್ ಪ್ರಾವಿಜನ್ಸ್ ಮತ್ತು ಅಮೆಂಡ್‌ಮೆಂಟ್) ಆರ್ಡಿನೆನ್ಸ್.



ಇದೇ ಮಾರ್ಚಿ ೬ ರಿಂದ ನಾಲ್ಕು ನೃತ್ಯ ಪ್ರದರ್ಶನಗಳನ್ನು ಮುಂಬಯಿ ರಂಗಭವನದಲ್ಲಿ ನೀಡಿದ ಅಮೇರಿಕದ ಸಾರ್ ಫ್ರಾನ್ಸಿಸ್ಕೊ ಬಾಲೆನೃತ್ಯ ನಿಕಾರದ ಮುಂಡಳಿಯ ಸದಸ್ಯರು "ನೇಟ್ ವೇ ಆಫ್ ಇಂಡಿಯಾ" ದ ಮುಂದೆ (ಇದು ಮುಂಬಯಿಯ ಪ್ರೇಕ್ಷಣೀಯ ಸ್ಥಾನ; ಮತ್ತು ಭಾರತದ ಹೆಬ್ಬಾಗಿಲು ಎಂದು ಹೆಸರಾದ ಸ್ಥಳ) ನೃತ್ಯಭಂಗಿಯಲ್ಲಿ ನಿಂತಿರುವುದನ್ನು ಕಾಣ ಬಹುದು.

೩. ೧೯೫೭ನೇ ಇಸ್ವಿಯ ಮೈಸೂರು ಟೆನೆನ್ಸಿ (ತಿದ್ದುಪಡಿ ನುತ್ತು ಗೇಣಿದಾರಿಕೆ ಮುಂದುವರಿಸುವ) ಆರ್ಡಿನೆನ್ಸ್.

೪. ಕೊಡಗು ಟೆನೆಂಟ್ಸ್ ಆರ್ಡಿನೆನ್ಸ್, ೧೯೫೭.

೧೯೪೮ರ ಮುಂಬಯಿ ಟೆನೆನ್ಸಿ ಮತ್ತು ಒಕ್ಕಲುತನದ ಭೂಮಿಗಳ ಕಾಯಿದೆಯನ್ನು ತಿದ್ದುಪಡಿ ಮಾಡುವ ಆರ್ಡಿನೆನ್ಸ್ ಪ್ರಕಾರ ಗೇಣಿದಾರರನ್ನು ಬಿಡಿಸಲು ಭೂ ಮಾಲೀಕರಿಗಿದ್ದ ಅಧಿಕಾರವನ್ನು ಮತ್ತು ಗೇಣಿದಾರನು ಜಮೀನು ಕೊಳ್ಳುವುದನ್ನು ಕುರಿತು ಇದ್ದ ಅಧಿಕಾರವನ್ನು ದಿನಾಂಕ ೭ನೇ ಡಿಸೆಂಬರ್ ೧೯೫೬ರ ಪರಿಗೆ ಸಸ್ಪೆಂಡುಗೊಳಿಸಲಾಗಿದೆ. ಕಂದಾಯ ಅಧಿಕಾರಿಗಳ ಹತ್ತಿರ ರಿಜಿಸ್ಟರ್ ಆಗದೆ ರೈತರು ತಾವಾಗಿ ಗೇಣಿ ಸಾಗುವಳಿ ಬಿಟ್ಟು ಕೊಡುವ ಒಪ್ಪಂದಗಳಿಗೆ ಅಕ್ರಮವೆಂದು ಸಾರಲಾಗಿದ್ದು ಈ ನಿಯಮದ ಉಲ್ಲಂಘನೆಗೆ ದಂಡವನ್ನು ವಿಧಿಸಲಾಗಿದೆ.

ಹೈದರಾಬಾದು ಮತ್ತು ಮದ್ರಾಸ್ ಟೆನೆನ್ಸಿ ಕಾಯಿದೆಗಳಿಗೆ ತಿದ್ದುಪಡಿ ಮಾಡುವ ಜರೂರು ಕಾನೂನುಗಳೆಲ್ಲೂ ಇದೇ ಬಗೆಯ ಏರ್ಪಾಡು ಗಳನ್ನು ಮಾಡಲಾಗಿದೆ. ಗೇಣಿದಾರನು ಗೇಣಿಗೆ ಪಡೆದ ಯಾವುದೇ ಭೂಮಿಯಲ್ಲಿಯ ತನ್ನ ಹಕ್ಕನ್ನು ಭೂಮಾಲೀಕರಿಗೆ ಬಿಟ್ಟುಕೊಡುವ ಸಂಬಂಧದಲ್ಲಿ ಬಿಟ್ಟುಕೊಡುವಿಕೆಯು ಪ್ರಾಮಾಣಿಕವಾಗಿರುವಂತೆ ನೋಡಿಕೊಳ್ಳಲು ಒಂದು ನಿರ್ದಿಷ್ಟ ಕ್ರಮವನ್ನು ವಿಧಿಸಲಾಗಿದೆ. ಈ ಕ್ರಮವನ್ನು ಉಲ್ಲಂಘಿಸುವವರಿಗೆ ದಂಡನೆಯನ್ನೂ ಜರೂರು ಕಾನೂನಿನಲ್ಲಿ ಹಾಕಿಕೊಡಲಾಗಿದೆ. ಗೇಣಿದಾರನು ಬಿಟ್ಟುಕೊಟ್ಟ ಜಮೀನು ಗಳನ್ನು ಭೂ ಮಾಲೀಕರು ಇಟ್ಟುಕೊಳ್ಳಲು ಆರ್ಹರಿಲ್ಲದಿದ್ದ ಸಂದರ್ಭಗಳಲ್ಲಿ ಅವುಗಳ ಅ ದಲಿತನನ್ನು ಸರಕಾರವೇ ವಹಿಸಿಕೊಳ್ಳಲು ಆ ನಕಾರ ಕಲ್ಪಿಸಲಾಗಿದೆ.

ಮೈಸೂರು ಟೆನೆನ್ಸಿ ಆರ್ಡಿನೆನ್ಸ್ ಪ್ರಕಾರ ಗೇಣಿದಾರಿಕೆಯನ್ನು ಇನ್ನೊಂದು ವರ್ಷದ ಅ ವಧಿಗಾಗಿ ಮುಂದುವರಿಸುವ ಏರ್ಪಾಡು ಮಾಡ ಲಾಗಿದೆ. ಗೇಣಿದಾರರು ಸ್ವಸಂತೋಷದಿಂದ ಬಿಟ್ಟ ಭೂಮಿಗಳ ಅದಲಿತವನ್ನು ಸರಕಾರವು ವಹಿಸಿಕೊಳ್ಳುವುದಕ್ಕೂ ಏರ್ಪಾಡು ಮಾಡ ಲಾಗಿದೆ.

ಕೊಡಗು ಟೆನೆನ್ಸಿ ಆರ್ಡಿನೆನ್ಸ್ ಮೇರೆಗೆ ಗೇಣಿದಾರರು ಕೊಡಬೇಕಾದ ಸರಮಾವಧಿ ಗೇಣಿ ಬೆಳೆದು ಅಥವಾ ಬೆಳೆಗಳ ೪ ಭಾಗ ಅಥವಾ ಅದಕ್ಕೆ ಬೆಲೆ ಎಂದು ನಿರ್ಧರಿಸಲಾಗಿದೆ. ಕೆಲವೊಂದು ವಿಶಿಷ್ಟ ಪರಿಸ್ಥಿತಿಗಳ ಹೊರತು ಗೇಣಿದಾರರನ್ನು ಹೊರಗೆ ಹಾಕುವುದನ್ನೂ ಪ್ರತಿಬಂಧಿಸಲಾಗಿದೆ. ತಾವಾಗಿಯೇ ಗೇಣಿ ಸಾಗುವಳಿ ಬಿಟ್ಟು ಕೊಟ್ಟಲ್ಲಿ ಅವುಗಳ ಅದಲಿತವನ್ನು ಸರಕಾರ ವಹಿಸಲು ಏರ್ಪಾಡಿದೆ.

ಈ ಜರೂರು ಕಾನೂನುಗಳ ಬದಲಿಗೆ ಹೊಸ ಕಾನೂನನ್ನು ರಚಿಸುವುದಕ್ಕಾಗಿ ಶಾಸನ ಸಭೆಯು ಮುಂಬಯಿನ ಅಧಿವೇಶನದಲ್ಲಿ ಮಸೂದೆಗಳನ್ನು ತರಲಾಗುವುದು

(ಮೈಸೂರು ಸರಕಾರದ ಪತ್ರಿಕಾ ಪ್ರಕಟಣೆ)

ಏಲಂ ಪ್ರಕಟಣೆ

ಈ ಮೂಲಕ ಎಲ್ಲಾ ಜನರಿಗೆ ತಿಳಿಯ ಪಡಿಸುವದೇನೆಂದರೆ–

ಪರ್ಕಳ ಪಂಚಾಯತ ಬೋರ್ಡಿನ ದಿನವಹೀ ಮಾನುವಸೂಲಿಗಾರ್ಕೆಟ್ಟು, ವಾರ ಸಂತೆ ಮತ್ತು ಗಾಡಿ ಟೌಕಗಳಲ್ಲಿ 1957 ಏಪ್ರಿಲ್ ತಾರೀಕು 1ರಿಂದ 1958ನೇ ಮಾರ್ಚಿ ತಾರೀಕು 31ರ ವರೆಗೆ ಹೂರ್ತಿ ಒಂದು ವರ್ಷದಲ್ಲಿ ಸುಂಕ ವಸೂಲುಮಾಡುವ ಹಕ್ಕನ್ನು ಇದೇ ಮಾರ್ಚಿ 31ಗಳ ತಾರೀಕು 25ನೇ ಸೋಮವಾರ ಅಪರಾಹ್ನ ಘಂಟೆ 3ಕ್ಕೆ ಪ್ರಾರಂಭವಾಗಿ ಬೋರ್ಡು ಆಫೀಸಿನಲ್ಲಿ ಬಹಿರಂಗವಾಗಿ ಪ್ರತ್ಯಕ್ಷಪ್ರತ್ಯೇಕ ವಾಗಿ ಏಲಂ ಮಾಡಲಾಗುವುದು.

ಹೆಚ್ಚಿನ ವಿವರಗಳನ್ನು ಬೋರ್ಡು ಆಫೀಸಿನಲ್ಲಿ ತಿಳಿಕೊಳ್ಳಬಹುದು.

H. ಸದಾಶಿವ ಹೆಗ್ಡೆ,
ಪ್ರೆಸಿಡೆಂಟ್.
ಪಂಚಾಯತಬೋರ್ಡು ಆಫೀಸು,
ಪರ್ಕಳ, ತಾ. 16—3—1957.

ಪ್ರಕಟಣೆ

ಉಡ್ಪಿ ತಾಲ್ಲೂ ಮಾಡಬೆಟ್ಟು ಗ್ರಾಮದಲ್ಲಿರುವ—ಅಲೇಸ್ ಮೆಂಡೋಸರ ಮಗ—ಅಲ್ಬರ್ಟ್ ಮೆಂಡೋಸನು ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದೇನೆಂದ್ರೆ—

ನನ್ನ ತಂದೆ ಸದ್ರಿ ಅಲೇಸ್ ಮೆಂಡೋಸರು ಈಗ ಸುಮಾರು 80 ವರುಷಕ್ಕೆ ಮಿಕ್ಕಿ ವ್ರಾಯ ಸಂಪವರಾಗಿದ್ದು ಕಾಯಿಲೆಯಿಂದ ದೇ ಹಸ್ಥಿತಿ ಕೂಡಾ ತೀರಾಹಾ ಳಾಗಿ ಬುದ್ಧಿ ವಿಕಾರವುಳ್ಳವರಾಗಿರುತ್ತಾರೆ. ಸದ್ರಿ ಮೂಡ ಬೆಟ್ಟು ಗ್ರಾಮದಲ್ಲಿ ನನ್ನ ತಂದೆಯವರಿಗೆ ಕೆ ಲವು ಆಸ್ತಿಯಿದೆ. ಸದ್ರಿ ಆಸ್ತಿಯನ್ನು ಅವರ ಒಬ್ಬನೇ ಮಗನಾದ ನನಗೆ ಕೊಡುವ ತಂಪ ಮೇರೆ ಕೂಡಾ ನನ್ನ ಸ್ವಂತ ಫಂಡಿನ ಅ ವೇಜಿನಿಂದ ನಾನು ಸದ್ರಿ ಆಸ್ತಿ ಜವಾಬ್ದಾರಿಯಿಂದ ಸಲ್ಲಲಿಕ್ಕಿದ್ದ ಉಡಿನ ಖರ್ಚಾವನ್ನು ತೀರಿಸಿ ಸದ್ರಿ ಆಸ್ತಿಯಲ್ಲಿ ನುನೆ–ಹಟ್ಟಿ ಕೊಟ್ಟಿಗೆ ಕಟ್ಟಿಸಿ ವರ್ಷಕ್ಕೆ ಕೃತ ಗಳು ಮಾಡಿಸಿರುತ್ತೇನೆ ಆ ಬಗ್ಗೆಲ್ಲಾ ನನಗೆ ರೂಪ್ಯ 4500/– ಸಾಲ್ಕುಸಾವಿರದ ಅೈನೂರಕ್ಕೆ ಮಿಕ್ಕಿ ಖರ್ಚಾಗಿಯಿನೆ ಮತ್ತು ನಾನು ನ, ತಂದೆಯವರು ಪಟ್ಟಿಂದ ವಾಸ್ತವಿಸಿ ವ, ಜೀವಿಸಿಕೊಂಡು ಬರುತ್ತಿದ್ದೆವು. ವಿಷ್ಣುನಗರು ಹೀಗಿರುವಲ್ಲಿ ನನ್ನ ಅಕ್ಕ ನುಗ್ಗೆಲೀನ ಮೆಂಡೋಸ ಬಾಯಿ ಬಗ್ಗೆರೆಯ ನನ್ನ ತಂದೆಯವರಿಗೆ ಮರ್ಥೋಡನೆ ಕೊಟ್ಟು ನನ್ನೆ ಜೊತೆಯಲ್ಲಿ ದ್ದ ಅವರನ್ನು ನಾನು ಮನೆಯಲ್ಲಿ ಇಲ್ಲದ ಸ ಮಯ ನೋಡಿ ಕೆಲವು ಜರಸೊತ್ತಿಗಳ ಸ ಮೇತ ತನ್ನ ಮನೆಯಾದ ಶಿವ ಗ್ರಾಸುರದ ಆಟ್ಟಿಂಜೆ ಎಂಬಲ್ಲಿ ಕರಕೊಂಡು ಹೋಗಿ ಅಲ್ಲಿ ತನ್ನ ಜೊತೆಯಲ್ಲಿ ಇರಿಸಿಕೊಂಡಿದ್ದಾರೆ ಅಲ್ಲದೆ ನನಗೆ ಮೋಸಪಡಿಸಿ ಅಕ್ರಮ ಲಾಭ ಹೊಂದಬೇಕೆಂಬ ಯಿರಾಧೆಯಿಂದ ಅ ಆಸ್ತಿಯ ಬಗ್ಗೆ ಕಲ್ಪನೆ ರಿಕಾರ್ಡುಗಳು ತಯಾರುಮಾಡುತ್ತಾರಾಗಿ ನಾನು ತಿಳಿಯುತ್ತೇನೆ. ಆ ಪ್ರಕಾರ ಅವರಿಂದ ಯಾವುದೇ ನಮೂದಿಸಿರುವ – ನ – ಯಿನ್ನು ನುಂದೆ ಮಾಡಿಸಿಕೊಳ್ಳುವ ಯಾವತ್ತೂ ದ ಸ್ತಾವೇಜುಗಳು ನನ್ನೆರೆ ಮೋಸವನ್ನುಂಟು–ಳಿಸಲಿ ಚಿನವೂ ಪ್ರತಿಫಲಯಿಲ್ಲವೆಂಬ ನುತ್ತು ನಿರ್ಧಾ ಗತಕ್ಕದ್ದು ವ ಜ್ಯಾರಿಗೆ ಬರತಕ್ಕದ್ದು ಮತ್ತು ನನ್ನಪಕ್ಕಕ್ಕೆ ವಿರೋಧವಾಗಿ ಭಾವಿನತಕ್ಕದ್ದೂ ಕೂಡಾ ಅಲ್ಲ ಎಂಬ ಸಂಗ್ತಿ ತಿಳಿದಿರಲಿ.

Albert Mendonsa.
ಮೂಡಬೆಟ್ಟು ತಾ. 19–3–1957.

ಮದ್ರಾಸು

ಭಕ್ತ ಶ್ರೀ ಗೋವಿಂದದಾಸರ ಸ್ಮಾರಕವಾಗಿ— ಶ್ರೀ ಕೆ. ಸೀತಾರಾಮ ರಾಯರು ಮದ್ರಾಸ್ ತಿರುವಲ್ಲಿ ಕೇಣಿ ಉತ್ತರಾದಿ ಮಠದಲ್ಲಿ ಏರ್ಪಡಿಸಿದ ಉಡುಪಿ ಶ್ರೀ ಶ್ರೀಧರಾಚಾರ್ಯರ 15ದಿವಸಗಳ ಹರಿಕಥಾಪ್ರಕಾಶನೆಯು ತಾ. ೧೫ರಲ್ಲು ಮಂಗಲೋತ್ಸವದೊಡನೆ ಸಮಾಪ್ತವಾಯಿತು. ಲೈಟ್ ಸರ್ವಿಸ್ ಕಮಿಶನ ಚೀರ್‌ಮೆನ್ ಶ್ರೀ ರಂಗರಾಯರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ, ಶ್ರೀ ಸೀತಾರಾಮ ರಾಯರು ಶ್ರೀ ಭಂಡಾರಕೇರಿ ಮಠದ ಶ್ರೀ ವಿದ್ಯಾಮಾನ್ಯ ತೀರ್ಥಸ್ವಾಮಿಗಳವರಿಂದ ಉಪಸ್ಥಾನ ತದನಂತರ ಹರಿಕಥಾವಳಿಗಳನ್ನು ಏರ್ಪಡಿಸಿದ ಸವಿ ನೆನಪಿಗಾಗಿ ಇವರಿಗೆ ಮದ್ರಾಸಿನ ಮಾಧ್ವ ವೃಂದದ ಕಡೆಯಿಂದ ಮಾನಪತ್ರವೀಯಲಾಯಿತು. ಶ್ರೀ ಸೀತಾರಾಮ ರಾಯರು ಸೂಕ್ತವಾದ ಉತ್ತರವಿತ್ತರು. ಅಭಿನವ ಮನ್ನಾಕ್ಕ, ಪ್ರಸಾದ ವಿತರಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ಇನ್ನೂ ಚಂದಾಹಣವನ್ನು

ಕಳುಹಿಸದವರು ಯಮನಾಡಿ ಕೂಡಲೇ ಕಳುಹಿಸಿಕೊಡುವಂತೆ ಇನ್ನೊಮ್ಮೆ ಕೇಳಿಕೊಳ್ಳುತ್ತೇವೆ. ಅಂತೂ ಸಕಾಲವಲ್ಲ ಚಂದಾ ಪಾವತಿಯಾಗದಿದ್ದರೆ ನಾವು ಅನಿವಾರ್ಯವಾಗಿ ಕಳುಹಿಸುವ ವಿ. ಪಿ. ಪಿ. ಯನ್ನಾದರೂ ಪಡೆಕೊಳ್ಳುವಂತೆ ವಿಜ್ಞಾಪಿಸುತ್ತೇನೆ.

ಮೆನೇಜರ್, ನವಯುಗ

ನಿಮ್ಮಷ್ಟಕ್ಕೆ ನೀನೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಸರಿಶ್ರಮದಿಂದ ಬರೆದಿರುವ—
ದಿ! ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:– ಸಾಧಾರಣ ಪ್ರತಿ– ರೂ. ೧–೮–೦. (ಟಪ್ಪಾಲು ಖರ್ಚು ಬೇರೆ)
ಪ್ರತಿಗಳು ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಕುಮಾರಿ ಬಿಲ್ಲೆಗಳು
Govt. Regd.
ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ
ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-
ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!
P. DEVEE & Co. (N. J.) CALCUTTA–40.
ಸ್ವಾಸ್ಥ್ಯಸ್ಥರು: ಷಾ ಕೆಂಪೆನಿ, ಮಂಗಳೂರು—1.

ಮಂಗಳೂರು

ಪ. ಕ. ಜಿಲ್ಲೆಯಿಂದ ಲೋಕ ಸಭೆಗೆ ಆಯ್ಕೆ

ಮಂಗಳೂರು ಕ್ಷೇತ್ರದಿಂದ ಶ್ರೀ ಕೆ. ಆರ್. ಆಚಾರ್ಯರು ಆರಿಸಲ್ಪಟ್ಟರು— ಮಂಗಳೂರು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಉಮೇದ್ವಾರಿ ಶ್ರೀ ಕೆ. ಆರ್. ಆಚಾರ್ಯರವರು ತನ್ನ ಕಮ್ಯುನಿಸ್ಟ್ ಪ್ರತಿಸ್ಪರ್ಧಿ ಶ್ರೀ ಎ. ಕೃಷ್ಣ ಶೆಟ್ಟರವರಿಗಿಂತ 58,226 ಅಧಿಕ ಮತಗಳನ್ನು ಪಡೆದು ವಿಜಯಿಯಾದರು. ಇವರ ಸ್ವತಂತ್ರ ಪ್ರತಿಸ್ಪರ್ಧಿ ಡಾ. ಎಂ. ಎಸ್. ಎ. ಶರ್ಮರಪಡು ತನ್ನ ಅಲ್ಪ ಮತ್ತಗಳನ್ನು ಪಡೆದು ಶೋಚನೀಯ ಕಳೆ ಕೊಂಡಿರುವರು. ಶ್ರೀ ಕೆ. ಆರ್. ಆಚಾರ್ಯರನ್ನು ಕಾಂಗ್ರೆಸ್ ಕಾರ್ಯಕರ್ತರು ಮೆರವಣಿಗೆ ಮಾಡಿಸಿದರು.

ವಿವರಗಳು:

ಒಟ್ಟು ಮತದಾರರ ಸಂಖ್ಯೆ	4,36,460
ಮತದಾನ ವಿತ್ತವರ ಸಂಖ್ಯೆ	2,50,187
ಶ್ರೀ ಕೆ. ಆರ್. ಆಚಾರ್ಯ (ಕಾ)	1,93,599
ಶ್ರೀ ಎ. ಕೃಷ್ಣ ಶೆಟ್ಟಿ (ಕ)	85,373
ಎಂ. ಎಸ್. ಎ. ಶರ್ಮ (ಸ್ವ)	21,213
ಅಸಿಂಧು ಮತಗಳು —	9

ಉಡುಪಿ ಕ್ಷೇತ್ರದಿಂದ ಶ್ರೀ ಶ್ರೀನಿವಾಸ ಮಲ್ಯರು ಆರಿಸಲ್ಪಟ್ಟರು—

ಕಾಂಗ್ರೆಸ್ ಸ್ವಾನಾರ್ಥಿ ಶ್ರೀ ಯು. ಶ್ರೀನಿವಾಸ ಮಲ್ಯರು ತನ್ನ ಪ್ರತಿಸ್ಪರ್ಧಿ ಪ್ರಜಾಸೋಶಿಯಲಿಸ್ಟ್ ಶ್ರೀ ಡಿ. ಮೋಹನ ರಾಯರಿಗಿಂತ 29,808 ಅಧಿಕ ಮತಗಳನ್ನು ಪಡೆದು ವಿಜಯಿಗಳಾದರು.

ಮತದಾರರ ಸಂಖ್ಯೆ 4,12,605. ಮತದಾನ ಮಾಡಿದವರ ಸಂಖ್ಯೆ 2,16,206. ಶ್ರೀ ಯು. ಶ್ರೀನಿವಾಸ ಮಲ್ಯ (ಕಾ) 1,22,754 ಶ್ರೀ ಡಿ. ಮೋಹನರಾವ್ (ಪ್ರ. ಸೊ.) 93,451 ಅಸಿಂಧು ಮತ 1.

ಡಾ. ಎಮ್. ವಿ. ಶೆಟ್ಟರು— ವಿಮರ್ಶೆಯು ಮತ್ತು ಶಾಸ್ತ್ರಕೋಶದ ಸರ್ಜರಿಯಲ್ಲಿ ತರಬೇತಿಪಡೆಯಲು ಇಂಗ್ಲಾಂಡಿಗೆ ತೆರಳಿದ ಡಾ. ಎಸ್. ವಿ. ಶೆಟ್ಟಿ; ಎಫ್. ಆರ್. ಸಿ. ಎಸ್. (ಲಂಡನ್) ಅವರು ಇಂಗ್ಲಂಡಿನಿಂದ ಮುಂಬಯಿ ಮೂಲಕ ವಿಮಾನದಲ್ಲಿ ಮಂಗಳೂರಿಗೆ ಹಿಂತಿರುಗಿ ಬಂದಿರುವರು.

ಬೆಂಗಳೂರು-ಮಂಗಳೂರು ಬಸ್ ಸಂಪರ್ಕ— ಮಂಗಳೂರು ಮತ್ತು ಬೆಂಗಳೂರು ನಗರಗಳ ನಡುವೆ ನೇರವಾದ ಬಸ್ ಪ್ರಯಾಣವನ್ನು ಏರ್ಪಡಿಸಲಾಗುವುದೆಂದು ತಿಳಿದುಬರುತ್ತದೆ. ಇದೇ ತಾ. 18ರಲ್ಲಿ ಇಲ್ಲಿ ಸಭೆ ಸೇರಲಿರುವ ರಾಜ್ಯದ ಸಾರಿಗೆ ಸಂಪರ್ಕಾಧಿಕಾರಿಗಳ ಸಭೆಯಲ್ಲಿ ಈ ವಿಚಾರ ಪರಿಶೀಲನೆಗೆ ಬರಲಿದೆಯೆಂದು ತಿಳಿದುಬರುತ್ತದೆ.

ನೃತ್ಯನಾಟಕ— ಸಂಗೀತ ಕಲಾ ಪ್ರಸಾರಕ ಸಂಘದ ಆಶ್ರಯದಲ್ಲಿ ಮುಂಬಯಿ ಶ್ರೀ ಸಚಿನ್‌ಶಂಕರ್ ಮತ್ತು ಬಳಗದವರು ತಾ. 20ರಿಂದ 11ರ ತನಕ ಡೋನ್‌ಬೋಸ್ಕೊ ಸಭಾ ಭವನದಲ್ಲಿ 'ರಾಮಾಯಣ', 'ಚೆನ್ನಕೇಶವ ಮತ್ತು ಕಾಳಿಂಗ', ಎಂಬೆರಡು ನೃತ್ಯ ನಾಟಿಕೆಗಳನ್ನು ಇತರ ನೃತ್ಯ ಪ್ರದರ್ಶನಗಳನ್ನು ಏರ್ಪಡಿಸಿರುವರು.

ಪೋಲೀಸರ ಮನವಿ— ಮೈಸೂರು ಸರಕಾರದವರು ಕಳದ ಜನವರಿ ತಿಂಗಳಿಂದ ಜಾರಿಗೆ ಬರುವಂತೆ ಹೊರಡಿಸಿದ ಸರಕಾರೀ ನೌಕರರ ಹೊಸ ವೇತನ ದರಗಳ ಅಚ್ಚಿಯಿಂದ ದ. ಕ. ಜಿಲ್ಲೆಯ ಪೋಲೀಸರಲ್ಲಿ ತುಂಬಾ ಅತೃಪ್ತಿಯುಂಟಾಗಿದ್ದು ಇತರ ನೌಕರರ ಸ್ಥಾನಕ್ಕಿಂತ ಪೋಲೀಸ್ ನೌಕರರ ವೇತನ ದರಗಳು ಹೀನಸ್ಥಿತಿಯಲ್ಲೇ ಉಳಿಸಲಾಗಿದೆ ಮತ್ತು ಅವರಿಗೆ ಹೊರೆಯುತ್ತಿದ್ದ ಕೆಲವು ಭತ್ತೆಗಳಲ್ಲಿ ಕಡಿತಮಾಡಲಾಗಿದೆ. ಎಂದೂಈ ಅಚ್ಚಿಯನ್ನು ಪುನರ್ವಿಮರ್ಶಿಸಿ ಪೋಲೀಸ್ ನೌಕರರ ಕಷ್ಟತರವಾದ ಕೆಲಸವನ್ನು ಜನಾಬ್ದಾರಿಗಳನ್ನು ಗಮನಿಸಿ ಪೆಷ್ ಕಾನ್ಸ್‌ಟೆಬಲರಿಗೆ (ಎಸ್. ಎಸ್. ಎಲ್. ಸಿ.) ರೂ. 60-3-90-4-120 ನುತ್ತು ಎಸ್. ಎಸ್. ಎಲ್. ಸಿ. ಗೂಗೆದಾರಿಗೆ ರೂ. 50-3-80-4-120ರಂತೆನುತ್ತು ಕಾನ್‌ಸ್ಟೇಬಲ್‌ರಿಗೆ ಪ್ರಾಥಮಿಕ ಶಾಲಾ ಉತ್ತಾರ್ಣ ರಿಗೆ ರೂ. 40 3-50-3-80 ರಂತೆ ವೇತನ ದರ ನಿಗದಿಸಬೇಕೆಂಬುದಾಗಿ ಒತ್ತಾಯಿಸುವ ಮನವಿಯೊಂದನ್ನು ಮುಖ್ಯ ಮಂತ್ರಿಗಳಿಗೂ ಪೊಲೀಸ್ ಮಂತ್ರಿಗಳಿಗೂ ಹಾಗೂ ಪೋಲೀಸ್ ಇನ್ಸ್‌ಪೆಕ್ಟರ್ ಜನರಲರಿಗೂ ಕಳುಹಿಸಲಾಗಿದೆ ಎಂದು ತಿಳಿದುಬರುತ್ತದೆ.

ಕರ್ನಾಟಕ ಪೊಲಿಟೆಕ್ನಿಕ್ ವಾರ್ಷಿಕೋತ್ಸವ— ತಾ. 15ರಂದು ಸಂಜೆ ನಾಡಕಛೇರಿಯ ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನ್‌ನ ಫಿಜಿಸ್ಟ್ರಿ ಡಾ! ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಿಗಿತು. ಪೊಲಿಟೆಕ್ನಿಕಿನ ಪ್ರಿನ್ಸಿಪಾಲ್ ಶ್ರೀ ಎನ್. ಎಸ್. ಜತ್ತನ್ನವರು ಸ್ವಾಗತಿಸಿ ವರದಿಯನ್ನೋದುತ್ತಾ ಈ ಸಂಸ್ಥೆಗೆ ಸರಕಾರದಿಂದ ರೂ. 72,000 ಗ್ರಾಂಟು ಒಕ್ಕಿರುವುದೆಂದು ತಿಳಿಸಿ ಈ ಸಂಸ್ಥೆಯ ಪ್ರಯೋಜನವನ್ನು ಜನರು ಹೆಚ್ಚು ಹೆಚ್ಚಾಗಿ ಪಡೆಯಬೇಕೆಂದು ಆಪೇಕ್ಷಿಸಿದರು. ಶ್ರೀಮತಿ ಪೈಗಳು ಬಹುಮಾನ ವಿತರಣೆ ಮಾಡಿದರು.

ಡಾ! ಪೈಗಳು ತಮ್ಮ ಅಧ್ಯಕ್ಷ ಭಾಷಣದಲ್ಲಿ ನವಮ್ಯಸೂರಿನ ಯೂನ ಜಿಲ್ಲೆಯಲ್ಲೂ ಇಲ್ಲವಷ್ಟು ವಿದ್ಯಾಸಂಸ್ಥೆಗಳನ್ನು ಈ ಜಿಲ್ಲೆಯಲ್ಲಿ ಖಾಸಗಿ ಸಂಸ್ಥೆಗಳು ನಡೆಸುತ್ತಿವೆ ಎಂದರು. ದೇಶದಸರ್ವತೋಮುಖ ಅಭಿವೃದ್ಧಿಗಾಗಿ ಯೋಜನಾರೂಪದಲ್ಲಿ ಕೋಟಿಗಟ್ಟಲೆ ರೂಪಾಯಿಯನ್ನೂ ಖರ್ಚುಮಾಡುತ್ತಿರುವ ಈಸಮಯದಲ್ಲಿ ದೇಶಕ್ಕೆ ಯೋಗ್ಯ ತಾಂತ್ರಿಕ ಸಿಬಂಧಿಯ ಅವಶ್ಯಕತೆ ಇನ್ನೆಷ್ಟು ಅಂತಹ ಅವಶ್ಯಕತೆಗಳನ್ನು ಪೂರೈಸುವ ನಿಟ್ಟಿನಲ್ಲಿ ಮಹತ್ವಾಕಾಂಕ್ಷೆಗಳನ್ನು ಈ ಪೊಲಿಟೆಕ್ನಿಕ್ ನುತ್ತು ಇಂಜಿನಿಯರಿಂಗ್ ಕಾಲೇಜುಗಳು ಮಾಡುತ್ತಿರುವುದಾಗಿ ಹೇಳಿದರು. ಈ ಕರ್ನಾಟಕ ಪೊಲಿಟೆಕ್ನಿಕ್ ಕಾಲೇಜನ್ನು ಇಂಜಿನಿಯರಿಂಗ್ ಕಾಲೇಜಾಗಿ ಪರಿವರ್ತಿಸಬೇಕಾಗಿ ಮದ್ಯಾಸು ಸರಕಾರಕ್ಕೆ ಕೇಳಿಕೊಂಡಾಗ ಅವಕ್ಕೆ ಹೆಚ್ಚಿನ ಗಮನ ಕೊಡಲಾಗಲಿಲ್ಲ. ಇವರಿಂದಾಗಿ ಉಡುಪಿಯಲ್ಲೊಂದು ಇಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸಿ ಅದನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಂಯೋಜಿಸಲು ಯೋಚಿಸಲಾಯಿತು. ಈ ವಿಚಾರ ಪರಿಶೀಲನೆ ನಡೆಸಲು ಕರ್ನಾಟಕ ವಿಶ್ವವಿದ್ಯಾಲಯದ ಆಯೋಗವು ಉಡುಪಿಗೆ ಬಂದು ಈ ಜಿಲ್ಲೆಗೊಂದು ಇಂಜಿನಿಯರಿಂಗ್ ಕಾಲೇಜ್ ಸ್ಥಾಪಿಸುವ ಅವಶ್ಯಕತೆಯಿದೆ ಎಂದು ಅಭಿಪ್ರಾಯ ಸಲ್ಲಿಸಿರು. ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲೇಬೇಕಾಗಿದೆ ಎಂದು ಡಾ. ಪೈಗಳು ಹೇಳಿದರು. ಶ್ರೀ ವೇಣು ಗೋಪಾಲ ನಾರವರು ಧನ್ಯವಾದಗಳನ್ನರ್ಪಿಸಿದರು.

**ಮೈಸೂರು ವಿಧಾನ ಸಭೆಗೆ ಮಂಗಳೂರು - 1, 2ನೇ ಕ್ಷೇತ್ರದಿಂದ ಕಾಂಗ್ರೆಸ್ ಸದಸ್ಯರುಗಳಾದ ಶ್ರೀ ಬಿ. ವೈಕುಂಠ ಬಾಳಿಗ, ಮತ್ತು ಗಜಾನನರಾವ್ ಪಂಡಿತರವರನ್ನು ಗಾರೆಪಿಸುವುದಕ್ಕೋಸ್ಕರ ರೋಟರಿ ಕ್ಲಬ್ಬಿನವರು ಸತ್ಕಾರಕೂಟವನ್ನು ತಾ. 14 ರಂದು ಏರ್ಪಡಿಸಿದರು. ಶ್ರೀ. ವಿ ಎಸ್. ಕುಡ್ವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ತಮ್ಮ ಭಾಷಣದಲ್ಲಿ ಸಚಿವ ದ್ವಿವರ್ಗಗಳ ಸುಧಾರಿಸಿದ ಕಾರ್ಯಕ್ರಮಗಳಿಂದಲೂ ಜಿಲ್ಲೆಯು ಅಭಿವೃದ್ಧಿಗೊಂಡಿದ್ದಾರೆ. ಮಾಹಿಂದಲ್ಲಿ ತ್ರಸವಾ ಉಮೇದ್ವಾರಿಯಾಗಿದ್ದ ಎಫ್. ಎಮ್. ಖಂಡೋರೆಯವರು ವಿಲಿಯೂದಿ ಪತಿ ಕಾಂಗ್ರೆಸ್ ಹುರಿಯಾಳು ಶ್ರೀ ಟಿ. ಎಚ್. ಕತಾರಿಯವರನ್ನು ಸೋಲಿಸಿ ವಿಜಯಿಗಳಾಗಿರುವರು. ಕಾರ್ಕಳದ ಶ್ರೀ ವಿ. ಎ. ತೆಜ್ಜೆಯವರು ಪ್ರಸವಾಪಕ್ಷದ ಹುರಿಯಾಳಾಗಿ ನಿಂತು ಕಾಂಗ್ರೆಸ್‌ಉಮೇದ್ವಾರಿಯನ್ನು ಸೋಲಿಸಿದರು.

ಭಾರತವು ಅವಿಭಾಜ್ಯ ಭಾಗವಾಗಿ ಕಾಶ್ಮೀರವಿದೆ ಎಂದ ಬಳಿಕ, ಕಾಶ್ಮೀರದ ಅಭಿವೃದ್ಧಿಗಾಗಿ ಭಾರತ ಸರಕಾರ ಕೋಟ್ಯಾಂತರ ಹಣ ವ್ಯಯಿಸಿರುವುದು ಸಹಜವಾಗಿದೆ; ಈ ಹಣವನ್ನು ಕಾಶ್ಮೀರಕ್ಕೆ ಭಾರತದೊಡಕಿರುವ ಸಂಬಂಧವನ್ನು ನಿಕಟವೂ ದೃಢವೂ ರಕ್ಷಣೆಯ ದೃಷ್ಟಿಯಿಂದ ಅತ್ಯುಪಯುಕ್ತವೂ ಆಗಿ ಮಾಡಲು ಬಳಸಲಾಗುತ್ತಿದೆ. ಚಿತ್ರದಲ್ಲಿ ಕಾಣುವ: ಜವಾಹರಲಾಲ ಸುರಂಗಮಾರ್ಗ" ರಕ್ಷಣೋಪಾಯಗಳನ್ನು ಬಲಪಡಿಸಿದ ಕಾರ್ಯಕ್ರಮಗಳಲ್ಲಿ ಉಲ್ಲೇಖನೀಯವಾಗಿದ್ದು. ಕಾಶ್ಮೀರವನ್ನು ಪಂಜಾಬಿನೊಡನೆ ನೇರಾಗಿ ಟೋಡಿಸಿ ವರ್ಷಪೂರ್ತಿಯೂ ಮೋಟಾರು ಗಳು ಒಡಬಲ್ಲ ನೆಲದಡಿಯ ಈ ಸುರಂಗಮಾರ್ಗ ೧೮ ಮೈಲು ಉದ್ದವಿದೆ. ಉಪರಾಷ್ಟ್ರಾಧ್ಯಕ್ಷ ಡಾ. ರಾಧಾಕೃಷ್ಣನ್ನರು ಈ ಸುರಂಗ ಮಾರ್ಗದ ಉದ್ಘಾಟನೆ ನೆರವೇರಿಸಿದರು.

ಬೊಂಬಾಯಿ

ಕಾಸರಗೋಡು ಜಿಲ್ಲೆಯ ವರೆ ಆಯ್ಕೆ— ಬೃಹತ್ ಮುಂಬಯಿ ರಾಜ್ಯದ ಶಾಸನಸಭೆಗೆ ಮಂಗಳೂರಿನ ಶ್ರೀ ಅಮ್ಮುಲ ಬಾಲಕೃಷ್ಣ ಹೆಗ್ಡೆಯವರು ಮೊಗರು ಮತದಾರ ಕ್ಷೇತ್ರದಿಂದ ಸಂಯುಕ್ತ ಮಹಾರಾಷ್ಟ್ರ ಸಮಿತಿಯ ಉಮೇದ್ವಾರರನ್ನು ಸೋಲಿಸಿ ಅಧಿಕೃತವಾಗಿ ಆಯ್ಕೆಗೊಂಡಿದ್ದಾರೆ. ಮಾಹಿಂದಲ್ಲಿ ತ್ರಸವಾ ಉಮೇದ್ವಾರಿಯಾಗಿದ್ದ ಎಫ್. ಎಮ್. ಖಂಡೋರೆಯವರು ವಿಲಿಯೂದಿ ಪತಿ ಕಾಂಗ್ರೆಸ್ ಹುರಿಯಾಳು ಶ್ರೀ ಟಿ. ಎಚ್. ಕತಾರಿಯವರನ್ನು ಸೋಲಿಸಿ ವಿಜಯಿಗಳಾಗಿರುವರು. ಕಾರ್ಕಳದ ಶ್ರೀ ವಿ. ಎ. ತೆಜ್ಜೆಯವರು ಪ್ರಸವಾಪಕ್ಷದ ಹುರಿಯಾಳಾಗಿ ನಿಂತು ಕಾಂಗ್ರೆಸ್‌ಉಮೇದ್ವಾರಿಯನ್ನು ಸೋಲಿಸಿದರು.

ನಿಮ್ಮ ಆರ್ಥಿಕ ಸಮಸ್ಯೆಗಳಿಗೆ ಸಲಹೆಗಳು ಬೇಕೆಂದಿದ್ದಾಗ, ಅವುಗಳನ್ನು ಕೊಡಲು ಸದಾ ಸಿದ್ಧರಿದ್ದೇವೆ!

ಮೈಸೂರು, ಮದರಾಸು ಆಂಧ್ರ ಪ್ರದೇಶ, ಕೇರಳ ಮತ್ತು ಮುಂಬಯಿ ಸಂಸ್ಥಾನಗಳಲ್ಲಿ ಒಟ್ಟು 46 ಶಾಖೆಗಳಿವೆ. ಸಕಲ ವಿಧದ ಬೇಂಕಿಂಗ್ ವಹಿವಾಟುಗಳನ್ನು ಕೈಗೊಳ್ಳುತ್ತೇವೆ. ನಿರಾಕರಿಗಳ ತೃಪ್ತಿಯೇ ನಮ್ಮ ಧ್ಯೇಯ!

50 ವರುಷಗಳಲ್ಲಿ ನಾವು ಗಳಿಸಿದ ನಮ್ಮ ಅತ್ಯಮೂಲ್ಯ ಬೇಂಕಿಂಗ್ ಅನುಭವದ ಪ್ರಯೋಜನವನ್ನು ಇಂದಿನಿಂದಲೇ ಪಡೆಯಿರಿ!!

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

THE CANARA BANKING CORPORATION LIMITED

98 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ರತ್ನದ್ವಯಗಳು

ಟ್ರೇಡ್ ಮಾರ್ಕ್



ಸಂತಾನ ಸಿಂಧೂರ (ಸ್ತ್ರೀಯರಿಗೆ: ಖ್ಯಾತಿಗೆ) | **ಮದನ ವಿಲಾಸ** (ಪುರುಷರಿಗೆ: ಗುರಿಗೆ)

ಈ ಭಸ್ಮವು ಬಹಿಷ್ಠೆ ಸಂಬಂಧವ ಹೊಟ್ಟೆ ನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ಷೇರ್ಯಾಣುಗಳನ್ನು ವೃದ್ಧಿ, ನಪುಂಸಕತೆಯನ್ನು ನಾಶಮಾಡಲೇಖ ಮಾಡುತ್ತದೆ.

ಪಂ| A. R. ಅಯ್ಯರ್

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ ತಾಯ್ತಂದೆಗಳಾಗಿದ್ದಾರೆ.
ಹೊಸ ಕ್ಯಾಟಲಾಗು, ಔಷಧದ ಬೆಲೆ ಇತ್ಯಾದಿಗಳಿಗೆ 3 ಆಣೆ ಸ್ಟ್ಯಾಂಪು ಕಳಿಸಿರಿ

ಎ. ರಾಮಸ್ವಾಮಿ ಅಯ್ಯರ್ ಸನ್ಸ್ & ಕಂ, (ನ. ಯು.)
638 ಸಂತಾನ ಸಿಂಧೂರ ಸದನ (ಪೋಸ್ಟ್ ಬೇಗ್ 9, ಮೈಸೂರು S. I.

ನವಭಾರತ ಪುಸ್ತಕ ಭಂಡಾರ ರಿಜಿಸ್ಟರ್ಡ್ ಪಬ್ಲಿಷರ್ಸ್ ಉಡುಪಿ

ನಮ್ಮಲ್ಲಿ ಸಿಗುವ ಲೈಬ್ರೆರಿಗಳಿಗೆ ಯೋಗ್ಯವಾದ ಕೆಲವು ಪುಸ್ತಕಗಳು

ಪಂಪಾವಲಂಬಿ	ಜನಾರ್ಧನ ಗುರ್ಕಾರ್	೨ ೮
ಮಾಲತೀ ಮಂದಿರ	ಹೊ. ಗುಡ್ಡಪ್ಪ	೨ ೦
ಶಾಕುಂತಳಾ	ನಾ. ಸಿ. ಫಡಕೆ	೨ ೧೨
ಸ್ವರ್ಣಭೂಮಿ	ವಾಮನ ಮಲ್ಯ	೧ ೮
ತರಲಾ	ಸ್ವಾಮಿ ಸತ್ಯಭಕ್ತರು	೧ ೦
ಬಿರುಗಾಳಿ ಭಾಗ ೧.	ನಾ. ಸಿ. ಫಡಕೆ	೧ ೮
ಬಿರುಗಾಳಿ ಭಾಗ ೨.	,,	೨ ೦
ಕೊತವಾಲನ ಕಾರಸ್ಥಾನ	ಹೊಸಮನಿ	೧ ೦
ಕೆಳಸಿಗೆ ಕಾಣಿಕೆ	ಕುಲಕರ್ಣಿ	೧ ೪
ವೈಕುಂಠನ ಮೃತ್ಯುಪತ್ರ	ಶರತ್	೧ ೦
ಮಿಸ್ ಜೇಮೇಲಿಯಾ	ರಮೇಶ	೧ ೪
ಮನ್ನೂನುಮದುವೆ	ಎಂ. ಜಿ. ವೆಂಕಟೇಶಯ್ಯ	೨ ೦
ಆಕ್ಯಾಜಿ ಶರತ್	ಮಲ್ಲಾರಿ	೧ ೪
ಬೇನೆಯ ಬಾಳ್ವೆ	ರಾ. ಮೊ. ವಿಶ್ವಮಿತ್ರ	೩ ೪
ಭ್ರಾಂತಿಯ ಸುಳಿಯಲ್ಲಿ	ಎಮ್. ಎನ್. ಭಟ್	೧ ೧೨
ಹೃದಯವೀಣೆ	ನಾ. ವಿ. ನಾಯಕ್	೧ ೪
ಬೆಂಜಜೀನಿ	ರುದ್ರಮುನಿಸ್ವಾಮಿ	೧ ೧೨
ಗುಣ	ಪಿ ವೆಂಕೋಬಾಚಾರ್ಯ	೧ ೬
ಪುನರಾಗಮನ	ಧನ್ವಂತ	೧ ೪
ಬಂಧನ ಬಾಂಧವ್ಯ	ನಮಿರಾಜಮಲ್ಲ	೧ ೦
ಇವೆತ್	ಪಿ ವೆಂಕೋಬಾಚಾರ್ಯ	೧ ೧೨
ಮಾಧವಲೀಲೆ	ವೆಂಕಟೇಶಯ್ಯ	೧ ೮
ರಂಗವಿಲಾಸಿನಿ	ಮಲ್ಲಾರಿ	೩ ೦
ನೂರ್ ಜಹಾನ್	ಪಂ. ಕೇಶವ ಶರ್ಮ	೧ ೦
ಹೊಸ ಹೆಜ್ಜೆ	ಭಾರ್ಗವ	೦ ೧೦
ಕೊಲ್ಲಂಬ	ಹೊಸಮನಿ ಗುಡ್ಡಪ್ಪ	೦ ೧೪
ಸ್ಮಶಾನ ವೈರಾಗ್ಯ	ಚು. ಗೋವಿಂದಾಚಾರ್ಯ	೧ ೪
ಪೂರ್ಣಿಮಾ	ತಿ. ಸಿದ್ದಪ್ಪ	೧ ೪
ಪಾಪಾಣ ಮೂರ್ತಿ	ಉ. ವಾಸುದೇವ	೧ ೦
ಆಕ್ಕತಂಗಿ	ನಾರಾಯಣ ಸಂಗಮ	೨ ೪
ಪುರಸ್ಕಾರ	ಗಣಪತಿ ಮೊಳೆಯೂರ	೧ ೦
ಅವಳ ಹುಚ್ಚು	ಕಾ. ರಾಮಕೃಷ್ಣ ಸೆಟ್ಟಿ	೦ ೧೪
ಎಚ್ಚೆತ್ತ ಹೆಣ್ಣುಗಳು	ಕಂ. ಶಾಮಣ್ಣ	೧ ೧೨
ಸುದರ್ಶನ	ಅನೆಂಬ ಕಂದ	೧ ೪
ಕಲಸಾಪುರದ ಹುಡುಗರು	ಮತಿಘಟ್ಟ ಕೃಷ್ಣಮೂರ್ತಿ	೧ ೦
ವತ್ಸಲಾ	ಮಡ್ಯಾಡಿ ಕಮಲಾಕ್ಷಿ	೦ ೪
ವಾಗ್ದೇವಿ	ಬೋಳಕಾರ ಬಾಬುರಾವ್	೩ ೦
ಹೊಸೂರಿನ ಹಲವರು	ಟಿ. ಮಹಾಬಲೇಶ್ವರ ಭಟ್ಟ	೨ ೦
ಸಾಮ್ರಾಟ್ ಹರ್ಷವರ್ಧನ	ನಾಗೇಶ	೨ ೦
ಪ್ರಚಂಡಜ್ವಾಲಾಮುಖಿ	ವಾಸುದೇವ ನಾಯ್ಕ	೧ ೪
ಗೋಳಿನ ಬಾಳು	ಬ. ನಾಯಕ್	೦ ೪
ಡಾ. ಗಿರೀಶ	ರಮೇಶ	೦ ೬
ಸೌಭಾಗ್ಯವತಿ	ಸೀತಾರಾಮಯ್ಯ	೧ ೧೨
ಭಾಗ್ಯಲಕ್ಷ್ಮಿ	,,	೦ ೧೨
ಕೊಲೆಯ ಕೈ	ಎಚ್ಚಾರ್ಕೆ	೦ ೪
ವೈಂಪ	ಪಿ. ವೆಂಕೋಬಾಚಾರ್ಯ	೧ ೪
ತಿರುಗಿಸುನೆಗೆ	ಮಲ್ಲಾರಿ	೧ ೧೦
ಏಕಾದಶಿ ಬೈರಾಗಿ ಮತ್ತು ಗುರುಚರಣ	ಮಲ್ಲಾರಿ	೦ ೪
ಪ್ರತಿಸರಕಾರ	ಮಿರ್ಜೆ ಜಣ್ಣರಾಯ	೧ ೧೨
ಮೊದ್ದಮಗು	ನವಗಿರಿನಂದ	೦ ೧೨
ತಬ್ಬಲಿ	ವಿಜಯನಾರಸಿಂಹ	೦ ೧೨
ಗಜಪತಾನಾರಾಯಣ	ಕೃ. ಕಂಪಿ	೧ ೦
ಕೌಮುದೀ	,,	೧ ೪
ಕಲ್ಕಿ	ರಮಾಕಾಂತ	೦ ೧೦
ಮಹಾಶ್ವೇತೆ	ಹಳ್ಳಿ ರಾಮರಾಯ	೦ ೧೪
ನಳವಾಕ	ಶ್ರೀ ವತ್ಸ	೦ ೧೨
ಮನೋರಾಜ್ಯ	ರಂ. ಶ್ರೀ ಮುಗುಳಿ	೧ ೧೨
ಆರಾಶ್ರಿ	ಗೋಪಾಲ ಕೃ. ಪಿ. ನಾ.	೦ ೧೪
ಗುರುನಕ್ಷೆಣೆ	ಕಡೆಂಗೋಡ್ಲು	೧ ೪
ಸನ್ಯಾಸಿನಿ	ಹ. ಪಿ. ಜೋಶಿ	೦ ೧೦
ವಿಜಯ ಸಾಮ್ರಾಜ್ಯ	ಶ್ರೀ ಮುಗುಳಿ	೧ ೮
ಸೆಂಗೊಳ್ಳಿ ರಾಯಣ್ಣ	ಕಲ್ಯಾಣ ಶರ್ಮ	೧ ೮
ಪಾವನ ವಾವಕ	ರಂ. ಶ್ರೀ ಮುಗುಳಿ	೦ ೧೨
ಭಂಡಾವ್ಯಳಿಸ್ಥದ ಬಡಾಯಿ	ಕೈಲಾಸಂ	೦ ೧೨
ಶಿಲ್ಪಿ ಚಕ್ರವರ್ತಿ	ಬಾ. ಮೂರ್ತಿ	೦ ೧೨
ಪಾರ್ಕಿನ ಲಜ್ಜುಮಿ	ಗೋಪಾಲಕೃಷ್ಣ	೦ ೪
ಪ್ರೇಮ ನಾಟಕಾವಳಿ	ಶಿವರಾಮ ಕಾರಂತ	೧ ೦
ಬಾಯಿ ಭಂಡಾಯ	ಲಕ್ಷ್ಮಣರಾಯ	೧ ೪
ಸ್ಕೂಲ್‌ಡೇ	ಹಾ. ಮಾಸ್ತರ್	೦ ೬
ಹರಿಜನೋದ್ಧಾರ	ಹರಿದಾಸ	೦ ೧೪
ಹೆಂಡ್ತಿಸೂಜೆ	ಮೂರ್ತಿ	೦ ೪
ಧನದ ಬಿಂದಿಗೆ	ಸಂಕಲನ	೧ ೪
ಆರೋಗ್ಯ ಪ್ರತಾಪ	ಕೊರಡ್ಕಲ್	೦ ೧೦
ಕನ್ನಡ ಕವಿತಾಂಕುರ	ದಾ. ಬಾಳಿಗ	೦ ೧೨
ಪಯಣ	ವಿನಾಯಕ	೦ ೧೨
ಜೀವನಲತೆ	ಪೂ. ಹ. ಆಚಾರ್ಯ	೦ ೪
ಲೀಲಾವತಿಪ್ರಬಂಧ	ಕುಂದಣಗಾರ್	೧ ೧೨
ವೀರ ಪಥಿಕ	ಪಿ. ದೂಲಾ	೦ ೧೦
ಕಾವ್ಯ ರತ್ನಾಕರ	ಮಂಗೇಶರಾವ್	೦ ೬
ಪರಾಗ	ಸಂಕಲನ	೦ ೧೦
ಕಲಸು ಮೇಲೋಗರ	ಅನಂತರಾವ್	೦ ೧೪
ಮುಂಬೆಳಗು	ಸಂಕಪ್ಪ ರೈ	೦ ೧೨
ಉದ್ಯೋಷ	ಸಂಕಲನ	೦ ೧೨
ಹೆಬ್ಬೆರಳು	ಗೋವಿಂದ ಪೈ	೦ ೧೨
ಬಾಡದ ಹೂ	ಅನಂತನಾರಾಯಣ	೧ ೦
ವಿಜಯನಾದ	ಅಮರವಾಣಿ	೦ ೪
ನಿಯತಿ ನಟ	ನ. ಯೋಗ	೦ ೬
ಆಲಾಪನೆ	ಧನ್ವಂತ	೦ ೪
ಜೆಂಗಲವೆ	ಗಣಪತಿರಾವ್	೦ ೧೦
ಹೂಗುಂಪು	ಶ್ರೀಧರ ಕಾನೋಳಕರ	೦ ೧೨
ಕಾವ್ಯ ಸಾಮ್ರಾಜ್ಯ	ವಿವಿಧ ಕವಿಗಳು	೧ ೪
ಶಿಕ್ಷಣದ ಧ್ಯೇಯಗಳು	ಆಲ್ಫ್ರೆಡ್ ನಾರ್ಥ್ ವೈಟ್‌ಹೆಡ್	೨ ೪
ಜರ್ಮನಿಯ ಗುಪ್ತ ಹೇರರು	ಸಂಚಾರಿ	೧ ೦
ಮಹಾಸತಿ	ವರದರಾಜ ರಾವ್	೧ ೪
ಪ್ರವಾದಿ	ದತ್ತಮೂರ್ತಿ	೧ ೪
ಎಚ್ಚೆತ್ತ ಆಗ್ನೆಯ ಏತಿಯಾ	ಹರಿಪಾಸ	೧ ೪
ಹೀಗಿದೆ ಜಗತ್ತು	ಸಂಚಾರಿ	೧ ೦
ಕ್ರಾಂತಿಯ ನೂರು ವರುಷ	ಮೇವುಂಡಿ	೦ ೧೨
ಗಾಂಧೀಜಿಯ ಆರ್ಥಿಕವಾದ	ನಾ. ರಾ.	೦ ೪
ಅವ್ಯತವಾಹಿನಿ	ಕೌಲಗಿ	೦ ೪
ಬಾ	ನಾ. ಕೃ. ಮೂರ್ತಿ	೦ ೪
ಬಾಪೂಜಿ	,,	೦ ೪
ನಂದಾದೀಪದ ನಂದಿನಿ	ಶ್ರೀಧರ	೧ ೪
ಭಾರತೀಯ ಘಟನಾ ಸಮಿತಿ	ಶರ್ಮ	೧ ೦
ಮಹರ್ಷಿ ದೇವೇಂದ್ರನಾಥ	ತಾಕೂರು	೦ ೧೪
ತತ್ತ್ವೋಪನ್ಯಾಸಗಳು	ಸ್ವಾಮಿ ಶ್ರೀ ವಿಜಯೀಂದ್ರ	೦
ಭಾರತದ ಬಾಪೂ	ಅ. ನ. ಕೃ.	೧ ೪
ರಾಬಿನ್‌ಸನ್ ಕ್ರೂಸೊ	ಸೀತಾರಾಮಯ್ಯ	೧ ೪
ಸುಭಾಸಚಂದ್ರೋಲ್ಲಂಘನ	ಮೇವುಂಡಿ	೧ ೪
ಜಯಪ್ರಕಾಶ ನಾರಾಯಣ	ಮೂರ್ತಿ	೦ ೧೨
ನರಗುಂದದ ಬಂಡಾಯ	ಬಿ. ಜೆ. ಹುಲಿಕವಿ	೧ ೦
ಅರವಿಂದ ದರ್ಶನ	ಆರ್. ಕೆ. ಜೋಶಿ	೪ ೦
ಅಗ್ನಿವೈ	ಶಾಂಡಿಲ್ಯ	೦ ೯
ಕಾಂಗ್ರೆಸ್ಸಿನ ಇತಿಹಾಸ	ಜೋಶಿ	೦ ೧೨
ಪತ್ರಿಕಾವ್ಯವಸಾಯ	ದಾರವಡಕರ	೦ ೧೪
ಸಾಹಿತ್ಯ ಸಮೀಕ್ಷೆ	,,	೧ ೪
ಪಾಶ್ಚಿಮಾತ್ಯ ಭೂಸುಧಾರಣೆಗಳು	ಸಿ. ಎಸ್. ಕುಲಕರ್ಣಿ	೦ ೪
ನಮ್ಮ ನೂತನ ರಾಜ್ಯಘಟನೆ	ಎಸ್. ಎನ್. ಸಿ. ರಾವ್	೦ ೪
ತೊಗಲು ಹದಮಾಡುವುದು	ಸಚಿಶಚಂದ್ರದಾಸ ಗುಪ್ತ	೦ ೧೦
ಗುರುಪೀಠಗಳ ಅವನತಿ	ಶಂಕರ ಜೋಯಿಸ	೦ ೪
ಕನ್ನಡದಲ್ಲಿ ವಿಡಂಬನ ಸಾಹಿತ್ಯ	ಎಚ್. ಎಸ್. ಕೃಷ್ಣಸ್ವಾಮಿ	೦ ೬
ಕನ್ನಡ ಯಾತ್ರೆ	ಮಾಸ್ತಿ	೧ ೪
ನಿಶ್ಚಯ ಜ್ಞಾನ	ಬಲ್ಲಾಳಿ	೦ ೪
ಕನ್ನಡ ಸಾಹಿತ್ಯ ಮತ್ತು ರಾಜಾಶ್ರಯ		೦ ೧೦
ನಮ್ಮ ಕಾಗದಗಳು	ನಾಡಿಗ	೦ ೧೨
ಸ್ವಾವಿಜಯ ಪತ್ರಗಳು	ಚೆನ್ನಬಸಪ್ಪ	೧ ೪
ಯದುಪತಿ	ಸಾಲಿ	೨ ೦
ದಕ್ಷಿಣ ಭಾರತದ ಖನಿಜ ಸಂಪತ್ತು ಮತ್ತು ಕೈಗಾರಿಕೆಗಳು	ವಾಸುದೇವರಾವ್	೨ ೪
ಕೈಲಾಸಂದರ್ಶನ	ಕೆ. ವಿ. ಸುಬ್ಬಣ್ಣ	೨ ೦
ಮುತ್ತಿನಸರ	ಬಿ. ಜಿ. ನಾಯಕ್	೧ ೪
ನೆನಹು (ಸ್ಮಾರಕ ಗ್ರಂಥ)	ಮು. ರಾಜು	೧ ೪
ಕಾಶ್ಮೀರ ಪ್ರವಾಸ	ಜೋಶಿ	೦ ೪
ಮರುಭೂಮಿಯ ಅರಬರು	ಎಂ. ಹರಿದಾಸ ರಾವ್	೧ ೪
ಯುದ್ಧರಂಗದಿಂದ	ಆರ್. ಎ. ರಾವ್	೧ ೪
ಬ್ರಹ್ಮತೈತನ್ಯ ಶತಕ	ದತ್ತಾತ್ರೇಯ	೦ ೪
ಮುರಲಿ	ಎನ್. ಎಸ್. ಕೆಲ್ಲೆ	೦ ೧೨
ನೆನಪಿಗಾಗಿ	ಸಂಕಲನ	೨ ೦
ಜೀವನ ಗೀತಾಂಜಲಿ	ವ. ಹೆಗ್ಡೆ	೧ ೪
ದಿವ್ಯಜೀವನ	,,	೧ ೪
ಹಾರ್ಮೋನಿಯಂ ಬೋಧನ ಕ್ರಮ	ಶ್ರೀ ಎ. ರಾಮಪ್ಪ	೨ ೦
ವ್ಯವಹಾರ ಜ್ಞಾನದರ್ಪಣ	ಪ್ರಭು	೧ ೪
ಸುಲಭದಲ್ಲಿ ಇಂಗ್ಲಿಷ್ ಕೊರಡ್ಕಲ್	ಶ್ರೀನಿವಾಸ ರಾವ್	೧ ೪
ಜೀವನ ಪ್ರವಾಹ	ರಮಾಕಾಂತ	೨ ೦
ಏಶಿಯದ ಸಂಪತ್ತು	ಕು. ಶಿ. ಹರಿದಾಸ ಭಟ್ಟ	೨ ೦
ಉದುಕು ಬಂಗಾರ	ಕುಮಾರಸ್ವಾಮಿ	೧ ೪
ಮೌನಸ ಶಾಸ್ತ್ರ	ಮುಕುಂದ ಉದಗಟ್ಟಿ	೦ ೪
ರಘುವಂಶ	ನರಹರರಾಯ	೨ ೦
ಪ್ರತೀಕಾರ	ಶ್ರೀರಂಗ	೦ ೪
ಪಂಜೆಯವರ ನೆನಪಿಗಾಗಿ		೪ ೦
ಸಾಹಸದ ಕತೆಗಳು	ಎಚ್ಚಾರ್ಕೆ	೦ ೬
ಮಧುವನ	ಸಂಕಲನ	೩ ೦
ದೇಶಭಕ್ತ	ಕೆ. ಕೆ. ಶೆಟ್ಟಿ	೧ ೪
ಪ್ರೇಮವಿಜಯ	,,	೧ ೦
ಭಾರತೀಯ ಕತೆಗಳು	ಕೊರಡ್ಕಲ್ ಶ್ರೀನಿವಾಸ ರಾವ್	೧ ೧೨
ನಾರೀಹೃದಯ	ಶಿವರಾಣಿದೇವಿ	೧ ೪
ಪ್ರಕಾಶ	ಸರಸ್ವತಿ ಬಾಯಿ	ರಾಜವಾಡೆ ೨ ೪
ಆಕಾಶಗಂಗೆ	ಎಸ್. ವೆಂಕಟರಾಜ	೧ ೧೨
ಕವಿತಾ ಕಾಮಿನಿ	,,	೨ ೦
ಸ್ವಾತಂತ್ರ್ಯವೀರ ಸಾವರಕರರು	ಇಂದಿರಾ ಬಾಯಿ	೧ ೪
ಜಮೀನ್ದಾರ	ಹೊಸಮನೆ ಗುಡ್ಡಪ್ಪ	೧ ೪
ಘಂಟಮಾರ	ಕು. ಶಿ. ಹರಿದಾಸ ಭಟ್ಟ	೨ ೦
ನಗೆನೋಟಗಳು	ಕೆ. ವಿಟ್ಟಲ ಶೆಣೈ	೧ ೪
ಅತಿ ದೂರದ ಜಗತ್ತಿನಲ್ಲಿ	ಹೆಗೆಡ್ತೆ ಬಂಧುಗಳು	೦ ೧೨
ಗಗನಚಂದ್ರ	ನಾಡಿಗೇರ ಕೃಷ್ಣಾಂಯ	೦ ೪

ನಾಣ್ಯ ಪದ್ಧತಿಯ ಪರಿಷ್ಕಾರ

(೨ನೇ ಪುಟದಿಂದ)

ಪ್ರಮಾಣದಲ್ಲಿ ಮೂರನೆಯ ಎರಡರಷ್ಟು ಕೆಲಸವನ್ನು ಮಾಡುವಂತೆ ನಿಯಮಿಸುವುದರಿಂದ, ರೋಗಿಗೆ ಅಂದರೆ, ಸಾಮಾನ್ಯ ಜನರಿಗೆ, ದೊರೆಯುವ ಶುಶ್ರೂಷೆಯ ಮಟ್ಟವು ಹೆಚ್ಚುವುದು

ಇದು ಹೇಗಾಗುವುದೆಂದು ನೋಡುವುದು ಸುಲಭ. ಉತ್ತಮ 'ಬ್ರಾಂಡಿ'ನ ೧೦ ಸಿಗರೇಟುಗಳಿರುವ ಪ್ಯಾಕೆಟ್ಟಿನ ಮಾರುಕಟ್ಟೆ ಬೆಲೆಯು ೧೧ ಆಣೆಗಳಾಗುವುದು. ನಿಮಗೆ ಒಂದು ಸಿಗರೇಟು ಬೇಕಾಗಿದ್ದರೆ, ನೀವು ೫ ಕಾಲಾಣೆಗಳನ್ನು ಕೊಡಬೇಕು. ಆದರೆ ಆದರ ಬೆಲೆ ವಾಸ್ತವವಾಗಿ ೪೪ ÷ ೧೦ ಅಥವಾ ೪ · ೪ ಕಾಲಾಣೆಗಳು ಅಥವಾ ೧೩ · ೨ ಕಾಸುಗಳು. ಆದರೆ, ಚಿಲ್ಲರೆ ವ್ಯಾಪಾರದಲ್ಲಿ ಕನಿಷ್ಠ ನಾಣ್ಯವೆಂದರೆ ಕಾಲಾಣೆ. ಆದ್ದರಿಂದ ಅಂಗಡಿಯವನು, ಒಂದು ಸಿಗರೇಟಿನ ಬೆಲೆಯನ್ನು ೪½ ಕಾಲಾಣೆಗಳೆಂದಾಗಲಿ ೫ ಕಾಲಾಣೆಗಳೆಂದಾಗಲಿ ನಿಗದಿ ಮಾಡಬಲ್ಲ. ೪½ ಕಾಲಾಣೆಗಳಾದರೆ ಪ್ಯಾಕೆಟ್ಟಿಗೆ ೧೦ ಆಣೆ ಮಾತ್ರ ಬರುವುದು. ಅಂದರೆ ಅಂಗಡಿಯವನು ಕೊಂಡ ಬೆಲೆಗಿಂತ ಕಡಿಮೆಯಾಯಿತು. ಆದ್ದರಿಂದ ಅಂಗಡಿಯವನು ಒಂದು ಸಿಗರೇಟಿನ ಬೆಲೆಯನ್ನು ೫ ಕಾಲಾಣೆ ಮಾಡದೆ ವಿಧಿಯಿಲ್ಲ. ಈ ವ್ಯವಹಾರದಿಂದ ಬಳಕೆದಾರರು ೨ ಕಾಸು ಹೆಚ್ಚು ಕೊಡಬೇಕಾಗುತ್ತದೆ. ಅಂದರೆ ಪ್ರಸ್ತುತದಲ್ಲಿ ನಾವು ಕಣ್ಣು ಮುಚ್ಚಿ ವ್ಯವಹಾರಗಳಲ್ಲಿ ಕೇವಲ ಕಾಸಿನ ಭಿನ್ನಾಂಶಗಳಲ್ಲದೆ, ಇಡಿ ಕಾಸುಗಳನ್ನೇ ನಷ್ಟ ಮಾಡಿಕೊಳ್ಳುತ್ತಿದ್ದೇವೆ ಎಂಬುದನ್ನು ಮರೆಯಬಾರದು.

ದಶಮಾಂಶ ನಾಣ್ಯ ಪದ್ಧತಿಯು ಆಚರಣೆಗೆ ಬಂದಾಗ ಇದೇನಾಗುತ್ತದೆಯೋ ನೋಡೋಣ. ಅವೇ ಸಿಗರೇಟಿನ ಬೆಲೆಯು ನಯೇ ಪೈಸೆಗಳಲ್ಲಿ ೬೯ ಆಗುವುದು. ಒಂದು ಸಿಗರೇಟಿನ ಬೆಲೆ ೭ ನಯೇ ಪೈಸೆಗಳಾಗುವುದು. ಇದು ೫ ಕಾಲಾಣೆಗಳ ಮೊತ್ತ, ಅಂದರೆ ೮ ನಯೇ ಪೈಸೆಗಿಂತ ಒಂದು ನಯಾಪೈಸಾ ಕಡಿಮೆಯಾಗುವುದು. ಆದರೆ ಅಂಗಡಿಯವನು ತನಗೆ ಉಪಯೋಗವಾಗುವ ಈ ಸದವಕಾಶವನ್ನು ಬಿಟ್ಟುಕೊಡುವನೇ ಎಂಬ ಅನುಮಾನ ಕಲವಂಗೆ ಬರಬಹುದು. ಈ ರೀತಿಯಾಗುವುದು, ಆ ಕ್ಷೇತ್ರದಲ್ಲಿ ಬೇರೆ ಯಾವ ನರ್ತಕರೂ ಇರದಿದ್ದರೆ ಮಾತ್ರ. ಆದರೆ ಆ ಕ್ಷೇತ್ರದಲ್ಲಿ ಅನೇಕ ನರ್ತಕರಿರುವುದರಿಂದಲೂ, ಅವರಲ್ಲಿ ಸ್ಪರ್ಧಾ ಮನೋಭಾವವಿರುವುದರಿಂದಲೂ, ಅವರು ಹೆಚ್ಚಿನ ಬೆಲೆಯನ್ನು ಇಡಲು ಮುಂದಾಗುವುದಿಲ್ಲ.

ಚಿಲ್ಲರೆ ವ್ಯಾಪಾರದಲ್ಲಿ ವಸ್ತುಗಳ ಬೆಲೆಗಳನ್ನು ನಯಾ ಪೈಸಾಗಳಲ್ಲಿ ಸೂಚಿಸಿದಾಗ ಕೊಳ್ಳುವವರಿಗೆ ಅನುಕೂಲವಾಗುವುದು. ಠೋಕ ವ್ಯಾಪಾರ (ಹೋಲ್ ಸೇಲ್) ದಲ್ಲಿ ಆಣೆ ಮತ್ತು ಕಾಸುಗಳ ಪರಿವರ್ತನೆಯೆಲ್ಲ ಆರ್ಥ ನಯಾ ಪೈಸಾ ಅಥವಾ ಕಾಲು ನಯಾಪೈಸಾಗಳ ನೈತ್ಯಾಸದಿಂದ ಯಾವ ರೀತಿಯಲ್ಲೂ ಗಮನಾರ್ಹವಾದ ನಷ್ಟ ಸಂಭವಿಸುವುದಿಲ್ಲ. ಈ ಪರಿವರ್ತನೆಯ ಪರಿಣಾಮವಾಗಿ ವಸ್ತುಗಳ ಬೆಲೆಗಳಲ್ಲಿ ಅಲ್ಪ ಸ್ವಲ್ಪ ಹೆಚ್ಚಾಗುವುದರಿಂದ, ಒಟ್ಟಿನಲ್ಲಿ ನಡೆಯುವ ವ್ಯಾಪಾರದಲ್ಲಿ ನಷ್ಟವಾಗುವುದಿಲ್ಲವೆ? ಎಂಬ ಪ್ರಶ್ನೆ ಬರುವುದು. ಆದರೆ ಚಿಲ್ಲರೆ ಅಂಗಡಿಯಲ್ಲಿ ಆಕ್ಕಿಯನ್ನು ಚಟಾಕಿನ ದರದಲ್ಲಿ ಮಾರುತ್ತಾರೆ, ಎನ್ನೋಣ. ಆದರೆ ಯಾರೂ ಒಂದು ಮಣ ಆಕ್ಕಿಯನ್ನು ಈ ಚಟಾಕಿನ ದರದಲ್ಲಿಯೇ ಕೊಂಡುಕೊಳ್ಳುವುದಿಲ್ಲ.

ರೈಲ್ವೆ ಪ್ರಯಾಣಕ್ಕೆ ೧ ಮೈಲಿಗೆ ೫ ಕಾಸುಗಳು.

ಅದರಿಂದ ಸಾಮಾನ್ಯ ಜನರು ತಮ್ಮ ರೈಲ್ವೆ ಟಿಕೆಟ್ಟಿನ ಹಣವನ್ನು ತಾವೇ ಕಂಡು ಹಿಡಿಯಬೇಕಾದ್ದುಸ್ರಮೇಯವಿರುವುದಿಲ್ಲ. ಇನ್ನು ಮುಂದೆ ರೈಲ್ವೆ ಟಿಕೆಟ್ಟಿನ ಮೇಲೆ ಮೊಬಲಗನ್ನು ರೂಪಾಯಿ ಹಾಗೂ ನಯೇ ಪೈಸೆಗಳಲ್ಲಿ ಹಾಕಿರಲಾಗುವುದು. ಟಿಕೆಟ್ಟಿನ ದರಗಳನ್ನು ಗೊತ್ತು ಮಾಡುವವರು ಲೆಕ್ಕಾಚಾರ ಮಾಡಿ ಗೊತ್ತುಮಾಡಿರುವರು.

ಇದುವರೆಗೂ ನಯಾ ಪೈಸಾದಿಂದ ಜನಸಾಮಾನ್ಯರಿಗೆ ಅವರ ಅನುದಿನದ ವ್ಯವಹಾರದಲ್ಲಿ ದೊರೆಯುವ ಅನುಕೂಲಗಳನ್ನು ಕುರಿತು ಹೇಳುತ್ತಿದ್ದೆವು. ದಶಮಾಂಕ ನಾಣ್ಯ ಪದ್ಧತಿಯಿಂದ ದೊರೆಯುವ ದೊಡ್ಡ ಪ್ರಯೋಜನವೆಂದರೆ ಲೆಕ್ಕಾಚಾರಗಳಲ್ಲಿ ಹೆಚ್ಚಿನ ಸರಳತೆ.

ಮೆಟ್ರಿಕ್ ಪದ್ಧತಿಯಲ್ಲಿ ಅಳತೆ ಮತ್ತು ತೂಕದ ಮಾನಗಳನ್ನು ಗೊತ್ತುಮಾಡುವುದರಿಂದ ಇನ್ನೂ ಹೆಚ್ಚಿನ ಪ್ರಯೋಜನ ದೊರೆಯುವುದು. ಈ ಸುಧಾರಣೆಯ ಬಗೆಗೂ ನಮ್ಮ ಪಾರ್ಲಿಮೆಂಟಿನವರು, ಸರ್ಕಾರಕ್ಕೆ ಅಧಿಕಾರವಿತ್ತು, ಈ ಹಾದಿಯಲ್ಲಿ ಮುಂದುವರಿಯುವಂತೆ ನಿರ್ದೇಶಿಸಿರುವರು. ಈ ಹಾದಿಯಲ್ಲಿ ದಶಮಾಂಶ ನಾಣ್ಯಗಳು ಮಾರ್ಗದರ್ಶನವೀಯುತ್ತವೆ.

ಸುಧಾರಿತ ಪಂಚಾಂಗ

ಇದೇ ೨೨ರಿಂದ ಹೊಸ ಪಂಚಾಂಗ ಜಾರಿಗೆ ಬರಲಿದೆ, ತಿಳಿದಿರಾ?

ಶಕಕಾಲ ಮಾನದ ಪದ್ಧತಿಯ ಆಧಾರದ ಮೇಲೆ ಸಿದ್ಧಪಡಿಸಲಾಗಿರುವ ಏಕರೂಪದ ರಾಷ್ಟ್ರೀಯ ಪಂಚಾಂಗ (ಕ್ಯಾಲೆಂಡರ್)ವು ೧೯೫೭ರ ಮಾರ್ಚಿ ೨೨ರಿಂದ ಜಾರಿಗೆ ಬರಲಿದೆ. ಗ್ರಿಗರಿ ಪದ್ಧತಿಯ ಕ್ಯಾಲೆಂಡರನ್ನು ಈಗಿನಂತೆಯೆ ಮುಂದೆ ಕೂಡ ಸರ್ಕಾರಿ ಉದ್ದೇಶಗಳಿಗಾಗಿ ನೂತನ ಪಂಚಾಂಗದೊಂದಿಗೆ ಉಪಯೋಗಿಸಲಾಗುವುದು.

ನೂತನ ಪಂಚಾಂಗದಲ್ಲಿ ಚೈತ್ರಮಾಸವೇ ಪ್ರಥಮ ಮಾಸ. ಸಾಮಾನ್ಯವಾಗಿ ಒಂದು ವರ್ಷದಲ್ಲಿ ೩೬೫ ದಿನಗಳಿರುವುವು. ಅಧಿಕ ದಿನದ ವರ್ಷದಲ್ಲಿ (ಲೀಪ್ ಇಯರ್) ೩೬೬ ದಿನಗಳಿರುವುವು.

ಶಕಕಾಲ ಮಾನಪದ್ಧತಿಯನ್ನು ಭಾರತಾದ್ಯಂತವೂ ವ್ಯಾಪಕವಾಗಿ ಬಳಸುತ್ತಿರುವ ವಿಚಾರವು ಕಂಡು ಬಂದಿರುವುದರಿಂದ ಈ ಕಾಲ ಮಾನಪದ್ಧತಿಯನ್ನೇ ಅನುಸರಿಸಲಾಗಿದೆ. ವಿಖ್ಯಾತ ಖಗೋಳ ಶಾಸ್ತ್ರಜ್ಞನಾದ ವರಾಹಮಿಹಿರನ ಕಾಲದಿಂದಲೂ ಭಾರತೀಯ ಖಗೋಳ ಶಾಸ್ತ್ರಜ್ಞರು ಶಕಕಾಲ ಮಾನಪದ್ಧತಿಯನ್ನು ತಮ್ಮ ಲೆಕ್ಕಾಚಾರಗಳಿಗೆ ಉಪಯೋಗಿಸುತ್ತಿರುವರು. ಭಾರತೀಯ ಪಂಚಾಂಗ ಕರ್ತರು ಇಂದಿಗೂ ಶಕಕಾಲ ಮಾನಪದ್ಧತಿಯನ್ನೇ ತಮ್ಮ ಲೆಕ್ಕಾಚಾರಗಳಿಗೆ ಬಳಸುತ್ತಿರುವರು. ೧೨ ಮಾನಗಳ ಅವಧಿಯನ್ನು ನಿಗದಿ ಮಾಡಲಾಗಿದೆ. ಯಾವಾಗಲೂ ನೂತನ ವರ್ಷವು ಮೇಷ ಸಂಕ್ರಾಂತಿಯ ಮರುದಿನದಿಂದ ಪ್ರಾರಂಭವಾಗುವುದು.

ದೇಶದಲ್ಲಿ ಅನುಸರಿಸಲಾಗುತ್ತಿರುವ ಪಂಚಾಂಗಗಳನ್ನು ಪರೀಕ್ಷಿಸುವುದಕ್ಕಾಗಿ ೧೯೫೨ರ ನವೆಂಬರ್ ತಿಂಗಳಲ್ಲಿ ಸಮಿತಿಯೊಂದನ್ನು ನೇಮಿಸಲಾಯಿತು. ಇಡೀ ಭಾರತಕ್ಕೆ ಅನ್ವಯವಾಗುವಂತಹ ನಿಖರವಾದ ಶಾಸ್ತ್ರೀಯ ಏಕ ರೂಪದ ಪಂಚಾಂಗವೊಂದರ ಬಗ್ಗೆ ಸೂಚನೆಗಳನ್ನು ಸಲ್ಲಿಸಬೇಕೆಂದು ಸಮಿತಿಗೆ ತಿಳಿಸಲಾಗಿತ್ತು. ಸಮಿತಿಯು ೧೯೫೫ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಕೇಂದ್ರ ಸರ್ಕಾರವು ಸಮಿತಿಯ ಶಿಫಾರಸುಗಳ ಮೇಲೆ ಏಕ ರೂಪದ ರಾಷ್ಟ್ರೀಯ ಪಂಚಾಂಗವೊಂದನ್ನು ಜಾರಿಗೆ ತರಲು ನಿರ್ಧರಿಸಿತು.

ದೇಶದ ವಿವಿಧ ಭಾಗಗಳಲ್ಲಿ ಇಂದಿಗೆ ಕಮ್ಮಿಯಿಲ್ಲದಂತೆ ಪಂಚಾಂಗಗಳು ಬಳಕೆಯಲ್ಲಿರುವುದು ಸಮಿತಿಯ ಗಮನಕ್ಕೆ ಬಂದಿತು.

ಭಾರತೀಯ ಪಂಚಾಂಗ ಕರ್ತರು ವರ್ಷದ ಅವಧಿಯನ್ನು ೩೬೫· ೨೫೮೭೫ ದಿನಗಳೆಂದು ಪರಿಗಣಿಸಿದ್ದರು. ಆದರೆ ಸೌರಮಾನ ವರ್ಷದಲ್ಲಿ ನಿಜವಾದ ಅವಧಿಯು ೩೬೫· ೨೪೨೨ ದಿನಗಳು.

ವಿವಿಧ ಧಾರ್ಮಿಕ ಉತ್ಸವಗಳ ಆಚರಣೆಯಲ್ಲಿ ಈಗಿನ ಪದ್ಧತಿಗೆ ಅಡ್ಡಿ ಆಪತ್ತಿಗಳು ಉಂಟಾಗುವುದಿಲ್ಲ. ಧಾರ್ಮಿಕ ಉದ್ದೇಶಗಳಿಗಾಗಿ ನೂತನ ಪಂಚಾಂಗದಲ್ಲಿ ಚಾಂದ್ರಮಾನಗಳನ್ನು ಅವಶ್ಯಕತೆಯಿಂದ ಪ್ರಾರಂಭಿಸಲಾಗುವುದು.

ಮೂಲ್ಕಿ ಬೇಂಕ್ ಲಿಮಿಟೆಡ್,
ಮೂಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಮು ತೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%
ಕರೆಂಟ್ ಎಕೌಂಟು ¾%

THE MOOLKY BANK, LTD. MULKI



ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಪೇಟೆಂಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಹಿತನುಡಿ

(ನಿನ್ನೆ ಮುಟದಿಂದ)

ಅಲ್ಲಲ್ಲಿ ಎಳೆಯರ ಸಂಘಟನೆಗಳು ಪ್ರಸ್ತಾವಿತವಾಗಬೇಕು. ಎಳೆಯರು ಎಂದಿನ ತನಕ ಪರಾಶ್ರಯದಲ್ಲಿ ಇರಬೇಕಾಗುತ್ತದೋ ಅಲ್ಲಿಯ ತನಕ ವಿದ್ಯಾರ್ಜನೆ, ಜ್ಞಾನಾರ್ಜನೆ ಹಾಗೂ ಪರಿಸ್ಥಿತಿಯ ಆಭ್ಯಾಸವನ್ನಷ್ಟೇ ತಮ್ಮ ಚಟುವಟಿಕೆಯಲ್ಲಿ ಸೀಮಿತಗೊಳಿಸಬೇಕು. ಸಮಾಜ ಸೇವೆ, ಸುನರ್ರಚನಾ ಕಾರ್ಯ, ಅನಕ್ಷರಸ್ಥ ನಿವಾರಣೆ–ಇಂತಹ್ಯ ಕಾರ್ಯಗಳಲ್ಲಿ ಸಾರ್ವಜನಿಕರೊಂದಿಗೆ ಕೂಡಬೇಕು.

ಚುನಾವಣಾ ಕಾಲದಲ್ಲೂ ವಿದ್ಯಾರ್ಥಿಗಳು—ಎಳೆಯರು—ವಹಿಸುವಂತಹ ಅತ್ಯಮೂಲ್ಯ ಕರ್ತವ್ಯವೊಂದಿದೆ. ಈ ಸಮಯದಲ್ಲಿ ಚುನಾವಣೆಯ ರೀತಿ-ನೀತಿ, ಮತದಾನದ ಮಹತ್ವ, ಚುನಾವಣೆಯಿಂದ ಸಾಧಿತವಾಗುವ ಕಾರ್ಯಗಳು, ದೇಶದ ಪರಿಸ್ಥಿತಿಯನ್ನು ಜನಸಾಮಾನ್ಯರಿಗೆ ಪಕ್ಷೀಯ ಮನೋಭಾವದಿಂದ ನಿರ್ಲಿಪ್ತರಾಗಿ ತಿಳಿ ಹೇಳುವ ಕಾರ್ಯವನ್ನು ಮಾಡಬಹುದು. ಇಂದು ನಿರಕ್ಷರರೂ, ಅಜ್ಞಾನಿಗಳೂ ಆದ ಲಕ್ಷಾಂತರ ಮತದಾರರಿಗೆ ತಿಳುವಳಿಕೆಯ ಈ ಎಳೆಯ ಜೀವದ ಉಪದೇಶದಿಂದ ಮತದಾನದ ಬಗ್ಗೆ ಆಸಕ್ತಿ ಹುಟ್ಟಬಹುದು. ಮತದಾನದ ಸದುಪಯೋಗವಾಗಲೂ ಸಾಧ್ಯವಿದೆ.

ಇಂದು ಎಷ್ಟೋ ಶಾಲೆ—ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಸಾಮಾಜಿಕ ಸುನರ್ರಚನಾ ಚಟುವಟಿಕೆಗಳಲ್ಲಿ ದೈಹಿಕ ಪರಿಶ್ರಮವನ್ನು ನೀಡಿ, ಭಾಗವಹಿಸುವ ಸಂತೋಷದಾಯಕ ಸುದ್ದಿ ಕೇಳುತ್ತಿರುವಂತೆಯೇ ಚುನಾವಣಾ ಕಾಲದಲ್ಲೂ ಅಂತಹ ನೀತಿಯುತ ಕಾರ್ಯಕ್ರಮಗಳು ನಮ್ಮ ಎಳೆಯರಿಂದಾಗುವಂತೆ ಹಿರಿಯರೂ ಅವಕಾಶ ಕಲ್ಪಿಸಲಿ!

ಕೇವಲ ಸೈಕಲ್ ಮೆರವಣಿಗೆ ಬಸಿಲ ಮೆರವಣಿಗೆ, ಭಿತ್ತಿ ಪತ್ರಗಳ ಮಲಿನ ಕಾರ್ಯಕ್ರಮ—ಇಂತಹ ಕಾರ್ಯಕ್ರಮಗಳಂತಹ ಹೊಲಸು ವಿಚಾರಗಳಿಗೆ ಎಳೆಯರನ್ನು ಉಪಯೋಗಿಸುವುದನ್ನು ಇನ್ನಾದರೂ ಎಳೆಯರೂ, ಹಿರಿಯರೂ ಬಿಟ್ಟು ಕೊಡಲಿ. ಚುನಾವಣೆಯಲ್ಲಿ ಕಿರಿಯರ ಪಾತ್ರ ಪ್ರಭಾವೀಪೂರ್ಣವಾಗಲಿ! ಅದು ಶೈಕ್ಷಣಿಕ ರೀತಿಯದಾಗಲಿ

ಕಿರಿಯರು ಕೇವಲ ಚುನಾವಣೆಯಂತಹ ಕಾರ್ಯಕ್ರಮಗಳನ್ನು ಅವಲೋಕಿಸುವುದರಿಂದ ಅವರ ವ್ಯಕ್ತಿತ್ವಕ್ಕೆ ಆಪತ್ತು ನೀಡಿದಂತಾಗುತ್ತದೆ. ಹಿರಿಯರು ಇನ್ನಾದರೂ ಎಚ್ಚರವಾಗಿ ಕಿರಿಯರ ಮೇಲೆ ಇಂತಹ ಸವಾರಿ ನಡೆಸುವುದನ್ನು ನಿಲ್ಲಿಸುವುದು ದೇಶದ - ಜನತಂತ್ರದ ಭವಿತವ್ಯದ ಹಿತ ದೃಷ್ಟಿಯಿಂದ ಶಕ್ತಾಕ್ಷೇವಕರವಾಗಿ ಆಗತ್ಯದ್ದಾಗಿದೆ.

—ಡೀ ನಿ. ನಾರಾಯಣ ಬಲ್ಲಾಳ,
ಉಡುಪಿ.

ಮುದ್ರಣ ಕಾರ್ಯಗಳಿಗೆ—
ನವಯುಗ ಪ್ರೆಸ್,
ಸಂತೆಕಟ್ಟೆ .... ಉಡುಪಿ.

ಪರಿಚಯ

ನಿಸರ್ಗದ ರಮಣೀಯಕತೆ
ನೈನಿತಾಲದ ವೈಶಿಷ್ಟ್ಯ

ಇದು ಸರೋವರಗಳ ಊರು

ಹಿಮಾಲಯದ ತಪ್ಪಲಲ್ಲಿ, ಜಲಪಟ್ಟಿಂದ ೬,೫೫೦ ಅಡಿ ಎತ್ತರದಲ್ಲಿ ಎಂಟು ಚದರ ಮೈಲುಗಳಷ್ಟು ವಿಸ್ತಾರವಾಗಿರುವ ಬೆಟ್ಟದೂರು-ನೈನಿತಾಲ್. ನಮ್ಮ ದೇಶದ ಉತ್ತರ ಪ್ರದೇಶದ ಹೆಮ್ಮೆಯ ಗುರುತು-ನೈನಿತಾಲ್. ಉತ್ತರ ಪ್ರದೇಶದ ಬೇಸಗೆಯ ರಾಜಧಾನಿ ನೈನಿತಾಲ್. ಕುಮಾವುನ್ ಬೆಟ್ಟಗಳಿಂದ ಆವೃತವಾಗಿ ಮನೋಹರವೂ, ಆಕರ್ಷಣೀಯವೂ ಆಗಿ ಕಂಗೊಳಿಸುತ್ತಿರುವುದು- ನೈನಿತಾಲ್. ಆಕಾಶ ಚುಂಬಿಗಳಂತೆ ತಲೆಯೆತ್ತಿ ನಿಂತಿರುವ ಶಿಖರಗಳ ಮಧ್ಯೆ ಹಿಮದ ಕಿರೀಟವನ್ನು ಧರಿಸಿದ್ದು, ಶೋಭಿಸುವುದು ನೈನಿತಾಲ್. ೧೫೦೦ ಗಜ ಉದ್ದವಿದ್ದು ತಲ್ಲಿತಾಲ್ ಮತ್ತು ಮಲ್ಲಿತಾಲ್‌ಗಳನ್ನು ವೀರಗಳಾಗಿಟ್ಟುಕೊಂಡು ಮನಮೋಹಕವಾಗಿದೆ-ನೈನಿತಾಲ್.

"ತಾಲ್" ಎಂದರೆ ಸರೋವರವೆಂದರ್ಥ. ತಲ್ಲಿ ಸರೋವರದಿಂದ ನೈನಿಯನ್ನು ಪ್ರವೇಶಿಸಬೇಕು. ಕುಮಾವುನ್ ಬೆಟ್ಟಗಳ ನಾಲು ನಯನ ಮೋಹಕವಾಗಿದ್ದು ನಮ್ಮನ್ನು ಒನ್ಮೈಗೇಸ್ತಂಭೀಭೂತರನ್ನಾಗಿ ಮಾಡುವುದಾಗಿದೆ. ನೈನಿಯ ಉಲ್ಲಾಸದಾಯಕ ಆಟಗಳಲ್ಲಿ ದೋಣಿಯಾನವು ಒಂದು. ದೋಣಿಯಾನಕ್ಕೆ ಬೇಸಗೆ ಕಾಲದಲ್ಲಿ ದೂರದ ೫೫೦೦ ಸಂದರ್ಶಕರು ಇಲ್ಲಿಗೆ ಬರುವುದಿದೆ. ಸರೋವರದ ಒಂದು ತುದಿಯಿಂದ ಇನ್ನೊಂದು ತುದಿಗೆ ಬರೀ ಎಂಟಾಣೆ ಖರ್ಚಿನಲ್ಲಿ ವಿಹರಿಸಬಹುದು. ಸಿಂಗಂರಿಸಿಟ್ಟ ೬೦ ದೋಣಿಗಳು ಬಾಡಿಗೆಗಾಗಿ ಇವೆ. ಅಲ್ಲಿ. ಗವರ್ನರರ 'ದೋಣಿ ಮನೆ" ಅಲ್ಲಿದೆ. ದೋಣಿಗಳ ವಿಹಾರಕ್ಕೆ ದ್ದು ಪ್ರಯಾಣಯೋಗ್ಯವಾದ ಒಂದೇ ಒಂದು ಬೆಟ್ಟದೂರು-ನೈನಿ. ನೈನಿ ಸರೋವರ ಸುತ್ತ ಬಳಸಿಕೊಂಡಿರುವ ರಸ್ತೆಗೆ "ಮಲ್" ಎನ್ನುವರು. ಇದು ೪೦೦೦ ಅಡಿ ಸುತ್ತಳತೆಯುಳ್ಳದಾಗಿದ್ದು ಸಂದರ್ಶಕರಿಗೆ ಎರಡೂಕಾಲು ಮೈಲುದ್ದದ ಸಂತೋಷದಾಯಕ ವಿಹಾರವನ್ನು ನೀಡುವುದಾಗಿದೆ.

ಇಕ್ಕಿರುವ ಸಮತಟ್ಟಾದ ಮೈದಾನಿಗೆ "ಫ್ಲೇಟ್ಸ್" ಎನ್ನುವರು. ಇದು ಹಾಕ್ಕಿ, ಕ್ರಿಕೆಟ್, ಬ್ಯಾಡ್ಮಿಂಟನ್, ಫುಟ್‌ಬಾಲ್ ಆಡಲಿಕ್ಕೂ ಸಂಜೆ ಜನರು ಒಟ್ಟುಕೂಡಿ ವಿಹರಿಸಲಿಕ್ಕೂ ಯೋಗ್ಯವಾದ ಸ್ಥಳ. ಇಂಥ ಸ್ಥಳಗಳು ನೀರು ಪೇರುಗಳಿಂದ ಕೂಡಿದ್ದು ನಯನಾಕರ್ಷಕವಾಗಿವೆ. ಸರೋವರದ ಸುತ್ತಲೂ ಇರುವ ಕಾಡುಗಳು ನೈನಿಯ ಕಂಠಾಭರಣದಂತೆಯೂ, ಅವುಗಳಲ್ಲಿ ಅಲ್ಲಲ್ಲಿ ಒಂದೊಂದು ಮನೆಯು ಆಭರಣದಲ್ಲಿ ಹೊಳೆಯುತ್ತಿರುವ ಪಚ್ಚ ಗಳಂತೆಯೂ ಕಂಗೊಳಿಸುತ್ತವೆ.

ನೈನಿತಾಲಿನ ಚಲೋದಾದ ಸ್ಥಳಗಳಲ್ಲಿ "ಸರಕಾರಿ ಗೃಹವು"ವು ಒಂದು. ಇದು ಸರೋವರದಿಂದ ೩೦೦ ಅಡಿ ಎತ್ತರದಲ್ಲಿದೆ. ೫೦೦ ಎಕ್ರೆ ವಿಸ್ತಾರವಿರುವ ಈ ಸ್ಥಳದಲ್ಲಿ ಗಿಲ ಚಿಕ್ಕ ಮನೆಗಳವೆ. ದೊಡ್ಡ ಮನೆಯು ೨೦ನೆಯ ಶತಮಾನದ ಆದಿಯಲ್ಲಿ ಆಗಿನ ಗವರ್ನರ್ ಮೆಕ್ ಡೋನಾಲ್ಡರವರಿಂದ ಸ್ಕೌಟ್‌ಲೇಂಡ್ ಮಾದರಿಯಲ್ಲಿ ಕಟ್ಟಿಸಲ್ಪಟ್ಟಿತು. ಬ್ಯಾಡ್ಮಿಂಟನ್ ಹಾಗೂ ಇನ್ನಿತರ ಸಂತೋಷದಾಯಕ ಆಟಗಳನ್ನಿಲ್ಲಿ ಆಡಬಹುದಾಗಿದೆ.

"ಖುರ್ಪೋಡನ್" ಎಂಬಲ್ಲಿಂದ ನೈನಿಯ ವರೆಗಿನ ಏಳರಿಂದ ಹತ್ತು ಮೈಲು ಉದ್ದದ ನೆರಳಿನ ಹಾದಿಯಲ್ಲಿ ಹಲವಾರು ತಾವರೆ ಕೊಳಗಳು, ಮಂದಿರಗಳು, ವಿನ್ಯಾಸರವಾದ ಸೈರು ಪಚ್ಚೆಗಳ ಹಸಿರು ಹಾಸಿಗೆಗಳು ಸ್ವರ್ಗವನ್ನು ಭುವಿಗಿಳಿಸಿದಂತೆ ಭಾವವನ್ನೀಯುತ್ತವೆ. ಇಲ್ಲಿ ಸಣ್ಣ ದೊಡ್ಡ ೨೦ ಹೊಟೇಲುಗಳವೆ. ಸಂದರ್ಶಕರು ಉಳಿದುಕೊಳ್ಳಲು ೫೦೦ ಬಾಡಿಗೆ ಮನೆಗಳವೆ. ಶ್ರೀ. ಮನೋಹರ ಲಾಲ ಸಹಾರವರ ಅಧ್ಯಕ್ಷತೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಗರ ಸಭೆಯು ನೈನಿಯನ್ನು ಸುಶೋಭಿತಗೊಳಿಸುವುದರಲ್ಲಿ ಬಹಳ ದಕ್ಷತೆ ವಹಿಸಿದೆ. ಇದು ೩೫ ಮೈಲುದ್ದದ ಮಾರ್ಗರಚನೆ ಮಾಡಿದುದಲ್ಲದೆ, ಉತ್ತಮ ನೀರಿನ ಸರಬರಾಯಿ, ಸ್ವಚ್ಛತೆ, ವಿದ್ಯುದ್ದೀಪ ವ್ಯವಸ್ಥೆಯನ್ನೊದಗಿಸಿಕೊಟ್ಟಿದೆ. ಇಲ್ಲಿರುವ ಐದು ಪ್ರಾಥಮಿಕ ಶಾಲೆಗಳಲ್ಲಿ ೨೦೦೦ ವಿದ್ಯಾರ್ಥಿಗಳು ವಿದ್ಯಾರ್ಜನೆ ಮಾಡುತ್ತಿದ್ದಾರೆ. ಇಲ್ಲಿನ 'ಬಿರ್ಲಾ ವಿದ್ಯಾಮಂದಿರ'ವು ಭೂಲೋಕದಲ್ಲೇ ಅತೀ ಎತ್ತರದಲ್ಲಿರುವ ಕಾಲೇಜಾಗಿದೆ.

ರಾಣಿಖೇತ, ಭೋವಾಲಿ, ಭೀಮತಾಲ್, ಮುಕ್ತೇಶ್ವರ ಮತ್ತು ಸರಕಾರಿ ಪಶುವೈದ್ಯೀಯ ರೋಗದ ಆಸ್ಪತ್ರೆಗಳು-ನೋಡತಕ್ಕ ಸ್ಥಳಗಳಾಗಿವೆ. ರಾಣಿಖೇತದಿಂದ ಹಿಮಾವೃತ ಪರ್ವತ ರಾಜನನ್ನು ನೋಡಲು ಅದೆಷ್ಟು ಆನಂದ! ಎಂತಹ ಸೊಗಸು! ಇಲ್ಲಿನ ಒಂದು ಭಾಗವು ಕ್ಷಯ ರೋಗದ ಆಸ್ಪತ್ರೆಯಾಗಿದೆ. ಇದು ಉತ್ತರ ಪ್ರದೇಶದ ಸರಕಾರದಿಂದ ನಡೆಸಲ್ಪಡುತ್ತದೆ. ಈ ಪ್ರದೇಶದ ಉನ್ನತಿಯೂ, ಹವಾಗುಣವೂ ಕ್ಷಯ ರೋಗ ನಿವಾರಣೆಗೆ ಯೋಗ್ಯವಾಗಿವೆ.

ರಾಣಿಖೇತ, ಭೋವಾಲಿ, ಭೀಮತಾಲ್ ಹಾಗೂ ನಾಲ್ಕು ಮೈಲು ಮೇಲಿರುವ ಜಾಬಾಲೆಯಾಗಳು ಕಣ್ಣಿನ ತೋಟಗಳಿಗೆ ಹೆಸರ್ಗೊಂಡಿವೆ. ಆಲ್ಲಿ ಚೆರ್ರೀಸ್, ಪ್ಲಮ್, ಪೀಚ್, ಪೀರ್, ಎಪ್ರಿಕೋಟ್ ಹಾಗೂ ಸೇಬು ಹಣ್ಣುಗಳನ್ನು ಬೆಳೆಸುತ್ತಾರೆ. ವರ್ಷಾವಧಿ ಈ ತೋಟಗಳಿಂದ ೧೫೦೦ ಮಣ ಸೇಬು ಹಣ್ಣುಗಳೂ ೩೦೦ ರಿಂದ ೪೦೦ ಮಣಗಳಷ್ಟು ಪ್ರತಿಯೊಂದು ಜಾತಿಯ ಬೇರೆ ಬೇರೆ ಹಣ್ಣುಗಳು ದೊರಕುತ್ತವೆ. ನೈನಿಯಿಂದ ಐದು ಮೈಲು ದೂರವಿರುವ ಜೋಳಿ ಕೋಟೆ ಎಂಬಲ್ಲಿ ಹೂದೋಟವೂ, ಸನ್ನೀಪದಲ್ಲಿಯೇ ಚೀನ್ನೊಣಗಳ ಸಾಕಣೆಯ ಉದ್ಯಮವೂ ರೂಪಿತವಾಗಿವೆ

ಮುಕ್ತೇಶ್ವರದಲ್ಲಿ ಪಶುಗಳ ರೋಗ ನಿವಾರಣೆಗೆ ಆವಶ್ಯಕವಾದ ರಕ್ತದ್ರವ(ಸಿರಂ)ದ ಸಂಶೋಧನಾ ಕೇಂದ್ರವು ಸರಕಾರದಿಂದ ನಡೆಸಲ್ಪಡುತ್ತದೆ. ಈ ರೀತಿ ಸರ್ವ ಗುಣಸಂಪನ್ನವಾಗಿ ಸರ್ವವಸ್ತುಗಳಿಂದ ಸಮೃದ್ಧವಾಗಿರುವ ಹಿಮಾಲಯದಲ್ಲಿ ಸುಶೋಭಿತವಾಗಿರುವ ಬೆಟ್ಟದೂರು ನೈನಿತಾಲ್-ನಮ್ಮ ದೇಶಕ್ಕೊಂದು ಭೂಷಣ.

-ಶ್ರೀ 'ಸರಾಯ್' ಬಸ್ರೂರು.

ಒಂದು ಹೊಸ ಮಹಾ ಕಾದಂಬರಿ
ನಡುಹಗಲಿನ ಕಗತ್ತಲೆ
ಸಿಲ್ಕ್ ಪುಟಗಳು ಬೆಲೆ 2·50 ರೂಪಾಯಿ

- ಯುರೋಪಿನಲ್ಲಿ ಈಗ ನಲ್ವತ್ತು ವರ್ಷಗಳ ಹಿಂದೆ ನಡೆದು ಇಡೀ ಪ್ರಪಂಚವನ್ನೇ ತಲ್ಲಣಗೊಳಿಸುತ್ತಿರುವ ಒಂದು ರಾಜನೈತಿಕ ಪದ್ಧತಿಯಿಂದ ಮನುಷ್ಯನ ಆತ್ಮವು ಪತನವಾಗುತ್ತಿರುವ ದುರಂತದ ಒಂದು ಮಾರ್ಮಿಕ ಕಾದಂಬರಿ.

- ರಶಿಯದ ರಕ್ತಮಯ ಕ್ರಾಂತಿಯು ವ್ಯಕ್ತಿಯ ಜೀವ ಮತ್ತು ತ್ರರನ್ನು ನಿರ್ದಾಕ್ಷಿಣ್ಯವಾಗಿ ಹೀರುವ ಭೀಕರ ಚಿತ್ರಣ.

- ಇದರಲ್ಲಿ ಪ್ರಚಲಿತ ಪ್ರಪಂಚದ ರಾಜನೀತಿ, ಇತಿಹಾಸ, ಮತ್ತು ಅಂತಾರಾಷ್ಟ್ರೀಯ ರೀತಿ ನೀತಿಯ ಒಳನೋಟ ದೊರೆಯುತ್ತದೆ.

- ಪ್ರಖ್ಯಾತ ಲೇಖಕ ಆರ್ಥರ್ ಕೊಸ್ಲರ್ ಅವರ ಜರ್ಮನ್ ಕಾದಂಬರಿಯ ಮನೋಜ್ಞ ಕನ್ನಡವನ್ನು ಅನುವಾದಿಸಿದವರು ಕು. ಶಿ. ಹರಿದಾಸ ಭಟ್ಟರು.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.
(ಪ್ರತಿಗಳು ನವಭಾರತ ಪುಸ್ತಕ ಭಂಡಾರ, ಉಡುಪಿ, ಇಲ್ಲಿಯೂ ದೊರೆಯುತ್ತವೆ)

ಹರಿಭಕ್ತಿಸಾರ
'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ. ಬೆಲೆ: ೦—೨—೦
ಮಕ್ಕಳ ಮಗ್ಗಿಪುಸ್ತಕ
ಬೆಲೆ: ೦ ೧—೦
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೬ — VOL. 36 — 28—3—1957 — ಸಂಚಿಕೆ ೨೯ — NO. 29

ಕಾಶ್ಮೀರ

ಾರತದ ನಿಲುಮೆಗೆ ೋಧ ಯಾರಿಂದ?

ಾಶ್ಚಾತ್ಯ ರಾಷ್ಟ್ರಗಳು ಾಯಾನುವರ್ತಿಯಾಗಿಲ್ಲ

ಸಾಮ್ರಾಜ್ಯವಾದೀ ವಸಾಹತು ವ್ಯವ ಯ ಅವಶೇಷಗಳನ್ನು ನಿರ್ಮೂಲಗೊ ಲು, ತಮ್ಮ ರಾಷ್ಟ್ರೀಯ ಸ್ವಾತಂ ್ಯವನ್ನು ರಕ್ಷಿಸಿಕೊಳ್ಳಲು, ಮತ್ತು ಾರ್ವಜ್ಞ ಖಂಡದಲ್ಲಿ ಶಾಂತಿಯನ್ನು ಬಲ ಡಿಸಲು,–ಏಶಿಯದ ಮತ್ತು ಆಫ್ರಿಕದ ೇಶಗಳಿಗೆ ಇರುವ ದೃಢವಾದ ಮನೋ ೃತ್ತಿಯು ನಮ್ಮ ಕಾಲದ ಅತ್ಯಂತ ಮ ತ್ವಪೂರ್ಣವಾದ ಸಾಮಾಜಿಕ, ರಾಜ ಯ ಅಂಶಗಳಲ್ಲೊಂದಾಗಿದೆ ವಿಭಿನ್ನ ಾಮಾಜಿಕ ವ್ಯವಸ್ಥೆಗಳನ್ನು ಹೊಂದಿರು ರಾಜ್ಯಗಳ ಶಾಂತಿಯುತ ನೆಲ-ಆಸ್ತಿ ದ ಸೂತ್ರಗಳನ್ನು ಅಂಗೀಕರಿಸಿದ ಏಶಿ ಸಿಕ ಬಾಂಡುಂಗ್ ಸಮ್ಮೇಳನವೂ, ಈ ಸ್ಟ್ ದೇಶದ ವಿರೋಧವಾಗಿ ಬ್ರಿಟನ್, ್ರನ್ಸ್ ಮತ್ತು ಇಸ್ರೇಲ್ ದೇಶಗಳು ೆಸಿದ ಆಕ್ರಮಣವನ್ನು ಕೊನೆಗಾಣಿಸ ಾಶ್ಚಾತ್ಯ ದೇಶಗಳ ಜನತೆಗಳೂ ಮ , ಸರಕಾರಗಳೂ ಪ್ರದರ್ಶಿಸಿದ ಏಕ ಕಾರವಾದ ದೃಢ ಸಂಕಲ್ಪವೂ, ಕೇವ ಶತ್ತೀಚೆಗೆ ಪಾಶ್ಚಿಮಾತ್ಯ ರಾಜ್ಯ ಶಕ್ತಿ ೆ ವಸಾಹತು ಅಧೀನತೆಯಲ್ಲಿದ್ದ ದೇಶ ೆ ನಡುವೆ ಬೆಳೆಯುತ್ತಿರುವ ಐಕ್ಯಮತ್ಯ ಬಗ್ಗೆ ಮಹತ್ವಪೂರ್ಣವಾದ ನಿದರ್ಶ ನವನ್ನು ಒದಗಿಸಿಕೊಟ್ಟಿವೆ.

ಏಶಿಯದ ಮತ್ತು ಆಫ್ರಿಕದ ದೇಶಗ ಳ ಆ ದೇಶಗಳ ರಾಜಕೀಯಾಭಿವೃದ್ಧಿ ಾ ಸ್ವತಂತ್ರಪಥಾನುಸರಣೆಯ ಬಗ್ಗೆ ುವ ಹಕ್ಕುಗಳನ್ನು ಅಂತರರಾಷ್ಟ್ರೀ ಾ ಜೀವನದಲ್ಲಿ ಅಂಗೀಕರಿಸುವುದರ ಪ್ರ ಕ್ರಿಯೆಯು, ಅಂತರರಾಷ್ಟ್ರೀಯ ಸ್ಪರ್ಧೆ ಯಾವಾದದ ಶಕ್ತಿಗಳ ಕಡೆಯಿಂದ ಗ್ರ ವಿರೋಧವನ್ನು ಎದುರಿಸುತ್ತಿದೆ. ಸಾ ಾಜ್ಯವಾದಿಗಳು ಇತಿಹಾಸಚಕ್ರವನ್ನು ಂದಿರುಗಿಸಲು ನಡೆಸುತ್ತಿರುವ ಅವರ ೆಷಲ ಪ್ರಯತ್ನಗಳಲ್ಲಿ, ಉದ್ರೇಕಗೊಳಿ ವಿಕೆಗಳನ್ನೂ, ಬೆದರಿಕೆಯನ್ನೂ ಮತ್ತು ಯುಧ ಆಕ್ರಮಣವನ್ನೂ ಒಳಗೊಂ ಸ್ತಿಯೊಂದು ಬಗೆಯ ಸಾಧನಗಳ ನ್ನು ಅವರು ಬಳಸುತ್ತಿದ್ದಾರೆ.

ಕಾಶ್ಮೀರ ಜನತೆಯು ಸ್ವತಃ ತಾವಾಗಿ ೇ, ವಸ್ತುಸ್ಥಿತಿಯಲ್ಲಿಯೂ ಮತ್ತು ನ್ಯಾಯೋಚಿತ ಹಕ್ಕಿನಿಂದಲೂ, ಕಾಶ್ಮೀರ ದ ಸಮಸ್ಯೆಯನ್ನು ನಿರ್ಣಯಿಸಿಕೊಂಡಿ ದ್ದಾರೆ

ಕಾಶ್ಮೀರದ ಘಟನೆಗಳ ಪ್ರಾರಂಭದಲ್ಲಿ ಬ್ರಿಟನ್ನೂ, ಮತ್ತು ತರುವಾಯ ಅಮೆರಿ ಕದ ಸಂಯುಕ್ತ ಸಂಸ್ಥಾನಗಳೂ, ಹೊ ಸದಾಗಿ ಸ್ಥಾಪಿತವಾದ ಭಾರತ ಮತ್ತು ಪಾಕಿಸ್ತಾನ ರಾಜ್ಯಗಳ ಕ್ಷೋಭೀಕರಣವ ನ್ನು ಅಡ್ಡಿಪಡಿಸುವುದಕ್ಕಾಗಿ, ಉದ್ರಿಕ್ತ ಗೊಂಡಿದ್ದ ಭಾರತ-ಪಾಕಿಸ್ತಾನೀ ನಿವಾಸಿ ವಸ್ಸು ಬಳಿಸಿಕೊಳ್ಳಲು ಪ್ರಯತ್ನಿಸಿದ.ವು.

ತಮ್ಮ ಅಯುಕ್ತ ಲಕ್ಷ್ಯಗಳನ್ನು ನೆರ ವೇರಿಸುವುದರ ಸಲುವಾಗಿ, ಅಮೇರಿಕದ ಸಂಯುಕ್ತ ಸಂಸ್ಥಾನಗಳೂ ಮತ್ತು ಬ್ರಿ ಟನ್ ದೇಶವೂ, ಸಂಯುಕ್ತ ರಾಷ್ಟ್ರ ಸಂ ಸ್ಥೆಯಲ್ಲಿ ಕಾಶ್ಮೀರ ಸಮಸ್ಯೆಯ ಪರೀ ಕ್ಷೆಸಲ್ಪಡುತ್ತಿದ್ದಿತೆಂಬ ವಾಸ್ತವಾಂಶವ ನ್ನು ತಾವು ಬಿರುಪಯೋಗಪಡಿಸಿಕೊಂ ಡರು ೧೯೪೮ರ ಜನವರಿ ದಿನಾಂಕ ೧೩ರಂದು ಭಾರತ ದೇಶದ ಸರಕಾರವು ಭದ್ರತಾ ಮಂಡಲವನ್ನು ಸಮೀಪಿಸಿ,–ಕಾಶ್ಮೀರದ ಮೇಲೆ ದ ರಾಕ್ರಮಣವನ್ನು ನಡೆಸಿದ ಬುಡಕಟ್ಟಿನ ಜನರಿಗೂ (ಟ್ರೈ ಬ್ಸ್) ಮತ್ತು ಪಾಕಿಸ್ತಾನೀ ನಾಗರಿಕ ರಿಗೂ ಸಹಾಯವನ್ನು ನೀಡುವುದನ್ನು ನಿಲ್ಲಿಸುವಂತೆ ಪಾಕಿಸ್ತಾನಕ್ಕೆ ಬಲ ವಂತವನ್ನು ಭದ್ರತಾಮಂಡಲವು ಮಾ ಡಬೇಕೆಂದು ಆ ವಿಶ್ವ ಸಂಸ್ಥೆಯನ್ನು ಕೋರಿತು. ಪಾಕಿಸ್ತಾನದ ಕಾರ್ಯಾ ಚರಣೆಗಳನ್ನು ಭಾರತ ದೇಶವು ದುರಾ ಕ್ರಮಣ ಕ್ರಿಯೆಯೆಂದು ವಿವರಿಸಿತು ಪಾಕಿಸ್ತಾನದ ಸರಕಾರವು ೧೯೪೮ರ ಜನವರಿ ದಿನಾಂಕ ೧೫ರಂದು ಭದ್ರತಾ ಮಂಡಲಕ್ಕೆ ಬರೆದ ಒಂದು ಪತ್ರದಲ್ಲಿ ತನ್ನ ನಿಲುಮೆಯನ್ನು ವ್ಯಕ್ತಪಡಿಸಿತು

ಭಾರತ ದೇಶ ಮತ್ತು ಪಾಕಿಸ್ತಾನ ಗಳ ಸಲುವಾಗಿ ಭದ್ರತಾ ಮಂಡಲದಿಂದ ರಾಸುಗೊಳಿಸಲ್ಪಟ್ಟ, ಸಂಯುಕ್ತ ರಾಷ್ಟ್ರ ಸಂಸ್ಥೆಯ ಸಮಿತಿಯ ಚಟುವಟಿಕೆಗಳು ಉಭಯತಃ ಭಾರತ ದೇಶದಲ್ಲಿಯೂ ಪ ತ್ತು ಪಾಕಿಸ್ತಾನದಲ್ಲಿಯೂ ನ್ಯಾಯ ಸಮ್ಮತವಾದ ಟೀಕೆಗೆ ಗುರಿಯಾದುವು.

ಆದರೂ ಕೂಡ, ಭಾರತ ದೇಶವೂ ಮತ್ತು ಪಾಕಿಸ್ತಾನವೂ, ಕಾಶ್ಮೀರದಲ್ಲಿ ಹೋರಾಟಗಳನ್ನು ನಿಲ್ಲಿಸಲು, ೧೯೪೯ರ ಜನವರಿ ದಿನಾಂಕ ೧೩ರಂದು ಒಪ್ಪಿಕೊಂ ಡುವು ೧೯೪೯ರ ಜುಲೈ ತಿಂಗಳಲ್ಲಿ ಸ್ಥಾಪಿ ಸಲಾದ ಯುದ್ಧ-ವಿರಾಮ ರೇಖೆಯು (ಸೀಜ್-ಫೈರ್ ಲೈನ್) ಇಂದಿನ ವರೆಗೂ, ಕಾಶ್ಮೀರವನ್ನೆ ಬಾರತ ದೇಶದ ಮತ್ತು ಪಾಕಿಸ್ತಾನೀ ಸೇನೆಗಳ ನಡುವಣ ಗಡಿಯಾಗಿ ಏರ್ಪಟ್ಟಿದೆ.

೧೯೪೯–೧೯೫೩ರ ಕಾಲಾವಧಿಯಲ್ಲಿ, ಅಮೇರಿಕದ ಸಂಯುಕ್ತ ಸಂಸ್ಥಾನಗಳ, ಆಸ್ಟ್ರೇಲಿಯದ ಮತ್ತು ಕೆನಡಾ ದೇಶದ ನಾಗರಿಕರ ಮಧ್ಯಾಹ್ನದಿಂದ ನಿಯುಕ್ತರಾದ, ಸಂಯುಕ್ತ ರಾಷ್ಟ್ರ ಸಂಸ್ಥೆಯ ಬೇರೆ ಬೇರೆ ಸದಸ್ಯರೂ ಮತ್ತು ಸಂಘಾನಕರ್ತ ರೂ ಕಾಶ್ಮೀರ ಸಮಸ್ಯೆಯನ್ನು ಇತ್ಯರ್ಥ ಗೊಳಿಸಲು ಪ್ರಯತ್ನಿಸಿದರು. ಇದೇ ಅವ ಧಿಯಲ್ಲಿ, ಕಾಶ್ಮೀರದಲ್ಲಿ ವಿದೇಶೀ ಸೈನ್ಯ ಗಳನ್ನು ತಂದು ನಿಲ್ಲಿಸುವ ಉದ್ದೇಶದಿಂದ ಅ ಮೇರಿಕದ ಸಂಯುಕ್ತ ಸಂ ಸ್ಥಾನಗಳು ಭಾರತ ದೇಶದ ಮೇಲೆ ಯೂ ಮತ್ತು ಪಾಕಿಸ್ತಾನದ ಮೇಲೆ ಯೂ ಮಹತ್ತರವಾದ ಒತ್ತಡವನ್ನು ಪ್ರಯೋಗಿಸಿದವು.

ಆದರೆ, ಆಕ್ರಮಣಕಾರೀ ಕೂಟಗಳ ನ್ನು ಅವಶ್ಯವಸ್ತುವಾಗಿ ಒಟ್ಟುಗೂಡಿಸುವ ಮತ್ತು ಸೈನಿಕ ಸ್ಥಾವರಗಳ ಜಾಲ ಬಂಧವನ್ನು ವಿಸ್ತರಿಸುವ, ಅಮೇಕನ್ ನೀತಿಯು – ಸಂಯುಕ್ತ ರಾಷ್ಟ್ರಸಂಸ್ಥೆ ಯ ಹಲವರು ಪ್ರತಿನಿಧಿಗಳ ಚಟುವಟಿಕೆ ಗಳ ಸ್ವರೂಪವನ್ನು ನಿರ್ಣಯಿಸಿದ ನೀತಿ ಯು—ಭಾರತ ದೇಶದ ಕಡೆಯಿಂದ ಕಸು ವಿನ ವಿರೋಧವನ್ನು ಎದುರಿಸಿತು ಯು ದ್ಧ ವಿರಾಮದ ಪರಕ್ಕುಗಳ ಪೂರ್ಣಕೆಯಂ ನ್ನು ನೋಡಿಕೊಳ್ಳುವ ಸೈನಿಕ ಸಮಿಕ್ಷ ಕರ ಸೋಗಿನಲ್ಲಿ ತನ್ನ ಬೇಹುಗಾರ ಅಧಿ ಕಾರಿಗಳನ್ನು ಅನೇಕ ದಶಕಗಳ ಸಂಖ್ಯೆ ಯಲ್ಲಿ ಮಾತ್ರವೇ (ನೆವೆರಲ್ ಸ್ಯೋರ್ಸ್) ತಾತ್ಕಾಲಿಕವಾಗಿ ಕಾಶ್ಮೀರಕ್ಕೆ ನರ್ಗಾ ಯಿಸುವುದರಲ್ಲಿ ಅಮೆರಿಕದ ಸಂಯುಕ್ತ ಸಂಸ್ಥಾನಗಳಿಗೆ ಗೆಲುವು ಲಭಿಸಿತು.

ಸಂಯುಕ್ತ ರಾಷ್ಟ್ರ ಸಂಸ್ಥೆಯನ್ನು ಬಳಸಿಕೊಂಡು ಕಾಶ್ಮೀರದಲ್ಲಿ ತಳಊರು ಲು ಪ್ರಯತ್ನಿಸಿದ ಸಾಮ್ರಾಜ್ಯವಾದಿಗಳ ಪ್ರಯತ್ನಗಳ ವಿಸಲತೆಯು ೧೯೫೩ರ ವ್ರಾ ರಂಭದಲ್ಲಿ ಸ್ಪಷ್ಟವಾಗಿ ವ್ಯಕ್ತಸಟ್ಟಿತು. ತದರಿ ಅಮೆರಿಕದ ಸಂಯುಕ್ತ ಸಂಸ್ಥಾನ ಗಳು ಈ ಪರಿಣಾಮದೊಂದಿಗೆ ಸಮಾಧಾ ನಪಟ್ಟುಕೊಳ್ಳಲಿಲ್ಲ ಕಾಶ್ಮೀರದ ಹಲವ ರು ರಾಜಕೀಯ ನಾಯಕರಿಗೆ ಭಾರತ-ವಿರೋಧೀ ದಂಗೆಯನ್ನು ಸಂಘಟಿಸುವುದ ಕ್ಕಾಗಿ ಚಿತಾಪಣೆಯನ್ನು ಕೊಡುವುದರ ಮೂಲಕ ಕಾಶ್ಮೀರದಲ್ಲಿ 'ನೆಲಸಲು, ೧೯೫೩ರ ಮಧ್ಯದಲ್ಲಿ ಹೊಂದು ದುಸ್ಸಾಹಸದ ಪ್ರಯತ್ನವನ್ನು ಕೈಗೊಳ್ಳಬೇಕೆಂದು ಅಮೆರಿಕವು ನಿರ್ಣಯಿಸಿತು ವಿಭಿನ್ನ ವಸಾಹತುವಾದಿಗಳ ತೋಳ್ತನದ (ಪೂಪ್ಪೆಟ್) ನಡೆವಳಿಕೆಗಳ ವಿಷಯದಲ್ಲಿ ತಮ್ಮ ಸ್ವಾನುಭವದಿಂದ ಪರಿಚಿತರಾಗಿ ದ್ದು ಕಾಶ್ಮೀರದ ವತ್ತು ಭಾರತ ದೇಶದ ಪ್ರಗತಿಶೀಲ ಶಕ್ತಿಗಳು ಈ ಒಳಸಂಚನ್ನು ಸಕಾಲದಲ್ಲಿಯೇ ಬಯಲಿಗಿಟ್ಟು, ಅದು ಅ ಪಾಯರಹಿತನಾಗುವಂತೆ ಮಾಡಿದುವು. ೧೯೫೩ರಲ್ಲಿ ಭಾರತೀಯ ಸರಕಾರವು, ಅ ಮೆರಿಕದ 'ಸವಿಕ್ಷೆಕರು' ಕಾಶ್ಮೀರದಿಂದ ಹೊರಟುಹೋಗುವಂತೆ, ಸೂಕ್ತ ಕಾರ್ಯ ಕ್ರಮಗಳನ್ನು ಕೈಗೊಂಡಿತು

೧೯೫೩ರಲ್ಲಿ ಅಮೆರಿಕದ ಸಂಯುಕ್ತ ಸಂಸ್ಥಾನಗಳೊಡನೆ ಒಂದು ಸೈನಿಕ ಒಡಂ ಬಡಿಕೆಯನ್ನು ಮಾಡಿಕೊಂಡುದರಿಂದಲೂ ಮತ್ತು 'ಸೀಟೋ (Seato), ಬಾಗದಾದ್ ಕೂಟಗಳನ್ನು ಸೇರಿದುವಂದಲೂ,

(ಉಳಿದ ಪುಟ ನೋಡಿರಿ)

SEASON DEPOSITS
ಸೀಸನ್ ಠೇವಣಾತಿಗಳು

ಸೇ. 4% ದರ ಬಡ್ಡಿಯಲ್ಲಿ ಸೀಸನ್ ಠೇವಣಾತಿ ಗಳನ್ನು ಈಗ ಸ್ವೀಕರಿಸಲಾಗುವುದು.

ದೊಡ್ಡ ಡಿಪೊಜಿಟು ಮೊಬಲಗುಗಳಿಗೆ ಸ್ಪೆಶಲ್ ಬಡ್ಡಿ ದರಗಳು.

ಹೆಚ್ಚಿನ ವಿವರಗಳಿಗೆ ನಮ್ಮನ್ನು ವಿಚಾರಿಸಿರಿ

ದಿ ವಿಜಯ ಬೇಂಕ್ ಲಿಮಿಟೆಡ್
ಪ್ರಧಾನ ಕಛೇರಿ ಮತ್ತು ಶಾಖೆಗಳು.

ಜುಮ್ಲಾ ಸಂಪತ್ತು (31—12—1956) ರೂಪ್ಯಾ 1 ಕೋಟಿಗೂ ಮಿಕ್ಕಿದೆ.

ಾರ್ಷಿಕ ಚಂದಾ NAVAYUGA WEEKLY HUBLI

ಕೌಪುಕ

ವಿಶ್ವಾಂತರಿಕ್ಷದಲ್ಲಿ ಪ್ರಥಮ ಪ್ರವಾಸ

ರಷಿಯದ ನಾಯಿಗಳು ರಾಕೆಟಿನ ಮೂಲಕ ದೊರಕಿಸಿಕೊಂಡ ಗೌರವ

'ಅಲ್ಬಿನಾ' ತನ್ನ ತಾಯ್ತಂದೆಯರಿಂದ ತೆಳ್ಳನೆಯ ಕಾಲುಗಳನ್ನೂ, ಚುರುಕು ಬುದ್ಧಿಯ ಮತ್ತು ಭಾವ ಪ್ರದರ್ಶಕವಾದ ನೇತ್ರಗಳನ್ನೂ ಮತ್ತು ಶಾಂತ ಸ್ವಭಾವವನ್ನೂ ವಂಶಪಾರಂಪರ್ಯವಾಗಿ ಪಡೆದಿತ್ತು. ಇತ್ತೀಚಿನ ವರೆಗೆ ಅದರ ಜೀವನದಲ್ಲಿ ಯಾವ ವಿಶೇಷ ಘಟನೆಯೂ ನಡೆದಿರಲಿಲ್ಲ. ತನ್ನ ಯಜಮಾನಿಯಿಂದ ಆಗಾಗ್ಗೆ ಸಕ್ಕರೆಯ ಸವಿಕೊಡುಗೆಗಳ ಸುಖವನ್ನು ಪಡೆಯುತ್ತಿದ್ದಿತು, ಮತ್ತು ಆಕೆಯೊಡನೆ ಗಾಳಿ ಸವಾರಿಗೆ ಹೋಗುತ್ತಿದ್ದಿತು.

ಇದ್ದಕ್ಕಿದ್ದ ಹಾಗೆಯೇ ಒಂದು ದೊಡ್ಡ ಬದಲಾವಣೆಯುಂಟಾಯಿತು.--ಅಲ್ಬಿನಾ ಬೇರೊಂದು ಕಟ್ಟಡದಲ್ಲಿ ವಾಸಿಸುವುದಕ್ಕಾಗಿ ಕಳುಹಿಸಲ್ಪಟ್ಟಿತು. ಅಲ್ಲಿ ಪ್ರತಿಯೊಂದು ವಿಷಯವೂ ತುಂಬಾ ಶಾಂತವಾಗಿತ್ತು. ಪ್ರತಿದಿನವೂ ಬಿಳಿಯ ಸೋಲುಹುಪ್ಪಗಳನ್ನು ಧರಿಸಿದ ಹಲವು ಜನರು ಅಲ್ಬಿನಾನ್ನು ನೋಡಲು, ಅದನ್ನು ಪರೀಕ್ಷಿಸಲು ಮತ್ತು ತಮ್ಮ ಟಿಪ್ಪಣಿ ಪುಸ್ತಕಗಳಲ್ಲಿ ಹಲವು ವಿಷಯಗಳನ್ನು ಗುರುತುಮಾಡಿಕೊಳ್ಳಲು ಬರುತ್ತಿದ್ದರು. ಅವರು ಅದನ್ನು ಒಂದು ಗಾಜಿನ ಗೂಡಿನಲ್ಲಿ ಇಟ್ಟು ಬೇಗ ಹಾಕಿದರು. ಆಗ ಅಲ್ಬಿನಾ ಆದರಲ್ಲಿ ಇರಲು ಏನೂ ವಿರೋಧವನ್ನು ವ್ಯಕ್ತಪಡಿಸಲಿಲ್ಲ. ಏಕೆಂದರೆ,ಅದರೊಳಗಡೆ ಬೆಚ್ಚಗಿದ್ದಿತು, ಆದರಲ್ಲಿ ಸುಖಾಸನ ವ್ಯವಸ್ಥೆಯಿದ್ದಿತು.

ಒಂದು ದಿನ ಅಲ್ಬಿನಾ ಮತ್ತು ಇನ್ನೊಂದು ನಾಯಿ, ಕೊಜ್ಯಾವ್ಕಾ ಇವೆರಡನ್ನೂ ಒಂದು ವಿಮಾನನಿಲ್ದಾಣಕ್ಕೆ ಒಯ್ಯಲಾಯಿತು. ಅಲ್ಲಿ ವಿಶ್ವಾಕಾಶ ಪ್ರಯಾಣಕ್ಕೆ ಒಂದು ಆಕಾಶಬಾಣ-ವಿಮಾನವು (ರಾಕೆಟ್) ಕೊರಡಲು ಸಿದ್ಧಪಡಿಸಲ್ಪಟ್ಟಿದ್ದಿತು. ನಾಯಿಗಳಿಗೆ ಒಂದು ವಿಶಿಷ್ಟರೀತಿಯ ಆಕಾಶಯಾನ ತೊಡಿಗೆಗಳನ್ನು (ಸ್ಪೇಸ್-ಸೂಟ್ಸ್) ತೊಡಿಸಲಾಗಿದ್ದಿತು. ಅವುಗಳ ತರಬೇತಿನ ಅವಧಿಯಲ್ಲಿ ಈ ತೊಡಿಗೆಗಳನ್ನು ಅವುಗಳಿಗೆ ತೊಡಿಸಿದ್ದುದರಿಂದ ಅವು ಈ ಉಡುಪುಗಳಿಗೆ ಹಳಗಿದ್ದುವು. ಸಹಾಯಕರು ಈ ನಾಯಿಗಳನ್ನು 'ರಾಕೆಟ್'ನೊಳಗಡೆ ಬಿಟ್ಟ ತರುವಾಯ, ಯಾರೋ ಒಂದು ಒತ್ತುಗುಂಡಿಯನ್ನು (ಸ್ವಿಚ್) ನೆಳೆದರು. ಆ ಬೃಹತ್ ಆಕಾಶಬಾಣ ವಿಮಾನವು ಮೇಲಕ್ಕೆ ಏರಿತು. ವಿಶ್ವಾಂತರಿಕ್ಷದೊಳಕ್ಕೆ ವಿಮಾನಯಾನವು ಈ ರೀತಿ ಪ್ರಾರಂಭವಾಯಿತು.

ಇನ್ನೊಂದು ಗಂಟೆಯ ಅವಧಿಯಲ್ಲಿ ಅಲ್ಬಿನಾ ಮತ್ತು ಇತರ ಒಡನಾಡಿಯು-ಇಬ್ಬರು "ವಿಶ್ವಾಕಾಶ ವಿಜೇತರು" -- ಭೂಮಿಗೆ ವಾಪಸು ಬಂದಿಳಿದಿದ್ದು, ತಮ್ಮ ಸ್ನೇಹಿತ ಜನರಿಂದ ಸಕ್ಕರೆಯ ಸವಿಯ ಸಂತೋಷವನ್ನು ಅನುಭವಿಸುತ್ತ, ಒಂದೊಡನೊಂದು ಆಟವಾಡಿಕೊಂಡು ಇದ್ದುವು. ತಮ್ಮ ನೂತನಾನುಭವದಿಂದ ಅವುಗಳಿಗೆ ಏನೂ ಕೆಡುಕಾಗಿರಲಿಲ್ಲ.

ಸೋವಿಯತ್ ವಿಜ್ಞಾನಿ, ಅಲೆಕ್ಸೆಯಿ ಪೊಕ್ರೋವ್‌ಸ್ಕಿಯವರು ನನಗೆ ಈ ಕತೆಯನ್ನು ಹೇಳಿದರು.

"ನಾವು ಎರಡು ಪ್ರಯೋಗ-ಪರಂಪರೆಗಳನ್ನು ನಡೆಸಿದೆವು. ಮೊದಲನೆಯದರಲ್ಲಿ, ನಾಯಿಗಳೂ ಮತ್ತು ಅವಶ್ಯಕ ಯಂತ್ರ ಸಲಕರಣೆಯೂ "ರಾಕೆಟ್" ಯಂತ್ರದ ಶಿರೋಭಾಗದಲ್ಲಿ, ಗಾಳಿ ನುಸಿಯದಂತೆ ಬೆಸುಗೆ ಮಾಡಲ್ಪಟ್ಟಿದ್ದ ವಿಭಾಗದಲ್ಲಿ ಇಡಲ್ಪಟ್ಟುವು. ಹಾರಾಟದ ಅವಧಿಯಲ್ಲಿ ಪ್ರಾಣಿಗಳನ್ನು ಜೀವಂತವಾಗಿಟ್ಟಿರಲು ಆವಶ್ಯಕವಾದ ಪರಿಸ್ಥಿತಿಗಳು, ಕಥಾಕಥಿತ ವಾಯು ನವೀಕರಣ ವ್ಯವಸ್ಥೆಯ ಮೂಲಕ ಆ ಗೂಡಿನಲ್ಲಿ ನಿರ್ಮಿಸಲ್ಪಟ್ಟಿದ್ದುವು. ಎಂದು ಹೇಳುತ್ತಾ ಅವರು ತಮ್ಮ ಮಾತನ್ನು ಮುಂದುವರಿಸಿದರು.

"ಈ ಹಾರಾಟದ ಅವಧಿಯಲ್ಲಿ 'ರಾಕೆಟ್ಟಿ'ನಲ್ಲಿ ನೆಲೆಗೊಳಿಸಲ್ಪಟ್ಟಿದ್ದ ಉಪಕರಣಗಳು ಆ ಗೂಡಿನೊಳಗಿನ ವಾಯುವಿನ ಉಷ್ಣೋಗ್ರತೆಗಳನ್ನೂ, ಒತ್ತಡದ ಪ್ರಮಾಣಗಳನ್ನೂ ಹಾಗೂ ಈ ಪ್ರಾಣಿಗಳ ಶರೀರದ ಶಾಖವನ್ನೂ, ಅವುಗಳ ಶ್ವಾಸೋಚ್ಛ್ವಾಸ ಗತಿಯನ್ನೂ ನುಮ್ಮ ನಾಡಿವೇಗವನ್ನೂ ಸ್ವಯಂಚಲಿತವಾಗಿ ದಾಖಲೆ ಮಾಡಿದುವು ಎಂದು ಅವರು ಹೇಳಿದರು.

ಈ ಪ್ರಾಣಿಗಳ ನಡೆವಳಿಕೆ ವಸ್ತು ಅವುಗಳ ಪರಿಸ್ಥಿತಿ, ಇವು ಯಾವ ಬಗೆಯ ಮಾರ್ಪಾಟುಗಳನ್ನೂ ಹೊಂದಿದಂತೆ ಕಂಡುಬರಲಿಲ್ಲ. ಬಾಹ್ಯದ ಪ್ರೇರಣೆಯಿಂದ ಅವುಗಳಲ್ಲಿ ಉಂಟಾಗುವ ಪ್ರತಿಕ್ರಿಯೆಗಳಿಗೆ (ಕಂಡಿಷನ್ಡ್ ರಿಫ್ಲೆಕ್ಷಿಸ್) ಯಾವ ಧಕ್ಕೆಯೂ ಉಂಟಾಗಲಿಲ್ಲ.

ಈ ವಿಮಾನಯಾನವು ತರುವಾಯದ ದಿನಗಳಲ್ಲಿ ಈ ನಾಯಿಗಳನ್ನು ಅವುಗಳ ಸಾಮಾನ್ಯ ಪರಿಸ್ಥಿತಿಗಳ ಸನ್ನಿವೇಶದಲ್ಲಿಯೇ ಇಡಲಾಯಿತು. ಸುಸಜ್ಜಿತ ರಾಕೆಟ್-ಪ್ರಯಾಣಗಳನ್ನು ಮಾಡಿದ ತರುವಾಯವೂ, ಅವುಗಳ ಜೈವಿಕ ಪರಿಸ್ಥಿತಿಗಳಲ್ಲಿ ಯಾವ ಬದಲಾವಣೆಗಳೂ ಗಮನಕ್ಕೆ ಬರಲಿಲ್ಲ.

ದ್ವಿತೀಯ ಶ್ರೇಣಿಯ ಪ್ರಯೋಗಗಳಲ್ಲಿ ನಾಯಿಗಳು 'ರಾಕೆಟ್' ಶಿರೋಭಾಗದ, ಒಂದು ಸಣ್ಣ ಯಾವ ಬೆಸುಗೆಯೂ ಇಲ್ಲದ (ನಾನ್-ಹೆರ್ಮೆಟಿಕ್), ಭಾಗದಲ್ಲಿ ಇಡಲ್ಪಟ್ಟುವು. ಅಲ್ಲಿ ಕವಣೆ ಯಂತ್ರದ ಪೆಟ್ಟಿಗೆಗಳು ಜೋಡಿಸಲ್ಪಟ್ಟಿದ್ದುವು. ಇವುಗಳಿಗೆ ವಿಶಿಷ್ಟರೀತಿಯ, ಆಕಾಶಯಾನಕ್ಕೆ ಬೇಕಾದ ತೊಡಿಗೆಗಳು ಜೋಡಿಸಲ್ಪಟ್ಟಿದ್ದುವು. ಈ ಪ್ರಾಣಿಗಳು ಆ ತೊಡಿಗೆಗಳಲ್ಲಿ ಯಾವ ಬಗೆಯ, ಅಮ್ಲಜನಕದ ಸರಬರಾಯಿಯ, ಮುಖವಾಡಗಳೂ ಇಲ್ಲದೆಯೇ ಇಡಲ್ಪಟ್ಟುವು.

ಅಮ್ಲಜನಕದ ಸರಬರಾಜಿನ ವ್ಯವಸ್ಥೆಯು ಎರಡು ಲಿಟರ್ ಆಳತೆಯ (ಲಿಟರ್ = ೨/೯ ಗಾಲನ್) ಮೂರು ಪರ್ತುಲ ನಳಿಗೆಗಳನ್ನು (ಸಿಲಿಂಡರ್ಸ್) ಒಳಗೊಂಡಿದೆ. ಜನೇಕ ಗಂಟೆಗಳ ವರೆಗೆ ಪ್ರಾಣಿಗಳು ಆ ಆಕಾಶಯಾನದ ವಿಶಿಷ್ಟ ತೊಡಿಗೆಗಳೊಳಗೆ ಉಳಿಯಲು ಅನುಗೊಳಿಸುವುದಕ್ಕೆ ವ್ಯಾಣವಾಯುವಿನ ಈ ದಾಸ್ತಾನು (ಸ್ಟೋರ್) ಸಾಕಾಗುತ್ತಿತ್ತು.

ಪರಿಕ್ಷಾ ಪ್ರಯೋಗದ ದಿನಗಳಲ್ಲಿ ಈ ಪ್ರಾಣಿಗಳು 'ರಾಕೆಟ್' ಪ್ರಯಾಣವು ಪ್ರಾರಂಭವಾಗುವುದಕ್ಕೆ ಮೂರು ಅಥವಾ ನಾಲ್ಕು ಗಂಟೆಗಳಷ್ಟು ಮುಂಚಿತವಾಗಿ ಪ್ರಾರಂಭಸ್ಥಳಕ್ಕೆ ತರಲ್ಪಡಲಾಗುತ್ತಿದ್ದುವು. ಸಾಧಾರಣವಾಗಿ ಇಲ್ಲಿ ಸೂರ್ಯೋದಯಕ್ಕೆ ಮೂರರಿಂದ ಐದು ನಿಮಿಷ ಮುಂಚಿತವಾಗಿ ರಾಕೆಟ್ ಪ್ರಯಾಣವು ಪ್ರಾರಂಭವಾಗುತ್ತಿದ್ದಿತು. ಪ್ಲೆಪಣಿ ಮೊದಲಾದ ಕುತ್ತುದಿಯ ಬಿಂದುವಿನ ಬಳಗಂ ಕೆಲೋ ಮೀಟರುಗಳಷ್ಟು ಎತ್ತರದಲ್ಲಿ—ಈ ರಾಕೆಟ್ಟಿನ ಶಿರೋಭಾಗವು (ಅದರೊಳಗಡೆ ಇದ್ದ ಪ್ರಾಣಿಗಳೊಂದಿಗೆ) ರಾಕೆಟ್ಟಿನಿಂದ ಬೇರೆಯಾಗಿ ಕಳಚಲ್ಪಟ್ಟಿತು. (ಕೆಲೋ ಮೀಟರ್=ಸಹಸ್ರಮಂಗ.

ಸ್ವತಂತ್ರ ಪತನದ (ಫ್ರೀ ಫಾಲ್) ಕಾಲಾವಧಿಯು ಬಲಗಡೆಯಿದ್ದ ಕವಣೆ ಪಟ್ಟಿಗೆಯು, ಅದರೊಳಗಡೆ ಇದ್ದ ಒಂದು ನಾಯಿಯೊಂದಿಗೆ - ರಾಕೆಟ್ ಶಿರೋಭಾಗದಿಂದ ಕವಣೆಯ ಮೂಲಕ ಹೊರದೂಡಲ್ಪಟ್ಟಿತು. ಮೂರು ನಿಮಿಷ ಗಳ ತರುವಾಯ ಗಾಳಿಕೊಪೆ (ಪ್ಯಾರಾಚೂಟ್) ವ್ಯವಸ್ಥೆಯು ಕಾರ್ಯಮಾಡತೊಡಗಿತು. ಎಂದರೆ, ಈ ಪ್ರಾಣಿಯು ೭೫-೮೫ ಕೆಲೋ ಮೀಟರುಗಳಷ್ಟು ಎತ್ತರದಿಂದ ಕೆಳಗಿಳಿಯು ತೊಡಗಿತೆಂದು ಅರ್ಥವಾಗುತ್ತದೆ ಈ ಇಳಿತಕ್ಕೆ ಒಂದು ಗಂಟೆಯ ಕಾಲ ಹಿಡಿಯಿತು. ಈ ಸಮಯದಲ್ಲಿ ನಾಯಿಯು ವಾತಾವರಣದ ಮೇಲ್ಬಾಗದ ಸ್ತರಗಳಲ್ಲಿ ಬಾಹ್ಯ ವಾಕ್ಕದ (ಎಕ್ಸ್‌ಟರ್ನಲ್ ವಿಡಿಯೊ) ಎಲ್ಲ ಅಂಶಗಳ ಪ್ರಭಾವಕ್ಕೂ ಒಳಪಟ್ಟಿದ್ದಿತು.

ಈ ಮಧ್ಯೆ 'ರಾಕೆಟ್' ಶಿರೋಭಾಗವು, ತನ್ನ ಬಲಭಾಗದ ಪೆಟ್ಟಿಗೆಯಿಂದ ಈಗ ಬಿಡುಗಡೆಯಾಗಿ, ತನ್ನ ವಿಮುಕ್ತ ಪತನವನ್ನು ಮುಂದುವರಿಸುತ್ತಿದ್ದಿತು ೫೫-೫೦ ಕೆಲೋಮೀಟರುಗಳ ಮಧ್ಯದ ಯಾವುದೋ ಒಂದು ಸ್ಥಾನದಷ್ಟು ಎತ್ತರದಲ್ಲಿ, ಆ 'ರಾಕೆಟ್ಟಿ' ಒಂದು ಸೆಕೆಂಡಿಗೆ ೧೫೦೦ದಿಂದ ೧೯೫೦ ಮೀಟರುಗಳಷ್ಟು ವೇಗವಾಗಿ ಪ್ರಯಾಣಿಸುತ್ತಿದ್ದಾಗ್ಯೂ, ಆದರಲ್ಲಿದ್ದ ಎರಡನೆಯ ಪೆಟ್ಟಿಗೆಯು ಕವಣೆ ಯಂತ್ರದಿಂದ ಹೊರದೂಡಲ್ಪಟ್ಟಿತು.

ಇನ್ನೊಂದು ನಾಯಿಯನ್ನೊಳಗೊಂಡಿದ್ದ ಎರಡನೆಯ ಪೆಟ್ಟಿಗೆಯು ತನ್ನ ವಿಮುಕ್ತ ಪತನವನ್ನು, ಮೂರು ಅಥವಾ ನಾಲ್ಕು ಕೆಲೋಮೀಟರುಗಳಷ್ಟು ಕೆಳಗಿನ ತ್ಯದ ವರೆಗೆ ಮುಂದುವರಿಸಿತು ಮತ್ತು ಆ ಸ್ಥಳದಲ್ಲಿ ಗಾಳಿ ಕೊಡೆಯು ಸ್ವಯಂ ಚಲಿತವಾಗಿ ಬಿಚ್ಚಿಕೊಂಡಿತು.

(೧೧ನೇ ಪುಟ ನೋಡಿರಿ)

ಖಾತ್ರಿ ಮ್ಹಾಲು! ಅತ್ಯಾಕರ್ಷಕ ನಾಟಕ ಸಾಮಾನುಗಳು ಕಡಿಮೆ ಬೆಲೆ!



ಕುಣಿತ, ನರ್ತನ, ನಾಟಕಾದಿಗಳಲ್ಲಿ ನಟನಟಿಯರು ಉಪಯೋಗಿಸುವ ಯವನ್ನೂ ಕೊಡಲು, FILM WIG
ತೋಫನ್, ಗಡ್ಡ, ಮುಂಡಾಸು, ಕಿರೀಟ, ಜರಿ ಜಲ್ಲರಿ, ಜರಿ ರವಕೆ, ಕಿವಿ ಬಿಂಡೋಲೆ, ತುಟಿಗೆ ಹಚ್ಚುವ ಮಿರುಗಿನ ಅಂಟು, ತಲೆಕೂಡಿ ಸುತ್ತುವ ಬಲೆ ಇತ್ಯಾದಿ ಸಾಮಾನುಗಳು ಅತ್ಯಂತ ಸುಲಭ ಬೆಲೆಗೆ ಥೋರಾಳವಾಗಿ ದೊರೆಯುತ್ತವೆ. ಪತ್ರವ್ಯವಹಾರ ಇಂಗ್ಲೀಷ ಅಥವಾ ಮರಾಠಿಯಲ್ಲಿ. ಸವಿವರ ಕ್ಯಾಟಲಾಗಿಗೆ ಬರೆಯಿರಿ

DHARAMSHI MULJI, DRESSWALA, 132—C, Bhagatwadi, Bhuleshwar Road BOMBAY-2.

ಶಾಸನಾಂಗ

ನಮ್ಮ ಸಂಸತ್ತಿನಲ್ಲಿ ಶಾಸನವನ್ನು ಹೇಗೆ ರಚಿಸಲಾಗುತ್ತದೆ?

ಅದೊಂದು ಸುದೀರ್ಘಕತೆ ಆದರೂ ನಿಮಗದು ತಿಳಿದಿರಲಿ

"ಪಾರ್ಲಿಮೆಂಟ್" ಎಂಬ ಇಂಗ್ಲಿಷ್ ಶಬ್ದಕ್ಕೆ ಸಂಸ್ಕೃತದಲ್ಲಿ 'ಸಂಸದ್' ಎಂಬುದು ಪ್ರಾಯಶಃ ಸಮಾನಾರ್ಥಕ ಪದವಾಗಿರುವುದು. ಇಂಗ್ಲಿಷ್ ಭಾಷೆಯಲ್ಲಿ 'ಪಾರ್ಲೆ' ಎಂದರೆ ವಿಚಾರಗೋಷ್ಠಿ ಎಂದು ಅರ್ಥವಾಗುವುದು. ಆದ್ದರಿಂದ ಪಾರ್ಲಿಮೆಂಟ್ ಎಂದರೆ ಸದಸ್ಯರು ವಿವೇಕಪೂರ್ಣ ವಿಚಾರ ವಿಮರ್ಶೆಮಾಡುವ ಸಭೆ ಎಂದು ಅರ್ಥವಾಗುವುದು.

ನಮ್ಮ ಪಾರ್ಲಿಮೆಂಟು ಅಥವಾ ಸಂಸದ್ ಉಳಿದ ರಾಷ್ಟ್ರಗಳಲ್ಲಿನ ಪಾರ್ಲಿಮೆಂಟ್‌ಗಳಂತೆಯೇ ಪರಮಾಧಿಕಾರ ಪಡೆದಿರುವ ಶಾಸನ ಮಂಡಲಿಯಾಗಿರುವುದು. ಪಾರ್ಲಿಮೆಂಟು ರಾಷ್ಟ್ರಾಧ್ಯಕ್ಷರು ರಾಜ್ಯಸಭೆ ಹಾಗೂ ಲೋಕಸಭೆಗಳನ್ನು ಒಳಗೊಂಡಿರುವುದು ಸಂವಿಧಾನದ ಪ್ರಕಾರ ಮಂತ್ರಿಪರಿಷತ್ತು ಲೋಕಸಭೆಗೆ ಜವಾಬ್ದಾರಿಯಾಗಿರುವುದು ದೇಶದ ಕಾರ್ಯನಿರ್ವಹಣೆಗೆ ಲೋಕಸಭೆಯು ಹಣವನ್ನು ಮಂಜೂರುಮಾಡುವುದಲ್ಲದೆ ಮಂತ್ರಿಮಂಡಲದ ಮೇಲೆ ಹತೋಟಿಯನ್ನು ಹೊಂದಲು ಒಂದು ಪರಿಣಾಮಕಾರಿಯಾದ ಸಾಧನವಾಗಿರುವುದು.ಲೋಕಭೆಯು, ಸರ್ಕಾರದ ಕಾರ್ಯಗಳ ಬಗ್ಗೆ ಪ್ರಶ್ನೆಗಳು ಹಾಗೂ ಚರ್ಚೆಗಳ ರೂಪದಲ್ಲಿ ವಿಮರ್ಶೆ ಮಾಡುವುದು. ಅವಿಶ್ವಾಸ ನಿರ್ಣಯವೊಂದನ್ನು ಅಂಗೀಕರಿಸುವುದರಿಂದ ಮಂತ್ರಿಮಂಡಲವನ್ನು ವಜಾ ಮಾಡಬಹುದು. ಈ ಪ್ರಕಾರವಾಗಿ ಬಹುಮಟ್ಟಿಗೆ ಈ ಸಭೆಗೆ ಸರ್ವೋಚ್ಚಸ್ಥಾನ ಪ್ರಾಪ್ತಿಯಾಗಿದೆ

ಪಾರ್ಲಿಮೆಂಟಿನ ಅತಿ ಮುಖ್ಯವಾದ ಕಾರ್ಯವೆಂದರೆ ದೇಶಕ್ಕಾಗಿ ಕಾನೂನುಗಳನ್ನು ಮಾಡುವುದು. ಯಾವ ಯಾವ ವಿಷಯದ ಮೇಲೆ ಪಾರ್ಲಿಮೆಂಟು ಕಾನೂನುಗಳನ್ನು ಮಾಡಬಹುದೆಂಬುದನ್ನು ಸಂವಿಧಾನದಲ್ಲಿ ಸೂಚಿಸಲಾಗಿದೆ. ಕೇಂದ್ರ ವಿಷಯಗಳ ಸಂಬಂಧವಾಗಿ ಕಾನೂನು ಮಾಡುವಾಗ ಪಾರ್ಲಿಮೆಂಟ್ ಪೂರ್ಣಾಧಿಕಾರ ಪಡೆದಿರುವುದು ನಮ್ಮ ಸಂವಿಧಾನವು 'ಪೆಡರಲ್" ಮಾದರಿಯಾದ್ದರಿಂದ, ರಾಜ್ಯಗಳು ತಮ್ಮ ತಮ್ಮ ರಾಜ್ಯಗಳಲ್ಲಿ ಕಾನೂನುಗಳನ್ನು ಮಾಡುವ ಅಧಿಕಾರ ಪಡೆದಿರುತ್ತವೆ. ಸಂವಿಧಾನದಲ್ಲಿ ಮೂರು ಸೂಚಿ (ಲೀಸ್ಟ್)ಗಳಿವೆ ಇವಾವು ವೆಂದರೆ:- 1 ಕೇಂದ್ರ ಸೂಚಿ (ಯೂನಿಯನ್ ಲಿಸ್ಟ್), 2 ರಾಜ್ಯ ಸೂಚಿ (ಸ್ಟೇಟ್‌ಲಿಸ್ಟ್) ಮತ್ತು 3. ಸಮವರ್ತೀ ಸೂಚಿ (ಕಂಕರೆಂಟ್ ಲೀಸ್ಟ್) ರಾಜ್ಯ ಸೂಚಿ ಹಾಗೂ ಸಮವರ್ತೀ ಸೂಚಿಗಳನ್ನು ತಿರಸ್ಕರಿಸುವ ಅಥವಾ ರದ್ದುಪಡಿಸುವ ಅಧಿಕಾರವನ್ನು ಪಾರ್ಲಿಮೆಂಟು ಪಡೆದಿರುವುದು.

ಭಾರತದಲ್ಲಿ ಕಾನೂನನ್ನು ಹೇಗೆ ಮಾಡಲಾಗುವುದು? ಕರಡು ಮಸೂದೆಯೊಂದನ್ನು ಮಂತ್ರಿಗಳೊಬ್ಬರು ಅಥವಾ ಖಾಸಗಿ ಸದಸ್ಯರೊಬ್ಬರು ಪಾರ್ಲಿಮೆಂಟಿನಲ್ಲಿ ತರಬಹುದು. ಮಂತ್ರಿಗಳು ಕರಡು ಮಸೂದೆಯನ್ನು ತಂದಾಗ ಅದಕ್ಕೆ ಸರ್ಕಾರಿ ಮಸೂದೆ ಎಂದು ಕರೆಯಲಾಗುವುದು. ಖಾಸಗಿ ಸದಸ್ಯರೊಬ್ಬರು ಮಸೂದೆಯನ್ನು ತಂದಾಗ ಅದಕ್ಕೆ ಖಾಸಗಿ ಸದಸ್ಯರ ಮಸೂದೆ ಎಂದು ಕರೆಯಲಾಗುವುದು.

ಸಂಕ್ಷಿಪ್ತ ಶಿರೋನಾಮ

ಮಸೂದೆಯೊಂದು ರಾಷ್ಟ್ರಾಧ್ಯಕ್ಷರ ಸಮ್ಮತಿ ಪಡೆದು ಕಾನೂನಿನ ರೂಪ ಪಡೆಯಲು ನಾನಾ ಘಟ್ಟಗಳಲ್ಲಿ ಬಾಬೇಕಾಗುವುದು. ಈ ಕಾನೂನು ಹಲವಾರು ಭಾಗಗಳನ್ನೊಳಗೊಂಡಿರುವುದು. ಪ್ರತಿ ಮಸೂದೆಯೂ ಸಂಕ್ಷಿಪ್ತ ಶಿರೋನಾಮವನ್ನು ಹೊಂದಿರುವುದು. ಈ ಸಂಕ್ಷಿಪ್ತನಾಮವನ್ನು ಮಸೂದೆಯ ಮೇಲ್ಭಾಗದಲ್ಲಿ ಮುದ್ರಿಸಲಾಗುವುದು. ಇದನ್ನು ಮಸೂದೆಯ ಪ್ರಥಮ ಕಲಂ (ಕ್ಲಾಸ್)ನಲ್ಲಿ ಉಲ್ಲೇಖಿಸಲಾಗುವುದು. ಇಂಗ್ಲೆಂಡಿನಲ್ಲಿ ಸಂಕ್ಷಿಪ್ತ ಶಿರೋನಾಮೆಯ ಕೊನೆಯ ಕಲಂನಲ್ಲಿರುವುದು. ಸಂವಿಧಾನದ ವಿಷಯದಲ್ಲಿ ನಾವು ಬ್ರಿಟಿಷ್ ಮಾದರಿಯನ್ನು ಅನುಸರಿಸಿದ್ದೇವೆ.

ಸಂಕ್ಷಿಪ್ತ ಶೀರ್ಷಿಕೆಯ ನಂತರ ದೀರ್ಘ ಶೀರ್ಷಿಕೆಯು ಬರುವುದು. ಈ ಶೀರ್ಷಿಕೆಯು ಮಸೂದೆಯ ಉದ್ದೇಶಗಳನ್ನು ಒಳಗೊಂಡಿರುವುದರ ಜೊತೆಗೆ ಪಾರ್ಲಿಮೆಂಟ್ ಅಂಗೀಕರಿಸುವ ತಿದ್ದುಪಡಿಯೇನಾದರೂ ಇದ್ದಲ್ಲಿ ಅದನ್ನೂ ಒಳಗೊಂಡಿರುವುದು.

ಮಸೂದೆಯ ಕಟ್ಟುಪಾಡುಗಳಿಗೆ ಪೂರ್ವದಲ್ಲಿ ಲಘು ಪಾಠ ಒಂದರಲ್ಲಿ ಅನುಷ್ಠಾನ ಸೂತ್ರವಿರುವುದು. ಈ ಅನುಷ್ಠಾನ ಸೂತ್ರವು ಈ ಕೆಳಕಂಡಂತೆ ಇವುದು:—"ಭಾರತದ ಪ್ರಜಾರಾಜ್ಯದ ಪಾರ್ಲಿಮೆಂಟಿನ ದ್ವಾರಾ, ಇಂತಹ ವರ್ಷದಿಂದ, ಈ ಕಾನೂನು ಈ ಕೆಳಕಂಡ ರೂಪದಲ್ಲಿ ಅನುಷ್ಠಾನಕ್ಕೆ ಬರುವುದು".

ಅನಂತರ ಮಸೂದೆಯ ವಿವಿಧ ಕಲಂಗಳನ್ನು ಅನುಕ್ರಮ ಸಂಖ್ಯೆಯಲ್ಲಿ ಕೊತ ಲಾಗುವುದು. ಪ್ರತಿ ಕಲಂಗಳನ್ನೂ ಉಪ ಕಲಂಗಳನ್ನಾಗಿಯೂ, ಪ್ರತಿ ಉಪಕಲಮನ್ನು ಭಾಗಗಳು ಮತ್ತು ಉಪಭಾಗಗಳನ್ನಾಗಿಯೂ ವಿಂಗಡಿಸಲಾಗುವುದು.

ಮಸೂದೆಯ ಕಟ್ಟುಪಾಡುಗಳನ್ನು ಅನುಷ್ಠಾನಕ್ಕೆ ತರುವ ವಿಚಾರಗಳ ಬಗ್ಗೆ ಪರಿಶಿಷ್ಟಗಳಿರಬಹುದು. ಈ ಪರಿಶಿಷ್ಟಗಳನ್ನು ಆವಶ್ಯಕತೆಯಿದ್ದರೆ ಮಸೂದೆಯ ಕೊನೆಗೆ ಸೇರಿಸಿಕೊಳ್ಳಬಹುದು. ಈ ಪರಿಶಿಷ್ಟಗಳನ್ನು ಕಲಂಗಳಂತೆಯೇ ಪಾರ್ಲಿಮೆಂಟು ಅಂಗೀಕರಿಸಬೇಕು.

ಪ್ರತಿ ಮಸೂದೆಯೂ ಉದ್ದೇಶಗಳು ಮತ್ತು ಕಾರಣಗಳ ವಿವರಣೆಗಳನ್ನು (ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ ಮತ್ತು ರೀಸನ್ಸ್) ಒಳಗೊಂಡಿರಬೇಕು.

ಹಣಕಾಸಿನ ಪರಿಪತ್ರ

ವೆಚ್ಚಕ್ಕೆ ಸಂಬಂಧಿಸಿದಂತೆ ಯಾವ ಕಲಂಗಳೇನಾದರೂ ಇದ್ದಲ್ಲಿ, ಮಸೂದೆಯಲ್ಲಿ ಹಣಕಾಸಿನ ಪರಿಪತ್ರವು (ಮೆಮೊರಾಂಡಂ) ಅಂತರ್ಗತವಾಗಿರುವುದು. ವೆಚ್ಚವನ್ನು ಹೇಗೆ ಪೂರೈಸಬಹುದೆಂಬುದನ್ನೂ ಈ ವೆಚ್ಚವು ಆವರ್ತಕವೇ ಅಥವಾ ಅನಾವರ್ತಕವೇ ಎಂಬುದನ್ನೂ ಈ ಪರಿಪತ್ರವು ಸೂಚಿಸುವುದು. ವಿಧಾಯಕ ಅಧಿಕಾರವನ್ನು ನಿರ್ವಹಿಸುವ ಸಂಬಂಧವಾದ ಸೂಚನೆಗಳನ್ನೊಳಗೊಂಡ ಮಸೂದೆಯೊಂದಿಗೆ ಪರಿಪತ್ರವೊಂದಿರುವುದು. ಈ ಪರಿಪತ್ರದಲ್ಲಿ ಇಂತಹ ಸೂಚನೆಗಳನ್ನು ವಿವರಿಸಿ ಈ ಸೂಚನೆಗಳ ವ್ಯಾಪ್ತಿಯನ್ನು ತಿಳಿಸುವುದು.

ಮಸೂದೆಯೊಂದನ್ನು ಪಾರ್ಲಿಮೆಂಟ್ ನಲ್ಲಿ ಸದಸ್ಯರೊಬ್ಬರು ತರಬಹುದು. ಮಂತ್ರಿಗಳೊಬ್ಬರು ಉಭಯ ಸಭೆಗಳಲ್ಲಿಯೂ ಮಸೂದೆ ಸಂಬಂಧವಾಗಿ ಭಾಷಣ ಮಾಡಬಹುದೇ ವಿನಃ ಅವರು ಯಾವ ಸಭೆಯ ಸದಸ್ಯರೋ ಅಲ್ಲಿ ಮಾತ್ರ ಮತದೀಯುವ ಅಧಿಕಾರ ಪಡೆದಿರುವರು. ಮಂತ್ರಿಗಳೊಬ್ಬರು ಪಾರ್ಲಿಮೆಂಟಿನ ಉಭಯ ಸಭೆಗಳಲ್ಲಿಯೂ ಮತ ದಿಯೊಂದನ್ನು ತರಬಹುದು.

ಖಾಸಗಿ ಸದಸ್ಯರು ತಾವು ಮಸೂದೆಯನ್ನು ತರುವ ಬಗ್ಗೆ ಒಂದು ತಿಂಗಳ ನೋಟೀಸ್" ಕೊಡಬೇಕಾಗುವುದು. ಆದರೆ ಸಭಾಧ್ಯಕ್ಷರು ಅವಶ್ಯಕತೆ ಇದ್ದರೆ ಈ ಅವಧಿಯನ್ನು ಕಡಿಮೆ ಮಾಡಬಹುದು.

ಖಾಸಗಿ ಸದಸ್ಯರ ಮಸೂದೆಯನ್ನು ಲೋಕ ಸಭಾ ಸಚಿವಾಲಯದವರು ಅಧ್ಯಯನ ಮಾಡಿ ಅವಶ್ಯಕ ರೀತಿಯಲ್ಲಿ ಈ ಮಸೂದೆಗೆ ಉಚಿತ ರೂಪಕೊಡುವರು:

ಮಸೂದೆಯನ್ನು ಪಾರ್ಲಿಮೆಂಟಿನಲ್ಲಿ ತಂದನಂತರ ಇದನ್ನು ಸರ್ಕಾರಿ ಗಜೆಟ್‌ನಲ್ಲಿ ಪ್ರಕಟಿಸಲಾಗುವುದು. ಮಸೂದೆಯನ್ನು ಪಾರ್ಲಿಮೆಂಟಿನಲ್ಲಿ ತರುವುದಕ್ಕೆ ಮುಂಚಿತವಾಗಿಯೇ ಸಭಾಧ್ಯಕ್ಷರ ಅನುಮತಿ ಪಡೆದು ಗಜೆಟ್‌ನಲ್ಲಿ ಪ್ರಕಟಿಸಲಾಗುವುದು.

ಮಸೂದೆಯ ವಿವಿಧ ಘಟ್ಟಗಳು

ಮಸೂದೆಯು ಸರ್ಕಾರಿ ಮಸೂದೆಯೇ ಆಗಿರಲಿ ಅತ್ತಾವ ಖಾಸಗಿ ಸದಸ್ಯರೊಬ್ಬರ ಮಸೂದೆಯೇ ಆಗಿರಲಿ, ವಿವಿಧ ಘಟ್ಟಗಳಲ್ಲಿ ಹಾದು ಹೋಗಬೇಕಾಗುವುದು. ಮೊದಲನೆಯ ಘಟ್ಟದಲ್ಲಿ, ಮಸೂದೆಯನ್ನು ಪಾರ್ಲಿಮೆಂಟಿನಲ್ಲಿ ತರಲಾಗುವುದು ಮಸೂದೆಯನ್ನು ತರಲು ಸದಸ್ಯರೊಬ್ಬರು ಅನುಮತಿ ಕೋರಬೇಕಾಗುವುದು. ಸಭೆಯಲ್ಲಿ ಅನುಮತಿ ದೊರೆತ ನಂತರ ಮಸೂದೆಯನ್ನು ತರಲಾಗು

(ಇಂಸೇ ಪುಟ ನೋಡಿರಿ)

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. S. 23/1957

ನಾರ್ಣಪ್ಪ ಡಿ. ಶೆಲ್ವ. ವಾದಿ.

1. ಲಕ್ಷ್ಮಿಅಮ್ಮ 2. ರತ್ನಮ್ಮ —ಪ್ರತಿವಾದಿರು.

ಕುಂದಾಪುರ ತಾಲ್ಲೂ ಖಂಬದಕೋಣೆ ಗ್ರಾಮದಲ್ಲಿರುವ ಕೃಷ್ಣಪ್ಪ ಪಾಟಾಳಿ ಪೆಂಡ್ತಿ ರತ್ನಮ್ಮನಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ.

1ನೇ ಪ್ರತಿವಾದಿಗೆ ಗಂಡ ವ ಇನೇ ಪ್ರತಿವಾದಿಗೆ ತಂದೆ ಮೃತಕೃಷ್ಣಪ್ಪಯ್ಯನು ವಾದಿಗೆ ರೂ.೨೦೦ ಬರಕೊಟ್ಟ ಉದು ವಗೊಂಚು ಪಕ್ಕದ ಹಣ ಬಡ್ಡಿ ಕೂಡಾ ಬರವಾಡಿಕೊಳ್ಳುವರೆ ವಾದಿಯು ಪ್ರತಿವಾದಿರಮೇಲೆ ದಾವ್ಲು ಮಾಡಿದ ಮೇಲಿನ ದಾವೆಯು ತಾರೀಕು ೨-೫-೫೭ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಸಿಗೆ ಇಟ್ಟಿರುತ್ತದೆ. ಆ ಕಾರಣ ಯೀನಾದರೂ ಕಕ್ಷೀದಾರಿಗೆಗಳಿದ್ದರೆ ಸದ್ರಿ ದಿವ್ಸ ಮೇಲಿನ ಕೋರ್ಟುಮುಂದೆ ಬಗಲು 11 ಗಂಟೆಗೆ ಹಾಜ್ರಾಗಿ ಜ್ಞಾಪೀರು ಮಾಡಿಕೊಳ್ಳತಕ್ಕದು ಎಂಬಸಂಗ್ತಿ ಈ ಮೂಲಕ ತಿಳಿಯ ಪಡಿಸಿರುತ್ತದೆ.

N. S. Parameshwariah
Advocate for Plff
Coondapoor Date 15-3-57.

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹೆಳ್ಳಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24 ತಿಂಗಳಿಗೆ	4%
12 ,,	3½%
6 ,,	3½%
3 ,,	3%
ಸೇವಿಂಗ್ಸ್ ಬೇಂಕ್ ಲೆಕ್ಕ	2%
ಕರೆಂಟ್ ಎಕೌಂಟು	½%

THE MOOLKY BANK, LTD. MULKI

THE
CANARA INDUSTRIAL & BANKING SYNDICATE LTD.

Estd.: 1925, H. O.: **UDIPI**, S. India.

GROWING

RESOURCES as on

31-12-1926 - Rs. 17,355
31-12-1936 - Rs. 35,45,544
31-12-1946 - Rs. 4,26,07,093
31-12-1956 - Rs. 10,64,10,312

THANKS to

our thousands of customers all over the country for their confidence and good-will.

T. A. PAI, B. Com. (Bom.), A.I.I.B., F.R.E.S. (Lond) *General Manager.*

DR. T. M. A. PAI, M. B., B. S., *Managing Director.*

ಪೈಸೆಯ ಚರಿತ್ರೆ

ದಶಮಾನ ಪದ್ಧತಿ ನಮಗೆ ಹೊಸದಲ್ಲ

ಬ್ರಾಹ್ಮಣ ಗ್ರಂಥದಲ್ಲಿ ಈ ಕ್ರಮದ ಉಲ್ಲೇಖವಿದೆ!

ಇದೇ ಎಪ್ರಿಲಿನಿಂದ ನಮ್ಮ ದೇಶದಲ್ಲಿ 'ನಯಾಪೈಸೆ'ಯು ಜಾರಿಗೆ ಬರಲಿರುವುದು ತಾನೆ? ಈ ನಯಾಪೈಸೆಯ ಪ್ರಾಚೀನ ಚರಿತ್ರೆ ಏನಾದರೂ ಇದ್ದರೆ ಅದನ್ನೀಗ ಸಂಶೋಧಿಸಿ ಜನತೆಯ ಮುಂದಿಟ್ಟರೆ ಉಚಿತವೆನಿಸಬಹುದು.

ಪ್ರಕೃತ್ಯನಮ್ಮಲ್ಲಿ ಪ್ರಚಾರದಲ್ಲಿರುವ ನಾಣ್ಯಗಳು ಮೂರು ತೆರನವುಗಳು. ರೂಪಾಯಿ, ಅದರ ಹದಿನಾರನೆಯ ಒಂದು ಭಾಗ ಆಣೆ, ಆ ಆಣೆಯ ನಾಲ್ಕನೆಯ ಒಂದು ಭಾಗ ಪಾವಾಣೆ ಇವು ಪ್ರಧಾನ ಭಾಗಗಳೆನ್ನಬಹುದು. ಒಂದು ಪಾವಾಣೆಗೆ ಮೂರು ಪೈಗಳೆಂದೂ, ಎರಡು ಆಣೆಗಳಿಗೆ ಒಂದು ಚವಲಿಯೆಂದೂ ಎರಡು ಚವಲಿಗಳಿಗೆ ಒಂದು ಪಾವಲಿ (ಚಕ್ರ) ಎಂದೂ ಎರಡು ಪಾವಲಿಗಳಿಗೆ ಒಂದು ಆದೇಲಿ ಎಂದೂ ಗಣನೆಗೆ ಸುಲಭವಾಗುವಂತೆ ತಯಾರಿಸಿಕೊಂಡ ನಾಣ್ಯಗಳೂ ನಮ್ಮಲ್ಲಿವೆ. ಮೇಲಿನ ಮುಖ್ಯ ಮೂರು ಭಾಗಗಳ ಪ್ರಕಾರ ಪಾವಾಣೆಯು ರೂಪಾಯಿಯ ಅರುವತ್ತ ನಾಲ್ಕನೆಯ ಒಂದು ಭಾಗವಾಗಿದೆ. ಈ ಪದ್ಧತಿಯನ್ನು 'ಚೌಕಾ ಪದ್ಧತಿ' ಎಂದು ಕರೆಯುತ್ತಾರೆ. ಈಗ ಪ್ರಚಾರಕ್ಕೆ ಬರಲಿರುವ ನಾಣ್ಯ—"ನಯಾಪೈಸೆ"ಯಲ್ಲಿ ಮೂರು 'ನಮೂನೆಯ ನಾಣ್ಯಗಳ ಬದಲಿಗೆ ಎರಡೇ ನಾಣ್ಯಗಳು ಇರುತ್ತವೆ—ರೂಪಾಯಿ ಮತ್ತು ಪೈಸೆ. ಆಣೆಯಂತಹ ನಾಣ್ಯವಿಲ್ಲ. ಈ ಪೈಸೆಯು ಮೊದಲಿನಂತೆ ಅರುವತ್ತನಾಲ್ಕನೆಯ ಒಂದು ಭಾಗವಾಗಿರದೆ ರೂಪಾಯಿಯ ನೂರನೇ ಒಂದು ಭಾಗವಾಗಿರುವುದು. ಅದೇರೀತಿಯ ಸ್ಥಾನದಲ್ಲಿ ೫೦ ಪೈಸೆಗಳ ಒಂದು ನಾಣ್ಯವೂ ನಾಲ್ಕಾಣೆಯ ಸ್ಥಾನದಲ್ಲಿ ೨೫ ಪೈಸೆಯ ಒಂದು ನಾಣ್ಯವೂ ಜಾರಿಗೆ ಬರುವುವು. ಚವಲಿ, ಆಣೆಯ ನಾಣ್ಯಗಳು ನಿಂತುಹೋಗುವುವು. ಆವುಗಳ ಬದಲಿಗೆ ೧೦ ಪೈಸೆ, ೫ ಪೈಸೆ, ೩ ಪೈಸೆ ಮತ್ತು ಒಂದು ಪೈಸೆಯ ನಾಣ್ಯಗಳು ಪ್ರಚಾರಕ್ಕೆ ಬರುವುವು. ಈ ಪದ್ಧತಿಗೆ "ದಶಮಾಂಶ ಪದ್ಧತಿ" ಎಂದು ಹೆಸರು.

ಈ ವಿಷಯದಲ್ಲಿ ಕೆಲವರು ಸರಕಾರವನ್ನು ನಿಂದಿಸುತ್ತಿರುವರು—ಅಮೆರಿಕದ ಪದ್ಧತಿಯ ಅನುಕರಣೆ ನಾವು ಮಾಡುತ್ತಿರುವೆವೆಂದು. ಆದರೆ ಇದರ ಕ್ರಮವು ಭಾರತದಲ್ಲಿ ೨-೩ ಸಾವಿರ ವರ್ಷಗಳ ಹಿಂದಿನಿಂದಲೂ ಪ್ರಚಾರದಲ್ಲಿತ್ತೆಂಬುದಕ್ಕೆ ಆಧಾರಗಳು ದೊರೆಯುತ್ತವೆ.

ಈಸ್ಟ್ ಇಂಡಿಯಾ ಕಂಪೆನಿಯ ಕಾಲದಲ್ಲಿ ಭಾರತದಲ್ಲಿಯೇ ೪೮ ಪೈಸೆಗಳ ರೂಪಾಯಿ ಪ್ರಚಾರದಲ್ಲಿತ್ತೆಂಬುದನ್ನು ನಾವು ಮರೆತಿದ್ದೇವೆ! ಮೊಗಲ ಕಾಲದಲ್ಲಿ ರೂಪಾಯಿಯ ಜೆಲೆ ೪೦ ಪೈಸೆಯಾಗಿತ್ತು. ದಿಲ್ಲಿಯ ಸುಲ್ತಾನರ ಕಾಲದಲ್ಲಿ ಉತ್ತರ ಭಾರತದಲ್ಲಿಳ್ಳ 'ಜೀತಲ್' ಹಾಗೂ ದಕ್ಷಿಣ ಭಾರತದಲ್ಲಿ ೫೦ ಜೀತಲಿನ 'ಟಂಕ' ಗಳಿದ್ದುವು. ಜೀತಲ್ ಎಂಬುದು ಇಂದಿನ ಪೈಸೆಗೆ ಸಮ! ಟಂಕ ಇಂದಿನ ರೂಪಾಯಿ. ಈ ರೀತಿ ನಾವು ನಾಣ್ಯಗಳ ಇತಿಹಾಸವನ್ನು ಗಮನಿಸುತ್ತ ನಡೆದರೆ ನಾಣ್ಯಗಳ ಸ್ವರೂಪವು ಆಗಾಗ ಬದಲಾಗುತ್ತಿತ್ತೆಂದು ತಿಳಿಯುತ್ತದೆ.

ಎರಡನೆಯದಾಗಿ ದಶಮಾಂಶ ಪದ್ಧತಿಯು ನಮಗೆ ಹೊಸತಲ್ಲ. ಮೊಗಲ ಸಾಮ್ರಾಟನಾದ ಅಕ್ಬರನು ತನ್ನ ನಾಣ್ಯಗಳಿಗೆ ದಂಜಮಾಂಶ ಪದ್ಧತಿಯನ್ನು ಜಾರಿಗೆ ಸರಿಸಿದ್ದನು. ಇದು ದಶಮಾಂಶ ಪದ್ಧತಿಯನ್ನು ಹೋಲುತ್ತದೆ. ಅವನ ಕಾಲದಲ್ಲಿ ಎಕ್ಕದಕ್ಕಿಂತ ಸಣ್ಣ ನಾಣ್ಯ 'ಜೀತಲ್.' ಅದು ದಿಲ್ಲಿಯ ಸುಲ್ತಾನರ ಜೀತಲಿಗಿಂತ ಭಿನ್ನವಾಗಿತ್ತು. ಹಾಗೂ ಅದಕ್ಕಿಂತ ಚಿಕ್ಕದು. ೫ ಜೀತಲುಗಳ ನಾಣ್ಯ ಟಂಕೀ ಹಾಗೆಯೇ ೧೦ ಜೀತಲುಗಳ ನಾಣ್ಯ 'ಜೋಟುಕೀ,' ೨೦ ಜೀತಲಿನ ನಾಣ್ಯ ಜಾಪ್ ಎಂದು ಕರೆಯಲ್ಪಡುತ್ತಿದ್ದುವು. ೨೫ ಜೀತಲಿನ ನಾಣ್ಯ 'ದಾಮ್' ಎಂದು ಕರೆಯಲ್ಪಡುತ್ತಿತ್ತು. ಎರಡು 'ದಾಮ್'ಗಳಿಗೆ ಒಂದು 'ಟಂಕ' ಎಂದು ಹೆಸರಿತ್ತು. ಈ ರೀತಿಯ ೫೦ ಟಂಕಗಳೆಂದರೆ ಒಂದು ರೂಪಾಯಿ ಆಗುತ್ತಿತ್ತು. ಇವುಗಳ ಮಧ್ಯೆ 'ಪಂಜಾ' ಎಂಬೊಂದು ನಾಣ್ಯವಿತ್ತು; ಅದು ರೂಪಾಯಿಗೆ ೫೫ ಎಂಬ ಲೆಕ್ಕವಿತ್ತು.

ದಶಮಾಂಶ ಪದ್ಧತಿಯು ಉದಾಹರಣೆಗಳು 'ಬ್ರಾಹ್ಮಣ' ಗ್ರಂಥಗಳಲ್ಲಿಯೂ ದೊರೆಯುತ್ತವೆ. ಇದರ ಕಾಲ ಸುಮಾರಿಗೆ ೨೬೦೦ ವರ್ಷ ಎಂದರೆ ಕ್ರಿ. ಶೂ. ೬೦೦ ವರ್ಷಗಳ ಸುಮಾರಿಗೆ ಎಂದು ತಿಳಿಯಲಾಗಿದೆ. ಆ ಕಾಲದಲ್ಲಿಯೂ ಪ್ರಚಾರದಲ್ಲಿದ್ದ ಒಂದು ನಾಣ್ಯದ ಉಲ್ಲೇಖ ನಮಗೆ ದೊರೆಯುತ್ತದೆ. ಅದರ ಹೆಸರು "ಶತಮಾನ" ಎಂದಿದೆ. ಈ ಹೆಸರೇ ನಮಗೆ ಇನ್ನು ಪ್ರಚಾರಕ್ಕೆ ಬರಲಿರುವ ನಮ್ಮ ನೂರು ಪೈಸೆಗಳ ರೂಪಾಯಿಯ ನೆನಪನ್ನು ಹುಟ್ಟಿಸುತ್ತದೆ. ಆ ಸಮಯದ "ಮಾನ" ಯಾವ ತೆರ ನಾಗಿತ್ತೆಂಬುದಕ್ಕೆ ಈ ವರೆಗೆ ಯಾವ ಆಧಾರವೂ ದೊರೆಯುವುದಿಲ್ಲ. ಕರ್ಕನೆಂಬ ಭಾಷ್ಯಕಾರನೊಬ್ಬನ ಅಭಿಪ್ರಾಯದಂತೆ ನೂರು ರತ್ತಿಗಳಿಗೆ ಒಂದು "ಶತಮಾನ" ಎಂಬ ನಾಣ್ಯವಿರಬಹುದೆಂದು ಊಹಿಸಲಾಗಿದೆ. ನೂರು ರತ್ತಿಭಾರದ ಬೆಳ್ಳಿಯ ನಾಣ್ಯಗಳು ಶಕ್ಷಶಿಲೆ ಮತ್ತು ದರ ಆಸುಪಾಸುಗಳಲ್ಲಿ ದೊರೆತಿವೆ. ಅವು ಅಲ್ಲಿ ಕ್ರಿ. ಶೂ. ಆರನೇ ಶತಮಾನದಿಂದ ಎರಡನೇ ಶತಮಾನದ ವರೆಗೆ ಪ್ರಚಾರದಲ್ಲಿದ್ದುವು.

ಇಂದು ಇಡೀ ಪ್ರಪಂಚದಲ್ಲಿ ಪ್ರಚಾರದಲ್ಲಿರುವ ಅಂಕ ಕರಣವು ನಮ್ಮ ಭಾರತದಲ್ಲಿಯೇ ಕ್ರಿ. ಶ. ಒಂದನೇ ಶತಮಾನದಲ್ಲಿ ಕಂಡುಹಿಡಿಯಲ್ಪಟ್ಟಿತು. ಇದನ್ನು ದಶಕ ಪದ್ಧತಿಯೆಂದು ಕರೆಯುತ್ತಾರೆ. ಈ ಪದ್ಧತಿಯಲ್ಲಿ ಒಂದರಿಂದ ಒಂಭತ್ತರ ವರೆಗಿನ ಅಂಕೆಗಳೂ ಒಂದು ಸೊನ್ನೆಯೂ ಇದೆ; ಒಟ್ಟಿಗೆ ಹತ್ತು ಅಂಕೆಗಳು. ಇವುಗಳಿಂದಲೇ ನಮ್ಮ ಇಡೀ ವ್ಯವಹಾರವನ್ನು ಎಷ್ಟೇ ದೊಡ್ಡದಿರಲಿ, ಸಣ್ಣದಿರಲಿ, ಬರೆಯಬಹುದು. ಇದಕ್ಕೆ ಮೊದಲು ಒಂದರಿಂದ ಒಂಭತ್ತರ ವರೆಗಿನ ಸಂಖ್ಯೆಯ ಹೊರತು ಹತ್ತು, ನೂರು, 'ಸಾವಿರ ಮುಂತಾದುವುಗಳ ಅಂಕೆ ಕರಣಕ್ಕೆ ಬೇರೆ ಬೇರೆ ಚಿಹ್ನೆಗಳನ್ನು ಉಪಯೋಗಿಸುತ್ತಿದ್ದರು. ಎರಡು ಸಾವಿರದ ಐನೂರು ಇಪ್ಪತ್ತಾರು ಬರೆಯಬೇಕಾದರೆ ಎರಡು ಸಾವಿರಕ್ಕೆ ಸಾವಿರದ ಎರಡು ಗುರುತುಗಳನ್ನೂ ಐನೂರನ್ನು ತೋರಿಸುವುದಕ್ಕೆ ನೂರರ ಚಿಹ್ನೆಯನ್ನೂ ಐದು ಸರ್ತಿಯೂ ಇಪ್ಪತ್ತಕ್ಕೆ ಹತ್ತರ ಚಿಹ್ನೆಯನ್ನು ಎರಡು ಸರ್ತಿಯೂ ಮತ್ತೆ ಆರನ್ನು ಬರೆಯುವುದಕ್ಕೆ ಒಂದನ್ನು ಆರು ಸರ್ತಿ ಅಥವಾ ಐವರ ಚಿಹ್ನೆಯ ನಂತರ ಒಂದನ್ನು ಬರೆಯುತ್ತಿದ್ದರು. ಇದೆಷ್ಟು ಕಷ್ಟವೆಂದು ವಾಚಕರೇ ತಿಳಿದುಕೊಳ್ಳಬಹುದು. ಈ ಪ್ರಾಚೀನ ಅಂಕೆ ಕರಣ ಪದ್ಧತಿಯನ್ನು ನಾವು ರೋಮನ್ ಅಂಕೆಗಳಲ್ಲಿ ಈಗಲೂ ಕಾಣಬಹುದು. ಈ ಕಷ್ಟವನ್ನು ಒಬ್ಬ ಭಾರತೀಯ ವಿಜ್ಞಾನಿಯು ಸೊನ್ನೆಯ ಸಂಶೋಧನೆಯಿಂದ ದೂರ ಮಾಡಿದನು. ಇದರಿಂದಾಗಿ ಸಮಯವೂ ಕಷ್ಟವೂ ಉಳಿದಂತಾಯಿತು.

ಶೂನ್ಯದ ಸಹಾಯದಿಂದ ನಾವು ಇ ಷ್ಟೆತ ಸಂಖ್ಯೆಗಳನ್ನು ತಯಾರಿಸಿಕೊಳ್ಳುವಂತೆಯೇ ದಶಮಾಂಶ ಪದ್ಧತಿಯಿಂದ ಪೂರ್ಣ ಅಂಕೆಯ ಅಂಶಗಳನ್ನೂ ಎಣಿಸಬಹುದು. ಗಣಿತದಲ್ಲಿ ಅಂಕಾಂಶವನ್ನು ಸೂಚಿಸುವುದಕ್ಕೆ ಈ ಪದ್ಧತಿಯನ್ನು ಉಪಯೋಗಿಸುತ್ತಾರೆ. ಇದರ ಸಂಶೋಧನೆಯ ಶ್ರೇಯಸ್ಸೂ ಭಾರತಕ್ಕೆ ದೊರೆತಿದೆ. ಈ ಚಿಹ್ನೆಯ ಆಧಾರದಿಂದ ಶತಮಾನಾಂಶ ಸಹಸ್ರಾಂಶಗಳನ್ನೂ ನಾವು ತಯಾರಿಸಿಕೊಳ್ಳಬಹುದು. ಈ ಕ್ರಮದಿಂದ ಗಣಿತದ ಸಮಸ್ಯೆಗಳನ್ನು ಪೂರಮಾಡಲು ಅನುಕೂಲವಾಯಿತು.

ದಶಮಾಂಶದ ಈ ಪದ್ಧತಿಯ ಪ್ರಯೋಗವು ನಮ್ಮ ಹೊಸ ನಾಣ್ಯಗಳಲ್ಲಿಯೂ ಮಾಡಲ್ಪಟ್ಟಿದೆ. ಈ ಪದ್ಧತಿಯ ಪ್ರಯೋಗವನ್ನು ಮೊತ್ತಮೊದಲು ಫ್ರಾನ್ಸು ಪ್ರಚಾರಕ್ಕೆ ತಂದಿತು. ಆನಂತರ ಅಮೇರಿಕವು ಅನುಸರಿಸಿತು. ಈಗ ಬ್ರಿಟನ್ ಒಂದನ್ನು ಬಿಟ್ಟು ಇಡೀ ಯೂರೋಪಿನಲ್ಲಿ ಇದು ಪ್ರಚಾರದಲ್ಲಿದೆ. ಪ್ರಪಂಚದ ಇತರ ಕೆಲವು ದೇಶಗಳೂ ಇದನ್ನು ಅನುಸರಿಸಿವೆ. ನಮ್ಮ ನೆರೆರಾಷ್ಟ್ರಗಳಾದ ಚೀನ ಮತ್ತು ಲಂಕೆಗಳೂ ಇದನ್ನು ಸ್ವೀಕರಿಸಿಕೊಂಡಿವೆ. ಇದರ ಅನುಸರಣೆಯಿಂದ ನಾವು ಅಂತರರಾಷ್ಟ್ರೀಯ ವ್ಯವಹಾರಕ್ಕೆ ಸೌಕರ್ಯವನ್ನು ಕಲ್ಪಿಸಿಕೊಳ್ಳಬಹುದಲ್ಲದೆ ವೈಜ್ಞಾನಿಕ ಪದ್ಧತಿಯ ವೇಗದಿಗೆ ಪ್ರಗತಿಯನ್ನೂ ಮಾಡುತ್ತಿದ್ದೇವೆ.

ಪೇಟೆಗೆ ಹೋದ ವ್ಯಕ್ತಿ ತಾನು ಕೊಂಡುಕೊಂಡ ಸಾಮಾನುಗಳ ಬೆಲೆಯನ್ನು ತೆರುವಾಗ ಈಗಿನ ಪದ್ಧತಿಯಂತೆ ತುಂಬ ತೊಡಕಿಗೆ ಬೀಳುತ್ತಾನೆ. ಒಬ್ಬನು 125 ಪೈಸೆಗಳ ಸಾಮಾನು ಕೊಂಡುಕೊಂಡನೆಂದು ಭಾವಿಸುವ. ನಯಾಪೈಸೆಯ ಕ್ರಮದಲ್ಲಾದರೆ ಒಂದೊ ಕಾಲು ರೂಪಾಯಿಯಾಗುತ್ತದೆ. ಅದು, ಅದರೆ ಈಗಿನ ಪದ್ಧತಿಯಂತೆ ಅದನ್ನು ಆಣೆಗಳಾಗಿ ಮಾಡಿ ಆಣೆಗಳನ್ನು ರೂಪಾಯಿಗಳನ್ನಾಗಿ ಪರಿವರ್ತಿಸಿಕೊಳ್ಳುವಾಗ ತುಂಬ ಗಲಿಬಿಲಿಯೇ ಸರಿ.

ನಯಾಪೈಸೆಯ ಕ್ರಮದಂತೆ ಯಾವ ಗಲಿಬಿಲಿ ಇಲ್ಲದೆ ಹಳ್ಳಿಗರು ತಮ್ಮ ವ್ಯವಹಾರವನ್ನು ಮುಂದರಿಸಬಹುದು. ಶಾಲೆಯಲ್ಲಿ ಮಕ್ಕಳಿಗೂ ಇದನ್ನು ಸುಲಭವಾಗಿ ಕಲಿಯಲನುಕೂಲವಿದೆ. ಗುಣಾಕಾರ, ಭಾಗಹಾರಗಳ ಕಠಿಣ ಸಮಸ್ಯೆಯೂ ದೂರವಾಗಿ ಮಕ್ಕಳು ಸುಲಭವಿಂದ ಹೆಣದ ಲೆಕ್ಕವನ್ನು ಕಲಿತುಕೊಳ್ಳಬಹುದು. ಭಾರತದ ಈ ನಯಾಪೈಸೆಯ ನವೀನ ಕ್ರಮವು ಸಫಲವಾಗಬಹುದೆಂದು ನಾವು ಆಶಿಸುವ.

—ಶ್ರೀ. ಎ. ಶಂಕರ ಶೆಟ್ಟಿ.

[ಪುಸ್ತಕ ಪ್ರಪಂಚ]



ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಸ್ತ್ರೀ ಸುಧ

ಸ್ತ್ರೀಯರ ಸಮಸ್ತ ವ್ಯಾಧಿಗಳಿಗೆ ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು, ಮುಟ್ಟು ದೋಷಗಳನ್ನು, ಬಿಳಿ ಸೂಲೆ, ಸರಿಯಾಗಿ ಬಹಿಷ್ಠೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕರುಣಿಸುವುದು. ಒಂದು ತಿಂಗಳಿಗೆ ಸರಿ ಹೋಗುವ ೧ ತೊಲ ಔಷಧಿ ರೂ. ೪-೦-೦

ನಮ್ಮ ಸ್ವಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ—ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು 1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

NAVAYUGA

Popular Kannada Weekly

Founder:—

A. B. SHETTY, *M. L. A.*

Former Minister for Public Health, Govt. of Madras.

At Present Minister for Health Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೩	೨೮-೩-೧೯೫೭	೨೯

ಕಮ್ಯುನಿಸ್ಟರ ಪ್ರಾಬಲ್ಯ

ನೆರೆ ರಾಜ್ಯವಾದ ಕೇರಳದಲ್ಲಿ ಇಂದು ಹೊಸ ಪ್ರಯೋಗವೊಂದಕ್ಕೆ ಸಿದ್ಧತೆಗಳನ್ನು ನಡೆಸಲಾಗುತ್ತಿದೆ: ಅದೆಂದರೆ ಕಮ್ಯುನಿಸ್ಟರ ಆಳ್ವಿಕೆ! ಭಾರತವು ಪ್ರಜಾರಾಜ್ಯವಾಗಿ ಘೋಷಿಸಲ್ಪಟ್ಟ ಬಳಿಕ ಕೇರಳವು ರಾಜಕೀಯ ಪ್ರಯೋಗ ಕ್ಷೇತ್ರವಾಗಿ ಪರಿಣಮಿಸಿ, ಕೆಲವು ಬಗೆಯ ಪ್ರಯೋಗಗಳನ್ನು ನಡೆಸಿತು. ಆದರೆ ಅದರಲ್ಲೇನೂ ಯಶಸ್ಸು ಬರಲಿಲ್ಲ. ರಾಷ್ಟ್ರದಲ್ಲಿಯೇ ಸಬಲ ಸುಸಂಘಟಿತ ಶಕ್ತಿ ಸಂಪನ್ನ ರಾಜಕೀಯ ಸಂಸ್ಥೆ ಎಂದು ಹೆಸರುವಾಸಿಯಾದ ಕಾಂಗ್ರೆಸು ಕೇರಳದಲ್ಲಿ ಜನಪ್ರಿಯತೆಯನ್ನು ಉಳಿಸಿಕೊಳ್ಳದೆ, ಸರ್ಕಾರವನ್ನು ನಡೆಸುವಷ್ಟು ಶಾಸನಾಂಗದಲ್ಲಿ ಪ್ರತಿನಿಧಿಗಳ ಬಾಹುಳ್ಯವನ್ನು ಪಡೆಯದೆ ವಿಮುಖಗೊಂಡಿತು. ಕಾಂಗ್ರೆಸಿನಿಂದಲೇ ಸಿಡಿದುನಿಂತು ತಮಿಳು ನಾಡಿನೊಡನೆ ಕೇರಳದ ತೆಂಕು ಮೂಲೆಯೊಂದು ಸೇರಬೇಕೆಂದ ಪಕ್ಷದವರು ಅಸಹಕಾರಗೈದುದರಿಂದ ಕಾಂಗ್ರೆಸಿಗೆ ಹೀಗೆ ದುರ್ಗತಿ ಬಂತು. ಮುಂದೆ ನಡೆದೊಂದು ಚುನಾವಣೆಯಲ್ಲಿ ಕೇವಲ ೧೯ ಮಂದಿ ಸದಸ್ಯರಿದ್ದ ಪ್ರಜಾ ಸಮಾಜವಾದಿ ಪಕ್ಷಕ್ಕೆ ಸರಕಾರವನ್ನು ರಚಿಸಲು ಬಿಡಲಾಯಿತು. ಆದರೆ ಕಾಂಗ್ರೆಸಿಗೂ ಈ ಪಕ್ಷಕ್ಕೂ ಕೆಲ ಸಮಯದ ಬಳಿಕ ಭಿನ್ನಾಭಿಪ್ರಾಯ ಬಂದುದರಿಂದ ಈ ಮಂತ್ರಿ ಮಂಡಳವೂ ರಾಜೀನಾಮೆ ಕೊಟ್ಟಿತು. ಇದೀಗ ಮೂರನೇ ಸಲ ಅಲ್ಲಿ ಚುನಾವಣೆ ನಡೆದಿದೆ; ಕಾಂಗ್ರೆಸಿನ ಹಾಗೂ ಪ್ರಜಾಸಮಾಜವಾದಿಗಳ ಸರಕಾರದ ರುಚಿ ನೋಡಿಯಾದ ಕೇರಳದ ಜನತೆಯು ರಾಷ್ಟ್ರದಲ್ಲಿ ಇನ್ನೊಂದು ಮುಖ್ಯ ಪಕ್ಷವಾಗಿರುವ ಕಮ್ಯುನಿಸ್ಟರ ಆಡಳಿತದ ಅನುಭವ ಹೊಂದಲು ಸಿದ್ಧವಾಗಿ ನಿಂತಿದೆ ಎಂದು ಸ್ಥಿತಿಗತಿಗಳು ಸಾರುತ್ತಿವೆ. ೧೩೬ ಮಂದಿ ಸದಸ್ಯರುಳ್ಳ ಕೇರಳದ ಶಾಸನಾಂಗದಲ್ಲಿ ೬೦ ಮಂದಿ ಕಮ್ಯುನಿಸ್ಟ ಸದಸ್ಯರೂ ಕಮ್ಯುನಿಸ್ಟರಿಂದ ಬೆಂಬಲಿಸಲ್ಪಟ್ಟ ಬೇರೆ ೫ ಮಂದಿ ಸ್ವತಂತ್ರ ಸದಸ್ಯರೂ ಆಯ್ಕೆಗೊಂಡು ಒಟ್ಟಾರೆ ಕಮ್ಯುನಿಸ್ಟರು ೬೫ ಸ್ಥಾನಗಳನ್ನು ಹೊಂದಿ ನಿಸ್ಸಂದಿಗ್ಧ ಬಹುಮತ ಸಂಪಾದನೆ ಮಾಡಿದ್ದಾರೆ. ಕಾಂಗ್ರೆಸಿಗೆ ಸಿಕ್ಕಿರುವ ಸ್ಥಾನಗಳು ೪೩; ಪ್ರಜಾಸಮಾಜವಾದಿಗಳಿಗೂ, ಕೇರಳ ಕಾಂಗ್ರೆಸ್ಸಿಗೂ ಧೂರೀಣರಾಗಿ ಶ್ರೀ ಇ. ಎಂ. ಶಂಕರನ್ ನಂಬೂದ್ರಿಪಾದರು ಆಯ್ಕೆಗೊಂಡಿದ್ದಾರೆ; ಉಪಧುರೀಣರಾಗಿ ಶ್ರೀ ಸಿ. ಅಚ್ಯುತ ಮೆನನ್ನನ್ನೂ ಕಾರ್ಯದರ್ಶಿಯಾಗಿ ಶ್ರೀ ಗೋಪಾಲಕೃಷ್ಣ ಮೆನನ್ನರೂ ಮುಖ್ಯ ಪ್ರತೋದರೆಂದು ಶ್ರೀ ನಾರಾಯಣ ಸಂಬಿಯಾರರೂ ಆರಿ ಸಲ್ಪಟ್ಟಿದ್ದಾರೆ. ಹೊಸ ಧುರೀಣರು ಜನತೆಯ ಸಂಪೂರ್ಣ ಸಹಕಾರವನ್ನು ಯಾಚಿಸಿರುವರಲ್ಲದೆ ತಮ್ಮ ಸರಕಾರದ ಕಾರ್ಯಕಲಾಪವನ್ನು ಭಾರತವಿಡೀ ಆದೇಕೆ ಜಗತ್ತಿಡೀ ಕುತೂಹಲದಿಂದ ನಿರೀಕ್ಷಿಸುತ್ತಿರಬಹುದೆಂಬ ಅರಿವನ್ನೂ ವ್ಯಕ್ತಪಡಿಸಿದ್ದಾರೆ. ಇದು ಸಹಜವಾದುದೆಂದೇ ಹೇಳಬಹುದು. ಏಕೆಂದರೆ, ಭಾರತದಲ್ಲಿ ಇಷ್ಟರವರೆಗೆ ಕಮ್ಯುನಿಸ್ಟರು ಯಾವದೇ ರಾಜ್ಯದಲ್ಲೂ ಆಡಳಿತವನ್ನು ಸ್ವತಃ ನಡೆಸಿದ್ದಿಲ್ಲ. ಪೆಪ್ಸುವಿನಲ್ಲಿ ಕೆಲವು ತಿಂಗಳುಗಳ ವರೆಗೆ ಕಾಂಗ್ರೆಸ್ಸೇತರ ಪಕ್ಷಿಗಳು ಆಡಳಿತ ನಡೆಸಿದ್ದವು; ಕೇರಳದಲ್ಲಿಯೂ ಪ್ರಜಾಸಮಾಜವಾದಿ ಪಕ್ಷವು ೧೯ ತಿಂಗಳ ಕಾಲ ಸರ್ಕಾರವನ್ನು ನಡೆಸಿತು. ಆದರೆ ಕಮ್ಯುನಿಸ್ಟರ ಸರಕಾರದ ಸೂತ್ರ ಜಾಲನೆಯನ್ನು ಸ್ವತಃ ಮಾಡುವ ಅವಕಾಶವನ್ನು ಆಗ ಪಡೆಯಲಿಲ್ಲ. ಆದುದರಿಂದ ಈಗ ನಿಸ್ಸಂದಿಗ್ಧ ಬಹುಮತವು ತಮಗೆ ದೊರಕಿರಿದೆಯಾದುದರಿಂದ ರಾಜ್ಯ ಪಾಲರನ್ನು ಕಂಡು ತಮಗೆ ಸರಕಾರವನ್ನು ರಚಿಸಲು ಅವಕಾಶಕೊಡಿರೆಂದು ಅವರು ಕೇಳಿಕೊಳ್ಳುವುದು, ಅಥವಾ ರಾಜ್ಯಪಾಲರೇ ನೀವು ಸರಕಾರವನ್ನು ರಚಿಸಲು ಪ್ರಯತ್ನಿಸಿರಿ ಎಂದು ಆಮಂತ್ರಿಸುವುದು ಪ್ರಜಾಪ್ರಭುತ್ವ ಪದ್ಧತಿಗೆ ಹೇಳಿಸಿದ ಕ್ರಮವಾಗಿದೆ, ನಿಜ. ಆದರೆ, ಕಮ್ಯುನಿಸ್ಟರ ಮೂಲ ಸಿದ್ಧಾಂತಗಳಿಗೂ ಪ್ರಜಾಪ್ರಭುತ್ವ ಪದ್ಧತಿಯು ನಡವಳಿಕೆಗಳಿಗೂ ಎಲ್ಲಿಯ ವರೆಗೆ ಹೊಂದಿಕೆ ಇದೆ ಎಂಬುದೇ — ಇಲ್ಲಿ ವಿಚಾರಣೀಯವಾದ ಅಂಶ. ಕಮ್ಯುನಿಸ್ಟರಿಗೆ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ವಿಶ್ವಾಸವಿಲ್ಲ; ಕಮ್ಯುನಿಸ್ಟರು ಆಳುತ್ತಿರುವ ಇತರ ದೇಶಗಳಲ್ಲಿ ಪ್ರಜಾಪ್ರಭುತ್ವವಾಗಲೀ ಕಮ್ಯುನಿಸ್ಟೇತರ ಪಕ್ಷಗಳಾಗಲೀ ಅಸ್ತಿತ್ವದಲ್ಲಿ ಉಳಿದಿಲ್ಲ. ಇಲ್ಲಿ, ಭಾರತದಲ್ಲಿ, ಕಮ್ಯುನಿಸ್ಟರು ಪ್ರಜಾಪ್ರಭುತ್ವ ಪದ್ಧತಿಗೆ ಅನುಸಾರವಾಗಿ ಚುನಾವಣೆಗಳಲ್ಲಿ ಹೋರಾಟವನ್ನಿತ್ತು ಹಾಗು ಸಂಖ್ಯಾ ಬಾಹುಳ್ಯವಿಲ್ಲದಿದ್ದರೆ ಪ್ರತಿ ಪಕ್ಷದ ಸ್ಥಾನದಲ್ಲಿ ನಿಂತುಕೊಂಡು ಟೀಕೆಯಂತಹ ಕೆಲಸದಿಂದಲೇ ಕ್ರಮೇಣ ಪ್ರಾಬಲ್ಯವನ್ನು ಪಡೆಯುವವರಾದರೆ, ಅದು ಪ್ರಜಾಪ್ರಭುತ್ವ ಪದ್ಧತಿಯಲ್ಲಿ ವಿಶ್ವಾಸವಿದೆ ಎಂಬುದರಿಂದಲ್ಲ.— ಪ್ರಬಲವಾದ ರಾಷ್ಟ್ರ ಶಕ್ತಿಯನ್ನು, ಅಂದರೆ ಕಾಂಗ್ರೆಸ್ಸನ್ನು, ಬಗ್ಗು ಬಡಿದು, ಅಧಿಕಾರದ ಸೂತ್ರವನ್ನು ಕೈಯಲ್ಲಿಟ್ಟುಕೊಳ್ಳಲು ಈ ಮಾರ್ಗವನ್ನು ನುಸರಿಸಿದೆ ಬೇರೆ ಸುಲಭ ದಾರಿಯಿಲ್ಲ ಎಂಬುದರಿಂದ! ಕಮ್ಯುನಿಸ್ಟರು ಚುನಾವಣೆಯಲ್ಲಿ ಹೋರಾಟವನ್ನಿತ್ತರು; ಮತ್ತೀಗ ಕೇರಳದಲ್ಲಿ ಅವರ ಕೈಗೆ ರಾಜ್ಯಾಧಿಕಾರ ಬರುವಂತಿದೆ: ಅಲ್ಲಿ ಅವರೇನು ಮಾಡಿಯಾರು? ಅವರು ತಮ್ಮ ಪಕ್ಷದ ಚುನಾವಣೆಯ ಘೋಷಣೆಯಂತೆ ಕೆಲಸ ಮಾಡುವರೆ? ಶ್ರೀ. ಎ. ಕೆ. ಗೋಪಾಲನ್ನರಂಥ ಧುರೀಣರೇ ಹೇಳಿದ್ದಾರೆ— ಏನೆಂದರೆ, ಹಾಗೆ ಕೆಲಸಮಾಡಲು ಘಟನಾತ್ಮಕವಾದ ಅಡ್ಡಿ ಆಪತ್ತಿಗಳಿಗಳು ಇವೆ ಎಂದು. ಹಾಗಾದರೆ, ಕಮ್ಯುನಿಸ್ಟರು ಒಂಬೋ ತಮ್ಮ ಘೋಷಣೆಯಂತೆ ನಡೆಯಲಾರದೆ ಸರ್ಕಾರವನ್ನು ನಡೆಸಬೇಕು; ಅಥವಾ ಘಟನೆಯನ್ನೆ ಬದಲಾಯಿಸಬೇಕು. ನಿಜವಾಗಿ ಕಮ್ಯುನಿಸ್ಟರ ಆಂತರ್ಯವನ್ನು ಪರೀಕ್ಷಿಸಿದ ಪಕ್ಷದಲ್ಲಿ ಅವರು ಘಟನೆಯ ರೂಪುಗೆಡಿಸಲು ಸಿದ್ಧರೇ ಹೊರತು, ತಮ್ಮ ಘೋಷಣೆಯನ್ನು ಕಾರ್ಯಗತಗೊಳಿಸದೆ ಇರುವ ಮನಸ್ಸು ಅವರಿಗಿಲ್ಲ. ಆದರೆ ಘಟನೆಯ ರೂಪುಗೆಡಿಸುವ ಶಕ್ತಿ ಇಂದು ಕಮ್ಯುನಿಸ್ಟರಿಗೆ ದೊರೆತಿಲ್ಲ. ಏಕೆಂದರೆ, ಅದು ಕೇಂದ್ರ ಸರ್ಕಾರದಿಂದ ನಡೆಯಬೇಕಾದಂಥ ಗುರುತರವಾದ ಹೊಣೆಗಾರಿಕೆಯ ಕೆಲಸ. ಲೋಕಸಭೆಯಲ್ಲಿ ಇಷ್ಟರ ವರೆಗೆ ತುಂಬಿದ ನಾಲ್ಕೂರಕ್ಕಿಂತಲೂ ಹೆಚ್ಚಿನ ಸ್ಥಾನಗಳಲ್ಲಿ ಕಾಂಗ್ರೆಸು ಮುನ್ನೂರಕ್ಕೂ ಮಿಕ್ಕೆ ಪಡೆದಿರುವಾಗ ಕಮ್ಯುನಿಸ್ಟರು ಮುವತ್ತನ್ನು ಸಹ ಪಡೆದಿಲ್ಲ. ಆದುದರಿಂದ ಕಮ್ಯುನಿಸ್ಟರೀಗ "ನಾವು ಘಟನೆಯು ಚೌಕಟ್ಟಿನಲ್ಲಿಯೇ ಸರ್ಕಾರವನ್ನು ನಡೆಸಲು ನಿರ್ಧರಿಸಿದ್ದೇವೆ; ಮತ್ತು ಘಟನೆಯ ಇತಿಮಿತಿಯೊಳಗೆ ನಮ್ಮ ಘೋಷಣೆಯನ್ನು ಕಾರ್ಯರೂಪಕ್ಕೆ ಇಳಿಸಲು ಪ್ರಯತ್ನಿಸುತ್ತೇವೆ" ಎಂದೀಗ ಹೇಳುತ್ತಿದ್ದಾರೆ. ಇದೇ ವ್ಯವಹಾರ್ಯವಾದು ದೆಂಬ ಜ್ಞಾನೋದಯ ಅವರದು. ಆದರೆ, ಘಟನೆಯಂತೆ ಮಾಡಲಾಗದ ಕೆಲಸಗಳೇ ಅವರ ಘೋಷಣೆಯಲ್ಲಿದ್ದುವಲ್ಲ; ಘಟನೆಯಂತೆ ಕೆಲಸ ಮಾಡುವವರು ತಾವು ಎಂಬ ಮಾತನ್ನು ಚುನಾವಣೆಗೆ ಮೊದಲೇ ಸ್ಪಷ್ಟವಾಗಿ ಹೇಳುತ್ತಿದ್ದರೆ, ಘಟನೆಯಂತೆ ಮಾಡಲಾಗದ ಕೆಲಸಗಳನ್ನು ಮಾಡುವೆವೆಂಬ ಘೋಷಣೆಯಿಂದ ಜನರನ್ನು ಮರುಳುಗೊಳಿಸುವ ದ್ರೋಹಕಾರಿ ವರ್ತನೆಯು ಕಲಂಕಕ್ಕೆ ಕಮ್ಯುನಿಸ್ಟರು ಹೊರಗಾಗುತ್ತಿದ್ದರಲ್ಲ! ಇದು ಚುನಾವಣೆಗೆ ಮುಂಚೆ, ಕಮ್ಯುನಿಸ್ಟರಿಗೆನೇ ಹೆಚ್ಚಿನ ಬೆಂಬಲವನ್ನು ವ್ಯಕ್ತಪಡಿಸಿದ, ಜನತೆ ಆಲೋಚಿಸಬೇಕಾಗಿದ್ದ, ವಿಶ್ಲೇಷಿಸಿ ತಿಳಿದುಕೊಳ್ಳಬೇಕಾಗಿದ್ದ, ವಿಷಯ. [ಇಂದು ಕೆಲಸ ಮಿಂಚಿಹೋಗಿದೆ: ವಿತ್ತು ಕಮ್ಯುನಿಸ್ಟರು ತಾವು ತೊಟ್ಟ ಭರವಸೆಗಳಂತೆ ಕೆಲಸಮಾಡಲಾಗದ ಸ್ಥಿತಿಯಲ್ಲಿದ್ದಾರೆ. ಅದಕ್ಕಾಗಿ ಘಟನೆಯಲ್ಲಿ ನ್ಯೂನತೆ ಇದೆ ಎನ್ನುತ್ತಾರೆ; ಹಾಗೆ ಕಾಂಗ್ರೆಸಿನ ಬಗ್ಗೆ ಅತೃಪ್ತಿಯನ್ನು ಕೆರಳಿಸಿ, ತಾವು ಹೇಳಿದಂತೆ ಮಾಡಲಾಗದ ಎಲ್ಲ ಪಾಪಕ್ಕೂ ಕಾಂಗ್ರೆಸ್ಸಿಗರೇ ಜವಾಬ್ದಾರರೆಂದು ಘೋಷಿಸಿ ಕೊನೆಯಲ್ಲಿ ಕೈಗಳನ್ನು ತೊಳೆದು ಕೊಳ್ಳುತ್ತಾರೆ. ಹೀಗೆ ಜನತೆಗೆ ಕಾಂಗ್ರೆಸಿನ ಮೇಲಿನ ದ್ವೇಷವು ಮತ್ತಷ್ಟು ಹೆಚ್ಚುವಂತೆ ಅವರು ಮಾಡುತ್ತಾರೆ. ಇದು ಈಗಲ್ಲದಿದ್ದರೆ, ಕೆಲಸಮಯದ ಬಳಿಕ ನಾವೆಲ್ಲರೂ ನೋಡಬಹುದಾದ ಚಿತ್ರ. ಇದರ ಮುನ್ಸೂಚನೆಯು ಇಷ್ಟರಲ್ಲೆ ವ್ಯಕ್ತವಾಗಿದೆ. ಉದಾಹರಣೆಗಾಗಿ, ಕಮ್ಯುನಿಸ್ಟರ ಘೋಷಣೆಯಲ್ಲಿ ವಿದೇಶಿಯರ ಕೈಯಲ್ಲಿರುವ ಚಾ-ಕಾಫಿ-ರಬ್ಬರು ತೋಟಗಳನ್ನೆಲ್ಲಿ ರಾಷ್ಟ್ರೀಕರಿಸಲಾಗುವುದೆಂದು ಹೇಳಿದೆ; ಮತ್ತು ರಾಷ್ಟ್ರೀಕರಣವೆಂದು ವಾಗ ಪರಿಹಾರವೇನನ್ನೂ ಕೊಡುವುದಿಲ್ಲ ವೆಂದೂ ಸಾರಲಾಗಿದೆ. ಇದು ನಮ್ಮ ಘಟನೆಗೆ ಅನುಗುಣವಾದ ನೀತಿಯಲ್ಲ. ನೊಚಲನೆಯದಾಗಿ ವಿದೇಶೀಯರಿಗೆ ಕೆಲವು ಬಗೆಯ ಭರವಸೆಗಳು ಕೇಂದ್ರ ಸರಕಾರದಿಂದ ಸಿಕ್ಕಿರುತ್ತವೆ. ರಾಜ್ಯ ಸರ್ಕಾರವು ಈ ಭರವಸೆಗಳನ್ನು ಧಿಕ್ಕರಿಸಿ ಜೋಗಬಲ್ಲುದೊ ಎಂಬುದು ಸಂಶಯ. ಎರಡನೇಯದಾಗಿ ನವ್ಯ ಘಟನೆಯಲ್ಲಿ ಸೊತ್ತುಗಳ ರಾಷ್ಟ್ರೀಕರಣ ನಡೆದಾಗ ಪರಿಹಾರ ಧನವನ್ನು ಕೊಡಬೇಕೆಂಬ ಸ್ಪಷ್ಟ ಉಲ್ಲೇಖವಿದೆ. ಕಮ್ಯುನಿಸ್ಟರು "ಕೊಡುವುದಿಲ್ಲ" ಎಂದು ಹೇಳಿದರೆ, ಅವರು ಘಟನೆಗೆ ನಿಷ್ಠರಾಗಿ ನಡೆದಂತಾಗುವುದಿಲ್ಲ. ಒಂದೋ ಘಟನೆಯನ್ನು ಇಲ್ಲವೆ ತಮ್ಮ ಘೋಷಣೆಯನ್ನು ಆಯ್ದುಕೊಳ್ಳಬೇಕು! ಪರಿಹಾರಧನವನ್ನು ಕೊಡಲು ನಿಶ್ಚಯಿಸಿದರೂ — ಅದು ಅವರ ಘೋಷಣೆಯ ಪ್ರಕಾರ ತಪ್ಪು — ವಿದೇಶೀಯರಿಗೆ ವಿದೇಶಿ ನಾಣ್ಯಗಳಲ್ಲಿ ಪರಿಹಾರ ಕೊಡುವುದು ಕ್ರಮ: ಹಾಗೆ ಪರಿಹಾರ ಕೊಡಬೇಕಾದರೆ ಕೇಂದ್ರ ಸರ್ಕಾರದ ಅನುಮತಿಬೇಕು. ನಮ್ಮ ದೇಶದ ವಿದೇಶಿ ವಿನಿಮಯ ಭಂಡಾರವನ್ನು ಪರಿಹಾರ ಧನಕೊಡುವುದಕ್ಕಿಂತಲೂ ಹೆಚ್ಚು ಅಗತ್ಯದ ಕೆಲಸಗಳಿಗೆ ವಿನಿಯೋಗಿಸಲು ಕೇಂದ್ರ ಸರ್ಕಾರ ಬಯಸಿತೇ ಹೊರತು ಕಮ್ಯುನಿಸ್ಟರ ಈ ಹುಚ್ಚು ಹವ್ಯಾಸಕ್ಕೆ ಕಲೆತೊಗಿ ವ್ಯರ್ಥ ಕಳೆದುಕೊಳ್ಳಲು ಅದು ಸಿದ್ಧವಾಗಲಿಕ್ಕಿಲ್ಲ. ಹೀಗೆ ತೊಂದರೆಗಳ ಹಿಂದೆ ತೊಂದರೆಗಳೇ ಏಳುತ್ತವೆ — ಮತ್ತು ಕಮ್ಯುನಿಸ್ಟರು ಇವೆಲ್ಲ ತೊಂದರೆಗಳ ಜವಾಬ್ದಾರಿಯನ್ನೂ ಕಾಂಗ್ರೆಸು ಪಕ್ಷದ ತಲೆಯ ಮೇಲೆ ಹೇರುತ್ತಿರೆ ಎಂಬ ಬಗ್ಗೆ ನಮಗಾವ ಸಂಶಯವೂ ಉಳಿದಿಲ್ಲ. ನಿಜವಾಗಿ ತಪ್ಪು ಹೆಜ್ಜೆಗಳನ್ನಿಡುತ್ತಿರುವವರೂ ಕಾರ್ಯರೂಪಕ್ಕೆ ಇಳಿಸಲಾರದ ಘೋಷಣೆಗಳನ್ನು ಮಾಡುತ್ತಿರುವವರೂ ಕಮ್ಯುನಿಸ್ಟರು—ಆದರೆ ತಪ್ಪಿನ ಹೊಣೆಗಾರಿಕೆ ಮಾತ್ರ ಕಾಂಗ್ರೆಸಿನ ಹೆಗಲೇರುವುದು ತಪ್ಪದು. ಇಂಥ ವಿಷಮ ಸನ್ನಿವೇಶವನ್ನು ಬುದ್ಧಿವಂತರಾದ ಕೇರಳದ ಜನತೆ ಮುಂದಾಗಿ ತಿಳಿಯದೆ ಹೋದುದು ಆಶ್ಚರ್ಯ! ಆ ಕೆಲಸ ಮಾಡುತ್ತೇನೆ, ಈ ಕೆಲಸ ಮಾಡುತ್ತೇವೆ, ಎಂದರೆ ಸಾಕೆ? ಮಾಡಬಹುದಾದ ಸ್ಥಿತಿಗತಿ ಅವರದೆ ಎಂಬುದನ್ನು ಸ್ವಲ್ಪ ಮಾತ್ರವೂ ಆಲೋಚಿಸದ ಜನರ ಕೈಯಲ್ಲಿ ಪ್ರಜಾಪ್ರಭುತ್ವವು ಎಷ್ಟು ಹಾಸ್ಯಾಸ್ಪದವಾದ ಮತ್ತು ಆಪಾಯಕಾರಿಯಾದ ಸ್ವರೂಪವನ್ನು ಹೊಂದುವುದೆಂಬುದಿಕ್ಕೆ ಕೇರಳವ ನಿದರ್ಶನವೇ ಸಾಕು. ಅಂತೂ ಕಮ್ಯುನಿಸ್ಟರು ಪ್ರತ್ಯಕ್ಷ ಆಳ್ವಿಕೆಯಲ್ಲಿ ತಮ್ಮ ಪಕ್ಷದ ಮೇಲೆ ಬರಬಹುದಾದ ಎಲ್ಲ ಆಕ್ಷೇಪಣೆಗಳಿಗೂ ಕಾಂಗ್ರೆಸ್ಸನ್ನು ಹೊಣೆಯಾಗಿ ಮಾಡುವುದು ಖಂಡಿತ; ಸರಕಾರದ ಸೂತ್ರವು ತಮ್ಮ ಕೈಗೆ ಬಂದಿರುವ ಈ ಕಾಲಾವಕಾಶವನ್ನು ತಮ್ಮ ಪಕ್ಷದ ಪ್ರಚಾರಕ್ಕೂ ಮತ್ತು ತಂತ್ರ ಪ್ರಯೋಗಕ್ಕೂ ಉಪಯೋಗಿಸದೆ ಬಿಡರು ಎಂಬುದೂ ಅಷ್ಟೇ ಸತ್ಯ. ಪೂರ್ವ ಯೂರೋಪಿನ ಕೆಲವು ರಾಷ್ಟ್ರಗಳ ಅಧಿಕಾರವು ಕಮ್ಯುನಿಸ್ಟರ ಕೈಗೆ ಸಿಕ್ಕಿದ್ದೇ ತಡ, ಅವರು ಇಡಿ ಸರಕಾರಿ ಯಂತ್ರವನ್ನೆ ಕಮ್ಯುನಿಸ್ಟರಿಂದ ತುಂಬಿಸಿದರು ಕೇರಳದಲ್ಲೂ ಇವರ ಪುನರಾವರ್ತನೆಯಾದೀತೆಂಬ ಭಯವು ದೇಶನಿಷ್ಠರಿಗೆ ಕಾಣಿಸುತ್ತಿದೆ; ಪ್ರಜಾಪ್ರಭುತ್ವದ ಆರೂಢಕರಿಗೆ ಇದು ಗೋಚರಿಸುತ್ತಿದೆ. ಆಡಳಿತ ಯಂತ್ರದಲ್ಲಿ ಕಮ್ಯುನಿಸ್ಟರು ತಾವೇ ತಾವಾಗಿ ವಿಜೃಂಭಿಸಿದರೆಂದ ಮೇಲೆ, ಮತ್ತೆ ಅಲ್ಲಿ ಕಮ್ಯುನಿಸಮ್ಮನ್ನು ದೂರಗೊಳಿಸುವುದು ಅಶಕ್ಯ ಕೋಟಿಯೊ

(ಇನೇ ಪುಟ ನೋಡಿರಿ)

THE MOOLKY BAN

(INCORPORATED IN IN

BALANCE SHEET AS

CAPITAL & LIABILITIES			Rs. As. Ps.	Rs. As. P
1. Capital:				
AUTHORISED CAPITAL: 8,000 Shares of Rs. 25/- each			2,00,000 0 0	
ISSUED CAPITAL: 4,000 Shares of Rs. 25/- each			1,00,000 0 0	
SUBSCRIBED CAPITAL: 3,194 Shares of Rs. 25/- each			79,850 0 0	
CALLED-UP AND PAID-UP CAPITAL: 3,194 Shares of Rs. 25/- each at Rs. 15/- per Share ..			47,910 0 0	
Add: Calls in advance			1,200 0 0	
			49,110 0 0	
Forfeited Shares			Nil	49,110 0
2. Reserve Fund and other Reserves:				11,400 0
3. Deposits and other Accounts:				
Fixed Deposits			1,59,553 0 6	
Savings Bank Deposits			18,556 6 9	
Current Account, Contingency Accounts etc.			37,687 15 6	2,15,797 6
4. Borrowings from other Banking Companies, Agents, etc:				
In India			Nil	
Outside India			Nil	Nil
5. Bills Payable:				Nil
6. Bills for collection being Bills Receivable, as per contra:				
Payable in India			Nil	
Payable outside India			Nil	Nil
7. Other Liabilities:				6,846 5
8. Acceptances, Endorsements and other obligations, as per contra:				Nil
9. Profit & Loss Account:				
Profit as per last Balance Sheet			5,167 7 4	
Less: Appropriations—				
To Statutory Reserve Fund...		1,500 0 0		
„ Provision for Income-tax		1,400 0 0		
„ Dividend 4%		1,916 1 6	4,816 1 6	
Balance Brought forward			351 5 10	
Add: Profit for the year brought from the Profit & Loss A/c			5,149 8 1	
			5,500 13 11	
Less: Appropriated to Statutory Reserve Fund under Section 17 of B. C. Act 1949 ...			2,000 0 0	3,500 13 1
10. Contingent Liabilities:				Nil
Total ...				2,86,654 9 11

OFFICE OF THE BANK, MULKI. Date: 6—2—1957.

(Sd.) M R. M. PUNJA
„ M SHANKERA SHETTY
„ K SANJIVA SHETTY

(Sd.) KRISHNA M. SALIAN
„ DR. M. D ADAPPA

(Sd.) P. SANJIVA HEGDE
„ A. DODDANNA SHETTY

Dr. PROFIT AND LOSS ACCOUNT FOR 1

EXPENDITURE	Rs. As. P
To Interest paid on Deposits, Borrowings etc.	5,846 3
„ Salaries and Allowances (including salary of Rs. 1,800/- paid to Manager)	3,350 0
„ Directors Fees and allowances	84 0
„ Rent, Taxes, Insurance, Lighting etc.	401 8
„ Law Charges	Nil
„ Postage, Telegrams and Stamps	195 13
„ Audit Fees	100 0
„ Depreciation on and repairs to the Banking Companies property	69 1
„ Stationery, Printing and Advertisements etc	442 11
„ Loss from sale of or dealing with Non-Banking Assets	Nil
„ Other Expenditure...	337 1
„ NET PROFIT	5,149 8
Total ...	15,975 14 1

OFFICE OF THE BANK, MULKI. Date: 6—2—1957.

(Sd.) M. R. M. PUNJA
„ M. SHANKERA SHETTY
„ K. SANJIVA SHETTY

(Sd.) KRISHNA M. SALIAN
„ DR. M. D. ADAPPA

(Sd.) P. SANJIVA HEGDE
„ A. DODDANNA SHETTY

AUDITOR'

I have audited the annexed Balance Sheet of the Moolky Bank, Ltd., as on 31—12—1956 and also the annexed Profit and Loss Account of the

(a) I have obtained all the information and explanations which to the best of my knowledge and belief, were necessary for the purpose of my au opinion, proper books of account as required by law have been kept by the Bank so far as appears from my examination of those books; *(d)* The Bank's information, and according to the explanations given to me, the said accounts give the information required by the Companies Act 1956 in the manner and the Profit and Loss Account gives a true and fair view of the profit for the year ending on that date.

[IMITED, MULKI.

(IMITED LIABILITY)

DECEMBER, 1956.

PROPERTY & ASSETS	Rs. As. Ps.	Rs. As Ps.
hand	28,336 7 11	
ith Reserve Bank	Nil	
ith State Bank	Nil	28,336 7 11
ices with other Banks:		
India— On Current A/c.	15,718 12 11	
n Fixed Deposits	22,000 0 0	
utside India	Nil	
aff Security Deposit with Scheduled Bank in India	Nil	37,718 12 11
y at call and short notice:		Nil
stments at cost:		
curities of the Central & State Govts. and other Trustee Securities (Face Value 37,500/-) ...	37,348 2 0	
ares: Preference, fully paid up (Face Value Rs. 11,000/-)	11,531 8 0	
ebentures or Bonds	Nil	
ther Investments	Nil	
old	Nil	48,879 10 0
nce:		
(Other than Bad & Doubtful Debts for which provision has been made to the satisfaction of the auditors)		
NS, CASH, CREDITS, OVERDRAFTS		
India 1 63,305 5 6		
utside India ... ... Nil	1,63,305 5 6	
LS DISCOUNTED & PURCHASED (excluding treasury bills of the Central & State Govts.)		
ayable in India 99 10 0		
yable outside India ... ... Nil	99 10 0	1,63,404 15 6
ulars of Advances:		
ebts considered good in respect of which the Banking company is fully secured	1,15,200 2 0	
ebts considered good for which the Banking Company holds no other security than the Debtors' personal security	Nil	
ebts considered good secured by the personal liabilities of one or more parties in addition to the personal security of the Debtors	48,204 13 6	
ebts considered doubtful or Bad, not provided for	Nil	
ebts due by Directors or Officers of the Banking Company or any of them either severally or jointly with other persons	7,064 4 0	
ebts due by Companies or Firms in which the Directors of the Banking Company are interested as Directors, Partners or Managing Agents, or in the case of Private Companies as Members	Nil	
laximum total amount of advance, including temporary advances made at any time during the year to Directors or Managers or Officers of the Banking Company or any of them either severally or jointly with any other persons	8,139 8 0	
laximum total amount of advances including temporary advances, granted during the year to Companies or Firms in which the Directors of the Banking Company are interested as Directors, Partners, or Managing Agents, or in the case of Private Companies as Members	Nil	
Receivable being Bills for Collection, as per contra:		
ayable in India	Nil	
ayable outside India	Nil	Nil
tituents' Liabilities for Acceptances, Endorsements and other obligations, as per contra		Nil
ises at cost:		Nil
niture and Fixtures:		
t cost	1,220 7 4	
dd: Additions during the year	411 8 3	
	1,631 15 7	
ess: Sale during the year	40 0 0	
	1,591 15 7	
ess: Depreciation written off up to last Balance Sheet 807 7 4		
„ „ „ during the year 69 1 3	876 8 7	715 7 0
r Assets:		
dvance payment of Income-tax	2,093 4 0	
nterest Receivable on Investments and Loans	5,075 14 0	
Dividend Receivable	430 2 7	7,599 4 7
-Banking Assets Acquired in satisfaction of claims at Book Value:		Nil
Total ...		2,86,654 9 11

RS, (Sd.) N. M. ADYANTHAYA, *President.* (Sd.) M. R. H. PUNJA, *Manager.*

EAR ENDED 31ST DECEMBER 1956. Cr.

INCOME	Rs. As. Ps.
s provision made during the year for Bad & Doubtful debts and other usual or necessary provisions).	
rest and Discount	13,289 11 9
mission, Exchange and Brokerage	1,861 11 4
t	Nil
Profit on sale of Investments, Gold and Silver, Land, Premises and other Assets (not credited to Reserves, or any particular fund or account	Nil
Profit on revaluation of Investments, Gold and Silver, Land, Premises and other Assets (not credited to Reserves, or any particular fund or account)	Nil
ome from Non Banking Assets, and Profits from sale of or dealing with such assets	Nil
ier Receipts	824 7 9
Total ...	15,978 14 10

RS, (Sd.) N. M. ADYANTHAYA, *President.* (Sd.) M. R. H. PUNJA, *Manager.*

CATE.

year ending on that date and I report that:—
ound them to be satisfactory; *(b)* The transactions of the Bank which have come to my notice have been within the powers of the Bank; *(c)* In my
t and Profit and Loss Account dealt with by this report are in agreement with the books of account; *(e)* In my opinion, and to the best of my
Banking Companies and on such basis, the said Balance Sheet gives a true and fair view of the state of the affairs of the Bank as on 31—12—1956

ಮೈಸೂರಲ್ಲಿ ಕಾಂಗ್ರೆಸಿನ ಯಶಸ್ಸು

೨೦೦ರಲ್ಲಿ ೧೫೦ ಸ್ಥಾನ ಕಾಂಗ್ರೆಸಿಗೆ ಸಿಕ್ಕಿತು

ಒರಿಸ್ಸ ಮತ್ತು ಕೇರಳಗಳನ್ನುಳಿದು ಬೇರೆ ಎಲ್ಲ ರಾಜ್ಯಗಳಲ್ಲಿಯೂ ಅಲ್ಲದೆ ಕೇಂದ್ರದಲ್ಲಿಯೂ ಕಾಂಗ್ರೆಸು ಸರ್ಕಾರ ವೇ ಪರ್ಸಡುವುದಕ್ಕೆ ಸಾಧ್ಯವಾಗಿದೆ; ಮತ್ತು ಕಾಂಗ್ರೆಸು ಪಕ್ಷದ ಮುಖಂಡರು ಮಂತ್ರಿ ಮಂಡಳ ರಚನೆಯ ಕುರಿತಾಗಿ ಮತ್ತದಕ್ಕೆ ಮುಂಚೆ ಕಾಂಗ್ರೆಸು ಪಕ್ಷದ ಧುರೀಣರ ಆಯ್ಕೆಯ ಕುರಿತಾಗಿ ಮಾತುಕತೆ, ವಿಚಾರವಿನಿಮಯಗಳಾದಿಗಳ ನ್ನೀಗ ನಡೆಸುತ್ತಿದ್ದಾರೆ.

೨೦೦ರಲ್ಲಿ ೧೫೦

ಮೈಸೂರಿನ ಶಾಸನಸಾಂಗದಲ್ಲಿದ್ದ ೨೦೦ ಸ್ಥಾನಗಳಿಗೆ ೧೫೦ ಕಾಂಗ್ರೆಸು ಪ್ರತಿನಿಧಿಗಳೂ ೧೮ ಮಂದಿ ಪ್ರಜಾಸಮಾಜವಾದಿಗಳೂ ಒಬ್ಬ ಕಮ್ಯುನಿಸ್ಟರೂ ೩೫ ಮಂದಿ ಸ್ವತಂತ್ರರೂ ಬೇರೆ ನಾಲ್ವರು ಇತರಪಕ್ಷೀಯರೂ ಆಯ್ಕೆಗೊಂಡಿದ್ದಾರೆ. ಒಟ್ಟು ೧೬ ಮಂದಿ ಮಹಿಳೆಯರು ಚುನಾವಣೆಯಲ್ಲಿ ಗೆದ್ದು ಬಂದಿದ್ದು ಅವರಲ್ಲಿ ೧೬ ಮಂದಿ ಕಾಂಗ್ರೆಸಿನ ಪ್ರತಿನಿಧಿಗಳಾಗಿದ್ದಾರೆ. ಗೆದ್ದು ಬಂದ ಒಬ್ಬನೇ ಒಬ್ಬ ಕಮ್ಯುನಿಸ್ಟ ಸದಸ್ಯರು ಕೋಲಾರದವರು. ಜನಸಂಘ ಮತ್ತಿತರ ಜಾತೀಯವಾದಿ ಪಕ್ಷಗಳು

(ಜನೇ ಪುಟದಿಂದ)

ಳಗಿನ ಮಾತು. ಅಲ್ಲಿ ಮತ್ತೆ ಪ್ರಜಾಪ್ರಭುತ್ವವನ್ನು ನೆಲೆಗೊಳಿಸುವುದೂ ಸಾಧ್ಯವಾದುದಲ್ಲ. ಸೈನ್ಯದಲ್ಲಿ ಮತ್ತು ಸರ್ಕಾರಿ ಯಂತ್ರದಲ್ಲಿ ರಾಜಕೀಯ ಪಕ್ಷಗಳು ಪ್ರವೇಶಿಸಿ ತಮ್ಮ ವರ್ಚಸ್ಸನ್ನು ತೋರಿಸಿದ್ದಾದರೆ, ಮತ್ತೆ ಆ ದೇಶದಲ್ಲಿ ಪ್ರಜಾಸ್ವಭುತ್ವ ಪದ್ಧತಿ ಉಳಿಯಲಾರದು; ಬಾಳಲಾರದು. ಕೇರಳದ ಕಮ್ಯುನಿಸ್ಟರು ನಿಜವಾಗಿ ಆಸಕ್ತಿ ತೋರಿಸಿ ಮಾಡುವ ಕೆಲಸ ಜನಹಿತವಲ್ಲ—ಈ ತಂತ್ರವನ್ನು ಎಂದರೆ ಅದು ಸುಳ್ಳಾಗಲಾರದೆಂದು ನಮಗೆ ತೋರುತ್ತದೆ. ಈ ತಂತ್ರ ವಿಫಲವಾಗಲಿ ಬೇಕೆದ್ದರೆ, ಪ್ರತಿಪಕ್ಷದ ಸ್ಥಾನದಲ್ಲಿರುವ ಕಾಂಗ್ರೆಸು ಮತ್ತು ಪ್ರಜಾಸಮಾಜವಾದಿಗಳೂ ಪ್ರಜಾಪ್ರಭುತ್ವವಾದಿ ಜನರೂ ಕಣ್ಣಿಗೆ ಎಣ್ಣೆಯನ್ನು ಹಾಕಿಕೊಂಡು ಸರ್ಕಾರಿ ತೆರೆಯ ಮರೆಯಲ್ಲಿ ನಡೆಯುವ ವ್ಯವಹಾರಗಳನ್ನು ನಿರೀಕ್ಷಿಸುತ್ತಿರಬೇಕಾಗಿದೆ; ಎಚ್ಚರಿಕೆಯಿಂದಿದ್ದು ಕಮ್ಯುನಿಸ್ಟರು ಸರ್ಕಾರಿ ಯಂತ್ರದಲ್ಲಿ ಕಮ್ಯುನಿಸಂ ಬೀಜಾರೋಪಣೆಯನ್ನು ಮಾಡದಂತೆ ನೋಡಿಕೊಳ್ಳಬೇಕಾಗಿದೆ. ಇದೊಂದಾದರೂ ಸತ್ಪರಿಣಾಮವನ್ನು ಕೊಟ್ಟೀತೆ? ಕೊಡಲಿ ಎಂದು ನಾವು ಹಾರೈಸುತ್ತೇವೆ! ಆದರೆ ಈ ಹಾರೈಕೆಯ ನಡುವೆಯೂ ನಮ್ಮನ್ನು ಸಂಶಯ ಬಿಟ್ಟಿಲ್ಲವೆನ್ನುವುದು ಸತ್ಯ. ಒಟ್ಟಾರೆ, ಕೇರಳದ ಜನತೆ ಕಮ್ಯುನಿಸ್ಟರನ್ನು ಪಟ್ಟ ಕ್ಕೇರಿಸಿ, ಪ್ರಜಾಪ್ರಭುತ್ವದ ವೈಫಲ್ಯಕ್ಕೆ ನೊಂದಲಿನೇಟು ಕೊಟ್ಟರೂ; ಎಲ್ಲವೂ ಆತ್ಮಘಾತಕ ಕೃತ್ಯವನ್ನೆಸಗಿದರು. ರಾಷ್ಟ್ರಕ್ಕೂ ಒಳ್ಳೆಯದನ್ನು ಮಾತಿಲ್ಲ. ಇದು ನಮಗೆ ತೋರುವ ವಿಚಾರ.

ಬೇಳ ಹೆಸರಿಲ್ಲದಂತೆ ದುರ್ಗತಿಗೆ ಈಡಾಗಿವೆ.

ಸಚಿವರುಗಳ ಸೋಲು

ಮೈಸೂರಿನ ಮಂತ್ರಿಮಂಡಳದಲ್ಲಿ ೧೨ ಮಂದಿ ಸದಸ್ಯರಿದ್ದು, ಅವರಲ್ಲಿ ಶ್ರೀ ಎ. ಬಿ. ಶೆಟ್ಟಿಯವರು ಚುನಾವಣೆಗೆ ನಿಂತಿರಲಿಲ್ಲ. ನಿಂತ ೧೧ ಮಂದಿಯಲ್ಲಿ ಶ್ರೀಗಳಾದ ಎಂ. ವಿ. ರಾಮರಾವರೂ ಜಗನ್ನಾಥರಾವ ಚಂಡರಕಿಯವರೂ ಸೋತಿದ್ದಾರೆ. ಶ್ರೀ ಕೆ. ಹನುಮಂತಯ್ಯನವರ ಹಾಗು ಆ ಬಳಿಕ ಶ್ರೀ ಕಡಿದಾಳ ಮಂಜಪ್ಪನವರು ಮಂತ್ರಿಮಂಡಳದಲ್ಲಿ ಮಂತ್ರಿಗಳಾಗಿದ್ದ ಶ್ರೀಗಳಾದ ಎ. ಜಿ. ರಾಮಚಂದ್ರರಾಯರೂ ಎಚ್. ಸಿದ್ಧ ವೀರಪ್ಪನವರೂ ಟಿ. ಜೆನ್ನಯ್ಯನವರೂ ಚುನಾವಣೆಯಲ್ಲಿ ಸೋತಿದ್ದಾರೆ. ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಎಸ್. ಜೆನ್ನಯ್ಯ ಸಹ ದಂಗೆಎದ್ದ ಕಾಂಗ್ರೆಸಿಗರೆದುರು ಸೋತಿರುವರು. ಆದರೆ ಕರ್ನಾಟಕ ಪ್ರದೇಶ ಹಾಗು ಹೈದರಾಬಾದ ಕರ್ನಾಟಕದ ಕಾಂಗ್ರೆಸು ಅಧ್ಯಕ್ಷರುಗಳಾದ ಶ್ರೀ ಜೆನ್ನಬಸಪ್ಪ ಅಂಬಲಿ ಹಾಗು ಶ್ರೀ ಅಣ್ಣಾರಾವ ಗುಣಮುಖಿಯವರು ಗೆದ್ದು ಬಂದಿದ್ದಾರೆ.

ಪ್ರತಿಪಕ್ಷ

ಅಂತೂ ಮೈಸೂರು ರಾಜ್ಯವು ಪುನಃ ಕಾಂಗ್ರೆಸು ರಾಜ್ಯವಾಗಿ ಜನರಿಂದ ಘೋಷಿಸಲ್ಪಟ್ಟಿದೆ. ಪ್ರತಿಪಕ್ಷವಾಗಿ ಕೆಲಸ ಮಾಡಬಹುದಾದುದೆಂದರೆ ಪ್ರಜಾ ಸಮಾಜವಾದಿ ಪಕ್ಷ. ಆದರೆ ೧೫೦ ಮಂದಿ ಕಾಂಗ್ರೆಸು ಸದಸ್ಯರೂ ಒಟ್ಟು ೨೦೮ ಸದಸ್ಯರೂ ಇರುವ ಸಭೆಯಲ್ಲಿ ೧೮ ಮಂದಿ ಪ್ರಜಾ ಸಮಾಜವಾದಿಗಳು ಏನು ತಾನೆ ಕೆಲಸ ಮಾಡಿಯಾರು? ಈ ಸಲ ಆವರಿಗೆ ಶ್ರೀ ಇಮಾಮರಂಥ ಕರ್ತೃತ್ವ ಶಾಲಿ ವ್ಯಕ್ತಿಗಳ ಧುರೀಣತ್ವ ಉಳಿದಿಲ್ಲ. ಏಕೆಂದರೆ, ಶ್ರೀ ಇಮಾಮರು ಲೋಕ ಸಭೆಗೆ ಆರಿಸಲ್ಪಟ್ಟಿದ್ದಾರೆ. ನಮ್ಮ ಜಿಲ್ಲೆಯ ಜನರೆ ಮುಂದೆ ನಾವು ಪ್ರಜಾ ಸಮಾಜವಾದಿಗಳು ಯಾವುದೇ ಅನುಕೂಲ ಸ್ಥಾನವನ್ನು ಹೊಂದಲಾರೆವೆಂದು ನಿವೇದಿಸಿಕೊಂಡಾಗ, ಬೇರೆ ಕಡೆಯ ಜನರು ಆದರಲ್ಲಿ ನಂಬಿಕೆಯನ್ನಿಟ್ಟರೂ ಉಡುಪಿ ಮತ್ತು ಕುಂದಾಪುರದ ಜನರು ಭರವಸೆ ತೋರಿಸಲಿಲ್ಲ. ಆದರೆ, ಆದೇ ಉಡುಪಿಯಲ್ಲಿ ಗೆದ್ದು ಬಂದ ಪ್ರಜಾ ಸಮಾಜವಾದಿ ಉಮೇದ್ವಾರರು "ಪ್ರಬಲವಾದ ಕಾಂಗ್ರೆಸಿನೆದುರು ಎಲ್ಲೂ ಅಲ್ಪ ಸಂಖ್ಯೆಯಲ್ಲಿ ಗೆದ್ದು ಹೋಗುವ ನಾವು ನಿಮಗಾಗಿ ಎಷ್ಟು ಕೆಲಸ ಮಾಡಬಹುದೋ ನೀವೇ ಆಲೋಚಿಸಿರಿ" ಎಂದು ಸಾರ್ವಜನಿಕ ಸಭೆಯಲ್ಲಿ ಅಭ್ಯರ್ಥಿಸಿದರು. ಆದರಾದರೂ ಈ ಮಾತನ್ನು ಚುನಾವಣೆಯ ಪ್ರಚಾರ ಕಾಲದಲ್ಲಿ ಹೇಳುವಷ್ಟು ಪ್ರಾಮಾಣಿಕರಾಗಿರಲಿಲ್ಲ!

ಕಾಶ್ಮೀರ

ಕೇಂದ್ರ ಸರ್ಕಾರವನ್ನು ಕಾಶ್ಮೀರದ ಸಮಸ್ಯೆಯೊಂದು ತಲೆತಿನ್ನತೊಡಗಿದೆ. ಸಂಯುಕ್ತ ರಾಷ್ಟ್ರಸಂಘದ ಪ್ರತಿನಿಧಿ ಶ್ರೀ ಯಾರಿಂಗರು ಕರಾಚಿಯ ಸಂದರ್ಶನವನ್ನು ಮುಗಿಸಿ ಹೊನವೆಹರಿಗೆ ಬಂದಿದ್ದಾರೆ. ಅವರ ಸಂಧಾನವು ಯಶಸ್ವಿಯಾಗುವಂತೆ ಕಾಣುವುದಿಲ್ಲ. ಏಕೆಂದರೆ, ಪಾಕಿಸ್ತಾನವು ಯುದ್ಧ ಮುಖದಿಂದಲ್ಲದೆ ಬೇರೆ ಯಾವ ಬಗೆಯಿಂದಲೂ ಈ ಸಮಸ್ಯೆ ಬಿಡಿಸಲ್ಬಡದೆಂಬಂತಹ ದುರ್ಭೋಧನೆಯನ್ನು ತನ್ನ ಪ್ರಜೆಗಳಿಗೆ ಕೊಡುತ್ತಿದೆ. ಜನಮತ ಗಣನೆಯು ಅವ್ಯವಹಾರ್ಯವಾದ ಸೂಚನೆಯಾಗಿ ಪರಿಣಾಮಿಸಿದೆ ಪಕ್ಷದಲ್ಲಿ ಯುದ್ಧವೇ ಗತಿ ಎಂದು ಅದು ಬೊಬ್ಬಿಡುತ್ತದೆ. ಜನಮತಗಣನೆಯು ಪ್ರಶ್ನೆ ಈಗ ಉಳಿದಿಲ್ಲವೆಂದು ೧೯೫೩ನೇ ಇಸವಿಯಷ್ಟು ಹಿಂದೆಯೇ ಸಂಯುಕ್ತ ರಾಷ್ಟ್ರಸಂಘ ನೇಮಿಸಿದ್ದ ಪ್ರಾತಿನಿಧಿಕ ನಿಯೋಗ ಅಭಿಪ್ರಾಯ ಪಟ್ಟಿತ್ತೆಂದಮೇಲೆ ಯಾರಿಂಗರು ಏನು ಮಾಡಿಯಾರೊ, ನಮಗೆ ತಿಳಿಯದು.

ಉಡುಪಿ

ಲಾ ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ಅಂಗೀಕಾರ— ಮಣಿಪಲದ ಎಕ್ಯಾಡೆಮಿ ಆಫ್ ಜನರಲ್ ಎಜ್ಯುಕೇಶನ್ ಸಂಸ್ಥೆಯವರು ಸದ್ಯದೇ ಸ್ಥಾಪಿಸಲಿರುವ ಇಂಜಿನಿಯರಿಂಗ್ ಮತ್ತು ಲಾ ಕಾಲೇಜುಗಳಿಗೆ ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟಿನವರು ಬರುವ ಜೂನಿನಿಂದಲೇ ಅಂಗೀಕಾರವನ್ನೂ ಮನ್ನಣೆಯನ್ನೂ ಕೊಡುವ ನಿರ್ಧಾರವನ್ನು ಕೈಗೊಂಡಿರುವರೆಂದು ತಿಳಿದು ಬರುತ್ತದೆ. ಕಾಲೇಜು ಸ್ಥಾಪನೆಗಾಗಿ ಜಾಗ ಮೊದಲಾದ ವ್ಯವಸ್ಥೆಯವರು ಈಗಾಗಲೇ ಕಾರ್ಯಪ್ರವೃತ್ತರಾಗಿರುವರೆಂದೂ ಕೇಳುತ್ತೇವೆ.

ಬಜೆಟ್ ಮಂಜೂರಾತಿ—ಉಡುಪಿ ನಗರ ಸಭೆಯ ವಿಶೇಷ ಸಭೆಯು ತಾ. 19 ರಲ್ಲು ಸಂಜೆ ಸಭಾಪತಿ ಶ್ರೀ. ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಿಗಿತು. ಕೆಳಗಿನ 1956-57ರ ತಿದ್ದಿದ ಮತ್ತು 1957-58ರ ಅಂದಾಜು ಬಜೆಟ್ ಕುರಿತು ಸುದೀರ್ಘ ಚರ್ಚೆ ನಡೆದು ಕೊನೆಗೆ ಮಂಜೂರಾಯಿತು. ಹೊಸ ವರ್ಷದ ಅಂದಾಜು ಪಟ್ಟಿಯಲ್ಲಿ ಕಾಣಿಸಲಾದ ಎರಡು ಗುಮಾಸ್ತರ ನೆಲೆಗಳನ್ನು ಮಾತ್ರ ಮಂಜೂರು ಮಾಡಲಾಗಿಲ್ಲ. ಡಾ। ಪಿ. ಜೆ. ಆಚಾರ್ಯರರೆ ಸೂಚನೆ, ಶ್ರೀ ನಿತಾರಾಮ ಕಾವ ತರ ಅನುಮೋದನೆಯಂತೆ, ನಗರದ ರಸ್ತೆಗಳಿಗೆಲ್ಲಾ ದಾಮರು ಹಾಕಲು ಮೈಸೂರು ಸರಕಾರದಿಂದ ಒಂದು ಲಕ್ಷ ರೂಪಾಯಿ ಸಾಲ ಪಡೆಯಲು ಕೌನ್ಸಿಲಿನ ನಿರ್ಧಾರವಾಯಿತು. ಪ್ರತಿ ವರ್ಷವೂ ರಸ್ತೆಗಳಿಗೆ ಹಾಕಿದಿಸಿರುವ ಹಣವನ್ನು ಸರಕಾರದ ಸಾಲ ಸಂದಾಯಕ್ಕೆ ಉಪಯೋಗಿಸಿಕೊಳ್ಳುವುದೆಂದು ತೀರ್ಮಾನಿಸಲಾಯಿತು.

ನಗರಸಭೆಯ ವಿಶೇಷ ಸಭೆಯು—ತಾ.25ರಲ್ಲು ಸಭಾಪತಿ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಿಗಿತು. ಸರಕಾರದ ಮುಂಜೂರಾತಿ ನೀರೀಕ್ಷಿತೆಯೇ ಲಾಟಾನು ದೀಪ ಬಂದರ 0-1-6ಯ ಟೆಂಡರನ್ನು ಸ್ವೀಕರಿಸಲಾಯಿತು.

ಬಳಿಕ ಸಾಮಾನ್ಯ ಸಭೆಯು ಜರಿಗಿತು. ಸ್ವಾತಂತ್ರ್ಯ ದಿನಾಚರಣೆ ಸಾಲರ್ ಶಿಪ್ 1956-57ನೆ ವರ್ಷದ ಬಾಬ್ತು ಕ್ರೈಸ್ಟ್ ದಿ ಕಿಂಗ್ ಹೈಸ್ಕೂಲಿನ IV ಫಾರ್ಮ್ ವಿದ್ಯಾರ್ಥಿ ಶ್ರೀಯು. ಶ್ರೀಕಾಂತ್ ಮಯ್ಯರಿಗೆ ಕೊಡುವುದೆಂದಾಯಿತು. ಕೆಂಪೋಷ್ಟು ಗೊಬ್ಬರ, ಸೊಳ್ಳೆ ಕಾಟ ನಿರೋಧಕಾರ್ಯಗಳಿಗಾಗಿ ಮುಜದೂರರ ನೇಮಿಸ ಬಸುದೆಂದಾಯಿತು. ಬೈಲೂರು ವಾರ್ಡಿನ ಅಬೆವೂರು—ಚಿಟ್ಪಾಡಿ ರಸ್ತೆಯು ಶ್ರೀ ಕೃಷ್ಣ ಸೂರ್ಯ ಭಟ್ಟರ ಅಂಗಡಿಯ ಸಮೀಪ ಅಗಲ ಕರಿಸಾದುದನ್ನು ಅಗಲ ಮಾಡಿಬೇಕೆನ್ನುವ ಶ್ರೀ ಎಚ್. ವೆಂಕಟೇಶ ನಾಯ್ಕರ ನಿರ್ಣಯ ವಾಯಿತು.

ಉಡುಪಿ ಕೋರ್ಟು ಧಾರಣೆ— ಕಜೆ ಅಕ್ಕಿ ಮುಡಿಗೆ ರೂ. 18/-, ಕೊಳಸಲು ಅಕ್ಕಿ ಮುಡಿಗೆ ರೂ. 18.8.0, ಮುಸ್ಕತಿ ಅಕ್ಕಿ ಮುಡಿಗೆ ರೂ. 19/-, ಬೆಳ್ಳಿಗೆ ಅಕ್ಕಿ ಮುಡಿಗೆ ರೂ. 20/-, ದುಬಯಿ ಬೆಳ್ಳಿಗೆ ಅಕ್ಕಿ ಮುಡಿಗೆ ರೂ. 21/-, ಉದ್ದು ಮುಡಿಗೆ ರೂ. 20/-, ತೆಂಗಿನಕಾಯಿ ಮಣಕ್ಕೆ ರೂ. 26/-, ತೆಂಗಿನ ಕಾಯಿ ಸೂರಕ್ಕೆ ರೂ. 16/-, ಉಂಡಿಗೆ 1000ಕ್ಕೆ ರೂ. 33/ , ಕೋಳಿಗೆ ರೂ. 2—8—0.

ಎಲಿಯಾಳು- ಕಾರ್ಕಳ ತಾಲೂಕು ಎಲಿಯಾಳು ಜೋರ್ಡು ಎಲಿಮೆಂಟರಿ ಶಾಲಾ ಹೊಸ ಕಟ್ಟೋಣದ ಕಾರ್ಯಕಾರೀ ಸಮಿತಿ ಸಭೆಯು ತಾ. 15ರಂದು ಬೈಲೂರು ಡಾ. ಎ. ಕೆ. ಎಲ್. ರಾಯರ ಅಧ್ಯಕ್ಷತೆಯಲ್ಲಿ ಜರಿಗಿ, ಹೊಸ ಕಟ್ಟೋಣ ಕಟ್ಟಿಸುವರೆ ಶ್ರೀಗಳಾದ ಎಲಿಯಾಳು ಪಟೇಲ್ ಕಿಟ್ಟು ನೂಜ (ಅಧ್ಯಕ್ಷರು), ಕೆ. ಸಂಜೀವ ನೂಜ (ಉಪಾಧ್ಯಕ್ಷರು), ಕೆ. ಕೋಮುಲಾಕರ ನೆಟ್ಟಿ (ಕಾರ್ಯದರ್ಶಿ), ಎನ್. ಎಸ್. ನೆಟ್ಟಿ (ಕೋಶಾಧಿಕಾರಿ) ಇವರುಗಳಿರುವ ಸಮಿತಿ ರಚಿಸಲಾಯಿತು. ಶಾಲಾ ಹೆಡ್ಮಾಸ್ತರ್ ಶ್ರೀ ಎನ್. ಅಚ್ಚು ಪೂಜಾರಿಯವರು ಧನ್ಯವಾದಗಳನ್ನಿತ್ತರು.

ಕುಂದಾಪುರ ಡಿ.ಮು. ಕೋರ್ಟಿನಲ್ಲಿ

O P. 10/1957.

ಬಣ್ಣು ಸೆಟ್ಟಿ. ಮೃತ, ವೆಂಕಟಯ್ಯ ಸೆಟ್ಟಿ ಮಗಳು, ಕುಂದಾಪುರ ತಾಲ್ಲೂ ಕೆಮೂರು ಗ್ರಾಮ —ಅರ್ಜಿದಾರರು.

1 ಸೂಕಮ್ಮ ಸೆಟ್ತಿ, 2 ತುಂಗೆನ್ನು ಸೆಟ್ತಿ, 3 ಪುಟ್ಟಮ್ಮ ಸೆಟ್ತಿ ಸುಬ್ಬಕ್ಕ ಸೆಟ್ತಿರ ಮಗಳು. —ಎದ್ರಿರು.

ಕುಂದಾಪುರ ತಾಲೂಕು ವಂಡ್ಸೆ ಗ್ರಾಮದ ಅತ್ಯಕೊಡ್ಲು ಸರ್ವೆ ಎದ್ರಿಗೆ ವಟ ಇತರೆ ಸಮಸ್ತರೀಗೆ ಸಹಾ ತಿಳಿಯಪಡ್ಸಿದ್ದು.

ಅರ್ಜಿದಾರಳ ತಂದೆ ಸ್ವರ್ಗತ ವಂಕಟಯ್ಯ ಸೆಟ್ಟಿಯು ಬರೆದಿಟ್ಟ ವಿಲ್ಲಿನಾನುಮೆಸ್ಸಕಾರ ಮೇಲಿನ ಆರ್ಜಿಯಲ್ಲಿ ಕಾಣಿಸಿದ ಹಿಂದೂಸ್ತಾನ್ ಕೋವಪರೇಟಿವ್ ಇನ್ಸೂರೆನ್ಸ್ ಸೊಸೈಟಿಯಲ್ಲಿ ಪೊಲಿಸಿ ನಂಬ್ರ 109281 ನೇಗೆ ಮೂಡಿದ ಇನ್ಸೂರೆನ್ಸ್ ಬಾಬ್ತು ಸಿಗತಕ್ಕ ಎ ವೇಜು ರೂಪಾಯಿ 534—3—0 ನ್ನು ಅರ್ಜಿದಾರಳು ಪಡಕೊಳ್ಳುವದೇ ಅರ್ಜಿದಾರಳ ಹೆಸರಿಗೆ ವಾರೀಸು ಸರ್ಟಿಫಿಕೇಟು ಕೊಡಿಸ ಬೇಕೆಂತ ವಗೈರೆ ಕಾಣ್ಸೆ ಪಾಕ್ಸು ಮೂಡಿದ ಸದ್ರಿ ಅರ್ಜಿ ತಾ. 12.4.1957ಕ್ಕೆ ಇಟ್ಟಿದೆ. ಆ ಕುರಿತು ಅಕ್ಷೇಪ ಇದ್ದವರು ಸದ್ರಿ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಹೇಳ್ಕಾಣಿಸಿಕೆ ಕೋರ್ಟಮುಂದೆ ಪಾಜರ್ತಿ ತಿಳಿಸತಕ್ಕದ್ದು.

G. Kushala Hegde B.A.LL.B
Advocate for Pltr.

ಮೊಕ್ಕಾಂ ಕುಂದಾಪುರ ತಾ. 25.3.57.

ಇನ್ನೂ ಚಂದಾಹಣವನ್ನು

ಕಳುಹಿಸಿಲವರೆ: ದಯವಾಗಿ ಕೂಡಲೇ ಕಳುಹಿಸಿಕೊಡುವಂತೆ ಇನ್ನೊಮ್ಮೆ ಕೇಳಿಕೊಳ್ಳುತ್ತೇವೆ. ಅಂತೂ ಸಕಾಲದಲ್ಲಿ ಚಂದಾ ಪಾವತಿಯಾಗದಿದ್ದರೆ ನಾವು ಅನಿವಾರ್ಯವಾಗಿಳಕುಹಿಸುವ ವಿ. ಪಿ. ಪಿ. ಯನ್ನಾದರೂ ಪಡಕೊಳ್ಳುವಂತೆ ವಿಜ್ಞಾಪಿಸುತ್ತೇವೆ.

ನೆನೇರ್ಜ್, ನವಯುಗ.

ನಿಮ್ಮ ಆರ್ಥಿಕ ಸಮಸ್ಯೆಗಳಿಗೆ ಸಲಹೆಗಳು ಬೇಕಾದಿದ್ದಾಗ, ಅವುಗಳನ್ನು ಕೊಡಲು ಸದಾ ಸಿದ್ಧರಿದ್ದೇವೆ!

ಮೈಸೂರು, ಮದರಾಸು, ಆಂಧ್ರ ಪ್ರದೇಶ, ಕೇರಳ ಮತ್ತು ಮುಂಬಯಿ ಸಂಸ್ಥಾನಗಳಲ್ಲಿ ಒಟ್ಟು **46** ಶಾಖೆಗಳಿವೆ. ಸಕಲ ವಿಧವ ಬೇಂಕಿಂಗ್ ವಹಿವಾಟುಗಳನ್ನು ಕೈಗೊಳ್ಳುತ್ತೇವೆ. ಗಿರಾಕಿಗಳ ತೃಪ್ತಿಯೇ ನಮ್ಮ ಧ್ಯೇಯ!

50 ವರುಷಗಳಲ್ಲಿ ನಾವು ಗಳಿಸಿದ ನಮ್ಮ ಅತ್ಯಮೂಲ್ಯ ಬೇಂಕಿಂಗ್ ಅನುಭವದ ಪ್ರಯೋಜನವನ್ನು ಇಂದಿನಿಂದಲೇ ಪಡೆಯಿರಿ!!

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

THE CANARA BANKING CORPORATION LIMITED

ಸ್ವೀಕಾರ

ಹೇಮಲಂಬಿ ಸಂವತ್ಸರದ ಪಂಚಾಂಗಗಳು—ಉಡುಪಿ ಪಂಚಾಂಗ-

ಶ್ರೀ ಅತ್ತೂರು ವಾಸುದೇವ ಉಡುಪರ ಪುತ್ರ ಶ್ರೀ ಲಕ್ಷ್ಮೀನಾರಾಯಣ ಉಡುಪರಿಂದಲೂ ಬಡಾನಿಡಿಯೂರು ಶ್ರೀ ಕೃಷ್ಣದಾಸ ಭಟ್ಟರಿಂದಲೂ ಗುಣಿಸಿ, ಅಲೆವೂರು ಶ್ರೀ ಸೀತಾರಾಮಾಚಾರ್ಯ ಮತ್ತು ಅತ್ತೂರು ಶ್ರೀ ವಾಸುದೇವ ಉಡುಪರಿಂದಲೂ ಪರಿಶೋಧಿಸಿ, ಕೊಯಮುತ್ತೂರಿನ 'ಶ್ರೀ ರವಿಪ್ರಸಾದ ಜ್ಯೋತಿಷಾಲಯ'ದಿಂದ ಪ್ರಕಟವಾದುದು. ಬೆಲೆ ೦.೮-೦.

ಶ್ರೀ ಕೃಷ್ಣ ಪಂಚಾಂಗ ಉಡುಪಿ-

ಶ್ರೀ ಸಾರಂಗಳ್ಳಿ ವಿಷ್ಣುಮೂರ್ತಿ ಆಡಿಗರ ಮಗ ಶ್ರೀ ಲಕ್ಷ್ಮೀನಾರಾಯಣ ಆಡಿಗರಿಂದ ಗುಣಿಸಿ ಸರಿಶೋಧಿಸಲ್ಪಟ್ಟು ಉಡುಪಿ ಪೈಪಿನ್ ಕಂ ಪ್ರೆಸ್ಸಿನಿಂದ ಪ್ರಕಟವಾದುದು. ಬೆಲೆ ೦.೬-೦.

ಶಾಸ್ತ್ರಸಿದ್ಧ ಶ್ರೀ ಕೃಷ್ಣ ಪಂಚಾಂಗ

ಪಟ್ಟದ ಶ್ರೀ ಶರಿಂಕ ಕೃಷ್ಣ ಬಸ್ತಿವಂತಾಯರ ಪ್ರಧಾನ ಸಂಪಾದಕತ್ವ ಮತ್ತು ಮಂಗಳೂರು ಶ್ರೀ ರಾಮಚಂದ್ರಾಚಾರ್ಯರ ಸಂಪಾದಕತ್ವ ದಲ್ಲಿ 'ವೈಷ್ಣವರತ್ನ ಜ್ಯೋತಿರ್ವಿದ್ಯಾ ಮಾರ್ತಾಂಡ' ಶ್ರೀ ಬೇಳ ಯಜ್ಞೇಶ್ವರ ಜೋಯಿಸರಿಂದ ಪರಿಶೋಧಿಸಲ್ಪಟ್ಟ ಪ್ರಕಟವಾದುದು. ಬೆಲೆ ೦-೬-೦.

ಶ್ರೀ ಭುವನೇಶ್ವರೀ ಪಂಚಾಂಗ-

ವೈವಜ್ಞ ಭೂಷಣ 'ಜ್ಯೋತಿರ್ವಿದ್ವಾನ್' ಬ್ರಹ್ಮಶ್ರೀ ಶೇಷ ಶಾಸ್ತ್ರೀ ಹೆಬ್ಬಾಳಿ ಸುರಪುರ, ಇವರಿಂದ ರಚಿಸಲ್ಪಟ್ಟು, ಆರ್ಯವೈಶ್ಯ ಸಂಘ ರಂಗಂಪೇಟೆ (ಸುರಪುರ), ಗುಲಬುರ್ಗಾ ಜಿಲ್ಲಾ, ಅವರಿಂದ ಪ್ರಸಿದ್ಧಿಸಲಾದುದು. ಬೆಲೆ ೦-೧೨-೦.

ನಿತ್ಯೇಷ ಮಾಹಿತಿಗಳಿಂದೊಡಗೂಡಿರುವ ಮೇಲಿನ ಪಂಚಾಂಗಗಳೆಲ್ಲವೂ ಗ್ರಾಹ್ಯ ಯೋಗ್ಯ ಸಂಗ್ರಾಹ್ಯವಾಗಿವೆ.

ಹೊಸ ಪತ್ರಿಕೆ—ಹೊಸ ಬೆಳಕು-

ಪಿ.ಬ್ಲಳಿಯಿಂದ ಹೊರಡುವ ಪಾಕ್ಷಿಕ ಪತ್ರಿಕೆ. (ಕ್ರೌನ್ ¼ಆಕಾರ 15 ಪುಟಗಳು) ಬೆಲೆ ೦—೧—೬, ಸಂಪಾದಕರು:- ಶ್ರೀಗಳಾದ ಎಸ್. ಪಿ. ಲಕ್ಷ್ಮೀಶ್ವರ ಮತ್ತು ಮಧುವನ್ ಬೋಟೆ.

'ಹೊಸ ಬೆಳಕು' ಹೊಸ ಆಕರ್ಷಣೆಗಳಿಂದ ಪ್ರಗತಿಕರ ಸ್ವಾತಂತ್ರ್ಯಾದ ಧ್ಯೇಯವಿಗೆಯೊಗಿ ಎಂದು ಆಶಿಸುತ್ತೇವೆ.

ಮಾಧವಿ- ಬೊಂಬಾಯಿಯ ಮದರ್ ಇಂಡಿಯಾ ಫ್ರೀ ನೈಟ್ ಸ್ಕೂಲಿನ ಶ್ರೀ. ಕೆ. ಎಸ್. ರಾವ್‌ರ ಮುಖ್ಯ ಸಂಪಾದಕತ್ವ ದಲ್ಲಿ ಪ್ರಕಟವಾದ ತೃತೀಯ ವಾರ್ಷಿಕ ಸಂಚಿಕೆ. ಇದರಲ್ಲಿ ಹಲವಾರು ಉಪಯುಕ್ತ ಲೇಖನಗಳಿದ್ದು ಸಂಪಾದಕ ಮಂಡಲಿಯ ಸಾಹಸವು ತ್ವಸ್ತುತ್ಯರ್ಹವಿದೆ.

ವರದಿಗಳು

ಬೊಂಬಾಯಿಯ ಗಿಂಗಯೆ ಸ್ಮಾರಕ ಫಂಡಿನ— 1956ನೆ ಡಿಸಂಬರ್ ತಾ. 31ಕ್ಕೆ ಅಂತ್ಯವಾದ ಹದಿನಾಲ್ಕನೇ ವಾರ್ಷಿಕ ವರದಿ.

ಮುಂಬಯಿ ರಾಜಾಪುರ ಸಾರಸ್ವತ ಸಂಘದ — ತಾ 31.12.1956 ಕ್ಕೆ ಅಂತ್ಯವಾದ ಸಪ್ತಮ ವಾರ್ಷಿಕವರದಿ.

ದ. ಕ. ಜಿಲ್ಲೆಯಿಂದ ಉದ್ಯೋಗ ನಿಮಿತ್ತವಾಗಿ ಬೊಂಬಾಯಿಗೆ ಹೋಗಿ ನೆಲೆಸಿಕೊಂಡು ಅಲ್ಲಿ ಸಂಘ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ತಮ್ಮ ಜನ್ಮ ಭೂಮಿಯನ್ನು ಮರೆಯದೆ, ಈ ಜಿಲ್ಲೆಯ ಬಡ ವಿದ್ಯಾರ್ಥಿಗಳಿಗೆ ವಿದ್ಯಾ ವೇತನಾದಿಗಳನ್ನು ಕೊಟ್ಟು ಸಹಕರಿಸುತ್ತ, ಕನ್ನಡ ಸಾಹಿತ್ಯ, ಕಲೆ, ಸಂಸ್ಕೃತಿಗಾಗಿ ಅಲ್ಲಿಯೂ ಮಡಿಯುತ್ತಿರುವುದು ಸಂತೋಷದಾಯಕ.

ಇದೀಗ ಪ್ರಕಟವಾಗಿದೆ

ಶ್ರೀ ವಿ. ಜಿ. ಕೃಷ್ಣಮೂರ್ತಿ, ಬಿ.ಎ. ಅವರ ರಹಸ್ಯಮಯ ರೋಮಾಂಚಕ ಕಾದಂಬರಿ

ಸಮಾಧಿಯ ಸುರಂಗ

ಬೆಲೆ 1 ರೂ.] [ದ್ವಿವರ್ಣ ರಕ್ಷಪತ್ರ

ವಿವರಗಳಿಗೆ

ಗಾಯತ್ರಿ ಪ್ರಕಾಶನ

ಚಾಮುಂಡಿಪುರಂ, ಮೈಸೂರು.

ಕೆಲವೇ ಪ್ರತಿಗಳಷ್ಟೆ

"ಮಂಗಳ" ಎಸ್. ಕವಲಯ್ಯ

ಮಂಗಳೂರು

ಶಾಸನಸಭಾ ಮುಖಂಡರ ಆಯ್ಕೆ

ವಿವಿಧ ಸ್ವಾಂತಗಳ ವಿಧಾನ ಸಭಾ ಮುಖಂಡರ ಆಯ್ಕೆಯು ಮುಂದಿನ ತಿಂಗಳ ತಾ. 16 ರೊಳಗೆ ಪೂರ್ತಿಗೊಳ್ಳಬೇಕೆಂದು ಕಾಂಗ್ರೆಸಿನ ಕೇಂದ್ರ ಪಾರ್ಲಿಮೆಂಟರಿ ಬೋರ್ಡು ತೀರ್ಮಾನಿಸಿರುವುದಾಗಿ ತಿಳಿದುಬರುತ್ತದೆ. 11 ಪ್ರಾಂತಗಳಲ್ಲಿ ಈಗಿನ ಮುಖ್ಯಮಂತ್ರಿಗಳನ್ನೇ ಸಾಧ್ಯವಾದ ಮಟ್ಟಿಗೆ ಆಡಳಿತ ವಹಿಸಿಕೊಳ್ಳುವಂತೆ ನೋಡಿಕೊಳ್ಳುವ ಸಾಧ್ಯತೆಯ ಕುರಿತೂ ವಿಚಾರವಿನಿಮಯಗಳಾಗುತ್ತಿವೆ ಎನ್ನಲಾಗುತ್ತಿದೆ.

ರೋಟರಿ ಕ್ಲಬ್ಬಿನಲ್ಲಿ— ತಾ. 21 ರಲ್ಲು ಮೈಸೂರು ಪ್ರಾಂತದ ಕಂಪೆನಿಗಳ ರಿಜಿಸ್ಟ್ರಾರ್ ಶ್ರೀ ಸಯ್ಯದ್ ಮಹಮ್ಮದ್‌ರವರಿಗೆ ಸತ್ಕಾರವೀಯುವ ಸಮಾರಂಭವು ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು. ಅರಂಭದಲ್ಲಿ ಡಾ. ಕೆ. ಜಾಲಪ್ಪ ಸೆಟ್ಟರಿಂದ ಪ್ರಾರ್ಥನೆಯಾದನಂತರ ಶ್ರೀ ಕೆ. ವಿಶ್ವನಾಥ ಕಾಮತರು ಗತ ಸಭೆಯ ವರದಿಯನ್ನೋದಿದರು. ಮುಖ್ಯ ಅತಿಥಿಯ ತಮ್ಮ ಭಾಷಣದಲ್ಲಿ ಹಿಂದಿನ ಮತ್ತು ಈಗಿನ ಕಂಪೆನಿ ಕಾನೂನುಗಳಲ್ಲಿರುವ ವ್ಯತ್ಯಾಸಗಳನ್ನು ವಿವರಿಸಿ, ಹೊಸ ಕಾನೂನನ್ನು ಇಂಗ್ಲಾಂಡಿನ ಕಂಪೆನಿ ಕಾನೂನಿನ ತಳಹದಿಯ ಮೇಲೆ ದೇಶದ ಆರ್ಥಿಕ ಪುನರ್ರಚನೆಯ ದೃಷ್ಟಿಯಿಟ್ಟುಕೊಂಡು ರಚಿಸಲಾಗಿದೆ ಈಗಿನ ಕಾನೂನನ್ನು ತಿದ್ದುವ ಕಾರ್ಯವನ್ನು ಹೊಸ ಪಾರ್ಲಿಮೆಂಟು ಮಾಡುವ ನಿರೀಕ್ಷೆಯಿದೆ ಎಂದು ಹೇಳಿದರು ಕಂಪೆನಿ ಕಾನೂನನ್ನು ಕಾರ್ಯಗತಗೊಳಿಸುವ ವಿಧಾನ ಇತ್ಯಾದಿಗಳ ಕುರಿತು ವಿವರಿಸುತ್ತಾ, ಡಿ. ಕೆ. ಜಿಲ್ಲೆಯಲ್ಲಿಯು ಇಂಡಿಯಾ ಸ್ವಾರ್ ಕಂಪೆನಿಗಳ ಸೌಕರ್ಯಾರ್ಥಕ್ಕಾಗಿ ಕಂಪೆನಿ ಇಲಾಖೆಯ ಒಂದು ಶಾಖೆಯನ್ನು ಮಂಗಳೂರಲ್ಲಿ ತೆರೆಯುವ ಅವಶ್ಯಕತೆಯಿದೆಯೋ ಎಂಬ ವಿಚಾರವನ್ನು ಪರಿಶೀಲಿಸುವುದು ಅಗತ್ಯವಿದೆ ಎಂದು ಹೇಳಿದರು.

ಕೆನರಾ ಇಂಡಿಸ್ಟ್ರೀಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಇಲ್ಲಿಯ ಸುಂಗಳೂರಿನ ಹಂಪನ ಕಟ್ಟೆಯಲ್ಲಿ ನೂತನವಾಗಿ ರಚಿಸುತ್ತಿರುವ ಕಟ್ಟಡದ ವಿಚಾರದಲ್ಲಿ ರಿಟ್ ಅರ್ಜಿಯೊಂದು ಬೆಂಗಳೂರು ಹೈಕೋರ್ಟಿನಲ್ಲಿ ದಾಖಲಾಗಿತ್ತೆಂಬ ಈ ಅರ್ಜಿಯನ್ನು ತಳ್ಳಿಹಾಕಿದುದರಿಂದ ಈಗ ಕಟ್ಟಡದ ಕೆಲಸ ಭರದಿಂದ ಸಾಗುತ್ತಿದೆ.

ಜಿಲ್ಲಾ ಬೋರ್ಡು ಚುನಾವಣೆ ಬರುವ ಮಾರ್ಚಿಯೊಳಗೆ— ಮೈಸೂರು ರಾಜ್ಯದ ಜಿಲ್ಲಾ ಬೋರ್ಡುಗಳ ಚುನಾವಣೆಯು ಬರುವ ಫೆಬ್ರವರಿ ಅಥವಾ ಮಾರ್ಚ್ ತಿಂಗಳೊಳಗೆ ನಡೆಯಬಹುದಾಗಿ ತಿಳಿದುಬರುತ್ತದೆ.

ಡಾ. ಕೆ. ಕೆ. ಹೆಗ್ಡೆಯವರ ವಿಜಯ— ಕಾರ್ಕಳ ಮತಕ್ಷೇತ್ರದಿಂದ ಮೈಸೂರು ವಿಧಾನ ಸಭೆಗೆ ಕಾಂಗ್ರೆಸ್ ಪಾರಿಯಾಳು ಹಾಗೂ ಜಿಲ್ಲಾ ಬೋರ್ಡು ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರು ತನ್ನ ಪ್ರತಿಸ್ಪರ್ಧಿ ಪ್ರಸ್ತಾ. ಪಕ್ಷದ ಶ್ರೀ ಆರ್. ದೇವರಾಯ ಶೆಣೈಯವರಿಗಿಂತ 10892 ಅಧಿಕ ಮತಗಳನ್ನು ಪಡೆದು ವಿಜಯಿಗಳಾದರೆಂದು ಮತದಾರರ ಸಂಖ್ಯೆ 93788, ಮತದಾನ ಮಾಡಿದವರು 42500, ಡಾ. ಕೆ. ಕೆ. ಹೆಗ್ಡೆ (ಕಾ) 26696, ಶ್ರೀ ಆರ್. ದೇವರಾಯ ಶೆಣೈ (ಪ್ರ. ಸೋ.) 15801, ಅಸಿಂಧು ಮತಗಳು 3.

ಮೈಸೂರು ವಿಧಾನ ಸಭೆಯ ದ. ಕ. ಜಿಲ್ಲೆಯ 14 ಸ್ಥಾನಗಳಲ್ಲಿ 12 ಕಾಂಗ್ರೆಸಿಗರೂ 2 ಪ್ರಜಾಸೋಶಲಿಸ್ಟ್ ಪಕ್ಷಕ್ಕೂ ಸೇರಿರುವರು. ಜಿಲ್ಲೆಯಿಂದ ಲೋಕಸಭಾ ಸ್ಥಾನಗಳಿಗೆಡಕ್ಕೂ ಕಾಂಗ್ರೆಸ್ ಸ್ಥಾನಾರ್ಥಿಗಳೇ ಆರಿಸಲ್ಪಟ್ಟಿರುವರು.

ಕಟಪಾಡಿ— ಶ್ರೀ ಕೆ. ರಂಗಕೋಟಿ, ಇವರ ಪುತ್ರಿ ಕುಮಾರಿ ಮನೋರಮಾ ಮತ್ತು ಉದಿಯಾವರ ದಿವಂಗತ ಮೋನಪ್ಪ ಅಂಡಲರ ಪುತ್ರ ಶ್ರೀ ಯು ವೆಂಕಪ್ಪನವರ ವಿವಾಹವು ತಾ. 17ರಲ್ಲಿ ಉದಿಯಾವರ ದಿಬ್ಬಣ ಮಹಾಜನ ಸಂಘದ ಮಂದಿರದಲ್ಲಿ ಜರಗಿತು. ನೂತನ ದಂಪತಿಗಳಿಗೆ ಶುಭಾಶಯಗಳು.



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಆವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ.ಪಿ.ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ಥಾಪಕರು: ಪೂಂ ಕಂಪೆನಿ, ಮಂಗಳೂರು—1.

ಎಲ್ಲೆಲ್ಲಿ ಏನೇನು?

ಗಂಗೊಳ್ಳಿ— ಸ್ಥಳೀಯ ಎಸ್. ವಿ. ಹ್ಯಾಸ್ಕೂಲಿನ ಮತ್ತು ಎಸ್. ವಿ. ಹಾ ಎ. ಶಾಲೆಗಳ ವರ್ಧಂತಿ ಸಮಾರಂಭವು ತಾ. 17ರಂದು ಶ್ರೀ ಟಿ. ಎ. ಪೈ ಎಸ್. ಎಲ್. ವಿ. ಆನರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಶ್ರೇಷ್ಠಾ ಪೈಯನರು ಬಹುಮಾನವಿತರಣೆ ಮಾಡಿದರು. ಶ್ರೀಗಳಾದ ಕೆ. ಸಂಜೀವ ಭಟ್ ಮತ್ತು ಕೆ. ವೆಂಕಟ್ರಾಯ ಶೆಣೈಯವರು ಎರಡು ಶಾಲೆಗಳ ವರದಿಯನ್ನೋದಿದರು. ಶ್ರೀ ವರದರಾಯ ಪೈಗಳು ವಿದ್ಯಾರ್ಥಿಗಳ ಚಟುವಟಿಕೆಗಳ ವರದಿಯನ್ನೋದಿದರು. ಶ್ರೀ ಎಸ್. ರಂಗನಾಥ ಪೈಗಳು ಸ್ವಾಸ್ಥ್ಯವಚನವನಾಡಿದರು. ಶ್ರೀ ಬಿ. ರಮಣರಾಯ ಶೆಣೈಯವರು ಧನ್ಯವಾದಗಳನ್ನಿತ್ತರು ರಾತ್ರಿ ವಿವಿಧ ವಿನೋದಾವಳಿಗಳಾದುವು.

ಮೂಲ್ಕಿ— ಮೂಲ್ಕಿ ಕ್ಷೇತ್ರದಲ್ಲಿ ಕಾಲೇಜು ಸ್ಥಾಪಿಸುವ ಕುರಿತು ಇದೇ ತಾ. 17 ರಲ್ಲು ಸಾರ್ವಜನಿಕ ಸಭೆಯೊಂದು ಶ್ರೀ ಟಿ. ಎನ್. ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸರ್ಕಲ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಡಾ. ಎಮ್. ರಾಮಪ್ಪ ಕಾಮತ್ ಮತ್ತು ಪಂಚಾಯತ್ ಬೋರ್ಡ್ ಅಧ್ಯಕ್ಷ ಶ್ರೀ ಬಿ. ಭೋಜರಾಯರು ಕಾಲೇಜು ತೆರೆಯುವ ಅವಶ್ಯಕತೆ ಕುರಿತು ಮಾತನಾಡಿದರು. ಸರಕಾರವು ಇಲ್ಲಿ ಕಾಲೇಜನ್ನು ತೆರೆಯುವುದಾದರೆ ಸಾರ್ವಜನಿಕರು ರೂಪಾಯಿ ಒಂದು ಲಕ್ಷಕ್ಕೆ ಕಡಿಮೆಯಿಲ್ಲದಷ್ಟು ಸಹಾಯ ಧನವನ್ನು ಕೊಡುವುದಲ್ಲದೆ, ಅದಕ್ಕೆ ಬೇಕಾದ ಸ್ಥಳ ಹಾಸ್ಟೆಲು ಇತ್ಯಾದಿಯನ್ನು ಒದಗಿಸಿಕೊಡುವು ದಾಗಿ ನಿರ್ಧರಿಸಲಾಯಿತು. ತಾ. 18ರಲ್ಲು ಇಲ್ಲಿಗೆ ಆಗಮಿಸಿದ್ದ ಮೈಸೂರಿನ ವಿದ್ಯಾಖಾತೆಯ ಡಿಸ್ಟ್ರಿಬ್ಯೂಟರ್ಸ್‌ರವರಿಗೆ ಹಿಂದಿನದಿನದ ಅಲ್ಲಾದ ನಿರ್ಣಯವನ್ನು ಒಪ್ಪಿಸಲಾಯಿತು. ಶ್ರೀ ವಿ. ಎಸ್ ಕುಡ್ವ ಮೊದಲಾದವರು ಕಾಲೇಜನ್ನು ಸರಕಾರವೇ ತೆರೆದು ನಡೆಸಿಕೊಂಡು ಬರಬೇಕೆಂದೂ ಸಹಾಜಸರು ಶಕ್ತಿಮೀರಿ ಸಹಾಯವೀಯುವರೆಂದೂ ಹೇಳಿದರು. ಡಿಸ್ಟ್ರಿಬ್ಯೂಟರ್ಸ್‌ರು ಅನುಕೂಲ ಪರಿಣಾಮವನ್ನು ಸರಕಾರಕ್ಕೆ ಒಪ್ಪಿಸುವುದಾಗಿ ತಿಳಿಸಿದರು.

ಸ್ಥಳೀಯ ಸರಕಾರಿ ಹ್ಯಾಸ್ಕೂಲಿನ ಆಟಪಾಟಗಳಲ್ಲಿ ಮತ್ತು ಇತರ ಚಟುವಟಿಕೆಗಳಲ್ಲಿ ಸ್ಪರ್ಧಿಸಿ ಪ್ರಥಮ ಮತ್ತು ದ್ವಿತೀಯ ಸ್ಥಾನಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಡಾ. ಟಿ. ಮಾಧವ ಪೈಗಳು ತಾ 16ರಲ್ಲು ಬಹುಮಾನ ವಿತರಣೆ ಮಾಡಿದರು. ವಿದ್ಯಾರ್ಥಿಗಳು 'ವೀರ ಅಭಿಮನ್ಯು ಮತ್ತು ದಾನಶೂರ ಕರ್ಣ' ಎಂಬ ಯಕ್ಷಗಾನ ಬಯಲಾಟವನ್ನು ಆಡಿ ತೋರಿಸಿದರು. ಒಂದನೆ, ಎರಡನೆ, ಮೂರನೆ ಸ್ಥಾನಪಡೆದ ವೇಶಧಾರಿಗಳಿಗೆ ಬಹುಮಾನವೀಯಲಾಯಿತು.

ದೇಲಂಪಾಡಿ—ಬನಾರಿ ಶ್ರೀ ಗೋಪಾಲ ಕೃಷ್ಣ ಯಕ್ಷಗಾನ ಮಂದಿರದಲ್ಲಿ ತಾ. 15 ರಂದು ಶ್ರೀ ಬಿ. ಎ. ಪಾಟಾಳಿಗಳ ವ್ಯವಸ್ಥಾಪಕತ್ವದಲ್ಲಿ ಸಂಘದ ಅಧ್ಯಕ್ಷ ಶ್ರೀ ಕೇರಿಕ್ಕಾಡು ಮಾಸ್ತರ್ ವಿಷ್ಣುಭಟ್ಟರ ನೇತೃತ್ವದಲ್ಲಿ 'ಗಿರಿಜಾ ಕಲ್ಯಾಣ'ವೆಂಬ ಯಕ್ಷಗಾನ ತಾಳಮದ್ದಳೆಯು ಶ್ರೀಗಳಾದ ಕೀ. ವ. ಕೇಶವನ ನರ ಪಾಡುಗಾರಿಕೆ, ರಮಾನಂದ ಬನಾರಿ, ಟಿ. ಕೆ. ಪರಮೇಶ್ವರ, ಸಂಜೀವ ನಾಯ್ಕ, ಬಾಬು ರೈ, ಮಾಲಿಂಗ ಪಾಟಾಳಿ, ಅನಂತ ರೈ ಮೊದಲಾದವರ ಅರ್ಥವಿವರಣೆಯೊಂದಿಗೆ ಯಶಸ್ವಿಯಾಗಿ ಜರಗಿತು.

ಶಿರ್ವ—ಕಳೆದ ತಿಂಗಳ ತಾ 18ಲ್ಲು ಮಠಗಳೂರು ದಿವ್ಯಜ್ಯೋತಿ ಕರಿಂದಿ ರಿಜಿಸ್ಟ್ರೇಷನ್ ಮಾಡಲ್ಪಟ್ಟ ಶಿರ್ವ ತೆಂಗು ಮತ್ತು ತಾಳೆಬೆಲ್ಲ ತಯಾರಿಸುವವರ ಸಹಕಾರಿ ಸಂಘದ ಉದ್ಘಾಟನೆಯನ್ನು ಇದೇ ತಾ 22ರಲ್ಲು ಶ್ರೀ ಫಾ। ಗೊನ್ಸಾಲ್ವಿಸರು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಕೆ. ದೇವರಾಜ, ಅವರು ವಹಿಸಿದ್ದರು. ಸಹಕಾರಿ ಸಂಘಗಳ ಮೂಲ್ಕಿ ಸರ್ಕಲ್ ಸೀನಿಯರ್ ಇನ್ಸ್‌ಪೆಕ್ಟರ್ ಶ್ರೀ ಎಸ್. ಲಿಂಗಯ್ಯನವರು ಸಂಘದ ಗೊತ್ತುಗುರಿಗಳನ್ನು ವಿವರಿಸಿದರು ಶಿರ್ವ ಪಂಚಾಯತ ಅಧ್ಯಕ್ಷ ಶ್ರೀ ಆನ್ಸಿಯ್ಯ ಹೆಜ್ಜೆ ಮತ್ತು ಶ್ರೀ ಕೆ. ಮುದ್ದು ಸೆಟ್ಟರು ಕಾರ್ಯೋಚಿತ ಮಾತುಗಳನ್ನಾಡಿದರು. ಹೊಸಸಂಘದ ಪಂಚಾಯತರ ಚುನಾವಣೆಯಾಗಿ ಸಭೆ ಕೊನೆಗೊಂಡಿತು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. No. 106/1956

ಕಾರ್ಕಳ ಶ್ರೀ ವೆಂಕಟ್ರಮಣ ದೇವರ ಭಂಡಾರಿ, ಯಿದ್ದು ಮೆನೇಜಿಂಗ್ ಟ್ರಸ್ಟಿಗಳು ಕೆ. ನಾರಾಯಣ ಪ್ರಭು ಸಹಾ —ವಾದಿರು.

ಮತ್ತು

ಕೆ. ಗೋಪಾಲ ಹೆಗ್ಡೆ (ಪಾತಿ) ಸಹಾ —ಪ್ರತಿವಾದಿರು.

26 ರಾಧಾಬ್ಯಾ ಲಕ್ಷ್ಮೀನಾರಾಯಣ ಶೆಣೈಯವರ ಹೆಂಡ್ತಿ ಮತ್ತು ಕೆ. ಗಣಪತಿ ಹೆಗ್ಡೆರ ಮಗಳು—

26 ತಾರಾಬ್ಯಾ, ಕೆ. ಗಣಪತಿ ಹೆಗ್ಡೆರ ಮಗಳು— C/o K. Anandraya Pai, Happy Restaurant, Kalyana Thana District — ಎಂಬಲ್ಲಿರುವವರು ಇವರಿಗೆ ಈ ಮೂಲಕ ತಿಳಿಸುವಂತೇನಂದರೆ.

ಇಮ್ಮಡಿ ಮತ್ತು ಮುಮ್ಮಡಿ ಶ್ರುತಿವಾದಿರ ಹಿರಿಯ ಕೃಷ್ಣ ಶೈ ಎಂಬವರು ತಾ. 11-3-1873 ರಲ್ಲು ರಿಜಿಸ್ಟ್ರೇಷನ ಬರಿದಿಟ್ಟು ಮೀಲು ಮೇರೆಗೆ ವಾದಿರ ದೇವನ ಭಂಡಾರಕ್ಕೆ ಹಕ್ಕು ಸ್ವಾಧೀನ ಕೊಟ್ಟ ದಾನಾ ಆಸ್ತಿಗಳ ಸೈಕ್ಲೋಸ್ಟೈಲ್ ಶಿಮ್ಮಿಲಿನ 2—3ನೇ ಆಲ್ಟಿಮೆಯಗಳ ಆಸ್ತಿಗಳನ್ನು ಸ್ವಾಧೀನತೆ ಪಡೆದೇ ಕೇಳಿ ವಾದಿರು ದಾಕ್ಲು ಮಾಡಿದ ಸದ್ರಿ ದಾನಮಯ ತಾರೀಕು 4—4—1957ಕ್ಕೆ ನಿಮಗೆ ಆಕ್ಷೇರ ನೋಟೀಸಿಗೆ ಇಟ್ಟಿದೆ, ಕಕ್ಷೀಪ ಇದ್ರೆ ಸದ್ರಿ ದಿವಸ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜ್ರಿಯಲ್ಲೆ ಸದ್ರಿ ದಾವಾ ತೀರ್ಮಾನವಾಗುವದು. ಎಂತ ಕೋರ್ಟು ಹುಕ್ಕುಂ ಪ್ರಕಾರ ಈ ಮೂಲಕ ತಿಳಿಸಿಯಿದೆ.

K. V. Kamath,
Advocate for Plaintiffs
Karkala, 25—3—57.

ಶಾಸನಾಂಗ

(೩ನೇ ಪುಟದಿಂದ)

ವುದು. ಗೆಜೆಟ್‌ನಲ್ಲಿ ಮಸೂದೆಯು ಪ್ರಕಟವಾಗಿದ್ದಲ್ಲಿ, ಸಭೆಯು ಅನುಮತಿ ಬೇಡುವ ಆವಶ್ಯಕತೆ ಇರುವುದಿಲ್ಲ ಆಗ ಮಸೂದೆಯನ್ನು ನೇರವಾಗಿ ಸಭೆಯಲ್ಲಿ ತರಲಾಗುವುದು. ಈ ಘಟ್ಟವನ್ನು ಮಸೂದೆಯ ಪ್ರಥಮ ಪಠಣದ (ಫರ್ಸ್ಟ್ ರೀಡಿಂಗ್ ಆಫ್ ದಿ ಬಿಲ್) ಘಟ್ಟವೆಂದು ಕರೆಯಲಾಗುವುದು.

ಇಂಗ್ಲೆಂಡಿನಲ್ಲಿ ಯಾವ ಸದಸ್ಯರಾಗಲಿ ಸಾಕಷ್ಟು 'ನೋಟೀಸ್' ಕೊಟ್ಟನಂತರ ಮಸೂದೆಯನ್ನು ಸಭೆಯ ಮುಂದೆ ತರಬಹುದು. ಸೂಕ್ತಕಾಲದಲ್ಲಿ ಆ ಸದಸ್ಯರು ಮಸೂದೆಯ ಶೀರ್ಷಿಕೆ, ಸದಸ್ಯರ ಹೆಸರು ಮತ್ತು ಮಸೂದೆಗೆ ಬೆಂಬಲವೀಯುವವರ ಹೆಸರುಗಳನ್ನು ಸಭೆಯ ಮುಂದೆ ಮಂಡಿಸುವರು. ಸಭೆಯ 'ಕ್ಲರ್ಕ್' ಮಸೂದೆಯ ಶೀರ್ಷಿಕೆಯನ್ನು ಓದುವರು. ಇದು ಮಸೂದೆಯ ಪ್ರಥಮ ಪಠಣ ಕಾರ್ಯವಾಗುವುದು. ಬ್ರಿಟಿಷ್ ಹೌಸ್ಸ್ ಆಫ್ ಕಾಮನ್ಸ್‌ನಲ್ಲಿ ಮಸೂದೆಯ ಪ್ರಥಮ ಪಠಣವು ಕೇವಲ ಸಂಪ್ರದಾಯವಾಗಿದೆ.

೨ ನಂತರ ಈ ಮಸೂದೆಯನ್ನು ಮುದ್ರಿಸಿ ದ್ವಿತೀಯ ಪಠಣದ ದಿನವನ್ನು ನಿಗದಿಮಾಡಲಾಗುವುದು. ಮಸೂದೆಯನ್ನು ಎರಡನೆಯ ಸಲ ಓದುವಾಗ, ಮಸೂದೆಯ ಸಾಮಾನ್ಯ ತತ್ವಗಳನ್ನು ಕುರಿತು ಚರ್ಚಿಸುವ ಬಗ್ಗೆ ಸದವಕಾಶವನ್ನೀಡಲಾಗುವುದು. ಸಭೆಯು ಈ ತತ್ವಗಳನ್ನು ಅಂಗೀಕರಿಸಿದ್ದಾದರೆ ಮಸೂದೆಯನ್ನು ಎರಡನೆಯ ಸಲ ಓದುವಂತೆ ಭಾವಿಸಲಾಗುವುದು.

ಹೌಸ್ ಆಫ್ ಕಾಮನ್ಸ್‌ನಲ್ಲಿ ಎಲ್ಲ ಮಸೂದೆಗಳೂ ದ್ವಿತೀಯ ಪಠಣಾ ನಂತರ ಸ್ಥಾಯಿ ಸಮಿತಿಯ ಮೂಲಕ ಹೋಗಬೇಕಾಗುವುದು. ಮುಖ್ಯ ಪ್ರಸಂಗಗಳಲ್ಲಿ ಮಸೂದೆಗಳನ್ನು ಇಡೀ ಸಭೆಗೆ ಸಂಬಂಧಿಸಿದ ಸಮಿತಿಗೆ ಕಳುಹಿಸಲಾಗುವುದು. ಈ ಸಮಿತಿಗೆ ಸಭಾಧ್ಯಕ್ಷರು (ಸ್ಪೀಕರ್) ಅಧ್ಯಕ್ಷತೆ ವಹಿಸುವುದಿಲ್ಲ.

ಈ ಸಮಿತಿಯಿಂದ ಬಂದ ಮಸೂದೆಗಳನ್ನು ಸಭೆಯಲ್ಲಿ ಸವಿಸ್ತಾರವಾಗಿ ಪರಿಶೀಲಿಸಲಾಗುವುದು

ಕೊನೆಯದಾಗಿ ತೃತೀಯ ಪಠಣದ ಘಟ್ಟವು ಬರುವುದು. ಇದರ ರೂಪವು ಭಾರತ ಹಾಗೂ ಇಂಗ್ಲೆಂಡ್‌ಗಳೆರಡರಲ್ಲಿಯೂ ಏಕರೀತಿಯದಾಗಿರುವುದು.

ಭಾರತದ ಸಭೆಯಲ್ಲಿ ಮಸೂದೆಯನ್ನು ತರುವ ಬಗ್ಗೆ ಅನುಮತಿ ನೀಡಲು ವಿರೋಧ ಸೂಚಿಸಿದ್ದಾದ, ರೆಸಭಾಧ್ಯಕ್ಷರು ಮಸೂದೆಯನ್ನು ತರುವ ಸದಸ್ಯರೂ ಹಾಗೂ ಅದನ್ನು ವಿರೋಧಿಸುವವರೂ ಸಂಕ್ಷಿಪ್ತವಾಗಿ ಹೇಳಿಕೆಗಳನ್ನು ನೀಡಲು ಅವಕಾಶವೀಯಬಹುದು.

ದ್ವಿತೀಯ ಪಠಣ

ನಮ್ಮಲ್ಲಿ ಮಸೂದೆಯ ದ್ವಿತೀಯ ಪಠಣ ಕಾರ್ಯವನ್ನು ಎರಡು ಘಟ್ಟಗಳಲ್ಲಿ ಕೈಗೊಳ್ಳಲಾಗುವುದು ಮೊದಲನೆಯ ಘಟ್ಟದಲ್ಲಿ ಮಸೂದೆಯ ಬಗ್ಗೆ ಸಾಮಾನ್ಯ ಚರ್ಚೆ ನಡೆಯುವುದು. ಈ ಘಟ್ಟದಲ್ಲಿ ಸಭೆಯು ಮಸೂದೆಯನ್ನು ಸಭೆಯ ಸೆಲೆಕ್ಟ್ ಸಮಿತಿಗಾಗಲಿ ಅಥವಾ ಉಭಯ ಸಭೆಗಳ ಸಂಯುಕ್ತ ಸಮಿತಿಗಾಗಲಿ ಕಳುಹಿಸಬಹುದು ಅಥವಾ ಮಸೂದೆಯನ್ನು ನೇರವಾಗಿ ಪರಿಶೀಲನೆಗೆ ತೆಗೆದುಕೊಳ್ಳಬಹುದು.

'ಸೆಲೆಕ್ಟ್' ಸಮಿತಿಯ ಮಸೂದೆಯ ಒಂದೊಂದು ಕಲಮನ್ನೂ ಪರಿಶೀಲಿಸುವುದು. ಸೆಲೆಕ್ಟ್ ಸಮಿತಿಯು ಮಸೂದೆಯನ್ನು ಪರಿಶೀಲಿಸಿದ ನಂತರ ಸಭೆಗೆ ವರದಿಯೊಂದನ್ನು ಸಲ್ಲಿಸಲಾಗುವುದು. ಈ ವರದಿಗೆ ಸಮಿತಿಯ ಸರವಾಗಿ ಅಧ್ಯಕ್ಷರು ಹಸ್ತಾಕ್ಷರ ಹಾಕುವರು ಹಿಂದೆ ಸೆಲೆಕ್ಟ್ ಸಮಿತಿಯ ಸದಸ್ಯರೆಲ್ಲರೂ ವರದಿಗೆ ಹಸ್ತಾಕ್ಷರ ಹಾಕುತ್ತಿದ್ದರು.

ಸೆಲೆಕ್ಟ್ ಸಮಿತಿಯು ಮಸೂದೆಯ ಬಗ್ಗೆ ವರದಿ ಸಲ್ಲಿಸಿದ್ದನಂತರ ಅಥವಾ ಮಸೂದೆಯನ್ನು ಸೆಲೆಕ್ಟ್ ಅಥವಾ ಸಂಯುಕ್ತ ಸಮಿತಿಗೆ ಕಳುಹಿಸದೆ ನೇರವಾಗಿ ಪರಿಶೀಲನೆಗೆ ತೆಗೆದುಕೊಂಡಾಗ ದ್ವಿತೀಯ ಪಠಣದ ಎರಡನೆಯ ಘಟ್ಟವು ಪ್ರಾರಂಭವಾಗುತ್ತದು. ಈ ಘಟ್ಟದಲ್ಲಿ ಮಸೂದೆಯ ಪ್ರತಿಯೊಂದು ಕಲಮನ್ನೂ ಪರಿಶೀಲನೆಗೆ ತೆಗೆದುಕೊಳ್ಳಲಾಗುವುದು. ಪ್ರತಿಯೊಂದು ತಿದ್ದುಪಡಿಯನ್ನೂ ಮತ್ತು ಪ್ರತಿಯೊಂದು ಕಲಮನ್ನೂ ಸಭೆಯಲ್ಲಿ 'ಓಟಿ'ಗೆ ಹಾಕಲಾಗುವುದು ಬಹುಮತದಿಂದ ಸ್ವೀಕೃತವಾದ ತಿದ್ದುಪಡಿಗಳೂ ಮತ್ತು ಕಲಂಗಳೂ ಮಸೂದೆಯ ಅಂಗವಾಗುವುವು. ಕಲಂಗಳು, ಪರಿಶಿಷ್ಟಗಳು ಅನುಷ್ಠಾನ ಸೂತ್ರ ಮತ್ತು ಸಂಕ್ಷಿಪ್ತ ಶೀರ್ಷಿಕೆಗಳನ್ನು 'ಓಟ್'ಗೆ ಹಾಕಿದ ನಂತರವಷ್ಟೆ ಮಸೂದೆಯ ದ್ವಿತೀಯ ಪಠಣ ಸಮಾಪ್ತಗೊಳ್ಳುವುದು.

ತೃತೀಯ ಪಠಣ

ದ್ವಿತೀಯ ಪಠಣದ ನಂತರ ಮಸೂದೆಯನ್ನು ತಂದ ಮಂತ್ರಿಯೋ ಅಥವಾ ಸದಸ್ಯರು ತೃತೀಯ ಪಠಣದ ಬಗ್ಗೆ ಸಭೆಯಲ್ಲಿ ಮಸೂದೆಯನ್ನು ತರಬಹುದು. ಸಭೆಯು ಮಸೂದೆಯ ಪರವಾಗಿ ಅಥವಾ ವಿರೋಧವಾಗಿ ಸಾಮಾನ್ಯವಾಗಿ ಚರ್ಚೆ ನಡೆಸಬಹುದಾಗಿದೆ.

ಸಾಧಾರಣವಾದ ಮಸೂದೆಯನ್ನು ಅಂಗೀಕರಿಸುವಾಗ ಬಹುಮತ ಸದಸ್ಯರು ಸಭೆಯಲ್ಲಿ ಉಪಸ್ಥಿತರಿರಬೇಕು. ಮತದಾನ ಅವಶ್ಯಕವಾಗುವುದು. ಸಂವಿಧಾನವನ್ನು ತಿದ್ದುಪಡಿಮಾಡುವ ಸಂಬಂಧವಾದ ಮಸೂದೆಯನ್ನು ಅಂಗೀಕರಿಸುವಾಗ ಸಭೆಯ ಒಟ್ಟು ಸದಸ್ಯರಲ್ಲಿ ಬಹುಮಂದಿ ಉಪಸ್ಥಿತರಿರಬೇಕು. ಮೂರನೆಯ ಎರಡರಷ್ಟು ಮಂದಿ ಸದಸ್ಯರು ಸಭೆಯಲ್ಲಿ ಉಪಸ್ಥಿತರಿರಬೇಕು. ಮತದಾನ ಅವಶ್ಯಕವಾಗುವುದು.

ಮಸೂದೆಯನ್ನು ಅಂಗೀಕರಿಸಿದ ನಂತರ, ಇದನ್ನು ರಾಜ್ಯ ಸಭೆಗೆ ಕಳುಹಿಸಲಾಗುವುದು. ರಾಜ್ಯ ಸಭೆಯು ಲೋಕ ಸಭೆಯಂತೆ ಮಸೂದೆಯನ್ನು ಪರಿಶೀಲಿಸುವುದು. ಉಭಯ ಸಭೆಗಳೂ ಮಸೂದೆಯನ್ನು ಅಂಗೀಕರಿಸಿದ ನಂತರ, ಅದನ್ನು ರಾಷ್ಟ್ರಾಧ್ಯಕ್ಷರ ಅಂಗೀಕಾರಕ್ಕಾಗಿ ಕಳುಹಿಸಲಾಗುವುದು. ರಾಷ್ಟ್ರಾಧ್ಯಕ್ಷರು ಮಸೂದೆಯನ್ನು ಅಂಗೀಕರಿಸುವ ಅಥವಾ ಅವಕ್ಕೆ ಅಂಗೀಕಾರವೀಯದೇ ಇರುವ ಅಧಿಕಾರ ಪಡೆದಿರುವರು. ಅವರು ಮಸೂದೆಯನ್ನು ತಮ್ಮ ಶಿಫಾರಸಿನೊಂದಿಗೆ ವಾಪಸು ಕಳುಹಿಸುವರು.

ಲೋಕ ಸಭೆಯು ಸ್ವೀಕರಿಸಿದ ಮಸೂದೆಯನ್ನು ರಾಜ್ಯ ಸಭೆಯು ಸ್ವೀಕರಿಸದೇ ಇರಬಹುದು ಆಗ ಬಿಕ್ಕಟ್ಟು ಸಂಭವಿಸಬಹುದು. ಅಂತಹ ಸಮಯದಲ್ಲಿ ರಾಷ್ಟ್ರಾಧ್ಯಕ್ಷರು ಉಭಯ ಸಭೆಗಳ ಸಂಯುಕ್ತಾಧಿವೇಶನವನ್ನು ಕರೆಯಬಹುದು. ಈ ಸಂಯುಕ್ತಾಧಿವೇಶನಕ್ಕೆ ಲೋಕಸಭಾಧ್ಯಕ್ಷರು ಅಧ್ಯಕ್ಷತೆ ವಹಿಸುವರು.

ಹಣಕಾಸಿನ ಮಸೂದೆಗಳು

ಹಣಕಾಸಿನ ಮಸೂದೆಗಳನ್ನು ಕಾನೂನನ್ನಾಗಿ ಮಾಡುವ ಅಧಿಕಾರ ವಿಶೇಷವಾಗಿ ಲೋಕ ಸಭೆಗೆ ಸೇರಿರುತ್ತದೆ. ಮಸೂದೆಯೊಂದನ್ನು ಹಣಕಾಸಿನ ಮಸೂದೆ ಎಂದು ಘೋಷಿಸುವ ಅಂತಿಮ ಅಧಿಕಾರ ಲೋಕ ಸಭಾಧ್ಯಕ್ಷರಿಗೇ ಸೇರಿದೆ.

ಹಣಕಾಸಿನ ಮಸೂದೆಗಳ ವಿಚಾರದಲ್ಲಿ ರಾಜ್ಯ ಸಭೆಗೆ ಮಿತರೀತಿಯ ಅಧಿಕಾರವಿರುವುದು. ರಾಜ್ಯ ಸಭೆಯು 14 ದಿನಗಳ ಅವಧಿಯಲ್ಲಿ ಮಸೂದೆಯೊಂದನ್ನು ಶಿಫಾರಸಿನೊಂದಿಗೆ ಅಥವಾ ಶಿಫಾರಸ್ಸಿಲ್ಲದೆಯೇ ಲೋಕ ಸಭೆಗೆ ಕಳುಹಿಸಬೇಕು. ರಾಜ್ಯ ಸಭೆಯು ಮಸೂದೆಯನ್ನು ಕಳುಹಿಸದಿದ್ದಾಗ್ಯೂ ಆ ಮಸೂದೆಯನ್ನು ಅಂಗೀಕರಿಸಿದಂತೆ ಭಾವಿಸಲಾಗುವುದು.

ರಾಷ್ಟ್ರಾಧ್ಯಕ್ಷರ ಶಿಫಾರಸಿಲ್ಲದೆ ಹಣಕಾಸಿನ ಮಸೂದೆಯನ್ನು ಲೋಕಸಭೆಯಲ್ಲಿ ತರುವಂತಿಲ್ಲ. ಹಣಕಾಸಿನ ಮಸೂದೆಯಲ್ಲದೆ ಮತ್ತೆ ಕೆಲವು ಮಸೂದೆಗಳನ್ನೂ ರಾಷ್ಟ್ರಾಧ್ಯಕ್ಷರ ಶಿಫಾರಸಿಲ್ಲದೆ ಲೋಕಸಭೆಯಲ್ಲಿ ತರುವಂತಿಲ್ಲ.

ಸಂವಿಧಾನವು ಅನುಷ್ಠಾನಕ್ಕೆ ಬಂದ 15 ವರ್ಷಗಳ ವರೆವಿಗೂ ವರಿಷ್ಠ ನ್ಯಾಯಾಸ್ಥಾನ, ಶ್ರೇಷ್ಠ ನ್ಯಾಯಾಸ್ಥಾನಗಳು, ಕಾನೂನುಗಳು, ಮಸೂದೆಗಳಲ್ಲಿ ಪ್ರಯೋಗಿಸುವ ಭಾಷೆ ಸಂಬಂಧವಾದ ಮಸೂದೆಯನ್ನು ರಾಷ್ಟ್ರಾಧ್ಯಕ್ಷರ ಪೂರ್ವ ಸಮ್ಮತಿಯಿಲ್ಲದೆ ತರುವಂತಿಲ್ಲ.

ಮುಖ್ಯವಾದ ವಿಚಾರಗಳಲ್ಲಿ ನಮ್ಮ ಸಂವಿಧಾನವು ಇಂಗ್ಲೀಷ್ ಸಂವಿಧಾನದಂತೆಯೇ ಇರುವುದು. ಅಸಾಧಾರಣ ಪರಿಸ್ಥಿತಿಗಳನ್ನು ವಿಚಾರಿಸುವ ಬಗ್ಗೆ ನಮ್ಮ ಸಂವಿಧಾನದಲ್ಲಿ ವ್ಯವಸ್ಥೆ ಮಾಡಲಾಗಿದೆ.

ವಿಶೇಷ ಆಜ್ಞೆಗಳು

ಪಾರ್ಲಿಮೆಂಟಿನ ಅಧಿವೇಶನ ನಡೆಯುತ್ತಿಲ್ಲದಿದ್ದ ಸಮಯದಲ್ಲಿ ಸಂವಿಧಾನದ ಪ್ರಕಾರ ರಾಷ್ಟ್ರಾಧ್ಯಕ್ಷರು ವಿಶೇಷ ಆಜ್ಞೆ (ಆರ್ಡಿನೆನ್ಸ್) ಗಳನ್ನು ಘೋಷಿಸುವ ಅಧಿಕಾರ ಪಡೆದಿರುವರು. ಹೀಗೆ ಘೋಷಿಸಿದ ವಿಶೇಷ ಆಜ್ಞೆಯನ್ನು ಪಾರ್ಲಿಮೆಂಟಿನ ಮುಂದೆ ಮಂಡಿಸಬೇಕಾಗುವುದು. ಪಾರ್ಲಿಮೆಂಟ್ ಸಮಾವೇಶಗೊಂಡ ಆರು ವಾರಗಳ ನಂತರ ಈ ವಿಶೇಷ ಆಜ್ಞೆಯು ಕಾರ್ಯಾಚರಣೆಗೆ ಬರುವುದಿಲ್ಲ. ಪಾರ್ಲಿಮೆಂಟಿನ ಉಭಯ ಸಭೆಗಳೂ ಒಪ್ಪದಿದ್ದಲ್ಲಿ, ವಿಶೇಷ ಆಜ್ಞೆಯು ಕೂಡಲೆ ಕೊನೆಗೊಳ್ಳುವುದು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

ಕ್ರಮಸಂಖ್ಯೆ 440/1956.

N. ಧರ್ಮರಾಜ ಕೂಡಾ —ವಾದಿ

ಮತ್ತು

ಆಮೃತಾಪತಿ ಕೂಡಾ 6 ಜನರು —ಪ್ರತಿವಾದಿರು

ಯಿನರೊಳಗೆ

4ನೇ ಪ್ರತಿವಾದಿಳು–ಸುನಂದ ವೇಜಮ್ಮನ ಮಗಳು ಕಾರ್ಕಳ ಕ್ಷಯಾ ವಾನಾಸ್ಥಳೆ ಬಳಿಯುರುವನಳು.

ಇವಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಈ ದಾವೆಯ ಕ್ಷತ್ರಿಗಾರರೆ ಭಾಗದ ಕುಟುಂಬದ ಹಕ್ಕಿನ ಬಾಬ್ತು, ಕೈಪೇತಿನಲ್ಲಿ ಕಾಣಿಸಿದ ಆಸ್ತಿಯ ಉತ್ಪತ್ತಿಯಿಂದ ವಾದಿಗೆ ಸಿಕ್ಕತಕ್ಕ ಗತ 2 ವರ್ಷಗಳ ಬಾಬ್ತು ಆಕನಾರ್ಥ ಮೊಬ್ಲಗು ರುಪ್ಯಾ 107–6–0ನ್ನು ಬರ ಮಾಡುವ ಬಗ್ಗೆ ದಾಖಲುಮಾಡಿದ ಸದ್ರಿ ದಾವೆಯು ತಾ. 6–4–1957ಕ್ಕೆ ಸದ್ರಿ 4ನೇ ಪ್ರತಿವಾದಿಳ ಹಾಜರಾತಿ ಬಗ್ಗೆ ಇರ್ತೋಜಾಗಿಯಾದೆ. ಅದ್ರಿಂದ ಸದ್ರಿ ದಿವಸ ಬೆಳಿಗ್ಗೆ 10 ಗಂಟೆಗೆ ಸದ್ರಿ ನಾಲ್ಕನೇ ಪ್ರತಿವಾದಿಳು ಸ್ವತಹ-ಯಾ ವಕೀಲರ ಮುಖಾಂತ್ರ ಹಾಜರಾಗಿ ಉದಹರಿಸಿಲಕ್ಕೆ ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ಕೋರ್ಟಿನವರಿಗೆ ಯುಕ್ತ ತೋರುವಂತೆ ತೀರ್ಮಾನಿಸಲಾಗುವುದು. ಎಂತ ಕೋರ್ಟು ಹುಕುಂಪ್ರಕಾರ ಸದ್ರಿ 4ನೇ ಪ್ರತಿವಾದಿಳಿಗೆ ಈ ಮೂಲಕ ತಿಳಿಸೋಣಾಗಿಯದೆ.

(Sd) H. K. Gopalkrishna Rao, B. A., B. L.
ವಾದಿಯ ವಕೀಲ.

ಕಾರ್ಕಳ, ತಾ. 18–3–57.

98 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳಿ ರಾಮಸ್ವಾಮಿ ಅಯ್ಯರ್‌ರವರ ರತ್ನದ್ವಯಗಳು

ಟ್ರೇಡ್ ಮಾರ್ಕ್



ಪಂ|| A. R. ಅಯ್ಯರ್

ಸಂತಾನ ಸಿಂಧೂರ (ಸ್ತ್ರೀಯರಿಗೆ: ಫ್ಯಾಕೆಟ್) | ಮದನ ವಿಲಾಸ (ಪುರುಷರಿಗೆ: ಗುಳಿಗೆ)

ಈ ಭಸ್ಮವು ಬಹಿಷ್ಠೆ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ರಸನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಸಿ, ನಪುಂಸಕತೆಯನ್ನು ನಿವಾರಿಸಿ ಪುರುಷತ್ವವನ್ನು ಕೊಡುತ್ತವೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ ತಾಯ್ತಂದೆಗಳಾಗಿದ್ದಾರೆ.

ಜೊತೆ ಕ್ಯಾಟಲಾಗು, ಔಷಧದ ಬೆಲೆ ಇತ್ಯಾದಿಗಳಿಗೆ 3 ಆಣೆ ಸ್ಟ್ಯಾಂಪು ಕಳಿಸಿರಿ

ಎ. ರಾಮಸ್ವಾಮಿ ಅಯ್ಯರ್ ಸನ್ಸ್ & ಕಂ., (ನೋ. ಯು.)

628 ಸಂತಾನ ಸಿಂಧೂರ ಹೌಸ್ (ಹೌಸ್ಸ್ ಜೀರೋ 0) ಮೈಸೂರು S. I.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. No. 52/1957.

ರುಕ್ಕಮ್ಮ ಶೆಟ್ತಿ. —ವಾದಿಳು

1. ನಾಗಮ್ಮ ಶೆಟ್ತಿ,

2. ಮಂಜಮ್ಮ ಶೆಟ್ತಿ. —ಪ್ರತಿವಾದಿರು

ಕುಂದಾಪುರ ತಾಲೂಕು ನಂಬ್ರ 1ನೇ ಶೀರೂರು ಗ್ರಾಮದ ಜಟ್ಟಿ ಶೆಟ್ರ ಮನೆ ಆಮ್ಮಾಜಿ ಶೆಟ್ತಿರ ಮಗ 1ನೇ ಪ್ರತಿವಾದಿ ನಾಗಮ್ಮ ಶೆಟ್ತಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ನೀವು ಕೂಡಾ 2 ಜನರು ನಿಮ್ಮ ಕುಟುಂಬದ ಪ್ರಯೋಜನಾರ್ಥವಾಗಿ ವಾದಿಯಿಂದ ತಾ 16–10 ಕಿಂದಲ್ಲು ಪಡೆದ ರೂ. 100/- ಕ್ಕೆ ಬರಕೊಟ್ಟ ದಾವಾ ದಿವಾಂದ್ ನೋಟಿನ ಹೊ ಬಡ್ಡಿ ವಗೈರೆ ಬರಮಾಡಿಕೊಳ್ಳಲು ವಾದಿಲು ವ್ಯಾಜ್ಯು ಮಾಡಿದ ಮೇಲಿನ ದಾವೆ ಮೇ ಲ್ಯಾಣುವ ಕೋರ್ಟಿನಲ್ಲಿ ತಾ. 5–4–1957 ನೇ ದಿನ ಬೆಳಿಗ್ಗೆ 11 ಗಂಟೆಗೆ ತಪ್ಪಿಗೆ ಇಡೋಣಾಗಿಯದೆ ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿಯದೆ.

B. S. Shetty B. A., B. L.
Vakil for Piff.
Coondapoor, 20–3–1957.

ವಿದ್ಯುಚ್ಛಕ್ತಿ ಉತ್ಪಾದನೆ

ಜಲಜನಿತ ಮತ್ತು ಉಷ್ಣಜನಿತ ವಿದ್ಯುಚ್ಛಕ್ತಿ ಉತ್ಪಾದನೆಗೆ ಭಾರತದಲ್ಲಿ ಸಾಕಷ್ಟು ಸಾಧನ ಸಂಪತ್ತುಗಳಿರುವುದರಿಂದ ಯೋಜನಾ ಕಮಿಷನ್ನಿನವರು ದೊಡ್ಡ ಪ್ರಮಾಣದಲ್ಲಿ ವಿದ್ಯುಚ್ಛಕ್ತಿ ಅಭಿವೃದ್ಧಿ ಕಾರ್ಯಕ್ರಮವನ್ನು ಕೈಗೊಂಡಿರುವರು. ಪ್ರಥಮ ಪಂಚವಾರ್ಷಿಕ ಯೋಜನೆಯನ್ನು ರೂಪಿಸಿದ ಸಮಯದಲ್ಲಿ, 15 ವರ್ಷಗಳ ಅವಧಿಯಲ್ಲಿ 70 ಲಕ್ಷ ಕಿಲೊ ವ್ಯಾಟ್‌ಗಳ ವಿದ್ಯುಚ್ಛಕ್ತಿಯ ಉತ್ಪಾದನಾಗುರಿಯನ್ನು ಇಟ್ಟುಕೊಳ್ಳಲಾಗಿತ್ತು. ಇತರ ಕ್ಷೇತ್ರಗಳಲ್ಲಿ ನಡೆದಿರುವ ಕಾರ್ಯ ಪ್ರಗತಿಯ ದೃಷ್ಟಿಯಿಂದ ಹಾಗೂ ಕೈಗಾರಿಕೆ, ಸಣ್ಣ ನಗರಗಳು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿಯ ಬೇಡಿಕೆಯು ಹೆಚ್ಚುತ್ತ ಹೋಗುವುದರಿಂದ ಈಗುರಿಯು ಇನ್ನೂ ಹೆಚ್ಚಬಹುದು.

ದ್ವಿತೀಯ ಯೋಜನೆಯಲ್ಲಿ ವಿದ್ಯುಚ್ಛಕ್ತಿಗಾಗಿ ತೆಗೆದಿರಿಸಲಾದ ಒಟ್ಟು ಹಣದಲ್ಲಿ ಸುಮಾರು 160 ಕೋಟಿ ರೂಗಳನ್ನು ಈಗ ನಡೆಯುತ್ತಿರುವ ಯೋಜನೆಗಳ ಮೇಲೂ, ಸುಮಾರು 245 ಕೋಟಿ ರೂಗಳನ್ನು ಹೊಸಯೋಜನೆಗಳ ಮೇಲೂ ವೆಚ್ಚಮಾಡಲಾಗುವುದು. ಭಾರಿ ಯೋಜನೆಗಳಾದ ತುಂಗಭದ್ರಾ, ಹಿರಾಕುಡ್, ದಾಮೋದರ ಕಣಿವೆ ಕಾರ್ಪೋರೇಷನ್ ಇತ್ಯಾದಿಗಳು ತುಂಬುವರಿಯುವುವು. ಸುಮಾರು 44 ಹೊಸ ವಿದ್ಯುಚ್ಛಕ್ತಿ ಯೋಜನೆಗಳನ್ನು ಪ್ರಾರಂಭಿಸಲಾಗಿದೆ. ಇವುಗಳಲ್ಲಿ ಬಹು ಯೋಜನೆಗಳು ಯೋಜನಾವಧಿಯು ಅಂತ್ಯಗೊಳ್ಳುವ ಮೊದಲೇ ಫಲವನ್ನೀಯಲು ಪ್ರಾರಂಭಿಸುವುವು.

ಪ್ರಸ್ತುತ ನಗರ ಪ್ರದೇಶದ ವಿದ್ಯುಚ್ಛಕ್ತಿ ಹಂಚಿಕೆಯಲ್ಲಿ ಸರಿಪಡಿಸುವ ಮುಖ್ಯ ವಿಷಯದ ಬಗೆಗೆ ಈಗ ಪ್ರಯತ್ನಗಳನ್ನು ಕೈಗೊಳ್ಳಲಾಗಿದೆ. ದ್ವಿತೀಯ ಯೋಜನೆಯಲ್ಲಿ ಸಣ್ಣ ನಗರಗಳು ಹಾಗೂ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕಾಗಿ 75 ಕೋಟಿ ರೂಗಳನ್ನು ವೆಚ್ಚಮಾಡಲಾಗುವುದು. 1961ರ ವೇಳೆಗೆ ರಾಷ್ಟ್ರದಲ್ಲಿ ವಿದ್ಯುಚ್ಛಕ್ತಿಯನ್ನು ಸೂಕ್ತವಾಗಿ ಸಣ್ಣ ನಗರಗಳು ಹಾಗೂ ಗ್ರಾಮಗಳ ಸಂಖ್ಯೆಯು 18,000ಕ್ಕೆ ಏರುವ ನಿರೀಕ್ಷೆಯಿದೆ. ಈ ಸಂಖ್ಯೆಯು 1956ರಲ್ಲಿದ್ದ ಸಂಖ್ಯೆಯ ಎರಡರಷ್ಟಕ್ಕೆ ಹೆಚ್ಚಾಗಿದೆ.

ವಿದ್ಯುಚ್ಛಕ್ತಿ ಬಳಕೆಯನ್ನು ವ್ಯಾಪಕವಾಗಿ ಕಾರ್ಯರೂಪಕ್ಕೆ ಒದಗಿಸುವ ನಿರೀಕ್ಷೆಯಿದೆ. ಈಗಾಗಲೇ ಪ್ರೀತ್ಯರ್ಥವಾದ ಹಾಗೂ ಇತರ ನೀರಿನ ಕೆಲಸಗಳಿಗೆ ಬಹಳವಾಗಿ ವಿದ್ಯುಚ್ಛಕ್ತಿಯನ್ನು ಬಳಸಲಾಗುತ್ತಿದೆ. ನೈಸರ್ಗಿಕ ಹಾಗೂ ಗ್ರಾಮಾಂತರ ಗೃಹೋದ್ಯೋಗಗಳಲ್ಲಿ ವಿದ್ಯುಚ್ಛಕ್ತಿ ಬಳಕೆಯ ಬಗೆಗೆ ಉತ್ತೇಜನ ನೀಡಲು, ಗ್ರಾಮಾಂತರ ವಿದ್ಯುಚ್ಛಕ್ತಿ ಸೂಕ್ತಿಕೆ ಅಭಿವೃದ್ಧಿಗಾಗಿ, ಗ್ರಾಮಗಳ ಸಹಕಾರಿ ಸಂಸ್ಥೆಗಳಿಗೆ ದೀರ್ಘಕಾಲಾವಧಿ ಸಾಲಗಳನ್ನು ಕೊಡಲಾಗುತ್ತಿದೆ.

ಚಿತ್ರ–1 ರೈಲ್ವೆಯ ಆಡಳಿತ್ವದಲ್ಲಿ ಕಾರ್ಯ ಪ್ರಗತಿ ನುಂಛಾಗದಲ್ಲಿ ವಿದ್ಯುದ್ದಾಗಾರದ ಉಕ್ಕಿನ ರಚನಾ ಕಾರ್ಯವು ನಡೆಯುತ್ತಿದೆ.

ಚಿತ್ರ–2 ರೈಲ್ವೆಯ ಹೈಡೆಲ್ ಕೇಂದ್ರದಲ್ಲಿ ಜನರೇಟರ್‌ರೊಂದನ್ನು ಸ್ಥಾಪಿಸುತ್ತಿರುವ ಒಂದು ದೃಶ್ಯ.

ಚಿತ್ರ–3 ಹೈಡಲ್ ಕೇಂದ್ರದ ಮುಖ್ಯ ಕಂಟ್ರೋಲ್ ಬೋರ್ಡ್.

ಚಿತ್ರ–4 ಪಶ್ಚಿಮ ಪಂಜಾಬಿನ ಗ್ರಾಮವೊಂದರ ಕೊಳವೆ ಬಾವಿಯು ಭಾಕ್ರಾ–ನಾಂಗಲ್ ವಿದ್ಯುಚ್ಛಕ್ತಿ ಕೇಂದ್ರದಿಂದ ವಿದ್ಯುಚ್ಛಕ್ತಿಯನ್ನು ಪಡೆಯುತ್ತಿರುವುದು.

ಆಲ್ಫ್ರೆಡ್ ನಾರ್ಥ್ ವೈಟ್‌ಹೆಡ್ ಬರೆದ

ಶಿಕ್ಷಣದ ಧ್ಯೇಯಗಳು

ಮತ್ತು ಇತರ ಪ್ರಬಂಧಗಳು

ಅನುವಾದಕರು:

ಕೆ. ಬಿ. ರಾಮಕೃಷ್ಣ ರಾವ್, ಬಿ. ಎ. (ಆನರ್ಸ್)

ಉ. ಲಕ್ಷ್ಮೀನಾರಾಯಣಾಚಾರ್ಯ, ಎಂ. ಎ; ಎಲ್. ಟಿ.

ಆಲ್ಫ್ರೆಡ್ ನಾರ್ಥ್ ವೈಟ್‌ಹೆಡ್ ಇವರು ಒಬ್ಬ ಪ್ರಖ್ಯಾತ ಗಣಿತಜ್ಞ, ದಾರ್ಶನಿಕ ಮತ್ತು ಶಿಕ್ಷಣಶಾಸ್ತ್ರ ಪ್ರವೀಣರು. ಲಂಡನಿನ ಇಂಪೀರಿಯಲ್ ಕಾಲೇಜು ಮತ್ತು ತದನಂತರ ಹಾರ್ವರ್ಡಿನಲ್ಲಿ ಇವರು ವಿಶ್ವವಿದ್ಯಾಲಯವನ್ನು ಕಲಿಸಿ ಸ್ವಪಂಚದ ನಾನಾ ದೇಶಗಳ ವಿದ್ಯಾರ್ಥಿ ವೃಂದವನ್ನು ಅನುಗ್ರಹಿಸಿದ್ದಾರೆ. 'ಪ್ರಿನ್ಸಿಪಿಯ ಮೆಥೆಮೆಟಿಕಾ' (ಬರ್ಟ್ರಾಂಡ್ ರಸ್ಸೆಲರೊಡನೆ) 'ಸಾಯನ್ಸ್ ಎಂಡ್ ದಿ ಮೋಡರ್ನ್ ವರ್ಲ್ಡ್' 'ಎಡ್ವೆಂಚರ್ಸ್ ಆಫ್ ಐಡಿಯಾಸ್' ಮತ್ತು ಈಗ ನಿಮ್ಮ ಕೈಯಲ್ಲಿರುವ 'ಏಮ್ಸ್ ಆಫ್ ಎಡ್ಯುಕೇಶನ್' ಇವು ಶ್ರೀಯುತರ ಗ್ರಂಥಗಳಲ್ಲಿ ಮಹತ್ವಪೂರ್ಣವೆಂದು ವಿಶ್ವದ ವೈಚಾರಿಕರ ಮತವಾಗಿದೆ.

ಈ ಗ್ರಂಥದಲ್ಲಿ ಅಧ್ಯಯನ ಮತ್ತು ಅಧ್ಯಾಪನದ ಬೌದ್ಧಿಕ ನೆಲೆ ಯಾವುದು, ಹೇಗಿರಬೇಕು ಎಂಬುದರ ಕುರಿತಾಗ್ರ ವಿವೇಚನೆ ಇದೆ. ವಿದ್ಯಾರ್ಥಿಗಳು ಸಚೇತನ ವ್ಯಕ್ತಿಗಳೆಂಬುದನ್ನು ಸಂಪೂರ್ಣವಾಗಿ ಪರಿಗ್ರಹಿಸಿದರೆ ಮಾತ್ರ ಶಿಕ್ಷಣವು ಪ್ರಗತಿಶೀಲವಾಗಿ ನಡೆಯುವುದು ಸಾಧ್ಯವೆಂದು ಇಲ್ಲಿ ಸಾಧಾರವಾಗಿ ಶ್ರೀ. ವೈಟ್‌ಹೆಡ್ ಸ್ಥಾಪಿಸಿರುವರು.

ಬೆಲೆ: 2—4—0/2·25 ರೂ.

ಪ್ರಕಾಶಕರು:

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.

ಕೌತುಕ

(ತನೇ ಪುಟದಿಂದ)

ಈ ವ್ಯಾಣಿಗಳ ನಡೆವಳಿಕೆಯ ಬಗ್ಗೆ, ರಾಕೆಟ್–ಯಾನದ ಇಡೀ ಅವಧಿಯಲ್ಲಿ, ರಾಕೆಟ್ಟಿನಿಂದ ಹೊರಬೂಡಲ್ಪಡುವ ಕ್ಷಣದ ವರೆಗೂ, ಚಲಚ್ಚಿತ್ರ ಗ್ರಾಹಕರು ಸುಖಾಂತರ ಚಿತ್ರಗಳು ತೆಗೆದುಕೊಳ್ಳಲ್ಪಟ್ಟುವು.

ನಾನು 'ಅಲ್ಬೀನ್', ಕೊಜ್ಯಾವ್ಕಾ" ಮತ್ತು ಇತರ ನಾಯಿಗಳನ್ನು–ಈ ಪ್ರಯೋಗಗಳಲ್ಲಿ ಬಳಸಲ್ಪಟ್ಟ ನಾಯಿಗಳನ್ನೂ–ನೋಡಿದ್ದೇನೆ. ಅವೆಲ್ಲವೂ ಜೀವಂತವಾಗಿಯೂ, ಆರೋಗ್ಯವಾಗಿಯೂ ಇವೆಯೆಂದು ನನ್ನಿ ಓದುಗರಿಗೆ ನಾನು ಭರವಸೆಯನ್ನು ಕೊಡಬಲ್ಲೆನು. ಈ ವ್ಯಾಣಿಗಳು ವಿಶ್ವಾಂತರಿಕ್ಷದ ದೂರದ ಪ್ರಯಾಣ ಮಾಡಿ ಬಂದಿರುವ ಕಾರಣದಿಂದಲೇ ಯಾವ ಬಗೆಯ ಪ್ರತಿಫ್ಯೆಯನ್ನೂ ತೋರಿಸುತ್ತಿಲ್ಲ—ತಮ್ಮ ವಾಟ್ಟೆಗೆ. ಅದೇನೇ ಇರಲಿ, ಒಂದೆರಡು ತುಂಡು ಸಕ್ಕರೆ ಚೂರುಗಳನ್ನು ಕೊಟ್ಟರೆ ಅವು ಸ್ವೀಕರಿಸಲು ಹಿಂದಿರಿಯುವ ಸ್ಥಿತಿಯಲ್ಲಿಲ್ಲ.

'ಮಾನವನು ವಿಶ್ವಾಂತರಿಕ್ಷದೊಳಕ್ಕೆ ಪ್ರವೇಶಿಸುವ ಅಕಾಶಯಾನಗಳು ವಾಸ್ತವವಾಗುವ ಸಮಯವನ್ನು ಇನ್ನೂ ಹೆಚ್ಚು ಸನ್ನಿಹಿತಗೊಳಿಸುವ ಉದ್ದೇಶವನ್ನು ನಮ್ಮ ಸಂಶೋಧನೆಗಳು ಹೊಂದಿವೆ: ಅಂಕ–ಗ್ರಹಗಳಿಗೆ ಪ್ರಯಾಣ ಮಾಡುವ ವಿಮಾನಗಳ ಮೂಲಕ, ದೂರದ, ಅಪರಿಚಿತವಾದ, ಇತರ ಪ್ರಪಂಚಗಳೊಡನೆ ಸಾಗಾಣಿಕೆಯ ಸಂಪರ್ಕಗಳನ್ನು ಸ್ಥಾಪಿಸಿಕೊಳ್ಳಲು ಜನತೆಗಳಿಗೆ ಸಾಧ್ಯವಾಗುವ ಸಮಯವನ್ನು, ಇನ್ನೂ ಹೆಚ್ಚು ಸನ್ನಿಹಿತವಾಗಿ ತರುವುದೇ ನಮ್ಮ ಸಂಶೋಧನೆಗಳ ಗುರಿಯಾಗಿದೆ"—ಎಂದು ಆಲೆಕ್ಸೆಯಿ ಪೊಕ್ರೋವ್‌ಸ್ಕಿಯವರು ನಮಗೆ ಬೀಳ್ಕೊಡುಗೆಯ ವಂದನೆಯೊಂದಿಗೆ ತಿಳಿಸಿದರು.

೧೯೫೬ರ ಕನ್ನಡ ಸಾಹಿತ್ಯ ಸೃಷ್ಟಿ

ನುಂಬಯಿ ಕನ್ನಡ ಸಾಹಿತ್ಯ ಕೂಟದ ಪರವಾಗಿ, ೧೯೫೬ರಲ್ಲಿ ಪ್ರಕಟವಾದ ಕನ್ನಡ ಪುಸ್ತಕಗಳ ಪರಿಚಯವನ್ನು ಮಾಡಿಕೊಡುವ ಗ್ರಂಥವೊಂದು ಸಿದ್ಧವಾಗುತ್ತಲಿದ್ದು, ಈ ಗ್ರಂಥವು ಮೇ ತಿಂಗಳ ಮೊದಲವಾರದಲ್ಲಿ ಪ್ರಕಟವಾಗುತ್ತದೆ. ಈ ಬಗೆಯ ಗ್ರಂಥ ಸೂಚಿಗಳು ಕನ್ನಡದಲ್ಲಿ ಇಲ್ಲ. ಇಂಥ ಸುಂದರ ಕೃತಿಗಳು ಅನೇಕ ಬಗೆಯಿಂದ ಉಪಯುಕ್ತವಾದವೆಂದು ಅವುಗಳಲ್ಲಿ ಅಸೂರ್ದತೆಯಾಗಲೀ, ದೋಷಗಳಾಗಲೀ ಇರಕೂಡದು ಇದುವರೆಗೆ ಸಂಗ್ರಹಿಸಿದ ಮಾಹಿತಿಯಲ್ಲಿ ಅನೇಕ ಮಹತ್ವದ ಪುಸ್ತಕಗಳ ನಿರ್ದುಷ್ಟವಾದ ವಿವರಗಳು ದೊರೆತಿಲ್ಲವಾದ್ದರಿಂದ ಈ ವಿಷಯದಲ್ಲಿ ಲೇಖಕರ ಮತ್ತು ಪ್ರಕಾಶಕರ ಸಹಾಯವನ್ನು ಕೋರಿದೆ. ಕಾರಣ ಸಂಬಂಧಪಟ್ಟವರು, ೧೯೫೬ರಲ್ಲಿ ಪ್ರಕಟವಾದ (ಪುನರ್ಮುದ್ರಣಗಳನ್ನು ಸೇರಿಸದೆ) ಕನ್ನಡ ಪುಸ್ತಕಗಳ ಲೇಖಕರ ಮತ್ತು ಪ್ರಕಾಶಕರ ಹೆಸರು ವಿಳಾಸ, ಮತ್ತು ಒಂದೆರಡು ವಾಕ್ಯಗಳಲ್ಲಿ ವಿಷಯಸಾರ ಇವುಗಳನ್ನು ಬರೆದು, ಶ್ರೀನಿವಾಸ ಹಾವನೂರ, ಕರ್ನಾಟಕ ಯುನಿವರ್ಸಿಟಿ ಲೈಬ್ರರಿ, ಧಾರವಾಡ ಎಂಬ ವಿಳಾಸಕ್ಕೆ ಕೂಡಲೇ ತಿಳಿಸಬೇಕಾಗಿ ವಿನಂತಿ.

ಕಾಶ್ಮೀರ

(ನಿನ್ನೆ ಮುಂದುವರಿದಿದೆ)

ಪಾಕಿಸ್ತಾನವು ತನ್ನ ನೆರೆ ರಾಜ್ಯಗಳೊಡನೆಯ ಸಂಬಂಧಗಳನ್ನು ಗಣನೀಯ ಪ್ರಮಾಣದಲ್ಲಿ ಕ್ಲಿಷ್ಟಪಡಿಸಿಕೊಂಡಿತು. ನಿಜವಾಗಿಯೂ ನೋಡಿದರೆಲ್ಲಿ. ಗಣರಾಜ್ಯ ವ್ಯಾರಂಭದಲ್ಲಿ ಪಾಕಿಸ್ತಾನ ಮತ್ತು ಭಾರತ ದೇಶಗಳ ನಡುವಣ ಸಂಬಂಧಗಳಲ್ಲಿ ಸ್ವಲ್ಪಮಟ್ಟಿಗೆ ಹದಗೆಟ್ಟಿದ್ದ ಸಕ್ಸೆಸ್ಬ್ಡ ಪರಿಸ್ಥಿತಿಯು, ಆ ಸಮಯದಲ್ಲಿ "ಸೀಟೋ" ಮತ್ತು ಬಾಗದಾದ್ ಒಡಂಬಡಿಕೆಯ ಅಧಿನೇಶನಗಳಲ್ಲಿ ನಡೆದ "ಕಾಶ್ಮೀರ ಸಮಸ್ಯೆ"ಯ ಚರ್ಚೆಯು ನೀರವಾದ ಪರಿಣಾಮವಾಗಿದ್ದಿತು. ಬಾಗದಾದ್ ಒಡಂಬಡಿಕೆಯೂ ಮತ್ತು "ಸೀಟೋ" ಕೂಟವೂ ಸಾಮ್ರಾಜ್ಯವಾದೀ ಶಕ್ತಿಗಳ ಕೈಗಳಲ್ಲಿರುವ ಸಾಧನಗಳೆನ್ನುವುದಕ್ಕೆ ಇದು ಸುಸ್ಪಷ್ಟವಾದ ಇನ್ನೊಂದು ಉದಾಹರಣೆಯಾಗಿದೆ.

ಪಾಶ್ಚಿಮಾತ್ಯ ರಾಜ್ಯ ಶಕ್ತಿಗಳಿಗೆ ತುಲನಾತ್ಮಕ ವ್ಯತಿರೇಕವಾಗಿ, ಸೋವಿಯೆಟ್ ಒಕ್ಕೂಟವು ಸರ್ವದಾ ಸೂತ್ರಬದ್ಧವಾದ, ಸುಸಂಬದ್ಧವಾದ ನಿಲುಮೆಯನ್ನು, ಕಾಶ್ಮೀರ ಸಮಸ್ಯೆಯ ವಿಷಯದಲ್ಲಿ, ಎತ್ತಿಹಿಡಿದಿದೆ. ಸೋವಿಯಟ್ ಜನತೆಯ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, ಎನ್. ಎಸ್. ಖ್ರುಷ್ಚೋವ್‌ರವರು ಈ ರೀತಿ ನಿರ್ದೇಶಿಸಿ ಹೇಳಿದ್ದಾರೆ: "ಕಾಶ್ಮೀರದ ಸಮಸ್ಯೆಯು, ಭಾರತೀಯ ಗಣತಂತ್ರದ ರಾಜ್ಯಗಳೆಲ್ಲೊಂದೆಂಬುದಾಗಿ, ಕಾಶ್ಮೀರದ ಜನತೆಯಿಂದಲೇ ಸ್ವತಃ ಬಗೆಹರಿಸಲ್ಪಟ್ಟಿದೆ. ಇದು ಜನತೆಯ ಸ್ವೀಯ ವ್ಯವಹಾರವಾಗಿದೆ. ಶಾಂತಿಯುತ ಸಹ ಅಸ್ತಿತ್ವದ ಪರಿಸ್ಥಿತಿಗಳಲ್ಲಿ ಮಾತ್ರವೇ ಉಭಯತಃ ಭಾರತ ದೇಶದ ಮತ್ತು ಪಾಕಿಸ್ತಾನದ ಅಭಿವೃದ್ಧಿಯು ನಡೆಯಲು ಸಾಧ್ಯವಾಗುತ್ತದೆಯೊದುದರಿಂದ, ಈ ಪ್ರದೇಶದಲ್ಲಿ ಶಾಂತಿಯನ್ನು ಉಳಿಸುವುದರ ನಲುವಾಗಿ ಉಭಯ ಪಕ್ಷಗಳೂ ಮಹತ್ವರವಾದ ದೃಢ ನಿಶ್ಚಯವನ್ನು ಪ್ರದರ್ಶಿಸಬೇಕೆಂದು ನಾನು ಭಾವಿಸುತ್ತೇನೆ."

ಗಣರಾಜ್ಯ ಜನವರಿ ಮತ್ತು ಫೆಬ್ರವರಿ ತಿಂಗಳುಗಳಲ್ಲಿ, ಅಮೇರಿಕದ ಸಂಯುಕ್ತ ಸಂಸ್ಥಾನಗಳೂ ಮತ್ತು ಬ್ರಿಟನೂ ಕಾಶ್ಮೀರದ ಸಮಸ್ಯೆಯಲ್ಲಿ ಹಸ್ತಕ್ಷೇಪವನ್ನು ಮಾಡಲು ಒಂದು ನೂತನ ಬಹಿರಂಗ ಪ್ರಯತ್ನವನ್ನು ಮಾಡಿದುವು ಅಮೇರಿಕದ ಸಂಯುಕ್ತ ಸಂಸ್ಥಾನಗಳ ವಿಟ್ಟಿಗೆ ಕೇಳುವುದಾದರೆ, ಭಾರತ ಪಾಕಿಸ್ತಾನಿ ಸಂಬಂಧದಲ್ಲಿ ಮತ್ತೊಮ್ಮೆ ಉದ್ರಿಕ್ತತೆಯನ್ನು ಉಂಟುಮಾಡಲು ಅದು ಮಾಡುತ್ತಿರುವ ಪ್ರಯತ್ನವು, ಪ್ರಾಚ್ಯ ಖಂಡದ ಈ ಪ್ರಾಂತ್ಯದಲ್ಲಿ ಸುಸ್ಥಿರತೆಯ ಅಭಾವವನ್ನೂ ಮತ್ತು 'ಶೂನ್ಯಸ್ಥಿತಿ'ಯ ಅಸ್ತಿತ್ವವನ್ನೂ ರುಜುವಾತುಪಡಿಸಲು ಮಾಡುವ ಪ್ರಯತ್ನಗಳೊಂದಿಗೆ ಸುಸ್ಪಷ್ಟವಾಗಿಯೂ ಸಂಬಂಧಪಟ್ಟಿದೆ. ಈ ರೀತಿಯಾಗಿ, ಅಮೇರಿಕದ ಸಂಯುಕ್ತ ಸಂಸ್ಥಾನಗಳ ಆಡಳಿತ ವಲಯಗಳು ಕಾಶ್ಮೀರ ಸಮಸ್ಯೆಯನ್ನು ಅಪಖ್ಯಾತಿಯುತವಾದ "ಐಸೆನ್ ಹೋವರ್ ಸಿದ್ಧಾಂತಕ್ಕೆ" ಕೃತಕವಾಗಿ ಕಟ್ಟಿಹಾಕಲು ಇಚ್ಛಿಸುತ್ತಿವೆ.

ಬ್ರಿಟಿಷ್ ಸಾಮ್ರಾಜ್ಯವಾದೀ ವಲಯಗಳು, ಕೇವಲ ತಮ್ಮ ಅಮೇರಿಕದ ಸಹಭಾಗಿಗಳಂತೆಯೇ, ಕಾಶ್ಮೀರದ ಸಮಸ್ಯೆಯ ಸುತ್ತಮುತ್ತಲಿನ ಅಪಾಯಕರ ವಾತಾವರಣವನ್ನು ಉಂಟುಮಾಡುವುದರಲ್ಲಿ ಅಸಕ್ತಿಯನ್ನು ಪ್ರದರ್ಶಿಸುತ್ತಿವೆ. ಈ ರೀತಿಯಾಗಿ, ಭಾರತ ದೇಶದ ಶಾಂತಿಪ್ರಿಯ ವಿದೇಶಾಂಗ ನೀತಿಯ ಮೇಲೆ, —ಜಾಗತಿಕ ಸಾರ್ವಜನಿಕಾಭಿಪ್ರಾಯದ ಕಡೆಯಿಂದ ಸುಯೋಗ್ಯ ಅರ್ಹತೆಯ ಪ್ರತಿಷ್ಠೆಯ ಸೌಂದರ್ಯವನ್ನು ಪಡೆಯುತ್ತಿರುವ ವಿದೇಶಾಂಗ ನೀತಿಯ ಮೇಲೆ,- ಮಿಥ್ಯಾಸರವಾದವನ್ನು ಹೊರಿಸುವುದೇ ಇದರ ಅಂತರಾರ್ಥವಾಗಿದ್ದಿತು. ಅಮೆರಿಕದ ಸಂಯುಕ್ತ ಸಂಸ್ಥಾನಗಳೂ ಮತ್ತು ಬ್ರಿಟನ್ನೂ, ಪಾಕಿಸ್ತಾನದ ತೀವ್ರಗಾಮಿ ವಲಯಗಳಿಗೂ ಕೂಡ, – ಆವು ಸಾಧ್ಯವಿರುವ ಪ್ರತಿಯೊಂದು ಸಾರ್ಗದಿಂದಲೂ, 'ಸೀಟೊ' ಕೂಟದ ಮತ್ತು ಬಾಗದಾದ್ ಒಡಂಬಡಿಕೆಯ ಕಂಪಿಸುತ್ತಿರುವ ಗೋಡೆಗಳನ್ನು ಭದ್ರಪಡಿಸಲು ಪ್ರಯತ್ನಿಸುತ್ತವೆಯಾದುದರಿಂದ,- ಬೆಂಬಲವನ್ನು ನೀಡಿದವು.

ಆದರೂ ಕೂಡ, ಗತಕಾಲದಲ್ಲಿ ವಸಾಹತು ಶಕ್ತಿಗಳಿಗೆ ಈಗಾಗಲೇ ಒಂದಕ್ಕಿಂತಲೂ ಹೆಚ್ಚು ಸಲ ಸಂಭವಿಸಿರುವಂತೆ, ಆ ಮೆರಿಕದ ಸಂಯುಕ್ತ ಸಂಸ್ಥಾನಗಳ ಮತ್ತು ಬ್ರಿಟನ್ನಿನ ಯೋಜನೆಗಳು ಪ್ರಾಚ್ಯ ಖಂಡದ ದೇಶಗಳ ರಾಷ್ಟ್ರೀಯ ವಿಮೋಚನಾ ಚಳವಳಿಯ ಹಿತಗಳಿಗೂ ಮತ್ತು ಸಾರ್ವತ್ರಿಕ ಶಾಂತಿ—ಭದ್ರತೆಗಳ ಹಿತಗಳಿಗೂ ಪ್ರಬಲ ವಿರೋಧವಾಗಿ ಇರುವುದರಿಂದ, ಅವು ವಿಫಲವಾಗುತ್ತವೆ.

ಕಳೆದ ಜನವರಿ ತಿಂಗಳಿನಲ್ಲಿ ಭದ್ರತಾ ಮಂಡಲವು ಕಾಶ್ಮೀರ ಸಮಸ್ಯೆಯ ಪರಿಶೀಲನೆಯನ್ನು ಮುಂದುವರಿಸಿತು. ಪಾಶ್ಚಿಮಾತ್ಯ ರಾಜ್ಯಶಕ್ತಿಗಳು ಈ ಸಮಸ್ಯೆಯ ಸಾರಾಂಶವನ್ನು ಕಡೆಗಣಿಸುತ್ತ, ಕಾಶ್ಮೀರದಲ್ಲಿನ ವಾಸ್ತವಿಕ ವಸ್ತುಸ್ಥಿತಿಯನ್ನು ಅಲಕ್ಷ್ಯ ಮಾಡುತ್ತ, ಭಾರತ ದೇಶವನ್ನು ಆತ್ಮರಕ್ಷಣೆಯಲ್ಲಿ ತೊಡಗುವ ದೇಶದ ಸ್ಥಾನದಲ್ಲಿಡಲು ಪ್ರಯತ್ನಿಸಿದುವು ಆದೇ ವೇಳೆಯಲ್ಲಿ ಈ ಶಕ್ತಿಗಳು ಸಂಯುಕ್ತ ರಾಷ್ಟ್ರ ಸಂಸ್ಥೆಯ ನೊಗವನ್ನಾಲೆಗಳಲ್ಲಿ ಎಲ್ಲಬಗೆಗಳ ಚತುರೋಪಾಯದ ಕುಯುಕ್ತಿಗಳನ್ನು ಹೂಡುತ್ತಾ, ಆ ಮೂಲಕ ಕಾಶ್ಮೀರ ಸಮಸ್ಯೆಯ ಪರಿಶೀಲನೆಯನ್ನು ಜಟಿಲಗೊಳಿಸಲು ಪ್ರಯತ್ನಿಸಿದುವು. ಈ ಅಭ್ಯಾಸಕ್ಕೆ, ಅದಕ್ಕೆ ತಕ್ಕ ವಾಗುಭಂಗವನ್ನು ನೀಡಲಾಯಿತು. ಜನವರಿ ದಿನಾಂಕ ೨೨ರಂದು ಭದ್ರತಾ ಮಂಡಲದ ಸಭೆಯಲ್ಲಿ ಭಾರತ ದೇಶದ ಪ್ರತಿನಿಧಿ ಕೃಷ್ಣಮೆನನ್ ರವರು,— ಭಾರತದ ಪ್ರತಿನಿಧಿಯಾದ ತನ್ನ ಹೇಳಿಕೆಯನ್ನು ಕೇಳುವುದಕ್ಕೆ ಇನ್ನೂ ಮುಂಚಿತವಾಗಿಯೇ ಅಮೆರಿಕದ ಸಂಯುಕ್ತ ಸಂಸ್ಥಾನಗಳು, ಬ್ರಿಟನ್ನಿನ ಮತ್ತು ಕೆಲವು ಇತರ ದೇಶಗಳ ಪ್ರತಿನಿಧಿ ಮಂಡಲಗಳು ಅನೇಕ ಗಂಭೀರ ನ್ಯೂನತೆಗಳಿದ್ದ ಕರಡು ಗೊತ್ತುವಳಿಯೊಂದನ್ನು ಮಂಡಿಸಿದುವೆಂಬ ವಾಸ್ತವಾಂಶದ ಬಗ್ಗೆ –ತಮ್ಮ ಕೋಪವನ್ನು ವ್ಯಕ್ತಪಡಿಸಿದರು. ಸೋವಿಯೆಟ್ ಪ್ರತಿನಿಧಿಯವರೂ ಕೂಡ ಈ ಕರಡು ಗೊತ್ತುವಳಿಯನ್ನು,-ಕಾಶ್ಮೀರದ ಸಮಸ್ಯೆಯ ಮೇಲೆ, ಸಂಯುಕ್ತ ರಾಷ್ಟ್ರ ಸಂಸ್ಥೆಯ ಲುಪ್ತ (ಅಬ್ಸೊಲೀಟ್) ನಿರ್ಣಯಗಳ ಸಮರ್ಥನೆಯನ್ನು ರೂಪಿಸಿಕೊಂಡಿದ್ದ ಈ ಕರಡನ್ನು ವಿಮರ್ಶಿಸಿದರು.

ಫೆಬ್ರವರಿ ದಿನಾಂಕ ೧೫ರಂದು ಮತ್ತು ಅದೇ ತಿಂಗಳ ದಿನಾಂಕ ೨೦ರಂದು ಭದ್ರತಾ ಮಂಡಲದಲ್ಲಿ-'ಸಂಯುಕ್ತ ರಾಷ್ಟ್ರ ಸಂಸ್ಥೆಯ ತಾತ್ಕಾಲಿಕ ಸಾಯುಧ ಸೇನೆಗಳ' ಗುರುತಿನ-ಹಲಗೆಯ ಕೆಳಗೆ ಕಾಶ್ಮೀರದಲ್ಲಿ ವಿದೇಶೀ ಸೇನೆಗಳನ್ನು ತಂದಿಡುವುದರ ವಿಷಯವಾಗಿ ಮಂಡಿಸಲ್ಪಟ್ಟಿದ್ದ, ಪಾಶ್ಚಿಮಾತ್ಯ ರಾಜ್ಯ ಶಕ್ತಿಗಳ ಕರಡು ಗೊತ್ತುವಳಿಯ ಸಂಬಂಧದಲ್ಲಿ,— ಬಿಸಿಯೇರಿದ ವಾದ ವಿವಾದವು ಜರಗಿತು. ಭಾರತೀಯ ಪ್ರತಿನಿಧಿ ಕೃಷ್ಣ ಮೆನನ್‌ರವರು, ಭಾರತ ದೇಶದ ಸರ್ವಸ್ವತಂತ್ರ ಹಕ್ಕುಗಳನ್ನೂ ಮತ್ತು ಸಂಯುಕ್ತ ರಾಷ್ಟ್ರ ಸಂಸ್ಥೆಯ ಶಾಸನ ಪತ್ರವನ್ನೂ ಒರೆಟಾಗಿ ಉಲ್ಲಂಘಿಸಿದ ಈ ಕರಡಿನ ವಿರೋಧವಾಗಿ,-ದೃಢಸಂಕಲ್ಪದಿಂದ ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು. ತನ್ನ ನಕಾರಾತ್ಮಕ ಮತ(ವೀಟೋ)ಮೂಲಕ ಸೋವಿಯಟ್ ಪ್ರತಿನಿಧಿ ಮಂಡಲವು ಈ ಕರಡುಗೊತ್ತುವಳಿಯ ವಿರಸ್ವೀಕೃತಿಯನ್ನು ಸಾಧಿಸಿತು.

ಫೆಬ್ರವರಿ ದಿನಾಂಕ ೨೧ರಂದು ಭದ್ರತಾ ಮಂಡಲವು, ಅಮೇರಿಕದ ಸಂಯುಕ್ತ ಸಂಸ್ಥಾನಗಳ, ಬ್ರಿಟನ್ನಿನ ಮತ್ತು ಆಸ್ಟ್ರೇಲಿಯದ ಗೊತ್ತುವಳಿಯನ್ನು— ಕಾಶ್ಮೀರದ ಸಮಸ್ಯೆಯ ಬಗ್ಗೆ ಉಭಯ ಪಕ್ಷಗಳಿಗೂ ಅಂಗೀಕಾರ ಯೋಗ್ಯವಾಗಿರುವ ಒಂದು ಇತ್ಯರ್ಥವನ್ನು ಕಂಡುಹಿಡಿಯುವ ದೃಷ್ಟಿಯಿಂದ ಭಾರತ ದೇಶದ ಮತ್ತು ಪಾಕಿಸ್ತಾನದ ಸರಕಾರಗಳೊಂದಿಗೆ ಸಮಾಲೋಚನೆಗಳನ್ನು ನಡೆಸಲು ಭದ್ರತಾಮಂಡಲದ ಅಧ್ಯಕ್ಷನಿಗೆ ಆದೇಶವನ್ನು ನೀಡುವ ಗೊತ್ತುವಳಿಯನ್ನು — ಅಂಗೀಕರಿಸಿತು. ಗೊತ್ತುವಳಿಯ ಮುಖ್ಯೋದ್ದೇಶವು ಅಂಗೀಕಾರಯೋಗ್ಯವಾದುದೆಂದು ಅದಕ್ಕೆ ಮನ್ನಣೆಯನ್ನು ನೀಡುತ್ತಾ, ಆದೇ ವೇಳೆಯಲ್ಲಿ ಸೋವಿಯತ್ ಪ್ರತಿನಿಧಿಯವರು, ಆ ಗೊತ್ತುವಳಿಯ ನ್ಯೂನತೆಗಳನ್ನು ತೋರಿಸಿದರು. ನಿಜವಾಗಿಯೂ, ಭದ್ರತಾ ಮಂಡಲದ ಹಿಂದಿನ ನಿರ್ಣಯಗಳನ್ನು ಗೊತ್ತುವಳಿಯಲ್ಲಿ ಸೂಚಿಸಿದುದು—ಇನ್ನೇಕ ವರ್ಷಗಳ ಹಿಂದೆ ಅಂಗೀಕೃತವಾದ ಗೊತ್ತುವಳಿಗಳಿಂದ ಮುಂದುವರಿಯಬೇಕಾದ ಆವಶ್ಯಕತೆಯಿಲ್ಲದಿದ್ದುದರಿಂದಲೂ, ಆದರೆ ಈಗ ಕಾಶ್ಮೀರದ ಪ್ರಾಂತ್ಯದಲ್ಲಿ ಪ್ರಚಲಿತವಾಗಿರುವ ಪರಿಸ್ಥಿತಿಯಿಂದ ಮುನ್ನಡೆಯಬೇಕಾದ ಆವಶ್ಯಕತೆಯಿದೆಯಾದುದರಿಂದಲೂ— ಭದ್ರತಾಮಂಡಲದ ಅಧ್ಯಕ್ಷನಿಗೆ ತೊಂದರೆಗಳನ್ನು ನಿರ್ಮಿಸಬಲ್ಲುದು. ಹೀಗಿದ್ದರೂ ಕೂಡ, ಸೋವಿಯತ್ ಪ್ರತಿನಿಧಿ ಮಂಡಲವು ಈ ಗೊತ್ತುವಳಿಯನ್ನು ಅಂಗೀಕರಿಸುವುದಕ್ಕೆ ಆಕ್ಷೇಪಣೆಯನ್ನೊಡ್ಡಲಿಲ್ಲ. ಭಾರತ ದೇಶದ ಮತ್ತು ಪಾಕಿಸ್ತಾನದ ಸರಕಾರಗಳೊಡನೆ ಭದ್ರತಾಮಂಡಲದ ಅಧ್ಯಕ್ಷರು ನಡೆಸುವ ಸಮಾಲೋಚನೆಗಳು ಗುಣಾತ್ಮಕವಾಗಿ ಪರಿಣಮಿಸಬಹುದೆಂದೂ, ಮತ್ತು ಈ ಎರಡು ದೇಶಗಳ ಸರಕಾರಗಳ ನಡುವೆ ನೇರವಾದ ಮಾತುಕತೆಗಳನ್ನು ಮುಂದುವರಿಸುವುದಕ್ಕೆ ಹಾದಿ ತೆಗೆಯಬಹುದೆಂದೂ ಎಣಿಸುತ್ತಲೇ ಈ ಗೊತ್ತುವಳಿಯ ಬಗ್ಗೆ ಆಕ್ಷೇಪಿಸಲಿಲ್ಲ.

ಭದ್ರತಾಮಂಡಲದಲ್ಲಿ ಕಾಶ್ಮೀರ ಸಮಸ್ಯೆಯ ಪರಿಶೀಲನೆಯು ನಡೆದ ಸಂದರ್ಭದಲ್ಲಿ, ಭಾರತ ದೇಶದ ಬಗ್ಗೆ ಬ್ರಿಟನ್ನಿನಿಂದ ಕೈಗೊಳ್ಳಲಾದ ಆನನುಕೂಲದ ನಿಲುಮೆಯು ಖಂಡಿತವಾಗಿಯೂ ಕಕ್ಷಾಬಿಕ್ಕಿಯನ್ನುಂಟುಮಾಡುತ್ತದೆ. ಸ್ಪಷ್ಟವಾಗಿಯೂ, ಈ ನಿಲುಮೆಯು, — ಸೂಯೆಜ್ ಸಮಸ್ಯೆಯ ಪರಿಶೀಲನೆಯಷ್ಟಿಯೂ, ಈಜಿಪ್ಟಿನಲ್ಲಿ ನಡೆದ ಆಂಗ್ಲೋ–ಫ್ರೆಂಚ್–ಇಸ್ರೇಲಿ ದುರಾಕ್ರಮಣಕ್ಕೆ ಮುಖಭಂಗನವನ್ನುಂಟುಮಾಡುವುದರ ನಲುವಾಗಿ ಶಾಂತಿಪ್ರಿಯಶಕ್ತಿಗಳನ್ನು ಸಜ್ಜುಗೊಳಿಸುವುದರಲ್ಲಿಯೂ, ಭಾರತ ದೇಶವು ವಹಿಸಿದ ಸಕ್ರಿಯ ಪಾತ್ರದ ಬಗ್ಗೆ ಸಂಪ್ರದಾಯ ಶರಣರಪಕ್ಷದ (ಕನ್ಸರ್ವೇಟಿವ್ ಪಾರ್ಟಿ) ಕೆಲವು ವಲಯಗಳ ಅಸಂತೃಪ್ತಿಯ ಪ್ರತಿಬಿಂಬವಾಗಿದ್ದಿತು.

ಕಾಶ್ಮೀರದ ಸಮಸ್ಯೆಯ ಕುರಿತು ಭದ್ರತಾ ಮಂಡಲದಲ್ಲಿ ನಡೆದ ಪರಿಶೀಲನೆಯ ಪರಿಣಾಮಗಳು — ಸುಳ್ಯ ಪ್ರಾಚ್ಯದಲ್ಲಿಯೂ ಮತ್ತು ಮಧ್ಯ ಏಶಿಯಾದಲ್ಲಿಯೂ ವಸಾಹತುವಾದಿಗಳು ಕಳೆದುಕೊಂಡ ಸ್ಥಾನಗಳನ್ನು ಪುನಸ್ಸ್ಥಾಪನೆ ಪಡಿಸುವ ಪ್ರಯತ್ನದಲ್ಲಿ ಒಳಸಂಚು ನಡೆಸುತ್ತಿರುವ ಆ ಸಾಮ್ರಾಜ್ಯವಾದೀ ವಲಯಗಳೇ ಈ ಸಮಸ್ಯೆಯನ್ನು ಹದಗೆಡಿಸುವುದರಲ್ಲಿ ಆ ಸಕ್ತಿಯನ್ನು ಹೊಂದಿವೆಯೆಂಬುದನ್ನು ಸೂಚಿಸುತ್ತವೆ. ಅದೇ ವೇಳೆಯಲ್ಲಿ, ಅಂತರರಾಷ್ಟ್ರೀಯ ಪ್ರಕ್ಷುಬ್ಧತೆಯ ಇತೋಧಿಕ ಉಪಶಮನದ ನಲುವಾಗಿ ಹೊರಬರುತ್ತಿರುವ ದೇಶಗಳು, ಈ ಸಾರಿಯೂ ಕೂಡ, ಸಾಮ್ರಾಜ್ಯವಾದೀ ರಾಜ್ಯಶಕ್ತಿಗಳ ಒಳಸಂಚುಗಳನ್ನು ನಿರರ್ಥಕಗೊಳಿಸುವುದರಲ್ಲಿ ವಿಜಯವನ್ನು ಸಾಧಿಸಿದುವೆಂಬುದನ್ನು ಈ ಪರಿಣಾಮಗಳು ಸೂಚಿಸುತ್ತವೆ.

ಜನಪ್ರಿಯ ಪುಸ್ತಕದ ನೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಡಿಲ್ ವೆಂಕಟ್ರಾವ್, ಎಲ್. ಐ. ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ. ರೂ. ೨—೦—೦ (ಟಪಾ ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K. H. Shetty, at the Navayuga press, Udipi S. India